ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕಷ್ಟದ್ರುವ ತೆರದಿ ಕುಳಿತರೆ! । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೪ | ಮಂಗಳೂರು, ತಾರೀಖು ೭ನೇ ಮೇ ಶುಕ್ರವಾರ ೧೯೨೦. | ಸಂಚಿಕೆ ೧೯

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಸೊಪ್ಪು ಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕಾದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಡಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Director, Chilean Nitrate Committee,
(INDIAN DELEGATION),
1, Royal Exchange Place, CALCUTTA.

ತ್ವರೆ ಮಾಡಿರಿ !! ಬೇಗನೇ ಬರೆಯಿರಿ !!

ಪಂಡಿತ ಮಂಗಳೂರು ನಾರಾಯಣಾಚಾರ್ಯರಿಂದ
ಗುಣಿಸಿ ಪರಿಶೋಧಿಸಲ್ಪಟ್ಟ

ರೌದ್ರಿ ಸಂವತ್ಸರದ ಪಂಚಾಂಗವು.

ಬೆಲೆ ಪ್ರತಿ ಒಂದಕ್ಕೆ 3 ಆಣೆ. 25 ಪ್ರತಿಗಳಿಗೆ ರೂ. 3-12-0
50 ಪ್ರತಿಗಳಿಗೆ ರೂ. 7-0-0. 100 ಪ್ರತಿಗಳಿಗೆ ರೂ. 13-8-0.

ಪ್ರತಿಗಳು ಸಿಗುವ ವಿಳಾಸ:—

ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಳ ದೆಸೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ. ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0.

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ ಒಂದರ ರೂ. 0—6—0.

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲುಗಳು ಶುಭ್ರವಾಗುತ್ತವೆ. ರಕ್ತ ಬರುವುದು ನಿಲ್ಲುತ್ತವೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ ೧ರ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು. | 109 ಫ್ರೇಯರ್ ರೋಡ್, ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ವಾತಕ್ಷಾಯ

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ತಜ್ಞರು ಸಿಕ್ಕದ ನಾರುಬೇರುಗಳಿಂದ ಅನೇಕ ಉತ್ಕೃಷ್ಟ ಔಷಧಗಳನ್ನು ನಿಷ್ಪಾದಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳೂ" ಬರುತ್ತಲಿವೆ. ಈ ಭಾಗದಲ್ಲಿ, ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಗಳಲ್ಲಿ ನಮ್ಮ "ವಾತಕ್ಷಾಯವು" ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂದು, ಅವಯವ, ಅಂಡಕೋಶ ಮೊದಲಾದುವು ಶೀಘ್ರವಾಗಿ ಊದಿಕೊಳ್ಳುವುದು; ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಮೂತ್ರದಲ್ಲಿ ದೋಷವಿರುವುದು; ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲೀ ನಿಮ್ಮ ಸ್ನೇಹಿತರಲ್ಲಿಯಾಗಲೀ ಕಾಣಿಸಿಕೊಂಡರೆ, ಕೂಡಲೇ ನಮ್ಮ "ಕಷಾಯ" ತೆಗೆದುಕೊಳ್ಳಲು ಪ್ರಾರಂಭಮಾಡಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕಾಲರಾ, ಕಾಮಾಲೆ, ಉಬ್ಬಸ, ಕೆಮ್ಮು, ಜ್ವರ, ತಲೆನೋವು, ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಅಮಶಂಕೆ, ಮೊದಲಾದವುಗಳಿಗೂ ದಿವ್ಯೌಷಧಗಳಿವೆ. "ಕ್ಯಾಟಲಾಗ್"ನ್ನು ನೋಡಿ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ,
ಕಲ್ಲಿಕೋಟೆ ಮಲಬಾರ.

Come! See! & Try!

P. Narayana Vaijappa Bhandary & Co.,

Cloth Merchants,
Car Street, MANGALORE.

ಮದಿವೆ ಉಪನಯನಗಳ, ಹಬ್ಬ ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗೀ ವಸ್ತ್ರಗಳು, ಧೋತಿಗಳು, ಟೋಪಿಗಳು ಇತ್ಯಾದಿ ಉಡುವುತೊಡುವುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

ವ್ಯಾಪಾರಕ್ಕೂ ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು, ನಗದಿ ಗಿರಾಕಿಗಳಿಗೆ ಡಿಸ್ಕೌಂಟು ಕೊಡೋಣಾಗುತ್ತದೆ.

ಪ. ನಾರಾಯಣ ವೈಜಪ್ಪಭಂಡಾರಿ ಮತ್ತು ಕಂಪೆನಿ,
ರಥಬೀದಿ, ಮಂಗಳೂರು.

ಸಚಿತ್ರ ಮಾಸಪತ್ರಿಕೆ. ಸಚಿತ್ರ ಮಾಸಪತ್ರಿಕೆ.

ಭಕ್ತಿಸಂದೇಶ.

ಡಿಶಂಬ್ರ, ಜನವರಿ, ಫೆಬ್ರವರಿ ತಿಂಗಳ ಸಂಚಿಕೆಯು ಪ್ರಕಟವಾಗಿರುವುದು.

ಇದರಲ್ಲಿ ಅನೇಕ ಚಿತ್ರಗಳೂ ಉಪಯುಕ್ತ ವಿಷಯಗಳೂ ಬಂದಿವೆ. ಈ ಸಂಚಿಕೆಯು ಚಂದಾದಾರರಿಗಲ್ಲದೆ ಇತರರಿಗೆ ದೊರೆಯಲಾರದು.

ಮಾರ್ಚ್, ಎಪ್ರಿಲ್ ತಿಂಗಳ ಸಂಚಿಕೆಗಳು ಮುದ್ರಣದಲ್ಲಿವೆ.

ಇವುಗಳಲ್ಲಿ ಬರುವ ವಿಷಯಗಳು:— ಶ್ರೀ ವಿವೇಕಾನಂದ ಸರಸ್ವತಿ, ಶ್ರೀ ವಿಷ್ಣು ಭಾವಾ ಜೋಗ ಇವರ ಜೀವನ ಚರಿತ್ರೆ (ಚಿತ್ರಸಹಿತ), ಕೊಳತ್ತೂರ, ಅತ್ತೀಯದತ್ತ ವರ್ಣನೆ, ವ್ಯಾವಹಾರಿಕ ಟಿಪ್ಪಣಿಗಳು, ವಿವೇಕಾನಂದರ ಪತ್ರಗಳು, ಹಿಂದೂ ದೇಶದ ಇತಿಹಾಸದ ಒಂದು ಅವಶೇಷ (ಯಕ್ಷಗಾನ ಪ್ರಸಂಗ), ಇವೇ ಮುಂತಾದ ರಸಭರಿತ ವಿಷಯಗಳೂ, ಚಿತ್ರಗಳೂ ಬರುವವು. ಈ ಸಂಚಿಕೆಯು ಚಂದಾದಾರರಿಗೆ ಮಾತ್ರ ದೊರೆಯುವುದು.

ವಾರ್ಷಿಕ ವರ್ಗಣಿ ರೂ. ೩-೦-೦. ಮಾದರೀ ಸಂಚಿಕೆಯ ಬೆಲೆ ಆ. ೬.

ಡಿ. ಕೆ. ಭಾರದ್ವಾಜ, ವಿದ್ಯಾಭೂಷಣ,
ಭಕ್ತಿಸಂದೇಶ ಆಫೀಸು, ಮಂಗಳೂರು, ದ. ಕ.

ಟಿಶ್ಯೂರೆಮಿಡಿಸ್

ಎಂಬ

12 ಜೀವರಸಾಯನಿ ಔಷಧಗಳು

ಮತ್ತು

ಹೊಮ್ಯೊಪೆಥಿಕ್ ಔಷಧಗಳು.

ನಮ್ಮ ಗಿರಾಕಿಗಳ ಅನುಕೂಲತೆ ಬಗ್ಗೆ ವಾರದ ಎಲ್ಲಾ ದಿವಸಗಳಲ್ಲಿ ಬೆಳಿಗ್ಗೆ 7½ ಘಂಟೆಯಿಂದ ರಾತ್ರೆ 9 ಘಂಟೆ ತನಕ ಸುಲಭವಾದ ಧರದಲ್ಲಿ ಮಾರೋಣಾಗುತ್ತವೆ.

ಟಿಶ್ಯೂರೆಮಿಡಿಸ್	2 ಡ್ರಾಮಿನ ಸೀಸೆ 1ಕ್ಕೆ	ರೂ	0—3—6
„	4 „	„	„	0—6—0
„	1 ಔನ್ಸಿನ	„	„	0—12—0
ಹೊಮಿಯೊಪೆಥಿಕ್	2 ಡ್ರಾಮಿನ	„	„	0—3—6

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
(ಶಾರದಾ ಛಾಪಖಾನೆ)
ರಥಬೀದಿ, ಮಂಗಳೂರು.

[illegible]

[illegible] capital	3,00,000—0—0	[illegible]	ರೂ 3,00,000—0—0
[illegible] capital	50,000—0—0	[illegible] ಹರಿಸಿದ ಮೂಲಧನ	50,000—0—0
[illegible] capital	40,200—0—0	[illegible] ಚಿತ್ತದ ಮೂಲಧನ ...	40,200—0—0
[illegible] capital	35,134—1—11	[illegible] ಮೂಲಧನ	35,134—1—11
[illegible]	61,239—12—9	ಠೇವಣಾತಿಗಳು...	61,239—12—9
[illegible] and other funds	8,258—9—6	ಕ್ಷೇಮನಿಧಿ ಮತ್ತು ಇತರ ಫಂಡುಗಳು ...	8,258—9—6

Fixed deposits received for 3, 6, 9 months [illegible] for 1 year and above at 7% at the discretion [of] the Managing Committee. In the case of all [de]posits interest will be paid quarterly

Cummalative deposits are received repayable [i]n 45 months at Rs. 50/—per each rupee deposited monthly.

Current a/c deposits opened free of charge and interest will be paid @ 3½% per annum on the lowest balance between the 4th and the last day of each month.

Loans granted on proper securities and pledges

A dividend of 8% has been declared for the last year Shares are available

Payments to the Corporation may be made to the credit of the Corporation at the Bank of Madras, and Canara Bank Mangalore

ಕಾಯಂ ಠೇವಣಾತಿಗಳು ತಿಂಗಳು 3, 6, 9ರ ಅವಧಿಗಳಿಗೆ ಆಡಳಿತ ಸಭೆಯವರ ಮುನಾಸಬು ಪ್ರಕಾರ ಸಾಲಿಯಾನ್ ಶೇಕಡಾ 6½% 1 ವರ್ಷಕ್ಕೆ ಮಿಕ್ಕಿದ ಬಾಬಿನಲ್ಲಿ ಶೇಕಡಾ 7% ದರದಲ್ಲಿ ಬಡ್ಡಿ ಕೊಡೋಣಾಗುವದು ಎಲ್ಲಾ ಠೇವಣಾತಿಗಳ ಮೇಲಣ ಬಡ್ಡಿ 3 ತಿಂಗಳಿಗೊಮ್ಮೆ ಕೊಡೋಣಾಗುವದು

ಪ್ರತಿ ತಿಂಗಳಿಗೆ ರೂ 1ರ ಪ್ರಕಾರ 45 ತಿಂಗಳುಗಳವರೇಗೆ ವಸೂಲು ಕೊಡುವ ಸಂಚಯದ ಠೇವಣಾತಿಗಳಿಗೆ 45 ತಿಂಗಳ ಅಂತ್ಯದಲ್ಲಿ ಪ್ರತಿ ತಿಂಗಳಲ್ಲಿ ವಸೂಲು ಕೊಟ್ಟ ರೂ 1ಕ್ಕೆ ರೂ 50/ರಂತೆ ವಾಪಸು ಕೊಡೋಣಾಗುವದು

ಚಾಲ್ತಿ ಠೇವಣಾತಿಗಳು ಸಂಘದ ಪರವಾಗಿ ಏನೂ ಖರ್ಚು ಇಲ್ಲದೆ ಪಡಕೊಳ್ಳೋಣಾಗುವವು ಪ್ರತಿ ತಿಂಗಳ 4ನೇ ತಾರೀಕಿನಿಂದ ಆಖೈರು ತಾರೀಕುವರೆಗೆ ಯಾವದಾದರೊಂದು ದಿನ ಇರುವ ಅತಿ ಕಡಿಮೆ ಠೇವಣಾತಿ ಮೊಬಲಗಿನ ಮೇಲೆ ಸಾಲಿಯಾನ್ ಶೇಕಡಾ 3½ ದರದಲ್ಲಿ ಬಡ್ಡಿ ಕೊಡೋಣಾಗುವದು

ಯೋಗ್ಯ ಜವಾಬ್ದಾರಿಯ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತವೆ

ಪಾಲುವಾಲಿಕರಿಗೆ ಕಳೆದ ವರ್ಷ ಶೇಕಡಾ 8% ದರದ ಬಡ್ಡಿ ಕೊಡೋಣಾಗಿಯದೆ ಶೇರುಗಳು ವ್ಯಾಪಾರಕ್ಕೆ ತಯ್ಯಾರಿವೆ.

ಸಂಘಕ್ಕೆ ಕೊಡೋಣಾಗುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸು ಬೇಂಕಿನಲ್ಲಿ ಮತ್ತು ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಡಬಹುದು

UDIPI,
1st February 1920

Naimpalli Ananda Rao,
Secretary

[illegible]

[illegible] ಅತ್ಯುತ್ತಮವಾದ ತೈಲ [illegible] ಇದನ್ನು ಪರೀಕ್ಷಿಸಿ [illegible] ಇದೆ. ಸ್ಮರಣಾ ಶಕ್ತಿಯನ್ನು ವರ್ಧಿಸುತ್ತದೆ [illegible] ಉಂಟಾಗುತ್ತದೆ.

[illegible] ಸೀಸೆಗೆ ಬೆಲೆ [illegible] ರೂಪಾಯಿ.

ಬಿ. ಸಿ. ಶಾಹಾ ಮತ್ತು ಕಂಪೆನಿ,
ಚೇನ್ನಾಬಜಾರ್, ಮದ್ರಾಸ್.

[illegible]ಯಿಸರ ಎಲಿಕ್ಸಿರ್ ಫೊರ್ ಹೆಲ್ತ್

ಎಂಬುವ [illegible] ಚಾ ಮತ್ತು ಕಾಫಿಗಳಿಗಿಂತ ಅತ್ಯಂತ ಹಿತಕರವಾದ ಪಾನವಾಗಿದ್ದು ಬಹುಮೂತ್ರಪೀಡೆ ಬಾರದಂತೆ ಆರೋಗ್ಯ ಕಾಪಾಡುತ್ತದೆ. ಬಾಯಾರಿಕೆ ತಗ್ಗಿಸುತ್ತದೆ ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು. ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ.

8 [illegible] ಸೀಸೆಗೆ ಕ್ರಯ ರೂ. 1—4—0 ಮಾತ್ರ

ಡಾಯಬಟೂನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ. ಪೂರ್ಣ ಗುಣಮಾಡುತ್ತದೆ ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸಗೆ ರೂ 2 ಮಾತ್ರ ಅಂಚೆಹಾಸಲು ವಗೈರೆ ಇದರಲ್ಲಿ ಸೇರಿಲ್ಲ ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವುವು

P. M. Kamath & Co.,
Chemists & General Merchants,
New Court Road, MANGALORE

ಅಥವಾ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಮಿ| ಕೆ ಆರ್ ಲೂವಿಸರನ್ನು ವಿಚಾರಿಸಿದರೆ ಈ ಔಷಧವನ್ನು ಹೊಂದಬಹುದು.

ಸಾರ್ವಜನಿಕ (?) ಜನವರಿಯಿಂದ ಆರಂಭ | ಸದ್ಬೋಧಕ ಗ್ರಂಥಮಾಲೆ. (ತ್ರೈಮಾಸಿಕ ಪುಸ್ತಕ) | ವಾರ್ಷಿಕ ಚಂದಾ ಅಂಚೆ ಸಹಿತ ರೂ 1 ಮಾತ್ರ

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ ಕಾದಂಬರಿ, ನಾಟಕ, ಕಾವ್ಯ, ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ [illegible] ವಿನೋದಲಹರಿ, ಸ್ಥಳೀಯವಾರ್ತೆ ವಿಮರ್ಶೆ ಮತ್ತು ಸ್ವೀಕಾರ ಇತ್ಯಾದಿ [illegible] ಪ್ರಕಟವಾಗುವವು ಸಮಸ್ತ ಕನ್ನಡಿಗರಿಂಗೂ ಸಂಗ್ರಹಿಸಿಕೊಳ್ಳಲು [illegible] ವಾರ್ಷಿಕ ಚಂದಾ ಅಂಚೆವೆಚ್ಚದೊಡನೆ ಒಂದೇ ರೂಪಾಯಿ ಇಟ್ಟಿರುವೆವು ಈಗಲೇ ತಮ್ಮ ಹೆಸರನ್ನು ತಿಳಿಸಿ ವರ್ಗಣೆದಾರರಾಗಿ ಸೇರುವುದರ ಮೂಲಕ ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ

ವಿಳಾಸ — ಎಸ್ ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ
ಸದ್ಬೋಧಕ ಗ್ರಂಥಮಾಲಾ ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ)

ಅಥವಾ — **S R Hebbar & Bros,**
General Merchants, SURATKAL, S. K

ಕರ್ನಾಟಕ ಮಹಾಶಯರೇ ಓದಿದಿರಾ!

ಮಾನವ ಜಾತಿಯವರ ಶರೀರದ ಮರ್ಮಗಳನ್ನು ಬೋಧಿಸುವ

ಕಾಮಶಾಸ್ತ್ರ ಎನ್ನುವ ಶರೀರ ಮರ್ಮಶಾಸ್ತ್ರ

ಇಲ್ಲವಿದ್ದರೆ, ಮರುಟಪ್ಪಾಲಿಗೇನೇ ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಈ ಶಾಸ್ತ್ರವು ಫ್ರೆಂಚ, ಇಂಗ್ಲಿಷ ಅಮೇರಿಕನ ಮೊದಲಾದ ಶಾಸ್ತ್ರಗಳಿಂದ ಕನ್ನಡಕ್ಕೆ ಭಾಷಾಂತರ ಮಾಡಲ್ಪಟ್ಟಿದೆ ಮಾನವ ವರ್ಗದವರಿಗೆ ಬೇಕಾದ ಎಲ್ಲಾ ರಹಸ್ಯಗಳು ವೀರ್ಯವೃದ್ಧಿಸುವದಕ್ಕೆ ಕಾರಣಗಳು ಗರ್ಭಿಣಿ ಆಗ ಸಂಕಟ ವಿಧವೂ ಗರ್ಭಿಣಿಗೆ ಬೇಕಾದ ಮರ್ಮಗಳು, ನವಮಾಸದ ಪಿಂಡದ ವಿವರಗಳು ಶಿಶು ಉತ್ಪತ್ತಿ ವಿಧಿ, ಶಿಶು ಸಂರಕ್ಷಣೆ ಮಾಡುವ ವಿಧ ಸ್ತ್ರೀಧರ್ಮನೀತಿಗಳು [illegible] ದೋಷಗಳು ಧಾತು ರೋಗ ಶಾಸ್ತ್ರ (ಬಸ್ತಿವೈದ್ಯ) ಪ್ರತಿಯೊಂದು ಕುಟುಂಬದಲ್ಲಿಯೂ ಸಂಭವಿಸಬಹುದಾದ ಸ್ತ್ರೀಪುರುಷರ ಮರ್ಮರೋಗಗಳ ಗರ್ಭಿಣಿಯಾದ ಸ್ತ್ರೀಯರಿಗುಂಟಾಗುವ ರೋಗಗಳನ್ನು ಪರಿಹರಿಸಿ ಗರ್ಭಾಶಯಕ್ಕೆ ಶಕ್ತಿಯನ್ನುಂಟು ಮಾಡುವ ಔಷಧಗಳೂ ಇನ್ನು ಶರೀರದ ಭಾಗಗಳ [illegible] ಚಿತ್ರಪಟಗಳ ಸಹಿತ [illegible] ಕಾಗದದಲ್ಲಿ ಪ್ರಿಂಟ ಆಗಿ ವ್ಯಾಪಾರಕ್ಕೆ ತಯಾರಾಗಿದೆ ಕ್ರಯ ಪ್ರತಿಗೆ 1 ಆಣೆ

ಕೊನೆಯ ಪ್ರತಿಯಲ್ಲಿ ಇನ್ನು ಕೆಲವು ಪ್ರತಿಗಳು ಮಾತ್ರ ಉಳಿದಿದೆ

ಕೋಲ (ಮೊಗ್ಗು) ಮತ್ತು ಪಾಕಶಾಸ್ತ್ರ

ಈ ಪುಸ್ತಕದಲ್ಲಿ ನವೀನರಂಗ ಕೋಲ ಚಿತ್ರಗಳೂ, ಅಡಿಗೆ ಮಾಡುವ ವಿಧ, ಪದಾರ್ಥಗಳೂ ಮತ್ತು ಮಿಠಾಯಿ ತಿನಸುಗಳೂ (Sweetmeats) ಪ್ರಸಾದಗಳೂ ಕೇಕುಗಳೂ, (Cakes) ಬಿಸ್ಕಿಟ್ ಗಳೂ (Biscuits) ಷರಬತ್ (Syrup) ಉಪ್ಪಿನಕಾಯಿಗಳ ವಿಧಾನಗಳ ಮೊದಲಾದ ತಿನಸುಗಳನ್ನು ಮಾಡುವ ವಿಧಗಳ ಇದರಲ್ಲಿ ಅಡಗಿವೆ ಪ್ರತಿ ಒಬ್ಬ ಸ್ತ್ರೀಗೂ ಅವಶ್ಯವಾಗಿ ಬೇಕಾದ ಪುಸ್ತಕ ಕ್ರಯ ಆಣೆ [illegible]

ವಿಳಾಸ— ಮಹಾರಾಜ ಪುಸ್ತಕಶಾಲೆ,
[illegible] ಆರ ನಾಚಲ ಮೊದಲಿ ಬೀದಿ, ಸಾಹುಕಾರ್ ಪೇಟ, ಮದರಾಸ್

ಮ ಲೆ ಜ್ವ ರ

ಮಲೆಜ್ವರಹಾರಿ.

ಮಲಜ್ವರ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಪರಿಹಾರ ಬೆಲೆ [illegible] ಆಣೆ

ವಿಷದ ಯಾವದೇ ಪದಾರ್ಥಗಳು ಒಂದು ರೋಗ ನಿವಾರಣೆಗೆ ಸಹಕಾರಿಯಾದರೂ ಇನ್ನೊಂದು ರೋಗಕ್ಕೆ ಎಡೆಕೊಡುತ್ತವೆ ಅಂಥ ವಿಷಮಯವಾದ ಪದಾರ್ಥಗಳು ಇದರಲ್ಲಿ ಲವಮಾತ್ರವೂ ಇಲ್ಲ

ಹಿಂದುಸ್ಥಾನ, ಬರ್ಮಾ, ಸಿಂಹಳ ಮುಂತಾದ ಪ್ರದೇಶಗಳ ಬೇರೆ ಬೇರೆ ಕೊನೆಗಳಿಂದಲೂ ಕಳೆದ [illegible] ವರ್ಷಗಳಲ್ಲಿ ಅಸಂಖ್ಯಾತವಾದ ಶಿಫಾರಸು ಪತ್ರಗಳ ನಮಗೆ ಬಂದಿವೆ

ಪುಣೆಯ ಕೃಷಿಕಾಲೇಜಿನ ಅಧ್ಯಾಪಕರಾದ ಡಾ| ಮೊನ್ ಸಾಹೇಬರು ಈ ರೀತಿಯಾಗಿ ಬರೆದಿರುತ್ತಾರೆ [illegible] ಬೇರೆ ಬೇರೆ ವಿಧದ ಜ್ವರಗಳ ಸಂದರ್ಭದಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ ಅದರಿಂದ ಕ್ಷಿಪ್ರದಲ್ಲಿ ಗುಣಾಂಶಸಿಕ್ಕಿತು

ನಮ್ಮ ಏಜಂಟರು ಈ ಮೊದಲೇ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು ಕಮಿಶನ್ ಮುಂತಾದ ಶರ್ತಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು

ಕರ್ಣಿಕ ಬ್ರದರ್ಸ್,
56 ಗಿರಗಾಂವ, ಮುಂಬಯಿ

Agent —The Woollen M rt, *Mangalore*

ಮದನಮಂಜರಿ ಮಾತ್ರೆ.

ಈ ಮಾತ್ರೆಗಳನ್ನು ಉಪಯೋಗಿಸುವದರಿಂದ ದಾತುವು ಹೋಗುತ್ತಿದ್ದರೂ, ದಾತುವು ಕಟ್ಟುಹೋಗಿದ್ದರೂ ಬಹು ಬೇಗನೆ ಗುಣಮಾಡುವದು ರಕ್ತವನ್ನು ಶುದ್ಧಿಮಾಡಿ ನರಗಳಿಗೆ ಬಲವನ್ನು ಕೊಟ್ಟು, ಹಸಿವನ್ನು ಹೆಚ್ಚಿಸುವದು ಕೆಕಾಲು ಸೊಂಟದ ನೋವುಗಳನ್ನು ಕೂಡಲೆ ಖಂಡಿಸುವದು ಹಳೆಯ ತಲೆನೋವುಗಳನ್ನು ಸಹ ಬೇಗನೆ ನಿವಾರಣೆ ಮಾಡುವದು



ಕ್ರಯ ೪೦ ಮಾತ್ರೆಗಳ ಡಬ್ಬಿಗೆ ೧-೦-೦

ವಿಳಾಸ — ಮದನಮಂಜರಿ ಫಾರ್ಮಸಿ,
೨೭ ಚೈನಾಬಜಾರು ರೋಡು ಮದರಾಸು

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ

ಅನೇಕ ಉತ್ತಮವಾದ ವನಸ್ಪತಿ ಔಷದಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತ್ತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ

ಅಮೂಲ್ಯವಸ್ತು!

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9

ಪರಸ್ಥಳಗಳಲ್ಲಿ ಏಜಂಟರಾಗಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಹೋಲ್ ಏಜಂಟ್, — ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟೆ, ಮಂಗಳೂರು

ಫೀಸು ಇಲ್ಲ! ರೋಗಪರೀಕ್ಷೆಗೆ ಫೀಸು ಇಲ್ಲ!!

ರೋಗಿಯು ಯಾವ ದೇಶದವನೋ ಅದೇ ದೇಶದ ಔಷಧ

"ನಿಜವಾಗಿ ನೋಡಿದರೆ ಯಾವ ದೇಶದಲ್ಲಿ ಯಾವ ರೋಗವುಂಟಾಗುತ್ತದೊ ಆ ದೇಶದ ಔಷಧವೇ ಅದನ್ನು ಗುಣಪಡಿಸುತ್ತದೆಂದು ಕಂಡುಬರುತ್ತದೆ ಸಿಮ್ಸನನೆಂಬ ಪಾಶ್ಚಾತ್ಯ ಪಂಡಿತನು ಕೂಡ ಇದೇ ಮತವನ್ನು ಸ್ವೀಕರಿಸಿದ್ದಾನೆ ಆದುದರಿಂದಲೇ ಭಾರತವರ್ಷದೊಳಗಿನ ಜನರಿಗೆ ಯಾವ ರೋಗಗಳಾಗುತ್ತವೊ ಅವುಗಳನ್ನು ನಿವಾರಿಸಲು ದೇಶೀಯ ಔಷಧಗಳೇ ಅತ್ಯುತ್ತಮವಾದವುಗಳು"

ಡಾ ಎಸ್ ಜೇ ಸರದೇಸಾಯಿ,
ಎಮ್ ಡಿ (ಲಂಡನ್)

ಇನ್ನು ಭಯ ಪಡದೇ

ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,

ವೆಂಕಟ್ರಮಣ ದೇವಾಲಯದ ಹತ್ತಿರ, ಮಂಗಳೂರು

ಇಲ್ಲಿಗೆ ಬಂದು ನಿಮಗೆ ಬೇಕುಬೇಕಾದ ತಲೆಗೂ ಶರೀರಕ್ಕೂ ಹಚ್ಚಿಕೊಳ್ಳುವ ವಿವಿಧ ತೈಲಗಳನ್ನೂ ಸೇವನೆಗೆ ಯೋಗ್ಯವಾದ ಒಳ್ಳೊಳ್ಳೇ ಲೇಹಗಳನ್ನೂ, ಆಸವಾರಿಷ್ಟ, ಗುಟಿಕೆ, ಮಾತ್ರೆ, ಮಕರಧ್ವಜ ಮುಂತಾದ ಅನೇಕ ಉಪಯುಕ್ತ ಮತ್ತು ದಿವ್ಯವಾದ ಔಷಧಗಳನ್ನು ತೆಗೆದುಕೊಂಡು ಹೋಗಿ ಗುಣಹೊಂದಿರಿ.

ವೈದ್ಯರು — ಬಿ. ಆರ್. ಹರಿದಾಸ್, ಚಿಕಿತ್ಸಕರು

ಇವರು ಹೊಸಬರಲ್ಲ! ಏಕೆಂದರೆ ಭಯಂಕರವಾದ ನ್ಯುಮೋನಿಯಾ, ಪ್ಲೇಗು, ಟೈಫಾಯಿಡ್, ಕಾಲರಾ, ಡಿಸೆಂಟ್ರಿ (ಆಮಶಂಕೆ) ಮುಂತಾದ ಅನೇಕ ಕಷ್ಟಸಾಧ್ಯವೂ ಗೂಢವೂ ಆದ ರೋಗಗಳನ್ನು ದಿವ್ಯ ವನಸ್ಪತಿಗಳ ಮೂಲಕ ಸ್ವಲ್ಪ ಕಾಲದಲ್ಲಿಯೇ ಗುಣಪಡಿಸಿ, ಸುಪ್ರಸಿದ್ಧರಾಗಿರುವರು. [illegible]

ಆರ್. ಮಾರ್ಟಿನ್ಸರ ಲಪ್ಟಾ ಎಣ್ಣೆ.

ಇದರ ವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನವರೆಗೂ ಇರುತ್ತದೆ ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ, ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ ಆಗುವುದಲ್ಲದೆ ಮೆದುಳು ಚೆನ್ನಾಗಿ ಬೆಳೆಯುತ್ತದೆ ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ ಕೂದಲುಗಳಲ್ಲಿರುವ ಹೇನುಗಳು ಮುಂತಾದವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ

ಕ್ರಯ ಬಾಟ್ಲಿ ೧ಕ್ಕೆ ರೂಪಾಯಿ ೧—೪—೦

ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ! ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು! ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಿರಿ ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡಲಾರಿರಿ ಎಲ್ಲಾ ವಿಧವಾದ ಕೆಮ್ಮಲಿಗೂ ರಾಮಬಾಣವಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧—೪—೦

ಆರ್ ಮಾರ್ಟಿನ್ಸರ ಗ್ಲಿಟೋಡಯಿನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ, ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ ಬೆಲೆ ಸೀಸೆ ಒಂದಕ್ಕೆ ರೂ. ೨—೦—೦

ವಿಳಾಸ:— ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್, ಮುಂಬಯಿ.

R. D. Katoly & Co
No. D. Frere Road,
Near Wright & Co. Fort, Bombay.

THE WORLD RENOWNED
HAARLEM OIL.
(Genuine Dutch Produce)

A Domestic remedy of extraordinary merits that has stood the test of centuries. A Panacea against all human ailments.

ಲೋಕಪ್ರಸಿದ್ಧವಾದ ಹಾರ್ಲೆಮ್ ತೈಲ.

SUPPLY EXPECTED SHORTLY

Register your orders immediately against disappointment.

CAPABLE AGENCY WANTED.

Prices & particulars from—

The Bombay Stores,
Humpankatta, MANGALORE.

Prize Books! ಬಹುಮಾನ ಪುಸ್ತಕಗಳು. Prize Books!!

ಮೈಸೂರು ಸರಕಾರದ ವಿದ್ಯಾಭ್ಯಾಸದ ಇಲಾಖೆಯವರಿಂದ Prize Books ಆಗಿ ಅಂಗೀಕೃತವಾದ ಪುಸ್ತಕಗಳು ಪ್ರತಿಯೊಬ್ಬ ಕರ್ಣಾಟಕ ಬಾಲಕನೂ, ಬಾಲಿಕೆಯೂ ತಪ್ಪದೆ ಓದಬೇಕು. ತಿಳಿಗನ್ನಡ ಭಾಷೆ, ಸುಲಭ ಶೈಲಿ, ಬೆಲೆ ಅತಿ ಸುಲಭ. ಚಂದ್ರಹಾಸ, ಧ್ರುವ, ಪ್ರಹ್ಲಾದ, ಹರಿಶ್ಚಂದ್ರ ಪ್ರತಿಯೊಂದಕ್ಕೆ (೦—೨—೦. ವಿನಾಯಕ, ನವರೋಚಿ (೦—೧—೦) ಮತ್ತು ಸಾವಿತ್ರಿ, ಮಹಿಳಾ ಸುನೀತಿ ಶತಕ (೦—೨—೦).

ಉಪಾಧ್ಯಾಯರುಗಳಿಗೂ, ಪುಸ್ತಕ ವ್ಯಾಪಾರಿಗಳಿಗೂ, ಭಾರಿ ಆರ್ಡರುಗಳ ಮೇಲೆ ಧಾರಾಳವಾದ ಕಮಿಷನು ಉಂಟು.

ಈ ದಿನವೇ ಬರೆಯಿರಿ.

ವಿಳಾಸ:—ಮ್ಯಾನೇಜರ್,
ಸುಬೋಧ ಕುಸುಮಾಂಜಲಿ ಗ್ರಂಥಮಾಲಾ ಕಾರ್ಯಾಲಯ,
2. ಕ್ಲಾರ್ಕ್ಸ್ ಪೇಟೆ, ಸಿ. ಬೆಂಗಳೂರು, ದಂಡು.

ಕೇಸರೀಯವರ ಅತ್ಯುತ್ತಮವಾದ ಮೂರು ಔಷಧಗಳು:

ಲೋಧ್ರ

ಅಥವಾ

ಗರ್ಭಾಶಯ ರೋಗ ನಿವಾರಣಿ:—ಇದು ಸ್ತ್ರೀಯರ ದೇಹ ಪ್ರಕೃತಿಯಲ್ಲಿ ಉಂಟಾಗುವ ವಿವರಿಸಲಸದಳವಾದ ಯಾವತ್ತೂ ರೋಗಗಳನ್ನು ಖಾತ್ರಿಯಾಗಿ ಗುಣಪಡಿಸುವುದು.

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ. 3; ಸಣ್ಣದಕ್ಕೆ ರೂ. 1-10-0.

ಅಮೃತ

ಅಥವಾ

ರಕ್ತ ಶುದ್ಧೀಕರಣಕ್ಕೆ ದಿವ್ಯ ಔಷಧ:—ಇದನ್ನು ತೆಗೆದುಕೊಳ್ಳುವುದರಿಂದ ನೀರಕ್ತತ್ವ (ರಕ್ತವು ಕೆಟ್ಟುಹೋಗುವಿಕೆ) ಅಜೀರ್ಣ, ಮಲಬದ್ಧತೆ, ನಿತ್ರಾಣ, ಶಿರೋಭ್ರಮಣ, ಜ್ಞಾನದುರ್ಬಲತೆ ಮೊದಲಾದುವು ಪರಿಹಾರವಾಗುತ್ತವೆ.

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ. 3; ಸಣ್ಣದಕ್ಕೆ ರೂ. 1-10-0.

ಅರ್ಕ

ಎಂಬ

ಜ್ವರ ಸಂಹಾರಕ್ಕೆ ರಾಮಬಾಣ:—ಈ ಔಷಧಿಯ ಎರಡು ತಟಕುಗಳನ್ನು ಸೇವಿಸುವುದರಿಂದ ಇನ್‌ಫ್ಲುಯೆಂಜಾ ಮುಂ ಸಕಲ ಜ್ವರಗಳೂ ನಿವಾರಣೆಯಾಗುವುವು.

ಕ್ರಯ ಬಾಟ್ಲಿ 1ಕ್ಕೆ ರೂ. 1—8—0.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೇಸರೀ ಕುಠೀರಂ,
ಆಯುರ್ವೇದ ಔಷಧಾಲಯ,
33 ಪೋಲೀಸು ಕಮಿಷನರ ಆಫೀಸು ರಸ್ತೆ,
ಎಗ್ಮೋರ, ಮದರಾಸ್.

ಬ್ರಾಂಚ್ ಆಫೀಸು:—
9 ಉಂಡರ್ ಸ್ಟ್ರೀಟ್.
ಜಾರ್ಜಟೌನ್, ಮದರಾಸ್.

ಕೂತಲ್ಲಿಗೆ ಬರುವದು

ಯಾವುದೊಂದು ಖರ್ಚಿಲ್ಲದೆ ಪಂಚವರ್ಣಗಳಿಂದ ತಯಾರಿಸಿದ

1920ನೆಯ ಇಸವಿ ಕ್ಯಾಲಂಡರ್.

ಟಪ್ಪಾಲು ಮತ್ತು ಪೇಕಿಂಗ್ ಖರ್ಚಿಗಾಗಿ ೨ ಆಣೆಯ ಟಪ್ಪಾಲು ಸ್ಟಾಂಪನ್ನು ಕಳುಹಿಸಿರಿ.

ವಿಳಾಸ:—

ವಿ. ಎ. ಎಸ್. ಪಾಣಿ ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

NETRANAND SAREES
Cheap and Fashionable

Sarees in all brilliant colours with lustrous borders

Liberal Commission for wholesale Orders.

ಚಲೋ ಬಣ್ಣದ ಶೀರೆಗಳು! ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಭಾವಾಕರ್ಷಕ "ನೇತ್ರಾನಂದ" ಶರವಾದ ಶೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ.

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಸಿಕ್ಕುವದು.

ನಾಲಿನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಮ್ಮಿ ಕ್ರಯದಲ್ಲಿ ದೊರಕುವವು.

ವಿಶೇಷ ಮಾಹಿತಿಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶ್ರೀ ಶೀತಾರಾಮವಿಠ್ಠಲ ಕಂಪೆನಿ,
ವಿಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟೆ, ಮಂಗಳೂರು.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹೊಲ್

ಬಹು ನೂತನ ಅಲೋಪತಿ ಮತ್ತು ಹೊಮಿಯೊಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!
ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್‌ಪೆನ್‌ಗಳೂ, ಥರಮಾಮೀಟರ್ ಎಂಬ ಅತ್ಯಾವಶ್ಯಕ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಫೊಮೆಂಟೇಶನ್ ಚೀಲಗಳೂ, ಐಸ್‌ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸೆಯ ಸಾಮಗ್ರಿಗಳೂ ಸ್ಟವ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ, ನೀಲಗಿರಿಯ ಎಣ್ಣೆ, ಎಂಟ್ಯುಯುಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು.

ಹೊಮಿಯೊಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೊಮಿಯೊಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆಮಾಡಿ, ಧರ್ಮಾರ್ಥವಾಗಿ ಕೊಡುವೆವು.

☞ ಔಷಧಗಳನ್ನು ಶಾಸ್ತ್ರೀಯವಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರಿರುವರು.

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ! ನಗದಿ ವ್ಯಾಪಾರ! ರೋಗಗಳು ಗುಣವಾಗುವುದು ಬೇಗ!
ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಸಲ ಹಾಕಿದರೆ ಅದರಿಂದ ಪ್ರಾರಂಭಿಸಿ ಕೊಂಡದ್ದಕ್ಕಿಂತಲೂ ಚೆನ್ನಾಗಿ ಹೊಳೆಯುವ, ಯಾವ ಹೊಂಬರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು.

ಗಂಧ, ಮೊಡವೆ, ಮಚ್ಚೆ, ತುರಿ, ಕಜ್ಜಿ ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯ ಮಾಡುವದು.

3 ಸಾಬಾನುಗಳುಳ್ಳ ಪೆಟ್ಟಿಗೆ ಒಂದಕ್ಕೆ ರೂ. 0—14—0.
ಒಂದೇ ಸಲ 2 ಪೆಟ್ಟಿಗೆ ತೆಗೆದುಕೊಂಡರೆ „ 1—10—0.
ವಿಲಾಯತಿ ರೋಮನಾಶಕ ಬುಕ್ಕಿ . . . „ 0—8—0.

ವಿಳಾಸ— ವೈರಂ ಅಂಡ್ ಕೋ,
ಇರುಳಪ್ಪನ ಬೀದಿ, ಮದರಾಸು.

ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ಕಣ್ಣು ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುರುಟಪ್ಪವಾದ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಪ್ರಾಮಾಣಿಕವಾಗಿ ತಯಾರಿವೆ. ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದಲ್ಲಿ ತಿಳಿದುಬರುವುದು.

ವೈದ್ಯಶಾಲೆಯ ವ್ಯವಸ್ಥಾಪಕರೂ ಮನೇಜರರೂ ಆದ ದಾಮೋದರ ನಂಬೀಶನವರು ಅವಶ್ಯವಾದ ಹೊರತು ಮಿಕ್ಕ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದೇ ಪರೀಕ್ಷಿಸಿ, ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವರೆ ಸಿದ್ಧರಾಗಿರುವರು. ಇದರ ಬ್ರೇಂಚು ಮಂಗಳೂರು ರಥಬೀದಿಯಲ್ಲಿ ತೆರೆಯುವುದರಿಂದ ಸದರಿ ಎಲ್ಲಾ ಔಷಧಗಳು ಸದರಿ ಬ್ರೇಂಚಿನಲ್ಲಿ ಕೂಡಾ ಬೇಕಾದಷ್ಟು ಸಿಕ್ಕುವವು. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ. ಪಿ. ಮೂಲಕ ಕಳುಹಿಸಲಾಗುವುದು.

೧. ಅಮೃತಾರಿಷ್ಟ—ಇದು ಎಲ್ಲಾ ತರದ ವಿಷಮಜ್ವರ (ಇನ್‌ಫ್ಲುಯೆಂಜಾ) ಒಳಪ್ಪಟ್ಟ ಜ್ವರಗಳ ಮೇಲೆ ರಾಮಬಾಣದಂತಿರುವುದು. ರಕ್ತ ಶುದ್ಧಿಗೆ ಸಿದ್ಧೌಷಧ. ೧೨ ಔನ್ಸಿನ ಬಾಟ್ಲಿ ೧ರ ಕ್ರಯ ರೂ. ೧—೧೦—೦

೨. ವೀರ್ಯಪ್ರಸಾದ ವಟಿ—ಇದು ಸ್ವಪ್ನೇಂದ್ರಿಯದಿಂದ ನರಳುತ್ತಿರುವ ಮನುಷ್ಯರಿಗೆ ಅಮೃತದಂತಿರುವುದು. ೨೪ ಮಾತ್ರೆ ಇರುವ ಸೀಸೆ ೧ಕ್ಕೆ ಕ್ರಯ ರೂ. ೧.

೩. ನವನೀತಮಧುಸ್ನುಹಿ—ಇದು ಫಿರಂಗವ್ಯಾಧಿ (ಸಿಫಿಲಿಸ್) ಮೇಹ ಮುಂತಾದ ರೋಗಗಳನ್ನು ಒಳ್ಳೇ ರೀತಿಯಿಂದ ಗುಣಪಡಿಸುತ್ತದೆ. ೨೪ ತೊಲೆ ಇರುವ ಡಬ್ಬಿ ೧ಕ್ಕೆ ಕ್ರಯ ರೂ. ೩.

೪. ವಿಷೂಚಿಕಾ ಸಂಹಾರಿ—ಎಂಬ ವಾಂತಿಭೇದಿ ಮಾತ್ರೆ. ಈ ಮಾತ್ರೆಯ ಸೇವನೆಯಿಂದ ಎಂಥಾ ಕಠಿಣ ತರವಾದ ವಾಂತಿಭೇದಿಯೂ ನಿಂತು ಹೋಗುವುದು. ೨೪ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ರೂ. ೧—೦—೦.

೫. ನಯನಜ್ಯೋತಿ—ತಿಮಿರ, ಉರಿಗಣ್ಣು, ನರ ಏಳುವಿಕೆ ಮೊದಲಾದ ಕಣ್ಣಿನ ಎಲ್ಲಾ ರೋಗಗಳನ್ನು ಗುಣಪಡಿಸುವ ಸಿದ್ಧೌಷಧ. ಅರ್ಧ ಔನ್ಸಿನ ಸೀಸೆ ೧ರ ಕ್ರಯ ರೂ. ೧—೦—೦.

೬. ನಯನಾಮೃತ—ಕಣ್ಣು ತುರಿಸುವಿಕೆ, ದೃಷ್ಟಿಮಾಂದ್ಯ, ಇರುಳು ಗಣ್ಣು, ಕೀವು ಬರುವುದು. ಹೀಗೆ ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನು ಬಹು ಜಾಗ್ರತೆಯಾಗಿ ಗುಣಪಡಿಸುವದು. ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ. ೧—೦—೦

ವೈದ್ಯರ್ ವಿ. ಕೆ. ದಾಮೋದರ ನಂಬೀಶನ್
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡಾ.

ಇನ್‌ಫ್ಲುಯೇನ್ಝಾ ಜ್ವರಕ್ಕೆ

ಎಮ್ಕೊ.

ಮಾತ್ರಾ ಚಿಕಿತ್ಸೆ!

ಇನ್‌ಫ್ಲುಯೆನ್ಝಾ, ನಿಮೋನಿಯಾ, ಮಲೇರಿಯಾ, ಸಾಧಾರಣ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ವಿಷಮ ಜ್ವರ, ಕೆಮ್ಮು, ಶೀತ, ಮೊದಲಾದ ವ್ಯಾಧಿಗಳಿಗೆ ಮಾತ್ರಾ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ ನಾವು ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಮಾತ್ರಾ ಔಷಧಿಯನ್ನು ಈಗಷ್ಟೇ ಪ್ರಚಾರಕ್ಕೆ ತಂದಿರುತ್ತೇವೆ. ಮೇಲಿನ ವ್ಯಾಧಿಗಳಿಗೆ ಇದು ಮಾತ್ರಾ ಚಿಕಿತ್ಸೆ ಎಂಬವರಿಗೆ, ಕಳೆದ ಕೆಲವು ವರ್ಷಗಳಿಂದ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ.

ಎಮ್ಕೊ. ಇದು ಎಲ್ಲಾ ರೋಗಾಣುಗಳನ್ನು ಕೊಂದು ಅದರ ವಿಷವನ್ನು ನಾಶಪಡಿಸಿ, ಇನ್‌ಫ್ಲುಯೇನ್ಝಾ, ನಿಮೋನಿಯಾ ಮತ್ತು ಅಪತಂತ್ರಿನ ಇತರ ಸೋಂಕು ರೋಗಗಳು ತಟ್ಟದಂತೆ ತಡೆಕಟ್ಟಿ ಅದು ಪ್ರಾಬಲ್ಯವಾಗದಂತೆ ಮಾಡುತ್ತದೆ.

ಎಮ್ಕೊ. ಇದು ಇನ್‌ಫ್ಲುಯೇನ್ಝಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ.

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಗಳ ಕೂಟದಿಂದ ಅತಿ ಜಾಗರೂಕತೆಯಿಂದ ತಯಾರಿಸಿರುತ್ತದಾದಕಾರಣ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನ್ನು ಸೇವಿಸಬಹುದು. ಹೆಂಗಸರೂ, ಮಕ್ಕಳೂ ಭಯಭೀತಿ ಇಲ್ಲದೆ ಸೇವಿಸಬಹುದು.

ಎಮ್ಕೊ. ಜತೆಗೆ ಇದು ಕಾಲೇರಾ ರೋಗಗಳನ್ನೂ ಗುಣಪಡಿಸುತ್ತದೆ.

ಕ್ರಯ ಸೀಸೆ ೧ರ ರೂ. ೦—೧೦—೦ ಮಾತ್ರ. ವಿ. ಪಿ. ಬೇರೆ.

ಪ್ರಮುಖ ವಿತಂಟರು:— ದಿ ಇಣ್ಡಿಯನ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Subscribed and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds ,, 138781—9—2	ಕ್ಷೇಮನಿಧಿ ಮತ್ತು ಇತರ ಫಂಡುಗಳು ,, 138,781—9—2

THE BANK RECEIVES FIXED, CURRENT ACCOUNT, & SAVINGS BANK DEPOSITS.

ಠಾಯಿ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ತಕ್ಕೊಳ್ಳಲಾಗುತ್ತದೆ.

For further particulars apply to the Secretary.

ವಿಶೇಷ ಮಾಹಿತಿ ಬಗ್ಗೆ ಸಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 1st March 1920

P. Gopal Naik,
Secretary.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೊಲ 1ಕ್ಕೆ ರೂ. 3, 2, 1.

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಛಿಲ್ಲೆಯನ್ನು ತೀರು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ಲೇವೆಂಡರ್. ಶೀಸೆ 1ಕ್ಕೆ 1—4—0.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಬಿಕರಿಗೆ ಸಿದ್ಧವಾಗಿರುತ್ತವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

೧. ವಿಶಾಲಾಕ್ಷಿ ಅಮೃತ [illegible] ಕ್ರಯದ ಅನುಭವಸಿದ್ಧವಾದ ವನಸ್ಪತಿಗಳೂ, ವಿದ್ಯಾ ಪದ್ಧತಿಗಳೂ ಸಿಕ್ಕುತ್ತವೆ. ಇವನ್ನು ತಂದು ಉಪಯೋಗಿಸಿದವರಿಗೆ ತಕ್ಷಣವೇ ಆಯುರಾರೋಗ್ಯ ಭಾಗ್ಯ ಲಭಿಸುವುದು. ಪತ್ರ ವಿಶೇಷ ವಿಲಾಸ, ತರಿಸಿ ಪರೀಕ್ಷಿಸಿ ನೋಡಿರಿ.

1. ತತ್ವಮೂಲಿಕಾ ಅಮೃತಸಂಜೀವನೀ ಟೋನಿಕ್ — ಇದರ ಸೇವನೆಯಿಂದ ಕ್ಷಯ, ಕೆಮ್ಮು, ಅಶಕ್ತಿ, ನಿವಾರಣೆಯಾಗಿ ಧಾತುಪುಷ್ಟಿಯಾಗುತ್ತದೆ. 24 ಡೋಸಿನ ಬಾಟ್ಲಿ 1ಕ್ಕೆ ರೂ. 3.

2. ಮಧುಮೂರ್ಛನಿ ಪಿಲ್ — ಬಾಣಂತಿಯರು ಇದನ್ನು 12 ದಿವಸ ಸೇವಿಸಿದನಂತರ 2 ತಿಂಗಳು ವರೆಗೆ ಮಧುಮೂರ್ಛನಿ ಟೋನಿಕ್ ಸೇವಿಸಬೇಕು. ಇದರಿಂದ ಬಾಣಂತಿಯರ ನಂಜಿನ ಉಪದ್ರವಗಳು ಗುಣವಾಗಿ ದೇಹ ಪುಷ್ಟಿಯಾಗುತ್ತದೆ. ಟೋನಿಕ್ ಬಾಟ್ಲಿ 1ಕ್ಕೆ ರೂ. 1. 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 2—0—0.

3. ಸಿದ್ಧೇಶ್ವರ — ಇದರ ಸೇವನೆಯಿಂದ ಎಲ್ಲಾ ತರದ ಕೆಮ್ಮುಗಳೂ, ಉಬ್ಬಸಗಳೂ, ಆವಾಗ ಗುಣವಾಗುತ್ತದೆ. ತೊಲೆ 1ಕ್ಕೆ 1. 0.

4. ಅಶೋಕಾರಿಷ್ಟ (ಉತ್ತಮ ತರದ್ದು) — ಇದರ ಸೇವನೆಯಿಂದ ಸ್ತ್ರೀಯರ ಮುಟ್ಟಿನದೋಷ, ಗರ್ಭಶೂಲೆ, ಯೋನಿರೋಗಗಳು ಗುಣವಾಗಿ ರಕ್ತಶುದ್ಧಿಯಾಗುವುದು. ಬಾಟ್ಲಿ 1ಕ್ಕೆ 1-4-0.

5. ಸುದರ್ಶನ ಮಾಲಿನಿ — ಇದರಿಂದ ಗಂಡಮಾಲೆ, ಫಿರಂಗ ರೋಗ, ಮೇಹವ್ರಣ, ಮೇಹವಾತ, ಇತ್ಯಾದಿ ದೀರ್ಘಕಾಲದ ರೋಗಗಳು 4 ದಿವಸಗಳಲ್ಲಿ ಗುಣವಾಗುತ್ತದೆ. ಬಾಟ್ಲಿ 1ಕ್ಕೆ 4—0—0.

6. ವಸಂತಕುಸುಮಾಕರ ತೈಲ — ಇದನ್ನು ತಲೆಗೆ ಇಟ್ಟು ಕೊಂಡಲ್ಲಿ ಸರ್ವ ಶಿರೋರೋಗಗಳು ಗುಣವಾಗಿ ಜ್ಞಾನಶಕ್ತಿಯನ್ನು ಹೆಚ್ಚಿಸುತ್ತದೆ. ಬಾಟ್ಲಿ 1ಕ್ಕೆ ರೂ. 1—0—0.

ಇದಲ್ಲದೆ ನಮ್ಮ ಡಿಸ್ಪೆನ್ಸರಿಯಲ್ಲಿ ಎಲ್ಲಾ ರೋಗಗಳಿಗೆ ಬೇಕಾಗುವ ಮಾತ್ರೆಗಳೂ, ಭಸ್ಮಗಳೂ, ತೈಲ್ಯಗಳೂ, ಲೇಹಗಳೂ, ಚೂರ್ಣಗಳೂ ಬಹಳ ಕಡಿಮೆ ಕ್ರಯದಲ್ಲಿ ಸಿಕ್ಕುತ್ತವೆ. ನಮ್ಮ ಕೆಟಲಾಗನ್ನು ತರಿಸಿರಿ.

ಎಸ್. ವಿ. ಶಂಕರ, ಉಗ್ರಾಣಕಾರ,
ಮೇನೇಜರ್.
ಶ್ರೀ ಭವಾನಿಶಂಕರ ಆಯುರ್ವೇದೀಯ ಡಿಸ್ಪೆನ್ಸರಿ, ಬ್ರಹ್ಮಾವರ, ದ. ಕ.

ಅಪೂರ್ವವಾದ ಕನ್ನಡ ವೈದ್ಯಶಾಸ್ತ್ರವು.

ಧಾತುರಂಜಿತ – ವೈದ್ಯರತ್ನ.

ಅಕ್ರಮರತಿಯಿಂದ ಶರೀರಕ್ಕೆ ಬೇರಿನಂತಿರುವ ವೀರ್ಯ ಕೆಟ್ಟು ನೀರಾಗಿ ಪತನವಾಗಿ ವಿಧವಿಧ ಬಣ್ಣದಿಂದ ಧಾತುಸ್ರಾವ, ನಪುಂಸಕತ್ವ, ಟಾಕಿ, ಇವೇ ಮೊಂತಾದ ಬಹು ರೋಗಗಳುಂಟಾಗುವವು. ಇದರಲ್ಲಿ ಈ ಭಾಗಗಳಲ್ಲಿ ಈ ವಿಧದ ರೋಗಗಳ ಸ್ವರೂಪ, ಕಾರಣ, ಚಿಕಿತ್ಸೆಗಳು ವಿವರಿಸಲ್ಪಟ್ಟಿವೆ. ಮೂಲೇಂದ್ರಿಯ ರಚನೆ, ವೀರ್ಯ ನಷ್ಟಕ್ರಮ, ನಪುಂಸಕತ್ವ ಭೇದ, ವಂಧ್ಯಾರೋಗ ಭೇದ, ನಿವಾರಣೋಪಾಯ ಇವುಗಳಿಗೆ ಅನುಭವಸಿದ್ಧಗಳಾದ ನೂರಾರು ವಿಧ ಲೇಹ್ಯ, ರಸಾಯನಾದಿ ದಿವ್ಯೌಷಧಿಗಳನ್ನು ಕಲ್ಪಿಸುವ ವಿಧಾನ ಮತ್ತು ರೂಢಿಯಲ್ಲಿರುವ ಅನೇಕ ವನಸ್ಪತಿಗಳ ಗುಣ, ಉಪಯೋಗಿಸುವ ಕ್ರಮ, ರಜಿವೈದ್ಯದಲ್ಲಿ ರಾಜವಂಗೇಶ್ವರಾದಿ ಅನೇಕ ಮಹೌಷಧಿಗಳ ನಿರ್ಮಾಣಕ್ರಮ, ಕುಟುಂಬವೈದ್ಯದಲ್ಲಿ ಜ್ವರ, ಅತಿಸಾರಾದಿಗಳ ಚಿಕಿತ್ಸೆ ಎಂತವರಿಗೂ ತಿಳಿಯುವಂತೆ ಬರೆಯಲ್ಪಟ್ಟಿದೆ. ಇದು ಇದ್ದರೆ ಮನೇಲಿ ಒಬ್ಬ ವೈದ್ಯನೇ ಇದ್ದಂತಾಗುವದು. ಇದರಲ್ಲಿರುವ ಔಷಧಿಗಳನ್ನು ತಯಾರು ಮಾಡಿ ನೂರಾರು ರೂಪಾಯಿಗಳನ್ನು ಸಂಪಾದಿಸಬಹುದು. ಕ್ರಯ ಪುಸ್ತಕ 1ಕ್ಕೆ ರೂ. ೧—೮—೦.

ನಮ್ಮ ವಿಳಾಸ:— ಭಾರತಿ ಬುಕ್‌ಡಿಪೊ,
೪೯೧, ನಗರ್ತರಪೇಟೆ, ಬೆಂಗಳೂರು ಸಿಟಿ.

ಭೃಂಗರಾಜ ತೈಲ.

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ಶಿರೋರೋಗಗಳು ಗುಣವಾಗುತ್ತವೆ. ಮತ್ತು ತರಹ ಕೂದಲು ಕಪ್ಪಾಗುತ್ತವೆ. ಕೇಶಗಳು ಉದುರುವ ಸಂಗತಿಯಲ್ಲಿ ಬಹಳ ಒಳ್ಳೇದು. 4 ಔನ್ಸಿನ ಶೀಸೆ 1ಕ್ಕೆ ಕ್ರಯ ರೂ. 0 – 12 – 0.

ತ್ರಿಫಲಾದಿ ತೈಲ—ವಾತ, ಪಿತ್ಥ, ಶ್ಲೇಷ್ಮ ಈ ಮೂರು ತರದ ವ್ಯಾಧಿಗಳಿಂದ ಉಂಟಾದ ಶಿರೋರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಸ್ನಾನ ಮಾಡುವ ಮೊದಲು ಇದನ್ನು ತಲೆಗಿಟ್ಟರೆ ಬಹಳ ಉತ್ತಮ. 4 ಔನ್ಸಿನ ಶೀಸೆ 1ಕ್ಕೆ ಕ್ರಯ ರೂ. 1 – 0 – 0.

ಪಂಚಸಾರ ಲೇಹ—ಅಜೀರ್ಣ, ಪಿತ್ಥ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಮತ್ತು ಇಂದ್ರಿಯ ವೃದ್ಧಿ ಬಲಪಡಿಸಿ, ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಶೀಸೆಗೆ ರೂ. 1 – 4 – 0.

ಈ ಮೇಲೆ ಬರೆದ ಔಷಧಗಳು ಪಾರಂಪರ್ಯ ಗುರುಗಳಿಂದ ಸಿದ್ಧಪಡಿಸಿದ ಗ್ರಂಥದ ಆಧಾರದಿಂದ ತಯಾರು ಮಾಡಲ್ಪಟ್ಟಿರುತ್ತವೆ. ಇವುಗಳಲ್ಲದೆ ಇತರ ಎಲ್ಲಾ ಬಗೆಯ ಔಷಧಿಗಳು ದೊರೆಯುತ್ತವೆ. ಪರಿಷ್ಕರಿಸುವ ತಮ್ಮ ಕಾಯಿಲೆ ಸಂಗತಿಯನ್ನು ವಿವರವಾಗಿ ಬರೆದು ಕಳುಹಿಸಿದರೆ ತಕ್ಕ ಔಷಧಗಳನ್ನು ಕಳುಹಿಸಬಹುದು.

ವಿಳಾಸ:—ಆಯುರ್ವೇದಿಕ್ ಮತ್ತು ಹೋಮಿಯೊಪೆತಿಕ್
ಧರ್ಮವೈದ್ಯಶಾಲಾ, ಧರ್ಮಸ್ಥಳ, ದ. ಕನ್ನಡ.

ಕ್ರಯ ರೂ. 1—8—0. # ಪ್ರಶ್ನೋತ್ತರ ಅಂಚೆ ವೆಚ್ಚ ಬೇರೆ.

ಲೇಖ್ಯಬೋಧಿನಿ.

7ನೇ ಮುದ್ರಣ; ಅನೇಕ ಉಪಯೋಗ ಸಂಗತಿಗಳಿವೆ.

ಕ್ಷೇಮ ಸಮಾಚಾರದ ಕಾಗದಗಳು:—ಬಗೆಬಗೆಯಾದ ಒಕ್ಕಲಗೇಣಿ, ಲೌಕಿಕ ವೈದಿಕ ಮುಯ್ಯಾದಿಗಳು, ಪತ್ರಗಳು ಬರೆಯುವ ವಿಧಾನ, ಕ್ರಯ, ದಾನ, ವಿಲ್ಲು, ಮರಣಶಾಸನ, ಪಾಲುಪಟ್ಟಿ, ಗುತ್ತಿಗೆ, ಪಾಲುಗಾರಿಕೆ, ಹುಂಡಿ, ಚೆಕ್ಕು ಇವುಗಳ ನಮೂನೆಗಳು, ಐಡಿಗಳು, ಸ್ಟಾಂಪು, ರಿಜಿಸ್ಟ್ರೇಷನ್, ಸಿವಿಲ್ ಕೋರ್ಟಿನ ವಿಧಾನ—ಲಾಯರ್ ನೋಟೀಸು, ದಾವೆ ಬರೆಯುವ ರೀತಿ, ಸ್ಮಾಲ್ ಕಾಸ್, ಜಡ್ಜ್‌ಮೆಂಟ್, ರಿವ್ಯೂ, ಅಪೀಲು, ಸ್ಪೆಷಲ್ ಅಪೀಲ್, ಅನಧಿಕಾರಿಗೆ ಮಾಡುವ ವಿಧಾನ, ಶೀ ಸ್ಟಾಂಪು, ರೆವಿನ್ಯೂ ಮುಂತಾದ ಪ್ರಾಮುಖ್ಯವಾದ ರಾಜ್ಯಭಾರಕ್ಕೆ ಸಂಬಂಧಿಸಿದ ಎಲ್ಲಾ ಅರ್ಜಿಗಳು ಬರೆಯುವ ಆರ್ಡರುಗಳು, ಕ್ರಿಮಿನಲ್ ಕೋರ್ಟಿನ ವಿಧಾನ—ಅನೇಕ ಅರ್ಜಿಗಳ ಮಾದರಿಗಳು, ಸರಕಾರದ ಕಾನೂನು [illegible] ಇವರಲ್ಲಿ ಅಡಗಿವೆ. ಕಾಗದದ ಬರಹದಿಂದ ಬಹು ಶ್ರೇಷ್ಠ ಪ್ರತಿಗಳು ಸಿದ್ಧವಾಗಿವೆ. [illegible] ಕ್ರಯ ರೂಪಾಯಿ 1—8—0; ಅಂಚೆಯ ವೆಚ್ಚ ಬೇರೆ.

[80-19] ವಿಳಾಸ:— "ನವಿನುಡಿ" ಆಫೀಸು,
123, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

"ಟಿಶ್ಯುರೆಮಿಡಿಸ್"

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು.

1 ಕಲ್ಕೇರಿಯ ಪ್ಲೋರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮಗ್ನೇಸಿಯ ಫೋಸ್	12 ಸಿಲಿಸಿಯಾ

ಕ್ರಯ	ರೂ. ಆ. ಪೈ.
ಎರಡು ಡ್ರಾಮಿನ D ಸೈಜ್ ಶೀಸೆ ಒಂದರ	0—3—6
ನಾಲ್ಕು ,, C ,, ,, ,,	0—6—0
ಒಂದು ಔನ್ಸಿನ A ,, ,, ,,	0—12—0
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ	3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯಶಾಸ್ತ್ರ ಪುಸ್ತಕ ಸಮೇತ.	10—0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು. ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಯಿಲೆ ಕಸಾರಿಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ. ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ. ಫೆರ್ನಾಂಡಿಸ್,
ಎಲ್ಲಿಕ್ಕಾ ಹೋಮಿಯೊಪೆತಿ ಡಿಸ್ಪೆನ್ಸರಿ, ಮಂಗಳೂರು.

The Indian Tooth-ache Specific.

ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ಬಾರಿ ಉಪಯೋಗಿಸುವುದರಿಂದ ಎಲ್ಲಾ ವಿಧದ ಹಲ್ಲುನೋವುಗಳು, ವಸಡಿನ ರೋಗಗಳು ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, ಕೀವು ಇತ್ಯಾದಿ ತಂಡಿಕವಾಗಿ ಗುಣವಾಗುತ್ತದೆ. ಕೊರೆದುಹೋದ ಮತ್ತು ಹುಳುತಿನ್ನ ಹಲ್ಲುಗಳಿಂದ ಕಠಿಣ ನೋವು ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ. ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವುದರಿಂದ ಹಲ್ಲುಗಳನ್ನು ಕಿತ್ತು ತೆಗೆಸುವ ಅವಶ್ಯವೇ ಇಲ್ಲ. ಈ ಔಷಧದ ಗುಣವು ಪರೀಕ್ಷಿಸಿ ಎಲ್ಲರಿಗೂ ತಿಳಿದಿದೆ.

ಶೀಸೆ 1ಕ್ಕೆ ಕ್ರಯ ರೂ. 1 – 4 – 0; ಟಪಾಲು ಖರ್ಚು 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ ೧೨ ಶೀಸೆ ತೆಗೆದುಕೊಂಡರೆ ರೂ. 12 ಮಾತ್ರ. ಕೆಳಗಿನ ವಿಳಾಸಕ್ಕೆ ಬರೆಯಲ್ಪಡಬೇಕು.

STANY BROTHERS, MANGALORE.

ಸೊಗಸಾದ ಕಾಪಿ ಹುಡಿ.

I.	ಕ್ಲಾಸ್	0—10—0
II.	ಕ್ಲಾಸ್	0—8—0
III.	ಕ್ಲಾಸ್	0—6—0

ಹೋಟೆಲುಗಳಿಗೂ ವರ್ತಕರಿಗೂ ಕಡಿಮೆ ದರದಲ್ಲಿ ಕೊಡುತ್ತೇವೆ. [illegible] ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

STANY BROTHERS, MANGALORE.

ವಿದೇಶ ವರ್ತಮಾನ

[illegible]

[illegible] ಗಡೆ ವಹಿಸಿದರು. ಅವರ ಕೋರಿಗಳು ಫಾಂಡಲೆಯೂ ಕಡಿಮೆಯಾದಂತೆ ತೋರು ವುದಿಲ್ಲ. [illegible] ಎರಡು ರೆಜಿಮೆಂಟುಗಳನ್ನು ಕಳುಹಿಸಲು ಸಿದ್ಧಮಾಡಿದ್ದಾರೆ. [illegible] ಹಲವು ಕಡೆಗಳಲ್ಲಿ ಕೋಟೆ ಮತ್ತು ದಾಳಿಯಾಗುತ್ತದೆ. [illegible] ಸಾಗಿಸಲ್ಪಡುತ್ತದೆ ಎಂದು ಊಹಿಸಲ್ಪಟ್ಟಿದ್ದಾರೆ.

ರುಶ್ಯದ ಬೋಲಶೆವಿಕರು—ಇವರು ರುಶ್ಯದಲ್ಲಿ ತಮಗೆ ಎದುರಾಳಿಗಳಾದವರನ್ನು ಅಡಗಿಸಿ, ಅವರಿಗೆ ಸ್ವಾತಂತ್ರ್ಯವನ್ನು ಸ್ಥಾಪಿಸಿದ್ದ [illegible] ಪ್ರದೇಶವನ್ನು ತಮ್ಮಗೆ ಒಳನುಗ್ಗಿ ದಾಳಿ ಪಟ್ಟಣವನ್ನು ಹಿಡಿದಿದ್ದಾರೆ. ಆದರೆ [illegible] ಸಮುದ್ರದ ಬಳಿಯ ಪ್ರದೇಶದಲ್ಲಿ ಈ ಬೋಲಶೆವಿಕರು [illegible] ಒಂದು ಪ್ರಮುಖ ಪಟ್ಟಣವನ್ನು ಹಿಡಿದಿದ್ದರು. ಇದರಿಂದ ಬೋಲಶೆವಿಕರು ಇನ್ನು ರುಶ್ಯದಲ್ಲಿ ಜನರನ್ನು ದಾಖಲು ಮಾಡಿ [illegible] ದಳದವರನ್ನು ಅಡಗಿಸಬೇಕೆಂದು ಯತ್ನಿಸುತ್ತಿದ್ದಾರೆ.

ತುರ್ಕಿ—[illegible] ಸರಕಾರದ ರಾಯಭಾರಿಗಳು ಸಂಧಿ ಶರ್ತಗಳನ್ನು ಚರ್ಚಿಸಲಿಕ್ಕೆ ಇದೇ ತಿಂಗಳ ೧೯ನೆ ತಾರೀಕಿಗೆ [illegible] ಹೊರಟಿದ್ದಾರೆ. ತುರ್ಕಿಯ ಒಂದು ಕಂದರ ಮುಖ್ಯಂದರ್ಶಾದ [illegible] ಪಾಶಾ ಇವರು ತುರ್ಕಿಯ ಸರಕಾರಕ್ಕೆ ವಿರೋಧವಾಗಿ ಒಳಸಂಚು ನಡಿಸುತ್ತಿದ್ದು, [illegible] ತುರ್ಕಿಯಲ್ಲಿ ಗಲಭೆ ಎಬ್ಬಿಸುತ್ತಿರುವುದರಿಂದ ಅವರನ್ನು ಮುರಿಯಲಿಕ್ಕೆ ತುರ್ಕಿಯಲ್ಲಿ ಸೈನ್ಯ ಕಳುಹಿಸಲಾಗುತ್ತಲಿದೆ.

ಜನರಲ್ ಡಾಯರ—ಇವನು ವಿಲಾಯತಿಗೆ ಹೋಗಿದ್ದಾಗ ಅಲ್ಲಿ [illegible] ಪತ್ರಿಕೆಯ ಪ್ರತಿನಿಧಿಯು ಇವನನ್ನು ಕಂಡಾಗ ಅಮೃತಸಾರದಲ್ಲಿ ನಡೆದ [illegible] ಗುಂಡು ಹಾರಿಸಲಿಕ್ಕೆ ಹುಕುಂ ಕೊಡಬೇಕಾಯಿತು, ತನ್ನ ತಪ್ಪಾಗಿದ್ದರೆ ಆ ಬಗ್ಗೆ ತನಗೆ [illegible] ವಿಚಾರ ಮಾಡಬೇಕಿತ್ತು, ಅದಕ್ಕೆ ಬದಲಾಗಿ ತಾನು ಕೆಲಸಕ್ಕೆ ರಾಜಿನಾಮೆ ಕೊಡಬೇಕೆಂದ ಕೂಡಾ ಹೇಳಿತು, ತನಗೆ ವಿಲಾಯತಿಗೆ ಹೋಗೆಂದು ಅಟ್ಟಿದ್ದಾರೆ, ನಾನು ನಡೆಸಿದ ಕೃತ್ಯವು ಆ ೧೩ ತಿಂಗಳವರೆಗೂ ತನ್ನನ್ನು [illegible] ಇನ್ನೂ ತಿಳಿದಿಲ್ಲ, [illegible] ಅಮೃತಸರದಲ್ಲಿ ೩೦ ಸೆಕುಂಡುಗಳೊಳಗೆ [illegible] ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಇಂಗ್ಲೀಷರವನು [illegible] ಗುಂಡಿನಮಳೆ ಸುರಿಸದ್ದರೆ ತನ್ನ ಸಣ್ಣ ಸೈನ್ಯವು ಇದಲ್ಲಿಯೇ ನಾಶವಾಗುತ್ತಿತ್ತು, [illegible] ಬಿಳಿ ಜನರು, ಈ ವ್ಯಕ್ತಿ ಒಬ್ಬರಿಗೆ ಹಿಂದೂಸ್ಥಾನದ ಅನುಭವವು ಏನೇನೂ ಇಲ್ಲ, ಇನ್ನು ಮೂವರು ಹಿಂದಿಗಳು, ಇವರು ಬಹುಶಃ ತನ್ನ ವಿಷಯದಲ್ಲಿ ವಿರೋಧವಾದ ತೀರ್ಮಾನ ಕೊಟ್ಟಿರಬಹುದು, ಆದರೂ ತನ್ನ ಮೇಲಿನ ಆರೋಪಗಳಿಗೆ ತನ್ನ ಪ್ರತಿವಾದವೇನೆಂದು ತನಗೆ ವಿಚಾರವಾಗಬೇಕಾದ್ದು ಅಗತ್ಯವೆಂದು ಹೇಳಿದನಂತೆ.

ಒಳದೇಶ ವರ್ತಮಾನ

ಸರಕಾರಿ ಆಫಿಸುಗಳಿಗೆ ರಜಾದಿನಗಳು—೧೯೨೦ನೆ ಇಸವಿಗೆ ಮದ್ರಾಸು ಪ್ರಾಂತಿಕ ಸರಕಾರದವರು ಈ ಕೆಳಗಿನ ಹಬ್ಬಗಳಿಗೋಸ್ಕರ ಸರಕಾರಿ ಆಫೀಸುಗಳಿಗೆ ರಜೆ ಸೆಂಕ್ಶನ್ ಮಾಡಿರುವರು:—

ಜೂನು	೧೮ ಶುಕ್ರವಾರ	— ರಮಜಾನ್
ಆಗಸ್ಟ	೨೫ ಬುಧವಾರ	— ಬಕ್ರೀದ್
ಸಪ್ಟಂಬರ್	೬ ಸೋಮವಾರ	— ಶ್ರೀ ಕೃಷ್ಣಜಯಂತಿ
,,	೧೬ ಗುರುವಾರ	— ವಿನಾಯಕ ಚತುರ್ಥಿ
,,	೨೩ ಗುರುವಾರ	— ಮೊಹರ್ರಮಿನ ಕಡೆದಿನ
ಒಕ್ಟೋಬರ ೧೧	ಸೋಮವಾರ	— ಮಹಾಲಯ ಅಮಾವಾಸ್ಯೆ
,,	೨೧ ಗುರುವಾರ	— ಆಯುಧ ಪೂಜೆ
ನವಂಬರ್	೯ ಮಂಗಳವಾರ	— ದೀಪಾವಳಿ
,,	೨೪ ಬುಧವಾರ	— ಬಾರಾವಫಾತ್
ದಿಸೆಂಬರ್	೨೧ ಮಂಗಳವಾರ	— ವೈಕುಂಠ ಏಕಾದಶಿ
,,	೨೭ ಸೋಮವಾರ	ಕ್ರಿಸ್ತಮಸ್ ರಜೆ
,,	೨೮ ಮಂಗಳವಾರ	ಕ್ರಿಸ್ತಮಸ್ ರಜೆ
,,	೩೦ ಗುರುವಾರ	ಕ್ರಿಸ್ತಮಸ್ ರಜೆ
,,	೩೧ ಶುಕ್ರವಾರ	ಕ್ರಿಸ್ತಮಸ್ ರಜೆ

ದಿಸೆಂಬರ್ ೨೪ (ಶುಕ್ರವಾರ) ಮತ್ತು ದಿಸೆಂಬರ್ ೨೯ (ಬುಧವಾರ) ಈ ದಿನಗಳಲ್ಲಿ ಸ್ಮಾಲ್‌ಕಾಸ್ಟ್, ರಜಿಸ್ಟ್ರಾರ್ ಟ್ರೆಜರಿ ಮತ್ತು ಪೇಪರ್ ಕರೆನ್ಸಿ ಆಫೀಸು, ಜನರಲ್ ಸ್ಟಾಂಪು ಆಫೀಸು ಇವ ಮಾತ್ರ ೧೧ರಿಂದ ಮಧ್ಯಾಹ್ನ ೧ ಗಂಟೆ ವರೆಗೆ ತೆರೆದಿರುವವು. ಉಳಿದ ಆಫೀಸುಗಳಿಗೆಲ್ಲ ರಜೆ ಇದೆ ಎಂದು ಸಭೆಯುಕ್ತ ಗವರ್ನರ್ ಸಾಹೇಬರ ಪ್ರಕಟನೆ ಇದೆ.

ರುಮೇನಿಯದ ಯುವರಾಜರು—ಇವರು ಸಿಮ್ಲಾದಲ್ಲಿ ವೈಸರಾಯಿಗಳವರ ಅತಿಥಿಗಳಾಗಿರುವರು.

ಮಲಬಾರ ಜಿಲ್ಲಾ ಪರಿಷತ್ತು—ಶ್ರೀಯುತ ಕಸ್ತೂರಿ ರಂಗ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಕಳೆದ ತಿಂಗಳ ಅಂತ್ಯದಲ್ಲಿ ಜರಗಿದ ರಾಜಕೀಯ ಪರಿಷತ್ತು ಮದ್ರಾಸಿನ ಬೇರೆಬೇರೆ ತಂಡಗಳ ಚಟುವಟಿಕೆಯನ್ನು ಪ್ರತಿಫಲಿಸುವ ಕನ್ನಡಿಯಾಗಿತ್ತು. ಮಿ। ಬಿಸೆಂಟರ ಪಕ್ಷದವರು ಅಲ್ಲಿ ಬಂದು ಸೇರಿದ್ದರು. ಆದರೆ ಠರಾವುಗಳನ್ನು ಅವರ ಇಷ್ಟದಂತೆ ಬದಲಾಯಿಸಲು ಸಾಧ್ಯವಾಗದೆ ಹಿಂತೆಗೆಯಬೇಕಾಯಿತು.

ಮದ್ರಾಸಿನ ಖಿಲಾಫತ ಕಮಿಟಿ—[illegible] ಸಾಹೇಬರ ಅಧ್ಯಕ್ಷತೆಯಲ್ಲಿ ಈ ಕಮಿಟಿಯ ಮಹಾಸಭೆಯು ಕಳೆದ [illegible] ಮದ್ರಾಸಿನಲ್ಲಿ ಜರಗಿತು. [illegible]

[illegible] ಮುಸಲ್ಮಾನರು ತುಂಬಾ ಕೃತಜ್ಞರಾಗಿದ್ದಾರೆ, ಡಿಲ್ಲಿ ಪ್ರಾಂತದಲ್ಲಿ ರಾಜದ್ರೋಹದ ಚಳವಳಿ ಸಡಿಸಲು ಸರಕಾರದವರು ಉಜ್ಜುಗಿಸಿದ್ದು ನ್ಯಾಯವಲ್ಲ ಎಂದು ಮುಂತಾಗಿ ಕೆಲವು ಠರಾವುಗಳನ್ನು ಮಾಡಿರುವರು.

ದಕ್ಷಿಣ ಕನ್ನಡ

ಪುತ್ತೂರು:—ರೆವೆನ್ಯು ಡಿವಿಜನಲ್ ಆಫೀಸರರ ಸರ್ಕೀಟು—ತಾ. ೧೧—೧೩ ಕಾಸರಗೋಡು, ತಾ. ೧೪ರಿಂದ ೧೮ರ ವರೆಗೆ ಬೇಕಲ, ತಾ. ೧೯ರಿಂದ ೨೩ರ ವರೆಗೆ ಕಾಸರಗೋಡು, ತಾ. ೨೪ ಮಂಗಳೂರು, ತಾ. ೨೫ರಿಂದ ೩೧ರ ವರೆಗೆ ಪುತ್ತೂರು.

ನಿಡ್ಡೋಡಿ:—ನಮ್ಮ ನಿಡ್ಡೋಡಿ ಮತ್ತು ಕಲ್ಲಮುಂಡ್ಕೂರು ಗ್ರಾಮಗಳ ಬಾಲಕರ ಉದ್ದೇಶ ಕುಂದಾಪುರ ತಾಲೂಕು ಬೋರ್ಡಿನವರಿಂದ ಒಂದು ಪ್ರಾಥಮಿಕ ವಿದ್ಯಾ ಶಾಲೆಯು ತೆರೆಯಲ್ಪಟ್ಟು ಇಂದಿಗೆ ಸುಮಾರು ೭ ವರ್ಷಗಳಾದುವು. ಈತನಕ ಶಾಲೆಯು ಅಭಿವೃದ್ಧಿಯು ಸರಿಯಾಗಿಯೇ ನಡಿಯುತ್ತಿದ್ದರೂ ಕಳೆದ ೧೯೧೯ನೇ ಇಸವಿ ಅಕ್ಟೋಬರ್ ತಿಂಗಳ ಉಂದರೆ ಒಕ್ಟೋಬರ್ ತಿಂಗಳ ಅಗ್ರ್ಯಾತು ಮುಖ್ಯೋಪಾಧ್ಯಾಯರಿಗೂ ಸಹಾಯಕ ಉಪಾಧ್ಯಾಯರುಗಳಿಗೂ ಮನಸ್ಕ್ಲೇಶಗಳು ಹುಟ್ಟಿ ಆ ನಂತರ ಸದರೀ ಮುಖ್ಯೋಪಾಧ್ಯಾಯರು ಸಕಾಲಕ್ಕೆ ಶಾಲೆಗೆ ಬಾರದೆಯೂ ಕ್ರಮವಾದ ಸಮಯದ ಮುಂಚೆ ಶಾಲೆಯಿಂದ ಹೊರಟು ಹೋಗುತ್ತಲೂ ವಿದ್ಯಾರ್ಥಿಗಳಿಗೆ ಕಂಡಂತೆ ಬಯ್ಯುತ್ತಲೂ, ಹೊಡೆಯುತ್ತಲೂ ಇರುವರು. ಈ ಎಲ್ಲಾ ಸಂಗತಿಗಳನ್ನು ಮಕ್ಕಳಿಂದ ಗ್ರಾಮಸ್ಥರು ತಿಳಿದು, ಆ ವಿಷಯಗಳನ್ನು ವಿಶದವಾಗಿ ಬರೆದು ತಾಲೂಕು ಬೋರ್ಡು ಪ್ರೆಸಿಡೆಂಟರಿಗೆ ಅರ್ಜಿ ಮಾಡಿಕೊಂಡರು. ಆ ವಿಷಯದ ತನಿಖೆ ಬಗ್ಗೆ ಕುಂದಾಪುರ ತಾಲೂಕು ಬೋರ್ಡು ಮೆಂಬರ್ ಮ॥ ರಾ॥ ಮ. ರಕತಿ ಕುಬ್ಬಯ್ಯ ಸೆಟ್ಟರವರಿಗೆ ಬಂತು. ಅವರು ಸ್ವತಃ ಶಾಲೆಗೆ ಬರುವಾಗ ಪೂರ್ವಾಹ್ನ ೧೦॥ ಘಂಟೆಯಾಗಿದ್ದರೂ ಸದರಿ ಮುಖ್ಯೋಪಾಧ್ಯಾಯರು ಹಾಜರಿ ಇಲ್ಲದೆ ಸುಮಾರು ೧೧॥ ವರೆಗೆ ಕೂಡಾ ಸಂದರ್ಶನ ರಿಜಿಸ್ಟ್ರಿಯಲ್ಲಿ ಹಾಗೆಯೆ ಬರೆದು ಹಾಕಿ ಹೋದರು. ಅಲ್ಲದೆ ಗ್ರಾಮಸ್ಥರ ಅರ್ಜಿಯಲ್ಲಿ ಕಾಣಿಸಿದ ವಿಷಯಗಳೆಲ್ಲ ನಿಜವೆಂದೂ ಬರೆದಿದ್ದರು. ಆ ನಂತರ ಈ ತನಕವೂ ಅದೇ ಪ್ರಕಾರ ನಡಿಯುತ್ತಿರುವುದಲ್ಲದೆ, ಮೊದಲು ಮಕ್ಕಳನ್ನೂ ಸಹಾಯಕ ಉಪಾಧ್ಯಾಯರನ್ನು ಮಾತ್ರ ಬಯ್ಯುವ ಸಮಯವು ಕಾಲನಿಯಮಕ ಪಟ್ಟಿಯಲ್ಲಿ ಇತ್ತು. ಈಗ ಮೇಲಾಧಿಕಾರಿಗಳಿಗೆ ಅರ್ಜಿ ಬರೆಕೊಂಡ ವರ್ತಮಾನವನ್ನು ತಿಳಿದು ಗ್ರಾಮಸ್ಥರಿಗೂ, ಸಮಯ ಬಂದಾಗ್ಯೆ ಬೈಯುವುದು ಪ್ರಾರಂಭ, ಹೀಗೆ ಗ್ರಾಮಸ್ಥರಿಗೂ, ಶಿಕ್ಷಾಧ್ಯಾಪಕರಿಗೂ, ಸಹಾಯಕ ಉಪಾಧ್ಯಾಯರಿಗೂ ದ್ವೇಷಗಳು ಬೆಳೆಯುತ್ತಿ ಬಂದರೆ ಶಾಲೆಯು ಪಂಚಾಮವೇನಾಗಬಹುದು? ಈ ವಿಚಾರಗಳನ್ನೇ ವಿದ್ಯಾರ್ಥಿಗಳು ಕೂಡಾ ಕಲಿಯುವುದು. ಆದುದರಿಂದ ದಯಾಳುಗಳಾದ ಮೇಲಾಧಿಕಾರಿಗಳು ಸದರಿ ಮುಖ್ಯೋಪಾಧ್ಯಾಯರನ್ನು ಬೇರೆ ಕಡೆಗೆ ವರ್ಗಾಯಿಸಿ ಇಲ್ಲಿಗೆ ಒಬ್ಬ ಹಿಂದೂ ಮುಖ್ಯೋಪಾಧ್ಯಾಯರನ್ನು ಕೊಡಿಸಬೇಕಾಗಿ ಗ್ರಾಮಸ್ಥರ ಅಪೇಕ್ಷೆ.

ಗ್ರಾಮಸ್ಥರಲ್ಲೊಬ್ಬ ವಿದ್ಯಾ ಹಿತೈಷಿ.

ಹೊಸಂಗಡಿ—ಇಲ್ಲಿಯ ಬೋರ್ಡ ಎಲಿಮೆಂಟರಿ ಶಾಲೆಯ ಮತ್ತು ಲೋಕಲ್‌ಫಂಡು ಬಂಗಲೆಯ ಉಪಯೋಗದ ಬಗ್ಗೆ ಸಹಾ ಒಂದು ಬಾವಿಯನ್ನು ತೋಡಿಸುವ ಬಗ್ಗೆ ಬೋರ್ಡಿನವರು ಸೆಂಕ್ಶನ್ ಮಾಡಿ ಕಂಟ್ರಾಕ್ಟಿಗೆ ಕೊಟ್ಟಿರುತ್ತಾರೆ. ಆ ಬಗ್ಗೆ ಕಲ್ಲು ಸಹಾ ಬಂದು ಜಮೆಯಾಗಿರುತ್ತದೆ. ಆದರೆ ಸದರಿ ಬಾವಿಯನ್ನು ತೋಡುವರೆ ನೋಡಿದ ಸ್ಥಳವು ವರ್ಗಸ್ಥಳವಾಗಿದ್ದರೂ ಸದರಿ ವರ್ಗದಾರರು ಆ ಸ್ಥಳವನ್ನು ಬಾವಿ ತೋಡಿಸುವುದಾದರ ಬಿಟ್ಟುಕೊಡುತ್ತೇನೆಂತ ಹೇಳಿದರೂ, ಕಂಟ್ರಾಕ್ಟದಾರರು ಸ್ವತಃ ಬಂದು ಆ ಸ್ಥಳವನ್ನು ಈ ವರೆಗೆ ಬಿಡಿಸಿಕೊಂಡಂತೆಯೂ ಬಾವಿ ತೋಡಿಸುವರೇ ಆರಂಭವನ್ನು ಇಟ್ಟಿದಂತೆಯೂ ಕಂಡುಬರುವದಿಲ್ಲ. ಈ ವರ್ಗದಾರರೂ ಬಾವಿಯು ತಯಾರಾದಲ್ಲಿ ಮಳೆಗಾಲದಲ್ಲಿ ತೋಟವನ್ನು ಇಟ್ಟು ಬರುವ ವೈಶಾಖದಲ್ಲಿ ರೂಪಿಗೆ ತಂದಾರೆಂತ ನಂಬಿಕೆ ಇತ್ತು. ನೀರಾಶ್ರಯವೇ ಇಲ್ಲದಿದ್ದರೆ, ಬೆಳೆಯಾಗುವದೆಂತು? ಆದ್ದರಿಂದ ಸದರಿ ಸ್ಥಳದ ವರ್ಗದಾರರೂ ಬಾವಿಯ ಕಂಟ್ರಾಕ್ಟದಾರರೂ ಸಹಾ ಬದ ಗ್ರಾಮದ ಶಾಲೆಯ ಮೇಲೆಯೂ, ಚಿಕ್ಕ ವಿದ್ಯಾರ್ಥಿಗಳ ಮೇಲಿಯೂ ದಯವಿಟ್ಟು ಬಾವಿಯನ್ನು ಇದೇ ಜೂನು ತಿಂಗಳ ಒಳಗೆ ತಯಾರಿಸಿದರೆ ಇದೇ ಮಳೆಗಾಲದಲ್ಲಿ ಶಾಲೆಯು ಉಪಾಧ್ಯಾಯರು ತಯಾರಿಸಲಿಕ್ಕಿರುವ ತೋಟಕ್ಕೆ ಬರುವ ವೈಶಾಖದಲ್ಲಿ ನೀರಾಶ್ರಯ ಸಿಕ್ಕೀತೆಂತ ನಂಬಿರುತ್ತೇನೆ

ಮುಲ್ಕಿ:—ಈ ಊರಲ್ಲಿ ಜೈನರ ಅರಸುಗಳ ಕಾಲದ ಹಳೇ ಕೋಟೆಯಲ್ಲಿ ಇದ್ದ ಹಳೇ ಬಸ್ತಿ ಯಾನೆ ಜೈನರ ದೇವಾಲಯವನ್ನು ತೆಗೆದು ನೂತನವಾಗಿಯೂ ದೊಡ್ಡದಾಗಿಯೂ ಕಟ್ಟಿಸಿ ಬಸ್ತಿಯಲ್ಲಿ ೧೩ ದಿವಸಗಳಲ್ಲಿ ಪಂಚಕಲ್ಯಾಣ ಮಹೋತ್ಸವ ಜರಗಿ, ಮೊನ್ನೆ ಆದಿತ್ಯವಾರ ಓಕುಳಿಯಾಗಿ ಸಂಪೂರ್ಣವಾಯಿತು. ಮೂಡಬಿದ್ರೆ ಚಾರುಕೀರ್ತಿ ಸ್ವಾಮಿಯವರೂ, ಜೈನರ ಸ್ಥಿತಿಗತಿಯನ್ನು ಉದ್ಧರಿಸಲಿಕ್ಕೆ ಸಾಹಸಪಡುವ ನೇಮಿಸಾಗರ ಸನ್ಯಾಸಿಗಳು ಸಹ ೧೩ ದಿವಸಗಳ ವರೆಗೆ ಹಾಜರಿದ್ದು ಮತಸಂಬಂಧವಾದ ಎಲ್ಲಾ ಕೆಲಸಗಳನ್ನು ಸಾಂಗವಾಗಿ ನಡಿಸಿದರು. ಉತ್ಸವಕ್ಕೆ ಎಲ್ಲಾ ಜಾತಿಯವರೂ ಮಾತಸ್ಥರೂ ಹಾಜರಿದ್ದು, ಈ ಕಾರ್ಯದಲ್ಲಿ ಸಹ ಭಾಗಿಗಳಾದರು. ಬಸ್ತಿಯನ್ನು ಕಟ್ಟಿಸಿ ಕಲ್ಯಾಣೋತ್ಸವವನ್ನು ನಡಿಸಿದ ರಾ। ಪುತ್ತಿಗೆ ಶೀನಪ್ಪ ಹೆಗಡೆಯಿಗೂ ಅವರ ಹೆಂಡತಿ ಶ್ರೀಮತಿ ಪದ್ಮಾವತಿ ಅಮ್ಮನಿಗೂ ಶ್ರೇಯಸ್ಸು ಉಂಟಾಗಲೆಂದು ಬಡಬಗ್ಗರು ಸಹ ಪ್ರಾರ್ಥಿಸುತ್ತಾರೆ.

ಕಾಪು:—ಹೊಸ ಮಾರಿಗುಡಿಯಲ್ಲಿ ಆಡಳ್ತೆಯು ಸರಿಯಾಗಿ ನಡಿಯದೆ ಮಾರಿ ಬಂದಾಗಲೆಲ್ಲ ಹೆಚ್ಚಿನ ನಷ್ಟವಾಗುತ್ತಿದ್ದ ಪ್ರಯುಕ್ತ, ಸರಿಯಾದ ಆಡಳ್ತೆ ಏರ್ಪಡಿಸಿ, ಮಾರಿಗುಡಿ ಸಂಸ್ಥೆಯು ಯೋಗ್ಯ ರೀತಿಯಲ್ಲಿ ನಡಿಸುವರೆ, ಸ್ಕೀಮು ವಗೈರೆ ಅಪೇಕ್ಷಿಸಿ ಸೀಮೆಯವರ ಕಡೆಯಿಂದ ನಾನು ಕೂಡಾ ವಾದಿಯಾಗಿ ಮುಲ್ಕಿ ಪತೇಲ [illegible] ವಗೈರೆ ಮೇಲೆ ದಕ್ಷಿಣ ಕನ್ನಡಾ ಸಬೋರ್ಡಿನೇಟ್ ಕೋರ್ಟಿನಲ್ಲಿ ದಾಖಲು ಮಾಡಿದ ಕ್ರಮ ನಂಬ್ರ $\frac{22}{1916}$ನೆ ದಾವೆಯಲ್ಲಿ ಹೊಸ ಆಡಳ್ತೆ [illegible] ವಗೈರೆ ಡಿಕ್ರಿಯಾಗಿ ಸದರಿ ಹೊಸ ಆಡಳ್ತೆ [illegible]

[illegible] ಭಕ್ತರು ಕಾಣಿಕೆಯನ್ನು ಅಟ್ಟುರ ಕೈಯಲ್ಲಿ ಕೊಟ್ಟರೂ ಅದು ಭಂಡಾರಕ್ಕೆ ಸಿಕ್ಕದೆ ನಡುವಿನಲ್ಲಿಯೇ ವಂಚನೆಯಾಗುತ್ತದೆಂತ ಊಹಿಸಲಿಕ್ಕೆ ಹೆಚ್ಚಿನ ಕಾರಣಗಳು ಇರುವದರಿಂದ ತಮ್ಮ ತಮ್ಮ ಹರಿಕೆಯನ್ನು ಭಕ್ತರು ಸ್ವತಹಾ ಒಪ್ಪಿಸಬೇಕಾಗಿ ಕೂಡಾ ನನ್ನ ಕೋರಿಕೆಯಾಗಿರುತ್ತದೆ.

ಮಲ್ಲಾರು ಕೃಷ್ಣಭಟ್ಟರ ಮಗ ವೆಂಕಟ್ರಮಣ ಯಾನೆ ಪುಟ್ಟಣ ಭಟ್ಟ.

ಕೀರ್ತಿಶೇಷ ಬಡಿಲ ದೂಮಪ್ಪಗಳವರು.

ಕಳೆದ ಮಂಗಳವಾರ ಮಧ್ಯಾಹ್ನ ಎರಡು ಗಂಟೆ ಸಮಯಕ್ಕೆ ಜನಪ್ರಿಯರಾದ ರಾ। ಬಡಿಲ ದೂಮಪ್ಪಗಳವರು ಇಹಲೋಕದ ಚಟುವಟಿಕೆಯನ್ನು ತೀರಿಸಿ ತನ್ನ ೬೦ನೇ ವಯಸ್ಸಿನಲ್ಲಿ ಪರಲೋಕಯಾತ್ರೆ ಮಾಡಿದರೆಂಬುವ ದುಃಖವಾರ್ತೆಯನ್ನು ತಿಳಿಯುವರೆ ಎಲ್ಲರೂ ವಿಶೇಷವಾಗಿ ಈ ಜಿಲ್ಲೆಯ ಬಂಟರ ಯಾನೆ ನಾಡವರು ವ್ಯಾಕುಲಪಡತಕ್ಕದ್ದೆ. ಇವರು ಮಂಗಳೂರು ತಾಲೂಕಿನ ಬಂಟರ ಸಮುದಾಯದೊಳಗಿನ ಪ್ರಾಮುಖ್ಯ ಮನೆತನದೊಳಗೆ ಸೇರಿ, ದೊಡ್ಡ ಅಳಿಯಸಂತಾನ ಕುಟುಂಬದ ಯಜಮಾನಿಕೆಯನ್ನು ಪಡೆದು, ತನ್ನ ಸ್ವಂತ ಸಂಪಾದನೆಯಿಂದ ದೊಡ್ಡ ಹಂಚಿನ ಕಾರ್ಖಾನೆಯನ್ನು ಸ್ಥಾಪಿಸಿ, ಕೀರ್ತಿ, ಪ್ರೀತಿ, ಧನಗಳೆಂಬ ಇಹಲೋಕದ ಕಾಂಕ್ಷೆಗಳನ್ನು ಅನುಭವಿಸಿದ್ದರು. ಇವರು ಕುಟುಂಬದ ಆಡಳಿತೆಯನ್ನು ಪಡೆಯುವಾಗ ಕುಟುಂಬದ ಸಂಪತ್ತು ಅಷ್ಟೊಂದು ಉತ್ತಮ ಸ್ಥಿತಿಯಲ್ಲಿರದಿದ್ದರೂ, ತನ್ನ ಕಾಲದಲ್ಲಿ ಕುಟುಂಬಕ್ಕೂ ಹೆಂಡತಿಮಕ್ಕಳಿಗೂ ಸಾಧಾರಣ ಒಂದುವರೆ ಲಕ್ಷ ರೂಪಾಯಿಗಳ ದ್ರವ್ಯವನ್ನು ಸಂಪಾದಿಸಿದ್ದರು. ತನ್ನ ಬಂಧುಬಾಂಧವರ ಹಿತಕ್ಕೆ ಪ್ರಯತ್ನಿಸಿದ್ದಲ್ಲದೆ ತನ್ನ ಜಾತಿಯವರ ಅಭಿವೃದ್ಧಿಗೆ ಕೂಡಾ ಇವರು ಹೆಚ್ಚಿನ ಸಾಹಸ ಪಡುತ್ತಿದ್ದರು. ಬಂಟರ ಯಾನೆ ನಾಡವರ ಸಂಘಕ್ಕೆ ಹೆಚ್ಚಿನ ಧನಸಹಾಯ ಮಾಡಿದ್ದಲ್ಲದೆ ಈ ಸಂಘದ ಅಭಿವೃದ್ಧಿಗೆ ಇವರು ಸದಾ ಪ್ರಯತ್ನಿಸುತ್ತಿದ್ದರು. ಸಂಘದ ಕಾರ್ಯನಿರ್ವಾಹಕ ಕಮಿಟಿಯ ಮೆಂಬರರಾಗಿದ್ದು, ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ಆಡಳಿತೆಕಮಿಟಿಯ ಅಧ್ಯಕ್ಷರಾಗಿದ್ದರು. ಇತ್ತಲಾಗೆ ಸ್ಥಾಪಿಸಿದ ವ್ಯಾಪಾರಸಂಘದ ಪ್ರಾಮುಖ್ಯ ಡೈರೆಕ್ಟರರಾಗಿದ್ದು, ಅದರ ಸ್ಥಾಪನೆಯಲ್ಲಿ ಹೆಚ್ಚಿನ ಪ್ರಯತ್ನಪಟ್ಟಿದ್ದರು. ಪ್ರಕೃತ ಸ್ಥಾಪಿಸಬೇಕೆಂದಿರುವ ಧಾನಶಾಲೆಯ ಕೆಲಸದಲ್ಲಿ ಕೂಡಾ ಇವರು ಉದ್ಯುಕ್ತರಾಗಿದ್ದರು. ಸಂಘಕ್ಕೆ ವಂತಿಗೆಯನ್ನು ವಸೂಲುಮಾಡುವ ಕೆಲಸದಲ್ಲಿ ಅನೇಕ ಗ್ರಾಮಗಳಿಗೆ ಹೋಗಿ ಅಲ್ಲಿಯ ಜನರಿಗೆ ಬುದ್ಧಿವಾದವನ್ನು ಹೇಳಿ, ಬಂಟರಿಗೆ ವಿದ್ಯೆಯ ಆವಶ್ಯಕತೆಯನ್ನು ತಿಳಿಸಿ ವಂತಿಗೆ ವಸೂಲಿ ಕೆಲಸದಲ್ಲಿ ಹೆಚ್ಚಿನ ಶ್ರಮತೆಗೆದುಕೊಳ್ಳುತ್ತಿದ್ದರು. ಹಳ್ಳಿಯ ಜನರಿಗೆ (ಸ್ವಜಾತಿಯರಿಗೆ) ಇವರ ಮೇಲೆ ಹೆಚ್ಚಿನ ವಿಶ್ವಾಸವಿದ್ದು ಇವರ ಮಾತಿಗೆ ಅವರು ಹೆಚ್ಚಿನ ಮರ್ಯಾದೆ ಕೊಡುತ್ತಿದ್ದರು. ಕಲಹದ ಗನಿಯಾಗಿರುವ ಅಳಿಯಸಂತಾನ ಕುಟುಂಬಗಳಲ್ಲಿ ಮೊಳೆತ ಕಲಹಗಳನ್ನು ಇವರು ಪಂಚಾಯಿತಿ ಮೂಲಕ ತೀರಿಸಿ ಅನೇಕ ಕುಟುಂಬಗಳನ್ನು ವ್ಯಾಜ್ಯಗಳಿಂದ ಪಾರುಮಾಡಿದ್ದರು. ಈ ಕೆಲಸಗಳಲ್ಲಿ ಇವರು ಪಕ್ಷಪಾತವಿಲ್ಲದೆ ಕೆಲಸಮಾಡಿ ಜನರ ನಂಬಿಕೆಗೂ, ಪ್ರೀತಿಗೂ ಪಾತ್ರರಾಗಿದ್ದರು. ಇವರು ಮಂಗಳೂರು ತಾಲೂಕಿನ ಪಂಚಾಯಿತಿಗೆ ಸಂಘದ ಮೆಂಬರರಾಗಿದ್ದರು. ಇವರಿಗೆ ಇಂಗ್ಲೀಷುಭಾಷೆಯ ಪರಿಜ್ಞಾನವು ಇಲ್ಲದೆ ಹೋದರೂ ಜಾತಿಯ ಅಭಿವೃದ್ಧಿಗೆ ಬೇಕಾದ ಸುಧಾರಣೆಯನ್ನು ಮಾಡುವುದರಲ್ಲಿ ಇವರು ಮುಂದಾಳಾಗಿದ್ದರು. ಇವರು ಪ್ರಾಚೀನ ಭಾವನೆಗೂ, ನವೀನ ಭಾವನೆಗೂ ಮಧ್ಯದಲ್ಲಿದ್ದು ಅವುಗಳಲ್ಲಿರುವ ಒಳ್ಳೆತನ್ನು ಮಾತ್ರ ಅಂಗೀಕರಿಸುತ್ತಿದ್ದು ಹಳೆಯವರ ನಂಬಿಕೆಗೂ ಹೊಸಬರ ಮರ್ಯಾದೆಗೂ ಪಾತ್ರರಾಗಿದ್ದರು. ಕಳೆದ ವರ್ಷ ಕಾರ್ಕಳದಲ್ಲಿ ಸೇರಿದ ಬಂಟರ ಯಾನೆ ನಾಡವರ ಸಂಘದ ಮಹಾಸಭೆಯ ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ಇವರು ಕಾಲೋಚಿತವಾದ ಭಾಷಣವನ್ನು ಮಾಡಿದರು. ಹಂಚಿನ ಕಾರ್ಖಾನೆಯನ್ನು ಸ್ಥಾಪಿಸಿದ ಬಂಟರ ವ್ಯಕ್ತಿ ಇವರು ಪ್ರಥಮರಾಗಿದ್ದರು. ಇವರ ಹೆಜ್ಜೆಯನ್ನು ಅನುಸರಿಸಿ ಈಗ ಅನೇಕ ಬಂಟರು ಈ ವೃತ್ತಿಯಲ್ಲಿರುವರು. ಇವರ ಮರಣದಿಂದ ಬಂಟರ ಯಾನೆ ನಾಡವರ ಸಂಘಕ್ಕೆ ದೊಡ್ಡ ನಷ್ಟವಾದಂತಾಯಿತು. ಮತ್ತು ಇವರ ಸ್ಥಾನವನ್ನು ವಹಿಸಿಕೊಳ್ಳಲಿಕ್ಕೆ ಯೋಗ್ಯರಾದ ಮನುಷ್ಯರಿಲ್ಲದ ಕಾರಣ ಕೆಲವು ಸಮಯದ ವರೆಗೆ ಈ ಸ್ಥಾನವು ಖಾಲಿಯಾಗಿಯೇ ಇರಬೇಕಾಗುವುದು. ಜಿಲ್ಲೆಯಲ್ಲಿ ಐಶ್ವರ್ಯವಂತರಾದ ಅನೇಕ ಬಂಟರಿರುವರು, ಇವರು ಪುಣ್ಯಾತ್ಮರಾದ ದೂಮಪ್ಪಗಳವರ ಹೆಜ್ಜೆಯನ್ನು ಅನುಕರಿಸಿ ಸತ್ಕಾರ್ಯಗಳಲ್ಲಿ ತಮ್ಮ ತನುಮನಧನಗಳನ್ನು ಅರ್ಪಿಸುವುದು ಯೋಗ್ಯವೇ. ದೂಮಪ್ಪಗಳವರು ತನ್ನ ಕಾರ್ಯಗಳಿಂದ ತನ್ನ ಜನ್ಮವನ್ನು ಸಫಲಪಡಿಸಿದರು, ಬಂಟರ ಯಾನೆ ನಾಡವರ ಸಂಘದವರು ತಮ್ಮ ಕೃತಜ್ಞತೆಯನ್ನು ಇವರಿಗೆ ತೋರಿಸುವದು ಅವಶ್ಯ. ಪರವಸ್ತುವಿರ ಪುಣ್ಯಜೀವಿಯು ಸಾಯುಜ್ಯ ಪದವಿಯನ್ನು ಹೊಂದಲೆಂದೂ, ಅವರ ಮರಣದಿಂದುಂಟಾದ ದುಃಖವನ್ನು ತಾಳುವಷ್ಟು ಶಕ್ತಿಯನ್ನು ಅವರ ಬಂಧುಬಾಂಧವರು ಪಡೆಯಲಿಯೆಂದೂ ಪ್ರಾರ್ಥಿಸುವ,

ಸ್ವಜಾತಿ ಬಾಂಧವ.

ಗ್ರಾಮ ಸಿಬಂದಿ.

ಹಿಂದಿನ ಸಂಚಿಕೆಯಲ್ಲಿ ಗ್ರಾಮ ಸಿಬಂದಿಯು ಯಾವುದು, ಅದಕ್ಕೂ ರಾಜಸ್ಥಾನಕ್ಕೂ ಇರುವ ಪರಸ್ಪರ ಸಂಬಂಧವೇನು ಎಂದು ವಿವರಿಸಿದೆವು. ಇಂಥ ಸಿಬಂದಿಯು ಗ್ರಾಮದ ಆಡಳಿತೆಯನ್ನು ವಹಿಸಿಕೊಂಡದ್ದಕ್ಕೆ ಗ್ರಾಮದ ಜಮೀನಿನ ಒಂದಂಶವನ್ನು ಉತ್ತಾರವಾಗಿ ತೀರ್ವೆ ಮಾಫಿಯಿಂದಾಗಲಿ ಕಮ್ಮಿಯಾದ ಖಾಯಂ ತೀರ್ವೆಯಿಂದಾಗಲಿ ಪ್ರತಿಫಲವಾಗಿ ಕೊಡುವುದು ಪೂರ್ವಕಾಲದ ನಡವಳಿ, ನಮ್ಮ ಜಿಲ್ಲೆಯಲ್ಲಿ ಗುತ್ತಿನವರು ಅಥವಾ ಗೊತ್ತುಗಾರರು ಎಂಬವರಿನ ಅರ್ಥವೇ ಇದಾಗಿದೆ. ಈ ಗೊತ್ತುಗಾರರು ಗ್ರಾಮದ ತೀರ್ವೆಯನ್ನು ವಸೂಲು ಮಾಡುವ ಜವಾಬ್ದಾರಿಯನ್ನು ಖಾಯಂ ಆಗಿ ಸರಕಾರದಿಂದ ವಹಿಸಿಕೊಂಡವರು; ಇಂಥವರಿಗೆ ಗ್ರಾಮದ ವಿಶೇಷ ಕಟ್ಟಳೆಗಳಲ್ಲಿ ಪ್ರಥಮ ಮರ್ಯಾದೆ; ಅಂದರೆ ಅವರು ಬಂದ ವಿನಾ ದೇವಸ್ಥಾನದ ಉತ್ಸವದ ಕೊಡಿ ಏರಿಸಲಾಗುವದಿಲ್ಲ, ದೇವರ ಪ್ರಸಾದ ಅವರಿಗೆ ಮೊದಲು ಸಲ್ಲಬೇಕು; ಅವರು ಸಭೆಯಲ್ಲಿ ಕುಳಿತುಕೊಂಡ ವಿನಾ ಇತರರು ಕುಳಿತುಕೊಳ್ಳಬಾರದು; ಈ ಬಗೆಯ ಹಲವು ನಾನಾ ಮರ್ಯಾದೆಯ ಕಟ್ಟಳೆಗಳು ಇದ್ದವು. ದೇವಸ್ಥಾನದ ಭಂಡಾರವು ಈ ಗುತ್ತಿನ ಮನೆಯಲ್ಲಿ ಇರಬೇಕು; ಹಲವು ಸಂದರ್ಭದಲ್ಲಿ ಗ್ರಾಮದಲ್ಲಿ ನಡದ ತಕ್ಕೀಸು [illegible]

([illegible] ಮುಂದರಿಸಿದೆ.)

[illegible] ,,
[illegible] ೭
[illegible] ,,
[illegible] ,,
[illegible] ,,
[illegible] ,,
[illegible] ಹಗಳು:—
[illegible] ೫
[illegible] ,,
[illegible] ಕನ್ನಡ:—
[illegible] ,
ಶ್ರೀ[illegible] ಬಡವ ಜೋಮರ್ಕೃಗಳವರು ,,
[illegible] ೫ ೮
[illegible] ರಿಪೋರ್ಟ್ ,,
[illegible] ಂಡರುಗಳ ಮನವಿ ,
[illegible] ಗೊಬ್ಬರಗಳನ್ನು ಕುರಿತಾದ ಮಾಹಿತಿ ,
[illegible] ವಹಾರ ,,
[illegible] ತಾಲೂಕಿನ ಉಪಾಧ್ಯಾಯ ಸಂಘ ಲನ ೮A
[illegible] ವಿದ್ಯಾದಾಯಿನೀ ಶಾಲೆಯ ತೃತೀಯ ವಾರ್ಷಿಕ ವರ್ಧಂತಿ
[illegible] ಸಮಾರಂಭವು ,

ಸ್ವದೇಶಾಭಿಮಾನಿ.

ಶಕೆ ೧೮೬೧ ವೈಶಾಖ ಬ| ೪ ಶುಕ್ರವಾರ

ದಕ್ಷಿಣ ಕನ್ನಡದ ಹಸ್ತಾಂತರ.

ಧಾರವಾಡದಲ್ಲಿ ಬರುವ ವಾರ ತಾ ೧೫, ೧೬, ೧೭ರಲ್ಲಿ ಕರ್ನಾಟಕ ರಾಜಕೀಯ ಪರಿಷತ್ತು ಸೇರಿ ಅದರಲ್ಲಿ ಅಖಿಲ ಬ್ರಿಟಿಷ ಕರ್ನಾಟಕ ಪ್ರಾಂತವನ್ನು ಏಕತ್ರ ಸೇರಿಸಿ, ಅದನ್ನು ಒಬ್ಬ ಸ್ವತಂತ್ರ ಗವರ್ನರನ ವಶಕ್ಕೆ ಒಪ್ಪಿಸಬೇಕು, ಅವನು ಮಿಕ್ಕ ಪ್ರಾಂತಾಧಿಕಾರಿಗಳಂತೆ, ಕಾರ್ಯಕಾರಿ ಕೌನ್ಸಿಲು ಮತ್ತು ಲೆಜಿಸ್ಲೇಟಿವ್ ಎಸ್ಸೆಂಬ್ಲಿ ಎಂದರೆ ಶಾಸನಮಂಡಲ ಇವುಗಳ ಸಹಾಯದಿಂದ ಕರ್ನಾಟಕ ಪ್ರಾಂತ್ಯವನ್ನು ಆಳಬೇಕು ಎಂಬ ಚರ್ಚೆಯು ಮುಖ್ಯವಾಗಿ ಒಂದೀತು ಎಂದರೆ ಒಂದೇ ಮಾತಿನಿಂದ ಕರ್ನಾಟಕದ ಏಕೀಕರಣವನ್ನು ಮಾಡಬೇಕೆಂಬುದೆ ನಾಳ ಜರಗಲಿಕ್ಕಿರುವ ಪರಿಷತ್ತಿನ ಮುಖ್ಯ ಉದ್ದೇಶಗಳಲ್ಲಿ ಒಂದಾಗಿರುತ್ತದೆ. ಕರ್ನಾಟಕದ ಏಕೀಕರಣವನ್ನು ಕುರಿತು ಭಾಷಾನುರೂಪವಾದ ಪ್ರಾಂತ್ಯರಚನೆ ಎಂಬ ಅಗ್ರಲೇಖದಲ್ಲಿ ನೂರುನಾಲ್ಕು ವರ್ಷಗಳ ಹಿಂದೆಯೆ ನಮ್ಮ ವಿಚಾರಗಳನ್ನು ನಾವು ದೇಶಾಭಿಮಾನಿಯ ವಾಚಕರಿಗೆ ತಿಳಿಸಿದ್ದೇವೆ ಒಂದೇ ಭಾಷೆ, ಒಂದೇ ಸಂಸ್ಕೃತಿ, ಒಂದೇ ಬಗೆಯ ಇತಿಹಾಸ ಇತ್ಯಾದಿ ಇರುವ ಜನಾಂಗದವರು ಬೇರೆಬೇರೆ ಆಳಿಕೆಗೆ ಒಳಪಟ್ಟರೆ ಆ ಜನಾಂಗವು ರಾಷ್ಟ್ರೀಯ ಅಸ್ತಿತ್ವದ ದೃಷ್ಟಿಯಿಂದ ಎಷ್ಟು ನಿಃಸತ್ವ, ಬಲಹೀನ, ಸ್ವಾಭಿಮಾನ್ಯಶೂನ್ಯ ಮತ್ತು ನಿರುಪಯುಕ್ತವಾಗುತ್ತದೆ ಎಂಬುದಕ್ಕೆ ಇನ್ನೊಂದು ದೃಷ್ಟಾಂತವು ಅವಶ್ಯವಿಲ್ಲ, ಕರ್ನಾಟಕ ದೇಶದ ಪರಿಸ್ಥಿತಿಯೇ ಅದಕ್ಕೆ ಒಂದು ನಿದರ್ಶನವಾಗಿದೆ

ಕರ್ನಾಟಕದ ಏಕೀಕರಣವು ಆಗುವುದು ಎಷ್ಟರಮಟ್ಟಿಗೆ ಇಷ್ಟವೊ ಅಷ್ಟೇ ಅದಕ್ಕೆ ವಿಘ್ನಗಳು ಕೂಡ ಇವೆ ಈ ವಿಘ್ನಗಳಲ್ಲಿ ಮುಖ್ಯವಾದ್ದು ರಾಜ್ಯಕರ್ತರ ಔದಾಸೀನ್ಯವು ಔದಾಸೀನ್ಯವೆಂದು ಹೇಳುವುದಕ್ಕಿಂತ ಒಂದೇ ಭಾಷೆಯವರು ಪಡುತ್ತಿರುವ ಕಷ್ಟಗಳಿಗೆ ಅಲುಹವಾಲಿಗಳಿಗೆ ಕಿವಿಗೊಡದೆ ಇರುವ ದುರಭ್ಯಾಸವು ಸರಕಾರದ ಮೈಯಲ್ಲಿ ರೂಢಮೂಲವಾಗಿರುವುದರಿಂದ ಅದಕ್ಕೆ ದುರ್ಲಕ್ಷ್ಯವೆಂದು ಹೇಳುವುದೆ ಹೆಚ್ಚು ಅನುರೂಪವಾಗಿದೆ ಕರ್ನಾಟಕ ಪ್ರಾಂತ್ಯದ ಏಕೀಕರಣದ ವಿಷಯದಲ್ಲಿ ಮಿ| ಮೊಂಟೆಗ್ಯುಗಳ ಬಳಿಗೆ ಡೆಪ್ಯುಟೇಶನು ಹೋದಾಗ "ಈ ಏಕೀಕರಣದ ಪ್ರಶ್ನೆಯನ್ನು ಈಗ ನಿರ್ಣಯಿಸಲು ಸಾಧ್ಯವಿಲ್ಲ, ಭಾಷಾನುಗುಣವಾಗಿ ಪ್ರಾಂತ್ಯಗಳ ವಿಭಜನೆಯ ಕಾರ್ಯವು ಸುಧಾರಿಸಿದ ಮುಂದಿನ ಕೌನ್ಸಿಲಿನ ಮೇಲೆ ಹೊಂದಿಕೊಂಡಿದೆ" ಎಂದು ಮಿ| ಮೊಂಟೆಗ್ಯುಗಳು ಅಪ್ಪಣೆ ಕೊಡಿಸಿದರು. [illegible] ಈ ಕಾರ್ಯವು ಸರಕಾರದ ದೃಷ್ಟಿಯಿಂದ ಮುಂದರಿಸಿದ್ದು ಎಂದು ಅರ್ಥವಾಗುತ್ತದೆ ಪರಂತು ಜನತೆಯು—ಕರ್ನಾಟಕ ಜನಾಂಗವು— ಸರಕಾರದ ಅಭಿವಚನದ ಮೇಲೆ ಭರವಸವಿಟ್ಟು ನಿಶ್ಚಿಂತವಾಗಿ ಕುಳಿತರೆ ಆ ಅಭಿವಚನವು ಸಫಲವಾಗುವ ಕಾಲವು ಬಹಳ [illegible] ಈಗ [illegible] ಮಾಡಿ

[illegible] ಕರ್ನಾಟಕದ ಏಕೀಕರಣದ ಸುಸಮಯವು ಬರುವುದು ಕೊಂಚ ದೂರದಲ್ಲಿದ್ದರೆ ದಕ್ಷಿಣ ಕನ್ನಡದವರು ತಮ್ಮ ಜಿಲ್ಲೆಯನ್ನು ಆ ವರೆಗಾದರೂ ಮುಂಬಯಿ ಸಂಸ್ಥಾನಕ್ಕೆ ಸೇರಿಸಿದರಾದೀತೆಂದು ಸಹಜವಾಗಿ ಕೋರುತ್ತಾರೆ. ದಕ್ಷಿಣ ಕನ್ನಡವನ್ನು ಮುಂಬಯಿಗೆ ಸೇರಿಸುವ ಈ ಮತವು ಜಿಲ್ಲೆಯೊಳಗಿನ ಅನೇಕ ಮುಂದಾಳುಗಳಿಗೆ ಇಷ್ಟವಾದ್ದಿರುತ್ತದೆ. ಈ ಮತವನ್ನು ಪ್ರತಿಪಾದಿಸುವವರ ಮುಖ್ಯ ಅಭಿಪ್ರಾಯವೇನೆಂದರೆ, ಮೊದಲು ಉತ್ತರ ಮತ್ತು ದಕ್ಷಿಣ ಕನ್ನಡ ಇವು ಒಂದೆಯಾಗಿದ್ದವು ಅದರಂತೆ ಅವುಗಳನ್ನು ಪುನಃ ಈಗಲೂ ಒಟ್ಟುಗೂಡಿಸುವುದು ಯೋಗ್ಯವಾಗಿದೆ. ದಕ್ಷಿಣ ಕನ್ನಡದ ದಕ್ಷಿಣ ಭಾಗವಾದ ಕಾಸರಗೋಡ ಮೊದಲಾದ ಮಲೆಯಾಳ ಸಂಪರ್ಕದ ಪ್ರಾಂತ್ಯವನ್ನು ಬೇಕಾದರೆ, ಮಲಬಾರಿಗೆ ಸೇರಿಸಿ ಉಳಿದ ಭಾಗವನ್ನು ಮುಂಬಯಿ ಇಲಾಖೆಯ ವಶಕ್ಕೆ ಕೊಟ್ಟದ್ದಾದರೆ ವ್ಯಾಪಾರ, ಉದ್ಯೋಗ, ಶಿಕ್ಷಣ, ಈ ಎಲ್ಲ ದೃಷ್ಟಿಯಿಂದ ದಕ್ಷಿಣ ಕನ್ನಡಕ್ಕೆ ಹೆಚ್ಚು ಸೌಕರ್ಯವೊದಗೀತೆಂದು ಅವರು ನೆನಸುತ್ತಾರೆ ನಮ್ಮ ಜಿಲ್ಲೆಯ ವ್ಯಾಪಾರವು—ಆಯಾತನಿರ್ಯಾತ ವ್ಯಾಪಾರವು—ಮುಂಬಯಿ ಕಡೆಗೆನೆ ಇರುತ್ತದೆ ವ್ಯಾಪಾರದ ಚಲಾವಣೆಗೆ ಮುಂಬಯಿಮುಖವಾಗಿರುವಾಗ ರಾಜಕಾರ್ಯಕ್ಕೆ ಮಾತ್ರ ಮದ್ರಾಸಿಗೆ ಹೋಗುವುದು ಕೇವಲ ವಿಸಂಗತವಾದ್ದು ಉತ್ತರ ಮತ್ತು ದಕ್ಷಿಣ ಕನ್ನಡಗಳ ಕಾಡುತ್ಪತ್ತಿ, ಬೂಗುಣ ಇತ್ಯಾದಿ ಒಂದೇ ನಮೂನೆಯದಿರುವುದರಿಂದ ಅವುಗಳ ಸಂಯೋಗವು ಔದ್ಯೋಗಿಕ ಪ್ರಗತಿಗೆ ಸಹಾಯಕವಾದೀತು ಶಿಕ್ಷಣದ ವಿಷಯವು ಸಹ ಹೀಗೆಯೆ ಇದೆ ಅದಲ್ಲದೆ, ಇಲ್ಲಿನ ಹಾಗೂ ಈ ಜಿಲ್ಲೆಯೊಳಗಿನ ಅನೇಕ ಜನರು ಬೇರೆ ಬೇರೆ ಉದ್ಯೋಗಗಳ ದೆಸೆಯಿಂದಲೂ ಮುಂಬಯಿಗೂ, ಉತ್ತರಕನ್ನಡಕ್ಕೂ ಹೋಗುತ್ತಿರುತ್ತಾರೆ ಮುಂಬಯಿಗೆ ಇಲ್ಲಿಂದ ಹೋಗುವವರ ಖಾನೇಸುಮಾರಿಯನ್ನು ನೋಡಹೋದರೆ ಜಿಲ್ಲೆಯೊಳಗಿನ ಎಲ್ಲ ಜಾತಿಗಳ ಜನರು ಹೋಗುತ್ತಿರುವುದು ಕಂಡುಬರುತ್ತದೆ ಈ ರೀತಿಯಿಂದ ವ್ಯಾಪಾರ ಮೂಲಕವಾಗಿಯಾಗಲಿ, ಬೇರೆ ಬೇರೆ ತರದ ನೌಕರಿಗಳ ಮೂಲಕವಾಗಿಯಾಗಲಿ ಈ ಜಿಲ್ಲೆಯ ಜೀವನವು ಮುಂಬಯಿ ಸಂಸ್ಥಾನದ ಮೇಲೆ ಹೊಂದಿಕೊಂಡಿರುವಾಗ, ಈ ಜಿಲ್ಲೆಯ ಚಲಾವಣೆಯು ಮುಂಬಯಿ ಕಡೆಗೆ ಅಧಿಕವಾಗಿರುವಾಗ, ರಾಜಕಾರ್ಯಕ್ಕೆ ಮಾತ್ರ ಮದ್ರಾಸಿನ ವಶದಲ್ಲಿರುವುದು ನಾವು ಮೇಲೆ ಹೇಳಿದಂತೆ ವಿಸಂಗತವಲ್ಲವೆ? ಮದ್ರಾಸು ನಮ್ಮ ಜಿಲ್ಲೆಯಿಂದ ಎಷ್ಟು ದೂರವಲ್ಲದೆಯೊ ಅಷ್ಟು ಮುಂಬಯಿಯು ಇಲ್ಲ ಭೂಗೋಳದ ದೃಷ್ಟಿಯಿಂದ ಹೇಳುವುದಾದರೆ ಮದ್ರಾಸಿಗೂ ಮಂಗಳೂರಿಗೂ ಸರಿ ವಿರೋಧ! ಒಂದು ಪೂರ್ವ ಸಮುದ್ರದ ದಡದ ಮೇಲೆ ಇದ್ದುದಾದರೆ ಇನ್ನೊಂದು ಪಶ್ಚಿಮ ಸಮುದ್ರದ ಕರಾವಳಿಯಲ್ಲಿ! ಇಂಥ ವಿರುದ್ಧ ಸಂಬಂಧವನ್ನು ಜೋಡಿಸಿ ಕೊಟ್ಟಿರುವುದಕ್ಕಿಂತ ಒಂದೆ ತೀರದಲ್ಲಿರುವವರು ಒಂದೆ ಆಧಿಪತ್ಯದ ಕೆಳಗಿರುವುದು ಚಂದವಲ್ಲವೆ?

ಈಗ ಈ ಮತದ ಮೇಲೆ ಹಲವು ಆಕ್ಷೇಪಗಳು ಬರುವ ಸಂಭವವಿದೆ, ಮಾತ್ರವಲ್ಲ, ಬಂದಿವೆ ಎಂತಲೂ ಅನ್ನಬಹುದು ಪರಂತು ದಕ್ಷಿಣ ಕನ್ನಡವನ್ನು ಮುಂಬಯಿಯೊಡನೆ ಸೇರಿಸುವುದರಿಂದ ದಕ್ಷಿಣ ಕನ್ನಡಕ್ಕೆ ಯಾವ ಸೌಕರ್ಯವು, ಲಾಭಗಳು ಉಂಟಾಗಬಹುದೊ ಅವು ಮದ್ರಾಸಿನೊಡನೆ ಇರುವ ಸಂಬಂಧದಿಂದ ಉಂಟಾಗಲಾರವು ಆದ್ದರಿಂದ ಅಂಥ ಆಕ್ಷೇಪಗಳ ಕಡೆಗೆ ಹೆಚ್ಚಿನ ಲಕ್ಷ್ಯವನ್ನು ಕೊಡುವ ಕಾರಣವಿಲ್ಲ ನಮಗೆ ಈ ಹೊತ್ತು ಸೂಚಿಸಬೇಕಾದ್ದೇನೆಂದರೆ ಕರ್ನಾಟಕ ಪರಿಷತ್ತಿನಲ್ಲಿ ದಕ್ಷಿಣಕನ್ನಡವು ಮುಂಬಯಿ ಇಲಾಖೆಯೊಡನೆ ಸೇರಿಸುವ ಪ್ರಶ್ನೆಯು ಚರ್ಚಿಸಲ್ಪಟ್ಟಿತು ಮತ್ತು ಇಲ್ಲಿಂದ ಹೋಗುವ ಪ್ರತಿನಿಧಿಗಳು ಈ ವಿಷಯವಾಗಿ ಈ ಜಿಲ್ಲೆಯ ನಿಜವಾದ ಹಿತವನ್ನು ಬಯಸಿ ಈ ವಿಷಯದಲ್ಲಿ ತಮ್ಮ ಮತವನ್ನು ವ್ಯಕ್ತಗೊಳಿಸಿಯಾರು ಎಂದು ಬಯಸುತ್ತೇವೆ

ಸ್ಫುಟ ವಿಚಾರಗಳು

೧ ಎಪ್ರಿಲ್ ತಾ ೨೮ರಲ್ಲಿ ಮಂಜರಿಯಲ್ಲಿ ಮಲಬಾರ ಜಿಲ್ಲಾ ಸಭೆಯು ನೆರವೇರಿತು ಮದ್ರಾಸಿನ ಹಿಂದು' ದೈನಿಕ ಪತ್ರದ ಸುಪ್ರಸಿದ್ಧ ಸಂಪಾದಕರಾದ ಮಿ| ಕಸ್ತೂರಿರಂಗ ಐಯಂಗಾರರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿದ್ದರು ಮಿ| ಮೊಂಟೆಗ್ಯು ದೊರೆಗಳ ರಿಫೋರ್ಮು ಎಕ್ಟು ಪಾರ್ಲಿಮೆಂಟಿನಲ್ಲಿ ಪಾಸಾದಂದಿನಿಂದ ಹಿಂದುಸ್ಥಾನದಲ್ಲಿ ಪ್ರಗತಿಯ ಯಾವ ಕುರುಹುಗಳು ಅಷ್ಟರಮಟ್ಟಿಗೆ ಕಾಣುವುದಿಲ್ಲವಾದರೂ ಕೆಲವು ಜಗಳಗಂಟರು ಮುಂದೆ ಬಂದು ಅಲ್ಲಲ್ಲಿ ಜಗಳಗಳನ್ನೆಬ್ಬಿಸುವ ದೃಢವಾದ ವ್ರತವನ್ನು ಕೈಕೊಂಡದ್ದು ಮಾತ್ರ ಕಂಡುಬರುತ್ತದೆ. ರಾಷ್ಟ್ರೀಯ ಸಭೆಯ ಅಧಿವೇಶನ ಮೊದಲು ಮಾಡಿಕೊಂಡು ಜಿಲ್ಲಾ ಪರಿಷತ್ತಿನ ಅಧಿವೇಶನದ ವರೆಗೆ ಈ ಕಲಹಪ್ರಿಯರ ಕಾರ್ಯಕ್ಷೇತ್ರವು ಹಬ್ಬಿದ್ದು ತೋರಿಬರುತ್ತದೆ ಮುಂಬಯಿಯ ಪ್ರಾಂತಿಕ ಪರಿಷತ್ತಿನಲ್ಲೂ ಹಾಗೂ ಆ ಸಂಸ್ಥಾನದೊಳಗಿನ ಹಲಕೆಲವು ಜಿಲ್ಲಾ ಪರಿಷತ್ತುಗಳಲ್ಲೂ ಜಗಳಗಂಟರ ಕೆಲವು ಅಸ್ಥಿಪಂಜರಗಳು ಸೇರಿ ತಾಂಡವನೃತ್ಯವನ್ನು ಮಾಡುತ್ತಿದ್ದದ್ದು ಪತ್ರಿಕಾವಾಚಕರಿಗೆ ಅಪರಿಚಿತವಾದ ವಿಷಯವಲ್ಲ. ಮಂಜರಿಯಲ್ಲಿ ನಡೆದ ಮಲಬಾರ ಜಿಲ್ಲಾ ಪರಿಷತ್ತಿನಲ್ಲೂ [illegible]

[illegible] ಪ್ರಾಂತಿಕ [illegible] ಪರಿಷತ್ತುಗಳ [illegible] ಅನುವರ್ತಿಸುವುದು ಎಷ್ಟು ಉಚಿತವಾಗಿದೆ, ಬರುವ [illegible] ಗಳಲ್ಲಿ ರಾಷ್ಟ್ರೀಯ ಪಕ್ಷದವರ ಧೋರಣವನ್ನು [illegible] ದುರುವವರ ಚುನಾಯಿಸಿ ಬರುವುದು ದೇಶಹಿತಕ್ಕೆ ಎಷ್ಟು ಅವಶ್ಯವಾಗಿದೆ, ಖಲೀಫತಿನ ಪ್ರಶ್ನೆಯನ್ನು ಕುರಿತು ಮುಸಲ್ಮಾನ ಬಂಧುಗಳ ಮನೋವೃತ್ತಿಗಳಿಗನುರೂಪವಾಗಿ ಬ್ರಿಟಿಷ ಸರಕಾರವು ತನ್ನ ಧೋರಣವನ್ನಿಡುವುದು ಹೇಗೆ ಆವಶ್ಯಕವಾದ್ದು, ಹಾಗು ಅಸ್ಪೃಶ್ಯ ವರ್ಗದ ವಿಷಯವಾಗಿ ಇತರರು ತಮ್ಮ ಸಂಕುಚಿತ ಮತ್ತು ಕಲುಷಿತ ದೃಷ್ಟಿಯನ್ನು ಬಿಟ್ಟು ದೇಶಕಾಲ ಪರಿಸ್ಥಿತಿಗೂ, ಸ್ವಾತಂತ್ರ್ಯದ ಮಹತ್ವಕ್ಕೂ ಅನುರೂಪವಾಗಿ ಅವರನ್ನು ಸಮತೆಯಿಂದ ನಡೆಯಿಸತಕ್ಕವುದು ಹೇಗೆ ಅಗತ್ಯ ಮತ್ತು ಹಿತಾವಹವಾಗಿದೆ ಎಂದಿತ್ಯಾದಿ ಅನೇಕ ಮಹತ್ವದ ಮತ್ತು [illegible]ನ ರಾಜಕಾರಣದಲ್ಲಿ ಮುಖ್ಯ ಸ್ಥಾನವನ್ನು ಪಡೆದ ವಿಷಯಗಳನ್ನು ಚರ್ಚಿಸಿದರು. ಸಾರಾಂಶ—ಮಿ| ಕಸ್ತೂರಿರಂಗ ಐಯಂಗಾರರ ಭಾಷಣವು ದೇಶಭಕ್ತಿಗೂ, ರಾಷ್ಟ್ರೀಯತ್ವಕ್ಕೂ ಒಪ್ಪುವಂತೆ ಇತ್ತೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ.

೨ ಆದರೆ ಪರಿಷತ್ತಿನ ಅನಂತರದ ಕಾರ್ಯಕ್ರಮದಲ್ಲಿ ಕೊಂಚ ಗಲಾಟೆಯು ಇತ್ತು. ಈ ಗಲಾಟೆಯು ಅನಂತರದ ಕಾರ್ಯಕ್ರಮದಲ್ಲಿ ಎಂದರೆ ಠರಾವುಗಳು ಸಭೆಯ ಮುಂದೆ ಬರುವ ಸಮಯದಲ್ಲಿ ಉಂಟಾದದ್ದು ಕಂಡುಬಂದರೂ ಇಂಥ ಗಲಾಟೆಯನ್ನು ಎಬ್ಬಿಸಬೇಕೆಂದು ಮಸಲತ್ತು ಮಂಜರಿಯಲ್ಲಿ ಎಷ್ಟೋ ವಾರಗಳ ಹಿಂದಿನಿಂದಲೆ ನಡೆಯುತಿತ್ತೆಂದು ಹೇಳುತ್ತಾರೆ ಖಲಿಫತಿನ ಪ್ರಶ್ನೆಯನ್ನು ಹಿಂದೀ ಮುಸಲ್ಮಾನರ ಅಭಿಪ್ರಾಯದಂತೆ ಬ್ರಿ ಸರಕಾರವು ತೀರ್ಮಾನಿಸದಿದ್ದರೆ ಮುಸಲ್ಮಾನ ಬಂಧುಗಳು ಸರಕಾರಿ ಪದವಿಗಳನ್ನೂ, ಬಹುಮಾನದ ಜಾಗೆಗಳನ್ನೂ, ಸರಕಾರಿ ನೌಕರಿಗಳನ್ನೂ, ಕ್ರಮೇಣ ಬಿಟ್ಟುಬಿಡಬೇಕು ಹಿಂದಿಗಳೂ ಕೂಡ ಮುಸಲ್ಮಾನರ ಪರವಾಗಿಯೆ ನಿಂತುಕೊಳ್ಳಬೇಕು ಎಂಬದೊಂದು ಠರಾವು ಪರಿಷತ್ತಿನ ಮುಂದೆ ಬಂದಿತ್ತು ಈ ಠರಾವಿಗೆ ಮಿಸೆಸ್ ಬಿಝುಂಟರು ಒಂದು ಉಪಸೂಚನೆಯನ್ನು ತಂದು ಅದನ್ನು ವಿರೋಧಿಸಿದರು ಅವರ ಉಪಸೂಚನೆಯ ಮುಖ್ಯ ಅಭಿಪ್ರಾಯವೇನೆಂದರೆ ಸರಕಾರದೊಡನೆ ಇರುವ ತಮ್ಮ ಸಹಕಾರ್ಯವನ್ನು ಕಡಿದುಕೊಳ್ಳುವುದು ಹಿತಾವಹವಲ್ಲ, ಅದರಿಂದ ಅತ್ಯಾಚಾರ ವೃಂಟಾಗುವ ಸಂಭವವಿದೆ ಬಿಝುಂಟರ ಈ ಉಪಸೂಚನೆಯನ್ನು ಬೇರೆ ಅನೇಕರು ವಿರೋಧಿಸಿ, ಮೂಲ ಠರಾವನ್ನೆ ಸಮರ್ಥಿಸಿದರು ಕೊನೆಗೆ ಮತಗಳನ್ನು ಎಣಿಸಲು ಉಪಸೂಚನೆಗೆ ೧೪೧, ಮತ್ತು ಮೂಲ ಠರಾವಿಗೆ ೧,೦೦೦ ಮತಗಳು ಸಿಕ್ಕಿ ಮೂಲ ಠರಾವು ಪಾಸಾಯಿತು ಸುಧಾರಣಾ ಕಾನೂನಿನ ವಿಷಯವಾಗಿಯೂ ಹೀಗೆ ನಡೆಯಿತೆಂದು ಪ್ರಸಿದ್ಧವಾಗಿದೆ 'ಸುಧಾರಣಾ ಕಾನೂನು ಅಪೂರ್ಣ, ಅಸಮಾಧಾನಕರ ಹಾಗು ನಿರಾಶಾಜನಕವಾಗಿದೆ' ಎಂದು ರಾಷ್ಟ್ರೀಯ ಸಭೆಯು ಹೇಳಿದಂತೆಯೆ ಮೊನ್ನೆಯ ಪರಿಷತ್ತು ಹೇಳತೊಡಗಿತು ಆಗ ಅಪೂರ್ಣ ಇತ್ಯಾದಿ ಈ ಮೂರು ವಿಶೇಷಣಗಳನ್ನು ಬಿಟ್ಟುಬಿಡಬೇಕೆಂದು ಮಿಸೆಸ್ ಬಿಝುಂಟರು ಎಂದಿನಂತೆ ಉಪಸೂಚನೆಯನ್ನು ತಂದರು ವಾಗ್ವಾದವು ನಡೆಯಿತು ಕೊನೆಗ ಮಿಸೆಸ್ಸರ ಕಡೆಗೆ ೧೫೪ ಹಾಗು ಮೂಲ ಠರಾವಿಗೆ ಯಥಾಪ್ರಕಾರ ೧,೦೦೦ ಮತಗಳು ದೊರಕಿದವು, ಪರಂತು ಈ ಫಲಿತಾಂಶವನ್ನು ನೋಡಲು ಮಿಸೆಸ್ ಬಿಝುಂಟರು ಹಾಗು ಮಿ| ಮಂಜರಿ ರಾಮ ಐಯರರು ನಿಂತುಕೊಳ್ಳಲಿಲ್ಲ, ಮಧ್ಯದಲ್ಲ ಸಭಾಸ್ಥಾನವನ್ನು ಬಿಟ್ಟು ಹೊರಟರಂತೆ ಇರಲಿ, ಕೊನೆಗೆ ಮಲಬಾರಿನ ಪರಿಷತ್ತು ಅಲ್ಲಿಯ ಸ್ಥಳಿಕ ಬೇರೆ ಅಹವಾಲೆಗಳನ್ನು ಠರಾವುಗಳ ರೂಪದಿಂದ ಚರ್ಚಿಸಿ ತನ್ನ ಅಧಿವೇಶನವನ್ನು ಮುಗಿಸಿತು ಈ ಪರಿಷತ್ತಿನ ಹಾಗು ಇಂಥ ಇತರ ಪರಿಷತ್ತುಗಳ ಇತ್ತಲಾಗಿನ ವರ್ತಮಾನಗಳನ್ನು ನೋಡಲಾಗಿ ದೇಶದೊಳಗಿನ ಲೋಕಮತದ ಸ್ವರೂಪವು ಸದ್ಯಕ್ಕೆ ಹೇಗಿದೆ ಎಂಬುದು ಗೊತ್ತಾಗುತ್ತದೆ ಯಾರ ಪಕ್ಷವು ಸತ್ಯವಾದ್ದೆ ಇರಲಿ, ಅಥವಾ ನಿಜವಾದ ದೇಶಭಕ್ತರು ಯಾರೆ ಇರಲಿ, ಪರಂತು, ಜಗಳ, ದ್ವೇಷ, ಕಾದಾಟ ಮುಂತಾದವುಗಳನ್ನು ಮಾಡಿಕೊಂಡು ಮೊದಲೆ ನಿಃಶಕ್ತರಾದ ಹಿಂದಿಗಳು ಇನ್ನಷ್ಟು ಒಬ್ಬರಿಂದೊಬ್ಬರು ಅಗಲುವುದು ನಮ್ಮ ಹಿಂದೀ ರಾಷ್ಟ್ರದ ಮಹತ್ತಾದ ದುರ್ದೈವವೆ ಸರಿ. ಒಂದು ಕಡೆಯಲ್ಲಿ ಹಿಂದು ಮುಸಲ್ಮಾನರು ಐಕ್ಯದ ಹಾದಿಗೆ ಬರುವಾಗ ಇನ್ನೊಂದು ಕಡೆಯಲ್ಲಿ ಶಾಂತರು, ಉಗ್ರರು, ರಾಷ್ಟ್ರೀಯರು ಇತ್ಯಾದಿ ಭೇದಗಳನ್ನು ಕಲ್ಪಿಸಿ ಎಷ್ಟು ಹೀಗೆ ಕಾಯಿಯಂತೆ ಎದುರಾಗುವುದು ಯಾವ ದೇಶಹಿತ? ಮತಭೇದಗಳು ಇರುತ್ತವೆ, ಎಲ್ಲ ರಾಷ್ಟ್ರಗಳಲ್ಲಿ ಮತಭೇದಗಳಿರುತ್ತವೆ, ಆದರೆ ಸುಧಾರಿಸಿದ ರಾಷ್ಟ್ರಗಳಲ್ಲಿ ಪಕ್ಷದ್ವೇಷವು ಇರುವುದಿಲ್ಲ. ನಮ್ಮಲ್ಲಿ ಯಾದರೆ ಭೂಮಿಯಿಂದ ಆಕಾಶದ ವರೆಗೆ ಈ ಪಕ್ಷದ್ವೇಷದ ಕೆಸರೆ ತುಂಬಿಹೋಗಿ ದೇಶವು ಹೀನದೀನ ಸ್ಥಿತಿಯನ್ನು ಹೊಂದಿದೆ. ಈ ಪರಿಸ್ಥಿತಿಯು ಹಿಂದೀ ದೇಶಭಕ್ತನ ಅಂತಃಕರಣವನ್ನು ಸುಡದೆ ಬಿಡಲಿಕ್ಕಿಲ್ಲ.

೩ ಹಿಂದೂಸ್ಥಾನದ ಅಧಿಕಾರಿಗಳು ಪುನಃ ಉಗ್ರಧೋರಣವನ್ನು ಕೈಕೊಳ್ಳಹತ್ತಿದಾರೆಂಬ ಸೂಚನೆಯು ತೋರಹತ್ತಿದೆ [illegible] ಬಹುರು [illegible] ನಮ್ಮ [illegible]

ಕಾಲದಲ್ಲಿ ಸಹಕಾರ್ಯವಿರಬೇಕೆಂದು [illegible] ಸಹಕಾರ್ಯದ [illegible] ಪಡೆಯುವ ಈ ಸಹಕಾರ್ಯದ [illegible] ಜನತೆಯದು ವಿಶ್ವಾಸವು [illegible] ತಮ್ಮ ಸಹಕಾರ್ಯವನ್ನು ನೀಡಬೇಕೆಂದು ಬಾದಶಹರು ಹೇಳುವರು. ಪರಂತು ಹಿಂದೂಸ್ಥಾನದ [illegible] ಅಧಿಕಾರಿಗಳು [illegible] ತ್ತಾರೆಂದು ಹೇಳಲಾಗುವುದಿಲ್ಲ. ಯಾಕೆಂದರೆ ದಿಲ್ಲಿಯತ್ತ ಕಡೆಗೆ ಪ್ರೆಸ್ ಎಕ್ಟು ಪುನಃ ತಲೆ ಎತ್ತಹತ್ತಿದೆ. ದಿಲ್ಲಿಯಲ್ಲಿ ಹರಿಯ ಎಂಬ ಪತ್ರಿಕೆಯಿಂದ ೨ ಸಾವಿರ ರೂಪಾಯಿಯ ಜಾಮೀನನ್ನು ಅಲ್ಲಿಯ ಮೆಜಿಸ್ಟ್ರೇಟರು ಕೇಳಿದ್ದಾರೆ. ಅಲ್ಲದೆ ಸಭೆ [illegible] ಲಾಡ್ಡ ಆಗುವ ವಿಷಯದಲ್ಲಿ ಪ್ರತಿಬಂಧಗಳು ಆಗಹತ್ತಿವೆ ಎಂದು ಕೇಳುತ್ತೇವೆ. ಈ ಎಲ್ಲ ಸಂಗತಿಗಳು ನಿಜವಾದ್ದಾದರೆ ಸುಧಾರಣೆಯು ಉದಯಿಸುವ ಈ ಮಂಗಲ ಪ್ರಸಂಗದಲ್ಲಿ ಇಂಥ ಉಗ್ರ ಧೋರಣವು ನ್ಯಾಯವೇ? ಒಂದು ವೇಳೆ ಸದರಿ ಪತ್ರಿಕೆಯ ಲೇಖವು ಆಕ್ಷೇಪಕರವಾಗಿ (ಮೇಜಿಸ್ಟ್ರೇಟರಿಗೆ ಆಕ್ಷೇಪಕರ, ನ್ಯಾಯಾಸನದ ಮುಂದೆ ಬಂದು ಆಕ್ಷೇಪಕರವಾಗಿಲ್ಲ) ತೋರಿದ್ದಾದರೂ ಅದಕ್ಕೆ ಇಂಥ ಉಗ್ರಶಾಸನವು ಈ ಸಮಯದಲ್ಲಿ ಉಚಿತವಲ್ಲ. ಆದರೆ ಅಧಿಕಾರಿಗಳೇ ಸರ್ವಸಮರ್ಥರಾದ ಮೇಲೆ ಯಾರ ಕಿವಿಗೆ ಈ ದಯಾಶಾಂತಿಪಾಠವನ್ನು ಕೇಳಿಸಬೇಕು!

೪. ಮಹಾತ್ಮಾ ಗಾಂಧಿಗಳು ಆತ್ಮಿಕ ಬಲವಾದ ಸತ್ಯಾಗ್ರಹದ ವ್ರತವನ್ನು ಕೈಕೊಂಡವರು. ಈ ಸಂಗತಿಯು ಲೋಕ ಪ್ರಸಿದ್ಧವಾದ್ದು. ಹಾಗು ಅವರು ಸ್ವದೇಶಿ ವ್ರತವನ್ನು ಸ್ವತಃ ಆಚರಿಸಿ ಹಿಂದೂಸ್ಥಾನದಲ್ಲಿ ಅದರ ಸಂಪೂರ್ಣ ಪ್ರಸಾರಕ್ಕಾಗಿ ಸ್ವದೇಶಿ ತತ್ವಗಳನ್ನು ಉಪದೇಶಿಸುತ್ತಿದ್ದಾರೆ. ಅವರು ರಾಷ್ಟ್ರೀಯ ಸಭೆಯ ಕಡು ಅನುಯಾಯಿಗಳು. ರಾಷ್ಟ್ರೀಯ ಸಭೆಯು ಕೇಳುತ್ತಿರುವ ಸ್ವರಾಜ್ಯದ ಹಕ್ಕು ಗಾಂಧಿಗಳಿಗೆ ಮಾನ್ಯವಾದ್ದು. ಸಾರಾಂಶ ಈ ಮೇರೆಗೆ ಸತ್ಯಾಗ್ರಹ, ಸ್ವದೇಶಿ, ಸ್ವರಾಜ್ಯ ಮೊದಲಾದ ದೇಶಹಿತದ ಉತ್ಕೃಷ್ಟ ತತ್ವಗಳನ್ನು ವಾದಿಸುವ ಮಹಾತ್ಮರಾದ ಗಾಂಧಿಗಳು ಸ್ವರಾಜ್ಯ ಸಂಘಕ್ಕೆ 'ಹೋಮ್ ರೂಲ್ ಲೀಗ್'ಗೆ ಯಾಕೆ ಸೇರಲಿಲ್ಲ ಎಂಬುದು ಅನೇಕರಿಗೆ ತೋರುತ್ತಿತ್ತು. ಗಾಂಧಿಗಳು ಸ್ವರಾಜ್ಯವಾದಿಗಳಾದ ಬಳಿಕ ಅದೇ ಉದ್ದೇಶದಿಂದ ಹೊರಟ ಸಂಘಕ್ಕೆ ಮಾತ್ರ ಯಾಕೆ ಕೂಡಬಾರದು ಎಂಬ ಪ್ರಶ್ನೆಯು ಬರುತ್ತಿತ್ತು. ಪರಂತು ಅವರು ಕಳೆದ ವಾರ "ಓಲ್ ಇಂಡಿಯಾ ಹೋಮ್ ರೂಲ್ ಲೀಗ್" (ಮಿಸೆಸ್ ಎನಿಬೆಝೆಂಟರು ಪ್ರಥಮತಃ ಸ್ಥಾಪಿಸಿದ, ಪರಂತು ಈಚೆಗೆ ಬಿಟ್ಟಿರುವ) ಈ ಸಂಸ್ಥೆಗೆ ಸೇರಿ ಜನರ ಮೇಲಿನ ಸಂಶಯವನ್ನು ಕಿಂಬಹುನಾ ಆಕ್ಷೇಪವನ್ನು ತಳ್ಳಿಹಾಕಿದ್ದಾರೆಂದು ಹೇಳಬಹುದು. ಅವರು ಸದರಿ ಸಂಸ್ಥೆಗೆ ಸೇರಿದ್ದಾರೆ ಮಾತ್ರವಲ್ಲ, ಅದರ ಅಧ್ಯಕ್ಷಸ್ಥಾನವನ್ನು ಕೂಡ ಅಂಗೀಕರಿಸಿದ್ದಾರೆ ಎಂಬದನ್ನು ತಿಳಿಸಲು ನಮಗೆ ತುಂಬಾ ಸಂತೋಷವಾಗುತ್ತದೆ. ಗಾಂಧಿಗಳು ಆತ್ಮಿಕ ಬಲದಲ್ಲಿ ಸಂಪೂರ್ಣ ಪ್ರತ್ಯಯವುಳ್ಳವರು. ವಸಿಷ್ಠರಂತೆ ಅತಿ ಸಮಾಹಿತರು. ಈ ವಿಷಯವನ್ನು ಈ ಹೊತ್ತು ಯಾರಿಗೂ ಹೇಳಬೇಕಾದ ಅವಶ್ಯವಿಲ್ಲ. ಮತ್ತು ಇದೇ ಕಾರಣದಿಂದ ಅವರು 'ಹೋಮ್ ರೂಲಿನ ಸಭಾಸದರು ಸಿವಿಲ್ ಕಾನೂನುಗಳನ್ನು ಅತಿಕ್ರಮಿಸುವ ಅಗತ್ಯವಿಲ್ಲ'ವೆಂದು ಹೇಳಿರುವರು. ಅದರೂ ಈ ಲೀಗಿನ ಪರವಾಗಿ ಮಹಾತ್ಮ ಗಾಂಧಿಗಳು ರೂಪಿಸಿಕೊಂಡಿರುವ ಕಾರ್ಯಕ್ರಮಗಳು ಯಾವವೆಂದರೆ, ಸ್ವದೇಶಿವಸ್ತುಗಳ ಪ್ರಚಾರ, ಖಿಲಾಫತಿನ ಬಗ್ಗೆ ಹಿಂದುಮುಸಲ್ಮಾನರ ಐಕ್ಯ, ಹಿಂದುಸ್ಥಾನಿಯನ್ನು ರಾಷ್ಟ್ರೀಯ ಭಾಷೆಯನ್ನಾಗಿ ಅಂಗೀಕರಿಸುವುದು, ಹಾಗು ಭಾಷಾನುರೂಪವಾಗಿ ಪ್ರಾಂತ ವಿಭಾಗಗಳ ಬಗ್ಗೆ ಚಳವಳಿ ಮಾಡುವುದು. ವಸಿಷ್ಠತುಲ್ಯರಾದ ಗಾಂಧಿಗಳ ಧುರೀಣತನದಲ್ಲಿ ಈ ಹಳೆ ಹೋಮ್ ರೂಲ್ ಲೀಗು ಹೊಸ ಚೈತನ್ಯವನ್ನು ಪಡೆದು ಹಿಂದೀ ಸ್ವರಾಜ್ಯ ಮುಂದಿರದ ಒಂದು ಕಡೆಯ ಗೋಡೆಯನ್ನಾದರೂ ನಿಲ್ಲಿಸಲೆಂದು ಕೋರುತ್ತೇವೆ.

೫. ಹಂಟರ ಕಮಿಟಿಯ ರಿಪೋರ್ಟು ಬೆಳಕಿಗೆ ಬರುವ ಸಮಯಕ್ಕೆ ಅದು ಹೊರಬೀಳುವುದಕ್ಕಿಂತ ಮುಂಚಿತವಾಗಿಯೆ ಅದರ ಸ್ವರೂಪವು ಸಾಮಾನ್ಯವಾಗಿ ಹೀಗೆಯೇ ಇರಬಹುದೆಂದು ಹಲವರು ಊಹಿಸುತ್ತಿದ್ದಾರೆ. ಈ ಪರಿಯಾಗಿ ಊಹಿಸುವವರಲ್ಲಿ ಸುಪ್ರಸಿದ್ಧ ಲೇಖಕರಾದ ಸಂಟ್ ನಿಹಾಲಸಿಂಗ ಎಂಬವರು ಕೆಲವು ಊಹನಗಳನ್ನು ವಿಲಾಯತಿಯ ಒಂದು ಪತ್ರಿಕೆಯಲ್ಲಿ (ಕಾರಣ, ಅವರು ಅಲ್ಲಿಯೆ ಇರುವುದು.) ಪ್ರಕಟಿಸಿದ್ದಾರೆ. ಜನರಲ್ ಡಾಯರರನ್ನು ಬಹುಮತವು ನಿರ್ದೋಷಿಮಾಡಿರಬಹುದೆಂದು ನಿಹಾಲಸಿಂಗರ ಊಹನೆ ಇದೆ. ವಿಮಾನಗಳಲ್ಲಿ ಕುಳಿತು ಗುಂಡು ಅಥವಾ ಬೊಂಬು ಒಗಾಯಿಸಿದ ವಿಷಯವು ಕಮಿಟಿಯೊಳಗಿನ ಬಹುಮತದ ದೃಷ್ಟಿಯಿಂದ ಅಪರಾಧವಾಗುವ ಸಂಭವವು ತೋರುವುದಿಲ್ಲ. ಲಷ್ಕರಿ ಧೋರಣದ ಅವಶ್ಯಕತೆಯಂತೆ ಈ ಕೃತ್ಯವನ್ನು ಕಮಿಟಿಯೊಳಗಿನ ಬಹುಪಕ್ಷವು ಸಮರ್ಥಿಸುವ ದಾರಿಯಲ್ಲಿ ಇರಬಹುದು. ಪರಂತು ಕಮಿಟಿಯೊಳಗಿನ ಹಿಂದೀ ಸಭಾಸದರು ಅಶಸ್ತ್ರ ಪ್ರಜೆಯ ಮೇಲೆ ಮೇಲಿನಿಂದ ಗುಂಡು ಹಾಕಿದ್ದನ್ನು ತೀವ್ರವಾಗಿ ನಿಷೇಧಿಸಿದ್ದಾರೆ ಎಂದು ಲೇಖಕರು ಅಭಿಪ್ರಾಯಪಡುವರು. ಇದೇ ಮೇರೆಗೆ ಲಷ್ಕರಿ ಕಾನೂನಿನ ಸಂಬಂಧವಾಗಿ ಕಮಿಟಿಯ ಬಹುಮತವು ಲೋಕಮತವನ್ನು [illegible] ಇರಲಿ, ಕಮಿಟಿಯ ರಿಪೋರ್ಟು ತನ್ನ ಸ್ವಂತ ಸ್ವರೂಪದಿಂದ ಬೆಳಕಿಗೆ ಹೊರಬೀಳುವದಿರುವುದರಿಂದ ಪರದೆಯೊಳಗಿನಿಂದ ಹೌದೋ ಅಲ್ಲವೋ ಎಂಬಂತೆ ಅಸ್ಪಷ್ಟವಾಗಿ ದೃಶ್ಯವಾಗುವ ಈ ಚಿತ್ರವನ್ನು ಕುರಿತು ನಾವು ಯಾಕೆ ಹೆಚ್ಚಿಗೆ ಆಲೋಚಿಸೋಣ?

೬. ಲಾಹೋರಿನಲ್ಲಿ ರೈಲಿನ ಕೆಲಸದವರು ಮುಷ್ಕರವನ್ನು ಹಾಕಿದ್ದರು. ಇವರನ್ನೂ, ಇವರ ಕೇಳಿಕೆಗಳನ್ನೂ ಕುರಿತು ದೂಷಿಸಿ ಅಲ್ಲಿಯ ಸಿವಿಲ್ ಎಂಡ್ ಮಿಲಿಟರಿ ಗೆಝೆಟ್ ಎಂಬ ಪತ್ರಿಕೆಯು ಒಂದು ಅಗ್ರಲೇಖವನ್ನು ಬರೆಯಿತು. ರೈಲ್ವೆ ಕಾಮಗಾರರನ್ನು ಈ ವಿಧವಾಗಿ ದೂಷಿಸಿದ್ದು ಸದರಿ ಪತ್ರಿಕೆಯ ಪ್ರೆಸಿನ ಕೆಲಸದವರಿಗೆ ರುಚಿಸದೆ ಅವರು ತಮ್ಮ ನಿಷೇಧವನ್ನು ವ್ಯಕ್ತಗೊಳಿಸುವುದಕ್ಕಾಗಿ ಸದರಿ ಪ್ರೆಸಿನ ಮೆನೆಜರರಿಗೆ ನೋಟೀಸು ಕೊಟ್ಟು ಕೂಡಲೇ ಎಲ್ಲರು ಕೆಲಸದಿಂದ ನಿವೃತ್ತರಾದರು ಎಂದರೆ ಹೊರಗಿನ ಮುಷ್ಕರವು ಖುದ್ದ ಪ್ರೆಸಿನಲ್ಲಿ ಬಂದಂತಾಯಿತು! ಕೊನೆಗೆ ಮನೆಜ್‌ಮೆಂಟಿಗೂ ಪ್ರೆಸ್ ನೌಕರರಿಗೂ ಮುಖ ಭೇಟಿಯಾಗಿ ಅವರ ಕೆಲವು ಶರ್ತಗಳನ್ನು ಮ್ಯಾನೆಜಮೆಂಟು ಒಪ್ಪಿಕೊಂಡಿದ್ದರಿಂದ ಪುನಃ ಎಲ್ಲರು ಪೂರ್ವವತ್ ಕೆಲಸಕ್ಕೆ ಬಂದಿದ್ದಾರೆ.

೭. ಧಾರವಾಡದಲ್ಲಿ ಈ ತಿಂಗಳ ತಾ. ೧೬, ೧೭, ೧೮ರಲ್ಲಿ ಜರಗತಕ್ಕ ಕರ್ಣಾಟಕ ಪರಿಷತ್ತಿಗೆ ಇಲ್ಲಿಂದ ಪ್ರತಿನಿಧಿಗಳು ಇನ್ನೂ ಹೆಚ್ಚು ಹೋಗಬೇಕಿತ್ತು. ರಾಷ್ಟ್ರೀಯ ಸಭೆ, ಪ್ರಾಂತಿಕ ಸಭೆ ಮುಂತಾದ್ದರಲ್ಲಂತೂ ನಮ್ಮ ಮಂಗಳೂರು ಪ್ರವೇಶಿಸುವುದು ಕಡಿಮೆಯೆ. ಪರಂತು ಖುದ್ದ ಕರ್ಣಾಟಕದ ವಿಷಯವಾಗಿ ನೆರವೇರತಕ್ಕ ಪರಿಷತ್ತಿನ ವಿಷಯದಲ್ಲೂ ಇಷ್ಟರ ಮಟ್ಟಿನ ಮಂದಾದರವನ್ನು ಅದು ಹಿಡಿದಿರುವುದು; ಇದು ಸುಲಕ್ಷಣವಲ್ಲ. ಆತ್ಮನಿಂದೆಯು ಆತ್ಮಸ್ತುತಿಯಂತೆ ಶ್ಲಾಘ್ಯವಲ್ಲ. ಆದ್ದರಿಂದ ಈ ವಿಷಯವನ್ನು ಇಲ್ಲಿಯೇ ಬಿಡಬೇಕಾಗುತ್ತದೆ.

೮. ಹಿಂದುಸ್ಥಾನದಲ್ಲಿ ಎಲ್ಲ ಕಡೆಯಲ್ಲಿ ಆಚರಿಸಿದಂತೆ ಇಂಗ್ಲಂಡಿನಲ್ಲೂ 'ಅಮೃತಸರ ದಿನ'ವು ಆಚರಿಸಲ್ಪಟ್ಟಿತೆಂದು ಅಲ್ಲಿಯ ಬಾತಮಿ ಪತ್ರಗಳಿಂದ ಗೊತ್ತಾಗುತ್ತದೆ. ಇಂಗ್ಲಂಡಿನಲ್ಲಿರುವ ಬ್ರಿಟಿಷ್ ಕೊಂಗ್ರೆಸ್ ಕಮಿಟಿಯು ಆ ದಿನ ಸಭೆ ಸೇರಿಸಿ ಕಳೆದ ವರ್ಷ ಒಡ್ವಾಯರ ದೊರೆಗಳ ಆಡಳಿತೆಯಲ್ಲಿ ಘಟಿಸಿದ ಪಂಜಾಬ ಅನರ್ಥದ ವಿಷಯವಾಗಿ ತನ್ನ ತೀವ್ರ ನಿಷೇಧವನ್ನು ವ್ಯಕ್ತಗೊಳಿಸಿದೆ. ಇದೇ ಪ್ರಕಾರ ಹಿಂದುಸ್ಥಾನದ ಬಗ್ಗೆ ಸಹಾನುಭೂತಿಯನ್ನು ಪಡುವ ದೈನಿಕ ಪತ್ರಿಕೆಗಳು ಈ ವಿಷಯದ ಮೇಲೆ ಅಗ್ರಲೇಖವನ್ನು ಬರೆದು ಅಮೃತಸರಿನಲ್ಲಿ ನಡಿಸಿದ ಅತ್ಯಾಚಾರದ ಸ್ಮರಣವಿರುವ ತನಕ ಜನರಿಗೆ ಮನಸ್ಸಿನಲ್ಲಿ ಹಿಂದುಸ್ಥಾನದ ಅಧಿಕಾರಿಗಳ ಮೇಲೆ ಒಳ್ಳೇ ಅಭಿಪ್ರಾಯ ಉಂಟಾಗುವುದು ಬಹು ಕಷ್ಟವೆಂದು ಪ್ರತಿಪಾದಿಸಿದ್ದಾವೆ. ಅಲ್ಲದೆ, ಪಂಜಾಬಿನ ಅಧಿಕಾರಿಗಳು (ಈ ಅತ್ಯಾಚಾರವನ್ನು ಪ್ರವರ್ತಿಸಿದ ಅಧಿಕಾರಿಗಳು) ಬ್ರಿಟಿಷ್ ಸಾಮ್ರಾಜ್ಯದ ಧವಲಕೀರ್ತಿಯ ಮೇಲೆ ಈ ಅತ್ಯಾಚಾರಗಳ ಬೊಟ್ಟನ್ನು ಹಚ್ಚಿದ್ದು ಶೋಚನೀಯವಾಗಿದೆ ಎಂದು ಆ ಪತ್ರಿಕೆಗಳು ಅಭಿಪ್ರಾಯ ಪಡುತಿದ್ದಾವೆ. ವಿಲಾಯತಿಯಲ್ಲಿ ಈ ತರದ ನಿಷ್ಪಕ್ಷಪಾತವಾದ ವಿಚಾರಗಳು ಹಬ್ಬುವುದು ಹಿಂದುಸ್ಥಾನದ ಸುದೈವವೆಂದೆ ತಿಳಿಯಬೇಕು, ಮತ್ತು ಅಂಥ ವಿಚಾರಗಳು ಅಲ್ಲಿ ಹಬ್ಬುವುದು ಆಶ್ಚರ್ಯವಲ್ಲ. ಕಾರಣ, ಬ್ರಿಟಿಷ್ ಜನಾಂಗವು ನಿಜವಾಗಿ ನ್ಯಾಯ ನೀತಿಪ್ರಿಯವಾದ್ದು. ಕೆಲವು ಅಧಿಕಾರಿಗಳು ದುಡುಕು ಸ್ವಭಾವದವರಾದರೂ ಅಲ್ಲಿಯ ಶುದ್ಧ ವಾತಾವರಣದಲ್ಲಿ ಸದ್ವಿಚಾರಗಳೂ, ಸದಾ ಕಾಂಕ್ಷೆಯೂ ಇವೇ ಪಸರಿಸಿಕೊಂಡಿರುತ್ತವೆ. ಅವುಗಳನ್ನು ಒತ್ತಿಬಿಡಲು ಯಾರಾದರೂ ಯತ್ನಿಸಿದರೆ ಅದು ಎಂದೂ ಸಫಲವಾಗಲಿಕ್ಕಿಲ್ಲ.

ಮಂಗಳೂರು.

ಧಾರವಾಡದ ಮೊದಲನೆಯ ಕರ್ಣಾಟಕ ಪರಿಷತ್ತಿಗೆ ಇಲ್ಲಿಂದ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಲು ಸೇರಿದ್ದ ಸಭೆಯಿಂದ ಮ| ರಾ| ರಾ| ಕಾರ್ನಾಡ ಸದಾಶಿವ ರಾವ್ ಬಿ. ಎ., ಎಲ್. ಎಲ್. ಬಿ; ವೆ. ಶಾ. ಸ. ಒಡ್ಡಮನೆ ಆತ್ಮರಾಮ ಶಾಸ್ತ್ರೀ ವಿದ್ಯಾವಾಚಸ್ಪತಿ; ರಾ| ಅರಬೈಲು ಭೋಜರಾವ್; ರಾ| ದತ್ತಾತ್ರೇಯ ಕೃಷ್ಣ ಭಾರದ್ವಾಜ ವಿದ್ಯಾಭೂಷಣ ಇವರುಗಳು ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟಿರುವರು.

ಕಳೆದ ತಾ 2ನೇ ಆದಿತ್ಯವಾರ ಜರಗಲಿಕ್ಕಿರುವ ಡಿಸ್ಟ್ರಿಕ್ಟ ಎಸೋಸಿಯೇಶನಿನ ಅಧಿವೇಶನವು ಇದೇ ಬರುವ ತಾ. 23ರಲ್ಲು ಅಥವಾ ೩೦ರಲ್ಲು ಕೂಡಬೇಕಾಗಿ ಮುಂದರಿಸಲಾಗಿದೆ. ನಿಶ್ಚಿತವಾದ ದಿನವು ಮುಂದಕ್ಕೆ ಪ್ರಕಟಿಸಲಾಗುವುದು. ಜಿಲ್ಲೆಯೊಳಗಿನ ಕಾಡು ಸಂಬಂಧದ ಸಂಕಷ್ಟಗಳು ಯಾವ ತರದಲ್ಲಿ ನಿವಾರಣೆ ಮಾಡಬಹುದು ಎಂಬುದನ್ನು ಕುರಿತು ಜಿಲ್ಲಾ ಕಲೆಕ್ಟರರು ಒಂದು ಯೋಜನೆಯನ್ನು ತಯಾರಿಸಿರುವರು. ಈ ಯೋಜನೆಯ ಮೇಲೆ ಡಿಸ್ಟ್ರಿಕ್ಟ ಎಸೋಸಿಯೇಶನಿನ ಅಭಿಮತವು ಹೇಗಿರುವುದೆಂಬದನ್ನು ಕಲೆಕ್ಟರರು ಸದರಿ ಸಂಸ್ಥೆಗೆ ಕೇಳಿರುತ್ತಾರೆ.

ಕಲೆಕ್ಟರ್ ದೊರೆಗಳು ಕೇಳಿದ ಮೇಲಿನ ಪ್ರಶ್ನೆಗೆ ಉತ್ತರವನ್ನು ಕೊಡಲು ಅನುಕೂಲವಾಗುವಂತೆ ಡಿಸ್ಟ್ರಿಕ್ಟ ಎಸೋಸಿಯೇಶನಿನ ಸೆಕ್ರೆಟರಿಗಳಾದ ಮ| ಾ| ರಾ| ಕಾರ್ನಾಡ ಸದಾಶಿವರಾಯರು ಜಿಲ್ಲೆಯ ಮುಖಂಡ ಜಮೀನುದಾರರಿಗೂ, ರೈತರಿಗೂ ಕೆಳಗಿನ ವಿಜ್ಞಾಪನ ಮಾಡಿದ್ದಾರೆ:-

"ಕಾಡುಗಳ ಸಂಬಂಧವಾಗಿ ಈಗಿರುವ ಸರಕಾರಿ ನಿಬಂಧನೆಗಳಿಂದ ಯಾವ ತರದ ಸಂಕಷ್ಟಗಳನ್ನು ಅನುಭವಿಸಬೇಕಾಗಿದೆ. ಮತ್ತು ಈ ಅಡಚಣೆಗಳ ನಿವಾರಣೆಯನ್ನು ಕುರಿತು ತಮಗೆ ಯುಕ್ತ ತೋರುವ ಸಲಹೆಗಳನ್ನು ದಯವಿಟ್ಟು ಎರಡು ಹಪ್ತೆಯೊಳಗೆ ನನಗೆ ತಿಳಿಸಬೇಕು."

ಕಳೆದ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಮ| ರಾ| ರಾ| ಬಡಿಲ ಪೂವಯ್ಯಗಳು ಕಾಲಾಧೀನರಾದರೆಂಬ ವಾರ್ತೆಯನ್ನು ತಿಳಿಸಲು ತುಂಬಾ ದುಃಖ ಪಡುತ್ತೇವೆ. ಇವರ ಆತ್ಮಕ್ಕೆ ಶಾಂತಿಯನ್ನು ಬಯಸಿ ಈ ಮೂಲಕ ವ್ಯಥಿತರಾದ ಇವರ ಕುಟುಂಬಕ್ಕೆ ನಮ್ಮ ಸಂತಾಪವನ್ನು ಸೂಚಿಸುತ್ತೇವೆ. ಈ ಮಹನೀಯರನ್ನು ಕುರಿತು ನಮ್ಮ ಬಾತ್ಮಿದಾರರು ಬರೆದ ವಾರ್ತೆಯನ್ನು ಇನ್ನೊಂದು ಕಡೆಯಲ್ಲಿ ಪ್ರಕಟಿಸಿದ್ದೇವೆ.

ಅಮುದಾಲವಲಸಾ ಎಂಬಲ್ಲಿಂದ ಪಾಲಕೊಂಡ ಎಂಬಲ್ಲಿಗೆ ಮುಟ್ಟಬೇಕಾದ ಕೆಲವು ಟಪ್ಪಾಲ ಚೀಲಗಳು ಕಳೆದ ಏಪ್ರಿಲ್ ತಾ. ೮ರಲ್ಲಿ ಕಳವಾಗಿವೆ. ಈ ಕಳವಿನ ಶೋಧವಮಾಡಿ ತಪ್ಪುಗಾರರನ್ನು ಹುಡುಕಿ ಕೊಟ್ಟವರಿಗೆ ರೂ. ೫೦ ಬಹುಮಾನವಾಗಿ ಕೊಡಲ್ಪಡುವುದಾಗಿ ಟಪ್ಪಾಲ ಇಲಾಖೆಯವರು ಪ್ರಕಟಿಸುತ್ತಾರೆ.

ಈ ಜಿಲ್ಲೆಯಿಂದ ಜಲಿಯನ್ ವಾಲಾಬಾಗ್ ಫಂಡಿಗೆ ವಂತಿಗೆಯಾದ ಮೊಬಲಗಿನ ಪೈಕಿ ರೂ. ೨೦೦ ಮೊದಲನೇ ಕಂತಾಗಿ ಮದರಾಸಿನ ಸತ್ಯಾಗ್ರಹಸಭೆಯ ಕಾರ್ಯದರ್ಶಿಗಳ ಬಳಿಗೆ ರವಾನಿಸಿದ್ದಾಗಿಯೂ, ಈಗ ಈ ಫಂಡಿಗೆ ಮ| ರಾ| ಗಳಾದ ಹಲಸನಾಡ ಮಾದಪ್ಪಯ್ಯನವರು ರೂ. ೫ ಮತ್ತು ಮುಲ್ಕಿ ರಾಮಣ್ಣ ಶೆಟ್ರು ರೂ. ೧ ಕಳುಹಿಸಿದ್ದು ತನಗೆ ತಲ್ಪಿದೆಯಾಗಿಯೂ, ಈ ಫಂಡಿಗೆ ವಂತಿಗೆಯನ್ನು ಕೊಡಲು ಬಾಕಿ ಉಳಿದ ಗೃಹಸ್ಥರು ತಮ್ಮ ವಂತಿಗೆ ಹಣವನ್ನು ತ್ವರೆಯಲ್ಲಿ ಮುಟ್ಟಿಸಬೇಕಾಗಿ ರಾ| ಕಾರ್ನಾಡ ಸದಾಶಿವ ರಾಯರು ಅಪೇಕ್ಷಿಸುತ್ತಾರಾಗಿಯೂ ತಿಳಿಸುತ್ತೇವೆ.

ಅಯಾಯ ಜಿಲ್ಲೆಗಳಲ್ಲಿಯ ಹೆದ್ದಾರಿಗಳ ಖರ್ಚನ್ನು ಲೋಕಲ್ ಬೋರ್ಡಿನವರಿಂದ ತಪ್ಪಿಸಿ ಪ್ರಾಂತಿಕ ಸರಕಾರದವರು ತಾವು ವಹಿಸಿಕೊಳ್ಳುತ್ತೇವೆಂದು ನ್ಯಾಯವಿಧಾಯಕ ಸಭೆಯ ಕಳೆದ ಅಧಿವೇಶನದಲ್ಲಿ ಹೇಳಿದ ಮೇರೆಗೆ ನಮ್ಮ ಜಿಲ್ಲೆಯ ಪೈಕಿ ಮಂಗಳೂರು ಮಡಿಕೇರಿ ರಸ್ತೆಯ ಖರ್ಚನ್ನು ಮದ್ರಾಸು ಸರಕಾರದವರು ವಹಿಸಿಕೊಂಡಿದ್ದಾರೆ. ಈ ರಸ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಒಳ್ಳೇ ಸ್ಥಿತಿಗೆ ತರುವುದಕ್ಕೆ ಮೈಲಿಗೆ 500 ರೂಪಾಯಿಗೆ ವಿಾರದಷ್ಟು ಖರ್ಚನ್ನು ಸರಕಾರದವರು ಕೊಡಲಿಕ್ಕಿರುವರು.

ಪ್ರತ್ತೂರು ತಾಲ್ಲೂ ಬೋರ್ಡಿಗೆ ಕಾಸರಗೋಡು ಇಲಕ್ಟೋರಲ್ ಸರ್ಕಲಿನಿಂದ ಆಗತಕ್ಕ ಒಬ್ಬ ಮೆಂಬರರ ಚುನಾವಣೆಗೆ ಮ. ರಾ. ರಾ. ಗೋಪಾಳ ಕೃಷ್ಣಪೈಯವರು, ಮ. ರಾ. ರಾ. ಯಚ್ ಶ್ರೀನಿವಾಸ ಕಾಮತರು ಮತ್ತು ಮ. ರಾ. ರಾ. ಪಿ. ಆನಂದರಾಯರು ಉಮೇದ್ವಾರರಾಗಿ ನಿಂತಿರುವರು. ಚುನಾವಣೆಯು ಬರುವ ತಾ. 7ಕ್ಕೆ ಕಾಸರಗೋಡಿನಲ್ಲಿ ನಡಿಯಲಿಕ್ಕಿರುವುದು.

ಪ್ರೊಫೆಸ್ಸರ್ ಚಿಫ್ ಕನ್ಸರ್ವೇಟರರಾದ ಮಿ. ಫೊಕ್ಸ್ ದೊರೆಗಳವರು ತಾ. ೪ರಲ್ಲು ಮಂಗಳೂರಿಗೆ ಬರಲಿಕ್ಕಿರುವದಾಗಿ ತಿಳಿಯುತ್ತೇವೆ.

ಲೆಂಡ್ ರಿಕೋರ್ಡು ತಹಶಿಲ್ದಾರರಾದ ಮ. ರಾ. ಕೆ. ಪಿ. ಕಿಣಿಯವರು ಇದೇ ಬರುವ ತಾ 10ರಿಂದ 1 ತಿಂಗಳು 21 ದಿನಗಳ ಪ್ರಿವಿಲೆಜ್ ರಜೆಯನ್ನು ಪಡೆಯುವರು. ಇವರ ರಜಾ ಕಾಲದಲ್ಲಿ ಈ ಹುದ್ದೆಯನ್ನು ಕಾರ್ಕಳದ ಸ್ಟೇಶನರಿ ಸಬ್ ಮೆಜಿಸ್ಟ್ರೇಟರರಾದ ಮ. ರಾ. ಪಿ. ಮಹಾಬಲೇಶ್ವರಯ್ಯನವರು ನೋಡಬೇಕಾಗಿದೆ. ಮತ್ತು ಕಾರ್ಕಳದ ಸ್ಟೇಶನರಿ ಸಬ್ ಮೇಜಿಸ್ಟ್ರೆಟ್ ಚಾರ್ಜನ್ನು ಹಜೂರ್ ಕಚೇರಿಯ ಮೊದಲನೇ ಕರಸ್ಪೋಂಡೆನ್ಸ್ ಕ್ಲಾರ್ಕರಾದ ಮ. ರಾ. ಜಿ. ದತ್ತಾತ್ರಿಯರಾಯರು ವಹಿಸಿಕೊಳ್ಳ ಬೇಕಾಗಿ ಹುಕುಂ ಆಗಿದೆ.

ನಾಳೆ ಬೆಳಗ್ಯೆ 8 ಘಂಟೆಗೆ ಇಲ್ಲಿಯ ಥಿಯೋಸೋಫಿಕಲ್ ಸೊಸೈಟಿಯ ಮಂದಿರದಲ್ಲಿ 'ದಿ ವ್ಹೈಟ್ ಲೋಟಸ್ ಡೇ' ಎಂಬ ದಿನಾಚರಣೆಯು ಮ. ರಾ. ಬೆನೆಗಲ್ ಸಂಜೀವರಾವ್ ಎಮ್. ಎ. ಇವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಡುವುದು. ಸರ್ವರಿಗೂ ಸುಸ್ವಾಗತವಿದೆ.

ಇಲ್ಲಿಯ ಮಹಿಳಾ ಸಭೆಯವರು ಮಂಗಳೂರ ಶಹರಿನ ಭಿನ್ನ ಜಾತಿಯ ಸ್ತ್ರೀಯರಲ್ಲಿ ಐಕ್ಯಮತ್ಯ ಮತ್ತು ಪರಸ್ಪರ ಪ್ರೇಮದಿಂದ ಕೂಡಿದ ಭಗಿನಿಭಾವ ಉಂಟುಮಾಡುವ ಸಲುವಾಗಿ ಬಾವುಟಗುಡ್ಡೆಯಲ್ಲಿನ ತಮ್ಮ ಮಂದಿರದಲ್ಲಿ ಕಳೆದ ಶನಿವಾರ ಸಾಯಂಕಾಲ 'ಫರ್ದಾಪಾರ್ಟಿಯ' ಸತ್ಕಾರವನ್ನು ನಡಿಸಿದರು. ಸಭೆಯ ಉದ್ದೇಶಕ್ಕೆ ಸರಿಯಾಗಿ ಹಿಂದೂ ಕ್ರಿಶ್ಚನ್ ಹಾಗು ಮಹಮ್ಮದಿಯ ಈ ಮೂರು ವರ್ಗದ ಸ್ತ್ರೀಯರೂ ಕೂಡಿದ್ದರು. ಹೀಗೆ ಮೂರು ಸಮಾಜದ ಮಹಿಳೆಯರು ಒಟ್ಟಿಗೆ ಸೇರಿದ್ದು ಇದು ಮೊದಲನೆಯ ಸಲ. ಕಾರ್ಯಾರಂಭದಲ್ಲಿ ಸಭೆಯ ಮೆಂಬರ ಮತ್ತು ಸಭೆಯ ವಾತ್ಸಲ್ಯವುಳ್ಳ ಸ್ತ್ರೀಯರಿಂದ ಇಂಪಾದ ಗಾಯನವು ಹಾಡಿದ ತರುವಾಯ ಉಪಹಾರ ಸತ್ಕಾರವು ನಡೆಯಿತು. ನಂತರ ಹಾಜರಿದ್ದ ಮಹಮ್ಮದೀಯ ಗೃಹಿಣೀಯರ ಪೈಕಿ ಒಬ್ಬರು ತಮಗೆ ಹಿಂದೂ, ಕ್ರಿಶ್ಚನ್ ಭಗಿನಿಯರೊಂದಿಗೆ ಕೂಡಿಬರುವ ಸುಸಮಯವು ಒದಗಿದ್ದಕ್ಕಾಗಿ ತಮ್ಮ ಸಮಾಜಕ್ಕೆ ಉಂಟಾದ ಆನಂದವನ್ನು ವ್ಯಕ್ತಪಡಿಸಿದ್ದಾಯಿತು. ಕೊನೆಗೆ ಸಭೆಯ ಸೆಕ್ರೆಟರಿಗಳಾದ ಮಿಸೆಸ್ ಲಲಿತಾಬಾಯಿಯವರು ಸಭೆಯ ಆಮಂತ್ರಣವನ್ನು ಅಂಗೀಕರಿಸಿ ಬಂದು, ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದ ಅತಿಥಿಗಳಿಗೆ ವಂದನೆಗಳನ್ನು ಅರ್ಪಿಸಿದ ಬಳಿಕ ಸಭೆಯು ಮುಗಿಯಿತು.

[illegible] ಉತ್ತರಕ್ಕಾಗಿ ವರೆಗೆ ದೂರಹೋಗುವ ಪಕ್ಷಿಗಳು [illegible] ಪದ್ಧತಿಗಳ [illegible] ಹಳ್ಳಿ ಪಂಚಾಯಿತರ ವಶದಿಂದ ತೀರ್ಮಾನದಲ್ಲಿಯೆ [illegible] ಹೀಗಾಗಿ ಗ್ರಾಮದ ಸಂಪೂರ್ಣ ಅಧಿಕಾರವು ಗ್ರಾಮದ [illegible] ಅವರಲ್ಲಿ ಒಬ್ಬನು ಪಟೇಲ ಅಥವಾ [illegible]

[illegible] ಅನಾದಿಯಿಂದಲೂ ನಡೆದು ಬಂದ ಕ್ರಮವಾಗಿದ್ದು ಒಂದು ವಂಶದ [illegible] ವಂಶಕ್ಕೆ ರಾಜ್ಯ ಕೈ ಸೇರಿದಾಗಲೂ ಇದರಲ್ಲಿ ವ್ಯತ್ಯಸ್ತ [illegible] 'ಯಾವ ಮಹಾರಾಜರು ಬಿದ್ದರೆ ಶಾನಭಾಗನ......ಹೋಯಿತು' ಎಂಬ ಗಾದೆಯಿಂದಲೂ ಇದೇ ಅಭಿಪ್ರಾಯವು ಸ್ಪಷ್ಟವಾಗುತ್ತದೆ. ಗ್ರಾಮದ ಅಧಿಕಾರವು [illegible] ಒಳಗಾಗಿದ್ದರೂ ರಾಜನ ಮುಖ್ಯಾಧಿಗಳು ಅದರಲ್ಲಿ ವಿಶೇಷ ಕೈಹಾಕದೆ ಕಂದಾಯ ವಸೂಲಿಯನ್ನು ಮಾತ್ರ ನೋಡಿಕೊಂಡು ಗ್ರಾಮದ ಸಕಲ ವಹಿವಾಟನ್ನು ಆಯಾ ಗ್ರಾಮದ ಪಂಚಾಯತರಿಗೇನೇ ಬಿಟ್ಟು ಕೊಟ್ಟಿದ್ದರು ಎಂಬುದು ನಿರ್ವಿವಾದ.

ಈ ಪಂಚಾಯತರ ಅಧೀನವಾಗಿದ್ದು [illegible] ಯುವ ಶ್ಯಾನುಭೋಗ, ಗ್ರಾಮದ ವಸೂಲಿಯ ಮನೆಗಾರ, ಗ್ರಾಮದ ತಳವಾರ ಇವರಿಗೂ ರಾಜಸ್ಥಾನದಿಂದ ಇದೇ ಬಗೆಯ ಉತ್ತಾರವು ಸಿಕ್ಕಿದ ದೃಷ್ಟಾಂತಗಳೂ ಇವೆ. ದಕ್ಷಿಣ ಮಹಾರಾಷ್ಟ್ರ ಸೀಮೆಯಲ್ಲಿ ಕುಳಕರ್ಣಿ ಮುಂತಾದವು ಪಾರಂಪರ್ಯವಾಗಿ ನಡೆದು ಬಂದ ಹುದ್ದೆಗಳು; ಅದಲ್ಲದೆ ರಾಜರ ಮುಖ್ಯಾಧಿಗಳು ಸವಾರಿ ಬಂದಾಗ ಅವರಿಗೆ ಕ್ಷೌರ ಮಾಡುವುದಕ್ಕೆ, ಬಟ್ಟೆ ಒಗೆಯುವುದಕ್ಕೆ, ಕಟ್ಟಿಗೆ ಒದಗಿಸಲಿಕ್ಕೆ ಗ್ರಾಮದ ಕೆಲವು ಕುಟುಂಬಗಳು ಸಿದ್ಧವಾಗಿರಬೇಕಿತ್ತು. ಈ ಕೆಲಸಕ್ಕೋಸ್ಕರ ಅವರಿಗೆ ತೀರ್ವೆ ಮಾಫಿಯಿಂದ ಅಥವಾ ಕಡಿಮೆ ತೀರ್ವೆಯಿಂದ ಬಿಟ್ಟುಕೊಟ್ಟ ಇನಾಮುಗಳೂ ಇವೆ. ಹೀಗೆ ಆಯಾ ಕುಟುಂಬದವರು ಆಯಾ ನಿರ್ಣಯಿಸಿದ ಕೆಲಸವನ್ನು ಮಾಡುವ ಹಕ್ಕನ್ನು ಪಾರಂಪರ್ಯವಾಗಿ ಅನುಭವಿಸಲಿಕ್ಕೆ ಕಾರಣವಾಯಿತು. ಹಿಂದೂ ಅರಸರ ಕಾಲದ ಈ ಪದ್ಧತಿಯನ್ನೆ ಅನಂತರದ ಮುಸಲ್ಮಾನ ರಾಜರೂ ಆ ಮೇಲೆ ಬ್ರಿಟಿಷರೂ ಅನುಸರಿಸಿದ ಕಾರಣ ಪಟೇಲ, ಶ್ಯಾನಭಾಗ, ಉಗ್ರಾಣಿ ಮುಂತಾದ ಕೆಲಸಗಳು ಪರಂಪರಾಗತವಾಗಿ ನಡೆದು ಬಂದ ಹುದ್ದೆಗಳಾದವು.

ಈ ಉತ್ತಾರದ ಆಸ್ತಿಗಳಲ್ಲದೆ ಈ ಕೆಲವು ಉದ್ಯೋಗಸ್ಥರಿಗೆ ವಿಶೇಷ ಗದ್ದೆಯಲ್ಲಿ, ಸುಗ್ಗಿಕಾಲಗಳಲ್ಲಿ, ಮತ್ತು ಆ ಉದ್ಯೋಗಸ್ಥರ ಮನೆಯಲ್ಲಿ ಆಗುವ ವಿಶೇಷ ಕಾರ್ಯಗಳ ಸಂದರ್ಭಗಳಲ್ಲಿಯೂ ಗ್ರಾಮದ ಜನಗಳಿಂದ ಉಚಿತ, ಉಡುಗೆರೆ ಸಲ್ಲುತ್ತಿತ್ತು. ಪೈರು 'ಕಟಾವು' ಆಗಬೇಕಾದರೆ ಗುತ್ತಿನ ಚಾವಡಿಗೆ ಬಂದು ಫಲವಸ್ತು, ವೀಳ್ಯ, ಅಡಿಕೆ ಇದನ್ನು ಅರ್ಪಿಸಿ ಅಪ್ಪಣೆ ಪಡಕೊಳ್ಳುವ ವಾಡಿಕೆಯು ಸುಧಾರಣೆಗೆ ಬಾರದ ಹಳ್ಳಿಗಳಲ್ಲಿ ಈಗಲೂ ನಡೆಯುತ್ತದೆ. ಬೆಳೆ ಕಟಾವು ಆದ ನಂತರ ಪೈರಿನಲ್ಲಿ ಶ್ಯಾನುಭೋಗರು ಉಗ್ರಾಣಿ ಇವರ ಅಂಶವೆಂದು ವಿಂಗಡಿಸುವುದು, ದೇವಸ್ಥಾನ ಅಥವಾ ದೈವಸ್ಥಾನದ ವಂತಿಗೆ 'ದೇವು ಪಡಿಯು' ಎಂದು ತೆಗೆದು ಇಡುವುದು, ಇವೆಲ್ಲ ಈಗಲೂ ಹಳ್ಳಿಹಳ್ಳಿಯ ಮುದುಕರ ಅನುಭವದಲ್ಲಿರಬಹುದು. ಹಳ್ಳಿಯ ಏಗಳಿಗೂ ಇದೇ ರೀತಿಯಿಂದ ಪೈರಿನ ಅಂಶವು ಆಯಾಯ ವ[illegible]ದಿಂದ ಪೈರು ಕೊಯಿಸುವಾಗ ಸಲ್ಲುತ್ತಿತ್ತು.

ಕಾಲಕ್ರಮದಲ್ಲಿ ಹೀಗೆ ಆಯಾಯ ಗ್ರಾಮದ ಬೇರೆ ಬೇರೆ ಕೆಲಸಗಳ ಬಗೆ ಉತ್ತಾರ ಬಿಟ್ಟ ಆಸ್ತಿಗಳು ಕುಟುಂಬದ ಆಸ್ತಿಗಳಾದವು. ಅಳಿಯ ಕಟ್ಟನ್ನ ಆಚರಿಸುವಲ್ಲಿ ಇದರ ಅಡಚಣೆಯು ಬರಲಿಲ್ಲ. ಯಾಕಂದರೆ ಆಸ್ತಿಯು ಅವಿಭಕ್ತವಾಗಿತ್ತು. ಮಕ್ಕಳ ಕಟ್ಟಿನವರಲ್ಲಿ ಆಸ್ತಿ ಪಾಲು ಮಾಡುವ ಕಾಲದಲ್ಲಿ ಈ ಉತ್ತಾರದ ಆಸ್ತಿ ಕುಟುಂಬದ ಆಸ್ತಿಯೆಂಬ ಭಾವನೆಯಿಂದ ಪಾಲಾಗಿ ಹೋಯಿತು. ಆದರೆ ಕುಟುಂಬದಲ್ಲಿ ಈ ಉದ್ಯೋಗಗಳ ಹಕ್ಕು ಮಾತ್ರ ಹಿರೀ ಭಾಗದವರಲ್ಲಿ ಉಳಿಯಿತು. ಇದರಿಂದ ಈ ಹುದ್ದೆಯವರಿಗೆ ಸಂಬಳವಿಲ್ಲ, ಇದು ಬರೀ ಗೌರವಾರ್ಥವಾಗಿ ನಡೆಸುವ ಕೆಲಸ ಎಂಬ ಭಾವನೆಯು ಸರ್ವರಲ್ಲಿಯೂ ಉಂಟಾಯಿತು.

ಗ್ರಾಮಪಂಚಾಯತುಗಳ ಕಾಲವು ದಾಟಿತು. ಕೋರ್ಟು ಕಚೇರಿಗಳೂ ಎದ್ದವು. ಮೊದಲಿನ ಕಟ್ಟುಕಟ್ಟಳೆಗಳ ಬದಲಾಗಿ ಆಯಾಯ ಮತದ ಧರ್ಮಶಾಸ್ತ್ರವನ್ನು ಆಧಾರವಾಗಿಟ್ಟು ಸಿವಿಲ್ ಕ್ರಿಮಿನಲ್ ಕಾನೂನು ಜಾರಿಗೆ ಬಂತು. ಗ್ರಾಮದ ಆಡಳಿತೆಯ ವಿಚಾರವು ಕಷ್ಟವಾಗುತ್ತ ಬಂತು. ಆಗ ಬ್ರಿಟಿಷ ಸರಕಾರವು [illegible] ಇಸವಿಯಲ್ಲಿ ಇನಾಂ ಕಮಿಷನನ್ನು ಜಾರಿಗೆ ತಂದಿತು. ಆ ವರೆಗೆ ಉತ್ತಾರಗಳೆಂದು ದಾಖಲೆ ಸಿಕ್ಕಿದ ಆಸ್ತಿಗಳ ಮೇಲೆ ತೀರ್ವೆ ಹೊರಿಸಿ ಅದಕ್ಕೆ ಬದಲಾಗಿ ಭೂಕಂದಾಯದ ರೂಪಾಯಿಗೆ ಒಂದಾಣೆಗೆ ಮೀರದಷ್ಟು 'ಸೆಸ್ಸ'ನ್ನು ಜಮಾಯಿಸಿ ಅದರಿಂದ ಗ್ರಾಮಸಿಬಂದಿಯ ಸಂಬಳವನ್ನು ಕೊಡಬೇಕಾಗಿ ನಿರ್ಣಯವಾಯಿತು. ಇದರಲ್ಲಿ ಒಂದು ಅಡಚಣೆ ಎದ್ದಿತು. ಅನೇಕ ಉತ್ತಾರಗಳು ಸಿವಿಲ್ ವ್ಯವಹಾರಣೆಯಲ್ಲಿ ಕುಟುಂಬದ ಆಸ್ತಿಗಳೆಂದು ತೀರ್ಮಾನಿಸಲ್ಪಟ್ಟು ಕೈಬದಲಾಯಿಸಿ ಹೋಗಿದ್ದವು. ವಿಭಕ್ತಕುಟುಂಬಗಳಲ್ಲಿ ಕೆಲವು ಭಾಗಸ್ಥರು ತಮ್ಮ ಅಂಶವನ್ನು ಇತರ ಜನಗಳಿಗೆ ಖಂಡಿತ ಕ್ರಯಕ್ಕೆ ವಿಕ್ರಯಿಸಿದ್ದ ದೃಷ್ಟಾಂತಗಳೂ ಇದ್ದವು. ಹೀಗಾಗಿ ಇವನ್ನು ಸಂಪೂರ್ಣ ಗೊತ್ತುಹಚ್ಚಲಿಕ್ಕೆ ಸರಿಯಾದ ದಾಖಲೆಗಳು ಸಿಗಲಿಲ್ಲ. ಆದರೂ ಕೆಲವು ಜಿಲ್ಲೆಗಳಲ್ಲಿ ಈ ಕ್ರಮವನ್ನು ಜಾರಿಮಾಡುವಾಗ ವಾರ್ಷಿಕೆಯಾಗಿ ಇತರರಿಗೆ ಹಾಕುವ ತೀರ್ವೆಯ ¼ ಅಂಶ ಮಾತ್ರ ಈ ಇನಾಮುಗಳು ಅಥವಾ ಉತ್ತಾರಗಳು ಹೊಂದಿದವರ ಜಮೀನಿಗೆ ಹೊರಿಸಿ ರಿಯಾಯಿತಿ ತೋರಿಸಿದರು. ನಮ್ಮ ಜಿಲ್ಲೆಯಲ್ಲಿಯೂ ಹಾಗೂ ಇನ್ನೂ ಕೆಲವು ಜಿಲ್ಲೆಗಳಲ್ಲಿ ಈ ಬಗೆಯ ಉತ್ತಾರಗಳ ದಾಖಲೆಗಳು ಸಿಗಲಿಲ್ಲವೆನ್ನುತ್ತಾರೆ. ನಮ್ಮ ಜಿಲ್ಲೆಯು ಬೇರೆಯಾಗಿರದೆ, ಒಂದು ಕಾಲದಲ್ಲಿ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಒಂದೇ ಕನ್ನಡಜಿಲ್ಲೆಯಾಗಿ ಒಮ್ಮೆ ಬೊಂಬಾಯಿ ಸಂಸ್ಥಾನದೊಳಗಿದ್ದು ಕಡೆಗೆ ಈ ದಕ್ಷಿಣ ಕನ್ನಡವು ಮದ್ರಾಸು ಸಂಸ್ಥಾನಕ್ಕೂ ಉತ್ತರ ಕನ್ನಡವು ಮುಂಬಯಿ ಸಂಸ್ಥಾನಕ್ಕೂ ಸೇರಿ ಭಿನ್ನವಾದವು. ಈ ಗದ್ದಲೆಯಲ್ಲಿ ಹಲವು ಅತ್ಯುಪಯುಕ್ತವಾದ ದಾಖಲೆಗಳು ಮಾಯವಾಗಿವೆ ಎಂದು ಕೆಲವರ ಅಭಿಪ್ರಾಯವುಂಟು. ಇದರ ಸತ್ಯವೇನೆಂದು ನಾವು ಹೇಳಲಾರೆವು.

ಕಡೆಗೆ ಈ ರೀತಿಯಾಗಿ ಹಾಕಿದ ಸೆಸ್ಸಿನಿಂದ ಗ್ರಾಮ ಉದ್ಯೋಗಸ್ಥರ ಸಂಬಳ ತೆರಲಿಕ್ಕೆ ಸಾಕಷ್ಟು ಹಣ ಸಿಗುವುದಿಲ್ಲವೆಂದು ತಿಳಿದು ಸರಕಾರದವರು [illegible] ಲೆಕ್ಕದಲ್ಲಿ ಅರ್ಧ ಖರ್ಚನ್ನು ವಹಿಸಿಕೊಂಡರು; [illegible] ಇಸವಿಯಲ್ಲಿ ಈ ಸೆಸ್ಸನ್ನು ತೆಗೆದುಹಾಕಬೇಕೆಂದು ಇಂಡಿಯಾ ಸರಕಾರದವರು ನಿರ್ಣಯಿಸಿದ ರಿಂದ ಈ ಗ್ರಾಮ ಉದ್ಯೋಗಸ್ಥರ ಸಂಬಳದ ಭಾರವನ್ನು ಸರಕಾರದವರೆ ವಹಿಸಿಕೊಂಡರು.

ಈ ನಡುವೆ [illegible] ಇಸವಿಯಲ್ಲಿ ಶ್ಯಾನುಭೋಗರ ಸಂಬಳವನ್ನೂ [illegible] ರೂಪಾಯಿಗೆ ಏರಿಸಿ ಈ ಉದ್ಯೋಗಸ್ಥರ ಸಂಖ್ಯೆಯನ್ನು [illegible] ಸಿದರು. [illegible] ಇಸವಿಯಲ್ಲಿ ಈ ಶ್ಯಾನುಭೋಗರಿಗೆ ತಮ್ಮ [illegible] ಬಿಟ್ಟು ಹೊರಗೆ

[illegible]

[illegible] ಸುಲಭವಾಗಿತ್ತು ಎಂಬುದನ್ನು [illegible] ಮರೆಯಬಾರದು. [illegible] ಇಸವಿಯಲ್ಲಿ ನಮ್ಮ ಜಿಲ್ಲೆಯನ್ನೂ ಇತರ ಕೆಲವು ಜಿಲ್ಲೆಯವರೂ ಗ್ರಾಮಸಿಬಂದಿಯ ಸಂಬಳ ಏರಿಸಬೇಕೆಂದು ಬೇಡಿಕೊಂಡದ್ದಕ್ಕೆ ಕೆಲವೇ ವರ್ಷಗಳ ಹಿಂದೆ ಅಂದರೆ [illegible] ಇಸವಿಯಲ್ಲಿ ಸಂಬಳವನ್ನು ಏರಿಸಿರುತ್ತ [illegible] ಪುನಃ ಆ ಕುರಿತು ಆಲೋಚನೆ ಮಾಡಲು ಸಾಧ್ಯವಿಲ್ಲವೆಂತಲೂ ಪಟೇಲರಿಗೆ ಸಿಗುವ ಸಂಬಳವು ಸಂಬಳವಲ್ಲ, ಬರೇ ಗೌರವಾರ್ಥವಾಗಿ ಕೊಡುವ ವೇತನವೆಂದು ತಿಳಿಯಬೇಕೆಂತಲೂ, ಉಗ್ರಾಣಿಗಳಿಗೆ ದಿನಕೂಲಿಯವನಿಗಿಂತ ಕಡಿಮೆ ಸಂಬಳ ಸಿಗುತ್ತದೆ ಎಂದು ಒಮ್ಮೆ ಕಂಡರೂ ಈ ಸಂಬಳವು [illegible] ದಿನವೂ ನಡೆಯುವುದರಿಂದ ಮತ್ತು ಉಗ್ರಾಣಿಗೆ ಹಳ್ಳಿಯಲ್ಲಿ ಬೇರೆ ಆದಾಯವೂ ಇರುವುದರಿಂದ ಸಂಬಳ ಏರಿಸುವ ಅಗತ್ಯತೋರುವುದಿಲ್ಲವೆಂತಲೂ ಸರಕಾರದ ಹುಕುಂ ಸಿಕ್ಕಿತು.

ಅನಂತರ ಈ ಸಿಬಂದಿಯ ಸಂಬಳವು ಏರಬೇಕೆಂದೂ ಬತ್ತ ಕೊಡಿಸಬೇಕೆಂದೂ ಹಲವು ಸಲ ನ್ಯಾಯವಿಧಾಯಕ ಸಭೆಯಲ್ಲಿ ಠರಾವುಗಳು ಚರ್ಚೆಗೆ ಬಂದಿದ್ದವು. ಆದರೆ ಸರಕಾರದ ಸ್ವರವು ಬದಲಾಗಲಿಲ್ಲ. ಈ ಉದ್ಯೋಗಗಳಿಗೆ ಬೇಕಷ್ಟು ಉಮೇದ್ವಾರರು ಇದ್ದಾರೆ, ಬೇರೆ ಸಂಸ್ಥಾನಗಳಲ್ಲಿ ಇರುವುದಕ್ಕಿಂತ ಇಲ್ಲಿ ಕಂದಾಯ ವಸೂಲಿಯ ಖರ್ಚು ಮೊದಲೇ ಜಾಸ್ತಿ ಇದೆ, ಇನ್ನೂ ಸಂಬಳ ವಗೈರೆ ಹೆಚ್ಚಿಸಿದರೆ ಆ ದಾಮಾಶಯವು ಬಹಳ ಏರುವುದು, ಕಂದಾಯವನ್ನು ಎತ್ತುವ ಖರ್ಚು ಆದಷ್ಟು ಕಡಮೆ ಇರಬೇಕೆಂಬುದು ಸರಕಾರದ ಧ್ಯೇಯ, ಗ್ರಾಮಸಿಬಂದಿಯು ತಮ್ಮ ಕಾಲವನ್ನು ತೀರಾ ಸರಕಾರಿ ಕೆಲಸದಲ್ಲಿಯೇ ಉಪಯೋಗಿಸಬೇಕಾಗಿಲ್ಲ, ಬೇರೆ ಆದಾಯ ಅವರು ಮಾಡಿಕೊಳ್ಳಲಿಕ್ಕೆ ಅವರಿಗೆ ಎಡೆ ಇದೆ, ಈಗಿನ ಸಂಬಳದ ದರಗಳಲ್ಲಿ ಕೆಲಸವು ಸರಾಗವಾಗಿ ನಡೆಯುವಾಗ ಸಂಬಳ ಏರಿಸುವ ಅಗತ್ಯವಾಗಿ ಕಾಣುವುದಿಲ್ಲ, ಈ ದರದಲ್ಲಿ ಯೋಗ್ಯರಾದವರು ಸಿಗದಿದ್ದರೆ ಮಾತ್ರವೇ ಸಂಬಳದ ದರಗಳನ್ನು ಏರಿಸಬೇಕು ಎಂದು ಬೇರೆಬೇರೆ ವಿಚಿತ್ರಕಾರಣಗಳನ್ನು ಕೊಟ್ಟು ಈ ಚರ್ಚೆಯನ್ನು ತಡೆಹಾಕಿದರು. ಈ ವಿಷಯವನ್ನು ಮುಂದಿನ ಸಂಚಿಕೆಯಲ್ಲಿ ಬರೆಯುವೆವು. (ಮುಂದರಿಸಲ್ಪಡುವುದು.)

ಸೆಲರಿ ಕಮ್ಮಿಟಿಯ ರಿಪೋರ್ಟು.

ಬತ್ತೆಯ ದರಗಳು.

ಸರಕಾರದ ಕೆಲಸದ ಮೇಲೆ 'ಸರ್ಕೀಟು' ಬೀಳುವಾಗ ಪ್ರಯಾಣದ ಖರ್ಚಿಗೆ ಮತ್ತು ಊಟದ ಖರ್ಚಿಗೆ ಕೂಡಾ ಬತ್ತೆ ಕೊಡುವ ಕ್ರಮವು ಇದೆ. ಇದರ ದರಗಳನ್ನು ಸಂಬಳದ ಮಿತಿಯ ಮೇಲೆ ಆಧರಿಸಿರುತ್ತಾರೆ. ಸರಕಾರ ಸರ್ವಿಸ್‌ನಲ್ಲಿ ಇಂಡಿಯನ್ ಅಥವಾ ಇಂಪೀರಿಯಲ್ ಸರ್ವಿಸು, ಪ್ರಾವಿನ್ಶಲ್ ಅಥವಾ ಸಂಸ್ಥಾನಿಕ ಸರ್ವಿಸು, ಸಬೋರ್ಡಿನೆಟ್ ಅಥವಾ ಒಳನವುಕರರ ಸರ್ವಿಸು ಎಂಬ ೩ ವರ್ಗಗಳಿವೆ. ಸೆಲರಿ ಕಮ್ಮಿಟಿಯವರು ಕಡೆಯ ಸರ್ವಿಸಿನ ವಿಷಯದಲ್ಲಿ ಮಾತ್ರ ವಿಚಾರ ನಡಿಸಲಿಕ್ಕೆ ಅಧಿಕಾರ ಪಟ್ಟಕಾರಣ ಮೊದಲಿನ ಎರಡು ಸರ್ವಿಸುಗಳನ್ನು ಕುರಿತು ನಾವು ಇಲ್ಲಿ ಪ್ರಸ್ತಾಪಿಸುವುದಿಲ್ಲ. ಆದರೆ ಇನ್ನೊಂದು ಭೇದವು ಗೊತ್ತಾಗಬೇಕಾಗಿದೆ. ಮೊದಲಿನ ಎರಡು ಸರ್ವಿಸುಗಳಿಗೆ 'ಗಜೆಟೆಡ್' ಆಫೀಸರರು ಎಂದು ಕರೆಯುತ್ತಾರೆ. ಇವರ ನೇಮಕವೂ, ವರ್ಗಾವರ್ಗಿಗಳೂ ಸರಕಾರ ಗಜೇಟಿನಲ್ಲಿ ಪ್ರಕಟವಾಗಬೇಕು. ಆಯಾಯ ಆಫೀಸರರಿಗೆ ಬೇರೆ ಹುಕುಂಗಳು ಕಳುಹಿಸಲ್ಪಡುವುದಿಲ್ಲ. ಗಜೇಟಿನ ಪ್ರಕಟನೆಯೆ ಸಾಕಾಗುತ್ತದೆ. ಇವರ ಸರ್ವಿಸು ರಿಜಿಸ್ಟರುಗಳು ಆಯಾ ಸಂಸ್ಥಾನದ ಎಕೌಂಟಂಟ ಜನರಲರವರ ಆಫೀಸುಗಳಲ್ಲಿ ಇದ್ದು, ಬಡ್ತಿ, ವರ್ಗ, ಶಿಕ್ಷೆ ಮುಂತಾದವುಗಳನ್ನು ಎಕೌಂಟಂಟ ಜನರಲರವರೇ ಈ ರಿಜಿಸ್ಟರುಗಳಲ್ಲಿ ಬರಯಿಸುತ್ತಾರೆ. ಗಜೇಟೆಡ್ ಆಫೀಸರನ 'ಪೆನಶನ್' ಹೊಂದುವ ವರೆಗೆ ಈ ರಿಜಿಸ್ಟರು ಆ ಎಕೌಂಟಂಟ ಜನರಲರವರ ಆಫೀಸಿನಲ್ಲಿದ್ದು ಪೆನಶನ್ ಸರ್ಟಿಫಿಕೇಟು ಅವರು ಕೊಡಬೇಕಾಗಿದೆ. ಸಬೋರ್ಡಿನೆಟು ಸರ್ವಿಸುಗಳಲ್ಲಿ ಕೆಲವು ಉದ್ಯೋಗಗಳ ನೇಮಕ ಮತ್ತು ವರ್ಗಾವರ್ಗಿ ಗೆಜೇಟಿನಲ್ಲಿ ಪ್ರಕಟವಾಗುತ್ತದೆ. ಉದಾಹರಣೆಯಾಗಿ ಸಬ್ ರಿಜಿಸ್ಟ್ರಾರ ಮತ್ತು ಸಬ್ ಅಸಿಸ್ಟಂಟ ಇನ್ಸಪೆಕ್ಟರುಗಳ ನೇಮಕ ಮತ್ತು ವರ್ಗಾವರ್ಗಿಯು ಗೆಜೇಟಿನಲ್ಲಿ ಪ್ರಕಟವಾಗುತ್ತಿದ್ದರೂ ಈ ಆಫೀಸರುಗಳು ಗೆಜೆಟೆಡ್ ಆಫೀಸರುಗಳಲ್ಲ. ಇದೇ ಬಗೆಯ ಹಲವು ಇಸಮುಗಳಿವೆ. ಆದರೆ ಇನ್ನೊಂದು ನಿರ್ಧಾರ ಮಾಡಿಕೊಳ್ಳಬಹುದು. ಈ ಒಳನವುಕರರ ಅಥವಾ ಸಬೋರ್ಡಿನೆಟ ಸರ್ವಿಸಿನ ಸಂಬಳವು ೨೫೦ ರೂಪಾಯಿಗೆ ವಾಡಿಕೆಯಾಗಿ ಏರುವುದಿಲ್ಲ; ಗೆಜೆಟೆಡ್ ಆಫೀಸರರ ಸಂಬಳವು ೩೦೦ಕ್ಕೆ ಕಡಿಮೆ ಇರುವುದಿಲ್ಲ.

ಈಗ ಸಬೋರ್ಡಿನೆಟ ಸರ್ವಿಸಿನಲ್ಲಿ ರೂ. ೧೦೦ಕ್ಕೆ ಮೀರಿದ ಮಿತಿಯ ಸಂಬಳ ಸಿಗುವವರೆಲ್ಲ ೨ನೆ ಗ್ರೇಡ್ ಆಫೀಸರರು. ೧೦೦ ರೂಪಾಯಿಗೆ ಕಡಿಮೆ ಇದ್ದು ರೂ. ೧೫ಕ್ಕೆ ಮೀರಿದವರು ೩ನೆ ಗ್ರೇಡ್ ಆಫೀಸರರೆನ್ನಿಸಿಕೊಳ್ಳುತ್ತಾರೆ. ರೂ. ೧೫ಕ್ಕೆ ಕಡಿಮೆ ಪಡೆಯುವವರು ಕೀಳುನವುಕರರು ಅಥವಾ ೪ನೆ ಗ್ರೇಡ್ ಆಫೀಸರರು; ಇಂಡಿಯನ್ ಮತ್ತು ಪ್ರಾವಿನಶಲ್ ಸರ್ವಿಸಿನವರು ೧ನೆ ಗ್ರೇಡ್ ಆಫೀಸರರು. ಆದರೆ ಇವರ ವಿಷಯವು ನಾವು ಇಲ್ಲಿ ಎತ್ತುವದಿಲ್ಲ.

'ಸರ್ಕೀಟಿನಲ್ಲಿ'ರುವ ಪ್ರತಿದಿನಕ್ಕೆ ಸಿಗುವ ಬತ್ತೆ 'ದಿನದ ಬತ್ತೆ' ಎನ್ನಿಸುವುದು. ರೈಲುಬಂಡಿ ಅಥವಾ ರಸ್ತೆ ಪ್ರಯಾಣ ಮಾಡಿದ ಖರ್ಚಿನ ಬಗ್ಗೆ ಕೊಡುವ ಬತ್ತೆ ಪ್ರಯಾಣದ ಮೈಲುಗಳ ಮೇಲೆ ಆಧರಿಸಿರುವುದರಿಂದ ಮೈಲಿ ಬತ್ತೆ ಎನ್ನಿಸುವುದು. ಮೈಲಿಬತ್ತೆ ಹೊಂದಿದ ದಿನಗಳಿಗೆ ವಾಡಿಕೆಯಾಗಿ ದಿನದ ಬತ್ತೆ ಸಿಗುವುದಿಲ್ಲ.

ದಿನದ ಬತ್ತೆ:—೨ನೆ ಕ್ಲಾಸ ಆಫೀಸರರಿಗೆ ಈ ವರೆಗೆ ೨೫ ರೂಪಾಯಿಯ ಮಿತಿಗೆ ನಾಲ್ಕಾಣೆ ಮೇಲೆಗೆ ಏರಿಕೊಂಡು ದಿನಕ್ಕೆ ೩ ರೂಪಾಯಿಗೆ ಮೀರದಷ್ಟು ದಿನದ ಬತ್ತೆ ಸಿಗುತ್ತಿತ್ತು. ಉದಾ:— ೧೦೦ ರೂಪಾಯಿ ವರೆಗೆ ೧ ರೂಪಾಯಿ, ೧೨೫ ರೂ. ವರೆಗೆ ೧¼, ೧೫೦ರ ವರೆಗೆ ೧½, ೧೭೫ರ ವರೆಗೆ ೧¾, ೨೦೦ರ ವರೆಗೆ ೨ ರೂ. ಈ ರೀತಿಯಾಗಿ ಸಲ್ಲುತ್ತಿತ್ತು. ಈಗ ಸೆಲರಿ ಕಮ್ಮಿಟಿಯವರ ಸೂಚನೆಯಲ್ಲಿ ೪ ಆಣೆಯ ಬದಲಾಗಿ ೬ ಆಣೆ ಸಿಗಬೇಕೆಂದು ಇದೆ; ಉಚ್ಚ ಮಿತಿಯು ೪—೮—೦ ಮೀರಬಾರದೆಂದೂ ಇದೆ. ೩ನೆ ಕ್ಲಾಸಿನವರಿಗೆ ಪ್ರತಿ ೧೨½ ರೂಪಾಯಿಗೆ ೨ ಆಣೆ ಮೇಲೆಗೆ ದರವು ಏರಿಕೊಂಡು ಹೋಗುವಾಗ ಅತಿ ಕಡಿಮೆ ಬತ್ತೆಯು ೪ ಆಣೆಗೆ ಕಡಿಮೆ ಇದ್ದಿಲ್ಲ. ಈಗ ಇಂಥ ನವುಕರರಿಗೆ ಕನಿಷ್ಠವು ೮ ಆಣೆಗೆ ಕಡಿಮೆಯಾಗಬಾರದೆಂತಲೂ ಪ್ರತಿ ೧೨½ ರೂ. ಸಂಬಳ ಏರಿದ ಹಾಗೆ ೪ ಆಣೆ ಬತ್ತೆ ಹೆಚ್ಚಬೇಕೆಂತಲೂ ಉಚ್ಚಮಿತಿಯು ರೂ. ೧೫ಗೆ ಮೀರಬಾರದೆಂತಲೂ ಸೆಲರಿ ಕಮ್ಮಿಟಿಯವರ ಸೂಚನೆ. ಇದರಿಂದ ೨ನೆ ಕ್ಲಾಸಿನವರಿಗೆ ಕ್ರಮವಾಗಿ [illegible] ಬತ್ತೆದರವನ್ನು ಏರಿಸಬೇಕೆಂದು ಅಭಿಪ್ರಾಯ; ಆದರೆ ೩ನೆ ಕ್ಲಾಸಿನವರಿಗೆ ಮಾತ್ರ [illegible] ೧೦೦ರಿಂದ [illegible] ರೂಪಾಯಿಗೆ ಮತ್ತು ೧೦೦ ರೂಪಾಯಿ ಒಳಗಿನ ಸಂಬಳದವರಿಗೆ ಬತ್ತೆಗೆ [illegible] ಸಿಗುವುದಿಲ್ಲವೆಂದಾಯಿತು.

[illegible]

ಪ್ರಯಾಣದ ಕಾಲದಲ್ಲಿ ೨ನೆ ೩ನೆ ಕ್ಲಾಸಿನವರಿಗೆ ದಿನದ ಬತ್ತೆ ಸಿಗುತ್ತಿದ್ದಿಲ್ಲ. ತಮ್ಮ ಆಫೀಸಿನ ಹೆಡ್ ಕ್ವಾರ್ಟರಿನಿಂದ (ಮೂಲಸ್ಥಾನದಿಂದ) ೫ ಮೈಲು ಹೊರಗೆ ಸರ್ಕೀಟು ಮಾಡದಿದ್ದರೆ ದಿನದ ಬತ್ತೆಯೂ ೨೦ ಮೈಲು ಪ್ರಯಾಣ ರಸ್ತೆಯ ಮೇಲೆ ಮಾಡದಿದ್ದರೆ ಮೈಲು ಬತ್ತೆಯು ಆಫೀಸರರಿಗೆ ಸಿಗುತ್ತಿದ್ದಿಲ್ಲ. ಈಗ ೫ ಮೈಲು ಹೊರಗೆ ಪ್ರಯಾಣ ಮಾಡಿದರೆ ದಿನದ ಬತ್ತೆ ಮತ್ತು ಮೈಲು ಬತ್ತೆ ಸಿಗಬೇಕೆಂದು ಕಮ್ಮಿಟಿಯವರು ಹೇಳುತ್ತಾರೆ. (ಮುಂದರಿಸಲ್ಪಡುವುದು.)

ಕಂಪೌಂಡರುಗಳ ಮನವಿ.

ದಕ್ಷಿಣಕನ್ನಡ ಜಿಲ್ಲೆಯ ಲೋಕಲ್‌ಫಂಡ್ ಕಂಪೌಂಡರುಗಳ ಮನವಿಯ ಪ್ರತಿ ಒಂದು ನಮ್ಮ ಬಳಿಗೆ ಬಂದಿದೆ. ಕಂಪೌಂಡರುಗಳು ಔಷಧ ಮಿಶ್ರಣವನ್ನು ಮಾಡಿಕೊಡುವ ಜವಾಬ್ದಾರಿ ಕೆಲಸ ಮಾತ್ರವಲ್ಲ, ಆಸ್ಪತ್ರೆಗೆ ಸಂಬಂಧಪಟ್ಟ ಪತ್ರವ್ಯವಹಾರವನ್ನು ನಡಿಸಬೇಕಾಗುತ್ತದೆ. ಆಸ್ಪತ್ರೆಗಳಲ್ಲಿ ಬೇರೆ ಗುಮಾಸ್ತರು ಇಲ್ಲವೆಂಬುದು ನಿಜ. ಸೆಲರಿ ಕಮ್ಮಿಟಿಯವರು ಹಂಗಾಮಿಯಾಗಿ ಈ ಇಸಮುಗಳಿಗೆ ೧೯೨೦ನೆ ಜುಲೈ ೧ನೆ ತಾರೀಕಿನಿಂದ ರೂಪಾಯಿ ೨೫ರ ಮೇಲೆಗೆ ಮತ್ತು ಕಾಯಮಾಗಿ ರೂಪಾಯಿ ೩೦ರ ಮೇಲೆಗೆ ಆದರೂ ಸಂಬಳ ಕೊಡಿಸಬಹುದಾಗಿ ಶಿಫಾರಸು ಮಾಡಿರುವರು. ಆದರೆ ಸೊರ್ನಲೆಜೆಡ್ ಆಫಿಸರರ ಎಯೋಸಿಯೇಷನಿನ ಪ್ರೆಸಿಡೆಂಟರು ಕೊಟ್ಟ ಅಂದಾಜುಪಟ್ಟಿಯ ಮೇರೆಗೆ ಸಾಮಾನ್ಯವಾದ ಒಂದು ಕುಟುಂಬದ ಉದರನಿರ್ವಾಹವು ಮಾಡಿಯೂನಾ ೬೦ ರೂಪಾಯು ಸಂಬಳವಾದರೂ ಸಿಗದೆ ಪೂರೈಸದು ಎಂದು ತಿಳಿದು ಬರುವುದರಿಂದ ತಮ್ಮ ಇಸಮುಗಳಿಗೆ ಕನಿಷ್ಠ ೪೦ ರೂಪಾಯು ಸಂಬಳವಾದರೂ ಸಿಗಬೇಕೆಂದು ಈ ಮನವಿಯ ಮುಖ್ಯ ತಾತ್ಪರ್ಯ. ಇದಲ್ಲದೆ ಯುದ್ಧ ಬತ್ತೆಯು ಆಸ್ಪತ್ರೆಯ ಸೋಲಗಿತ್ತಿ ಮುಂತಾದವರಿಗೆ ಸಿಗುತ್ತಿದ್ದರೂ ತಮಗೆ ಸಿಗುವುದಿಲ್ಲವೆಂಬುದನ್ನು ಕುರಿತು ಕಂಪೌಂಡರುಗಳು ಆಕ್ಷೇಪಿಸಿದ್ದಾರೆ. ಮಂಗಳೂರಿನ ಸರಕಾರಿ ಆಸ್ಪತ್ರೆಯಲ್ಲಿ ಸಿಗುವ ರೀತಿಯು ಸಂಬಳ ಮತ್ತು ಎಲೋವನ್ಸ್ ತಮಗೆ ಕೊಡಿಸಬೇಕೆಂತಲೂ, ಬಾಡಿಗೆ ಇಲ್ಲದೆ ನಿವಾಸಗೃಹ ಅಥವಾ ಬಾಡಿಗೆ ಬಗ್ಗೆ ರೂ. ೫ ಎಲೋವನ್ಸ ಸಹ ಕೊಡಿಸಬೇಕಾಗಿಯೂ ಈ ಮನವಿಯಲ್ಲಿ ಕಂಪೌಂಡರುಗಳು ಕೇಳಿಕೊಂಡಿದ್ದಾರೆ. ಈ ಬಡ ನವುಕರರುಗಳು ಹೇಳಿಕೊಳ್ಳುವ ಅಹವಾಲಿಗಳೆಲ್ಲ ನಿಜವಾದ್ದವೇ. ಆದರೆ ಸರಕಾರದವರು ಜಮೀನ್ದಾರನವರಿಗೆ ಹೇಳಿಕೊಟ್ಟ ಬುದ್ಧಿವಾದದಲ್ಲಿ ನಾವು ಹಿಂದೆ ಹೇಳಿದಂತೆ "ನೀವು ನಿಮ್ಮ ನವುಕರರಿಗೆ ನಮ್ಮ [illegible] ಸಂಬಳ ಕೊಡಬೇಕಾದ್ದು ಸರಿಯೇ. ಅದಕ್ಕೋಸ್ಕರ ಸರಕಾರದ ಸಹಾಯವನ್ನು ಈಗ ಅಪೇಕ್ಷಿಸಿದರೆ ಅದೂ ಸಿಗುವ ಸಂಭವವಿಲ್ಲ, ಎಷ್ಟನ ಮೇರೆಗೆ ಸೆಸ್ಸ ಹೆಚ್ಚಿಸುವ ಅಧಿಕಾರವು ನಿಮಗೆ ಈಗಲೇ ಇದೆ. ಆ ಮೇರೆಗೆ ಹಣ ಸಂಗ್ರಹಿಸಿರಿ!! ಎಂದು ಹೇಳಿದ್ದಾರೆ. ಆದ್ದರಿಂದ ಈ ಎಲಿವಾರಿಗಳು ಫಲ್ಯನೆ ಆಗುವಂಥವುಗಳಲ್ಲವಾದರೂ ಬೋರ್ಡಿನವರು ಆ ಕಡೆಗೆ ಗಮನಕೊಡಬೇಕೆಂದು ಮಾತ್ರ ನಾವು ಸೂಚಿಸುವೆವು.

ಉತ್ತಮ ಗೊಬ್ಬರಗಳನ್ನು ಕುರಿತಾದ ಮಾಹಿತಿ.

ಇವೆ ಕೆಲವು ವರ್ಷಗಳಿಂದ ಆಹಾರ ಜೀನಸುಗಳು ತುಟ್ಟಿಯಾಗಿಯೂ, ಬೆಳವುದು ಕಡಿಮೆಯಾಗಿಯೂ ಇರುವುದನ್ನು ಕಂಡು ವಿಲಾಯತಿಯ ಹಾಗೂ ಇಂಡಿಯದ ಸರಕಾರಗಳ ವ್ಯಾವಸಾಯಿಕ ಕಾರ್ಯಶಾಖೆಗಳು, ಆದಷ್ಟು ಕಡಿಮೆಯಾದ ಖರ್ಚಿನಲ್ಲಿ ಹೆಚ್ಚಾದ ಬೆಳೆಯನ್ನು ಬೆಳಯಿಸಲು ಏನು ಮಾಡಬಹುದು, ಯಾವ ಗೊಬ್ಬರಗಳನ್ನು ಉಪಯೋಗಿಸಬಹುದು, ಎಂಬುವ ವಿಷಯವಾಗಿ ವಿಚಾರಗಳನ್ನು ಶೋಧಗಳನ್ನು ನಡಿಸುತ್ತಿರುವರು. ನಾನಾ ಬಗೆಯ ಹೊಸ ಗೊಬ್ಬರಗಳನ್ನು, ಗೊಬ್ಬರಗಳೆಲ್ಲವುಗಳೂ ಇತ್ಯಾದಿ ಮಾಹಿತಿಗಳನ್ನೂ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿರುವರು. ನಮ್ಮಲ್ಲಿ ಇವನ್ನು ಉಪಯೋಗಿಸುವುದರಿಂದ ಹೆಚ್ಚಿನ ಲಾಭವು ಉಂಟಾಗುವುದೆಂತ ಭರವಸೆ [illegible]ದೆ. ಸಾರಜನಕವೆ ವಿಶೇಷವಾದ ಸೌಳುಪ್ಪನ್ನು ಉಪಯೋಗಿಸುವುದರಿಂದ ಉಂಟಾಗುವ ಬೆಳೆಯು ಇತರ ಗೊಬ್ಬರಗಳನ್ನು ಉಪಯೋಗಿಸುವುದರಿಂದ ಉತ್ಪನ್ನವಾಗುವ ಬೆಳೆಯೊಡನೆ ಹೋಲಿಸಲ್ಪಡುವುದು ರೂಢಿ; ಇದರಿಂದ ಸೌಳುಪ್ಪಿನ ವಿಶೇಷತ್ವವು ಕಣ್ಣಿಗೆ ಬೀಳುವುದು. ಈ ಕುರಿತಾಗಿ ಚಿಕ್ಕ ಪುಸ್ತಕಗಳು ಪ್ರಕಟಗೊಂಡರೆ, ಬೇಸಾಯಗಾರರಿಗೆ ಅಮೂಲ್ಯ ಸಹಾಯವಾಗುವುದೆಂದು ನಂಬಿ, ಅಂಥ ಕೆಲವು ಚಿಕ್ಕ ಪುಸ್ತಕಗಳನ್ನು ಅನುಕೂಲವಾದ ಪರಿಶಿಷ್ಟಗಳಾಗಿ ಪ್ರಕಟಿಸುವುದು ಹಿತವೆಂದು ಹೇಳಬಹುದು. ಇಂಥ ಪ್ರಕಟನೆಗಳು ಬೇಸಾಯಗಾರರಿಗೆ ಉಪಕಾರ ಮಾಡದೆ ಇರಲಾರವು.

ಪತ್ರವ್ಯವಹಾರ.

ಚಂದಾದಾರರಿಗೆ ಸೂಚನೆ:—ಬಂಗಾರ[illegible] ಪಟೇಲನ ಗೋಳಾಟ ಎಂಬ ಲೇಖನವು ನಮಗೆ ಬಂದಿರುತ್ತದೆ. [illegible] ಬರೆದಾತರ [illegible] ಸಮ್ಮಂಧಪಟ್ಟ ಅಧಿಕಾರಿಗಳಿಗೆ [illegible] ಬರಕೊಂಡಲ್ಲಿ ಅದರ [illegible] ದೊರೆಯುವುದು ಎಂದು ನಮಗೆ ಭರವಸೆ ಇದೆ. ಆದ್ದರಿಂದ ಈ ಪ್ರಕಟನೆಯನ್ನು ಪ್ರಕಟಿಸಲಿಲ್ಲ. ಪತ್ರಿಕಾ.

ಉಪ್ಪಿನಂಗಡಿ ತಾಲೂಕಿನ ಉಪಾಧ್ಯಾಯರ ಸಮ್ಮೇಲನ

ಕಳೆದ ತಿಂಗಳ ೧೭ನೆ ತಾರೀಕಿನಲ್ಲಿ ಪುತ್ತೂರಲ್ಲಿ ನೆರೆದ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಮ್ಮೇಲನದಲ್ಲಿ ಟ್ರೆಯಿಂಗ್ ಗ್ರೇಡ್ ಬೋರ್ಡ್ ಅಧ್ಯಾಪಕರಿಗೆ ರಜಾಪಾಯ್ಯಂತಿಂತ ಕೊಡಿಸಬೇಕಾಗಿ ಶಿಲರಕಲ್ಲುಟಿಯವರು ಮಾಡಿದ ಸೂಚನೆಯ ಬಗ್ಗೆ ತಮ್ಮ ವಂದನೆಗಳನ್ನು ಸಮರ್ಪಿಸಿದರು. ಈ ಸೂಚನೆಗಳಲ್ಲಿ ಸೆಕೆಂಡರಿ ಗ್ರೇಡ್ ಉಪಾಧ್ಯಾಯರಿಗೆ ಏನೊಂದು ಸಲುಗೆಗೆ ಸೂಚನೆ ಇಲ್ಲವಾದ ಕಾರಣ ಅವನ್ನು ಉಲ್ಲೇಖಿಸಿಲ್ಲದೆ ಲೋವರ್ ಗ್ರೇಡಿನವರಿಗೆ ರೂ ೨೦–೧–೪೦, ೩೦–೨–೪೦ರವರೆಗೂ, ಹೈಯರ್ ಗ್ರೇಡಿನವರಿಗೆ ೩೦–೧–೪೦, ೪೦–೨–೫೦ರವರೆಗೂ, ಸೆಕೆಂಡರಿ ಗ್ರೇಡಿನವರಿಗೆ ೬೦–೧–೭೦, ೭೦–೨–೮೦ರವರೆಗೂ ಸಂಬಳ ಕೊಡುವುದು ಯೋಗ್ಯವೆಂತಲೂ ಹೆಡ್‌ಮಾಸ್ಟರ ಕೆಲಸ ನೋಡುವ ಲೋವರ ಗ್ರೇಡಿನವರಿಗೆ ರೂ ೫, ಹೈಯರ್ ಗ್ರೇಡಿನವರಿಗೆ ರೂ ೧೦, ಎಲೋವೆನ್ಸ್ ಕೊಡಿಸಬಹುದಾಗಿಯೂ ಠರಾವುಗಳು ಮಂಜೂರಾದವು.

ಕಮಿಟೀಷನ್ ಎಲೋವೆನ್ಸ್ ರದ್ದುಪಡಿಸುವುದಾದರೆ ಅದಕ್ಕೆ ಬದಲಾಗಿ ರೂ ೩ ಎಲೋವೆನ್ಸ್ ಕೊಡಿಸಬೇಕಾಗಿಯೂ, ೧೯೧೫ನೆ ಇಸವಿಯವರೆಗೆ ಹೈಯರ್ ಮತ್ತು ಲೋವರ ಗ್ರೇಡಿನವರಿಗೆ ಟ್ರೇನಿಂಗ ಒಟ್ಟಿಗೆ ಆಗುತ್ತಿದ್ದು ಪರೀಕ್ಷೆಯು ಪ್ರಶ್ನೆಗಳೂ ಒಂದೇಯಾಗಿದ್ದ ಕಾರಣ ಅವರಿಗೆ ಪಾಸಾದವರಲ್ಲಿ ಹೈಯರ್ ಮತ್ತು ಲೋವರ್ ಎಂಬ ಭೇದವನ್ನು ಎಣಿಸುವುದು ಅನ್ಯಾಯವಾದೀತು ಎಂತಲೂ, ಉಪಾಧ್ಯಾಯರಿಗೆ ವರ್ಗಾವರ್ಗಿಯ ಕಾಲದಲ್ಲಿ ೨ನೆ ಕ್ಲಾಸ್ ಪ್ರಯಾಣ ಬತ್ತೆಯನ್ನು ಕೊಡಿಸಬೇಕಾಗಿಯೂ ಜ್ವರದ ಬಾಧೆಯಿರುವ ಸ್ಥಳಗಳಲ್ಲಿ ಜ್ವರದ ಬತ್ತೆ ರಜಾಪಾಯ ವನ್ನು ಕೊಡಿಸಬೇಕಾಗಿಯೂ ಕೋರ್ಟುಗಳಲ್ಲಿ ಸಾಕ್ಷಿಗೆ ಕರೆಸಲ್ಪಟ್ಟವರಿಗೂ ೨ನೆ ಕ್ಲಾಸು ಬತ್ತೆ ಕೊಡಿಸಬೇಕಾಗಿಯೂ ಸೂಚನೆಗಳು ಮಂಜೂರಾದವು.

ಸುರತ್ಕಲ್ "ವಿದ್ಯಾದಾಯಿನೀ ಶಾಲೆ"ಯ ತೃತೀಯ ವಾರ್ಷಿಕ ವರ್ಧಂತಿ ಸಮಾರಂಭವು—ತಾ ೨೬ನೇ ಸೋಮವಾರ ದಿನ ಬಲು ವಿಜೃಂಭಣೆಯಿಂದ ಜರಗಿತು. ಅಪರಾಹ್ನ ಘಂಟೆ ೨॥ಗೆ ಸಮಾರಂಭದ ಮಹಾಸಭೆಯು ಅಲಂಕೃತವಾದ ಶಾಲಾ ಕಟ್ಟಡದಲ್ಲಿ ಕೂಡಿ ಬಂತು. ಸಭೆಗೆ ದಕ್ಷಿಣಕನ್ನಡಾ ಜಿಲ್ಲೆಯ ಲೆಂಡ ರಿಕಾರ್ಡ್ ತಹಶೀಲ್ದಾರ ಮ॥ ರಾ॥ ಕೆ ಪಿ ಕಿಣಿಯವರೂ, ಮುಲ್ಕಿ ಡೆಪ್ಯುಟಿ ತಹಶೀಲ್ದಾರರಾದ ಮ॥ ರಾ॥ ರಾ॥ ಬಿ ಆನಂದ ರಾಯರೂ, ಸುರತ್ಕಲ್ ಅಬ್ಕಾರಿ ಸಬ್ ಇನ್ಸ್‌ಪೆಕ್ಟರ್ ಮ॥ ರಾ॥ ಪುರುಷಯ್ಯರೂ ಮ॥ ರಾ॥ ಶ್ರೀಯುತ ವೇಣೂರು ಕೃಷ್ಣಯ್ಯನವರೂ, ವಗೈರೆ ಸ್ಥಳೀಕ ಪರ ಸ್ಥಳೀಕ ಪ್ರಮುಖ ಸದ್ಗೃಹಸ್ಥರೂ ದಯಮಾಡಿಸಿದ್ದರು. ಸಭಾಪ್ರಾರಂಭದಲ್ಲಿ ಮ॥ ರಾ॥ ವಕೀಲ ಇಡ್ಯ ವಾಸುದೇವಯ್ಯ ಬಿ ಎ ಬಿ ಎಲ್ ರವರು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸುವಂತೆ ಬಹುಮಾನಪಟ್ಟ ಖಾನ್ ಸಾಹೇಬ ಹಾಜಿ ಅಬ್ದುಲ್ಲ ಹಾಜಿ ಕಾಸಿಂ ಸಾಹೇಬ ಬಹದ್ದೂರರವರನ್ನು ಪ್ರಾರ್ಥಿಸಲಾಗಿ, ಏಕನ್ಯಹನೀಯರು ಸಭಿಕರ ಕರತಾಡನ ಘೋಷದೊಂದಿಗೆ ಆ ಸ್ಥಾನವನ್ನು ಅಲಂಕರಿಸಿದರು. ಸಭಾ ಪತಿಗಳ ಅನುಜ್ಞೆ ಪ್ರಕಾರ ಶಾಲಾ ಮುಖ್ಯೋಪಾಧ್ಯಾಯರು ಶಾಲಾ ವಾರ್ಷಿಕ ವರದಿಯನ್ನು ಓದಿದರು. ತರುವಾಯ ವಿದ್ಯಾರ್ಥಿಯೊಬ್ಬನು ಸಭೆಯ ಮುಂದೆ ಬಂದು, ಮನೋಹರವಾದೊಂದು ಇಂಗ್ಲೀಷು ಕವಿತೆಯನ್ನು ಹಾಡಿ ಸಭಿಕರನ್ನು ಆಹ್ಲಾದಗೊಳಿಸಿದನು. ನಂತರ ಶಾಲಾ ಉಪಾಧ್ಯಾಯ ರಾವ ವಿ। ಎಸ್ ಸುಬ್ಬರಾವ್, ಇವರು ಮಕ್ಕಳು ಅಭಿನಯಿಸುವ 'ಕೃಷ್ಣಾರ್ಜುನರ' ನಾಟಕದ ಭಾಗವು ಸರಿಯಾಗಿ ಸಭ್ಯರ ಹೃದ್ಗತವಾಗುವಂತೆ ಅದರ ಪೂರ್ವೋತ್ತರಗಳನ್ನು ಸಂಕ್ಷೇಪವಾಗಿ ವಿವರಿಸಿದರು. ಒಡನೆ ವಿದ್ಯಾರ್ಥಿಗಳು ನಾಟಕ ಭಾಗವನ್ನು ಅಭಿನಯಿಸಿ ಸಂತೋಷ ಪಡಿಸಿದರು. ಗಾಯನ ವಿದ್ಯೆಗೆ ಪ್ರಖ್ಯಾತಿಗೊಂಡ ತಂಜಾವೂರೇ ಮೊದಲಾದ ಅನ್ಯ ದೇಶಗಳಲ್ಲಿ ಕಲಿತು ಅನುಭವವನ್ನು ಹೊಂದಿದ ಈ ಊರಿನ ಒಬ್ಬ ಯುವಕರ ಸಂಗೀತವು ಆನಂದಗೊಳಿಸಿತು. ಸಭಾಧ್ಯಕ್ಷರ ಅಪ್ಪಣೆಯಂತೆ ವಿದ್ಯಾರ್ಥಿಗಳಿಗೆ ಇನಾಮು ಹಂಚುವ ಕಾರ್ಯವನ್ನು ತಮ್ಮ ಕೈಯಿಂದ ಮಾಡಿದರು. ಬಳಿಕ ಮಾನನೀಯ ಸಭಾಧ್ಯಕ್ಷರ ಬೋಧಪ್ರದ ಭಾಷಣವು ಗಾಂಭೀರ್ಯವೂ, ಮನೋಹರವೂ ಆದ ಶೈಲಿಯಿಂದ ಇಂಗ್ಲೀಷ ಭಾಷೆಯಲ್ಲಿ ನಡೆಯಿತು. ಅವರ ಭಾಷಣದ ಮುಖ್ಯ ಸಾರಾಂಶವೇನೆಂದರೆ — ನಾನು ಅನುಭವಿಕನಾದ ಉಪಾಧ್ಯಾಯನೂ ಯೂನಿವರ್ಸಿಟಿ ಪದವೀಧರನೂ ವಿದ್ಯಾ ಇಲಾಖೆಯಲ್ಲಿ ಸಲಗಿದವನೂ ಅಲ್ಲದಿದ್ದರೂ ನನಗೆ ಈ ಶಾಲೆಯ ವರ್ಧಂತಿ ಉತ್ಸವದ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಕೊಟ್ಟದಕ್ಕಾಗಿ ನಾನು ಸಂತೋಷಪಡುತ್ತೇನೆ. ಸಭೆಯಲ್ಲಿ ನೆರವೇರಲ್ಪಟ್ಟ ಕಾರ್ಯಕ್ರಮಗಳೆಲ್ಲವೂ ಶ್ಲಾಘ್ಯವಾಗಿವೆ. ವಿದ್ಯಾರ್ಥಿಗಳೆಲ್ಲರೂ ಆದರಪೂರ್ವಕ ಅಭ್ಯಾಸಿಸಿ ಇನಾಮು ಪಡೆದುದನ್ನು ಕಂಡು ಬಹಳ ಸಂತೋಷವಾಗಿದೆ. ಮುಂದಿನ ವರುಷದಲ್ಲಿ ಇನ್ನಷ್ಟು ಪ್ರಯತ್ನಿಸಿ ಎಲ್ಲರೂ ಬಹುಮಾನಕ್ಕೆ ಪಾತ್ರರಾಗುವಿರಾಗಿ ನಂಬುತ್ತೇನೆ. ಶಾಲೆಯ ಎಲ್ಲಾ ಕಾರ್ಯಗಳನ್ನು ಸಮಾಲೋಚಿಸಿ ಈಗ ಉಪಾಧ್ಯಾಯರು ಶ್ರದ್ಧೆಯಿಂದಲೂ ಜಾಗ್ರತೆಯಿಂದಲೂ ಕಾರ್ಯವನ್ನು ಸಾಗಿಸುವದಾಗಿ ತೋರುತ್ತದೆ. ದೇಶಾಭಿವೃದ್ಧಿಗೆ ಮೂಲಸಾಧನವಾದ ಇಂತಹ ವಿದ್ಯಾಶಾಲೆಯನ್ನು ಸ್ಥಾಪಿಸಿ ಉಚಿತವರಿತು ನಡಿಸುತ್ತಿರುವ ಹಿಂದೂ ಮಂದಿಗಳಿಗಳ ಹಾಗೂ ವಕೀಲ ಇಡ್ಯ ಕೃಷ್ಣಯ್ಯನವರ ಪವಿತ್ರಶ್ರದ್ಧೆಯು ಸ್ತುತ್ಯವಾದುದು. ಈ ಶಾಲೆಯ ಉನ್ನತಿಯನ್ನು ಹೊಂದಿ ಮೆರೆಯುತ್ತಿರಲೆಂದು ಭಗವಂತನನ್ನು ಪ್ರಾರ್ಥಿಸುವೆನು ಇತ್ಯಾದಿ. ತರುವಾಯ ಮ॥ ರಾ॥ ಇಡ್ಯ ವಾಸುದೇವಯ್ಯನವರು,— ಖಾನ್‌ಸಾಹೇಬರು ತಾಲೂಕುಬೋರ್ಡ ಪ್ರೆಸಿಡೆಂಟರೇಗಿಯೂ ಮದರಾಸು ನ್ಯಾಯ ವಿಧಾಯಕ ಸಭಾ ಮೆಂಬರರಾಗಿಯೂ ನಮ್ಮ ಜಿಲ್ಲೆಯ ಏಳಿಗೆಗೆ ಅದೆಷ್ಟು ಯತ್ನಪ್ರಯತ್ನಗಳನ್ನು ವಹಿಸುತ್ತಿರುವರೆಂದೂ ದೇಶಸೇವೆಗಾಗಿ ತಮ್ಮ ತನುವ ಸಾಧನಗಳನ್ನು ಸಮರ್ಪಿಸುತ್ತಿರುವ ಅವರ ಜಗತ್ಪ್ರಸಿದ್ಧವಾದ ಧಾರ್ಮಿಕ ಶ್ರದ್ಧೆಯನ್ನು ಕುರಿತು ಶ್ಲಾಘಿಸಿ ಇಂತಹ ಧರ್ಮನಿಷ್ಠರ ಪ್ರೇಮವನ್ನು ಸಂಪಾದಿಸಿದ ನಮ್ಮ ಶಾಲೆಯು ಕೃತಾರ್ಥತೆಯನ್ನು ಹೊಂದಿತೆಂದೂ, ಮಾನನೀಯರಾದ ಸಾಹೇಬರು ನಮ್ಮ ಶಾಲೆಯ ಅಭ್ಯುದಯವನ್ನು ಹಾರೈಸಿ ನಮ್ಮ ಕೋರಿಕೆಯನ್ನು ಅಂಗೀಕರಿಸಿದುದಕ್ಕಾಗಿ ನಾವೆಷ್ಟು ಕೃತಜ್ಞರಾಗಿದ್ದರೂ ಅಲ್ಪವೇ ಆಗಿದೆ ಎಂದು ಮೊದಲಾಗಿ ಅಧ್ಯಕ್ಷರಿಗೂ, ತಮ್ಮ ಕೆಲಸ ಬೊಗಸೆಗಳನ್ನೆಲ್ಲಾ ಒತ್ತಟ್ಟಿಗೆ ಬದಿಗೊತ್ತಿ ದಯಮಾಡಿದ ಸಭ್ಯ ಗೃಹಸ್ಥರಿಗೂ ಧನ್ಯವಾದಗಳನ್ನು ಅರ್ಪಿಸಿದ ತರುವಾಯ, ಶಾಲಾ ಪ್ರೆಸಿಡೆಂಟ್ ಮ॥ ಇಡ್ಯ ಕೃಷ್ಣಯ್ಯನವರು ಅಧ್ಯಕ್ಷರ ಶಾಸಯರ ಕೊರಳಿಗೆ ಪುಷ್ಪಮಾಲಿಕೆಯನ್ನು ಸಮರ್ಪಿಸಿದರು.

ಸಭಾಂತ್ಯಕಾಲದಲ್ಲಿ ಉದಾರಧೀಗಳಾದ ಖಾನ್‌ಸಾಹೇಬರು ಶಾಲಾ ಫಂಡಿಗೆ ೧೧೧ ರೂಪಾಯಿಗಳನ್ನೂ, ರಾ॥ ವೇಣೂರು ಕೃಷ್ಣಯ್ಯನವರು ೨೦ ರೂಪಾಯಿಗಳನ್ನೂ ಆಗಲೇ ಉಚಿತವಾಗಿ ಕೊಟ್ಟು ವಿದ್ಯಾಭಿವೃದ್ಧಿ ಕಾರ್ಯದಲ್ಲಿ ತವಗಿರುವ ಆಸ್ಥಾದರವನ್ನು ವ್ಯಕ್ತಪಡಿಸಿದರು. ಪರೋಪಕಾರ ಧುರೀಣರಾದ ಏಕನ್ಯಹನೀಯರ ಉಪಕಾರ ಸ್ಮರಣೆಯನ್ನು ಮುಖ್ಯೋಪಾಧ್ಯಾಯರು ಮಾಡಿದ ತರುವಾಯ, ಶ್ರಾವ್ಯವಾದ ಮಂಗಳ ಗೀತೆಯಿಂದಲೂ ಪುಷ್ಪಫಲಾದಿ ಸತ್ಕಾರಗಳಿಂದಲೂ ಸಭಾ ವಿಸರ್ಜನೆಯಾಯಿತು.

ಅದೇ ದಿನ ರಾತ್ರಿ ಶಾಲಾ ಉಪಾಧ್ಯಾಯರಿಂದಲೂ, ವಿದ್ಯಾರ್ಥಿಗಳಿಂದಲೂ "ಹರಿಶ್ಚಂದ್ರ ನಾಟಕ"ವು ಚೆಲೋದಾಗಿ ಅಭಿನಯಿಸಿ ತೋರಿಸಲ್ಪಟ್ಟಿತು. ನಾಟಕಕ್ಕೆ [illegible] ಗೃಹಸ್ಥರು ದಯಮಾಡಿದ್ದರು. ನಾಟಕ ಮಂದಿರವು ಅನೇಕ [illegible] ಮನೋಹರವಾಗಿ ತೋರುತ್ತಿತ್ತು.

[illegible] ಸರ್ವತ್ರ ಪ್ರಸರಿಸಿ, ಅದೊಂದು ದಿವ್ಯ ಶೋಭೆಯನ್ನುಂಟು ಮಾಡುತ್ತಿತ್ತು.

ನಾಟಕಾಭಿನಯವೇ ಜೀವನೋದ್ಯೋಗವಾಗಿ ಉಳ್ಳ ಇತರ ಕಂಪೆನಿಗಳ ನಟವರ್ಗದವರಿಗಿಂತ ಸಂಪೂರ್ಣವಾಗಿ ಅಭಿನಯಿಸಿ ತೋರಿಸಿದ, ನಟವರ್ಗದವರಾದ ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಪ್ರಯತ್ನವು ಸ್ತೋತ್ರಾರ್ಹವಾದುದೇ ಸರಿ. ವಿಶ್ವಾಮಿತ್ರನ ಅನುಪಮೇಯವಾದ ಗಾಂಭೀರ್ಯ! ಹರಿಶ್ಚಂದ್ರ, ಲೋಹಿತಾಶ್ವ, ಚಂದ್ರಮತಿಯರ ಹೃದಯದ್ರಾವಕ ಸ್ಥಿತಿಗಳ ವರ್ಣನೆ! ಇವೆಲ್ಲವೂ ನೋಟಕರ ಮನಸ್ಸನ್ನು ಚೆನ್ನಾಗಿ ಆಕರ್ಷಿಸಿದ್ದುವು. ಲೋಹಿತಾಶ್ವನ ವೇಷವನ್ನು ಧರಿಸಿದ ಒನೇ ತರಗತಿಯ ವಿದ್ಯಾರ್ಥಿ ಶ್ರೀನಿವಾಸ ಭಂಡಾರಿ ಎಂಬ ಚಿಕ್ಕ ಬಾಲಕನ ಮನೋಹರ ಕಂಠವೂ, ಚೆಲುವಿಂದ ರೂಪಸೌಂದರ್ಯವೂ, ಯಥೋಚಿತವಾದ ಅಭಿನಯವೂ, ಲೋಹಿತನೆಂದರೆ ಹೀಗೆಯೇ! ಎಂದು ನಿರ್ಧರಿಸುವಂತಿದ್ದಿತು. ಸಂತುಷ್ಟಚಿತ್ತರಾದ ಸಭಿಕರಲ್ಲಿ ಕೆಲಮಹನೀಯರು ಏತದ್ವಿದ್ಯಾರ್ಥಿಗೆ ಯೋಗ್ಯ ಚಿನ್ನವಿತ್ತು ಪ್ರೋತ್ಸಾಹಿಸಿದುದು ಮತ್ತಷ್ಟು ಆನಂದಕರ! ಮುಖ್ಯವಾಗಿ ನಾಟಕವು ಪ್ರೇಕ್ಷಣೀಯವೂ ಮನೋಹರವೂ ಬೋಧಪ್ರದವೂ ಆಗಿತ್ತೆಂಬುದು ನಾಟಕಾವಲೋಕನದಿಂದ ಸಂತೃಪ್ತರಾದ ಸದ್ಗೃಹಸ್ಥರು ಕೊನೆಗೆ ಎದ್ದು ನಿಂತು ತಮ್ಮ ಭಾಷಣಾದಿಗಳಿಂದ ಪ್ರಶಂಸಿಸಿದುದರ ಮೇಲೆ ವ್ಯಕ್ತವಾಗುತ್ತದೆ. ಈ ನಾಟಕದಿಂದ ಲಭ್ಯವಾದ ಹಣವು ಶಾಲಾ ಕಾರ್ಯಗಳಿಗೆ ವಿನಿಯೋಗಿಸಲ್ಪಡುವುದು. ಅದೊಂದು ಶಾಲೆಯ ಏಳಿಗೆಗೆ ಸುಗಮವಾದ ದಾರಿ.

ನಮ್ಮ ಹಳ್ಳಿಯಲ್ಲಿ ನಾಟಕವೆಂದರೇನು? ಸಭೆ ಎಂದರೆ ಹೇಗೆ? ಎಂಬೀ ವಿಷಯಗಳನ್ನು ತಿಳಿದವರು ಆಗ ವಿರಳರೆನ್ನಬಹುದು. ಅಂತಹ ಇಲ್ಲಿ ಸಭೆಗಳೂ ನಾಟಕಗಳೂ ಪೇಟೆ ಪಟ್ಟಣಗಳಲ್ಲಿ ಕೂಡಿದಂತೆ ಜನರು ನೆರೆದಿದ್ದುದು ಅತಿ ಆಶ್ಚರ್ಯ. ಹೀಗೆ ಊರಿನ ಸರ್ವರಿಗೂ ಸಭ್ಯರ ರೀತಿನೀತಿಗಳೂ ನಾಟಕವೇ ಮೊದಲಾದೀ ಸುಧಾರಣಾ ಕಾರ್ಯಕ್ರಮಗಳೂ ಸರಳವಾಗಿ ತಿಳಿವಂತೆ ಮಾಡಿದ ಶಾಲೆಯ ಸ್ಥಾಪಕ ಪ್ರೋತ್ಸಾಹಕರ ಕಾರ್ಯೋತ್ಸಾಹಕತೆಯು ಅತ್ಯಂತ ಶ್ಲಾಘನೀಯವಾಗಿದೆ. ದಯಾಮಯನಾದ ಭಗವಂತನು ಈ ವಿದ್ಯಾಮಂದಿರವನ್ನು ಸರ್ವದಾ ಬೆಳಗಿಸುತ್ತಿರಲೆಂದು ಸಂಪ್ರಾರ್ಥಿಸಿ ವಿರಮಿಸುತ್ತೇನೆ.

ಸುರತ್ಕಲ್ } ಪ್ರತ್ಯಕ್ಷದರ್ಶಿ
ತಾ 28–4 192 }

NOTICE

WANTED for employment in the S V S Temple Secondary School, Bantval (S K)

2 Trained F A s or (Intermediate men) on Rs 35 1 40 per mensem

Trained Matrics or S S L C s on Rs 25 0 per mensem

1 Trained Gymnastic and Drill Instructor (passed also in Intermediate grade drawing) on Rs 20 1 25

Applications should reach the undersigned by the end of this month (May 1920)

Bantval, }
4–5 1920 } B Survothuma Baliga
Manager

NOTICE.

The undersigned will sell by Public Auction 1 7 full tins 101 half tin Fish Oil and 206 empty tins lying at our godown on the Sandspit being the property of the Union Marine Insurance Co Ltd and All India United Insurance Co Ltd

The auction will commence at 4 P M on 14th May 1920 at the Sand pit The goods will be put up in 3 lots as under

Lot No 1	1237 full tins	Sea damaged	
2	101 half tins	do	
3	06 empty tins	do	

The entire stock can be inspected at our godown between 8 A M to 5 P M on any day

TERMS 25 of the value will have to be paid at once balance against delivery Goods to be cleared within 5 days from the Auction date

Khan Saheb Haji Abdulla Haji Kasim Saheb, Bahadur

WANTED

A qualified Compounder

Salary according to qualifications and service. Apply to the undersigned

P M. Kamath,
Proprietor.
M Kamath & Co,
***Chemists,* MANGALORE.**

ನೋಟೀಸು.

ಸರ್ವ ಜನರಿಗೆ ತಿಳಿಯ ಪಡಿಸುವ ಬಗ್ಯೆ

ಕಾರ್ಕಳ ತಾಲೂಕು ಪ್ರಾಂತ್ಯ ಗ್ರಾಮದ ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಧರ್ಮಸಹಾಯಕ ಫಂಡ್ ಲಿಮಿಟೆಡ್ ಎಂಬದಾಗಿ ಒಂದು ಧರ್ಮ ಸಂಘವನ್ನು ಸ್ಥಾಪಿಸುವ ವಿಷಯವಾಗಿ ಮ. ರಾ. ರಾ ಬಹುಮಾನಪಟ್ಟ ಮದ್ರಾಸ್ ಹೈಕೋರ್ಟು ವಕೀಲರು ಬಂಟ್ವಾಳ ಸೀತಾರಾಮರಾಯರವರು ಮ ರಾ ರಾ. ಬಹುಮಾನಪಟ್ಟ ಹೈಕೋರ್ಟು ವಕೀಲ ಕೆ ಸದಾಶಿವಭಟ್ಟಜಿಯವರು ವಗೈರೆ ಬೇರೆ ಮಾನ್ಯಗೃಹಸ್ಥರು ಕೂಡಿ ತಾ 20 5 1919ರಲ್ಲು ಸದರಿ ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಸಭೆ ಸೇರಿ ಅದೇ ದಿನ ಕೂಡಿ ಮಾಡಿದ ಸಭೆಯ ಪ್ರೊಸಿಡಿಂಗ್ಸು ಪ್ರಕಾರ ಸದರಿ ಧರ್ಮಸಹಾಯಕ ಫಂಡಿನ ವರ್ಷಾವದಿ ಜರಗುವ ಮಹಾಸಭೆಯು ಇದೇ ಬರುವ 1920ನೆ ಇಸವಿ ಮೇ ತಾರೀಕು 22ನೆ ಮಧ್ಯಾನ್ಹ 3 ಘಂಟೆ ಸಮಯಕ್ಕೆ ಸದರಿ ಮೂಡಬಿದ್ರೆ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಜರಗುವದಾಗಿ ನಿಶ್ಚಯಿಸಿರುತ್ತದೆ. ಸದರಿ ಸಂಘದ ಆಡಳಿತೆದಾರರು ಮತ್ತು ಬೇರೆ ಶೇರ್ ಹೋಲ್ಡರರು ಇತರ ಸಮಸ್ತರು ಕೂಡಾ ಸದರಿ ಮೇಲೆ ಹೇಳಿದ ದಿವಸಕ್ಕೆ ಸರ್ವರು ದಯ ಮಾಡಬೇಕಾಗಿ ಅಪೇಕ್ಷಿಸುವ

ಅತ್ತಾವರ ರಾಮರಾವ್, ವೇಣೂರು ಕೃಷ್ಣಯ್ಯ
ಸದರಿ ಫಂಡಿನ ಅಧ್ಯಕ್ಷ ಸದರಿ ಫಂಡಿನ ಕಾರ್ಯದರ್ಶಿ

WANTED·

Three qualified Secondary grade teachers for the Rosario Secondary School Mangalore from 1st June 1920 Apply stating salary expected to the,

Correspondent

BANK OF MADRAS.

ಮದ್ರಾಸ್ ಬ್ಯಾಂಕ್

ಹೆಡ್ ಆಫೀಸು ಮದ್ರಾಸ್

ಮೂಲಧನ	ರೂ 75 00 000
ಕ್ಷೇಮನಿಧಿ	45 00 000

ಸೇವಿಂಗ್ಸ್ ಬ್ಯಾಂಕ್

— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇವರಲ್ಲಿ ಠೇವಣಾತಿಗಳು ಈಗಿನ ಶರ್ತಗಳಲ್ಲಿ ಪಡೆಯಲಾದಾವು

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ 5000ಕ್ಕೆ ಮಿಗದ ಮೊಬಲಗಿನ ಠೇವಣಾತಿಯಾಗಿದ್ದಹುದು

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ 10 000ಕ್ಕೆ ಮೀರದ ಮೊಬಲಗಿನ ವರೆಗೆ ಬಡ್ಡಿ ಎಣಿಸಲಾಗುವುದು

ನಿಬಂಧನೆಗಳ ಪ್ರತಿಗಳನ್ನು ಈ ಬ್ಯಾಂಕಿನಿಂದ ಪಡೆಯಬಹುದು

ಕಿ ಎಲ್ ಗೊರ್ಡನ್,
ಏಜಂಟ್ ಮದ್ರಾಸ್ ಬ್ಯಾಂಕ್ ಮಂಗಳೂರು

ಶುದ್ಧ ಶಿಲಾಜಿತು
(ಯೂನಿ)

ಉತ್ತಮ ಕಲ್ಪದ.

ತೊಲೆ ೧ಕ್ಕೆ ರೂ ೧ ೫ ತೊಲೆ ಡಬ್ಬಿ ೧ಕ್ಕೆ ೨–೧೨–೦
ಅಂಚೆಹಾಸಲು ಆಣೆ ಬೇರೆ

ನಾಲ್ಕಾಣೆಯ ಚೀಟು ಕಳುಹಿಸಿದಲ್ಲಿ ನಮೂನೆ (Sample) ಕಳುಹಿಸಬಹುದು

ನಮ್ಮಲ್ಲಿ ಸ್ವಲ್ಪ ಮಾತ್ರ ಉಳಿದಿದೆ ಬೇಕಾದವರು ತ್ವರೆ ಮಾಡಿರಿ

ಪತ್ರ — ಮನೋಲ್ಲಾಸಿನಿ ಕಂಪನಿ,
Manollasini Co, 4. Kankanady. 4 ಕಂಕನಾಡಿ ಪೋಸ್ಟು

[illegible]	[illegible]	[illegible]	[illegible]	[illegible]	[illegible]	[illegible]	ಉ.	ಅಸ್ತ.
[illegible]	[illegible]	[illegible]	[illegible]	[illegible]	[illegible]	[illegible]	6·10	6·45
[illegible]	[illegible]	[illegible]	[illegible]	[illegible]	[illegible]	[illegible]	6·10	6·45
10	[illegible]	[illegible]	[illegible]	ಶ್ರವಣ	[illegible]	[illegible]	6·9	6·45
11	[illegible]	[illegible]	[illegible]	ಧನಿಷ್ಠಾ	[illegible]	[illegible]	6·9	6·45
12	ಬುಧ	[illegible]	[illegible]	ಶತಭಿಷಾ	[illegible]	[illegible]	6·9	6·45
13	ಗುರು	[illegible]	[illegible]	ಪೂ. ಭಾ.	[illegible]	[illegible]	6·9	6·46
14	ಶುಕ್ರ	[illegible]	[illegible]	ಉ. ಭಾ.	[illegible]	[illegible]	6·9	6·46

ಮಂಗಳೂರಿನ ವಾಯುಸ್ಥಿತಿ.

(ಗಾಳಿಯ ನೆಲೆ)

Date	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಿನದು	Minimum ಕಡಿಮೆ	ದಿನದ ಮಳೆ	ಜನವರಿ ೧ರಿಂದ
30	93—3	77—9	—	...
1	93—2	81—2	—	...
2	94—3	83—4	—	...
3	94—2	80—1	—	...
4	94—6	83—2	—	...
5	93—1	83—2	—	—
6	94—3	82—8	—	—

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ	ವರೆಗೆ
		ರೂ. ಆ.	ರೂ. ಆ.
ಮಸ್ಸೂರಿ ಅಕ್ಕಿಮುಡಿ ಗಳ್ಳ	...	9— 0	9—12
ಗುಡ್ಡ ,, ,,	...	8— 4	8—12
ಬಾಳಿ ಮುಡಿ ಗಳ್ಳ	...	8— 0	8— 8
ಅವ್ವಲ್ ಬೆಲ್ಲಗೆ ,,	...	10—12	11— 0
ಗುಡ್ಡ ಬೆಲ್ಲಗೆ ,,	...	9— 4	9— 8
ಬಂಗಾಳ ಬೆಲ್ಲಗೆ ಗೋಣಿ ಗಳ್ಳ	...	17— 0	17— 8
ಗೋಧಿ ಗೋಣಿ ಗಳ್ಳ	...	25— 0	27— 8
ಹುರುಳಿ ಗೋಣಿ ಗಳ್ಳ	...	13— 8	13—12
[illegible] ಗೋಣಿ ಗಳ್ಳ	...	17— 0	20— 0
[illegible] ಗೋಣಿ ಗಳ್ಳ	...	32— 0	25— 8
[illegible] ಗೋಣಿ ಗಳ್ಳ	...	30— 0	32— 8
ಉದ್ದು ಗೋಣಿ ಗಳ್ಳ	...	17— 8	18— 0
ಹೆಸರು ಗೋಣಿ ಗಳ್ಳ	...	17— 8	19— 0
[illegible] ಬಿಳಿ ಖಂಡಿ ಗಳ್ಳ	...	75— 0	—
ಉಪ್ಪು ಗೋಣಿ ಗಳ್ಳ	...	5— 8	5—14
[illegible] ಖಂಡಿ ಗಳ್ಳ	...	116— 0	125— 0
[illegible] ಹಿಂದಿ ಖಂಡಿ ಗಳ್ಳ	...	—	37— 0
[illegible] ಖಂಡಿ ಗಳ್ಳ	...	57— 8	6?— 0
[illegible] ಎಣ್ಣೆ ಮಣ ಗಳ್ಳ	...	9—10	10— 0
[illegible] ಮಣ ಗಳ್ಳ	...	11— 0	11— 4
[illegible] ಬೆಲ್ಲಗೆ ಗಳ್ಳ	...	9— 4	9— 6
[illegible] ಸಕ್ಕರೆ ಮಣ ಗಳ್ಳ	...	9—10	9—12
[illegible] ಕಾಯಿ ಮಣ ಗಳ್ಳ	...	10— 0	10— 4
[illegible] ಮುಡಿ ಗಳ್ಳ	...	10— 0	10— 8
[illegible] ಮಣ ಗಳ್ಳ	...	5— 0	6— 0
[illegible] ಖಂಡಿ ಗಳ್ಳ	...	245— 0	250— 0
[illegible] ಅಡಿಕೆ ಖಂಡಿ ಗಳ್ಳ	...	90— 0	95— 0
[illegible]	...	95— 0	100— 0
[illegible] ಖಂಡಿ ಗಳ್ಳ	...	160— 0	165— 0
[illegible] ಮಣ ಗಳ್ಳ	...	25— 0	35— 0
[illegible] ಮುಡಿ ಗಳ್ಳ	...	3— 8	3—12
[illegible] ಖಂಡಿ ಗಳ್ಳ	...	100— 0	120— 0
[illegible] ಮಣ ಗಳ್ಳ	...	23— 4	24— 0
[illegible] ಮಣ ಗಳ್ಳ	...	32— 0	35— 0
[illegible] ಗಳ್ಳ	...	31— 8	[illegible]
[illegible] ಮಣ ಗಳ್ಳ	...	24— 0	25— 0

[illegible] ಇಂಡಸ್ಟ್ರೀಜ್, ಲಿಮಿಟೆಡ್.

ಪುತ್ತೂರು ದಕ್ಷಿಣ ಕನ್ನಡ.

(1913ನೇ ಇಸವಿಯ ಇಂಡಿಯನ್ ಕಂಪೆನಿಗಳ ಆಕ್ಟಿನ ಪ್ರಕಾರ ರಿಜಿಸ್ಟ್ರಿ ಮಾಡಲ್ಪಟ್ಟದ್ದು)

ಮೂಲಧನ—ರೂಪಾಯಿ 200,000—ರೂಪಾಯಿ 25ರ 8,000 ಹಿಸೆಗಳಾಗಿ ವಿಭಾಗಿಸಲ್ಪಟ್ಟಿರುತ್ತದೆ. ಹಿಸೆಗಳನ್ನು ಮನವಿ ಮೂಲಕ ಅಪೇಕ್ಷಿಸಿ ಯಾರೂ ಪಡಕೊಳ್ಳಬಹುದು.

ಮನವಿಯೊಂದಿಗೆ ಪ್ರತಿ ಹಿಸೆಗೆ ರೂಪಾಯಿ 5 ಮತ್ತು ಪ್ರವೇಶಫೀಸು ಆಣೆ 4 ಅಂತು ರೂ. 5—4—0, ಮನವಿ ಅಂಗೀಕರಿಸಿದ ಬಳಿಕ ಕೊಡೋಣಾಗುವ ಎಲ್ಲೋಟ್ಮೆಂಟ್ ನೋಟಿಸಿನ ವಾಯಿದೆಗೆ ರೂ. 5 ಕೊಡತಕ್ಕದ್ದು. ಬಾಕಿ ರೂ. 15ನ್ನು ಸರಿಯಾದ 3 ಕಂತುಗಳಿಂದ ಕೇಳಿದ ಹಾಗೆ ಪಾವತಿ ಮಾಡತಕ್ಕದ್ದು. ಆದರೆ ಒಂದು ಕಂತು ಕೇಳಿದ ಬಳಿಕ ಕನಿಷ್ಠಪಕ್ಷಕ್ಕೆ 2 ತಿಂಗಳ ಅವಧಿಗೆ ಮುಂಚಿತವಾಗಿ ಇನ್ನೊಂದು ಕಂತು ಕೇಳೋಣಾಗಲಿಕ್ಕಿಲ್ಲ.

ಪ್ರೊಸ್ಪೆಕ್ಟಸಿನ ಬದಲಾಗಿ ಜೋಯಿಂಟ್ ಸ್ಟಾಕ್ ಕಂಪೆನಿಗಳ ಅಸಿಸ್ಟಾಂಟ್ ರಿಜಿಸ್ಟ್ರಾರರ ಬಳಿ ದಾಖಲು ಮಾಡಿದ ಸ್ಟೇಟ್ಮೆಂಟಿನಲ್ಲಿ ಕಾಣಿಸಿದ ಪ್ರಕಾರ ರೂ. 20,000ಕ್ಕೆ ಸರಿಯಾದ 800 ಹಿಸೆಗಳು ಈ ಮೊದಲೇ ಹಂಚಲ್ಪಟ್ಟಿರುತ್ತವೆ.

ಡ್ಯಾರೆಕ್ಟರರು.

1. ಮ| ರಾ| ರಾ| ಉಳ್ಳಾಲ ಸಾಂತಯ್ಯ ಶೆಣೈ, ಅವರ್ಗಳ್. ... ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಮಂಗಳೂರು.
2. ,, ,, ಎಮ್. ನರಸಿಂಹ ಮರ್ತುರ್ಭಂಡಾರಿ, ,, ... ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ವ ಸಾಹುಕಾರ, ಮಂಗಳೂರು.
3. ,, ,, ಎಮ್. ಮುಡ್ಲಗಿರಿ ಪಾಂಡುರಂಗ ಪೈ, ,, ... ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ವ ಸಾಹುಕಾರ, ಮಂಗಳೂರು
4. ,, ,, ಎಚ್. ಕೊರಗಪ್ಪ, ,, ... ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ಮತ್ತು ಒನರರಿ ಬೆಂಚ್ ಮೆಜಿಸ್ಟ್ರೇಟ್, ಮಂಗಳೂರು
5. ,, ,, ಮಂಜೇಶ್ವರ ಜನಾರ್ಧನ ಭಟ್, ,, ... ತಾಲೂಕು ಬೋರ್ಡ್ ಮೆಂಬರ್ ವ ಸಾಹುಕಾರ, ಪುತ್ತೂರು.
6. ,, ,, ಎಚ್. ಅನಂತ ಕಾಮತ್, ,, ... ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಪುತ್ತೂರು.
7. ,, ,, ಅಡಿಯಡ್ಕ ಸುಬ್ಬಯ್ಯರೈ, ,, ... ವರ್ಗದಾರ, ಅಡಿಯಡ್ಕ
8. ,, ,, ಸೊರಕೆ ಎಲಿಯಣ್ಣ, ,, ... ವರ್ಗದಾರ ಮತ್ತು ಸಾಹುಕಾರ, ಪುತ್ತೂರು.
9. ,, ,, ಎ. ಗೋವಿಂದ ಶೆಣೈ, ,, ... ಮೆನೇಜಿಂಗ್ ಡೈರೆಕ್ಟರ್, ಪುತ್ತೂರು.

ಬೇಂಕರ್ಸ್.

1. ಮದ್ರಾಸ್ ಬೇಂಕ್ ಮತ್ತು 2. ಕೆನರಾ ಬೇಂಕ್, ಲಿಮಿಟೆಡ್, ಮಂಗಳೂರು.

ಲೀಗಲ್ ಎಡ್ವೈಸರರು.

1. ಮ| ರಾ| ರಾ| ಎಚ್. ಗಣಪತಿರಾವ್, ಅವರ್ಗಳ್,—ಪ್ಲೀಡರ್, ಪುತ್ತೂರು.
2. ,, ,, ಎಮ್. ಮಾಧವರಾವ್ ,, —ಬಿ. ಎ., ಬಿ. ಎಲ್, ಪ್ಲೀಡರ್, ಮಂಗಳೂರು.

ರಿಜಿಸ್ಟ್ರಿ ಮಾಡಲ್ಪಟ್ಟ ಆಫೀಸು.

"ಶ್ರೀ ವರದೇಂದ್ರ ಹೋಲ್" ಪೋಸ್ಟ್ ಆಫೀಸ್ ಬಳಿ, ಪುತ್ತೂರು.

ಸೂಚನಾ ಪತ್ರ.

ಉದ್ದೇಶಗಳು—(1) ಬೇಂಕಿಂಗ್ ಯಾನೆ ಹಣದ ಲೇವಾದೇವಿ ಮಾಡುವದು. (2) ವ್ಯಾಪಾರದ ದಲಾಲಿ ವ ಏಜನ್ಸಿ ಮಾಡುವದು. (3) ಕೈಗಾರಿಕೆ ಕಸಬುಗಳನ್ನು ಮಾಡುವದು. (4) ವ್ಯಾಪಾರ ಮಾಡುವದು. (5) ಕೃಷಿ ಮಾಡುವದು (ಉಪಯುಕ್ತವಾದ ಕೈಗಾರಿಕೆ ಸಮೇತ). (6) ಲಾಭಕರವೆಂತ ಕಂಡುಬರುವ ಇತರ ಯಾವ ಉದ್ಯೋಗವನ್ನಾದರೂ ಮಾಡುವದು.

(1) ಪುತ್ತೂರಿನಲ್ಲಿ ಒಂದು ಬೇಂಕು ಸ್ಥಾಪಿಸಲ್ಪಡುತ್ತಿದೆ.

(2) ಬರುವ ವರ್ಷ ಒಂದು ದಲಾಲಿ ಭಂಡಸಾಲೆ ತೆರೆಯುವ ಆಲೋಚನೆ ಇದೆ.

(3) ಹಿಟ್ಟು ತಯಾರಿಸುವ ಕಾರ್ಖಾನೆಯು ಪಶ್ಚಿಮ ಕರಾವಳಿಯಲ್ಲಿ ಬೊಂಬಾಯಿ ವಿನಹಾ ಬೇರೆ ಎಲ್ಲಿಯೂ ಇರುವದಿಲ್ಲ. ಆದಕಾರಣ ಅಂಥಾದ್ದೊಂದು ಕಾರ್ಖಾನೆಯನ್ನು ಸದ್ಯದಲ್ಲಿಯೇ ಮಂಗಳೂರಿನಲ್ಲಿ ಸ್ಥಾಪಿಸುವ ಆಲೋಚನೆ ಇದೆ.

ಮಿಕ್ಕ ಉದ್ದೇಶಗಳನ್ನು ನೆರವೇರಿಸುವರೆ ಹೆಚ್ಚು ದ್ರವ್ಯಾನುಕೂಲತೆಯು ಅವಶ್ಯಕವು. ಮಾತ್ರವಲ್ಲ, ಅವುಗಳಲ್ಲಿ ಹೆಚ್ಚು ತೊಂದರೆಗಳು ವ ನಷ್ಟ ಸಂಭವ ಕೂಡಾ ಇರಬಹುದಾದ ಕಾರಣ ಅವುಗಳು ಕೆಲವು ವರ್ಷಗಳ ತನಕ ಪ್ರಾರಂಭಿಸಲ್ಪಡಲಾರವು.

ಮುನಾಫೆ.

ಪ್ರಥಮ ವರ್ಷದಲ್ಲಿ ಹೆಚ್ಚಿನ ಸಮಯವು ಹಿಸೆಗಳ ಸಂಪಾದನೆಯಲ್ಲಿಯೇ ಕಳೆದುಹೋಗುವದರಿಂದ ಕಂಪೆನಿಗೆ ಸಾಕಷ್ಟು ಮುನಾಫೆ ಉಳಿಯುವರೆ ಅಸ್ಪದವಿಲ್ಲ. ಪರಂತು ಸದ್ಯದಲ್ಲಿಯೇ ಪ್ರಾರಂಭಿಸಲಿಕ್ಕಿರುವ ಉದ್ಯೋಗಗಳು (ಅಂದರೆ—ಬೇಂಕು, ಹಿಟ್ಟಿನ ಕಾರ್ಖಾನೆ ಮತ್ತು ದಲಾಲಿ ಭಂಡಸಾಲೆ, ನಷ್ಟಕ್ಕೆ ಎಡೆಯಿಲ್ಲದ ಮುನಾಫೆಯು ಮೂಲಗಳಾಗಿರುವದರಿಂದ ಬರುವ ವರ್ಷದಲ್ಲಿ ಮುನಾಫೆಯ ಹಣದಿಂದ ಕ್ಷೇಮನಿಧಿಗೋಸ್ಕರ ತಕ್ಕ ಅನುಕೂಲತೆಯನ್ನು ಮಾಡಿಯೂ ಸಾಕಷ್ಟು ಡಿವಿಡೆಂಡು ಹಂಚಲು ಸಾಧ್ಯವಾದೀತೆಂತ ಕಂಪೆನಿಯ ಡ್ಯಾರೆಕ್ಟರರು ಅಭಿಪ್ರಾಯಪಡುತ್ತಾರೆ.

ಹಿಸೆಗಳ ಬಗ್ಯೆ ಮಾಡತಕ್ಕ ಮನವಿ.

ಮನವಿ ಬಗ್ಯೆ ಛಾಪಾ ಫೋರ್ಮುಗಳು ಕ್ರಯ ವಿನಹಾ ಮೇನೆಜಿಂಗ್ ಡ್ಯಾರೆಕ್ಟರರಿಂದ ಒದಗಿಸಲ್ಪಡುವವು. ಮನವಿಗಳು ಫೀಸು ಸಮೇತ ಅವರ ಬಳಿಗೆ ಕಳುಹಿಸಲ್ಪಡತಕ್ಕದ್ದು. ಯಾದಾಸ್ತು ಮತ್ತು ಕ್ರಮಗಳ ಪುಸ್ತಕವನ್ನು ಕಂಪೆನಿಯ ಆಫೀಸಿನಲ್ಲಿ ಕೆಲಸ ಮಾಡುವ ದಿವಸಗಳಲ್ಲಿ ಯಾರೂ ನೋಡಿಕೊಳ್ಳಬಹುದು. ಹಿಸೆಗಳನ್ನು ಪಡಕೊಂಡವರು ಒಂದು ರೂಪಾಯಿ ಕೊಟ್ಟು ಅವುಗಳ ಪ್ರತಿಯನ್ನು ಸಹಾ ಕೊಂಡುಕೊಳ್ಳಬಹುದು. ಮನವಿದಾರರು ಕಂಪೆನಿಯ ಯಾದಾಸ್ತು ಮತ್ತು ಕ್ರಮಗಳನ್ನು ಓದಿನೋಡಿ ಅವುಗಳ ಅರ್ಥವನ್ನು ಸರಿಯಾಗಿ ಮಾಡಿಕೊಂಡಿದ್ದಾರೆಂತ ತಿಳಕೊಳ್ಳೋಣಾಗುವದು.

25 ಹಿಸೆಗಳನ್ನು ಪಡಕೊಂಡ ಮೆಂಬರನು ಡ್ಯಾರೆಕ್ಟರನಾಗಲಿಕ್ಕೆ ಅರ್ಹನಾಗಿರುತ್ತಾನೆ.

☞ ಎಲ್ಲಾ ಕಾಗದಪತ್ರಗಳನ್ನು ಮೇನೆಜಿಂಗ್ ಡ್ಯಾರೆಕ್ಟರರ ವಿಳಾಸಕ್ಕೆ ಕಳುಹಿಸಿಕೊಡಬೇಕು.

ಪುತ್ತೂರು,
18—3—1920.

A. GOVINDA SHENOY,
Managing Director.

ಗೊನೊರ್ಯ್ಯಾರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹಗಳಲ್ಲಿ, ಬಿಸ್ಸವಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕೆಟ್ಟ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರವಾದಮೇಲೆ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಉರುತ್ಪರೋಗಗಳಲ್ಲಿ ಉತ್ತಮ ಔಷಧವು ಇದರ ಸೇವನೆಯಿಂದ ಎಷ್ಟುಕಾಲದ ಹಳೇ ಮೇಹರೋಗಗಳಾದರೂ ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ:— 2 ಘಂಟೆಗೆ ಒಂದಾವರ್ತಿ 5 ದಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ:— ರೂ. 1—0—0.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು.

ವಿಳಾಸ:— ಎ. ಪೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೊಪೆತಿ ಡಿಸ್ಪೆನ್ಸರಿ,
ಮಂಗಳೂರು.

ರಾಜವೈದ್ಯ ನಾರಾಯಣಜೀ ಕೇಶವಜೀ
ಇವರ

ವೈದ್ಯವಿದ್ಯ.

ವೈ ದ್ಯ ವಿ ದ್ಯ	ಈ ಪುಸ್ತಕವು ಎಲ್ಲಾ ಭಾಷೆಗಳಲ್ಲಿಯೂ ಇರುವದು. ಇದನ್ನು ಓದುವದರಿಂದ, ಶರೀರದಲ್ಲಿ ಉಂಟಾಗುವ ವ್ಯಾಧಿಗಳನ್ನು ಬಹು ಬೇಗನೆ ಗುಣ ಮಾಡಿಕೊಳ್ಳುವ ಉಪಾಯಗಳು ಮತ್ತು ಔಷಧಗಳು ಗೊತ್ತಾಗುವವು.	ವೈ ದ್ಯ ವಿ ದ್ಯ

ವೈದ್ಯವಿದ್ಯ.

ಇದು ಎಲ್ಲರಿಗೂ ಉಚಿತವಾಗಿ ಕಳುಹಿಸುವೆವು. ವಿಳಾಸವನ್ನು ತಿಳಿಸಿರಿ.

ವಿಳಾಸ:— ರಾಜವೈದ್ಯ ನಾರಾಯಣಜೀ ಕೇಶವಜೀ,
೩೭. ಬೈನಾಬಜಾರು ರೋಡು, ಮದರಾಸು.

To Get
BEST and CHEAPEST
EVERYTHING FROM BOMBAY

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:— ನಾವು ಈ ಕೆಳಗೆ ಹೆಸರು ತೋರುವ ಕಂಪೆನಿಯನ್ನು ಸದ್ಯ ತೆರದಿರುತ್ತೇವಾದುದರಿಂದ ಮುಂಬಯಿಯಿಂದ ಬೇಕಾಗುವ ಸಾಮಾನುಗಳನ್ನು ಅತ್ಯಲ್ಪ ಕಮಿಶನಿನ ಮೇಲೆ ಸಪ್ಲೈ ಮಾಡಿಕೊಡುತ್ತೇವೆ. ಸಾಮಾನು ತರಿಸಲಪೇಕ್ಷಿಸುವವರು ನಮ್ಮ ಶರ್ತಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಏವರ್ ರೆಡಿ ಸೇಫ್ಟಿ ರೇಜರು ಮತ್ತು ವಸ್ತುಕರ ಎಂಟಿಬೇಸ್ ಎಂಬುವ ಕ್ಷೌರದ ಪಿಕ್ರಣವು ನಮ್ಮಲ್ಲಿ ದೊರಕುತ್ತದೆ. ಶೀಘ್ರದಲ್ಲಿ ಬರಕೊಳ್ಳಿರಿ.

TEL. ADDRESS:
PARTSARTHI, Bombay.

BOMBAY CANARA TRADING CO.,
Jamnadas Building, Pitha Street,
FORT: BOMBAY.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ದಿನದಿನಕ್ಕೆ ಅಭಿವೃದ್ಧಿಯಾಗುವ ವಿಧಾನಗಳಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರೀಕ್ಷಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಿನ ವಿಳಾಸದಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraku Bishagmandir.
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

ಕನ್ನಡ ಭಾಷೆಯಲ್ಲಿ ಅಪೂರ್ವ ಗ್ರಂಥ!

ಹಿಂದೂ ವ್ರತವಿವೇಕ.

ಲೇಖಕ: ಸಂಸ್ಕೃತಾಧ್ಯಾಪಕ ಆತ್ಮಾರಾಮ ಶಾಸ್ತ್ರೀ, ಓಡ್ಲಮನೆ.

ಈಗಲೆ ಸಿದ್ಧವಾಗಿರುವದು! ಈಗಲೆ ಸಿದ್ಧವಾಗಿರುವದು!!
ಕ್ರಯ ಆಣೆ ೧೦.

ಹಿಂದೂ ಜನರ ಆಚರಣದಲ್ಲಿರುವ ವ್ರತ, ಹಬ್ಬ, ಜಯಂತಿ— ಇವುಗಳ ಉತ್ಪತ್ತಿ, ಆಚರಿಸುವ ಕ್ರಮ, ಮತ್ತು ಚರಿತ್ರ—ಇವೆಲ್ಲವು ಈ ಗ್ರಂಥದಲ್ಲಿ ಚಂದವಾಗಿ ಕೊಡೋಣಾಗಿವೆ.

ಹಿಂದೂ ವ್ರತಗಳ, ಹಬ್ಬಗಳ, ಜಯಂತಿಗಳ
ಇತಿಹಾಸವೇನು?

ಎಂಬವನ್ನು ಕನ್ನಡದಲ್ಲಿ ತಿಳಕೊಳ್ಳಲು ಬೇಕಾದ ಸಾಧನಗ್ರಂಥವು ಇದೇಯಾಗಿರುವದು.

ಗ್ರಂಥದ ವಿಷಯಾನುಕ್ರಮಣಿಕೆ.

ಪ್ರಸ್ತಾವನೆ. ಚೈತ್ರಮಾಸ—ಯುಗಾದಿ ಮತ್ತು ದೋಲೋತ್ಸವಗಳು, ಶ್ರೀ ರಾಮನವಮಿ, ಹನುಮಜ್ಜಯಂತಿ. ವೈಶಾಖಮಾಸ—ಅಕ್ಷಯ ತೃತೀಯ, ಪರಶುರಾಮಜಯಂತಿ, ನೃಸಿಂಹಜಯಂತಿ. ಜ್ಯೇಷ್ಠಮಾಸ—ವಟ ಸಾವಿತ್ರಿ ವ್ರತ, ವಟಸಾವಿತ್ರಿ ಪೂರ್ಣಿಮೆ. ಆಷಾಢಮಾಸ—ಮಹಾ ಏಕಾದಶಿ ಮತ್ತು ಚತುರ್ಮಾಸ ವ್ರತ. ಶ್ರಾವಣಮಾಸ—ನಾಗಪಂಚಮಿ, ಮಂಗಳಗೌರಿ ಉಪಾಕರ್ಮ, ಶ್ರೀ ಕೃಷ್ಣಜನ್ಮಾಷ್ಟಮಿ, ಪಿಠೋರಿ ವ್ರತ. ಭಾದ್ರಪದಮಾಸ— ಸ್ವರ್ಣಗೌರಿ, ಹರಿತಾಳಿಕೆ, ಗಣೇಶಚತುರ್ಥಿ, ಋಷಿಪಂಚಮಿ, ಜ್ಯೇಷ್ಠಾಗೌರಿ ವಾಮನ ದ್ವಾದಶಿ, ಅನಂತಚತುರ್ದಶಿ, ಮಹಾಲಯಪಕ್ಷ. ಆಶ್ವಿನಮಾಸ— ವಿಜಯಾದಶಮಿ ದೀಪಾವಳಿ ಮಹೋತ್ಸವ. ಕಾರ್ತಿಕಮಾಸ—ದೀಪಾವಳಿಯ ಅನಂತರ, ವೈಕುಂಠಚತುರ್ದಶಿ, ತ್ರಿಪುರೀ ಪೌರ್ಣಿಮೆ. ಮಾರ್ಗಶೀರ್ಷಮಾಸ— ಚಂಪಾಷಷ್ಠಿ, ದತ್ತಾತ್ರೇಯ ಜಯಂತಿ. ಪೌಷಮಾಸ—ಮಕರಸಂಕ್ರಮಣ. ಮಾಘಮಾಸ—ರಥಸಪ್ತಮಿ, ಮಹಾಶಿವರಾತ್ರಿ. ಫಾಲ್ಗುನಮಾಸ—ಹೋಳಿ ಕೋತ್ಸವ. ಪರಿಶಿಷ್ಟ—ಶಂಕರಜಯಂತಿ, ರಾಮಾನುಜ ಜಯಂತಿ, ಮಧ್ವ ಜಯಂತಿ, ವಲ್ಲಭಜಯಂತಿ.

ಗ್ರಂಥಪ್ರತಿಗಳನ್ನು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,
ಶಾರದಾ ಛಾಪಖಾನೆ,
ಎಂ. ಎಸ್. ರಾವ್ ಕಂಪೆನಿ, ಮಂಗಳೂರು
ಆಚಿನ್ನರೋಡ್ ಬೆಂಗಳೂರು ಸಿಟಿ, ಇವರಲ್ಲಿ ದೊರೆಯುತ್ತದೆ.

ಈಗಲೇ ಅಚ್ಚಾಗಿ ವಿಕ್ರಿತಕ್ಕೆ ತಯಾರಾಗಿದೆ!

ಚಂದ್ರಗುಪ್ತ ಚಕ್ರವರ್ತಿ.

ಇದು ಆಂಧ್ರಭಾಷೆಯಲ್ಲಿ ವಿಜ್ಞಾನಚಂದ್ರಿಕಾ ಗ್ರಂಥಮಾಲೆಗಾಗಿ ಶ್ರೀ ಸ್ವಾಮಿ ವಿದ್ಯಾನಂದ ಪರಮಹಂಸ ಬಿ. ಎ. ಇವರಿಂದ ರಚಿಸಲ್ಪಟ್ಟು ರಾ. ಆಲೇಮಾನ ವೆಂಕಟರಾವ್. ಬಿ. ಎ. ಎಲ್. ಟಿ. ಇವರಿಂದ ಕನ್ನಡಭಾಷೆಗೆ ಪರಿವರ್ತಿಸಲಾಯಿತು.

☞ ಇದನ್ನು ಮದ್ರಾಸ ಸರಕಾರದವರು ೭ನೆಯ ವರ್ಗದ ಇಂಟರ್ ಮೀಡಿಯೆಟ್ ಪರೀಕ್ಷೆಗೆ ಪಾಠಪುಸ್ತಕವಾಗಿ ನೇಮಿಸಿರುವರು.

ಕ್ರಯ ಪ್ರತಿ ಒಂದಕ್ಕೆ ರೂ. 1—0—0 ಅಂಚೆ ಹಾಸಲು ಪ್ರತ್ಯೇಕ.
ಅಪೇಕ್ಷಕರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ, ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಜಾಗತ್ಪ್ರಖ್ಯಾತವಾದ ಶ್ರೀ ದೇವಿಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರಿಂದ ವಾತ, ಕಸ, ಜಿಗತ, ಉಳುಕು ಕೆಸಾಯ, ತಲೆನೋವು, ಸೊಂಟನೋವು, ಬೆನ್ನುನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಶೀಘ್ರದಲ್ಲಿ ಸಂಪೂರ್ಣವಾಗಿ ಗುಣಹೊಂದುವವು. ಬಾಟ್ಲಿ ಒಂದರ ಕಿಮ್ಮತು ೦—೬—೦; ಒಂದು ಡಜನು ಬಾಟ್ಲಿಗಳಿಗೆ ರೂ. ೪—೧೨—೦.

"ಗಜಕರ್ಣದ ಮುಲಾಮು"

ಗಜಕರ್ಣ, ಉನಬು, ಖಜ್ಜಿ, ದದ್ರು, ಹುಳಕಡ್ಡಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಾಕಿಸುವದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು. ಬಾಟ್ಲಿ ಗಳಿಗೆ ೦—೪—೦; ಒಂದು ಡಜನಿಗೆ ರೂ. ೩—೮—೦.

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು ಮತ್ತು ದೊರೆತಿರುವವು. ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೂ ಪತ್ರವ್ಯವಹಾರ ಮಾಡಿರಿ.

ದಿ. ಮ್ಯಾನೇಜರ್ — ಶ್ರೀ ದೇವಿಪ್ರಸಾದ ಕಂಪೆನಿ,
ಪೋಸ್ಟು ಬಾರಕೂರು, ದ. ಕನ್ನಡ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದರೂ ಕೆಡುವದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 5—8—0.



ನಮ್ಮ ವಿಳಾಸ:— ವಿ. ಎ. ಎಸ್. ಪಾಠಕ್ ಕಂಪೆನಿ,
ಸಾಹುಕಾರಪೇಟೆ, ಮದ್ರಾಸ್.

ಕನ್ನಡ ಮಾತನ್ನು
ಕಲಿಯುವ ಚಿಕ್ಕಬಾಲಕರಿಗೆ ಉಪಯುಕ್ತವಾದ

ಅಜ್ಜಿ ಕಥೆಗಳು:

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ
ಅರ್ಗಣಿ ಮುದ್ದೆ
ಇಲಿಗಳ ಧಕ್ಕ ಥೈ
ಅಂಗಳ ದುಗ್ಗು
ಗುಡುಗುಡು ಗುಮ್ಮಟದೇವರು.
ಸಿಗಡಿ ಯಾಕೆ ಒಣಗಲಿಲ್ಲ? ಹುಲಿಯೊ ಇಲಿಯೊ

ಈ ಎಂಟು ಪುಸ್ತಕಗಳ ಕ್ರಯ ಅಂಚೆಹಾಸಲು ಸೇರಿ ರೂ. 0—7—0
ವಿ. ಪಿ. ರೂ. 0—8—0.

ಅಕ್ಷರಮಾಹಿತಿಯನ್ನುಂಟುಮಾಡುವದರಲ್ಲಿ ಸಹಕಾರಿಯಾಗಿನ ಶಬ್ದಗಳ ಉಪಯೋಗ, ಅವುಗಳ ಅರ್ಥ ಮತ್ತು ವಾಕ್ಯರಚನೆ ಇವುಗಳನ್ನು ಈ ಕಥೆಗಳ ಮೂಲಕ ಮಕ್ಕಳು ತಿಳಕೊಳ್ಳಬಹುದು. ಬಾಲ್ಯ ಪ್ರಾಯದಿಂದಲೇ ಕ್ರಮವಾಗಿ ಬೆಳೆಯಬೇಕಾಗಿರುವ ವಾಚನಸ್ಪ್ರೀತಿಯು ಮಕ್ಕಳಲ್ಲಿ ಈ ಚಿಕ್ಕ ಕಥೆಗಳನ್ನು ಓದುವದರಿಂದ ಹುಟ್ಟುವದು.

ವಿಳಾಸ:— ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

ತಿರುಚಿ ಸುಗಂಧನಿಧಿ ಕಾರಖಾನೆ

ಶೀತಕ ನಮೂನೆಯ ವಿವಿಧ ಅಂಟರ್, ಜವ್ವಾಜಿ, ಪುನುಗು, ಕಸ್ತೂರಿ, ಊದುಬತ್ತಿಗಳು, ಬಿಲ್ಲೆಗಳು, ಅರಗಜ, ಪಿಷ್ಟಾ, ಅತ್ತರುಗಳು, ಸೆಂಟ್ಸ್‌ಗಳು, ಭೃಂಗಾಮಲಕ ತೈಲ, ಕುಂತಳವರ್ಧಿನಿ ತೈಲ, ಇವೇ ಮೊದಲಾದ ಸುಗಂಧ ದ್ರವ್ಯಗಳು ನಮ್ಮಲ್ಲಿ ತಯಾರಾಗಿ ಬಿಕರಿಯಾಗುತ್ತ ಮೈಸೂರು, ಮದರಾಸು, ಬೊಂಬಾಯಿ, ಕಲ್ಕತ್ತಾ, ಢಿಲ್ಲಿ, ಪಂಜಾಬು ಮುಂತಾದ ಇಂಡಿಯಾ ದೇಶದಲ್ಲೂ ಮತ್ತು ಬರ್ಮಾ, ಸಿಲೋನ್, ಜಪಾನ್ ಮುಂತಾದ ದ್ವೀಪಾಂತರಗಳಲ್ಲೂ ನಮ್ಮ ತಯಾರಾಯ ಸುಗಂಧದ್ರವ್ಯಗಳು ಪ್ರಖ್ಯಾತಿ ಹೊಂದಿವೆ. ಒಂದಾವರ್ತಿ ನಮ್ಮ ಪದಾರ್ಥಗಳನ್ನು ತರಿಸಿನೋಡಿದರೆ ಅವುಗಳ ಗುಣಗಳು ತಿಳಿಯಬರುತ್ತವೆ.

ರಖಿಂವಾರ್ ಊದುಬತ್ತಿಗಳು ೨೪ ರೂಪಾಯಿ ತೂಕವುಳ್ಳದ್ದು ಶೇರು ೧ಕ್ಕೆ

ಊದುಬತ್ತಿಗಳು.		
ಕಲ್ಯಾಣ ಸುಗಂಧಿ ಒಕ್ಕ ಶೇರು 1ಕ್ಕೆ	ರೂ.	12—0—0
ಜವ್ವಾಜಿ ನಂಬರ್ 1	"	8—0—0
2 ನಂಬರ್	"	6—0—0
3 ನಂಬರ್	"	5—0—0
4 ನಂಬರ್	"	3—0—0
5 ನಂಬರ್	"	2—0—0
ಅಂಬರ್ 1ನೇ	"	6—0—0
2ನೇ	"	4—0—0
ಕಸ್ತೂರಿ 1ನೇ	"	3—0—0
2ನೇ	"	2—0—0
ಪನ್ನೀರ ಬತ್ತಿ 1ನೇ	"	1—8—0
2ನೇ	"	1—0—0

ಅಂಬರ್ ಹಶೀಬಿಲ್ಲೆಗಳು.

	1 ತೊಲೆ	½ ತೊಲೆ	¼ ತೊಲೆ
1ನೇ ನಂಬರ್	1-0-0	0-8-0	0-4-0
2ನೇ "	0-8-0	0-4-0	0-2-0

ಜವ್ವಾಜಿಗಂಧ ಅಥವಾ ಅರಗಜ.

1ನೇ ನಂಬರ್ ತೊಲ 1ಕ್ಕೆ	ರೂ.	2—0—0
2ನೇ " "	"	1—0—0

ಪುದುಕೋಟೆ ಕಸ್ತೂರಿ ಬಿಲ್ಲೆಗಳು.

	1 ತೊಲೆ	½ ತೊಲೆ	¼ ತೊಲೆ
1ನೇ ನಂಬರ್	2-0-0	1-0-0	0-8-0
2ನೇ "	1-0-0	0-8-0	0-4-0

ಉತ್ತಮವಾದ ದಶಾಂಗ ಶೇರು 1ಕ್ಕೆ ರೂ. 1

ತಲೆಗೆ ಹಚ್ಚುವ ಕುಂತಳವರ್ಧಿನಿ ತೈಲ ಸೀಸೆ 1ಕ್ಕೆ ರೂ. 1
ಸ್ನಾನಕ್ಕೆ ಉಪಯೋಗಿಸುವ ಭೃಂಗಾಮಲಕ ತೈಲ ಸೀಸೆ 1ಕ್ಕೆ 1—0—0.

ಎಲ್ಲಾ ಸಾಮಾನುಗಳಿಗೆ ಟಪ್ಪಾಲು ಚಾರ್ಜು ಬೇರೆ ಬೀಳುತ್ತೆ. ವ್ಯಾಪಾರಿಗಳಿಗೆ ಕಮಿಶನ್ ಕೊಡಲಾಗುವದು. ದೇಶದ ನಾನಾಭಾಗಗಳ ಜನರು, ನಮ್ಮ ಬರೆದ ಪತ್ರಗಳಿಗೆ ಸರಿಯಾದ ಉತ್ತರ... ನಮ್ಮ ಕಂಪೆನಿಯ ಹೆಸರು ಬರೆಯತಕ್ಕದ್ದು. ಹೆಸರು, ಗ್ರಾಮ, ಪೋಸ್ಟು, ಡಿಸ್ಟ್ರಿಕ್ಟ್ ಸ್ಪಷ್ಟವಾಗಿ ಬರೆಯಬೇಕು.

Sugandhanidhi Office. ನಮ್ಮ ವಿಳಾಸ—ತಿರುಚಿ ಸುಗಂಧನಿಧಿ ಕಾರಖಾನೆ.
ಮುರೆವುದೂರು, ತಿರುಚಿನಾಪಳ್ಳಿ.

[illegible]

[illegible]

ವಿಳಾಸ:— ಕೆ. ಕೆ. ನಾಯರ್ ಎಂಡ್ ಬ್ರದರ್ಸ್,
ವೈದ್ಯಾಮೃತ ಮಂದಿರಂ,
ಕೀರ್ತಿಕ್ಷೇತ್ರ, ದ. ಕನ್ನಡ.

ಕರೋ! ಮೈಸೂರು
ಊದು ಬತ್ತಿಗಳು. ಮನೋರಂಜಕ!!

[illegible]

ಅತ್ತರುಗಳು:—ಗುಲಾಬ್, ಅಂಬರ್, ಹೀನಾ, ಕೇವಡೆ ,, ,,

ಸೆಂಟುಗಳು:—ಮಲ್ಲಿಗೆ, ಗುಲಾಬಿ, ಮುಷ್ಕ್, ನಾರಸಸ್ (ವಿಲಾಯತಿ, ಅದೋರ್, ಸೈಂಟ್ ಬ್ಯಾಚಲ್ಲಿ ತಯಾರಿಸಿದ್ದು) ½ ಡೆಜನ್ ಬಾಟ್ಲಿ ರೂ. ೪.

ಶಿಕಾಕಾ ಅಥವಾ ಸುಗಂಧ ರಜಿತ, ಸುಗಂಧ ಅಡಿಕೆ ಪುಡಿ, ಹಾಲುಮುದಿ, [illegible] ರೂ. ೧.

ವಿಳಾಸ:— ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪನಿ,
ಕಂಮಿಷ ವ್ಯಾಪಾರಿಗಳು, ಬೆಂಗಳೂರು ಸಿಟಿ.

ರೇಷ್ಮೆ ಪಂಚೆ, ಅಟೋಮೋಹಿನಿ ಸೆಂಟ್.



ಈ ಪೆಟ್ಟಿಯಲ್ಲಿ ಕಂಡ ಇಂಕಿ ಅದ್ದದೆ ಬರೆಯುವ ಫೌಂಟನ್ ಪೇನಾ ಇದಕ್ಕೆ ಬ್ಯಾಟರ್ ಭಂಗಾರದ ಮುಳ್ಳ ಹಾಕಿಯತ್ತೆ. ಇದರಿಂದ ಬರೆಯುವದರಿಂದ ಅಕ್ಷರಗಳು ಮುತ್ತುಗಳ ಹಾಗೆ ಬರೆಯುವದು. ಈ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೇಷ್ಮೆ ಪಂಚೆ, ಆಟೋಮೋಹಿನ ಸೆಂಟ್ ಇನಾಂ ಸಹಿತ ರೂ. ೧—೯—೦,

O. C. LINGAM & Co,
No. 2. Ramanuja Iyer Street,
SAVCARPET, *Madras.*

ನೇಟಿವ್ ಡೊಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸರವರ.

ಖ್ಯಾತಿಯಿಂದ ಗುಣಪಡಿಸುವ ಔಷಧಗಳು.

1. ಮಹಾಮದನ ಕಾಮೇಶ್ವರಿ ಲೇಹ:—ಬಹಳ ಶ್ರಮಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಘಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು.

2. ಮಹಾಜ್ವರಾಂಕುಶ (ಖಾತ್ರಿ ಗುಣ):—ಇನ್‌ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 8.

3. ಬಾಲಗ್ರಹಗುಟಿಕೆ:—ಕೂಸು ವ ಮಕ್ಕಳ ಅಪಸಾರಕ್ಕೆ ರಾಮಬಾಣ. ಡಜನಿಗೆ ಆಣೆ 10.

4. ಕೋಲೆರಾ ಯಾನೆ ವಾಂತಿಬೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಬೇದಿ ಕೂಡಲೆ ಗುಣ. ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ. ಬಾಟ್ಲಿ 1ಕ್ಕೆ ಆಣೆ 8.

5. ಖಾಸಕುಠಾರ ಗುಟಿಕೆ:—ಇದು ಖಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬುಸ, ಕೆಮ್ಮು, ಇವು ಗುಣ. ಡಜನಿಗೆ ಆಣೆ 10.

6. ಮೇಹಕುಠಾರ:—ಮೂತ್ರಕೃಚ್ಛ್ರ, ಅಶ್ಮರಿ, ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು; ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ. 16 ದಿವಸದ ಔಷಧಿ. ಕ್ರಯ ರೂ. 2.

7. ಇಚಾ ಭೇದಿ:—ಆಯಾಸವನ್ನು ಉಂಟುಮಾಡದ ಸುಖವಿರೇಚಕ. ಬಾಟ್ಲಿ 1ಕ್ಕೆ ಆಣೆ 12.

8. ಭೃಂಗರಾಜತೈಲ:—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ಸೊಂಪಾಗಿಯೂ ಮಾಡುವುದು. ಬಾಟ್ಲಿ 1ಕ್ಕೆ ಆಣೆ 12.

9. ದಂತಮಂಜನ:—(ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ವಸಡುಗಳ ದೀಗು, ಕೀವು ಯಾ ರಕ್ತಬರುವುದು, ಮುಂತಾದ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್, ಮಂಗಳೂರು. ದ. ಕ.

ಅಪೂರ್ವ ಸಂದರ್ಭ.

[illegible] ಕೆಳಗೆ ಬರೆದ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು. [illegible]

M. Anantha Prabhu,
The Tailoring House and
School of Scientific Tailor's Cutting,
MANGALORE, SOUTH KANARA.

ಹಾರ್ಮೋನಿಯಂ ಸ್ವಯಂಬೋಧಿನೀ

ಮೂರನೆಯ ಛಾಪೆ.

ಈ ಪುಸ್ತಕದಲ್ಲಿ ಹಾರ್ಮೋನಿಯಂ ವಾದ್ಯದ ನಕ್ಷೆಯೂ ಅದನ್ನು ಬೋಧಕರ ಸಹಾಯವಿಲ್ಲದೆ ಉಪಯೋಗಿಸುವ ವಿಧಾನವೂ ಮತ್ತು ಎಲ್ಲರಲ್ಲಿಯೂ ಬಳಕೆಯಲ್ಲಿರುವ ಪುರಂದರದಾಸರ ಕೀರ್ತನೆಗಳೂ, ಸುಲಭವಾದ ನಾಟಕದ ಮಟ್ಟುಗಳಲ್ಲಿ ನೂತನವಾಗಿ ರಚಿಸಲ್ಪಟ್ಟಿರುವ ದೇವರ ನಾಮಗಳೂ ಸ್ವರಸಹಿತ ಕೊಟ್ಟಿರುತ್ತದೆ. ಇದಲ್ಲದೆ ಶಾಸ್ತ್ರೀಯವಾಗಿ ಸಂಗೀತ ಕಲಿಯುವವರಿಗೆ ಅನುಕೂಲವಾಗುವಂತೆ ಸರಳೆ, ಜಂಟಿ ವರಸೆಗಳು, ಅಲಂಕಾರಗಳು, ಸ್ವರಜತಿಗಳು, ವರ್ಣಗಳು ತ್ಯಾಗಯ್ಯರ್, ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್ ಇವರುಗಳಿಂದ ರಚಿತವಾದ ತೆಲುಗು ಕೀರ್ತನೆಗಳು ಸಹ ಸ್ವರಸಹಿತ ಕೊಟ್ಟಿದ್ದೇವೆ. ಈ ಛಾಪೆಯಲ್ಲಿ ಎರಡನೆ ಛಾಪೆಗಿಂತ ಹೆಚ್ಚಾಗಿ ಕೆಲವು ಕೀರ್ತನೆಗಳಿವೆ. ಪುಟಗಳು ೯೫. ಬೆಲೆ ೧೦ ಆಣೆ.

ರಾಮಾಯಣ ಸಂಗ್ರಹ ಬಾಲಕಾಂಡ ೦—೬—೦. ಸುಭದ್ರೆ ೦—೬—೦.

ವಿಳಾಸ:—

ಎಚ್. ಎನ್. ರಾವ್. ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುಗಂಧ ಕಲಾನಿಧಿ.

ಅಲ್ಪವಾದ ಬೆಲೆ! ಮಹತ್ತಾದ ವಿಷಯ!!

ಈ ಪುಸ್ತಕದಲ್ಲಿ ಅಪೂರ್ವವಾದ ೨೦ ವಿಧ ಊದಕಡ್ಡಿ, ಅನೇಕ ವಿಧ ಗಂಧದ ಬಿಲ್ಲೆ, ಸ್ನಾನಚೂರ್ಣಗಳು, ಅಂಬರ್, ದಂತಮಂಜನ, ಅಬೀರ್‌ಪುಡಿ, ಅನೇಕ ಬಗೆ ಸುವಾಸನೆ ಎಣ್ಣೆ, ಷೇವ್‌ಬಾಂ, ಪನ್ನೀರು, ವಿಲಾಯತಿ ಪನ್ನೀರು, ಕರ್ಪೂರ, ಅಭ್ಯಂಗನಕ್ಕನುಕೂಲವಾದ ತೈಲ ಇವೇ ಮೊದಲಾದ ೧೦೬ ವಿಷಯಗಳು, ಮೊದಲನೆ ಭಾಗದಲ್ಲಿಯೂ, ಎರಡನೆ ಭಾಗದಲ್ಲಿ ಗಾಜು, ರಸಗನ್ನಡಿ, ಚೀನಾಪಾತ್ರೆ, ವಾರ್ನೀಸ್, ಸಿಮೆಂಟ್, ಕಾಗದ, ಪೆನ್ಸಿಲ್, ಬೆಂಕಿಕಡ್ಡಿ, ದಂತ ಕೆಲಸ, ದಂತಕ್ಕೆ ಅನೇಕ ವಿಧ ಬಣ್ಣಕೊಡುವಿಕೆ, ಪಾಲೀಸ್, ಕಾಪಿಂಗ್ ಪ್ರೆಸ್, ಮತ್ತು ಇಂಕಿ, ಲಿತೋಗ್ರಾಫಿ ಇಂಕಿ, ಲಕೋ ಪ್ರೆಸ್ ಇಂಕಿ, ಮತ್ತು ನಾನಾ ವಿಧ ಇಂಕಿ, ಇಂಕಿಪೌಡರು, ಕಾಗದಕ್ಕೆ ಮೇಣಗಳು, ಸ್ಲೇಟುಬೋರ್ಡು, ಫೋಟೋ ಮುಂತಾದ ೬೦ ವಿಷಯಗಳು. ಒಬ್ಬರ ಸಹಾಯವಿಲ್ಲದೆ ತಿಳಿಯಬಹುದು. ಈ ಪುಸ್ತಕವು ನಿಮ್ಮ ಬಳಿ ಇದ್ದರೆ ಒಬ್ಬ ಅನುಭವಶಾಲಿಯಾದ ಬೋಧಕನಿದ್ದಂತೆಯೇ. ಬೆಲೆ ರೂ. ೧—೦—೦.

ವಿಳಾಸ:— ಕೆ. ಪುಟ್ಟಪ್ಪ, ಕಲಾಪ್ರಸಾರಕ ಕಾರ್ಯಾಲಯ,
ನಂ. 12 ಟ್ಯಾಂಕ್‌ರೋಡು,
ಬೆಂಗಳೂರು ಸಿಟಿ.

THE BEST COOLING GLASS.

ಹಸನಾದ ಕನ್ನಡಕಗಳು.

ಇದನ್ನು ದೊಡ್ಡವರು ಚಿಕ್ಕವರು ಸಹ ಉಪಯೋಗಿಸಬಹುದು. ಇದನ್ನು ಉಪಯೋಗಿಸುವದರಿಂದ ಕಣ್ಣುಗಳು ಯಾವಾಗಲೂ ತಂಪಾಗಿರುವದು. ಮತ್ತು ಗಾಳಿ, ಮಣ್ಣು ಮುಂತಾದವುಗಳು ಕಣ್ಣಿಗೆ ಬೀಳದಂತೆ ನಾಲ್ಕು ಬಿಲ್ಲೆಗಳಿರುವವು. ಇದರ ಕಂಬಿಗಳು ಯಾವಾಗ್ಲೂ ಬೆಳ್ಳಿಯಹಾಗೆ ಇರುವದು.



ಇದರಲ್ಲಿ ಹಸರು, ಊದ, ಮೇಘವರ್ಣ ಮೊದಲಾದವುಗಳಿರುವದು. ಇದನ್ನು ಉಪಯೋಗಿಸುವದರಿಂದ ಕಣ್ಣಿಗೆ ಬಿಸಲಿನ ಝಳ ತಗಲದು. 1 ನಂಬ್ರ ಇದರ ಕ್ರಯ ರೂ. 1-4-0. 2 ನಂಬ್ರ ರೂ. 2-0-0.

ವಿಳಾಸ:— ಮಹಾರಾಟ ಟ್ರೇಡಿಂಗ್ ಕಂಪೆನಿ,
ಸಾಹುಕಾರ ಪೇಟೆ, ಮದರಾಸ್,

---

೨೪ ಗಂಟೆಗಳೊಳಗಾಗಿ ಖಂಡಿತ ಗುಣಮಾಡುವ

ಸಾಂಟಲ್ ಮೆಡಿ ಎಂಬ ಗಂಧದೆಣ್ಣೆಯ ಗುಳಿಗೆಗಳು.

ಇಂಗ್ಲಾಂಡ್, ಪಾರಿಸ್, ಇಂಡಿಯಾ, ಸಿಲೋನ್, ಮೊದಲಾದ ದೇಶಗಳಲ್ಲಿ ಲಕ್ಷಾವಧಿ ಜನಗಳು ಉಪಯೋಗಿಸಿ ಸುಖಪಟ್ಟು ಇದ್ದಾರೆ.

(Made in France)



ಕೆಟ್ಟ ಸಹವಾಸಗಳಿಂದ ಬರಮಾಡಿಕೊಂಡ ಮೂತ್ರಕೋಶ ಸಂಬಂಧವಾದ ವ್ಯಾಧಿಗಳನ್ನು ಅಂದರೆ ಕೀವು (ಪಸರ) ಬರುತ್ತಿದ್ದರೂ, ಬಿಳುಪು ಹೋಗುತ್ತಿದ್ದರೂ, ಉರಿಯುತ್ತಿದ್ದರೂ, 24 ಗಂಟೆಗಳೊಳಗಾಗಿ ಗುಣಮಾಡುವದು. ಬಹಳ ಹಳೆಯ ವ್ಯಾಧಿಯಾದರೆ 3-4 ದಿನಗಳು ಸೇವಿಸುವದರಿಂದ ಖಂಡಿತ ಗುಣಮಾಡುವದು.

ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು.

ದೊರೆಯುವ ಸ್ಥಳ:— ಇದರ ಬೆಲೆ ಡಬ್ಬಿ 1—12—0.

ನಮ್ಮ ವಿಳಾಸ:— ಸಿಟಿ ವಾಚ್ ಕಂಪೆನಿ.
16-ತಿರುಪತಿ ಬೀದಿ, ಮದರಾಸು.

[illegible]

ಕನ್ನಡ ಪಾಠಪುಸ್ತಕಗಳು.

	ರೂ.	ಆ.	ಪೈ.		ರೂ.	ಆ.	ಪೈ.
ರಾಮಾಯಣ ಸಂಗ್ರಹ— ಬಾಲಕಾಂಡ	0	6	0	ಚಂದ್ರಹಾಸ	0	2	0
ಸುಭದ್ರೆ	0	6	0	ಗುಣಾಕರಾಖ್ಯ	0	6	0
ಶರವಾಳ	0	12	0	[illegible] ಭಾಗ I	0	4	0
ಶಬ್ದಸಾರ ಭಾಗ 1	0	8	0	,, ,, II	0	3	0
ಅಕ್ಬರ್ ಚರಿತ್ರೆ	1	1	0	,, ,, III	0	4	6
[illegible] ಚರಿತ್ರೆ	1	0	0	ಹೊಸ ಪುಸ್ತಕಗಳು			
ಸುಮತಿಮದನಕುಮಾರ				ರಿಪವಲ್ಲರಿ	0	6	0
ಚರಿತ್ರೆ 1	0	8	6	ಸುಶೀಲ	0	1	6
[illegible]	0	6	0	ಚಂದ್ರಮುಖಿ	0	8	0
ಸಾವಿತ್ರಿ ಚರಿತ್ರೆ	0	2	3	ಸಂಚಾರಕ	0	6	0
ರಮಾನಂದ	0	10	0	ಅಬಲಾ ಸಚ್ಚರಿತ್ರ ರತ್ನಮಾಲೆ	2	0	0
ಸುಪ್ರಿಯ	0	13	0	ಶರ್ಮಿಷ್ಠೆ	0	12	0
ಪ್ರಬಂಧಮಂಜರಿ	0	14	0	ಶಬ್ದತ್ರಯ (ಬಾಲವ್ಯಾಕರಣ)	0	3	6
ಪದಾರ್ಥವಿಜ್ಞಾನ ಪಾಠ	0	14	0	ಹಿಂದೂ ಸ್ತ್ರೀವಿವೇಕ	0	10	0
ಜ್ಯೋತಿಶಾಸ್ತ್ರ	1	0	0	ಪದ್ಮಿನಿ	0	12	3
ಪ್ರಹ್ಲಾದ	0	2	0	ದಾಕ್ಷಾಯಣಿ	0	8	0
ಧ್ರುವ	0	2	0	ಮಹಾರಾಣಿ ಲಕ್ಷ್ಮೀಬಾಯಿ	0	12	0

ಇತ್ಯಾದಿ ಎಲ್ಲಾ ಸ್ಕೂಲ್ ಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ.

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.



ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೨ನೇ ಇಸವಿಯ ೫ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನೆವಂತಿಕೆಯಾಗಿ ತಾ. ೧೮-೮-೧೯೦೮ನೇ ಇಸವಿಯಿಂದ ತಾ. ೧-೯-೧೯೧೮ನೇ ಇಸವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂಥ ವೇಳೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅವಶ್ಯಕವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದದ್ದು ಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂಥ ವೇಳೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗ ನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ, ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋದು ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಸ್ತು, ಇಷ್ಟಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ ಜಡು, ಗುದ್ದನ್ನದ ಬೇನೆ, ಹುರುಕು ಕಜ್ಜಿ, ಗಜಗರ್ಣ, ತದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟು ಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ತೋರಗೆಮ್ಮು, ಅರವಿ, ಮುಟ್ಟುದೋಷ, ಹೊಟ್ಟೆ ಬೊಬ್ಬೆ ಬಾಗೋಣ, ವೈ ಹೊರಬೀಳೋಣ, ಮತ್ತು ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದ ಇದ ಅನೇಕ ರೋಗಗಳು, ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದುಕಾಲುತೊಲಿ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಬುದ್ದಿಕ್ಕೆ 5 ಆಣೆ. ಟೋಕದ ಬಾಟ್ಲಿ ಒಂದಕ್ಕೆ 8 ಆಣೆ. ವಿ. ಪಿ. ಖರ್ಚು ಬೇರೆ ಕೊಳುವದು. ಒಂದು ಡಜನ್ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಷನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ೧೧ರಿಂದ ೧೧ ಬಾಟಲಿಗಳ ವರೆಗೆ ತೆಗೆದುಕೊಂಡರೆ ಕಮಿಷನ್ ಇರುವದಿಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬೀಳುವದು. ಒಂದುಕಾಲುತೊಲೆಯ 3 ಬಾಟಲಿಗಳು ಒಂದೆ ಸಾರಿ ತಕ್ಕೊಂಡರೆ ಒಂದು ಬಾಟಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧದ ಫೋಟೋ ಹೊರಟರೆ ತರಿಸಿಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಚೀಟಿಗಾಗಿ ಬೇಕಾದಲ್ಲಿ ಪೋಸ್ಟ್ ಕಾರ್ಡ ಬರೆದರೆ ಇದರ ಹೊರತೆಯಲ್ಲಿಲ್ಲ. ಅನುಪಾನ ಪತ್ರಗಳು ಕನ್ನಡ, ಮರಾಠಿ, ಮುಸಲ್ಮಾನ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟ್ಲಿಯು ಸೋಬತ ಸಿಗುವವು. ತಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
33 ಹೆಡ್ ಆಫೀಸ್ ಶಹಾಪೂರ, (ಬೆಳಗಾಂವ).

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ

ಪ್ಲೇಗ್, ಕೊಲೇರಾ ಮತ್ತು ಇನ್‌ಫ್ಲುಯೆಂಜಾ.

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು. ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೆಟ್ಟಿಗೆ ರೂ. 2—2—0	ಕೊಲೇರಾ ಔಷಧದ ದೊಡ್ಡ ಸೆಟ್ಟಿಗೆ ರೂ 1—2—0
" ಸಣ್ಣ " " 1—6—0	" ಸಣ್ಣ " " 0-12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸೆಟ್ಟಿಗೆ ರೂ. 1—12—0

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ.

ವಿಳಾಸ — ಮೆನೇಜರ್, ಆಯುರ್ವೇದಾಶ್ರಮ,

55 ಆಚಾರಪ್ಪನ ಬೀದಿ,

ಜೋರ್ಜಟೌನ್, ಮದರಾಸ್

ತಂತಿ ವಿಳಾಸ.—

ಪಂಡಿತ್, ಮದರಾಸ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್ ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನಾನು ಹಾಗೂ ವೈದ್ಯರ ಸಮಯವನ್ನು ಕಾದು ಕೊರೆಯಿಡುವುದು ನಿಜವಾಗಿಯೂ ತಪ್ಪುವುದು

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಲೇನೆ ಬಲಹೀನತೆ ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಸೆಳೆವು, ಜ್ವರ, ಕೆಮ್ಮು ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0
ಪ್ರತಿ 20 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ) — ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ ಒಂದೇಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ ದಿನಜ್ವರ ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ ಸೀಸೆಗೆ ರೂ 1 5ಕ್ಕೆ ಒಂದು ಇನಾಮು

ಶ್ರೀನಿವಾಸತೈಲ—ಪ್ಲೇಗಿನ ಗೆಡ್ಡೆ ಕರಗುತ್ತದೆ ಸಂದುಗಳ ನೋವು ನೀರಲ ಹೋಗುತ್ತದೆ ಸೀಸೆಗೆ 3 ಆಣೆ 5ಕ್ಕೆ ಒಂದು ಇನಾಮು

ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳ ಗುಣವಾಗುತ್ತಾಬರುತ್ತವೆ ಸೀಸೆಗೆ ರೂ 1 5ಕ್ಕೆ ಒಂದು ಇನಾಮು

ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ ಅಜೀರ್ಣಭೇದಿ, ಕ್ರಿಮಿ ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚುರುಕಾಗಿ ಪುಷ್ಟಿಯುಳ್ಳವರಾಗುತ್ತಾರೆ ಸೀಸೆಗೆ ಆಣೆ 12 5ಕ್ಕೆ ಒಂದು ಇನಾಮು

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಒಂದು ಕುಪ್ಪಿಯ ಕ್ರಯ ೧೨ ಆಣೆ. ಪೋಸ್ಟು ಖರ್ಚು ೭ ಆಣೆ.

ಕೇ. ಟೀ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ

"ಕಾಮಶಾಸ್ತ್ರ"

ಉತ್ತಮವಾದ ಈ ಪುಸ್ತಕವು ಅನುಕೂಲವಾಗಿ ತಮ್ಮ ದೇಹದ ವಿಷಯಕ್ಕೆ ಮತ್ತು ಆರೋಗ್ಯ ಅನುಕೂಲಕ್ಕೆ ತಕ್ಕ ೫ ಬರಿಯುವಲ್ಲಿ ಅಂಚೆಯ ಹಾಸಲು ಸಹಾ ಸ್ವೀಕರಿಸದೇ ಕಳುಹಿಸುವೆವು.

ಮತ್ತು

ಪ್ರಸಿದ್ಧವಾದ ಆತಂಕನಿಗ್ರಹ ಗುಳಿಗೆಗಳನ್ನು ಯಾವಾಗಲೂ ತಮ್ಮ ಪ್ರಿಯಮಿತ್ರರ ಹಾಗೆ ಭಾವಿಸಿ ಉಪಯೋಗಿಸುವಲ್ಲಿ ನಿರಾಧಾರವಾದ ಆಲೋಚನೆಗಳನ್ನು ಹೋಗಲಾಡಿಸಿ ಅಮೃತದ ಹಾಗೆ ದೇಹದಾರ್ಢ್ಯವನ್ನುಂಟುಮಾಡುತ್ತಾ ಇರುವುದು ಕ್ರಯ ರೂ 1 ಹೆಚ್ಚರಿಗೆಯಿಂದ ಮರೆಯಬಾರದು

ವಿಳಾಸ —

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು

Local Agents **Raphael & Co**,

Brito Buildings,

Hampankatta, MANGALORE

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ)

ನಮ್ಮಿಂದ ಕಳುಹಿಸುವ ಡಬ್ಬಿಗಳನ್ನು ತೆಗೆದುಕೊಳ್ಳುವಾಗ ಡಿ ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ ಈ "ಸಾಲಾಮಿಸ್ರಿ ಮುರಬ್ಬಾ"ವಿನ ಸೇವನೆ ಯಿಂದ — ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಾಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿರುವುದು ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು ಧಾತುವನ್ನು ಕೆಟ್ಟಿಸುವುದು, ಸೊಂಟದ ನೋವು ಸ್ವಲ್ಪಮಾತ್ರವೂ ಇರಲಾರದು ಈ ಸಾಲಾಮಿಸ್ರೀ ಎಂಬುದು ಕಾಬೂಲ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್ ಪಿನಾಂಗ್, ಆಫ್ರಿಕ ಕಲ್ಕತ್ತ ಬೊಂಬಾಯಿ ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ ಬೇಕಾದವರ ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು ಇದನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟಿನ ಮೂಲಕ ಪಡೆಯಬಹುದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳ ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ ೨ ೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರವರೆಗೂ ಗುಣ ಕೊಡುತ್ತೆ ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು ಕ್ರಯ ಒಂದು ಡಬ್ಬಿಗೆ ರೂಪಾಯಿ 2

ಈಗ ಭಾಂಗಿಯ ಚಾರ್ಜ್ ಹೆಚ್ಚಿರುವುದರಿಂದ ಕೆಲವು ದಿನಗಳ ವರೆಗೆ ಟಪ್ಪಾಲು ಖರ್ಚ 1 ಡಬ್ಬಿಗೆ ೮ ಆಣೆ 2 ಯಾ 3 ಡಬ್ಬಿಗಳಿಗೆ 12 ಆಣೆ

ಡಿ ಮನ್ನಾಲಾಲ್, ಡಿಲ್ಲಿ ವೈದ್ಯರು,

ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ

ಸುಲಭ ಕ್ರಯ!! ಗುಣ ಹೆಚ್ಚು!!!

ರೊಯಾಲ್ ಇಂಡಿಯನ್ ಭಾಂ.

(ರಿಜಿಸ್ಟರ್ಡ)

ಇದೇ ಗುರುತನ್ನು ಲಕ್ಷ್ಯದಲ್ಲಿಡಿರಿ



ಬಾಟ್ಲಿ ಒಂದರ ಕ್ರಯ ಆಣೆ ೮.

ಹಿಂದೂಸ್ಥಾನದಲ್ಲಿ ಬೆಳೆಯುವ ಉತ್ಕೃಷ್ಟವಾದ ವನಸ್ಪತಿಗಳಿಂದ ಶೋಧಿಸಿ, ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು—ಇದರ ಉಪಯೋಗದಿಂದ ತಲೆನೋವು, ಸಿಡಿಕ ಶಿರೋಭಾರ, ಗಂಟು, ಗಂಟಲು ನೋವು, ಎದೆಶೀತ ಎದೆನೋವು, ಉಬ್ಬಿದ ವಾತ ಸಂಧಿವಾತ, ಅರ್ಧಾಂಗವಾಯು, ಉಳುಕ, ಘಾಯ, ಬಹುಮೂ ಸೊಂಟದ ನೋವು, ಚಳಿ ಇವೇ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ಬಾಣ ಬಿಟ್ಟಂತೆ ಗುಣಪಡಿಸುತ್ತದೆ ಸಮುದ್ರ ಪ್ರಯಾಣ, ರೈಲ್ವೆ ಮುಖಾಂತ ಯಾ ಹಳ್ಳಿಹಳ್ಳಿಗಳಲ್ಲಿ ಡಾಕ್ಟರ ಸಹಾಯವಿಲ್ಲದೆ ಇದ್ದ ವ್ಯಕ್ತಿಯೊಬ್ಬರು ಒಂದು ಬಾಟ್ಲಿಯನ್ನು ಇಟ್ಟುಕೊಳ್ಳುವದು ಅಗತ್ಯ ಒಂದು ಡಜನಿಗೆ ರೂ ೫—೦—೦, 24 ಬಾಟ್ಲಿಗೆ ರೂ ೯—೮—೦ 50 ಬಾಟ್ಲಿಗೆ ರೂ ೨೦—೦—೦ ವಿ ಪಿ ಖರ್ಚು ಪ್ರತ್ಯೇಕ

"ಗಜಕರ್ಣದ ಮುಲಾಮು" ಡಬ್ಬಿ ಒಂದರ ಆಣೆ ೪, ದಂತಮಂಜನ, ಕಣ್ಣಿ ಮುಲಾಮು ಆಣೆ ೨, ಹೆಯರ್ ಆಯಿಲ್, ಬೇಳು ಕಡಿತದ ಮದ್ದು, ಇನ್ನೂ ಅನೇಕ ತರದ ಮದ್ದುಗಳನ್ನು ತಯಾರಿಸಿದ್ದೇವೆ. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಶನ್ ಕೊಡುವೆವು

ಸೂಚನೆ —ನಾವು ಮುಂಬಯಿಂದ ರಫ್ತಾಗಲಕ್ಕೆ ವಿಲಾಯಿತಿಯಿಂದ ಬಂದ ಪೇಟೆಂಟ ಔಷಧಗಳನ್ನೂ, ಇತರ ಮಾಲನ್ನೂ ಅದಷ್ಟು ಮಟ್ಟಿನ ಕಮ್ಮಿ ದರದಲ್ಲಿ ಕಳುಹಿಸುವ ಏರ್ಪಾಟನ್ನು ಇಟ್ಟಿರುತ್ತೇವೆ.

Manora & Co,

Hill Road, P. O. Bandra,

BOMBAY

ತೈಲಿಯ ಹಾರ್ಲೆಮ್ ಆಯಿಲ್

(HAARLEM OIL).

ತ್ವರೆಯಲ್ಲಿ ನಿಮ್ಮ ಆರ್ಡರುಗಳನ್ನು ಬರಮಾಡಿಸಿಕೊಳ್ಳಿರಿ!

ಹಾರ್ಲೆಮ್ ಆಯಿಲ್ ಎಂದೆನಿಸಿಕೊಳ್ಳುವ ಈ ಔಷಧವು ನರಸಂಸಾರರನ್ನು ಕಾಡುತ್ತಿರುವ ಎಲ್ಲಾ ಕಾಯಿಲೆ ಕಸಾಲೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 300 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭಾವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney,) ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಆಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ. ಮೂರೇ ದಿನದ ಚಿಕಿತ್ಸನೆಯಿಂದ ಇನ್‌ಫ್ಲುಯೆಂಜಾ ಮೊದಲಾದ ಎಂಥಾ ಕಠಿಣ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯ ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೆ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ. ಕ್ರಯ ಸೀಸೆ 1ಕ್ಕೆ ಆಣೆ 8 ವಿ. ಪಿ. ಬೇರೆ.

ಸಿಫಾರಸು ಪತ್ರ

ಕೆಲವು ವರ್ಷಗಳ ಹಿಂದೆ ಮಂಗಳೂರಲ್ಲಿದ್ದ ಜರ್ಮನ್ ಮಿಶ್ಯನರಿ ಲೇಡಿ ಮಿಸೆಸ್ ಹರ್ಮನ್ ಪ್ರೇಕ್ಲೆಯವರು ಇದೇ ಕಳದ ಮಾರ್ಚಿ ತಾ. 10ರಲ್ಲು ಸ್ಟುಟ್‌ಗಾರ್ಟ್ ಪಟ್ಟಣದಿಂದ್ರ ವಾನಿಂಗ್‌ಟಿಲ್ಲಿ ಕಂಪೆನಿಯವರಿಗೆ ಈ ರೀತಿ ಬರೆದಿರುತ್ತಾರೆ:—ದಯಮಾಡಿ ನಿಮ್ಮ ಕಂಪೆನಿಯ 25 ಶೀಸೆ ಜೆನ್‌ವಿನ್ ಹಾರ್ಲೆಮ್ ಆಯಿಲ್ ಕಳುಹಿಸಿ ಕೊಡಿರಿ. ಇದು ಉತ್ಕೃಷ್ಟವಾದ ಖಾತ್ರಿ ಔಷದಿ ಎಂಬದು ನನ್ನ ಅನುಭವ ಸಿದ್ಧಾಂತ. ನಾನು 1910ನೇ ಇಸವಿಯಲ್ಲಿ ಮಂಗಳೂರಿಗೆ ಹೋಗುವಾಗ ನಿಮ್ಮ ಹಾರ್ಲೆಮ್ ಆಯಿಲಿನ 12 ಶೀಸೆಗಳನ್ನು ಕೊಂಡು ಹೋಗಿದ್ದೆನು. ಇದು ದೇಶೀಯರೊಳಗೆ ಪ್ರಯೋಗಿಸಿದ್ದಲ್ಲಿ ಅತಿ ಸಾಫಲ್ಯವಾಗಿ ಪರಿಣಮಿಸಿತು. ದೇಶೀಯರೊಳಗೆ ಪ್ರಬಲಿಸಿರುವ ಜ್ವರಕ್ಕೆ ಇದು ಅತಿ ಗುಣಕಾರಿಯಾಗಿದೆ ನಂತರ ಕೆಲವು ಕುಟುಂಬಗಳು ಇದನ್ನು ಕುಟುಂಬ ಸಂರಕ್ಷಣೆಯಾಗಿ ಮನೆಮನೆಯಲ್ಲಿ ಇಟ್ಟುಕೊಳ್ಳಲು ತೊಡಗಿದರು. ತನ್ಮಧ್ಯೆ ಯುದ್ಧ ತೊಡಗಿದ್ದರಿಂದ ಹಿಂದೂಸ್ಥಾನದಲ್ಲಿ ಇದರ ವ್ಯಾಪಾರವು ಹ್ಯಾಗಿದೆಂತ ನನಗೆ ಗೊತ್ತಿಲ್ಲ.

ವಿಳಾಸ:— ಹಿಂದೂಸ್ಥಾನದ ಸೋಲ್ ಏಜಂಟರು— ದಿ. ಎಕ್ಲೆಸ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

☞ ವಿಶೇಷ ಸೂಚನೆ:—ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲಿನ ಸೀಸೆಗಳ ಮೇಲೆ Waaning-Tilly Bros ಎಂಬ ದಸ್ಕತು ಇರುವ ಚೀಟು ಇರುತ್ತದೆ. ಇದೇ ನಿಜವಾದ ಹಾರ್ಲೆಮ್ ಆಯಿಲ್ ಎಂತ ತಿಳಿಯತಕ್ಕದ್ದು. ☜

ಆಯುರ್ವೇದ ಶಾಸ್ತ್ರಾನುಸಾರ

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. ಶತಮೂಲಿಕೆಯ ಸತ್ವವು. ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, ಬಹುಕಾಲದ ಕಫ, ರಕ್ತವಾಂತಿಯಾಗುವಿಕೆ, ಹೃದಯದ ದುರ್ಬಲತೆ ಲಿಭ್ವರ (ಕಾಲೆಜ್), ಮೂತ್ರಕೋಶದ ವ್ಯಾಧಿಗಳು ವ ಎಲ್ಲ ತರದ ದುರ್ಬಲತೆಯು ನಾಶಹೊಂದಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು. ಇನ್‌ಫ್ಲುಯೆಂಜಾ ಜ್ವರಕ್ಕೂ, ಅಶಕ್ತ ಜನರಿಗೂ, ಬತ್ತಿಬರುವ ನೆಪ್ಪು ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣ ಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು. ೧೬ ಔನ್ಸಿನ ಬಾಟ್ಲಿ ಗಕ್ಕೆ ರೂ. ೨—೧೨—೦ ಟಿ. ಖ. ವಗೈರೆ ಬೇರೆ.

2. ವಿಜಯಸಂಜೀವಿನಿ ತೈಲ. ಕಾಲತಪ್ಪಿ ಬಹಿಷ್ಠೆಯಾಗುವುದು, ಬಹಿಷ್ಠೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಬಂಧ ವ್ಯಾಧಿಗಳಿಗೆ ದಿವ್ಯ ಔಷಧ. ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ, ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ಗಕ್ಕೆ ರೂ. ೨.

3. ಕೋಲೇರಾ ಗುಳಿಗೆಗಳು. ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕದ್ದಾಗಿದೆ. ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ. ೪೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ. ೧—೦—೦.

4. ವಾತಾಂತಕ. ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ಕಾಣಾಗಿಯೇ ಕಂಡುಬರುವುದು. ಕ್ರಯ ಬಾಟ್ಲಿ ಗಕ್ಕೆ ರೂ. ೧-೮-೦.

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುಪ್ರಶಂಸಾ ಪತ್ರಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷದಲ್ಲಿರಬೇಕು. ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ. ವಿಳಾಸ:—

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್,
ಕೋರನೂರು, (ಮಲಬಾರ).

ಕಾಶಿಯ ಶುದ್ಧ ಹಿತ್ತಾಳೆಯ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಿಗೆಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಒಕ್ಕ ಸೆಟ್ಟು ಗಕ್ಕೆ ರೂ. ೩—೦—೦. ಮಧ್ಯಮ ತರದ ಸೆಟ್ಟು ಗಕ್ಕೆ ರೂ. ೪—೬—೦. ದೊಡ್ಡ ಸೆಟ್ಟು ಉತ್ತಮತರದ ಗಕ್ಕೆ ರೂ. ೫—೦—೦.

ರೇಷ್ಮೆ ಸಾಮಾನು ವಗೈರೆ ಕೇಳಿದಾಗ ಬ್ರಾಹ್ಮಣರಿಗೆ ಇನಾಮಾಗಿ ಕಳಿಸಲಾಗುವದು.

ಪೋಸ್ಟೇಜ್ ಪ್ಯಾಕಿಂಗ್ ಪ್ರತ್ಯೇಕ.

ADDRESS— Siromani Narayanacharya,
Chaukamba, BENARES CITY.

ವಿಳಾಸ— ಶಿರೋಮಣಿ ಉಡುಪಿ ನಾರಾಯಣಾಚಾರ್ಯ,
ಚೌಕಂಬಾ, ಕಾಶಿ.

ರಬ್ಬರಿನ ಅಕ್ಷರಗಳು.

ಈ ಅಕ್ಷರಗಳು ವಿಲಾಯತಿಯಲ್ಲಿ ತಯಾರಾದವು. ಈಗ ದಿನಗಳು ಕಾಗದ ಮುಂತಾದವುಗಳನ್ನು ಅಚ್ಚುಹಾಕಲು ಬಹು ಅಂದವಾಗಿ ನಾವೇ ಪ್ರಿಂಟುಮಾಡಿಕೊಳ್ಳಬಹುದು. ಈ ಪೆಟ್ಟಿಗೆಯೊಳಗೆ ಇದ್ದರೆ ರಬ್ಬರು ಸೂಕ್ಷಿಸುಗಳ ಅಗತ್ಯವೇ ಬೇಡ. ಅದರಲ್ಲಿ ಇಂಕ್‌ಪ್ಯಾಡ್, ಚಿಮಟಿ, ಇಂಕ್‌ಬಾಟಲ್ ಸಹಿತ ಸೇರಿದೆ.

ಕ್ರಯ 110 ಅಕ್ಷರಗಳ ಪೆಟ್ಟಿ	ರೂ.	1–8–0
„ 170 „ „	„	1–14–0
„ 250 „ „	„	2–8–0
„ 350 „ „	„	3–12–0

ಸ್ವಿಸ್ ಪಾಕೆಟ್ ವಾಚ್.

ಈ ಕಂಗಳೊಳಗಾಗಿ ತರಿಸಿಕೊಳ್ಳುವವರಿಗೆ ೧೧ ಬಹುಮಾನ, ೪ ವರ್ಷ ಗ್ಯಾರಂಟಿ ಸಹಿತ ರೂ. ೪—೮—೦.

ಈ ಗಡಿಯಾರದ ಮುಚ್ಚಳಗಳು ಗಿಲಿಟಿನವು. ಘಂಟೆ, ಘಳಿಗೆ ಸರಿಯಾಗಿ ಎರಡು ಕಡೆಯೂ ತೋರುವವು. ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಇಲ್ಲ. ಇದನ್ನು ನೋಡಿದರೆ ಗೊತ್ತಾಗುವದು. ಇದನ್ನು ಬೇರೆ ಕೆಲಸದಿಂದ ನಮೂನಾಗಿ ತಯಾರಿಸಿದೆ. ಬಹುಮಾನಗಳ ವಿವರ:—ಕರವಸ್ತ್ರ ೧, ಕನ್ನಡಿ ೧, ಗುಂಡಿಗಳು ೪, ಗಿಲಿಟಿನ ರೋಜಾ ಹೂವು ೧, ಚೀಸಣಿಗೆ ೧, ಬ್ರೋಚ್ ೧, ಬಾಚಣಿಗೆ ೧, ಸೆಂಟ್ ಬುದ್ದಿ ೧, ಜುಮ್ಮಾ ೧೧ ಬಹುಮಾನಗಳ ಸಹಿತ ರೂ. ೪—೮—೦;

ವಿಳಾಸ:— ರಾಸ್‌ವಾಚ್ ಎಂಡ್ ಕೋ,
ಇರುಳಪ್ಪನ ಬೀದಿ, ಮದ್ರಾಸ.

ಶಾಶ್ವತವಾದ

ದೇಹಶಕ್ತಿಯನ್ನು ದುರಭ್ಯಾಸಗಳಿಂದ ಚೆಲ್ಲಿಬಿಟ್ಟಿರುವಿರೋ ಕಳಕೊಂಡಿರುವಿರೋ ಈ ಮರಣಾಂತರವು ಮುಟ್ಟಿರುವಿರೋ?

ಲೋಕಪ್ರಸಿದ್ಧವಾದ

ಸಕಲರೋಗ ಸಂಹಾರಿ

ಎಂಬ ಈ ಔಷಧದ ಸೇವನೆಯಿಂದ ದೇಹಕ್ಕೆ ಶಕ್ತಿ ಬರುವುದು... ಸ್ತ್ರೀಪುರುಷರ ಎಲ್ಲಾ ರೋಗಗಳ ಮೇಲೆ ... ಉಪಯೋಗಿಸುವ ವಿಧದ ಕಾಗದವು ಔಷಧದ ಜತೆಯಲ್ಲಿ ಕಳಿಸಲಾಗುವುದು. ಕ್ರಯ 15 ಟಿಕಡಿ ಡಬ್ಬಿ 1ಕ್ಕೆ ರೂ. 2–0–0.

ವಿಳಾಸ— ಡಾ! ಎಂ. ಪೀಟರ್,
ಇರುಳಪ್ಪನ ಬೀದಿ, ಮದ್ರಾಸು.

Printed & Published by V. S. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ! । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೪ — ಮಂಗಳೂರು, ತಾರೀಕು ೧೪ನೇ ಮೇ ಶುಕ್ರವಾರ ೧೯೨೦. — ಸಂಚಿಕೆ ೨೦

'ನೈಟ್ರೇಟ್ ಆಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಬಡಿಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕಾಗದ್ದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

'ಕೃಷಿ ಸುಧಾರಣೆ' ಎಂಬ ಸಚಿತ್ರ ಪಟಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Director, Chilean Nitrate Committee,
(INDIAN DELEGATION),
1, Royal Exchange Place, CALCUTTA.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶೀತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ. ಕ್ರಯ ಡಬ್ಬಿ 1ರ 10 ಆಣೆ ಡಜನ್ 1ಕ್ಕೆ ರೂ. 5—12—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ ಒಂದರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುಭ್ರವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ ೧೦ ಆಣೆ 2.

ಅಮೃತಾಂಜನ ಡಿಪ್ೋ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ಸ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ತ್ವರೆ ಮಾಡಿರಿ!! ಬೇಗನೇ ಬರೆಯಿರಿ!!

ಪಂಡಿತ ಮಂಗಳೂರು ನಾರಾಯಣಾಚಾರ್ಯರಿಂದ
ಗುಣಿಸಿ ಪರಿಶೋಧಿಸಲ್ಪಟ್ಟ

ರೌದ್ರಿ ಸಂವತ್ಸರದ ಪಂಚಾಂಗವು.

ಬೆಲೆ ಪ್ರತಿ ಒಂದಕ್ಕೆ 3 ಆಣೆ. 25 ಪ್ರತಿಗಳಿಗೆ ರೂ. 3-12-0

50 ಪ್ರತಿಗಳಿಗೆ ರೂ. 7-0-0. 100 ಪ್ರತಿಗಳಿಗೆ ರೂ. 13-8-0.

ಪ್ರತಿಗಳು ಸಿಗುವ ವಿಳಾಸ:—

ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು

ಪಾಚಕಾಯಾಮೃತ

U. B. Dutt & Co. Calicut

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪುರಾತನದಿಂದ ವನಸ್ಪತಿ ವಿಖ್ಯಾತ ನಾರುಬೇರುಗಳಿಂದಲಾದ ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳು" ಬರುತ್ತಲಿವೆ. ಈ ಭಾಗದಲ್ಲಿ, ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ "ವಾತಕಷಾಯವು" ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂಧು, ಅವಯವ, ಅಂಗಾಂಗ ಮೊದಲಾದುವು ಕೆಂಪಾಗಿ ನೋವುಂಟಾಗುವುದು; ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಮೂತ್ರದಲ್ಲಿ ದೋಷವಿರುವುದು; ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲೀ ನಿಮ್ಮ ಸ್ನೇಹಿತರಲ್ಲಿಯಾಗಲೀ ಕಾಣಿಸಿಕೊಂಡರೆ, ಕೂಡಲೇ ನಮ್ಮ "ಕಷಾಯ" ತೆಗೆದುಕೊಳ್ಳಲು ಪ್ರಾರಂಭಮಾಡಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ, ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕಾಲರಾ, ಕಾಮಾಲೆ, ಉಬ್ಬಸ, ಕೆಮ್ಮು, ಜ್ವರ, ತಲೆನೋವು, ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಅಮಶಂಕೆ, ಮೊದಲಾದವುಗಳಿಗೆಲ್ಲಾ ದಿವ್ಯೌಷಧಗಳಿವೆ. "ಕ್ಯಾಟಲಾಗ್"ನ್ನು ನೋಡಿ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ,
ಕಲ್ಲಿಕೋಟೆ ಮಲಬಾರ.

Come! See! & Try!

P. Narayana Vaijappa Bhandary & Co.,

Cloth Merchants,
Car Street, MANGALORE.

ಮದುವೆ ಉಪನಯನಗಳು, ಹಬ್ಬ ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗೀ ವಸ್ತ್ರಗಳು, ಧೋತಿಗಳು, ಟವೆಲುಗಳು ಇತ್ಯಾದಿ ಉಡುಪುತೊಡುಪುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

ಸಗಟು ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು. ನಗದಿ ಗಿರಾಕಿಗಳಿಗೆ ಡಿಸ್ಕೌಂಟು ಕೊಡಲಾಗುತ್ತದೆ.

ಪ. ನಾರಾಯಣ ವೈಜಪ್ಪಭಂಡಾರಿ ಮತ್ತು ಕಂಪೆನಿ,
ರಥಬೀದಿ, ಮಂಗಳೂರು.

ಸಚಿತ್ರ ಮಾಸಪತ್ರಿಕೆ. ಸಚಿತ್ರ ಮಾಸಪತ್ರಿಕೆ.

ಭಕ್ತಿಸಂದೇಶ

ಡಿಶಂಬ್ರ, ಜನವರಿ, ಫೆಬ್ರವರಿ ತಿಂಗಳ ಸಂಚಿಕೆಯು ಪ್ರಕಟವಾಗಿರುವುದು

ಇವರಲ್ಲಿ ಅನೇಕ ಚಿತ್ರಗಳೂ ಉಪಯುಕ್ತ ವಿಷಯಗಳೂ ಬಂದಿವೆ. ಈ ಸಂಚಿಕೆಯು ಚಂದಾದಾರರಿಂಗಲ್ಲದೆ ಇತರರಿಗೆ ದೊರೆಯಲಾರದು.

ಮಾರ್ಚಿ, ಎಪ್ರಿಲ್ ತಿಂಗಳ ಸಂಚಿಕೆಗಳು ಮುದ್ರಣದಲ್ಲಿವೆ.

ಇವರಲ್ಲಿ ಬರುವ ವಿಷಯಗಳು:—ಶ್ರೀ ವಿವೇಕಾನಂದ ಸರಸ್ವತಿ, ಶ್ರೀ ವಿಷ್ಣುಬಾವಾ ಜೋಗ ಇವರ ಜೀವನ ಚರಿತ್ರೆ (ಚಿತ್ರಸಹಿತ), ಹೊಸವರ್ಷ, ಕಾಶೀಯಾತ್ರಾ ವರ್ಣನೆ, ಪ್ರಸಂಗ ಚಿತ್ರಗಳು, ವಿವೇಕಾನಂದರ ಪತ್ರಗಳು, ಹಿಂದೂ ಜೀವನ ಇತಿಹಾಸದ ಒಂದು ಅವತರಣಿಕೆ (ಯಕ್ಷಗಾನ ಪ್ರಸಂಗ), ಇತರ ಮುಂತಾದ ರಸಭರಿತ ವಿಷಯಗಳೂ ಚಿತ್ರಗಳೂ ಬರುವವು. ಈ ಸಂಚಿಕೆಯು ಚಂದಾದಾರರಿಗೆ ಮಾತ್ರ ದೊರೆಯುವುದು.

ವಾರ್ಷಿಕ ವರ್ಗಣಿ ರೂ. ೩-೦-೦. ಮಾದರಿ ಸಂಚಿಕೆಯ ಬೆಲೆ ಆ. ೬.

ಡಿ. ಕೆ. ಭಾರದ್ವಾಜ, ವಿದ್ಯಾಭೂಷಣ,
ಭಕ್ತಿಸಂದೇಶ ಆಫೀಸು, ಮಂಗಳೂರು, ದ. ಕ.

ಟಿಶ್ಯೂ ರೆಮಿಡಿಸ್

ಎಂಬ

12 ಜೀವರಸಾಯನಿ ಔಷಧಗಳು

ಮತ್ತು

ಹೋಮ್ಯೋಪತಿಕ್ ಔಷಧಗಳು.

ನಮ್ಮ ಗಿರಾಕಿಗಳ ಅನುಕೂಲತೆ ಬಗ್ಗೆ ವಾರದ ಎಲ್ಲಾ ದಿವಸಗಳಲ್ಲಿ ಬೆಳಿಗ್ಗೆ 7½ ಘಂಟೆಯಿಂದ ರಾತ್ರಿ 9 ಘಂಟೆ ತನಕ ಸುಲಭವಾದ ದರದಲ್ಲಿ ಮಾರಲ್ಪಡುತ್ತವೆ.

ಟಿಶ್ಯೂ ರೆಮಿಡಿಸ್ 2 ಡ್ರಾಮಿನ ಸೀಸೆ 1ಕ್ಕೆ	ರೂ.	0—3—6
„ 4 „	„ „	0—6—0
„ 1 ಔನ್ಸಿನ	„ „	0—12—0
ಹೋಮಿಯೋಪತಿಕ್ 2 ಡ್ರಾಮಿನ	„ „	0—3—6

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
(ಶಾರದಾ ಛಾಪಖಾನೆ)
ರಥಬೀದಿ, ಮಂಗಳೂರು.

[illegible]	5,000—0—0
[illegible]	40,000—0—0
[illegible]	35,134—1—11
[illegible]	61,239—12—9
[illegible] Funds	8,258—9—6

[illegible] deposits received for 3, 6, 9 months [illegible] a year and above at 7% at the discretion [illegible] Committee.—In the case of all [illegible] interest will be paid quarterly.

[illegible]lative deposits are received repayable [illegible] at Rs. 50/—per each rupee deposited [illegible]

Current a/c deposits opened free of charge and [illegible] will be paid @ 3½% per annum on the [illegible] balance between the 4th and the last day [illegible] each month.

Loans granted on proper securities and pledges.

A dividend of 8% has been declared for the last year. Shares are available.

Payments to the Corporation may be made [illegible] credit of the Corporation at the Bank of [illegible] and Canara Bank Mangalore.

[illegible]	3,00,000—0—0
[illegible]	50,000—0—0
[illegible]	40,200—0—0
[illegible]	35,134—1—11
ಠೇವಣಾತಿಗಳು ...	61,239—12—9
ಕ್ಷೇಮನಿಧಿ ಮತ್ತು ಇತರ [illegible] ...	8,258—9—6

ಕಾಯಂ ಠೇವಣಾತಿ [illegible] ತಿಂಗಳು 3, 6, 9ರ ಅವಧಿಗಳಿಗೆ ಆಡಳಿತ ಸಭೆಯವರ ಮುನಾಸಬು ಪ್ರಕಾರ ಸಾಲಿಯಾನ್ ಶೇಕಡಾ 6¼% 1 ವರ್ಷಕ್ಕೆ ಮಿಕ್ಕಿದ ಬಾಬಿನಲ್ಲಿ ಶೇಕಡಾ 7% ದರದಲ್ಲಿ ಬಡ್ಡಿ ಕೊಡಲ್ಪಡುವದು. ಎಲ್ಲಾ ಠೇವಣಾತಿಗಳ ಮೇಲಣ ಬಡ್ಡಿ 3 ತಿಂಗಳಿಗೊಮ್ಮೆ ಕೊಡಲ್ಪಡುವದು.

ಪ್ರತಿ ತಿಂಗಳಿಗೆ ರೂ. 1ರ ಪ್ರಕಾರ 45 ತಿಂಗಳುಗಳವರೇಗೆ ವಸೂಲು ಕೊಡುವ ಸಂಚಯದ ಠೇವಣಾತಿಗಳಿಗೆ 45/ತಿಂಗಳ ಅಂತ್ಯದಲ್ಲಿ ಪ್ರತಿ ತಿಂಗಳಲ್ಲಿ ವಸೂಲು ಕೊಟ್ಟ ರೂ. 1ಕ್ಕೆ ರೂ. 50/ರಂತೆ ವಾಪಸು ಕೊಡಲ್ಪಡುವದು.

ಚಾಲ್ತಿ ಠೇವಣಾತಿಗಳು ಸಂಘದ ಪರವಾಗಿ ಏನೂ ಖರ್ಚು ಇಲ್ಲದೆ ಪಡಕೊಳ್ಳಲ್ಪಡುವವು. ಪ್ರತಿ ತಿಂಗಳ 4ನೇ ತಾರೀಕಿನಿಂದ ಆಖೈರು ತಾರೀಕುವರೆಗೆ ಯಾವದಾದರೊಂದು ದಿನ ಇರುವ ಅತಿ ಕಡಿಮೆ ಠೇವಣಾತಿ ಮೊಬಲಗಿನ ಮೇಲೆ ಸಾಲಿಯಾನ್ ಶೇಕಡಾ 3½ ದರದಲ್ಲಿ ಬಡ್ಡಿ ಕೊಡಲ್ಪಡುವದು.

ಯೋಗ್ಯ ಜವಾಬ್ದಾರಿಯು ಮತ್ತು ಈಡಿನ ಮೇಲೆ ಸಾಲಗಳು ಕೊಡಲ್ಪಡುತ್ತವೆ.

ಪಾಲುವಾಲೀಕರಿಗೆ ಕಳೆದ ವರ್ಷ ಶೇಕಡಾ 8% ದರದ ಬಡ್ಡಿ ಕೊಡಲ್ಪಟ್ಟಿಯದೆ. ಶೇರುಗಳು ಮಾರಾಟಕ್ಕೆ ತಯ್ಯಾರಿವೆ.

ಸಂಘಕ್ಕೆ ಕೊಡಲ್ಪಡುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸು ಬೇಂಕಿನಲ್ಲಿ ಮತ್ತು ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಡಬಹುದು.

UDIPI,
1st February 1920.

Naimpalli Ananda Rao,
Secretary.

[illegible] ಎಂಬುವ [illegible] ಬೇರೆ [illegible]

[illegible]
[illegible]
[illegible] ಅಂಚೆ ವಿಳಾಸವು,
[illegible] ಮತ್ತು ಕಂಪೆನಿ,
[illegible], ಮದ್ರಾಸ್.

[illegible] ಎಲ್ಲಿ[illegible] ಹರ್[illegible]

ಎಂಬುವ [illegible] ಮತ್ತು [illegible]ಗಳಿಗಿಂತ ಅತ್ಯಂತ ಹಿತಕರವಾದ [illegible] ಆರೋಗ್ಯ ಕಾಪಾಡುತ್ತದೆ. [illegible] ತಗ್ಗಿಸುತ್ತದೆ. ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು. ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ.

8 ಔನ್ಸಿನ ಸೀಸೆಗೆ ಕ್ರಯ ರೂ. 1—4—0 ಮಾತ್ರ.

ಡಾಯಬೆಟೂನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ. ಪೂರ್ಣ ಗುಣವಾಗುತ್ತದೆ. ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸೆಗೆ ರೂ. 2 ಮಾತ್ರ. ಅಂಚೆಹಾಸಲು ವಗೈರೆ ಇದರಲ್ಲಿ ಸೇರಿಲ್ಲ. ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವುವು.

P. M. Kamath & Co.,
Chemists & General Merchants,
New Court Road, MANGALORE.

ಅಥವಾ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಮಿ| ಕೆ. ಆರ್. ಲೂವಿಸರನ್ನು ವಿಚಾರಿಸಿದರೆ ಈ ಔಷಧವನ್ನು ಹೊಂದಬಹುದು.

ಸದ್ಬೋಧಕ ಗ್ರಂಥಮಾಲೆ.
(ತ್ರೈಮಾಸಿಕ ಪುಸ್ತಕ).

[illegible] | ವಾರ್ಷಿಕ ಚಂದಾ ಅಂಚೆ ಸಹಿತ ರೂ. 1 ಮಾತ್ರ.

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧಗಳೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ; [illegible], ವಿನೋದಲಹರಿ, ಸ್ಥಳೀಯವಾರ್ತೆ, ವಿಮರ್ಶೆ ಮತ್ತು ಸ್ವೀಕಾರ ಇತ್ಯಾದಿ ವಿಷಯವೂ ಪ್ರಕಟವಾಗುವವು. ಸಮಸ್ತ ಕನ್ನಡಿಗರಿಗೂ ಸಂಗ್ರಹಿಸತಕ್ಕವುಗಳು [illegible] ವಾರ್ಷಿಕ ಚಂದಾ ಅಂಚೆವೆಚ್ಚದೊಡನೆ ಒಂದೇ ರೂಪಾಯಿ [illegible]. ಈಗಲೇ ತಮ್ಮ ಹೆಸರನ್ನು ತಿಳಿಸಿ, ವರ್ಗಣೆದಾರರಾಗಿ ಸೇರುವುದರ [illegible] ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ [illegible].

ವಿಳಾಸ:— ಎಸ್. ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ,
"ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ).

ಅಥವಾ— **S. R. Hebbar & Bros.,**
General Merchants, SURATKAL, S. K.

ಮದನಮಂಜರಿ ಮಾತ್ರೆ.

ಈ ಮಾತ್ರೆಗಳನ್ನು ಉಪಯೋಗಿಸುವದರಿಂದ ಧಾತುವು ಹೋಗುತ್ತಿದ್ದರೂ, ಧಾತುವು ಕೆಟ್ಟುಹೋಗಿದ್ದರೂ ಬಹು ಬೇಗನೆ ಗುಣವಾಗುವದು. ರಕ್ತವನ್ನು ಶುದ್ಧಿಮಾಡಿ, ನರಗಳಿಗೆ ಬಲವನ್ನು ಕೊಟ್ಟು, ಹಸಿವನ್ನು ಹೆಚ್ಚಿಸುವದು. ಕೈಕಾಲು, ಸೊಂಟದ ನೋವುಗಳನ್ನು ಕೂಡಲೆ ಖಂಡಿಸುವದು. ಹಳೆಯ ತಲೆನೋವುಗಳನ್ನು ಸಹ ಬೇಗನೆ ನಿವಾರಣೆ ಮಾಡುವದು.

ಕ್ರಯ ೪೦ ಮಾತ್ರೆಗಳ ಡಬ್ಬಿ ಗಳಿಗೆ ೧—೦—೦

ವಿಳಾಸ:— ಮದನಮಂಜರಿ ಫಾರ್ಮಸಿ,
೨೭ ಕ್ರೈನಾಬಜಾರು ರೋಡು, ಮದರಾಸು

ಕರ್ನಾಟಕ ಮಹಾಶಯರೇ ಓದಿದಿರಾ!

ಮಾನವ ಜಾತಿಯವರ ಶರೀರದ ಮರ್ಮಗಳನ್ನು ಬೋಧಿಸುವ

ಕಾಮಶಾಸ್ತ್ರ ಎನ್ನುವ ಶರೀರ ಮರ್ಮಶಾಸ್ತ್ರ

ಇಲ್ಲದಿದ್ದರೆ, ಮರುಟಪ್ಪಾಲಿಗೇನೇ ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಈ ಶಾಸ್ತ್ರವು ಫ್ರೆಂಚ, ಇಂಗ್ಲಿಷ, ಅಮೇರಿಕನ ಮೊದಲಾದ ಶಾಸ್ತ್ರಗಳಿಂದ ಕನ್ನಡಕ್ಕೆ ಭಾಷಾಂತರ ಮಾಡಲ್ಪಟ್ಟಿದೆ. ಮಾನವ ವರ್ಗದವರಿಗೆ ಬೇಕಾದ ಎಲ್ಲಾ ರಹಸ್ಯಗಳು, ದೀರ್ಘವೃದ್ಧಿಸುವದಕ್ಕೆ ಕಾರಣಗಳು, ಗರ್ಭಿಣಿ ಅನುಸರಿಸುವ ವಿಧವೂ, ಗರ್ಭಿಣಿಗೆ ಬೇಕಾದ ಮರ್ಮಗಳು, ನವಮಾಸದ ಪಿಂಡದ ವಿವರಗಳು, ಶಿಶು ಉತ್ಪತ್ತಿ ವಿಧಿ, ಶಿಶು ಸಂರಕ್ಷಣೆ ಮಾಡುವ ವಿಧ, ಸ್ತ್ರೀಧರ್ಮನೀತಿಗಳು, ಮಾಸ ಋತುದೋಷಗಳು, ಧಾತುರೋಗ ಶಾಸ್ತ್ರ (ಗುಪ್ತವೈದ್ಯ) ಪ್ರತಿಯೊಂದು ಕುಟುಂಬದಲ್ಲಿಯೂ ಸಂಭವಿಸಬಹುದಾದ ಸ್ತ್ರೀಪುರುಷರ ಮರ್ಮರೋಗಗಳು, ಗರ್ಭಿಣಿಯಾದ ಸ್ತ್ರೀಯರಿಗುಂಟಾಗುವ ರೋಗಗಳನ್ನು ಪರಿಹರಿಸಿ ಗರ್ಭಾಶಯಕ್ಕೆ ಶಕ್ತಿಯನ್ನುಂಟು ಮಾಡುವ ಔಷಧಗಳೂ ಇನ್ನೂ ಶರೀರದ ಭಾಗಗಳ ೩೦ ಚಿತ್ರಪಠಗಳ ಸಹಿತ ಗ್ಲೇಜು ಕಾಗದದಲ್ಲಿ ಪ್ರಿಂಟ ಆಗಿ ಮಾರಾಟಕ್ಕೆ ತಯಾರಾಗಿದೆ. ಕ್ರಯ ಪ್ರತಿಗಳಿಗೆ 12 ಆಣೆ.

ಈನಯ ಪ್ರತಿಯಲ್ಲಿ ಇನ್ನು ಕೆಲವು ಪ್ರತಿಗಳು ಮಾತ್ರ ಉಳಿದಿದೆ.

ಕೋಲ (ಮೊಗ್ಗು) ಮತ್ತು ಪಾಕಶಾಸ್ತ್ರ.

ಈ ಪುಸ್ತಕದಲ್ಲಿ ನವೀನ ೧೦೦ ಕೋಲ ಚಿತ್ರಗಳೂ, ಅಡಿಗೆ ಮಾಡುವ ವಿಧ, ಪದಾರ್ಥಗಳೂ ಮತ್ತು ಮಿಠಾಯಿ ದಿನುಸುಗಳೂ, (Sweetmeats) ಪ್ರಸಾದಗಳೂ, ಕೇಕುಗಳೂ, (Cakes) ಬಿಸ್ಕಿಟ್‍ಗಳೂ, (Biscuits) ಪರಬತ್, (Syrup,) ಉಪ್ಪಿನಕಾಯಿಗಳ ವಿಧಾನಗಳು ಮೊದಲಾದ ದಿನಸುಗಳನ್ನು, ಮಾಡುವ ವಿಧಗಳು ಇದರಲ್ಲಿ ಅಡಗಿವೆ.

ಪ್ರತಿ ಒಬ್ಬ ಸ್ತ್ರೀಗೂ ಅವಶ್ಯವಾಗಿ ಬೇಕಾದ ಪುಸ್ತಕ. ಕ್ರಯ ಆಣೆ ೬.

ವಿಳಾಸ:— ಮಹಾರಾಜ ಪುಸ್ತಕಶಾಲೆ,
೧೩ ಅರುಣಾಚಲ ಮೊದಲಿ ಬೀದಿ, ಸಾಹುಕಾರ್ ಪೇಟೆ, ಮದರಾಸ್.

ಮಲೇಜ್ವರ.
ಮಲೇಜ್ವರಹಾರಿ.

ಮಲೆಜ್ವರ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಪರಿಹಾರ. ಬೆಲೆ ೧೨ ಆಣೆ.

ವಿಷಮಯವಾದ ಪದಾರ್ಥಗಳು ಒಂದು ರೋಗ ನಿವಾರಣೆಗೆ ಸಹಕಾರಿಯಾದರೂ ಇನ್ನೊಂದು ರೋಗಕ್ಕೆ ಎಡೆಕೊಡುತ್ತವೆ. ಅಂಥ ವಿಷಮಯವಾದ ಪದಾರ್ಥಗಳು ಇದರಲ್ಲಿ ಲವಮಾತ್ರವೂ ಇಲ್ಲ.

ಹಿಂದುಸ್ಥಾನ, ಬರ್ಮಾ, ಸಿಂಹಳ ಮುಂತಾದ ಪ್ರದೇಶಗಳ ಬೇರೆ ಬೇರೆ ಕೊನೆಗಳಿಂದಲೂ ಕಳೆದ ೩೦ ವರ್ಷಗಳಲ್ಲಿ ಅಸಂಖ್ಯಾತವಾದ ಶಿಫಾರಸು ಪತ್ರಗಳು ನಮಗೆ ಬಂದಿವೆ.

ಪುನೆಯ ಕೃಷಿಕಾಲೇಜಿನ ಅಧ್ಯಾಪಕರಾದ ಡಾ| ಮಾನ್‍ಸಾಹೇಬರು ಈ ರೀತಿಯಾಗಿ ಬರೆದಿರುತ್ತಾರೆ:— "ಬೇರೆ ಬೇರೆ ವಿಧದ ಜ್ವರಗಳ ಸಂದರ್ಭದಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ ಅದರಿಂದ ಕ್ಷಿಪ್ರದಲ್ಲಿ ಗುಣಾಂಶಸಿಕ್ಕಿತು."

ನಮ್ಮ ಏಜಂಟರು ಈ ಮೊದಲೆ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು. ಕಮಿಷನ್ ಮುಂತಾದ ಶರ್ತಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು.

ಕರ್ನಾಟಕ ಬ್ರದರ್ಸ್,
56 ಗಿರಗಾಂವ, ಮುಂಬಯಿ.

Agent:—**The Woollen Mrt,** *Mangalore.*

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸ್ವಚ್ಛವಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವದೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವದೆ ಅನುಕೂಲವಾಗಿ [illegible] ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಿಚ್ಛೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯುವದು.

[illegible]:— ಜೆ. ಎಸ್. ಸೋಜ ಮತ್ತು ಕಂಪೆನಿ,
[illegible] ಮಂಗಳೂರು.

ಇಕ್ಕುಗಂಧಾ ಜೀವನ.

ಅತ್ಯಂತ ಧಾತುಪೌಷ್ಟಿಕ, ಕಾಮೋದ್ದೀಪಕ, ವೀರ್ಯವರ್ಧಕ, ಸ್ಮರಣಶಕ್ತಿದಾಯಕವಾದ ಉತ್ತಮ ಪಾಕ! ಈ ಪಾಕದಿಂದ ಧಾತುಕ್ಷೀಣತೆಯಿಂದ ಉಂಟಾಗುವ ಎಲ್ಲ ವಿಕಾರಗಳು ಕೂಡಲೆ ನಿಂತುಹೋಗುವವು. ಯಾವ ಕಾರಣದಿಂದಲೂ ಹೋದ ಶಕ್ತಿಯು ಈ ಪಾಕದ ಸೇವನೆಯಿಂದ ಪುನಃ ಉಂಟಾಗುತ್ತದೆ. ದೂಷಿತವಾದ ರಕ್ತವು ಕೂಡ ಇದರಿಂದ ಶುದ್ಧವಾಗಿ ರಕ್ತವೃದ್ಧಿಯಾಗುತ್ತದೆ. ಹಸಿವೆಯಾಗುತ್ತದೆ; ಯಕೃತ (ಲಿವ್ಹರ್) ಮತ್ತು ಪ್ಲೀಹಾ (ಸ್ಪ್ಲೀನ್) ಇವುಗಳ ಅಶಕ್ತಿಯು ಬೆಳೆದಿದ್ದರೆ ಅದು ಕಡಿಮೆಯಾಗುತ್ತದೆ. ಅಶಕ್ತತೆಯಿಂದ ಉಂಟಾಗುವ ಮನಸ್ಸಿನ ದುರ್ಬಲತೆ, ಕಣ್ಣುಕತ್ತಲೆಯಾಗುವುದು, ಕೈಕಾಲುಗಳ ಉರಿ ಮತ್ತು ಅವು ಮುರಿದುಬರುವದು. ಸ್ವಲ್ಪ ಕೆಲಸದಿಂದಲೆ ದಣಿವುಂಟಾಗುವುದು. ಈ ನೋವಿನ ಎಲ್ಲ ವಿಕಾರಗಳು ಇದರಿಂದ ಹೋಗುತ್ತವೆ. ಹಾಗು ಮೇಲಿಂದಮೇಲೆ ನೆಗಡಿಯುಂಟಾಗುವದು, ಹಳೆ ಕೆಮ್ಮು, ಕ್ಷಯರೋಗದ ಪೂರ್ವಾವಸ್ಥೆಯು ಕೂಡ ಇದರಿಂದ ನಿಂತುಹೋಗುತ್ತವೆ. ಡಾ. ದೇಸಾಯಿ, ಎಫ್. ಆರ್. (ಲಂಡನ್) ಬಿ. ಎಸ್. ಎಲ್. ಎಮ್. ಎಸ್. ಮೆಡಲಿಸ್ಟ್, ಫಿಜಿಸಿಯನ್ ಎಂಡ್ ಸರ್ಜನ್ ಇವರು ತಮ್ಮ ಉಪನ್ಯಾಸದಲ್ಲಿ ಹೇಳುತ್ತಾರೇನಂದರೆ:—ಇಕ್ಕುಗಂಧಾ ಇದಕ್ಕೆ ಆರ್ಯವೈದ್ಯಕದೊಳಗಿನ ಒಂದು ಕೊಡ್ಲಿವರ್ ಎಂದು ಹೇಳಬಹುದು. ಇದರಿಂದ ಶರೀರಪುಷ್ಟಿ, ರಕ್ತವೃದ್ಧಿಯಾಗಿ ಕೆಮ್ಮು ನಷ್ಟವಾಗುತ್ತದೆ. ಜೀರ್ಣಜ್ವರ ನಾಶವಾಗುತ್ತದೆ. ಕೊಡ್ಲಿವರಾಯಿಲಿಗಿಂತ ಇದರ ಸೇವನೆಯಿಂದ ಶರೀರದ ಭಾರವು ಇಮ್ಮಡಿಯಾಗುತ್ತದೆ. ಶರೀರಶಕ್ತಿಯು ಒಳ್ಳೆದಾಗುತ್ತದೆ. ಒಳ್ಳೆದಾಗುತ್ತದೆ." ಇತ್ಯಾದಿ—

ಕ್ರಯ—ಅರ್ಧ ಪೌಂಡಿನ ಡಬ್ಬಿಗೆ ರೂ. ೧, ಆ. ೮, ಒಂದು ಪೌಂಡಿನ ಡಬ್ಬಿಗೆ ರೂ. ೨, ಆ. ೮ ಮೇಲ್ವಿಳಾಸ:

ಮೇನೇಜರ,
ಶ್ರೀನಿವಾರ್ಯ ಆಯುರ್ವೇದೀಯ ಔಷಧಾಲಯ, ಗದ್ದಿಕೇರಿ,
ಮಂಗಳೂರು, ದ. ಕಾನಡಾ.

ಆರ್. ಮಾರ್ಟಿನ್ಸರ

ಸಾರಸಾಪರಿಲ್ಲಾ

ಈ ಸಾರ್ಸಾಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ, ಸುಖಭೋಗಿ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರಹದ ಕಾಹಿಲೆ, ಉಬ್ಬುವುದು. ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕ್ಷಿಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ, ಮತ್ತು ಚರ್ಮದ ರೋಗಗಳು, ಪಿತ್ತಕಡಿತದಿಂದುಂಟಾದ ವ್ಯಾಧಿ, ಕೆರೊಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಅವ್ಯವಸ್ಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿ ಗಳಿಗೆ ಕ್ರಯ ರೂ. ೧-೧೨-೦

ಆರ್ ಮಾರ್ಟಿನ್ಸರ ಎಗ್ಯೂ ಮಿಕ್ಶರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಾರಿಜ್ವರ, ಸನ್ನಿಪಾತ, ಕೆಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲಾ ತರಹದ ಜ್ವರ ನನ್ನೂ [illegible] ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವದಲ್ಲದೆ ಇದು ಪಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ, ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಗುಣವಾಗಿದೆ. ಬಾಟ್ಲಿ 1ಕ್ಕೆ, ರೂ. ೦—೧೪—೦.

ಆರ್ ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಭಹಳ ಸಲ ಉಬ್ಬಿ ಹೊಯ್ಯುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ ಗಳಿಗೆ ರೂ. ೧—೪—೦.

ವಿಳಾಸ:— ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ರೈಟ್ ಎಂಡ್ ಕಂ. ಹತ್ತರ, ಫೋರ್ಟ್, ಮುಂಬಯಿ.

R. D. Kately & Co.
No. D. Frere Road,
Near Wright & Co. Fort, Bombay.

THE WORLD RENOWNED
HAARLEM OIL.
(*Genuine Dutch Produce*)

A Domestic remedy of extraordinary merits that has stood the test of centuries. A Panacea against all human ailments.

ಲೋಕಪ್ರಸಿದ್ಧವಾದ ಹಾರ್ಲೆಮ್ ತೈಲ.

SUPPLY EXPECTED SHORTLY

Register your orders immediately against disappointment.

CAPABLE AGENCY WANTED.

Prices & particulars from—

The Bombay Stores,
Humpankatta, MANGALORE.

ದರ್ಬಾರ್ ಸೋಪು.

ಈ ಸೋಪನ್ನು ಕಾಹಿಲೆಗಳಿಗೆ ಒಂದೇ ಒಂದು ಥರುಪ ಹಾಕಿದರೆ ಶಕ್ತಿಯಿಂದ ಕ್ಷಾರವಾಗಿ ಕೊಂಡತ್ವಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು.

ಗಂಡೆ, ತೊಡವು, ತುಚ್ಚು, ತುರಿ, ಸವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯ ಮಾಡುವುದು.

3. ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	ರೂ.	0–14–0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	,,	1–10–0.
ಬಿಡಾಯಿತಿ ರೋಮನಾಶಕ ಬುಕ್ಕು	,,	0– 8–0.

ವಿಳಾಸ— ಪ್ರೈರಂ ಅಂಡ್ ಕೊ,
ಇರುಳಪ್ಪನ ಬೀದಿ, ಮದರಾಸು.

ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಅಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ಕಣ್ಣು ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುರುಲಬ್ಧವಾದ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಮಾರು ವರೆ ತಯಾರಿವೆ. ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದ್ದಲ್ಲಿ ತಿಳಿದು ಬರುವುದು.

ವೈದ್ಯಶಾಲೆಯ ವ್ಯಾಲಿಕರೂ ಮನೇಜರರೂ ಆದ ದಾಮೋದರ ನಂಬೀಶನರು ಆದಿತ್ಯವಾರ ಹೊರತು ಬಾಕಿ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದೇ ಪರಿಶೋಧಿಸಿ, ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವರೆ ಸಿದ್ಧರಾಗಿರುವರು. ಇದರ ಬ್ರೆಂಚು ಮಂಗಳೂರು ರಥಬೀದಿಯಲ್ಲಿ ತೆರೆದಿರುವುದರಿಂದ ಸದರಿ ಎಲ್ಲಾ ಔಷಧಗಳು ಸದರಿ ಬ್ರೇಂಚಿನಲ್ಲಿ ಕೂಡಾ ಬೇಕಾದಷ್ಟು ಸಿಕ್ಕುವವು. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ. ಪಿ. ಮೂಲಕ ಕಳುಹಿಸಲಾಗುವುದು.

೧. ಅಮೃತಾರಿಷ್ಟ—ಇದು ಎಲ್ಲಾ ತರದ ವಿಷಮಜ್ವರ (ಇನ್‌ಫ್ಲುಯೆಂಜಾ) ಒಳಜ್ವರ ಪುರಾಣಜ್ವರ ಇವುಗಳ ಮೇಲೆ ರಾಮಬಾಣದಂತಿರುವುದು. ರಕ್ತ ಶುದ್ಧಿಗೆ ಸಿದ್ಧೌಷಧ. ೧೨ ಔನ್ಸಿನ ಬಾಟ್ಲಿ ೧ರ ಕ್ರಯ ರೂ. ೧—೧೦—೦.

೨. ವೀರ್ಯಪ್ರಸಾದ ವಟಿ—ಇದು ಸ್ವಪ್ನೇಂದ್ರಿಯದಿಂದ ನರಳುತ್ತಿರುವ ಮನುಷ್ಯರಿಗೆ ಅಮೃತದಂತಿರುವುದು. ೨೪ ಮಾತ್ರೆ ಇರುವ ಸೀಸೆ ೧ಕ್ಕೆ ಕ್ರಯ ರೂ. ೧.

೩. ನವನೀತಮಧುಸ್ನುಹಿ—ಇದು ಫಿರಂಗಿವ್ಯಾಧಿ (ಸಿಫಿಲಿಸ್) ಮೇಹ ಮುಂತಾದ ರೋಗಗಳನ್ನು ಒಳ್ಳೇ ರೀತಿಯಿಂದ ಗುಣಪಡಿಸುತ್ತದೆ. ೨೪ ತೊಲೆ ಇರುವ ಡಬ್ಬಿ ೧ಕ್ಕೆ ಕ್ರಯ ರೂ. ೩.

೪. ವಿಷೂಚಿಕಾ ಸಂಹಾರಿ—ಎಂಬ ವಾಂತಿಭೇದಿ ಮಾತ್ರೆ. ಈ ಮಾತ್ರೆಯ ಸೇವನೆಯಿಂದ ಎಂಥಾ ಕಠಿಣ ತರವಾದ ವಾಂತಿಭೇದಿಯೂ ನಿಂತು ಹೋಗುವುದು. ೨೪ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ರೂ. ೧—೦—೦.

೫. ನಯನದ್ಯುತಿ—ತಿಮಿರ, ಉರಿಗಣ್ಣು, ನರ ಎಳುವಿಕೆ ಮೊದಲಾದ ಕಣ್ಣಿನ ಎಲ್ಲಾ ರೋಗಗಳನ್ನು ಗುಣಪಡಿಸುವ ಸಿದ್ಧೌಷಧವು. ಅರ್ಧ ಔನ್ಸಿನ ಸೀಸೆ ೧ರ ಕ್ರಯ ರೂ. ೧—೦—೦.

೬. ನಯನಾಮೃತ—ಕಣ್ಣು ಸುರಿಸುವಿಕೆ, ದೃಷ್ಟಿಮಾಂದ್ಯ, ಇರುಳುಗಣ್ಣು, ಕೀವು ಬರುವುದು. ತಿಮಿರ ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನೂ ಬಹು ಜಾಗ್ರತೆಯಾಗಿ ಗುಣಪಡಿಸುವುದು. ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ. ೧—೦—೦

ವೈದ್ಯರ್ ಪಿ. ಕೆ. ದಾಮೋದರ ನಂಬೀಶನ್
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡಾ.

Prize Books! ಬಹುಮಾನ ಪುಸ್ತಕಗಳು. Prize Books!!

ಮೈಸೂರು ಸರಕಾರದ ವಿದ್ಯಾಭ್ಯಾಸದ ಇಲಾಖೆಯವರಿಂದ Prize Books ಆಗಿ ಅಂಗೀಕೃತವಾದ ಪುಸ್ತಕಗಳು ಪ್ರತಿಯೊಬ್ಬ ಕರ್ಣಾಟಕ ಬಾಲಕನೂ, ಬಾಲಿಕೆಯೂ ತಪ್ಪದೆ ಓದಬೇಕು. ತಿಳಿಗನ್ನಡ ಭಾಷೆ, ಸುಲಭ ಶೈಲಿ, ಬೆಲೆ ಅತಿ ಸುಲಭ. ಚಂದ್ರಹಾಸ, ಧ್ರುವ, ಪ್ರಹ್ಲಾದ ಹರಿಶ್ಚಂದ್ರ ಪ್ರತಿಯೊಂದಕ್ಕೆ (೦—೩—೦. ವಿನಾಯಕ. ನವರೋಚಿ (೦—೧—೦) ಮತ್ತು ಸಾವಿತ್ರಿ, ಮಹಿಳಾ ಸುನೀತಿ ಶತಕ (೦—೩—೦).

ಉಪಾಧ್ಯಾಯರುಗಳಿಗೂ, ಪುಸ್ತಕ ವ್ಯಾಪಾರಿಗಳಿಗೂ, ಭಾರಿ ಆರ್ಡರುಗಳ ಮೇಲೆ ಧಾರಾಳವಾದ ಕಮಿಷನು ಉಂಟು.

ಈ ದಿನವೇ ಬರೆಯಿರಿ.

ವಿಳಾಸ:—ಮ್ಯಾನೇಜರ್,
ಸುಬೋಧ ಕುಸುಮಾಂಜಲಿ ಗ್ರಂಥಮಾಲಾ ಕಾರ್ಯಾಲಯ,
2. ಕ್ಲಾರ್ಕ್ಸ್‌ಪೇಟೆ, ಸಿ. ಬೆಂಗಳೂರು, ದಂಡು.

ಕೇಸರೀಯವರ ಅತ್ಯುತ್ತಮವಾದ ಮೂರು ಔಷಧಗಳು.

ಲೋಧ್ರ

ಅಥವಾ

ಗರ್ಭಾಶಯ ರೋಗ ನಿವಾರಣಿ:—ಇದು ಸ್ತ್ರೀಯರ ದೇಹ ಪ್ರಕೃತಿಯಲ್ಲಿ ಉಂಟಾಗುವ ವಿವರಿಸಲಸದಳವಾದ ಯಾವತ್ತೂ ರೋಗಗಳನ್ನು ಖಾತ್ರಿಯಾಗಿ ಗುಣಪಡಿಸುವುದು.

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ. 3; ಸಣ್ಣದಕ್ಕೆ ರೂ. 1-10-0.

ಅಮೃತ

ಅಥವಾ

ರಕ್ತ ಶುದ್ಧೀಕರಣಕ್ಕೆ ದಿವ್ಯ ಔಷಧ:—ಇದನ್ನು ತೆಗೆದುಕೊಳ್ಳುವುದರಿಂದ ನೀರಕ್ತತ್ವ (ರಕ್ತವು ಕೆಟ್ಟುಹೋಗುವಿಕೆ) ಅಜೀರ್ಣ, ಮಲಬದ್ಧತೆ, ನಿತ್ರಾಣ, ಶಿರೋಭ್ರಮಣ, ಜ್ಞಾನದುರ್ಬಲತೆ ಮುಂತಾದುವು ಪರಿಹಾರವಾಗುತ್ತವೆ.

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ. 3; ಸಣ್ಣದಕ್ಕೆ ರೂ. 1-10-0.

ಅರ್ಕ

ಎಂಬ

ಜ್ವರ ಸಂಹಾರಕ್ಕೆ ರಾಮಬಾಣ:—ಈ ಔಷಧಿಯ ಒಂದೆರಡು ತಟಕುಗಳನ್ನು ಸೇವಿಸುವುದರಿಂದ ಇನ್‌ಫ್ಲುಯೆಂಜಾ ಮುಂತಾದ ಸಕಲ ಜ್ವರಗಳೂ ನಿವಾರಣೆಯಾಗುವುವು.

ಕ್ರಯ ಬಾಟ್ಲಿ 1ಕ್ಕೆ ರೂ. 1—8—0.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ:—

ಕೇಸರೀ ಕುಟೀರಂ,
ಆಯುರ್ವೇದ ಔಷಧಾಲಯ,
33 ಪೋಲೀಸು ಕಮಿಷನರ ಆಫೀಸು ರಸ್ತೆ,
ಎಗ್ಮೋರ, ಮದರಾಸ್.

... ಬಂದರ್ ಸ್ಟ್ರೀಟ್,
ಜಾರ್ಜಟೌನ್, ಮದರಾಸ್.

ಕೊತಲ್ಲಿಗೆ ಬರುವದು

ಯಾವುದೊಂದು ಖರ್ಚಿಲ್ಲದೆ ಪಂಚವರ್ಣಗಳಿಂದ ತಯಾರಿಸಿದ

1920ನೆಯ ಇಸವಿ ಕ್ಯಾಲಂಡರ್.

ಟಪಾಲು ಮತ್ತು ಪೇಕಿಂಗ್ ಖರ್ಚಿಗಾಗಿ ೨ ಆಣೆಯ ಟಪಾಲು ಸ್ಟಾಂಪನ್ನು ಕಳುಹಿಸಿರಿ.

ವಿಳಾಸ:—

ವಿ. ಎ. ಎಸ್. ಫಾಣಿ ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

NETRANAND SAREES
Cheap and Fashionable

Sarees in all brilliant colours with lustrous borders.

Liberal Commission for wholesale Orders.

ಚೆಲೋ ಬಣ್ಣದ ಸೀರೆಗಳು! ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಭಾವಾಕೂಡದ "ನೇತ್ರಾನಂದ" ತರವಾದ ಸೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ.

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಸಿಕ್ಕುವದು.

ನೂತನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಮ್ಮಿಕ್ರಯದಲ್ಲಿ ದೊರಕುವವು.

ವಿಶೇಷ ಮಾಹಿತಿಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

ಶ್ರೀ ಶೀತಾರಾಮವಿಠ್ಠಲ ಕಂಪೆನಿ,
ಮಿಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟೆ, ಮಂಗಳೂರು.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹೋಲ್

ಬಹು ನೂತನ ಅಲೋಪತಿ ಮತ್ತು ಹೋಮಿಯೋಪತಿ
ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!
ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್‌ಪೆನ್ ಗಳೂ, ಥರಮಾಮಿಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಫೋಮೆಂಟೇಶನ್ ಚೀಲಗಳೂ, ಐಸ್‌ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸಕ ಸಾಮಗ್ರಿಗಳೂ ಸ್ಟವ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ, ನೀಲಗಿರಿಯ ಎಣ್ಣೆ ಎಂಬ ಯೂಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು.

ಹೋಮಿಯೋಪತಿ ಮತ್ತು ಟಿಷ್ಯೂ ಔಷಧಗಳು
ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೋಮಿಯೋಪತಿ ಮತ್ತು ಟಿಷ್ಯು ಔಷಧಗಳನ್ನು ರೋಗಿಯನ್ನು ಪರೀಕ್ಷೆ ಮಾಡಿ, ಧರ್ಮಾರ್ಥವಾಗಿ ಕೊಡುವೆವು.

☞ ಔಷಧಗಳನ್ನು ಶಾಸ್ತ್ರರೀತಿಯಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರಿರುವರು.

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ! ನಗದಿ ವ್ಯಾಪಾರ! ರೋಗಗಳು ಗುಣವಾಗುವುದು ಬೇಗ!

☞ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

ಇನ್‌ಫ್ಲುಯೇನ್ಜಾ ಜ್ವರಕ್ಕೆ

ಎಮ್ಕೊ.

ಖಾತ್ರಿ ಚಿಕಿತ್ಸೆ!

ಇನ್‌ಫ್ಲುಯೆನ್ಜಾ, ನಿಮೋನಿಯಾ, ಮಲೇರಿಯಾ, ಸಾಧಾರಣ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ವಿಷಮ ಜ್ವರ, ಕೆಮ್ಮು, ಶೀತ, ಮೊದಲಾದ ಬಾಧ್ಯಗಳಿಗೆ ಖಾತ್ರಿ ಚಿಕಿತ್ಸೆಗಳ ಅವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ 'ನಾವು' ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಖಾತ್ರಿ ಔಷಧಿಯನ್ನು ಈಗ ಸಾರ್ವಜನಿಕ ಪ್ರಚಾರಕ್ಕೆ ತಂದಿರುತ್ತೇವೆ. ಮೇಲಿನ ಬಾಧ್ಯಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬವಕ್ಕೆ ಕಳೆದ ಕೆಲವು ವರ್ಷಗಳಿಂದ 'ನಾವು' ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ.

ಎಮ್ಕೊ. ಇದು ಎಲ್ಲಾ ರೋಗಾಣುಗಳನ್ನು ಕೊಂದು ಅವರ ವಿಷವನ್ನು ನಾಶಪಡಿಸಿ, ಇನ್‌ಫ್ಲುಯೇನ್ಜಾ, ನಿಮೋನಿಯಾ ಮತ್ತು ಅದರಂತಿನ ಇತರ ಸೋಂಕು ರೋಗಗಳು ತಟ್ಟದಂತೆ ತಡೆಕಟ್ಟಿ ಅದು ಉಲ್ಬಣವಾಗದಂತೆ ಮಾಡುತ್ತದೆ.

ಎಮ್ಕೊ. ಇದು ಇನ್‌ಫ್ಲುಯೇನ್ಜಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ.

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಿಗಳ ಕೂಟದಿಂದ ಅತಿ ಜಾಗರೂಕತೆಯಿಂದ ತಯಾರಿಸಿರುತ್ತದಾದಕಾರಣ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ವಿನಾ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನ್ನು ಕೊಡಬಹುದು. ಹೆಂಗಸರೂ, ಮಕ್ಕಳೂ ಭಯಭೀತಿ ಇಲ್ಲದೆ ಸೇವಿಸಬಹುದು.

ಎಮ್ಕೊ. ಈಗ ಇದು ಕೆಲಕೇಲ ರೋಗಗಳನ್ನು ಗುಣಪಡಿಸುತ್ತದೆ.

ಕ್ರಯ ಸೀಸೆ ೧ರ ರೂ. ೦—೧೨—೦ ಮಾತ್ರ. ವಿ. ಪಿ. ಬೇರೆ.

ಪ್ರಾಮುಖ್ಯ ಏಜಂಟರು— ದಿ ಇಕ್ವಿಟಿ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

[illegible] ಮಂಗಳೂರು.

[illegible] 1906ನೆ [illegible]

Fully paid [illegible] up Capital Rs. 300,000—0—0 | ಅಧಿಕಾರಗೊಳಿಸಲ್ಪಟ್ಟ [illegible] ಮೂಲಧನವು ರೂ. 300,000—0—0

[illegible] sinking Funds ,, 138772—0—2 | ಕ್ಷೇಮನಿಧಿ ಮತ್ತು [illegible] ಫಂಡುಗಳು ,, 138,772—0—2

THE BANK RECEIVES FIXED, CURRENT ACCOUNT, & SAVINGS BANK DEPOSITS.

[illegible] ಮತ್ತು [illegible] ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

[illegible] Bank Ltd.,
[illegible] 10th May 1920

K. Venkat Rao,
Secretary.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೊಲ 1ಕ್ಕೆ ರೂ. 3, 2, 1.

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದ ಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಲಾಗುತ್ತೆ.

ಲೆವೆಂಡರ್. ಶೀಸೆ 1ಕ್ಕೆ 1—4—0.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ನೇಯಿಂದ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ವಿಕರಿಗೆ ಸಿದ್ಧವಾಗಿರುತ್ವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

[illegible] ತೂಕದ [illegible] ಔಷಧಗಳು [illegible]

1. [illegible] — ಇದರ ಸೇವನೆಯಿಂದ [illegible] ವಾರವೆಯಾಗಿ ಧಾತುಪುಷ್ಟಿಯಾಗುತ್ತದೆ. 24 ಬಿಲ್ಲೆಗಳ ಬಾಟ್ಲಿ 1ಕ್ಕೆ ರೂ. 3.

2. [illegible] — [illegible] ಇದನ್ನು 12 ದಿವಸ ಸೇವನೆಮಾಡಿ [illegible] ಮಧುಮಾಧವಿ [illegible] ಪ್ರವಗಳು ಗುಣವಾಗಿ ದೇಹಪುಷ್ಟಿಯಾಗುತ್ತದೆ. [illegible] ಬಾಟ್ಲಿ 1ಕ್ಕೆ ರೂ. 1. 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 2—0—0.

3. ಸಿದ್ಧೇಶ್ವರ — ಇದರ ಸೇವನೆಯಿಂದ ಎಲ್ಲಾ ತರದ ಕೆಮ್ಮುಗಳೂ, ಉಬ್ಬಸಗಳೂ, ಕಫವೂ ಗುಣವಾಗುತ್ತದೆ. ತೊಲ 1ಕ್ಕೆ 1-8-0.

4. ಅಶೋಕಾರಿಷ್ಟ (ಉತ್ತಮ ತರದ್ದು) — ಇದರ ಸೇವನೆಯಿಂದ ಸ್ತ್ರೀಯರ ಮುಟ್ಟುದೋಷ, ಗರ್ಭಶೂಲ, ಯೋನಿರೋಗಗಳು ಗುಣವಾಗಿ ರಕ್ತಶುದ್ಧಿಯಾಗುವುದು. ಬಾಟ್ಲಿ 1ಕ್ಕೆ 1-4-0.

5. ಸುದರ್ಶನ ಮಾಲಿನಿ — ಇದರಿಂದ ಗಂಡಮಾಲೆ, ಫಿರಂಗರೋಗ, ಮೇಹವ್ರಣ, ಮೇಹವಾತ, ಇತ್ಯಾದಿ ದೀರ್ಘಕಾಲದ ರೋಗಗಳು 4 ದಿವಸಗಳಲ್ಲಿ ಗುಣವಾಗುತ್ತದೆ. ಬಾಟ್ಲಿ 1ಕ್ಕೆ 4—0—0.

6. ವಸಂತಕುಸುಮಾಕರ ತೈಲ — ಇದನ್ನು ತಲೆಗೆ ಇಟ್ಟುಕೊಂಡಲ್ಲಿ ಸರ್ವ ಶಿರೋರೋಗಗಳು ಗುಣವಾಗಿ ಜ್ಞಾನಶಕ್ತಿಯನ್ನು ಹೆಚ್ಚಿಸುತ್ತದೆ. ಬಾಟ್ಲಿ 1ಕ್ಕೆ ರೂ. 1—0—0.

ಇದಲ್ಲದೆ ನಮ್ಮ ಡಿಸ್ಪೆನ್ಸರಿಯಲ್ಲಿ ಎಲ್ಲಾ ರೋಗಗಳಿಗೆ ಬೇಕಾಗುವ ಮಾತ್ರೆಗಳೂ, ಭಸ್ಮಗಳೂ, ತೈಲ್ಯಗಳೂ, ಲೇಹಗಳೂ, ಚೂರ್ಣಗಳೂ ಬಹಳ ಕಡಿಮೆ ಕ್ರಯದಲ್ಲಿ ಸಿಕ್ಕುತ್ತವೆ. ನಮ್ಮ ಕೆಟಲಾಗನು ತರಿಸಿರಿ.

ಎಸ್. ವಿ. ಶಂಕರ, ಉಗ್ರಾಣಕಾರ,
ಮೇನೇಜರ್.
ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ, ಬ್ರಹ್ಮಾವರ, ದ. ಕ.

ಅಪೂರ್ವವಾದ ಕನ್ನಡ ವೈದ್ಯಶಾಸ್ತ್ರವು

ಧಾತುರಂಜಿತ - ವೈದ್ಯರತ್ನ.

ಅಕ್ರಮರತಿಯಿಂದ ಶರೀರಕ್ಕೆ ಬೇರಿನಂತಿರುವ ವೀರ್ಯ ಕೆಟ್ಟು ಸೀರಾಗಿ ಪತನವಾಗಿ ವಿಧವಿಧ ಬಣ್ಣದಿಂದ ಧಾತುಸ್ರಾವ, ನಪುಂಸಕತ್ವ, ಟಾಕಿ, ಇನೇ ಮುಂತಾದ ಬಹು ರೋಗಗಳುಂಟಾಗುವವು. ಇದರಲ್ಲಿ ೫ ಭಾಗಗಳಲ್ಲಿ ಈ ವಿಧದ ರೋಗಗಳ ಸ್ವರೂಪ, ಕಾರಣ, ಚಿಕಿತ್ಸೆಗಳು ವಿವರಿಸಲ್ಪಟ್ಟಿವೆ. ಮೂಲೇಂದ್ರಿಯ ರಚನೆ, ವೀರ್ಯ ನಷ್ಟ ಕ್ರಮ, ನಪುಂಸಕತ್ವ ಭೇದ, ವಂಧ್ಯಾರೋಗ ಭೇದ, ನಿವಾರಣೋಪಾಯ ಇವೆಲ್ಲಕ್ಕೂ ಅನುಭವಸಿದ್ಧಗಳಾದ ನೂರಾರು ವಿಧ ಲೇಹ್ಯ, ರಸಾಯನಾದಿ ದಿವ್ಯೌಷಧಿಗಳನ್ನು ಕಲ್ಪಿಸುವ ವಿಧಾನ ಮತ್ತು ರೂಢಿಯಲ್ಲಿರುವ ಅನೇಕ ವನಸ್ಪತಿಗಳ ಗುಣ, ಉಪಯೋಗಿಸುವ ಕ್ರಮ, ರಣವೈದ್ಯದಲ್ಲಿ ರಾಜವಂಗೇಶ್ವರಾದಿ ಅನೇಕ ಮಹೌಷಧಿಗಳ ನಿರ್ಮಾಣಕ್ರಮ, ಕುಟುಂಬವೈದ್ಯದಲ್ಲಿ ಜ್ವರ, ಅತಿಸಾರಾದಿಗಳ ಚಿಕಿತ್ಸೆ ಎಂತವರಿಗೂ ತಿಳಿಯುವಂತೆ ಬರೆಯಲ್ಪಟ್ಟಿದೆ. ಇದು ಇದ್ದರೆ ಮನೆಲಿ ಒಬ್ಬ ವೈದ್ಯನೇ ಇದ್ದಂತಾಗುವದು. ಇದರಲ್ಲಿರುವ ಔಷಧಿಗಳನ್ನು ತಯಾರು ಮಾಡಿ ನೂರಾರು ರೂಪಾಯಿಗಳನ್ನು ಸಂಪಾದಿಸಬಹುದು. ಕ್ರಯ ಪುಸ್ತಕ ೧ಕ್ಕೆ ರೂ. ೧—೮—೦.

ನಮ್ಮ ವಿಳಾಸ:— ಭಾರತಿ ಬುಕ್ ಡಿಪೊ,
[illegible], ನಗರ್ತರಪೇಟೆ, ಬೆಂಗಳೂರು ಸಿಟಿ.

ಭೃಂಗರಾಜ ತೈಲ.

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ. ಮತ್ತು ಸರಳ ಕೂದಲು ಕಪ್ಪಾಗುತ್ತವೆ. ಕೇಶಗಳು ಉದುರುವ ಸಂಗತಿಯಲ್ಲಿ ಬಹಳ ಒಳ್ಳೇದು. 4 ಔನ್ಸಿನ ಸೀಸೆ 1ಕ್ಕೆ ಕ್ರಯ ರೂ. 0—12—0.

ತ್ರಿಫಲಾದಿ ತೈಲ—ವಾತ, ಪಿತ್ಥ, ಶ್ಲೇಷ್ಮ ಈ ಮೂರು ತರದ ವ್ಯಾಧಿಗಳಿಂದ ಉಂಟಾದ ಕಾಹಿಲೆಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಸ್ನಾನ ಮಾಡುವ ಮೊದಲು ಇದನ್ನು ತಲೆಗಿಟ್ಟರೆ ಬಹಳ ಉತ್ತಮ.

4 ಔನ್ಸಿನ ಸೀಸೆ 1ಕ್ಕೆ ಕ್ರಯ ರೂ. 1—0—0.

ಪಂಚಸಾರ ಲೇಹ—ಅಜೀರ್ಣ, ಪಿತ್ಥ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಮತ್ತು ಇಂದ್ರಿಯ ವಸ್ತು ಬಲಪಡಿಸಿ, ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಶೀರಿಗೆ ರೂ. 1—4—0.

ಮೇಲೆ ಬರೆದ ಔಷಧಗಳು ಶಾಂದಪೂಜ್ಯ ಗುರುಗಳಿಂದ ಸ್ಥಾಪಿಸಿದ ಗ್ರಂಥದ ಆಧಾರದಿಂದ ತಯಾರು ಮಾಡಲ್ಪಟ್ಟಿರುತ್ತವೆ. ಇವುಗಳಲ್ಲದೆ ಇತರ ಎಲ್ಲಾ ಬಗೆಯ ಔಷಧಿಗಳು ದೊರೆಯುತ್ತವೆ. ಪರಸ್ಥಳದವರು ತಮ್ಮ ಕಾಹಿಲೆ ಸಂಗತಿಯನ್ನು ವಿವರವಾಗಿ ಬರೆದು ಕಳುಹಿಸಿದರೆ ತಕ್ಕ ಔಷಧಗಳನ್ನು ಕಳುಹಿಸಲಾಗುವುದು.

ವಿಳಾಸ:—ಆಯುರ್ವೇದಿಕ್ ಮತ್ತು ಹೋಮಿಯೊಪತಿಕ್
ಧರ್ಮವೈದ್ಯಶಾಲಾ, ಧರ್ಮಸ್ಥಳ, ದ. ಕನ್ನಡ.

ಕ್ರಯ ರೂ. 1—[illegible]—0. **ಪ್ರಶ್ನೋತ್ತರ** ಅಂಚೆ ವೆಚ್ಚ ಬೇರೆ.

ಲೇಖ್ಯಬೋಧಿನಿ.

7ನೇ ಮುದ್ರಣ: ಅನೇಕ ಉಪಯೋಗ ಸಂಗತಿಗಳಿವೆ.

ಕ್ಷೇಮ ಸಮಾಚಾರದ ಕಾಗದಗಳು:—ಬಗೆಬಗೆಯಾದ ಒಕ್ಕಣೆಗಳು, [illegible] ವೈದಿಕ ಮರ್ಯಾದೆಗಳಿವೆ. ಪತ್ರಗಳು ಬರೆಯುವ ವಿಧಾನ, [illegible] ಕ್ರಯ, [illegible] ಬಿಲ್ಲು, ಮರಣಶಾಸನ, ಪಾಲೀಖತ್ತು, ಗುತ್ತಿಗೆ, ಪಾಲುಗಾಂಠಿ, ಹುಂಡಿ, [illegible] ಕಾಗದ ಮಾದರಿಗಳು, ವಿಧಗಳು, ಸ್ಟ್ಯಾಂಪು, ರಜಿಸ್ಟ್ರೇಷನ್, ಸಿವಿಲ್ [illegible] ವಿಧಾನ—ಲಾಯರ್ ನೋಟೀಸು, ದಾವೆ ಬರೆಯುವ ರೀತಿ, ಸ್ಮಾಲ್ [illegible] ಕ್ರಿಮಿನಲ್, ರಿವ್ಯು, ಅಪ್ಪೀಲು, ಸ್ಪೆಷಲ್ ಅಪ್ಪೀಲ್, ಅವುಗಳಿಗೆ [illegible], [illegible] ಸ್ಟ್ಯಾಂಪು, ರೆವೆನ್ಯೂ ಮುಂತಾದ ಪ್ರಾಮುಖ್ಯವಾದ [illegible] ಸಂಬಂಧಿಸಿದ ಎಲ್ಲಾ [illegible] ಬರೆಯುವ ಅರ್ಜಿಗಳು: ಕ್ರಿಮಿನಲ್ [illegible] ವಿಧಾನ—ಅನೇಕ ಅರ್ಜಿಗಳ ಮಾದರಿಗಳೂ, ಸರಕಾರದ ಕಾನೂನು [illegible] ಇದರಲ್ಲಿ ಅಡಗಿವೆ. ಕಾಗದದ ಬರದಿಂದ ಬಹು ಸ್ವಲ್ಪ ಪ್ರತಿಗಳೇ [illegible]ಗದೆ. ಬೇಗ ಬರೆದು ತರಿಸಿಕೊಳ್ಳಿ. ಕ್ರಯ ರೂಪಾಯಿ 1—8—0. [illegible] ವೆಚ್ಚ ಬೇರೆ.

"ನವಿನುಡಿ" ಆಫೀಸು,
[illegible], ಬೆಂಗಳೂರು ಸಿಟಿ.

" ಟಿಶ್ಯು ರೆಮಿಡಿಸ್ "

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು.

1 ಕಲ್ಕೇರಿಯ ಪ್ಲೋರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮಗ್ನೆಸಿಯ ಫೋಸ್	12 ಸಿಲಿಸಿಯಾ

ಕ್ರಯ					ರೂ. ಆ. ಪೈ.
ಎರಡು ಡ್ರಾಮಿನ	D	ಸೈಜ್	ಸೀಸೆ	ಒಂದರ	0—3—6
ನಾಲ್ಕು	,,	C	,,	,,	0—6—0
ಒಂದು ಔನ್ಸಿನ	A	,,	,,	,,	0—12—0

ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ	3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯಶಾಸ್ತ್ರ ಪುಸ್ತಕ ಸಮೇತ.	10—0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು, ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾರಿಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ. ಫೆರ್ನಾಂಡಿಸ್,
ಎಲೆಕ್ಟ್ರೊ ಹೋಮಿಯೊಪತಿ ಡಿಸ್ಪೆನ್ಸರಿ, ಮಂಗಳೂರು.

The Indian Tooth-ache Specific.

ಹಲ್ಲು ನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ವಾರ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲು ನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ [illegible] ಇತ್ಯಾದಿ ಖಂಡಿತವಾಗಿ ಗುಣವಾಗುತ್ತದೆ. ಕೊರೆದುಹೋದ ಮತ್ತು [illegible] ಹಲ್ಲುಗಳಿಂದ ಕಠಿಣ ನೋವು ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ. ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಯುವ ಅವಶ್ಯವೇ ಇಲ್ಲ. ಈ ಔಷಧದ ಗುಣವನ್ನು [illegible] ಪರೀಕ್ಷಿಸಿ ನೋಡಿರಿ.

[illegible] ೧ಕ್ಕೆ ಕ್ರಯ ರೂ. 1—4—0; [illegible] 4 ಆಣೆ [illegible] ಒಮ್ಮೆಯೇ ೧೨ ಶೀಸೆ ತರಿಸಿಕೊಂಡರೆ ರೂ. 12 ಮಾತ್ರ. [illegible] ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

ಸೊಗಸಾದ ಕಾಫಿಹುಡಿ.

I	ಕ್ಲಾಸ್	0—10—0
II	ಕ್ಲಾಸ್	0—8—0
III	ಕ್ಲಾಸ್	0—6—0

[illegible] ದಾರಾಳವಾಗಿ [illegible] ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

ವಿದೇಶ ವರ್ತಮಾನ.

[illegible] — [illegible] ಇವರು [illegible] ಇವರನ್ನು [illegible] ಸ್ವಾತಂತ್ರ್ಯವನ್ನು [illegible] (ಇದು [illegible] ಒಂದು ಪ್ರದೇಶ) [illegible].

ಬರ್ಲಿನ್ — ಇಲ್ಲಿಯ [illegible] ಒಂದು [illegible] ಆಲ್ಲಿ [illegible] ಸಮ್ಮತಿಸದಿದ್ದರೆ ಅವರನ್ನು [illegible].

ತುರ್ಕಿ — ತುರ್ಕಿಯ ರಾಯಭಾರಿಗಳು ಪಾರಿಸ್‌ಗೆ ಬಂದು ತಲಪಿರುವರು.

ಜರ್ಮನಿ — ಜರ್ಮನ ಪ್ರತಿನಿಧಿಗಳು ಸ್ವತಃ ಬಂದು ಮಿತ್ರಪಕ್ಷದ ರಾಯಭಾರಿಗಳನ್ನು ಸ್ಪಾ ಎಂಬಲ್ಲಿ ಕಂಡು ಈ ವರೆಗೆ ಸಂಧಿಕರ್ತರ ಸಂಪೂರ್ಣ ಚಾರಿ ನಡೆಯದುದಕ್ಕೆ ಕಾರಣವನ್ನು ವಿವರಿಸುತ್ತಲ್ಲದೆ ಮುಂದೆ ಚರ್ಚೆಗೆ ಆಸ್ಪದವಿಲ್ಲದೆ ಎಲ್ಲವೂ ಇತ್ಯರ್ಥವಾಗುವಂತೆ ಮಾಡಬೇಕೆಂದು ಮಿತ್ರಪಕ್ಷದವರು ಹೇಳಿದ್ದನ್ನು ಜರ್ಮನರು ಒಪ್ಪಿಕೊಂಡಿದ್ದು ಆ ಬಗ್ಗೆ ದಿನ ನಿಶ್ಚಯವಾಗಿತ್ತು. ಆದರೆ ಕಾರಣಾಂತರದಿಂದ ಆ ದಿನವನ್ನು ಮುಂದರಿಸಬೇಕೆಂದು ಜರ್ಮನ ಸರಕಾರದವರು ತಿಳಿಸಿದ್ದಾರೆ.

ಲಂಕೆಶೈಯರ ಗಿರಣಿಯವರ ಮುಷ್ಕರ — ಈ ಮುಷ್ಕರವು ಇನ್ನು ೧೨ ತಿಂಗಳ ವರೆಗೆ ಈಗಿನಗಿಂತ ಸೇಕಡಾ ೩೦ರಷ್ಟು ಸಂಬಳದ ದರವನ್ನು ಹೆಚ್ಚಿಸುವದಾಗಿ ಗಿರಣಿಯಜಮಾನರು ಒಪ್ಪಿದ್ದರಿಂದ ನಿಂತುಹೋಯಿತು.

ಜನರಲ್ ಡಾಯರ್ — ಇವನು ತನ್ನ ಕೆಲಸಕ್ಕೆ ರಾಜಿನಾಮೆ ಕೊಡಬೇಕಾಗಿ ಕಮಾಂಡರ್ ಇನ್ ಚೀಫರು ಒತ್ತಾಯಪಡಿಸಿದ ಕಾರಣ ಕೆಲಸಬಿಟ್ಟು ವಿಲಾಯತಿಗೆ ಹೋದನು. ಹಂಟರ್ ಕಮಿಟಿಯ ರಿಪೋರ್ಟು ಪ್ರಕಟವಾಗದೆ ಜಿಲ್ಲೆಯಾನವಾಲಾಬಾಗದ ಬಗ್ಗೆ ಡಾಯರಿಗೆ ವಿಚಾರಣೆಯಾಗಬೇಕೇ ಎಂಬದನ್ನು ಹೇಳಲು ಸಾಧ್ಯವಿಲ್ಲವೆಂದು ಸಾ। ಮೊಂಟೆಗರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಲಂಡನ್ — ಬಡೋದಾ ಮಹಾರಾಜರವರು ಪ್ಯಾರಿಸ್ ನಗರದಿಂದ ಲಂಡನ್ ನಗರಕ್ಕೆ ದಯಮಾಡಿಸಿರುವರು.

ಒಳದೇಶ ವರ್ತಮಾನ.

ರಾಜಮಂತ್ರ ಪ್ರವೀಣ ನಂಜುಂಡಯ್ಯ — ಮೈಸೂರಿನ ರಾಜಮಂತ್ರ ಪ್ರವೀಣ ಎಚ್. ವಿ. ನಂಜುಂಡಯ್ಯ ಎಮ್. ಎ. ಎಮ್. ಎಲ್. ಸಿ. ಐ. ಇ. ಇವರು ಮೈಸೂರು ಸಂಸ್ಥಾನದ ಸೀನಿಯರ್ ಕೌನ್ಸಿಲರಾಗಿ ಪೆನಶನ್ ಹೊಂದಿ ಮೈಸೂರು ಯೂನಿವರ್ಸಿಟಿಯ ವೈಸಚಾನ್ಸಲರಾಗಿದ್ದು ಆ ಯೂನಿವರ್ಸಿಟಿಯ ಕೆಲಸವನ್ನು ನೋಡುತ್ತಿದ್ದರು. ಕಳೆದ ಶುಕ್ರವಾರ ತನ್ನ ೬೦ನೇ ವಯಸ್ಸಿನಲ್ಲಿ ಸನ್ನಿ ರೋಗದಿಂದ ಪೀಡಿತರಾಗಿದ್ದು ಕಾಲವಾದರು ಎಂದು ಹೇಳಲು ತುಂಬಾ ವಿಷಾದಿಸುತ್ತೇವೆ. ಇವರು ಕನ್ನಡದಲ್ಲಿ 'ಅರ್ಥಶಾಸ್ತ್ರ'ವೆಂಬದನ್ನು ಬರೆದದ್ದಲ್ಲದೆ ಕನ್ನಡ ಭಾಷೆಯ ಏಳಿಗೆಗೆ ತುಂಬಾ ಪ್ರೋತ್ಸಾಹ ತೋರಿಸುವಂಥವರಾಗಿದ್ದರು. ಮೈಸೂರು ಯೂನಿವರ್ಸಿಟಿಯ ಕಾರ್ಯಕ್ರಮದ ಹೀರಾ ಅಭಿವೃದ್ಧಿಯು ಆ ಯೂನಿವರ್ಸಿಟಿಯ ಜನ್ಮದಿನದಿಂದ ಇವರ ಕೈಯಲ್ಲಿತ್ತು.

ಮುಂಬಯಿಯ ಪೆನ್ಶನರುಗಳು — ಮುಂಬಯಿ ಶಹರು ಮತ್ತು ಅದರ ಸುತ್ತಮುತ್ತಲಿರುವ ಪೆನಶನ್ ಹೊಂದಿದ ಗೃಹಸ್ಥರನೇಕರು ತಮಗೆ ಸಿಗುವ ಪೆನಶನ್ ಈಗಿನ ಸ್ಥಿತಿಯಲ್ಲಿ ಏನೇನೂ ಸಾಕಾಗುವದಿಲ್ಲ, ಸರಕಾರಿ ನೌಕರರ ಸಂಬಳ ಹೆಚ್ಚಿದಂತೆ ತಮಗೂ ಪೆನಶನಿನ ದರ ಹೆಚ್ಚಿಸಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

ಯುದ್ಧಕ್ಕೆ ಕಾಶ್ಮೀರದ ದ್ರವ್ಯಸಹಾಯ — ಕಾಶ್ಮೀರದ ಇಂಪೀರಿಯಲ್ ಸರ್ವಿಸ್ ಲಷ್ಕರಿನ ಬಗ್ಗೆ ಬ್ರಿಟಿಷ ಸರಕಾರದ ಪರವಾಗಿ ಕಾಶ್ಮೀರ ಸಂಸ್ಥಾನದವರು ೧,೭೦೬,೪೫೩ ರೂಪಾಯಿ ವೆಚ್ಚ ಮಾಡಿದ್ದರು. ಸಾವಿರಾರು ವರ್ಷಗಳಲ್ಲಿ ಕರಾರಿನ ಮೇರೆಗೆ ಕಾಶ್ಮೀರಕ್ಕೆ ಈ ಸೈನ್ಯದ ಬಗ್ಗೆ ಬೀಳುವ ಖರ್ಚು ಈ ಮೊಬಲಗಿನಲ್ಲಿ ಸೇರಿಲ್ಲ. ಈಗ ಮೇಲಿನ ವೆಚ್ಚದ ಹಣವನ್ನು ಬ್ರಿಟಿಷ ಸರಕಾರಕ್ಕೆ ಯುದ್ಧದ ಖರ್ಚಿನ ಬಗ್ಗೆ ವಂತಿಗೆಯಾಗಿ ಬಿಟ್ಟುಕೊಟ್ಟಿದ್ದೇವೆ ಎಂದು ಕಾಶ್ಮೀರ ಸರಕಾರದವರು ತಿಳಿಸಿರುವರು.

ಹಿಂದು ಪ್ರಚಾರಕ ಮಂಡಳಿ: — ದಾಮೋದರ ವಿಷ್ಣು ಜಿತಲೆಯವರು ಸುಮಾರು ೯ ತಿಂಗಳ ಹಿಂದೆ ಕ್ರಿಶ್ಚಿಯನ್ ಧರ್ಮವನ್ನು ಹಿಡಿದಿದ್ದರು. ಕಳೆದ ೨೯ನೇ ತಾರೀಕಿನ ಗುರುವಾರ ಪುನಃ ಹಿಂದೂ ಧರ್ಮಕ್ಕೆ ಹಿಂತಿರುಗಿದರು. ಈ ಕಾರ್ಯದ ತಂತ್ರಮಂತ್ರ ಸಂಸ್ಕಾರಗಳು ಮುಂಬಯಿ ನಗರದ ಹಿಂದೂ ಪ್ರಚಾರಕ ಮಂಡಳಿಯವರಿಂದ ನಡಿಸಲ್ಪಟ್ಟವು. ದಾಮೋದರರ ಪ್ರಾಯ ೨೨ ವರ್ಷ.

ಬೊಂಬೈ ಮಲಬಾರ ಫೋರೆಷ್ಟ ಪ್ರೊಡ್ಯೂಸ ಕಂಪೆನಿ — ಈ ಹೆಸರಿನಿಂದ ಮುಂಬಯಿಯಲ್ಲಿ ಈಗೀಗಲೇ ಒಂದು ಕಂಪೆನಿಯು ಹುಟ್ಟಿದೆ. ಒಂದು ಪಾಲಿಗೆ ೧೦೦ ರೂಪಾಯಿ ಮೇರೆಗೆ ಒಂದು ಲಕ್ಷ ಪಾಲುಗಳುಳ್ಳ ೧೦೦,೦೦,೦೦೦ ರೂಪಾಯಿ ಬಂಡವಾಳ ಸಂಗ್ರಹಿಸುವ ಅಧಿಕಾರವನ್ನು ಪಡೆದು ಈ ಕಂಪೆನಿಯು ರಿಜಿಸ್ಟರಾಗಿದೆ. ದೊಡ್ಡ ಕಾಡುಗಳನ್ನು ಪಡೆದು ವಿವಿಧ ಕಾಡುತ್ಪತ್ತಿ ಬೆಳಸಿ, ಸಂಗ್ರಹಿಸಿ ಅದನ್ನು ಅನ್ಯದೇಶಗಳಿಗೆ ರಫ್ತುಮಾಡುವುದು, ಈ ಕಾಡುಗಳಲ್ಲಿರುವ ಲೋಹಾದಿಗಳನ್ನು ಅಗೆಸುವುದು ಮುಂತಾದ ಉದ್ದೇಶದಿಂದ ಈ ಕಂಪೆನಿಯು ಸ್ಥಾಪನೆಯಾಗಿದೆ. ಮಲಬಾರ ಜಿಲ್ಲೆಯ ಏರನಾಡು ತಾಲೂಕಿನಲ್ಲಿ ಸುಮಾರು ೪೦ ಚದರ ಮೈಲು ವಿಸ್ತಾರದ ಕೊಯಿನಾಟ್ ಬೆಟ್ಟ ಎಂಬ ಸ್ಥಳವನ್ನು ಈ ಕಂಪೆನಿಯವರು ಮೊದಲು ಕೊಂಡುಕೊಳ್ಳಲಿಕ್ಕೆ ಏರ್ಪಾಡು ಮಾಡಿರುವರು.

ಅಹಮ್ಮದಬಾದು ಗಿರಣಿಮಜೂರರ ಮುಷ್ಕರ — ಅಹಮ್ಮದಾಬಾದಿನಲ್ಲಿ [illegible] ಗಿರಣಿಗಳ ಹೊರತು ಇತರ ಗಿರಣಿಗಳ ಮಜೂರರು ತಮ್ಮ ಕರ್ತರಿಗೆ ಮ್ಯಾನೇಜರು ಒಪ್ಪದ್ದರಿಂದ ಮುಷ್ಕರ ಹಿಡಿದ ಕಾರಣ ಮ್ಯಾನೇಜರು ಆ ಗಿರಣಿಗಳನ್ನು ತತ್ಕಾಲಕ್ಕೆ ಮುಚ್ಚಿಯೇ ಬಿಡಬೇಕೆಂದಿದ್ದಾರೆ.

ಬೋರ್ಡಶಾಲೆಗಳಲ್ಲಿ ಫೀಸು ಮಾಫಿ — ಬೋರ್ಡಶಾಲೆಗಳಲ್ಲಿ ಫೀಸು ಮಾಡುವ ವಿಷಯದಲ್ಲಿ ಹೇಗೆ ಮಾಡಬೇಕೆಂದು ಕೇಂದ್ರ ಸರಕಾರ [illegible] ಮಾರ್ಚಿ ತಾರೀಕು [illegible] ಮಾಫಿ ಮಾಡಬೇಕೆಂದು ಸರಕಾರದವರಿಗೆ ತಿಳಿಸಬೇಕಾಗಿ ಠರಾಯಿಸಿದರು.

ಜರ್ಮನಿಯದ ಯುವರಾಜರು — ಜರ್ಮನಿಯದ ಯುವರಾಜರು [illegible] ಬಂದು [illegible] ಕರೆಯಲ್ಪಡುವರು.

ನೋರ್ಥವೆಸ್ಟ ರೈಲ್ವೆಮಜೂರರ ಮುಷ್ಕರ — ಪಂಜಾಬು ಪ್ರಾಂತದ ನೋರ್ಥವೆಸ್ಟ ರೈಲ್ವೆಮಜೂರರು ಮುಷ್ಕರ ಹಿಡಿದು ಕೆಲಸ ನಿಲ್ಲಿಸಿದ್ದಾರೆ. ಅವರೊಂದಿಗೆ ಓಡಿಟ ಆಫೀಸಿನ ಗುಮಾಸ್ತರು ಸಹಾ ಕೆಲಸಕ್ಕೆ ಹೋಗದೆ ಮನೆಯಲ್ಲಿ ನಿಂತುಬಿಟ್ಟಿದ್ದಾರೆ.

ಕಡ್ಡಾಯದ ಪ್ರಾಥಮಿಕ ಶಿಕ್ಷಣ — ಮುಂಬಯಿ ಮ್ಯುನಿಸಿಪಾಲಿಟಿಯ ಸರಹದ್ದಿನೊಳಗೆ ಕಡ್ಡಾಯದ ಮತ್ತು ಮಾಫಿ ಪ್ರಾಥಮಿಕ ಶಿಕ್ಷಣಕ್ರಮವನ್ನು ಜಾರಿಗೆ ತರುವ ಬಗ್ಗೆ ಒಂದು ಬಿಲ್ ಮುಂಬಯಿ ನ್ಯಾಯವಿಧಾಯಕ ಸಭೆಯ ಮುಂದೆ ಬೇಗನೆ ಚರ್ಚೆಗೆ ಬರಲಿಕ್ಕಿದೆ.

ಮದ್ರಾಸು ವೆಟರ್ನರಿ ಕೊಲೇಜು — ಇದರಲ್ಲಿ ದಾಖಲಾಗಬೇಕೆಂದಿರುವ ಉಮೇದ್ವಾರರ ಅರ್ಜಿಗಳು ಬರುವ ಜೂನು ೨೦ನೆ ತಾರೀಕಿನೊಳಗೆ ಆ ಕೊಲೇಜಿನ ಪ್ರಿನ್ಸಿಪಾಲರಿಗೆ ತಲಪಬೇಕೆಂದೂ ಉಮೇದ್ವಾರರು ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಇಂಗ್ಲಿಷಿನಲ್ಲಿ ಸೇಕಡಾ ೪೫ರಷ್ಟು, ಎಲಿಮೆಂಟರಿ ಮೆಥಮೆಟಿಕ್ಸ್ ಮತ್ತು ದೇಶಭಾಷೆಯಲ್ಲಿ ಸೇಕಡಾ ೩೫ರಷ್ಟು ಮಾರ್ಕುಗಳಾದರೂ ಸಿಕ್ಕಿದವರಾಗಬೇಕೆಂದೂ ಮುಸಲ್ಮಾನ ವಿದ್ಯಾರ್ಥಿಗಳಿಗೆ ಇಂಗ್ಲಿಷಿನಲ್ಲಿ ಸೇಕಡಾ ೪೦, ಇತರ ವಿಷಯದಲ್ಲಿ ಸೇಕಡಾ ೩೦ರಷ್ಟು ಸಿಕ್ಕಿದರೂ ಸಾಕೆಂದೂ ಪ್ರಕಟನೆ ಇದೆ. ತಿಂಗಳಿಗೆ ರೂ. ೧೫ರಂತೆ ೩೦ ವೇತನಗಳು ಇವೆ; ಯೂನಿವರ್ಸಿಟಿ ಗ್ರೆಡ್ಯುವೇಟರಾಗಿ ಈ ಶಾಲೆಗೆ ದಾಖಲಾಗುವವರ ಬಗ್ಗೆ ರೂ. ೩೦ರ ಇನ್ನೆರಡು ವೇತನಗಳೂ ಉಂಟು. ಉಮೇದ್ವಾರರ ಚುನಾವಣೆ ಜುಲೈ ತಿಂಗಳಲ್ಲಿ ಆಗುವುದು.

ದಿಲ್ಲಿಯಲ್ಲಿ ಖಿಲಾಫತ್ ಚಳವಳ — ಇಲ್ಲಿ ಸ್ವದೇಶಿ ಮತ್ತು ಖಿಲಾಫತ್ ಪ್ರಶ್ನೆಗಳನ್ನು ಚರ್ಚಿಸುವುದಕ್ಕೆ ೧೦೦೦ಕ್ಕೆ ಮಿಕ್ಕಿ ಮುಸಲ್ಮಾನ ಸ್ತ್ರೀಯರ ಒಂದು ಸಭೆ ಕೂಡಿತ್ತು. ಮೇಲಿನ ವಿಷಯಗಳ ಪ್ರಸ್ತಾಪ ಬಂದ ತರುವಾಯ ಸ್ವದೇಶಿ ವಸ್ತ್ರಗಳನ್ನೇ ಉಪಯೋಗಿಸಬೇಕೆಂದು ದೀಕ್ಷೆ ಹಿಡಿದರು.

ಖಿಲಾಫತ ಪ್ರಶ್ನೆಯಲ್ಲಿ ಮಹಾತ್ಮಗಾಂಧಿಯವರ ಇಸ್ತಿಹಾರು — ಖಿಲಾಫತ ಪ್ರಶ್ನೆಯು ಹಿಂದೀ ಮುಸಲ್ಮಾನರ ಕೋರಿಕೆಯಂತೆ ತೀರ್ಮಾನವಾಗದಿದ್ದರೆ ಮುಸಲ್ಮಾನರೂ ಅವರ ಮೇಲೆ ಪ್ರೇಮ ವಿಶ್ವಾಸಗಳಿಂದ ಭ್ರಾತೃಭಾವ ತೋರ್ಪಡಿಸಲಿಕ್ಕಿರುವ ಹಿಂದೂಗಳೂ ಮೊತ್ತಮೊದಲು ಸರಕಾರದಿಂದ ಪಡೆದ ಬಿರುದುಗಳನ್ನೂ ಗೌರವಾರ್ಥದ ಉದ್ಯೋಗಗಳನ್ನೂ ಬಿಟ್ಟುಬಿಡಬೇಕು, ಅನಂತರ ಕೆಲವು ಕಾಲದ ಮೇಲೆ ಸರಕಾರಿ ಉದ್ಯೋಗಗಳನ್ನೆ ಬಿಟ್ಟುಬಿಡಬೇಕು, ಸರಕಾರಿ ಉದ್ಯೋಗ ಬಿಟ್ಟರೆ ಜೀವನದ ಕಷ್ಟ ಬಂದೀತೆಂದು ಸಂದೇಹ ತೋರುವವರಿಗೆ ಬೇರೆ ಜೀವನೋಪಾಯವನ್ನು ಕಲ್ಪಿಸಿಕೊಡುವುದಕ್ಕೆ ಪ್ರಯತ್ನವಿದೆ, ಈ ಎರಡನೆ ಕ್ರಮವೂ ಸರಕಾರದ ಮನಸ್ಸನ್ನು ಕರಗಿಸದಿದ್ದರೆ ಪೋಲಿಸ ಮತ್ತು ಲಷ್ಕರಿನಲ್ಲಿ ಇದ್ದವರು ಕೆಲಸಕ್ಕೆ ರಾಜಿನಾಮೆ ಕೊಡಬೇಕು, ಅದರಲ್ಲಿಯೂ ನಿರಾಶೆಯಾದರೆ ಕಡೆಗೆ ಸರಕಾರಕ್ಕೆ ಕಂದಾಯ ಕೊಡುವುದನ್ನೆ ನಿಲ್ಲಿಸಬೇಕಾಗುವುದು. ಹೀಗೆ ಒಂದರ ಹಿಂದೆ ಒಂದು ಕಷ್ಟತರವಾದ ಪ್ರಶ್ನೆಗಳನ್ನು ಮಹಾತ್ಮಾ ಗಾಂಧಿಯವರು ತಮ್ಮ ಇಸ್ತಿಹಾರಿನಲ್ಲಿ ಬೋಧಿಸಿದ್ದಾರೆ. ಜನರು ತಾಳ್ಮೆಯಿಂದ ಕಷ್ಟ ಸಹಿಸಬೇಕಾದೀತಲ್ಲದೆ ಸರಕಾರದ ಮೇಲೆ ಕೈ ಎತ್ತಿದರೆ ಉದ್ದೇಶಕ್ಕೆ ಖಂಡಿತವಾಗಿಯೂ ಭಂಗವುಂಟಾದೀತೆಂದು ಎಚ್ಚರಿಸಿದ್ದಾರೆ.

ಕರ್ಣಾಟಕ ಸಾಹಿತ್ಯ ಪರಿಷತ್ತು — ಇದರ ಆರನೆಯ ಸಮ್ಮೇಳನವು ಈ ಮೇ ತಿಂಗಳ ೧೯ನೆಯ ತಾರೀಕು ಬುಧವಾರ ತೊಡಗಿ ಒಂದು ಬಳ್ಳಾರಿ ಡಿಸ್ಟ್ರಿಕ್ಟಿಗೆ ಸೇರಿದ ಹೊಸಪೇಟೆಯಲ್ಲಿ ನಡೆಯುವುದು. ಧಾರವಾಡದ ರಾವ್ ಬಹದ್ದೂರ್ ಮ. ರಾ. ರಾ. ಪಿ. ಬಿ. ಜೋಷಿ ಬಿ. ಎ. ಯವರು ಅಧ್ಯಕ್ಷತೆಯನ್ನು ವಹಿಸುವರು.

ವಂದೇ ಮಾತರಮ್ ಪತ್ರಿಕೆ — ಈ ಹೆಸರಿನ ಒಂದು ಪತ್ರಿಕೆಯು ಲಾಹೋರಿನಿಂದ ಹೊರಡುವುದೆಂದೂ, ಇದು ಉರ್ದು ಭಾಷೆಯಲ್ಲಿ ಪ್ರಕಟಿಸಲ್ಪಡುವುದೆಂದೂ, ತಿಳಿದು ಬರುತ್ತದೆ. ಇದರ ಸಂಪಾದಕರು ಲಾಲಾ ಲಜಪತರಾಯರು.

ಭರತ ಖಂಡಕ್ಕೆ ಮೋಟರ ಗಾಡಿಗಳ ಆಮದು — ಹಿಂದುಸ್ಥಾನಕ್ಕೆ ಕಳೆದ ಮಾರ್ಚ ತಿಂಗಳಲ್ಲಿ ಒಟ್ಟು ೨೬೫೯ ಮೋಟರ ಗಾಡಿಗಳು ಬಂದವು. ಈ ಪೈಕಿ ಅಮೇರಿಕದ ಸಂಯುಕ್ತ ಸಂಸ್ಥಾನಗಳಿಂದ ೨೫೫೬, ಇಂಗ್ಲೆಂಡಿನಿಂದ ೬೫ ಗಾಡಿಗಳು ಕಳುಹಿಸಲ್ಪಟ್ಟವು.

ಸತೀಶಚಂದ್ರ ವಿದ್ಯಾಭೂಷಣ — ಈ ಮಹನೀಯರು ಕಳೆದ ತಿಂಗಳ ೨೬ನೇ ತಾರೀಕಿನಲ್ಲಿ ಕಲ್ಕತ್ತಾ ನಗರದಲ್ಲಿ ಗತಿಸಿದರು. ಇವರು ಕಲ್ಕತ್ತಾ ಸಂಸ್ಕೃತ ಕಾಲೇಜಿನ ಮುಖ್ಯ ಉಪಾಧ್ಯಾಯರೂ ವಂಗದೇಶದವರಲ್ಲಿ ಅದ್ವಿತೀಯ ಸಂಸ್ಕೃತ ಪಂಡಿತರೂ ಆಗಿದ್ದರು.

ಮಿ. ಜಾರ್ಜ ಅರುಂಡೇಲರ ವಿವಾಹ — ಇವರಿಗೂ ಮದರಾಸಿನ ನೀಲಕಂಠ ಶಾಸ್ತ್ರಿ ಎಂಬ ಸ್ಮಾರ್ತ ಬ್ರಾಹ್ಮಣರ ಕುಮಾರಿ ರುಕ್ಮಿಣಿಯವರೆಂಬಾಕೆಗೂ ಕಳೆದ ತಾ. ೨೭ರಲ್ಲಿ ಮುಂಬಯಿಯ ಸಿವಿಲ್ ಮ್ಯಾರೇಜ್ ರಿಜಿಸ್ಟ್ರಾರರ ಮುಂದೆ ಮದುವೆಯು ನಡೆಯಿತು.

ದಕ್ಷಿಣ ಕನ್ನಡ.

ಪುತ್ತೂರು: — ಇಲ್ಲಿಯ ರೆವಿನ್ಯೂ ಡಿವಿಜನಲ್ ಆಫೀಸರರ ಸರ್ಕೀಟು ಕೆಳಗಿನಂತೆ ನಿಶ್ಚಯವಾಗಿದೆ. ತಾ. ೧೬ರಿಂದ ೨೧ರ. ವರೆಗೆ ಮಂಗಳೂರು, ತಾ. ೨೩ರಿಂದ ೨೬ರ ವರೆಗೆ ಕಾಸರಗೋಡು, ತಾ. ೨೭ರಿಂದ ೩೧ರ ವರೆಗೆ ಪುತ್ತೂರು.

ಕಾಸರಗೋಡು: — ಜಲಿಯನ್‌ವಾಲಾ ಸ್ಮಾರಕ ಫಂಡಿಗೆ ಇಲ್ಲಿಂದ ಜುಮ್ಲಾ ರೂ. ೧೫೫ ವಂತಿಗೆಯಾಗಿದೆ. ಈ ಪೈಕಿ ರಾ। ಎಸ್. ಎಸ್. ರಾಮರಾಯರು, ರಾ। ಎಚ್. ಎಸ್. ಕಾಮತರು, ರಾ। ಕೆ. ಎಸ್. ಶೆಟ್ಟಿಯವರು ಮತ್ತು ಒಬ್ಬ ಹಿತಚಿಂತಕರು ಪ್ರತಿಯೊಬ್ಬರೂ ರೂ. ೨೫ರಂತೆಯೂ, ರಾ। ಸಿ. ರಾಮರಾಯರು, ರಾ। ಎ. ಪಿ. ನಾರಾಯಣ ಮನೋಲಿನಾರು, ರಾ। ಸಿ. ಎಮ್. ರಾಮತರು, ರಾ। ಪಿ. ಆನಂದರಾಯರು ಪ್ರತಿಯೊಬ್ಬರೂ ರೂ. ೧೦ರಂತೆಯೂ, ರಾ। ಮಹಾದೇವ ಶೆಟ್ಟಿ, ರಾ। ಎಚ್. ಶರಸಿಂಹ ಶಾನುಭಾಗರು ಪ್ರತಿಯೊಬ್ಬರೂ ೫ ರೂ. ರಂತೆಯೂ ಮತ್ತು ಬಾಕಿಯವರು ೨ ರೂ. ರಂತೆಯೂ ವಂತಿಗೆ ಕೊಟ್ಟಿರುವರು.

ಗ್ರಾಮಸಿಬಂದಿ.

ಗ್ರಾಮಾಧಿಕಾರಿಗಳಿಗೆ ಅಂಥ ಅಧಿಕಾರದ ಬಗ್ಗೆ ಇನಾಂ ದೊರಕಿದ ಜಮೀನಿಗೆ ಇತರ ಜಮೀನಿನ ದರದಷ್ಟು ಪೂರಾ ತೀರ್ವೆ ಹೊರಿಸಲಾಯಿತು ಮತ್ತು ಜಮೀನಿನ ಫಸಲಿನ ಅಂಶರೂಪವಾಗಿ ನಿಶ್ಚಿತ ವೇತನಗಳ ಬದಲಾಗಿ ನಗದಾಗಿ ಸಂಬಳ ಸಿಗಲಾರಂಭಿಸಿತು. ಅಂದಿನಿಂದ, ಸಂತಾನ ಪಾರಂಪರ್ಯದ ಹಕ್ಕು ಎಂಬುದು ಬರೇ ತಿಂತು ಮಾತ್ರ, ಅದನ್ನು ಯಾವಾಗಲೂ ಕಡಿದುಬಿಡಬಹುದು ಎಂಬ ಅರ್ಥವಾಗುತ್ತದೆ. ಗ್ರಾಮಾಧಿಕಾರಿಗಳಲ್ಲಿದ್ದಾಗಿದ್ದ ಈ ತೀರ್ವೆ ಇನಾಂ ಜಮೀನುಗಳನ್ನು ಅನುಭವಿಸಿ ಬರುವವರಿಂದ ಕೆಲವಂಶವನ್ನು ಸಂಗ್ರಹಿಸಿ ಗ್ರಾಮಾಧಿಕಾರಿಗಳಿಗೆ ಸಂಬಳವಾಗಿ ಕೊಡುವುದು ಎಂಬದೇ ಏಲಿಜಸೆಸ್ಟಿನ ಉತ್ಪತ್ತಿಗೆ ಕಾರಣ. ನಮ್ಮ ಜಿಲ್ಲೆಯಲ್ಲಂತು ಶ್ಯಾನುಭಾಗ ಉಗ್ರಾಣಿಗಳಿಗೆ ಈ ಜಾಗೆಯ ಇನಾಂ ಜಮೀನು ಇತ್ತು ಎಂಬವಕ್ಕೆ ದಾಖಲೆ ಇಲ್ಲವೆಂತಾದರೂ ಪಟೇಲರು ಗ್ರಾಮದ ಮುಖ್ಯ ಗುತ್ತಿನವರು ಅಥವಾ ಗೊತ್ತುಗಾರರು ಎಂಬುದರಿಂದ ಕೆಲವು ರಿಯಾಯತಿಗಳೂ ಕೆಲವು ಬಿರುದುಗಳು ಅವರಿಗೆ ಇದ್ದೇ ತೀರಬೇಕು. ಅಂಥ ತೀರ್ವೆರಿಯಾಯತಿಗಳು ಕಳೆದುಹೋಗಿದ್ದರಿಂದ 'ಕುಟುಂಬದ ಹಕ್ಕು' ಎಂಬುದು ಸರಕಾರಕ್ಕೂ ಪಟೇಲನ ಮನೆತನಕ್ಕೂ 'ಅನುಕೂಲಸಿಂಧು'ವೇ ಆಗಿದೆ ಎನ್ನಬೇಕು. ಆ ಹುದ್ದೆ ಪಾರಂಪರ್ಯವಾಗಿ ಬರುವುದರಿಂದ — ಆ ಹಿರೇ ಗುತ್ತಿನ ಭೂಮಿ ಬೇರೆಯವರ ಕೈಸೇರಿದರೂ ಸೇರಲಿ — ಪಟೇಲನ ಮನೆ ಎಂಬ ಗೌರವವು ಈಗಲೂ ಹಲವು ಒಳಹಳ್ಳಿಗಳಲ್ಲಿ ಇದೆ. ಈ ಗೌರವದ ಬಲದಿಂದ ಈ ಮನೆತನದವರಿಗೆ ಕಂದಾಯ ವಸೂಲಿಯ ಕೆಲಸವು ಕಷ್ಟವಾಗುವುದಿಲ್ಲ. ಅದೇ ರೀತಿ ಶ್ಯಾನುಭಾಗನಾದವನ ಹತ್ತಿರ ಗ್ರಾಮದ ಹಲವು ಮುಖ್ಯ ಮುಖ್ಯವಾದ ದಾಖಲೆಗಳು ಮೊದಲಿಂದಲೂ ಇದ್ದವು. ಹಳ್ಳಿಯ ಜನಗಳ ಜಮೀನಿನ ಗಡಿ, ಕಂದಾಯ ಮಾಫಿಯ ಹಕ್ಕು, ಹೊಸಾಗಮೆಗಳ ವಿವರ, ಮೂಲಪಟ್ಟೆಗಳ ದಾಖಲೆ, ತಸ್ತೀಕುಗಳ ಪಟ್ಟಿ, ಕಟ್ಟುಕಟ್ಟಳೆಗಳ ಲೆಕ್ಕ ಇವುಗಳೆಲ್ಲ ಶ್ಯಾನುಭಾಗನ ವಶದಲ್ಲಿದ್ದು ಈಗಿನಂತೆ ಸರ್ವೆಯ ಅನುಕೂಲತೆ, ಭೂಮಿ ರಿಜಿಸ್ಟ್ರಿಗಳ ಸಂಗ್ರಹ ಇಲ್ಲದ್ದರಿಂದ ಅನೇಕ ಸಿವಿಲ, ರೆವಿನ್ಯೂ ವ್ಯವಹಾರಗಳು ಈ ಶ್ಯಾನುಭಾಗರ ಲೆಕ್ಕದ ಲೆಕ್ಕದಾಖಲೆಗಳಿಂದಲೇ ಇತ್ಯರ್ಥವಾಗಬೇಕಿತ್ತು. ನಮ್ಮ ಜಿಲ್ಲೆಯಲ್ಲಿ ನೂರು ಗೆರಿದ ಕ.ಮತಿ ಹಕ್ಕು ಎಂಬುದು ಪಾಗುವಳ್ಳಿ ಆಗುವ ಜಮೀನಿನ ಗಡಿಯಿಂದ ಎಣಿಸಬೇಕೆಂದು ನಿರ್ಣಯಿಸಿ, ಬಾಕಿ ಉಳಿದ ಸ್ಥಳವೆಲ್ಲ ಸರಕಾರಿ ಸ್ಥಳವಾಗಿದ್ದು ಯಾರಿಗೂ ದರ್ಖಾಸ್ತಿಗೆ ಸಿಗಬಹುದು ಎಂದು ನಿರ್ಣಯಿಸಲಿಕ್ಕೂ ಪರಿಚಿಲ್ಲಿಯಾದ ಮಲೆನಾಡಿನಲ್ಲಿ ಸರಕಾರಿ ಜಮೀನು ಬಹಳ ಕಡಿಮೆ, ವರ್ಗದಾರಿ ಜಮೀನು ವಿಶೇಷವಾಗಿರಲಿಕ್ಕೂ ಈ ಶ್ಯಾನುಭಾಗರ ಲೆಕ್ಕದಾಖಲೆಗಳೇ ಕಾರಣ. ತಸ್ತೀಕು ಮೊದಲಿದ್ದ ಕೆಲವು ದೇವಸ್ಥಾನಗಳಿಗೆ ಅದು ರದ್ದಾಗಿ ಬೇರೆ ನೂತನ ಸಂಸ್ಥೆಗಳಿಗೆ ತಸ್ತೀಕು ಸಿಗಲಿಕ್ಕೂ ಹಕ್ಕಿಲ್ಲದ ಸ್ಥಳಗಳಲ್ಲಿ ದೊಡ್ಡ ವರ್ಗದಾರರಿಗೆ ಹಕ್ಕುಮಾಡಿ ಕೊಡಲಿಕ್ಕೂ ಈ ಶ್ಯಾನುಭಾಗರ 'ಕಡತ್ತು'ಗಳೆ ಮೂಲ ಕಾರಣವಾದವು. ಇಂಥ ರಿಕಾರ್ಡು ದಾಖಲೆಗಳನ್ನು ಸಂಗ್ರಹಿಸಿ ಕಾಪಾಡಿ ಇಡಲಿಕ್ಕೆ ಈ ಪಾರಂಪರ್ಯದ ಹಕ್ಕೇ ಸುಲಭ ದಾರಿಯಾಯಿತು. ಉಗ್ರಾಣಿಗಳು ಪಟೇಲರಿಗೂ ಶ್ಯಾನುಭಾಗರಿಗೂ ಅಡಿಯಾಳಾಗಿದ್ದ ಕಾರಣ ಅವರಿಗೆ ಇದ್ದ ನಿಬಂಧನೆಗಳೇ ಉಗ್ರಾಣಿಗಳಿಗೂ ಲಗಾವಾದವು. ಈ ರೀತಿಯಾಗಿ ಇತ್ತಿಟ್ಟಿಗೂ ಪ್ರಯೋಜನಕಾರಿಯಾಗಿ ಈ 'ಪಾರಂಪರ್ಯದ ಹಕ್ಕು' ಬಹಳ ಕಾಲದಿಂದ ಸರಾಗವಾಗಿ ನಡೆದುಬಂದಿದೆ. ಈ ಹಕ್ಕು ಇದೆ ಎಂಬ ಆಧಾರವನ್ನೇ ಕೊರಿಸಿ ಸರಕಾರವು ಸಂಬಳದ ಪರ, ಬತ್ತ ಇವುಗಳ ವಿಷಯದಾಗಿ ಗ್ರಾಮಾಧಿಕಾರಿಗಳಿಂದ ಆಗಾಗ ಬಂದ ಮನವಿಗಳನ್ನು ತಳ್ಳಿಹಾಕಿತು. ಈಗಲೂ ಪಟೇಲನ ಹುದ್ದೆ ಖಾಲಿಯಾದಾಗ ಒಂದೇ ಮನೆತನದ ಬೇರೆ ಬೇರೆ ಶಾಖೆಗಳವರು ಜೋರಾಗಿ ಖರ್ಚುಮಾಡಿ ತಮ್ಮ ಶಾಖೆಗೆ ಆ ಹಕ್ಕು ಬರುವ ಹಾಗೆ ವ್ಯವಹರಿಸುವ ದೃಷ್ಟಾಂತಗಳು ಇವೆ. ಶ್ಯಾನುಭಾಗನು ಮುದಿದು ಹೋಗಿ ಅವನ ಕುಟುಂಬದಲ್ಲಿ ಹಕ್ಕುದಾರನಾದ ಮಗು ಪ್ರಾಯಕ್ಕೆ ಬರುವವರೆಗೆ ಬದಲಿಯಾಗಿ ಕೆಲಸಮಾಡಿಸಿಕೊಳ್ಳುವುದಕ್ಕೆ ಹಳ್ಳಿಯಲ್ಲಿ ಹಲವು ಮಂದಿ ಹಣ ಖರ್ಚುಮಾಡುವುದೂ ಉಂಟು. ಶ್ಯಾನುಭಾಗನ ಕುಟುಂಬದವರಿಗೆ ಒಂದು ಬಗೆಯ ಗೇಣಿಕೊಡುವುದಾಗಿ ಒಪ್ಪಿಕೊಂಡ ದೃಷ್ಟಾಂತಗಳೂ ಇವೆ. ಉಗ್ರಾಣಿಯು ಸಾಮಾನ್ಯವಾಗಿ ಪಟೇಲ ಅಥವಾ ಶ್ಯಾನುಭಾಗರ ಹಂಗಾಳಾಗಿದ್ದು ಅವರ ಮನೆಕೆಲಸವನ್ನು ಮಾಡಿ ಅಲ್ಲಿ ತನ್ನೊಟ್ಟಿನ ಊಟದ ಖರ್ಚನ್ನು ಪೂರೈಸಿ ತನ್ನ ಕುಟುಂಬದ ಸಂರಕ್ಷಣೆಗೆ ಒಂದೆರಡು ಮುಡಿ ಗದ್ದೆಯನ್ನು ಗೇಣಿಗೆ ಮಾಡಿಕೊಳ್ಳುತ್ತಾನೆ. ಶ್ಯಾನುಭಾಗರಿಗೂ ವಸ್ತ್ರವಡುಗಳನ್ನು ಬರೆದು ಆಗಾಗ ಹಳ್ಳಿಯ ತಂಟೆಗಳಲ್ಲಿ ಒಂದು ಪಕ್ಷವಾಗಿ ನಿಂತು ದ್ರವ್ಯಲಾಭಹೊಂದುವ ಸಂದರ್ಭಗಳೂ ಇದ್ದವು. ಪಟೇಲನು ತನ್ನ ಹುದ್ದೆಯ ಗೌರವದಿಂದ ಹಳ್ಳಿಯಲ್ಲಿ ಕೆಲವು ನೌಕರ್ಯಗಳನ್ನು ಹೊಂದುವುದೂ, ಕೆಲವು ಸಲ ಪೋಲಿಸ್ ವ್ಯವಹಾರಗಳಲ್ಲಿ ಇಲ್ಲದ ಸಲ್ಲದ ಕುತಂತ್ರಗಳನ್ನು ನಡಿಸಿ ಜನರಲ್ಲಿ ಭಯವನ್ನು ಹುಟ್ಟಿಸಿದ ದೃಷ್ಟಾಂತಗಳೂ ಇವೆ. ಈ ಎಲ್ಲಾ ಕಾರಣಗಳಿಂದ ಈ ಗ್ರಾಮಸಿಬಂದಿಯ ಜೀವನವಾಗಲಿ ಗೌರವವಾಗಲಿ ಕುಂದಿಲ್ಲದೆ ನಿರ್ವಹಿಸುವಾಗ ಈ ಸಭೆಗಳೂ ಮನವಿಗಳೂ ಆಗೆ ಸ್ಮವಿದ್ದಿಲ್ಲ, ಸಂಬಳದ ಧರಗಳನ್ನು ಹೆಚ್ಚಿಸಲು ಅಗತ್ಯವಿಲ್ಲ ಎಂದು ಸರಕಾರದವರು ಭಾವಿಸಿದರೆ ಶುದ್ಧ ಪ್ರಮಾದವಾದೀತು. ಹಳ್ಳಿಯ ಆಡಳಿತೆಯ ಮೇಲೆ ಇಡೀ ಸಂಸ್ಥಾನದ ಆಡಳಿತೆಯು ಆಧರಿಸಿದೆ. ಹಿಂದೂಸ್ಥಾನದಲ್ಲಿ ಹಳ್ಳಿಗಳ ಸಂಖ್ಯೆಯೇ ಹೆಚ್ಚು. ಶಹರುಗಳ ಸಂಖ್ಯೆ ಕಡಿಮೆ. ಹಳ್ಳಿಗಳು ಸುಧಾರಣೆಗೆ ಬರಬೇಕಾದರೆ ಅಲ್ಲಿಯ ಆಡಳಿತ ವಿಚಾರವು ಸರಿಯಾಗಬೇಕು. ಸರಕಾರದ ತೀರ್ವೆ ಸರಾಗವಾಗಿ ವಸೂಲಾಗುತ್ತದೆ ಎಂಬದೊಂದೇ ಹಳ್ಳಿಯ ಆಡಳಿತೆಯ ವಿಚಾರದ ಕೊನೆಯಲ್ಲ. ಹಳ್ಳಿಜನಗಳ ಸಂಪತ್ತು, ಆಪತ್ತು ಇವುಗಳ ವಿಚಾರವು ಅತ್ಯಾವಶ್ಯಕವಾಗಿ ನಡೆಯಬೇಕು. ರೋಗರುಜಿನಗಳ ನಿವಾರಣೆ, ವ್ಯಾಪಾರ ಕೃಷಿಗಳ ಸೌಕರ್ಯ, ವಿದ್ಯಾಪ್ರಚಾರ ಇವೆಲ್ಲಕ್ಕೂ ಹಳ್ಳಿಯ ಆಡಳಿತೆಯ ಸುಧಾರಣೆಯೇ ದಾರಿತೋರಿಸುತ್ತದೆ. ಹಳ್ಳಿಯ ಆಡಳಿತೆಯು ಈ ಗ್ರಾಮಸಿಬಂದಿಯ ಮೇಲೆ ಹೊಂದಿರುವುದರಿಂದ ಇದಕ್ಕೆ ಈಗಿನ ಸ್ಥಿತಿಯಲ್ಲಿರುವ ಕುಂದುಕಗಳೇನು, ಅವರಿಗೆ ನ್ಯಾಯವಾಗಿ ಯಾವ ಸಲಹೆಗಳು ಸಿಗಬೇಕು ಎಂಬದನ್ನು ಮುಂದಿನ ಸಂಚಿಕೆಯಲ್ಲಿ ಚರ್ಚಿಸುವೆವು.

ಗ್ರಾಮಮುನ್ಸಿಫರ ಕೋರ್ಟುಗಳು.

೧೮೮೯ನೆ ಇಸವಿಯ ೨ನೆ ಏಕ್ಟಿಗೆ ಅನುಗುಣವಾಗಿ, ಗ್ರಾಮಪಂಚಾಯತು ಕೋರ್ಟುಗಳ ಬಗ್ಗೆ ಈ ಕೆಳಗಿನ ನಿಬಂಧನೆಗಳು ಹಂಗಾಮಿಯಾಗಿ ಮದ್ರಾಸು ಪ್ರಾಂತಿಕ ಸರಕಾರದವರಿಂದ ರಚಿಸಲ್ಪಟ್ಟವು: —

ಗ್ರಾಮಮುನಸೀಫನ ನೇಮಕವು ರೆವಿನ್ಯೂ ಡಿವಿಜನಲ್ ಆಫೀಸರಿಂದ ಆಗತಕ್ಕದ್ದು. ಗ್ರಾಮಕೋರ್ಟಿನ ಸರಹದ್ದು ಮತ್ತು ಒಂದು ಗ್ರಾಮದ ಗಡಿಯು ಒಂದೇ ಆಗಿದ್ದರೆ ಗ್ರಾಮದ ಪಟೇಲನನ್ನೇ ಗ್ರಾಮಮುನಸೀಫನಾಗಿ ನೇಮಿಸತಕ್ಕದ್ದು. ಹಲವು ಗ್ರಾಮಗಳ ಸಮುದಾಯಕ್ಕೆ ಅಥವಾ ಒಂದೇ ಗ್ರಾಮದ ಒಂದು ಅಂಶಕ್ಕೆ ಬೇರೆ ಮುನಸೀಫನನ್ನು ನೇಮಿಸುವುದಾದರೆ ಆ ಗ್ರಾಮಗಳ ರೈತರ ಪೈಕಿ ಯಾರೊಬ್ಬನನ್ನಾದರೂ ರೆವಿನ್ಯೂ ಡಿವಿಜನಲ್ ಆಫೀಸರರು ನೇಮಿಸಬಹುದು.

(ಆಪೂರ್ಣ — ಮುಂದುವರಿಯುವುದು.)

[illegible] ಜನರಲ್ ಡಾಯರ್ ಸಾಹೇಬರ ಉತ್ತರ ಕುಮಾರತನ . . ,,
[illegible] . . [illegible]
[illegible] ಮುನ್ಸಿಪಾಲಿಟಿಯ ಓವರ್ಸೀಯರ . . ,,
[illegible] ತೃತ್ವ ಸಂಘ . . ,,
[illegible] . . ,,
[illegible] ಸಂಗ್ರಹ . . ,,
[illegible]ಸಂಗ್ರಹಗಳು:—
[illegible] ವೃತ್ತಾಂತ . . ,,
[illegible] ವರ್ತಮಾನ . . ,,
[illegible] ಕನ್ನಡ:—
[illegible] ಸಾಸರಗೋಡು . . ,,
ಗ್ರಾಮಸುಂದ . . ,,
ಗ್ರಾಮಮುನ್ಸಿಫರ ಕೋರ್ಟುಗಳು . . ೫-೮
[illegible] ಕಮಿಟಿಯ ರಿಪೋರ್ಟ . . ,,
ಜನರಲ್ ಡಾಯರ್—ಜಲಿಯನ್‌ವಾಲದ ವೀರ(ಪದ್ಯ) . . ,,
[illegible] ರೋಗಗಳು . . ,,
ಪತ್ರವ್ಯವಹಾರ, ೧, ೨, ೩, . . ,,
ಪತ್ರಿಯ ಬೆಳೆಯನ್ನು ಕುರಿತಾದ ಮಾಹಿತಿ . . ೮A

ಸ್ವದೇಶಾಭಿಮಾನಿ.

ಶಕ ೧೮೪೨ ವೈಶಾಖ ಬ॥ ೧೧ ಶುಕ್ರವಾರ.

ಮೆಸ್ಟನ್ ಕಮ್ಮಿಟಿಯವರ ಹಂಚಿಕೆ.

ಇಂಡಿಯಾ ಸರಕಾರದ ಸುಧಾರಣಾ ಎಕ್ಟಿಗೆ ಅನುಗುಣವಾಗಿ ವರಿಷ್ಠ ಸರಕಾರ ಮತ್ತು ಪ್ರಾಂತಿಕ ಸರಕಾರಗಳ ಕಂದಾಯದ ಹಂಚಿಕೆಯಲ್ಲಿ ವಿಶೇಷ ಬದಲಾವಣೆಗಳು ಆಗಲಿಕ್ಕಿರುವವು. ಈ ಹಂಚಿಕೆಯ ಕ್ರಮವು ಮನಸ್ಸಿಗೆ ಹತ್ತಬೇಕಾದರೆ ಈ ವರೆಗೆ ಜಾರಿಯಲ್ಲಿದ್ದ ಕ್ರಮವನ್ನು ಸ್ವಲ್ಪ ವಿವರಿಸಬೇಕಾಗುವುದು. ಭೂಕಂದಾಯ, ನೀರಾವರಿ ಕಂದಾಯ, ಅಫೀಮು, ಉಪ್ಪಿನ ಕಂದಾಯ, ಎಕ್ಸಾಯಜ್ (ಇತರ ಮಾದಕ ಪದಾರ್ಥಗಳ ಮೇಲಣ ಕಂದಾಯ), ಟಸ್ಸೆಫೀಸು, ಪರಬಂದರುಗಳ ಆಮದು ರಪ್ತಿನ ಮೇಲೆ ಸುಂಕ, ಕಾಡುತ್ಪತ್ತಿ, ಆದಾಯ ತೆರಿಗೆ, ರೈಲ್ವೆ, ಟಪ್ಪಾಲು, ತಂತಿ ಇಲಾಖೆಗಳ ಆದಾಯ, ರಿಜಿಸ್ಟ್ರೇಶನ್ ಫೀಸು, ಸಿವಿಲ್ ಕ್ರಿಮಿನಲ್ ಕೋರ್ಟುಗಳ ಆದಾಯ ಇವು ಸರಕಾರದ ಮುಖ್ಯ ಆಯಗಳು. ಇವುಗಳನ್ನು ಸಂಗ್ರಹ ಮಾಡುವ ಕೆಲಸವು ಬಹಳ ಮಟ್ಟಿಗೆ ಪ್ರಾಂತಿಕ ಸರಕಾರದಿಂದಲೇ ಜರಗುತ್ತಿದೆ. ರೈಲ್ವೆ, ಟಪ್ಪಾಲು, ತಂತಿ, ಸುಂಕ ಇವು ಈಗ ವರಿಷ್ಠ ಸರಕಾರದ ಕೈಯಲ್ಲಿಯೇ ಇವೆ. ಉಳಿದ ಇಲಾಖೆಗಳಲ್ಲಿ ಕೆಲವುಗಳಲ್ಲಿ ಆದಾಯದಲ್ಲಿಯೂ ಖರ್ಚಿನಲ್ಲಿಯೂ ವರಿಷ್ಠ ಮತ್ತು ಪ್ರಾಂತಿಕ ಸರಕಾರಗಳಿಗೆ ಪಾಲು ಇದೆ. ಇನ್ನೂ ಕೆಲವು ಇಲಾಖೆಗಳ ಆದಾಯವು ಪ್ರಾಂತಿಕ ಸರಕಾರಕ್ಕೇನೇ ಸೇರುತ್ತಿದ್ದು ಅವುಗಳ ಖರ್ಚನ್ನು ಪ್ರಾಂತಿಕ ಸರಕಾರಗಳೇ ವಹಿಸಿಕೊಳ್ಳುತ್ತಿವೆ. ಮದ್ರಾಸು ಪ್ರಾಂತಿಕ ಸರಕಾರದವರು ಕಾಡುತ್ಪತ್ತಿ, ರಿಜಿಸ್ಟ್ರೇಶನ್, ಕೋರ್ಟು ಫೀಸು, ಇವುಗಳ ಜಮಾಖರ್ಚನ್ನು ತಾವೇ ವಹಿಸಿಕೊಳ್ಳುತ್ತಿದ್ದಾರೆ. ಅಫೀಮು, ಉಪ್ಪು ಇವುಗಳ ಕಂದಾಯವನ್ನು ಮದ್ರಾಸು ಸರಕಾರವು ವಸೂಲುಮಾಡಿ ವರಿಷ್ಠ ಸರಕಾರಕ್ಕೆ ತೀರಾ ಒಪ್ಪಿಸಿಕೊಡುತ್ತಿದೆ. ಭೂಕಂದಾಯ, ಟಸ್ಸೆ, ಎಕ್ಸಾಯಜ್, ಇವುಗಳ ಮುನಾಫೆಯಲ್ಲಿ ಮದ್ರಾಸು ಸರಕಾರವು ಸರಿ ಅರ್ಧಾಂಶವನ್ನು ವರಿಷ್ಠ ಸರಕಾರಕ್ಕೆ ಒಪ್ಪಿಸುತ್ತಿದೆ. ಆದರೆ ಭೂಕಂದಾಯ ವಸೂಲಿಯ ಖರ್ಚು ತೀರಾ ಪ್ರಾಂತಿಕ ಸರಕಾರದ ತಲೆಯ ಮೇಲೆ; ಟಸ್ಸೆ ಮತ್ತು ಎಕ್ಸಾಯಜದಲ್ಲಿ ಅರ್ಧಾಂಶ ಖರ್ಚು ವರಿಷ್ಠ ಸರಕಾರದ ಖಾತೆಗೆ ಬೀಳುತಿತ್ತು. ಆದಾಯ ತೆರಿಗೆಯಲ್ಲಿ ಖರ್ಚು ವರಿಷ್ಠ ಮತ್ತು ಪ್ರಾಂತಿಕ ಸರಕಾರಗಳಿಗೆ ಸಮಪಾಲಾಗಿದ್ದರೂ ಆದಾಯದಲ್ಲಿ ಎರಡು ಪಾಲು ವರಿಷ್ಠ ಸರಕಾರವು ಇಟ್ಟುಕೊಂಡು ಒಂದು ಪಾಲನ್ನು ಮಾತ್ರ ಮದ್ರಾಸು ಪ್ರಾಂತಿಕ ಸರಕಾರಕ್ಕೆ ಒಪ್ಪಿಸಿಕೊಡುತಿತ್ತು. ನೀರಾವರಿಗಳ ಕಂದಾಯದ ಜಮಾಖರ್ಚಿನಲ್ಲಿ ವರಿಷ್ಠ ಮತ್ತು ಪ್ರಾಂತಿಕ ಸರಕಾರಕ್ಕೆ ಸಮಪಾಲಿನ ಹಂಚಿಕೆ ಇತ್ತು. ಈ ಬಗೆಯ ನಿರ್ಣಯವು ಮದ್ರಾಸಿನಂತೆ ವರಿಷ್ಠ ಸರಕಾರಕ್ಕೂ ಇತರ ಪ್ರಾಂತಿಕ ಸರಕಾರಗಳಿಗೂ ಮೇಲಿನ ಪ್ರಮಾಣದಲ್ಲಿಯೇ ಇರಲಿಲ್ಲ. ಆಯಾಯ ಪ್ರಾಂತದಲ್ಲಿ ಆಯಾಯ ಇಲಾಖೆಯ ಆದಾಯದ ಮೇಲೆ ಹೊಂದಿತ್ತು. ಈ ಎಲ್ಲಾ ಜಮಾ ಖರ್ಚಿನ ಮೇಲೆ ವರಿಷ್ಠ ಸರಕಾರವು ಬಿಗಿಯಾದ [illegible] ಧೋರಣವನ್ನು ಇಟ್ಟುಕೊಂಡು ಕಂದಾಯದ [illegible] [illegible] ಸರಕಾರ [illegible] ಇಲಾಖೆ, ಆರೋಗ್ಯ ಇಲಾಖೆ, ವೈದ್ಯ ಇಲಾಖೆ, ಕೃಷಿ ವ್ಯಾಪಾರ [illegible] ಇಲಾಖೆಯ ಕಡೆಗೆ ಉದಾರ ಬುದ್ಧಿಯಿಂದ ಹಣ ವೆಚ್ಚಮಾಡಿ ಜನತೆಯ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವುದಕ್ಕೆ ಬಹಳ ತೊಡಕಾಗುತ್ತಿದೆ ಎಂದು ಆಯಾ ಪ್ರಾಂತಿಕ ಸರಕಾರಗಳೂ, ಜನತೆಯ ಪ್ರತಿನಿಧಿಗಳೂ ವರ್ತಮಾನ ಪತ್ರಗಳಲ್ಲಿಯೂ ಭಾಷಣಗಳಲ್ಲಿಯೂ ವಾದಿಸುವುದಲ್ಲದೆ ಡಿಸೆಂಟ್ರಲಾಯ್ಜೇಶನ್ ಕಮ್ಮಿಟಿ, ಮತ್ತು ಮೊಂಟೆಗ ಚೆಮ್ಸಫೋರ್ಡ ಯೋಜನೆ ಕಮ್ಮಿಟಿಗಳ ಮುಂದೆಯೂ ಈ ವಿಷಯವನ್ನು ಚರ್ಚಿಸಿದ್ದರು. ಇವರ ಮುಖ್ಯ ಆಕ್ಷೇಪಗಳೇನಂದರೆ—ಕಂದಾಯದಲ್ಲಿ ವರಿಷ್ಠ ಸರಕಾರಕ್ಕೆ ಉಳಿಯುವ ಮುನಾಫೆ ಅತಿ ವಿಶೇಷವಾಗುವಾಗ ಪ್ರಾಂತಿಕ ಭಂಡಾರದಲ್ಲಿ ಸಾಕಷ್ಟು ಹಣವಿರುವುದಿಲ್ಲ. ಪ್ರಾಂತಿಕ ಸರಕಾರಗಳಿಗೆ ಆಗಾಗ ಸಿಗುವ ಧನಸಹಾಯದ ವೃಷ್ಟಿಯು ಬೇಸಿಗೆಯ ಧಾವತಿಯನ್ನು ತಗ್ಗಿಸುವುದಕ್ಕೆ ಆದೀತಲ್ಲದೆ ಜನಗಳ ಸ್ಥಿತಿಯನ್ನು ಕ್ರಮವಾಗಿ ಅಭಿವೃದ್ಧಿಗೆ ತರುವುದಕ್ಕೆ ಬೇಕಾದಷ್ಟು ಧಾರಾಳವಾಗುವುದಿಲ್ಲ. ವರಿಷ್ಠ ಸರಕಾರವು ಅನೇಕ ಸಲ ಕೈತುಂಬಾ ಹಣವಿದ್ದಾಗ ರೈಲ್ವೆಗಳ ಕಡೆಗೂ ಲಷ್ಕರಿನ ಕಡೆಗೂ ಹಲವು ಸಲ ವಾಯುವ್ಯ ಪ್ರಾಂತದ ಗಡಿಗಳನ್ನು ದುರುಸ್ತಿಮಾಡುವ ತವಕದಿಂದ ಕೈಕೊಳ್ಳುವ ಯುದ್ಧದ ಕಡೆಗೂ ವೆಚ್ಚ ಮಾಡುತ್ತದಲ್ಲದೆ ಜನಗಳಿಗೆ ಬೇಕಾದ ಅತೀ ಅಗತ್ಯವಾದ ಸಲಹೆಗಳ ಕಡೆಗೆ ಉಪಯೋಗಿಸುವುದಕ್ಕೆ ದೀನವೃತ್ತಿಯನ್ನು ಅವಲಂಬಿಸುತ್ತಿದೆ. ಪ್ರಾಂತಿಕ ಸರಕಾರಕ್ಕೂ ವರಿಷ್ಠ ಸರಕಾರಕ್ಕೂ ಯಾವುದೊಂದು ಬಗೆಯ ಕಂದಾಯದಲ್ಲಿ ಸಮಪಾಲು ಎಂದೊಡನೆ ಆ ಬಗೆಯ ಕಂದಾಯವನ್ನು ವಾಸ್ತವವಾಗಿ ಎಷ್ಟಕ್ಕೆ ಏರಿಸಬಹುದೋ ಅಷ್ಟಕ್ಕೆ ಏರಿಸಲು ಪ್ರಾಂತಿಕ ಸರಕಾರವು ಮುಂದೆ ಬರುವುದಿಲ್ಲ. ತಾನು ಕಷ್ಟಪಟ್ಟು ಬರಿದೆ ವರಿಷ್ಠ ಸರಕಾರದ ಬೊಕ್ಕಸವನ್ನು ಯಾಕೆ ತುಂಬಿಸಬೇಕು ಎಂದು ಉದಾಸೀನಭಾವವನ್ನು ಪ್ರಾಂತಿಕ ಸರಕಾರಗಳು ತಳೆಯುತ್ತಿವೆ. ಈ ಎಲ್ಲಾ ಕಾರಣಗಳಿಂದ ದೇಶದ ಆಡಳಿತೆಯು ಯಾವ ಮಾನದಲ್ಲಿ ವೃದ್ಧಿಗೆ ಬರಬೇಕೊ ಆ ಮಾನದಲ್ಲಿ ಏಳ್ಗೆಗೆ ಬರುವುದಿಲ್ಲ. ಇವೆಲ್ಲ ಮೊದಲಿನ ಹಂಚಿಕೆಗೆ ಮುಖ್ಯವಾದ ಆಕ್ಷೇಪಗಳು.

ಸುಧಾರಣಾ ಎಕ್ಟಿನಲ್ಲಿ ಕೆಲವು ಕಂದಾಯಗಳನ್ನು ತೀರಾ ವರಿಷ್ಠ ಸರಕಾರಕ್ಕೂ ಇನ್ನೂ ಕೆಲವನ್ನು ತೀರಾ ಪ್ರಾಂತಿಕ ಸರಕಾರಗಳಿಗೂ ಒಪ್ಪಿಸಬೇಕೆಂದು ಇದ್ದುದರಿಂದ ಅದರ ವ್ಯವಸ್ಥೆಯನ್ನು ಸೂಚಿಸಲಿಕ್ಕೆ ಲೊರ್ಡ ಮೆಸ್ಟನರ ಅಧ್ಯಕ್ಷತೆಯಲ್ಲಿ ಒಂದು ಕಮ್ಮಿಟಿಯು ಏರ್ಪಟ್ಟಿತು. ಈ ರೀತಿಯಲ್ಲಿ ಬೇರೆ ಬೇರೆ ಕಂದಾಯಗಳನ್ನು ಹಂಚಿ ಹಾಕುವಾಗ ವರಿಷ್ಠ ಸರಕಾರದ ಆದಾಯವು ಖರ್ಚಿಗಿಂತ ಕಡಿಮೆಯಾದರೆ ಆ ನಷ್ಟವನ್ನು ಭರ್ತಿಮಾಡಿಕೊಡಲಿಕ್ಕೆ ಪ್ರಾಂತಿಕ ಸರಕಾರಗಳು ತಮ್ಮ ಆದಾಯದಿಂದ ಯಾವುದೊಂದು ಪ್ರಮಾಣದಲ್ಲಿ ವರಿಷ್ಠ ಸರಕಾರಕ್ಕೆ ಹಣವನ್ನು ಒಪ್ಪಿಸಿಕೊಡಬೇಕು, ಅದು ಯಾವ ಪ್ರಮಾಣದಲ್ಲಿ ಇರಬೇಕಾದೀತು ಎಂಬದನ್ನು ನಿರ್ಣಯಿಸುವುದು ಈ ಕಮ್ಮಿಟಿಯ ಕರ್ತವ್ಯಗಳಲ್ಲಿ ಒಂದಾಗಿದೆ. ಕಮ್ಮಿಟಿಯವರು ಪ್ರಾಂತಿಕ ಮತ್ತು ವರಿಷ್ಠ ಸರಕಾರದವರೊಡನೆ ಈ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ತಮ್ಮ ಸೂಚನೆಯನ್ನು ಕೊಟ್ಟಿದ್ದಾರೆ. ಅದರ ಮೇರೆಗೆ ರೈಲ್ವೆ, ಟಪ್ಪಾಲು, ತಂತಿ ಇಲಾಖೆಗಳ ಜತೆಯಲ್ಲಿ ಸುಂಕ ಮತ್ತು ಆದಾಯ ತೆರಿಗೆ ಇತ್ತ ವರಿಷ್ಠ ಸರಕಾರಕ್ಕೆ ಸೇರುವವು. ಉಳಿದ ಎಲ್ಲಾ ಕಂದಾಯಗಳಿಗೆ ಆಯಾ ಪ್ರಾಂತಿಕ ಸರಕಾರದವರೆ ಹಕ್ಕುದಾರರು. ಹೀಗನ್ನುವಾಗ ಬರುವ 1921ನೇ ಎಪ್ರಿಲ್ ತಿಂಗಳಿಂದ ಈ ಹೊಸ ಏರ್ಪಾಡು ಜಾರಿಗೆ ಬರುವಾಗ ವರಿಷ್ಠ ಸರಕಾರದಲ್ಲಿ ನಷ್ಟವೇ ಹೆಚ್ಚಾಗುವುದರಿಂದ ಹೊಸ ಕ್ರಮಗಳಲ್ಲಿ ತಮಗೆ ಸಿಗಬೇಕಾದ ಹಣದಿಂದ ಆಯಾಯ ಪ್ರಾಂತಿಕ ಸರಕಾರವು ಎಷ್ಟು ಅಂಶ ವರಿಷ್ಠ ಸರಕಾರದವರಿಗೆ ಒಪ್ಪಿಸಿಕೊಡಬೇಕೆಂದು ಮೆಸ್ಟನ್ ಕಮಿಟಿಯವರು ಮಾಡಿದ ಸೂಚನೆಯನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಸ್ತಾಪಿಸುವೆವು.

ಸ್ಫುಟ ವಿಚಾರಗಳು.

೧. ಜನರಲ್ ಡಾಯರ್ ಸಾಹೇಬರ ಉತ್ತರ ಕುಮಾರತನ:—ಜನರಲ್ ಡಾಯರ್ ಸಾಹೇಬರು ಪಂಜಾಬ ಗಲಾಟೆಯ ಕಮ್ಮಿಟಿಯ ಮುಂದೆ ತನ್ನ ವರ್ತನವನ್ನು ವರ್ಣಿಸಿ ತನ್ನ ಬೆನ್ನನ್ನು ತಾನೇ ತಟ್ಟಿಕೊಂಡಾಗಲೂ ಹಂಟರ್ ಕಮ್ಮಿಟಿಯ ವಿಚಾರವು ಇನ್ನೂ ಪ್ರಕಟವಾಗಲಿಲ್ಲ ಎಂಬದರಿಂದ ನಾವು ಆ ಕುರಿತು ವಿಶೇಷ ಪ್ರಸ್ತಾಪವೆತ್ತಲಿಲ್ಲ. ವಿಲಾಯತಿಯ 'ಡೈಲಿ ಮೈಲ್' ಪತ್ರಿಕೆಯ ಪ್ರತಿನಿಧಿಯೊಡನೆ ತನ್ನ ಸ್ಥಿತಿಯನ್ನು ಹೇಳಿಕೊಳ್ಳುವಾಗ ಹೇಳಿದ ಮಾತುಗಳ ಗೋಷವಾರಿಯನ್ನು ಹಿಂದಿನ ಸಂಚಿಕೆಯಲ್ಲಿಯೆ ಪ್ರಕಟಿಸಿದ್ದೇವೆ. "ತನ್ನ ಸಾಹಸ ಕೃತ್ಯವನ್ನು ಹಿಂದುಸ್ಥಾನದ ಯುರೋಪಿಯನರೆಲ್ಲರೂ ತುಂಬಾ ಕೊಂಡಾಡುತ್ತಿದ್ದಾರೆ" ಎಂದು ಜನರಲ್ ಡಾಯರ್ ಹೇಳಿದರು. ಆದರೆ ಮುಂಬಯಿಯ 'ಟಾಯಮ್ಸ್ ಒಫ್ ಇಂಡಿಯಾ' ಪತ್ರಿಕಾಕಾರನು ಮಾತ್ರ ಈ ಬಗೆಯ ಯುರೋಪಿಯನರಲ್ಲಿ ತಾನೊಬ್ಬನು ಎಂದು [illegible] [illegible] ಗಲಾಟೆಯನ್ನು ಕುರಿತು [illegible] ಈ ಪತ್ರಿಕೆಯು [illegible] ಅಸಹನೀಯವಾಗಿ [illegible] ಮೇಲೆ ಹೊರಿಸಿದ [illegible] ನಮ್ಮ ಮತ್ತು [illegible] ಪ್ರಥಮ ಕರ್ತವ್ಯವಾಗುತ್ತದೆ" ಎಂದು [illegible] ಹೇಳಿದ ಮಾತುಗಳನ್ನು ಉಲ್ಲೇಖಿಸಿ [illegible]—ಯುರೋಪಿಯನರ ಯಾವ ಕೂಟದಲ್ಲಿಯೇ ಆಗಲಿ ಈ ದುಷ್ಕೃತ್ಯದ ಪ್ರಸ್ತಾಪ ಎದ್ದಾಗ ಜಲಿಯನವಾಲಾಬಾಗದಲ್ಲಿ ನಡೆದ ಈ ಪಾಪ ಕೃತ್ಯದ ಲಾಂಛನವು ಇಂಗ್ರೇಜರ ಬೆನ್ನಿಗೆ ಅಂಟಿಕೊಂಡಿಲ್ಲ ಎಂಬ ವಿಚಾರವೇ ಬಂತಲ್ಲದೆ, ಜಲಿಯನ್‌ವಾಲಾದಲ್ಲಾಗಲಿ ಪಂಜಾಬದಲ್ಲಿ ಇತರ ಕಡೆಗಳಲ್ಲಿಯೂ ಲಷ್ಕರ ಕಾಯಿದೆಯ ಹೆಸರಿನಲ್ಲಿ ನಡೆದ ಉದ್ಧಟತನದ ಮತ್ತು ಅವಿಚಾರದ ಕೃತ್ಯಗಳಿಗೋಸ್ಕರ ಇಂಗ್ರೇಜರಲ್ಲಿ ಸ್ತ್ರೀಪುರುಷರಲ್ಲಿ ನಾಚಿಕೆಯಿಂದ ತಲೆತಗ್ಗಿಸದವರು ಯಾರೂ ನಮ್ಮ ತಿಳುವಳಿಕೆಗೆ ಬಂದಿಲ್ಲ! ಟಾಯಿಮ್ಸ್‌ಕಾರನು ಅಷ್ಟರಲ್ಲಿಯೆ ಮುಗಿಸುವುದಿಲ್ಲ. "ತನಗೆ ಸರಿಯಾದ ವಿಚಾರವಾಗಿ ತನ್ನ ವಾಗ್ಮೂಲವನ್ನು ಪಡೆಯಬೇಕಿತ್ತು ಎಂದು ಡಾಯರು ಹೇಳುವುದಾದರೆ ಹಂಟರ್ ಕಮ್ಮಿಟಿಯ ಮುಂದೆ ಆತನು ಕೊಟ್ಟ ಹೇಳಿಕೆಯಗಿಂತ ಆತನ ಮೇಲೆ ತಕ್ಷೀರು ಸ್ಥಿರಗೊಳಿಸಲಿಕ್ಕೆ ಬೇರೆ ರುಜುವಾತು ಬೇಕಾಗಿದ್ದಿಲ್ಲ. ಹೀಗಿದ್ದು ಬ್ರಿಟಿಷರು ಆತನ ವರ್ತನವನ್ನು ಒಪ್ಪಿಕೊಂಡಿದ್ದಾರೆ ಎಂದು ದಿಟ್ಟತನದಿಂದ ಡಾಯರು ಹೇಳುವಾಗ ಅದಕ್ಕೆ ಪ್ರತಿಕಾರವನ್ನು ಹೇಳದಿದ್ದರೆ ಆತನ ಬೆಂಬಲಕ್ಕೆ ಬ್ರಿಟಿಷರ ಸಹಾನುಭೂತಿಯು ಇದೆ ಎಂದು ತಪ್ಪು ಗ್ರಹಿಕೆಯು ಜನಗಳಲ್ಲಿ ಉಂಟಾದೀತು"! ಟಾಯಮ್ಸ್‌ಕಾರನೇ ಹೀಗಂದ ಮೇಲೆ ನಾವು ಆ ದುಷ್ಕೃತ್ಯದವನನ್ನು ಯಾವ ಹೆಸರೆತ್ತಿ ಕರೆಯಬೇಕೆಂದು ಥಟ್ಟನೆ ಸೂಚನೆ ಬರುವುದಿಲ್ಲ.

೨. ಜನರಲ್ ಡಾಯರು ಅದೇ 'ಡೈಲಿ ಮೈಲ' ನವರೊಡನೆ ಹೇಳಿದ ಇನ್ನೊಂದು ಮಾತಿದೆ. "ನನ್ನನ್ನು ಕುರಿತು ವಿಚಾರ ನಡೆಯಲಿಕ್ಕೆ ಪ್ರಾರಂಭಿಸಿ ಒಂದು ವರ್ಷ ದಾಟಿದರೂ ಇನ್ನೂ ಮುಗಿಯಲಿಲ್ಲ. ಆದರೆ ತಾನಾದರೊ ಆ ಗಲಾಟೆಯ ಕಾಲದಲ್ಲಿ ಏನು ಮಾಡಬೇಕೆಂದು 30 ಸೆಕೆಂಡುಗಳೊಳಗೆ ನಿರ್ಧರಿಸಬೇಕಾಗಿ ಬಂತು!" ಇದು ನಿಜ. ಇದಕ್ಕೆ ಕಾರಣವನ್ನೂ ಊಹಿಸಬಹುದಲ್ಲವೇ? ದೇಶೀಯರಂತಹ ಗೆದ್ದಲುಹುಳದ ಪ್ರಾಣವು ಡಾಯರ ಸಾಹೇಬನ ಕೈಯಲ್ಲಿತ್ತು. ಅದರ ನಿವೃತ್ತಿಗೆ ಬರೆ ೩೦ ಸೆಕಂಡುಗಳ ಸಮಯವೂ ಹೆಚ್ಚಾಯಿತು. ಜನರಲ್ ಡಾಯರನ ಪ್ರಾಣವು ಅಷ್ಟು ಸಾಮಾನ್ಯವಾದ್ದಲ್ಲ. ಇಂಥ ಪ್ರಭೃತಿಗಳು ಆಗಾಗ ಹುಟ್ಟುವುದಿಲ್ಲ. ಅವರು ಅವತಾರಪುರುಷರೆನ್ನಬೇಕು. ಅಂಥವರ ವಿಚಾರಕ್ಕೂ ಬರೇ ದೇಶೀಯರಂತಹ ಕ್ಷುದ್ರ ಪ್ರಾಣಿಗಳ ಕೊಲೆಗೂ ಎಲ್ಲಿಯ ಗಂಟು ಎಂದು ಡಾಯರರ ಮನಸ್ಸಿನಲ್ಲಿಯೇ ಹೊಳೆಯಲಿಕ್ಕಿಲ್ಲವೆ?

೩. ಸುಧಾರಣಾ ಎಕ್ಟಿಗೆ ಕನ್ನಡಿ—ದೇಶ ಸುಧಾರಣೆಯ ತವಕದಲ್ಲಿ ನಮ್ಮಲ್ಲಿ ಹಲವು ತಂಡಗಳು ಜನನಕ್ಕೆ ಬಂದು ಇನ್ನೂ ಕಣ್ಣು ದೃಷ್ಟಿ ಹುಟ್ಟುವ ಮೊದಲೇ ಒಂದನ್ನೊಂದು ಕಚ್ಚಿಕೊಳ್ಳಲು ತೊಡಗಿದ್ದಾವೆ ಎಂದು ಹಿಂದೆ ಒಂದು ಸಲ ಹೇಳಿರುವೆವು. ಮದ್ರಾಸು ಮುನ್ಸಿಪಲ್ ಕೋರ್ಪೊರೇಶನಿನ ಈಗಿನ ಆಡಳಿತೆಯ ಕ್ರಮವನ್ನು ಪರಿಶೀಲಿಸಿದರೆ ಇದೇ ನಮಗೆ ಜ್ಞಾಪಕಕ್ಕೆ ಬರುತ್ತಿದೆ. ಅಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ತಂಡಗಳು ತಮ್ಮ ಶಸ್ತ್ರಾಸ್ತ್ರಗಳನ್ನು ಪೂರ್ಣಪ್ರಯೋಗ ಮಾಡಲು ತೊಡಗಿದ್ದಾರೆಂತ ಕಾಣುತ್ತದೆ. ಅಲ್ಲಿಯ ಹೆಲ್ತ್ ಆಫೀಸರ್, ಎಂಜಿನಿಯರ್, ಮತ್ತು ರೆವೆನ್ಯೂ ಆಫಿಸರರಾಗಿ ಕೆಲವು ಕಾಲದಿಂದ ಬದಲಿ ಕೆಲಸ ನೋಡುವವರನ್ನು ಕಾಯಂ ಮಾಡಬೇಕೆಂಬ ಪ್ರಶ್ನೆಯು ಬಂದಿತ್ತು. ಬದಲಿ ಹೆಲ್ತ್ ಆಫಿಸರರಾದ ಡಾ॥ ರಾಘವೇಂದ್ರರಾವ್ ಇವರು ಡಿ. ಪಿ. ಎಚ್. ಪರೀಕ್ಷೆ ಪಾಸಾಗದೆ ಇದ್ದುದರಿಂದ ಹೆಲ್ತ್ ಆಫಿಸರರಾಗಲು ಯೋಗ್ಯರಲ್ಲ; ಡಿ. ಪಿ. ಎಚ್ ಪರೀಕ್ಷೆ ತೇರಿದವರನ್ನ ನೇಮಕ ಮಾಡಬೇಕೆಂದು ಅಬ್ರಾಹ್ಮಣರ ಸಾಧನೆ. ಅದೇ ಸಂದರ್ಭದಲ್ಲಿ ಕ್ರೈಸ್ತರಾದ ಬದಲಿ ಎಂಜಿನಿಯರ ಮಿ॥ ಹೆನ್ಸಮೆನರನ್ನು ಕಾಯಂ ಮಾಡ ಬೇಕೆಂದು ಪ್ರಶ್ನೆಯು ಇತ್ತು. ಮಿ॥ ಎಂಜಿನಿಯರ ಕೆಲಸಕ್ಕೂ ಹೆಲ್ತ್ ಆಫಿಸರರ ಕೆಲಸಕ್ಕೂ ಪ್ರಕಟಣೆಗಳ ಮೂಲಕ ಅರ್ಜಿಗಳನ್ನು ತರಿಸಬಹುದೆಂದು ನಿರ್ವಾಹವಿಲ್ಲದೆ ಅಬ್ರಾಹ್ಮಣರು ವಾದಿಸಬೇಕಾಗಿ ಬಂದರೂ ಕಡೆಗೆ ಎಂಜಿನಿಯರಾಗಿ ಕ್ರೈಸ್ತ ಮಿ॥ ಹೆನ್ಸಮೆನರಿಗೆ ಕಾಯಂ ಆಗುವುದಕ್ಕೆ ಬಹುಮತದ ಓಟು ಸಿಕ್ಕಿತು. ಡಾ॥ ರಾಘವೇಂದ್ರರಾಯರು ಡಿ. ಪಿ. ಯಚ್ 'ಪಾಸು' ಮಾಡದಿದ್ದರೂ ತುಂಬಾ ಅನುಭವಶಾಲಿಗಳೆಂದು ಅವರ ಕೆಲಸದ ಅನುಭವವುಳ್ಳ ಇತರ ತಜ್ಞರು ವಾದಿಸಿದ ಮೇಲೂ ಅಬ್ರಾಹ್ಮಣರ ಓಟು ರಾಘವೇಂದ್ರರಾಯರಿಗೆ ಸಿಗಲಿಲ್ಲ. ಆದರೂ ಹೇಗೂ ಒಂದೆರಡು ಓಟುಗಳ ಆಧಾರದಿಂದ ರಾಘವೇಂದ್ರರಾಯರಿಗೆ ಕಾಯಂ ಆಯಿತು. ಇಷ್ಟರಲ್ಲಿ ಮಿ॥ ದಂಡಪಾಣಿ ಅಯ್ಯರರನ್ನು ರೆವೆನ್ಯೂ ಆಫಿಸರರಾಗಿ ಕಾಯಂ ಮಾಡುವ ಪ್ರಶ್ನೆಯು ಮುಂದಿನ ಮೀಟಿಂಗಿನಲ್ಲಿ ಬಂತು. ಇತ್ತಂಡದವರು ಶಸ್ತ್ರಗಳನ್ನು ಮಸೆದರು. ಮಿ॥ ತಣಿಕಾಚಲಂ ಎಂಬವರು ದಂಡಪಾಣಿ ಅಯ್ಯರ ಮೇಲೆ ಇಲ್ಲದ ಸಲ್ಲದ ಆರೋಪಗಳನ್ನು ತಂದದರಿಂದ ಕೋರ್ಪೊರೇಶನ್ ಪ್ರೆಸಿಡೆಂಟ ಮತ್ತು ಕಮಿಶನರು ಇವರಿಬ್ಬರು ಆ ಆರೋಪಗಳ [illegible]

ನಿರ್ಣಯವಾಯಿತು. ಮುಂದಿನ ಮೀಟಿಂಗಿನೊಳಗೆ ದಂಡಪಾಣಿಯವರ ವಿಚಾರಣೆ ನಡೆದು ಅವರು ತಪ್ಪುಗಾರರಲ್ಲವೆಂದು ರಿಪೋರ್ಟು ಬಂದದ್ದರಿಂದ ಮ|| ಬನರ್ ಎಂಬವರನ್ನು ರೆವಿನ್ಯೂ ಆಫೀಸರರನ್ನಾಗಿ ನೇಮಿಸಬೇಕೆಂದು ಠರಾವು ಬಂತು. ಆ ಚರ್ಚೆಯಲ್ಲಿ, ದಂಡಪಾಣಿಗಳು ಹೀನರಲ್ಲ, ಬ್ರಾಹ್ಮಣ ಅಬ್ರಾಹ್ಮಣರೇ ದಂಡಪಾಣಿಗಳು, ಬಲ ಹೆಚ್ಚಿದ ಕಡೆಗೆ ನ್ಯಾಯ ಎಂಬುದು ದೃಷ್ಟಾಂತಕ್ಕೆ ಬಂತು. ದಂಡಪಾಣಿಯವರು ತಪ್ಪುಗಾರರಲ್ಲವಾದರೂ ಅವರನ್ನು ನೇಮಕ ಮಾಡಬೇಕೆಂಬ ಠರಾವು ಆ ದಿನ ಚರ್ಚೆಗೆ ಬರಲಿಲ್ಲ ಎಂದು ಕಾರ್ಪೊರೇಶನ ಅಧ್ಯಕ್ಷರಾದ ದಿವಾನ ಬಹದ್ದೂರ ತ್ಯಾಗರಾಜ ಚೆಟ್ಟಿಯವರು ಸಾಧಿಸಿದರು. ಆಗ ದಂಡಪಾಣಿಯವರನ್ನು ನೇಮಿಸಬೇಕೆಂದು ಇನ್ನೊಬ್ಬರು ಠರಾವನ್ನು ತಂದರು. ಒಂದು ಠರಾವಿನ ಇತ್ಯರ್ಥವಾಗದೆ ಎರಡನೆ ಠರಾವನ್ನು ಚರ್ಚೆಗೆ ಎತ್ತಬಾರದು ಎಂಬ ಕಾನೂನಿನ ಮೇಲೆ ಮೊದಲನೆ ಠರಾವಿನಲ್ಲಿ ಮ|| ಬನರರಿಗೆ ನೇಮಕವಾಯಿತು. ಅಷ್ಟೆ ಅಲ್ಲ. ಅವರಿಗೆ ಸಂಬಳ ಎಷ್ಟು ಸಿಗಬೇಕೆಂದು ಈಗಲೇ ಇತ್ಯರ್ಥವಾಗಬೇಕೆಂದು ಬ್ರಾಹ್ಮಣರ ಕಡೆಯಿಂದ ಠರಾವು ಸಹ ಆದರ ನಂತರ ಚರ್ಚೆಗೆ ಬಂತು. ಕೆಲಸಕ್ಕೆ ನೇಮಕವಾಗುವ ಸಮಯದಲ್ಲಿ ಸಂಬಳದ ಇತ್ಯರ್ಥಮಾಡುವ ಸೂಚನೆ ಬರಲಿಲ್ಲವೆಂಬ ನೆವನದಿಂದ ಆ ಪ್ರಶ್ನೆಯನ್ನು ಮುಂದರಿಸಿಟ್ಟರು. ಇದರಿಂದ ಕಾರ್ಯಕ್ರಮ, ರೀತಿ ನೀತಿ, ಔದಾರ್ಯ, ಬುದ್ಧಿ ಇವೆಲ್ಲವೂ ದುರಾಗ್ರಹದ ಮತ್ತು ಉದ್ಧಟತನದ ವರ್ತನದಿಂದ ವಾಯುವಾಗುವಂತೆ ಕಾಣುತ್ತಿದೆ. ಮುಂದೆ ಹೊಸ ನಿರ್ಮಾಣದ ನ್ಯಾಯವಿಧಾಯಕ ಸಭೆಗಳಲ್ಲಿಯೂ ಇದೇ ಬಗೆಯ ದುರಾಗ್ರಹವು ಬಂದೀತೆಂಬದಕ್ಕೆ ಇದೇ ಕನ್ನಡಿಯಾಗಿದೆ.

೪. ಮಂಗಳೂರು ಮುನ್ಸಿಪಾಲಿಟಿಯ ಓವರ್ಸಿಯರು — ಮಂಗಳೂರು ಮುನ್ಸಿಪಾಲಿಟಿಯ ಓವರ್ಸಿಯರು ಏನೊ ಹುಕುಂ ಉಲ್ಲಂಘನೆ ಮಾಡಿದರೆಂಬದರಿಂದ ಅವರನ್ನು ಮುನ್ಸಿಪಲ್ ಚೆಯರ್ಮನ್ನರು ಕೆಲಸದಿಂದ ತಳ್ಳಿಹಾಕಿದ್ದರು, ಓವರ್ಸಿಯರು ತನಗೆ ಸರಿಯಾದ ವಿಚಾರವಾಗಲೇ ಇಲ್ಲ ಎಂದು ವಾದಿಸಿ ಮಾಡಿದ ಅಪೀಲು ಕೌನ್ಸಿಲಿನ ಮುಂದೆ ವಿಚಾರಕ್ಕೆ ಬಂದು, ಕ್ರಮವಾಗಿ ವಿಚಾರವಾಗಲಿಲ್ಲ ಎಂಬದಾಗಿ ಕೌನ್ಸಿಲಿನವರು ಅಭಿಪ್ರಾಯಪಟ್ಟರು. ಇದರಲ್ಲಿ ಓವರ್ಸಿಯರರು ತಪ್ಪುಗಾರರಲ್ಲ, ಅಥವಾ ಚೆಯರ್ಮನ್ನರು ಕೊಟ್ಟ ಶಿಕ್ಷೆಯು ಕಠಿಣವಾಯಿತು ಎಂಬದಾಗಿ ನಾವು ಹೇಳುವುದಿಲ್ಲ. ಆದರೆ ಅಧಿಕಾರ ಜಾರಿಯ ಮೊದಲು ವಿಚಾರವು ನಡೆದದ್ದಾದರೆ ಚೇರ್ಮನ್ನರ ಹುಕುಮನ್ನು ತಳ್ಳಿಹಾಕುವ ಸಂಧರ್ಭವು ಕೌನ್ಸಿಲರರಿಗೆ ದೊರಕುತ್ತಿದ್ದಿಲ್ಲ. ಸುಧಾರಣೆಯ ಈಗಿನ ದಿನಗಳಲ್ಲಿ ಅಧಿಕಾರದ ಜಾರಿಯನ್ನು ಒಮ್ಮಿಂದೊಮ್ಮೆ ನಡಿಸುವ ಪೂರ್ವಪದ್ಧತಿಯನ್ನು ಆಚರಿಸುವದು ಕಾಲಯುಕ್ತವಲ್ಲ.

೫. ಹಿಂದುಸ್ಥಾನದಲ್ಲಿ ಮೃತ್ಯುಸಂಖ್ಯೆ — ಹಿಂದುಸ್ಥಾನವು ದಿನೇ ದಿನೇ ಐಶ್ವರ್ಯವಂತವಾಗುತ್ತ ಹೋಗುತ್ತದೊ ಅಥವಾ ದರಿದ್ರವಾಗುತ್ತ ಹೋಗುತ್ತದೊ ಎಂಬುದನ್ನು ನಿರ್ಧರಿಸುವುದು ಅನೇಕ ಪ್ರಸಂಗಗಳಲ್ಲಿ ಅಸಾಧ್ಯವಾಗುತ್ತದೆ. ಹಿಂದುಸ್ಥಾನದಲ್ಲಿ ವ್ಯಾಪಾರವು ಬೆಳೆಯುತ್ತಿದೆ, ಜನರಲ್ಲಿ ದುಡ್ಡು ಹೆಚ್ಚಾಗಹತ್ತಿದೆ ಎಂದು ಹಿಂದುಸ್ಥಾನದ ಅಭಿವೃದ್ಧಿವಾದಿಗಳು ಹೇಳುತ್ತಾರೆ ಪರಂತು, ಸಮೃದ್ಧ ದೇಶದಲ್ಲಿ ಮೃತ್ಯುವಿನ ಪ್ರಮಾಣವು ಕಡಿಮೆ ಇರುತ್ತದೆ ಎಂಬುದು ಅರ್ಥಶಾಸ್ತ್ರದ ಪ್ರಧಾನವಾದ ಸಿದ್ಧಾಂತವು. ಈ ಸಿದ್ಧಾಂತದ ದೃಷ್ಟಿಯಿಂದ ಈ ದೇಶದ ಮೃತ್ಯುಸಂಖ್ಯೆಯನ್ನು ಪರಿಶೀಲಿಸಿದರೆ ಇಲ್ಲಿ ಸಮೃದ್ಧಿಯು ವಿಹರಿಸಿಕೊಂಡಿರುವುದೊ ಅಥವಾ ದಾರಿದ್ರ್ಯವು ಕ್ರೀಡಿಸಿಕೊಂಡಿರುವುದೊ ಎಂಬುದು ಸರಿಯಾಗಿ ಗೊತ್ತಾಗುತ್ತದೆ. ಮಿ. ಫಿಶರರು ಹಿಂದುಸ್ಥಾನದ ಮೃತ್ಯು ಸಂಖ್ಯೆಯನ್ನು ಕೊಟ್ಟಿದ್ದಾರೆ. ಅದು ಯಾವುದೆಂದರೆ:—೧೯೧೧ರಲ್ಲಿ ಮೃತ್ಯು ಸಂಖ್ಯೆಯ ಪ್ರಮಾಣವು ಸಾವಿರಕ್ಕೆ ೨೮.೭೬ ಇತ್ತು. ೧೯೧೮ರಲ್ಲಿ ೬೦.೦೦ ಆಯಿತು. ೧೯೧೯ರಲ್ಲಿ ೩೯.೪೪ಕ್ಕೆ ಬಂತು. ೧೯೨೦ರಲ್ಲಿ ೩೯.೧೦ ಆಯಿತು. ಮತ್ತು ೧೯೨೧ನೆಯ ಇಸವಿಯಲ್ಲಿ ೩೭.೨೨ ಹಾಗು ೧೯೨೨ರಲ್ಲಿ ೩೭.೪೩ ಆಯಿತು. ಮೃತ್ಯು ಸಂಖ್ಯೆಯ ಈ ಬೆಳವಣಿಗೆಯನ್ನು ನೋಡುವಾಗ ಹಿಂದುಸ್ಥಾನವು ದಾರಿದ್ರ್ಯಕ್ಕೆ ಹೇಗೆ ತವರುಮನೆಯಾಗಿದೆ ಎಂಬುದು ಗೊತ್ತಾಗುತ್ತದೆ. ಸಾಮಾನ್ಯ ಜನರಲ್ಲಿ ಮೃತ್ಯುವು ಅಧಿಕ ಪ್ರಮಾಣದಿಂದ ಸಂಭವಿಸುವುದರಿಂದ ಸಾಮಾನ್ಯರು ಹೊಟ್ಟೆಗಿಲ್ಲದೆ ಕ್ರಮೇಣ ದುರ್ಬಲರಾಗಹತ್ತಿದ್ದಾರೆ ಎಂದು ಹೇಳಲು ಯಾವ ಅಡ್ಡಿಯೂ ಇಲ್ಲ. ಮೃತ್ಯುವಿನ ಪ್ರಮಾಣವನ್ನು ತಗ್ಗಿಸಬೇಕಾದರೆ ಇಲ್ಲಿ ನಿಜವಾದ ಸಮೃದ್ಧಿಯುಂಟಾಗಬೇಕು. ಅದಕ್ಕೆ ಉಪಾಯವೇನಂದರೆ ರಾಜ್ಯಕಾರಭಾರದ ಯಂತ್ರವನ್ನು ಆದಷ್ಟು ಕಡಿಮೆ ಖರ್ಚಿನಿಂದ ಮಾಡಿ, ವ್ಯಾಪಾರ, ಉದ್ಯೋಗ ಇವುಗಳನ್ನು ಹೆಚ್ಚಿಸಬೇಕು.

ಮಂಗಳೂರು.

ಮಂಗಳೂರಿನ ಮುನ್ಸಿಫರಾದ ಮ|| ರಾ|| ಎ| ವೇಣು ಗೋಪಾಲಚಾರ್ಯರು ಪಾರ್ವತಿ ಪುರದ ಮುನಸಿಫರಾಗಿಯೂ, ಭಿಮಾವರದ ಮುನ್ಸಿಫರಾದ ಮ|| ರಾ|| ಸಂಗೀತಮ್ ನರಸಿಂಹರಾವ್ ಪಂತಲು ಗಾರು ಮಂಗಳೂರ ಮುನ್ಸಿಫರಾಗಿಯೂ, ಕುಂದಾಪುರದ ಮುನ್ಸಿಫರಾದ ಮ|| ರಾ|| ಕೆ. ಬಾಲಾಜಿರಾಯರು ಕಲ್ಲಕುರ್ಚಿ ಎಂಬಲ್ಲಿಯ ಮುನ್ಸಿಫರಾಗಿಯೂ, ಟಿನ್ನವಲ್ಲಿಯ ಮುನ್ಸಿಫರಾದ ಮ|| ರಾ|| ಟಿ. ವಾಸುದೇವ ರಾಯರು ಕುಂದಾಪುರ ಮುನ್ಸಿಫರಾಗಿಯೂ, ಬಡಾಗರದ ಎಡಿಶನಲ್ ಮುನ್ಸಿಫರಾದ ಮ|| ರಾ|| ಬಂಟವಾಳ ವೆಂಕಟರಾಯರು ಅಲ್ಲಿಯ ಪ್ರಿನ್ಸಿಪಲ್ ಮುನ್ಸಿಫರಾಗಿಯೂ, ಕಾಸರಗೋಡಿನ ಮುನ್ಸಿಫರಾದ ಮ|| ರಾ|| ಕೆ. ರಾಮನಾರಾಯಣ ಬಡಾಗರದ ಎಡಿಶನಲ್ ಮುನ್ಸಿಫರಾಗಿಯೂ, ಪಾಲಘಾಟದ ಮುನ್ಸಿಫರಾದ ಮ|| ರಾ|| ಶಂಕರ ಅಯ್ಯರರು ಕಾಸರಗೋಡಿನ ಪ್ರಿನ್ಸಿಪಲ್ ಮುನ್ಸಿಫರಾಗಿಯೂ, ಮತ್ತು ಪಟ್ಟುಕೋಟೆಯ ಮುನ್ಸಿಫರಾದ ಮ|| ರಾ|| ಆರ್. ಬಾಲ ಸುಬ್ರಮಣ್ಯ ಅಯ್ಯರರು ಕಾಸರಗೋಡಿನಲ್ಲಿ ಹೊಸತಾಗಿ ತೆರಿಯೋಕಾಗುವ ಎಡಿಶನಲ್ ಮುನ್ಸಿಫ್ ಕೋರ್ಟಿನ ಎಡಿಶನಲ್ ಮುನ್ಸಿಫರಾಗಿಯೂ ವರ್ಗ ಹೊಂದಿರುತ್ತಾರೆ.

ಉಡುಪಿಯ ಅಸಿಸ್ಟಾಂಟ ಸರ್ಜನರಾದ ಮಿ. ಸಿ. ಕೆ. ಜೋಸೆಫರವರು ಮದರಾಸ ಮೆಡಿಕಲ್ ಕೊಲೇಜಿನಲ್ಲಿ ಆರು ತಿಂಗಳ ಪರಿಯಂತ ದಂತಚಿಕಿತ್ಸೆಯ ತರಬೇತನ್ನು ಹೊಂದಲು ಹೋಗಿರುವುದರಿಂದ ಇವರ ಹುದ್ದೆಯಲ್ಲಿ ಈಗ ಮ|| ರಾ|| ರಾ|| ಕೆ. ರಾಘವೇಂದ್ರ ಕಿಣಿಯವರು ಮೊಕ್ರುರಾಗಿರುವರು. ಮ|| ರಾ|| ಬಂಟವಾಳ ರಾಮ ಬಾಳಿಗರು ರಾಮನಾಡದ ಡಿಸ್ಟ್ರಿಕ್ಟ ಮೆಡಿಕಲ್ ಮತ್ತು ಸೆನೆಟರಿ ಆಫೀಸರರಾಗಿ ನೇಮಕ ಪಟ್ಟಿರುತ್ತಾರೆ.

ಪುತ್ತೂರು ತಾಲೂಕು ಬೋರ್ಡಿಗೆ ಬೇಕಲ ಇಲೆಕ್ಟೊರಲ್ ಸರ್ಕಲಿನಿಂದ ಒಬ್ಬ ಮೆಂಬರರ ಚುನಾವಣೆಯು ಬರುವ ಜೂನ್ ತಾರೀಕು ೨೫ರಲ್ಲು ಹೊಸದುರ್ಗ ಡಿಪ್ಯುಟಿ ತಹಶಿಲ್‌ದಾರರ ಆಫೀಸಿನಲ್ಲಿ ನಡಿಯುವುದು. ಉಮೇದ್ವಾರರು ತಮ್ಮ ನೊಮಿನೇಶನ್‌ಗಳನ್ನು ಮೇ ತಿಂಗಳ ತಾರೀಕು ೨೪ನೇ ಸಾಯಂಕಾಲ ೫ ಗಂಟೆಯೊಳಗೆ ಹೊಸದುರ್ಗ ಡಿಪ್ಯುಟಿ ತಹಶಿಲ್‌ದಾರರ ಬಳಿಗೆ ರವಾನಿಸ ಬೇಕಾಗಿರುವುದು.

ಕಳೆದ ಎಪ್ರಿಲ್ ತಿಂಗಳಲ್ಲಿ ಪಟ್ಟಣದಲ್ಲಿ ೧೧೪ ಜನನಗಳೂ ೬೮ ಮರಣಗಳೂ ಆದವು. ಕಳೆದ ವರುಷದ ಇದೇ ತಿಂಗಳಲ್ಲಿ ೧೨೭ ಜನನಗಳೂ ೧೧೫ ಮರಣಗಳೂ ಇದ್ದುವು.

ಶಂಕರನಾರಾಯಣ ರೇಂಜಿನ ಫೊರೆಸ್ಟ ರೆಂಜರಾದ ಮಿ. ಕೆ. ಸಿ. ಜೊಸೆಫರು ಮಂಗಳೂರ ಉತ್ತರ ಡಿವಿಜನಿಗೂ, ಮಂಗಳೂರ ಉತ್ತರ ಡಿವಿಜನಿನ ರೇಂಜರರಾದ ಮಿ. ಎಸ್. ಎಫ್ ಲೋಬೊರವರು ಶಂಕರನಾರಾಯಣ ರೇಂಜಿಗೂ ವರ್ಗ ಹೊಂದಿರುತ್ತಾರೆ.

ಈ ಸರ್ಕಲಿನ (೧೪ನೇ ಸರ್ಕಲ) ಶಾಲಾ ಇನ್ಸ್‌ಪೆಕ್ಟರರಾದ ಮಿ. ಜಿ. ... ಎಟ್ಟ ದೊರೆಗಳವರು ಬರುವ ಜುಲಾಯಿ ತಿಂಗಳಿಂದ ಒಂದು ವರುಷದ ರಜೆಯನ್ನು ಪಡಕೊಳ್ಳುವರು.

ಗತಿಸಿದ ಮ. ಕ್ಷಾ. ರಾ. ಮೂಮರ್ತಿಗಳ ವಿಯೋಗದ ಸಂತಾಪವನ್ನು ಸೂಚಿಸುವ ಸಲುವಾಗಿ ಬಂಟರ ಯಾನೆ ನಾಡವರ ಸಭೆಯೊಂದು ಈ ತಿಂಗಳ ತಾರೀಕು ೩೦ನೇ ಆದಿತ್ಯವಾರ ಸಾಯಂಕಾಲ ೪-೩೦ ಗಂಟೆಗೆ ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಕೂಡತಕ್ಕದಿದೆ.

ಪ್ರೊಸ್ಸಿಕ್ಯೂಟಿಂಗ್ ಇನ್ಸ್‌ಪೆಕ್ಟರಾದ ಮ. ರಾ. ರಾ. ಕಾರ್ನಾಡ ನಾರಾಯಣರಾಯರಿಗೆ ರಾವ್‌ಸಾಹೇಬ್ ಎಂಬ ಬಿರುದಿನ ಸನದವನ್ನು ಕೊಡುವ ದರ್ಬಾರ ಸಂಭ್ರಮವು ಇಂದಿನ ಸಾಯಂಕಾಲ ೫-೩೦ ಗಂಟೆಗೆ ಗವರ್ನಮೆಂಟ ಕೊಲೇಜಿನ ಸಭಾಸದನದಲ್ಲಿ ಜರಗತಕ್ಕದಿದೆ.

ಮೊದಲನೆ ಕರ್ಣಾಟಕ ಪರಿಷತ್ತು.

ಈ ದಿನದ ಸಂಚಿಕೆಯು ಮುದ್ರಿತವಾಗುತ್ತಿದ್ದಾಗ ಧಾರವಾಡದಲ್ಲಿ ಮೊನ್ನೆ ತಾ. ೧೭ಕ್ಕೆ ಸೇರಿದ ಮೊದಲನೆ ಕರ್ಣಾಟಕ ಪರಿಷತ್ತಿನ ಅಧ್ಯಕ್ಷರಾದ ದಿವಾನ್ ಬಹದ್ದೂರ್ ವಿ. ಪಿ. ಮಾಧವರಾವ್, ಸಿ. ಐ. ಇ. ಯವರ ಭಾಷಣದ ಸಾರಾಂಶವು ನಮಗೆ ಬಂದು ತಲ್ಪಿದ್ದನ್ನು ಪತ್ರದ ಇತರ ಕಡೆಯಲ್ಲಿ ಸ್ಥಳವು ಇಲ್ಲದ್ದರಿಂದ ಇವರಡಿ ಪ್ರಕಟಿಸಿರುತ್ತೇವೆ.

ರಿಫೋರ್ಮ್ ಆಕ್ಟು ಜನತೆಗೆ ಬೇಕಾದ ಹಾಗಿಲ್ಲ. ಆದರಿಂದ ಜನರಲ್ಲಿ ಅತೃಪ್ತಿ ಮತ್ತು ನಿರಾಶೆಯು ಉಂಟಾಗಿದೆ ಎಂದು ಕೊಂಗ್ರೆಸು ಸಭೆಯು ಅದನ್ನು ನಿಷೇಧಿಸಿಯದೆ. ಈ ಆಕ್ಟು ದುಸ್ಸಾಧ್ಯ ಮಾತ್ರವಲ್ಲ, ನಮ್ಮ ಅಂತಿಮಧ್ಯೇಯಕ್ಕೆ ಸಾಧಕವಾದದ್ದಲ್ಲ; ದೇಶಕ್ಕೆ ಹಿತ ಉಂಟಾಗುವ ಬದಲಿಗೆ ಇದರಿಂದ ಹಾನಿಯು ಉಂಟಾಗಲು ಮಾರ್ಗವಿದೆ ಎಂತ ಮಾಧವರಾಯರು ಸುಧಾರಣಾ ಆಕ್ಟಿನ ಅಯುಕ್ತತೆಯನ್ನು ಸೂಚಿಸಿ ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಪ್ರಾಂತಿಕ ಸರಕಾರದ ಆಡಳಿತೆಯಲ್ಲಿ ಬುರೊಕ್ರೆಸಿಗನೆ ಜನತೆಗೆ ಮಿಕ್ಕಿದ ಹೆಚ್ಚಿನ ಅಧಿಕಾರವು ಕೊಡೋಣಾಗುವುದರಿಂದಲೂ, ವಿಶಿಷ್ಟ ಸರಕಾರದ ಮೇಲೆ ಜನತೆಗೆ ಅಧಿಕಾರವನ್ನು ಕೊಡದೆ ಇದ್ದದ್ದರಿಂದಲೂ, ನ್ಯಾಯವಿಧಾಯಕ ಸಭೆಗಳಲ್ಲಿ ಜಾತಿವಾರು ಚುನಾವಣೆಗೆ ಪ್ರಾಶಸ್ತ್ಯವನ್ನು ಕೊಟ್ಟಿರುವುದರಿಂದಲೂ ಜನರಲ್ಲಿ ಸದಾ ಸೆಣದಾಟ, ಬಲಾತ್ಕಾರಗಳಿಗೆ ತುಂಬಾ ಆಸ್ಪದವು ದೊರಕುವುದು. ಆಫೀಸರರಿಗೆ ಅಂಕೆಗೊಳಗಾಗದ ತಮ್ಮ ಅಧಿಕಾರದಿಂದ ಜನರನ್ನು ಒತ್ತಿಡಲು ಸಂದರ್ಭಗಳು ಈ ಆಕ್ಟಿನಿಂದ ತಲೆತೋರುವುವು, ಈ ಮೂಲಕ ಜನತೆಯಲ್ಲಿ ಅವ್ಯವಸ್ಥೆ ಮತ್ತು ವ್ಯಥೆ ಪ್ರಾಪ್ತವಾಗುವುದು. ಇದಕ್ಕೆ ದೃಷ್ಟಾಂತವು ಬೇಕಾದರೆ ಅದು ಪಂಜಾಬಿನ ಅವಾಂತರವೇ ಆಗಿದೆ ಎಂದು ಹೇಳಿ ಈಗಿನ ರಿಫೋರ್ಮ್ ಆಕ್ಟನ್ನು ವಜಾಪಡಿಸಿ ಜನತೆಗೆ ಹೆಚ್ಚಿನ ಅಧಿಕಾರವನ್ನು ಬರಮಾಡಿಕೊಳ್ಳುವ ನವೀನ ಆಕ್ಟು ವಿಧಾಯಿಸಲ್ಪಡುವಂತೆ ಪ್ರಯತ್ನ ನಡಿಸಬೇಕೆಂದು ಅಧ್ಯಕ್ಷರವರು ಅಪ್ಪಣೆ ಕೊಟ್ಟರು.

ಈ ರೀತಿ ಹೊಸ ಆಕ್ಟನ್ನು ವಿಧಾಯಿಸುವಾಗ ಒಂದೇ ಭಾಷೆಯನ್ನಾಡುವಂಥವರ ಪ್ರತ್ಯಪ್ರತ್ಯೇಕವಾದ ಸಂಸ್ಥಾನಗಳು ಸ್ಥಾಪಿಸಲ್ಪಡುವ ಸೂತ್ರವನ್ನು ಅವಲಂಬಿಸಬೇಕು. ಭಾಷೆಯ ಏಕತೆಯು ಜನರಲ್ಲಿ ಐಕ್ಯಕ್ಕೆ ಬಲವಾದ ಕಾರಣವಾಗಿದೆ. ಏಕ ಭಾಷೆಯ ಮೂಲಕ ಒಂದೇ ವಾಙ್ಮಯ, ಒಂದೇ ಇತಿಹಾಸ ಇರುವ ಜನರಲ್ಲಿ ತಮ್ಮ ಕರ್ತವ್ಯ ಜವಾಬ್ದಾರಿಗಳ ಅರಿವನ್ನುಂಟುಮಾಡುವುದು ಸುಲಭ ಸಾಧ್ಯ. ಪ್ರಜಾಧರ್ಮನೀತಿಗಳೇನೆಂಬುದು ಇಂಥವರಲ್ಲಿ ಬೇರೂರಲು ಸರಿಯಾದ ಭಾಷಾಬಂಧವು ಇರುವುದರಿಂದ ವಿವಿಧ ಜಾತಿ ಮತಸ್ಥರಲ್ಲಿ ಐಕ್ಯವು ಇದರಿಂದ ಪ್ರಾಪ್ತವಾಗುವುದು. ತಮಿಳು ಭಾಷೆಯನ್ನಾಡುವ ಜನರಲ್ಲಿ ಇತ್ತಲಾಗಿನ ಕೆಲವು ವರುಷಗಳೊಳಗೆ ಉಂಟಾದ ಸುಧಾರಣೆಯು ಮೇಲಿನ ಮಾತುಗಳಿಗೆ ದೃಷ್ಟಾಂತವಾಗಿದೆ. ಮಹಾತ್ಮಾ ಗಾಂಧಿಯವರು ಸ್ವರಾಜ್ಯವು ಹಿಂದೀಗಳಿಗೆ ಕೊಡೋಣಾಗಬೇಕೆಂದು ದಾಸ್ತು ಮನವಿಯನ್ನು ಏರ್ಪಡಿಸಿ ಅದಕ್ಕೆ ದಸ್ಕತುಗಳನ್ನು ಹಾಕಿಸುವ ಕೆಲಸವನ್ನು ಆಯಾ ಪ್ರಾಂತದವರಿಗೆ ವಹಿಸಿಕೊಟ್ಟಾಗ ತಾನು ತಂಜಾವೂರು ಜಿಲ್ಲೆಯ ಕೆಲವು ಹಳ್ಳಿಗಳಿಗೆ ಹೋಗಿದ್ದೆನು. ಅಲ್ಲಿ ಪಂಚಮರಿಗೆ ಸಹ ರಿಫೋರ್ಮ್ ಆಕ್ಟಿನ ವಿಷಯ ಚೆನ್ನಾಗಿ ಗೊತ್ತಿದೆ ಎಂಬುದನ್ನು ತನ್ನ ಸ್ವಂತ ಅನುಭವದಿಂದ ಹೇಳಬಲ್ಲೆನು. ದೇಶಭಾಷೆಯಲ್ಲಿ ಈ ವಿಷಯಗಳನ್ನು ಅವರಿಗೆ ಹೇಳಿದ್ದರಿಂದ ಈ ವಿಷಯ ಅವರು ಸರಿಯಾದ ಅಭಿಪ್ರಾಯ ಕೊಡಲು ಶಕ್ತರಾದರು. ಕೌನ್ಸಿಲುಗಳಲ್ಲಿ ನಡಿಯುವ ವಾದಗಳೇನೆಂಬುದನ್ನು ತಿಳಿಯುವುದಕ್ಕೂ ರಾಜಕೀಯ ವಿಷಯಗಳಲ್ಲಿ ತಕ್ಕದಾದ ಅಭಿರುಚಿಯುಂಟಾಗಲಿಕ್ಕೂ ಮತ್ತು ತಮ್ಮ ವೋಟು ಅಥವಾ ಮತಕೊಡುವ ಹಕ್ಕನ್ನು ಸರಿಯಾಗಿ ದೇಶಹಿತಕ್ಕೋಸ್ಕರ ವಿನಿಯೋಗಿಸಿಕೊಳ್ಳುವದಕ್ಕೂ ಕೌನ್ಸಿಲುಗಳ ಕಾರ್ಯವೃತ್ತಾಂತಗಳೆಲ್ಲವನ್ನು ದೇಶಭಾಷೆಗಳಲ್ಲಿಯೇ ನಡಿಸತಕ್ಕದ್ದು. ಹೀಗಾದ ಪಕ್ಷದಲ್ಲಿಯೇ ಯಥಾರ್ಥವಾದ ಪ್ರಜಾನಿಯುಕ್ತ ಸರಕಾರವು ನಮಗೆ ಲಭಿಸುವುದು.

ಕಳೆದ ಖಾನೆಸುಮಾರಿ ಲೆಕ್ಕದಿಂದ ಕನ್ನಡ ಭಾಷೆಯನ್ನಾಡುವವರ ಸಂಖ್ಯೆಯು ೧೧|| ಮಿಲಿಯವಿದೆ ಎಂತ ತಿಳಿದುಬರುತ್ತದೆ. ಈ ಜನಸಂಖ್ಯೆಯು ಐದು ಆಡಳಿತಗಳಲ್ಲಿ ವಾಸಿಸಿಕೊಂಡಿರುವ ಪ್ರಜಾಜನರ ಜುಮ್ಲಾ ಸಂಖ್ಯೆಯಾಗಿರುವದು. ಮೂರು ಮಿಲಿಯಕ್ಕಿಂತ ಹೆಚ್ಚು ಜನರು ಮುಂಬಯಿ ಸಂಸ್ಥಾನದಲ್ಲಿಯೂ, ನಾಲ್ಕು ಮಿಲಿಯ ಜನರು ಮೈಸೂರು ಸಂಸ್ಥಾನದಲ್ಲಿಯೂ, ಮೂರು ಮಿಲಿಯ ಜನರು ನಿಜಾಮ ಮತ್ತು ಮದ್ರಾಸು ಸಂಸ್ಥಾನಗಳಲ್ಲಿಯೂ, ಮಿಕ್ಕುಳಿದವರು ಕೊಡಗು ಜಿಲ್ಲೆಯಲ್ಲಿಯೂ ಇರುವರು.

ಮದ್ರಾಸು ಅಥವಾ ಮುಂಬಯಿ ಸಂಸ್ಥಾನದಲ್ಲಿಯೂ ಸಕಲ ಕನ್ನಡಭಾಷೆ ಆಡುವಾ ಜನರು ಇರುವರೆಂಬುದು ಇನ್ನೂ ಸರಿಯಾಗಿ ಗೋಚರಕ್ಕೆ ಬರಲು ಬಾಕಿ ಇರುವ ಸಂಗತಿಯಾಗಿದೆ. ಈ ಸಂಸ್ಥಾನಗಳ ಕನ್ನಡ ಯಾವ ಪ್ರಾಂತ್ಯದಲ್ಲಾಗಲಿ ಮಹಾಸಭೆಗಳು ಜರುಗಿದರೆ ಕನ್ನಡದಿಂದ ಭಾಷಣಮಾಡುವ ರೂಢಿಯು ಇನ್ನೂ ಆ ಪ್ರಾಂತ್ಯಗಳಿಗೆ ಸಂಬಂಧಪಟ್ಟದ್ದಲ್ಲವೆಂಬುವ ಅಭಿಪ್ರಾಯವಿದೆ. ಇದು ಕರ್ಣಾಟಕದ ಜನರಿಗೆ ಭೂಷಣಾರ್ಹವೇ? ರಿಫೋರ್ಮ ಆಕ್ಟಿನ ಮೂಲಕ ಪ್ರಾಪ್ತವಾದ ಹಕ್ಕುಗಳನ್ನು ಸರಿಯಾಗಿ ಕರ್ಣಾಟಕಸ್ಥರು ವಿನಿಯೋಗಿಸಿಕೊಂಡು ಹಿಂದೂಸ್ಥಾನದ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಮರ್ಥರಾಗಳಾಗಬೇಕಾದರೆ ಕರ್ಣಾಟಕದ ಮುಖಂಡರು ಸಮಯ ಕಳೆಯದೆ ಕಾರ್ಯ ಸನ್ನದ್ಧರಾಗಬೇಕು. ಏಕಂದರೆ ಇತರ ಪ್ರಾಂತ್ಯಗಳಿಗಿಂತ ಕನ್ನಡ ಪ್ರಾಂತದಲ್ಲಿ ಬೇಕಾದ ಶ್ರಮ ಪ್ರಯತ್ನಗಳು ವಿಶೇಷವಾಗಿವೆ.

ಆದ್ದರಿಂದ ಈಗ ಮಾಡತಕ್ಕದ್ದೇನು? ಮುಂದುವರಿದ ಪ್ರಾಂತದವರು ಏನೇನೆಲ್ಲಾ ಮಾಡಿರುವರೋ ಅದನ್ನೆ ಕರ್ಣಾಟಕರು ಸಹಾ ಮಾಡತಕ್ಕದ್ದೆಂಬುದೇ ಮೇಲಣ ಪ್ರಶ್ನೆಯ ಉತ್ತರವಾಗಿದೆ. ಮಹಾರಾಷ್ಟ್ರದಲ್ಲಿ ಸುಮಾರು ೫೦ ವರುಷಗಳ ಹಿಂದೆ ಕೆಲವು ಯುವಕರು ಸೇರಿಕೊಂಡು ಕೇಸರಿ, ಸುಧಾರಕ ಮೊದಲಾದ ಪತ್ರಗಳನ್ನು ಹೊರಡಿಸಿದರು. ಈಮೂಲಕ ಜನರಾಶಿಗೆ ತಮ್ಮ ಜೀವನಮಾರ್ಗದಲ್ಲಿ ಬೇಕಾದ ಹಲವು ಬಗೆಯ ಬೋಧೆಯೊಡನೆ ರಾಜಕೀಯ ಜೀವನ ಹೋರಾಟದ ಸಾಧನೆಯ ತಿಳಿವನ್ನು ಕ್ರಮಪ್ರಕಾರ ಬೀರುತ್ತ ಬಂದರು. ಮದ್ರಾಸಿನಲ್ಲಿ 'ಹಿಂದೂ' ಪತ್ರಿಕೆಯನ್ನು ಸ್ಥಾಪಿಸಿ ಮಹಾಶಯರು ಕೈಕೊಂಡ ಪ್ರಯತ್ನವನ್ನೆ ಆ ಪ್ರಾಂತದವರು ತೊಡಗಿದರು. ಇಂಥಾ ಪ್ರಯತ್ನಗಳಲ್ಲಿಯೇ ಕರ್ಣಾಟಕವು ಬಹಳ ಹಿಂದುಳಿದಿರುವುದು. ವಿಶೇಷ ನಾಗರಿಕೆಯ ಸಂಸ್ಥಾನವೆಂತೆನ್ನಿಸಿಕೊಳ್ಳುವ ಮೈಸೂರಿನಲ್ಲಿ ಸಹಾ ಶ್ರೇಷ್ಠತರಗತಿಯ ಒಂದೇ ಒಂದು ಇಂಗ್ಲಿಷು ಭಾಷೆಯ ಪತ್ರವು ಇಲ್ಲ. ಮದ್ರಾಸು ಅಥವಾ ಪೂನೆಯ ಪತ್ರಗಳ ಮೇಲೆ ಮೈಸೂರು ಅವಲಂಬಿಸಿಕೊಂಡಿರುವುದು. ಕೇಸರಿ, ಮುಂಬಯಿ ಸಮಾಚಾರ, ಗುಜರಾಥಿ, ಸ್ವದೇಶ ಮಿತ್ರನ್, ಅಥವಾ ಆಂಧ್ರ ಪತ್ರಿಕೆಯಂಥ ಒಂದೇ ಒಂದು ಇಂಗ್ಲಿಷ ಅಥವಾ ಕನ್ನಡ ಪತ್ರವು, ಕನ್ನಡ ಪ್ರಾಂತ್ಯದಲ್ಲಿ ಇರುವದೇ? ಕರ್ಣಾಟಕಕ್ಕೆ ಮುಖ್ಯವಾಗಿ ಬೇಕಾದದ್ದು ಈಗಿನ ಕಾಲಕ್ಕೆ ತಕ್ಕದಾದ ಎಲ್ಲಾ ಸನ್ನಾಹಗಳಿಂದ ಕೂಡಿರುವ ಛಾಪಖಾನೆ ವ ಪತ್ರ. ಕರ್ಣಾಟಕದ ಆಯಾ ಪ್ರಾಂತ್ಯಗಳಲ್ಲಿರುವ ಮುಖಂಡರೊಳಗೆ ನಿರಂತರ ಸಂಬಂಧವನ್ನು ಬೆಳಸಿ, ಅವರೊಳಗೆ ಪರಸ್ಪರ ಸಹಕಾರವನ್ನುಂಟುಮಾಡಲು ಮತ್ತು ಕರ್ಣಾಟಕ ಪ್ರಾಂತ್ಯದ ಜನರಾಶಿಯ ಪರವಾಗಿ ತಮ್ಮ ಕರ್ತವ್ಯವನ್ನು ಸಲ್ಲಿಸುವ ಉದ್ದೇಶದಿಂದಲೂ ಇಂಥಾ ಪತ್ರವನ್ನು ಹೊರಡಿಸಬೇಕು.

ಎಲ್ಲಾ ಕನ್ನಡ ನಾಡನ್ನು ಒಂದಾಗಿ ಮಾಡುವುದಕ್ಕೆ ಮೈಸೂರು ಮತ್ತು ಹೈದರಾಬಾದು ಸಂಸ್ಥಾನಗಳ ಅಭ್ಯಂತರವಿದ್ದರೂ ಆ ಸಂಸ್ಥಾನಗಳು ದೇಶೀಯ ರಾಜಸ್ಥಾನಕ್ಕೆ ಒಳಪಟ್ಟಿರುವುದರಿಂದ ಇಂಥಾ ಅಭ್ಯಂತರದ ಅಡಚಣೆಯು ವಿಶೇಷವಾಗದು. ಈ ಸಂಸ್ಥಾನಗಳ ಹೊರತು ಬ್ರಿಟಿಷ್ ಆಧಿಪತ್ಯಕ್ಕೆ ಸೇರಿದ ಕನ್ನಡ ನಾಡುಗಳು ಕರ್ಣಾಟಕ ಸಂಸ್ಥಾನ ಒಂದನ್ನು ಪ್ರತ್ಯೇಕವಾಗಿ ವಿಂಗಡಿಸಲಿಕ್ಕೆ ಬೇಕಾದಷ್ಟು ಜನಸಂಖ್ಯೆಯೂ ನಾಡಿನ ವಿಸ್ತೀರ್ಣವೂ ಇದೆ. ಆದ್ದರಿಂದ ಮುಂಬಯಿ ಮತ್ತು ಮದ್ರಾಸು ಆಧಿಪತ್ಯಗಳಿಗೆ ಸೇರಿದ ಜಿಲ್ಲೆಗಳನ್ನೂ ಕೊಡಗು ಜಿಲ್ಲೆಯನ್ನೂ ಒಟ್ಟು ಸೇರಿಸಿ, ಹೀಗೆ ಒಟ್ಟು ಸೇರಿದ ಸಂಸ್ಥಾನಕ್ಕೆ ಧಾರವಾಡನ್ನು ಮುಖ್ಯ ಪಟ್ಟಣವಾಗಿಯೂ, ಮಡಕೇರಿಯನ್ನು ಇಂಥಾ ಸಂಸ್ಥಾನಕ್ಕೆ ಬೇಕಾಗಿರುವ ಪರ್ವತಪಟ್ಟಣವಾಗಿಯೂ ಏರ್ಪಡಿಸಬಹುದು. ಈ ರೀತಿ ಕನ್ನಡ ಭಾಷೆಯನ್ನಾಡುವವರ ಪ್ರತ್ಯೇಕ ಒಂದು ಸಂಸ್ಥಾನವನ್ನು ಏರ್ಪಡಿಸಿ ಕನ್ನಡ ನಾಡುಗಳ ಹಲವು ಕಡೆಗಳಲ್ಲಿ ಪಶುಪ್ರಾಯವಾಗಿ ತಮ್ಮ ಜೀವನವನ್ನು ಸಾಗುತ್ತಿರುವಂಥವರನ್ನು ತಮ್ಮ ಪೂರ್ವಜರ ಉನ್ನತಸ್ಥಿತಿಗೂ ಪ್ರಕೃತ ತಮ್ಮ ನೆರೆಸಂಸ್ಥಾನದವರ ಸಮಾನಸ್ಥಿತಿಗೂ ತರುವಂಥಾ ಉದ್ದೇಶವು ಈ ಪರಿಷತ್ತಿಗೆ ಸೇರಿದೆ. ಈ ಉದ್ದೇಶಸಾಧನೆಯಿಂದ ಮಾಜಿ ವ್ಯಾಸರಾಯಗಳೂಗಿನ್ನ ... ಡಿಂಗ್ ಪ್ರಭುಗಳಿಂದ ಬಿಂಬಿತವಾದ ಭಾವೀ ಭಾರತ ಸಂಯುಕ್ತ ಸಂಸ್ಥಾನಗಳಲ್ಲಿ ತನ್ನ ಯಥಾಯುಕ್ತ ಸ್ಥಾನವನ್ನು ಕರ್ಣಾಟಕವು ಹೊಂದಲು ಕರ್ಣಾಟಕವನ್ನು ಪುನರುಜ್ಜೀವಿಸಬೇಕಾಗಿದೆ.

[illegible]

... ಅಯೋಗ್ಯನಾಗಿ ಮಾಡಬಹುದು. ... [illegible] ಪಂಚಾಯತು ಮೆಂಬರುಗಳು ಇರುವ ಪಂಚಾ... [illegible] ಸಭೆಯಲ್ಲಿ ಗವರ್ನರ ದೊರೆಗಳ ಮಂಜೂ... [illegible] ಪಂಚಾಯತು ಕೋರ್ಟಿಗೆ ಎಷ್ಟು ಮೆಂಬರರು ಇರ... [illegible] ನಡೆಯುತ್ತಿರುವ ಗ್ರಾಮದಲ್ಲಿ ವಾಸಿಸುವ ... [illegible] ಸಭೆಯಲ್ಲಿ ಈ ಮೆಂಬರರ ಚುನಾವಣೆ ... [illegible] ಪ್ರಕಟವಾದ ದಿನಕ್ಕೆ ಆಯಾ ... [illegible] ಗ್ರಾಮಕ್ಕಿಂತಲೂ ಕಡಿಮೆಯಿರುವರಲ್ಲದ ಅಧಿ... [illegible] ಚುನಾವಣೆಯು ಆಗುವುದು ಸಭೆಯಲ್ಲಿ ಹಾಜರಿರು... [illegible] ಇದ್ದರು ಬಾಯ್ದೆರೆ ಅಥವಾ ಗುಪ್ತ ಮೂಲಕ ... [illegible] ಹೆಸರನ್ನು ಬರೆ. ಕೊಳ್ಳದೆಹಂತರ ಬಹುಮತವನ್ನು ... [illegible] ಉಮೇದ್ವಾರನ ಪರವಾದವರು ವಿರೋಧವಾದವರು ಯಾರು ಎಂದು ... [illegible] ಸಭಾಧ್ಯಕ್ಷರಾದ ಆಫೀಸರರು ಹೇಳುವರು. ಇದನ್ನು ... [illegible] ಆ ಉಮೇದ್ವಾರನ ಪರವಾಗಿಯೋ ವಿರೋಧವಾಗಿಯೋ ... [illegible] ಚುನಾವಣೆಯಾದ ೭ ದಿನಗಳು ದಾಟುವಷ್ಟ... [illegible] ಆಕ್ಷೇಪಗಳೇನಾದರೂ ಇದ್ದರೆ ಅವನ್ನು ರೆವಿನ್ಯೂ ಡಿವಿಜನಲ್ ಆಫೀ... [illegible] ತರಬೇಕಾಗಿದೆ ಅಂಥಾ ಆಕ್ಷೇಪಗಳಿಗೆ ರುಜುವಾತಿನ ಬಲಾ... [illegible] ಶೋಧಿಸಿ ತೀರ್ಮಾನಮಾಡುವ ಕೆಲಸವು ಆ ಆಫೀಸರರು ... [illegible] ಒಳಗಾದವನೆಂದು ಯಾವನೊಬ್ಬ ಉಮೇದ್ವಾರನ ಮೇಲೆ ... [illegible] ಅವನನ್ನು ಅಯೋಗ್ಯನೆಂದು ಇತ್ಯರ್ಥಿಸುವ ಅಧಿಕಾರವು ... [illegible] ಡಿವಿಜನಲ್ ಅಫಿಸರರ ಮತ್ತು ಕಲೆಕ್ಟರರ ತೀರ್ಮಾ... [illegible] ಅಪೀಲು ಇಲ್ಲ

ನವೀನವಾಗಿ ಒಂದು ಕೋರ್ಟು ಸ್ಥಾಪನೆಯಾದಲ್ಲಿ ಅಥವಾ ಪಂಚಾಯತ ಕೋರ್ಟಿನ ಅಧ್ಯಕ್ಷನ ಜಾಗ ಖಾಲಿಯಾದಲ್ಲಿ ಈ ಪಂಚಾಯತರ ಒಂದು ಸಭೆ ... ರೆವಿನ್ಯೂ ಡಿವಿಜನಲ್ ಆಫೀಸರರು ಜರಗಿಸಿ, ಅವರೊಳಗೆ ಒಬ್ಬನನ್ನು ... ಸಭೆಗೆ ಅಧ್ಯಕ್ಷನಾಗಿ ಆರಿಸಿ, ಈ ಅಧ್ಯಕ್ಷನಿಂದ ಕೂಡಿದ ಸಭೆಯವರು ಪಂಚಾಯತು ಕೋರ್ಟಿನ ಮುಂದಣ ಪ್ರೆಸಿಡೆಂಟರನ್ನು ಆರಿಸುವಂತೆ ಮಾಡುವರು

ಪಂಚಾಯತ ಕೋರ್ಟು ಕೂಡಬೇಕಾದರೆ ೩ ದಿನಗಳಿಗೆ ಮುಂಚೆ ಆ ಮೆಂಬರರಿಗೆ ನೋಟೀಸು ಪ್ರೆಸಿಡೆಂಟರಿಂದ ಕೊಡಲ್ಪಡುವುದು ಒರಸೆಯಾಗಿ ೫ ಮೀಟಿಂಗುಗಳಿಗೆ ಹಾಜರಿಲ್ಲದ ಮೆಂಬರನು ಪಂಚಾಯತು ಸಭೆಯಲ್ಲಿ ಸೇರದಕ್ಕೆ ಅನರ್ಹನಾಗುವನು

ಸಲರಿ ಕಮ್ಮಿಟಿಯ ರಿಪೋರ್ಟು.

ಬತ್ತೆಯ ದರಗಳು

ಹಿಂದಿನ ಸಂಚಿಕೆಯಲ್ಲಿ ದಿನದ ಬತ್ತೆ ಮತ್ತು ಪ್ರಯಾಣದ ಬತ್ತೆಯ ದರಗಳಲ್ಲಿ ಕಮ್ಮಿಟಿಯವರು ಮಾಡಿದ ಬದಲಾವಣೆ ಸೂಚನೆಗಳನ್ನು ವಿವರಿಸಿದೆವು ಈ ಬಗೆಯ ಬತ್ತೆಗಳಲ್ಲದೆ ಕೆಲವು ಇಸಮುಗಳಿಗೆನೆ ಸಂಬಂಧಪಟ್ಟ ಬತ್ತೆಯ ದರಗಳಿವೆ ಉದಾಹರಣೆಯಾಗಿ ತಹಸಿಲ್ದಾರ ಡಿಪ್ಯುಟಿ ತಹಸಿಲ್ದಾರ ಮೆಜಿಸ್ಟ್ರೇಟ ... ಇನ್ಸ್‌ಪೆಕ್ಟರು ಅಬಕಾರಿ ಇಲಾಖೆಯ ಅಸಿಸ್ಟಾಂಟ ಇನ್ಸ್‌ಪೆಕ್ಟರುಗಳು ಪಬ್ಲಿಕ್ ವರ್ಕ್ಸ್ ಇಲಾಖೆಯ ಸುಪರ್‌ವೈಜರ ಓವರ್ಸಿಯರು ಮುಂತಾದವರು ... ಫಿರ್ಕಾದಲ್ಲಿ ಸಂಚರಿಸುವಾಗ ಮೈಲ ಬತ್ತೆ ಪಡೆಯುವುದಿಲ್ಲ ಆಯಾ ಇಸಮುಗಳಿಗೆನೆ ನಿರ್ಣಯಿಸಿದ ದಿನದ ಬತ್ತೆಯನ್ನು ಮಾತ್ರ ಹೊಂದುತ್ತಾರೆ ತಮ ... ಬಿಟ್ಟು ಹೊರಗೆ ಹೋದಾಗ ಮಾತ್ರವೆ ಮೈಲ ಬತ್ತೆ ಅವರಿಗೆ ಸಲ್ಲುವದೆ ಈ ಮೈಕಿ ತಹಸಿಲ್ದಾರರಿಗೆ ಈ ವರೆಗೆ ಸಿಗತಿದ್ದ ದಿನದ ಬತ್ತೆ ೧ ರೂಪಾಯಿ ಬದಲಾಗಿ ೨ ರೂಪಾಯಿ ಸಿಗಬೇಕೆಂದೂ ಹಾಗೆಯೆ ಡಿಪ್ಯುಟಿ ತಹಸಿಲ್ದಾರ ಸಬ್‌ಮೆಜಿಸ್ಟ್ರೇಟರ ದಿನದ ಬತ್ತೆ ೧೨ ಆಣೆಯಿಂದ ೧|| ರೂಪಾಯಿಗೆ ... ಇನ್ಸ್‌ಪೆಕ್ಟರುಗಳಿಗೆ ೮ ಆಣೆಯಿಂದ ೧೨ ಆಣೆಗೆ ಅಬಕಾರಿ ಅಸಿಸ್ಟಾಂಟ ಇನ್ಸ್‌ಪೆಕ್ಟರುಗಳಿಗೆ ೩ ರೂಪಾಯಿಯಿಂದ ೪-೮-೦ ರೂಪಾಯಿಗೆ ಏರಿಸಬೇಕೆಂದೂ ಬಾಕಿ ಕೆಲವು ಇಸಮುಗಳಿಗೆ ಸೇಕಡಾ ೫೦ರಂತೆ ದಿನದ ಬತ್ತೆ ಏರಿಸಬೇಕೆಂದೂ ಕಮ್ಮಿಟಿಯವರ ಸೂಚನೆ

ಇದಲ್ಲದೆ ಕಾಯಂ ತಿಂಗಳ ಬತ್ತೆ ಸಿಗುವ ಕೆಲವು ಇಸಮುಗಳೂ ಇವೆ ಅವರಿಗೆ ಇಂತಿಷ್ಟು ದಿನ ಪ್ರತಿ ತಿಂಗಳಲ್ಲಿ ಸರ್ಕೀಟು ಮಾಡಲೇಬೇಕೆಂದು ನಿಗದಿ ಇರುವುದರಿಂದಲೂ ಇವರು ಆಗಾಗ ಬೇರೆ ಬೇರೆ ಹಳ್ಳಿಗಳನ್ನು ಸಂಚರಿಸದೆ ಇರಲಿಕ್ಕೆ ಸಾಧ್ಯವೇ ಇಲ್ಲವೆಂಬದರಿಂದ ಈ ಬಗೆಯ ಕಾಯಂ ತಿಂಗಳ ಬತ್ತೆಯನ್ನು ಈ ಇಸಮುಗಳು ಹೊಂದುತ್ತವೆ ಸರ್ವೆ ಇಲಾಖೆಯ ಆಫೀಸರರು ವಿದ್ಯಾ ಇಲಾಖೆಯ ಸಬ್ ಅಸಿಸ್ಟಾಂಟ ಮತ್ತು ಸುಪರವೈಜರುಗಳು ಈ ವರ್ಗಕ್ಕೆ ಸೇರಿದವರು ... ಫಿನಾನ್ಸ್ ಕಮ್ಮಿಟಿಯವರು ಈ ಬಗೆಯ ಕಾಯಂ ಎಲೋವನ್ಸ್ ಹಳ್ಳಿ ಸಂಚಾರಕ್ಕೆ ಪ್ರೋತ್ಸಾಹ ಕೊಡುವುದಿಲ್ಲ, ಆದಷ್ಟು ಕಡಿಮೆ ಪ್ರಯಾಣ ಮಾಡಿ ತನ್ನ ಕೆಲಸವಲ್ಲಿ ಅರ್ಧದ್ಧ ಕೋರಿಸುವವರಿಗೆ ಈ ಬಗೆಯ ಕಾಯಂ ಬತ್ತೆ ಉತ್ತೇಜನ ಕೊಡುತ್ತದೆ ಎಂದು ರಿಪೋರ್ಟು ಮಾಡಿದ ಮೇರೆಗೆ ಆ ಕಾಲಕ್ಕೆ ಇದ್ದ ಕಾಯಂ ಬತ್ತೆಯ ಕ್ರಮವನ್ನು ಆಗ ಇಂಡಿಯಾ ಸರಕಾರದವರ ತೆಗೆದು ಹಾಕಿದರು ತಹಸಿಲ್ದಾರರಿಗೂ ಕಾಯಂ ಬತ್ತೆ ಸಿಗಬೇಕೆಂದು ಶಿಫಾರಸು ಮಾಡಿದಾಗ ೧೯೧೫ನೆ ಇಸವಿಯಲ್ಲಿ ಮೇಲಿನ ಕಾರಣದಿಂದಲೇ ಇಂಡಿಯಾ ಸರಕಾರದವರು ಈ ಕಾಯಂ ಬತ್ತೆಯ ಬದಲಾಗಿ ೧ ರೂಪಾಯಿ ದಿನದ ಬತ್ತೆಯನ್ನು ಏರ್ಪಡಿಸಿದರು.

ಆದರೆ ಕಾಯಂ ಸರ್ಕೀಟು ಮಾಡಲೇ ಬೇಕು ಬೇರೆ ಬೇರೆ ಹಳ್ಳಿಗಳನ್ನು ಸಂಚರಿಸಲೇ ಬೇಕಾದ ಹುದ್ದೆಗಳಿಗೆ ಕಾಯಂ ಬತ್ತೆಯನ್ನು ಕೊಡಿಸುವುದು ... ಇಲಾಖೆಗೂ ಮೇಲಾಫೀಸರರಿಗೂ ಬತ್ತೆ ಪರಿಶೋಧನೆ ಕೆಲಸವನ್ನು ಕಡಿಮೆ ಮಾಡುತ್ತದೆ ಎಂದು ಕಮ್ಮಿಟಿಯವರು ಅಭಿಪ್ರಾಯ ಪಡುತ್ತಾರೆ ೧೯೧೯ನೆ ... ಯಲ್ಲಿ ಇಂಡಿಯಾ ಸರಕಾರದವರು ಇದೇ ಅಭಿಪ್ರಾಯವನ್ನು ಒಪ್ಪಿಕೊಂಡು ... ಸರ್ಕಾರನ್ನು ಪ್ರಾಂತಿಕ ಸರಕಾರದವರಿಗೆ ಕೊಟ್ಟಿದ್ದರಂತೆ. ಇದರ ... ದಿಂದ ಪ್ರತಿ ಇಲಾಖೆಯಲ್ಲಿ ಯಾವ ಇಸಮುಗಳಿಗೆ ಕಾಯಂ ಬತ್ತೆ ಕೊಡ ... ಬೇಕೆಂಬದನ್ನು ಆಯಾ ಇಲಾಖಾ ಮೇಲಾಫೀಸರರು ಇತ್ಯರ್ಥಿಸುವುದು ಉಚಿತ ... ಕಮ್ಮಿಟಿಯವರ ಸೂಚನೆ

ಇದಲ್ಲದೆ ತಮ್ಮ ಜಿಲ್ಲೆಯಲ್ಲಿಯೂ ಮಲಬಾರ ನೀಲಗಿರಿ ಜಿಲ್ಲೆಗಳಲ್ಲಿಯೂ ... [illegible] ಕಡಿಮೆ ಎಂಬುದರಿಂದ ಬೇರೆ ... [illegible]

ಜನರಲ್ ಡಾಯರ್ — ಜಲಿಯನ್‌ವಾಲದ ವೀರ.

ಜಲಿಯನ್ವಾಲಾ ... ವೀರನೆಂದೆನಿಸಿ ।
ಕೊಲುವ ಆತ್ಮಕ್ಷಣ ಧರ್ಮವೆಂದೆಣಿಸಿ ॥
ಜಲಿಸಲಿದು ಜನರನ್ನು ಮುಸಡಣೆಯೊಳೊಲಿಸಿ ।
ಎಲೆಲೈ, ನಿ ಡಾಯರನೆ ಕೀರ್ತಿಯುನುಗಳಿಸಿ ॥ ೧ ॥

ಆಯುಧವಿಹೀನರನು ಕ್ರೂರತೆಯಿಂದ ।
ಲಯಗೊಳಿಸಿ ನಿನ್ನಾ 'ಮೆಷಿನ್‌ಗನ್ನಿ'ನಿಂದ ॥
ಡಾಯರನೆ, ತಪ್ಪಿಲ್ಲದರ ರಕುತ ಸುರಿದೆ ।
ನ್ಯಾಯದಂಡಪಕೀರ್ತಿಯನು ನೀನೆ ಪಡೆದೆ ॥ ೨ ॥

ಗಾಯವನು ಪಟ್ಟವರ ಆಸ್ಪತ್ರೆಗೊಯ್ದು ।
ಕಾಯವನು ಸರಿಪಡಿಸಲುಪಕಾರಗೈದು ॥
ಕಾಯುವವು ಬಂಧುಗಳ ಎಂದು ಬಂದವರ ।
ನೀ ಯಾಕೆ ಬಿಡಲಿಲ್ಲ, ಇಂಗ್ಲೆಂಡುಕುವರ? ॥ ೩ ॥

ನಾಗರಿಕರಾಜ್ಯವಾದಾ ಆಂಗ್ಲದೇಶ ।
ನೀಗೈದ ಕೊಲೆಯಿಂದ ಪಟ್ಟಿತ್ತೆ ಕ್ಲೇಶ
ಕೈಗೊಂಡಕಾರ್ಯವದು ಕೆಡಿಸಿದುದರಿಂದ ।
ನೀಗೈದೆ ದುಃಖವನ ವ್ಯಾಕಗದರಿಂದ ॥ ೪ ॥

ನಾಗರಿಕ ಕಾಲದಲಿಯೂ ಕ್ರೂರತನವು ।
ಆಗಾಗ್ಗೆ ಅವತರಿಸುವುದು ಎಂಬಮತವು ॥
ನಾಗರಿಕ ರಾಜ್ಯದಾ ನಾಗರಿಕನಾದ
ನೀಗೈದೆ ಆ ಮತವನ್ನೆ ನಿರ್ವಿವಾದ ॥ ೫ ॥

ಭಾರತಜನಾಂಗದಾ ಆತ್ಮಗೌರವವ ।
ಮಾರಕನೆ, ಕಾಲಡಿಗೆ ತುಳಿದುನಿರ್ಭಯವ ।
ತೋರಿಸಿದ ನೀ ದೇವಶಾಪಕೊಳಗಾದಿ
ಆರವನು ತಪ್ಪುವರು ಹೇ ಸತ್ಯವಾದಿ ॥ ೬ ॥

ಹಿಂದಿಯರ ರಾಜಕೀಯಾಭಿವೃದ್ಧಿಯನು
ಮುಂದರಿಸಿದೈವತ್ತು ವರುಷಗಳಿಗದನ ॥
ಅಂದು ನೀಗೈದ ಆ ನರಹತ್ಯಕೊಂದು
ಒಂದಾದರುಪಕಾರವಾಯ್ತೆಮಗೆ ಇಂದು ॥ ೭ ॥

ಡಾಯರನ ಅಲ್ಲವೈ ಕಿಲ್ಲರನು ನೀನು ।
ಅಯಥಾರ್ಥವಾದುದೀ ನಿನ್ನ ಹೆಸರಿನ್ನು ॥
ನೀ ಯಮನದೂತರೊಳಗೊಬ್ಬನಿರಬಹುದೆ? ।
ಲಯಕಾಲದಧಿಕಾರಿಗಳೊಬ್ಬನಹುದೆ? ॥ ೮ ॥

ಘೋರವೂ ಕ್ರೂರವೂ ಆದ ಆ ಕೃತ್ಯ ।
ಪರಮಾತ್ಮ ದಂಡಿಸದೆ ಇರುವನೆ ವತ್ಸ?
ನರರದಂಡನೆಯಿಂದ ತಪ್ಪಿದರು ನೀನ ।
ಸರ್ವೇಶ್ವರನ ದೃಷ್ಟಿ ತಪ್ಪುವಿಯ ಏನು? ॥ ೯ ॥

S R. Kamath

ನೇತ್ರ ರೋಗಗಳು

(ಮದ್ರಾಸು ಪ್ರಕಟನೆ ಸಂಘದಿಂದ)

ಕಣ್ಣಿನಲ್ಲಿ ಬೆಳೆಯುವ ಕೆಟರಾಕ್ಟ ಎಂಬ ಪರೆಯನ್ನು ತೆಗೆಸುವುದಕ್ಕೆ ಇಂಗ್ಲೀಷರ ಪದ್ಧತಿಯಿಂದ ನೇತ್ರ ವೈದ್ಯವಲ್ಲಿ ಚೆನ್ನಾಗಿ ಶಿಕ್ಷಣವನ್ನು ಪಡೆದು ಸಮರ್ಥರಾಗಿರುವ ಡಾಕ್ಟರ ಬಳಿಗೆ ಹೋಗಬೇಕೇ ಹೊರತು ಬೇರೆ ವೈದ್ಯರೂ ಹಕೀಮರೂ ಮಾಡುವ "ಕೌಚಿಂಗ್" ಎಂಬ ಚಿಕಿತ್ಸಾಕ್ರಮವು (ಎಂದರೆ ಆ ಪರೆಯನು ಕಣ್ಣಿನ ಒಳಭಾಗಕ್ಕೆ ದೂಡಿಬಿಡುವುದು) ಬಹಳ ಅಪಾಯಕರವೆಂದ ಈಗ ಕೆಲವು ದಿನಗಳ ಹಿಂದೆ ಪ್ರಕಟಿಸಿದ (೪೮ನೇ ನಂಬರ್) ಪತ್ರಿಕೆಯ ಮೂಲಕವಾಗಿ ಜನಗಳಿಗೆ ಎಚ್ಚರಿಸಿದೆವು ನೇತ್ರ ವೈದ್ಯದಲ್ಲಿ ಸಮರ್ಥರಾದ ಡಾಕ್ಟರುಗಳು ದೊರೆಯದಿದ್ದ ಕಡೆಗಳಲ್ಲಿ ಯಾರಿಗಾದರೂ ಮೇಲ್ಕಂಡ ಚಿಕಿತ್ಸೆಯು ನಡೆಯಬೇಕಾದ ಆವಶ್ಯವು ತೋರಿದರೆ, ಅವರು ಬಡವರಾಗಿಯೂ ಇದ್ದರೆ ಅಂಥವರನ್ನು ಆಯಾ ಜಿಲ್ಲೆಯ ಮೆಡಿಕಲ್ ಮತ್ತು ಸ್ಯಾನಿಟರಿ ಇಲಾಖೆಯ ಅಧಿಕಾರಿಗಳಾಗಲಿ ಸಿವಿಲ್ ಸರ್ಜನರುಗಳಾಗಲಿ ಇಲಾಖೆಯ ಖರ್ಚಿನಿಂದ ಮದರಾಸಿನಲ್ಲಿರುವ ಕಣ್ಣಾಸ್ಪತ್ರೆಗೆ ಕಳುಹಿಸಿ ಕೊಡುವುದಕ್ಕೆ ಅಧಿಕಾರವನ್ನು ವಹಿಸಿದ್ದಾರೆ ಇದರಿಂದ ಅವಶ್ಯವಿದ್ದವರೆಲ್ಲರೂ ತಮ್ಮ ಕಣ್ಣಿಗೆ ಕ್ರಮವಾದ ಚಿಕಿತ್ಸೆಯನ್ನು ಮಾಡಿಸುವದಕ್ಕೆ ಬಹಳ ಅನುಕೂಲವುಂಟು

ಇದೇ ಉದ್ದೇಶದಿಂದ ಸರಕಾರದವರು ವಿಶಾಖಪಟ್ಟಣ ಮಧುರೆ ತಂಜಾವೂರು ಈ ಮೂರು ಸ್ಥಳಗಳಲ್ಲಿಯೂ ಜನಗಳ ಸೌಕರ್ಯಕ್ಕಾಗಿ ಪ್ರತ್ಯೇಕವಾದ ಕಣ್ಣಾಸ್ಪತ್ರೆಗಳನ್ನು ಏರ್ಪಡಿಸಿರುವರು

ಪತ್ರವ್ಯವಹಾರ

"ಸ್ವದೇಶಾಭಿಮಾನಿ"ಯ ಮಾನ್ಯ ಸಂಪಾದಕರೆ!

ಕೆಳಗಿನ ನಾಲ್ಕು ಪಂಕ್ತಿಗಳಿಗೆ ಅಮೂಲ್ಯವಾದ ತಮ್ಮ ಪತ್ರಿಕೆಯಲ್ಲಿ ಎಡೆ ಕೊಡಬೇಕಾಗಿ ಪ್ರಾರ್ಥನೆ

ಕಳೆದ ವೈಶಾಖ ಶು ೧೫ ಯ ಚಂದ್ರಗ್ರಹಣವನ್ನು ಪರೀಕ್ಷಿಸಬೇಕೆಂಬ ಉದ್ದೇಶದಿಂದ (ತಾ ೨-೫-೨೦) ರವಿವಾರ ರಾತ್ರಿ ಸ್ಟೆಂಡರ್ಡ ಸಮಯವನ್ನು ಸರಿಯಾಗಿ ತೋರಿಸುವ ಗಡಿಯಾರವನ್ನು ತಕ್ಕೊಂಡು ಕೆಲ ಸ್ನೇಹಿತರೊಂದಿಗೆ ಏನೂ ಅಡ್ಡವಿಲ್ಲದ ಒಂದು ಎತ್ತರ ಪ್ರದೇಶವನ್ನು ಏರಿ ನೋಡಿದೆವು ಮೈಸೂರಿನ ಸಂಪಾದಕರು ತಮ್ಮ ಪಂಚಾಂಗದಲ್ಲಿ ಮತ್ತು ಕಳೆದ ವಾರದ ಸ್ವದೇಶಾಭಿಮಾನಿಯಲ್ಲಿ ಬರೆದಂತೆ ಸ್ಟೆಂಡಾರ್ಡ ಟೈಂ ೫-೩೨ಕ್ಕೆ ಸ್ಪರ್ಶವೂ ೬-೮ಕ್ಕೆ ಚಂದ್ರಾಸ್ತಮಾನವೂ ೬-೧೧ಕ್ಕೆ ಸೂರ್ಯೋದಯವೂ ಪ್ರತ್ಯಕ್ಷದರ್ಶನಕ್ಕೆ ಬಂತು ಚಂದ್ರಾಸ್ತಮಾನವು ಸೂರ್ಯೋದಯಕ್ಕಿಂತ ಮೊದಲೇ ಆದುದರಿಂದ ಉದ್ಯಾವರ ಪಂಚಾಂಗದಲ್ಲಿ ಕೊಟ್ಟ ಚಂದ್ರಾಸ್ತಮಾನ ಸಮಯವು ತಪ್ಪೆಂದು ಸಿದ್ಧವಾಗುತ್ತದೆ

ಈಶ್ವರಭಟ್ಟ.

ಪ್ರಜನಿಯ ಮಹಮ್ಮದನು

[illegible]

... ೧೯... ರಲ್ಲಿ ... [illegible] ... ಬರೆದಿದ್ದಾರೆ ... ಹಿಂದುಸ್ಥಾನ ... [illegible] ... ಹಿಂದು ... ಸ್ಥಾನದ ... [illegible] ... ಅವರಿಗೆ ... [illegible] ... ಫ್ರೆಂಚ್ ... [illegible] ... ಎಂತ ಹೇಳುತ್ತಾರೆ, ... ಹಿಂದುಸ್ಥಾನದ ... ಹಿಂದು ... ಜನಾಂಗ ಆಗುವ ಹಾಗೆ ... [illegible] ... ಇಂಗ್ಲೀಷ್ ಮೇಷರು ... [illegible] ... ನುಡಿದಿರುವರು — ... ಚರಿತ್ರೆಯನ್ನು ... ಹಿಂದೊಂದು ರೀತಿ ಬರೆದಿರುತ್ತಾರೆ. ಹೀಗಿರುತ್ತ ... ಯಾರೆಂಬುದನ್ನು ... ಕೊರ್ಡಿಯಲರು ... ಹೇಳಬೇಕಾಗಿತ್ತು — ಘಜನಿಯ ಮಹಮ್ಮದನು ಕೆಲವು ಸಲ ಹಿಂದುಸ್ಥಾನಕ್ಕೆ ದಂಡೆತ್ತಿ ಬಂದು ... ಮಾಡಿ ಹೋಗಿದ್ದನಷ್ಟೆ — ಅಂಥಾದ್ದು ಹಿಂದುಸ್ಥಾನದ ಸ್ವಲ್ಪ ಭಾಗದಲ್ಲಿ ಆಗಿರಬಹುದು ಈಗ ಕೆಲವು ಶತಮಾನಗಳಿಂದ ತಮ್ಮ ಇಡೀ ಹಿಂದುಸ್ಥಾನದ ... ಗಳು ನಾಶ ಹೊಂದಿ ... ವಿದೇಶಕ್ಕೆ ಹೋಗುತ್ತಿದೆಯಲ್ಲಾ! ಬೆಲ್ಜಿಯಮ್ — ಫ್ರಾನ್ಸ್‌ನಲ್ಲಿ ಅವರ ದೇವಾಲಯಗಳನ್ನು ಜರ್ಮನಿಯವರು ... ಅಥವಾ ... ಎಂತಾ ಲೋಕವಲ್ಲಾ ಆಕ್ಷೇಪಣೆಮಾಡಿತು — ಜರ್ಮನಿಯವರು ಕೇಳಲಾಗಿ ತಮ್ಮ ಶತ್ರುಗಳು ದೇವಾಲಯಗಳ ಮೇಲೆ ನಿಂತುಕೊಂಡು ಗುಂಡು ಹೊಡೆದರು, ಅವರನ್ನು ಹೊಡೆಯಲು ನಾವು ದೇವಾಲಯಗಳ ಮೇಲೆ ಗುಂಡು ಹೊಡೆಯಬೇಕಾಯಿತು ಎಂತ ಅವರು ಸಮಾಧಾನ ಹೇಳಿದರು — ಇದರಲ್ಲಿ ನಿಜತ್ವಯಾವದು! ಮಿ ಕೊರ್ಡಿಯಲ್‌ರು ಉಹಿಸಲಿ —

ಬೆಳ್ಮಣ
ತಾ 2-೨-1920 } L MATHIAS

ಕಳೆದ ದಶಂಬರ ತಿಂಗಳ ತಾರೀಕು ೨೫ರಲ್ಲು ನೂತನವಾಗಿ ಸ್ಥಾಪಿಸಲ್ಪಟ್ಟ ಶ್ರೀಭಗವತೀ ವಿದ್ಯೋದಯ ಮಂಡಳಿಯವರೆಲ್ಲರೂ ಕೂಡಾ ಈ ವರುಷದ ನಡಾವಳಿ ಉತ್ಸವವನ್ನು ನಡೆಸಿ, ಕುದ್ರೋಳಿ ಶ್ರೀಭಗವತೀ ಸ್ಥಾನವನ್ನು ಜೀರ್ಣೋದ್ಧಾರವಾದುವುದಕ್ಕೆ ಅನುಕೂಲಿಸಿ ರೂ. ೧೫೦ನ್ನು ಇನು ಕೊಡುವುದಾಗಿ ಬರಹ ಮೂಲಕವಾದ ವಾಗ್ದತ್ತವನ್ನು ಮಂಡಳೀಕರೆಲ್ಲರೂ ಸಮ್ಮತ ಪಟ್ಟಿರುತ್ತಾರೆ ಶ್ರೀ ಭಗವತಿಯ ಕರುಣೆಯಿಂದ ಈ ವರುಷ ತಾರೀಕು ೨-೫-'೨೦ರಲ್ಲು ಮಹಾಘೋಷದಿಂದ ನೆರವೇರಲ್ಪಟ್ಟ ನಡಾವಳಿಯ ಉತ್ಸವದರೀತಿಯೇ ಬರುವ ವರುಷಕ್ಕಾದರೂ ಶ್ರೀ ದೇವಿಯ ಕೃಪೆಯಿಂದ ಸದರಿ ದೇವಸ್ಥಾನವನ್ನು ಬಿಚ್ಚಿ ನೂತನವಾಗಿ ಜೀರ್ಣೋದ್ಧಾರ ಮಾಡುವ ಯತ್ನವನ್ನು ಸದರಿ ಸ್ಥಳದ ಮೊಕ್ತೇಸರರು ಸದರಿ ಮಂಡಳೀಕರೊಡಗೂಡಿ ನೆರವೇರಿಸುವುದಕ್ಕೆ ಶ್ರೀ ದೇವಿಯ ಪ್ರಸಾದಾಶೀರ್ವಾದ ಸರ್ವರಿಗೂ ಉಂಟಾಗಲೆಂದು ಪ್ರಾರ್ಥಿಸುವ,

ಒಬ್ಬ ನಿವಾಸಿಕ

ಹತ್ತಿಯ ಬೆಳೆಯನ್ನು ಕುರಿತಾದ ಮಾಹಿತಿ.

ಬೊಂಬಾಯಿ ಅಧಿಪತ್ಯದಲ್ಲಿ ಗುಜರಾಥದ ಉತ್ತರ ಪ್ರಾಂತವೊಂದು ಅಲ್ಲದೆ ಇತರ ಯಾವತ್ತೂ ಕಡೆಯಲ್ಲಿ ಹತ್ತಿಯನ್ನು ಬೆಳೆಸುತ್ತಾರೆ ಅತಿವೃಷ್ಟಿ ಅಥವಾ ಅನಾವೃಷ್ಟಿ ಇರುವಲ್ಲಿ ಹತ್ತಿಯ ಬೆಳೆಗೆ ಎಷ್ಟು ಗೊಬ್ಬರವನ್ನು ಹಾಕಿದರೂ ಉಪಯೋಗವಿಲ್ಲ, ಅವುಗಳ ಫಲವು ಒಂದು ವೇಳೆ ಹೆಚ್ಚಾದರೂ, ಗೊಬ್ಬರಕ್ಕಾಗಿ ವ್ಯಯಮಾಡಿದ ಹಣವು ಒದಗಲಾರದು ಈ ವಿಷಯದಲ್ಲಿ ಮುಂಬಯಿ ಇಲಾಖೆಯ ವ್ಯವಸಾಯದ ಭಾಗದ ಡಾ ಹರೊಲ್ಡ ಮ್ಯಾನ್ ಸಾಹೇಬರು ತಮ್ಮ ಅಮೂಲ್ಯವಾದ ಅನುಭವವನ್ನು ಈ ಕೆಳಗೆ ಸಂಕ್ಷೇಪಿಸಿರುವರು ಇದು ರೈತರಿಗೆ ಪ್ರಯೋಜನಕ್ಕೆ ಬರುವುದಾಗಿ ಭಾವಿಸುತ್ತೇವೆ —

(೧) ಮಳೆಯು ಸರಿಯಾಗಿ ಸುರಿಯದೆ ಇರುವಲ್ಲಿ, ಗೊಬ್ಬರ ಹಾಕುವುದರಿಂದ, ಗಿಡಗಳು ಬೆಳೆದರೂ, ನೀರಾಶ್ರಯವಿಲ್ಲದೆ, ಫಲ ಹೆಚ್ಚಾಗಲಾರದು

(೨) ರಾಸಾಯನಿಕ ಗೊಬ್ಬರಗಳನ್ನು, ಹಟ್ಟಿ ಗೊಬ್ಬರದೊಡನೆಯೆ ಉಪಯೋಗಿಸಬೇಕಲ್ಲದೆ, ಅವನ್ನೆ ಮಾತ್ರ ಉಪಯೋಗಿಸಬಾರದು

(೩) ಎಕ್ರೆಗೆ ೨ ಖಂಡಿ ಹಟ್ಟಿ ಗೊಬ್ಬರ ಹಾಕುವಲ್ಲಿ, ಪುನಃ ಪೊಟಾಶನ್ನು ಹಾಕಿ ಫಲವಿಲ್ಲ ಆದರೆ ಸ್ಯೂಪರ್ ಫಾಸ್ಫೇಟನ್ನೂ ನೈಟ್ರೇಟನ್ನೂ ಹಾಕುವುದರಿಂದ ಲಾಭವಿದೆ

(೪) ಈ ಬಗ್ಗೆ ಉಪಯೋಗಿಸುವ ಗೊಬ್ಬರಗಳಲ್ಲಿ, ನೈಟ್ರೇಟ್ ಆಫ್ ಸೋಡಾ (ಸೌಳುಪ್ಪು) ಇತರ ಎಲ್ಲಾ ರಾಸಾಯನಿಕ ಅಥವಾ ಕೃತಕ ಮಿಶ್ರ ಗೊಬ್ಬರಗಳಿಗಿಂತಲೂ ಹೆಚ್ಚಿನ ಬೆಳೆಯನ್ನು ಕೊಡುವುದು

(೫) ಹಟ್ಟಿ ಗೊಬ್ಬರವನ್ನು ಹೆಚ್ಚಿಸಿ, ಮೇಲೆ ಮೇಲ ಹಾಕುವ ಗೊಬ್ಬರವಾಗಿ ಸೂಪರ್ ಫೋಸ್ಫೆಟನ್ನೂ ನೈಟ್ರೇಟನ್ನೂ ಉಪಯೋಗಿಸಿದಲ್ಲಿ ಅತ್ಯುತ್ತಮ ಬೆಳೆಯಾಗುವುದು

(೬) ಸಾಧಾರಣ ಮಳೆ ದೀಳುವ ಸ್ಥಳಗಳಲ್ಲಿ.—

ನೆಡುವ ಮೊದಲು ಎಕ್ರೆಗೆ ೨ ಖಂಡಿಯಂತೆ ಹಟ್ಟಿ ಗೊಬ್ಬರ, ಬೀಜದೊಡನೆ ೨೦೦ ರಾತ್ತು ಸುಪರ್ ಫಾಸ್ಫೇಟ, ಮತ್ತು ಆರು ವಾರಗಳ ನಂತರ ೧೫೦ ರಾತ್ತು ನೈಟ್ರೇಟ್ ಆಫ ಸೋಡಾ (ಸೌಳುಪ್ಪು) ಈ ಬಗೆಯಲ್ಲಿ ಉಪಯೋಗಿಸಿದರೆ, ಅದೇ ಅತ್ಯುತ್ಕೃಷ್ಟವಾದ ಗೊಬ್ಬರವಾಗುವುದು

(೭) ಕೃತಕ ಗೊಬ್ಬರಗಳ ದೆಸೆಯಿಂದ, ಗಿಡಗಳು ಬೇಗನೆ ಫಲಕೊಡುತ್ತವೆ.

(೮) ಬೂದಿ ಮೊದಲಾದ ಗೊಬ್ಬರಗಳಿಂದ ವಿಶೇಷ ಲಾಭವು

ಪ್ರಕಟಣೆ.

ಗವರ್ನಮೆಂಟಿನವರು ತಮ್ಮ ೬೬ನೇ ಹೋಮ್ ಎಜ್ಯುಕೇಶನ್ ತಾ. [illegible] ಹುಕುಮಿನಲ್ಲಿ ಯುದ್ಧಕ್ಕೆ ಹೋದ ಸಿಪಾಯಿಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸೂಚಿಸಿರುವ ಕ್ರಮಗಳು ಈ ಕೆಳಗೆ ವಿವರಿಸಲಾಗಿಯವೆ.

೧. ೧೯೧೪ನೇ ಆಗಸ್ಟ್ ೪ರ ನಂತರ ಯುದ್ಧದಲ್ಲಿ ಸತ್ತು ಹೋದ ಅಥವಾ ಯುದ್ಧರಂಗದಲ್ಲಿರುವಾಗ್ಯೆ ಗಾಯವಡೆದು ಅಂಗಹೀನರಾದ ಯಾ ಯುದ್ಧರಂಗದಲ್ಲಿರುವಾಗ ಅಸ್ವಸ್ಥಕ್ಕೆ ಗುರಿಯಾದ ವೀರರ ಯಾ ಪಟಲಾಮಿಗೆ ಸೇರಿದ ಎಲ್ಲಾ ತರಗತಿಯ ಮನುಷ್ಯರ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಈ ಕೆಳಗೆ ವಿವರಿಸೋಣಾದ ಏರ್ಪಾಡು ಲಗಾವಾಗುತ್ತದೆ.

೨. ಈ ರೂಲುಗಳಿಗೆ ಅನುಗುಣವಾಗಿ ತೀರ್ಮಾನಿಸುವರೆ ಪ್ರತಿಷ ಸಾವನ್ನಪ್ಪಿದ್ದಕ್ಕೆ ಒಳಪಟ್ಟ ಪ್ರತಿಯೊಂದು ಜಿಲ್ಲೆಯ ಕಲೆಕ್ಟರರಿಗೆ ಇದರಡಿಯಲ್ಲಿ ನಮೂದಿಸಿರುವ ಫೋರ್ಮಿನಲ್ಲಿ ಅಂಥಾ ಎಲ್ಲಾ ಮನುಷ್ಯರ ಪಟ್ಟಿಯನ್ನೂ ಅದರಲ್ಲಿ ಅವರ ವಾಸಸ್ಥಳವನ್ನೂ ನಮೂದಿಸಿ ಅಜ್ಯುಟೆಂಟ್ ಜನರಲರು, ಆಶ್ರೀತ ಸಂಸ್ಥಾನಗಳಿಗೆ ಒಳಪಟ್ಟವರ ಸಂಗತಿಯಲ್ಲಿ ಅದೇ ನಮೂನೆಯ ಒಂದು ಪಟ್ಟಿಯನ್ನು ಫೋರೆನ್ ಮತ್ತು ಪೊಲಿಟಿಕಲ್ ಡಿಪಾರ್ಟಮೆಂಟಿನವರು ಯುಕ್ತತೋರುವ ರೀತಿಯಲ್ಲಿ ಇತ್ಯರ್ಥಸುವ ಬಗ್ಗೆ ಆ ಡಿಪಾರ್ಟಮೆಂಟಿನ ಸೆಕ್ರೆಟರಿಯವರಿಗೂ ಕಳುಹಿಸಲಾದೀತು.

ಪ್ರತಿ ಕೆಲೆಂಡರ್ ವರ್ಷದ ಶುರುವಿನ ಹೆಚ್ಚಿಗೆ ಕೂಡಿಸಿದವರ ಪಟ್ಟಿಯನ್ನೂ ಕಳುಹಿಸಲಾದೀತು.

೩. ಕಲೆಕ್ಟರರು ಆ ಪಟ್ಟಿಯು ಸಿಕ್ಕಿದೊಡನೆ ವಿಚಾರಿಸಿ ಆ ಪಟ್ಟಿಯಲ್ಲಿ ಹೇಳಿರುವ ಮನುಷ್ಯರ ಮಕ್ಕಳಲ್ಲಿ ೧೬ ವರ್ಷಕ್ಕೆ ಕೆಳಗಿನ ಪ್ರಾಯದ ಎಲ್ಲಾ ಮಕ್ಕಳ ಹೆಸರನ್ನೂ ಪ್ರಾಯವನ್ನೂ ಬರೆದಿಟ್ಟು (ಹೆಣ್ಣು ಮಕ್ಕಳ ಹೆಸರು ವಗೈರೆ ಬರಕೊಳ್ಳುವಾಗ್ಗೆ ಜನರ ಜಾತಿ ಕ್ರಮಕ್ಕನುಸಾರವಾಗಿ ಮಾನ್ಯತೊಡಲ್ಪಟ್ಟು) ಈ ರೂಲುಗಳ ಮೇರೆಗೆ ಅರ್ಹರು ಎಂತ ಪ್ರತಿ ಒಂದು ಮಗುವಿನ ಬಗ್ಗೆ ಆದರ ರಕ್ಷಕರಿಗೆ ೪ನೇ ರೂಲಿನ III ಉಪನಿಬಂಧನೆಮೇರೆಗೆ ಒಂದು ಸರ್ಟಿಫಿಕೇಟು ಕೊಡುವರು.

೪. ಇಂಥಾ ಸರ್ಟಿಫಿಕೇಟನ್ನು ಯಾವದೊಂದು ವಿದ್ಯಾಲಯದ ಮುಖ್ಯ ಅಧಿಕಾರಿಗೆ ಒಪ್ಪಿಸಿದ್ದಲ್ಲಿ ಲೋಕಲ್ ಗವರ್ನಮೆಂಟಿನವರು ನಿರ್ಧರಿಸುವ ರೂಲಿನ ಮೇರೆಗೆ ಈ ಕೆಳಗಿನ ಪ್ರಯೋಜನಗಳು ಸಿಕ್ಕುವವು:—

(a) ಧರ್ಮಾರ್ಥವಾದ ಪ್ರಾಯ್ಮರಿ ವಿದ್ಯೆಯೂ ಅದಕ್ಕೆ ಕೂಡಿಸಿ ಅದಕ್ಕೆ ಸಂಬಂಧವಾದ ಅಂದರೆ ಪುಸ್ತಕಗಳ ವಗೈರೆ ಖರ್ಚನ್ನು ಭರ್ತಿಮಾಡುವ ಬಗ್ಗೆ ಒಂದು ವರ್ಷಾಸನ ಅಲೊವೆನ್ಸು

(b) ಒಂದು ಮಧ್ಯಮ ತರಗತಿಯ ಸ್ಕೂಲಿನಲ್ಲಿ ವೇತನವು, ಅಂಥಾ ವೇತನವೂ ಶೀಮೆಯಲ್ಲಿ ಕೊಡುವ ಹಾಗಿನದ್ದೂ, ಫೀಸು ಸಹಾ ಸೇರಿಸಿಯೂ (ಇದು ಈ ಮೊದಲು ಜಾರಿಯಲ್ಲಿ ಇಲ್ಲದ್ದಾದರೆ)

(c) ಜನರ ಉಪಯೋಗಾರ್ಥವಾಗಿ ಇಟ್ಟ ವೇತನಗಳ ಬಗ್ಗೆ ಮೇಲಾಡಲಿಕ್ಕೆ ಅರ್ಹರಾಗಿರುವುದಲ್ಲದೆ, ಕೊಲೇಜುಗಳಲ್ಲಿಯೂ ಹೈಸ್ಕೂಲುಗಳಲ್ಲಿಯೂ ಇಂಥಾ ಸರ್ಟಿಫಿಕೇಟು ಇದ್ದವರ ಗೋಸ್ಕರ ಗವರ್ನಮೆಂಟಿನವರು ಇಟ್ಟ ವೇತನಗಳಿಗಾಗಿ ಉಮೇದ್ವಾರರಾಗಿರುವರು. (ಷರಾ) ಆ ವಿದ್ಯಾರ್ಥಿಯು ಒಂದು ಹೊಸ್ಟೇಲಿನಲ್ಲಿ ಇರುವ ಸಂಗತಿಯಲ್ಲಿ ಸಿಕ್ಕುವ ವೇತನವು ಹೊಸ್ಟೇಲಿನ ಖರ್ಚಿಗೆ ಸಾಕಾಗದ ಸಂಗತಿಯಲ್ಲಿ ಅಂಥಾ ಖರ್ಚು ಅದರ ಭರ್ತಿಯ ಬಗ್ಗೆ ವೇತನಕ್ಕೆ ಕೂಡಿಸಿ ಕೊಡಲ್ಪಡುವುದು.

ಆದರೆ:—

(i) ಅಂಥಾ ವಿದ್ಯಾರ್ಥಿಯ ಅಭಿವೃದ್ಧಿಯು ಸ್ವಾಲದೆಂತಾಗಲಿ ಅವನ ನಡತೆ ಅಸಮಾಧಾನಕರವೆಂತಾಗಲಿ ಸಂಬಂಧ ಪಟ್ಟ ಶಾಲಾ ಇನ್ಸಪೆಕ್ಟರರ ಅಭಿಪ್ರಾಯಕ್ಕೆ ತೋರಿದ್ದಲ್ಲಿ ಈ ರೂಲುಗಳ ಮೇರೆಗೆ ತೋರಿಸುವ ವಿನಾಯತಿಯಾಗಲಿ ವೇತನವಾಗಲಿ ಹಿಂದೆಗೆಯಲ್ಪಡುವುದು.

(ii) ವೇತನವು ಯಾವ ದರ್ಜೆಯ ಬಗ್ಗೆ ಇಡಲ್ಪಟ್ಟದೋ ಆ ದರ್ಜೆಗೆ ಸೇರಬೇಕಾದರೆ ನಿಯಮಿಸಿಟ್ಟಂಥಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದ ವಿದ್ಯಾರ್ಥಿಗೆ ವೇತನವು ದೊರೆಯಲಾರದು.

(iii) ೧೦ ವರ್ಷ ಪ್ರಾಯದ ವರೆಗೆ ಯಾವ ಶಾಲೆಗೂ ಹೋಗದ ಮಕ್ಕಳಿಗೆ ಅಂಥಾ ವೇತನವು ದೊರಕಲಿಕ್ಕಿಲ್ಲ.

೫. ಮಗುವನ್ನು ರಕ್ಷಕರು ಅವರಿಗೆ ಇಚ್ಛೆ ತೋರುವ ಶಾಲೆಗೆ ಕಳುಹಿಸುವುದರಲ್ಲಿ ಗವರ್ನಮೆಂಟಿನವರು ಪ್ರತಿಬಂಧಿಸುವುದಿಲ್ಲ. ಗವರ್ನಮೆಂಟ್ ಶಾಲೆಗಳಲ್ಲದೆ ಬೇರೆ ಶಾಲೆಗಳಿಗೆ ಈ ರೂಲುಗಳಿಗನುಸಾರವಾಗಿ ಲೋಕಲ್ ಗವರ್ನಮೆಂಟಿನವರು ಆಯಾ ಶಾಲೆ ಅಧಿಕಾರಿಗಳೊಂದಿಗೆ ನಷ್ಟ ಭರ್ತಿಗೆ ತಕ್ಕ ವಿಲೆವಾರಿ ಮಾಡುವರು.

೬. ಮೇಲೆ ನಂಬ್ರ ೧ನೇ ರೂಲಿನಲ್ಲಿ ಹೇಳೋಣಾದ ಮೇರೆಗೆ ಪಟಲಾಮಿನಲ್ಲಿರುವವರ ಮಕ್ಕಳ ವಿದ್ಯಾಭ್ಯಾಸದ ವಿಷಯವಾಗಿ ಸಂಬಂಧ ಪಟ್ಟ ಕಲೆಕ್ಟರರಿಗೆ ಯಾವದಾಡರೂ ಆಯಾ ಪಟಲಾಮಿನ ಸೇನಾನಾಯಕರು ಬರೆದು ಕೇಳಬಹುದು. ಮತ್ತು ಕಲೆಕ್ಟರರು ಅಂಥಾ ವಿಚಾರಕ್ಕೆ ಅನುಕೂಲವಿರುವಷ್ಟರ ಮಟ್ಟಿನ ಜವಾಬು ಕೊಡು[illegible]

ಫೋರ್ಮು.

೧. ಹೆಸರು ಮತ್ತು ತಂದೆಯ ಹೆಸರು ಮತ್ತು ಜಾತಿ.
೨. ಪಟಲಾಮಿನ ನಂಬ್ರ ಮತ್ತು ತರಗತಿ ಮತ್ತು ಸಿಪಾಯಿಯ ನಂಬ್ರ.
೩. ಹಿಂದೂಸ್ತಾನದಲ್ಲಿರುವ ಯಾವ ಡಿವಿಜನಿಗೆ ಸೇರಿದ್ದು.
೪. (a) ಸತ್ತದೋ ಅಥವಾ (b) ತಾ. ೪—೮—೧೯೧೪ರ ತರುವಾಯ ಯುದ್ಧರಂಗದಲ್ಲಿದ್ದು ಗಾಯಪಟ್ಟ ಅಥವಾ ಅಸ್ವಸ್ಥದಿಂದ ಎಂದೂ ಕೆಲಸ ಮಾಡಲಿಕ್ಕೆ ಆಗದವರು!
೫. ವಾಸಸ್ಥಳ, ಗ್ರಾಮ, ತಾಲೂಕು, ಜಿಲ್ಲೆ ಮತ್ತು ಅಧಿಪತ್ಯ.

ಹುಕುಂ ನಂಬ್ರ ೬೬ನೇ ಹೋಮ್ (ಎಜ್ಯುಕೇಶನ್) ತಾ. ೨೩ನೇ ಮೇ ೧೯೧೮.

ಇಂಡಿಯಾ ಗವರ್ನಮೆಂಟಿನವರ ನಂಬ್ರ ೨೧೩ (ಎಜ್ಯುಕೇಶನ್) ತಾ. ೨ನೇ ಎಪ್ರಿಲ್ ೧೯೧೮ನೇ ಪತ್ರವನ್ನೂ ಅದರ ಉಪಪತ್ರವನ್ನೂ ವಿದ್ಯಾ ಇಲಾಖೆಯ ಡಿರೆಕ್ಟರರಿಗೂ ಎಲ್ಲಾ ಜಿಲ್ಲೆಗಳ ಕಲೆಕ್ಟರರಿಗೂ ತಿಳಿಸೋಣಾಗಿಯದೆ.

೨. ಮಡಿದುಹೋದ ಅಥವಾ ಕೆಲಸಮಾಡಲಿಕ್ಕೆ ಅಯೋಗ್ಯರಾದ ಇಂಡ್ಯದ ಸಿಪಾಯಿಯರ ಮಕ್ಕಳ ಪೈಕಿ, ಇಂಡಿಯಾ ಗವರ್ನಮೆಂಟಿನವರು ನಂಬ್ರ ೩ನೇ ಠರಾವಿನಲ್ಲಿ ಸರ್ಟಿಫಿಕೇಟು ಹಾಜರುಮಾಡಿದವರನ್ನು ಫೀಸು ಕೊಡದೇನೇ ಸರಕಾರ ಮನೇಜಮೆಂಟಿನಲ್ಲಿರುವ ಎಲ್ಲಾ ಸೆಕೆಂಡರಿ ಮತ್ತು ಎಲಿಮೆಂಟರಿ ಶಾಲೆಗಳಲ್ಲಿ ಸೇರಿಸಿ ಕೊಳ್ಳುವುದಕ್ಕಾಗಿ ಗವರ್ನಮೆಂಟಿನವರು ವಿಧಿಸಿರುತ್ತಾರೆ.

ಖಾಸಗಿ ಶಾಲೆಗಳ ಮನೇಜರರು ಅವರ ಶಾಲೆಗೆ ದಾಖಲಾಗುವುದಕ್ಕೆ ಬರುವ ಅಂಥಾ ಮಕ್ಕಳಿಗೆ ಮೇಲಿನ ರಿಯಾಯಿತಿಯನ್ನು ತೋರಿಸಬೇಕಾಗಿ ತಿಳಿಸುತ್ತಾರೆ.

ಹೀಗೆ ಮಾಡಲು ಅನುಕೂಲವಾಗಿ, ವಿದ್ಯಾ ಇಲಾಖೆಯ ಡಿರೆಕ್ಟರರು ಗ್ರಾಂಟ್-ಇನ್-ಎಯಿಡ್-ಕೋಡಿನ ಮೇರೆಗೆ ಅಂಥಾ ಶಾಲೆಗಳಿಗೆ ಕೊಡುವ ಗ್ರಾಂಟಿನೊಂದಿಗೆ ಹೀಗೆ ಫೀಸು ವಸೂಲಿಯಲ್ಲಿ ನಷ್ಟ ಬಂದಷ್ಟು ಅಂಶವನ್ನು ಭರ್ತಿ ಮಾಡಲು ಅಧಿಕಾರ ಹೊಂದಿರುತ್ತಾರೆ.

೩. ಅಂಥಾ ಮಕ್ಕಳಿಗೆ ಪುಸ್ತಕ ವಗೈರೆ ಒದಗಿಸುವ ಸಂಗತಿಯಲ್ಲಿ ಈ ಕೆಳಗೆ ಕಾಣಿಸಿರುವಷ್ಟರಮಟ್ಟಿನ ಖರ್ಚನ್ನು ಸಹ ಮಾಡುವ ಅಧಿಕಾರ ಕೊಡುವುದರಲ್ಲಿ ಗವರ್ನಮೆಂಟಿನವರು ಸಂತೋಷಪಟ್ಟಿರುತ್ತಾರೆ:—

ಪ್ರಾಯಮರಿ ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ೧೨ ರೂಪಾಯಿ, ಮಿಡ್ಲ್‌ಸ್ಕೂಲುಗಳಲ್ಲಿ (ಫೋರ್ಮು Iರಿಂದ IIIರ ವರೆಗೆ) ಒಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ೧೮ ರೂಪಾಯಿ.

ಹೈಸ್ಕೂಲುಗಳಲ್ಲಿ (ಫೋರ್ಮು IVರಿಂದ VI) ವರ್ಷಕ್ಕೆ ಒಬ್ಬ ವಿದ್ಯಾರ್ಥಿಗೆ ೩೦ ರೂಪಾಯಿ.

ಪ್ರಾಯಿಮರಿ ಶಾಲೆಗಳಲ್ಲಿ ಕಲಿಯುವ ಮಕ್ಕಳ ಪುಸ್ತಕ ವಗೈರೆ ಪಡಕೊಳ್ಳುವರೆ ಬೇಕಾದ ಹಣವನ್ನು ಜಿಲ್ಲೆಯ ಅಸಿಸ್ಟಂಟ ಇನ್ಸ್‌ಪೆಕ್ಟರರವರು ಕೊಡುವರು. ಮಿಡ್ಲ್ ಮತ್ತು ಹೈಸ್ಕೂಲುಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಗತಿಯಲ್ಲಿ ಸಂಬಂಧಪಟ್ಟ ಶಾಲೆಯ ಮುಖ್ಯ ಉಪಾಧ್ಯಾಯರು ಮೇಲ್ಗಡೆ ಹೇಳಿರುವಷ್ಟರ ವರೇಗಿನ ಖರ್ಚನ್ನು ಮಾಡುವರೆ ಅಧಿಕಾರ ಹೊಂದಿರುತ್ತಾರೆ.

ಎಯಿಡೆಡ್ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಪರವಾಗಿ ಖರ್ಚಾದ ಹಣವು ವರುಷಾವಧಿ ಗ್ರಾಂಟು ನಿರ್ಣಯಿಸುವಾಗ ಗವರ್ನಮೆಂಟಿನವರಿಂದ ಭರ್ತಿಮಾಡಲ್ಪಡುವುದು.

೪. ಹೀಗೆ ರಿಯಾಯತಿ ತೋರಿಸುವುದರಿಂದ ಉಂಟಾಗುವ ಖರ್ಚನ್ನು ಲೋಕಲ್ ಅಧಿಕಾರಿಗಳು ತಮ್ಮ ಸ್ವಂತ ಭಂಡವಾಳದಿಂದ ವಹಿಸಿಕೊಳ್ಳುವಂತಾಗಿ ಗವರ್ನಮೆಂಟಿನವರು ನಂಬಿರುತ್ತಾರೆ.

೫. ಇದರಲ್ಲಿ ರಿಯಾಯತಿ ಸಾಗುವಳಿಯು ಮತ್ತು ಮಸಲತ್ತಿನ ೪ನೇ ಖಂಡದಲ್ಲಿ ಹೇಳಿರುವ ಶರ್ತಗಳಿಗೆ ಒಳಪಟ್ಟಿರುವುದಲ್ಲದೆ ಇನ್ನುಮುಂದೆ ವಿದ್ಯಾ ಇಲಾಖೆಯ ಡಿರೆಕ್ಟರರವರು ನಿಶ್ಚಯಿಸಬಹುದಾದ ಯಾವದಾದರೂ ರೆಗ್ಯುಲೇಶನುಗಳಿಗೂ ಒಳಪಟ್ಟಿರುತ್ತದೆ.

೬. ಕೈಗಾರಿಕೆಯ ಶಾಲೆಗಳಿಗೆ ಯಾ ಕೊಲೇಜುಗಳಿಗೆ ಪ್ರವೇಶವನ್ನು ಅಪೇಕ್ಷಿಸುವ ವಿದ್ಯಾರ್ಥಿಗಳಿಗೆ ರಿಯಾಯತಿಯನ್ನು ತೋರಿಸುವ ವಿಷಯವೂ ಹೊಸ್ಟೇಲುಗಳಲ್ಲಿ ವಾಸಮಾಡುವವರ ವಿಷಯವೂ ಮುಂದಿನ ಆಲೋಚನೆ ಬಗ್ಗೆ ಬಾಕಿ ಇಡಲಾಗಿಯವೆ.

(ಖಾಚಾ ಎಕ್ಸ್‌ಟ್ರಾಕ್ಟ್)

ಆರ್. ರಾಮಚಂದ್ರರಾವ್,
ಗವರ್ನಮೆಂಟ್ ಸೆಕ್ರೆಟರಿ.

ನೋಟೀಸು.

ಸಂ ೧೯೨೦ನೆ ಇಸವಿ ಮೇ ತಾ. ೧೦ರಲ್ಲು ಉಪ್ಪಿನಂಗಡಿ ತಾಲೂಕು ನಡಗ್ರಾಮದ ಹಿರ್ತಿಲ್ಲಾಡಿ ಎಂಬಲ್ಲಿರುವ ಪೂವಣಿಗೌಡನ ಮಗ ಚಂದಪ್ಪ ಗೌಡನು ಈ ಮೂಲಕ ತಿಳಿಸುವದ್ದೇನಂದರೆ.

ಮಂಗಳೂರು ತಾಲೂಕು ಕೊಡಿಯಾಲ್ ಮಾಗಣೆ ಕದ್ರಿ ಗ್ರಾಮದ ಕೆಳಗಿನ ಬೆಂದೂರಲ್ಲಿರುವ ಮಿಂಗೇಲ್ ಮಿನೇಜರ ಮಗ ಸಾಲ್ವದೊರ್ ಮಿನೇಜರರು ವ ನಡಗ್ರಾಮದ ಬೊಜಾರು. ಚಂದಪ್ಪ ಗೌಡ ಕೂಡಾ ೨ ಜನರು ನನಗೆ ವ ನನ್ನ ಅಣ್ಣ ಹುಕ್ರಗೌಡಗೆ ಕೂಡಾ ವಂದ್ರ ಕುತ್ತಲೆ ಮೊಕದಮೆಗೆ ಒಂದು ಅರ್ಜಿ ಆಗಬೇಕೆಂತ ನಮಗೆ ಪ್ರೋತ್ಸಪಡಿಸಿ ನಮ್ಮಿಬ್ಬರಿಂದ ಹೆಬ್ಬೆಟ್ಟು ಖಾಲಿಕಾಗದದಲ್ಲಿ ಪಡೆದು ಈಗ ೧೯೨೦—೪—೦ ಒಂದು ಡಿಮಾಂಡ್ ನೋಟು ಪ್ರತಿಫಲವಿಲ್ಲದೆ ಬನಾವಣಿ ಮಾಡಿಸಿ ಸದರಿ ಸಾಲ್ವದೊರ್ ಮಿನೇಜರವರ ಹೆಸರಲ್ಲಿ ಆದ್ವಾಗಿ ಇದೇ ಬೆಳ್ತಂಗಡಿ ಸಬ್ ರಿಜಿಸ್ಟ್ರಾರವರ ಆಫಿಸಿನ ನಂಬ್ರ $\frac{250}{19-4-20}$ಕ್ಕೆ ರಿಜಿಸ್ಟ್ರಿಯಾದ ಬನಾವಣೆ ದಸ್ತಾವೇಜಿನಲ್ಲಿ ಕಂಡು ಬರುವದಾಗಿ ತಿಳಿದು ಆ ಬಗ್ಗೆ ಸದರಿ ಸಾಲ್ವದೊರ್ ಮಿನೇಜರವರಿಗೆ ಅಲ್ವಾದ ನೋಟೀಸು ಸಹಾ ಕೊಟ್ಟಿರುತ್ತೇನೆ. ಸದರಿ ಡಿಮಾಂಡ್ ಪ್ರೊನೋಟು ಕೇವಲ ಬನಾವಣೆಯಾದ ಕಾರಣ ಯಾರಾದರೂ ಸದರಿ ಪ್ರೋನೋಟಿನ ಮೇಲ್ಚೀಟು ಪಡದ್ದಲ್ಲಿ ಆ ಐವಜಿಗೆ ನಾನು ಬಾಧ್ಯನಲ್ಲಾ ಸದರಿ ಪ್ರೊನೋಟು ಮೋಸಕರ ದಾದ್ದೆಂತ ಈ ಮೂಲಕ ಪ್ರಕಟಿಸಿರುತ್ತೇನೆ. ತಾರೀಕು 10—5—20.

||| ಈ ಮೂರು ಗೆರೆ ಮತ್ತು ಎಡಹೆಬ್ಬೆಟ್ಟು ಗುರ್ತು ಚಂದಪ್ಪ ಗೌಡನ ರುಜು.

ನೋಟೀಸು.

ಬೊಂಬಯಲ್ಲಿನ "ಪಬ್ಲಿಕ್ ಫಂಡ್ ಒಫ್ ಉಡುಪಿ ಶ್ರೀ ಕೃಷ್ಣ" ಎಂಬ ಸಮಾಜಕ್ಕೆ ಸೇರಿದ ಸರ್ವರೂ ತಮ್ಮ ತಮ್ಮ ವಂತಿಗೆಗಳನ್ನು ದಶಂಬರ ತಾ. ೧೫ರ ಒಳಗೆ ಕೊಡಬೇಕಾಗಿ ಬೇಡುತ್ತೇನೆ.

ಉಳ್ಳಾಲ ಪೂವಪ್ಪ ಭಂಡಾರಿ,
ಕ್ಯಾಶ್‌ಕೀಪರ್.

The Public Fund of Udipi Sri Krishna,
72, Apollo Street, Fort, Bombay.

NOTICE.

WANTED for employment in the S. V. S. Temple Secondary School, Bantval (S. K.)

2 *Trained* F. A's or (Intermidiate men) on Rs. 35-1-40 per mensem.

2 Trained Matrics or S.S.L.C's on Rs. 25-1-30 per mensem.

1 Trained Gymnastic and Drill Instructor (passed also in Intermidiate grade drawing) on Rs. 20-1-25.

Applications should reach the undersigned by the end of this month (May 1920).

Bantval,
4-5-1920.

B. Survothuma Baliga,
Manager.

BANK OF MADRAS.

ಮದ್ರಾಸ್ ಬ್ಯಾಂಕ್.

ಹೆಡ್ ಆಫೀಸು: ಮದ್ರಾಸ್.

ಮೂಲಧನ	ರೂ. 75,00,000.
ಕ್ಷೇಮನಿಧಿ	,, 45,00,000.

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾದಾವು.

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ. 5,000ಕ್ಕೆ ಮಿಗದ ಮೊಬಲಗನ್ನು ಠೇವಣಾತಿಯಾಗಿಡಬಹುದು.

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ. 10,000ಕ್ಕೆ ಮೀರದ ಮೊಬಲಗಿನ ವರೇಗೆ ಬಡ್ಡಿ ಎಣಿಸಲಾಗುವುದು.

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿನಿಂದ ಪಡೆಯಬಹುದು.

ಸಿ. ಎಲ್. ಗೊರ್ಡನ್,
ಏಜಂಟ್, ಮದ್ರಾಸ್ ಬ್ಯಾಂಕ್, ಮಂಗಳೂರು.

ಶುದ್ಧ ಶಿಲಾಜಿತು

(ಯಾನೆ)

ಉತ್ತಮ ಕಲ್ಪ.

ತೊಲೆ ೧ಕ್ಕೆ ರೂ. ೧. ೫ ತೊಲೆ ಡಬ್ಬಿ ೧ಕ್ಕೆ ೨-೧೨-೦

ಅಂಚೆಹಾಸಲು ೪ ಆಣೆ ಬೇರೆ.

ನಾಲ್ಕಾಣೆಯ ಚೀಟು ಕಳುಹಿಸಿದಲ್ಲಿ ನಮೂನೆ (Sample) ಕಳುಹಿಸಬಹುದು.

ನಮ್ಮಲ್ಲಿ ಸ್ವಲ್ಪ ಮಾತ್ರ ಉಳಿದಿದೆ. ಬೇಕಾದವರು ತ್ವರೆ ಮಾಡಿರಿ.

ಪತ್ತೆ:— ಮನೋಲ್ಲಾಸಿನಿ ಕಂಪನಿ,
೪. ಕಂಕನಾಡಿ ಪೋಸ್ಟು.

Manollasini Co.,
4. Kankanady.

ದಿ. ಕೆನರಾ ಎಂಟರ್‌ಪ್ರೈಸ್, ಲಿಮಿಟೆಡ್.

ಪುತ್ತೂರು ದಕ್ಷಿಣ ಕನ[illegible]

(1913ನೇ ಇಸವಿಯ ಇಂಡಿಯನ್ ಕಂಪೆನಿಗಳ ಆಕ್ಟಿಗನುಸಾರವಾಗಿ ರಜಿಸ್ತ್ರಿ ಮಾಡಲ್ಪಟ್ಟಿದೆ.)

ಮೂಲಧನ:—ರೂಪಾಯಿ 200,000—ರೂಪಾಯಿ 25ರ 8,000 ಹಿಸೆಗಳಿಗೆ ವಿಭಾಗಿಸಲ್ಪಟ್ಟಿರುತ್ತದೆ. ಹಿಸೆಗಳನ್ನು ಮನವಿ ಮೂಲಕ ಅಪೇಕ್ಷಿಸಿ ಯಾರೂ ಪಡಕೊಳ್ಳಬಹುದು.

ಮನವಿಯೊಂದಿಗೆ ಪ್ರತಿ ಹಿಸೆಗೆ ರೂಪಾಯಿ 5 ಮತ್ತು ಪ್ರವೇಶಫೀಸು ಆಣೆ 4 ಅಂತು ರೂ. 5—4—0, ಮನವಿ ಅಂಗೀಕರಿಸಿದ ಬಳಿಕ ಕೊಡೋಣಾಗುವ ಎಲ್ಲೋಟ್‌ಮೆಂಟ್ ನೋಟಿಸಿನ ವಾಯಿದೆಗೆ ರೂ. 5 ಕೊಡತಕ್ಕದ್ದು. ಬಾಕಿ ರೂ. 15ನ್ನು ಸರಿಯಾದ 3 ಕಂತುಗಳಿಂದ ಕೇಳಿದ ಹಾಗೆ ಪಾವತಿ ಮಾಡತಕ್ಕದ್ದು. ಆದರೆ ಒಂದು ಕಂತು ಕೇಳಿದ ಬಳಿಕ ಅನಿಷ್ಟಪಕ್ಷಕ್ಕೆ 2 ತಿಂಗಳ ಅವಧಿಗೆ ಮುಂಚಿತವಾಗಿ ಇನ್ನೊಂದು ಕಂತು ಕೇಳೋಣಾಗಲಿಕ್ಕಿಲ್ಲ.

ಪ್ರೊಸ್ಪೆಕ್ಟಸಿನ ಬದಲಾಗಿ ಜೊಯಿಂಟ್ ಸ್ಟಾಕ್ ಕಂಪೆನಿಗಳ ಅಸಿಸ್ಟಾಂಟ್ ರಿಜಿಸ್ತ್ರಾರರ ಬಳಿ ದಾಖಲು ಮಾಡಿದ ಸ್ಟೇಟ್‌ಮೆಂಟನಲ್ಲಿ ಕಾಣಿಸಿದ ಪ್ರಕಾರ ರೂ. 20,000ಕ್ಕೆ ಸರಿಯಾದ 800 ಹಿಸೆಗಳು ಈ ಮೊದಲೇ ಹಂಚಲ್ಪಟ್ಟಿರುತ್ತವೆ.

ಡ್ಯಾರೆಕ್ಟರರು.

1. ಮ| ರಾ| ರಾ| ಉಳ್ಳಾಲ ಸಾಂತಯ್ಯ ಕಿಣಿ, ಅವರ್ಗಳ್. ... ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಮಂಗಳೂರು.
2. ,, ,, ಎಮ್. ನರಸಿಂಹ ಮತ್ತುರ್ಭಂಡಾರಿ, ,, ... ಡಿಸ್ಟ್ರಿಕ್ಟ್ ಬೋರ್ಡ ಮೆಂಬರ್ ವ ಸಾಹುಕಾರ, ಮಂಗಳೂರು.
3. ,, ,, ಎಮ್. ಮುಡ್ಲಗಿರಿ ಪಾಂಡುರಂಗ ಪೈ, ,, ... ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ವ ಸಾಹುಕಾರ, ಮಂಗಳೂರು.
4. ,, ,, ಎಚ್. ಕೊರಗಪ್ಪ, ,, ... ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ಮತ್ತು ಒನರರಿ ಬೆಂಚ್ ಮೆಜಿಸ್ಟ್ರೇಟ್, ಮಂಗಳೂರು.
5. ,, ,, ಮಂಜೇಶ್ವರ ಜನಾರ್ಧನ ಭಟ್, ,, ... ತಾಲೂಕು ಬೋರ್ಡ ಮೆಂಬರ್ ವ ಸಾಹುಕಾರ, ಪುತ್ತೂರು.
6. ,, ,, ಎಚ್. ಅನಂತ ಕಾಮತ್, ,, ... ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಪುತ್ತೂರು.
7. ,, ,, ಅರಿಯಡ್ಕ ಸುಬ್ಬಯ್ಯರೈ, ,, ... ವರ್ಗದಾರ, ಅರಿಯಡ್ಕ.
8. ,, ,, ಸೊರಕೆ ಎಲಿಯಣ್ಣ, ,, ... ವರ್ಗದಾರ ಮತ್ತು ಸಾಹುಕಾರ, ಪುತ್ತೂರು.
9. ,, ,, ಎ. ಗೋವಿಂದ ಶೆಣೈ, ,, ... ಮೆನೇಜಿಂಗ್ ಡೈರೆಕ್ಟರ್, ಪುತ್ತೂರು.

ಬೇಂಕರ್ಸ್.

1. ಮದ್ರಾಸ್ ಬೇಂಕ್ ಮತ್ತು 2. ಕೆನರಾ ಬೇಂಕ್, ಲಿಮಿಟೆಡ್, ಮಂಗಳೂರು.

ಲೀಗಲ್ ಎಡ್ವಾಯಿಸರರು.

1. ಮ| ರಾ| ರಾ| ಎಚ್. ಗಣಪತಿರಾವ್, ಅವರ್ಗಳ್,—ಪ್ಲೀಡರ್, ಪುತ್ತೂರು.
2. ,, ,, ಎಮ್. ಮಾಧವರಾವ್ ,, —ಬಿ. ಎ., ಬಿ. ಎಲ್, ಪ್ಲೀಡರ್, ಮಂಗಳೂರು.

ರಿಜಿಸ್ತ್ರಿ ಮಾಡಲ್ಪಟ್ಟ ಆಫೀಸು.

"ಶ್ರೀ ವರದೇಂದ್ರ ಹೋಟೆಲ್" ಪೋಸ್ಟ್ ಆಫೀಸ್ ಬಳಿ, ಪುತ್ತೂರು.

ಸೂಚನಾ ಪತ್ರ.

ಉದ್ದೇಶಗಳು—(1) ಬೇಂಕಿಂಗ್ ಯಾನೆ ಹಣದ ಲೇವಾದೇವಿ ಮಾಡುವದು. (2) ವ್ಯಾಪಾರದ ದಲಾಲಿ ವ ಏಜನ್ಸಿ ಮಾಡುವದು. (3) ಕೈಗಾರಿಕೆ ಕಸಬುಗಳನ್ನು ಮಾಡುವದು. (4) ವ್ಯಾಪಾರ ಮಾಡುವದು. (5) ಕೃಷಿ ಮಾಡುವದು (ಉಪಯುಕ್ತವಾದ ಕೈಗಾರಿಕೆ ಸಮೇತ). (6) ಲಾಭಕರವೆಂತ ಕಂಡುಬರುವ ಇತರ ಯಾವ ಉದ್ಯೋಗವನ್ನಾದರೂ ಮಾಡುವದು.

(1) ಪುತ್ತೂರಿನಲ್ಲಿ ಒಂದು ಬೇಂಕು ಸ್ಥಾಪಿಸಲ್ಪಡುತ್ತಿದೆ.

(2) ಬರುವ ವರ್ಷ ಒಂದು ದಲಾಲಿ ಭಂಡಸಾಲೆ ತೆರಿಯುವ ಆಲೋಚನೆ ಇದೆ.

(3) ಹಿಟ್ಟು ತಯಾರಿಸುವ ಕಾರ್ಖಾನೆಯು ಪಶ್ಚಿಮ ಕರಾವಳಿಯಲ್ಲಿ ಬೊಂಬಾಯಿ ವಿನಹಾ ಬೇರೆ ಎಲ್ಲಿಯೂ ಇರುವದಿಲ್ಲ. ಆದಕಾರಣ ಅಂಥಾದ್ದೊಂದು ಕಾರ್ಖಾನೆಯನ್ನು ಸದ್ಯದಲ್ಲಿಯೇ ಮಂಗಳೂರಿನಲ್ಲಿ ಸ್ಥಾಪಿಸುವ ಆಲೋಚನೆ ಇದೆ.

ಮಿಕ್ಕ ಉದ್ದೇಶಗಳನ್ನು ನೆರವೇರಿಸುವರೆ ಹೆಚ್ಚು ದ್ರವ್ಯಾನುಕೂಲತೆಯು ಅವಶ್ಯಕವು. ಮಾತ್ರವಲ್ಲ, ಅವುಗಳಲ್ಲಿ ಹೆಚ್ಚು ತೊಂದರೆಗಳು ವ ನಷ್ಟ ಸಂಭವ ಕೂಡಾ ಇರಬಹುದಾದ ಕಾರಣ ಅವುಗಳು ಕೆಲವು ವರ್ಷಗಳ ತನಕ ಪ್ರಾರಂಭಿಸಲ್ಪಡಲಾರವು.

ಮುನಾಫೆ.

ಪ್ರಥಮ ವರ್ಷದಲ್ಲಿ ಹೆಚ್ಚಿನ ಸಮಯವು ಹಿಸೆಗಳ ಸಂಪಾದನೆಯಲ್ಲಿಯೇ ಕಳೆದುಹೋಗುವದರಿಂದ ಕಂಪೆನಿಗೆ ಸಾಕಷ್ಟು ಮುನಾಫೆ ಉಳಿಯುವರೆ ಆಸ್ಪದವಿಲ್ಲ. ಪರಂತು ಸದ್ಯದಲ್ಲಿಯೇ ಪ್ರಾರಂಭಿಸಲಿಕ್ಕಿರುವ ಉದ್ಯೋಗಗಳು (ಅಂದರೆ—ಬೇಂಕು, ಹಿಟ್ಟಿನ ಕಾರ್ಖಾನೆ ಮತ್ತು ದಲಾಲಿ ಭಂಡಸಾಲೆ, ನಷ್ಟಕ್ಕೆ ಎಡೆಯಿಲ್ಲದ ಮುನಾಫೆಯು ಮೂಲಿಗಳಾಗಿರುವದರಿಂದ ಬರುವ ವರ್ಷದಲ್ಲಿ ಮುನಾಫೆಯ ಹಣದಿಂದ ಕ್ಷೇಮನಿಧಿಗೋಸ್ಕರ ತಕ್ಕ ಅನುಕೂಲತೆಯನ್ನು ಮಾಡಿಯೂ ಸಾಕಷ್ಟು ಡಿವಿಡೆಂಡು ಹಂಚಲು ಸಾಧ್ಯವಾದೀತೆಂತ ಕಂಪೆನಿಯ ಡ್ಯಾರೆಕ್ಟರರು ಅಭಿಪ್ರಾಯಪಡುತ್ತಾರೆ.

ಹಿಸೆಗಳ ಬಗ್ಯೆ ಮಾಡತಕ್ಕ ಮನವಿ.

ಮನವಿ ಬಗ್ಯೆ ಛಾಪಾ ಫೋರ್ಮುಗಳು ಕ್ರಯ ವಿನಹಾ ಮೇನೆಜಿಂಗ್ ಡ್ಯಾರೆಕ್ಟರರಿಂದ ಒದಗಿಸಲ್ಪಡುವವು. ಮನವಿಗಳು ಫೀಸು ಸಮೇತ ಅವರ ಬಳಿಗೆ ಕಳುಹಿಸಲ್ಪಡತಕ್ಕದ್ದು. ಯಾದಾಸ್ತು ಮತ್ತು ಕ್ರಮಗಳ ಪುಸ್ತಕವನ್ನು ಕಂಪೆನಿಯ ಆಫೀಸಿನಲ್ಲಿ ಕೆಲಸ ಮಾಡುವ ದಿವಸಗಳಲ್ಲಿ ಯಾರೂ ನೋಡಿಕೊಳ್ಳಬಹುದು. ಹಿಸೆಗಳನ್ನು ಪಡಕೊಂಡವರು ಒಂದು ರೂಪಾಯಿ ಕೊಟ್ಟು ಅವುಗಳ ಪ್ರತಿಯನ್ನು ಸಹಾ ಕೊಂಡುಕೊಳ್ಳಬಹುದು. ಮನವಿದಾರರು ಕಂಪೆನಿಯ ಯಾದಾಸ್ತು ಮತ್ತು ಕ್ರಮಗಳನ್ನು ಓದಿನೋಡಿ ಅವುಗಳ ಅರ್ಥವನ್ನು ಸರಿಯಾಗಿ ಮಾಡಿಕೊಂಡಿದ್ದಾರೆಂತ ತಿಳಕೊಳ್ಳೋಣಾಗುವದು.

25 ಹಿಸೆಗಳನ್ನು ಪಡಕೊಂಡ ಮೆಂಬರನು ಡ್ಯಾರೆಕ್ಟರನಾಗಲಿಕ್ಕೆ ಅರ್ಹನಾಗಿರುತ್ತಾನೆ.

☞ ಎಲ್ಲಾ ಕಾಗದಪತ್ರಗಳನ್ನು ಮೇನೆಜಿಂಗ್ ಡ್ಯಾರೆಕ್ಟರರ ವಿಳಾಸಕ್ಕೆ ಕಳುಹಿಸಿಕೊಡಬೇಕು.

ಪುತ್ತೂರು,
13—3—1920.

A. GOVINDA SHENOY,
Managing Director.

[illegible]

							ಸೂರ್ಯ	
[illegible]	[illegible]	[illegible]	[illegible]	[illegible]	[illegible]	[illegible]	ಉ.	ಅಸ್ತ.
[illegible]	[illegible]	[illegible]	[illegible]	ರೇವತಿ	[illegible]	[illegible]	6 8	6.46
16	[illegible]	[illegible]	[illegible]	ಅಶ್ವಿನಿ	[illegible]	[illegible]	6 8	6.46
17	[illegible]	[illegible]	[illegible]	ಭರಣಿ	[illegible]	[illegible]	6 8	6.47
18	[illegible]	●	[illegible]	ಕೃತ್ತಿಕಾ	[illegible]	[illegible]	6 7	6.47
19	[illegible]	[illegible]	[illegible]	ರೋಹಿಣಿ	[illegible]	[illegible]	6 7	6.47
20	ಗುರು	[illegible]	[illegible]	ಮೃಗಶಿರಾ	[illegible]	[illegible]	6 7	6.48
21	ಶುಕ್ರ	[illegible]	[illegible]	ಆರ್ದ್ರಾ	[illegible]	[illegible]	6 7	6.48

ಮಂಗಳೂರಿನ ವಾಯುಸ್ಥಿತಿ.

([illegible]ನೆಯ ಮೇ)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚೆಂದರೆ	Minimum ಕಡಿಮೆ	Rainfall. ಮಳೆ ದಿನದ ಮಳೆ	ಜನವರಿ ೧ರಿಂದ
7	93—9	80—5	—	...
8	93—2	79—9	—	...
9	95—1	81—0	—	...
10	93—4	82—9	—	...
11	94—1	83—2	—	...
12	94—5	79—9	—	—
13	94—5	79—4	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ ಅಕ್ಕಿಮುಡಿ ೧ಕ್ಕೆ ...	9— 0	9— 8
ಗುಡ್ಡ ,, ,, ...	8— 4	8—12
ರಾಶಿ ಮುಡಿ ೧ಕ್ಕೆ ...	8— 0	8— 6
ಅವ್ವಲ್ ಬೆಳ್ತಿಗೆ ,, ...	10—12	11— 0
ಗುಡ್ಡ ಬೆಳ್ತಿಗೆ ,, ...	9— 4	9— 8
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	17— 0	17— 8
ಗೋಧಿ ಗೋಣಿ ೧ಕ್ಕೆ ...	25— 0	27— 8
[illegible] ಗೋಣಿ ೧ಕ್ಕೆ ...	13— 4	13—12
ಕಡಲೆ ಗೋಣಿ ೧ಕ್ಕೆ ...	17— 0	20— 0
ತೊಗರಿ ಗೋಣಿ ೧ಕ್ಕೆ ...	32— 0	25— 8
ತೊಗರಿಬೇಳೆ ಗೋಣಿ ೧ಕ್ಕೆ ...	30— 0	32— 8
ಉದ್ದು ಗೋಣಿ ೧ಕ್ಕೆ ...	17— 8	18— 0
ಹೆಸರು ಗೋಣಿ ೧ಕ್ಕೆ ...	17— 8	19— 0
ಊರು ಬೆಲ್ಲ ಖಂಡಿ ೧ಕ್ಕೆ ...	85— 0	90— 0
ಉಪ್ಪು ಗೋಣಿ ೧ಕ್ಕೆ ...	5— 2	5— 6
ಕೊಬ್ಬರಿ ಖಂಡಿ ೧ಕ್ಕೆ ...	115— 0	125— 0
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ ...	—	37— 0
ಎಳ್ಳಿಂಡಿ ಖಂಡಿ ೧ಕ್ಕೆ ...	60— 0	62— 8
ಕೊಬ್ಬರಿ ಎಣ್ಣೆ ಮಣ ೧ಕ್ಕೆ ...	9—10	10— 0
ಎಳ್ಳೆಣ್ಣೆ ಮಣ ೧ಕ್ಕೆ ...	11— 0	11— 4
[illegible] ಪೆಟ್ಟಿಗೆ ೧ಕ್ಕೆ ...	9— 4	9— 6
[illegible] ಸಕ್ಕರೆ ಮಣ ೧ಕ್ಕೆ ...	9—10	9—12
[illegible] ಕಾಯಿ ಮಣ ೧ಕ್ಕೆ ...	8— 8	9— 8
ಸಾಸಿವೆ ಮುಡಿ ೧ಕ್ಕೆ ...	10— 0	10— 8
ಕೊತ್ತಂಬರಿ ಮುಡಿ ೧ಕ್ಕೆ ...	7— 0	7— 4
[illegible] ಖಂಡಿ ೧ಕ್ಕೆ ...	235— 0	245— 0
[illegible] ಖಂಡಿ ೧ಕ್ಕೆ ...	90— 0	95— 0
[illegible] ...	95— 0	100— 0
[illegible] ಖಂಡಿ ೧ಕ್ಕೆ ...	160— 0	165— 0
[illegible] ಮಣ ೧ಕ್ಕೆ ...	25— 0	35— 0
[illegible] ಮುಡಿ ೧ಕ್ಕೆ ...	3— 8	3—12
[illegible] ಖಂಡಿ ೧ಕ್ಕೆ ...	100— 0	120— 0
[illegible] ಮಣ ೧ಕ್ಕೆ ...	24— 4	25— 0
[illegible] ಮಣ ೧ಕ್ಕೆ ...	32— 0	35— 0
[illegible] ೧ಕ್ಕೆ ...	31— 8	
[illegible] ಮಣ ೧ಕ್ಕೆ ...	24— 0	25— 0

ಗೊನೊರ್ಹ್ಯಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ರೋಗಗಳಲ್ಲಿ ದುಷ್ಟವಾದ ಶೀತನಂಥಾ ಮೇಹವ ಕರಿಯುವದಕ್ಕೆ, ಮೂತ್ರದ್ವಾರದಲ್ಲಿಯು ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕೀವು ಬರುವ್ಯ ಮೇಹವ ಹರಿಯುವದಕ್ಕೆ, ಮೂತ್ರಹೋಗುವಾಗ ಉರಿಯುವದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಗುಹ್ಯರೋಗಗಳಿಗೆ ಉತ್ತಮ ಔಷಧವು. ಇದರ ಸೇವನೆಯಿಂದ ಬಹುಕಾಲದ ಹಳೇ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ:— 2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ:— ರೂ. 1—0—0.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ವಿಳಾಸ:— ಎ. ಫೆರ್ನಾಂಡಿಸ್,

ಇಲೆಕ್ಟ್ರೊ ಹೊಮಿಯೊಪತಿ ಡಿಸ್ಪೆನ್ಸರಿ,

ಮಂಗಳೂರು.

ರಾಜವೈದ್ಯ ನಾರಾಯಣಜೀ ಕೇಶವಜೀ

ಇವರ

ವೈದ್ಯವಿದ್ಯ.

ವೈದ್ಯವಿದ್ಯ	ಈ ಪುಸ್ತಕವು ಎಲ್ಲಾ ಭಾಷೆಗಳಲ್ಲಿಯೂ ಇರುವದು. ಇದನ್ನು ಓದುವದರಿಂದ, ಶರೀರದಲ್ಲಿ ಉಂಟಾಗುವ ವ್ಯಾಧಿಗಳನ್ನು ಬಹು ಬೇಗನೆ ಗುಣ ಮಾಡಿಕೊಳ್ಳುವ ಉಪಾಯಗಳು ಮತ್ತು ಔಷಧ ಗಳು ಗೊತ್ತಾಗುವವು.	ವೈದ್ಯವಿದ್ಯ

ವೈದ್ಯವಿದ್ಯ.

ಇದು ಎಲ್ಲರಿಗೂ ಉಚಿತವಾಗಿ ಕಳುಹಿಸುವೆವು. ವಿಳಾಸವನ್ನು ತಿಳಿಸಿರಿ.

ವಿಳಾಸ:—

ರಾಜವೈದ್ಯ ನಾರಾಯಣಜೀ ಕೇಶವಜೀ,

೨೭. ಜೈನಾಬಜಾರು ರೋಡು, ಮದರಾಸು.

To Get

BEST and CHEAPEST

EVERYTHING FROM BOMBAY

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:— ನಾವು ಈ ಕೆಳಗೆ ಹೆಸರು ತೋರುವ ಕಂಪೆನಿಯನ್ನು ಸದ್ಯಾ ತೆರೆದಿರು ತ್ತೇವಾದುದರಿಂದ ಮುಂಬಯಿಯಿಂದ ಬೇಕಾಗುವ ಸಾಮಾನುಗಳನ್ನು ಅತ್ಯಲ್ಪ ಕಮಿಶನಿನ ಮೇಲೆ ಸಪ್ಲೈ ಮಾಡಿಕೊಡುತ್ತೇವೆ. ಸಾಮಾನು ತರಿಸಲಪೇಕ್ಷಿಸುವವರು ನಮ್ಮ ಶರ್ತಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದ್ದು ತಿಳಿಯಬಹುದು.

ಎಸ್ ವಿ ಸೆಕ್ಸಿ, ರೇಜರು ಮತ್ತು ದಸ್ತೂರರ ಎಂಟಿಟೀಸ್ ಎಂಬುವ ಪ್ತರದ ವಿಶ್ರಿಂಡ ನಮ್ಮಲ್ಲಿ ದೊರಕುತ್ತದೆ. ಕ್ಷಿಪ್ರದಲ್ಲಿ ಬರಹೊಳ್ಳಿರಿ.

TEL. ADDRESS:
PARTSARTHI, Bombay.

BOMBAY CANARA TRADING CO.

Jamnadas Building, Pitha Street,

FORT: BOMBAY.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ವೈದ್ಯಕಗ್ರಂಥಾಧಾರದಿಂದಲೂ ಅನೇಕ ರಾಜ ವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷ ಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷ ಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,

Kalyanakaraka Bishagmandir.

POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,

ಕಲ್ಯಾಣಕಾರಕ ಭಿಷಗ್ಮಂದಿರ, ಪೋಲ್ಸ ಪೋಲಿ, ದ. ಕ.

ಕನ್ನಡ ಭಾಷೆಯಲ್ಲಿ ಅಪೂರ್ವ ಗ್ರಂಥ!

ಹಿಂದೂ ವ್ರತವಿವೇಕ.

ಲೇಖಕ: ಸಂಸ್ಕೃತಾಧ್ಯಾಪಕ ಆತ್ಮಾರಾಮ ಶಾಸ್ತ್ರೀ, ಓಡ್ಡಮನೆ.

ಈಗಲೆ ಸಿದ್ಧವಾಗಿರುವದು! ಈಗಲೆ ಸಿದ್ಧವಾಗಿರುವದು!!

ಕ್ರಯ ಆಣೆ ೧೦.

ಹಿಂದೂ ಜನರ ಆಚರಣದಲ್ಲಿರುವ ವ್ರತ, ಹಬ್ಬ, ಜಯಂತಿ— ಇವುಗಳ ಉತ್ಪತ್ತಿ, ಆಚರಿಸುವ ಕ್ರಮ, ಮತ್ತು ಚರಿತ್ರ—ಇವೆಲ್ಲವು ಈ ಗ್ರಂಥದಲ್ಲಿ ಚಂದವಾಗಿ ಕೊಡಲ್ಪಟ್ಟಾಗಿವೆ.

ಹಿಂದೂ ವ್ರತಗಳ, ಹಬ್ಬಗಳ, ಜಯಂತಿಗಳ

ಇತಿಹಾಸವೇನು?

ಎಂಬದನ್ನು ಕನ್ನಡದಲ್ಲಿ ತಿಳಕೊಳ್ಳಲು ಬೇಕಾದ ಸಾಧನಗ್ರಂಥವು ಇದೇಯಾಗಿರುವದು

ಗ್ರಂಥದ ವಿಷಯಾನುಕ್ರಮಣಿಕೆ.

ಪ್ರಸ್ತಾವನೆ. ಚೈತ್ರಮಾಸ—ಯುಗಾದಿ ಮತ್ತು ದೋಲೋತ್ಸವ ಗಳು, ಶ್ರೀ ರಾಮನವಮಿ, ಹನುಮಜ್ಜಯಂತಿ. ವೈಶಾಖಮಾಸ—ಅಕ್ಷಯ ತೃತೀಯೆ, ಪರಶುರಾಮಜಯಂತಿ, ನೃಸಿಂಹಜಯಂತಿ ಜ್ಯೇಷ್ಠಮಾಸ—ದಶ ಹರಾವ್ರತ, ವಟಸಾವಿತ್ರಿ ಪೂರ್ಣಿಮೆ. ಆಷಾಢಮಾಸ—ಮಹಾ ಏಕಾದಶಿ ಮತ್ತು ಚತುರ್ಮಾಸ ವ್ರತ. ಶ್ರಾವಣಮಾಸ—ನಾಗಪಂಚಮಿ, ಮಂಗಳಗೌರಿ ಉಪಾಕರ್ಮ, ಶ್ರೀಕೃಷ್ಣಜನ್ಮಾಷ್ಟಮಿ, ಪಿಠೋರಿ ವ್ರತ. ಭಾದ್ರಪದಮಾಸ— ಸ್ವರ್ಣಗೌರಿ, ಹರಿತಾಲಿಕೆ, ಗಣೇಶಚತುರ್ಥಿ, ಋಷಿಪಂಚಮಿ, ಜ್ಯೇಷ್ಠಾಗೌರಿ ವಾಮನ ದ್ವಾದಶಿ, ಅನಂತಚತುರ್ದಶಿ, ಮಹಾಲಯಪಕ್ಷ. ಆಶ್ವಿನಮಾಸ— ವಿಜಯಾದಶಮಿ ದೀಪಾವಲಿ ಮಹೋತ್ಸವ. ಕಾರ್ತಿಕಮಾಸ—ದೀಪಾವಳಿಯ ಅವಶೇಷ, ವೈಕುಂಠಚತುರ್ದಶಿ, ತ್ರಿಪುರೀ ಪೌರ್ಣಿಮೆ. ಮಾರ್ಗಶೀರ್ಷಮಾಸ— ಚಂಪಾಷಷ್ಠಿ, ದತ್ತಾತ್ರೇಯ ಜಯಂತಿ. ಪೌಷಮಾಸ—ಮಕರಸಂಕ್ರಮಣ. ಮಾಘಮಾಸ—ರಥಸಪ್ತಮಿ, ಮಹಾಶಿವರಾತ್ರಿ. ಫಾಲ್ಗುನಮಾಸ—ಹೋಳಿ ಕೋತ್ಸವ. ಪರಿಶಿಷ್ಟ—ಶಂಕರಜಯಂತಿ, ರಾಮಾನುಜ ಜಯಂತಿ, ಮಧ್ವ ಜಯಂತಿ, ವಲ್ಲಭಜಯಂತಿ.

ಗ್ರಂಥಪ್ರತಿಗಳನ್ನು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿ ಕೊಳ್ಳಬಹುದು.

ಮ್ಯಾನೇಜರ್,

ಶಾರದಾ ಛಾಪಖಾನೆ,

ಎಂ. ಎಸ್. ರಾವ್ ಕಂಪೆನಿ, ಮಂಗಳೂರು.

ಅವೆನ್ಯೂರೋಡ್ ಬೆಂಗಳೂರು ಸಿಟಿ, ಇವರಲ್ಲೂ ದೊರೆಯುತ್ತದೆ.

ಈಗಲೇ ಅಚ್ಚಾಗಿ ವಿಕ್ರಿತಕ್ಕೆ ತಯಾರಾಗಿದೆ!

ಚಂದ್ರಗುಪ್ತ ಚಕ್ರವರ್ತಿ.

ಇದು ಆಂಧ್ರಭಾಷೆಯಲ್ಲಿ ವಿಜ್ಞಾನಚಂದ್ರಿಕಾ ಗ್ರಂಥಮಾಲೆ ಗಾಗಿ ಶ್ರೀ ಸ್ವಾಮಿ ವಿದ್ಯಾನಂದ ಪರಮಹಂಸರು ಬಿ. ಎ. ಇವರಿಂದ ರಚಿಸಲ್ಪಟ್ಟು ರಾ. ಅಲೇವೂರ ವೆಂಕಟರಾವ್, ಬಿ. ಎ. ಎಲ್. ಟಿ. ಇವರಿಂದ ಕನ್ನಡಭಾಷೆಗೆ ಪರಿವರ್ತಿಸಲಾಯಿತು.

ಇದನ್ನು ಮದ್ರಾಸ ಸರಕಾರದವರು ಗ್ರಾಂತೀಯ ವರ್ಗದ ಇಂಟರ ಮೀಡಿಯಟ್ ಪರೀಕ್ಷೆಗೆ ಪಾಠಪುಸ್ತಕವಾಗಿ ನೇಮಿಸಿರುವರು.

ಕ್ರಯ ಪ್ರತಿ ಒಂದಕ್ಕೆ ರೂ. 1—0—0. ಅಂಚೆ ಹಾಸಲು ಪ್ರತ್ಯೇಕ.

ಅಪೇಕ್ಷಕರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ, ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಜಗತ್ಪ್ರಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರಿಂದ ವಾತ, ಕಫ, ಜಗಳ, ಉಳುಕು ಘಾಯ, ತಲೆನೋವು, ಸೊಂಟನೋವು, ಬೆನ್ನುನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಕ್ಷಿಪ್ರದಲ್ಲಿ ಸಂಪೂರ್ಣವಾಗಿ ಗುಣ ಹೊಂದುವವು. ಬಾಟ್ಲಿ ೧ರ ಕಿಮ್ಮತು ೦—೭—೦; ಒಂದು ಡಜನು ಬಾಟ್ಲಿಗಳಿಗೆ ರೂ. ೪—೧೨—೦.

"ಗಜಕರ್ಣದ ಮುಲಾಮು"

ಗಜಕರ್ಣ, ಉಸುಬು, ಖಜ್ಜಿ, ದದ್ರು, ಹುಳಕಡ್ಡಿ, ಸೊಂಟಕಡ್ಡಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಾಗಿಸುವದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗು ವವು. ಬಾಟ್ಲಿ ೧ಕ್ಕೆ ೦—೩—೦; ಒಂದು ಡಜನಿಗೆ ರೂ. ೨—೦—೦.

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀ ಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಮೆಡಲು ದೊರೆತಿರುವವು. ಚಾಕ್ಷಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗ ಳಿಗೂ ಯೋಗ್ಯ ಕಮಿಶನು ಕೊಡಲಾಗುವದು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ಮಾಡಿರಿ.

ದಿ. ಮ್ಯಾನೇಜರ್ — ಶ್ರೀ ದೇವೀಪ್ರಸಾದ ಕಂಪೆನಿ,

ಪೋಸ್ಟ ಕಾರ್ಕಳ, ದ. ಕನ್ನಡ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾ ರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯ ಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು



ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 5—8—0.

ನಮ್ಮ ವಿಳಾಸ:— ವಿ. ಎ. ಎಸ್. ವಾಚಿ ಕಂಪೆನಿ,

ಸಾಹುಕಾರಪೇಟ, ಮದ್ರಾಸ್.

ಕನ್ನಡ ಮಾತನ್ನು

ಕಲಿಯುವ ಚಿಕ್ಕಬಾಲಕರಿಗೆ ಉಪಯುಕ್ತವಾದ

ಅಜಿ ಕಥೆಗಳು:

ಮೂರು ಕರಡಿಗಳು

ಹೇನು ಸತ್ತು ಕಾಗೆ ಬಡವಾಯಿತು

ಮೆಣಸಿನ ಕಾಳಪ್ಪ

ಅರ್ಗಣಿ ಮುದ್ದೆ

ಇಲಿಗಳ ಥಕ್ಕ ಥೈ

ಅಂಗಳ ದುಗ್ಗು

ಗುಡುಗುಡು ಗುಮ್ಮಟದೇವರು

ಸಿಗಡಿ ಯಾಕೆ ಒಣಗಲಿಲ್ಲ? ಹುಲಿಯೊ ಇಲಿಯೊ

ಈ ಎಂಟು ಪುಸ್ತಕಗಳ ಕ್ರಯ ಅಂಚೆ ಹಾಸಲು ಸೇರಿ ರೂ. 0—7—0.

ವಿ. ಪಿ. ರೂ. 0—8—0.

ಅಕ್ಷರಮಾಹಿತಿಯನ್ನುಂಟುಮಾಡುವದರಲ್ಲಿ ಸಹಕಾರಿಯಾಗಿವೆ. ಶಬ್ದಗಳ ಉಪಯೋಗ, ಅವುಗಳ ಅರ್ಥ ಮತ್ತು ವಾಕ್ಯರಚನೆ ಇವು ಗಳನ್ನು ಈ ಕಥೆಗಳ ಮೂಲಕ ಮಕ್ಕಳು ತಿಳಕೊಳ್ಳಬಹುದು. ಬಾಲ್ಯ ಪ್ರಾಯದಿಂದಲೇ ಕ್ರಮವಾಗಿ ಬೆಳೆದುಬರಬೇಕಾಗಿರುವ ವಾಚನಪ್ರೀತಿಯು ಮಕ್ಕಳಲ್ಲಿ ಈ ಚಿಕ್ಕ ಕಥೆಗಳನ್ನು ಓದು ವದರಿಂದ ಹುಟ್ಟುವದು.

ವಿಳಾಸ:— ಮ್ಯಾನೇಜರ್,

ಶಾರದಾ ಛಾಪಖಾನೆ, ಮಂಗಳೂರು.

ತಿರುಚಿ ಸುಗಂಧನಿಧಿ ಕಾರಖಾನೆ

ಅತೀಕ ನಮೂನೆಯ ವಿನಾ ಅಂಬರ್, ಜವ್ವಾಜಿ, ಪುನುಗು, ಕಸ್ತೂರಿ, ಊದುಬತ್ತಿಗಳು, ಬಿಲ್ಲೆಗಳು, ಅರಗಜ, ಪಿತ್ತಾ, ಅತ್ತರುಗಳು, ಸೆಂಟ್ಸ್‌ಗಳು, ಭೃಂಗಾ ಮಲಕ ತೈಲ, ಕುಂತಳವರ್ಧಿನಿ ತೈಲ, ಇವೇ ಮೊದಲಾದ ಸುಗಂಧ ದ್ರವ್ಯಗಳು ನಮ್ಮಲ್ಲಿ ತಯಾರಾಗಿ ಬಿಕರಿಯಾಗುತ್ತ, ಮೈಸೂರು, ಮದರಾಸು, ಬೊಂಬಾಯಿ, ಕಲ್ಕತ್ತಾ, ಡಿಲ್ಲಿ, ಪಂಜಾಬು ಮುಂತಾದ ಇಂಡಿಯಾ ದೇಶದಲ್ಲೂ ಮತ್ತು ಬರ್ಮಾ, ಸಿಲೋನ್, ಜಪಾನ್ ಮುಂತಾದ ದ್ವೀಪಾಂತರಗಳಲ್ಲೂ ನಮ್ಮ ತಯಾರಿಯ ಸುಗಂಧದ್ರವ್ಯಗಳು ಪ್ರಖ್ಯಾತಿಹೊಂದಿವೆ. ಒಂದಾವರ್ತಿ ನಮ್ಮ ಪದಾರ್ಥಗಳನ್ನು ತರಿಸಿನೋಡಿದರೆ ಅವುಗಳ ಗುಣಗಳು ತಿಳಿಯಬರುತ್ತೆ.

ರಖಂವಾರ್ ಊದುಬತ್ತಿಗಳು ೨೪ ರೂಪಾಯಿ ತೂಕವುಳ್ಳದ್ದು ಶೇರು ೧ಕ್ಕೆ

ಊದುಬತ್ತಿಗಳು.

ಸುಗಂಧ ಕಲಾನಿಧಿ ಬತ್ತಿ	ಶೇರು 1ಕ್ಕೆ		12—0—0
ಕೆಂಪುಸುಗಂಧವಲ್ಲಿ	,,	,,	8—0—0
ಪ್ರತಿಷ್ಠಾಲ್ಲ ನಿಧಿ	,,	,,	6—0—0
ನಂಬರ್ ಎ ಅಂಬರ್	,,	,,	5—0—0
,, ಬಿ ಅಂಬರ್	,,	,,	3—0—0
,, ಸಿ ಅಂಬರ್	,,	,,	2—0—0
1ನೇ ಜವ್ವಾಜಿ ಬತ್ತಿ	,,	,,	6—0—0
2ನೇ ,,	,,	,,	4—0—0
1ನೇ ಕಸ್ತೂರಿ ಬತ್ತಿ	,,	,,	3—0—0
2ನೇ ,,	,,	,,	2—0—0
1ನೇ ಪುನುಗು ಬತ್ತಿ	,,	,,	1—8—0
2ನೇ ,,	,,	,,	1—0—0

ಅವ್ವಲ್ ಹಶೀಬಿಲ್ಲೆಗಳು.

	1 ತೊಲೆ	½ತೊಲೆ	¼ತೊಲೆ
1ನೇ ನಂಬರ್	1-0-0	0-8-0	0-4-0
2ನೇ ,,	0-8-0	0-4-0	0-2-0

ಜವ್ವಾಜಿಗಂಧ ಅಥವಾ ಅರಗಜ.

ಅವಲ್ 1ನೇ ನಂಬರ್	ತೊಲ 1ಕ್ಕೆ	2—0—0
,, 2ನೇ ,,	,,	1—0—0

ಪುದುಕೋಟೆ ಕಸ್ತೂರಿ ಬಿಲ್ಲೆಗಳು.

	1ತೊಲೆ	½ತೊಲೆ	¼ತೊಲೆ
1ನೇ ನಂಬರ್	2-0-0	1-0-0	0-8-0
2ನೇ ,,	1-0-0	0-8-0	0-4-0

ಉತ್ತಮವಾದ ದಶಾಂಗ ಸೇರು 1ರ ರೂ. 1.

ತಲೆಗೆ ಹಚ್ಚುವ ಕುಂತಳವರ್ಧಿನಿ ತೈಲ ಸೀಸೆ 1ಕ್ಕೆ ರೂ. 1. ಸ್ನಾನಕ್ಕೆ ಉಪಯೋಗಿಸುವ ಭೃಂಗಾಮಲಕ ತೈಲ ಸೀಸೆ 1ಕ್ಕೆ 1—0—0.

ಎಲ್ಲಾ ಸಾಮಾನುಗಳಿಗೆ ಟಪ್ಪಾಲು ಚಾರ್ಜು ಬೇರೆ ಬೀಳುತ್ತೆ. ವ್ಯಾಪಾರಿಗಳಿಗೆ ಕಮಿಶನ್ ವಜಾಮಾಡಿ ಕಳು ಹಿಸುವೆವು. ಬೇಕಾದ ಸಾಮಾನುಗಳ ಹೆಸರು, ನಂಬರು, ಬರೆದರೆ ಅದರಂತೆ ನೋಡಿ ರವಾನಿಸುವೆವು. ನಮ್ಮ ಕಟು ಲಾಗು ಉಚಿತವಾಗಿ ರವಾನಿಸುವೆವು. ನಮಗೆ ಕಾಗದ ಬರೆಯುತಕ್ಕವರು ತಮ್ಮ ಹೆಸರು, ಗ್ರಾಮ, ಪೋಸ್ಟು, ಜಿಲ್ಲೆಯು ಸ್ಪಷ್ಟವಾಗಿ ಬರೆಯಬೇಕು.

SuganDhanidhi Office,

Melepudur, Trichinopoly.

ನಮ್ಮ ವಿಳಾಸ—ತಿರುಚಿ ಸುಗಂಧನಿಧಿ ಕಾರಖಾನೆ,

ಮೇಲೆಪುದೂರು, ತಿರುಚಿನಾಪಳ್ಳಿ.

"ವೈದ್ಯಾಮೃತ ಮಂದಿರಂ"

ನಮ್ಮ ... ವೈದ್ಯಶಾಲೆಯಲ್ಲಿ ... ಲೇಹ್ಯಗಳು, ... ಗುಳಿಗೆಗಳು, ... ಮಾತ್ರೆಗಳು ಇತ್ಯಾದಿ ... ನೇಪಾಳ ದೇಶಗಳಿಂದ ತರಿಸಿದ ಕಸ್ತೂರಿ, ... ಮುತ್ತು ಮುಂತಾದವುಗಳೂ ಸುಲಭವಾದ ... ಕೊಡುತ್ತೇವೆ. ... ರೋಗದ ಪ್ರಕೃತಿಯನ್ನು ... ಔಷಧಿಗಳನ್ನು ... ವಿ. ಪಿ. ಮೂಲಕ ಕಳುಹಿಸುವೆವು.

ವಿಳಾಸ:— ಕೆ. ಕೆ. ನಾಯರ್ ಎಂಡ್ ಬ್ರದರ್ಸ್,
ವೈದ್ಯಾಮೃತ ಮಂದಿರಂ,
ನೀಲೇಶ್ವರ, ದ. ಕನ್ನಡ.

ಹಲೋ ಮೈಸೂರು

ಊದು ಬತ್ತಿಗಳು. ಮನೋರಂಜಕ!!

... ಅತ್ತರುಗಳು:— ಗುಲಾಬ್, ಅಂಬರ್, ಹೀನಾ, ಕೇದಿಗೆ ...

ಸೆಂಟುಗಳು:— ಮಲ್ಲಿಗೆ, ಗುಲಾಬಿ, ... ಏಲಾಯಿತಿ ...

ವಿಳಾಸ:— ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪನಿ,
ಸಂಬಾರ ವ್ಯಾಪಾರಿಗಳು, ಬೆಂಗಳೂರು ಸಿಟಿ.

ರೇಷ್ಮೆ ಪಂಚೆ, ಆಟೋಮೋಹಿನಿ ಸೆಂಟ್.



ಈ ... ಶಾಯಿ ಅದ್ದದೆ ಬರೆಯುವ ಫೌಂಟನ್ ಪೇನಾ ಇದಕ್ಕೆ ... ಬಂಗಾರದ ಮುಳ್ಳು ಹಾಕಿರುತ್ತೆ. ಇದರಿಂದ ಬರೆಯುವದರಿಂದ ... ಮುತ್ತುಗಳ ಹಾಗೆ ಬರೆಯುವದು. ಈ ತಿಂಗಳ ಒಳಗೆ ... ರೇಷ್ಮೆ ಪಂಚೆ, ಆಟೋಮೋಹಿನಿ ಸೆಂಟ್ ಇವಾರ ಸಹಿತ ರೂ. ೧—೪—೦.

C. C. LINGAM & Co,
No. 2. Ramanuja Iyer Street,
SAVCARPET, *Madras.*

ನೇಟಿವ್ ಡೊಕ್ಟರ್ಸ್ ಮೂರ್ತಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು.

1. ಮಹಾಮದನ ಕಾಮೇಶ್ವರಿ ಲೇಹ:—ಬಹಳ ಶ್ರಮ ಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಘಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು.

2. ಮಹಾಜ್ವರಾಂಕುಶ (ಖಾತ್ರಿ ಗುಣ):—ಇನ್‌ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಜ್ವರ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 8.

3. ಬಾಲಗ್ರಹಗುಟಿಕೆ:—ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ. ಡಜನಿಗೆ ಆಣೆ 10.

ಇಂಡಿಯಾ ಸರಕಾರದ ಸಂದೇಶ — ತುರ್ಕಿಗೆ ಕೊಟ್ಟ ಶರ್ತಗಳಿಗೆ ಕಾರಣಗಳನ್ನು ವಿವರಿಸಿ ಇಂಡಿಯಾ ಸರಕಾರದವರು ಒಂದು ಸಂದೇಶವನ್ನು ಕೊಟ್ಟಿರುವರು. ಸ್ಥಳ ಸಂಕೋಚದ ದೆಸೆಯಿಂದ ಅದನ್ನು ಈ ಸಲ ಪ್ರಕಟಿಸಲಾಗಲಿಲ್ಲ. ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಿಕ್ಕಿರುವೆವು.

ರೈಲ್ವೆ ಅಪಘಾತ — ಬಿ ಬಿ ಸಿ ಐ ರೈಲ್ವೆಯ ಜಾವಾದ ಸ್ಟೇಶನ್ನಿನಲ್ಲಿ ಒಂದು ರೈಲು ಬಂಡಿ ಇನ್ನೊಂದಕ್ಕೆ ಬಡಿದು ಬಂಡಿಗಳು ಕಂಬಿಯಿಂದ ಜಾರಿ ೩ ಜನರು ಮಡಿದರು. ೨೭ ಮಂದಿಗೆ ಬಹಳ ಗಾಯ ತಗಲಿದೆಯಂತೆ.

ಪಂಡಿತ ಜವಾಹರಲಾಲ ನೆಹರು — ಇವರು ಮಸ್ಸೂರಿಯಲ್ಲಿರುವ ಅಫಘಾನಿಸ್ಥಾನದ ಪ್ರತಿನಿಧಿಗಳೊಡನೆ ಮಾತುಕಥೆ ನಡಿಸಬಾರದೆಂದು ಬರಹ ಮೂಲಕ ಪ್ರತಿಜ್ಞೆ ಹಾಕಿಕೊಳ್ಳಲಿಕ್ಕೆ ಒಪ್ಪದಿದ್ದರಿಂದ ಸಂಯುಕ್ತ ಪ್ರಾಂತದ ಡೆಹ್ರಾಡೂನ ಜಿಲ್ಲೆಯೊಳಗೆ ಕಾಲಿಡಬಾರದೆಂದು ಡಿಫೆನ್ಸ್ ಒಫ್ ಇಂಡಿಯಾ ಆಕ್ಟಿನ ಮೇರೆಗೆ ಸಂಯುಕ್ತ ಪ್ರಾಂತದ ಲೆಫ್ಟಿನೆಂಟ ಗವರ್ನರರು ಕಟ್ಟುಮಾಡಿರುವರು.

ದಕ್ಷಿಣ ಕನ್ನಡ

ಬೆಳಮಣ್ಣು. — ಮೊನ್ನೆ ತಾ ೧೧-೬-'೨೦ಕ್ಕೆ ರಾತ್ರಿ ೧೦ ಗಂಟೆ ಸಮಯಕ್ಕೆ ಒಂದು ಹುಲಿಯು ಬೆಳಮಣ್ಣು ಗ್ರಾಮದ ದರ್ಬೆತೋಟ ಎಂಬಲ್ಲಿಗೆ ಬಂದು ಜಗಲಿಯ ಮೇಲೆ ಮಲಗಿದ್ದ ಹುಡುಗನ ಘಾಯಮಾಡಿ ಅಲ್ಲಿಂದ ಒಂದು ಫರ್ಲಾಂಗು ದೂರ ಇರುವ ಪಾಸ್ಕಲ್ ಕಾರ್ಡೋಜರ ಮನೆಯ ಜಗಲಿಯ ಮೇಲೆ ಮಲಗಿದ್ದ ೮ ವರ್ಷ ಪ್ರಾಯದ ಸಡರಿಯವರ ಮಗನನ್ನು ಸುಮಾರು ೮೧೦ ಗಜ ದೂರ ಎಳೆಕೊಂಡು ಹೋಗುವಾಗ್ಗೆ ಹುಡುಗನು ಕೂಗಲು ಮನೆಯವರು ಎಚ್ಚರ ತಾಗಿ ಗೌಜಮಾಡಲು ಹುಲಿಯು ಹುಡುಗನನ್ನು ಬಿಟ್ಟು ಓಡಿಹೋಯಿತು. ಹುಡುಗನಿಗೆ ಚೆನ್ನಾಗಿ ಗಾಯವಾಗಿ ಕಾರ್ಕಳ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಾನೆ.

ಕಾಪು: — ನಮ್ಮೂರ ಬಂಗ್ಲೆಯಲ್ಲಿ ತಾಲೂಕುಬೋರ್ಡು ಮೆಂಬರರ ಚುನಾವಣೆ ಆಗಿಹೋಯಿತು. ಈ ಸಂದರ್ಭದಲ್ಲಿ ನಡೆದ ಸಂಗತ್ಯಾನುಸಾರಗಳನ್ನು ನೋಡುವಾಗ ಹಿಂದೆ ಭಾರತಯುದ್ಧದಲ್ಲಿ ಕೌರವರು ಅಭಿಮನ್ಯುವನ್ನು ಚಕ್ರವ್ಯೂಹದ ಕೋಟೆಯಲ್ಲಿ ಜಯಿಸಿದ ನೆನಪು ಬರಲು ಕಾರಣವಿದೆ. ಬ್ರಾಹ್ಮಣ ಜಾತಿಯ ಓಟರರ ಸಂಖ್ಯೆ ವಿಪರೀತವಾದ್ದಾಗ್ಯೂ ಇಂಗ್ಲಿಷ್ ಬಲ್ಲವರು ಡಾಕ್ಟರ್ ರಾಮಚಂದ್ರರಾಯರು ಹಿಂದೆ ಉಳಿದು ಹೋದರು. ಇದೊಂದು ತರದ ವಿಷಾದಕರ ವಿಷಯವಾದಾಗ್ಯೂ ಮಿ| ರಾ| ಎರ್ಮಾಳ ಕುಮಾರ ಅರಸು ಮಾರಂ ಹೆಗ್ಗಡೆಯು ಮತ್ತು ಮಿ| ರಾ| ರಾ| ಓರ್ವಾಡಿ ಮಂಜಯ ಹೆಗ್ಗಡೆಯರು ಅಂದಿನ ಜಯಲಕ್ಷ್ಮಿಯನ್ನು ಒಪ್ಪಿಸಿಕೊಂಡು ಜಯಭೇರಿ ಹೊಡಿಸಿಕೊಂಡು ಹೋದ ವಾರ್ತೆ ತಿಳಿಸುವರೆ ತುಂಬಾ ಸಂತೋಷವೇ.

ಇಲ್ಲಿಯೇ ಸಮೀಪ ಕೈಪುಂಜಾಲು ಚನ್ನಪ್ಪ ಮರಕಾಲ ಎಂಬವನಲ್ಲಿ ಆತನ ಮಗಳಿಗೆ ನಡೆದ ವಿವಾಹವು ಬಲು ಸೊಗಸಾಗಿತ್ತು. ನಾನಾ ಜಾತಿಯ ಅನೇಕ ಪ್ರಮುಖರೂ ಉಡುಪಿಯ ಸಬ್ ರೆಜಿಸ್ಟ್ರಾರರೂ ಅನೇಕ ವಕೀಲರೂ ಮತ್ತಲ್ಲ ಮಂಗಳೂರಿನ ಕಡೆಯ ಅನೇಕ ಮಾನ್ಯ ಗೃಹಸ್ಥರೂ ನೆರೆದಿದ್ದರು. ಜಾತಿವಿಜಾತಿಯನ್ನದೆ ಎಲ್ಲರಿಗೂ ಟೀಪಾರ್ಟಿ ಇದ್ದಿತ್ತು. ಸದರಿ ಮದುವೆಯ ಉದ್ದಿಷ್ಟ ಮಂಗಳೂರು ಮೊಗವೀರರ ಶ್ರೀ ಜ್ಞಾನೋದಯ ಸಮಾಜಕ್ಕೆ ರೂ ೫೦-೦-೦ ದಾನವಾಗಿ ಕೊಡಲ್ಪಟ್ಟಿದೆ. ಈ ಮಾದರಿ ಸರ್ವ ಮೊಗವೀರರು ಲಗ್ನಕಾಲದಲ್ಲಿ ಅನುಸರಿಸಿದ್ದಲ್ಲಿ ಸಮಾಜದವರಿಗೆ ಎಷ್ಟೋ ಉಪಕಾರವೆಂದೆನ್ನಬಹುದು. ಇದೊಂದು ಶ್ಲಾಘನೀಯವೇ. ಆ ದಿನ ಪಿಶರೀಸ್ ಡಿಪಾರ್ಟುಮೆಂಟಿನ ಅಸಿಸ್ಟೆಂಟ್ ಡೈರೆಕ್ಟರರಾದ ಮಿ| ರಾ| ರಾವ್ ಬಹದ್ದೂರ್ ಗೋವಿಂದನ್‌ರವರು ಚಿತ್ತಯಿಸಿ ಚಿಕ್ಕ ಭಾಷಣವನ್ನು ಕೊಟ್ಟದ್ದಕ್ಕೋಸ್ಕರ ತುಂಬಾ ಸಂತೋಷ ಪಡಬೇಕಾದ್ದು. ಒಟ್ಟಾರೆ ಈ ರೀತಿಯ ವಿವಾಹ ಇತ್ತಲಾಗೆ ಹಳ್ಳಿಯಲ್ಲಿ ಮೊಗವೀರರ ಜಾತಿಯಲ್ಲಿ ನಡೆದಿದ್ದಿಲ್ಲವಾಗಿ ಸರ್ವರೂ ಆನಂದಿತರು. ಅಲ್ಲದೆ ಈ ಸಂದರ್ಭ ಇಲ್ಲಿಯ ಬಾಲಕ ಬಾಲಕಿಯರ ಶಾಲೆಯ ಮಕ್ಕಳಿಗೆಲ್ಲ ಬಾಳೆಹಣ್ಣು ಸಕ್ಕರೆ ಹಂಚಲಾಯಿತು. ಇದೀಗ ನವೀನ ವಿದ್ಯಾಸುಧಾರಣೆಯ ಮಹಿಮೆಯಲ್ಲವೇ. ಶ್ರೀ ಭಗವಂತನು ರಾ| ಚನ್ನಪ್ಪನವರ ವಧೂವರರಿಗೆ ಚಿರಕಾಲ ಆಯುರಾರೋಗ್ಯಭಿವೃದ್ಧಿಯನ್ನು ಈಯಲಿ ಎಂದು ಕೋರುತ್ತೇವೆ.

ಕಲ್ಯಾಣಪುರ: — ಇಲ್ಲಿಯ ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯ ವರ್ಷಂತೋತ್ಸವವು ಈ ತಿಂಗಳ ತಾ ೨೫ನೇ ಶುಕ್ರವಾರ ಸಾಯಂಕಾಲ ೫ ಗಂಟೆಗೆ ನಡಿಯುವುದು. ಈ ಸಮಾರಂಭದ ಅಧ್ಯಕ್ಷಸ್ಥಾನವನ್ನು ಮಿ| ರಾ| ಅಪ್ಪಾವರ ಬಾಲಕೃಷ್ಣ ಶೆಟ್ಟರು ವಹಿಸಿಕೊಳ್ಳುವರು.

ತುರ್ಕಿಗೆ ಕೊಟ್ಟ ಶರ್ತಗಳು.

ಈ ಶರ್ತಗಳ ಮೇರೆಗೆ ತುರ್ಕಿಗೆ ಯುರೋಪಿನಲ್ಲಿ ಕೋನಸ್ಟಾಂಟಿನೋಪಲು ಮತ್ತು ಸುತ್ತಲಿರುವ ಸ್ವಲ್ಪ ಪ್ರದೇಶ (ಚಟಾಲ್ಜಾ ಲಾಯ್ನಸ್ ವರೆಗೆ) ಮಾತ್ರ ಇರುವುದು. ಡಾರ್ಡನೆಲ್ಸ ಮತ್ತು ಬೋಸ್ಪರಸ ಜಲಸಂಧಿಗಳ ಮೇಲಿನ ಅಧಿಕಾರವು ಬೇರೆ ಬೇರೆ ಜನಾಂಗಗಳಿಂದ ನೇಮಿಸಲ್ಪಡುವ ಒಂದು ಕಮಿಶನಿನ ಕೈಯಲ್ಲಿರುವದು. ಆಡ್ರಿಯನೋಪಲು ಮತ್ತು ಸುತ್ತಲಿರುವ ಥ್ರೇಸ್ ಪ್ರಾಂತವು (ಮೇಲೆ ಹಿಂಗಡಿಸಿದ ಅಂಶ ಹೊರತು) ಗ್ರೀಸ ರಾಜ್ಯಕ್ಕೆ ಸೇರುವುದು. ಕುರ್ದಿಸ್ಥಾನ, ಹೆಜ್ಜಾಜ, ಅರ್ಮೇನಿಯ, ಇವುಗಳಿಗೆ ಸಂಪೂರ್ಣ ಸ್ವಾತಂತ್ರ್ಯ, ಸಿರಿಯ, ಮೆಸೊಪೊಟೇಮಿಯ, ಪೆಲೆಸ್ತೀನ ಇವುಗಳು ಸಂಪೂರ್ಣ ಸ್ವಾತಂತ್ರ್ಯ ಹೊಂದುವ ವರೆಗೆ ಸಿರಿಯಕ್ಕೆ ಫ್ರಾನ್ಸ್ ಉಳಿದ ಎರಡು ಪ್ರದೇಶಗಳಿಗೆ ಬ್ರಿಟನ್ನ್ ಊರುಗೋಲಾಗಿದ್ದು, ಈ ಊರುಗೋಲುಗಳ ಸಹಾಯದಿಂದ ಆ ಪ್ರದೇಶಗಳು ಸ್ವಾತಂತ್ರ್ಯದ ಅಡಿಯನ್ನಿಡಲು ಕಲಿಯಬೇಕು. ಪೆಲೆಸ್ತೀನವು ಯೆಹೂದ್ಯ ಜನಾಂಗದವರ ಕಾಂಕ್ಷೆಯ ಮೇರೆಗೆ ಅವರ ರಾಜ್ಯವಾಗಬೇಕು. ಸ್ಮರ್ನಾ ತುರ್ಕಿಯ ಅಧಿರಾಜತ್ವವನ್ನು ಒಪ್ಪಿಕೊಂಡು ಗ್ರೀಸರ ಆಡಳಿತೆಯಲ್ಲಿರಬೇಕಾಗಿದೆ. ತುರ್ಕಿಗೆ ವಹಿಸಿದ ರಾಜ್ಯದಲ್ಲಿ ಮುಸಲ್ಮಾನರಲ್ಲದ ಪ್ರಜೆಗಳ ಧರ್ಮರಕ್ಷಣೆಯಾಗಬೇಕು.

ತುರ್ಕಿಯ ಸೈನ್ಯವು ೫೦,೦೦೦ಕ್ಕೆ ಮೀರಬಾರದು. ನೌಕಾ ಪಡೆಯನ್ನು ತೀರಾ ಮುರಿದು ಬಿಡಬೇಕು. ವಿಮಾನ ಪಡೆಯ ಸ್ಥಿತಿಯೂ ಹಾಗೆಯೇ. ಗೆಲ್ಲಿಪೋಲಿಯಲ್ಲಿ ಸತ್ತುಬಿದ್ದವರ ಸಮಾಧಿಗಳನ್ನು ಹಾಳುಮಾಡದಂತೆಯೂ ಯುದ್ಧ ಕೈದಿಗಳನ್ನು ಬಿಟ್ಟುಕೊಡ ಬೇಕೆಂತಲೂ ಶರ್ತಗಳೂ ಇವೆ.

ಯುದ್ಧ ಧರ್ಮಕ್ಕೆ ವಿರೋಧವಾಗಿ ವರ್ತಿಸಿದ ತುರ್ಕಿಯ ನಾಯಕರನ್ನು ವಿಚಾರಣೆಮಾಡುವುದಕ್ಕೆ ಮಿತ್ರಪಕ್ಷದ ಒಂದು ಕೋರ್ಟು ಏರ್ಪಡುವುದು. ಸಂಧಿಶರ್ತಕ್ಕೆ ಸಹಿಮಾಡಿದ ನಂತರ ಅದನ್ನು ಜಾರಿ ನಡಿಸುವುದಕ್ಕೆ ತಪ್ಪದ ಹಾಗೆ ನೋಡಿಕೊಳ್ಳುವ ಬಗ್ಗೆ ಮಿತ್ರಪಕ್ಷದವರು ತುರ್ಕಿಯಲ್ಲಿ ಇರಗೊಡಿಸುವ ಸೈನ್ಯದ ಖರ್ಚನ್ನು, ೧೯೧೪ನೆ ಒಕ್ಟೋಬರ ೩೦ರಿಂದ ತುರ್ಕಿಯಲ್ಲಿ ಇದ್ದ ಮಿತ್ರಪಕ್ಷದ ಸೈನ್ಯದ ಖರ್ಚನ್ನೂ, ಯುದ್ಧಕಾಲದಲ್ಲಿ ಮಿತ್ರಪಕ್ಷದ ಪ್ರಜೆಗಳಿಗೆ ತುರ್ಕಿಯ ಕೋಪಮುದ್ದಿನ ಪೆಟ್ಟಿನಿಂದ ಉಂಟಾದ ವಸ್ತುಒಡವೆಯ ನಷ್ಟವನ್ನೂ ತುರ್ಕಿಯು ತೆರಬೇಕು. ಇದನ್ನು ನಿರ್ಣಯಿಸುವುದಕ್ಕೆ ಒಂದು ಕಮಿಟಿಯು ಇರುವುದು.

ಜರ್ಮನರಿಂದ ತುರ್ಕಿಯ ಪ್ರದೇಶದಲ್ಲಿ ಮಾಡಲ್ಪಟ್ಟ ರೈಲ್ವೆಯನ್ನು ತುರ್ಕಿಯವರು ಹಣಕೊಟ್ಟು ತಮ್ಮ ವಶಕ್ಕೆ ಇಟ್ಟುಕೊಳ್ಳುವುದಲ್ಲದೆ ಜರ್ಮನ, ಒಸ್ಟ್ರಿಯಾ, ಹಂಗೇರಿ, ಬಲ್ಗೇರಿಯದ ಪ್ರಜೆಗಳಿಗೆ ತುರ್ಕಿಯು ಯುದ್ಧದ ಮುಂಚೆ ತನ್ನ ರಾಜ್ಯದಲ್ಲಿ ಇರಲಿಕ್ಕೆ ಬಿಟ್ಟು ಸವರಿಯವರು ಅಲ್ಲಿ ಮಾಡಿಕೊಂಡಿರುವ ಆಸ್ತಿಪಾಸ್ತಿಗಳನ್ನೆಲ್ಲ ತುರ್ಕಿಯು ಹಿಂದಕ್ಕೆ ಆಯಾಯ ಜನಾಂಗದಿಂದ ಪಡೆದು ಇನ್ನು ಮುಂದೆ ಆ ರೀತಿ ಆಸ್ತಿ ಪಡೆಯದ ಹಾಗೆ ತುರ್ಕಿಯ ಅಧಿಕಾರಿಗಳು ನೋಡಿಕೊಳ್ಳತಕ್ಕದ್ದು. ಇವಲ್ಲದೆ ಇನ್ನೂ ಕೆಲವು ಚಿಲ್ಲರೆ ಶರ್ತಗಳಿವೆ. ಹೀಗೆ ಅಷ್ಟಬಂಧಗಳು ಇರುವ ಶರ್ತಗಳ ಠರಾವಣೆಯನ್ನು ಮೇ ೧೧ನೇ ತಾರೀಕಿಗೆ ಫ್ರಾನ್ಸಿನ ಮುಖ್ಯ ಮಂತ್ರಿ ಮಿ| ಮಿಲ್ಲರೆಂಡರ ಸಮ್ಮುಖದಲ್ಲಿ ತುರ್ಕಿಯ ರಾಯಭಾರಿಗಳಿಗೆ ಒಪ್ಪಿಸಿ ಒಂದು ತಿಂಗಳೊಳಗೆ ಅದಕ್ಕಿರುವ ಆಕ್ಷೇಪಗಳನ್ನು ತಿಳಿಸಬೇಕಾಗಿ ಅವರಿಗೆ ತಿಳಿಸಲಾಯಿತು. ತುರ್ಕಿಯ ಪರವಾಗಿ ಈ ಪತ್ರವನ್ನು ಸ್ವೀಕರಿಸುವಾಗ ಟೆವ್‌ಫಿಕ್‌ಪಾಶಾ ಇವರಿಗೆ ಮನಸ್ಸಿನಲ್ಲಿರುವ ಕಳವಳದಿಂದ ಕೈ ನಡುಗುತಿತ್ತು. ಅದು ತಮ್ಮ ಕೈಗೆ ಬಂದಿದೆ ಅದನ್ನು ಕುರಿತು ವಿಚಾರ ಮಾಡುತ್ತೇವೆ ಎಂದು ಹೇಳುವಾಗ ಸರಿಯಾಗಿ ಬಾಯಿಬಾರದು. ಈ ಸ್ಥಿತಿಯಲ್ಲಿ ಆ ಠರಾವಣೆಯನ್ನು ಎತ್ತಿಕೊಂಡು ಅಂದಿನ ಸಭೆಯು ಮುಕ್ತಾಯವಾಯಿತು ಎಂದು ತಂತಿ ವರ್ತಮಾನಗಳು ಇವೆ.

ವೈಸರಾಯಿಗಳವರ ಸಂದೇಶ.

(ಸಂಧಿ ಶರ್ತಗಳು)

ಹಿಂದೀ ಮುಸಲ್ಮಾನರಿಗೆ ಕಳುಹಿಸಿದ ಸಂದೇಶವನ್ನು ಜನತೆಯ ತಿಳುವಳಿಕೆಗಾಗಿ ಬಹುಮಾನ್ಯ ವೈಸರಾಯಿಗಳವರು ಇಶ್ತಿಹಾರು ಮೂಲಕ ಪ್ರಕಟಿಸಿರುವರು.

"ತುರ್ಕಿಯೊಡನೆ ಮಾಡಲ್ಪಡುವ ಸಂಧಾನದ ಕರಾರಿನ ರಚನೆಯನ್ನು ಲೋಕದ ತಿಳುವಳಿಕೆ ಬಗ್ಗೆ ಇನ್ನೊಂದು ಇಶ್ತಿಹಾರಿನಲ್ಲಿ ಪ್ರಕಟಿಸಿರುತ್ತದೆ. ಎಲ್ಲಾ ದೇಶಗಳ ಮುಸಲ್ಮಾನರ ಅಹವಾಲಿಗಳನ್ನು ಚೆನ್ನಾಗಿ ಗಮನ ಕೊಟ್ಟು ವಿಚಾರ ನಡೆಸಿ ಈ ಶರ್ತಗಳನ್ನು ತಯಾರುಮಾಡಿದ್ದಾಗಿರುತ್ತದೆ. ಈ ಶರ್ತಗಳನ್ನು ಈ ರೀತಿಯಾಗಿ ರಚಾಯಿಸುವಾಗ ಮಿತ್ರಪಕ್ಷದ ಮಂತ್ರಿಸಭೆಯವರು ನಮ್ಮ ಬಾದಶಹರ ಮುಸಲ್ಮಾನ ಪ್ರಜೆಗಳ ಇದೆಯಿಂದ ಬಂದ ಮನವಿಗೆ ತನ್ನ ಸಾಧ್ಯವಿದ್ದಷ್ಟು ಲಕ್ಷ್ಯಕೊಟ್ಟಿದ್ದಾರೆ ಎಂದು ನಾವು ಭರವಸೆ ಹೇಳುವೆವು. ಕರಾರಿನ ಶರ್ತಗಳ ಘೋಷವಾರಿಯೊಂದಿಗೆ ಮುಖ್ಯ ಶರ್ತಗಳ ಕಾರಣಗಳನ್ನು ಕೊಡುವ ಒಂದು ಸೂಚನಾ ಪತ್ರವನ್ನು ಮಂತ್ರಿ ಸರಕಾರದವರು ಈಗಲೇ ಪ್ರಕಟಿಸಿರುವರು. ಬ್ರಿಟನ್ನ್ ಮತ್ತು ಅದರ ಮಿತ್ರ ರಾಜ್ಯಗಳೊಂದಿಗೆ ಮೊನ್ನೆ ವರೆಗೆ ಯುದ್ಧದಲ್ಲಿ ಕಾದಾಡುತ್ತಿದ್ದ ಇತರ ಶತ್ರುರಾಜ್ಯಗಳೊಡನೆ ಶರ್ತಗಳನ್ನು ತಯಾರಿಸುವಾಗ ಯಾವ ಉಚ್ಚ ತತ್ವಗಳನ್ನು ಕಣ್ಣೆದುರಿಗೆ ಮಿತ್ರಪಕ್ಷದವರು ಇಟ್ಟುಕೊಂಡಿದ್ದಾರೋ ಆ ಮಹತ್ವದ ತತ್ವಗಳನ್ನು ಅನುಸರಿಸಿಯೇ ಈ ಶರ್ತಗಳೂ ಇವೆ. ಹಾಗಿದ್ದರೂ ಈ ಕರಾರಿನ ಕೆಲವು ಶರ್ತಗಳು ಮುಸಲ್ಮಾನರ ಎದೆಗೆ ಶೂಲವಾಗಿದಂತಾಗುವವೆಂದು ನಮಗೆ ಸಂಶಯವಿದೆ. ಶರ್ತಗಳನ್ನು ಪ್ರಕಟಿಸಲಿಕ್ಕೆ ಆದ ಕಾಲವಿಳಂಬವು ಕಾರಣಾಂತರಗಳಿಂದ ಆಗಿದ್ದರೂ ಒಂದ ವರ್ಷದಿಂದಲೂ ನಿಮ್ಮ ಮನಸ್ಸಿನಲ್ಲಿ ಕಳವಳಕ್ಕೆ ಕಾರಣವಾಗಿತ್ತು. ಅದನ್ನು ನೋಡಿ ನಮಗೂ ವ್ಯಾಕುಲವಿದೆ. ಈ ರೀತಿ ಹಿಲೋಲಗಳು ವ್ಯಾಪಿಸಿರುವ ನಿಮ್ಮ ಹೃದಯದಲ್ಲಿ ಉತ್ತೇಜಕವಾದ ವಾತ್ಸಲ್ಯಪೂರ್ವಕವಾದ ಈ ಸಂದೇಶವು ಶಾಂತಿಯನ್ನೂ ಉಂಟುಮಾಡಿ ಸಾಮ್ರಾಜ್ಯದ ಕಡೆಗೆ ಎಲ್ಲಾ ಪ್ರಜೆಗಳ ಭಕ್ತಿಯ ಕವಚವು ಅಗತ್ಯವಾಗಿದ್ದಾಗ ನಿಮ್ಮಲ್ಲಿ ಈ ಸಂದೇಶವು ಧೀರತನವನ್ನು ಬಿಗಿಯುವುದು ಎಂದು ನಂಬಿ ನಾವು ಈ ಸಂದೇಶವನ್ನು ನಿರೂಪಿಸಿರುವೆವು. ಮಿತ್ರಪಕ್ಷದವರು ಯಾವ ನ್ಯಾಯನೀತಿಯ ಪರಿಪಾಲನೆಗಾಗಿ ಮತ್ತು ಲೋಕರಕ್ಷಣೆಗಾಗಿ ಯುದ್ಧದಲ್ಲಿ ಕೈಹಾಕಿ ಜಯಶೀಲರಾದರೂ ಅಂಥಾ ಉತ್ತಮ ಧ್ಯೇಯವನ್ನು ಕೊನೆಗಾಣುವುದಕ್ಕೆ ನೀವು ಬಾದಶಹರ ಮತ್ತು ಸಾಮ್ರಾಜ್ಯದ ಪರವಾಗಿ ತನುಮನ ಧನಗಳನ್ನು ಭಕ್ತಿಪೂರ್ವಕವಾಗಿ ಅರ್ಪಿಸಿದ್ದಿರಿ. ನೀವು ಕೂಡಾ ಒಂದು ಅಂಗವಾಗಿರುವ ಈ ಬ್ರಿಟಿಷ ಸಾಮ್ರಾಜ್ಯವು ಅದೇ ಉತ್ಕೃಷ್ಟ ಧ್ಯೇಯಗಳ ಬಲವಾದ ಅಸ್ತಿವಾರದ ಮೇಲೆ ಎದ್ದಿದೆ. ಬ್ರಿಟಿಷ ಆಳ್ವಿಕೆಯಲ್ಲಿ ಮುಸಲ್ಮಾನರ ಧರ್ಮ ಸ್ವತಂತ್ರಕ್ಕೆ ಲವಮಾತ್ರ ವಿಘಾತಿಯುಂಟಾಗಲಿಲ್ಲ. ಇನ್ನು ಕ್ಷೇತ್ರದಲ್ಲಿ ರಾಜಕೀಯ ಸುಧಾರಣೆ, ಸಾಂಪತ್ತಿಕ ಅಭಿವೃದ್ಧಿ ಉಂಟಾಗಿ ಹಿಂದು ಸ್ಥಾನವು ಉನ್ನತಿಯ ಶಿಖರದ ಕಡೆಗೆ ದೃಷ್ಟಿಸುವ ಸಮಯ ಬಂದಿದೆ. ಯುದ್ಧದ ಮೊದಲು ತುರ್ಕಿಗೂ ಬ್ರಿಟನ್ನಿಗೂ ಇದ್ದ ಸ್ನೇಹಸಂಬಂಧವು ಸುಷುಪ್ತಿ ಅವಸ್ಥೆಯಲ್ಲಿತ್ತು. ಆದರೆ ಈ ಶರ್ತಗಳು ಮಂಜೂರಾದ ನಂತರ ಅದು ಪುನಃ ಸಚೇತನವಾಗಿಯೂ ಬಲವಾಗಿಯೂ ಎದ್ದು ತುರ್ಕಿಯ ರಾಜ್ಯವು ಮುಸಲ್ಮಾನ ಧರ್ಮದ ಧ್ವಜಸ್ತಂಭವಾಗುವದು ಎಂದು ಸಂಪೂರ್ಣ ನಂಬಿದ್ದೇವೆ. ಇದೇ ಭಾವನೆಯನ್ನು ಮನಸ್ಸಿನಲ್ಲಿ ತಂದುಕೊಂಡು ಸಂಧಿಶರ್ತಗಳನ್ನು ಮುಸಲ್ಮಾನರು ಧೀರತನದಿಂದಲೂ ತಾಳ್ಮೆಯಿಂದಲೂ ಸ್ವೀಕರಿಸುವುದಲ್ಲದೆ ಈ ವರೆಗೆ ನಿಶ್ಚಲವಾಗಿರುವ ನಿಮ್ಮ ರಾಜಭಕ್ತಿಯ ಮೇಲೆ ಶಾಂತವಾಗಿ ಕಾಪಾಡುವಂತೆ ಯತ್ನಿಸುವಿರೆಂದು ನಾವು ಭರವಸೆ ಇಟ್ಟಿದ್ದೇವೆ. [illegible]

[illegible]

ಸ್ವದೇಶಾಭಿಮಾನಿ.

ಶಕ ೧೮೪೧ ಜ್ಯೇಷ್ಠ ಶು| ೪ ಶುಕ್ರವಾರ

ಧಾರವಾಡದ ಕರ್ನಾಟಕ ಪರಿಷತ್ತು.

ಧಾರವಾಡದಲ್ಲಿ ರಾಜಕೀಯ ಪರಿಷತ್ತಿನ ೪ ದಿವಸಗಳು ಬಹು ಸಂತೋಷದಲ್ಲಿ ಸಾಗಿದವು ಪೂರ್ವಕಾಲದಲ್ಲಿ ದೇಶದ ಆಯಾ ಭಾಗದಲ್ಲಿ ಕ್ಷೇತ್ರಗಳು ಇರುತಿದ್ದು ಅಲ್ಲಿ ಒಂದೊಂದು ವಿಶಿಷ್ಟ ಪ್ರಸಂಗದಲ್ಲಿ ಎಲ್ಲ ಜನರು ಸೇರುತ್ತಿದ್ದರು ಆಗ ಅನೇಕ ಚರ್ಚೆಗಳು ಬರುತಿದ್ದವು. ತೀರ್ಥಯಾತ್ರೆಯ ಈ ಪ್ರಸಂಗವಲ್ಲದೆ, ಮೊದಲು ಯಜ್ಞಗಳು ಆಗುವಾಗ ಆ ಪ್ರಸಂಗದಲ್ಲೂ ಕೂಡ ದೇಶದೇಶಾಂತರಗಳಿಂದ ಅನೇಕ ಧರ್ಮಬಕ್ತರು ಬರುತಿದ್ದ ಕಾರಣ ಅಲ್ಲಿ ಮಹತ್ವದ ಎಷ್ಟೋ ವಿಷಯಗಳ ಉದ್ಘಾಟನವು ಆಗುತಿತ್ತು ಪರಂತು ಈಗಿನ ಕಾಲದಲ್ಲಿ ಆ ಹಳೆ ಸಂಸ್ಥೆಗಳು ಹೋದವು ಹಳೆ ಸಂಸ್ಥೆಗಳು ದೇಶಕಾಲದ ಪರಿಸ್ಥಿತಿಯಿಂದ ನಷ್ಟವಾದರೂ ಅಥವಾ ಜೀರ್ಣವಾದರೂ ಬೇರೆಬೇರೆ ವಿಷಯಗಳ ಚರ್ಚೆಯು ಯಾವುದು ನಡೆಯಬೇಕಾಗಿರುತ್ತದೂ ಅದರ ಆವಶ್ಯಕತೆ ಏನಾದರೂ ಕಡಿಮೆಯಾಗಿರಲಿಲ್ಲ ಮಾತ್ರವಲ್ಲ, ಈಗಿನ ರಾಜಕೀಯ ಪರಿಸ್ಥಿತಿಯು ಭಿನ್ನವಾಗಿದ್ದದರಿಂದ ಈ ಪರಿಸ್ಥಿತಿಯು ಅನೇಕ ಚರ್ಚೆಗಳನ್ನು ಆಮಂತ್ರಿಸಹತ್ತಿತೆಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ ಆಗ ಆಧುನಿಕ ಕಾಲಕ್ಕೆ ಅನುರೂಪವಾಗುವಂತೆ ಆಧುನಿಕ ಸಂಸ್ಥೆಗಳನ್ನು ನಿರ್ಮಿಸಿ ಈಗಿನ ರಾಜಕೀಯ, ಸಾಮಾಜಿಕ ಮೊದಲಾದ ವಿಷಯಗಳಿಗೆ ಚಾಲನೆಯನ್ನು ಹಿಂದೀ ಜನರಿಗೆ ಕೊಡಬೇಕಾಗಿ ಬಂತು ಮತ್ತು ಇಂಥ ಪ್ರಯತ್ನಗಳ ದೃಶ್ಯ ಫಲಗಳೆಂದರೆ, ರಾಷ್ಟ್ರೀಯ ಸಭೆ, ಸಾಮಾಜಿಕ ಪರಿಷತ್ತು ಔದ್ಯೋಗಿಕ ಪರಿಷತ್ತು ಮೊದಲಾದ ಅನೇಕ ಸಂಸ್ಥೆಗಳಾಗಿರುತ್ತವೆ ಎಂದ ಮೇಲೆ ಮೊನ್ನೆ ಧಾರವಾಡದಲ್ಲಿ ಜರಗಿದ ೬—೭ ಸಾವಿರ ಜನರಿಂದ ಒಡಗೂಡಿದ ಕರ್ನಾಟಕ ಪರಿಷತ್ತಿನ ೩—೪ ದಿವಸಗಳಲ್ಲಿ ಯಾವ ವಿಷಯಗಳು ಚರ್ಚೆಗೆ ಬಂದವು ಎಂಬುದನ್ನು ವಾಚಕರು ಸ್ವಯಮೇವ ಊಹಿಸಬಹುದಾಗಿದೆ. ಪರಿಷತ್ತಿನಲ್ಲಿ ಮುಖ್ಯವಾಗಿ ಯಾವ ವಿಷಯಗಳು ಚರ್ಚೆಗೆ ಬಂದಿದ್ದವೊ ಅವುಗಳನ್ನು ನಾವು ಕೆಳಗೆ ಕ್ರಮಶಃ ವಿವೇಚಿಸುವೆವು. ಪರಂತು ರಾಜಕೀಯ ವಿಷಯಗಳ ಮಹತ್ವದ ಚರ್ಚೆಯಿಂದ ಆನಂದವು ಎಲ್ಲರಿಗೆ ಸಮಪ್ರಮಾಣದಿಂದ ಉಂಟಾಗುವುದು ಕೊಂಚ ಅಸಾಧ್ಯವಾಗುತ್ತದೆಂದು ಗ್ರಹಿಸಿದರೂ ಪರಿಷತ್ತಿನ ಉದ್ದೇಶದಿಂದ ಏಕತ್ರ ನೆರೆದ ದೇಶಭಕ್ತರಿಗೆ ಪರಸ್ಪರ ಪರಿಚಯದ ಲಾಭವನ್ನು ಹೊಂದಲು ಯಾವ ಪ್ರತ್ಯವಾಯವೂ ಇರುವುದಿಲ್ಲ. ಕರ್ನಾಟಕ ಪರಿಷತ್ತಿನಿಂದಲಾದರೂ ಇದೇ ಮುಖ್ಯ ಬೋಧವನ್ನು ಎಲ್ಲರು ತೆಗೆದುಕೊಳ್ಳುವ ಹಾಗಿದೆ ಕರ್ನಾಟಕದ ಯಾವ ಯಾವ ಮೂಲೆಯಲ್ಲಿರುವ ಜನರು ವರ್ಷಕ್ಕೊಮ್ಮೆಯಾದರೂ ಏಕತ್ರ ನೆರೆಯುವುದರಿಂದ ದೃಢ ಪರಿಚಯವುಂಟಾಗಿ ಕರ್ನಾಟಕದ ಏಕೀಕರಣಕ್ಕೆ ಮುಖ್ಯ ಸಹಾಯವಾಗುತ್ತದೆ ಮತ್ತು ಇದೇ ಉದ್ದೇಶದಿಂದ ಕರ್ನಾಟಕ ಪರಿಷತ್ತು ಸೇರಿತ್ತು ಅರ್ಥಾತ್ ಕರ್ನಾಟಕ ಪರಿಷತ್ತಿನಲ್ಲಿ

ಏಕೀಕರಣದ ಪ್ರಶ್ನೆಯು

ಅಧ್ಯಕ್ಷರ ಭಾಷಣದಲ್ಲಾಗಲಿ, ಸಭೆಯ ಮುಂದೆ ಪ್ರಮುಖವಾಗಿ ಬಂದ ಠರಾವುಗಳಲ್ಲಿಯಾಗಲಿ ಮುಖ್ಯಸ್ಥಾನ ಬಂದದ್ದಾದರೆ ಅದರಲ್ಲಿ ಆಶ್ಚರ್ಯವಿಲ್ಲ. ಪರಿಷತ್ತಿನ ಅಧ್ಯಕ್ಷರಾದ ದಿವಾನ ಬಹದ್ದೂರ ವ್ಹಿ. ಪಿ. ಮಾಧವರಾಯರು ತಮ್ಮ ಭಾಷಣದಲ್ಲಿ ಕನ್ನಡ ಪ್ರಾಂತವನ್ನು [illegible] ಕನ್ನಡ ನಾಡಿನ ಅಧ್ಯುದಯ ಉಂಟಾಗಲಿಕ್ಕಿಲ್ಲವೆಂಬುದನ್ನು ಸರಿಯಾಗಿ ತಿಳಿಸಿದ್ದಾರೆ [illegible] ಕರ್ನಾಟಕ ಪ್ರಾಂತವು ಈಗ ಅವ್ಯವಸ್ಥಿತವಾಗಿ ಹೋಗಿದೆ. ಮುಂಬಯಿಯಲ್ಲಿ ಕೆಲವು ಭಾಗ, ಮದ್ರಾಸಿನಲ್ಲಿ ಕೆಲವು, ಮೈಸೂರು ಸಂಸ್ಥಾನ, ಹೈದರಾಬಾದಿನಲ್ಲಿ ಕೆಲವು, ಹಾಗು ದಕ್ಷಿಣ ಮರಾಠಾ ಸಂಸ್ಥಾನಗಳು. ಈ ಮೇರೆಗೆ ಕರ್ನಾಟಕವು ವಿಭಕ್ತವಾಗಿದ್ದರೂ ಬ್ರಿಟಿಷ ಕರ್ನಾಟಕವನ್ನು ಏಕೀಕರಿಸಿ ಆ ಒಂದು ಪ್ರಾಂತಕ್ಕೆ ಧಾರವಾಡವು ಮುಖ್ಯ ರಾಜಧಾನಿ ಮತ್ತು ಮಡಿಕೇರಿಯು ಸೆಕೆಕಾಲದ ರಾಜಧಾನಿ ಈ ರೀತಿಯಿಂದ ವ್ಯವಸ್ಥೆಯನ್ನು ಮಾಡಬಹುದೆಂದು ಅಧ್ಯಕ್ಷರು ಸೂಚಿಸಿರುವರು ಕರ್ನಾಟಕ ಪ್ರಾಂತವು ಒಟ್ಟಿಗೆ ಸೇರಬೇಕೆಂಬುದು ಏಕಮತವಾಗಿದ್ದರೂ ಮುಖ್ಯ ಪಟ್ಟಣವು ಯಾವುದು ಎಂಬದನ್ನು ನಿರ್ಣಯಿಸುವುದು ಈ ಹೊತ್ತೇ ಸಾಧ್ಯವಿಲ್ಲ. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸೂಚಿಸಿದ ಮೇರೆಗೆ ಇಂಥಿಂಥ ಪಟ್ಟಣವು ರಾಜಧಾನಿಯಾಗಬೇಕೆಂಬ ಅಂಶವು ಠರಾವಿನ ರೂಪದಲ್ಲಿ ಒಂದು ವೇಳೆ ಬಂದಿದ್ದಾದರೆ ಆ ಠರಾವು ಧಾರವಾಡಕರರಿಗೆ ಯದ್ಯಪಿ ಸಮ್ಮತವಾದರೂ ಇತರ ಹಲವು ಪ್ರತಿನಿಧಿಗಳಾದರೂ ಅದನ್ನು ಉಪರೋಧಿಸದೆ ಬಿಡುತ್ತಿರಲಿಲ್ಲ ಇರಲಿ ಮೊಂಟೆಗ್ಯೂ ಸುಧಾರಣೆಯ ಕಾನೂನಿನ ಮೇರೆಗೆ ಪ್ರಸ್ಥಾಪಿತವಾಗಿರತಕ್ಕದ್ದ ಕಾಯಿದೆ ಕೌನ್ಸಿಲುಗಳ ವ್ಯವಹಾರವೆಲ್ಲವು ದೇಶೀಯ ಭಾಷೆಯಲ್ಲಿ ನಡೆಯುವುದು ಯುಕ್ತವಾಗಿರುವುದರಿಂದಲೂ ಆ ಕಾನೂನಿನ ಮೇರೆಗೆ ಕೌನ್ಸಿಲಿನ ಸಭಾಸದನಾಗುವವನು ಇಂಗ್ಲಿಷ್ ಅರಿತವನೆ ಇರಬೇಕೆಂದು ನಿರ್ಬಂಧನವಿಲ್ಲದ್ದರಿಂದಲೂ ಇನ್ನು ಮುಂದಿನ ಕೌನ್ಸಿಲುಗಳಲ್ಲಿ ದೇಶೀಯ ಭಾಷೆಗಳ ಪ್ರವೇಶ ಉಂಟಾಗುವ ಸುಸಮಯವು ಬಂದು ಒದಗಿದೆ ಇಂಥ ಸಂದರ್ಭದಲ್ಲಿ ಕರ್ನಾಟಕವು ಏಕೀಕರಣ ಹೊಂದಿ ಗವರ್ನರನ ಕೈಕೆಳಗೆ ತನ್ನ ಸ್ವತಂತ್ರ ಕಾಯಿದೆ ಕೌನ್ಸಿಲನ್ನು ತೆರೆದುಕೊಂಡರೆ ಆ ದೇಶದ ಹಿತವು ಬೇಗನೆ ಸುಸಾಧ್ಯವಾದೀತು ಎಂಬುದಾಗಿ ಅಧ್ಯಕ್ಷರು ಅಪ್ಪಣೆ ಕೊಡಿಸಿದ್ದು ನಿಜವಾಗಿ ವಿಚಾರಣೀಯವಾಗಿದೆ ಅಧ್ಯಕ್ಷರ ಭಾಷಣದಲ್ಲಿ ಏಕೀಕರಣಕ್ಕೆ ಪೋಷಕವಾದ ಚಳವಳವನ್ನು ದೇಶೀಯ ಪತ್ರಿಕೆಗಳ ಮುಖಾಂತರವಾಗಿ ಹೇಗೆ ಮಾಡಬಹುದು, ಮತ್ತು ಇದೇ ಸಾಧನವನ್ನು ಕೈಕೊಂಡದ್ದರಿಂದ ಮಹಾರಾಷ್ಟ್ರ, ಆಂಧ್ರ, ತಮಿಳು ಮೊದಲಾದ ಪ್ರಾಂತಗಳಲ್ಲಿ ಕೇಸರಿ ಸ್ವದೇಶ ಮಿತ್ರನ್, ಆಂಧ್ರ ಪತ್ರಿಕಾ ಮೊದಲಾದವು ತಂತಮ್ಮ ಪ್ರಾಂತಗಳನ್ನು ಎಷ್ಟು ಬೇಗನೆ ಮೇಲಕ್ಕೆ ತಂದಿದ್ದಾವೆ ಇತ್ಯಾದಿ ಯಾವ ವಿಷಯಗಳು ಬಂದಿರುವುವೊ ಅವುಗಳನ್ನಂತೂ ದೇಶಭಕ್ತರು ಅವಶ್ಯವಾಗಿ ಧ್ಯಾನದಲ್ಲಿಡಬೇಕಾಗಿದೆ ಅಧ್ಯಕ್ಷರ ಭಾಷಣದ ಮುಖ್ಯ ಅಂಶಗಳನ್ನು ನಾವು ಈ ಹೊತ್ತು ಬೇರೆ ಕಡೆಯಲ್ಲಿ ಪ್ರಕಟಿಸಿರುವುದರಿಂದಲೂ ಬಾಕಿ ಭಾಗವನ್ನು ಬರುವ ಸಂಚಿಕೆಯಲ್ಲಿ ಕೊಡುವದಿದ್ದರಿಂದಲೂ ಸಭೆಯ ಇತರ ಕಾರ್ಯಗಳ ವಿಷಯವಾಗಿ ವಿವೇಚಿಸುತ್ತೇವೆ ಪರಿಷತ್ತಿನಲ್ಲಿ ಬಂದ

ಮುಖ್ಯ ಠರಾವುಗಳು

ಕರ್ನಾಟಕದ ಏಕೀಕರಣ, ಸುಧಾರಣಾ ಕಾನೂನು ಖಿಲಾಫತ್ತು ಮುಸಲ್ಮಾನರ ಮಸೀದಿಯ ಮುಂದೆ ವಾದ್ಯವನ್ನು ನಿಲ್ಲಿಸುವುದು ಇತ್ಯಾದಿಯಾಗಿರುತ್ತವೆ ಏಕೀಕರಣದ ಠರಾವಿನ ಸ್ವರೂಪವೂ ಹೀಗಿತ್ತೆಂದರೆ "ಕರ್ನಾಟಕದ ಜನರಿಗೆ ನಿಜವಾಗಿ ಹಿತವಾಗುವಂತೆ ಲೋಕಸತ್ತಾತ್ಮಕ ಸಂಸ್ಥೆಗಳ ಕಾರ್ಯಗಳು ಯೋಗ್ಯವಾಗಿ ಸಾಗುವುದಕ್ಕೆ ಬ್ರಿಟಿಷ್ ಹಿಂದುಸ್ಥಾನದಲ್ಲಿರುವ ಎಲ್ಲ ಕರ್ನಾಟಕ ಪ್ರದೇಶಗಳನ್ನು ಒಂದುಗೂಡಿಸಿ, ಒಬ್ಬ ಗವರ್ನರನು ಕಾರ್ಯಕಾರಿ ಕೌನ್ಸಿಲು, ಹೈಕೋರ್ಟು, ಯುನಿವರ್ಸಿಟಿ ಮುಂತಾದ ಎಲ್ಲ ಅನುಕೂಲತೆಗಳುಳ್ಳ ಸ್ವತಂತ್ರ ಪ್ರಾಂತವಾಗಿ ಮಾಡುವುದು ಅತ್ಯಂತ ಆವಶ್ಯಕವಾಗಿರುವುದೆಂಬು ಈ ಪರಿಷತ್ತಿನ ಅಭಿಪ್ರಾಯವುಂಟು ಈ ಠರಾವನ್ನು ಎಂ ಶ್ರೀನಿವಾಸ ಐಯಂಗಾರ ಸೆಟಲೂರ (ಮುಂಬಯಿ) ಇವರು ಸಭೆಯ ಮುಂದಿಡುವಾಗ ಏಕೀಕರಣದಿಂದ ಉಂಟಾಗುವ ಸಾಮಾನ್ಯ ಲಾಭಗಳನ್ನು ತಮ್ಮ ಮಧುರ ಸ್ವರಯುಕ್ತವಾದ ಭಾಷೆಯಿಂದ ವಿವರಿಸಿದರು ನಂತರ ನಿಂಮ ಬೆಳವಿಯವರು ಕರ್ನಾಟಕದ ಭೂವಿಸ್ತಾರ ಲೋಕ ಸಂಖ್ಯೆ ಮುಂತಾದವುಗಳನ್ನು ಹೇಳಿ, ಮುಂಬಯಿ ಅಥವಾ ಮದ್ರಾಸ ಪ್ರಾಂತಗಳಂತೆಯೆ ಇದು ಕೂಡ ಸ್ವತಂತ್ರ ಪ್ರಾಂತಕ್ಕೆ ಅರ್ಹವಾಗಿದೆ ಕನ್ನಡಿಗರು ಇತರರಂತೆ ಸುಧಾರಿಸಿದವರಾಗಿರುವಾಗ ಅವರಿಗಾಗಿಯೆ ಒಂದು ಸ್ವತಂತ್ರ ಪ್ರಾಂತವನ್ನು ನಿರ್ಮಿಸುವುದು ಎಷ್ಟು ಆವಶ್ಯಕವಾಗಿದೆ, ಮೊದಲಾದ ಅನೇಕ ವಿಷಯಗಳನ್ನು ಯುಕ್ತಿ ಯುಕ್ತವಾಗಿ ಸಮರ್ಥಿಸಿದರು ಅನಂತರ ಇದೇ ಠರಾವಿನ ಮೇಲೆ ಮ| ರಾ| ಹೊನ್ನಪುರಮಠ, ಮ| ರಾ| ಹಣಮಂತಗೌಡ ಮುಂತಾದವರು ಸದರಿ ಪ್ರಶ್ನೆಯನ್ನು ಸಾಮಾನ್ಯ ದೃಷ್ಟಿಯಿಂದ ವಿವೇಚಿಸಿದರು ಆ ಮೇಲೆ ಶ್ರೀ ಆತ್ಮಾರಾಮ ಶಾಸ್ತ್ರೀ ಓಡ್ಡಮನೆ ಇವರು ಕರ್ನಾಟಕದ ಏಕೀಕರಣದಿಂದ ದಕ್ಷಿಣ ಕನ್ನಡಕ್ಕೆ ಹೇಗೆ ಲಾಭಗಳು ಉಂಟಾಗಬಹುದೆಂಬದನ್ನು ಸಂಕ್ಷೇಪವಾಗಿ ವಿವೇಚಿಸಿದರು ಮದ್ರಾಸ ಸಂಸ್ಥಾನದಲ್ಲಿ ತಮಿಳು, ತೆಲುಗು ಈ ಭಾಷೆಯ ಜನರ ವರ್ಚಸ್ಸು ಹೆಚ್ಚಿರುವುದರಿಂದ ದಕ್ಷಿಣ ಕನ್ನಡದ ನ್ಯೂನತೆ ಹಾಗು ಆಕಾಂಕ್ಷೆಗಳನ್ನು ಪ್ರಾಂತಿಕ ಸರಕಾರದ ಮುಂದೆ ತಂದೊಡ್ಡುವುದು ಕನ್ನಡಿಗರಿಗೆ ಹೇಗೆ ಕಷ್ಟಸಾಧ್ಯವಾಗುತ್ತದೆ, ದಕ್ಷಿಣ ಕನ್ನಡವು ಮದ್ರಾಸಿನಲ್ಲಿ ಸೇರಿರುವುದರಿಂದ ಪ್ರಾವಿನ್ಸಿಯಲ್ ಸರ್ವಿಸಿನ ಉಮೇದವಾರನಿಗೆ ಅವನು ತುಳು ಭಾಷೆಯವನಿದ್ದರೆ [illegible] ಭಾಷೆಯವನಿದ್ದರೆ, ಸ್ವಂತ [illegible] ಕೊಂಕಣಿ [illegible] ಪ್ರಥಮ ಭಾಷೆಯಾದ ಕನ್ನಡ, ಅನಂತರ ಇಂಗ್ಲಿಷು ಇವನ್ನು ಕಲಿತ ಮೇಲೆ ಅವನಿಗೆ ತಮಿಳನ್ನು [illegible] ತೆಲುಗನ್ನು ಕಲಿಯುವ ಪ್ರಸಂಗವು ಹೇಗೆ ಬರುತ್ತದೆ, ಆದರೆ ಈಗ ಕರ್ನಾಟಕ ಪ್ರಾಂತದ ಏಕೀಕರಣವಾದಲ್ಲಿ ದಕ್ಷಿಣ ಕನ್ನಡವು ಇಂಥ ಅನಿಷ್ಟ ಪ್ರಸಂಗಗಳನ್ನು ಹೇಗೆ ಹೋಗಲಾಡಿಸಿಕೊಳ್ಳಬಹುದು ಇತ್ಯಾದಿ ವಿಷಯಗಳನ್ನು ಶ್ರೀ. ಓಡ್ಡಮನೆ ಶಾಸ್ತ್ರಿಗಳು ತಮ್ಮ ಭಾಷಣದಲ್ಲಿ ಸಮರ್ಥಿಸಿದರು. ಈ ಮೇರೆಗೆ ಏಕೀಕರಣದ ಠರಾವು ಸಾಂಗೋಪಾಂಗವಾಗಿ ಚರ್ಚಿತವಾದ ಬಳಿಕ ಸರ್ವಾನುಮತದಿಂದ ಪಾಸಾಯಿತು. ಪರಿಷತ್ತಿನ ಮುಂದೆ ಬಂದ ಠರಾವುಗಳಲ್ಲಿ ವಿಜಾಪುರದ ಮ| ರಾ| ಕೌಜಲಗಿ ವಕೀಲರವರು ತಂದ ಠರಾವು ವಿಶೇಷ ಮಹತ್ವದಿತ್ತು. "ಹೊಸ ಸುಧಾರಣೆಗಳಿಗನುರೂಪವಾಗಿ ಮುಂದೆ ಆಗಲಿಕ್ಕಿರುವ ಕೌನ್ಸಿಲುಗಳ ಕಾರ್ಯದ ವಿಷಯವಾಗಿ ಕರ್ನಾಟಕದ ಜನರು ಅಮೃತಸರದ ರಾಷ್ಟ್ರೀಯ ಸಭೆಯು ಗೊತ್ತುಪಡಿಸಿದ ಧೋರಣವನ್ನು ಅನುಸರಿಸಬೇಕು, ಮತ್ತು ಆ ರಾಷ್ಟ್ರೀಯ ಸಭೆಯ ವಿಷಯವಾಗಿ ನಿಃಶಂಕವಾದ ನಿಷ್ಠೆಯುಳ್ಳ ಉಮೇದವಾರರಿಗೇನೇ ಪ್ರತಿಯೊಂದು ರೀತಿಯಿಂದ ಸಹಾಯ ಮಾಡಬೇಕು ಎಂದು ಕರ್ನಾಟಕದ ಜನರಿಗೆ ಈ ಪರಿಷತ್ತಿನ ಸಂದೇಶವುಂಟು" ಇದು ಸದರೀ ಠರಾವಿನ ಅಕ್ಷರಶಃ ಸ್ವರೂಪವು. ಈ ಠರಾವು ಸಬ್‌ಜಕ್ಟ ಕಮ್ಮಿಟಿಯಲ್ಲಿ ಎಂದರೆ ವಿಷಯ ನಿಯಾಮಕ ಮಂಡಲದಲ್ಲಿ ಬಂದಾಗ ಮತಭೇದವುಂಟಾಗ ಹತ್ತಿತು ಅಮೃತಸರದ ರಾಷ್ಟ್ರೀಯ ಸಭೆಯ ಕಡು ಅನುಯಾಯಿಗಳಿಗನೆ ಮತದಾರರು ಬರುವ ಚುನಾವಣೆಯಲ್ಲಿ ತಮ್ಮ ಮತಗಳನ್ನು ಕೊಡಬೇಕೆಂದು ಹೇಳುವುದು ಯೋಗ್ಯವಲ್ಲ ಎಂದು ಇನ್ನೊಂದು ಪಕ್ಷದವರು ವಾದಿಸ ತೊಡಗಿದರು ಮತ್ತು ಸದರೀ ಠರಾವಿನೊಳಗಿನ ರಾಷ್ಟ್ರೀಯ ಸಭೆಯ ವಿಷಯವಾಗಿ ನಿಃಶಂಕವಾದ ನಿಷ್ಠೆಯುಳ್ಳ ಉಮೇದವಾರರಿಗೇನೇ ಪ್ರತಿಯೊಂದು ರೀತಿಯಿಂದ ಸಹಾಯ ಮಾಡಬೇಕು ' ಎಂಬೀ ಅಂಶವನ್ನು ತೆಗೆದು ಹಾಕಬೇಕು ಎಂದು ಎರಡ್ಡ ಪಕ್ಷದವರು ಒಂದು ಉಪಸೂಚನೆಯನ್ನು ತಂದರು ವಿಷಯ ನಿಯಾಮಕ ಕಮ್ಮಿಟಿಯಲ್ಲಿ ಈ ಮೇರೆಗೆ

ವಾದವಿವಾದದ ರಣವು

ಪ್ರಾರಂಭವಾಯಿತು ಅದು ಕೊನೆಗೆ ತುಂಬಿದ ಪರಿಷತ್ತಿನಲ್ಲಿ ಸಹ ಗೊಂದಲವಾಯಿತು ಸಬ್ಜೆಕ್ಟ ಕಮ್ಮಿಟಿಯಲ್ಲಿ ಮೂಲ ಠರಾವು ಮತ್ತು ಈ ಉಪಸೂಚನೆಯು ಇವೆರಡನ್ನು ಮತಕ್ಕೆ ಹಾಕಿದಾಗ ಮೂಲ ಠರಾವಿನ ಕಡೆಗನೆ ಒಂದೆರಡು ಮತಗಳು ಹೆಚ್ಚಾಗಿದ್ದವು ಎಂದ ಮೇಲೆ ಈ ಉಪಸೂಚನೆಯು ಜಾಹೀರ ಸಭೆಯಲ್ಲಿ ವಾಸ್ತವವಾಗಿ ಬರುವ ಕಾರಣವಿರಲಿಲ್ಲ ಆದರೂ ಜಾಹೀರ ಸಭೆಯಲ್ಲಿ ಸದರೀ ಉಪಸೂಚನೆಯು ಬಂದರೆ ತಮಗೆನೆ ಬಹುಮತದ ಬಲವು ಸಿಕ್ಕೀತೆಂಬ ಒಂದು ತರದ ಆಶೆಯು ಉಪಸೂಚನೆಯ ಪಕ್ಷದವರಲ್ಲಿ ಪ್ರಾದುರ್ಭವಿಸಿದ ಕಾರಣ ಹಾಗು ಅಂಥದೊಂದು ಸಂದರ್ಭವನ್ನು ಪ್ರತಿಪಕ್ಷೀಯರಿಗೆ ಯಾಕೆ ಕೊಡಬಾರದೆಂದು ಉದಾರವು ರಾಷ್ಟ್ರೀಯ ಪಕ್ಷದವರಲ್ಲುಂಟಾದ ಕಾರಣ ಸದರೀ ಉಪಸೂಚನೆಯನ್ನು ಮ ರಾ ಕಡಪಾ [illegible] ಜಾಹೀರ ಸಭೆಯಲ್ಲಿ ಬಂದು ಮೂಲ ಠರಾವನ್ನು ವಿರೋಧಿಸಿದರು ಸಬ್ಜೆಕ್ಟ ಕಮ್ಮಿಟಿಯಲ್ಲಿ ಇದ್ದ ವಾದ ರಣಕ್ಷೇತ್ರವು, ಅರ್ಥಾತ್ ತುಂಬಿದ ಪರಿಷತ್ತಿನಲ್ಲಿ ಬಹಳ ಪ್ರಮಾಣದಿಂದ ವಿಸ್ತೃತವಾಯಿತು ಎರಡೂ ಕಡೆಗಳಲ್ಲಿ ಪ್ರಸಿದ್ಧ ವಕ್ತೃಗಳಿದ್ದರು ಪರಂತು ಇಲ್ಲಿ ಒಂದು ಮಾತನ್ನು ವಾಚಕರಿಗೆ ತಿಳಿಸದೆ ನಮ್ಮಿಂದ ಮುಂದರಿಸಲಾಗದು. ಉಪಸೂಚನೆಯನ್ನು ತಂದವರು ಎಂದರೆ ರಾಷ್ಟ್ರೀಯ ಸಭೆಯ ಕಡು ಅನುಯಾಯಿಗಳಿಗನೇ ಕೌನ್ಸಿಲ್ ಚುನಾವಣೆಯಲ್ಲಿ ಜನರು ತಮ್ಮ ಮತಗಳನ್ನು ಕೊಡಬೇಕೆಂದಿರುವ ಮಾತನ್ನು ತೆಗೆದು ಹಾಕಬೇಕೆಂದು ಹೇಳುವವರು, ವಿಷಯ ನಿಯಾಮಕ ಕಮ್ಮಿಟಿಯಲ್ಲಾಗಲಿ ಜಾಹೀರ ಪರಿಷತ್ತಿನಲ್ಲಾಗಲಿ ಸಬಲ ಮತ್ತು ಸಮರ್ಪಕವಾದ ಒಂದೇ ಒಂದು ಕಾರಣವನ್ನು ಕೊಟ್ಟಿರಲಿಲ್ಲ ಠರಾವಿನಲ್ಲಿ ಸದರಿ ಮಾತು ಇದ್ದರೆ ಬ್ರಾಹ್ಮಣ ಬ್ರಾಹ್ಮಣೇತರ ಪಕ್ಷಗಳಲ್ಲಿ ವಿಶೇಷವಾದ ದ್ವೇಷವುಂಟಾದೀತು, ಎಂಬದೊಂದೆ ಮಾತನ್ನು ಉಪಸೂಚನೆಯ ಕಡೆಯವರು ಹಾಡುತ್ತಿದ್ದರು ಪರಂತು ಸದರೀ ಮಾತು ಇರುವುದರಿಂದ ಬ್ರಾಹ್ಮಣೇತರರಿಗೆ ಮತವನ್ನು ಕೊಡಬಾರದು ಎಂದು ಹೇಳಿದಂತಾಗುವುದೆ? ರಾಷ್ಟ್ರೀಯ ಸಭೆಯ ಅನುಯಾಯಿಗಳು ಯಾರಿರುವರು ಅವರು ಬ್ರಾಹ್ಮಣರಿರಲಿ, ಬ್ರಾಹ್ಮಣೇತರರಿರಲಿ, ಪಂಚಮರಿರಲಿ ಅವರಿಗೆ ಮತಗಳನ್ನು ಅಗತ್ಯವಾಗಿ ಕೊಡಬೇಕು, ಇದು ಜಾತಿಯ ಪ್ರಶ್ನೆಯಲ್ಲ, ಇದು ತತ್ವದ ಪ್ರಶ್ನೆಯಾಗಿದೆ ಎಂದು ಮುಂತಾದ ರೀತಿಯಿಂದ ಮೂಲ ಠರಾವಿನ ಕಡೆಯವರು ಎಷ್ಟೋ ವಿಧದಿಂದ ತಿಳಿಯ ಹೇಳಿದರೂ ಅವರ ಸಮಾಧಾನವಾಗದೇ ಸಭೆಯಲ್ಲೇ ಯಾವಾಗ ವಾಗ್ವಾದ ನಡೆಯಿತೊ

ಆಗ ಪರಿಷತ್ತಿನಲ್ಲಿ ನವಚೈತನ್ಯ

ಉಂಟಾದಂತೆ ಕಂಡುಬಂತು ಎರಡೂ ಕಡೆಯ ವಕ್ತೃಗಳ ಭಾಷಣಗಳು ಸಮಪ್ರಮಾಣದಿಂದ ಉಂಟಾಗುತಿದ್ದವಾದರೂ ರಾಷ್ಟ್ರೀಯ ಪಕ್ಷದವರ ಭಾಷಣವೇ ಪ್ರೇಕ್ಷಕರ ಅಭಿನಂದನೆಗೆ ಪಾತ್ರವಾಗಹತ್ತಿತು. ಮಾತ್ರವಲ್ಲ, ಉಪಸೂಚನೆಗೂ, ಆ ಉಪಸೂಚನೆಯನ್ನು ಸಮರ್ಥಿಸಲು ಕಲ್ಪಿಸಿದ ಬ್ರಾಹ್ಮಣ-ಬ್ರಾಹ್ಮಣೇತರರ ಪ್ರಶ್ನೆಗೂ

ಯಾವ ಸಂಬಂಧವೂ ಇಲ್ಲವೆಂಬ ಸಂಗತಿಯು ಈ ಸಭೆಗೆ ಸ್ಪಷ್ಟವಾಗಿ ಮನವರಿಕೆಯಾಯಿತು. ಕೊನೆಗೆ ತಮ್ಮ ಕಡೆಗೆ ಮತಗಳು ದೊರೆಯುವದನ್ನು ತಿಳಿದು ಉಪಸೂಚಕರಾದ ರಾ. ಕಡಪರು ತಮ್ಮ ಉಪಸೂಚನೆಯನ್ನು ಮತಕ್ಕೆ ಹಾಕದೆ ಹಿಂದೆಗೆದರು. ಆಗ

ರಾಜ್ಯೀಯ ಸಭೆಯ ಧೋರಣದ ಮೂಲ ಠರಾವೇ ಸರ್ವಾನುಮತದಿಂದ ಪಾಸಾಯಿತು. ಸಭೆಯಲ್ಲಿ ಉಪಸೂಚನೆಯನ್ನು ತಂದವರಿಗೆ ಉತ್ತರ ಕೊಡುವಾಗ ಮಿ. ಕೌಜಲಗಿಯವರು ತಮ್ಮ ವಕ್ತೃತ್ವಪೂರ್ಣವಾದ ಭಾಷಣದಲ್ಲಿ ನಿರುತ್ತರ ಕೋಟಿ ಕ್ರಮಗಳನ್ನು ಉಪಯೋಗಿಸಿ ಪ್ರತಿಪಕ್ಷಿಗಳ ಬಾಯಿಯನ್ನು ಕಟ್ಟಿದರು. ಮತ್ತು ಈ ಕಾರಣದಿಂದ ಮಿ. ಕೌಜಲಗಿಯವರು ಎಲ್ಲರ ಅಭಿನಂದನಕ್ಕೆ ಪಾತ್ರರಾಗಿರುತ್ತಾರಾದರೂ ನಿಜವಾಗಿ ನೋಡಿದರೆ ಉಪಸೂಚನೆಯನ್ನು ತಂದ ಮಿ. ಕಡಪರು ತಮ್ಮ ಉಪಸೂಚನೆಯನ್ನು ಹಿಂದಕ್ಕೆ ತೆಗೆಯುವ ಧೈರ್ಯವನ್ನು ವ್ಯಕ್ತಪಡಿಸಿದ್ದಕ್ಕಾಗಿ ಅವರೇ ಪ್ರಶಂಸಾರ್ಹರಾಗಿದ್ದಾರೆ. ಇರಲಿ. ಅನಂತರ ಪರಿಷತ್ತಿನಲ್ಲಿ ಬಂದ ಮಹತ್ವದ ಠರಾವುಗಳಲ್ಲಿ ರಾಜಕೀಯ ಕೈದಿಗಳ ಬಂಧಮುಕ್ತತೆಯ ವಿಷಯದಲ್ಲಿ ಅಧಿಕಾರಿಗಳು ಯಾವ ಅನುದಾರತೆಯನ್ನು ತೋರಿಸಿರುವರೂ ಅದರ ಬಗ್ಗೆ ಸಭೆಯ ಅಸಮ್ಮತಿ ಮತ್ತು ಖಿಲಾಫತ್ತು ಇವೆರಡಿದ್ದವು. ಈ ಠರಾವುಗಳ ಅನುಮೋದಕರು ಹಾಗು ಪುಷ್ಟೀಕರ್ತೃಗಳು ಶ್ರೋತೃಗಳ ಮನಸ್ಸಿನ ಮೇಲೆ ಸೂಚಕರು, ಮೇಲೆ ಪರಿಣಾಮ ಉಂಟಾಗುವಂತೆ ಭಾಷಣ ಮಾಡಿದರು. ಈ ಪರಿಷತ್ತಿನ ದಿವಸಗಳಲ್ಲಿ ಇವಲ್ಲದೆ ಬೇರೆ

ಅವಾಂತರ ವಿಷಯಗಳು

ಕೂಡ ನಡೆದಿದ್ದವು. ಪುಣೆಯಿಂದ ಸುಪ್ರಸಿದ್ಧ ವಕ್ತೃಗಳಾದ ಪ್ರೊ. ಶಿವರಾಮ ಮಹಾದೇವ ಪರಾಂಜಪೆ ಇವರು ಪರಿಷತ್ತಿಗೆ ದಯಮಾಡಿಸಿದ್ದರು; ಅವರು ಖಿಲಾಫತ್ತು ಮತ್ತು ಬ್ರಾಹ್ಮಣ ಬ್ರಾಹ್ಮಣೇತರ ಈ ವಿಷಯದ ಮೇಲೆ ಅತ್ಯುತ್ತಮವಾದ ಮತ್ತು ಶ್ರೋತೃಸಮಾಜದ ಮನಸ್ಸನ್ನು ತಲ್ಲೀನಗೊಳಿಸುವ ಭಾಷಣವನ್ನು ಮಾಡಿ ಅದರಲ್ಲಿ ಹಿಂದುಗಳು ಖಿಲಾಫತಿನ ಪ್ರಶ್ನೆ ತಮ್ಮದೇ ಎಂದು ತಿಳಿದು, ಸದರಿ ಚಳವಳದಲ್ಲಿ ಭಾಗವನ್ನು ತಕ್ಕೊಳ್ಳಬೇಕು, ಬ್ರಾಹ್ಮಣ-ಬ್ರಾಹ್ಮಣೇತರ ಇತ್ಯಾದಿ ನಿರರ್ಥಕ ಭೇದಗಳನ್ನು ಕಲ್ಪಿಸಿಕೊಂಡು ಜಗಳವಾಡುತ್ತ ಕೂಡ್ರಲು ಇದು ಸಮಯವಲ್ಲ, ಇತ್ಯಾದಿ ಅಮೋಘವಾದ ಉಪದೇಶವನ್ನು ತಮ್ಮ ರಸಾಳವಾದ ವಾಣಿಯಿಂದ ಶ್ರುತಪಡಿಸಿದರು. ಅಲ್ಲದೆ, ಬೆಳಗಾಂವಿನಿಂದ ಇಬ್ಬರು ಮಹಮ್ಮದೀಯರು ಸಹ ಖಿಲಾಫತಿನ ಪ್ರಶ್ನೆಯ ಬಗ್ಗೆ ಜಾಗೃತಿಯನ್ನು ಹುಟ್ಟಿಸಲು ಹಲವು ಉಪನ್ಯಾಸಗಳನ್ನು ಕೊಡಹತ್ತಿದ್ದರು. ಈ ಮೇರೆಗೆ ಪರಿಷತ್ತಿನ ೩—೪ ದಿವಸಗಳು ಬಹು ಆನಂದದಿಂದ ಹೋದವೆಂಬುದಕ್ಕೆ ಸಂದೇಹವಿಲ್ಲ. ಧಾರವಾಡದಲ್ಲಿ ಕರ್ಣಾಟಕದ ಬಗ್ಗೆ ಅಭಿಮಾನ, ಪ್ರೇಮ, ಮಮತೆ ಮುಂತಾದ ಮನೋವೃತ್ತಿಗಳು ಹೆಚ್ಚಿನ ಪ್ರಮಾಣದಲ್ಲಿ ಜಾಗೃತವಾಗಿವೆ, ಇದು ಸಂತೋಷದ ಮಾತು. ಪರಂತು 'ಕರ್ಣಾಟಕ'-'ಕರ್ಣಾಟಕ' ವೆಂಬ ಶಬ್ದವನ್ನು ನಿರರ್ಥಕವಾಗಿ ಉಚ್ಚರಿಸಿ ಜನರಲ್ಲಿ ಚೈತನ್ಯ ಹುಟ್ಟಿಸುವ ಉಪಾಯವನ್ನು ಹಲವರು ಏನು ಮಾಡುತಿದ್ದಾರೂ ಅದು ಮಾತ್ರ ಇನ್ನು ಎಷ್ಟು ಕಾಲ ನಿಂತೀತೆಂಬುದು ಸಂದಿಗ್ಧವಾಗಿದೆ. ಕರ್ಣಾಟಕದ ಬಗ್ಗೆ ಅಭಿಮಾನವು ಬೇಕು, ಪ್ರೇಮವು ಬೇಕು, ಮಮತ್ವವು ಬೇಕು. ಪರಂತು ಕಂಡಕಂಡ ವಿಷಯದಲ್ಲಿ, ಸಂಬಂಧವಿಲ್ಲದೆ, ಏನೂ ಪ್ರಸಂಗವಿಲ್ಲದೆ, ಕರ್ಣಾಟಕದ ಹಾಡನ್ನು ಹಾಡಲಾರಂಭಿಸಿ ಜನರಲ್ಲಿ ಉಂಟಾಗುತ್ತಿರುವ ಅಭಿಮಾನದ ಈ ರೀತಿಯಿಂದ ದುರುಪಯೋಗವನ್ನು ಪಡೆಯಲಾರಂಭಿಸಿದರೆ ಆ ಚೈತನ್ಯಾಗ್ನಿಯು ಬೇಗನೆ ನೊಂದಿ ಹೋಗುವ ಸಂಭವವಿದೆ. 'ಅತಿರೇಕೋಹಿ ದುಃಖಸಹಃ' ಮತ್ತು 'ಅತಿರೇಕೋವರ್ಧಿ ಸ್ಮೃತಃ' ಎಂದು ಹೇಳಿದಂತೆ ಯಾವದಾದರೂ ವಿಷಯದ ಅತಿರೇಕವು ಶ್ಲಾಘ್ಯವಲ್ಲ, ಜನರಲ್ಲಿ ಬೇಸರವನ್ನು ಹುಟ್ಟಿಸಿಬಿಡುತ್ತದೆ. ಈ ಮಾತಿನ ಕಡೆಗೆ ಕೊಂಚ ಲಕ್ಷ್ಯ ಕೊಡುವುದು ಆ ಕರ್ಣಾಟಕ ದೇಶದ ನಿಜವಾದ ಹಿತದ ದೃಷ್ಟಿಯಿಂದ ಅತ್ಯಂತ ವಿಹಿತವಾಗಿದೆ. ಈ ಒಂದೆರಡು ಅಪವಾದಗಳನ್ನು ಬಿಟ್ಟರೆ ಧಾರವಾಡದ ಕರ್ಣಾಟಕ ಪರಿಷತ್ತು ಸರ್ವದೃಷ್ಟಿಯಿಂದ ಸರ್ವಾಂಗಸುಂದರವಾಗಿಯೂ, ಯಶಸ್ವಿಯಾಗಿಯೂ ನೆರವೇರಿತೆಂದು ತಿಳಿಸಲು ನಾವು ತುಂಬಾ ಸಂತೋಷಪಡುತ್ತೇವೆ.

ಮೆಸ್ಟನ್ ಕಮ್ಮಿಟಿಯ ಹಂಚಿಕೆ.

ಕೆಲವು ಇಲಾಖೆಗಳ ಆದಾಯವು ತೀರಾ ವರಿಷ್ಠ ಸರಕಾರಕ್ಕೆ ಹೋಗಬೇಕು, ಇನ್ನೂ ಕೆಲವು ಇಲಾಖೆಗಳ ಕಂದಾಯವು ಪ್ರಾಂತಿಕ ಸರಕಾರದ ವಶದಲ್ಲಿರಬೇಕು ಎಂದು ಮೊಂಟೆಗ ಚೆಮ್ಸ್‌ಫೋರ್ಡ ಯೋಜನೆಯಲ್ಲಿ ಇತ್ತು. ಆ ಯೋಜನೆಯ ಮೇರೆಗೆ ಸುಂಕ, ಆದಾಯ ತೆರಿಗೆ, ರೈಲ್ವೆ, ಉಪ್ಪು ಮತ್ತು ರಸ್ತೆ (ಸಾಮಾನ್ಯ) ಇವುಗಳ ಆದಾಯವು ವರಿಷ್ಠ ಸರಕಾರಕ್ಕೂ, ಭೂಕಂದಾಯ, ಅಬಕಾರಿ ಮತ್ತು ಕೋರ್ಟ ರಸ್ತೆ, ಇವುಗಳ ಆದಾಯವು ಪ್ರಾಂತಿಕ ಸರಕಾರಕ್ಕೂ ಸಿಗಬಹುದು ಎಂದು ಸೂಚನೆ ಮಾಡಿತ್ತು. ಈ ಏರ್ಪಾಡಿನಿಂದ—ವರಿಷ್ಠ ಸರಕಾರಕ್ಕೆ ೧೯೨೧—೨೨ನೆ ಟಫಿಶಿಯಲ್ ವರ್ಷದ ಆರಂಭದಲ್ಲಿ ೬ ಕೋಟಿ ರೂಪಾಯಿ ಕಡಿಮೆ ಬೀಳುತ್ತದೆ. ಅಂದರೆ ಹಿಂದಿನ ವರ್ಷದಲ್ಲಿ (೧೯೨೦—೨೧ರಲ್ಲಿ) ಖರ್ಚ ಕಳೆದು ಶಿಲುಕು ಉಳಿಯುವ ಬದಲಾಗಿ ೬ ಕೋಟಿ ರೂಪಾಯಿ ನಷ್ಟವಾಗುತ್ತದೆ. ಇದನ್ನು ಭರ್ತಿಮಾಡುವದಕ್ಕೆ ಈ ಯೋಜನೆಯು ಕಂಡ ಉಪಾಯದಲ್ಲಿ ಪ್ರತಿಯೊಂದು ಪ್ರಾಂತವು ೧೯೨೦—೨೧ರಲ್ಲಿ ಖರ್ಚ ಕಳೆದು ಎಷ್ಟು ಹಣ ಉಳಿಸುವುದೋ ಆ ಪ್ರಮಾಣದಲ್ಲಿ ಈ ನಷ್ಟವನ್ನು ಪಾಲು ಮಾಡಿಕೊಳ್ಳಬೇಕಾಗಿ ಇತ್ತು. ಆಗ ಮದ್ರಾಸು ೫೧ ಲಕ್ಷ, ಮುಂಬಯಿ ೫೬ ಲಕ್ಷ, ಸಂಯುಕ್ತ ಪ್ರಾಂತ ೧೮೬ ಲಕ್ಷ, ಪಂಜಾಬು ೧೫೯ ಲಕ್ಷ, ಬರ್ಮಾ ೪೯ ಲಕ್ಷ, ಮಧ್ಯಪ್ರಾಂತ ೪ ಲಕ್ಷ, ಆಸ್ಸಾಂ ೯ ಲಕ್ಷ, ಹೀಗೆ ಜಮೆ ಆಗುವ ೬೨೫ ಲಕ್ಷ, ಅಥವಾ ೬ ಕೋಟಿ ೧೫ ಲಕ್ಷ ರೂಪಾಯಿಯಲ್ಲಿ—ಚೆಮ್ಸ್‌ಫೋರ್ಡ ಮೊಂಟೆಗ್ ಯೋಜನೆಯ ಮೇರೆಗೆ ಬಂಗಾಳಕ್ಕೆ ೧೦ ಲಕ್ಷ, ಬಿಹಾರ ಮತ್ತು ಒರಿಸ್ಸಕ್ಕೆ ೫ ಲಕ್ಷ ನಷ್ಟಬೀಳುವುದನ್ನೂ ಭರ್ತಿಮಾಡಿ ಉಳಿದ ೬ ಕೋಟಿ ರೂಪಾಯಿಯನ್ನು ವರಿಷ್ಠ ಸರಕಾರಕ್ಕೆ ಒಪ್ಪಿಸಿಕೊಡಬೇಕಾಗಿತ್ತು. ಬಂಗಾಳ ಬಿಹಾರ ಒರಿಸ್ಸಾ ಪ್ರಾಂತಗಳು ಶಿಲ್ಕು ಇಲ್ಲದೆ ನಷ್ಟದಿಂದಲೆ ಹೊಸ ಹಂಚಿಕೆಯಲ್ಲಿ ಮುಹೂರ್ತ ಮಾಡುವುದು ಈ ಮೆಸ್ಟನ ಕಮ್ಮಿಟಿಗೆ ಪ್ರಶಸ್ತವಾಗಿ ತೋರಲಿಲ್ಲ. ಆರಂಭದಲ್ಲಿ ಮುಂದಿನ ದಾರಿ ಸಾಗಿಸುವುದಕ್ಕೆ ಸ್ವಲ್ಪ ಶಿಲುಕು ಇರಬೇಕೆಂಬದು ಮೆಸ್ಟನ ಕಮ್ಮಿಟಿಯ ವಿವೇಕದ ಸೂಚನೆ. ಇದಕ್ಕಾಗಿ ಸ್ಟಾಂಪ್ ರಸ್ತೆಯ ಆದಾಯವನ್ನೂ ಆಯಾ ಪ್ರಾಂತಿಕ ಸರಕಾರವೇ ಕಟ್ಟಿಕೊಳ್ಳಬಹುದೆಂದು ಮೆಸ್ಟನ ಕಮ್ಮಿಟಿಯವರು ಇತ್ಯರ್ಥಿಸಿದರು. ಇದರಿಂದ ವರಿಷ್ಠ ಸರಕಾರದ ನಷ್ಟವು ೬ ಕೋಟಿಯಿಂದ ೯ ಕೋಟಿ ೮೩ ಲಕ್ಷಕ್ಕೆ ಏರಿತು. ಈ ನಷ್ಟವನ್ನು ಹಂಚಿಹಾಕುವಾಗ ಆಯಾಯ ಪ್ರಾಂತಕ್ಕೆ ಖರ್ಚ ಕಳೆದು ಉಳಿಯುವ ಆದಾಯದ ಪ್ರಮಾಣದಲ್ಲೆ ಮೆಸ್ಟನ ಕಮ್ಮಿಟಿಯವರು ಹೊರಿಸಲಿಲ್ಲ. ಮೊದಲಿನ ಕಂದಾಯಕ್ಕೂ ನೂತನ ಏರ್ಪಾಡಿನ ಮೇರೆಗೆ ಸಿಗುವ ಆದಾಯಕ್ಕೂ ಇದ್ದ ಪ್ರಮಾಣವನ್ನು ಮೆಸ್ಟನ್ ಕಮ್ಮಿಟಿಯವರು ಎಣಿಸಿ ಈ ನಷ್ಟವನ್ನು ಬೇರೆ ಬೇರೆ ಪ್ರಾಂತಗಳ ಮೇಲೆ ಹಂಚಿಹಾಕಿದರು. ಅದನ್ನೂ ಕಡೆಗೆ ಸ್ವಲ್ಪ ಬದಲಾಯಿಸಿ ಬಹಳ ಕಡಿಮೆ ಶಿಲಕು ಉಳಿಯುವ ಪ್ರಾಂತಗಳಿಗೆ ಹೆಚ್ಚು ಶಿಲುಕು ಸಿಗುವ ಹಾಗೆ ಬದಲಾವಣೆಗಳನ್ನೂ ಮಾಡಿದರು. ಆ ಹಂಚಿಕೆಯನ್ನು ಕೆಳಗೆ ಸಂಖ್ಯಾರೂಪವಾಗಿ ತೋರಿಸಿದೆ:—

ಪ್ರಾಂತದ ಹೆಸರು.	ಆದಾಯ, ಲಕ್ಷ.	ವರಿಷ್ಠ ಸರಕಾರಕ್ಕೆ ಕೊಡುವ ಪಾಲು, ಲಕ್ಷ.	ಪ್ರಾಂತಿಕ ಸರಕಾರಕ್ಕೆ ಉಳಿಯುವ ಪಾಲು, ಲಕ್ಷ.
ಮದ್ರಾಸು	೫೭೬	೩೪೮	೨೨೮
ಮುಂಬಯಿ	೯೩	೫೬	೩೭
ಬಂಗಾಳ	೧೦೪	೬೩	೪೧
ಸಂಯುಕ್ತ ಪ್ರಾಂತ	೩೯೬	೨೪೦	೧೫೬
ಪಂಜಾಬ	೨೮೯	೧೭೫	೧೧೪
ಬರ್ಮಾ	೨೪೬	೬೪	೧,೮೨
ಬಿಹಾರ ಮತ್ತು ಒರಿಸ್ಸಾ	೫೧	—	೫೧
ಮಧ್ಯ ಪ್ರಾಂತ	೫೨	೨೨	೩೦
ಆಸ್ಸಾಂ	೪೨	೧೫	೨೭
ಒಟ್ಟು.	೧೮೫೦	೯೮೩	೮೬೬

ಅಂದರೆ ಪ್ರಾಂತಿಕ ಸರಕಾರಗಳು ೧೯೨೦-೨೧ರಲ್ಲಿ ಹೊಸ ಏರ್ಪಾಡಿನ ಮೇರೆಗೆ ಸಿಗತಕ್ಕ 18½ ಕೋಟಿ ಆದಾಯದಿಂದ ೯ ಕೋಟಿ ೮೩ ಲಕ್ಷ ರೂಪಾಯಿಯನ್ನು ವರಿಷ್ಠ ಸರಕಾರಕ್ಕೆ ನಷ್ಟ ಭರ್ತಿಗೆ ಒಪ್ಪಿಸಿಕೊಟ್ಟು ೮೬೬ ಲಕ್ಷ ರೂಪಾಯಿಯನ್ನು ತಮ್ಮ ವಹಿವಾಟುಗಳ ಬಗ್ಗೆ ಉಪಯೋಗಿಸಿಕೊಳ್ಳಬಹುದು ಎಂಬ ತಾತ್ಪರ್ಯವಾಯಿತು. ಈ ಪಟ್ಟಿಯಲ್ಲಿ ತೋರಿಸಿದ ಆದಾಯವೆಂಬದು ಪ್ರತಿ ಪ್ರಾಂತಕ್ಕೂ ೧೯೨೦-೨೧ ವರ್ಷದ ಅಂದಾಜುಪಟ್ಟಿಯಲ್ಲಿ ತೋರಿಸಿದ ಆದಾಯಕ್ಕಿಂತ ಹೆಚ್ಚಿಗೆ ಸಿಗುವ ಆದಾಯವೆಂದು ಭಾವಿಸಬೇಕಲ್ಲದೆ ಆ ವರ್ಷಕ್ಕೆ ಎಲ್ಲಾ ಬಗೆಯ ಕಂದಾಯಗಳಿಂದ ಸಿಗುವ ಒಟ್ಟು ಆದಾಯವೆಂದು ಎಣಿಸಲಾಗದು. ಇದರಿಂದ ನಮ್ಮ ಸಂಸ್ಥಾನಕ್ಕೆ ಸಿಗುವ ಆದಾಯವು ಹೆಚ್ಚಾಗಿದ್ದರೂ ವರಿಷ್ಠ ಸರಕಾರಕ್ಕೆ ಬೀಳಬಹುದಾದ ನಷ್ಟದಲ್ಲಿ ಸೇಕಡಾ 35½ಯಷ್ಟು ಭಾರವನ್ನು ನಮ್ಮ ಸಂಸ್ಥಾನವು ವಹಿಸಿಕೊಳ್ಳಬೇಕಾಗುತ್ತಿದೆ. ಅದರ ನಂತರ ಸಂಯುಕ್ತ ಪ್ರಾಂತವು ಸೇಕಡಾ ೨೪.೪, ಪಂಜಾಬ ಸುಮಾರು ಸೇಕಡಾ ೧೮ ಕೊಡುತ್ತಿದ್ದರೆ, ಮುಂಬಯಿ ೫.೬ರಷ್ಟಕ್ಕೆ, ಬಂಗಾಳ ಪ್ರಾಂತವು ೬.೪ರಷ್ಟಕ್ಕೆ ಮಾತ್ರ ಹೆಗಲುಕೊಡಬೇಕು ಎಂದು ಕಮ್ಮಿಟಿಯವರು ಹೇಳಿದಂತಾಗುತ್ತದೆ. ಈ ರೀತಿಯ ಏರ್ಪಾಡು ಕೆಲವು ಸಂಸ್ಥಾನಗಳಿಗೆ ಬಹಳ ಅನ್ಯಾಯವಾಗುತ್ತದೆ ಎಂಬ ಅಭಿಪ್ರಾಯವನ್ನಿಟ್ಟುಕೊಂಡು, ಕಮ್ಮಿಟಿಯವರು ೧೯೨೧-೨೨ರ ನಂತರ ಈ ಸೇಕಡಾ ದರಗಳನ್ನೂ ಕೆಲವಕ್ಕೆ ಇಳಿಸುತ್ತಲೂ ಕೆಲವಕ್ಕೆ ಏರಿಸುತ್ತಲೂ, ಏಳು ವರ್ಷಗಳ ಅಂತ್ಯಕ್ಕೆ ಮದ್ರಾಸು ಸೇಕಡಾ ೧೭, ಮುಂಬಯಿ ಸೇಕಡಾ ೧೩, ಬಂಗಾಳ ೧೯, ಸಂಯುಕ್ತ ಪ್ರಾಂತ ಸೇಕಡಾ ೧೮, ಪಂಜಾಬ ಸೇಕಡಾ ೯, ಬರ್ಮಾ ಸೇಕಡಾ 6½, ಬಿಹಾರ ಮತ್ತು ಒರಿಸ್ಸಾ ಸೇಕಡಾ ೧೦, ಮಧ್ಯ ಪ್ರಾಂತಗಳು ಸೇಕಡಾ ೫, ಆಸ್ಸಾಂ ಸೇಕಡಾ ೨ ಕೂಡಾ ೧೦೦ಕ್ಕೆ ಭರ್ತಿಮಾಡಿ ವರಿಷ್ಠ ಸರಕಾರಕ್ಕೆ ತಮ್ಮ ಕಂದಾಯದಿಂದ ನಷ್ಟದ ಭರ್ತಿಗೆ ಕೊಡುತ್ತ ಬರಬೇಕು ಎಂದು ಮೆಸ್ಟನ್ ಕಮ್ಮಿಟಿಯವರ ಸೂಚನೆ. ಇದರಿಂದ ನಮ್ಮ ಸಂಸ್ಥಾನವು ಅನ್ಯಾಯ ಹೇಗೆ ಹೊಂದುತ್ತದೆ ಎಂಬದನ್ನು ಇನ್ನುಮೇಲೆ ವಿವರಿಸುವೆವು.

ಸ್ಫುಟ ವಿಚಾರಗಳು.

೧. ತುರ್ಕಿ ಸಾಮ್ರಾಜ್ಯದ ಚಂದ್ರನು ಅಸ್ತಕ್ಕೆ ಇಳಿದನು. ಒಂದು ಕಾಲದಲ್ಲಿ ದಕ್ಷಿಣ ಯುರೋಪು, ಪಶ್ಚಿಮ ಮತ್ತು ಮಧ್ಯ ಏಷ್ಯ, ಉತ್ತರ ಆಫ್ರಿಕವನ್ನು ತನ್ನ ಅರ್ಧ ಚಂದ್ರದೊಳಗೆ ಹಿಡಿದಿದ್ದ ತುರ್ಕಿಯ ಯಶಸ್ಸು ಈ ಸಂಧಿ ಕರಾರಿಗೆ ಸಹಿ ಹಾಕಿದೊಡನೆ ತೀರಾ ಅಧಃಪತನವಾಯಿತು. ವಿಧಿಯ ಲಿಖಿತವನ್ನು ಅಳಿಸಲು ಯಾರಿಗೂ ಸಾಧ್ಯವಿಲ್ಲ. ಅಂತು ಈ ಶತಮಾನದ ಎರಡು ದಶಕಗಳು ದಾಟುವಷ್ಟರಲ್ಲಿ ಹಲವು ಕಿರೀಟಧಾರಿಗಳು ಪದಚ್ಯುತರಾದರು, ಒಬ್ಬಿಬ್ಬರು ದೇಹವನ್ನು ಅರ್ಪಿಸಿದರು, ಇನ್ನೂ ಕೆಲವರು ನಾಮ ಪೂರ್ತಿಯಾಗಿ ಅಧಿಕಾರ ನಡಸುವ ದಸೆಯು ಬಂದೊದಗಿತು. ಇಂಥ ಸಂದರ್ಭದಲ್ಲಿ ನಮ್ಮ ದೇಶ ಬಂಧುಗಳಾದ ಮುಸಲ್ಮಾನರ ಚಿತ್ತವು ಚಿಂತೆಯ ಮೋಡ ಕವಿದು ಇರುವುದು ಅಸ್ವಾಭಾವಿಕವಲ್ಲ. ಈ ವಿಷಯದಲ್ಲಿ ವೈಸರಾಯಿ ಪ್ರಭುಗಳ ಸಂದೇಶವು ಪತಿಯ ದೇಹವನ್ನು ಆಗಲೇ ಚಿತೆಯನ್ನೇರಿಸಿದ್ದನ್ನು ಕಣ್ಣಾರೆ ಕಂಡು ಎವೆ ಇಕ್ಕದೆ ನೋಡುತ್ತಿರುವ ಸ್ತ್ರೀಗೆ ಸ್ಮಶಾನ ವೈರಾಗ್ಯದ ತತ್ವವನ್ನು ಬೋಧಿಸಿದ ಆಚರಣೆಯನ್ನು ಸ್ಮರಣೆಗೆ ತರುತ್ತಿದೆ. ಆದರೆ ಅಂಥಾ ವೈರಾಗ್ಯದ ಮಾತುಗಳು ತೀರಾ ನಿರರ್ಥಕವೆಂದು ಎಣಿಸಲಾಗದು. ಹೃದಯವು ಧಗಧಗಿಸುತ್ತಿದ್ದು ಕಂಬನಿಗಳ ಊಟೆಯೇ ಬತ್ತಿ ಹೋದಂತಾಗಿ ಅಚಲಿತವಾದ ಕಣ್ಣುಗಳಿಂದ ಚಿತಿಯನ್ನು ನೋಡುತಲಿರುವ ನೂತನ ವಿಧವೆಗೆ ಅವಳ ಎಳೆ ಕೂಸುಗಳ ಮುಂದಿನ ಲಾಲನೆ ಪೋಷಣೆಯ ಸ್ಮರಣೆಯನ್ನು ಹುಟ್ಟಿಸಿ ತನ್ಮೂಲಕ ಕಂಬನಿಗಳ ಊಟೆಯು ಪುನಃ ಹೊರಕ್ಕೆ ಚಿಮ್ಮುವಂತೆ ಮಾಡದಿದ್ದರೆ ಅಂತರ್ಯದೊಳಗಿನ ಶೋಕಾಗ್ನಿಯಿಂದ ಆ ದೇಹವೇ ಸುಟ್ಟು ಭಸ್ಮವಾದೀತು. ಇಂಥ ಅವದಶೆಯು ಹಿಂದೀ ಮುಸಲ್ಮಾನರಿಗೆ ಬಾರದಂತೆ ವೈಸರಾಯಿ ಪ್ರಭುಗಳು ಆದರಪೂರ್ವಕವಾಗಿ ಈ ಸಂದೇಶವನ್ನು ಹೊರಡಿಸಿರುವರೆಂದು ನಮ್ಮ ನಂಬಿಕೆ. ಅಂತು ಈ ಕಠಿಣ ಸಂದರ್ಭದಲ್ಲಿ ಅಧೀರರಾಗದೆ, ಮತ್ತು ವಿಚಾರ ಶಕ್ತಿಯನ್ನು ದುಡುಕುತನಕ್ಕೆ ಒತ್ತೆ ಇಡದೆ, ಸಮಾಧಾನದಿಂದಲೂ ತಾಳ್ಮೆಯಿಂದಲೂ ಈ ದುಃಖದ ಜಾಲದಿಂದ ನಮ್ಮ ಮುಸಲ್ಮಾನ ದೇಶಬಂಧುಗಳು ಪಾರಾಗಲಿ ಎಂದು ನಾವು ಭಗವಂತನೊಡನೆ ಬೇಡಿಕೊಳ್ಳುವೆವು.

ಮಂಗಳೂರು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಎಸೋಸಿಯೇಶನಿನ ಅಧಿವೇಶನವು ಇದೇ ತಿಂಗಳ ೩೦ನೇ ತಾರೀಕಿಗೆ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಸಾಯಂಕಾಲ ೫ ಗಂಟೆಗೆ ಜರಗಲಿಕ್ಕಿದೆ. ಈ ಕೆಳಗಿನ ವಿಚಾರಗಳು ಚರ್ಚೆಗೆ ಬರಲಿಕ್ಕಿರುವುವು. (೧) ಸ್ಥಳೀಯ ಅಕ್ಷಿ ಪ್ರಮುಂದರುಗಳಿಗೆ ಕಂಡಾಬಟ್ಟೆ ರಷ್ಟಾಗದಂತೆ ನಿರ್ಬಂಧ ಹಾಕಿಸುವದಕ್ಕೆ ಕಲೆಕ್ಟರ್ ಸಾಹೇಬರಿಗೆ ಬರಕೊಳ್ಳುವುದು. (೨) ಜಿಲ್ಲೆಯಲ್ಲಿ ಫೊರೆಸ್ಟು ಸಂಬಂಧವಾದ ಅನಾನುಕೂಲತೆಗಳನ್ನೂ, ಅಡಚಣೆಗಳನ್ನೂ ಹೇಗೆ ಹೋಗಲಾಡಿಸಲು ಸಾಧ್ಯವಿದೆ ಎಂಬದನ್ನು ಸೂಚಿಸಿ ಕಲೆಕ್ಟರ್ ದೊರೆಗಳು ಬರೆದ ಪತ್ರವನ್ನು ಚರ್ಚಿಸಿ, ಆ ಕುರಿತು ಅಭಿಪ್ರಾಯ ಠರಾಯಿಸುವುದಲ್ಲದೆ ಅದನ್ನು ಕಲೆಕ್ಟರರ ಮುಂದಿಡತಕ್ಕ ಒಂದು ಕಮಿಟಿಯ ಮೆಂಬರರನ್ನು ಚುನಾಯಿಸುವುದು. (೩) ಎಡಿನಬರೊ ಯುನಿವರ್ಸಿಟಿಯ ಎಮ್. ಎ., ಬಿ. ಎಸ್. ಸಿ. ಪರೀಕ್ಷೆ ಪಾಸಾದ ಮಿ| ಇ. ಟಿ. ಪಾಸರು ತನ್ನ ವಿಷಯದಲ್ಲಿ ಮದ್ರಾಸು ಸರಕಾರಕ್ಕೆ ಮಾಡಿಕೊಂಡ ಮನವಿಯನ್ನು ಎಸೋಸಿಯೇಶನಿನವರು ಸರಕಾರಕ್ಕೆ ಬರಕೊಳ್ಳಬೇಕೆಂದು ಸೂಚಿಸಿ, ಮಿ| ಜೋನ್ ಪಿ. ಸಿಕೇರಾ, ಬಿ. ಎ., ಬಿ. ಎಲ್., ಇವರು ಬರೆದ ಪತ್ರ (೪) ಇನ್ನೂ ಇತರ ವಿಷಯಗಳೇನಾದರೂ ಇದ್ದರೆ ಚರ್ಚೆಗೆ ಬರಲುಬಹುದು.

ಬರುವ ತಾರೀಕು ೨೫ನೇ ಮಂಗಳವಾರ ೩ ಗಂಟೆಗೆ ಮಂಗಳೂರು ತಾಲೂಕುಬೋರ್ಡ ಮೆಂಬರರ ಸಭೆಯು ಸದರಿ ತಾಲೂಕು ಬೋರ್ಡ ಆಫೀಸಿನಲ್ಲಿ ಕೂಡುವುದು. ನಾಮದಾರ ನಯಂಪಳ್ಳಿ ಸುಬ್ಬರಾಯರವರ ಡಿಸ್ಟ್ರಿಕ್ಟ್‌ಬೋರ್ಡ ಮೆಂಬರಿಕೆಯ ಅವಧಿಯು ಗುಜರಾಗಿರುವುದರಿಂದ ಈ ಸ್ಥಾನಕ್ಕೆ ಹೊಸ ಚುನಾವಣೆಯು ಈ ಸಭೆಯಲ್ಲಿ ಆಗುವುದು.

ಮಂಗಳೂರ ತಾಲೂಕುಬೋರ್ಡಿಗೆ ಮಂಗಳೂರ ಇಲೆಕ್ಟೋರಲ್ ಸರ್ಕಲಿನಿಂದ ಒಬ್ಬ ಮೆಂಬರರ ಚುನಾವಣೆಯಾಗತಕ್ಕದಿದೆ. ಇದಕ್ಕೆ ಉಮೇದ್ವಾರರಾಗತಕ್ಕವರು ತಮ್ಮ ಉಮೇದ್ವಾರಿಕೆಯ ಮನವಿಗಳನ್ನು ಇದೇ ತಿಂಗಳ ೩೧ನೇ ತಾರೀಕಿನ ಸಾಯಂಕಾಲ ೫ ಗಂಟೆಯೊಳಗೆ ಮಂಗಳೂರ ಸ್ಪೆಶಲ್ ಡಿಪ್ಯುಟಿ ತಹಸಿಲ್ದಾರರ ಬಳಿಗೆ ತಲ್ಪಿಸತಕ್ಕದ್ದು. ಚುನಾವಣೆಯು ಜುಲಾಯಿ ತಾ. ೯ಕ್ಕೆ ನಡಿಯುವುದು.

ಮ| ರಾ| ರಾ| ಇಡ್ಯ ವೆಂಕಟರಾಯರು ಉಡುಪಿಯ ಸಿವಿಲ್ ಅಸಿಸ್ಟಾಂಟ ಸರ್ಜನರಾಗಿಯೂ, ಮ| ರಾ| ಕುಳಾಯಿ ರಾಘವೇಂದ್ರ ಕಿಣಿಯರು ಬಂಟ್ವಾಳ ಸಿವಿಲ್ ಅಸಿಸ್ಟಾಂಟ ಸರ್ಜನರಾಗಿಯೂ ನೇಮಕಪಟ್ಟಿರುವರು.

ಮ| ಜೇಮ್ಸ್ ಸೆಕ್ವೈರ್ ಐ. ಸಿ. ಎಸ್‌ರವರು ಈ ಜಿಲ್ಲೆಯ ಅಸಿಸ್ಟಾಂಟ ಕಲೆಕ್ಟರರಾಗಿ ನೇಮಕಪಟ್ಟಿರುವರು.

[illegible] ಅವನ್ನು ತೆಗೆದುಹಾಕಿ ಯಾವ [illegible] ಸಾಧ್ಯವಿದೆ ಎಂಬವನ್ನು ಸರಕಾರದವರು ಇತರ [illegible] ಸರಿಯಾಗ ಸಲಿಕೆಯಿರುವ ಸೂಚನೆ [illegible] ಒಂದೊಂದಾಗಿ ಈ ಗ್ರಾಮ [illegible] ವನ್ನು ತೋರಿಸೋಣ.

[illegible] ತೀರ್ವೆ ವಸೂಲು [illegible] ವ್ಯಾಜ್ಯ ಮತ್ತು ಕ್ರಿಮಿನಲ್ ಮೊಕದ್ದಮೆಗಳ ವಿಚಾರ, [illegible] ಸಂಚರ್ವರ್ಗಗಳ [illegible] ಪಟೇಲರ ಮುಖ್ಯ ಕೆಲಸ [illegible] ಪಾರಂಪರ್ಯದ ಹಕ್ಕಿನಿಂದ ನಡೆಸಬರುವ ಈ ಹಲವು ಕಾರ್ಯ [illegible] ಕೆಲಸವು ಬೇಕಾಗಿದ್ದಿಲ್ಲ. ಒಂದುವೇಳೆ ಅಲ್ಪ ಸ್ವಲ್ಪ ಇದ್ದರೂ [illegible] ಶಾನುಭೋಗರಿಂದ ನಡಿಸಿ ದಸ್ಕತು ಮಾತ್ರ ಒತ್ತುವ ಜವಾಬ್ದಾರಿ ಈ [illegible] ಸಾಕಿತ್ತು. ಮುಖ್ಯವಾಗಿ ಪಟೇಲರ ಮಾತಿನಮೇಲಣ ಗೌರವ [illegible] ಸರ್ವಾಂಗವಾಗಿ ನಡೆಯುತ್ತಿತ್ತು. ಹಳ್ಳಿಯ ವರ್ಗದಾರರು ಆ [illegible] ಕಂದಾಯ ವಸೂಲಿಯ ಕೆಲಸವು ಕಷ್ಟವಾಗಿದ್ದೀತು. ಈಗ [illegible] ವರ್ಗದಾರರು ಕಾರಣಾಂತರಗಳಿಂದ ಬೇರೆ ಊರುಗಳಲ್ಲಿ ವಾಸವಾಗಿರು [illegible] ಶ್ರೀಮಂತರು ಈ ಊರಿನ ಆಸ್ತಿಯನ್ನು ಕ್ರಯಕ್ಕೆ ಪಡೆಕೊಳ್ಳು [illegible] ವರಿಂದ ಕ್ಲುಪ್ತಕಾಲದಲ್ಲಿ ತೀರ್ವೆ ವಸೂಲುಮಾಡುವ ಜವಾಬ್ದಾರಿಯು [illegible], ಇದಲ್ಲದೆ ಪೋಲಿಸ್ ರಿಜಿಸ್ಟ್ರಿ, ಜನನ ಮರಣ ರಿಜಿಸ್ಟ್ರಿ [illegible] ಇವುಗಳನ್ನು ಭರ್ತಿಯಿಸುವುದಲ್ಲದೆ ಹಳ್ಳಿಗಳಿಗೆ ಆಗಾಗ ಬರುವ [illegible] ಉದ್ಯೋಗಸ್ಥರ ಹಿಂದೆ ಕುಣಿದಾಡುವ ಕೆಲಸವು ಹೆಚ್ಚಾ [illegible]. ಇದರೊಂದಿಗೆ ಈ ಅಧಿಕಾರಿಗೆ ಸರಬರಾಯಿ, ಕೆಲವು ವೇಳಾಫಿ [illegible] ಗಳು, ಬಹುಬೇಲು ಕೊಟ್ಟರೆ ಸಿಟ್ಟು, ಇದೆಲ್ಲ ಪಟೇಲನ ಸ್ಥಿತಿಯನ್ನು [illegible] ಬಹಳವಸ್ಥೆಗೆ ಸಹಕಾರಿಯಾದವು. ಸರಬರಾಯಿಗೆ ಸರಿಯಾದ ಬೆಲೆ [illegible] ಅಧಿಕಾರಿಗಳು ಬಹಳ ಕಡಿಮೆ ಎಂತಲೇ ಹೇಳಬೇಕು. ಅದರಲ್ಲಿಯೂ [illegible] ಮೊಕದ್ದಮೆಯೆಂದು ಗ್ರಾಮದಲ್ಲಿ ಎದ್ದಿತೆಂದರೆ ಬಂದ ಈ ಅಧಿಕಾರರ ಹಿಂದುಮುಂದೆ ತನ್ನ ಮನೆಯ ಕೆಲಸ ಬಿಟ್ಟು ಓಡುವುದು, ಅವರಿಗೆ ಊಟಉಪ ಚಾರದ ಏರ್ಪಾಡು ಮಾಡುವುದು, ಇವೆಲ್ಲ ಸ್ವಲ್ಪ ಶಹರು ತಿರುಗಿ ಸುಧಾರಿಕರಾದ ಮತ್ತು ನಿಜವಾದ ಗೌರವವಿದ್ದವರ ಮನಸ್ಸನ್ನು ನೋಯಿಸುತ್ತಿವೆ. ತೀರ್ವೆ ಸಕಾಲ ದಲ್ಲಿ ವಸೂಲಾಗದೆ ಇದ್ದದ್ದಕ್ಕೆ ಪಟೇಲನಿಗೆ ತಾಲೂಕು ದಫೇದಾರನು ಕೈಗೆ ಹಿಡಿದು [illegible] ದಿನಗಳು ದಾಟಿಹೋದವು ಎಂದು ನಾವು ಹಿಗ್ಗುತ್ತಿದ್ದರೂ, ಪಟೇಲರಿಗೆ [illegible] ಹಳ್ಳಿಯಲ್ಲಿ ರೆವಿನ್ಯೂ ಅಧಿಕಾರಿಗಳು ದೊಬ್ಬುವ ದಿನಗಳ [illegible] ಹೋಗಿಲ್ಲ ಎಂಬುದಕ್ಕೆ ಈಚೆಗೆ ನಮಗೆ ಬಂದಿದ್ದ ಒಂದು [illegible] ಸಾಕ್ಷಿಯಾಗಿದೆ. ಈ ವಿಷಯದಲ್ಲಿ ಜನಗಳ ನಿಜವಾದ ಅಭಿಪ್ರಾಯವು ಏನಿದೆ ಎಂದು ತಿಳಿಯಬೇಕಾದರೆ ಎಷ್ಟುಜನರು ತಮ್ಮ ಮನೆತನದ ಹಕ್ಕನ್ನು [illegible] ಕೊಳ್ಳುತ್ತಿರುವಾಗ ತಮ್ಮ ಮನೆವಾರ್ತೆ ಶಾನುಭೋಗರನ್ನು ಬದಲಿ ಪಟೇಲರಾಗಿ ಇರಿಸುತ್ತಾರೆ ಎಂದು ಲೆಕ್ಕಮಾಡಬೇಕು. ಆಗ ಈ ಉದ್ಯೋಗದ ಬೆಲೆ ತಗ್ಗಿದೆ ಎಂದು ಗೊತ್ತುಮಾಡಲಿಕ್ಕೆ ಬೇರೆ ಸಾಧನವು ಅಗತ್ಯವಿಲ್ಲ. [illegible] ರೂಪಾಯಿ ಸಂಬಳದ ವ್ಯಾಕ್ಸಿನೆಟರನೂ, [illegible] ರೂಪಾಯಿ ಸಂಬಳದ ಕೋನ್ಸ್ಟೆಬಲನೂ ಫಾರೆಸ್ಟ್ ಗಾರ್ಡನೂ ಇಂಥ ಅಧಿಕಾರಿಗಳು ತಮಗಿಷ್ಟ ಬಂದಾಗ ತಮ್ಮಲ್ಲಿ ಕೆಲಸಕ್ಕೆ ಇರುವ ಪ್ರಾಣಿಗಳು ಮತ್ತು [illegible] ಸಾವಿರ ರೂಪಾಯಿ ತೀರ್ವೆ ತೆರುವ ಪಟೇಲನಿಗೆ ಗದರಿಸತೊಡಗಿದರೆ ಪಟೇಲನ ಗೌರವ ಎಲ್ಲಿ ಉಳಿಯಿತು? ಡಿಪ್ಯುಟಿ ಕಲೆಕ್ಟರ್ ಅಥವಾ ಕಲೆಕ್ಟರ ಕಚೇರಿಯ [illegible] ಬಂದರೆ ಪಟೇಲನ ಎದುರಾಗಿ ಸರಿ ಸ್ಥಾನದಲ್ಲಿ ಕುಳಿತುಕೊಂಡರೆ ಗೌರವವೆಲ್ಲಿ ಉಳಿಯಿತು? ಇದನ್ನೆಲ್ಲ ಹೋಗಲಾಡಿಸಬೇಕಾದರೆ ಪಟೇಲನಿಗೆ ಕಲೆಕ್ಟರರ ಆಫೀಸಿಗೆ ಅಥವಾ ಸಮಕ್ಷಮಕ್ಕೆ ಹೋದರೆ ಕುರ್ಚಿ ಸಿಗಬೇಕು ಎಂದು ನಿರ್ಣಯಿಸಬೇಕು. [illegible] ರೂಪಾಯಿ ಸಂಬಳದ ಸ್ಟೇಶನ್ ಹೌಸ್ ಆಫೀಸರನಿಗೆ ಮಜಿಸ್ಟ್ರೇಟ ಕಚೇರಿಯಲ್ಲಿ ಸಾಕ್ಷಿಯಾಗಿ ಅಥವಾ ವ್ಯವಹರಿಸಲಿಕ್ಕೆ ಹೋದಾಗ ಕುರ್ಚಿ ಸಿಗಬೇಕೆಂದು ನಿಯಮವಿತ್ತು. ಹಾಗೆಯೇ ಒಂದೆರಡು ಸಾವಿರ ರೂಪಾಯಿ ತೀರ್ವೆ ತೆರುವ ಪಟೇಲನಿಗೆ ಯಾಕೆ ಮಜಿಸ್ಟ್ರೇಟ ಕಚೇರಿ ತಾಲೂಕು ಕಚೇರಿ ಡಿಪ್ಯುಟಿ ಕಲೆಕ್ಟರ್ ಕಚೇರಿಗಳಲ್ಲಿ ಕುರ್ಚಿ ಸಿಗಬಾರದೆಂದು ಗೊತ್ತಾಗುವುದಿಲ್ಲ. ಕಲೆಕ್ಟರರು ಈ ವಿಷಯದಲ್ಲಿ ನಿಗಾಕೊಟ್ಟರೆ ಇತರ ಕೆಳಅಧಿಕಾರಿಗಳು ಅದನ್ನೇ ಅನುಸರಿಸುತ್ತಾರೆ. ಮಜಿಸ್ಟ್ರೇಟ್ ಗ್ರೇಡಿನ ಕೆಳಗಿನ ಅಧಿಕಾರಿಗಳು ಆ ಹಳ್ಳಿಯಲ್ಲಿ ಮೊಕ್ಕಾಂ ಮಾಡಿದ್ದಲ್ಲಿ [illegible] ಪಟೇಲರನ್ನು ಕರೆಸುವ ಬದಲಾಗಿ ತಾವೇ ಹೋಗಿ ಪಟೇಲರನ್ನು ಕಾಣಬೇಕು, ರೆವಿನ್ಯೂ ಇನ್ಸ್‌ಪೆಕ್ಟರರು ಸಹಾ ಹಾಗೆಯೇ ಪಟೇಲರನ್ನು ಮನೆಯಲ್ಲಿ ಕಾಣಬೇಕು ಎಂದು ನಿರ್ಣಯವಿರಬೇಕು. ಚಿಲ್ಲರೆ ಕೆಲಸಗಳಿಗೋಸ್ಕರ ಆಗಾಗ ತಾಲೂಕ ಕಚೇರಿಗೆ ಅವರನ್ನು ಬರಮಾಡಿ ದಣಿಸಲಾಗದು. ತಾಲೂಕು ಕಚೇರಿಗೆ ಬಂದಾಗ ಅವರಿಗೆ ಸರಿಯಾಗಿ ಸಕಂದ [illegible] ಬತ್ತ ಸಿಗಬೇಕು. ಬತ್ತ ಅವರಿಗೆ ಮನಿ ಆರ್ಡರ್ ಆಗಿ ಹೋಗಬೇಕಲ್ಲದೆ ಬರಮಾಡಿ ಅದೊಡನೆ [illegible] ಆಫೀಸರ ಎದುರಿನಲ್ಲಿ ಅದನ್ನು ಹಂಚಬೇಕು ಎಂದು ಹೇಳದ [illegible] ಪಟೇಲರ ಜೇಬಿಗೆ ಸೇರೀತು ಎಂಬ ನೆನಪು [illegible] ಬರುತ್ತದೆ, ಅಲ್ಲಿಯೇ ಬಟವಾಡೆ ಆಗ [illegible] ಫಲಹಾರ, ಊಟ [illegible] ಮುಂತಾದ ವಿನೋದಗಳ ಮೂಲಕ ಆ ಹಣ ಗಳನ್ನು ಸಲ್ಲಿಕೊಳ್ಳುವುದಲ್ಲದೆ ಅದ [illegible] ದನದಾ [illegible] ಮತ್ತು ವೇದಿಗಳ [illegible] ಕಾಲವು ಇಂತಿಷ್ಟೆ ಎಂದು ಇರುವುದರಿಂದ ಅದಕ್ಕೆ ಸಲ್ಲಿಕೆಯಾಗುವ [illegible] ಸೂಚನೆಯಂತೆ [illegible] ಬತ್ತ ಇರಬಹುದು, ಆದರೆ ಆ ಹಣ ಮನಿಆರ್ಡರ ಮೂಲಕವಾಗಿಯೇ ಸಿಗಬೇಕು.

ಪಾರಂಪರ್ಯ [illegible] ಹಕ್ಕಿನ ಬದಲಾಗಿ ಈ ಉದ್ಯೋಗವು [illegible] ವರ್ಷ ಕ್ಕೊಮ್ಮೆ ಗ್ರಾಮಸ್ಥರ ಚುನಾವಣೆಯಿಂದ ಆಗಬೇಕು. ಈಗ ಗ್ರಾಮ [illegible] ಗಳ ಪಂಚಾಯತು ಹಳ್ಳಿಯವರಿಂದ ಚುನಾವಣೆಯಾಗಬಹುದೆಂದರೆ ಈ ಗೌರವದ ಕೆಲಸಕ್ಕೆ ಚುನಾವಣೆಗೆ ಸಿಗಲಾರರೇ? ವರ್ಷಂಪ್ರತಿ ಈ ಉದ್ಯೋಗಕ್ಕೆ ಯೋಗ್ಯತೆ ಯುಳ್ಳವರ ಒಂದು ಪಟ್ಟಿಯು ಪ್ರಕಟವಾಗಬೇಕು. [illegible] ಉದ್ಯೋಗಸ್ಥರು ಎಂಬುದರಿಂದ ಅವರಿಗೆ ಈಗ ವೋಟ ಮುಂತಾದ ವಿಷಯದಲ್ಲಿ ಇರುವ ಅನಾನುಕೂಲತೆಯನ್ನು ತೆಗೆದುಹಾಕಬೇಕು. ಮುಖ್ಯವಾಗಿ ಈ ಉದ್ಯೋಗಕ್ಕೆ ಸಂಬಳಕೊಟ್ಟು ಪೂರೈಸಲಾರದು. ಅವರ ಗೌರವವನ್ನು ಹೆಚ್ಚಿಸಿ ಮುಖ್ಯ ವಾಗಿ ಸರಕಾರದ ನವುಕರರ ದೃಷ್ಟಿಯಲ್ಲಿ ಅವರ ಗೌರವವನ್ನು ಹೆಚ್ಚಿಸಿ, ಅವರ ಮೇಲೆ ಅತ್ಯಾಚಾರ ನಡಿಸಿದವರಿಗೆ ಕೆಲಸದಿಂದ ಅಯೋಗ್ಯರೆಂದು ದಂಡಿಸಿ, ಅವರ [illegible] ವನ್ನು ಎತ್ತಿಹಿಡಿದರೆ, ಸರಕಾರದ ಕೆಲಸದಲ್ಲಿ ಶ್ರಮಪಟ್ಟದ್ದಾಗ ಅವ ರಿಗೆ [illegible] ಬತ್ತಕೊಡಬೇಕೆಂಬದು ಸಾಧ್ಯವಾದರೆ [illegible] ಈಗಿನಂತೆ [illegible] ಕೊಟ್ಟರೆ ಸಾಕೆಂದು ನಮ್ಮ ಅಭಿಪ್ರಾಯ.

[illegible]

[illegible]

(ಮುಂದರಿಸಲಾಗುವುದು)

ಪುಂಜಹೊಲಗಳಲ್ಲಿ ಬೆಳೆಯುವ "ಮೊಡನ್"
ಭತ್ತವ ಸಾಗುವಳಿ

ಮಳೆಯ ನೀರಿನ ಸಹಾಯದಿಂದಲೆ ಬೆಳೆಯುವ ಪೈರಗಳಾದ ಹಸಿಬುದಿ, ಮೆಣಸ, ಮರಗೆಣಸು, ಗೆಣಸು, ಭತ್ತ ಮತ್ತು ರಾಗಿಯೇ ಮೊದಲಾದ ಪೈರು ಗಳನ್ನು ಬೆಳೆಸಲು ಯೋಗ್ಯವಾದ ಮತ್ತು ವಿಸ್ತಾರವಾದ ಪುಂಜ ಅಥವಾ ಕುಮ್ಕಿ ಸ್ಥಳಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿಯೂ ಇವೆ. ಹೆಚ್ಚಾದ ಮಳೆಯ ಪ್ರವಾಹಗಳಿಂದ ಮೇಲಿನ ಮಣ್ಣೆಲ್ಲಾ ಕೊರೆದು ಹೋಗುವುದರಿಂದ ಈ ಸ್ಥಳಗಳೆಲ್ಲಾ ಈಗ ಹಾಳು ಬಿದ್ದ ಬಂಜರು ಭೂಮಿಯಂತೆ ಕಾಣುತ್ತವೆ. ಕೆಲವು ಪ್ರದೇಶಗಳಲ್ಲಿ ನೀರಿನ ಪ್ರವಾಹವು ಬಹಳ ರಭಸದಿಂದ ಹರಿದುಹೋಗಿ ಹೆಚ್ಚು ಮಣ್ಣು ಕೊರೆದು ಹೋಗುವುದರಿಂದ ದೊಡ್ಡ ದೊಡ್ಡ [illegible] ಗಳಾಗುವುದಲ್ಲದೆ, ಅದು ಕೊರೆದು ಹೋಗುವುದರಿಂದ ಕಣಿಯ ಎರಡು ಪಾರ್ಶ್ವದಲ್ಲಿಯೂ ಮಣ್ಣು ಬಹಳ ದೂರದ ವರೆಗೆ ಜರಿದು ಬಿದ್ದು ನೀರಿನ ಹೊಳೆಗೆ ಹೊಡಕೊಂಡು ಹೋಗಲ್ಪಡುತ್ತದೆ. ಇದಲ್ಲದೆ ಇಂಥಾ ಸ್ಥಳಗಳಲ್ಲಿರುವ ಕಾಡು ಕಾಸುಗಳನ್ನು ವಿಚಾರವಿಲ್ಲದೆ ಕಡಿದು ಬಿಡುವುದಲ್ಲದೆ ಕೆಲವೆಡೆಗಳಲ್ಲಿ ಅವುಗಳ ಬೇರುಗಳನ್ನು ಸಹಾ ಸೌದೆಗಾಗಿ ಅಗೆದು ತೆಗೆಯುತ್ತಾರೆ. ಹೀಗೆ ಮಾಡುವುದರ ಬದಲಿಗೆ ಅವುಗಳನ್ನು ಇದ್ದಲ್ಲಿಯೇ ಬಿಟ್ಟಿದ್ದರೆ ಈ ಕಾಡುಗಳು ಮಳೆಯ ಪ್ರವಾಹದಿಂದ ಕೊಚ್ಚಿ ಕೊರೆದು ಹೋಗುವ ಫಲವತ್ತಾದ ಮಣ್ಣನ್ನು ತಡೆಯುವವು. ಅಲ್ಲಲ್ಲಿರುವ ದೈವರ [illegible] ಗಳಲ್ಲಿ, ಅಲ್ಲದೆ ಬೇರೆ ಇಂಥಾ ಸ್ಥಳಗಳಲ್ಲಿ ಬಾವಣಿಗೆ ಉಪಯೋಗಿಸುವ ಮುಳಿ ಹುಲ್ಲಾದರೂ ಬೆಳೆಯುವುದಿಲ್ಲ. ಹೀಗೆ ವಿಸ್ತಾರವಾದ ಸ್ಥಳದಿಂದ ಏನೊಂದು ಉತ್ಪತ್ತಿಯೂ ದೊರೆಯದರಿಂದ ನಿಶ್ಚಯವಾಗಿಯೂ ಈ ಜಿಲ್ಲೆಗೆ ದೊಡ್ಡ ನಷ್ಟವು ಮತ್ತು ಎಲ್ಲಾ ತರದ ಆಹಾರದ ಜೀನಸುಗಳಿಗೆ ಈಗಿರುವ ಹೆಚ್ಚಿನ ಬೆಲೆಯನ್ನು ಆಲೋಚಿಸಿ ಆಗ ಈ ನಷ್ಟವು ಬಹು ಹೆಚ್ಚಿನದೆಂದು ಕಂಡುಬರುವುದು. ಅತೀ ಇಳಿಜಾರಿನಲ್ಲಿರುವ ಸ್ಥಳದಲ್ಲಿ ಹೊರತು ಬೇರೆ ಕುಮ್ಕಿ ಸ್ಥಳಗಳಲ್ಲಿ ಯೋಗ್ಯವಾದ ರೀತಿಯಲ್ಲಿ ನೆಲವ [illegible] ಕಟ್ಟುಗಳನ್ನು [illegible] ನೀರು ಕೆಳಕ್ಕೆ [illegible] ಹೋಗುವುದನ್ನು ನಿಲ್ಲಿಸಿ ಒಳ್ಳೇ ಕೃಷಿ ಮಾಡಬಹುದಾದ ಭೂಮಿಯಾಗಿ ಮಾರ್ಪಡಿಸಬಹುದು. ಪಶ್ಚಿಮ ಕರಾವಳಿಯಲ್ಲಿ ಪ್ರಧಾನ ಸಾಗುವಾದ ಉಷ್ಣ [illegible] ಕೃಷಿಯ ವಿಷಯ [illegible] ನೇ ವರುಷದ ಕೃಷಿ ಇಲಾಖೆಯ ಪಂಚಾಂಗ ದಲ್ಲಿ ಒಂದು ಲೇಖನವು ಬರೆಯಲ್ಪಟ್ಟಿದೆ. ಇದನ್ನು ತಿಳಿಯಲಪೇಕ್ಷಿಸುವವರು ಅರ್ಜಿಮಾಡಿದ್ದಲ್ಲಿ ಒಂದು ಪಂಚಾಂಗವು ಉಚಿತವಾಗಿ ಕೊಡಲ್ಪಡುವುದು.

[illegible] ಈ ಕಿರುಟಿಪ್ಪಣಿಯಲ್ಲಿ ಕುಮ್ಕಿ ಸ್ಥಳದಲ್ಲಿ ನೆಲ್ಲನ್ನು ಬೆಳೆಯಿಸುವ ವಿಧಾನ ವನ್ನು ವಿವರಿಸಿಯದೆ. ದಕ್ಷಿಣಕನ್ನಡ ಪುಂಜ ಪ್ರದೇಶದಲ್ಲಿರುವ [illegible] ಭೂಮಿಗಳಲ್ಲಿ ಮೊಡನ್ ಎಂಬುವ ಒಂದು ವಿಧದ ಭತ್ತವನ್ನು ವಿಸ್ತಾರವಾಗಿ ಎಲ್ಲೆಲ್ಲಿಯೂ ಬೆಳೆಸುತ್ತಾರೆ. ಈ ಭತ್ತವನ್ನು ಸಸಿಗಳ ಬೆಳೆಯುವುದಕ್ಕೆ ಸಾಕಷ್ಟು ಮಣ್ಣಿರುವ ಮತ್ತು ನೀರು ನಿಂತಲ್ಲಿಯೇ ನಿಲ್ಲದೆ ಚೆನ್ನಾಗಿ ಸೋರಿಹೋಗುವ ಎಲ್ಲಾ ತರದ ಭೂಮಿಗಳಲ್ಲಿ ಬೆಳೆಸಬಹುದು. ಇದರ ಕೃಷಿಕ್ರಮವು ಬಹಳ ಸುಲಭ [illegible] ಈ ಬಳ [illegible] ಸಂಗ [illegible] ಮಾಡಿ ನೆಲದ ಇಳಿಜಾರಿಗೆ ಅಡ್ಡವಾಗಿ ಸರಿಯಾಗಿ ಅಡ್ಡ [illegible] ಮಳೆಯ ನೀರಿನಿಂದ ಮೇಲಿನ ಮಣ್ಣು ತೊಳಕೊಂಡು ಹೋಗದಂತೆ ಮಾಡಬೇಕು. [illegible] ಕೆಳಕ್ಕೆ [illegible] ಹೋಗದಂತೆ [illegible] ಬೇಕು. ಇವು ಅಲ್ಲದೆ [illegible], ಹಾವಿನ ಗೊಬ್ಬರವೂ ನೀರಿನ [illegible] ಹೋಗದಂತೆ ಜಾಗ್ರತೆ ತೆಗೆದುಕೊಳ್ಳಬೇಕು. ಆದರೆ ಈ ಕೆಲಸವನ್ನು [illegible] ಪ್ರಕಾರವಾಗಿಯೇ ಮಾಡಬೇಕೆಂಬುದು ಹೇಳಲಿಕ್ಕಿಲ್ಲ. ನೆಲವು ಯಾವ [illegible] ಇಳಿಜಾರಾಗಿ ಹೋಗುತ್ತದೋ ಅದಕ್ಕೆ ಅಡ್ಡವಾಗಿ [illegible] ಗಳನ್ನು ಕಟ್ಟಬೇಕು. ನೆಲವು ಇಳಿಜಾರಾದಷ್ಟಕ್ಕೆನೇ ಈ ಅಡ್ಡ [illegible] ಗಳು ಬಹು ಹತ್ತಿರ ಹತ್ತಿರವಾಗುತ್ತ ಬಂದೀತು. ಬಹು ಇಳಿಜಾರಾದ ಸ್ಥಳಗಳಲ್ಲಿ ಅಂತಸ್ತುಗಳನ್ನು (Terrace) ಹಾಕಬೇಕಾಗುವುದು.

[illegible] ಕೃಷಿ ಮಾಡಿದ ಭೂಮಿಗೆ ದನಕರುಗಳ ಹೋಗಿ ಹಾವಳಿಮಾಡದಂತೆ ಭೂಮಿಯ ಸುತ್ತಲೂ ಬೇಲಿ ಹಾಕಬೇಕು. ಕೆಮ್ಮಣ್ಣಿನಿಂದ ಮಾಡಲ್ಪಟ್ಟ ಅಗ್ಗ ವಾಗಿಯೂ ಬಲವಾಗಿಯೂ ಇರುವ ಗೋಡೆಯೇ ಅತ್ಯುತ್ತಮವಾದ ಬೇಲಿಯಾಗಿರ ವುದು. ಆದರೆ ಬಿದಿರಿನ ಬೇಲಿ ಅಥವಾ ಮುಳ್ಳು ಪೊದೆಗಳಿಂದ ಮಾಡಿದ [illegible] ತಕ್ಕಷ್ಟು ಪೈರನ್ನು ಕಾಪಾಡಬಹುದು. ಆದರೆ ಈ ಬೇಲಿಯು ಒಳ್ಳೇದಾಗಿಯೂ ಗಟ್ಟಿಯಾಗಿಯೂ ಇರಬೇಕು. ಯಾಕೆಂದರೆ ಸುತ್ತುಮುತ್ತಲೂ ಯಾವ ಹಸಿಯಾದ ವನಸ್ಪತಿಯು ಇಲ್ಲದಿರುವುದರಿಂದಲೂ ಬಹು [illegible] ದ ಸಾಕಿದ ಆಹಾರವಿಲ್ಲ ದೆ [illegible] ನಾಲ್ಕು [illegible] ಗಳು [illegible] ರಿಂದಲೂ ಇಂಥಾ ಸ್ಥಳದಲ್ಲಿ ಬೆಳೆಯುವ ಪೈರನ್ನು ದನಗಳು ತಿಂದು ಹಾವಳಿ ಮಾಡಿಬಿಟ್ಟಾವು. ಆದರೆ ಬೇಲಿಯೂ ಚೆನ್ನಾಗಿ ಗಟ್ಟಿಯಾಗಿರಬೇಕು. ಪೈರನ್ನು ಬಿತ್ತುವ ಮೊದಲು ಭೂಮಿಯನ್ನು [illegible] ಉಳಬೇಕು.

[illegible] ಬೀಜವನ್ನು ಬಿತ್ತುವ ಮುಂಚೆ ಭೂಮಿಗೆ ಗೊಬ್ಬರ ಹಾಕಬೇಕು. [illegible] ಬಂಡಿ ಹಟ್ಟೀ ಗೊಬ್ಬರವನ್ನೂ [illegible] ಬಂಡಿ ಬೂದಿಯನ್ನೂ [illegible] ಹಂಡ್ರಡ್‌ವೆಟ್ (ಹತ್ತು [illegible]) ಮೂಳೆಹುಡಿ ಅಥವಾ [illegible] ಒದಗಿಸಿದ ವಿಶಾಲ [illegible] ಕೊಂಡು ಚೆನ್ನಾಗಿ ಮಿಶ್ರಮಾಡಿದರೆ ಒಂದು ಎಕ್ರೆ ಸ್ಥಳದ ಪೈರಿಗೆ ಸಾಕಾದ ಗೊಬ್ಬರ ಸಿದ್ಧವು. ಈ ಗೊಬ್ಬರವನು ಉತ್ತ ಭೂಮಿಯಲ್ಲಿ ಏಕಪ್ರಕಾರವಾಗಿ ಚೆಲ್ಲಿ ಹೊಲವನ್ನು ಒಂದು ಸಾಲ ಉಳಬೇಕು. ಅನಂತರ ಎಕ್ರೆಗೆ [illegible] ಮದ್ರಾಸು ಪಡಿ ಅಥವಾ [illegible] ಸೇರು ಬೀಜದ ಪ್ರಕಾರ ಬಿತ್ತಬೇಕು. ಬಿತ್ತಿದ ನಂತರ ಮೇಲ ಮೇಲಕ್ಕೆ ಇನ್ನೊಂದು ಸಾರಿ ಉಳಬೇಕು. ಮತ್ತು ಬೀಜವನ್ನು ಮುಚ್ಚಬೇಕು.

[illegible] ಬಿತ್ತಿದ ಒಂದು ತಿಂಗಳ ನಂತರ ಎರಡು ಸಾರಿ ಗಿಡಗಳ ಸುತ್ತ ಮುತ್ತಲಿರುವ ಮಣ್ಣನ್ನು ಸಡಿಲಮಾಡಿ ಕಳೆಗಳೆಲ್ಲಾ ತೆಗೆಯಬೇಕು. ಇದರ ನಂತರ ಬೆಳೆ ಕಟಾವುಮಾಡುವ ಕೆಲಸ ಒಂದೇ ಉಳಿಯುವುದು. ಬಿತ್ತುವುದು ಸಾಧಾರಣವಾಗಿ ಮೇ ತಿಂಗಳಲ್ಲಿ ಒಂದೆರಡು ಮಳೆ ಬಂದು ಮಣ್ಣು ನೆನೆದ ಮೇಲೆ ಮಾಡಬೇಕು. ಸಪ್ಟಂಬರ ತಿಂಗಳಲ್ಲಿ ಬೆಳೆಯು ಕಟಾವಿಗೆ ತಯಾರಾ ಗುವುದು. ಹೀಗೆ ಬೆಳೆಯು ಬೇರೆ ನೀರಿಲ್ಲದ ಸ್ಥಳದಲ್ಲಿಯಾದರೂ ಬರೇ ಮಳೆಯ ಸಹಾಯದಿಂದ ಬೆಳೆಯುತ್ತದೆ. ಈ ಬೆಳೆಯ ಪೈರು ಕಟಾವು ಮಾಡಿದ ನಂತರ ಹೊಲವನ್ನು ಉತ್ತು ಹುರುಳಿಯನ್ನು ಬಿತ್ತಿದರೆ ಏನೂ ಗೊಬ್ಬರ ಹಾಕದನೇ ಒಳ್ಳೇ ಉತ್ಪತ್ತಿ ದೊರೆಯುವುದು.

ಯಂ. ಗೋವಿಂದ ಕೆದಿಲಾಯ,
ಕೃಷಿ ಎಸಿಸ್ಟಾಂಟ್ ಡೈರೆಕ್ಟರರು

[illegible]

[illegible]

[illegible] ಇಂಗ್ಲಂಡದ [illegible] ಪ್ರವಚನ [illegible] ದುಡಿಯಾದ ತಕ್ಕಿಂಗ ಮೊದಲಾದ [illegible] ಈ ಸಿವಿಲ್ ಸರ್ವೆಂಟರು ಎಂದರೆ [illegible] ಸಾಗುವದೇ [illegible] ಈ ಸರ್ವೆಂಟರು ಪ್ರಜಾಜನಕ್ಕೆ [illegible] ತಂದೆಗಳಂತೆ ಇರುವರೆಂತಲೂ [illegible] ಭಾರವನ್ನು ವಹಿಸಿದ ಇವರನ್ನು ಪ್ರಜೆಗಳು ಆಪದ್ಬಾಂಧವರೆಂತೆ ಮತ್ತು ವಿತ್ತಜೀವಿತೀಭೂತಗಳ ಸಂರಕ್ಷಕರಂತೆ ಭಾವಿಸುತ್ತಿರುವರೆಂತಲೂ ಇಂಗ್ಲಂಡದ ಜನರ ಗ್ರಹಿಕೆಯಾಗಿದೆ. ಈ ಸರ್ವೆಂಟರು ಪ್ರಜೆಗಳ ಭಾವನೆಗಳನ್ನೂ ವಾಂಛಿತಗಳನ್ನೂ ಅರಿತುಕೊಂಡು ಲೋಕರಕ್ಷಣದ ಭಗವತ್ಕಾರ್ಯವನ್ನೇ ಇಲ್ಲಿ ನಡೆಸಿರುವರೆಂದೂ ಇಂಗ್ಲಂಡದ ಜನರು ಹೇಳುತ್ತಾರೆ. ಧೈರ್ಯ, ಕಲ್ಪಕತೆ, ಪ್ರಸಂಗಾವಧಾನ ಮುಂತಾದ ಗುಣಗಳು ಸ್ವಾಭಾವಿಕವಾಗಿಯೇ ಇಂಗ್ಲೀಷ ಜನರಲ್ಲಿ ನೆಲೆಗೊಂಡಿದ್ದು, ಶಾಲೆ ಕಾಲೇಜುಗಳಲ್ಲಿ ಅವುಗಳ ಪೋಷಕವಾಗುವುದರಿಂದ, ಇಂಗ್ಲಂಡದಲ್ಲಿಯ ವಿದ್ಯಾಪೀಠಗಳ ವಾತಾವರಣವು ಇವುಗಳ ಬೆಳವಣಿಗೆಗೆ ಅವಶ್ಯವಾದ್ದೆಂದೂ, ಸ್ವಭಾವತಃ ಈ ಗುಣಗಳನ್ನರಿಯದ ಹಿಂದೀ ಮನುಷ್ಯನು ಇಂಗ್ಲಂಡಕ್ಕೆ ಹೋಗಿಯೇ ಅವುಗಳನ್ನು ಪಡೆಯಬೇಕೆಂದೂ, ಅಲ್ಲಿಯವರೆಗೆ ಅವನಿಗೆ ಸಿವಿಲ್ ಸರ್ವಿಸಿನಲ್ಲಿ ಪ್ರವೇಶವಾಗಕೂಡದೆಂದೂ ಹೇಳಲ್ಪಡುತ್ತದೆ. ಸಿವಿಲ್ ಸರ್ವೆಂಟರ ವಿಷಯಕ ಕಲ್ಪನೆಗಳು ಈ ಬಗೆಯವು. ಆದರೆ ವಸ್ತುಸ್ಥಿತಿಯು ಹೇಗಿರುತ್ತದೆ ನೋಡಿರಿ. ಕ್ರಿಸ್ತನಿಂದ ಪ್ರಣೀತವಾದ ಸತ್ಯಮಾರ್ಗವನ್ನರಿಯದ ಈ ಹೀನದೀನರಾದ ಪ್ರಜೆ ಗಳಿಗೆ ವಿಶಿಷ್ಟವಾದ ತಾಯಿತಂದೆಯಂತಿರುವ ಈ ಸಿವಿಲ್ ಸರ್ವೆಂಟನು ಜನರ ಮನೋಭಾವಗಳನ್ನೂ ಆಚಾರವಿಚಾರಗಳನ್ನೂ ಎಳ್ಳಷ್ಟಾದರೂ ಅರಿಯದವನಾಗಿ ದ್ದರಿಂದಲೇ ಸುಮ್ಮನಾಗಿ ಸೇರಿ ತನ್ನ ಕಡೆಗೆ ಜನರು ಒಂದೊಡನೆಯೇ ಅದನು ಅಂಜಿ ಕ್ಯಾಂಟೋನಮೆಂಟಿಗೆ ಹೋಗಿ, ಬ್ರಿಟಿಷ ಫೌಜಿಯ ಆಶ್ರಯಬೇಡಿ, ಅವರ ಕೈಯೊಳಗೆ ರಾಜ್ಯಸೂತ್ರಗಳನ್ನೆಲ್ಲ ಒಪ್ಪಿಸಿ ತಾಯಿತಂದೆಯಂತೆ ತನ್ನಲ್ಲಿ ವಿಶ್ವಾಸ ವನ್ನಿಟ್ಟ ಈ ಮಕ್ಕಳು ಕ್ರೂರತನದಿಂದ ಉಂಟಾದ ನಿರ್ಲಕ್ಷ್ಯತೆಯ ಅಪಮಾನ ಗಳಿಗೆ ಗುರಿಯಾಗುವದನ್ನು ಕಣ್ಣಾರೆ ನೋಡುತ್ತಾನೆ. ಇಂಥ ಈ ಸಿವಿಲ್ ಸರ್ವೆಂಟ ನಿಗೆ ಏನೆನ್ನಬೇಕು! ನಿಜವಾದ ತಾಯಿತಂದೆಗಳು ತಮ್ಮ ಮಕ್ಕಳಿಗೆ ಈ ಬಗೆಯ ಆಪತ್ತುಗಳೂ ಅಪಮಾನಗಳೂ ಸಂಭವಿಸಿದ್ದನ್ನು ಕಣ್ಣಾರೆ ನೋಡುವದಕ್ಕಿಂತ ಮರಣವೇ ಲೇಸೆಂದು ಭಾವಿಸುತ್ತಿದ್ದರಲ್ಲವೇ? ಕೆರವನ್ನು ಕೊಡುವವರ ಕಾಲ ಮೇಲೆ ಅಧಿಕಾರೀ ವರ್ಗದವರ ಅನಿಯಂತ್ರಿತವಾದ ಅಧಿಕಾರವು ಇನ್ನೂ ಅಬಾಧಿತವಾಗಿಯೇ ಉಳಿದಿರುವದರಿಂದ ಮತ್ತೊಮ್ಮೆ ಈ ತರದ ಪ್ರಸಂಗವು ಬಂದಾಗ, ತನ್ನ ಸಂರಕ್ಷಣೆಗೆ ದೊಡ್ಡದೊಂದು ಲಷ್ಕರವೇ ಬೇಕೆಂದೂ ಜಂಜಾಟದ ಕೋಟೆ ಗಳಲ್ಲಿ ಉಪಯೋಗಿಸಲ್ಪಟ್ಟ ಆಯುಧಗಳಲ್ಲದೆ ಇತ್ತೀಚಿಗೆ ಯುದ್ಧದಲ್ಲಿ ಉಪ ಯೋಗಿಸಲ್ಪಟ್ಟ [illegible] ವಿಷವಾಯುವನ್ನು ಹುಟ್ಟಿಸುವ ಪದಾರ್ಥಗಳೂ ಬೆಂಕಿಯ ಮಳೆಯನ್ನು ಸುರಿಸುವ ಪದಾರ್ಥಗಳೂ ತನಗೆ ಬೇ ಕೆಂದು ಸಹ ಈ ಸರ್ವೆಂಟನು ಕೇಳಬಹುದು! ಮತ್ತು ಈ ರೀತಿಯಿಂದ ತಾನು ಇಂಗ್ಲೀಷ ಮನುಷ್ಯನ [illegible] ವಾಸವನ್ನು ಮಾಡಿದೆಯಲ್ಲವೆ. ನಿನ್ನ ಮೇಲೂ ನಿನ್ನ ಮಕ್ಕಳು ಮಂಗಳ ಮೇಲೂ ನಾವು ಚೆನ್ನಾಗಿ ಮುಯ್ಯ ತೀರಿಸಿ ಕೊಳ್ಳುತ್ತೇವೆ ನೋಡು ಎಂದು ಹೇಳಿ ತನ್ನ ಈ ಉದಾತ್ತವಾದ ಮನೋರಥ ವನ್ನು ಇವನು ಪೂರ್ಣಮಾಡಿಕೊಳ್ಳಬಹುದು.

ಇದೆಲ್ಲ ಏತರ ಪರಿಣಾಮವು? ಒಂದು ಜನಾಂಗವು ಮತ್ತೊಂದು ಜನಾಂಗ ವನ್ನು ಅದರ ಇಚ್ಛೆಯ ವಿರುದ್ಧವಾಗಿ ಆಳುವುದರ ಪರಿಣಾಮವಲ್ಲವೇ? ಇಂಗ್ಲೀಷ ಜನರು ಬಲು ಒಳ್ಳೆಯವರು, ಸ್ವಾತಂತ್ರ್ಯಪ್ರಿಯರು. ಪರರೊಡನೆ ವ್ಯವಹಾರ ಮಾಡುವದರಲ್ಲಿ ನ್ಯಾಯವಂತರು. ಲಾಯಡ ಜಾರ್ಜರು ಮ್ಯಾನಶನ್ ಹೌಸಿ ನಲ್ಲಿ ಆದ ತಮ್ಮ ಭಾಷಣದಲ್ಲಿ ಹೇಳಿದಂತೆ ಇಂಗ್ಲಂಡವು 'ವೀರರ ಜನಾಂಗವು'' ನನಗೆ ಅವರ ವಿಷಯಕ್ಕೆ ಬಹಳ ಅಭಿಮಾನವಿದೆ. ಅವರೊಡನೆ ನನ್ನ ಸಂಬಂಧವು ಯಾವಾಗಲೂ ಅತ್ಯಂತ ಸಮಾಧಾನಕಾರಕವಾದುದೇ ಇದೆ. ಬ್ರಿಟಿಷ ಸೋಲ್ಜರನನ್ನು ನಾನು ಸ್ವಲ್ಪ ಬಲ್ಲೆನು. ಅವನೂ ಒಳ್ಳೆಯವನೆಂದೇ ನನ್ನ ಭಾವನೆ. ಅವನೂ ತನ್ನ ಸಿವಿಲಿಯನ್ ಬಂಧುವಿನಂತೆಯೇ! ವ್ಯವಹಾರದಲ್ಲಿ ಸರಳನು, ಕೂಡಿದಾಗ ಮಾತ್ರವೇ ಸ್ತ್ರೀಯರನ್ನು, ಮಕ್ಕಳನ್ನು ಮಿತ್ರರಂತೆ ನೋಡಲಿಕ್ಕೂ ಅವರ ಮೇಲೆ ಪ್ರೇಮ ಮಾಡಲಿಕ್ಕೂ ಕಲಿತವನು. ಆದರೆ ಅಧಿಕಾರಿಗಳ ಕೈಯಲ್ಲಿ ಅವನು ಸಿಕ್ಕ ಕೂಡಲೇ ಅವನ ಈ ಗುಣಗಳೆಲ್ಲವೂ ಲಯಹೊಂದುತ್ತವೆ. ಯಾವತ್ತು ಸುಧಾರಿಸಿದ ಜಗತ್ತಿನ ಮೋರೆಗೆ ಮಸಿ ಹಚ್ಚುವ ಜಂಜಾಟದ ಅತ್ಯಾಚಾರಗಳಂಥ ಕ್ರೂರ ಕೃತ್ಯಗಳನ್ನು ಮಾಡುವದಕ್ಕೆ ಅವನ ಉಪಯೋಗವಾಗು ವದರಿಂದ ಅವನ ಈ ಗುಣಗಳೆಲ್ಲವೂ ಬಧಿರವಾಗಿ ಹೋಗುತ್ತವೆ. ಪರರ ಮೇಲೆ ಯಾವಾಗಲೂ ಆಳುವದು ಬ್ರಿಟಿಷ ಜನರಿಗೂ ಒಳ್ಳೇದಾದುದಲ್ಲ. ಅದರ ದುಷ್ಪರಿ ಣಾಮವು ಅವರ ಶೀಲದ ಮೇಲೆ ಆಗಲೇ ಬೇಕು. ಮತ್ತು ಅದು ಹಾಗೆ ಆಗಿಯೂ ಆಗಿದೆ. ಆದುದರಿಂದ ಅದು ಅವರ ಶೀಲವನ್ನು ಪೂರ್ಣವಾಗಿ ಹಾಳು ಮಾಡಿ ಬಿಡುವ ಮೊದಲು ಅವರು ದೂರದಲ್ಲಿರುವ ತಮ್ಮ ಪರಜಾತಿಯ ಪ್ರಜೆಗಳನ್ನು ಆಳುವ ಹವ್ಯಾಸವನ್ನೂ ಚಿಂತೆಯನ್ನೂ ಬಿಟ್ಟುಕೊಡುವುದು ಅವ ರಿಗೂ ಹಿತಕರವು, ಪ್ರಜೆಗಳಿಗೂ ಹಿತಕರವು. ಆ ಪ್ರಜೆಗಳು ತಮಗೆ ಸರಿದೋ ರಿದ ರೀತಿಯಲ್ಲಿ ಹಿಂದೂಸ್ತಾನವು ಬ್ರಿಟಿಷ ಸಾಮ್ರಾಜ್ಯದಲ್ಲಿ ಸರಿಸಮಾನಸ್ಕಂದ ವಾದ ಸ್ವತಂತ್ರ ರಾಷ್ಟ್ರವಾಗುವಂತೆ ತಮಗೆ ಉತ್ತಮವಾಗಿ ತೋರಿದ ರಾಜ್ಯಪದ್ಧ ತಿಯನ್ನು ಸ್ಥಾಪಿಸುವದಕ್ಕೆ ಇವರು ಅವರಿಗೆ ಹೇಳಬೇಕು. ಹೀಗಾದ ಪಕ್ಷ ದಲ್ಲಿ ನಮ್ಮ ಮೇಲಿನ ಅಧಿಕಾರವನ್ನು ಕಳೆದುಕೊಂಡದ್ದರಿಂದಲೂ ನಮ್ಮ ದೇಶದ ಸಂಪತ್ತನ್ನೂ ಸೂರೆಗೊಯ್ಯುವ ಸಂಧಿಯನ್ನು ಕಳೆದುಕೊಂಡದರಿಂದಲೂ, ಅವರಿ ಗುಂಟಾದ ಹಾನಿಯನ್ನು ತುಂಬಿಕೊಡುವದಕ್ಕೆ ನಾವು ಸಿದ್ಧರಿದ್ದೇವೆ. ಇದು ಎಂದಿನ ಮಾತೋ ಏನೋ! ಸದ್ಯದ ಪ್ರಶ್ನದ ವಿಷಯವೆಂದರೆ, ಈಗಿನ ಹೊಸ ರಿಫಾರ್ಮ್ ಆಕ್ಟನ್ನು ನಾವು ಪ್ರಯೋಜನಪಡಿಸಲಿಕ್ಕೆ ಯತ್ನಿಸಬೇಕು. ಮತ್ತು ನಿಜವಾದ ಪ್ರಜಾಸತ್ತಾತ್ಮಕವಾದ ರಾಜ್ಯಪದ್ಧತಿಯನ್ನು ಕೊಡುವ ಹೊಸದೊಂದು ಕಾಯಿದೆ ಯನ್ನು ಮಾಡಿಸಿಕೊಳ್ಳಬೇಕು. ನಮ್ಮ ಶಕ್ತಿಗಳನ್ನು ಈ ದಿಶೆಯಲ್ಲಿ ಉಪ ಯೋಗಿಸುವದೇ ಈಗಿನ ನಮ್ಮ ಆದ್ಯಕರ್ತವ್ಯವು.

(ಮುಂದರಿಸಲಾಗುವುದು)

[illegible]

[illegible] ಆಫೀಸು.

[illegible — heavily degraded notice text] ... ಯನ್ನು [illegible].

"ಹಿತಚಿಂತಕ".

ಶರವಿನ ಶ್ರೀ ಮಹಾಗಣಪತಿ ದೇವಸ್ಥಾನದ ಕಟ್ಟೋಣಗಳ ಬಗ್ಗೆ ವಂತಿಗೆ.

	ವಾಗ್ದಾನ.	ವಸೂಲಿ.
ಅದಮಾರು ಮಠದ ಸ್ವಾಮಿಯವರು ರೂ.	೧೦೦—೦—೦	೨೫—೦—೦
ಸೋದೆ ಮಠ ,,	೨೫—೦—೦	
ಕೃಷ್ಣಾಪುರ ಮಠ ,,		೫೦—೦—೦
ಫಲಿಮಾರು ಮಠ ,,		೧೫—೦—೦
ಶಿರೂರು ಮಠ ,,	೨೫—೦—೦	
ಸರಕಾಂಬು ರಾಮರಾಯರು ,,	೩೦—೦—೦	೧೨—೦—೦
ಕಾಡುಮನೆ ವೆಂಕಪ್ಪ ಶೆಟ್ಟಿ ,,	೨೫—೦—೦	
ವೆಂಕಟೇಶ ಕೃಷ್ಣಾಚಾರ್ಯರು ,,		೩೦—೦—೦
ಇರುವರಿಗೆ ವಂತಿಗೆ ರೂ.	೧೬೧೩—೦—೦	
ಇತರೆ ,,	೨೦೬—೦—೦	
ಜುಮಲಾ ರೂ.	೧೯೧೯—೦—೦	
ಪೈಕಿ — ವಸೂಲು —	೧೪೦೬—೦—೦	

ಖರ್ಚು ರೂಪಾಯಿ—ಕಲ್ಲಿನ ಕ್ರಯ ರೂ. ೬೧೩—೦—೦; ಮರದ ಕೆಲಸ ರೂ. ೯೧೨—೪—೦; ಮರದ ಕ್ರಯ ರೂ. ೬೧೭—೮—೪; ಶಿಲಾ ಕಲ್ಲು ರೂ. ೧೧೫—೮—೦; ಆಳು ಮಜೂರಿ ರೂ. ೮೯—೦—೦; ಹಿತ್ತಾಳೆ ಕಬ್ಬಿಣ ರೂ. ೩೭—೦—೦; ಗಗ್ಗರಸು ರೂ. ೫೭—೦—೦; ಹಂಚು ರೂ. ೧೪೦—೦—೦; ಅನುಗ್ರಹ ಕಲಶ ರೂ. ೨೬—೦—೦; ಗಾಡಿ ಬಾಡಿಗೆ ರೂ. ೩೩—೦—೦; ಸಂಬಾರ ಖರ್ಚು ರೂ. ೫೭—೦—೦.

ಜುಮಲಾ ರೂ. 2,731—4—4.

ಇಷ್ಟರೊಳಗೆ ಮಾಡಿನ ಕೆಲಸ ತೀರಿತು. ಸಾರಣೆ ಕೆಲಸ ಬಾಕಿ ಇದೆ. ಇನ್ನು ಗೋಪುರದ ಕೆಲಸಕ್ಕೆ ಕೈಹಾಕಲು ನಿಶ್ಚಯಿಸಿದೆ. ಭಕ್ತಾದಿಗಳು ಪ್ರೋತ್ಸಾಹ ಕೊಟ್ಟು ಶ್ರೀ ದೇವರ ಕೆಲಸವನ್ನು ನೆರವೇರಿಸಬೇಕಾಗಿ ಪ್ರಾರ್ಥನೆ.

ಶರವಿನ ಪುಟ್ಟಣ್ಣ ಯಾನೆ ಕೇಶವಭಟ್ಟ.

ಬಂಟರಯಾನೆ ನಾಡವರ ಸಂಘಕ್ಕೆ ಲಗ್ನದ ಸಂದರ್ಭಗಳಲ್ಲಿ ವಸೂಲಾದ ಐವಜು.

೧.	ಅತ್ತಾವರ ದೇವಪ್ಪ ಪೂಂಜರಿಂದ ರೂ.	೨೫—೦—೦
೨.	ತಲಪಾಡಿ ದೊಡ್ಡಮನೆ ತ್ಯಾಂಪ ಪಕ್ಕಳರಿಂದ.	೨೦—೦—೦
೩.	ಕುಕ್ಕ್ಯಾರು ತಿಮ್ಮಣ್ಣ ಭಂಡಾರಿಯವರಿಂದ.	೧೦—೦—೦
೪.	ಗುಂಡಿಲ ಮಂಜಪ್ಪ ಶೆಟ್ರವರಿಂದ	೧೦—೦—೦
೫.	ಕೋಟೆಕ್ಕುಂಜ ತಿಮ್ಮಣ್ಣ ಬಂಟ್ರಿಂದ	೧೦—೦—೦
೬.	ಕುಳಾಲು ಮದನ ರೈಯವರಿಂದ	೧೦—೦—೦
೭.	ಎಕ್ಕಮೊಗರು ಗುತ್ತು ರಾಮಶಯ್ಯ ದೇರಿಂದ	೧೦—೦—೦
೮.	ಕೊಳ್ದಾರು ಗುತ್ತು ದೋಗು ಶೆಟ್ರವರಿಂದ	೫—೦—೦
೯.	ಅಡ್ಯಬೈಲು ಬೈಲು ಮುಣ್ಣಕ್ಕೈಯವರಿಂದ	೫—೦—೦
೧೦.	ಪೋರಬೆಟ್ಟು ಸುಬ್ಬಯ್ಯ ಹೆಗ್ಗಡೆರಿಂದ	೪—೦—೦
೧೧.	ವಳಗರು ಹೊಸಮನೆ ಶುಕ್ರಯ್ಯರವರಿಂದ	೪—೦—೦
೧೨.	ಸೋಮೇಶ ಮೊದಂತಡಿ ಉಗ್ಗ ವರ್ಮರಿಂದ	೪—೦—೦
	ಜುಮ್ಲಾ ರೂ.	೧೧೭—೦—೦

ಮಂಗಳೂರು, ೫—೫—೨೦. } ಎ. ಬಿ. ಶೆಟ್ಟಿ, ಕೋಶಾಧಿಕಾರಿ.

---

೫ ರೂಪಾಯಿಗಳ ಬಹುಮಾನ.

ಕೆಳಗೆ ವಿಳಾಸ ಕೊಟ್ಟಿರುವ ಕಡುಮಲೆ ಅಂಮೃತುಕಲು ನಾರಾಯಣ ಭಟ್ಟನು ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ:—

ನನ್ನ ಮಗ ಸುಮಾರು ೨೨ ವರ್ಷ ಪ್ರಾಯದ ಸುಬ್ರಣ್ಣಯಾನೆ ಸುಬ್ರಾಯ ಭಟ್ಟನು ಇದೇ ೧೯೨೦ನೇ ಇಸವಿ ಜನವರಿ ತಿಂಗಳ [illegible] ಕಾಣೆಯಾಗಿರು[illegible]. ಆತನು ಇರುವ ಸ್ಥಳವನ್ನು ಗೊತ್ತುಮಾಡಿ ಕೊಡುವ ದಯಾಳುಗಳಿಗೆ ನಾನು ಅತ್ಯಂತ ಕೃತಜ್ಞನಾಗಿರುವುದಲ್ಲದೆ ೫ ರೂಪಾಯಿಗಳ ಬಹುಮಾನವನ್ನು ಕೊಡುವರೆ ಸಹಾ ಸಿದ್ಧನಾಗಿರುತ್ತೇನೆ.

ಆತನ ಚಹರೆಗಳು:—

(೧) ಬೀಸೆಲ್, (೨) ಉದ್ದಶರೀರ, (೩) [illegible], (೪) [illegible] ಯಾಗಿ, ಉದುರಿ ಹೋದ, ಎಟ್ಟಲಿಕ್ಕೆ ಬಾರದ ಗಡ್ಡದ [illegible].

[illegible] — ಕರಾಡ ಬ್ರಾಹ್ಮಣ; ಮಾತ್ರ ಬಾಷೆ — ಮರಾಠಿ; ತುಳು, ಕನ್ನಡ ಮೊದಲಾದ ಭಾಷೆಗಳೂ ಗೊತ್ತುಂಟು.

ನನ್ನ ವಿಳಾಸ:—

ಕಡುಮಲೆ ಅಂಮೃತುಕಲು ನಾರಾಯಣ ಭಟ್ಟ, [illegible] ಗ್ರಾಮ, [illegible] ಉಪ್ಪಿನಂಗಡಿ ತಾಲೂಕು, ಪೋಸ್ಟು ಅಡೂರು, (ದಕ್ಷಿಣ ...

ಪ್ರಕಟಣೆ.

ಮಂಗಳೂರು, ರಂಗಪ್ಪಯ್ಯ [illegible] ದೇನಂದರೆ— ಈ ಕೆಳಗೆ ಹೆಸರು ಕಾಣಿಸಿದವರು ಇಟ್ಟು ಒಟ್ಟು ನಗಗಳು [illegible] ಕೊಂಡು ಹೋಗಬೇಕಾಗಿ ಅವರಿಗೆ ರಿಜಿಸ್ಟ್ರು ನೋಟೀಸು ಕೊಟ್ಟಲ್ಲಿ ಸದರಿ ನೋಟೀಸುಗಳು ಜಾರಿಯಾಗದೆ ವಾಪಾಸು ಬಂದಿರುವದರಿಂದ ಸದರಿಯವರು ಇಟ್ಟ ನಗಗಳು ತಾ. ೧೪—೬—೧೯೨೦ನೇ ಮಧ್ಯಾಹ್ನ ೨ ಘಂಟೆಯಿಂದ ಕೇಲುಶೇರಿ ರಸ್ತೆ ಮುನ್ಸಿಪಲ್ ನಂಬ್ರ ೧ನೆ ಮನೆಯ ಬಳಿ ಬಹಿರಂಗವಾಗಿ ಏಲಂ ಮಾಡಲಾದೀತು. ತಾ. ೮—೯—೧೯೧೭ರಲ್ಲಿ ಗೋರಕಟ್ಟೆ ಬಜಾರಿನಲ್ಲಿರುವ ವೈಧಿಕಬ್ಯಾರಿಗಳ ಮಗ ಶೇಕಬ್ಯಾರಿಗಳು ರೂ. ೨೫ಕ್ಕೆ, ತಾ. ೧೫—೧—೧೯೧೮ರಲ್ಲಿ ಸರೀಕ್ವಾಲ್ಪದಲ್ಲಿರುವ ಬಿಲ್ಲ ತಿಮ್ಮಪ್ಪನ ಮಗ ಬಿ. ದೇವಣ್ಣನು ರೂ. ೧೦ಕ್ಕೆ, ತಾ. ೬—೬—೧೯೧೮ರಲ್ಲಿ ಕುರಿಯಾಳ ಗ್ರಾಮದಲ್ಲಿರುವ ಬೈಲ್ ಮಂಜಪ್ಪಭಂಡಾರಿಗಳ ಅಳಿಯ ಶಿಡ್ಡೆ ನಾರಾಯಣ ಶೆಟ್ಟಿ ರೂ. ೧೨೫ಕ್ಕೆ, ತಾ. ೩೦—೯—೧೯೧೯ರಲ್ಲಿ ಉಳ್ಳಾಲ ಕಸಬಾ ಉಚ್ಚಿಲದಲ್ಲಿರುವ ಶೇದಿಬ್ಯಾರಿಗಳ ಮಗ ಉಚ್ಚಬ್ಯಾರಿಗಳು ರೂ. ೧೧೪ಕ್ಕೆ, ತಾ. ೨೩—೧೦—೧೯೧೯ರಲ್ಲಿ ರೂ. ೭ಕ್ಕೆ ಸಹಾ, ತಾ. ೭—೬—೧೯೧೯ರಲ್ಲಿ ಕೆವಿನ್ನೂರು ಗ್ರಾಮದಲ್ಲಿರುವ ಉಳ್ಳಾಲ ಗುತ್ತು ವೆಂಕಪ್ಪ ಶೆಟ್ಟಿ ಅಳಿಯ ಕಾಂತಪ್ಪ ಸಾವಂತನಿಯು ರೂ. ೩೬೦ಕ್ಕೆ ಇಟ್ಟು ಇಟ್ಟ ನಗಗಳು, ಸದರಿಯವರು ವ್ಯಕ್ತಪಟ್ಟುಹೋಗಿರುವುದರಿಂದ ಈತನ ವಾರಿಸ್ದಾರರು ಯಾರಾದರೂ ಇದ್ದರೆ ಬಿಡಿಸಿಕೊಂಡು ಹೋಗಬೇಕು, ಇಲ್ಲವಾದರೆ ಸದರಿ ತಾರೀಕಿಗೆ ಏಲಂ ಆದೀತು.

ಪ್ರಕಟಣೆ.

ಗವರ್ನಮೆಂಟಿನವರು ತಮ್ಮ ೬೭೭ನೇ ಹೋಮ್ ಎಜ್ಯುಕೇಶನಲ್ ತಾ. ೨೩—೫—೧೯೧೮ನೆ ಹುಕುಮಿನಲ್ಲಿ ಯುದ್ಧಕ್ಕೆ ಹೋದ ಸಿಪಾಯಿಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸೂಚಿಸಿರುವ ಕ್ರಮಗಳು ಈ ಕೆಳಗೆ ವಿವರಿಸೋಣಾಗಿಯುವೆ.

೧. ೧೯೧೪ನೇ ಒಗೃಷ್ಟ ೪ರ ನಂತರ ಯುದ್ಧದಲ್ಲಿ ಸತ್ತು ಹೋದ ಯಾ ಯುದ್ಧರಂಗದಲ್ಲಿರುವಾಗ್ಯೆ ಗಾಯವಡೆದು ಅಂಗಹೀನರಾದ ಯಾ ಯುದ್ಧರಂಗದಲ್ಲಿರುವಾಗ ಅಸ್ವಸ್ಥಕ್ಕೆ ಗುರಿಯಾದ ವೀರರ ಯಾ ಪಟಲಾಮಿಗೆ ಸೇರಿದ ಎಲ್ಲಾ ತರಗತಿಯ ಮನುಷ್ಯರ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಈ ಕೆಳಗೆ ವಿವರಿಸೋಣಾದ ಏರ್ಪಾಡು ಲಗಾವಾಗುತ್ತದೆ.

೨. ಈ ರೂಲುಗಳಿಗೆ ಅನುಗುಣವಾಗಿ ತೀರ್ಮಾನಿಸುವರೆ ಬ್ರಿಟಿಷ ಸಾಮ್ರಾಜ್ಯಕ್ಕೆ ಒಳಪಟ್ಟ ಪ್ರತಿಯೊಂದು ಜಿಲ್ಲೆಯ ಕಲೆಕ್ಟರರಿಗೆ ಇದರಡಿಯಲ್ಲಿ ನಮೂದಿಸಿರುವ ಫೋರ್ಮಿನಲ್ಲಿ ಅಂಥಾ ಎಲ್ಲಾ ಮನುಷ್ಯರ ಪಟ್ಟಿಯನ್ನೂ ಅದರಲ್ಲಿ ಅವರ ವಾಸಸ್ಥಳವನ್ನೂ ನಮೂದಿಸಿ ಅಜ್ಯುಟೆಂಟ್ ಜನರಲರು, ಆಶ್ರಿತ ಸಂಸ್ಥಾನಗಳಿಗೆ ಒಳಪಟ್ಟವರ ಸಂಗತಿಯಲ್ಲಿ ಅದೇ ನಮೂನೆಯ ಒಂದು ಪಟ್ಟಿಯನ್ನು ಫೊರೆನ್ ಮತ್ತು ಪೊಲಿಟಿಕಲ್ ಡಿಪಾರ್ಟಮೆಂಟಿನವರು ಯುಕ್ತತೋರುವ ರೀತಿಯಲ್ಲಿ ಇತ್ಯರ್ಥಿಸುವ ಬಗ್ಗೆ ಆ ಡಿಪಾರ್ಟಮೆಂಟಿನ ಸೆಕ್ರಿಟೆರಿಯವರಿಗೂ ಕಳುಹಿಸಲಾದೀತು.

ಪ್ರತಿ ಕೆಲೆಂಡರ್ ವರ್ಷದ ಶುರುವಿಗೆ ಹೆಚ್ಚಿಗೆ ಕೂಡಿಸಿದವರ ಪಟ್ಟಿಯನ್ನೂ ಕಳುಹಿಸಲಾದೀತು.

೩. ಕಲೆಕ್ಟರರು ಆ ಪಟ್ಟಿಯು ಸಿಕ್ಕಿದೊಡನೆ ವಿಚಾರಿಸಿ ಆ ಪಟ್ಟಿಯಲ್ಲಿ ಹೇಳಿರುವ ಮನುಷ್ಯರ ಮಕ್ಕಳಲ್ಲಿ ೧೭ ವರ್ಷಕ್ಕೆ ಕೆಳಗಿನ ಪ್ರಾಯದ ಎಲ್ಲಾ ಮಕ್ಕಳ ಹೆಸರನ್ನೂ ಪ್ರಾಯವನ್ನೂ ಬರೆದಿಟ್ಟು (ಹೆಣ್ಣು ಮಕ್ಕಳ ಹೆಸರು ವಗೈರೆ ಬರಕೊಳ್ಳುವಾಗ್ಗೆ ಜನರ ಜಾತಿ ಕ್ರಮಕ್ಕನುಸಾರವಾಗಿ ಮಹಾಸ ಕೊಡಲ್ಪಟ್ಟು) ಈ ರೂಲುಗಳ ಮೇರೆಗೆ ಅರ್ಹರು ಎಂತ ಪ್ರತಿ ಒಂದು ಮಗುವಿನ ಬಗ್ಗೆ ಅದರ ರಕ್ಷಕರಿಗೆ ೪ನೇ ರೂಲಿನ III ಉಪನಿಬಂಧನೆ ಮೇರೆಗೆ ಒಂದು ಸರ್ಟಿಫಿಕೇಟು ಕೊಡುವರು.

೪. ಇಂಥಾ ಸರ್ಟಿಫಿಕೇಟನ್ನು ಯಾವದೊಂದು ವಿದ್ಯಾಲಯದ ಮುಖ್ಯ ಅಧಿಕಾರಿಗೆ ಒಪ್ಪಿಸಿದ್ದಲ್ಲಿ ಲೋಕಲ್ ಗವರ್ನಮೆಂಟಿನವರು ನಿರ್ಧರಿಸುವ ರೂಲಿನ ಮೇರೆಗೆ ಈ ಕೆಳಗಿನ ಪ್ರಯೋಜನಗಳು ಸಿಕ್ಕುವವು:—

(a) ಧರ್ಮಾರ್ಥವಾಗಿನ ಪ್ರಾಯ್ಮರಿ ವಿದ್ಯೆಯೂ ಅದಕ್ಕೆ ಕೂಡಿಸಿ ಅದಕ್ಕೆ ಸಂಬಂಧವಾದ ಅಂದರೆ ಪುಸ್ತಕಗಳ ವಗೈರೆ ಖರ್ಚನ್ನು ಭರ್ತಿಮಾಡುವ ಬಗ್ಗೆ ಒಂದು ವರ್ಷಾಸನ ಅಲೋವೆನ್ಸು.

(b) ಒಂದು ಮಧ್ಯಮ ತರಗತಿಯ ಸ್ಕೂಲಿನಲ್ಲಿ ವೇತನವು, ಅಂಥಾ ವೇತನವೂ ಸೀಮೆಯಲ್ಲಿ ಕೊಡುವ ಹಾಗಿನದ್ದೂ, ಫೀಸು ಸಹಾ ಸೇರಿಸಿಯೂ (ಇದು ಈ ಮೊದಲು ಜಾರಿಯಲ್ಲಿ ಇಲ್ಲದಿದ್ದರೆ)

(c) ಜನರ ಉಪಯೋಗಾರ್ಥವಾಗಿ ಇಟ್ಟ ವೇತನಗಳ ಬಗ್ಗೆ ಮೇಲಾಡಲಿಕ್ಕೆ ಅರ್ಹರಾಗಿರುವುದಲ್ಲದೆ, ಕೊಲೇಜುಗಳಲ್ಲಿಯೂ ಹೈಸ್ಕೂಲುಗಳಲ್ಲಿಯೂ ಇಂಥಾ ಸರ್ಟಿಫಿಕೇಟು ಇದ್ದವರ ಗೋಸ್ಕರ ಗವರ್ನಮೆಂಟಿನವರು ಇಟ್ಟ ವೇತನಗಳಿಗಾಗಿ ಉಮೇದ್ವಾರರಾಗಿರುವರು. (೫೦೨) ಆ ವಿದ್ಯಾರ್ಥಿಯು ಒಂದು ಹೊಸ್ಟೇಲಿನಲ್ಲಿ ಇರುವ ಸಂಗತಿಯಲ್ಲಿ ಸಿಕ್ಕುವ ವೇತನವು ಹೊಸ್ಟೇಲಿನ ಖರ್ಚಿಗೆ ಸಾಕಾಗದ ಸಂಗತಿಯಲ್ಲಿ ಅಂಥಾ ಖರ್ಚು ಅದರ ಭರ್ತಿಯ ಬಗ್ಗೆ ವೇತನಕ್ಕೆ ಕೂಡಿಸಿ ಕೊಡಲ್ಪಡುವುದು.

ಆದರೆ:—

(i) ಅಂಥಾ ವಿದ್ಯಾರ್ಥಿಯ ಅಭಿವೃದ್ಧಿಯು ಸಾಲದೆಂತಾಗಲಿ ಅವನ ನಡತೆ ಅಸಮಾಧಾನಕರವೆಂತಾಗಲಿ ಸಂಬಂಧ ಪಟ್ಟ ಶಾಲಾ ಇನ್ಸಪೆಕ್ಟರರ ಅಭಿಪ್ರಾಯಕ್ಕೆ ತೋರಿದ್ದಲ್ಲಿ ಈ ರೂಲುಗಳ ಮೇರೆಗೆ ತೋರಿಸುವ ವಿನಾಯತಿಯಾಗಲಿ ವೇತನವಾಗಲಿ ಹಿಂದೆಗೆಯಲ್ಪಡುವುದು.

(ii) ವೇತನವು ಯಾವ ದರ್ಜೆಯ ಬಗ್ಗೆ ಇಡಲ್ಪಟ್ಟದ್ದೋ ಆ ದರ್ಜೆಗೆ ಸೇರಬೇಕಾದರೆ ನಿಯಮಿಸಲ್ಪಟ್ಟಂಥಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದ ವಿದ್ಯಾರ್ಥಿಗೆ ವೇತನವು ದೊರೆಯಲಾರದು.

(iii) ೧೮ ವರ್ಷ ಪ್ರಾಯದ ವರೆಗೆ ಯಾವ ಶಾಲೆಗೂ ಹೋಗದ ಮಕ್ಕಳಿಗೆ ಅಂಥಾ ವೇತನವು ದೊರಕಲಿಕ್ಕಿಲ್ಲ.

೫. ಮಗುವನ್ನು ರಕ್ಷಕರು ಅವರಿಗೆ ಇಷ್ಟ ತೋರುವ ಶಾಲೆಗೆ ಕಳುಹಿಸುವುದರಲ್ಲಿ ಗವರ್ನಮೆಂಟಿನವರು ಪ್ರತಿಬಂಧಿಸುವುದಿಲ್ಲ. ಗವರ್ನಮೆಂಟ್ ಶಾಲೆಗಳಲ್ಲದೆ ಬೇರೆ ಶಾಲೆಗಳಿಗೆ ಈ ರೂಲುಗಳಿಗನುಸಾರವಾಗಿ ಲೋಕಲ್ ಗವರ್ನಮೆಂಟಿನವರು ಆಯಾ ಶಾಲೆ ಅಧಿಕಾರಿಗಳೊಂದಿಗೆ ನಷ್ಟ ಭರ್ತಿಗೆ ತಕ್ಕ ಏರ್ಪಾಡು ಮಾಡುವರು.

೬. ಮೇಲೆ ನಂಬ್ರ ೧ನೇ ರೂಲಿನಲ್ಲಿ ಹೇಳೋಣಾದ ಮೇರೆಗೆ ಪಟಲಾಮಿನಲ್ಲಿರುವವರ ಮಕ್ಕಳ ವಿದ್ಯಾಭ್ಯಾಸದ ವಿಷಯವಾಗಿ ಸಂಬಂಧ ಪಟ್ಟ ಕಲೆಕ್ಟರರಿಗೆ ಯಾವದಾದರೂ ಆಯಾ ಪಟಲಾಮಿನ ಸೇನಾನಾಯಕರು ಬರೆದು ಕೇಳಬಹುದು, ಮತ್ತು ಕಲೆಕ್ಟರರು ಅಂಥಾ ವಿಚಾರಕ್ಕೆ ಅನುಕೂಲವಿರುವಷ್ಟರ ಮಟ್ಟಿನ ಜವಾಬು ಕೊಡುವರು.

ಫೋರ್ಮು.

೧. ಹೆಸರು ಮತ್ತು ತಂದೆಯ ಹೆಸರು ಮತ್ತು ಜಾತಿ.
೨. ಪಟಲಾಮಿನ ನಂಬ್ರ ಮತ್ತು ತರಗತಿ ಮತ್ತು ಸಿಪಾಯಿಯ ನಂಬ್ರ.
೩. ಹಿಂದೂಸ್ಥಾನದಲ್ಲಿರುವ ಯಾವ ಡಿವಿಜನಿಗೆ ಸೇರಿದ್ದು.
೪. (a) ಸತ್ತದೋ ಅಥವಾ (b) ತಾ. ೪—೮—೧೯೧೪ರ ಲಾಗಾಯತು ಯುದ್ಧರಂಗದಲ್ಲಿದ್ದು ಗಾಯಪಟ್ಟು ಅಥವಾ ಅಸ್ವಸ್ಥದಿಂದ ಎಂದೂ ಕೆಲಸ ಮಾಡಲಿಕ್ಕೆ ಆಗದವ.
೫. ವಾಸಸ್ಥಳ, ಗ್ರಾಮ, ತಾಲೂಕು, ಜಿಲ್ಲೆ ಮತ್ತು ಅಧಿಪತ್ಯ.

ಹುಕುಂ ನಂಬ್ರ ೬೬೩ನೇ ಹೋಮ್ (ಎಡ್ಯುಕೇಶನ್) ತಾ. ೨೩ನೇ ಮೇ ೧೯೧೮.

ಇಂಡಿಯಾ ಗವರ್ನಮೆಂಟಿನವರ ನಂಬ್ರ ೨೧೩ (ಎಡ್ಯುಕೇಶನ್) ತಾ. ೨ನೇ ಎಪ್ರಿಲ್ ೧೯೧೮ನೇ ಪತ್ರವನ್ನೂ ಅದರ ಉಪಪತ್ರವನ್ನೂ ವಿದ್ಯಾ ಇಲಾಖೆಯ ಡಿರೆಕ್ಟರರಿಗೂ ಎಲ್ಲಾ ಜಿಲ್ಲೆಗಳ ಕಲೆಕ್ಟರರಿಗೂ ತಿಳಿಸೋಣಾಗಿಯದೆ.

೨. ಮಡಿದುಹೋದ ಅಥವಾ ಕೆಲಸಮಾಡಲಿಕ್ಕೆ ಅಯೋಗ್ಯರಾದ ಇಂಡ್ಯದ ಸಿಪಾಯಿಯರ ಮಕ್ಕಳ ಪೈಕಿ, ಇಂಡಿಯಾ ಗವರ್ನಮೆಂಟಿನವರು ನಂಬ್ರ ೩ನೇ ರೂಲಿನಲ್ಲಿ ಸರ್ಟಿಫಿಕೇಟು ಹಾಜರುಮಾಡಿದವರನ್ನು ಫೀಸು ಕೊಡದೇನೇ ಸರಕಾರ ಮನೆಜಮೆಂಟಿನಲ್ಲಿರುವ ಎಲ್ಲಾ ಸೆಕೆಂಡರಿ ಮತ್ತು ಎಲಿಮೆಂಟರಿ ಶಾಲೆಗಳಲ್ಲಿ ಸೇರಿಸಿಕೊಳ್ಳಬೇಕಾಗಿ ಗವರ್ನಮೆಂಟಿನವರು ವಿಧಿಸಿರುತ್ತಾರೆ.

ಖಾಸಗಿ ಶಾಲೆಗಳ ಮನೇಜರರು ಅವರ ಶಾಲೆಗೆ ದಾಖಲಾಗುವುದಕ್ಕೆ ಬರುವ ಅಂಥಾ ಮಕ್ಕಳಿಗೆ ಮೇಲಿನ ರಿಯಾಯತಿಯನ್ನು ತೋರಿಸಬೇಕಾಗಿ ತಿಳಿಸುತ್ತಾರೆ.

ಹೀಗೆ ಮಾಡಲು ಅನುಕೂಲವಾಗಿ ವಿದ್ಯಾ ಇಲಾಖೆಯ ಡಿರೆಕ್ಟರರು ಗ್ರ್ಯಾಂಟ್-ಇನ್-ಎಯಿಡ್-ಕೋಡಿನ ಮೇರೆಗೆ ಅಂಥಾ ಶಾಲೆಗಳಿಗೆ ಕೊಡುವ ಗ್ರ್ಯಾಂಟಿನೊಂದಿಗೆ ಹೀಗೆ ಫೀಸು ವಸೂಲಿಯಲ್ಲಿ ನಷ್ಟ ಬಂದಷ್ಟು ಅಂಶವನ್ನು ಭರ್ತಿ ಮಾಡಲು ಅಧಿಕಾರ ಹೊಂದಿರುತ್ತಾರೆ.

೩. ಅಂಥಾ ಮಕ್ಕಳಿಗೆ ಪುಸ್ತಕ ವಗೈರೆ ಒದಗಿಸುವ ಸಂಗತಿಯಲ್ಲಿ ಈ ಕೆಳಗೆ ಕಾಣಿಸಿರುವಷ್ಟರಮಟ್ಟಿನ ಖರ್ಚನ್ನು ಸಹ ಮಾಡುವ ಅಧಿಕಾರ ಕೊಡುವುದರಲ್ಲಿ ಗವರ್ನಮೆಂಟಿನವರು ಸಂತೋಷಪಟ್ಟಿರುತ್ತಾರೆ:—

ಪ್ರಾಯಮರಿ ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ೧೨ ರೂಪಾಯಿ. ಮಿಡ್ಲ್‌ಸ್ಕೂಲುಗಳಲ್ಲಿ (ಫೋರ್ಮು Iರಿಂದ IIIರ ವರೆಗೆ) ಒಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ೧೪ ರೂಪಾಯಿ.

ಹೈಸ್ಕೂಲುಗಳಲ್ಲಿ (ಫೋರ್ಮು IVರಿಂದ VI) ವರ್ಷಕ್ಕೆ ಒಬ್ಬ ವಿದ್ಯಾರ್ಥಿಗೆ ೩೦ ರೂಪಾಯಿ.

ಪ್ರಾಯ್ಮರಿ ಶಾಲೆಗಳಲ್ಲಿ ಕಲಿಯುವ ಮಕ್ಕಳ ಪುಸ್ತಕ ವಗೈರೆ ವಹಕೆಹಳ್ಳ್ವರೆ ಬೇಕಾದ ಹಣವನ್ನು ಜಿಲ್ಲೆಯ ಅಸಿಸ್ಟಾಂಟ ಇನ್ಸಪೆಕ್ಟರರು ಕೊಡುವರು. ಮಿಡ್ಲ್ ಮತ್ತು ಹೈಸ್ಕೂಲುಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಗತಿಯಲ್ಲಿ ಸಂಬಂಧಪಟ್ಟ ಶಾಲೆಯ ಮುಖ್ಯ ಉಪಾಧ್ಯಾಯರು ಮೇಲ್ಗಡೆ ಹೇಳಿರುವಷ್ಟರ ವರೇಗಿನ ಖರ್ಚನ್ನು ಮಾಡುವರೆ ಅಧಿಕಾರ ಹೊಂದಿರುತ್ತಾರೆ.

ಎಯಿಡೆಡ್ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಪರವಾಗಿ ಖರ್ಚಾದ ಹಣವು ವರುಷಾವಧಿ ಗ್ರ್ಯಾಂಟು ನಿರ್ಣಯಿಸುವಾಗ ಗವರ್ನಮೆಂಟಿನವರಿಂದ ಭರ್ತಿಮಾಡಲ್ಪಡುವುದು.

೪. ಹೀಗೆ ರಿಯಾಯತಿ ತೋರಿಸುವುದರಿಂದ ಉಂಟಾಗುವ ಖರ್ಚನ್ನು ಲೋಕಲ್ ಅಧಿಕಾರಿಗಳು ತಮ್ಮ ಸ್ವಂತ ಬಂಡವಾಳದಿಂದ ವಹಿಸಿಕೊಳ್ಳತಕ್ಕದಾಗಿ ಗವರ್ನಮೆಂಟಿನವರು ನಂಬಿರುತ್ತಾರೆ.

೫. ಇದರಲ್ಲಿ ರಿಯಾಯತಿ ಸಾಗುವಿಕೆಯು ಮತ್ತು ಮಸಲತ್ತಿನ ೪ನೇ ಪಾರಾದಲ್ಲಿ ಹೇಳಿರುವ ಶರ್ತುಗಳಿಗೆ ಒಳಪಟ್ಟಿರುವುದಲ್ಲದೆ ಇನ್ನುಮುಂದೆ ವಿದ್ಯಾ ಇಲಾಖೆಯ ಡಿರೆಕ್ಟರರವರು ನಿಶ್ಚಯಿಸಬಹುದಾದ ಯಾವದಾದರೂ ರೆಗ್ಯುಲೇಶನುಗಳಿಗೂ ಒಳಪಟ್ಟಿರುತ್ತದೆ.

೬. ಕೈಗಾರಿಕೆಯ ಶಾಲೆಗಳಿಗೆ ಯಾ ಕೊಲೇಜುಗಳಿಗೆ ಪ್ರವೇಶವನ್ನು ಅಪೇಕ್ಷಿಸುವ ವಿದ್ಯಾರ್ಥಿಗಳಿಗೆ ರಿಯಾಯತಿಯನ್ನು ತೋರಿಸುವ ವಿಷಯವೂ ಹೊಸ್ಟೇಲುಗಳಲ್ಲಿ ವಾಸಮಾಡುವವರ ವಿಷಯವೂ ಮುಂದಿನ ಆಲೋಚನೆ ಬಗ್ಗೆ ಬಾಕಿ ಇಡಲಾಗಿಯದೆ.

(ಖಾಟು ಎಕ್ಸ್‌ಟ್ರಾಕ್ಟು)

ಆರ್. ರಾಮಚಂದ್ರರಾವ್,
ಗವರ್ನಮೆಂಟ್ ಸೆಕ್ರೆಟರಿ.

ನೋಟೀಸು.

ಬೊಂಬಾಯಿಯಲ್ಲಿನ "ಪಬ್ಲಿಕ್ ಫಂಡ್ ಓಫ್ ಉಡುಪಿ ಶ್ರೀ ಕೃಷ್ಣ" ಎಂಬ ಸಮಾಜಕ್ಕೆ ಸೇರಿದ ಸರ್ವರೂ ತಮ್ಮ ತಮ್ಮ ವಂತಿಗೆಗಳನ್ನು ದಶಂಬರ ತಾ. ೧೫ರ ಒಳಗೆ ಕೊಡಬೇಕಾಗಿ ಬೇಡುತ್ತೇನೆ.

ಉಳ್ಳಾಲ ಪೂವಪ್ಪ ಭಂಡಾರಿ,
ಸ್ಟಾಕ್‌ಕೀಪರ್.

The Public Fund of Udipi Sri Krishna,
72, Apollo Street, Fort, Bombay.

[illegible]	[illegible]	[illegible]	[illegible]	[illegible]	[illegible]	[illegible]	[illegible]	
							ಘ.	ನಿಮಿ.
[illegible]	[illegible]	[illegible]	[illegible]	[illegible]	[illegible]	[illegible]	6 6	6·48
[illegible]	[illegible]	[illegible]	[illegible]	[illegible]	[illegible]	[illegible]	6 6	6·49
[illegible]	[illegible]	[illegible]	[illegible]	[illegible]	[illegible]	[illegible]	6 6	6·49
[illegible]	[illegible]	[illegible]	[illegible]	ವಿಶಾ	[illegible]	[illegible]	6 6	6·49
[illegible]	[illegible]	[illegible]	[illegible]	[illegible]	[illegible]	[illegible]	6 6	6·50
[illegible]	[illegible]	[illegible]	[illegible]	ಉತ್ತರಾ	[illegible]	[illegible]	6 5	6·50
[illegible]	[illegible]	[illegible]	[illegible]	[illegible]	[illegible]	[illegible]	6 5	6·50

ಮಂಗಳೂರಿನ ವಾಯುಸ್ಥಿತಿ.

([illegible]ನೆಯ ಮೇ)

Date	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಿನದು	Minimum ಕಡಿಮೆ	ಬಿಸಿದ ಮಳೆ	ಜನವರಿ ಗರಿಂದ
14	93—0	78—4	—	...
15	93—1	80—1	—	...
16	94—3	79—4	—	...
17	94—4	78—8	—	...
18	92—8	77—1	—	...
19	93—1	78—9	—	—
20	93—6	82—1	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ.
ಮಸ್ಕತಿ ಅಕ್ಕಿಮುಡಿ ಗಳ್ಳೆ ...	9— 0	9—10
ಗುತ್ತು " ...	8— 6	8—14
ರಾಶಿ ಮುಡಿ ಗಳ್ಳೆ ...	8— 0	8— 6
ಅವ್ವಲ್ ಬೆಳ್ತಿಗೆ " ...	10—12	11— 0
ಗುತ್ತು ಬೆಳ್ತಿಗೆ " ...	9— 4	9— 8
ರಂಗೂನ ಬೆಳ್ತಿಗೆ ಗೋಣಿ ಗಳ್ಳೆ ...	17— 0	17— 8
[illegible] ಗೋಣಿ ಗಳ್ಳೆ ...	25— 0	27— 8
[illegible] ಗೋಣಿ ಗಳ್ಳೆ ...	13— 0	14— 8
[illegible] ಗೋಣಿ ಗಳ್ಳೆ ...	17— 0	18— 8
[illegible] ಗೋಣಿ ಗಳ್ಳೆ ...	—	25— 8
[illegible] ಗೋಣಿ ಗಳ್ಳೆ ...	30— 0	32— 8
ಉದ್ದು ಗೋಣಿ ಗಳ್ಳೆ ...	17— 8	18— 0
ಹೆಸರು ಗೋಣಿ ಗಳ್ಳೆ ...	17— 8	19— 0
[illegible] ಖಂಡಿ ಗಳ್ಳೆ ...	105— 0	110— 0
[illegible] ಗೋಣಿ ಗಳ್ಳೆ ...	4—14	5— 6
[illegible] ಖಂಡಿ ಗಳ್ಳೆ ...	115— 0	125— 0
[illegible] ಖಂಡಿ ಗಳ್ಳೆ ...	—	37— 0
ಎಳ್ಳಿನ ಖಂಡಿ ಗಳ್ಳೆ ...	60— 0	62— 8
[illegible] ಎಣ್ಣೆ ಮಣ ಗಳ್ಳೆ ...	9—10	10— 0
[illegible] ಮಣ ಗಳ್ಳೆ ...	11— 0	11— 4
[illegible] ಬೆಟ್ಟಗೆ ಗಳ್ಳೆ ...	9— 4	9— 6
[illegible] ಸಕ್ಕರೆ ಮಣ ಗಳ್ಳೆ ...	9—10	9—12
[illegible] ಮೆಣಸಿನ ಕಾಯಿ ಮಣ ಗಳ್ಳೆ ...	8— 8	9— 8
[illegible] ಮುಡಿ ಗಳ್ಳೆ ...	10— 0	10— 8
[illegible] ಮುಡಿ ಗಳ್ಳೆ ...	7— 0	7— 4
[illegible] ಖಂಡಿ ಗಳ್ಳೆ ...	240— 0	250— 0
[illegible] ಖಂಡಿ ಗಳ್ಳೆ ...	90— 0	95— 0
[illegible] ...	95— 0	100— 0
[illegible] ಖಂಡಿ ಗಳ್ಳೆ ...	160— 0	166— 0
[illegible] ಮಣ ಗಳ್ಳೆ ...	25— 0	35— 0
[illegible] ಮುಡಿ ಗಳ್ಳೆ ...	3—10	3—14
[illegible] ಖಂಡಿ ಗಳ್ಳೆ ...	100— 0	120— 0
[illegible] ಮಣ ಗಳ್ಳೆ ...	24— 4	25— 0
[illegible] ಮಣ ಗಳ್ಳೆ ...	32— 0	35— 0
[illegible] ಗಳ್ಳೆ ...	31— 8	
[illegible] ಮಣ ಗಳ್ಳೆ ...	24— 0	25— 0

[illegible]

ಪುತ್ತೂರು ದಕ್ಷಿಣ ಕನ್ನಡ.

(1913ನೇ ಇಸವಿಯ ಇಂಡಿಯನ್ ಕಂಪೆನಿಗಳ [illegible])

ಮೂಲಧನ:—ರೂಪಾಯಿ 200,000—ರೂಪಾಯಿ 25ರ 8,000 [illegible] ಹಿಸೆಗಳನ್ನು ಮನವಿ ಮೂಲಕ ಅಪೇಕ್ಷಿಸಿ ಯಾರೂ ಪಡಕೊಳ್ಳಬಹುದು.

ಮನವಿಯೊಂದಿಗೆ ಪ್ರತಿ ಹಿಸೆಗೆ ರೂಪಾಯಿ 5 ಮತ್ತು ಪ್ರವೇಶಫೀಸು [illegible] 4 [illegible] ರೂ. 5—4—0; ಮನವಿ ಅಂಗೀಕರಿಸಿದ ಬಳಿಕ ಕೊಡೋಣಾಗುವ ಎಲ್ಲೋಟ್‌ಮೆಂಟ್ ನೋಟಿಸಿನ ವಾಯಿದೆಗೆ ರೂ. 5 ಕೊಡತಕ್ಕದ್ದು. [illegible] ರೂ. 15ನ್ನು ಸರಿಯಾದ 8 ಕಂತುಗಳಿಂದ ಕೇಳಿದ ಹಾಗೆ ಪಾವತಿ ಮಾಡತಕ್ಕದ್ದು. ಆದರೆ ಒಂದು ಕಂತು ಕೇಳಿದ ಬಳಿಕ [illegible] 2 ತಿಂಗಳ ಅವಧಿಗೆ ಮುಂಚಿತವಾಗಿ ಇನ್ನೊಂದು ಕಂತು ಕೇಳೋಣಾಗಲಿಕ್ಕಿಲ್ಲ.

ಪ್ರೊಸ್ಪೆಕ್ಟಸಿನ ಬದಲಾಗಿ ಜ್ಹೊಂಟ್ ಸ್ಟಾಕ್ ಕಂಪೆನಿಗಳ ಅಸಿಸ್ಟೆಂಟ್ ರಿಜಿಸ್ಟ್ರಾರರ ಬಳಿ ದಾಖಲು ಮಾಡಿದ ಸ್ಟೇಟ್‌ಮೆಂಟಿನಲ್ಲಿ ಕಾಣಿಸಿದ ಪ್ರಕಾರ ರೂ. 20,000ಕ್ಕೆ ಸರಿಯಾದ 800 ಹಿಸೆಗಳು ಈ ಮೊದಲೇ ಹಂಚಲ್ಪಟ್ಟಿರುತ್ತವೆ.

ಡ್ಯಾರೆಕ್ಟರರು.

1. ಮ| ರಾ| ರಾ| ಉಳ್ಳಾಲ ಸಾಂತಯ್ಯ ಕಿಣಿ, ಅವರ್ಗಳ್. ... ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಮಂಗಳೂರು.
2. " " ಎಮ್. ನರಸಿಂಹ ಮರ್ತುಭಂಡಾರಿ, " ... ಡಿಸ್ಟ್ರಿಕ್ಟ್ ಬೋರ್ಡ ಮೆಂಬರ್ ವ ಸಾಹುಕಾರ, ಮಂಗಳೂರು.
3. " " ಎಮ್. ಮುಡ್ಲಗಿರಿ ಪಾಂಡುರಂಗ ಪೈ, " ... ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ವ ಸಾಹುಕಾರ, ಮಂಗಳೂರು
4. " " ಎಚ್. ಕೊರಗಪ್ಪ, " ... ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ಮತ್ತು ಒನರರಿ ಬೆಂಚ್ ಮೆಜಿಸ್ಟ್ರೇಟ್, ಮಂಗಳೂರು.
5. " " ಮಂಜೇಶ್ವರ ಜನಾರ್ಧನ ಭಟ್, " ... ತಾಲೂಕು ಬೋರ್ಡ ಮೆಂಬರ್ ವ ಸಾಹುಕಾರ, ಪುತ್ತೂರು.
6. " " ಎಚ್. ಅನಂತ ಕಾಮತ್, " ... ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಪುತ್ತೂರು.
7. " " ಅರಿಯಡ್ಕ ಸುಬ್ಬಯ್ಯರೈ, " ... ವರ್ಗದಾರ, ಅರಿಯಡ್ಕ.
8. " " ಸೊರಕೆ ಎಲಿಯಣ್ಣ, " ... ವರ್ಗದಾರ ಮತ್ತು ಸಾಹುಕಾರ, ಪುತ್ತೂರು.
ಕ್ಷೇಮ ಸಮಾಚಾರದ ಕಾಗದಗಳು:—ಬಗೆಬಗೆಯ ಒಕ್ಕಣೆ, ಲೌಕಿಕ ವೈದಿಕ ಮರ್ಯಾದೆಗಳಿವೆ. ಪತ್ರಗಳು ಬರೆಯುವ ವಿಧಾನ, ಕ್ರಯ, ದಾನ, ಬಿಲ್ಲು, ಮುಚ್ಚಳಿಕೆ, ಪಾಲುಪಟ್ಟಿ, ಗುತ್ತಿಗೆ, ವಾಲುಗೇಣಿ, ಹುಂಡಿ, ಚೆಕ್ಕು, ಇವುಗಳ ನಮೂನೆಗಳು, ವಿಧಗಳು, ಸ್ಟಾಂಪು, ರಿಜಿಸ್ಟ್ರೇಷನ್, ಸಿವಿಲ್ ಕೋರ್ಟ್ ವಿಧಾನ—ಲಾಯರ್ ನೋಟೀಸು, ದಾವೆ ಬರೆಯುವ ರೀತಿ, ಸ್ಮಾಲ್ ಕಾಸ್, ಒರಿಜಿನಲ್, ರಿಟ್ಟು, ಅಪ್ಪೀಲು, ಸ್ಪೆಷಲ್ ಅಪ್ಪೀಲ್, ಅವುಗಳಿಗೆ ದಾಖಲೆ, ಕೋರ್ಟು ಫೀ ಸ್ಟಾಂಪು, ರೆವೆನ್ಯೂ ಮುಂತಾದ ಪ್ರಾಮುಖ್ಯವಾದ ಪ್ರಾಕ್ಟೀಸ್ ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ಬರೆಯುವ ಅರ್ಜಿಗಳು; ಕ್ರಿಮಿನಲ್ ಕೋರ್ಟ್ ವಿಧಾನ—ಅನೇಕ ಅರ್ಜಿಗಳ ಮಾದರಿಗಳು, ಸರಕಾರದ ಕಾನೂನುಗಳಲ್ಲಿ ಇದರಲ್ಲಿ ಅಡಗಿವೆ. ಕಾಗದದ ಬರಹದಿಂದ ಬಹು ಸ್ವಲ್ಪ ಪ್ರತಿಗಳು ಉಳಿದಿವೆ. ಬೇಗ ಬರೆದು ತರಿಸಿಕೊಳ್ಳಿ. ಕ್ರಯ ರೂಪಾ. 1—8—0; ಅಂಚೆಯ ವೆಚ್ಚ ಬೇರೆ.

80-19] ವಿಳಾಸ:— "ನವಿನುಡಿ" ಆಫೀಸು, 122, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

"ಟಿಷ್ಯು ರೆಮಿಡಿಸ್"

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು.

1 ಕಲ್ಕೇರಿಯ ಫ್ಲೋರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮೆಗ್ನೀಸಿಯ ಫೋಸ್	12 ಸಿಲಿಸಿಯಾ

ಕ್ರಯ		ರೂ. ಆ. ಪೈ.
ಎರಡು ಡ್ರಾಮಿನ D ಸೈಜ್ ಸೀಸೆ ಒಂದರ		0—3—6
ನಾಲ್ಕು „ C „ „ „		0—6—0
ಒಂದು ಔನ್ಸಿನ A „ „		0—12—0
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆ		3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯಶಾಸ್ತ್ರ ಪುಸ್ತಕ ಸಮೇತ.		10—0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು, ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾರಿಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ. ಫೆರ್ನಾಂಡಿಸ್,
ಎಲೆಕ್ಟ್ರೊ ಹೋಮಿಯೋಪತಿ ಡಿಸ್ಪೆನ್ಸರಿ, ಮಂಗಳೂರು.

ಈ ಡಿಸ್ಪೆನ್ಸರಿಯಲ್ಲಿ ಎಲ್ಲಾ ಔಷಧಿ ಕ್ರಯದಲ್ಲಿ ಅನುಭವಸ್ಥರಾದ ವೈದ್ಯರಿಂದ ಎಲ್ಲಾ ಔಷಧಗಳು ಸಿಕ್ಕುತ್ತವೆ. ಇವನ್ನು ಶ್ರಮ ಉಪಯೋಗಿಸಿದವರಿಗೆ ತಕ್ಷಣವೇ ಆರೋಗ್ಯವುಂಟಾಗುವುದು. ಹೆಚ್ಚು ವಿಶೇಷ ಎಲ್ಲಾ ಕೆಳಗೆ ಕಾಣಿಸಿದೆ.

1. ಕಾಮದೂರಿಕಾ ಅಮೃತಸಂಜೀವನೀ ಟೋನಿಕ್—ಇದರ ಸೇವನೆಯಿಂದ ಕ್ಷಯ, ಕೆಮ್ಮು, ಉಬ್ಬಸ, ನಿವಾರಣೆಯಾಗಿ ಧಾತುಪುಷ್ಟಿಯಾಗುತ್ತದೆ. 24 ಔನ್ಸಿನ ಬಾಟ್ಲು 1ಕ್ಕೆ ರೂ. 3.

2. ಮಧುಮಾಧವಿ ಪಿಲ್ಸ್—ಬಾಣಂತಿಯರು ಇದನ್ನು 12 ದಿವಸ ಸೇವನೆಮಾಡಿ ನಂತರ 2 ತಿಂಗಳ ವರೆಗೆ ಮಧುಮಾಧವಿ ಟೋನಿಕ್ ಸೇವಿಸಬೇಕು. ಇದರಿಂದ ಬಾಣಂತಿಯರ ನಂಜಿನ ಉಪದ್ರವಗಳು ಗುಣವಾಗಿ ದೇಹ ಪುಷ್ಟಿಯಾಗುತ್ತದೆ. ಟೋನಿಕ್ ಬಾಟ್ಲು 1ಕ್ಕೆ ರೂ. 1. 60 ಮಾತ್ರೆಗಳ ಬಾಟ್ಲು 1ಕ್ಕೆ ರೂ. 2—0—0.

3. ಸಿದ್ಧೇಶ್ವರ—ಇದರ ಸೇವನೆಯಿಂದ ಎಲ್ಲಾ ತರದ ಕೆಮ್ಮುಗಳೂ, ಉಬ್ಬಸಗಳೂ, ಕಫವೂ ಗುಣವಾಗುತ್ತದೆ. ತೊಲ 1ಕ್ಕೆ 1-0.

4. ಅಶೋಕಾರಿಷ್ಟ (ಉತ್ತಮ ತರದ್ದು)—ಇದರ ಸೇವನೆಯಿಂದ ಸ್ತ್ರೀಯರ ಮುಟ್ಟುದೋಷ, ಗರ್ಭಶೂಲ, ಯೋನಿರೋಗಗಳು ಗುಣವಾಗಿ ರಕ್ತಶುದ್ಧಿಯಾಗುವುದು. ಬಾಟ್ಲು 1ಕ್ಕೆ 1-4-0.

5. ಸುದರ್ಶನ ಮಾಲಿನಿ—ಇದರಿಂದ ಗಂಡಮಾಲೆ, ಫಿರಂಗ ರೋಗ, ಮೇಹವ್ರಣ, ಮೇಹವಾತ, ಇತ್ಯಾದಿ ದೀರ್ಘಕಾಲದ ರೋಗಗಳು 4 ದಿವಸಗಳಲ್ಲಿ ಗುಣವಾಗುತ್ತದೆ. ಬಾಟ್ಲು 1ಕ್ಕೆ 4—0—0.

6. ವಸಂತಕುಸುಮಾಕರ ತೈಲ—ಇದನ್ನು ತಲೆಗೆ ಇಟ್ಟುಕೊಂಡಲ್ಲಿ ಸರ್ವ ಶಿರೋರೋಗಗಳು ಗುಣವಾಗಿ ಜ್ಞಾನಶಕ್ತಿಯನ್ನು ಹುಟ್ಟಿಸುತ್ತದೆ. ಬಾಟ್ಲು 1ಕ್ಕೆ ರೂ. 1—0—0.

ಇದಲ್ಲದೆ ನಮ್ಮ ಡಿಸ್ಪೆನ್ಸರಿಯಲ್ಲಿ ಎಲ್ಲಾ ರೋಗಗಳಿಗೆ ಬೇಕಾಗುವ ಮಾತ್ರೆಗಳೂ, ಭಸ್ಮಗಳೂ, ತೈಲ್ಯಗಳೂ, ಲೇಹಗಳೂ, ಚೂರ್ಣಗಳೂ ಬಹಳ ಕಡಿಮೆ ಕ್ರಯದಲ್ಲಿ ಸಿಕ್ಕುತ್ತವೆ. ನಮ್ಮ ಕೆಟಲಾಗನ್ನು ತರಿಸಿರಿ.

ಎಲ್. ವಿ. ಶಂಕರ, ಉಗ್ರಾಣಕಾರ,
ಮೇನೇಜರ್.

ಶ್ರೀ ಭವಾನೀಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ, ಬ್ರಹ್ಮಾವರ, ದ. ಕ.

ಅಪೂರ್ವವಾದ ಕನ್ನಡ ವೈದ್ಯಶಾಸ್ತ್ರವು.

ಧಾತುರಂಜಿತ – ವೈದ್ಯರತ್ನ.

ಅಕ್ರಮರತಿಯಿಂದ ಶರೀರಕ್ಕೆ ಬೇರಿನಂತಿರುವ ವೀರ್ಯ ಕೆಟ್ಟು ನೀರಾಗಿ ಪತನವಾಗಿ ವಿಧವಿಧ ಬಣ್ಣದಿಂದ ಧಾತುಸ್ರಾವ, ನಪುಂಸಕತ್ವ, ಬಾಕಿ, ಇವೇ ಮುಂತಾದ ಬಹು ರೋಗಗಳುಂಟಾಗುವವು. ಇದರಲ್ಲಿ ಜ ಭಾಗಗಳಲ್ಲಿ ಈ ವಿಧದ ರೋಗಗಳ ಸ್ವರೂಪ, ಕಾರಣ, ಚಿಕಿತ್ಸೆಗಳು ವಿವರಿಸಲ್ಪಟ್ಟಿವೆ. ಮೂಲೇಂದ್ರಿಯ ರಚನೆ, ವೀರ್ಯ ನಷ್ಟಕ್ರಮ, ನಪುಂಸಕತ್ವ ಭೇದ, ವಂಧ್ಯಾರೋಗ ಭೇದ, ನಿವಾರಣೋಪಾಯ ಇವೆಲ್ಲಕ್ಕೂ ಅನುಭವಸಿದ್ಧಗಳಾದ ನೂರಾರು ವಿಧ ಲೇಹ್ಯ, ರಸಾಯನಾದಿ ದಿವ್ಯೌಷಧಿಗಳನ್ನು ಕಲ್ಪಿಸುವ ವಿಧಾನ ಮತ್ತು ರೂಢಿಯಲ್ಲಿರುವ ಅನೇಕ ವನಸ್ಪತಿಗಳ ಗುಣ, ಉಪಯೋಗಿಸುವ ಕ್ರಮ, ರಣವೈದ್ಯದಲ್ಲಿ ರಾಜವಂಗೇಶ್ವರಾದಿ ಅನೇಕ ಮಹೌಷಧಿಗಳ ನಿರ್ಮಾಣಕ್ರಮ, ಕುಟುಂಬವೈದ್ಯದಲ್ಲಿ ಜ್ವರ, ಅತಿಸಾರಾದಿಗಳ ಚಿಕಿತ್ಸೆ ಎಂತವರಿಗೂ ತಿಳಿಯುವಂತೆ ಬರೆಯಲ್ಪಟ್ಟಿದೆ. ಇದು ಇದ್ದರೆ ಮನೆಲಿ ಒಬ್ಬ ವೈದ್ಯನೇ ಇದ್ದಂತಾಗುವದು. ಇದರಲ್ಲಿರುವ ಔಷಧಿಗಳನ್ನು ತಯಾರು ಮಾಡಿ ನೂರಾರು ರೂಪಾಯಿಗಳನ್ನು ಸಂಪಾದಿಸಬಹುದು. ಕ್ರಯ ಪುಸ್ತಕ 1ಕ್ಕೆ ರೂ. ೧—೮—೦.

ನಮ್ಮ ವಿಳಾಸ:— ಭಾರತಿ ಬುಕ್‌ಡಿಪೋ,
೪೯೧, ನಗರ್ತರಪೇಟೆ, ಬೆಂಗಳೂರು ಸಿಟಿ.

The Indian Tooth-ache Specific.

ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ಬಾರ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲುನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, ಕೀವು ಇತ್ಯಾದಿ ಶೀಘ್ರವಾಗಿ ಗುಣವಾಗುತ್ತವೆ. ಕೊಳೆತುಹೋದ ಮತ್ತು ಅಲ್ಲಾಡುವ ಹಲ್ಲುಗಳಿಂದ ಕಠಿಣ ನೋವು ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ. ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಸುವ ಅವಶ್ಯವೇ ಇಲ್ಲ. ಈ ಔಷಧದ ಗುಣವನ್ನು ನೀವೇ ಪರೀಕ್ಷಿಸಿ ಎಲ್ಲರಿಗೂ ತಿಳಿಸಿರಿ.

ಶೀಸೆ 1ಕ್ಕೆ ಕ್ರಯ ರೂ. 1—4—0; ಟಪಾಲು ಖರ್ಚು 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ ಗ್ರಾ. ಶೀಸೆ ತರಿಸಿಕೊಂಡರೆ ರೂ. 12 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆಯಲ್ಪಡಲ್ಲಿ.

STANY BROTHERS, MANGALORE.

ಸೊಗಸಾದ ಕಾಫಿಹುಡಿ.

I	ಕ್ಲಾಸ್	0—10—0
II	ಕ್ಲಾಸ್	0—8—0
III	ಕ್ಲಾಸ್	0—6—0

ಹೋಟೆಲುಗಳಿಗೆ ವರ್ತಕರಿಗೆ ಧಾರಾಳವಾದ ಮೈಲಿಯಾದ ಕಮಿಷನ್ ಕೊಡಲಾಗುವುದು. ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

STANY BROTHERS, MANGALORE.

ವಿದೇಶ ವರ್ತಮಾನ.

ಬ್ರಿಟಿಷರಿಗೂ ಅಫಘಾನರಿಗೂ ಒಪ್ಪಂದ—ಈ ತನಕ ಇವೆರಡೂ ಜನಾಂಗಗಳಿಗೆ ಇದ್ದ ಒಪ್ಪಂದಕ್ಕೆ ಮುಕ್ತಾಯ ಬಂದದರಿಂದ ಹೊಸ ಕರಾರು ಆಗಲಿಕ್ಕಿದೆ ಎಂಬ ವರ್ತಮಾನವು ಟೀನದಲ್ಲಿ ಒಂದು ಬಗೆಯ ಕಳವಳವನ್ನು ಹುಟ್ಟಿಸಿದೆ. ಅಫ್ಘಾನಿಸ್ಥಾನದವರು ಬೋಲ್ಶೆವಿಕರಿಂದ ಜನಕ್ಕೆ ಬಹಳಷ್ಟು ಸಹಾಯ-ದ್ರವ್ಯವನ್ನು ಪಡೆದುಕೊಂಡಿದ್ದುದು ಟೀನದವರ ಎದೆಯಲ್ಲಿ ಕಲಬಲಿಸಿದಂತೆಯೆ ಇದೆ. ಈಗ ಅದಕ್ಕೆ ಒಂದು ವ್ಯವಸ್ಥೆಗೆ ತಾರದೆ ಬ್ರಿಟಿಷರು ಅಫಘಾನರೊಡನೆ ಹೊಸ ಒಪ್ಪಂದ ಮಾಡಿದರೆ ಅಫಘಾನರ ಮೇಲೆ ಟೀನಕ್ಕೆ ಇದ್ದ ವೈಮನಸ್ಯ ಸಮಾಜವೂ ಬ್ರಿಟಿಷರಿಗೂ ಆದೀತು ಎಂದು ಬ್ರಿಟಿಷ ವರ್ತಮಾನ ಪತ್ರಿಕೆಗಳು ಅಭಿಪ್ರಾಯಪಡುತ್ತವೆ.

ಬೋಲ್ಶೆವಿಕರೂ ಫಾರ್ಸಿಸ್ಥಾನವೂ—ಫಾರ್ಸಿಸ್ಥಾನದ ಉತ್ತರ ಭಾಗವು ತೀರಾ ಅನಾಯಕತೆಯ ಸ್ಥಿತಿಯಲ್ಲಿದ್ದುದರಿಂದಲೂ ಫಾರ್ಸಿಸ್ಥಾನದ ಈಗಿನ ಮಂತ್ರಿಯು ದೇಶಾಭಿಮಾನಿ ದಿಸೆಯಿಂದ ರಾಜಕಾರ್ಯವನ್ನು ನಿರ್ವಹಿಸಲು ಅಶಕ್ತನಾದುದರಿಂದ ಬೋಲ್ಶೆವಿಕರ ವಶವಾಗಿ ಆ ಉತ್ತರಭಾಗವು ಎದ್ದೀತು ಎಂದು ಲಂಡನ್ ಟ್ಯಾಮ್ಸ್ ಹೇಳುತ್ತಿದೆ. ಬ್ರಿಟಿಷರು ಕಳೆದ ಬೇಸಿಗೆಯಲ್ಲಿ ಸಾಲವಾಗಿ ಫಾರ್ಸಿಸ್ಥಾನಕ್ಕೆ ಕೊಟ್ಟ ೨ ಮಿಲಿಯ ಪೌಂಡು ಇಷ್ಟರೊಳಗೆ ಪುಡಿಪುಡಿಯಾಗಿರಬೇಕು, ಅಲ್ಲಿ ಸೈನ್ಯವನ್ನು ಇನ್ನೂ ಬಲಗೊಳಿಸಲೂ ಸಾಧ್ಯವಾಗಲಿಲ್ಲ, ಆದ್ದರಿಂದ ಟೆಹ್ರಾನದಲ್ಲಿದ್ದ ಚಿಕ್ಕ ಹಿಂದೀ ಫೌಜಿನ ಗತಿಯೇನಾದೀತೊ ಎಂಬದಾಗಿ ಅದೇ ಪತ್ರಿಕೆಯು ಕಳವಳಿಸುತ್ತಿದೆ. ಆದರೆ ಎಂಜಲಿಯ ಬಳಿಯಲ್ಲಿ ಹುರುಳಿಕೊಂಡಿದ್ದ ನೌಕಾಪಡೆಯನ್ನು ಕೈವಶಮಾಡಿಕೊಳ್ಳುವ ಉದ್ದೇಶಮಾತ್ರದಿಂದಲೆ ಬೋಲ್ಶೆವಿಕ ನಾಯಕನು ಈ ಫೌಜಿನಮೇಲೆ ತನ್ನ ಯುದ್ಧನೌಕೆಗಳಿಂದ ಫಿರಂಗಿ ಹಾರಿಸಿದ್ದಲ್ಲದೆ ನಿಜವಾಗಿಯೂ ಫಾರ್ಸಿಸ್ಥಾನದಲ್ಲಿ ಪದಾರ್ಪಣ ಮಾಡಿ ಅದನ್ನು ಕೈವಶಮಾಡುವುದಕ್ಕಲ್ಲ ಎಂಬದಾಗಿ ಇನ್ನೂ ವರ್ತಮಾನವಿದೆ. ದಾಕಾರಿನಿಂದ ಇಪ್ಪತ್ತು ಮೈಲು ಎತ್ತರಿಯ ನಾಲೆಯು ಇನ್ನೊಂದು ಕೊನೆಯಲ್ಲಿ ಸಕ್ಕರೆ ಬಾಗದಲ್ಲಿ ಇದ್ದ ಬಾಟೂವಿನಲ್ಲಿರುವ ಬ್ರಿಟಿಷ ಸೈನ್ಯವನ್ನು ಬಲಗೊಳಿಸುತ್ತಲಿದ್ದಾರೆ.

ಐರ್ಲೆಂಡು—ಇಲ್ಲಿ ಸಿನ್‌ಫೆನ್ನರು ಟಪಾಲು ಗಾಡಿಗಳನ್ನು ಅಡ್ಡಗಟ್ಟಿದು ಸುಲಿದುಕೊಳ್ಳುವುದೂ ಪೋಲೀಸು ಠಾಣೆಗಳನ್ನು ಸುಡುವುದೂ ಜಾನುವಾರುಗಳನ್ನು ಕೊಳ್ಳೆಹೊಡಕೊಂಡು ಹೋಗುವುದೂ ಮುಂತಾದ ವರ್ತಮಾನವು ಹೆಚ್ಚುತ್ತಲೆ ಇವೆ. ಬ್ರಿಟನ್ನಿನಿಂದ ಬಂದ ಸರಂಜಾಮಿನ ಹಡಗುಗಳ ಸರಕು ಇಳಿಸಲಿಕ್ಕೆ ಧಕ್ಕೆ ಕೂಲಿಗಳು ತಿರಸ್ಕರಿಸಿದ್ದರಿಂದ ಲಷ್ಕರಿನವರೇ ಆ ಕೆಲಸ ಮಾಡಬೇಕಾಗಿ ಬಂತು.

ಪೋಲೆಂಡ—ಪೋಲೆಂಡವು ರುಷ್ಯದ ಚಿಕ್ಕಪುಟ್ಟ ರಾಜ್ಯಗಳೊಂದಿಗೆ ಸೇರಿ ಪರಸ್ಪರ ಸ್ವಾತಂತ್ರ್ಯವನ್ನು ಬಲಪಡಿಸಿಕೊಳ್ಳಲಿಕ್ಕೂ ಬೋಲ್ಶೆವಿಕರ ಹಾವಳಿಯು ಹಬ್ಬದಂತೆ ಯುರೋಪದ ಪೂರ್ವ ಪ್ರಾಂತ್ಯಗಳಿಗೂ ಪಶ್ಚಿಮ ಪ್ರಾಂತ್ಯಗಳಿಗೂ ನಡುವೆ ಗೋಡೆಯು ರೂಪವಾಗುತ್ತದೆಂತಲೂ ಇದೇ ಉದ್ದೇಶದಿಂದ ಉಕ್ರೈನ ಪ್ರಾಂತದಲ್ಲಿ ಬೇರು ಇಳಿದ ಬೋಲ್ಶೆವಿಕರ ಕೈಯಿಂದ ಕೀಫ್ ಪಟ್ಟಣವನ್ನು ಹಿಡಿದುಕೊಂಡಿದೆ ಎಂತಲೂ ಹಿಂದೆ ಸೂಚಿಸಿದ್ದೇವೆ. ಈ ಪೋಲೆಂಡದವರಿಗೆ ಸೈನ್ಯ ಸಹಾಯವಲ್ಲದಿದ್ದರೂ ಸರಂಜಾಮಿನ ಸಹಾಯವನ್ನು ಮಿತ್ರಪಕ್ಷದವರು ಮುಖ್ಯವಾಗಿ ಬ್ರಿಟಿಷರು ಒದಗಿಸಿದ್ದರು; ಇದರ ಸಹಾಯದಿಂದ ತಮ್ಮ ಸ್ವಾತಂತ್ರ್ಯವನ್ನು ಪೋಲೆಂಡದವರು ಕಾಪಾಡಿಕೊಳ್ಳಲಿಕ್ಕೆ ಮಾತ್ರ ಯತ್ನಿಸುತ್ತಿದ್ದಾರೆ ಎಂಬ ಅಭಿಪ್ರಾಯವು ಬ್ರಿಟಿಷರಲ್ಲಿ ಇತ್ತು. ಆದರೆ ಈಗ ಬೋಲ್ಶೆವಿಕರ ರಾಜ್ಯಗಳನ್ನು ಹಿಡಿದು ರುಷ್ಯದ ಪ್ರಾಂತ್ಯಗಳಲ್ಲಿ ಒಳನುಗ್ಗುವ ಜವಾಬ್ದಾರಿ ಹೆಚ್ಚಿನದು, ಇಂಥ ಕೆಲಸದಿಂದ ಪೋಲೆಂಡವು 'ಲೀಗ್ ಒಫ್ ನೇಶನ್ಸ್' ಕರಾರಿನ ಶರ್ತಗಳಿಗೆ ವಿರೋಧವಾಗುತ್ತದೆ ಎಂಬ ಆಕ್ಷೇಪವು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಬಂತು. ಪೋಲೆಂಡಕ್ಕೆ ಬರೇ ಸ್ವಾತಂತ್ರ್ಯ ರಕ್ಷಣೆಗಿಂತಲೂ ಹೆಚ್ಚಿನ ಅಭಿಲಾಷೆಯು ಇದೆ ಎಂಬಂತೆ ಈ ಚರ್ಚೆಯಿಂದ ತಿಳಿಯಬೇಕಾಗಿದೆ. ಆದರೆ ಪೋಲೆಂಡದವರು ಬೋಲ್ಶೆವಿಕರ ಹೊಸ ಸೈನ್ಯದ ಒತ್ತಾಯಿಕೆಯನ್ನು ಕೀಫ್ ಪಟ್ಟಣದ ಸಮೀಪದಲ್ಲಿ ತಡೆಯಲಾರದೆ ಸ್ವಲ್ಪ ಹಿಂದೆಸರಿಯ ತೊಡಗಿದ್ದಾರೆಂಬ ತಂತಿ ವರ್ತಮಾನಗಳು ಇವೆ.

ಬೋಲ್ಶೆವಿಕರು—ಇವರ ದೊಡ್ಡ ಸೈನ್ಯ ಒಂದು ೧೩ ಹಡಗುಗಳಲ್ಲಿ ಫಾರ್ಸಿಸ್ಥಾನದ ಕಸ್ಪಿಯನ್ ಸಮುದ್ರದ ಕರಾವಳಿಯಲ್ಲಿ ಎಂಜಿಲಿ ಎಂಬಲ್ಲಿ ಇಳಿದ ಕಾರಣ ಅಲ್ಲಿ ಕಾವಲಾಗಿ ಇದ್ದ ಕೊಂಚ ಬ್ರಿಟಿಷ ಸೈನ್ಯವು ಆ ಸ್ಥಾನವನ್ನು ಬೋಲ್ಶೆವಿಕರಿಗೆ ಒಪ್ಪಿಸಿಕೊಟ್ಟು ಹಿಂದೆ ಸರಿಯಿತು. ಫಾರ್ಸಿಸ್ಥಾನದಲ್ಲಿ ಆಗಲಿ ಮೆಸೊಪೊಟೆಮಿಯದಲ್ಲಿ ಆಗಲಿ ಬ್ರಿಟಿಷರು ಬಹಳ ವಿಸ್ತಾರದವರೆಗೆ ಆಕ್ರಮಿಸಿಕೊಂಡು ಅಧಿಕಾರ ನಡೆಸುವುದು ಜವಾಬ್ದಾರಿಗಳನ್ನು ಹೆಚ್ಚಿಸಿ ಬ್ರಿಟಿಷ ಸರಕಾರಕ್ಕೆ ಬಹಳ ಅನಾವಶ್ಯಕ ವ್ಯಯಕ್ಕೆ ಕಾರಣವಾಗುತ್ತದೆ, ಮೆಸೊಪೊಟೆಮಿಯದಲ್ಲಿ ಮೊಸಲ್ ಎಂಬಲ್ಲಿವರೆಗೆ ಬ್ರಿಟಿಷ ಸೈನ್ಯದ ಸತ್ತೆಯು ಇರಬೇಕೆನ್ನುವುದು ಮೊಸಲ್ ಪ್ರಾಂತ್ಯದಲ್ಲಿರುವ ಸೀಮೆ ಎಣ್ಣೆ ಗಣಿ ಮತ್ತು ಕಾರ್ಖಾನೆಗಳ ಬ್ರಿಟಿಷ ಸಾಹುಕಾರರ ರಕ್ಷಣೆಗಾಗಿಯೇ ಇದೆ ಎಂಬಂತೆ ಕಾಣುತ್ತದೆ. ಅಂಥ ಸಂದರ್ಭದಲ್ಲಿ ಆ ಖರ್ಚನ್ನು ವಿಪರೀತವಾಗಿ ಹೆಚ್ಚಿಸುವುದು ಕಂದಾಯ ತರುವ ಇತರ ಪ್ರಜೆಗಳಿಗೆ ಅನ್ಯಾಯವಾದೀತು ಎಂದು ಲಂಡನ್ ಟ್ಯಾಯಮ್ಸ್ ಪತ್ರಿಕೆಯು ಘೋಷಿಸುತ್ತಿದೆ.

ಐರ್ಲೆಂಡು—ಇಲ್ಲಿಯ ಅನಾಯಕತ್ವವನ್ನು ಮುರಿಯುವುದಕ್ಕೆ ಸೈನ್ಯವು ಹೋಗುತ್ತಲೆ ಇದೆ. ಆದರೆ ಡಬ್ಲಿನದಲ್ಲಿ ಸರಂಜಾಮನ್ನು ರೇವಿನಮೇಲೆ ಇಳಿಸುವ ಮಜೂರರೂ ಇಂಗ್ಲೆಂಡಿನಲ್ಲಿ ಅವನ್ನು ಹಡಗಿನಮೇಲೆ ಹತ್ತಿಸುವ ಮಜೂರರು ಈ ವಿಷಯದಲ್ಲಿ ತಾವು ಸಹಕರಿಸುವುದಿಲ್ಲವೆಂದು ಹೇಳಿ ಮುಷ್ಕರ ಹಿಡಿದಿರುವರಂತೆ, ಲಿಮೆರಿಕ್ ಎಂಬ ಊರಿನಲ್ಲಿ ಜನಗಳ ಗಲಾಟೆ ಹೆಚ್ಚಿದಕಾರಣ ಪೋಲಿಸ್ ಮತ್ತು ಲಷ್ಕರಿನವರು ಆ ಪಟ್ಟಣದಲ್ಲಿ ಬಂದೋಬಸ್ತು ಹೆಚ್ಚಿಸಿ ಗಲಾಟೆಗಾರರಮೇಲೆ ಒಂದೆರಡು ಕಡೆಗಳಲ್ಲಿ ಗುಂಡು ಹಾರಿಸಿದ್ದರಿಂದ ಒಬ್ಬನು ಮಡಿದನೆಂತಲೂ ಇನ್ನು ಕೆಲವರಿಗೆ ಗಾಯವಾಯಿತೆಂತಲೂ ತಿಳಿಯುತ್ತೇವೆ.

ಹಂಗೇರಿ—ಹಂಗೇರಿಯು ಸಂಧಿ ಶರ್ತಗಳಿಗೆ ಬೇಗನೆ ಸಹಿಕೊಡದಿದ್ದರೆ ಅದನ್ನು ಮುರಿಯಲಿಕ್ಕೆ ರೂಮೇನಿಯ, ಮತ್ತು ಸ್ಲಾವ ಜನಾಂಗಗಳು ಕೈಮುಂದರಿಸುತ್ತೇವೆಂದು ತಿಳಿಸಿದ್ದರಿಂದ ಹಂಗೇರಿಯವರು ಸಂಧಿ ಶರ್ತಗಳಿಗೆ ಬೇಗನೆ ಒಪ್ಪಿಗೆ ಕೊಟ್ಟು ಇರುವರಂತೆ. ಸಹಿಯು ಸದ್ಯದಲ್ಲಿಯೇ ಆಗುವುದು.

ಜರ್ಮನರು ತೆರುವ ನಷ್ಟ—ಸ್ಪಾ ಎಂಬಲ್ಲಿ ಜರ್ಮನರು ಮಿತ್ರಪಕ್ಷದ ಪ್ರತಿನಿಧಿಗಳನ್ನು ಭೇಟಿಮಾಡಿ ಯುದ್ಧದ ನಷ್ಟ ಭರ್ತಿಯನ್ನು ಹೇಗೆ ಮಾಡಬೇಕೆಂದು ನಿರ್ಣಯವಾಗಲಿಕ್ಕಿತ್ತು. ಈ ಸಭೆ ಕೂಡಲಿಕ್ಕೆ ಸ್ವಲ್ಪ ವಾಯಿದೆ ಕೇಳಿಕೊಂಡು ಜರ್ಮನ ಮಂತ್ರಿಕೂಟದವರು ಪತ್ರ ಬರೆದಿದ್ದರು. ಅಷ್ಟರೊಳಗೆ ಈ ದಂಡದ ಹಣವು ಒಂದೇ ಕಂತಿನಲ್ಲಿ ಬಾರದಿದ್ದರೆ ಪ್ರತಿ ಕಂತಿನಲ್ಲಿ ಯಾವ ರಾಜ್ಯಗಳಿಗೆ ಎಷ್ಟು ಅಂಶ ಸಲ್ಲಬೇಕೆಂದು ಗೊತ್ತುಹಚ್ಚಲಿಕ್ಕೆ ಇಟಲಿಯಲ್ಲಿ ಮಿತ್ರಪಕ್ಷದವರು ಸಭೆಸೇರಿದ್ದರು, ಫ್ರೆಂಚರು ಮೊದಲಿನ ಕಂತುಗಳು ತೀರಾ ತಮಗೆ ಮತ್ತು ಬೆಲ್ಜಿಯಮದವರಿಗೆ ಸಿಗಬೇಕೆಂದೂ ವಾದಿಸಿದರು. ಬ್ರಿಟಿಷರ ಅಭಿಪ್ರಾಯದಲ್ಲಿ ಫ್ರೆಂಚರಿಗೆ ಸಿಗುವ ೧೩ ಪಾಲುಗಳಿಗೆ ೫ ಪಾಲು ಬ್ರಿಟಿಷರಿಗೆ ಸಿಗಬೇಕೆಂದು ಚರ್ಚಿಸಿದರು. ಇದು ಕಡೆಗೆ ಇತ್ತಂಡದವರಿಗೂ ಅನುಕೂಲವಾದ ರೀತಿಯಿಂದ [illegible] ಎಂದು ತಿಳಿಯುತ್ತದೆ. ಫ್ರೆಂಚ ಪಾರ್ಲಿಮೆಂಟಿನ [illegible]

[illegible]

ಮೇರೆಗೆ ಜರ್ಮನ ಜನಾಂಗದ ಮೇಲೆ ಹೊರಿಸಿದ ದಂಡ ೫೦೦೦ ಸಾವಿರ ಮಿಲ್ಲಿಯ ಮಾರ್ಕ್ (ಒಂದು ಮಾರ್ಕ್ ೧ ಶಿಲ್ಲಿಂಗಿನಷ್ಟು ಬೆಲೆಯದಾಗಿತ್ತು.) ಯುದ್ಧ ನಷ್ಟದ ದಂಡವನ್ನು ವಿಧಿಸಬೇಕೆಂದೂ ಅದನ್ನು ನೇಕಡಾ ೫ರ ಬಡ್ಡಿಯಿಂದ ಕಂತುಗಳಲ್ಲಿ ತರಬೇಕೆಂದೂ ಹಾಗೆ ವಸೂಲಾಗುವ ಮೊಬಲಗಿನಲ್ಲಿ ನೇಕಡಾ ೫೨ರಷ್ಟು ಅಂಶವನ್ನು ಫ್ರಾನ್ಸ್, ನೇಕಡಾ ೨೨ರಷ್ಟು ಬ್ರಿಟನ್, ಉಳಿದ ಅಂಶ ಬೆಲ್ಜಿಯಮ್ ಸರ್ವಿಯ, ಇಟಲಿ ರಾಜ್ಯಗಳು ಹೊಂದಬಹುದೆಂದೂ ಮಿತ್ರಪಕ್ಷದವರು ಅಂದಾಜು ಮಾಡಿದ್ದಾರಾಗಿ ಹೇಳಿದರು. ಮಿತ್ರಪಕ್ಷದ ರಾಜ್ಯಗಳಿಂದ ಸುಲಿದುಕೊಂಡು ಅಥವಾ ನಷ್ಟಪಡಿಸಿದ್ದಕ್ಕೆ ಪ್ರತಿಯಾಗಿ ಕೊಡಬೇಕೆಂದು ನಿರ್ಣಯಿಸಿದ ಕಲ್ಲಿದ್ದಲು, ಇತರ ಸಾಹಿತ್ಯಗಳು ಜಾನುವಾರುಗಳು ಮುಂತಾದುವುಗಳ ಬೆಲೆ ಇದರಲ್ಲಿ ಸೇರಲಿಲ್ಲವಂತೆ.

ರೂರ ಪ್ರದೇಶದಲ್ಲಿ ಕಳವಳದ ಬೆಂಕಿಯು ಇನ್ನೂ ತೀರಾ ಆರಲಿಲ್ಲ, ಬೂದಿಯೊಳಗಿನ ಕೆಂಡವಾಗಿ ಇದ್ದು ಶಕ್ತನ ಎತ್ತಿಯೆತ್ತಿ ಉರಿ ಏರಲಿಕ್ಕೆ ಸಾಕು ಎಂದೂ ಇದಕ್ಕೆ ಅಸಮಾಧಾನ ಚಿತ್ತದಿಂದಿರುವ ಬವೇರಿಯ ರಾಜ್ಯವೇ ಕೇಂದ್ರಸ್ಥಾನವಾದೀತೆಂದೂ ಜರ್ಮನ ಮಂತ್ರಿ ಕೂಟದವರಲ್ಲಿ ಕೆಲವರು ಅಭಿಪ್ರಾಯಪಡುತ್ತಾರೆ.

ಫಾರ್ಸಿಸ್ಥಾನದ ಶಹಾ:—ಇವರು ವಿಲಾಯತಿಯ ಬೇರೆ ಬೇರೆ ದೇಶಗಳಲ್ಲಿ ಪರ್ಯಟನ ಮಾಡಿ ಮೆಸೊಪೊಟೆಮಿಯದ ಬಾಸ್ರಾ ಬಂದರದಲ್ಲಿ ಇಳಿದು ಅಲ್ಲಿಂದ ಬಾಗ್ದಾದಕ್ಕೆ ತಲುಪಿ, ಅಲ್ಲಿಂದ ಕರ್ಬೇಲ ಮತ್ತು ನಾಜಫ್ ಎಂಬಲ್ಲಿಗೆ ಯಾತ್ರೆಮಾಡಿ ಬಂದರು.

ಒಳದೇಶ ವರ್ತಮಾನ.

ಖಿಲಾಫತ್ ಪ್ರಶ್ನೆ—ತುರ್ಕಿಗೆ ಕೊಟ್ಟ ಸಂಧಿ ಶರ್ತಗಳು ಸಮಂಜಸವಲ್ಲವಾದ್ದರಿಂದ ಆ ಕುರಿತು ತನ್ನ ವಿಷಾದವನ್ನು ತೋರ್ಪಡಿಸುವುದಕ್ಕಾಗಿ ನಾವು ದಾರ ಯಾಕೂಬ ಹಸನ್‌ರು ಮದ್ರಾಸು ನ್ಯಾಯವಿಧಾಯಕ ಸಭೆಯ, ಪೋರ್ಟಟ್ರಸ್ಟಿನ ಮತ್ತು ಮ್ಯುನಿಸಿಪಲ್ ಕಾರ್ಪೊರೇಶನಿನ ಮೆಂಬರಿಕೆಗೆ ರಾಜಿನಾಮೆಕೊಟ್ಟಿರುವೆನಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿರುವರು. ನಾಮದಾರ ಭುರ್ಗರಿಯವರು ವರಿಷ್ಠ ಕಾಯಿದೆಕೌನ್ಸಿಲಿನ ಮೆಂಬರಿಕೆಗೆ ರಾಜಿಕೊಟ್ಟಿರುವೆನಾಗಿ ಮೈಸೂರಾಯಪ್ರಭುಗಳಿಗೆ ತಿಳಿಸಿರುವರು.

ಸಂಧಿ ಶರ್ತಗಳಿಗೆ ಇರುವ ಆಕ್ಷೇಪವನ್ನು ಸರಕಾರದವರ ಮನಸ್ಸಿಗೆ ಸ್ವೀಕರಿಸುವಂತೆ ಪ್ರಜಾಜನಗಳು ತಮ್ಮ ಸಹಕಾರ್ಯವನ್ನು ಹಿಂದೆಗೆಯಬೇಕೆಂಬ ಖಿಲಾಫತ್ ಸೆಂಟ್ರಲ್ ಕಮಿಟಿಯ ಸೂಚನೆಯನ್ನು ಯಾವ ತಾರೀಕಿನಿಂದ ಜಾರಿಗೆ ತರಬಹುದೆಂದು ಇನ್ನೂ ನಿರ್ಣಯವಾಗಲಿಲ್ಲ, ಅಷ್ಟರೊಳಗೆ ಕೆಲವು ಮುಖಂಡರು ತಮ್ಮ ಗೌರವಾರ್ಥದ ಉದ್ಯೋಗಗಳಿಗೆ ರಾಜಿನಾಮೆಕೊಟ್ಟದ್ದು ಸರಿಯಲ್ಲ, ಆ ವಿಷಯದಲ್ಲಿ ಸೆಂಟ್ರಲ್ ಖಿಲಾಫತ್ ಕಮಿಟಿಯು ಸರ್ಕಲರು ಹೊರಡಲಿಕ್ಕಿದೆ ಎಂದು ಮಹಾತ್ಮಗಾಂಧಿಯವರು ಪ್ರಕಟಿಸಿದ್ದಾರೆ. ಸದ್ಯದಲ್ಲಿ ಈ ಕಮಿಟಿಯ ಅಧಿವೇಶನವು ಈ ವಿಷಯವನ್ನು ಇತ್ಯರ್ಥಪಡಿಸಲಿಕ್ಕೆ ಇದೆ.

ರೈಲ್ವೆ ಸಿಬಂದಿಯವರ ಮನವಿ—ಸೌತ್ ಇಂಡಿಯನ್ ರೈಲ್ವೆ ಸಿಬಂದಿಯವರು ತಮ್ಮ ಪೈಕಿ ಗುಮಾಸ್ತೆಯರಿಗೆ ಸಂಬಂಧ ಕನಿಷ್ಠಮಿತಿ ೨೫ ರೂ. ಚಿಲ್ಲರೆ ನವುಕರರಿಗೆ ೧೨ ಎಂಬ ನಿರ್ಧಾರವನ್ನು ಕಳೆದ ಎಪ್ರಿಲ್ ತಿಂಗಳ ಸರ್ಕಲರಿನಲ್ಲಿ ತಿಳಿಸಿದ್ದನ್ನು ಆಕ್ಷೇಪಿಸಿ ಪುನಹ ಮನವಿಯನ್ನು ಮಾಡಿದ್ದಾರೆ. ರೆಲ್ವಾಯಿ ೨೫ ಪ್ರಥಮಾಂಕ ನಿಶ್ಚಯದಿಂದ ಸರ್ವಿಸು ಹೆಚ್ಚಿದಹಾಗೆ ಸಂಬಳ ಹೆಚ್ಚುವಂತೆ ಕ್ರಮವಿಲ್ಲದಿರುವುದರಿಂದ ತಮಗೆ ಏನೊಂದು ಪ್ರಯೋಜನಕರವಲ್ಲ. ಸದರ್ನ್ ಮಹಾರಾಷ್ಟ್ರ ರೈಲ್ವೆಯವರು ಕನಿಷ್ಠಮಿತಿ ರೂ. ೫೦ಕ್ಕೆ ಇರಗೊಡಿಸಬೇಕೆಂದು ಕೇಳಿಕೊಂಡಂತೆ ತಮಗೂ ಅಷ್ಟನ್ನಾದರೂ ಕೊಡಿಸಬೇಕು ಹೀಗೆಗಳಿಗೆ ಲಷ್ಕರರಿಗೆ ಕೂಡಾ ಸಂಬಳದ ದರಗಳನ್ನು ಏರಿಸಬೇಕು ಎಂದು ಮುಂತಾಗಿ ಈ ಮನವಿಯು ಮುಖ್ಯ ತಾತ್ಪರ್ಯ.

ಮದ್ರಾಸು ನ್ಯಾಯವಿಧಾಯಕ ಸಭೆ—ಇದರ ಅಧಿವೇಶನವು ಇದೇ ೨೭ನೇ ತಾರೀಕಿಗೆ ಮದ್ರಾಸಿನಲ್ಲಿ ಜರಗಲಿಕ್ಕಿದೆ. ಮೆಸ್ಟನ್ ಕಮಿಟಿಯವರು ಮಾಡಿದ ಹಂಚಿಕೆಯಲ್ಲಿ ಮದ್ರಾಸು ಸರಕಾರವು ತೆರಬೇಕಾದ ಅಂಶವನ್ನು ಆಕ್ಷೇಪಿಸಿ ನಾಮದಾರ ರಾಮಾನುಜಾಚಾರ್ಯರು ಒಂದು ಠರಾವನ್ನು ಚರ್ಚೆಗೆ ಈ ಅಧಿವೇಶನದಲ್ಲಿ ತರಲಿಕ್ಕಿರುವರು.

ಮದ್ರಾಸಿನಲ್ಲಿ ಯುದ್ಧದ ಸ್ಮಾರಕ—ಯುದ್ಧದಲ್ಲಿ ಜಯವುಂಟಾದ ಸ್ಮಾರಕವಾಗಿ ಮದ್ರಾಸಿನಲ್ಲಿ ಕಟ್ಟಲಿಕ್ಕಿರುವ 'ವಿಕ್ಟರಿ ಹೋಲ್' ಎಂಬ ಕಟ್ಟಡದ ಬಗ್ಗೆ ಶಿವಗಂಗಾ ಜಮೀನುದಾರರು ೫೦೦೦೦ ರೂಪಾಯಿ ವಂತಿಗೆ ಕೊಟ್ಟಿರುವರು. ಈ ಫಂಡಿಗೆ ಇದರಷ್ಟು ದೊಡ್ಡ ಮೊಬಲಗು ಬೇರೆ ಯಾರೊಬ್ಬರು ಕೊಟ್ಟಿಲ್ಲವಂತೆ.

ಹೈದರಾಬಾದು ನಿಜಾಮರು:—ಖಿಲಾಫತ್ ಪ್ರಶ್ನೆಯನ್ನು ಕುರಿತು ತನ್ನ ಅಭಿಪ್ರಾಯವನ್ನು ಯುದ್ಧಕಾಲದಲ್ಲಿಯೇ ತಾನು ಬ್ರಿಟಿಷ ಸರಕಾರಕ್ಕೆ ತಿಳಿಸಿಯೇ ಇರುತ್ತೇನಾದರೂ ಈಗ ಶಾಂತತಾಂತರಗಳಿಂದ ಈ ಬಗೆಯ ಶರ್ತಗಳನ್ನು ಬ್ರಿಟಿಷ ಸರಕಾರವು ಕೊಟ್ಟಿದೆ, ಅದರಿಂದ ಮುಸಲ್ಮಾನ ಬಂಧು ವರ್ಗಕ್ಕೆ ನಿರಾಶೆಯಾದುದೇನೂ ನಿಶ್ಚಯ. ಆದರೆ ಆ ಕುರಿತು ಇನ್ನು ಮುಂದೆ ಚಳವಳಿ ಎಬ್ಬಿಸುವುದು ದೇಶದಲ್ಲಿ ನೆಮ್ಮದಿಭಂಗಕ್ಕೆ ಕಾರಣವಾದೀತಾದರಿಂದ ಖಿಲಾಫತ್ ಮೀಟಿಂಗುಗಳನ್ನು ತನ್ನ ರಾಷ್ಟ್ರದೊಳಗೆ ಜರಗಿಸಬಾರದೆಂದು ಫರ್ಮಾನೆ ಕೊಟ್ಟಿರುವರು.

ಗುಜರಾಥಿ ಸ್ತ್ರೀಯರಿಗೊಂದು ವಿಶ್ವವಿದ್ಯಾಲಯ:—ಪ್ರೊಫೆಸರ್ ಕರ್ವೆಯವರು ಮರಾಠಿ ಸ್ತ್ರೀ ವೃಂದದ ಅಭ್ಯುದಯದ ಬಗ್ಗೆ ಸ್ಥಾಪಿಸಿದ ಯೂನಿವರ್ಸಿಟಿಯಂತೆ ಗುಜರಾಥಿ ಸ್ತ್ರೀಯರ ಬಗ್ಗೆ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕಾಗಿ ಸರ್. ವಿಠಲದಾಸ ಥಾಕರಸೀಯವರು ೧೫ ಲಕ್ಷ ರೂಪಾಯಿ ದಾನಮಾಡಿದ್ದಾರೆ.

ದಕ್ಷಿಣ ಕನ್ನಡ.

ಸ್ವೀಕಾರ.

'ಒಬ್ಬ ಪ್ರಯಾಣಸ್ಥರು' ಪದ್ಮಾಲಯ ಭೋಜನ ವಿಷಯವಾಗಿ ಒಂದು ಬಾತಮಿಯನ್ನು ಪ್ರಕಟಿಸೆ ಬಗ್ಗೆ ಇಲ್ಲಿಗೆ ಕಳುಹಿಸಿರುವರು. ಈ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಅದರ ಇತ್ಯರ್ಥಮಾಡಿಸಿಕೊಳ್ಳುವುದು ಒಳ್ಳೇದು

(ಪತ್ರಕರ್ತ)

ಖಿಲಾಫತ್ ಪ್ರಶ್ನೆಯನ್ನು ಕುರಿತು ಪಬ್ಲಿಸಿಟಿ ಬ್ಯೂರೋವಿನಿಂದ ೪ ಪತ್ರಗಳು ಪ್ರಕಟನೆ ಬಗ್ಗೆ ಬಂದಿವೆ. ಅವು ಇಂಗ್ಲಿಷ ಭಾಷೆಯಲ್ಲಿರುವದರಿಂದ ಅವುಗಳ ಸಾರಾಂಶವನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುವೆವು.

(ಪತ್ರಕರ್ತ)

(೧). ವಿದ್ಯಾಭಿವೃದ್ಧಿ. ಪ್ರಕಾಶಕ ಮ. ರಾ. ಎಸ್ ರಂಗಪ್ಪಯ್ಯ ಸಪ್ತರ್ಷಿ ಥಕ್ಕಗ್ರಂಥಮಾಲಾ ಕಾರ್ಯಾಲಯ. (೨) ಲೋಕಮಾನ್ಯ ಬಾಳ ಗಂಗಾಧರ ಟಿಳಕ (ರಾ. ಸ್ವಾ. ಎಸ್. ರಂಗ ಶೆಣೈ) (೩) ಸ್ವತಂತ್ರ ಜೀವನ (ರಾ| ರಾ. ಶಿವರಾಮದಾಸ, ಸಂಪಾದಕ ಆನಂದ ಚಂದ್ರಿಕೆ) ಈ ಮೂರು ಪುಸ್ತಕಗಳು ವಿಮರ್ಶೆ ಬಗ್ಗೆ ಬಂದಿರುವುದನ್ನು ಆದರ ಪೂರ್ವಕವಾಗಿ ಸ್ವೀಕರಿಸಿರುವೆವು. ವಿಮರ್ಶೆ [illegible] ಕೊಡಲಾಗುವದು.

ಶ್ರೀಧನ್ವಂತರಿ. ಇದೊಂದು ಶಲ್ಯವೂ, ವೈದ್ಯರತ್ನ ಪಂಡಿತ ಗೋಪಾಲಾಚಾರ್ಯರ ಇವರಿಂದ ಈಗ ತೆಲುಗು ಭಾಷೆಯಲ್ಲಿ ಪ್ರಕಟವಾಗುತ್ತಿದೆ. ಇವರ ಕನ್ನಡ ಮತ್ತು ತಮಿಳು ಬರುವ ತಿಂಗಳಿಂದ ಪರಿವರ್ತನೆಗಳು ಆಗಲಿಕ್ಕಿವೆ. ಇವನ್ನು ಓದ ಬೇಕಾಗಿದ್ದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ವಾರ್ಷಿಕ ಚಂದಾ ರು ೧—೮—೦. ವಿಳಾಸ:—ಮೆನೆಜರ್, ಶ್ರೀಧನ್ವಂತರಿ, ಮದ್ರಾಸ ಆಯುರ್ವೇದಿಕ್ ಬಿಲ್ಡಿಂಗ್ಸ್, ಕೆಥಿಡ್ರಲ್ ಪೋಸ್ಟ್, ಮದ್ರಾಸು.

ಕುಂಬಳೆ—ಸುಮಾರು ೧ ತಿಂಗಳ ಲಾಗಾಯ್ತು ಇಲ್ಲಿ ಹುಚ್ಚುನಾಯಿಗಳ ದೆಸೆಯಿಂದ ಕೆಲವು ಜಾನುವಾರುಗಳಿಗೆ ಅಪಾಯ ಸಂಭವಿಸಿದ್ದಲ್ಲದೆ ಇದೇ ತಾ. ೨೯ಕ್ಕೆ ಒಂದು ಹುಚ್ಚು ನರಿಯ ಕಡಿತದಿಂದ ಏಳಾರು ಜನರಿಗೆ ತುಂಬಾ ಗಾಯಗಳಾಗಿ ಅತೀ ಕಷ್ಟದಲ್ಲಿರುವರು. ಇನ್ನಾದರೂ ಸಂಬಂಧಪಟ್ಟ ಆಫೀಸರರಿಗೆ ದಯೆ ಹುಟ್ಟಿ ನಾಯಿಗಳನ್ನು ಕೊಲ್ಲಿಸಲು ಹುಕುಂ ದಯಪಾಲಿಸಲಾಗದೇ!

ಇಲ್ಲಿ ಕಳವು ಜುಗಾರಾಟಗಳು ಪ್ರಾರಂಭಿಸುವ ಮಳೆಗಾಲವು ಸಮೀಪಿಸಿರುವುದರಿಂದ ಎರಡು ವರ್ಷಗಳಿಂದ ತಂಗಾಮಿಯಾಗಿದ್ದ ಔಟುಪೋಸ್ಟು ಸ್ಟೇಶನನ್ನು ಮೆಹರ್ಬಾನ ಜಿಲ್ಲಾ ಕಲ್ಲೆಕ್ಟರ್ ದೊರೆಗಳವರು ವ ಪೋಲೀಸ್ ಸುಪರಿಂಟೆಂಡೆಂಟ್ ದೊರೆಗಳವರು ಕೃಯೆಯಲ್ಲೇ ಇಡಿಸಿಕೊಟ್ಟು ಬಡ ಪ್ರಜೆಗಳ ನೆಮ್ಮದಿಯನ್ನು ಕಾಪಾಡುವರೆಂತ ನಂಬುತ್ತೇವೆ,

ಕುಕ್ಕಾಲು—"ಕುಕ್ಕಾಲು ಹಿಂದೂ ಪ್ರಾಥಮಿಕ ಶಾಲೆಯ ಹೊಸ ಕಟ್ಟೋಣದ ಪ್ರತಿಷ್ಠೆಯ ಉತ್ಸವವು ಇದೇ ತಿಂಗಳ ತಾರೀಕು ೩೦ನೇ ರವಿವಾರ ಪೂರ್ವಾಹ್ನ ಘಂಟೆ ೧೦ಕ್ಕೂ, ವರ್ಧಂತ್ಯುತ್ಸವವು ಅಪರಾಹ್ನ ಘಂಟೆ ೬ಕ್ಕೂ ಮ| ರಾ| ರಾ| ಉಡ್ಪಿ ವೆಸ್ಟ್ ಶಾಲೆಗಳ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ಜರಗುವುದು. ಸರ್ವರಿಗೂ ಸ್ವಾಗತವಿದೆ"

ರಾಮಕುಂಜ:—ಇಲ್ಲಿ ಶಿವಳ್ಳಿ ಬ್ರಾಹ್ಮಣ ವಿದ್ಯಾವರ್ಧಕ ಸಂಘದವೊಂದು ಏರ್ಪಾಡಾಗಿ ತನ್ಮೂಲಕ ಒಂದು ಸಂಸ್ಕೃತ ಪಾಠಶಾಲೆಯು ಸ್ಥಾಪಿತವಾಗಿದೆ. ಎಪ್ರಿಲ್ ತಾ. ೫ರ ಲಾಗಾಯ್ತು ಪಾಠಕ್ರಮವು ಪ್ರಾರಂಭವಾಗಿ, ೪ ಕ್ಲಾಸುಗಳ, ಇವೆ. 20 ಹುಡುಗರು ದಾಖಲಾಗಿದ್ದಾರೆ. ಮಹೋಪಾಧ್ಯಾಯ ನಗರಿ ಶ್ರೀನಿವಾಸ ಶಾಸ್ತ್ರಿಗಳು ಮುಖ್ಯೋಪಾಧ್ಯಾಯರು ರಾ| ಪಟ್ಟೆ ವೆಂಕಟರಮಣ ಪಾಂಗಣ್ಣಾಯರು ರಾ| ಮುಯ್ಯಾಳ ಶ್ರೀನಿವಾಸ ಪಡ್ಡಿಲ್ಲಾಯರು ಮೊದಲಾದ ವಿಶ್ವಾಸಿಜನರೂ ಕೂಡಾ ಈ ಸಂಘಕ್ಕೆ ಪ್ರೋತ್ಸಾಹಕರಾಗಿರುವದರಿಂದ ಈ ಶಾಲೆಯು ಚಿರಂಜೀವಿಯಾಗ ಬಹುದಾಗಿ ನಂಬುತ್ತೇನೆ.

ಮೊದಲನೆ ಕರ್ಣಾಟಕ ಪರಿಷತ್ತು ಧಾರವಾಡ.

ಅಧ್ಯಕ್ಷರಾದ ದಿವಾಣ ಬಹದ್ದೂರ ವಿ: ಪಿ. ಮಾಧವರಾವ ಇವರ ಭಾಷಣದಲ್ಲಿ ಇನ್ನು ಕೆಲವು ಮುಖ್ಯ ಅಂಶಗಳು.

ಭಾಷಾನುರೋಧ ಪ್ರಾಂತರಚನೆ:—ಈಗಿನ ಸುಧಾರಣೆಯ ಯೋಜನೆಯನ್ನು ಬದ್ದ ಪಡಿಸಿ, ಮತ್ತೊಂದು ಚಲೋ ಯೋಜನೆಯನ್ನು ನಮಗೆ ಮಾಡಿಕೊಟ್ಟರೆ ಭಾಷಾನುರೋಧವಾಗಿ ಪ್ರಾಂತಗಳನ್ನು ರಚಿಸುವದೇ ಅದರ ಮುಖ್ಯ ಅಂಗಗಳಲ್ಲಿ ಒಂದಾಗ ವದು. ಯಾವುದೊಂದು ಜನಾಂಗದವರು ಒಂದೇ ಭಾಷೆಯನ್ನಾಡುತ್ತಾರೆಂದು ಹೇಳಿದ ಕೂಡಲೆ, ಅವರ ವಾಙ್ಮಯ, ಅವರ ಪ್ರಾಚೀನ ಪರಂಪರೆ, ಅವರ ಸಂಸ್ಕೃತಿ, ಇವೆಲ್ಲವೂ ಒಂದೇ ಇರುತ್ತವೆಂಬುದನ್ನು ಬೇರೆ ಹೇಳುವ ಕಾರಣವಿಲ್ಲ. ನಾಗರಿಕತ್ವದ ತತ್ವಗಳೂ, ಜವಾಬ್ದಾರಿಗಳೂ ಯಾವವೆಂಬವನ್ನು ಜನರಿಗೆ ತಿಳಿಸಿ ಹೇಳಲಿಕ್ಕೂ, ಮತಗಳೂ ಪಂಥಗಳೂ ಭಿನ್ನವಿದ್ದಾಗ್ಯೂ ನಾಗರಿಕತ್ವವು ಭಿನ್ನವಿರದೆ ಒಂದೇ ಇರುತ್ತದೆಂಬ ಭಾವನೆಯನ್ನು ಅವರಲ್ಲಿ ಹುಟ್ಟಿಸಲಿಕ್ಕೂ, ಭಾಷೆಯು ಪ್ರಬಲವಾದ ಸಾಧನವಿರುತ್ತದೆಂಬವನ್ನು ಸಿದ್ಧಮಾಡಲಿಕ್ಕೆ ಇಂಥ ಪರಿಷತ್ತುಗಳಿಂದ ಒಳ್ಳೆ ಉಪಯೋಗವಾಗುತ್ತದೆ. ಇದಲ್ಲದೆ ಭಾಷಾನುರೋಧವಾಗಿ ದೇಶವನ್ನು ವಿಭಾಗಿಸುವದು ಎಷ್ಟು ಅವಶ್ಯವಾಗಿರುತ್ತದೆಂಬದು ಸಹ ಇಂಥ ಪರಿಷತ್ತುಗಳನ್ನು ಕೂಡಿಸುವದರಿಂದ ಚನ್ನಾಗಿ ವ್ಯಕ್ತವಾಗುತ್ತದೆ. ಹೋದ ಕೆಲವು ವರ್ಷಗಳಲ್ಲಿ—ವಿಶೇಷತಃ ೧೯೧೭ನೇ ಇಸ್ವಿಯ ಆಗೆಷ್ಟ ತಿಂಗಳ ೨೦ನೇ ತಾರೀಖಿನ ಜಾಹೀರನಾಮೆಯು ಹೊರಬಿದ್ದ ಬಳಿಕ—ತಮಿಳು ಜನರಲ್ಲಿ ಎಂಥ ವಿಲಕ್ಷಣವಾದ ಜಾಗ್ರತಿಯುಂಟಾಗಿದೆಂಬದನ್ನು ನಾನು ಪ್ರತ್ಯಕ್ಷವಾಗಿ ನೋಡಿರುವೆನು. 'ಸ್ವದೇಶಮಿತ್ರನ್' ಹಾಗು 'ದೇಶಭಕ್ತನ್' ಎಂಬೆರಡು ವೃತ್ತಪತ್ರಗಳಲ್ಲಿ, ವಿವಿಧ ವಿಷಯಗಳ ಜ್ಞಾನವುಳ್ಳ ಹಾಗು ಪ್ರಚಲಿತ ರಾಜಕೀಯ ಪರಿಸ್ಥಿತಿಯನ್ನರಿತ ಒಳ್ಳೆ ಜಾಣಾಕ್ಷರಾದ ತರುಣ ಜನರು ಅಗ್ರಲೇಖಗಳನ್ನು ಬರೆಯುತ್ತಾರೆ. ಇವರಿಂದ ತಮಿಳು ಭಾಷೆಯನ್ನಾಡುವ ಸಾಮಾನ್ಯ ಜನರಲ್ಲಿ ಸಹ ಪ್ರಚಲಿತವಾದ ಮಹತ್ವದ ವಿಷಯಗಳ ಬಗ್ಗೆ ಯಥಾರ್ಥವಾದ ವಿಚಾರಗಳು ಹುಟ್ಟಲಿಕ್ಕೆ ಮಾರ್ಗವಾಗಿದೆ. ಅವಲ್ಲದೆ ರಾಜಕಾರಣವನ್ನೂ ಕಾಯಿದೆಯನ್ನೂ ಚನ್ನಾಗಿ ಅಭ್ಯಾಸ ಮಾಡಿದ ಅನೇಕ ತರುಣರು, ಅತ್ಯಂತ ಕಷ್ಟನಷ್ಟಗಳನ್ನು ಸಹಿಸಿ, ದೇಶವಲ್ಲೆಲ್ಲ ಸಂಚರಿಸಿ, ರಾಷ್ಟ್ರೀಯ ಸಭೆಯ ಧ್ಯೇಯಗಳನ್ನೂ, ಅವು ಸರಕಾರಕ್ಕೆ ಮಾಡಿಕೊಂಡ ಅರಿಕೆಗಳನ್ನೂ ತಿಳಿ ಹೇಳಹತ್ತಿದ್ದಾರೆ. ಇದರಿಂದ ಜನರಲ್ಲುಂಟಾದ ಜಾಗೃತಿಯು ನಾನು ಮೇಲೆ ಹೇಳಿದಂತೆ ನಿಜವಾಗಿಯೇ ಆಶ್ಚರ್ಯಜನಕವಾಗಿದೆ. ಬಹಳ ಹೇಳುವದರಿಂದೇನು; ಈ ಸುಧಾರಣೆಗಳ ಸ್ವರೂಪವು ಈಗ ಅಂತ್ಯಜರಿಗೂ ಕೂಡ ತಮಿಳು ದೇಶದಲ್ಲಿ ಗೊತ್ತಾಗಿ ಹೋಗಿದೆ. ೧೯೧೭ನೇ ಇಸ್ವಿಯ ಕೊನೆಯ ಸುಮಾರಕ್ಕೆ ಮಹಾತ್ಮಾ ಗಾಂಧಿಯವರು ತೆಗೆದ ಪ್ರಚಂಡವಾದ ಅರ್ಜಿಗೆ ಸಹಿಗಳನ್ನು ದೊರಕಿಸುವದಕ್ಕಾಗಿ ನಾನು ತಂಜಾವರ ಜಿಲ್ಲೆಗಳ ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿರುವೆನು; ಮತ್ತು ಮುಂದೆ ಅನೇಕ ಸ್ಥಳಗಳಿಗೆ ಸಾರ್ವಜನಿಕ ಸಭೆಗಳಿಗಾಗಿ ಹೋಗಿರುವೆನು; ಆಗ ನನಗೆ ಪ್ರತ್ಯಕ್ಷವಾಗಿ ಬಂದ ಅನುಭವದ ಮೇಲಿಂದ ಜನರಲ್ಲಿ ಈ ಬಗೆಯ ಚೈತನ್ಯವು ನಿಜವಾಗಿಯೇ ಹುಟ್ಟಿರುವದೆಂಬದನ್ನು ನಾನು ಸಾರಿಸಾರಿ ಹೇಳಬಲ್ಲೆನು. ಈ ಬಗೆಯಾಗಿ ಅಲ್ಲಿಯ ಸಾಮಾನ್ಯ ಜನರಲ್ಲಿ ಕೂಡ ಈ ವಿಚಾರಗಳು ಹುಟ್ಟುವುದು ಹೇಗೆ ಶಕ್ಯವಾಯಿತು? ಅವರೆಲ್ಲರ ಭಾಷೆಯು ಒಂದೇ ಇದ್ದುದರಿಂದಲ್ಲವೇ? ಧಾರ್ಮಿಕ ವಿಷಯಗಳು, ಆಚಾರ ವಿಷಯಕ ಸಂಗತಿಗಳು, ಸಾಮಾಜಿಕ ವಿಷಯಗಳು ಅವರ ಮನಸ್ಸಿನಲ್ಲಿ ಚನ್ನಾಗಿ ಬಿಂಬಿಸಲಿಕ್ಕೆ ದೇಶಭಾಷೆಯೇ ಕಾರಣವು. ಅದೇ ಮೇರೆಗೆ ದೇಶಭಾಷೆಯಲ್ಲಿ ಉಪನ್ಯಾಸಗಳನ್ನು ಕೊಡುವುದರಿಂದ, ರಾಜಕೀಯ ವಿಷಯಗಳೂ ಜನರ ಮನಸ್ಸಿನಲ್ಲಿ ಚನ್ನಾಗಿ ಬಿಂಬಿಸುವುದಕ್ಕೆ ಮಾರ್ಗವಾಗುತ್ತದೆ. ಸ್ವರಾಜ್ಯವು ಈಗ ಸಕಲ ಜನರಿಗೆ ಉತ್ಸಾಹ ಜನಕ ವಿಷಯವಾಗಿದೆ. ಜನರು ಹರಿ ಕೀರ್ತನೆಗಳನ್ನು ಅತ್ಯಂತ ಉತ್ಸುಕತೆಯಿಂದ ಆಲಿಸುವಂತೆ, ಈ ಸ್ವರಾಜ ವಿಷಯಕ ಉಪನ್ಯಾಸಗಳನ್ನಾಲಿಸುವುದಕ್ಕೆ ಉತ್ಸುಕತೆಯುಳ್ಳವರಾಗಿರುತ್ತಾರೆ. ಹಳ್ಳಿ ಹಳ್ಳಿಗಳಲ್ಲಿ ಕೂಡ, ಜನರು ಒಟ್ಟಿಗೆ ಸೇರಿ ತಮಗೆ ಪ್ರಿಯರಾದ ದೇಶ ಭಕ್ತರನ್ನು ಕರಸಿಕೊಂಡು ತಮ್ಮ ಊರುಗಳಲ್ಲಿ ಸಾರ್ವಜನಿಕ ಸಭೆಗಳನ್ನು ಕೂಡಿಸುತ್ತಾರೆ. ಊರು ಬೀದಿಗಳನ್ನು ಗುಡಿಗಿ ತಳಿಹೊಡೆದು, ತಳಿರು ತೋರಣಗಳಿಂದಲೂ, [illegible]ಗಳಿಂದಲೂ ಸಿಂಗರಿಸಿ, ಭಕ್ತಿ ಚಾಮರಾದಿ ವೈಭವದೊಡನೆಯೂ, ವಾದ್ಯ [illegible] ಸಹಿತ ಮೆರವಣಿಗೆಯಲ್ಲಿ ತಮ್ಮ ಸ್ವಾಮಿಗಳನ್ನು ಎದುರುಗೊಳ್ಳುವಂತೆ ಈ ದೇಶಭಕ್ತರನ್ನು ಜನರು ಬಹು ವಿಜೃಂಭಣೆಯಿಂದ ಎದುರುಗೊಳ್ಳುತ್ತಾರೆ. [illegible]

[illegible] ಕೆಳಗೆ ಮುಂದರಿಯುವುದು

[illegible]

ಸ್ವದೇಶಾಭಿಮಾನಿ.

ಶಕ ೧೮೪೧ ಜ್ಯೇಷ್ಠ ಶು॥ ೧೧ ಶುಕ್ರವಾರ.

ಬೆಳೆಯ ಬೆಳವಣಿಗೆ.

ಕಳೆದ ಮೇ ತಿಂಗಳ ತಾ: ೭ರಲ್ಲು ಮದ್ರಾಸ ಸರಕಾರವು ಧಾನ್ಯದ ಉತ್ಪತ್ತಿಯನ್ನು ಹೆಚ್ಚಿಸುವ ವಿಷಯದಲ್ಲಿ ಒಂದು ಹುಕುಮು ನಾಮೆಯನ್ನು ಹೊರಡಿಸಿದೆ. ಹಿಂದುಸ್ಥಾನದಲ್ಲಿ ಯಾವ ಕಾರಣದಿಂದಲೆ ಬರಗಾಲವು ಮೇಲಿಂದ ಮೇಲೆ ಬರುತ್ತಿದ್ದರೂ ಧಾನ್ಯದ ಉತ್ಪತ್ತಿಯನ್ನು ಹೆಚ್ಚಿಸುವುದೆ ಆ ಬರಗಾಲಕ್ಕೆ ಮುಖ್ಯ ಪ್ರತಿಕಾರವು, ಆದ್ದರಿಂದ ಬೆಳೆಯನ್ನು ಆದಷ್ಟು ಬೇಗನೆ ಹೆಚ್ಚಿಸಬೇಕು ಎಂದು ಸರಕಾರವು ತನ್ನ ಹುಕುಮಿನಲ್ಲಿ ಸ್ಪಷ್ಟವಾಗಿ ಹೇಳಿದೆ. ಹೇಗೂ ಇರಲಿ, ಧಾನ್ಯೋತ್ಪತ್ತಿಯನ್ನು ಹೆಚ್ಚಿಸದೆ ಇದ್ದರೆ ಬರಗಾಲವು ಇಲ್ಲಿಂದ ಹೋಗಲಿಕ್ಕಿಲ್ಲವೆಂಬ ತತ್ತ್ವವು ಕೊನೆಗೆ ಸರಕಾರದ ತಲೆಯಲ್ಲಿ ಬಂತು. ಇದು ನಮ್ಮ ಸುದೈವವೆಂದೆ ತಿಳಿಯಬೇಕು. ಹಿಂದುಸ್ಥಾನದ ಮೂರು ಮುಕ್ಕಾಲು ವೀಸ ಜನರ ಜೀವನವು ಕೃಷಿಯಿಂದ ಉಂಟಾಗುತ್ತದೆ. ಇಂಥ ಕೃಷಿಯು ಇತ್ತಿತ್ತಲಾಗಿ ಅನೇಕ ಕಾರಣಗಳಿಂದ ಕೇವಲ ದುರವಸ್ಥೆಗೆ ಬಂದು ತಲಪಿದೆ ಎಂಬ ಮಾತು ನಿರ್ವಿವಾದವಾದ್ದು ಸರಿ. ಇದಕ್ಕೆ ಕೃಷಿಶಾಸ್ತ್ರಜ್ಞಾನದ ಅಧೋಗತಿಯೋ? ಅಥವಾ ಕೃಷೀವಲ ವೃತ್ತಿಯ ಮೇಲಿನ ಅನಾವಸ್ಥೆಯೋ? ಯಾವದೆ ಕಾರಣವಾಗಿದ್ದರೂ ಅದನ್ನು ಚರ್ಚಿಸಲು ಇದು ಸ್ಥಳವಲ್ಲ. ಸೇಕಡಾ ೬೫—೭೦ ಜನರ ನಿರ್ವಾಹಕ್ಕೆ ಸಾಧನವಾದ ಕೃಷಿಯು ಈಗ ಕೇವಲ ಹೀನಸ್ಥಿತಿಗೆ ಬಂದು ತಲಪಿದೆ ಎಂಬದೆ ನಮಗೆ ಇಲ್ಲಿ ಹೇಳಬೇಕಾದ ಮಾತು. ಕೃಷಿಯು ನಿಕೃಷ್ಟವಾದ ಈ ಸಮಯದಲ್ಲಿ, ಬರಗಾಲವು ಕಣ್ಣು ಕೆರಳಿಸಿಕೊಂಡು ಇಲ್ಲಿ ಯಾವ ಅರ್ಥದಿಂದ ಕಾಯಂ ವಾಸ್ತವ್ಯ ಮಾಡಹತ್ತಿತೊ ಆ ಅರ್ಥದಿಂದ ಪ್ರತಿಕಾರಕ್ಕಾಗಿ ಬೆಳೆಯ ಅಭಿವೃದ್ಧಿಯನ್ನು ಮಾಡಬೇಕೆಂಬ ಸದಾಲೋಚನೆಯು ಸರಕಾರದ ತಲೆಯಲ್ಲಿ ಬಂದು 'ಗವರ್ನಮೆಂಟ' ಓರ್ಡರಿ'ನ ಮುಖಾಂತರ ಈ ಸಂಬಂಧದ ಎಲ್ಲಾ ವಿಚಾರಗಳನ್ನು ಅದು ಜನರ ಮುಂದೆ ಇಟ್ಟದೆ. ಇದು ತುಂಬಾ ಸಂತೋಷದ ಮಾತಾಗಿದೆ.

ಬೆಳೆಯ ಸ್ಥಿತಿಯು ಈಗಿರುವುದು ಸಾಲದು, ಅದರ ಬೆಳವಣಿಗೆಯಾಗಬೇಕೆಂಬ ಉದ್ದೇಶದಿಂದ ಹೊರಡಿಸಿದ ಗವರ್ನಮೆಂಟ್ ಒರ್ಡರಿನಲ್ಲಿ ಸರಕಾರವು ಹೇಳುತ್ತದೇನೆಂದರೆ:—ಸರಕಾರವು ಈ ಸಂಸ್ಥಾನದಲ್ಲಿ ಧಾನ್ಯೋತ್ಪತ್ತಿಯನ್ನು ಹೆಚ್ಚಿಸಲು ಯಾವ ಉಪಾಯಗಳನ್ನು ಅವಲಂಬಿಸಬೇಕೆಂದು ಬಹು ಜಾಗೃತೆಯಿಂದ ಆಲೋಚಿಸುತಿತ್ತು; ಈಗ ಅಂಥ ಉಪಾಯಗಳನ್ನು ಜಾರಿಯಲ್ಲಿ ತರಬೇಕೆಂದು ನಿಶ್ಚಯಿಸಿದೆ. ಬೆಳೆಯ ಬೆಳವಣಿಗೆಯನ್ನು ಸಾಧಿಸಬೇಕಾದರೆ ಮುಖ್ಯವಾಗಿ ಬೇರೆ ಬೇರೆ ಇಲಾಖೆಗಳ ಸಹಕಾರ್ಯವು ಅಗತ್ಯವಿದೆ ಎಂದು ಸರಕಾರದ ಅಭಿಪ್ರಾಯ ಕಡುತ್ತದೆ. ಇಲಾಖೆಗಳ ಸಹಕಾರ್ಯದ ವಿಷಯದಲ್ಲಿ ಸರಕಾರವು ಬರೆ ಇಷ್ಟನ್ನೆ ಉಲ್ಲೇಖಿಸಿ ಸುಮ್ಮನಿರಲಿಲ್ಲ, ಅದು ಮುಂದೆ ಹೇಳುವದೇನೆಂದರೆ:—"ಎಲ್ಲ ಇಲಾಖೆಗಳ, ಅಧಿಕಾರಿಗಳು ಬೆಳೆಯ ಅಭಿವೃದ್ಧಿಗೋಸ್ಕರ ನಿಕಮನಸ್ಸಿನಿಂದ ಪ್ರಯತ್ನಮಾಡಬೇಕಕ್ಕದ್ದು ಮತ್ತು ಈ ಪ್ರಯತ್ನವನ್ನು ಯಶಸ್ಸು ಸಿಗುವವರೆಗೆ ಎಂದೂ ಬಿಡಬಾರದು." ಸರಕಾರವು ಧಾನ್ಯವನ್ನು ಹೆಚ್ಚಿಸಬೇಕೆಂಬ ಬಗ್ಗೆ ತನ್ನ ನಿಶ್ಚಿತವಾದ ಧೋರಣವನ್ನು ಉಪಯೋಗಿಸುತ್ತಿರುವದು, ಯಾರಿಗೆ ಆದರೂ ಸಂತೋಷವಾಗದೆ ಇದ್ದೀತು? ಬೇರೆ ಬೇರೆ ಸರಕಾರಿ ಇಲಾಖೆ [illegible]

[illegible] ಮತ್ತು ಹೆಚ್ಚಿಗೆ ಸರಕಾರದ ಸಹಾಯವಿಲ್ಲದೆ ಈ ಕಾರ್ಯವು ಅಸಾಧ್ಯವೆಂದು ಸರಕಾರವು ತಿಳಿದು ಬೇರೆ ಬೇರೆ ಖಾತೆಗಳ ಅಧಿಕಾರಿಗಳು ತಮ್ಮ ಸಂಪೂರ್ಣ ಸಹಕಾರ್ಯವನ್ನು ಕೊಟ್ಟಾರೆಂದು ನಾವು ನಂಬಿದ್ದೇವೆ.

ಸರಕಾರವು ತನ್ನ ಒರ್ಡರಿನಲ್ಲಿ ಬೆಳೆಯ ಬೆಳವಣಿಗೆಯ ಬಗ್ಗೆ ಯಾವ ಯಾವ ಉಪಾಯಗಳನ್ನು ಮಾಡಬೇಕೆಂದು ಸೂಚಿಸಿದೆಯೊ ಅವುಗಳನ್ನು ನಿರ್ದೇಶಮಾಡುವ ಮೊದಲು ಹಿಂದುಸ್ಥಾನದಲ್ಲಿಯ ಮತ್ತು ಇತರ ದೇಶಗಳಲ್ಲಿಯ ಉತ್ಪನ್ನದ ಸ್ಥಿತಿಯು ಹೇಗಿದೆ ಎಂಬದನ್ನು ಕೊಂಚ ಮಟ್ಟಿಗೆ ನಿರೀಕ್ಷಿಸಿದರೆ ಅದು ಅಪ್ರಾಸಂಗಿಕವಾಗಲಾರದು. ಡಾ. ಗಿಲ್‌ಬರ್ಟಸ್ಲೇಟರ ಎಂಬವರು ಈ ವಿಷಯದ ಮಾಹಿತಿಯನ್ನು ತುಲನಾಪೂರ್ವಕವಾಗಿ ಕೊಟ್ಟಿದ್ದಾರೆ. ಮದ್ರಾಸು ಸಂಸ್ಥಾನದಲ್ಲಿ ಬೇಸಾಯಗಾರರ ಐದು ಕುಟುಂಬಗಳು ಅತಿ ಪರಿಶ್ರಮದಿಂದ ಕೃಷಿಯ ಉತ್ಪನ್ನವನ್ನು ಆದಷ್ಟು ಹೆಚ್ಚು ಬೆಳಸಿದ್ದಾರೆ ಎಂದರೆ ಐದು ಕುಟುಂಬಗಳು ಬೆಳೆಯ ಪರಮಾವಧಿಯನ್ನು ಮಾಡಿದ್ದಾದರೆ ಅದು ಇಡೀ ಒಂಬತ್ತು ಕುಟುಂಬಗಳಿಗೆ ಸಾಲುವಷ್ಟು ಇರುತ್ತದೆ. ಈ ಒಂಬತ್ತರಲ್ಲಿ ಆ ಬೇಸಾಯಗಾರರ ಸಮಾವೇಶವೂ ಆಗಿದೆ ಎಂದು ವಾಚಕರು ತಿಳಿಯಬೇಕು. ಮದ್ರಾಸಿನ ಸ್ಥಿತಿಯು ಹೀಗಿರುವಾಗ ಇತರ ದೇಶಗಳ ಸ್ಥಿತಿಯು ಹೇಗಿದೆ ಎಂಬುದನ್ನು ನೋಡೋಣ. ಪಶ್ಚಿಮ ಯುರೋಪ, ಉತ್ತರ ಅಮೇರಿಕಾ ಮತ್ತು ಆಸ್ಟ್ರೇಲಿಯಾ ಈ ದೇಶಗಳಲ್ಲಿ ಕೃಷಿಕರ ಐದು ಕುಟುಂಬಗಳು ಬೇಸಾಯಮಾಡಿ ಬೆಳಸಿದ ಉತ್ಪನ್ನವು ೫೦ ಕುಟುಂಬಗಳಿಗೆ ಸಾಲುವಷ್ಟು ಇರುತ್ತದೆ. ಎಂದು ಮೇಲೆ ಡಾ. ಗಿಲಬರ್ಟ ದೊರೆಗಳು ತೋರಿಸಿದ ಈ ಅಂತರವು ಎಷ್ಟರ ಮಟ್ಟಿಗೆ ವಿಶಾಲವಿದೆ ಎಂಬುದನ್ನು ವಾಚಕರು ತಾವಾಗಿಯೆ ಊಹಿಸುವದು ಒಳ್ಳೇದು. ಮೇಲ್ಕಂಡ ದೇಶಗಳಲ್ಲಿ ಬೇಸಾಯವು ಇಷ್ಟು ಉನ್ನತಾವಸ್ಥೆಯಲ್ಲಿರುವ ಕಾರಣವು, ಡಾ. ಗಿಲ್ಬರ್ಟರು ಹೇಳುವಂತೆ ಅಲ್ಲಿಯ ಎಗ್ರಿಕಲ್ಚರಲ್ ಡಿಪಾರ್ಟಮೆಂಟಿನವರು ತೆಗೆದುಕೊಳ್ಳುವ ಸ್ಥಿರಪ್ರಯತ್ನವೆ ಆಗಿದೆ. ಬೇಸಾಯ ವೃತ್ತಿಗೆ ಅವಶ್ಯಕವಾದ ವಿವಿಧ ವಸ್ತುಗಳ ಮತ್ತು ಕ್ರಿಯೆಗಳ ಸಪ್ರಯೋಗವಾದ ಪ್ರದರ್ಶನದಿಂದಲೂ ಶಿಕ್ಷಣದಿಂದಲೂ ಹಾಗೂ ತರಬೇತಿನಿಂದಲೂ, ಉಪನ್ಯಾಸಗಳ ಮುಖಾಂತರವೂ ಮತ್ತು ಚಿಕ್ಕ ಚಿಕ್ಕ ಪ್ರಕಟನೆಗಳ ಸಹಾಯದಿಂದಲೂ ಬೇಸಾಯಗಾರರಲ್ಲಿ ಕೃಷಿ ಶಿಕ್ಷಣವನ್ನು ಮೇಲ್ಕಂಡ ದೇಶಗಳಲ್ಲಿ ಅವ್ಯಾಹತವಾಗಿ ಪ್ರಚಾರಗೊಳಿಸುತ್ತಿರುವುದರಿಂದ ಅಲ್ಲಿ ಈ ಹೊತ್ತು ಬೇಸಾಯವು ಅಷ್ಟು ಉನ್ನತಾವಸ್ಥೆಯಲ್ಲಿದೆ. ಕೃಷಿ ವೃತ್ತಿಯು ಪಾರಂಪರೀಣವಾದ ಕಾರಣ ಕೃಷೀವಲರ ಮಕ್ಕಳಿಗೆ ಇದು ಹೆಚ್ಚಿನ ಪರಿಶ್ರಮದಿಂದ ಸಾಧ್ಯಮಾಡಿಕೊಳ್ಳಬೇಕಾಗಿರುವುದಿಲ್ಲ ಆದ್ದರಿಂದ ಪಾರಂಪರ್ಯವು ಕೂಡ ಬೇಸಾಯ ಶಿಕ್ಷಣದ ಸಾಧನಗಳಲ್ಲಿ ಒಂದಾಗಿದೆಂದು ನೆನೆಸಲು ಅಡ್ಡಿ ಇಲ್ಲ. ಉತ್ತರ ಅಮೇರಿಕದಲ್ಲಿ ಈ ಶಿಕ್ಷಣವನ್ನು ಹಬ್ಬಿಸಲು ಯಾವ ಯಾವ ಸಾಧನಗಳನ್ನು ಪ್ರಚಾರದಲ್ಲಿ ತಂದಿದ್ದಾರೊ ಅವುಗಳನ್ನು ಇಲ್ಲಿಯೂ ತರಬೇಕೆಂದು ಸರಕಾರಿ ಒರ್ಡರಿನಲ್ಲಿ ನಿರ್ದಿಷ್ಟವಾಗಿದೆ. ಆದರೆ ಹಿಂದುಸ್ಥಾನದೊಳಗಿನ ಕೃಷಿಕರಲ್ಲಿ ಬರೆ ವಾಙ್ಮಯದ ಸಾಧನದಿಂದ ಬೇಸಾಯವನ್ನು ಹಬ್ಬಿಸುವುದು ಈ ಹೊತ್ತು ಸಾಧ್ಯವೊ ಹೇಗೆ ಎಂಬುದೊಂದು ಪ್ರಶ್ನೆವೆ ಸರಿ. ಯುರೋಪ ಅಥವಾ ಅಮೇರಿಕಾದಿ ದೇಶಗಳಲ್ಲಿ ಓದು, ಬರಹ, ಲೆಕ್ಕ ಇವು ಸಾಮಾನ್ಯವಾಗಿ ಕೃಷಿಕರಿಗೆ ಪರಿಚಿತವಾದವುಗಳಿರುತ್ತವೆ. ಆಗ ಆ ಸಾಧನದಿಂದ ಕೃಷಿಜ್ಞಾನವನ್ನು ಅವರಲ್ಲಿ ಹೆಚ್ಚಿಸುವದು ಸುಸಾಧ್ಯವಾಗುತ್ತದೆ. ಪರಂತು ಸರಕಾರವು ಇಲ್ಲಿ ಬಡ್ಡಯದ ಮತ್ತು ಮೊಫಿಯ ಶಿಕ್ಷಣದ ಶಾಲೆಗಳನ್ನು ಇದುವರೆಗೆ ತೆರೆದಿಲ್ಲವಾದ ಕಾರಣ ಬೇಸಾಯಗಾರರಲ್ಲಿ ಅಕ್ಷರ ಶತ್ರುಗಳೆ ಥಂಡಾಕು. ಇಂಥ ಪರಿಸ್ಥಿತಿಯಲ್ಲಿ ಬರೆ ಹಸ್ತಪತ್ರಿಕ, ಚಿಕ್ಕ ಚಿಕ್ಕ ಪುಸ್ತಕ ಮುಂತಾದವು ಎಷ್ಟರ ಮಟ್ಟಿಗೆ ಕಾರ್ಯಕಾರಿಯಾದಾವು ಉದ್ದೇಶ ಸಾಧಕವಾದಾವು ಎಂಬುದು ನಮ್ಮಿಂದ ಹೇಳಲಾಗದು. ಇರಲಿ. ವಾಙ್ಮಯಾತ್ಮಕವಾದ ಇಂಥ ಶಾಸ್ತ್ರಿಕ ಉಪಾಯಗಳಲ್ಲದೆ ಸದ್ಯಃಫಲದಾಯಿಯಾದ ಇತರ ಉಪಾಯಗಳನ್ನು ಸಹ ಸರಕಾರ ಹುಕುಮು ನಾಮೆಯು ಸೂಚಿಸಿದೆ. ಈ ಸಂಸ್ಥಾನದಲ್ಲಿ ೨ ಕೋಟಿ ೭ ಲಕ್ಷ ಎಕ್ರೆ ಪಟ್ಟಾ ಸಾಗುವಳಿಯ ಜಮೀನಿನ ಪೈಕಿ ೫೦ ಲಕ್ಷ ಎಕ್ರೆಯ ಜಮೀನನ್ನು ಸಾಗುವಳಿ ಮಾಡುವುದು ಈಗಿನ ಪರಿಸ್ಥಿತಿಯಲ್ಲಿ ಒಕ್ಕಲಿಗರಿಗೆ ಅಸಾಧ್ಯವಾಗಿದೆ; ಇದು ಯಾವ ಕಾರಣದಿಂದ ಅಸಾಧ್ಯವಾಗಿರುವುದೊ ಆ ಕಾರಣವನ್ನು ಪರಿಹರಿಸುವಂತೆ ಯತ್ನಿಸುವುದಲ್ಲದೆ ಇನ್ನೂ ೬೦ ಲಕ್ಷ ಎಕ್ರೆ ಜಮೀನನ್ನು ಸಾಗುವಳಿಯ ಕೆಲಸಕ್ಕೆ ಕೊಡುವುದು ಸರಕಾರದ ಮನೋದಯವಿದೆ. ಪೊರೆಸ್ಟಿನಲ್ಲಿ ರಿಝರ್ವ್ಡ್ ಎಂಬುದು ಏನು ಇಟ್ಟಿರುವುದೊ ಅದು ಉತ್ಪತ್ತಿಯ ದೃಷ್ಟಿಯಿಂದ ಬಹಳ ಅಲ್ಪವಾದ ಕಾರಣ ಇನ್ನು ಮುಂದೆ ಅಂಥ ಕೆಲವು ಭಾಗಗಳನ್ನು ಸಹ ಬೆಳೆಯ ಬೆಳವಣಿಗೆಯ ಪ್ರೀತ್ಯರ್ಥ ಬಿಟ್ಟುಕೊಡಬೇಕೆಂದು ಸರಕಾರವು ನಿಶ್ಚಯಿಸಿದೆ. ಈ ಪ್ರಕಾರ ಬೇಸಾಯದ ಕ್ಷೇತ್ರವನ್ನು ವಿಸ್ತರಿಸಲು ಸರಕಾರವು ಉದ್ಯುಕ್ತವಾದುದೂ ನೀರಿನ ಪೂರವಠೆಗಾಗಿ ಕಾಲುವೆ ಕಡಿಯುವುದು ಮುಂತಾದ ಇತರ ಸಾಧನಗಳನ್ನು ಒದಗಿಸಿಕೊಡುವುದರಲ್ಲಿ ಉದ್ಯುಕ್ತವಾದುದೂ ಕಡ್ಡಾಯದಿಂದಲೂ ತೋರುವುದಿಲ್ಲ. ಬಾವಿಗಳನ್ನು ಅಗೆಯಲು [illegible]

[illegible] ಇದು ಹೆಚ್ಚು ಬೆಳೆಯ ಬೆಳವಣಿಗೆಯ ಮಾನದಂಡದಿಂದ ಅದು ಸಾಧ್ಯವಾಗಲಾರದು. ಅಂತಿರುವಲ್ಲಿಯೂ ಕೂಡ ಗೊಬ್ಬರವನ್ನು ಉತ್ತಮ ರೀತಿಯಿಂದ ಉಪಯೋಗಿಸಿದ ಹೊರತು ಸಹ ಬೆಳವಣಿಗೆಯನ್ನು ಮಾಡುವ ದಲ್ಲಿ ಒಳ್ಳೆಯ ಫಲವು ದೊರೆಯುವುದಿಲ್ಲವೆಂದು ಇನ್ನು ಮುಂದೆ ಎಲುಬು, ಹಿಂಡಿ, ಮುಂತಾದ್ದನ್ನು ಹೊರಗೆ ರಫ್ತುಗೊಳಿಸಬೇಕೆಂದು ಸರಕಾರವು ಬರೆದಿರುವದು ಹೆಚ್ಚು ಸಮರ್ಪಕವೆಂದು ತಿಳಿಯುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವ್ಯರ್ಥವಾಗಿ ಹೋಗುವ ಗೊಬ್ಬರದ ಪದಾರ್ಥಗಳನ್ನು ಇನ್ನು ಮುಂದೆ ಈ ಕೆಲಸದಲ್ಲಿ ಉಪಯೋಗಿಸಬೇಕೆಂಬ ಆಲೋಚನೆಯು ಈ ಪತ್ರಕದಲ್ಲಿ ಕಂಡುಬರುತ್ತದೆ. ಇದೆ ರೀತಿಯಿಂದ ಇನ್ನೂ ಕೆಲವು ಉಪಾಯಗಳು ಹುಕುಮು ನಾಮೆಯಲ್ಲಿ ನಿರ್ದಿಷ್ಟವಾಗಿವೆ. ಅವುಗಳನ್ನೆಲ್ಲ ಇಲ್ಲಿ ಪ್ರಸ್ತಾಪಿಸಿ ಜಾಗೆಯನ್ನು ತುಂಬಿಸುವುದರಲ್ಲಿ ಪ್ರಯೋಜನವಿಲ್ಲ. ಸಾರಾಂಶ ಬೆಳೆಯ ಬೆಳವಣಿಗೆಯನ್ನು ಸಾಧಿಸಬೇಕೆಂದು ಸರಕಾರವು ಈಗ ಸಂಪೂರ್ಣ ಒಪ್ಪಿದ ಮಾತ್ರವಲ್ಲ, ಆ ಮೇರೆಗೆ ಕೂಡಿದ ಮಟ್ಟಿಗೆ ಯುಕ್ತವಾಗಬೇಕೆಂದು ಯೋಗ್ಯ ಉಪಾಯಗಳನ್ನು ಸಹ ಪ್ರಪಂಚಿಸಿದೆ. ಈ ಉಪಾಯಗಳನ್ನು ಬೇಗನೆ ಜಾರಿಯಲ್ಲಿ ತಂದು ಬೆಳೆಯನ್ನು ಹೆಚ್ಚಿಸಿ ಇಲ್ಲಿಂದ ಬರಗಾಲವನ್ನು ನಿರ್ಮೂಲಿಸಲು ನಿಶ್ಚಯಿಸಿದ ಈ ಕಾರ್ಯದಲ್ಲಿ ಸರಕಾರಕ್ಕೆ ಯಶಸ್ಸು ಪ್ರಾಪ್ತವಾಗಲೆಂದು ಹಾರಯಿಸುತ್ತೇವೆ.

ಸ್ಫುಟವಿಚಾರಗಳು.

೧. ತಹನಾಮೆಯಲ್ಲಿ ನಮೂದಿಸಿದ ಶರ್ತಗಳ ಪ್ರಕಾರ ತುರ್ಕಿಯ ಸ್ಥಿತಿಯು ಎಷ್ಟು ದೀನವಾಗಿದೆ ಎಂಬುದನ್ನು ನಾವು ಕಳೆದ ಸಂಚಿಕೆಯಲ್ಲಿ ತಿಳಿಸಿದ್ದೇವೆ. ತುರ್ಕಿಯ ವಿಷಯದಲ್ಲಿ ಒಂದೇ ಮಾತಿನಿಂದ ಹೇಳುವುದಾದರೆ, ಈಗಿನ ಶರ್ತಗಳಿಂದ ಅದರ ಪಂಚಪ್ರಾಣಗಳು ಹಾರಿಹೋದವೆನ್ನಬಹುದು. ಮಹಮ್ಮದೀಯರಿಗೆ ಗುರುಸ್ಥಾನವಾದ ತುರ್ಕಸ್ಥಾನವು ಈ ರೀತಿಯಿಂದ ದುರವಸ್ಥೆಗೆ ಒಳಗಾದ ಬಳಿಕ ಹಿಂದೀ ಮುಸಲ್ಮಾನರು ಮುಂದೆ ಏನು ಮಾಡಬೇಕಾಯಿತು ಎಂಬ ಪ್ರಶ್ನೆಯು ಬರುತ್ತದೆ. ಖಿಲಾಫತಿನ ವಿಷಯದಲ್ಲಿ ಯುದ್ಧವು ಮುಗಿದಂದಿನಿಂದ ಈ ವರೆಗೆ ಹಿಂದೂಸ್ಥಾನದೊಳಗಿನ ಮುಸಲ್ಮಾನರು ತಮ್ಮ ಮತವನ್ನು ಬ್ರಿಟಿಷ ಸರಕಾರಕ್ಕೆ ಏಕಪ್ರಕಾರವಾಗಿ ತಿಳಿಸುತಿದ್ದಾರೆ. ಹಿಂದೂಸ್ಥಾನದಲ್ಲಿ ಮಾತ್ರವಲ್ಲ, ಇಂಗ್ಲೆಂಡಿನಲ್ಲಿ ಸಹ ಪ್ರತಿನಿಧಿ ಮಂಡಲವನ್ನು ಕಳುಹಿಸಿ ಮುಖ್ಯ ಮಂತ್ರಿ, ಭಾರತಮಂತ್ರಿ ಹಾಗು ಇವರ ಮುತ್ಸದಿಗಳ ಭೇಟಿ ಪಡೆದು ಅವರಿಗೆ ಮುಸಲ್ಮಾನರ ಮನೋಗತವನ್ನು ತಿಳಿಸುವಂತೆ ಅವರು ವ್ಯವಸ್ಥೆಯನ್ನು ಮಾಡಿದರು. ಇಲ್ಲಿಂದ ಹೋದ ಪ್ರತಿನಿಧಿ ಮಂಡಲವು ಫ್ರಾನ್ಸಿಗೂ ಹೋಗಿ ಅಲ್ಲಿ ತನ್ನ ವಿಜ್ಞಾಪನೆಯನ್ನು ಅರಿಕೆಮಾಡಿಕೊಂಡಿತು. ಸಾರಾಂಶ ಹಿಂದೀ ಮುಸಲ್ಮಾನರು, ಸನದಶೀರ ಮಾರ್ಗದಿಂದ ಶಕ್ಯವಿರುವ ಉಪಾಯಗಳನ್ನೆಲ್ಲ ಇದುವರೆಗೆ ಮಾಡಿದ್ದಾರೆ. ಈ ಮೇರೆಗೆ ಖಿಲಾಫತಿನ ಕುರಿತು ಮುಸಲ್ಮಾನರೆ ಮಾತ್ರ ಯತ್ನಿಸಿದ್ದಾರೆಂದಲ್ಲ, ಅವರ ದೇಶಬಂಧುಗಳಾದ ಹಿಂದುಗಳು ಕೂಡ ಮಹಮ್ಮದೀಯ ಬಂಧುಗಳ ಮೇಲೆ ಬಂದಿರುವ ಈ ಧರ್ಮ ಸಂಕಟದಲ್ಲಿ ಸಹಕಾರ ಕೊಟ್ಟು ತಮ್ಮ ಸಹಕಾರ್ಯವನ್ನು ವ್ಯಕ್ತಗೊಳಿಸಿದ್ದಾರೆ. ಇವಂಥ ಹಿಂದು ಮುಸಲ್ಮಾನರು ಖಿಲಾಫತಿನ ಪ್ರಶ್ನೆಯ ವಿಷಯದಲ್ಲಿ ಈ ಪ್ರಕಾರ ಒಗ್ಗಟ್ಟಿನಿಂದ ಚಳವಳ ಮಾಡುತಿದ್ದಾಗ್ಯೂ ಕೊನೆಗೆ ತುರ್ಕಿಯ ಸೌಭಾಗ್ಯವು ನಷ್ಟವಾಗುವುದು ಆಗಿಯೆ ಹೋಯಿತು! ಇಂಥ ಪರಿಸ್ಥಿತಿಯಲ್ಲಿ ಮೇಲೆ ಹೇಳಿದಂತೆ 'ಮುಂದೆ ಏನು' ಎಂಬ ಪ್ರಶ್ನೆಯು ಮುಸಲ್ಮಾನರ ಮುಂದೆ ನಿಂತಿದೆ. ಈ ಪ್ರಶ್ನೆಯನ್ನು ಚೆನ್ನಾಗಿ ಮಥಿಸಿ ಮಹಾತ್ಮಾಗಾಂಧಿಗಳ ವಿಚಾರದಿಂದ ಮುಸಲ್ಮಾನ ಬಂಧುಗಳು 'ನೊನ'-ಕೊಆಪರೇಶನ'ನ್ನು ಎಂದರೆ ಅಸಹಕಾರಿತ್ವದ ಉಪಾಯವನ್ನು ಅವಲಂಬಿಸಬೇಕೆಂದು ನಿರ್ಣಯಿಸಿಕೊಂಡಿದ್ದಾರೆ. ಮಹಾತ್ಮಾಗಾಂಧಿಗಳು ಈ ಅಸಹಕಾರಿತ್ವದ ಉಪಾಯಕ್ಕಾಗಿ ನಾಲ್ಕು ಮೆಟ್ಟಲುಗಳನ್ನು ತಯಾರಿಸಿದ್ದಾರೆ. ಮೊದಲು ಸರಕಾರಿ ಬಹುಮಾನದ ಪದವಿಗಳನ್ನು ಬಿಟ್ಟುಬಿಡುವುದು, ಇದರಿಂದ ಸಾಧ್ಯವಾಗುವದಿಲ್ಲವಾದರೆ ಸಿವಿಲ್ ನೌಕರಿಗಳನ್ನು ಬಿಡುವದು. ಈ ಉಪಾಯದಿಂದಲೂ ಇಷ್ಟಸಿದ್ಧಿಯಾಗುವುದಿಲ್ಲ ಎಂದಿದ್ದರೆ ಪೋಲಿಸ್ ಮತ್ತು ಲಷ್ಕರಿ ಖಾತೆಯೊಳಗಿನ ನೌಕರಿಗಳನ್ನು ತ್ಯಜಿಸುವುದು. ಈ ಮೂರು ಮೆಟ್ಟಲುಗಳನ್ನು ಏರಿಯೂ ಕಾರ್ಯ ಸಿದ್ಧಿಯಾಗುವದಿಲ್ಲವೆಂದಾದರೆ ಕಂದಾಯವನ್ನು ನಿಲ್ಲಿಸುವ ಕೊನೆ ಉಪಾಯವನ್ನು ಕೈಕೊಳ್ಳಬೇಕು. ಮಹಾತ್ಮಾಗಾಂಧಿಗಳು ಈ ನಾಲ್ಕು ಉಪಾಯಗಳನ್ನು ಸೂಚಿಸಿರುವರು. ಈ ನಾಲ್ಕು ಉಪಾಯಗಳು ಏಕ ಕಾಲದಲ್ಲಿ ಆಚರಿಸಲ್ಪಡತಕ್ಕವುಗಳಲ್ಲ; ಆದರೆ ಬ್ರಹ್ಮಚರ್ಯ, ಗಾರ್ಹಸ್ಥ್ಯ ಇತ್ಯಾದಿ ಆಶ್ರಮಗಳಂತೆ ಒಂದಾದ ಮೇಲೆ ಇನ್ನೊಂದು. ಅದಾವದೂ ಮೊದಲನೆಯ ಉಪಾಯದಿಂದ ಸಾಧ್ಯವಾದರೆ, ಮುಂದಿನವು ಬೇಡ, ಎರಡನೆಯದರಿಂದಾದರೆ ಮೂರನೆಯದು ಮತ್ತು ನಾಲ್ಕನೆಯದು ಅವಶ್ಯವಿಲ್ಲ, ಎಂಬಿತ್ಯಾದಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ.

೨. ಮಹಾತ್ಮಾಗಾಂಧಿಗಳು, ಮುಸಲ್ಮಾನ ಬಂಧುಗಳಿಗೆ ಯಾವ ಅಸಹಕಾರಿತ್ವವನ್ನು ಉಪದೇಶಿಸಿದ್ದಾರೊ ಅದು ಯುಕ್ತ ವಾದುದೊ ಹೇಗೆ, ಹಿಂದು ಮೇಲೆ ಯುಕ್ತವಾಗುವ ಪಕ್ಷದಲ್ಲಿ [illegible]

[illegible] ಸ್ವಯಂ [illegible] ಚಿಕಿತ್ಸೆಯನ್ನು [illegible] ತೆಗೆ [illegible] ಪ್ರಶ್ನೆಗಳನ್ನು [illegible] [illegible] ಮತ್ತು ಅದೇ ನಮೂನೆಯ ಪತ್ರಿಕಾ [illegible] 'ಅಸಹಕಾರಿತ್ವವನ್ನು ಉಪದೇಶಿಸುವ ಗಾಂಧಿಗಳು ಮತಿ ಭ್ರಷ್ಟರು, ಮತಿಭ್ರಷ್ಟರಲ್ಲವಾದರೆ ಅತಿ ದುಷ್ಟರು!' ಎಂಬುದಾಗಿ [illegible] ಸಾರಿಸತೊಡಗಿದ್ದಾರೆ!! ಪರಂತು ಮಹಾತ್ಮಾಗಾಂಧಿಗಳು ಮುಸಲ್ಮಾನ ಬಂಧುಗಳಿಗೆ ಈ ಸಂದರ್ಭದಲ್ಲಿ ತೋರಿಸಿಕೊಟ್ಟ ಅಸಹಕಾರಿತೆಯ [illegible] ಮಾರ್ಗವಂತೂ ಅದರ ಮಿಮಾಂಸೆಯನ್ನು ಮುಂದೆ ತೋರಿಸಿದಂತೆ ಅವರು ಮಾಡುತ್ತಾರೆ:—ಮಹಮ್ಮದೀಯ ಜನಾಂಗದ ಇದು ವರೆಗಿನ ಚರಿತ್ರೆಯನ್ನು ನೋಡಿದ್ದಲ್ಲಿ ಅವರು ಯುದ್ಧಪ್ರಿಯರು ಸಾಹಸವೃತ್ತಿಯವರು, ಧರ್ಮಶ್ರದ್ಧೆಯು ಅವರಲ್ಲಿ ಎಂತಹುದೆಂಬುದು ಅನ್ನರಲ್ಲಿ ಸ್ಪಷ್ಟವಾಗಿ ಎರುತ್ತದೆ. ಇಂಥ ಸ್ವಭಾವದ ಜನಾಂಗದವರಿಗೆ—ಅವರ ಧಾರ್ಮಿಕ ಮತ್ತು ರಾಜಕೀಯ ವೈಭವವು ನಷ್ಟವಾದಲ್ಲಿ ಅವರಲ್ಲಿ ಯಾವ ಸಂತಾಪವು ಉಕ್ಕಿಬರುವುದೊ ಆ ಸಂತಾಪವು ಹರಿದುಹೋಗುವಂತೆ ಸರಿಯಾದ ಒಂದು ದಾರಿಯನ್ನು ಕಲ್ಪಿಸಿ ಕೊಡುವುದು ಆ ಜನಾಂಗದ ಮತ್ತು ಲೋಕಹಿತದ ದೃಷ್ಟಿಯಿಂದ ಅವಶ್ಯಕವಾಗಿದೆ. ವೈಭವಸಂಪನ್ನವಾದ ಮನೆಯು ಬಿದ್ದು ಹೋದಾಗ ಆ ಮನೆಯ ಐಶ್ವರ್ಯವಂತನಿಗೆ ನಾಲ್ಕು ಕಡೆಗಳಲ್ಲಿ ಜೀವ, ಮಕ್ಕಳು ಮರಿಗಳನ್ನು ಸಾಕಬೇಕೆಂದು ಹೇಳುವುದು ಅವನ ಸಂತಾಪವನ್ನು ಹೇಗೆ ಬೆಳೆಸುವುದಾಗಿದೆಯೊ ಹಾಗೆಯೆ ಮುಸಲ್ಮಾನ ಬಂಧುಗಳಿಗೆ ಇಂಗ್ಲಿಷ್ ಮುತ್ಸದಿಗಳು ಅವರ ಮುಂದಿನ ಬಾಳಿನಯ ಕ್ರಮವನ್ನು ತೋರಿಸಿ ಕೊಡುವುದು ಅವರಿಗೆ ಸಂತಾಪಜನಕವಾಗಿದೆ. ಅವರ ಸಂತಾಪಕ್ಕೆ ಸನದುಶೀರ ದಾರಿಯನ್ನು ಕಲ್ಪಿಸಿ ಕೊಡಬೇಕಾದರೆ ಅದು ಅಸಹಕಾರಿತೆಯು ಎಂದು ತಿಳಿಯಬೇಕು ಈ ಅಸಹಕಾರಿತೆಯ ದಾರಿಯನ್ನು ಅವರಿಗೆ ತೋರಿಸಿ ಕೊಡದೆ ಇದ್ದರೆ ಅವರ ಸಂತಾಪವು ಅವ್ಯವಸ್ಥಿತವಾಗಿ ಹೊರಡಲು ಪ್ರಯತ್ನಿಸಿ, ಕೊನೆಗೆ ಅದರಿಂದ ಭಯಂಕರವಾದ ಅತ್ಯಾಚಾರಗಳು ಆಗುವ ಸಂಭವ ಇರುತ್ತದೆ. ಸನದುಶೀರಾದ ಅಸಹಕಾರಿತ್ವದ ಮಾರ್ಗವೆ, ಈ ಸಮಯದಲ್ಲಿ ಖಿಲಾಫತಿನ ಪರಿಸ್ಥಿತಿಯು ಕುರಿತು ವಿಚಾರ ಮಾಡಿ ನೋಡಿದರೆ, ಮುಸಲ್ಮಾನರ ಮತ್ತು ಲೋಕದ ಹಿತಕ್ಕೆ ಯೋಗ್ಯವಾಗಿದೆ' ಎಂದು ಗಾಂಧಿಗಳು ಹೇಳುತ್ತಾರೆ.

೩. ಹಿಂದುಸ್ಥಾನದೊಳಗಿನ ಮುಸಲ್ಮಾನರಲ್ಲಿ ಉಂಟಾದ ಒಂದು ವಿಧದ ಮನಃ ಸಂತಾಪಕ್ಕೆ ಗಾಂಧಿಗಳು ಅಸಹಕಾರಿತೆಯ ಮುಲಾಮನ್ನು ಹಚ್ಚುವಾಗ ವಿಲಾಯತಿಯಲ್ಲಿ ಹೋಮ್ ರೂಲಿನ ದೀರ್ಘ ತಪಶ್ಚರ್ಯವನ್ನು ಮಾಡಿ; ಮಾಡಿ ಬೇಸತ್ತು ಹೋದ ಐರಿಶ ಜನರ ಸಂತಪ್ತ ಮನಸ್ಸಿನ ಮೇಲೆ ಬ್ರಿಟಿಷ್ ಮುತ್ಸದಿಗಳು ಹೋಮ್ ರೂಲ್ ಎಕ್ಟಿನ ಕೆಲ ಕೆಲವು ಶೀತಲ ತುಷಾರಗಳನ್ನು ಆಗಾಗ್ಗೆ ಸಿಂಪಡಿಸುತಿದ್ದಾರೆ. ಇಂಥ ಪ್ರಯತ್ನಗಳು ಮಿ. ಗ್ಲೆಡ್‌ಸ್ಟನ್ನಾ ಥೋರೆಗಳ ಕಾಲದಿಂದ ಆಗುತ್ತಿದ್ದಂತೆ ಈಗಲೂ ಆಗುತ್ತಿವೆ. ಐರಿಶ್ ಹೋಮ್ ರೂಲಿನ ಪ್ರಶ್ನೆಯು ಈಗ ಅನೇಕ ವರ್ಷಗಳಿಂದ ಬ್ರಿಟಿಶ್ ಪಾರ್ಲಿಮೆಂಟಿಗೆ ಒಂದು ದೊಡ್ಡ ವ್ಯಾಧಿಯು! ಬ್ರಿಟಿಷ್ ಮುತ್ಸದಿಗಳಾದರೂ ಔದಾರ್ಯಭಂತರೆ! ಐರ್ಲಂಡಿಗೆ ಸ್ವರಾಜ್ಯವನ್ನು ಕೊಡಬೇಕೆಂದು ಅವರು ಐರಿಶ್ ಹೋಮ್ ರೂಲ್ ಬಿಲನ್ನು ಆಗಾಗ ತರುತ್ತಿದ್ದರು. ಆದರೆ ಅವರಿಗೆ ಈಗ ಅಮೇರಿಕದ ದಸೆಯಿಂದಲೂ ಐರ್ಲಂಡಿಗೆ ಹೋಮ ರೂಲ್ ಕೊಡಬೇಕಾಗಿ ಬಂದಿದೆ! ಈ ಬಗ್ಗೆ ಬ್ರಿಟಿಷ್ ಮುತ್ಸದಿಗಳು ತಾನೆ ಪೇಚಾಡುತಿದ್ದಾರೆ. ಆದರೆ ಇದೊಂದು ಐರ್ಲಂಡಿನ ದುರ್ದೈವವು; ಏನೆಂದರೆ ಇಂಗ್ಲಂಡು ಹೋಮ್‌ರೂಲ್ ಕೊಡುವ ಔದಾರ್ಯವನ್ನು ಆಗಾಗ್ಗೆ ತೋರಿಸುತಿದ್ದರೂ ಅದನ್ನು ತೆಕ್ಕೊಳ್ಳುವ ಭಾಗ್ಯವು ಐರ್ಲಂಡಿನಲ್ಲಿ ಇಲ್ಲ! ಐರಿಶ್ ಹೋಮ ರೂಲಿನ ದಸೆಯಿಂದ ಇಂಗ್ಲಂಡಿಗೆ ತುಂಬಾ ಶ್ರಮ ಸಹಿಸಬೇಕಾಗಿ ಬಂದಿದೆ. ಐರಿಶರ ಸಮಾಧಾನಕ್ಕಲ್ಲವಾದರೂ, ಅಮೇರಿಕದ ಕಣ್ಣು ಕಟ್ಟುವುದಕ್ಕೋಸ್ಕರ ಹೋಮ್ ರೂಲ್ ಕೊಡಲು ಈ ಹೊತ್ತು ಇಂಗ್ಲಂಡು ತಯಾರಾಗಿ ನಿಂತಿದೆ. ಮಾತ್ರವಲ್ಲ, ಪಾರ್ಲಿಮೆಂಟನಲ್ಲಿ ಐರಿಶ್ ಹೋಮ್ ರೂಲಿನ ಬಿಲನ್ನು ಕೂಡ ಅದು ತಂದಿದೆ. ಪರಂತು ಇಂಗ್ಲಂಡು ಸಾತ್ವಿಕ ಬುದ್ಧಿಯಿಂದ ಈ ಪ್ರಕಾರ ಸ್ವರಾಜ್ಯದಾನ ಮಾಡತೊಡಗಿ ಐರ್ಲಂಡಿನ ಸಮಾಧಾನವನ್ನು ಮಾಡ ಯತ್ನಿಸಿದೆ. ತಥಾಪಿ ಅದು ಐರ್ಲಂಡಿಗೆ ಕಳುಡಸಿಕೊಟ್ಟ ಬಿರೊತ್ತ್ರಟನ ಇಂಗ್ಲಂಡಿನ ವ್ರತವನ್ನು ನಡಿಸಗೊಡದೆ ತಮ್ಮ ಅಯೋಗ್ಯವಾದ ಆಳಿಕೆಯಿಂದ ಇಂಗ್ಲಂಡಿನ ಹೆಸರನ್ನು ಹಾಳುಮಾಡಹತ್ತಿದ್ದಾರೆ. ಮತ್ತು ಸದ್ಯಃ ಇವರ ಪರಿಣಾಮವೇನಾಗಿದೆ ಎಂದರೆ ಐರ್ಲಂಡಿನಲ್ಲಿ ಮಾರಾಮಾರಿ, ಖೂನಿ, ದಂಗೆ ಮುಂತಾದ್ದು ಉಂಟಾಗಿ ದೊಡ್ಡ ಅವ್ಯವಸ್ಥೆಯು ಹಬ್ಬಿಹೋಗಿದೆ. ಸಿನ್‌ಫೆನರ್ಸ ಮತ್ತು ಯೂನಿಯನಿಸ್ಟ ಈ ಪಕ್ಷದವರಲ್ಲಿ ವೈಮನಸ್ಸು ಉಂಟಾಗಿ ಅವರು ಪರಸ್ಪರ ಗುಂಡುಗಳನ್ನು ಹಾರಿಸಿಕೊಂಡರು. ಈ ಮೇರೆಗೆ ದಂಗೆಯು ಪ್ರಾರಂಭವಾಯಿತು. ಈ ದಂಗೆಯನ್ನು ನಿಲ್ಲಿಸುವುದು ಅಲ್ಲಿಯ ಸರಕಾರಕ್ಕೆ ತತ್ಕಾಲ ಅಶಕ್ಯವಾಯಿತು. ಐರ್ಲಂಡಿನಲ್ಲಿ ಇಂಥ ಭಯಂಕರ ಸ್ಥಿತಿಯು ಬಂದೊದಗಿದೆ ಎಂಬುದು ಇಂಗ್ಲಂಡಿನಲ್ಲಿ ಈಗ ಎಲ್ಲರ ತಿಳುವಳಿಕೆಗೆ ಬಂದಿದೆ. ಐರ್ಲಂಡಿನ ಸ್ವರಾಜ್ಯದ ಪ್ರಶ್ನೆಯನ್ನು ಇನ್ನು ಮುಂದೆ ಎಳಂದಿನಬಾರದೆಂಬ ಮಾತು ಈಗ ಎಲ್ಲರ ಬಾಯಲ್ಲಿ ಬರಹತ್ತಿದೆ. ವಾತ್ಸ್ಯಾದನ ಆಗಲಿಕ್ಕಿದೆ. [illegible] ಹೋಮ್ ರೂಲನ್ನು ಕುರಿತು ಪಾರ್ಲಿಮೆಂಟು ಈ ಸರಿ [illegible] ದುರ್ಲಕ್ಷ್ಯದ ದಸೆಯಿಂದ ವಿಮನಸ್ಕರಾಗಿದ್ದಾರೆ. ಹಾಗು ಬರುವ ಜೂನಿನ ಪ್ರಾರಂಭದಲ್ಲಿ ಜರಗಲಿಕ್ಕಿರುವ ತಮ್ಮ ಕೊನ್ವರೆನ್ಸಿನ ಮುಂದೆ ಈ ವಿಷಯವನ್ನು ಪ್ರಮುಖವಾಗಿ ಇಡಬೇಕೆಂದು ನಿಶ್ಚಯಿಸಿದ್ದಾರೆ. ಇಂಗ್ಲಂಡಿನೊಳಗಿನ ಉದಾರಪಕ್ಷದವರ ಮತವಾದರೂ ಐರ್ಲಂಡಿಗೆ ಅನುಕೂಲವಾಗಿಯೆ ಇದೆ. ಪರಂತು ಚಿರೊತ್ರಸಿಯ ಮೊಸಳೆಯ ಎಳತವನ್ನು ತಪ್ಪಿಸುವ ಸುಯೋಗವು ಅದಕ್ಕೆ ಯಾವಾಗ ಬಂದೀತೊ ಯಾರು ಬಲ್ಲರು!

೪. ಕರ್ನಾಟಕ ಪರಿಷತ್ತು ಸೇರಿದಂತೆಯೆ ಕಳೆದ ವಾರ ಆಂಧ್ರ ಪ್ರಾಂತಿಕ ಪರಿಷತ್ತು ಸೇರಿತು. ಆಂಧ್ರ ಬಂಧುಗಳು ಈಗ ೪-೬ ವರ್ಷಗಳಿಂದ ತಮ್ಮ ಪ್ರಾಂತವನ್ನು ಸ್ವತಂತ್ರವಾಗಿ ಮಾಡಿಕೊಳ್ಳುವುದಕ್ಕೆ ಅವಿಶ್ರಾಂತ ಶ್ರಮವನ್ನು ಮಾಡುತ್ತಿದ್ದಾರೆ. ಇವರ ಪರಿಶ್ರಮದ ದೃಶ್ಯ ಫಲವು ಆಂಧ್ರ ಯುನಿವರ್ಸಿಟಿಯಲ್ಲಿ ಬೇಗನೆ ಪರಿಣಮಿಸೀತೆಂದು ಹೇಳುತ್ತಾರೆ. ಪರಂತು ಸದ್ಯಕ್ಕೆ ಅವರಿಗೆ ಕೊಂಗ್ರೆಸು ಪ್ರೊವೆನ್ಸಿಯಲ್ ಕೊಂಗ್ರೆಸ್ ಕಮ್ಮಿಟಿಯನ್ನು ಕೊಟ್ಟಿದೆ. ಮತ್ತು ಅವರು ಆ ಮೇರೆಗೆ ತಮ್ಮ ಪ್ರಾಂತಿಕ ಪರಿಷತ್ತನ್ನು ಪ್ರತಿ ವರ್ಷ ಜರಗಿಸಿ ತಮ್ಮ ಜನರಲ್ಲಿ ಚಳವಳದ ಶಿಕ್ಷಣವನ್ನು ಹಬ್ಬಿಸುವರಲ್ಲದೆ ತಮ್ಮ ಪ್ರಾಂತದ ಹಾಲು ಹೇವಾಲೆಗಳನ್ನು ಸರಕಾರದ ಮುಂದೆ ಇಡುತ್ತಿದ್ದಾರೆ, ಇದೀಗ ತತ್ಕಾಲದ ಫಲವು ಮೊನ್ನೆಯ ಪರಿಷತ್ತಿನ ಅಧ್ಯಕ್ಷರಾದ ಬೆರಿಸ್ಟರ ಟಿ. ಪ್ರಕಾಶಮ್ ಇವರು ತಮ್ಮ ಭಾಷಣದಲ್ಲಿ ಬರೆ ಆಂಧ್ರ ಪ್ರಾಂತಿಕ ಕುಂದು ಕೊರತೆಗಳನ್ನು ಮಾತ್ರ ವಿವರಿಸಿ ಸುಮ್ಮನಾಗಲಿಲ್ಲ, ಆದರೆ ಹಿಂದುಸ್ಥಾನದಲ್ಲಿ ಈಗ ಪ್ರಚಲಿತವಾಗಿರುವ ರಾಜಕಾರಣದೊಳಗಿನ ಎಲ್ಲ ವಿಷಯಗಳನ್ನು ಕೂಡ ಚರ್ಚಿಸಿದ್ದಾರೆ. ಸುಧಾರಣಾ ಎಕ್ಟಿನ ವಿಷಯವಾಗಿ ಇವರ ಮತವು ರಾಷ್ಟ್ರೀಯ ಸಭೆಯ ಮತಕ್ಕೆ ಅನುಗುಣವಾಗಿಯೆ ಇದೆ ಎಂದು ಪ್ರತೇಕವಾಗಿ ಹೇಳಬೇಕಾದ ಅಗತ್ಯವಿಲ್ಲ. ಮಿಸೆಸ್ ಬೆಝೆಂಟರ ವರ್ತನದಲ್ಲಿ ಇತ್ತಲಾಗೆ ಉಂಟಾದ ವಿಸಂಗತಗಳನ್ನು ನಿರ್ದೇಶಿಸಿ, ಮಿ. ಪ್ರಕಾಶವೆ ಇವರು ರಾಜಕಾರಣದಲ್ಲಿ ಒಂದೆ ಮಾರ್ಗವು ಶ್ರೇಯಸ್ಕರವಾದ್ದೆಂದು ಒತ್ತಿ ಹೇಳಿದ್ದಾರೆ. ಇವರ ಈ ಮತವು ಮನನೀಯವಾಗಿದೆ.

೫. ನಮ್ಮ ನೆರೆಯ ಜಿಲ್ಲೆಯಾದ ಉತ್ತರ ಕಾನಡಾ ಜಿಲ್ಲೆಯು ಜಿಲ್ಲಾ ಪರಿಷತ್ತನ್ನು ನೆರಿಸಿತು ಮತ್ತು ಆ ಪರಿಷತ್ತು "ಯಶಸ್ವಿ" ಯಾಯಿತು ಎಂದು ಆ ಜಿಲ್ಲೆಯೊಳಗಿನ ಪತ್ರಿಕೆಗಳ ಮೇಲಿಂದ ತಿಳಿದು ಬರುತ್ತದೆ. ಕಾನಡಾ ಜಿಲ್ಲೆಯಂಥ ಹಿಂದುಳಿದ ಜಿಲ್ಲೆಯು ಈಗಿನ ಕಾಲದಲ್ಲಿ ಜಾಗ್ರತಾವಸ್ಥೆಗೆ ಬಂದದ್ದೆ ಮೊದಲು ಸಂತೋಷದ ಮಾತು; ಅದರಲ್ಲೂ ಪರಿಷತ್ತು "ಯಶಸ್ವಿ"ಯಾದದ್ದು ಇನ್ನೂ ಸಂತೋಷದ ಮಾತು. ಪರಿಷತ್ತಿನ ಅಧ್ಯಕ್ಷರಾದ ಸಧ. ನಾರಾಯಣ ರಾಯರು ರಾಜಕೀಯ ವಿಷಯದಲ್ಲಿ ಪ್ರಾಗತಿಕ ಪಕ್ಷದವರಾದರೂ ಪರಿಷತ್ತಿನಲ್ಲಿ ಸುಧಾರಣಾ ಎಕ್ಟು, ಖಿಲಾಫತು ಇತ್ಯಾದಿ ವಿಷಯಗಳ ಮೇಲಿನ ಠರಾವುಗಳು ರಾಷ್ಟ್ರೀಯ ಪಕ್ಷದ ಧೋರಣಕ್ಕೆ ಅನುಗುಣವಾಗಿಯೆ ಪಾಸಾದವು ಎಂದು ಅಲ್ಲಿಯ ಪತ್ರಿಕೆಗಳು ಬರೆಯುತ್ತಿವೆ. ಕಾರಣ ಅಧ್ಯಕ್ಷರ ಮತದ ವರ್ಚಸ್ಸು ಪರಿಷತ್ತಿನ ಮೇಲೆ ಬೀಳುವುದರ ಬದಲು ಪರಿಷತ್ತಿನ ವರ್ಚಸ್ಸೆ ಅಧ್ಯಕ್ಷರನ್ನು ಮೋಹಿಸಿ ಅನುಕೂಲಪಡಿಸಿತೆಂದು ಹೇಳುವುದು ಸಮಂಜಸವಾಗಿದೆ. ಈ ವಿಷಯವು ಹೇಗೂ ಇರಲಿ, ಹಿಂದೂಸ್ಥಾನದೊಳಗಿನ ಈಗಿನ ರಾಜಕಾರಣದ ವಾತಾವರಣವು ಯಾವ ದಿಕ್ಕಿನಿಂದ ಬೀಸಹತ್ತಿದೆ ಎಂಬುದನ್ನು ಯಾರಿಗಾದರೂ ಪರೀಕ್ಷಿಸ ಬೇಕೆಂದಿದ್ದರೆ ಅವರು ಇದುವರೆಗೆ ಕೇವಲ ನಿದ್ರಾವಸ್ಥೆಯಲ್ಲಿ ಇದ್ದ ಮತ್ತು "ಜಂಗಲಿ ಅಡಚಣಿಗಳ ಹೊರಗೆ ಎಂದೂ ತಲೆಯೆತ್ತಿ ನೋಡದ ಉತ್ತರ ಕಾನಡಾ ಜಿಲ್ಲೆಯ ರಾಜಕೀಯ ಪರಿಷತ್ತಿನ ವಿವರಗಳನ್ನೆ ನೋಡಿದರೆ ಸಾಕಾಗಿದೆ. ಅಗಲ್ಲಿ ಸಧ. ಚಂದಾವರಕರರು, ಹೃತ್ಪೂರ್ವಕವಾಗಿ ಅಪೇಕ್ಷಿಸುವಂತೆ ನಾವು ಕೂಡ ಅಪೇಕ್ಷಿಸುವುದೇನೆಂದರೆ, ಹಿಂದೂಸ್ಥಾನದೊಳಗಿನ ಬೇರೆ ಬೇರೆ ಭಾಗಗಳು ಸ್ವರಾಜ್ಯದ ಮಾರ್ಗವನ್ನು ಆಕ್ರಮಿಸ ಹತ್ತಿದ್ದರಂತೆ ನಮ್ಮ ಉತ್ತರ ಕಾನಡವು ಕೂಡ ಆ ವ್ರತವನ್ನು ಕೈಕೊಳ್ಳಲಿ ಮತ್ತು ಈಗಿನ ಕಾಲದ ನಿಜವಾದ ಸುಖಶಾಂತಿಯನ್ನು ಹೊಂದಲಿ.

ಮಂಗಳೂರು.

ಮದ್ರಾಸು ಗವರ್ನಮೆಂಟು ಇಂಡಸ್ಟ್ರಿಯಲ್ ಡೈರೆಕ್ಟರರಾದ ಮಿಸ್ಟರ್. ಎ. ವ್ಹಾ. ಜಿ. ಕ್ಯಾಂಪೆಲ್ ದೊರೆಗಳವರು ಕಳೆದ ಶುಕ್ರವಾರ ಸಾಯಂಕಾಲ ಮೊಗವೀರರ ಶ್ರೀ ಜ್ಞಾನೋದಯ ಮಂದಿರದಲ್ಲಿ ಬಂದು, ಅಲ್ಲಿ ನಡೆಯುವ ಕಾರ್ಯಗಳನ್ನೆಲ್ಲ ವಿಚಾರಿಸಿ ತಿಳಕೊಂಡು ಸಂತೋಷಪಟ್ಟರು. ಮತ್ತು ಈ ಜಿಲ್ಲೆಯಲ್ಲಿಯ ಮೀನು ಕೈಗಾರಿಕೆಯ ಸ್ಥಿತಿಗತಿಗಳನ್ನು ಪ್ರಸ್ತಾಪಿಸುವಾಗ ಗುವಾನೋ ಎಂಬ ಮೀನುಗೊಬ್ಬರವನ್ನು ತಯಾರಿಸುವಲ್ಲಿ, ಅನೇಕ ಅಲ್ಪರಾದ ಜನರು ಗದ್ದೆಯ ಮಣ್ಣು ಹೊಯಿಗೆ ಇತ್ಯಾದಿಗಳನ್ನು ಬೆರಸಿ ಹೇಗೆ ಗಿರಾಕಿಗಳಿಗೆ ಮೋಸ ಪಡಿಸುತ್ತಾರೆಂದೂ, ಇದರಿಂದ ಶುದ್ಧವಾದ ಗುವಾನೋವನ್ನು ಎಕ್ಕೇನಿಯಿಂದ ತಯಾರಿಸುವ ಜನರಿಗೆ ಸಹಾ ಹೇಗೆ ನಷ್ಟಕ್ಕೆ ಕಾರಣವಾಗುತ್ತದೆಂದೂ, ಇದನ್ನು ನಿಲ್ಲಿಸಲು ಬೇಗನೇ ತಕ್ಕ ಏರ್ಪಾಡು ಮಾಡದಿದ್ದರೆ ಪ್ರಕೃತ ಈ ಗುವಾನೋವಿಗೆ ಇದ್ದ ಪರದೇಶದ ಹೆಚ್ಚಿನ ಗಿರಾಯಿಕಿಯು ನಿತ್ತುಹೋಗಿ ಈ ಕೈಗಾರಿಕೆಯು ಬೇಗನೇ ನಾಮಶೇಷವಾಗುವ ಸಂಭವ ಉಂಟೆಂದೂ ವಗೈರೆ ಸಮಾಚಾರ [illegible] ಶನವನ್ನು ಕಾನೂನು ಮೂಲಕ ನಿಲ್ಲಿಸಲು ತಾನು ಸರಕಾರಕ್ಕೆ ಬರಕೊಳ್ಳುತ್ತೇನೆಂದು, ದೊರೆಗಳವರು ಉತ್ತರಕೊಟ್ಟರು.

ಡಿಸ್ಟ್ರಿಕ್ಟ ಎಡ್ವಾನ್ಸ್‌ಮೆಂಟ ಎಸೋಸಿಯೇಶನು ಬರುವ ಡಿಶಂಬರ ತಿಂಗಳಲ್ಲಿ ಒಂದು ಪ್ರದರ್ಶನವನ್ನು ಜರಗಿಸಲು ಆಲೋಚಿಸಿದೆ. ಮುರಬ್ಬ, ಶರಬತ್ತು, ಬಿಸ್ಕಟು, ಸಾಬೂನು, ಔಷಧಿಗೆ ಉಪಯೋಗವಾಗುವ ಮೀನುಎಣ್ಣೆ ಪರಿಮಳ ದ್ರವ್ಯಗಳು ಮುಂತಾದ್ದನ್ನು ತಯಾರಿಸುವುದು ಮತ್ತು ಹಣ್ಣುಗಳು ದೀರ್ಘಕಾಲದ ವರೇಗೆ ಹಾಳಾಗದೆ ಇಡುವುದು; ಮುಂತಾದ ಜಿಲ್ಲೆಯ ಚಿಕ್ಕ ಪುಟ್ಟ ಕೈಗಾರಿಕೆಗಳನ್ನು ಪ್ರೋತ್ಸಾಹಗೊಳಿಸಬೇಕೆಂಬುದೇ ಈ ಪ್ರದರ್ಶನದ ಉದ್ದೇಶ. ಸ್ತ್ರೀಯರಿಂದ ತಯಾರಿಸಲ್ಪಡತಕ್ಕ ಹೊಲಿಗೆಯ ಕಸೂತಿಯ ಮತ್ತು ಮುತ್ತು ಬಣ್ಣದ ಕೆಲಸಗಳನ್ನು, ಹಾಗು ಅವರಿಂದ ಬೆಳೆಸಲ್ಪಟ್ಟ ಕಾಯಿಪಲ್ಯ, ಹಣ್ಣುಹಂಪಲು, ಪುಷ್ಪಗಳು ಇವೇ ಮುಂತಾದವುಗಳನ್ನು ಪ್ರದರ್ಶಿಸಲಿಕ್ಕೆ ಪ್ರತ್ಯೇಕ ಏರ್ಪಾಡುಗಳು ಮಾಡಲಾಗುವವು. ಇದರ ಕಮ್ಮಿಟಿಯ ಮೀಟಿಂಗು ಸದ್ಯದಲ್ಲಿ ಜರಗಿ ನಿಬಂಧನೆಗಳು ತಯಾರಾಗಿ ಪ್ರಕಟಿಸಲಾಗುವವು.

ಪುತ್ತೂರು ತಾಲೂಕು ಬೋರ್ಡಿಗೆ ಹೊಸದುರ್ಗ ಇಲೆಕ್ಟ್ರೋಲ್ ಸರ್ಕಲಿನಿಂದ ಒಬ್ಬ ಮೆಂಬರರ ಚುನಾವಣೆಯು ಹೊಸದುರ್ಗ ಡಿಪ್ಯುಟಿ ತಹಸಿಲ್ದಾರರ ಆಫೀಸಿನಲ್ಲಿ ಜುಲಾಯಿ ತಾ. ೧೬ರಲ್ಲು ನಡಿಯುವುದು. ಈ ಮೆಂಬರಿಕೆಗೆ ಉಮೇದ್ವಾರರಾಗತಕ್ಕವರು ತಮ್ಮ ಉಮೇದ್ವಾರಿಕೆಯ ಮನವಿಗಳನ್ನು ಬರುವ ಜೂನ್ ತಾ. ೧೯ನೇ ಸಾಯಂಕಾಲ ೫ ಗಂಟೆಯೊಳಗೆ ಹೊಸದುರ್ಗ ಡಿಪ್ಯುಟಿ ತಹಸಿಲ್ದಾರರವರಿಗೆ ರವಾನಿಸತಕ್ಕದ್ದು.

ಕಾಸರಗೋಡ ಇಲೆಕ್ಟೋರಲ್ ಸರ್ಕಲಿನಿಂದ ಪುತ್ತೂರು ತಾಲೂಕು ಬೋರ್ಡಿಗೆ ಚುನಾವಣೆಯಾಗತಕ್ಕ ಮೆಂಬರಿಕೆಗೆ ಮ|ರಾ|ಗಳಾದ ಕೆ. ಗೋಪಾಲಕೃಷ್ಣಯ್ಯ, ಎಚ್. ಶ್ರೀನಿವಾಸ ಕಾಮತ್ ಮತ್ತು ಸಿ. ಆನಂದ ರಾವ್ ಇವರು ಉಮೇದ್ವಾರರಾಗಿ ನಿಂತಿರುವರು.

ಕರ್ನಾಟಕ ಪರಿಷತ್ತಿನ ಸ್ವಾಯಿಕಮಂಡಲದ ಸಭಾಸದರಾಗಿ ನಮ್ಮ ಜಿಲ್ಲೆಯ ಬಗ್ಗೆ ಶ್ರೀಯುತ ಕಾರ್ನಾಡ ಸದಾಶಿವ ರಾವ್ ಬಿ. ಎ. ಎಲ್. ಎಲ್. ಬಿ. ಮತ್ತು ಶ್ರೀಯುತ ಕಡೆಕಾರ ರಾಜಗೋಪಾಲ ಕೃಷ್ಣರಾಯರು ಕಳೆದ ಪರಿಷತ್ತಿನಲ್ಲಿ ನೇಮಕವಾಗಿದ್ದಾರೆ.

ಬೆಳ್ತಂಗಡಿ ಡಿಪ್ಯುಟಿ ತಹಸಿಲ್ದಾರರಾದ ಮ|ರಾ| ಪಿ. ಮಾಧವ ಪ್ರಭುಗಳು ೬ ತಿಂಗಳ ರಜೆಯನ್ನು ಪಡೆದಿರುವುದರಿಂದ ಮ|ರಾ| ಎನ್. ಕೃಷ್ಣಪ್ಪನವರು ಬೆಳ್ತಂಗಡಿ ಡಿಪ್ಯುಟಿ ತಹಸಿಲ್ದಾರರಾಗಿ ನೇಮಕಪಟ್ಟಿದ್ದಾರೆ.

ಕಾಸರಗೋಡು ಪೋಲೀಸ ಸಬ್ ಇನ್ಸ್‌ಪೆಕ್ಟರ ಮ| ರಾ| ಎಮ್. ಕೃಷ್ಣಪ್ಪನವರು ಫರ್ಲೋ ರಜೆಯನ್ನು ಪಡದಿರುವುದರಿಂದ ಹೊಸದುರ್ಗ ಸಬ್ ಇನ್ಸ್‌ಪೆಕ್ಟರ ಮ| ರಾ| ಎಮ್. ಲಕ್ಷ್ಮಣ ರಾಯರು ಕಾಸರಗೋಡಿಗೆ ವರ್ಗಾಯಿಸಲ್ಪಟ್ಟಿರುವರು. ಮತ್ತು ಚರ್ವತ್ತೂರು ಪೋಲೀಸ ಸಬ್ ಇನ್ಸ್‌ಪೆಕ್ಟರ ಮ| ರಾ| ಟಿ. ವೆಂಕಟೇಶ ಪೈಗಳು ೨ ತಿಂಗಳ ಪ್ರಿವಿಲೆಜ್ ರಜೆಯನ್ನು ಪಡದಿರುವುದರಿಂದ ಮ| ರಾ| ಕೋಟೆಕಾರ ಸುಂದರ ರಾಯರಿಗೆ ಚರ್ವತ್ತೂರಿಗೆ ವರ್ಗವಾಗಿದೆ.

ಮಂಗಳೂರ ಕೋ-ಒಪರೇಟಿವ್ ಸ್ಟೋರಿನ ವ.ಹಾ ಸಭೆಯು ನಾಳೆ ಸಾಯಂಕಾಲ ಸದರಿ ಸ್ಟೋರಿನ ಆಫೀಸಿನಲ್ಲಿ ಕೂಡುವುದು.

ನೋಟೀಸು.

ಸಂ ೧೯೨೦ನೆ ಇಸವಿ ಮೇ ತಾ. ೧೦ರಲ್ಲು ಉಪ್ಪಿನಂಗಡಿ ತಾಲೂಕು ನಡಗ್ರಾಮದ ಹಿರ್ತಿಲ್ಲಾಡೆ ಎಂಬಲ್ಲಿರುವ ಫೂವಣಿ ಗೌಡನ ಮಗ ಚಂದಪ್ಪ ಗೌಡನು ಈ ಮೂಲಕ ತಿಳಿಸುವದ್ದೇನೆಂದರೆ:

ಮಂಗಳೂರು ತಾಲೂಕು ಕೊಡಿಯಾಲ್ ಮಾಗಣೆ ಕದ್ರಿ ಗ್ರಾಮದ ಕೆಳಗಿನ ಬೆಂದೂರಲ್ಲಿರುವ ಮಿಂಗೇಲ್ ಮಿನೇಜರ ಮಗ ಸಾಲ್ವದೊರ್ ಮಿನೇಜರರು ವ ನಡಗ್ರಾಮದ ಬೊಜಾರು ಚಂದಪ್ಪ ಗೌಡ ಕೂಡಾ ೨ ಜನರು ನನಗೆ ವ ನನ್ನ ಅಣ್ಣ ಪುತ್ರಗೌಡಗೆ ಕೂಡಾ ವಂದ್ರೆ ಕುಡ್ತಳ ಮೊಕದಮೆಗೆ ಒಂದು ಅರ್ಜಿ ಆಗಬೇಕೆಂತ ನಮಗೆ ಮೋಸಪಡಿಸಿ ನಮ್ಮಿಬ್ಬರಿಂದ ಹೆಬ್ಬೆಟ್ಟು ಪಾರಿಕಾಗದದಲ್ಲಿ ಪಡೆದು ಈಗ ೧೫೮—೪—೦ ಒಂದು ಡಿಮಾಂಡ್ ನೋಟು ಪ್ರತಿಫಲವಿಲ್ಲದೆ ಬನಾವಣೆ ಮಾಡಿಸಿ ಸದರಿ ಸಾಲ್ವದೊರ್ ಮಿನೇಜರವರ ಹೆಸರಲ್ಲಿ ಆದ್ದಾಗಿ ಇದೇ ಬೆಳ್ತಂಗಡಿ ಸಬ್ ರಿಜಿಸ್ಟ್ರಾರವರ ಆಫಿಸಿನ ನಂಬ್ರ $\frac{350}{19-4-20}$ಕ್ಕೆ ರಿಜಿಸ್ತ್ರಿಯಾದ ಬನಾವಣೆ ದಸ್ತಾವೇಜಿನಲ್ಲಿ ಕಂಡು ಬರುವದಾಗಿ ತಿಳಿದು ಆ ಬಗ್ಗೆ ಸದರಿ ಸಾಲ್ವದೊರ್ ಮಿನೇಜರವರಿಗೆ ಅಲ್ಯಾದ ನೋಟೀಸು ಸಹಾ ಕೊಟ್ಟಿರುತ್ತೇನೆ. ಸದರಿ ಡಿಮಾಂಡ್ ಪ್ರೊನೋಟು ಕೇವಲ ಬನಾವಣೆಯಾದ ಕಾರಣ ಯಾರಾದರೂ ಸದರಿ ಪ್ರೊನೋಟಿನ ಮೇಲ್ಲೀಟು ಪಡದಲ್ಲಿ ಆ ವಿವಾದಿಗೆ ನಾನು ಬಾಧ್ಯನಲ್ಲಾ. ಸದರಿ ಪ್ರೊನೋಟು ಮೋಸಕರವಾದ್ದೆಂತ ಈ ಮೂಲಕ ಪ್ರಕಟಿಸಿರುತ್ತೇನೆ. ತಾರೀಖು 10—5—20.

||| ಈ ಮೂರು ಗೆರೆ ಮತ್ತು ಎರಡಹೆಬ್ಬೆಟ್ಟು ಗುರ್ತು ಚಂದಪ್ಪ ಗೌಡನ ರುಜು.

[illegible]

... ಇನ್ನು ವಿಕ್ರೀ ಅದಾನ್ವಯ? ಉಪನ್ಯಾಸಕರು ದೇಶ ಭಾಷೆಗಳಲ್ಲಿ ಭಾಷಣ ಮಾಡುತ್ತಿದ್ದರೆಂದರೆ ಅಲ್ಲದೇ ಶಾಯಿದೆ ಕೌನ್ಸಿಲುಗಳಲ್ಲಿ ಏನು ನಡೆದಿತೆಂಬುದನ್ನು ಜನರು ತಿಳಿಯದೇಕಾದರೆ, ಮತ್ತೂ ಅವರು ರಾಜಕೀಯ [illegible] ಮತ್ತು [illegible] ಯೋಗ್ಯರಾಗಿಯೂ ದೇಶಕ್ಕೆ ಹಿತವಾದ ಕಲ್ಯಾಣದಂತೆಯೂ ತಮ್ಮ ಮತಗಳನ್ನು ಕೊಡಬೇಕಾದರೆ, ಶಾಯಿದೆ ಕೌನ್ಸಿಲ್ಲಿನ [illegible] ಕಾರ್ಯಗಳೆಲ್ಲವೂ ಆಯಾ ಪ್ರಾಂತಗಳ ದೇಶ ಭಾಷೆಯಲ್ಲಿ ನಡೆಯುವದು ಅತ್ಯಂತ ಅವಶ್ಯಕವಾದ ಸಂಗತಿಯಾಗಿದೆ. ಹೀಗಾದರೆ ಮಾತ್ರ ನನಗೆ ನಿಜವಾದ ಪ್ರಜಾಪ್ರಭುತ್ವಾತ್ಮಕ ಸರಕಾರವು ದೊರೆದಂತಾಗುತ್ತದೆ. ಅಂದರೇನೇ [illegible] ಸತ್ತೆಯು ಕೈಯೊಳಗಿಂದಲೂ, ನಿರಂಕುಶ ರಾಜಸತ್ತೆಯ [illegible]ಗಿಂದಲೂ ಪಾರಾದಂತಾಗುತ್ತದೆ. ಈ ವಿಷಯವಾಗಿ ಇದಕ್ಕಿಂತ ಹೆಚ್ಚಿಗೆ ಹೇಳುವದೇನಿದೆ?

ಬಂಗಾಲವು ವಿಭಾಗವಾದಾಗ ಉಂಟಾದ ಕೋಲಾಹಲವೂ, ತದನಂತರ ಆದ ಆ ಪ್ರಾಂತದ ಪುನರ್ಘಟನೆಯೂ, ಭಾಷಾನುರೋಧವಾಗಿ ಪ್ರಾಂತಗಳನ್ನು ರಚಿಸಬೇಕೆಂಬ ವಿಚಾರವು ಮುಂದೆ ಬಂದವು. ಅನಂತರ ಆಂಧ್ರರು ಈ ವಿಷಯವನ್ನೆತ್ತಿ, ತಮಗೊಂದು ಪ್ರತ್ಯೇಕವಾದ ಪ್ರಾಂತವು ಇರುವುದು ಯೋಗ್ಯವೂ ಅವಶ್ಯವೂ ಎಂಬುದನ್ನು ಖಂಡಿತವಾಗಿ ಸಿದ್ಧಮಾಡಿ ತೋರಿಸಿದ್ದಾರೆ. ರಾಷ್ಟ್ರೀಯ ಸಭೆಯಾದರೋ ಅವರ ಹಕ್ಕನ್ನು ಈ ಮೊದಲೇ ಮಾನ್ಯ ಮಾಡಿದೆ. ಸರಕಾರವೂ ಅದನ್ನು ಮಾನ್ಯ ಮಾಡುವ ಸ್ಪಷ್ಟವಾದ ಚಿನ್ಹೆಗಳು ತೋರ ಹತ್ತಿವೆ. ಆದರೆ ಈಗಿನ ಹೊಸ ಸುಧಾರಣಾ ಕಾಯಿದೆಯಲ್ಲಿ ಮಾತ್ರ ಈಗಿನ ದೊಡ್ಡ ದೊಡ್ಡ ಇಲಾಖೆಗಳು ಹಿಂದುಸ್ಥಾನದ ಸರಕಾರದ ಕೆಳಗೆ ಸ್ವತಂತ್ರವಾದ ಪ್ರಾಂತಗಳಾಗಿ ಇಡಲ್ಪಟ್ಟಿವೆ. ಈಗಿದ್ದ ಇಲಾಖೆಗಳ ಮೇರೆಗಳು, ಆ ಸರಕಾರಗಳ ರಚನೆಗಳೂ, ಯಾವದೇ ಒಂದು ಸಮಂಜಸವಾದ ತತ್ವಕ್ಕನುಸರಿಸಿ ಗೊತ್ತುಮಾಡಲ್ಪಡದೆ, ಐತಿಹಾಸಿಕ ಕಾರಣಗಳ ಮೂಲಕ ನಿಶ್ಚಿತನಂತೆ ಮಾಡಲ್ಪಟ್ಟಿವೆ. ಇಷ್ಟೇ ಅಲ್ಲ. ಕೆಲಕೆಲವು ಕಡೆಗಂತೂ ಸಮಂಜಸವೇ ಆಗಲಿ, ಅಸಮಂಜಸವೇ ಆಗಲಿ, ಯಾವ ಬಗೆಯ ತತ್ವವೂ ಅದರಲ್ಲಿ ಕಂಡು ಬರುವದಿಲ್ಲ. ಇದಕ್ಕೆ ಕಾನಡಾ ಜಿಲ್ಲೆಯೇ ಉದಾಹರಣೆಯು. ಅದು ಮೊದಲು ಒಂದು ಜಿಲ್ಲೆಗೆ ತಕ್ಕಷ್ಟು ಕ್ಷೇತ್ರವುಳ್ಳದ್ದಾಗಿ ಒಂದೇ ಕಡೆಗೆ ಇತ್ತು. ಆದರೆ ಇಲ್ಲಿಯ ಜನರ ಹಿತದ ಕಡೆಗೆ ಎಳ್ಳಷ್ಟಾದರೂ ಲಕ್ಷ್ಯಕೊಡದೆ ಅದು ಇಭಾಗವಾಗಿ ಮಾಡಲ್ಪಟ್ಟು, ಮದ್ರಾಸ ಇಲಾಖೆಯಲ್ಲಿದ್ದ ಜನರಿಗೆ ಅಹಿತವಾಗುವಂತೆ ಅದರದೊಂದು ತುಂಡು ಮುಂಬಯಿ ಇಲಾಖೆಗೆ ಜೋಡಿಸಲ್ಪಟ್ಟಿದೆ. ಹೀಗೆ ಮಹಾರಾಷ್ಟ್ರ ದೇಶವು ಮೂರು ತುಂಡಾಗಿದೆ. ಒಂದು ನಿಜಾಮನಾಡಿಗೆ, ಮತ್ತೊಂದು ಮಧ್ಯಪ್ರಾಂತಕ್ಕೆ, ಮೂರನೇದು ಮುಂಬಯಿ ಇಲಾಖೆಗೆ ಸೇರಿದೆ. ತೆಲುಗು ದೇಶದ ಹಾಡಾದರೂ ಇದೇ. ನಡುನಡುವೆ ಬೇರೆ ಬೇರೆ ಭಾಷೆಯನ್ನಾಡುವ ಜನರ ಅನೇಕ ಚಿಕ್ಕ ದೊಡ್ಡ ಸಂಸ್ಥಾನಗಳ ತೇಪೆಗಳು ಹಚ್ಚಲ್ಪಟ್ಟಿರುವುದರಿಂದಂತೂ, ಈ ರಚನೆಯಲ್ಲಿ ಮತ್ತಷ್ಟು ಅನವಸ್ಥೆಯುಂಟಾಗಿದೆ. ಇದರಲ್ಲಿ ಏನೂ ತಾಳತಂತಿಲ್ಲದಂತೆ ಪ್ರಾಂತಗಳು ಚಿಕ್ಕ ಚಿಕ್ಕ ಹಾಗೆ ರಚಿತವಾಗಿವೆ. ಹಲ ಕೆಲವು ಕಡೆಗೆ ಮಾತ್ರ ಪ್ರಜೆಗಳ ಜಾತಿ, ಧರ್ಮ, ಭಾಷೆ ಮೊದಲಾದುವುಗಳು ರಾಜರ ಜಾತಿ ಧರ್ಮ ಭಾಷೆಗಳಂತೆಯೇ ಇವೆ. ಆದರೆ ಹೀಗಿಂದಿದ್ದ ಸ್ಥಿತಿಯೇ ಬಹಳ ಕಡೆಗೆ ಮೈಸೂರು, ತ್ರಾವಣಕೋರು, ಕೊಚಿನ ಮತ್ತು ರಜಪೂತಸ್ಥಾನದ ಸಂಸ್ಥಾನಗಳು ಮೊದಲನೇ ವರ್ಗದ ಉದಾಹರಣೆಗಳು. ಕೊಲ್ಹಾಪುರ, ಬಡೋದೆ, ಇಂದೂರ ಮೊದಲಾದ ಮಹಾರಾಷ್ಟ್ರ ಸಂಸ್ಥಾನಗಳು ಎರಡನೇ ವರ್ಗದ ಉದಾಹರಣೆಗಳು. ಈ ವಿಷಯದಲ್ಲಿ ಹಿಂದುಸ್ಥಾನವು ಏಕಿಯೂ ಖಂಡದ ಬಾಲ್ಕನ್ ದೇಶವೆಂದೇ ಹೇಳಬಹುದು. ಆದುದರಿಂದ ಈಗೀಗ ಪ್ರಾರಂಭವಾಗಿರುವ ರಾಷ್ಟ್ರೀಯ ಪುನರ್ಘಟನೆಯಲ್ಲಿ ತಮ್ಮ ಪ್ರಾಂತವು ಅಥವಾ ತಮ್ಮ ಜನರು ಇಂಥದೊಂದು ಸ್ಥಾನವನ್ನೇ ಪಡೆಯುವರೆಂದು ಖಂಡಿತವಾಗಿ ಹೇಳುವದು ಸಾಹಸದ ಮಾತೇ ಸರಿ. ಈ ಪುನರ್ಘಟನೆಯು ಸ್ಥಿರವಾದದ್ದೂ ಶಾಶ್ವತವಾದದ್ದೂ ಆಗಬೇಕಾದರೆ ಧರ್ಮ ಭಾಷೆ, ಸಂಸ್ಕೃತಿ ಮುಂತಾದ ಸ್ವಾಭಾವಿಕವಾದ ಸಂಬಂಧಗಳನ್ನು ಲಕ್ಷ್ಯದಲ್ಲಿ ತರಲೇ ಬೇಕು. ಹಾಗೆ ಮಾಡದಿದ್ದರೆ ಏನಾಗಬಹುದೆಂಬದಕ್ಕೆ ರಕ್ತದ ಕಾಲುವೆ ಹರಿಯುತ್ತಿರುವ ಈಗಿನ ಯುರೋಪ ಖಂಡವೇ ಸಾಕ್ಷಿಯು.

ಈ ವಿಷಯದಲ್ಲಿ ಮತ್ತೂ ಒಂದು ತೊಂದರೆಯುಂಟು. ಅದೇನೆಂದರೆ ಈ ಮೇಲ್ಕಾಣಿಸಿದ ಜಾತಿ, ಧರ್ಮ, ಭಾಷೆ, ಹಾಗು ಸಂಸ್ಕೃತಿ ಈ ನಾಲ್ಕು ಸಂಗತಿಗಳು ಒಂದೇ ಇರುವ ಜನಾಂಗವು ಹಿಂದುಸ್ಥಾನದಲ್ಲಿ ಈಗ ಒಂದೂ ಇಲ್ಲ. ಈ ದೇಶದ ಹಿಂದಿನ ಇತಿಹಾಸದಿಂದ ನೋಡಿದರೆ ಈ ಪ್ರಕಾರದ ಜನಾಂಗಗಳಾಗುವದು ಮುಂದೆ ಸಹ ಅಶಕ್ಯವೇ ಆಗಿದೆ. ಆದರೆ ಮುಸಲ್ಮಾನರು ಈ ದೇಶಕ್ಕೆ ಬರುವ ಪೂರ್ವದಲ್ಲಿ ಮಾತ್ರ ದೇಶವೆಲ್ಲವೂ ಕುಸು ಹೆಚ್ಚು ಕಡಿಮೆಯಾಗಿ ಭಾಷೆಗೆ ಅನುರೋಧವಾಗಿಯೇ ವಿಭಾಗಿಸಲ್ಪಟ್ಟಿತ್ತೆಂಬದನ್ನು ಕೂಡ ಅದೇ ಇತಿಹಾಸವೇ ನಮಗೆ ಹೇಳುತ್ತದೆ. ದಕ್ಷಿಣ ಹಿಂದುಸ್ಥಾನದಲ್ಲಿ ಉತ್ತರಕ್ಕೆ ಗುಜರಾಥ, ಮಹಾರಾಷ್ಟ್ರ ಮತ್ತೂ ಆಂಧ್ರ ಪ್ರಾಂತಗಳಿದ್ದವು. ದಕ್ಷಿಣಕ್ಕೆ, ಕರ್ನಾಟಕ, ದ್ರವಿಡ, ಮಳೆಯಾಳ ಪ್ರಾಂತಗಳಿದ್ದವು. ಇವುಗಳಲ್ಲಿ ಪ್ರತಿಯೊಂದ[illegible] ಆಚಾರ ವಿಚಾರ, ಹಾಗು ಸ್ವತಂತ್ರ ಸಾಂಪ್ರದಾಯಗಳುಳ್ಳ ಸುಸಂಘಟಿತವಾದ ಪ್ರತ್ಯೇಕವಾದ ಸಮಾಜವೇ ಆಗಿತ್ತು. ಆದ ಕಾರಣ ಈ ಬಗೆಯ ಸ್ವಾಭಾವಿಕ ಸಂಬಂಧಗಳು ಆದಷ್ಟು ಮಟ್ಟಿಗೆ ಉಳಿಯುವಂತೆಯೂ, ಬೆಳೆಯುವಂತೆಯೂ ಪ್ರಯತ್ನಿಸತಕ್ಕದ್ದು. ಇಂದಿಲ್ಲ ನಾಳೆ, ವಂಶದಿಂದಲೂ, ಭಾಷೆಯಿಂದಲೂ, ಸರ್ವಪ್ರಕಾರದಿಂದಲೂ, ಒಂದೇಯಾಗಿ ಹಿಂದುಸ್ಥಾನದ ರಾಷ್ಟ್ರ ಪುರುಷರ ಶರೀರದ ಬಲಿಷ್ಠವಾದ ಹಾಗು ನಿರಾಮಯ ಅವಯವವಾಗುವಂತೆ ಮಾಡುವುದು. ಮುಂದಿನ ಸಂಯುಕ್ತ ಹಿಂದುಸ್ಥಾನ ರಾಷ್ಟ್ರದ ತಳಹದಿಯನ್ನು ಹಾಕುವವರ ಆದ್ಯ ಕರ್ತವ್ಯವಾಗಿದೆ. ಇಂಥ ಪರ್ಯವಸಾನವು ಈಗೇನೋ ಅಶಕ್ಯವಾಗಿಯೇ ತೋರಬಹುದು. ಆದರೆ ನಾವು ನಮ್ಮ ಸ್ಪಷ್ಟವಾದ ಕರ್ತವ್ಯವನ್ನು ಅರಿಗಸಲಿಕ್ಕೆ ಎಂದೂ ಹಿಂಜರಿಯಕೂಡದು. ಇದಲ್ಲದೆ ಯಾವದಾದರೊಂದು ಜನಾಂಗವು ಕ್ರಿಯಾಶಕ್ತಿಯುಳ್ಳ ರಾಷ್ಟ್ರವೂ ಸುಸಂಘಟಿತವಾದ ರಾಷ್ಟ್ರವೂ ಆಗಬೇಕಾದರೆ ರಾಷ್ಟ್ರೀಯ ಭಾವನೆಯೊಂದೇ ಸಾಕೆಂಬದು ಈಗ ಸರ್ವಮಾನ್ಯವಾದ ತತ್ವವಾಗಿದೆ. ರಾಷ್ಟ್ರೀಯ ಭಾವನೆಯಿಲ್ಲದ ರಾಷ್ಟ್ರವು ಎಂದಾದರೂ ಹುಟ್ಟಬಹುದೇ?

ಮುಂದರಿಯುವದು.

ಪತ್ರವ್ಯವಹಾರ.

ಮತದಾರರಿಗೆ ಒಂದು ವಿಜ್ಞಾಪನೆ

ಸುಧಾರಣಾ ಕಾನೂನಿನ ಹೊಸ ಆಡಳಿತೆಯು ಬೇಗನೆ ಪ್ರಾರಂಭವಾಗುವದು. ಈ ಆಡಳಿತೆಯು [illegible] ಸ್ವರೂಪದ [illegible] ಜನರಿಗೆ [illegible] ... ಮುಖ್ಯವಾಗಿ ಒಂದು ... [illegible] ಅವರಿಗೆ ಶಾಯಿದೆ ಕೌನ್ಸಿಲ [illegible] ಆ ಕೌನ್ಸಿಲಿನಲ್ಲಿ [illegible] ನಿಧಿಗಳು [illegible], ಅದರಲ್ಲಿ [illegible] ಕಾನೂನುಗಳನ್ನು ಕಾರ್ಯಗತ ಮಾಡುವ ದಾರಿಯಲ್ಲಿ ಸರಿ ಬೇಕೆಂಬ ನಿರ್ಬಂಧವಿದ್ದಿಲ್ಲ; ಆದರೆ ಇನ್ನು [illegible] ಲೋಕಪ್ರತಿನಿಧಿಗಳಿಂದ ಸಮಾವಿಷ್ಟವಾದ ಒಂದು ಶಾಯಿದೆ ಕೌನ್ಸಿಲು ಹೆಸರಿಗೆ ಇತ್ತು; ಪರಂತು ಕಾರಭಾರವೆಲ್ಲ ನೋಕರಶಾಹಿಯು (ಬಿರೋಕ್ರಸಿಯು) ಕೇಂದ್ರಸ್ಥಾನವಾದ ಕಾರ್ಯಕಾರಿ ಕೌನ್ಸಿಲಿನಿಂದಲೇ ಮುಖ್ಯವಾಗಿ ಸಾಗಿಸಲ್ಪಡುತಿತ್ತು. ಪರಂತು ಸಾಂಪ್ರತ ಸುಧಾರಣಾ ಕಾನೂನಿನ ಮೂಲಕ ಹೊಸ ಆಡಳಿತೆಯು ಪ್ರಾರಂಭವಾಗಲಿಕ್ಕಿರುವದೂ ಅದರಲ್ಲಿ ಕೆಲಮಟ್ಟಿಗೆ ಲೋಕಮತದ ಪ್ರವೇಶವುಂಟಾಗಿದೆ ಎಂದು ಹೇಳಬಹುದು. ಹಳ್ಳಿಹಳ್ಳಿಗಳೊಳಗಿನ ಸಾಮಾನ್ಯ ಜನರಿಗೆ ಕೂಡ 'ಲೋಕಮತದ ಪ್ರವೇಶ'ವೆಂಬುದರ ಅರ್ಥವು ಇನ್ನೂ ಸ್ಪಷ್ಟವಾಗಿ ತಿಳಿಯುವಂತೆ ಹೇಳಬೇಕಾದರೆ, ಹೊಸ ಕಾನೂನಿನ ಪ್ರಕಾರ ಶಿಕ್ಷಣ, ಲೋಕಲ್‌ಬೋರ್ಡ, ಮುನ್ಸಿಪಾಲಿಟಿ, ಉದ್ಯೋಗಗಳ ಮುಂತಾದ ಹಲವು ಖಾತೆಗಳು ಜನತೆಯ ಕೈಗೆ ಬಂದಿವೆ. ಈ ಹೊಸ ಆಡಳಿತೆಯ ಸ್ವರೂಪವನ್ನು ಒಂದೇ ಮಾತಿನಿಂದ ಹೇಗೆ ವಿವರಿಸಬಹುದೆಂದರೆ ಶಾಯಿದೆ ಮಂಡಲವೆಂಬುದನ್ನು ನಿರ್ಮಿಸಿ ಆ ಮಂಡಲದ ಮಂತ್ರಿಯ ಕೈಯಲ್ಲಿ ಜನರಿಗಾಗಿ ಬಿಟ್ಟ ಕೆಲವು ಖಾತೆಗಳು ಇರುವವು; ಆ ಮಂತ್ರಿಯು ಶಾಯಿದೆ ಮಂಡಲದ ಲೋಕಪ್ರತಿನಿಧಿಗಳಿಂದ ಆರಿಸಲ್ಪಟ್ಟವನಾಗಿರುವನು. ಇದನ್ನು ಬೇರೆ ಮಾತುಗಳಿಂದ ಹೇಳೋಣ. ಇನ್ನು ಮುಂದೆ ಒಂದು ಶಾಯಿದೆ ಮಂಡಲವು ಸ್ಥಾಪನವಾಗಲಿಕ್ಕಿದೆ. ಇದರಲ್ಲಿ ಸರಕಾರ್‍ನ ನೇಮಕ ಮತ್ತು ಚುನಾಯಿತ ಈ ಪ್ರಕಾರ ಮೂರು ವಿಧದ ಪ್ರತಿನಿಧಿಗಳು ಇರುವವರಾದರೂ ಲೋಕಪ್ರತಿನಿಧಿಗಳ ಬಹುಮತವಾಗುವಂತೆ ಅವರ ಸಂಖ್ಯೆಯು ಅಧಿಕವಾಗಿರುವುದು; ಮಂಡಲದೊಳಗಿನ ಪ್ರತಿನಿಧಿಗಳು ತಮ್ಮೊಳಗಿನವನನ್ನು ಬಹುಮತದಿಂದ ಮಂತ್ರಿಯನ್ನಾಗಿ ಚುನಾಯಿಸುವರು ಎಂದ ಮೇಲೆ, ಈಗಲೇ ತೋರಿಸಿದಂತೆ ಲೋಕಪ್ರತಿನಿಧಿಗಳ ಸಂಖ್ಯೆಯು ಇತರರಿಗಿಂತ ಅಧಿಕವಾಗಿರುವ ಕಾರಣ ಮಂತ್ರಿಸ್ಥಾನದಲ್ಲಿ ಚುನಾಯಿಸಿ ಬರುವವನು ಲೋಕಪ್ರತಿನಿಧಿಯೊಳಗಿನವನೆ ಇರುವನೆಂಬದು ಸ್ಪಷ್ಟವು. ಈ ಬಗೆಯಿಂದ ಚುನಾಯಿಸಿ ಬಂದ ಪ್ರತಿನಿಧಿಯ ಕೈಯಲ್ಲಿ ಮೇಲೆ ಸೂಚಿಸಿದಂತೆ ಕೆಲವು ಖಾತೆಗಳ ಅಧಿಕಾರವಿರುವುದೆಂದು ತಿಳಿಯಬೇಕಾಗಿದೆ.

ಮೇಲಿನ ಈ ವಿವರಣದ ಮೇಲಿಂದ ಮಂತ್ರಿಯ ವಶದಲ್ಲಿರುವ ಖಾತೆಗಳಿಗೂ ಸಾಮಾನ್ಯ ಜನತೆಗೂ ಎಷ್ಟು ನಿಕಟ ಎಂದರೆ ಹತ್ತಿರದ ಸಂಬಂಧವಿದೆ ಎಂದು ವಾಚಕರಿಗೆ ಗೊತ್ತಾಗದೆ ಇರದು. ಪುನಃ ಈ ಸಂಬಂಧವನ್ನು ಇನ್ನೂ ವಿಶದವಾಗಿ ಹೇಳುವುದಾದರೆ, ಆಯಾ ಜಿಲ್ಲೆಯೊಳಗಿನ ಮತದಾರರು ತಂತಮ್ಮ ಪ್ರತಿನಿಧಿಗಳನ್ನು ಆರಿಸಿಕೊಡುವರು. ಈ ಪ್ರತಿನಿಧಿಗಳು ಕೌನ್ಸಿಲಿನಲ್ಲಿ ಬಂದ ಬಳಿಕ ತಮ್ಮ ಬಹುಮತದಿಂದ ಮಂತ್ರಿಯನ್ನು ಆರಿಸುವರು, ಮತ್ತು ಆ ಮಂತ್ರಿಯು ದೇಶದೊಳಗಿನ ಶಿಕ್ಷಣ, ಆರೋಗ್ಯ, ಮುನ್ಸಿಪಾಲಿಟಿ, ಲೋಕಲ್‌ಬೋರ್ಡು ಮುಂತಾದ್ದನ್ನು ನಡೆಸುವನು. ಈ ಕಾರಭಾರವನ್ನು ಮಂತ್ರಿಯು ನಡೆಸುವನು ಎಂದು ಹೇಳುವದಕ್ಕಿಂತ ಪರ್ಯಾಯದಿಂದ ಜನರೇ ನಡೆಸುವರೆಂದು ಹೇಳುವುದು ಹೆಚ್ಚು ಸಮಂಜಸವಾಗಿದೆ. ಇದೀಗ ಪ್ರಾತಿನಿಧಿಕ ರಾಜ್ಯಪದ್ಧತಿಯ ಒಂದು ಅಂಶವು. ಎಂಗಡಿಸಿಕೊಟ್ಟ ಖಾತೆಗಳನ್ನು ಮಂತ್ರಿಯು ನಡೆಸುತ್ತಾನೆಂದಾದ ಮೇಲೆ ಆ ಮಂತ್ರಿಯನ್ನು ಚುನಾಯಿಸುವ ಪ್ರತಿನಿಧಿಗಳು ಯಾವ ಮತದವರಾಗಬೇಕೆಂಬುದನ್ನು ಪ್ರತಿನಿಧಿಗಳನ್ನು ಚುನಾಯಿಸುವ ಮತದಾರರು ಮುಖ್ಯವಾಗಿ ಆಲೋಚಿಸತಕ್ಕದ್ದಾಗಿದೆ. ಮತ್ತು ಇದೇ ಉದ್ದೇಶದಿಂದ ಮುಂದಿನ ಕೆಲವು ಮಾತುಗಳನ್ನು ಮತದಾರರ ಮುಂದಿಡಲು ಉದ್ಯುಕ್ತನಾಗಿದ್ದೇನೆ. ಅವುಗಳನ್ನು ಮತದಾರತನದ ಹಕ್ಕುಳ್ಳವರು ಅವಶ್ಯವಾಗಿ ಆಲೋಚಿಸಬೇಕೆಂದು ವಿಜ್ಞಾಪನೆ ಇದೆ.

ಇದು ವರೆಗೆ ಒಂದು ಶಾಯಿದೆ ಕೌನ್ಸಿಲು ಎಂಬುದು ಇದ್ದು ಅದರಲ್ಲಿ ಲೋಕಪ್ರತಿನಿಧಿಗಳು ಬರುತಿದ್ದರೂ ಆ ಕೌನ್ಸಿಲಿನ ಮೇಲೆ ಜವಾಬದಾರಿಯ ಯಾವ ಕೆಲಸವೂ ಇದ್ದಿಲ್ಲ. ಆದ್ದರಿಂದ ಜನರಿಂದ ಚುನಾಯಿಸಲ್ಪಡುವ ಪ್ರತಿನಿಧಿಗಳು ಕೌನ್ಸಿಲ್ ಹಾಲಿನಲ್ಲಿ ಒಂದು ವೇಳೆ ನಿಷ್ಪ್ರಯೋಜಕರಾಗಿದ್ದರೂ ಬಾಧಕವಿದ್ದಿಲ್ಲ. ನಿರ್ವಿಷ ಸರ್ಪವು ತನ್ನ ಹೆಡೆಯನ್ನು ಬಿಡಿಸಿ ಪ್ರೂತ್ಕಾರಗಳನ್ನು ಬಿಡುತ್ತಿದ್ದರೂ ಅದು ಹೇಗೆ ನಿಷ್ಫಲವೋ, ಅಥವಾ ಆಯುಧ ರಹಿತನಾದ ವೀರನು ರಣಭೂಮಿಯ ಮೇಲೆ ತನ್ನ ಪೌರುಷವನ್ನು ಉದ್ದುದ್ದ ಮಾತುಗಳಿಂದ ತೋರ್ಪಡಿಸಿಕೊಳ್ಳುವದು ಹೇಗೆ ನಿರರ್ಥಕವೋ, ಹಾಗೆಯೇ ಇದು ವರೆಗಿನ ನಾಮಧಾರಿ ತಮ್ಮ ವಕ್ತೃತ್ವವನ್ನು ಖರ್ಚುಮಾಡಿದ್ದಾದರೆ ಅದು ನಿಷ್ಫಲವೇ ಆಗುತಿತ್ತು. ಸಾರಾಂಶ ಕೌನ್ಸಿಲಿನ ನಾಮಧಾರಕನವು ಒಂದು ಬಾಹ್ಯ ಅಲಂಕಾರವಿತ್ತು; ಪರಂತು ಬರುವ ಕೌನ್ಸಿಲುಗಳಿಗೆ ಕೆಲವು ಖಾತೆಗಳ ಕಾರಭಾರವು ವಿಂಗಡಿಸಿ ಕೊಡಲ್ಪಟ್ಟಿದೆ, ಆ ಕಾರಭಾರವನ್ನು ನಡೆಯಿಸುವ ಪಾತ್ರತೆಯು ಯಾರಲ್ಲಿ ಉಂಟೋ ಅಂಥವರು ಈಗ ಪ್ರತಿನಿಧಿಗಳಾಗಿ ಕೌನ್ಸಿಲುಗಳಲ್ಲಿ ಹೋಗಬೇಕಾಗಿದೆ. ಕೌನ್ಸಿಲುಗಳಲ್ಲಿ ಚುನಾಯಿಸಿ ಬರುವುದು ಒಂದು ಭೂಷಣವೆಂದು ತಿಳಿಯುವವರು ಈಗ ಬೇಡ. ಕರ್ತವ್ಯತತ್ಪರರಾದ ಪ್ರತಿನಿಧಿಗಳೇ ಬೇಕು.

ಕರ್ತವ್ಯದಲ್ಲಿ ಎರಡು ಭೇದಗಳಿವೆ. ಜನತೆಯ ಹಿತಕ್ಕಾಗಿ ಮಾಡುವ ಕರ್ತವ್ಯವೊಂದು; ಹಾಗು ಹಾಗಿಲ್ಲದೆ ಇರುವುದು ಇನ್ನೊಂದು. ಈ ಎರಡು ವಿಧದ ಕರ್ತವ್ಯದಲ್ಲಿ ಯಾರು ಜನತೆಯ ಹಿತವನ್ನು ಮಾಡಲು ಸಮರ್ಥರಿದ್ದಾರೋ ಅವರನ್ನೇ ಮತದಾರರು ಚುನಾಯಿಸಿಕೊಡಬೇಕು. ಇಲ್ಲಿ "ಜನರ ಹಿತವನ್ನು ಸಾಧಿಸಲು ಸಮರ್ಥರು" ಎಂದು ಬರೆ ಗೋಪನವಾಗಿಯಾಗಿ ಹೇಳುವುದರಿಂದ ವಾಚಕರಿಗೆ ಕಣ್ಣು ಕಟ್ಟಿದಂತಾಗುವುದು. ಆದ್ದರಿಂದ ಈ ಮಾತನ್ನು ಇನ್ನೂ ಸ್ಪಷ್ಟವಾಗಿ ಹೇಳೋಣ. ನಮ್ಮ ಹಿಂದೀ ದೇಶದಲ್ಲಿ ಕಾಂಗ್ರೆಸ್ ಎಂದರೆ ರಾಷ್ಟ್ರೀಯಸಭೆ ಎಂಬದೊಂದು ಸಂಸ್ಥೆ ಇದೆ. ಈಗ ೩೦—೩೫ ವರ್ಷಗಳಿಂದ ಹಿಂದೀ ದೇಶದ ರಾಜಕೀಯ ಉನ್ನತಿಗಾಗಿ ಒದ್ದಾಡುತ್ತದೆ. ಈ ಸಂಸ್ಥೆಯು ಹಿಂದೀ ದೇಶದ ರಾಜಕೀಯ ಉನ್ನತಿಗಾಗಿಯೇ ಹುಟ್ಟಿದ್ದು ಹಾಗು ಅದನ್ನೇ ಮಾಡುತ್ತಿದೆ. ಅಂತರ್ಗತ ಸ್ವರಾಜ್ಯವು ಅದರ ಧ್ಯೇಯವು. ಮತ್ತು ಆ ಸ್ವರಾಜ್ಯದ ಗೋಸ್ಕರ ಅದರ ಪ್ರಯತ್ನವು. ಇಂಥಾ ರಾಷ್ಟ್ರೀಯ ಸಭೆಯ ಕಡೆ ಅನುಯಾಯಿಗಳು ಯಾರು ಇರುವರೊ ಅವರೇ ಬರುವ ಕೌನ್ಸಿಲಿನಲ್ಲಿ ಪ್ರತಿನಿಧಿಗಳಾಗಿ ಚುನಾಯಿಸಿ ಬರಬೇಕು. ರಾಜಕೀಯ ಪಕ್ಷಗಳಲ್ಲಿ ರಾಷ್ಟ್ರೀಯ ಸಭೆಯದಲ್ಲದೆ ಇನ್ನೊಂದು ಪಕ್ಷವಿದೆ. ಅದು ಮೊಡರೇಟ್, ಲಿಬರಲ್ ಎಂದು ಮುಂತಾದ ಹೆಸರುಗಳನ್ನು ತಳೆದುಕೊಂಡಿದ್ದರೂ ಒಂದು ತರದಿಂದ ಅದು ಅಧಿಕಾರಿಗಳ ಪಕ್ಷವೆ. ಈ ಮಾತಿಗೆ ಲಾರ್ಡ ಸಿಂಹರ ಭಾಷಣವೆ ಸಾಕ್ಷಿಯಾಗಿದೆ. ಇಂಥ ಅಧಿಕಾರಿ ಪಕ್ಷದವರಿಗೆ ಮತದಾರರು ತಮ್ಮ ಮತಗಳನ್ನು ಕೊಡುವುದು ಎಂದೂ ಉಚಿತವಲ್ಲ. ಅವರ ಕರ್ತೃತ್ವವು ದೇಶಹಿತಪರವಾಗಿರುವದು ಬಹಳ ಕಡಿಮೆ. ಅಧಿಕಾರಿಗಳ ಕಚ್ಚೆ ಹಿಡಿದು ನಡೆಯುವುದೆ ಅವರ ಧೋರಣ. ಅಧಿಕಾರಿಗಳಿಗಂತೂ ಈಗ ಕೊಟ್ಟ ಸುಧಾರಣೆಗಳೆ ಹೆಚ್ಚೆಂದು ತೋರುತ್ತದೆ ಎಂದ ಮೇಲೆ ಅಂಥ ಅಧಿಕಾರಿಗಳ ಕಂಕುಳಲ್ಲಿ ಸೇರುವ ಮೊಡರೇಟ್ ಪಕ್ಷದವರಿಗೆ ಜನತೆಯು ತಮ್ಮ ಮತಗಳನ್ನು ಕೊಡುವುದು ದೇಶಹಿತಕ್ಕೆ ವಿಘಾತಕವಲ್ಲವೆ? ಕೌನ್ಸಿಲಿನಲ್ಲಿ ಮೊಡರೇಟರು ಚುನಾಯಿಸಿ ಬಂದರೆ ಮಂತ್ರಿಪದವು ಅವರ ಕೈಗೆ ಸೇರುವದು. [illegible] ಅವರ [illegible] ಹಾಗು [illegible] ಅವರ ಮತ[illegible]

[illegible] ಇದ್ದರಿಂದ ಮತದಾರರು ತಮ್ಮ ಮತಗಳನ್ನು [illegible] ಅವರಿಗೆ [illegible] ಕೊಡಬೇಕು.

[illegible] ರಾಷ್ಟ್ರೀಯ [illegible] ಎಂದು ರಾಷ್ಟ್ರೀಯ ಸಭೆಯು ಮತವಿಟ್ಟ [illegible] ಈ ಮತವನ್ನು ಸಾಧಿಸುವ ರಾಷ್ಟ್ರೀಯ ಸಭೆಯ ಅನುಯಾಯಿಗಳು ಕೌನ್ಸಿಲಿನಲ್ಲಿ ಚುನಾಯಿಸಿ ಬಂದರೆ [illegible] ಅವರ ಕೈಯಲ್ಲಿ [illegible] ಬಂದರೆ ರಾಷ್ಟ್ರೀಯ ಸಭೆಗೆ ತನಗೆ ಬೇಕಾದ ಹೊಸ ಎತ್ತು [illegible] ಯಾವ ಅಭಿಪ್ರಾಯದಿಂದಲೂ ಅದು ಕೂಡ ಬೇಗನೆ [illegible]. ಕಾರಣ, ಈಗಿನ ರಾಷ್ಟ್ರೀಯ ಸಭೆಯೂ ಅವರ ಅನುಯಾಯಿಗಳೂ ಬಳಕೆ ಮಾಡುವಾಗ ಕೌನ್ಸಿಲಿನಲ್ಲಿ ಕೂಡ ರಾಷ್ಟ್ರೀಯ ಪ್ರತಿನಿಧಿಗಳು ಅದೇ ಧೋರಣವನ್ನು ಇಟ್ಟುಕೊಳ್ಳುವವರಾದ್ದರಿಂದ ರಾಷ್ಟ್ರೀಯ ಸಭೆಯ ಹೊಸ ಎತ್ತಿನ ಸಂಕಲ್ಪವು ಬೇಗನೆ ಕೈಗೂಡುವುದು. ಆದ್ದರಿಂದ ಮತದಾರರು ತಮ್ಮ ಮತಗಳನ್ನು ರಾಷ್ಟ್ರೀಯವರಿಗನೆ ಕೊಡಬೇಕು.

ದಕ್ಷಿಣ ಕನ್ನಡ ಜಿಲ್ಲೆಗೆ ಬರುವ ಚುನಾವಣೆಯಲ್ಲಿ ಮುಸಲ್ಮಾನರ ಕಡೆಯಿಂದ, ಬ್ರಾಹ್ಮಣೇತರರ ಕಡೆಯಿಂದ ಹಾಗು ಸಾಮಾನ್ಯ ಮತದಾರರ ಕಡೆಯಿಂದ ಈ ಪ್ರಕಾರ ಮೂವರು ಪ್ರತಿನಿಧಿಗಳಿರುವರು. ಅವರಿಗೆ ಮತಗಳನ್ನು ಕೊಡುವಾಗ ಮತದಾರರು ಬಹಳ ಜಾಗ್ರತೆಯನ್ನು ತಕ್ಕೊಳ್ಳುವುದು ಆವಶ್ಯಕವಾಗಿದೆ. ಮುಸಲ್ಮಾನರಲ್ಲಿ ಪ್ರತಿನಿಧಿಗಳಾಗಿ ನಿಲ್ಲುವವನು 'ನಾನು ಮೊಸ್‍ಲೆಮ್ ಲೀಗಿನ ಕಡು ಅನುಯಾಯಿಯಾಗಿದ್ದೇನೆ' ಎಂಬುದನ್ನು ಸ್ಪಷ್ಟವಾಗಿ ಜಾಹೀರ ಪಡಿಸಬೇಕು; ಹಾಗೆಯೇ ಬ್ರಾಹ್ಮಣೇತರ ಪಕ್ಷದಿಂದ ನಿಲ್ಲುವವನು ಮತ್ತು ಸಾಮಾನ್ಯ ಚುನಾವಣೆಗಾಗಿ ನಿಲ್ಲುವವನು 'ನಾನು ರಾಷ್ಟ್ರೀಯ ಸಭೆಯ ಅನುಯಾಯಿಯಾಗಿದ್ದೇನೆ, ಅಮೃತಸರದ ಕಾಂಗ್ರೆಸ್ಸು ಸುಧಾರಣೆಯ ವಿಷಯದಲ್ಲಿ ಯಾವ ಅಭಿಪ್ರಾಯವನ್ನು ವ್ಯಕ್ತಗೊಳಿಸಿದೆಯೋ ಅದು ತನಗೆ ಮಾನ್ಯವಿದೆ,' ಎಂದು ಸ್ಪಷ್ಟವಾಗಿ ಜಾಹೀರ ಪಡಿಸಬೇಕು. ಈ ರೀತಿ ಯಾರು ಜಾಹೀರ ಪಡಿಸುವರೋ ಅವರಿಗೆನೆ ಆಯಾ ಮತಸ್ಥರು ತಮ್ಮ ಮತಗಳನ್ನು ಕೊಡಬೇಕು. ಹೊರತು, ತಾವು ಇಂಥಿಂಥ ದೊಡ್ಡ ಮನೆತನದವರು, ಅಧಿಕಾರಿಗಳಿಗೆ ಬೇಕಾದವರು, ಇಂಥಿಂಥ ಜಾತಿಯವರು, ಬಹಳ ಐಶ್ವರ್ಯವಂತರು ಇತ್ಯಾದಿ ಗುಣಗಳನ್ನು ತೋರಿಸಿ ಆ ಬಲದಿಂದ ಯಾರಾದರೂ ಉಮೇದವಾರರಾಗಿ ನಿಲ್ಲುವುದಾದರೆ ಅವರಿಗೆ ಮತದಾರರು ತಮ್ಮ ಮತಗಳನ್ನು ಕೊಡಬಾರದು. ಎಂದರೆ ಉಮೇದವಾರರಾಗಿ ನಿಲ್ಲುವವರಲ್ಲಿ ಮೇಲಿನ ಈ ಗುಣಗಳು ಇರಬಾರದು, ಆ ಗುಣಗಳಿದ್ದವರು ಅಯೋಗ್ಯರು ಎಂಬ ಅರ್ಥವಲ್ಲ. ಅಂಥ ಕೆಲವು ಗುಣಗಳು ಉಮೇದವಾರರಲ್ಲಿ ಅವಶ್ಯಬೇಕು. ಆದರೆ ರಾಷ್ಟ್ರೀಯ ಸಭೆಯ ಆಜ್ಞೆಯ ಮೇರೆಗೆ ಕೆಲಸಮಾಡುವ ಗುಣವೇ ಉಮೇದವಾರಿಕೆಯ ಮುಖ್ಯ ಲಕ್ಷಣವು. ಈ ಗುಣದೊಟ್ಟಿಗೆ ಇತರ ಗುಣಗಳಿದ್ದರೆ ಹಾಲಿಗೆ ಸಕ್ಕರೆ ಕೂಡಿಸಿದಂತಾಗುವುದು. ಮುಖ್ಯವಾದ ಈ ಪಾತ್ರತೆಯು ಇಲ್ಲದ ಬಳಿಕ ಬೇರೆ ಗುಣಗಳಿದ್ದರೂ ಅವುಗಳಿಂದ ದೇಶಹಿತವಾಗದು. ಆದ್ದರಿಂದ ದಕ್ಷಿಣ ಕನ್ನಡದ ಮತದಾರರು, ರಾಷ್ಟ್ರೀಯನಿಗೆನೆ— ಅವನು ಯಾವ ಜಾತಿಯವನೆ ಇರಲಿ ಅವನಿಗೆನೆ— ಮತಗಳನ್ನು ಕೊಡಬೇಕು. ಈ ವಿಷಯದಲ್ಲಿ ಮತದಾರರು ಯಾವ ದಾಕ್ಷಿಣ್ಯಕ್ಕೆ, ಯಾವ ವರ್ಗಕ್ಕೆ ಅಥವಾ ಯಾವ ಲೋಭಕ್ಕೆ ಒಳಗಾಗಬಾರದು. ಮತಕೊಡುವುದು ಪವಿತ್ರಕರ್ತವ್ಯವೆಂದು ತಿಳಿದು, ದೇಶಹಿತದ ಕಾರ್ಯವೆಂದು ನೆನಸಿ, 'ನಾನು ರಾಷ್ಟ್ರೀಯನೆಂದು' ಯಾರು ಜಾಹೀರ ಪಡಿಸುವನೋ ಅವನಿಗೆನೆ ತಮ್ಮ ಮತಗಳನ್ನು ಕೊಡಬೇಕು. ಇದೇ ಎಲ್ಲ ಮತದಾರರಿಗೆ ನನ್ನ ವಿಜ್ಞಾಪನೆ.

ದಕ್ಷಿಣ ಕನ್ನಡದ ಹಿತಾಭಿಲಾಷಿ.

ಗ್ರಾಮಸಿಬಂದಿ.

ಹಳ್ಳಿ ಪಟೇಲರ ಜವಾಬ್ದಾರಿ, ಸಂಬಳ, ಬತ್ತ ಮುಂತಾದವುಗಳನ್ನು ಹಿಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸಿದೆವು. ಪಟೇಲರ ಹುದ್ದೆಗೆ ಗ್ರಾಮದ ವರ್ಗದಾರರಿಂದ ಕ್ರಮವಾಗಿ ಚುನಾವಣೆಯಾಗಬೇಕು, ಅವರಿಗೆ ಕೆಲಸದ ಅವಧಿ ೩ ಯಾ ೫ ವರ್ಷಗಳವರೆಗೆ ಇರಬೇಕು, ಕಲೆಕ್ಟರು ತಹಸಿಲ್ದಾರರು ಮುಂತಾದ ರೆವಿನ್ಯೂ ಆಫೀಸರರು ಪಟೇಲರನ್ನು ತಕ್ಕ ರೀತಿಯಿಂದ ಗೌರವಿಸಬೇಕು, ಸರಬರಾಯಿಯ ಹೊರೆಯನ್ನು ಅವರಿಂದ ತೆಗೆದು ಹಾಕಬೇಕು ಎಂದು ಹಿಂದಿನ ಸಂಚಿಕೆಯಲ್ಲಿ ಹೇಳಿದಾಗಲೇ ಹಳೇ ಗ್ರಾಮಪಂಚಾಯತಿಗಳನ್ನು ಹೊಸ ರೀತಿಯಲ್ಲಿ ಪುಷ್ಟಿಕೊಟ್ಟು ಸಚೇತನವಾಗಿ ಮಾಡಬೇಕೆಂಬದೇ ನಮ್ಮ ಸೂಚನೆ. ಯೋಗ್ಯರಾದವರಲ್ಲಿ ಅನೇಕರು ಈಗಿನ ಸ್ಥಿತಿಯಲ್ಲಿ ತಮ್ಮ ಈ ಅಧಿಕಾರವನ್ನು ಹೆಸರಿಗೆ ಮಾತ್ರ ಇಟ್ಟುಕೊಂಡು, ತಮ್ಮ ಮನೆಯ ನಪುಕರಿಂದ ಈ ಕೆಲಸವನ್ನು ಮಾಡಿಸುತ್ತಾರೆಂಬವರಿಂದ ಈ ಕೆಲಸದ ಗೌರವವು ತಾನಾಗಿಯೇ ಬಿದ್ದುಹೋಗಿದೆ, ಮನೆತನದ ಹಕ್ಕನ್ನು ಕಳೆದುಕೊಂಡ ಅಪಖ್ಯಾತಿಗೆ ಹಳ್ಳಿಯಲ್ಲಿ ಒಳಗಾಗಬಾರದು ಎಂಬದರಿಂದಲೇ ಅನೇಕರು ಈ ತಂತಮ್ಮ ಹಕ್ಕನ್ನು ಹಿಡಿದುಕೊಂಡಿದ್ದರೂ ಮೇಲಾಫಿಸರರನ್ನು ತಿಕ್ಕೊಳ್ಳುವವರ ವರ್ತನವು ಇವರೊಡನೆ ಈಗಲೂ ಅಲ್ಲಲ್ಲಿ ಹೇಯವಾಗಿದೆ ಎಂದೂ ಹಿಂದೆ ಹೇಳಿದೆವು. ಸರಿಯಾದ ಗೌರವವನ್ನು ಆ ಪದವಿಗೆ ಇಟ್ಟು, ಗ್ರಾಮದ ಜನಗಳ ಹಿತಗಳ ಮೇಲೆ ಅದನ್ನು ಅಧರಿಸಿಟ್ಟರೆ [illegible] ಪ್ರಯೋಗದ ಶಿಕ್ಷಣವೂ ಹಳ್ಳಿ ಜನಗಳಿಗೆ ಒಂದು ಬಗೆಯಿಂದ ಆಗುವುದು. ಪಟೇಲನು ತಾನು ಸರಕಾರಿ ನವುಕರ, ಅಥವಾ ಮೇಲಾಧಿಕಾರಿಗಳ ಮೆಚ್ಚಿನವನೆಂಬ ಭಾವನೆಯಿಂದಾಗಲಿ ತನ್ನಲ್ಲಿರುವ ಹಣದ ಬಲದಿಂದಾಗಲಿ ಉದ್ಧಟ ವರ್ತನವನ್ನು ನಡೆಸಲಿಕ್ಕೆ ಇರುವ ಸಂದರ್ಭಗಳು ಕಡಿಮೆಯಾಗುತ್ತವೆ. ಪಟೇಲನೆಂದರೆ ಇಡೀ ದೇಶದ ರಾಜ್ಯಭಾರದ ಮೆಟ್ಟಲುಗಳಲ್ಲಿ ಅಡಿಮೆಟ್ಟಲು ಎಂದು ಭಾವಿಸಲು ಎಡೆಕೊಡಬಾರದು. ಅಡಿಮೆಟ್ಟಲು ಎನ್ನುವಾಗಲೇ ಅಡಿಯ ಜೋಡನ್ನು ಹೊರುವ ಮೆಟ್ಟಲು ಎಂಬಂತೆ ಪರಿಣಮಿಸುತ್ತದೆ. ಅದಕ್ಕೆ ಬದಲಾಗಿ ಇಡೀ ರಾಜ್ಯಭಾರದ ಅಸ್ತಿವಾರವೆಂದು ಭಾವಿಸಲ್ಪಟ್ಟರೆ ಅದನ್ನು ಬಲಪಡಿಸಬೇಕೆಂದೂ ಮೇಲಿನ ಕಟ್ಟಡವು ನೆಲಕ್ಕೆ ಉರುಳದಂತೆ ಮಾಡುವುದಾದರೆ ಇದೇ ಮೂಲಾಧಾರವೆಂದೂ ಸಹಜವಾಗಿ ಬೋಧೆಯಾಗುತ್ತದೆ.

ಲೋರ್ಡ ಮೋರ್ಲೆ ಇಂಡಿಯಾ ಸೆಕ್ರೆಟರಿಗಳಾಗಿದ್ದ ಕಾಲದಲ್ಲಿ ಇದೇ ಅಭಿಪ್ರಾಯವನ್ನು ಸ್ವೀಕರಿಗೆ ತಂದಿದ್ದರು. ಅವರ ಸಿವಿಲಿಯನ್ ಕಲೆಕ್ಟರನೇ ರಾಜ್ಯತಂತ್ರದ ಮೂಲಸೂತ್ರಧಾರನೆಂದೂ, ಕೆಳಗಿನವರೆಲ್ಲ ಅವನು ಬೇಕು ಬೇಕಾದ ಹಾಗೆ ಆಡಿಸುವ ಗೊಂಬೆಗಳೆಂದೂ ಅಭಿಮಾನದಿಂದಲೂ ಇರುವ ಬಿರೋಕ್ರಸಿಯು ದಾಕ್ಷ ಈ ಮತದಲ್ಲಿ ಸ್ಥಾನ ಹೊಂದಲಿಲ್ಲ. ಗ್ರಾಮಗಳಲ್ಲಿ ಆಡಳಿತೆಯು ಜೀವಕಳೆಯನ್ನು ತುಂಬಿಸಬೇಕೆಂದು ಡಿಸೆಂಟ್ರಲಾಯ್ಝೇಶನ್ ಕಮಿಶನದವರು ತಮ್ಮ ರಿಪೋರ್ಟಿನಲ್ಲಿ ಸೂಚಿಸಿದ್ದರು. ಗ್ರಾಮಪಂಚಾಯತಿಗಳಿಗೆ ವಿದ್ಯಾಪ್ರಚಾರ, ನ್ಯಾಯ ಪರಿಪಾಲನ, ಆರೋಗ್ಯರಕ್ಷಣ, ಜನತೆಯ [illegible] ಮತ್ತು ಅಂಗರಕ್ಷಣ, ಗ್ರಾಮ [illegible] ಮುಂತಾದ ಕೆಲಸಗಳ [illegible]

ಹಿಂದೂಸ್ಥಾನದಲ್ಲಿ ಬೆಳೆಯುವ ಉತ್ಕೃಷ್ಟವಾದ ವನಸ್ಪತಿಗಳಿಂದ ಸಂಶೋಧಿಸಿ, ತಯಾರಿಸಲ್ಪಟ್ಟ ಬಾಂ. ಇದರ ಉಪಯೋಗದಿಂದ ತಲೆನೋವು, ಶಿತ, ಶಿರೋಭಾರ, ಗಂಟು, ಗಂಟು ನೋವು, ಎದೆಶೀತ, ಎದೆನೋವು, ಉಬ್ಬಸ, ವಾತ, ಸಂಧಿವಾತ, ಅರ್ಧಾಂಗವಾಯು, ಉಳುಕು, ಗಾಯ, ಜಖಮು, ಸೊಂಟದ ನೋವು, ಕಜ್ಜಿ ಇವೇ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ರಾಮಬಾಣದಂತೆ ಗುಣಪಡಿಸುತ್ತದೆ. ಸಮುದ್ರ ಪ್ರಯಾಣ, ರೈಲ್ವೆ ಮುಸಾಫ್ರಿ ಯು ಹಳ್ಳಿಗಳಲ್ಲಿ ಡಾಕ್ಟರ ಸಹಾಯವಿಲ್ಲದೆ ಪ್ರತಿಯೊಬ್ಬರು ಒಂದು ಬಾಟ್ಲಿಯನ್ನು ಇಟ್ಟುಕೊಳ್ಳುವದು ಅಗತ್ಯ. ಒಂದು ಡಜನಿಗೆ ರೂ. ೫—೦—೦; 24 ಬಾಟ್ಲಿಗೆ ರೂ. ೯—೮—೦; 50 ಬಾಟ್ಲಿಗೆ ರೂ. ೨೦—೦—೦ ವಿ. ಪಿ. ಖರ್ಚು ಪ್ರತ್ಯೇಕ.

"ಗಜಕರ್ಣದ ಮುಲಾಮು" ಡಬ್ಬಿ ಒಂದರ ಆಣೆ ೪, ದಂತಮಂಜನ ಕಜ್ಜಿ ಮುಲಾಮು ಆಣೆ ೩, ಹೇಯರ್ ಆಯಿಲ್, ಜೇನು ಕಡಿತದ ಮದ್ದು, ಇನ್ನೂ ಅನೇಕ ತರದ ಮದ್ದುಗಳನ್ನು ತಯಾರಿಸಿದ್ದೇವೆ. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡುವೆವು.

ಸೂಚನೆ:—ನಾವು ಮುಂಬಯಿಂದ ರವಾನಿಸಿ, ವಿಲಾಯಿತಿಯಿಂದ ಬಂದ ಪೇಟೆಂಟ ಔಷಧಗಳನ್ನೂ, ಇತರ ಮಾಲನ್ನೂ ಅದಲ್ಲ ಮಟ್ಟಿನ ಕಮ್ಮಿ ದರದಲ್ಲಿ ಕಳುಹಿಸುವ ಏರ್ಪಾಟನ್ನು ಇಟ್ಟಿರುತ್ತೇವೆ.

Manora & Co.,
Hill Road, P. O. Bandra,
BOMBAY.

ಜೆನ್ವಿನ್ ಹಾರ್ಲೆಮ್ ಆಯಿಲ್

(HAARLEM OIL).

ತ್ವರ್ಯದಲ್ಲಿ ನಿಮ್ಮ ಆರ್ಡರುಗಳನ್ನು ಬರಾಯಿಸಿಕೊಳ್ಳಿರಿ!

ಹಾರ್ಲೆಮ್ ಆಯ್ಲ್ ಎಂದೆನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾಲೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 200 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭಾವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney,) ಮೂತ್ರಕ್ಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು; ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ. ಮೂರೇ ದಿನದ ಚಿಕಿತ್ಸೆಯಿಂದ ಇನ್ಫ್ಲುಯೆಂಜಾ ಮೊದಲಾದ ಎಂಥಾ ಕಠಿಣ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯು ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೆ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ. ಕ್ರಯ ಸೀಸೆ 1ಕ್ಕೆ ಆಣೆ 8 ವಿ. ಪಿ. ಬೇರೆ.

ಸಿಫಾರಸು ಪತ್ರ

ಕೆಲವು ವರ್ಷಗಳ ಹಿಂದೆ ಮಂಗಳೂರಲ್ಲಿದ್ದ ಜರ್ಮನ್ ಮಿಶ್ಯನೆರಿ ಲೇಡಿ ಮಿಸೆಸ್ ಹೆರ್ಮನ್ ಬ್ರೇಕ್ಲೆಯವರು ಇದೇ ಕಳೆದ ಮಾರ್ಚಿ ತಾ. 10ರಲ್ಲು ಸ್ಟುಟ್‌ಗಾರ್ಟ್ ಪಟ್ಟಣದಿಂದ ವಾನಿಂಗ್‌ಟಿಲ್ಲಿ ಕಂಪೆನಿಯವರಿಗೆ ಈ ರೀತಿ ಬರೆದಿರುತ್ತಾರೆ:—ದಯವಿಟ್ಟು ನಿಮ್ಮ ಕಂಪೆನಿಯ 25 ಶೀಸೆ ಜೆನ್‌ವಿನ್ ಹಾರ್ಲೆಮ್ ಆಯಿಲ್ ಕಳುಹಿಸಿ ಕೊಡಿರಿ. ಇದು ಉತ್ಕೃಷ್ಟವಾದ ಖಾತ್ರಿ ಔಷಧಿ ಎಂಬುದು ನನ್ನ ಅನುಭವ ಸಿದ್ಧಾಂತ. ನಾನು 1910ನೇ ಇಸವಿಯಲ್ಲಿ ಮಂಗಳೂರಿಗೆ ಹೋಗುವಾಗ ನಿಮ್ಮ ಹಾರ್ಲೆಮ್ ಆಯಿಲಿನ 12 ಶೀಸೆಗಳನ್ನು ಕೊಂಡು ಹೋಗಿದ್ದೆನು. ಇದು ದೇಶೀಯರೊಳಗೆ ಪ್ರಯೋಗಿಸಿದ್ದಲ್ಲಿ ಅತಿ ಸಾಫಲ್ಯವಾಗಿ ಪರಿಣಮಿಸಿತು. ದೇಶೀಯರೊಳಗೆ ಪ್ರಬಲಿಸುವ ಜ್ವರಕ್ಕೆ ಇದು ಅತಿ ಗುಣಕಾರಿಯಾಗಿದೆ ನಂತರ ಕೆಲವು ಕುಟುಂಬಗಳು ಇದನ್ನು ಕುಟುಂಬ ಸಂರಕ್ಷಣೀಯಾಗಿ ಮನೆಮನೆಯಲ್ಲಿ ಇಟ್ಟುಕೊಳ್ಳಲು ತೊಡಗಿದರು. ತನ್ಮಧ್ಯೆ ಯುದ್ಧ ತೊಡಗಿದ್ದರಿಂದ ಹಿಂದೂಸ್ಥಾನದಲ್ಲಿ ಇದರ ವ್ಯಾಪಾರವು ಹ್ಯಾಗಿದೆಂತ ನನಗೆ ಗೊತ್ತಿಲ್ಲ.

ವಿಳಾಸ:— ಹಿಂದೂಸ್ಥಾನದ ಸೋಲ್ ಏಜಂಟರು— ದಿ. ಎಕ್ಲಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

ವಿಶೇಷ ಸೂಚನೆ:—ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲಿನ ಸೀಸೆಗಳ ಮೇಲೆ Waaning-Tilly Bros ಎಂಬ ಹಸ್ತಾಕ್ಷರವು ಇರುತ್ತದೆ. ಇದೇ ನಿಜವಾದ ಹಾರ್ಲೆಮ್ ಆಯಿಲ್ ಎಂತ ತಿಳಿಯತಕ್ಕದ್ದು.

ಆಯುರ್ವೇದ ಶಾಸ್ತ್ರಾನುಸಾರ

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. ಶತಮೂಲಿಕೆಯ ಸತ್ವವು. ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, ಬಹುಕಾಲದ ಕಫ, ರಕ್ತವಾಂತಿಯಾಗುವಿಕೆ, ಹೃದಯದ ದುರ್ಬಲತೆ ಪಿತ್ತರ (ಕಾಳಜಿ), ಮೂತ್ರಕೋಶದ ವ್ಯಾಧಿಗಳು ವ ಎಲ್ಲ ತರದ ದುರ್ಬಲತೆಯು ನಾಶಹೊಂದಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು. ಇನ್ಫ್ಲುಯೆಂಜಾ ಜ್ವರಕ್ಕೂ, ಅಶಕ್ತ ಜನರಿಗೂ, ಬತ್ತಿ ಬರುವ ಸಣ್ಣ ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು. ೧೬ ಔನ್ಸಿನ ಬಾಟ್ಲಿ ೧ಕ್ಕೆ ರೂ. ೨—೧೨—೦ ಟಿ. ಖ. ವಗ್ಯೆರೆ ಬೇರೆ.

2. ವಿಜಯಸಂಜೀವಿನಿ ತೈಲ. ಕಾಲಕ್ಕೆ ಬಹಿಷ್ಠೆಯಾಗುವುದು, ಬಹಿಷ್ಠೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಬಂಧ ವ್ಯಾಧಿಗಳಿಗೆ ದಿವ್ಯ ಔಷಧ. ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ, ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ೧ಕ್ಕೆ ರೂ. ೨.

3. ಕೋಲೇರಾ ಗುಳಿಗೆಗಳು. ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕದ್ದಾಗಿದೆ. ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ. ೪೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ. ೧—೦—೦.

4. ವಾತಾಂತಕ. ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು. ಕ್ರಯ ಬಾಟ್ಲಿ ೧ಕ್ಕೆ ರೂ. ೧-೮-೦.

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷದಲ್ಲಿರಬೇಕು. ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ. ವಿಳಾಸ:—

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್,
ಶ್ಶೋರನೂರ, (ಮಲೆಬಾರ).

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಚಿಕ್ಕ ಸೆಟ್ಟು ೧ಕ್ಕೆ ರೂ. ೨—೦—೦. ಮಧ್ಯಮ ತರದ ಸೆಟ್ಟು ೧ಕ್ಕೆ ರೂ. ೩—೬—೦. ದೊಡ್ಡ ಸೆಟ್ಟು ಉತ್ತಮತರದ ೧ಕ್ಕೆ ರೂ. ೫—೦—೦.

ಶೇಷ ಸಾಮಾನು ವಗ್ಯೆರೆ ಕಳುಹಿಸಲಾಗು ಬೇಕಾದವರಿಗೆ ಇನಾಮಾಗಿ ಕಳಿಸಲಾಗುತ್ತದೆ.

ಪೋಸ್ಟೇಜ್ ಪ್ಯಾಕಿಂಗ್ ಪ್ರತ್ಯೇಕ.

ADDRESS — Siromuni Narayanacharya,
Chaukamba, BENARES CITY.

ವಿಳಾಸ— ಶಿರೋಮಣಿ ಉಡುಪಿ ನಾರಾಯಣಾಚಾರ್ಯ,
ಚೌಕಂಬಾ, ಕಾಶಿ.

ರಬ್ಬರಿನ ಅಕ್ಷರಗಳು.

ಈ ಅಕ್ಷರಗಳು ವಿಲಾಯತಿಯಲ್ಲಿ ತಯಾರಾದವು. ಕಾಗದಗಳು ಕಾರ್ಡು ಮುಂತಾದವುಗಳನ್ನು ಕಷ್ಟವಿಲ್ಲದೆ ಬಹು ಅಂದವಾಗಿ ನಾವೇ ಪ್ರಿಂಟುಮಾಡಿಕೊಳ್ಳಬಹುದು. ಈ ಪೆಟ್ಟಿಗೆಯೊಂದು ಇದ್ದರೆ ರಬ್ಬರು ಮೊಹರುಗಳ ಅಗತ್ಯವೇ ಬೇಡ. ಇದರಲ್ಲಿ ಇಂಕ್‌ಪ್ಯಾಡ್, ಚಿಮಟ, ಇಂಕ್‌ಬಾಟಲ್ ಸಹಿತ ಸೇರಿದೆ.

ಕ್ರಯ	110	ಅಕ್ಷರಗಳ	ಪೆಟ್ಟಿ	ರೂ.	1—8—0
,,	170	,,	,,	,,	1-14—0
,,	250	,,	,,	,,	2—8—0
,,	350	,,	,,	,,	3-12—0

ಸ್ವಿಸ್ ಪಾಕೆಟ್ ವಾಚ್.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ೧೧ ಬಹುಮಾನ, ೪ ವರ್ಷ ಗ್ಯಾರಂಟಿ ಸಹಿತ ರೂ. ೪—೮—೦.

ಈ ಗಡಿಯಾರವು ಮಜಬೂತಾಗಿರುವದು. ಘಾಸಿ, ಧೂಳು ಸೇರದಂತೆ ಎರಡು ಕವಚವೂ ಮುಚ್ಚು ಇರುವದು. ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ. ಇದನ್ನು ತರಿಸಿ ನೋಡಿದರೆ ಗೊತ್ತಾಗುವದು. ಇದನ್ನು ಲೀವರ್ ಕೆಲಸದಿಂದ ನಯವಾಗಿ ತಯಾರಿಸಿದೆ. ಬಹುಮಾನಗಳ ವಿವರ:—ಕರವಸ್ತ್ರ ೧, ಕನ್ನಡಿ ೧, ಗುಂಡಿಗಳು ೪, ಗಿಲೀಟಿನ ರೋಜಾ ಹೂವು ೧, ಬೀಸಣಿಗೆ ೧, ಬ್ರೋಚ್ ೧, ಬಾಚಣಿಗೆ ೧, ಸೆಂಟ್ ಬುಡ್ಡಿ ೧, ಜುಮ್ಕಾ ೧೧ ಬಹುಮಾನಗಳ ಸಹಿತ ರೂ. ೪—೮—೦.

ವಿಳಾಸ:— ರಾಸ್‌ವಾಚ್ ಎಂಡ್ ಕೊ,
ಇರುಳಪ್ಪನ ಬೀದಿ, ಮದರಾಸು.

ಶಾಶ್ವತವಾದ ದೇಹಶಕ್ತಿಯನ್ನು ದುರಭ್ಯಾಸಗಳಿಂದ ಚಿಕ್ಕಂದಿನಲ್ಲಿಯೇ ಕಳೆದುಕೊಂಡು ಈ ಮರಣಾಂತರವು ದುಃಖಿಸುವಿರೇತಕ್ಕೆ?

ಲೋಕಪ್ರಸಿದ್ಧವಾದ

ಸಕಲರೋಗ ಸಂಹಾರಿ

ಎಂಬ ಈ ಔಷಧದ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯ ಪಾತರೂ, ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವಿಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವದರಿಂದ ಮೇಲುಸಿರು ಬರುತ್ತಿದ್ದರೂ, ತಲೆನೋವು, ಇವುಗಳೆಲ್ಲವೂ "ಸಕಲರೋಗ ಸಂಹಾರಿ"ಯ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವದು. ರಕ್ತವನ್ನು ಹೆಚ್ಚಿಸಿ ಧಾತುವನ್ನು ವೃದ್ಧಿಪಡಿಸುವದರಲ್ಲಿ ಇದಕ್ಕೆ ಸಮಾನವಾದ ಔಷಧವು ಬೇರೆಯಿಲ್ಲ. ಉಪಯೋಗಿಸುವ ವಿಧವು ಔಷಧದ ಜೊತೆಯಲ್ಲಿ ಕಳುಹಿಸುವೆವು. ಕ್ರಯ 16 ತೊಲೆ ಡಬ್ಬಿ 1ಕ್ಕೆ ರೂ. 2—0—0.

ವಿಳಾಸ:— ಡಾ॥ ಎಂ. ಪೀಟರ್,
ಇರುಳಪ್ಪನ ಬೀದಿ, ಮದರಾಸು.

Printed & Published by V. S. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ಬೊರೆಯಲಸುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಘುತ ಬರುತಿರುವ ॥
ಗರಲಕೆವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ! । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೪. ಮಂಗಳೂರು, ತಾರೀಕು ೬ನೇ ಜೂನ್ ಶುಕ್ರವಾರ ೧೯೨೦. ಸಂಚಿಕೆ ೨೩

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಬಡಿಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕಾದ್ದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಕೊಳ್ಳುವವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಟ್ಟಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Director, Chilean Nitrate Committee,
(INDIAN DELEGATION),
1, *Royal Exchange Place*, CALCUTTA.

ತ್ವರೆ ಮಾಡಿರಿ !! ಬೇಗನೇ ಬರೆಯಿರಿ !!

ಪಂಡಿತ ಮಂಗಳೂರು ನಾರಾಯಣಾಚಾರ್ಯರಿಂದ
ಗುಣಿಸಿ ಪರಿಶೋಧಿಸಲ್ಪಟ್ಟ

ರೌದ್ರಿ ಸಂವತ್ಸರದ ಪಂಚಾಂಗವು.

ಬೆಲೆ ಪ್ರತಿ ಒಂದಕ್ಕೆ 3 ಆಣೆ. 25 ಪ್ರತಿಗಳಿಗೆ ರೂ. 3-12-0
50 ಪ್ರತಿಗಳಿಗೆ ರೂ. 7-0-0. 100 ಪ್ರತಿಗಳಿಗೆ ರೂ. 13-8-0.

ಪ್ರತಿಗಳು ಸಿಗುವ ಠಿಕಾಣಿ:—

ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ. ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ ಒಂದರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲುಗಳು ಶುಭ್ರವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ ೧ರ ಆಣೆ 2.

ಅಮೃತಾಂಜನ ಡಿಪ್ಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ವಾತಕಷಾಯ

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿಹೊಂದಿದ ಪ್ರದೇಶವು. ಅಲ್ಲಿನ ವೈದ್ಯರುಗಳಲ್ಲಿ ಅತಿ ಪ್ರಚೂರದಿಂದ ವಂಶಕ್ರಮೇ ಶಿಕ್ಷಿತ ನಾರುಬೇರುಗಳಿಂದನಾದ ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇವಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳೂ" ಬರುತ್ತಲಿವೆ. ಈ ಭಾಗದಲ್ಲಿ, ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ "ವಾತಕಷಾಯವು" ಎಲ್ಲಾ ಬಗೆಯ ವಾತಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂದು, ಅವಯವ, ಅಂಡಕೋಶ ಮೊದಲಾದುವು ಕೆಂಪಾಗಿ ನೋವುಂಟಾಗುವುದು; ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಮೂತ್ರದಲ್ಲಿ ದೋಷವಿರುವುದು; ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲೀ ನಿಮ್ಮ ಸ್ನೇಹಿತರಲ್ಲಿಯಾಗಲೀ ಕಾಣಿಸಿಕೊಂಡರೆ, ತಡವಿಲ್ಲದೆ ನಮ್ಮ "ಕಷಾಯ" ತೆಗೆದುಕೊಳ್ಳಲು ಪ್ರಾರಂಭಿಸಬೇಕು. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ, ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕೊಲೆರಾ, ಕಾಮಾಲೆ, ಉಬ್ಬಸ, ಕೆಮ್ಮು, ಜ್ವರ, ತಲೆನೋವು, ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಆಮಶಂಕೆ, ಮೊದಲಾದವುಗಳಿಗೂ ದಿವ್ಯೌಷಧಗಳಿವೆ. "ಕ್ಯಾಟಲಾಗ್"ನ್ನು ನೋಡಿರಿ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ,
ಕಲ್ಲಿಕೋಟೆ ಮಲಬಾರ.

Come! See! & Try!

P. Narayana Vaijappa Bhandary & Co.,

Cloth Merchants,
Car Street, MANGALORE.

ಮದಿವೆ ಉಪನಯನಗಳ, ಹಬ್ಬ ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗೀ ವಸ್ತ್ರಗಳು, ಧೋತಿಗಳು, ಟೋಪಿಗಳು ಇತ್ಯಾದಿ ಉಡುಪುತೊಡುಪುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

ವರ್ತಕರ ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು. ನಗದಿ ಗಿರಾಕಿಗಳಿಗೆ ಡಿಸ್ಕಾಂಟು ಕೊಡೋಣಾಗುತ್ತದೆ.

ಪಿ. ನಾರಾಯಣ ವೈಜಪ್ಪಭಂಡಾರಿ ಮತ್ತು ಕಂಪೆನಿ,
ರಥಬೀದಿ, ಮಂಗಳೂರು.

ಸಚಿತ್ರ ಮಾಸಪತ್ರಿಕೆ. ಸಚಿತ್ರ ಮಾಸಪತ್ರಿಕೆ.

ಭಕ್ತಿಸಂದೇಶ.

ಡಿಶೆಂಬ್ರ, ಜನವರಿ, ಫೆಬ್ರುವರಿ ತಿಂಗಳ ಸಂಚಿಕೆಯು ಪ್ರಕಟವಾಗಿರುವುದು.

ಇದರಲ್ಲಿ ಅನೇಕ ಚಿತ್ರಗಳೂ ಉಪಯುಕ್ತ ವಿಷಯಗಳೂ ಬಂದಿವೆ. ಸಂಚಿಕೆಯು ಚಂದಾದಾರರಿಗಲ್ಲದೆ ಇತರರಿಗೆ ದೊರೆಯಲಾರದು.

ಮಾರ್ಚಿ, ಎಪ್ರಿಲ್ ತಿಂಗಳ ಸಂಚಿಕೆಗಳು ಮುದ್ರಣದಲ್ಲಿವೆ.

ಇವರಲ್ಲಿ ಬರುವ ವಿಷಯಗಳು:—ಶ್ರೀ ವಿವೇಕಾನಂದ ಸರಸ್ವತಿ, ಶ್ರೀ ವಿಷ್ಣುಬುವಾ ಜೋಗಿ ಇವರ ಜೀವನ ಚರಿತ್ರ (ಚಿತ್ರಸಹಿತ), ಹೊಸವರ್ಷ, ರಾಮಾಯಣ ತಾತ್ಪರ್ಯ, ಪ್ರಸಂಗಿಕ ಟಿಪ್ಪಣಿಗಳು, ವಿವೇಕಾನಂದರ ಪತ್ರಗಳು, ಹಿಂದೂ ದೇಶದ ಇತಿಹಾಸ ಬಂಡು ಅವತರಣಿಕ (ಯಕ್ಷಗಾನ ಪ್ರಸಂಗ), ಇನ್ನೂ ಮುಂತಾದ ರಸಭರಿತ ವಿಷಯಗಳೂ ಚಿತ್ರಗಳೂ ಬರುವವು. ಈ ಸಂಚಿಕೆಯು ಚಂದಾದಾರರಿಗೆ ಮಾತ್ರ ದೊರೆಯುವುದು.

ವಾರ್ಷಿಕ ವರ್ಗಣಿ ರೂ. ೩-೦-೦. ಮಾದರೀ ಸಂಚಿಕೆಯ ಬೆಲೆ ಆ. ೬.

ಡಿ. ಕೆ. ಭಾರದ್ವಾಜ, ವಿದ್ಯಾಭೂಷಣ,
ಭಕ್ತಿ ಸಂದೇಶ ಆಫೀಸು, ಮಂಗಳೂರು, ದ. ಕ.

ಟಿಶ್ಯೂರೆಮಿಡಿಸ್

ಎಂಬ

12 ಜೀವರಸಾಯನಿ ಔಷಧಗಳು

ಮತ್ತು

ಹೋಮ್ಯೋಪೆಥಿಕ್ ಔಷಧಗಳು.

ನಮ್ಮ ಗಿರಾಕಿಗಳ ಅನುಕೂಲತೆ ಬಗ್ಗೆ ವಾರದ ಎಲ್ಲಾ ದಿವಸಗಳಲ್ಲಿ ಬೆಳಗ್ಗೆ 7½ ಘಂಟೆಯಿಂದ ರಾತ್ರೆ 9 ಘಂಟೆ ತನಕ ಸುಲಭವಾದ ದರದಲ್ಲಿ ಮಾರೋಣಾಗುತ್ತವೆ.

ಟಿಶ್ಯೂ ರೆಮಿಡಿಸ್ 2 ಡ್ರಾಮಿನ ಸೀಸೆ 1ಕ್ಕೆ	ರೂ.	0—3—6
„ 4 „	„	0—6—0
„ 1 ಔನ್ಸಿನ	„	0—12—0
ಹೋಮಿಯೋಪೆಥಿಕ್ 2 ಡ್ರಾಮಿನ	„	0—3—6

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
(ಶಾರದಾ ಛಾಪಖಾನೆ)
ರಥಬೀದಿ, ಮಂಗಳೂರು.

The Canara Banking Corporation, Udipi, (Limited).

ದಿ ಕೆನರಾ ಬೆಂಕಿಂಗ್ ಕಾರ್ಪೊರೇಶನ್, ಉಡುಪಿ, ಲಿಮಿಟೆಡ್.

Authorised capital	3,20,000—0—0
Issued capital	50,000—0—0
Subscribed capital	40,200—0—0
Paid up capital	35,134—1—11
Deposits	61,239—12—9
Reserve and other Funds	8,258—9—6

Fixed deposits received for 3, 6, 9 months at 6¼% for 1 year and above at 7% at the discretion of the Managing Committee. In the case of all deposits interest will be paid quarterly

Cummalative deposits are received repayable in 45 months at Rs 50/—per each rupee deposited monthly.

Current a/c deposits opened free of charge and interest will be paid @ 3½% per annum on the lowest balance between the 4th and the last day of each month.

Loans granted on proper securities and pledges

A dividend of 8% has been declared for the last year. Shares are available

Payments to the Corporation may be made to the credit of the Corporation at the Bank of Madras, and Canara Bank Mangalore

ಅಧಿಕಾರಯುಕ್ತ ಮೂಲಧನ ರೂ.	3,20,000—0—0
ಪಾಲುದಾರರಿಗೆ ಅರ್ಪಿಸಿದ ಮೂಲಧನ „	50,000—0—0
ವಂದಾ ಹಾಕಿ ಪತ್ರದ ಮೂಲಧನ ... „	40,200—0—0
ಮೌಲ್ಯ ತೆತ್ತ ಮೂಲಧನ ... „	35,134—1—11
ಠೇವಣಾತಿಗಳು... ... „	61,239—12—9
ಕ್ಷೇಮನಿಧಿ ಮತ್ತು ಇತರ ಫಂಡುಗಳು „	8,258—9—6

ಕಾಯಂ ಠೇವಣಾತಿಗಳು ತಿಂಗಳು 3, 6, 9ರ ಅವಧಿಗಳಿಗೆ ಆಡಳಿತ ಸಭೆಯವರ ಮುನಾಸಬು ಪ್ರಕಾರ ಸಾಲಿಯಾನ್ ಶೇಕಡಾ 6¼% 1 ವರ್ಷಕ್ಕೆ ಮಿಕ್ಕಿದ ಬಾಬಿನಲ್ಲಿ ಶೇಕಡಾ 7% ದರದಲಿ ಬಡ್ಡಿ ಕೊಡೋಣಾಗುವದು. ಎಲ್ಲಾ ಠೇವಣಾತಿಗಳ ಮೇಲಣ ಬಡ್ಡಿ 3 ತಿಂಗಳಿಗೊಮ್ಮೆ ಕೊಡೋಣಾಗುವದು

ಪ್ರತಿ ತಿಂಗಳಿಗೆ ರೂ 1ರ ಪ್ರಕಾರ 45 ತಿಂಗಳುಗಳವರೆಗೆ ವಸೂಲು ಕೊಡುವ ಸಂಚಯದ ಠೇವಣಾತಿಗಳಿಗೆ 45 ತಿಂಗಳ ಅಂತ್ಯದಲ್ಲಿ ಪ್ರತಿ ತಿಂಗಳಲ್ಲಿ ವಸೂಲು ಕೊಟ್ಟ ರೂ 1ಕ್ಕೆ ರೂ 50/ರಂತೆ ವಾಪಸು ಕೊಡೋಣಾಗುವದು

ಚಾಲ್ತಿ ಠೇವಣಾತಿಗಳು ಸಂಘದ ಪರವಾಗಿ ಏನೂ ಖರ್ಚು ಇಲದೆ ಪಡಕೊಳ್ಳೋಣಾಗುವವು ಪ್ರತಿ ತಿಂಗಳ ೪ನೇ ತಾರೀಕಿನಿಂದ ಆಖೈರು ತಾರೀಕುವರೆಗೆ ಯಾವದಾದರೊಂದು ದಿನ ಇರುವ ಅತಿ ಕಡಿಮೆ ಠೇವಣಾತಿ ಮೊಬಲಗಿನ ಮೇಲೆ ಸಾಲಿಯಾನ್ ಶೇಕಡಾ 3½ ದರದಲ್ಲಿ ಬಡ್ಡಿ ಕೊಡೋಣಾಗುವದು

ಯೋಗ್ಯ ಜವಾಬ್ದಾರಿಯು ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತವೆ

ಪಾಲುದಾರರಿಗೆ ಕಳೆದ ವರ್ಷ ಶೇಕಡಾ 8% ದರದ ಬಡ್ಡಿ ಕೊಡೋಣಾಗಿಯದೆ ಶೇರುಗಳು ಮಾರಾಟಕ್ಕೆ ತಯ್ಯಾರಿವೆ

ಸಂಘಕ್ಕೆ ಕೊಡೋಣಾಗುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸು ಬೇಂಕಿನಲ್ಲಿ ಮತ್ತು ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಡಬಹುದು

UDIPi,
18th February 1920

Naimpalli Ananda Rao,
Secretary

ಕೆನರಾ ಕುಂತಳ ತೈಲ.

ಕೂದಲು ಸೊಂಪಾಗಿ ಬೆಳೆಯುವುದಕ್ಕೆ ಅತ್ಯುತ್ತಮವಾದ ತೈಲ. ವೈದ್ಯಶಾಸ್ತ್ರದಲ್ಲಿ ಮುಖ್ಯರಾದ ಕೆಲವರು ಇದನ್ನು ಪರಿಶೋಧಿಸಿ ಶಿಫಾರಸು ಬರೆದಿದ್ದಾರೆ—ಇದಕ್ಕೆ ಸುವಾಸನೆಯೂ ಇದೆ, ಸ್ಮರಣಾಶಕ್ತಿಯನ್ನೂ ವರ್ಧಿಸುತ್ತದೆ, ಮೆದುಳನ್ನು ತಂಪಾಗಿಡುತ್ತದೆ.

ಸೀಸೆಗೆ ಬೆಲೆ ೧ ರೂಪಾಯಿ.

ಟಿ. ಸಿ. ಶಾಹಾ ಮತ್ತು ಕಂಪೆನಿ,
ಚೀನಾಬಜಾರ್, ಮದ್ರಾಸ್.

ಲೂಯಿಸರ ಎಲಿಕ್ಸಿರ್ ಫೊರ್ ಹೆಲ್ತ್

ಎಂಬುವ ಪಾನಕವು ಚಾ ಮತ್ತು ಕಾಫಿಗಳಿಗಿಂತ ಅತ್ಯಂತ ಹಿತಕರವಾದ ಪಾನವಾಗಿದ್ದು ಬಹುಮೂತ್ರಪೀಡೆ ಬಾರದಂತೆ ಆರೋಗ್ಯ ಕಾಪಾಡುತ್ತದೆ, ಬಾಯಾರಿಕೆ ತಗ್ಗಿಸುತ್ತದೆ ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ

8 ಔನ್ಸಿನ ಸೀಸೆಗೆ ಕ್ರಯ ರೂ 1—4—0 ಮಾತ್ರ

ಡಾಯಬೆಟೂನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ. ಪೂರ್ಣ ಗುಣಮಾಡುತ್ತದೆ. ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸೆಗೆ ರೂ. 2 ಮಾತ್ರ ಅಂಚಹಾಸಲು ವಗೈರೆ ಇದರಲ್ಲಿ ಸೇರಿಲ್ಲ ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವುವು

P. M. Kamath & Co.,
Chemists & General Merchants,
New Court Road, MANGALORE

ಅಥವಾ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಮಿ| ಕೆ ಆರ್ ಲೂವಿಸರನ್ನು ವಿಚಾರಿಸಿದರೆ ಈ ಔಷಧವನ್ನು ಹೊಂದಬಹುದು

ಮಲೆಜ್ವರ

ಮಲೆಜ್ವರಹಾರಿ

ಮಲೆಜ್ವರ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಪರಿಹಾರ ಬೆಲೆ ೧೨ ಆಣೆ

ವಿಷಮಯವಾದ ಪದಾರ್ಥಗಳು ಒಂದು ರೋಗ ನಿವಾರಣೆಗೆ ಸಹಕಾರಿಯಾದರೂ ಇನ್ನೊಂದು ರೋಗಕ್ಕೆ ಎಡೆಕೊಡುತ್ತವೆ ಅಂಥ ವಿಷಮಯವಾದ ಪದಾರ್ಥಗಳು ಇದರಲ್ಲಿ ಲವಮಾತ್ರವೂ ಇಲ್ಲ

ಹಿಂದುಸ್ಥಾನ, ಬರ್ಮಾ, ಸಿಂಹಳ ಮುಂತಾದ ಪ್ರದೇಶಗಳ ಬೇರೆ ಬೇರೆ ಕೊನೆಗಳಿಂದಲೂ ಕಳೆದ ೩೦ ವರ್ಷಗಳಲ್ಲಿ ಅಸಂಖ್ಯಾತವಾದ ಶಿಫಾರಸು ಪತ್ರಗಳು ನಮಗೆ ಬಂದಿವೆ

ಪೂನೆಯ ಕೃಷಿಕಾಲೇಜಿನ ಅಧ್ಯಾಪಕರಾದ ಡಾ| ವಿ ಎಂ ಹೇಬರು ಈ ರೀತಿಯಾಗಿ ಬರೆದಿರುತ್ತಾರೆ — "ಬೇರೆ ಬೇರೆ ವಿಧದ ಜ್ವರಗಳ ಸಂದರ್ಭದಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ ಆಶ್ಚರ್ಯ ಕ್ಷಿಪ್ರದಲ್ಲಿ ಗುಣಾಂಶ ಸಿಕ್ಕಿತು"

ನಮ್ಮ ಏಜಂಟರು ಈ ಮೊದಲೆ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು ಕಮಿಶನ್ ಮುಂತಾದ ಶರ್ತಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು

ಕರ್ಣಾಟಕ ಬ್ರದರ್ಸ್,
56 ಗಿರಗಾಂವ, ಮುಂಬಯಿ

Agent —The Woollen Mart, *Mangalore.*

ಸದ್ಬೋಧಕ ಗ್ರಂಥಮಾಲೆ.
(ತ್ರೈಮಾಸಿಕ ಪುಸ್ತಕ)

೧೯೨೦ನೇ ಜನವರಿಯಿಂದ ಆರಂಭ — ವಾರ್ಷಿಕ ಚಂದಾ ಅಂಚೆ ಸಹಿತ ರೂ 1 ಮಾತ್ರ

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ ಕಾದಂಬರಿ, ನಾಟಕ, ಕಾವ್ಯ, ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ, ಉಲ್ಲೇಖನ, ವಿನೋದಲಹರಿ, ಸ್ಥಳೀಯವಾರ್ತೆ, ವಿಮರ್ಶೆ ಮತ್ತು ಸ್ವೀಕಾರ ಇತ್ಯಾದಿ ಲೇಖನವೂ ಪ್ರಕಟವಾಗುವವು ಸಮಸ್ತ ಕನ್ನಡಿಗರಿಗೂ ಸಂಗ್ರಹಿಸಿಕೊಳ್ಳಲು ಅತ್ಯಾದರಣೀಯವಾಗಿರಬೇಕೆಂದೇ ವಾರ್ಷಿಕ ಚಂದಾ ಅಂಚೆವೆಚ್ಚದೊಡನೆ ಒಂದೇ ರೂಪಾಯಿ ಇಟ್ಟಿರುವೆವು ಈಗಲೇ ತಮ್ಮ ಹೆಸರನ್ನು ತಿಳಿಸಿ, ವರ್ಗಣಿದಾರರಾಗಿ ಸೇರುವುದರ ಮೂಲಕ ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ

ವಿಳಾಸ:— ಎಸ್ ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ,
"ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ).

ಅಥವಾ — **S R Hebbar & Bros,**
General Merchants, SURATKAL, S K

ಮದನಮಂಜರಿ ಮಾತ್ರೆ

ಈ ಮಾತ್ರೆಗಳನ್ನು ಉಪಯೋಗಿಸುವದರಿಂದ ಧಾತುವು ಹೋಗುತ್ತಿದ್ದರೂ, ಧಾತುವು ಕಟ್ಟಿಹೋಗಿದ್ದರೂ ಬಹು ಬೇಗನೆ ಗುಣಮಾಡುವದು ರಕ್ತವನ್ನು ಶುದ್ಧಿಮಾಡಿ, ನರಗಳಿಗೆ ಬಲವನ್ನು ಕೊಟ್ಟು, ಹಸಿವನ್ನು ಹೆಚ್ಚಿಸುವದು ಕೈಕಾಲು, ಸೊಂಟದ ನೋವುಗಳನ್ನು ಕೂಡಲೆ ಖಂಡಿಸುವದು ಹಳೆಯ ತಲೆನೋವುಗಳನ್ನು ಸಹ ಬೇಗನೆ ನಿವಾರಣೆ ಮಾಡುವದು



ಕ್ರಯ ೪೦ ಮಾತ್ರೆಗಳ ಡಬ್ಬಿ ೧ಕ್ಕೆ ೧—೦—೦

ವಿಳಾಸ — ಮದನಮಂಜರಿ ಫಾರ್ಮಸಿ,
೨೭ ಚೈನಾಬಜಾರು ರೋಡು, ಮದರಾಸು

ಕರ್ಣಾಟಕ ಮಹಾಶಯರೇ ಓದಿದಿರಾ!

ಮಾನವ ಜಾತಿಯವರ ಶರೀರದ ಮರ್ಮಗಳನ್ನು ಬೋಧಿಸುವ

ಕಾಮಶಾಸ್ತ್ರ ಎನ್ನುವ ಶರೀರ ಮರ್ಮಶಾಸ್ತ್ರ

ಇಲ್ಲದಿದ್ದರೆ, ಮರುಟಪ್ಪಾಲಿಗೇನೇ ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಈ ಶಾಸ್ತ್ರವು ಫ್ರೆಂಚ ಇಂಗ್ಲಿಷ, ಅಮೇರಿಕನ ಮೊದಲಾದ ಶಾಸ್ತ್ರಗಳಿಂದ ಕನ್ನಡಕ್ಕೆ ಭಾಷಾಂತರ ಮಾಡಲ್ಪಟ್ಟಿದೆ ಮಾನವ ವರ್ಗದವರಿಗೆ ಬೇಕಾದ ಎಲ್ಲಾ ರಹಸ್ಯಗಳು ವೀರ್ಯವೃದ್ಧಿಸುವದಕ್ಕೆ ಕಾರಣಗಳು, ಗರ್ಭಿಣಿ ಅನುಸರಿಸುವ ವಿಧವೂ ಗರ್ಭಿಣಿಗೆ ಬೇಕಾದ ಮರ್ಮಗಳು ನವಮಾಸದ ಪಿಂಡದ ವಿವರಗಳು ಶಿಶು ಉತ್ಪತ್ತಿ ವಿಧಿ ಶಿಶು ಸಂರಕ್ಷಣೆ ಮಾಡುವ ವಿಧ ಸ್ತ್ರೀಧರ್ಮನೀತಿಗಳು ಮಾಸ ಋತುದೋಷಗಳು, ಧಾತುರೋಗ ಶಾಸ್ತ್ರ (ಗುಪ್ತವೈದ್ಯ) ಪ್ರತಿಯೊಂದು ಕುಟುಂಬದಲ್ಲಿಯೂ ಸಂಭವಿಸಬಹುದಾದ ಸ್ತ್ರೀಪುರುಷರ ಮರ್ಮರೋಗಗಳ ಗರ್ಭಿಣಿಯಾದ ಸ್ತ್ರೀಯರಿಗುಂಟಾಗುವ ರೋಗಗಳನ್ನು ಪರಿಹರಿಸಿ ಗರ್ಭಾಶಯಕ್ಕೆ ಶಕ್ತಿಯನ್ನುಂಟು ಮಾಡುವ ಔಷಧಗಳೂ ಇನ್ನೂ ಶರೀರದ ಭಾಗಗಳ ೬೦ ಚಿತ್ರಗಳ ಸಹಿತ ಗ್ಲೇಜು ಕಾಗದದಲ್ಲಿ ಪ್ರಿಂಟು ಆಗಿ ಮಾರಾಟಕ್ಕೆ ತಯಾರಾಗಿದೆ ಕ್ರಯ ಪ್ರತಿ ೧ಕ್ಕೆ 12 ಆಣೆ

ಕೊನೆಯ ಪ್ರತಿಯಲ್ಲಿ ಇನ್ನು ಕೆಲವು ಪ್ರತಿಗಳು ಮಾತ್ರ ಉಳಿದಿವೆ

ಕೋಲ (ಮೊಗ್ಗು) ಮತ್ತು ಪಾಕಶಾಸ್ತ್ರ



ಈ ಪುಸ್ತಕದಲ್ಲಿ ನವೀನ ೧೦೦ ಕೋಲ ಚಿತ್ರಗಳೂ ಅಡಿಗೆ ಮಾಡುವ ವಿಧ ಪದಾರ್ಥಗಳೂ ಮತ್ತು ವಿಧಾಯ ದಿನುಸುಗಳೂ (Sweetmeats) ಪ್ರಸಾದಗಳೂ, ಕೇಕುಗಳೂ, (Cakes) ಬಿಸ್ಕಟ್ ಗಳೂ (Biscuits) ಪರಬತ್ (Syrup) ಉಪ್ಪಿನಕಾಯಿಗಳ ವಿಧಾನಗಳ ಮೊದಲಾದ ದಿನಸುಗಳನ್ನು ಮಾಡುವ ವಿಧಗಳು ಇದರಲ್ಲಿ ಅಡಗಿವೆ ಪ್ರತಿ ಒಬ್ಬ ಸ್ತ್ರೀಗೂ ಅವಶ್ಯವಾಗಿ ಬೇಕಾದ ಪುಸ್ತಕ ಕ್ರಯ ಆಣೆ ೬

ವಿಳಾಸ — ಮಹಾರಾಜ ಪುಸ್ತಕಶಾಲೆ,
೧೭ ಅರುಣಾಚಲ ಮೊದಲಿ ಬೀದಿ ಸಾಹುಕಾರ್ ಪೇಟೆ ಮದರಾಸ್

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ

ಅನೇಕ ಉತ್ತಮವಾದ ವನಸ್ಪತಿ ಔಷಧಿಗಳಿಂದ ಮಾಡಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಗಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ದೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಸೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಕಂಕನಾಡಿ ಮಂಗಳೂರು.

ಇಕ್ಸ್ನಗಂಧಾ ಜೀವನ ಪ್ರೇದಕ

ಅತ್ಯಂತ ಧಾತುಪೌಷ್ಟಿಕ ಕಾಮೋದ್ದೀಪಕ, ವೀರ್ಯವರ್ಧಕ, ಸ್ಮರಣಶಕ್ತಿದಾಯಕವಾದ ಉತ್ತಮ ಪಾಕ ಈ ಪಾಕದಿಂದ ಧಾತುಕ್ಷೀಣತೆಯಿಂದ ಉಂಟಾಗುವ ಎಲ್ಲ ವಿಕಾರಗಳ ಕೂಡಲೆ ನಿಂತುಹೋಗುವವು ಯಾವ ಕಾರಣದಿಂದಲೂ ಹೋದ ಶಕ್ತಿಯು ಈ ಪಾಕದ ಸೇವನೆಯಿಂದ ಪುನಃ ಉಂಟಾಗುತ್ತದೆ ದೂಷಿತವಾದ ರಕ್ತವು ಕೂಡ ಇದರಿಂದ ಶುದ್ಧವಾಗಿ ರಕ್ತವೃದ್ಧಿಯಾಗುತ್ತದೆ ಹಸಿವೆಯಾಗುತ್ತದೆ ಯಕೃತ (ಲಿವ್ಹರ) ಮತ್ತು ಪ್ಲೀಹಾ (ಸ್ಪ್ಲೀನ್) ಇವುಗಳ ಅತ್ಯ ತಿಯು ಬೆಳೆದಿದ್ದರೆ ಅದು ಕಡಿಮೆಯಾಗುತ್ತದೆ ಅಶಕ್ತತೆಯಿಂದ ಉಂಟಾಗುವ ನಸ್ಸಿನ ದುರ್ಬಲತೆ ಕಣ್ಣುಕತ್ತಲೆಯಾಗುವದು, ಕೈಕಾಲುಗಳ ಉರಿ ಮತ್ತು ಅವು ನುರಿದುಬರುವುದು ಸ್ವಲ್ಪ ಕೆಲಸದಿಂದಲೆ ದಣಿವುಂಟಾಗುವದು ಈ ಮೊದಲಾದ ಎಲ್ಲ ವಿಕಾರಗಳು ಇದರಿಂದ ಹೋಗುತ್ತವೆ ಹಾಗು ಮೇಲಿಂದಮೇಲೆ ನೆಗಡಿಯುಂಟಾಗುವದು ಹಳೆ ಕೆಮ್ಮು ಕ್ಷಯರೋಗದ ಪೂರ್ವಾವಸ್ಥೆಯು ಕೂಡ ಇದರಿಂದ ನಿಂತುಹೋಗುತ್ತವೆ ಡಾ ದೇಸಾಯಿ ಎಮ್ ಬಿ (ಲಂಡನ್) ಬಿ ಎಸ್ ಎಲ್ ಎಮ್ ಎಸ್ ಮೆಡಲಿಸ್ಟ್ ಪ್ರಾಯೋಜಿವನ್ ಎಂಡ್ ಒನರ್ ಇವರು ತಮ್ಮ ಉಪನ್ಯಾಸದಲ್ಲಿ ಹೇಳುತ್ತಾರೇನಂದರೆ — ಇಕ್ಸ್ನಗಂಧಾ ಇವಕ್ಕೆ ಆಯುರ್ವೈದ್ಯಕದೊಳಗಿನ ಒಂದು ಕೊಡುಗೆ ಎಂದೆ ಹೇಳಬಹುದು ಇದರಿಂದ ಶರೀರ ಪುಷ್ಟಿ, ರಕ್ತವೃದ್ಧಿಯಾಗಿ ಜೀವನ್ನು ನಷ್ಟವಾಗುತ್ತದೆ ಜೀರ್ಣಜ್ವರ ನಾಶವಾಗುತ್ತದೆ ಕೊಡ್ಲಿವರಿಎಲ್ಗಿಂತ ಇದರ ಸೇವನೆಯಿಂದ ಶರೀರದ ಭಾರವು ಇಮ್ಮಡಿಯಾಗುತ್ತದೆ, ಶರೀರಸ್ಥಿತಿಯು ಒಳ್ಳೆದಾಗುತ್ತದೆ ಒಳ್ಳೆದಾಗುತ್ತದೆ" ಇತ್ಯಾದಿ—

ಕ್ರಯ — ಅರ್ಧ ಪೌಂಡಿನ ಡಬ್ಬಿಗೆ ರೂ ೧, ೪, ೦ ಒಂದು ಪೌಂಡಿನ ಡಬ್ಬಿಗೆ ರೂ ೨, ೮ ೦ ಮೋಸ್ತಲಾಸ

ಮೇನೇಜರ,
ಶ್ರೀಸಮರ್ಥ ಆಯುರ್ವೇದೀಯ ಔಷಧಾಲಯ, ಗದ್ದಕೇರಿ,
ಮಂಗಳೂರು, ದ. ಕನ್ನಡ.

ಆರ್. ಮಾರ್ಟಿನ್ಸರ ಲಪ್ಸಾ ಎಣ್ಣೆ.

ಇದರ ವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನವರೆಗೂ ಇರುತ್ತದೆ ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ, ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ ಕೂದಲುಗಳಲ್ಲಿರುವ ಹೇನುಗಳ ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳುತ್ತಾರೆ

ಕ್ರಯ ಬಾಟ್ಲಿ ೧ಕ್ಕೆ ರೂಪಾಯಿ ೧—೪—೦.

ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಲಿ ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡವಿರಿ ಎಲ್ಲಾ ವಿಧವಾದ ಕೆಮ್ಮಲಿಗೂ ರಾಜಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧—೪—೦

ಆರ್ ಮಾರ್ಟಿನ್ಸರ ಗ್ಲಿಟೋಡಾಯಿನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ, ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಖಲು ಸಾಗಿ ನಿರ್ಮಲವಾಗುವುದಲ್ಲದೆ ರೋಗದ ಪತ್ತನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ. ಸೀಸೆ ಒಂದಕ್ಕೆ ರೂ. ೨—೮—೦!

ವಿಳಾಸ:— ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ ಪ್ರೇಯರ್ ರೋಡ್,
ರೈಟ್ ಎಂಡ್ ಕೋ ಹತರ, ಫೋರ್ಟ್, ಮುಂಬಯಿ.

R. D. Kately & Co.
No. D. Frere Road,
Near Wright & Co Fort, Bombay.

THE WORD RENOWNED
HAARLEM OIL.
(Genuine Dutch Produce)

A Domestic remedy of extraordinary merits that has stood the test of centuries. A Panacea against all human ailments.

ಲೋಕಪ್ರಸಿದ್ಧವಾದ ಹಾರ್ಲೆಮ್ ತೈಲ.

SUPPLY EXPECTED SHORTLY

Register your orders immediately against disappointment.

CAPABLE AGENCY WANTED.

Prices & particulars from—

The Bombay Stores,
Humpankatta, MANGALORE.

ದರ್ಬಾರ್ ಸೋಪು,

ಈ ಸೋಪನ್ನು ಉಪಯೋಗಿಸಿದರೆ ಒಂದು ಘಮಘಮ ವಾಸನೆಯ ಶಕ್ತಿಯಿಂದ ಶ್ವೇತವಾಗಿ ಕೊಂಡದ್ದಕ್ಕೆ ಚರ್ಮ ಮೃದುವಾಗಿ ಯಾವ ತೊಂದರೆಯೂ ಇಲ್ಲದೆ ಕೊಳೆಯನ್ನು ತೆಗೆಯುವದು.

ನಮ್ಮ ದರ್ಬಾರ್ ಸೋಪು.

ಗಂದೆ, ಮೊಡವೆ, ಬಕ್ಕ, ತುರಿ, ತವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯ ಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	ರೂ. 0–14–0.
ಒಂದೇಸಲ 2 ಪೆಟ್ಟಿಗೆ ತರಿಸಿಕೊಂಡರೆ	„ 1–10–0.
ವಿಲಾಯತಿ ರ್ಪೋಸ್ಟೇಜು ಖರ್ಚು	„ 0– 8–0.

ವಿಳಾಸ— ವೈರಂ ಅಂಡ್ ಕೊ,
ಇರುಳಪ್ಪನ ಬೀದಿ, ಮದರಾಸು.

Prize Books! ಬಹುಮಾನ ಪುಸ್ತಕಗಳು. Prize Books!!

ಮೈಸೂರು ಸರಕಾರದ ವಿದ್ಯಾಭ್ಯಾಸದ ಇಲಾಖೆಯವರಿಂದ Prize Books, ಆಗಿ ಅಂಗೀಕೃತವಾದ ಪುಸ್ತಕಗಳು ಪ್ರತಿಯೊಬ್ಬ ಕರ್ನಾಟಕ ಬಾಲಕನೂ, ಬಾಲಿಕೆಯೂ ತಪ್ಪದೆ ಓದಬೇಕು. ತಿಳಿಗನ್ನಡ ಭಾಷೆ, ಸುಲಭ ಶೈಲಿ, ಬೆಲೆ ಅತಿ ಸುಲಭ. ಚಂದ್ರಹಾಸ, ಧ್ರುವ, ಪ್ರಹ್ಲಾದ, ಹರಿಶ್ಚಂದ್ರ ಪ್ರತಿಯೊಂದಕ್ಕೆ (೦—೨—೦. ವಿನಾಯಕ, ನವರೋಚಿ (೦—೧—೦) ಮತ್ತು ಸಾವಿತ್ರಿ, ಮಹಿಳಾ ಸುನೀತಿ ಶತಕ (೦—೨—೦).

ಉಪಾಧ್ಯಾಯರುಗಳಿಗೂ, ಪುಸ್ತಕ ವ್ಯಾಪಾರಿಗಳಿಗೂ, ಭಾರಿ ಆರ್ಡರುಗಳ ಮೇಲೆ ಧಾರಾಳವಾದ ಕಮಿಷನು ಉಂಟು.

ಈ ದಿನವೇ ಬರೆಯಿರಿ.

ವಿಳಾಸ:—ಮ್ಯಾನೇಜರ್,
ಸುಬೋಧ ಕುಸುಮಾಂಜಲಿ ಗ್ರಂಥಮಾಲಾ ಕಾರ್ಯಾಲಯ,
2. ಕ್ಲಾರ್ಕ್ಸ್ ಪೇಟೆ, ಸಿ. ಬೆಂಗಳೂರು, ದಂಡು.

ಕೇಸರೀಯವರ ಅತ್ಯುತ್ತಮವಾದ ಮೂರು ಔಷಧಗಳು.

ಲೋಧ್ರ

ಅಥವಾ

ಗರ್ಭಾಶಯ ರೋಗ ನಿವಾರಣಿ:—ಇದು ಸ್ತ್ರೀಯರ ದೇಹ ಪ್ರಕೃತಿಯಲ್ಲಿ ಉಂಟಾಗುವ ವಿವರಿಸಲಸದಳವಾದ ಯಾವತ್ತೂ ರೋಗಗಳನ್ನು ಖಾತ್ರಿಯಾಗಿ ಗುಣಪಡಿಸುವುದು.

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ. 3; ಸಣ್ಣದಕ್ಕೆ ರೂ. 1-10-0.

ಅಮೃತ

ಅಥವಾ

ರಕ್ತ ಶುದ್ಧೀಕರಣಕ್ಕೆ ದಿವ್ಯ ಔಷಧ:—ಇದನ್ನು ತೆಗೆದುಕೊಳ್ಳುವುದರಿಂದ ನೀರಕ್ತತ್ವ (ರಕ್ತವು ಕೆಟ್ಟುಹೋಗುವಿಕೆ) ಅಜೀರ್ಣ, ಮಲಬದ್ಧತೆ, ನಿತ್ರಾಣ, ಶಿರೋಭ್ರಮಣ, ಜ್ಞಾನದುರ್ಬಲತೆ ಮುಂತಾದುವು ಪರಿಹಾರವಾಗುತ್ತವೆ.

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ. 3; ಸಣ್ಣದಕ್ಕೆ ರೂ. 1-10-0.

ಅರ್ಕ

ಎಂಬ

ಜ್ವರ ಸಂಹಾರಕ್ಕೆ ರಾಮಬಾಣ:—ಈ ಔಷಧಿಯ ಒಂದೆರಡು ತಟಕುಗಳನ್ನು ಸೇವಿಸುವುದರಿಂದ ಇನ್‌ಫ್ಲುಯೆಂಜಾ ಮುಂತಾದ ಸಕಲ ಜ್ವರಗಳೂ ನಿವಾರಣೆಯಾಗುವುವು.

ಕ್ರಯ ಬಾಟ್ಲಿ 1ಕ್ಕೆ ರೂ. 1—8—0.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೇಸರೀ ಕುಟೀರಂ,
ಆಯುರ್ವೇದ ಔಷಧಾಲಯ,
33 ಪೋಲೀಸು ಕಮಿಷನರ ಆಫೀಸು ರಸ್ತೆ,
ಎಗ್ಮೋರ, ಮದರಾಸ್.

ಬ್ರಾಂಚ್ ಆಫೀಸು:— 9 ಬಂದರ್ ಸ್ಟ್ರೀಟ್,
ಜಾರ್ಜಟೌನ್, ಮದರಾಸ್.

ಕೂತಲ್ಲಿಗೆ ಬರುವದು

ಯಾವುದೊಂದು ಖರ್ಚಿಲ್ಲದೆ ಪಂಚವರ್ಣಗಳಿಂದ ತಯಾರಿಸಿದ

1920ನೆಯ ಇಸವಿ ಕ್ಯಾಲಂಡರ್.

ಟಪ್ಪಾಲು ಮತ್ತು ಪೇಕಿಂಗ್ ಖರ್ಚಿಗಾಗಿ ೨ ಆಣೆಯ ಟಪ್ಪಾಲು ಸ್ಟಾಂಪನ್ನು ಕಳುಹಿಸಿರಿ.

ವಿಳಾಸ:—

ವಿ. ಎ. ಎಸ್. ಪಾಣಿ ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

NETRANAND SAREES

Cheap and Fashionable

Sarees in all brilliant colours with lustrous borders.

Liberal Commission for wholesale Orders.

ಚಲೋ ಬಣ್ಣದ ಶೀರೆಗಳು! ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಛಾಪಾಹೊಡೆದ "ನೇತ್ರಾನಂದ" ತರವಾದ ಶೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ.

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಸಿಕ್ಕುವದು.

ನೂತನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಮ್ಮಿಕ್ರಯದಲ್ಲಿ ದೊರಕುವವು.

ವಿಶೇಷ ಮಾಹಿತಿಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶ್ರೀ ಶೀತಾರಾಮವಿಠ್ಠಲ ಕಂಪೆನಿ,
ಮಿಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟೆ ಮಂಗಳೂರು.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹೋಲ್

ಬಹು ನೂತನ ಅಲೋಪತಿ ಮತ್ತು ಹೊಮಿಯೊಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!
ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್‌ಪೆನ್‌ಗಳೂ, ಥರಮಾಮಿಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಫೊಮೆಂಟೇಶನ್ ಚೀಲಗಳೂ, ಐಸ್‌ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸಕ ಸಾಮಗ್ರಿಗಳೂ ಸ್ಟವ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ, ನೀಲಗಿರಿಯ ಎಣ್ಣೆ ಎಂಬ ಯೂಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು.

ಹೊಮಿಯೊಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಿಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೊಮಿಯೊಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆಮಾಡಿ ಧರ್ಮಾರ್ಥವಾಗಿ ಕೊಡುವೆವು.

☞ ಔಷಧಗಳನ್ನು ಶಾಸ್ತ್ರೋಕ್ತವಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರಿರುವರು.

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ! ನಗದಿ ವ್ಯಾಪಾರ! ರೋಗಗಳು ಗುಣವಾಗುವುದು ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ಕಣ್ಣು ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುಣವುಳ್ಳ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ನೂರು ವರೆ ತಯಾರಿವೆ. ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದ್ದಲ್ಲಿ ತಿಳಿದು ಬರುವುದು.

ವೈದ್ಯಶಾಲೆಯ ವ್ಯಾಲಿಕರೂ ಮೇನೇಜರೂ ಆದ ದಾಮೋದರ ನಂಬೀಶನರು ಆದಿತ್ಯವಾರ ಹೊರತು ಬಾಕಿ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದೇ ಪರಿಶೋಧಿಸಿ, ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವರೆ ಸಿದ್ಧರಾಗಿರುವರು. ಇದರ ಬ್ರಾಂಚು ಮಂಗಳೂರು ರಥಬೀದಿಯಲ್ಲಿ ತೆರೆದಿರುವುದರಿಂದ ಸದರಿ ಎಲ್ಲಾ ಔಷಧಗಳು ಸದರಿ ಬ್ರಾಂಚಿನಲ್ಲಿ ಕೂಡಾ ಬೇಕಾದಷ್ಟು ಸಿಕ್ಕುವವು. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ. ಪಿ. ಮೂಲಕ ಕಳುಹಿಸಲಾಗುವುದು.

೧. ಅಮೃತಾರಿಷ್ಟ—ಇದು ಎಲ್ಲಾ ತರದ ವಿಷಮಜ್ವರ (ಇನ್‌ಫ್ಲುಯೆಂಜಾ) ಒಳಜ್ವರ ಪುರಾಣಜ್ವರ ಇವುಗಳ ಮೇಲೆ ರಾಮಬಾಣದಂತಿರುವುದು. ರಕ್ತಶುದ್ಧಿಗೆ ಸಿದ್ಧೌಷಧ. ೧೨ ಔನ್ಸಿನ ಬಾಟ್ಲಿ ೧ರ ಕ್ರಯ ರೂ. ೧—೧೦—೦.

೨. ವೀರ್ಯಪ್ರಸಾದ ವಟಿ—ಇದು ಸ್ವಪ್ನೇಂದ್ರಿಯದಿಂದ ನರಳುತ್ತಿರುವ ಮನುಷ್ಯರಿಗೆ ಅಮೃತವಂತಿರುವುದು. ೨೪ ಮಾತ್ರೆ ಇರುವ ಸೀಸೆ ೧ಕ್ಕೆ ಕ್ರಯ ರೂ. ೧.

೩. ನವನೀತಮಧುಸ್ನುಹಿ—ಇದು ಶಿರಂಗವ್ಯಾ(ಲಿಥಿ ಸಿಫ್ಲಿಸ್) ಮೇಹ ಮುಂತಾದ ರೋಗಗಳನ್ನು ಒಳ್ಳೇ ರೀತಿಯಿಂದ ಗುಣಪಡಿಸುತ್ತದೆ. ೨೪ ತೊಲೆ ಇರುವ ಡಬ್ಬಿ ೧ಕ್ಕೆ ಕ್ರಯ ರೂ. ೩.

೪. ವಿಷೂಚಿಕಾ ಸಂಹಾರಿ—ಎಂಬ ವಾಂತಿಭೇದಿ ಮಾತ್ರೆ. ಈ ಮಾತ್ರೆಯ ಸೇವನೆಯಿಂದ ಎಂಥಾ ಕಠಿಣ ತರವಾದ ವಾಂತಿಭೇದಿಯೂ ನಿಂತು ಹೋಗುವುದು. ೨೪ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ರೂ. ೧—೦—೦.

೫. ನಯನದ್ಯುತಿ—ತಿಮಿರ, ಉರಿಗಣ್ಣು, ನೀರು ಬರುವಿಕೆ ಮೊದಲಾದ ಕಣ್ಣಿನ ಎಲ್ಲಾ ರೋಗಗಳನ್ನು ಗುಣಪಡಿಸುವ ಸಿದ್ಧೌಷಧವು. ಅರ್ಧ ಔನ್ಸಿನ ಸೀಸೆ ೧ರ ಕ್ರಯ ರೂ. ೧—೦—೦.

೬. ನಯನಾಮೃತ—ಕಣ್ಣು ತುರಿಸುವಿಕೆ, ದೃಷ್ಟಿಮಾಂದ್ಯ, ಇರುಳುಗಣ್ಣು, ಕೀವು ಬರುವುದು. ತಿಮಿರ ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನು ಬಹು ಜಾಗ್ರತೆಯಾಗಿ ಗುಣಪಡಿಸುವುದು. ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ. ೧—೦—೦

ವೈದ್ಯರ್ ವಿ. ಕೆ. ದಾಮೋದರ ನಂಬೀಶನ್
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡಾ.

ಇನ್‌ಫ್ಲುಯೇನ್ಜಾ ಜ್ವರಕ್ಕೆ

ಎಮ್ಕೊ.

ಖಾತ್ರಿ ಚಿಕಿತ್ಸೆ!

ಇನ್‌ಫ್ಲುಯೆನ್ಜಾ, ನಮೋನಿಯಾ, ಮಲೇರಿಯಾ, ಸಾಧಾರಣ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ವಿಷಮ ಜ್ವರ, ಕೆಮ್ಮು, ಶೀತ, ಮೊದಲಾದ ಜಾಡ್ಯಗಳಿಗೆ ಖಾತ್ರಿ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ ನಾವು ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಖಾತ್ರಿ ಔಷಧಿಯನ್ನು ಈಗತಾನೇ ಪ್ರಚಾರಕ್ಕೆ ತಂದಿರುತ್ತೇವೆ. ಮೇಲಿನ ಜಾಡ್ಯಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬದಕ್ಕೆ ಕಳೆದ ಕೆಲವು ವರ್ಷಗಳಿಂದ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ.

ಎಮ್ಕೊ. ಇದು ಎಲ್ಲಾ ರೋಗಾಣುಗಳನ್ನು ಕೊಂದು, ಅವುಗಳ ವಿಷವನ್ನು ನಾಶಪಡಿಸಿ, ಇನ್‌ಫ್ಲುಯೇನ್ಜಾ, ನಿಮೋನಿಯಾ ಮತ್ತು ಅವುಗಳಂತಿನ ಇತರ ಸೋಂಕು ರೋಗಗಳು ಹಬ್ಬದಂತೆ ತಡೆಕಟ್ಟಿ ಅದು ಉಲ್ಬಣವಾಗದಂತೆ ಮಾಡುತ್ತದೆ.

ಎಮ್ಕೊ. ಇದು ಇನ್‌ಫ್ಲುಯೇನ್ಜಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ.

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಿಗಳ ಕೂಟದಿಂದ ಅತಿ ಜಾಗರೂಕತೆಯಿಂದ ತಯಾರಿಸಿರುತ್ತದಾದಕಾರಣ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನ್ನು ಕೊಡಬಹುದು. ಹೆಂಗಸರೂ, ಮಕ್ಕಳೂ ಭಯಭೀತಿ ಇಲ್ಲದೆ ಸೇವಿಸಬಹುದು.

ಎಮ್ಕೊ. ಇದಲ್ಲದೆ ಇದು ಕಾಲರಾ ರೋಗಗಳನ್ನು ಗುಣಪಡಿಸುತ್ತದೆ.

ಕ್ರಯ ಸೀಸೆ ೧ರ ರೂ. ೦—೧೨—೦ ಮಾತ್ರ. ವಿ. ಪಿ. ಬೇರೆ.

ಪ್ರಾಮುಖ್ಯ ಏಜಂಟರು:— ದಿ ಇಕ್ವಿಟಾ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

[illegible] ಬ್ಯಾಂಕ ಲಿಮಿಟೆಡ್, ಬೆಂಗಳೂರು.

[illegible] JULY 1906. — 1906ನೇ ಜುಲೈ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

[illegible] fully paid [illegible] up Capital Rs. 300,000—0—0 — ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0

[illegible] and other sinking Funds „ 138772—0—2 — ಕ್ಷೇಮನಿಧಿ ಮತ್ತು ಇತರ ಫಂಡುಗಳು „ 138,772—0—2

THE BANK RECEIVES FIXED, CURRENT ACCOUNT, & SAVINGS BANK DEPOSITS.

[illegible] ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ತೆಗೆದುಕೊಳ್ಳಲಾಗುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರೆಕೊಳ್ಳುವದು.

[illegible] Bank Ltd.,
[illegible], 10th May 1920

K. Venkat Rao,
Secretary.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ 12, 5,-3, 2 8-0, 1-0-0

ಅರಗಜ ಮತ್ತು ಬಿಲ್ಲೆಗಳು. ತೊಲ 1ಕ್ಕೆ ರೂ 3, 2, 1

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಜೇಷ್ಠಿಗೆ ಸಂಜೀವನವಾದ ಧೂಪ ಇದಕ್ಕಿಂತಲೂ ಬೇರೆ ವಿಧವಾದ [illegible] ಇಲ್ಲ. ಟಿನ್ 1ಕ್ಕೆ 8 ಆಣೆ

ಜವಾದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ

ಡಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ ಇದು ಗಂಧದ ಎಣ್ಣೆಯನ್ನು ಬಿಟ್ಟು ಯಾವಾಗಲೂ ಕೆಡದಂತೆ [illegible] ಸುವಾಸನೆಯಾಗಿ ತಯಾರಿಸಿರುತ್ತೆ 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ಲೆವೆಂಡರ್. ಶೀಸೆ 1ಕ್ಕೆ 1—4—0

ವರ್ಷ [illegible] ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ ಈ ಮೇ [illegible] ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಬಿಕರಿಗೆ ಸಿದ್ಧವಾಗಿರುತ್ತವೆ

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

[illegible] [illegible] [illegible] ಔಷಧ [illegible] [illegible] [illegible]

1. [illegible] — ಇದರ ಸೇವನೆಯಿಂದ [illegible] ಶಕ್ತಿ, [illegible] ಧಾತುಪುಷ್ಟಿಯಾಗುತ್ತದೆ. 24 [illegible] 1ಕ್ಕೆ ರೂ. 3.

2. ಮಧುಮಾಧವ [illegible] — [illegible] ಇದನ್ನು 12 ದಿವಸ ಸೇವಿಸಿದರೆ [illegible] 2 [illegible] ಮಧುಮಾಧವ ಟೋನಿಕ್ ಸೇವಿಸಿದರೆ [illegible] ದ್ರವ್ಯಗಳು ಗುಣವಾಗಿ ದೇಹ ಪುಷ್ಟಿಯಾಗುತ್ತದೆ. ಟೋನಿಕ್ ಬಾಟ್ಲ 1ಕ್ಕೆ ರೂ. 1 60 ಮಾತ್ರೆಯ ಬಾಟ್ಲ 1ಕ್ಕೆ ರೂ. 2—0—0.

3. ಸಿದ್ಧೇಶ್ವರ — ಇದರ ಸೇವನೆಯಿಂದ ಎಲ್ಲಾ ಜ್ವರಗಳೂ, [illegible] ಗುಣವಾಗುತ್ತದೆ. ತೊಲೆ 1ಕ್ಕೆ 1-0-0.

4. ಅಶೋಕಾರಿಷ್ಟ (ಉತ್ತಮ ತರದ್ದು) — ಇದರ ಸೇವನೆಯಿಂದ ಸ್ತ್ರೀಯರ ಮುಟ್ಟುದೋಷ, ಗರ್ಭಶೂಲ, ಯೋನಿರೋಗಗಳು ಗುಣವಾಗಿ ರಕ್ತಶುದ್ಧಿಯಾಗುವುದು. ಬಾಟ್ಲ 1ಕ್ಕೆ 1-4-0.

5. ಸುದರ್ಶನ ಮಾಲಿನಿ — ಇದರಿಂದ ಗಂಡಮಾಲೆ, ಫಿರಂಗರೋಗ, ಮೇಹಪ್ರವೃತ್ತಿ, ಮೇಹವಾತ, ಇತ್ಯಾದಿ ದೀರ್ಘಕಾಲದ ರೋಗಗಳು 4 ದಿವಸಗಳಲ್ಲಿ ಗುಣವಾಗುತ್ತದೆ. ಬಾಟ್ಲ 1ಕ್ಕೆ 4—0—0.

6. ವಸಂತಕುಸುಮಾಕರ ತೈಲ — ಇದನ್ನು ತಲೆಗೆ ಇಟ್ಟುಕೊಂಡಲ್ಲಿ ಸರ್ವ ಶಿರೋರೋಗಗಳು ಗುಣವಾಗಿ ಜ್ಞಾನಶಕ್ತಿಯನ್ನು ಹೆಚ್ಚಿಸುತ್ತದೆ. ಬಾಟ್ಲ 1ಕ್ಕೆ ರೂ. 1—0—0

ಇದಲ್ಲದೆ ನಮ್ಮ ಡಿಸ್ಪೆನ್ಸರಿಯಲ್ಲಿ ಎಲ್ಲಾ ರೋಗಗಳಿಗೆ ಬೇಕಾಗುವ ಮಾತ್ರೆಗಳೂ, ಭಸ್ಮಗಳೂ, ತೈಲಗಳೂ, ಲೇಹಗಳೂ, ಚೂರ್ಣಗಳೂ ಬಹಳ ಕಡಿಮೆ ಕ್ರಯದಲ್ಲಿ ಸಿಕ್ಕುತ್ತವೆ ನಮ್ಮ ಕೆಟಲಾಗನ್ನು ತರಿಸಿರಿ.

ಎಮ್. ವಿ. ಶಂಕರ, ಉಗ್ರಾಣಕಾರ,
ಮೇನೇಜರ್.
ಶ್ರೀ ಧನ್ವಂತರಿ ಆಯುರ್ವೇದಿಕ್ ಡಿಸ್ಪೆನ್ಸರಿ, [illegible]

ಅಪೂರ್ವವಾದ ಕನ್ನಡ ವೈದ್ಯಶಾಸ್ತ್ರವು.

ಧಾತುರಂಜಿತ – ವೈದ್ಯರತ್ನ.

ಅಕ್ರಮರತಿಯಿಂದ ಶರೀರಕ್ಕೆ ಬೇರಿನಂತಿರುವ ವೀರ್ಯ ಕೆಟ್ಟು ನೀರಾಗಿ ಪತನವಾಗಿ ವಿಧವಿಧ ಬಣ್ಣದಿಂದ ಧಾತುಸ್ರಾವ, ನಪುಂಸಕತ್ವ, ಚಾಕಿ, ಇವೇ ಮುಂತಾದ ಬಹು ರೋಗಗಳುಂಟಾಗುವವು. ಇದರಲ್ಲಿ ೫ ಭಾಗಗಳಲ್ಲಿ ಈ ವಿಧದ ರೋಗಗಳ ಸ್ವರೂಪ, ಕಾರಣ, ಚಿಕಿತ್ಸೆಗಳು ವಿವರಿಸಲ್ಪಟ್ಟಿವೆ. ಮೂಲೇಂದ್ರಿಯ ರಚನೆ, ವೀರ್ಯ ನಷ್ಟಕ್ರಮ, ನಪುಂಸಕತ್ವ ಭೇದ, ವಂಧ್ಯಾರೋಗ ಭೇದ, ನಿವಾರಣೋಪಾಯ ಇವೆಲ್ಲಕ್ಕೂ ಅನುಭವಸಿದ್ಧಗಳಾದ ನೂರಾರು ವಿಧ ಲೇಹ್ಯ, ರಸಾಯನಾದಿ ದಿವ್ಯೌಷಧಿಗಳನ್ನು ಕಲ್ಪಿಸುವ ವಿಧಾನ ಮತ್ತು ರೂಢಿಯಲ್ಲಿರುವ ಅನೇಕ ವನಸ್ಪತಿಗಳ ಗುಣ, ಉಪಯೋಗಿಸುವ ಕ್ರಮ, ರಣವೈದ್ಯದಲ್ಲಿ ರಾಜವಂಗೇಶ್ವರಾದಿ ಅನೇಕ ಮಹೌಷಧಿಗಳ ನಿರ್ಮಾಣಕ್ರಮ, ಕುಟುಂಬವೈದ್ಯದಲ್ಲಿ ಜ್ವರ, ಅತಿಸಾರಾದಿಗಳ ಚಿಕಿತ್ಸೆ ಎಂತವರಿಗೂ ತಿಳಿಯುವಂತೆ ಬರೆಯಲ್ಪಟ್ಟಿದೆ. ಇದು ಇದ್ದರೆ ಮನೇಲಿ ಒಬ್ಬ ವೈದ್ಯನೇ ಇದ್ದಂತಾಗುವದು. ಇದರಲ್ಲಿರುವ ಔಷಧಿಗಳನ್ನು ತಯಾರು ಮಾಡಿ ನೂರಾರು ರೂಪಾಯಿಗಳನ್ನು ಸಂಪಾದಿಸಬಹುದು ಕ್ರಯ ಪುಸ್ತಕ ೧ಕ್ಕೆ ರೂ-೧—೮—೦.

ನಮ್ಮ ವಿಳಾಸ.— ಭಾರತಿ ಬುಕ್‌ಡಿಪೊ,
[illegible], ನಗರ್ತರಪೇಟೆ, ಬೆಂಗಳೂರು ಸಿಟಿ

The Indian Tooth-ache Specific.

ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ಸಾರೆ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲು ನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ [illegible], ಬಾವು, ವ್ರಣ, ಸೋರುವಿಕೆ ಇತ್ಯಾದಿ ಶೀಘ್ರವಾಗಿ ಗುಣವಾಗುತ್ತದೆ ಕೊರೆದುಹೋದ ಮತ್ತು ಅಲ್ಲಾಡುವ ಹಲ್ಲುಗಳಿಂದ [illegible] ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಯುವ ಅವಶ್ಯವೇ ಇಲ್ಲ. ಈ ಔಷಧದ ಗುಣವನ್ನು ನೀವು ಪರೀಕ್ಷಿಸಿ ಎಲ್ಲರಿಗೂ ತಿಳಿಸಿರಿ.

ಶೀಸೆ ೧ಕ್ಕೆ ಕ್ರಯ ರೂ. 1—4—0, [illegible] 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ [illegible] ಶೀಸೆ ಕೊಂಡರೆ ರೂ. 12 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ

STANY BROTHERS, MANGALORE.

[illegible] ಗ ನಾ ದ [illegible]

I	[illegible]	0—10—0
II	[illegible]	0—8—0
III	[illegible]	0—6—0

[illegible] ಉಪಯೋಗಿಸಿ [illegible] ಧಾರಾಳವಾಗಿ [illegible] ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

STANY BROTHERS, MANGALORE.

ಭೃಂಗರಾಜ ತೈಲ

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ ಮತ್ತು ತಲೆ ಕೂದಲು ಕಪ್ಪಾಗುತ್ತವೆ ಕೇಶಗಳು ಉದುರುವ ಸಂಗತಿಯಲ್ಲಿ ಬಹಳ ಒಳ್ಳೇದು. 4 ಔನ್ಸಿನ ಶೀಸೆ 1ಕ್ಕೆ ಕ್ರಯ ರೂ 0—12—0

ತ್ರಿಫಲಾದಿ ತೈಲ—ವಾತ, ಪಿತ್ಥ, ಶ್ಲೇಷ್ಮ ಈ ಮೂರು ತರದ ವ್ಯಾಧಿಗಳಿಂದ ಉಂಟಾದ ಕಾಯಿಲೆಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಸ್ನಾನ ಮಾಡುವ ಮೊದಲು ಇದನ್ನು ತಲೆಗಿಟ್ಟರೆ ಬಹಳ ಉತ್ತಮ
4 ಔನ್ಸಿನ ಶೀಸೆ 1ಕ್ಕೆ ಕ್ರಯ ರೂ 1—0—0

ಪಂಚಸಾರ ಲೇಹ—ಅಜೀರ್ಣ, ಪಿತ್ಥ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ ಮತ್ತು ಇಂದ್ರಿಯವನ್ನು ಬಲಪಡಿಸಿ, ಅನೇಕ ತರದ ಇಂದ್ರಿಯ ದೋಷಗಳನ್ನು ನಿವಾರಿಸುತ್ತದೆ ಒಂದು ಸೇರಿಗೆ ರೂ 1—4—0

ಈ ಮೇಲೆ ಬರೆದ ಔಷಧಿಗಳು ಪೂರ್ವಪೂಜ್ಯ ಗುರುಗಳಿಂದ ನಿರೂಪಿಸಿದ ಗ್ರಂಥದ ಆಧಾರದಿಂದ ತಯಾರು ಮಾಡಲ್ಪಟ್ಟಿರುತ್ತವೆ ಇವುಗಳಲ್ಲದೆ ಇತರ ಎಲ್ಲಾ ಬಗೆಯ ಔಷಧಿಗಳು ದೊರೆಯುತ್ತವೆ ಪರಸ್ಥಳದವರು ತಮ್ಮ ಕಾಯಿಲೆ ಸಂಗತಿಯನ್ನು ವಿವರವಾಗಿ ಬರೆದು ಕಳುಹಿಸಿದರೆ ತಕ್ಕ ಔಷಧಿಗಳನ್ನು ಕಳುಹಿಸಬಹುದು

ವಿಳಾಸ—ಆಯುರ್ವೇದಿಕ್ ಮತ್ತು ಹೋಮಿಯೊಪೆತಿಕ್
ಧರ್ಮವೈದ್ಯಶಾಲಾ, ಧರ್ಮಸ್ಥಳ, ದ ಕನಡ

ಕ್ರಯ ರೂ. 1—8—0 — ಅಂಚೆ ವೆಚ್ಚ ಬೇರೆ

ಪ್ರಶ್ನೋತ್ತರ ಲೇಖ್ಯಬೋಧಿನಿ.

7ನೇ ಮುದ್ರಣ: ಅನೇಕ ಉಪಯೋಗ ಸಂಗತಿಗಳಿವೆ
ಕ್ಷೇಮ ಸಮಾಚಾರದ ಕಾಗದಗಳು —ಬಗೆಬಗೆಯಾದ ಒಕ್ಕಣೆಗಳು, [illegible] ವೈದಿಕ ಮರ್ಯಾದೆಗಳಿವೆ ಪತ್ರಗಳು ಬರೆಯುವ ವಿಧಾನ ಕ್ರಯ, [illegible] ಬಿಲ್ಲು, ಮರಣಶಾಸನ, ಪಾರೀಖತ್ತು, ಗುತ್ತಿಗೆ, ಪಾಲುಗಾರಿಕೆ, ಹುಂಡಿ [illegible] ಇವುಗಳ ಮಾದರಿಗಳು, ವಿಧಗಳು, ಸ್ಟಾಂಪು ರೆಜಿಸ್ಟ್ರೇಷನ್, ಸಿವಿಲ್ ಪ್ರೊಸೀಜರ್ ವಿಧಾನ—ಲಾಯರ್ ನೋಟೀಸು, ದಾವೆ ಬರೆಯುವ ರೀತಿ, ಸ್ಮಾಲ್ ಕಾಸ್, ಒರಿಜಿನಲ್, ರಿವ್ಯೂ, ಅಪ್ಪೀಲು, ಸ್ಪೆಷಲ್ ಅಪ್ಪೀಲ್, ಅವುಗಳಿಗೆ ವಾಯಿದೆ, ಕೋರ್ಟು ಫೀ ಸ್ಟಾಂಪು-ರೆವೆನ್ಯೂ ಮುಂತಾದ ಪ್ರಾಮುಖ್ಯವಾದ [illegible] ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ಬರೆಯುವ ಅರ್ಜಿಗಳು; ಕ್ರಿಮಿನಲ್ ಪ್ರೊಸೀಜರ್ ವಿಧಾನ—ಅನೇಕ ಅರ್ಜಿಗಳ ಮಾದರಿಗಳೂ, ಸರಕಾರದ ಕಾನೂನು [illegible] ಅಡಗಿವೆ. ಕಾಗದದ ದರದಿಂದ ಬಹು ಸ್ವಲ್ಪ ಪ್ರತಿಗಳಿ [illegible] ಬೇಗ ಬರಿಮ ತರಿಸಿಕೊಳ್ಳಿ. ಕ್ರಯ ರೂಪಾಯಿ 1—8—0; [illegible] ವೆಚ್ಚ ಬೇರೆ

30-19] ವಿಳಾಸ — "ನವಿನುಡಿ" ಆಫೀಸು,
129, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

"ಟಿಶ್ಯು ರೆಮಿಡಿಸ್"

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು.

1	ಕಲ್ಕೇರಿಯ ಫ್ಲೋರ್	5	ಕಾಲಿ ಮ್ಯೂರ್	9	ನಾಟ್ರಮ್ ಮ್ಯೂರ್
2	ಕಲ್ಕೇರಿಯ ಫೋಸ್	6	ಕಾಲಿ ಫೋಸ್	10	ನಾಟ್ರಮ್ ಫೋಸ್
3	ಕಲ್ಕೇರಿಯ ಸಲ್ಫ್	7	ಕಾಲಿ ಸಲ್ಫ್	11	ನಾಟ್ರಮ್ ಸಲ್ಫ್
4	ಫೆರಮ್ ಫೋಸ್	8	ಮಗ್ನೇಸಿಯ ಫೋಸ್	12	ಸಿಲಿಸಿಯ

ಕ್ರಯ

					ರೂ ಆ ಪೈ
ಎರಡು ಡ್ರಾಮಿನ	D	ಸೈಜ್	ಸೀಸೆ	ಒಂದರ	0—3—6
ನಾಲ್ಕು	„	C	„	„	0—6—0
ಒಂದು ಔನ್ಸಿನ	A	„	„	„	0—12—0

ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕಪೆಟ್ಟಿಗೆಗೆ	3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯಶಾಸ್ತ್ರ ಪುಸ್ತಕ ಸಮೇತ	10—0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಯಿಲೆ ಕಸಾಲೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ ಈ ಪುಸ್ತಕವು ಎಲ್ಲರಿಗೂ ಸುಲಭದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ ಕ್ರಯ 12 ಆಣೆ ಮಾತ್ರ. ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು

ವಿ. ಫೆರ್ನಾಂಡಿಸ್,
ಎಲೆಕ್ಟ್ರೋ ಹೋಮಿಯೊಪೆತಿ ಡಿಸ್ಪೆನ್ಸರಿ, ಮಂಗಳೂರು.

ವಿದೇಶ ವರ್ತಮಾನ.

ದೊಲಶೆವಿಕರ ಮಾಯಾಜಾಲ—ಅಮೆರಿಕಾ ದೇಶದ [illegible] ಬಂದ [illegible] ಬಂದ ವರ್ತಮಾನವೇನೆಂದರೆ [illegible] ವೆಂಬ ಪತ್ರಿಕೆಯು ಪ್ರಕಟಿಸಿದೆ. ಬೊಲಶೆವಿಕರ ಪ್ರತಿನಿಧಿಗಳು [illegible] ಕೆಲವು ಕಾಲದಿಂದ [illegible] ಸ್ವಲ್ಪ ಹಣವನ್ನು ಸಹಾಯವಾಗಿ ಕೊಡಲು ತೊಡಗಿದ್ದಾರೆ,—[illegible] ದಯಾಳು ಗಳು ಎಂಬ ಭಾವನೆಯು ಅಲ್ಲಿ ಹಬ್ಬುವಂತೆ ಅವರು ಯತ್ನಿಸುತ್ತಿದ್ದಾರೆ. ಇವರನ್ನು [illegible] ಶರಣು ಬರುವುದೇ ಮಹೋದ್ದೇಶ ಪ್ರಸಾರವೆಂಬ ಹಿಂದಿಯನ್ನು [illegible] ಕೊಂಡು ಈ ಪತ್ರಿಯು ಹೇಳುತ್ತಿದ್ದಂತೆ.

ಐರ್ಲೆಂಡು—ಅಲ್ಲಿ ಸಿನ್‌ಫೇನರ ಹಾವಳಿಯು ಇನ್ನೂ ಅಡಗಿಲ್ಲವಾಗಿದೆ. ಇತ್ತೀಚೆಗೆ ಅಡಗಿಸುವುದಕ್ಕೆ ಹಿಂಗೆಗೆ ಸುಮಾರು ೫೦೦೦೦ ಸೈನ್ಯವು ಐರ್ಲೆಂಡಿಗೆ ಸೇರಿದೆ. [illegible] ಎಂಬ ಪಟ್ಟಣದ ಭವನವನ್ನು ಈ ಅನ್ಯಾಯಕರ್ತ ವಾದಿಗಳು ಬೆಂಕಿ ಹಾಕಿ ಸುಟ್ಟುಬಿಟ್ಟರಂತೆ. ೧ ಲಕ್ಷ ಪೌಂಡು ಬೆಲೆ ಬಾಳುವ ಸಾಮಾನು ಇದರಿಂದ ನಾಶವಾಯಿತೆಂದು ಅಂದಾಜುಮಾಡಿದ್ದಾರೆ. ೬೦೦೦೦ ಪೌಂಡು ಬೆಲೆ ಬಾಳುವ ಇನ್ನೊಂದು ಕೈಕೋಟ್ರವನ್ನೂ ಅವರು ಸುಟ್ಟರು.

ತುರ್ಕಿ—ಸಂಧಿ ಶರ್ತಗಳ ಮೇಲಿನ ತಮ್ಮ ಆಕ್ಷೇಪಗಳನ್ನು ಕೇಳಿ [illegible] ವಾಯಿದೆಯನ್ನು ಜುಲೈ ತಾ. ೧೧ರ ವರೆಗೆ ಮುಂದರಿಸುವಂತೆ ತುರ್ಕಿಯು (ಒತ್ತೋಮಲ ಪಂಪತ್ತಿನ) ಪ್ರತಿನಿಧಿಗಳು ಕೇಳಿಕೊಂಡಿದ್ದಾರೆ.

ಒಳದೇಶ ವರ್ತಮಾನ.

ಮೆಸ್ಟನ್ ಕಮ್ಮಿಟಿಯ ರಿಪೋರ್ಟು—ಈ ರಿಪೋರ್ಟಿನ ಹಂಚಿಕೆಯಲ್ಲಿ ಮದ್ರಾಸು ಸಂಸ್ಥಾನಕ್ಕೆ ಅನ್ಯಾಯವಾಗುತ್ತದೆ ಎಂಬ ಅಭಿಪ್ರಾಯವನ್ನು ಜನರು ಕಡೆಯಿಂದ ವ್ಯಕ್ತಗೊಳಿಸುವುದಕ್ಕೆ ಕಳೆದ ತಿಂಗಳು ೨೬ನೆ ತಾರೀಖಿಗೆ ಮದ್ರಾಸಿನಲ್ಲಿ ಬೇರೆ ಬೇರೆ ರಾಜಕೀಯ ಸಂಘಗಳವರ ಮತ್ತು ಚೇಂಬರ್ ಆಫ್ ಕಾಮರ್ಸ್ (ವರ್ತಕರ ಸಂಘದ ಪ್ರತಿನಿಧಿಗಳ) ಒಂದು ವಿಶೇಷ ಅಧಿವೇಶನವು ಜರಗಿತು. ಮದ್ರಾಸಂಸ್ಥಾನದಿಂದ ವರಿಷ್ಠ ಸರಕಾರದ ಖಜಾನೆಗೆ ವಸ್ತ ತೀಲಿಸನ ಬಗ್ಗೆ ವಂತಿಗೆ ಎತ್ತುವುದೇ ನ್ಯಾಯಸಮ್ಮತವಲ್ಲ. ಒಂದು ವೇಳೆ ಹಾಗೆ ಹಂಗಾಮಿಯಾಗಿ ವಸೂಲು ಮಾಡುವುದು ಅಗತ್ಯವೆಂತಾದರೆ ನೇಕಡಾ ೧೭ರಷ್ಟು ಅಂದರೆ ಮುಂದಿನ ೬ನೆ ವರ್ಷಾಂಶಕ್ಕೆ ಕೊಡಬೇಕೆಂದು ನಿರ್ಣಯಿಸಿದಷ್ಟನ್ನು ಮಾತ್ರ ತೆಗೆದುಕೊಳ್ಳಬಹುದಲ್ಲದೆ ಈಗ ನಿರ್ಣಯಿಸಿದಂತೆ ೩೫%ರಷ್ಟನ್ನು ವಸೂಲುಮಾಡಬಾರದೆಂಬ ಠರಾವು ಸರ್ವಾನುಮತದಿಂದ ಮಂಜೂರಾಯಿತು. ಆದರೆ ಕಾಂಗ್ರೆಸ್ ಕಮ್ಮಿಟಿಯವರು ಈ ಅಧಿವೇಶನದಲ್ಲಿ ಹಾಜರಿರಲಿಲ್ಲ. ಅವರು ಈ ಮೊದಲೇ ಮಾಡಿದ ಒಂದು ಠರಾವಿನಲ್ಲಿ ಈ ರೀತಿಯಾಗಿ ಮದ್ರಾಸು ಸಂಸ್ಥಾನದಿಂದ ವಸೂಲು ಮಾಡುವುದೇ ಸರಿಯಲ್ಲ ಎಂದು ನಿರ್ಣಯಮಾಡಿ ಆ ಠರಾವು ಇಂಡಿಯಾ ಸ್ಟೇಟ ಸೆಕ್ರೆಟರಿಯವರಿಗೂ ಇತರ ಸಂಬಂಧಪಟ್ಟ ಅಧಿಕಾರಿಗಳಿಗೂ ತಿಳಿಸಿದ ಕಾರಣ ಈಗ ನೇಕಡಾ ೧೭ರಷ್ಟನ್ನಾದರೂ ಕೊಡಲಿಕ್ಕೆ ಸಮ್ಮತಿಸುತ್ತೇವೆಂಬ ಸೂಚನೆಯನ್ನು ಒಪ್ಪಿಕೊಳ್ಳುವುದು ಸರಿಯಲ್ಲವೆಂಬ ಕಾರಣದಿಂದ ತಮ್ಮ ಪ್ರತಿನಿಧಿಗಳನ್ನು ಈ ಅಧಿವೇಶನಕ್ಕೆ ಕಳುಹಿಸಲಿಲ್ಲವೆಂದು ತಿಳಿಸಿದ್ದಾರೆ.

ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಕಳೆದ ತಿಂಗಳ ಅಧಿವೇಶನದಲ್ಲಿಯೂ ನಾಮಧಾರಿ ವಿ. ಕೆ. ರಾಮಾನುಜಾಚಾರ್ಯರು ಇದೇ ವಿಷಯದಲ್ಲಿ ಮೆಸ್ಟನ್ ಕಮ್ಮಿಟಿಯ ಹಂಚಿಕೆಯನ್ನು ಆಕ್ಷೇಪಿಸಿ ತಂದ ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಕಲ್ಕತ್ತೆಯಲ್ಲಿ ಮನೆಗಳ ಪುರವಣೆ—ಕಲ್ಕತ್ತೆಯಲ್ಲಿ ಜನಗಳಿಗೆ ಅರಲಕ್ಷ ಆರೋಗ್ಯಕರವಾದ ಕಟ್ಟಡಗಳನ್ನು ಏರ್ಪಡಿಸುವ ಉದ್ದೇಶದಿಂದ ರಿಜಿಷ್ಟರಾದ ಕಂಪೆನಿಗಳಿಗೆ ಸರಕಾರದಿಂದ ಭೂಸಂಪಾದನೆ ಏಕ್ಟಿನ ಕ್ರಮಗಳಿಗೆ ಅನುಸಾರವಾಗಿ ಸ್ಥಳಗಳನ್ನು ತೆಗಿಸಿಕೊಡುವುದಕ್ಕೋಸ್ಕರ ಬಂಗಾಳ ಪ್ರಾಂತಿಕ ಸರಕಾರದವರು ಒಬ್ಬ ಆಫೀಸರರನ್ನು ಸ್ಪೆಶಲ್ ಡ್ಯೂಟಿ ಮೇಲೆ ನೇಮಕಮಾಡಿರುವರು. ಸಂಘ ತಯಾರಿಸಿದ ಸ್ಥಳಗಳ ಅಂದಾಜ ಪಟ್ಟಿ ಮುಂತಾದ್ದನ್ನು ಪರಿಶೀಲಿಸಿ ಅವರಿಗೆ ಅಗತ್ಯವಿರುವ ಸೂಚನೆಯನ್ನು ಕೊಡುವುದೇ ಈ ಆಫೀಸರರ ಕರ್ತವ್ಯವಾಗಿರುವುದು.

ಸಬ್ ರಜಿಸ್ಟ್ರಾರರ ಸಂಘ—ಉತ್ತರ ಆರ್ಕಾಡಿನ ಸಬ್ ರಜಿಸ್ಟ್ರಾರರ ಸಂಘದವರು ಸಭೆ ಸೇರಿ ಜಂಗಾಬು ಎಲ್ಲೊವೆನ್ಸ್ ತಮ್ಮ ವರ್ಗದವರಿಗೆ ಇನ್ನೂ ಸಿಗದೆ ಇರುವುದಕ್ಕೆ ವಿಷಾದವನ್ನು ತೋರ್ಪಡಿಸಿದ್ದಲ್ಲದೆ ೧೯೨೦ ಎಪ್ರಿಲಿನಿಂದ ನೇಕಡಾ ೪೦ರಷ್ಟು ಎಲ್ಲೊವೆನ್ಸ್ ಸೆಂಕ್ಷನ್ ಮಾಡಬೇಕಾಗಿ ಸರಕಾರದವರಿಗೆ ಕೇಳಿಕೊಂಡಿದ್ದಾರೆ.

ಹೊಸ ಕೌನ್ಸಿಲಿಗೆ ಉಮೇದ್ವಾರರು—ಕುಮಾರ ಮಂಗಲದ ಜಮೀನುದಾರ ಮಿ| ಪಿ. ಸುಬ್ಬರಾಯನ್ ಎಮ್. ಎ. ಎಲ್. ಎಲ್. ಡಿ. ಬರಿಷ್ಟರ್ ಇವರು ಸೇಲಂ, ಕೊಯಮುತ್ತೂರು, ಉತ್ತರ ಆರ್ಕಾಡು ದಕ್ಷಿಣ ಆರ್ಕಾಡು ಜಿಲ್ಲೆಗಳ ಜಮೀನುದಾರರ ಪರವಾಗಿಯೂ, ರಾಯ ಸಾಹೇಬ ಇ. ಸಿ. ಮ್ಯಾಂಗೆಸ್ (ಪೆನ್ಶನ್ ಹೊಂದಿದ ಫೋರೆಸ್ಟ ಎಕ್ಸ್ಟ್ರಾ ಅಸಿಸ್ಟಂಟ ಕನ್ಸರ್ವೇಟರು) ಇವರು ನೀಲಗಿರಿ, ಕೊಯಮುತ್ತೂರು, ಮಲಬಾರು ದಕ್ಷಿಣಕನ್ನಡ ಜಿಲ್ಲೆಯ ಕ್ರೈಸ್ತರ ಪರವಾಗಿಯೂ, ರಾ| ಕಲ್ಯಾಡಿ ಪೂವಣಿ ಹೆಗ್ಗಡೆಯವರು ದಕ್ಷಿಣಕನ್ನಡದ ಸಾಮಾನ್ಯ ಪಕ್ಷದ ಪರವಾಗಿಯೂ, ರಾ| ಹಂಡಾರಿ ರಾಮಯ್ಯ ಸೆಟ್ಟರು ಬ್ರಾಹ್ಮಣೇತರ ಪಕ್ಷದ ಪ್ರತಿನಿಧಿಗಳಾಗಿಯೂ ಉಮೇದ್ವಾರರಾಗಿರುವರೆಂದು ನಾವು ತಿಳಿಯುತ್ತೇವೆ.

ಮದ್ರಾಸು ಇಲೆಕ್ಟ್ರಿಕ್ ಸಪ್ಲೈ ಕೊರೊಪೊರೇಶನ್ನಿನ ಮಜೂರರು—ಇವರು ತಮಗೆ ಯಜಮಾನರು ಕೊಟ್ಟ ಶರ್ತಗಳನ್ನು ಸಮ್ಮತಿಸದೆ ಪುನಃ ಮುಷ್ಕರ ಹಿಡಿದು ಈಗ ಹತ್ತಾರು ದಿನಗಳಾದವು. ಮದ್ರಾಸಿನಲ್ಲಿ ವಿದ್ಯುಚ್ಛಕ್ತಿಯ ದೀಪಗಳನ್ನು ಉರಿಸಲಿಕ್ಕೆ ಈಗ ಬಹಳ ತೊಂದರೆಯಾಗಿದೆ.

ಪಯ್ಯಾನೂರಿನ ಶಾಲಾ ಮಾಸ್ತರರೊಬ್ಬರು—ಇವರೂ ಇನ್ನೊಬ್ಬರೂ ಕೂಡಿ [illegible] ತರುಣರನ್ನು ಬಚ್ಚಿಟ್ಟು [illegible] ತೋಟಗಳಿಗೆ ಕೆಲಸಕ್ಕೆ ಜನ ಒದಗಿಸುವ ಕಂಟ್ರಾಕ್ಟರನೊಬ್ಬನಿಗೆ ಒಪ್ಪಿಸಿಕೊಡಲಿಕ್ಕಿದ್ದರು ಎಂಬ ಅಪವಾದದ ಮೇಲೆ ಪೋಲೀಸರಿಂದ ಈಗ [illegible] ನಡೆಸಲ್ಪಡುತ್ತಿದೆಯಂತೆ.

ಕಾನಡಾ ಜಿಲ್ಲೆಯ ಪರಿಷತ್ತು—ಈ ಜಿಲ್ಲೆಯಲ್ಲಿ [illegible] ಕಳೆದ ತಿಂಗಳ [illegible] ತಾರೀಖಿಗೆ ರಾಜಕೀಯ ಪರಿಷತ್ತು ಪ್ರಥಮ ಸಲ ಜರಗಿತು. [illegible] ನಾರಾಯಣ [illegible] ಅಧ್ಯಕ್ಷರಾಗಿದ್ದರು. [illegible]

ಮೈಸೂರು:—ಮೈಸೂರಿನ ಕರ್ನಾಟಕ ಗ್ರಂಥಮಾಲೆ [illegible] ಗ್ರಂಥಕರ್ತರು [illegible] ಕರ್ನಾಟಕ ಸಾಹಿತ್ಯ [illegible]

ಹಂಟರ್ ಕಮ್ಮಿಟಿ ರಿಪೋರ್ಟು.

ಹಂಟರ್ ಕಮ್ಮಿಟಿಯ ರಿಪೋರ್ಟು ಅದರಮೇಲೆ ಇಂಡಿಯಾ ಸರಕಾರದವರು ಕೊಟ್ಟ ಅಭಿಪ್ರಾಯ, ಅವೆರಡರ ಮೇಲೆ ಬ್ರಿಟಿಷ ಮಂತ್ರಿಮಂಡಲದವರ ನಿರ್ಣಯಗಳು, ಇಂಡಿಯಾ ಸೆಕ್ರೆಟರಿಗಳು ವರಿಷ್ಠ ಸರಕಾರದವರಿಗೆ ಕಳುಹಿಸಿದ ಸರೂತ ಇವೆಲ್ಲ ಪ್ರಕಟವಾಗಿವೆ. ಇವು ಮಂಜೂರಾದ ರಿಪೋರ್ಟು ಆಗಿ ಇರುವುದರಿಂದ ಇದರಲ್ಲಿ ಜಲಿಯನವಾಲಾ ಬಾಗದಲ್ಲಿ ಜನರಲ್ ಡಾಯರರು ನಡೆಸಿದ ಹಾಂಡವದ ವಿವರಣೆಯನ್ನು ಕೊಟ್ಟಹಾಗೆ ಇಲ್ಲಿ ಪ್ರಕಟಿಸಲು ಯತ್ನಿಸಿದ್ದೇವೆ.

"ಜನರಲ್ ಡಾಯರರು ಎಪ್ರಿಲ್ ೧೧ನೆ ತಾರೀಖಿಗೆ ಅಮೃತಸರಕ್ಕೆ ಬಂದಿದ್ದು ೧೩ನೆ ತಾರೀಖಿಗೆ ಕೊಟ್ಟ ಇಸ್ತಿಹಾರುನಾಮೆಯಲ್ಲಿ ಅಮೃತಸರದ ಒಳಗೂ ಹೊರಗೂ ಯಾವುದೊಂದು ಬಗೆಯಲ್ಲಿ ಜನರು ಗುಂಪು ಕೂಡಿ ಮೆರವಣಿಗೆಯಾಗಿ ಹೋಗಬಾರದೆಂತಲೂ ಹಾಗೆ ಜನಸಂದಣಿ ನೆರೆದಲ್ಲಿ ಅದರ ಆ ಕಾನೂನಿಗೆ ವಿರೋಧವೆಂಬ ಭಾವನೆಯಿಂದ ಅಗತ್ಯವಿದ್ದರೆ ಶಸ್ತ್ರಗಳಿಂದ [illegible] ಜನ ಸಂದಣಿಯನ್ನು ಚದರಿಸಬೇಕಾದೀತು ಎಂದು ಪ್ರಕಟಿಸಿದರು. ಜನರಲ್ ಡಾಯರರು ಸ್ವಲ್ಪ ಸೈನ್ಯ ದೊಡನೆ ಸ್ವತಃ ಅದೇ ದಿನ ಬೆಳಿಗ್ಗೆ ೯ ಗಂಟೆಯಿಂದ ಅಮೃತಸರದ ಬೀದಿಗಳಲ್ಲಿ ದಿಗ್ವಿಜಯ ಯಾತ್ರೆ ಮಾಡುವಾಗ ಅಲ್ಲಲ್ಲಿ ಈ ಪ್ರಕಟಣೆಯನ್ನು ಜಾಹೀರು ಮಾಡಿ ಆಯಿತು. ಮಧ್ಯಾಹ್ನ ೧½ ಗಂಟೆಗೆ ಸವಾರಿ ಬಂಗಲೆಗೆ ತೆರಳಿತು. ಜಲಿಯನ್‌ವಾಲಾಬಾಗದಲ್ಲಿ ಜನಗಳ ಒಂದು ಮಹಾ ಸಭೆಯು ಅಪರಾಹ್ನ ೪½ ಗಂಟೆಗೆ ಜರಗಲಿಕ್ಕಿದೆ, ಇದು ತನ್ನ ಹುಕುಮನ್ನು ಉಲ್ಲಂಘಿಸಿ ನಡೆಯಲಿಕ್ಕಿದೆ ಎಂಬ ಸಮಾಚಾರವು ಡಾಯರರ ಸವಾರಿ ಬಂಗಲೆಗೆ ಬಂದ ಒಂದು ತಾಸಿನೊಳಗೆ ಅವರಿಗೆ ತಿಳಿದು ಬಂತು. ಜಲಿಯಾನವಾಲಾಬಾಗದಲ್ಲಿ ಆಗಲೆ ೧೦೦೦ಕ್ಕೆ ಮಿಕ್ಕಿ ಜನಸ್ತೋಮ ನೆರದಿದೆ ಎಂಬ ವರ್ತಮಾನವು ೪ ಗಂಟೆಗೆ ಬಂತು. ಆಕ್ಷಣವೇ ಕೋವಿಗಳನ್ನು ಹಿಡಿದ ೫೦ ದೇಶೀಯ ಸಿಪಾಯರನ್ನು ಕುಕ್ರಿ (ಒಂದು ಬಗೆಯ ಕತ್ತಿಯನ್ನು) ಹಿಡಿದ ೪೦ ಸಿಪಾಯರನ್ನೂ ಯುದ್ಧದ ೨ ಮೋಟರ್ ಬಂಡಿಗಳನ್ನೂ ಕೂಡಿಕೊಂಡು ಊರಿನ ಹೆಬ್ಬಾಗಿಲುಗಳನ್ನು ಭದ್ರಪಡಿಸುವ ನಿಮಿತ್ತ ಸವಾರಿ ತೆರಳಿತು. ದಾರಿಯಲ್ಲಿ ಅಲ್ಲಲ್ಲಿ ಪಹರೆ ಇಟ್ಟು ಡಾಯರರು ಜಲಿಯಾನವಾಲಾಬಾಗದ ಮೈದಾನಿಗೆ ಬಂದರು, ಮತ್ತು ಅದನ್ನು ಪ್ರವೇಶಿಸಲಿಕ್ಕೆ ಇರುವ ಒಂದೇ ಓಣಿಯ ಇಕ್ಕಡೆಗಳಲ್ಲಿ ತನ್ನ ಸೈನ್ಯವನ್ನು ಸನ್ನದ್ಧವಾಗಿ ನಿಲ್ಲಿಸಿದರು. ಮೋಟರ್ ಬಂಡಿಗಳು (ಇವುಗಳಲ್ಲಿ ದೊಡ್ಡ ತುಪಾಕಿ ಫಿರಂಗಿಗಳೂ ಇವೆ) ಬಹಳ ಅಗಲವಿಲ್ಲದ್ದರಿಂದ ಅವುಗಳನ್ನು ಓಣಿಯ ಹೊರಗೆ ರಾಜರಸ್ತೆಯಲ್ಲಿಯೇ ಬಿಡಬೇಕಾಯಿತು."

"ಎಕ್ಕಡೆಗಳಲ್ಲಿ ಸೈನ್ಯವನ್ನು ನಿಲ್ಲಿಸಿದೊಡನೆ ಕೋವಿ ಸುಡಲಿಕ್ಕೆ ಡಾಯರರು ಅಪ್ಪಣೆ ಕೊಟ್ಟರು. ಅಲ್ಲಿ ಆಗ ಸುಮಾರು ೫೦೦೦ ಮಂದಿ ನೆರೆದಿದ್ದರು. ಕೋವಿ ಮದ್ದು ತೀರಾ ಖರ್ಚಾಗುವವರೆಗೆ 'ಗೋಲಿಫೈರ್' ನಿಲ್ಲಲಿಲ್ಲ. ೩೭೯ ಜನರು ಮಡಿದುಬಿದ್ದರು. ಗಾಯಪಟ್ಟವರು ಮತ್ತು ಅಂಗಹೀನರಾದವರು ಎಷ್ಟು ಎಂದು ಸಂಪೂರ್ಣ ಗೊತ್ತಾಗದಿದ್ದರೂ (?) ಸತ್ತವರ ಮೂರುಪಾಲಷ್ಟು ಹೆಚ್ಚಾಗಬಹುದು ಎಂದು ಹಂಟರ್ ಕಮ್ಮಿಟಿಯ ರಿಪೋರ್ಟು ಅಂದಾಜುಮಾಡುತ್ತದೆ. (ಓಣಿಯೊಳಗಿಂದ ಘಕ್ಕನೆ ಚಿಮ್ಮಲಿಕ್ಕಾಗದೆ ಒಂದೇ ಒಂದಾದ ದಾರಿಯಲ್ಲಿ ಹೊರಬರುವಾಗ ಬಹಳಮಂದಿ ಘಾಸಿಯಾಗಿರಬೇಕು ಎಂದು ಬೇರೆ ರಿಪೋರ್ಟುಗಳಿಂದ ನಮಗೆ ತಿಳಿದುಬರುತ್ತದೆ. ಇದು ಕಮ್ಮಿಟಿಯ ಅಭಿಪ್ರಾಯವಲ್ಲ.) ಅಷ್ಟರೊಡನೆ ಡಾಯರರು ತನ್ನ ಸೈನ್ಯವನ್ನು ಅದರ ನಿವಾಸಸ್ಥಾನಕ್ಕೆ ಹಿಂತೆರಳಿಸಿಕೊಂಡು ಹೋದರು."

ಈ ಭಯಂಕರ ಕೃತ್ಯವನ್ನು ತಾನು ಮಾಡಲಿಕ್ಕೆ ಇದ್ದ ಕಾರಣಗಳನ್ನು ಡಾಯರರು ಕಮ್ಮಿಟಿಯ ಮುಂದೆ ಕೊಟ್ಟ ವಾಗ್ಮೂಲದಲ್ಲಿ ಹೀಗೆ ಹೇಳಿದ್ದಾರೆ. "ಹೀಗೆ ಮುಂದರಿಸಬೇಕಾದರೆ ಅದರ ಸಾಧಕ ಬಾಧಕಗಳನ್ನು ನಾನು ಚೆನ್ನಾಗಿ ಆಲೋಚಿಸಿದ್ದೇನೆ. ಕೋವಿ ಸುಡಲೇಬೇಕೆಂದು ನನ್ನ ಕರ್ತವ್ಯಜ್ಞಾನವೂ ಲಷ್ಕರೀ ಅನುಭವವೂ ನನಗೆ ಬೋಧಿಸಿದವು. ಇವನ್ನು ನನ್ನ ಮನಸ್ಸಾಕ್ಷಿಗೆ ಸರಿಯಾಗಿ ನಾನು ಕೈಕೊಂಡೆನು. ತನ್ನ "ಕೊತ್ತಳಿಗೆ ಹಿಡಿದ" ಭಟರ (ಈ ರೀತಿಯಾಗಿ ಜಂಗೀಕೋರರು ತನ್ನ ಚಿಕ್ಕ ಸೈನ್ಯವನ್ನು ಹೀಯಾಳಿಸುತ್ತಿದ್ದರು) ಗತಿ ಮರುದಿನ ಏನಾದೀತು ಎಂಬ ಶಂಕೆಯಿಂದ ನಾನು 'ಗೋಲಿಫೈರ್' ಮಾಡಿಸಿದೆನು. ಜನವೆಲ್ಲಾ ದಿಕ್ಕಾಪಾಲಾಗಿ ಚದರುವವರೆಗೆ ಹಾಗೆ ಮಾಡಬೇಕಾಗಿ ಬಂತು. ಜನಗಳಲ್ಲಿ ಭೀತಿಹುಟ್ಟಿಸುವಂತೆ ನಾನು ಹಾಗೆ ಮಾಡಬೇಕಾಗಿ ಬಂತು. ನನ್ನ ಕೈ ಕೆಳಗೆ ಇನ್ನೂ ಹೆಚ್ಚಿನ ಸಿಪಾಯಿಗಳಿದ್ದರೆ ಜನನಷ್ಟವು ಅದೇ ಪ್ರಮಾಣದಲ್ಲಿ ಹೆಚ್ಚುತ್ತಲಿತ್ತು. ಗುಂಪುಕೂಡಿದ ಜನಗಳನ್ನು ಚದರಿಸುವದೊಂದೇ ಉದ್ದೇಶವು ನನ್ನದು ಇದ್ದಿಲ್ಲ, ಅಲ್ಲಿ ಸೇರಿದವರ ಮೇಲೆಯೂ ಇಡೀ ಪಂಜಾಬದ ಮೇಲೆಯೂ ಲಷ್ಕರಿ ಬಲದ ಪರಿಣಾಮವನ್ನು ಮುಂದಟ್ಟು ಮಾಡಿಸುವುದೇ ನನ್ನ ಮುಖ್ಯ ಉದ್ದೇಶವಿತ್ತು. ಹಾಗೆ ಮಾಡುವಾಗ ಇದು ಕಠಿಣವಾದೀತೋ ಅದು ಕಠಿಣವಾದೀತೋ ಎಂದು ಆಚೆ ಈಚೆ ನೋಡುವುದು ಯುಕ್ತವಲ್ಲ."

ಈ ವರ್ತನವು ಬುದ್ಧಿಪೂರ್ವಕ ಸರ್ಕಾರದ ತತ್ವಗಳಿಗೆ ತೀರಾ ಬಿಟ್ಟು ಇದೆ ಎಂದು ಇಂಡಿಯಾ ಸೆಕ್ರೆಟರಿಗಳು ಒಪ್ಪಿ ಹೇಳಿದ್ದಾರೆ. ಆದರೂ ಕೈಬಲಪಡಿಸುವಷ್ಟು ಎಷ್ಟರವರೆಗೆ ಲಷ್ಕರನ್ನು ಉಪಯೋಗಿಸಬಹುದೋ ಅಷ್ಟರವರೆಗೆ ಮಾತ್ರ ಲಷ್ಕರನ್ನು ಸಹಾಯಕ್ಕೆ ಕರೆಯಬೇಕು ಎಂಬ ಈ ತತ್ವವನ್ನು ಹಿಂದೆಯೂ ಇನ್ನು ಮುಂದೆಯೂ ಸರಕಾರದ ಪ್ರತಿಪಾದಿಸುತ್ತಿರುವುದರಿಂದ ಈ ತತ್ವವನ್ನು ತೀರಾ ಕಲೆಕಲೆಗೆ ಮಾಡಿದ ಜನರಲ್ ಡಾಯರರ ಉದ್ಧಟತನವನ್ನು ಬ್ರಿಟಿಷ ಸರಕಾರದವರು ನಿರ್ದಾಕ್ಷಿಣ್ಯದಿಂದ ಖಂಡಿಸಿದ್ದಾರೆ. "ತನ್ನ ಜಾಹೀರನಾಮೆಗೆ ವಿರೋಧವಾಗಿ ನೆರೆದ ಅಶಸ್ತ್ರಪಾಣಿಗಳಾದ ಜನಸ್ತೋಮವನ್ನು ಚದರಿಸುವುದು ಮಾತ್ರ ಜನರಲ್ ಡಾಯರರ ಕರ್ತವ್ಯವಿತ್ತು. ಡಾಯರರ ಬಳಿ ಇದ್ದ ಸೈನ್ಯವು ಕೊಂಚವಾದ್ದರಿಂದಲೂ ಜನಸಂದಣಿಯು ದೊಡ್ಡದಾಗಿ ಇಡೀ ಊರಲ್ಲಿ ಬಹಳ ಚಳವಳಿ ಇದ್ದುದರಿಂದಲೂ ಸ್ವಲ್ಪ ಪೆಟ್ಟು ತಿನ್ನದೆ ಈ ಜನಗಳನ್ನು ಅಂಕೆಯೊಳಗೆ ತರಲಿಕ್ಕೆ ಸಾಧ್ಯವಿದ್ದಿಲ್ಲವೆಂದು ಒಪ್ಪುವುದಾದರೂ ಕಡಿಮೆಯಾದರೆ ಎಷ್ಟು ಸೈನ್ಯ ಉಪಯೋಗಿಸಬೇಕಾದೀತು ಎಂಬದನ್ನು ಡಾಯರರು ವಿವೇಚಿಸಲೂ ಇಲ್ಲ, ಅವರ ಕೈಕೆಳಗೆ ಆಗ ಇದ್ದ ಸೈನ್ಯವು ಆ ಮೈದಾನದಲ್ಲಿ ಸೇರಿದವರನ್ನು ಚದರಿಸಲಿಕ್ಕೆ ಬೇಕಾದ್ದಕ್ಕಿಂತ ಹೆಚ್ಚಿಗೆ ಇದ್ದು ವೃಥಾ ರಕ್ತಪಾತವೂ ಜನನಷ್ಟವೂ ಉಂಟಾಯಿತು. ಇಷ್ಟರಲ್ಲಿಯೇ ಡಾಯರರ ಪ್ರಮಾದದ ಪರಿಣಾಮವು ಮುಗಿಯಲಿಲ್ಲ. ಹಳ್ಳಿಹಳ್ಳಿಗಳಿಂದ ನೆರೆದು ಬಂದ ಅನೇಕರಿಗೆ ಡಾಯರರ ಇಸ್ತಿಹಾರು ತಿಳಿವಳಿಕೆಗೆ ಬಂದೇ ಇಲ್ಲ ಎಂಬದು ನಿರ್ವಿವಾದ. ಪ್ರಕಟಣೆ ಜಾಹೀರುಮಾಡಿದ ಸ್ಥಳವು ಜಲಿಯನವಾಲಾಬಾಗದಿಂದ ದೂರವಿತ್ತು. ಪ್ರಕಟಣೆಯನ್ನು ಅಮೃತಸರದ ಎಲ್ಲಾ ಭಾಗಗಳಲ್ಲಿ ಜಾಹೀರು ಮಾಡಿದ್ದಿಲ್ಲ. ಕೋವಿ ಸುಡುವ ಮುಂಚೆ ಜನ [illegible] ಎಚ್ಚರಿಸಿದ್ದೂ ಇಲ್ಲ. ಜನರಲ್ ಡಾಯರರ ಕೈಕೆಳಗಿನ ಸೈನ್ಯಕ್ಕೆ ಅಲ್ಲಿ [illegible] ಲಷ್ಕರೀ [illegible] ಒಂದುವೇಳೆ ಪ್ರಕಟನೆಯು ಎಲ್ಲಾ ಭಾಗಗಳಲ್ಲಿ ಜಾಹೀರಾಗಿದ್ದ [illegible] ಜನಗಳನ್ನು ಮೊದಲೇ ಎಚ್ಚರಿಸಿದ್ದರೆ ಅವರ ಮೇಲೆ ಮದ್ದು ಸುಟ್ಟದ್ದು ಎಂದಿಗೂ ರಿಯಾಯಿತಿಗೆ ಅರ್ಹವಾದ ಕೃತ್ಯವಲ್ಲ."

"ಇಷ್ಟರಲ್ಲಿಯೆ ಗಾಯಪಟ್ಟು ಸಾಯಲಿಕ್ಕಿದ್ದವರಿಗೆ [illegible] ಡಾಯರರು [illegible] ಶತ್ರುಗಳ ಕೈಯಿಂದ [illegible] ಫಿರಂಗಿಗಳು [illegible] ಇದ್ದರೆ [illegible]

ಡಾಯರರು ಹೇಳುತ್ತಾರೆ. ಇದನ್ನು ಮಾತ್ರ ಬ್ರಿಟಿಷ ಸರಕಾರದ ರಾಜ್ಯಾಡಳಿತೆಯ ತತ್ವಗಳಿಗೆ ತೀರಾ ವಿರೋಧವೆಂದು ಸರಕಾರದವರು ಮೊದಲೆ ನಿರ್ಧರಿಸಿದ್ದಾರೆ."

ಇಂಡಿಯಾ ಸೆಕ್ರೆಟರಿಗಳು ಈ ರೀತಿಯಾಗಿ ಡಾಯರರ ಕಾಂಡವನ್ನು ಖಂಡನೆ ಮಾಡುವಾಗ ಆಗ ಆ ಪ್ರಾಂತ್ಯದಲ್ಲಿ ಇದ್ದ ಚಳವಳದ ಸ್ಥಿತಿಯಲ್ಲಿ ಎಷ್ಟರವರೆಗೆ ಡಾಯರಸಾಹೇಬರು ಕೈ ಮುಂದರಿಸಬೇಕಾದೀತು ಎಂಬದನ್ನು ಬೇರೆ ಬೇರೆ ಕಲ್ಪುಗಳನ್ನು ಹಾಕಿ ಕಟ್ಟವಾಸಿಯ ಅಂಕಕ್ಕೆ 'ಸೋಡಿ' ಕಟ್ಟಿದ್ದಾರೆ. ಹೀಗೆ ಮಜಾ ವಣ್ಣಮಾಡಿದ ಕಟ್ಟವಾಸಿ ಯಾವುದು? ಯುರೋಪಿಯನ್ನರಲ್ಲಿ ಕೆಲವರಿಗಾದ ಕೊಲೆ, ಇದರಿಂದ ಇತರ ಯುರೋಪಿಯನರಿಗೆ ಇರುವ ಅಪಾಯ, ಬ್ರಿಟಿಷ ಮತ್ತು ದೇಶೀಯ ಸಿಪಾಯರ ಭದ್ರತೆಗೆ ಇರುವ ಅಪಾಂತರ ಇವೆಲ್ಲ ಹಂಟರ್ ಕಮ್ಮಿಟಿಯವರು ಎಣಿಸಿದಕ್ಕಿಂತಲೂ ಹೆಚ್ಚಾಗಿರಬಹುದು ಎಂದು ಸ್ಟೇಟ ಸೆಕ್ರೆಟರಿಗಳ ಅಭಿಪ್ರಾಯ. ಅಮೃತಸರದಲ್ಲಿಯೇ ಕೊಲೆ, ಬೆಂಕಿಯ ಭಯ, ಇತ್ಯಾದಿ ಮೂರೇ ಮೂರು ದಿನಗಳ ಹಿಂದೆ ನಿರಾತಂಕವಾಗಿ ನಡೆದಿದ್ದವು. ಸುತ್ತುಮುತ್ತಲಿನ ಪ್ರದೇಶಗಳಿಂದ ಪ್ರತಿಗಳಿಗೆಗೂ ಹೊಸ ಅಪಾಂತರಗಳ ವರ್ತಮಾನಗಳು ಬರುತ್ತಲೇ ಇದ್ದವು. ಅಷ್ಟರಿಂದ ತನ್ನ ಕೆಳಗಿನ ಸ್ವಲ್ಪವೇ ಸೈನ್ಯದಿಂದ ಶಾಂತಿಯನ್ನು ಉಂಟುಮಾಡುವುದಕ್ಕೂ ದಂಗೆ ಅಡಗಿಸುವುದಕ್ಕೂ ಆದೀತೋ ಇಲ್ಲವೋ ಎಂದು ಡಾಯರರು ವಿಚಾರಪರರಾಗಿದ್ದು ಕೈದುಡುಕಿದರೆಂದು ಕಟ್ಟವಾಸಿಯನ್ನು ಹಂಟರ್ ಕಮ್ಮಿಟಿಯ ಗಣನೆಗಿಂತಲೂ ಹೆಚ್ಚಿನ ದಾಮಾಶಯದಲ್ಲಿ ವಜಾಮಾಡಿದರೂ, ಶಸ್ತ್ರರಹಿತರಾಗಿದ್ದ ಯಾವುದೊಂದು ಗಲಾಟೆ ಎಬ್ಬಿಸದ ಜನಸಂದಣಿಯನ್ನು ಇತರರ ಶಿಕ್ಷೆಗೋಸ್ಕರ ಆಪ್ರಿದ ರೀತಿಯಿಂದ ದಂಡಿಸುವುದೆಂದರೆ 'ಹಂದೆಯವರ ದುಷ್ಕೃತ್ಯಕ್ಕೆ ಕುಮುಟಿಯವರಿಗೆ ದಂಡ' ಹೊರಿಸಿ ದಂತಾಯಿತು ಎಂದು ಸೆಕ್ರೆಟರಿಗಳ ಅಭಿಪ್ರಾಯ." ಇದಲ್ಲದೆ ತೆವಳಿಕೊಂಡು ಹೋಗುವಂತೆ ಜನಗಳಿಗೆ ಒತ್ತಾಯಪಡಿಸಿದ್ದು ಆ ಜನಗಳೇ ಮಾಡಿದ ತಪ್ಪಿನ ದಂಡನೆಗೋಸ್ಕರವೆಂದು ಹೇಳಿದರೂ ಯಾರೂ ಮನ್ನಿಸುವಂಥದ್ದಲ್ಲ. ಅದರ ನಿರಾಧಿಗಳೂ ಈ ರೀತಿಯಾಗಿ ತೆವಳಿಕೊಂಡು ಹೋಗುವುದೆಂದರೆ ನಾಗರೀಕತನದ ಲೇಶವೂ ಇಲ್ಲದಮಾತ್ರವಿರುವ ಯಾವುದೊಂದು ಸರಕಾರಕ್ಕೂ ದೊಡ್ಡ ಲಾಂಛನವಾಗಿದೆ ಎಂದು ಬ್ರಿಟಿಷ ಸರಕಾರದ ಅಭಿಪ್ರಾಯವೆಂದು ಇಂಡಿಯಾ ಸೆಕ್ರೆಟರಿಗಳು ಕಂಠೋಕ್ತವಾಗಿ ಹೇಳಿದ್ದಾರೆ. ಇಷ್ಟೇ ಅಲ್ಲ; ಶತ್ರುರಾಜ್ಯದಲ್ಲಿ ಕೂಡಾ ಲಷ್ಕರಿ ಜಾರಿ ನಡೆಸುವ ಲಷ್ಕರಿ ನಾಯಕನಿಗೆ ವಿಶೇಷ ಜವಾಬ್ದಾರಿಯು [illegible] ಅಧೀನವಾಗಿರುವ ಮತ್ತು ಅದೇ ಸಾಮ್ರಾಜ್ಯದ ಪ್ರಜೆಯು [illegible] ದೇಶದಲ್ಲಿ ಶಾಂತತೆ ಇರಗೊಡಿಸಬೇಕೆಂದು ಹಾರೈಸುವ ಸ್ವಂತ ಪ್ರಜೆಗಳಿರುವ ಪ್ರಾಂತದಲ್ಲಿ ಲಷ್ಕರೀ ಕಾನೂನಿನ ಜಾರಿ ನಡೆಸುವ ಜವಾಬ್ದಾರಿಯು ಇನ್ನಷ್ಟು ವಿಶೇಷವಾಗಿದೆ. ಆದರೆ ಅಂಥಾ ನಾಯಕನ ಕೈ ವಿಶೇಷವಾಗಿ ಸೂತ್ರಗಳಿಂದ ಬಿಗಿಯುವುದು ಅಥವಾ ವಿವರೀತವಾದ ದಾಟಿಹೋದನಂತರ ಗುರುಗುಂಜಿ ತೂಕದವರೆಗೆ ಆ ನಾಯಕನ ಕೆಲಸವನ್ನು ತುಲನೆಮಾಡುವುದು ಸರಿಯಲ್ಲವೆಂಬದೂ ಸ್ವಲ್ಪಮಟ್ಟಿಗೆ ಆ ನಾಯಕನ ವಿವೇಚನಾಶಕ್ತಿಗೆ ಇಂಬುಗೊಡಬೇಕೆಂಬುದೂ ವಾಸ್ತವವೇ ಸರಿ. ಹೀಗಿದ್ದರೂ ನಾಗರೀಕತೆಯ ಸೋಗು ಇದ್ದ ಯಾವುದೊಂದು ಸರಕಾರವು ಅನುಸರಿಸಬೇಕಾದ ಕೆಲವು ಧ್ಯೇಯಗಳಿವೆ. ಅಂಥಾ ಧ್ಯೇಯಗಳ ದೃಷ್ಟಿಯಿಂದ ನೋಡುವಾಗ ಡಾಯರರ ವರ್ತನವು ಅನನ್ಯ ಮನಸ್ಸಿನಿಂದ ತೊಡಗಿರುವುದಾದರೂ ನ್ಯಾಯಸಮ್ಮತವಾದ್ದಲ್ಲ, ಅಂಥಾ ಜವಾಬ್ದಾರಿಗಳನ್ನು ವಹಿಸಲಿಕ್ಕೂ ಅವರು ಯೋಗ್ಯರೂ ಅಲ್ಲ, ಅವರನ್ನು ಕೆಲಸದಿಂದ ನಿವೃತ್ತರಾಗಿ ಮಾಡಿರುವುದಾಗಿ ಇಂಡಿಯಾ ಸರಕಾರವು ಮಾಡಿದ ತೀರ್ಮಾನವು ತನಗೆ ಸಮ್ಮತವಾಗಿದೆ. ಇವರ ವರ್ತನವನ್ನು ಬ್ರಿಟಿಷ ಸರಕಾರದ ಆರ್ಮಿ ಕೌನ್ಸಿಲಿನವರು ಬೇರೆಯಾಗಿ ತೀರ್ಮಾನಿಸಲಿಕ್ಕಿರುವರೆಂದು ಸ್ಟೇಟ ಸೆಕ್ರೆಟರಿಗಳು ಇಂಡಿಯಾ ಸರಕಾರದವರಿಗೆ ತಿಳಿಸಿದ್ದಾರೆ.

ದಕ್ಷಿಣ ಕನ್ನಡ.

ಸುಳ್ಯ:—ಇಲ್ಲಿ ವೈಲಿಗೆರೋಗವು ಶುರುವಾಗಿಯದೆ. ಆರಂಭದಲ್ಲಿಯೇ ಇದರ ಹಾವಳಿಯನ್ನು ನಿಲ್ಲಿಸುತ್ತಿದ್ದರೆ ಬಹಳ ಉಪಕಾರವಾಗುತ್ತಿತ್ತು.

ಮಳೆಯು ಪ್ರಾರಂಭವಾಗಿ ಬೇಸಾಯ ಕೆಲಸಕ್ಕೆ ಪ್ರಾರಂಭಿಸಿಯದೆ. ವರ್ಗಜಾರರೆಲ್ಲರೂ ಬಹಳ ಸಂತುಷ್ಟರಾಗಿದ್ದಾಗ್ಯೂ ವೈಲಿಗೆ ರೋಗಕ್ಕೆ ಬಹಳ ಹೆದರಿಕೊಂಡು ಇರುತ್ತಾರೆ. ಏನ್ ಬೇಸಾಯದ ಈ ಸಮಯದಲ್ಲಿ ರೋಗವು ಊರಲ್ಲಿ ಪ್ರಬಲವಾದರೆ ಬೇಸಾಯ ಕೆಲಸ ಆಗುವುದು ಅನುಮಾನವೇ ಸರಿ.

ಇಲ್ಲಿಯ ವಾಚಕಮಂದಿರಕ್ಕೆ ಈ ಊರ ಮಹಲೇರಿಯು ಸ್ವಂತ ಆಗಾಗ್ಗೆ ಪೀಡಿಸುವುದರಿಂದ ಇಲ್ಲಿಯ ಮುನಿಸಿಪಲು ಅದಕ್ಕೆ ತಕ್ಕ ಚಿಕಿತ್ಸೆಮಾಡಿ ಈ ಮಂದಿರವನ್ನು ವೃದ್ಧಿಗೆ ತರುತ್ತಿದ್ದರೆ ಬಹಳ ಉಪಕಾರವಾಗುತ್ತಿತ್ತು.

ಪುತ್ತೂರು:—ಇಲ್ಲಿಯ ಸೆಕಂಡರಿ ಸ್ಕೂಲಿನಲ್ಲಿ ಬರುವ ಜೂನ್ ತಿಂಗಳಲ್ಲಿ V ಫೋರ್ಮು ತೆರೆಯಲ್ಪಡುವುದು, ಐಚ್ಛಿಕ ವಿಷಯಗಳು (Optional subjects) ಫಿಜಿಕ್ಸ ಮತ್ತು ಮೆಥಮೆಟಿಕ್ಸ; ಚರಿತ್ರೆ ಮತ್ತು ಕನ್ನಡ, ಇಲ್ಲವೆ ಸಂಸ್ಕೃತ—ಇವುಗಳನ್ನು ಕಲಿಸುವ ಏರ್ಪಾಡು ಮಾಡಲಾಗಿದೆ. ಈ ತರಗತಿಗೆ ಸೇರತಕ್ಕ ವಿದ್ಯಾರ್ಥಿಗಳು ದಾಖಲಾಗುವುದಕ್ಕೆ ಅರ್ಜಿಗಳನ್ನು ಹೆಡ್ ಮಾಸ್ತರರ ವಿಳಾಸಕ್ಕೆ ಕಳುಹಿಸಬೇಕಾಗಿ ಸೂಚಿಸಲಾಗಿದೆ.

ಎಸ್. ಶಿವರಾವ್,
ಕಾರ್ಯದರ್ಶಿ ವಿದ್ಯಾವರ್ಧಕ ಸಂಘ.

ಇಲ್ಲಿಯ ರೆವೆನ್ಯೂ ಡಿವಿಜನಲ್ ಆಫೀಸರರ ಸರ್ಕೀಟು:—ತಾ. 5, 6, 7, ವಿಟ್ಲ. ತಾ. 8, 9, 10, ಆನೆಕಲ್. ತಾ. 11ರಿಂದ 14 ಮಂಜೇಶ್ವರ. ತಾ. 15ರಿಂದ 19, ಮಂಗಳೂರು. ತಾ. 20ರಿಂದ 26, ಹೊಸದುರ್ಗ.

ಸಂಪಾಜೆ:—ಕಳೆದ ಎಪ್ರೀಲ್ ತಿಂಗಳಲ್ಲಿ ಪಟೇಲ ಸಣ್ಣಯ ಗೌಡರ ಮನೆಯಲ್ಲಿ ಆದ ವಿವಾಹಸಂದರ್ಭದಲ್ಲಿ ಗೌಡುಗಳ ಜಾತಿಯ ವಿದ್ಯಾರ್ಥಿಗಳಿಗೋಸ್ಕರ ಪುತ್ತೂರಲ್ಲಿ ಒಂದು ಹೊಸ್ಟೇಲು ಕಟ್ಟಿಸುವ ಸಂಬಂಧ ಒಂದು ಮೀಟಿಂಗು ನಡೆಯಿತು. ಸಭೆಗೆ ಅಧ್ಯಕ್ಷಸ್ಥಾನವನ್ನು ಮ| ರಾ| ರಾ| ಶೀನಪ್ಪಹೆಗ್ಗಡೆಗಳು ವಹಿಸಿಕೊಂಡಿದ್ದರು. ಅಧ್ಯಕ್ಷರ ಸಮಯೋಚಿತ ಭಾಷಣಗಳು ಆದ ನಂತರ ಮ| ರಾ| ರಾ| ಸುಬ್ರಹ್ಮಣ್ಯ ನಡುಮನೆ ವಿಠಪ್ಪ ಗೌಡರಿಂದಲೂ ಮ| ರಾ| ರಾ| ಚೆನ್ನಪ್ಪ ಮಾಸ್ತರರಿಂದಲೂ ವಿದ್ಯೆ ಮತ್ತು ಹೊಸ್ಟೇಲು ಅಗತ್ಯವೆಂತ ಭಾಷಣಗಳು ನಡೆದವು. ಕೂಡಿದ ಸ್ವಜಾತಿ ಗೃಹಸ್ಥರು ರೂಪಾಯಿ ೭೦೦—೦—೦ರ ವರೆಗೆ ವಾಗ್ದಾನ ಮಾಡಿದ್ದಲ್ಲದೆ ಮದುವೆಮನೆಯಿಂದ ರೂ. ೫—೦—೦ ವಸೂಲು ಕೊಟ್ಟಿದ್ದಲ್ಲದೆ ಹುಟ್ಟಿಗೆ ರೂ. ೨೦—೦—೦ ವಸೂಲು ಕೊಡುವುದರಲ್ಲಿ [illegible] ಆದರೆ ಈ ಸಂಘವು ಏರ್ಪಡಿಸಿ ಒಂದೆರಡು ವರ್ಷಗಳಾದಾಗ್ಯೂ [illegible] ಪ್ರಕಾರ ರಿಜಿಸ್ಟ್ರು ಮಾಡಿಸದೆ ಇರುವುದು ತುಂಬಾ ವಿಷಾದಕರ. ಸಂಘವು [illegible] ಮುಂದೊತ್ತಿ ಬರುವಾಗ್ಗೆ ಗೌಡರ ಜಾತಿಯವರು ಇಷ್ಟು ಹಿಂದಬೀಳುವುದು ದುರಾದೃಷ್ಟವೇ ಸರಿ. ಆದ್ದರಿಂದ ಈ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಇನ್ನಾದರೂ ತಮ್ಮ ಸ್ವಂತ ಕೆಲಸ ಒಟ್ಟಿಗೆ ಇದೊಂದು ತಮ್ಮ ಗೃಹ ಕೆಲಸವೆಂದು ಗ್ರಹಿಸಿ ಸಂಘ ರಿಜಿಸ್ಟ್ರು ಮಾಡಿಸಿ ಕೆಲಸ ಮುಂದರಿಸುತ್ತಿದ್ದರೆ ಬಹಳ ಉಪಕಾರವಾಗುತ್ತಿತ್ತು. ವಂತಿಗೆಯ ವಾಗ್ದಾನದ ಹಣವು ಕೂಡಾ ಪೂರಾ ವಸೂಲಾಗಿ ಅನ್ಯಾಕ್ರಾಂತವಾಗದ ಹಾಗೆ ಕೂಡಲೆ ಪಾತ್ರರಾಗಬೇಕೆಂಬುದಾಗಿ ನಂಬುತ್ತೇನೆ.

[illegible]
ಇಂಡಿಯಾ ಕಾಂಗ್ರೆಸ ಕಮಿಟಿಯ ಅಧಿವೇಶನ
[illegible]
ಸಮಾಚಾರ ಸಂಗ್ರಹಗಳು:—
ಪರದೇಶ ವೃತ್ತಾಂತ
ಸ್ವದೇಶ ವರ್ತಮಾನ
ಹಂಟರ್ ಕಮಿಟಿ ರಿಪೋರ್ಟು
[illegible]
ಸುಳ್ಳಿ ಸಂಹಾರ, ಮೊಹಬತ್ತೆ ಪುಷ್ಕರು, [illegible]
ವೇತವಲನೇ ಕರ್ನಾಟಕ ಪರಿಷತ್ತಿನಲ್ಲಿ ಅಧ್ಯಕ್ಷರು ಮಾಡಿದ ಭಾಷಣ
ಇಂಗ್ಲಿಷ ಭಾಷೆಯ ಬಾಧೆ
ಉತ್ತರ ಕನ್ನಡ ಜಿಲ್ಲೆಯ ಭಿಂತತ್ತು, ಶೇಠ ನಾರಾಯಣ ಗಣೇಶ ಚಂದಾವರಕರ ಇವರ ಭಾಷಣ
ಪತ್ರವ್ಯವಹಾರ
ದಕ್ಷಿಣ ಕನ್ನಡ ವೀರಶೈವ ಶ್ರೀ ಜ್ಞಾನೋದಯ ಸಿದ್ಧಾಂತ

ಸ್ವದೇಶಾಭಿಮಾನಿ.

ಶಕ ೧೮೪೧ ಜ್ಯೇಷ್ಠ ಬ ೩ ಶುಕ್ರವಾರ

ವರದಿಯು ಪರದೆಯ ಹೊರಗೆ ಬಂತು!

ಪಂಜಾಬಿನಲ್ಲಿ ಕಳೆದ ವರ್ಷ ಲಷ್ಕರ ಕಾನೂನಿನ ಆಳಿಕೆಯ ಸಮಯದಲ್ಲಿ ನಡೆದ ಅಪಾಯಕೃತಗಳ ತನಖೆಗಾಗಿ ನೇಮಕವಾದ ಸರಕಾರಿ ಹಂಟರ ಕಮಿಟಿಯ ರಿಪೋರ್ಟು ಈಗ ಎಷ್ಟೋ ಸಮಯದಿಂದ ಹೊರಗೆ ಬರುತ್ತದೆ ಎಂದಿದ್ದು ಕೊನೆಗೆ ಕಳೆದವಾರ ಬಹಿರಂಗಕ್ಕೆ ಬಂತು 'ರಿಪೋರ್ಟ್' ಎಂಬ ಶಬ್ದಕ್ಕೆ ಇಲ್ಲಿ ವರದಿ ಎಂಬ ಮಾತನ್ನು ಉಪಯೋಗಿಸಿದ್ದೇವೆ, ಇಷ್ಟು ಹೇಳಿ ಮುಂದರಿಸೋಣ ಮೂಲ ವರದಿಯು ಅರ್ಧ ಪುರದಿದ್ದು ಸರಕಾರವು ಎಲ್ಲಾ ಜನರ ಮಾಹಿತಿಯ ಬಗ್ಗೆ ಅದರ ಚಿಕ್ಕ ಸಾರಾಂಶವನ್ನು ಪ್ರಕಟಿಸಿದೆ. ಈ ವರದಿಯನ್ನು ಬರೆಯುವವರಲ್ಲಿ ಮತಭೇದವುಂಟಾಗಿ ಅವರಲ್ಲಿ ಎರಡು ತಂಡಗಳು ಉಂಟಾಗಿವೆ. ಕಮಿಟಿಯಲ್ಲಿ ಇಂಗ್ಲಿಷ್ ಮೆಂಬರುಗಳ ಸಂಖ್ಯೆಯು ಅಧಿಕವಾಗಿದ್ದುದರಿಂದ ಬಹುಮತವು ಅವರದಾಗಿದೆ ಹಿಂದಿ ಮೆಂಬರುಗಳು ಮೂವರೆ ಇದ್ದರು ಇವರು ತಮ್ಮ ಮತಭೇದಪತ್ರಿಕೆಯನ್ನು (dissent) ಆ ವರದಿಗೆ ಪ್ರತ್ಯೇಕವಾಗಿ ಜೋಡಿಸಿದ್ದಾರೆ. ಇಂಗ್ಲಿಷ್ ಮೆಂಬರುಗಳಿಗೂ ಹಿಂದಿ ಮೆಂಬರುಗಳಿಗೂ ಇರುವ ಮತಭೇದದ ಸ್ಥಳಗಳು ಯಾವವು, ಇವರಿಬ್ಬರಲ್ಲಿ ಯಾವ ಯಾವ ವಿಷಯಗಳನ್ನು ಕುರಿತು ಭಿನ್ನಾಭಿಪ್ರಾಯವು ಹುಟ್ಟಿದೆ ಎಂಬುದನ್ನು ಇಲ್ಲಿ ನಿರ್ದೇಶಿಸದೆನೆ ಜಾಣಾಕ್ಷರಾದ ನಮ್ಮ ವಾಚಕರು ತಾವಾಗಿ ಊಹಿಸಬಲ್ಲರು ಅವರಿಗಾಗಿ ಆ ಮತಭೇದದ ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸುವ ಅವಶ್ಯಕತೆ ಇಲ್ಲವೆಂಬುದು ನಿಜ ತಥಾಪಿ ಜೊತೆಯಲ್ಲಿರುವ ಬೆಲೆಯ ಚೀಟಿನಿಂದ ಕ್ರಯವು ಇಂತಿಷ್ಟೆಂದು ಗೊತ್ತಾಗುವುದಾದರೂ 'ಇದರ ಕ್ರಯವೆಷ್ಟು' ಎಂದು ಗಿರಾಕಿಗಳು ಕೇಳುವ ವಾಡಿಕೆ ಹೇಗೆ ಇದೆಯೋ ಹಾಗೆಯೇ ಒಂದು ವಿಷಯವು ಸರ್ವವಿದಿತವಾಗಿದ್ದರೂ ಅದನ್ನು ಕೊಂಚಮಟ್ಟಿಗಾದರೂ ಪ್ರಸ್ತಾಪಿಸುವುದು ಪತ್ರಕಾರರ ರೂಢಿಯಾಗಿದೆ ಆದ್ದರಿಂದ ಪರದೆಯ ಹೊರಗೆ ಬಂದ ಈ ವರದಿಯ ತುಸು ಸಮಾಚಾರವನ್ನು ತಿಳಿಸಿಕೊಳ್ಳೋಣ

ಬಹುಮತದವರ ವರದಿಯು ಪಂಜಾಬಿನಲ್ಲಿ ದಂಗೆಯ ಸಂಭವಗಳನ್ನು ವಾದಿಸುತ್ತದೆ ಜನರು ರೈಲಿನ ಕಂಬಿಗಳನ್ನು ಎಬ್ಬಿಸಿ, ತಂತಿಯ ಕಂಭಗಳನ್ನು ಕಿತ್ತು ಸರಕಾರಿ ಆಫೀಸುಗಳನ್ನು ಸುಟ್ಟು, ನಾಲ್ಕು ಕಡೆಗಳಲ್ಲಿ ಭಯಂಕರ ರಾಜದ್ರೋಹದ ಭಾಷಣಗಳನ್ನು ಮಾಡತೊಡಗಿದರು, ಈ ಎಲ್ಲಾ ಕಾರಣಗಳಿಂದ ದಂಗೆಯ ಪೂರ್ವರಂಗವನ್ನು ಊಹಿಸಲು ಯಾವ ಅನುಮಾನವೂ ಇಲ್ಲವೆಂದು ಬಹುಮತದ ವರದಿಯು ತನ್ನ ಮತವನ್ನು ಕೊಟ್ಟಿದೆ ಆದರೆ ಹಿಂದಿ ಮೆಂಬರುಗಳು ಇದನ್ನು ಸಮ್ಮತಿಸುವುದಿಲ್ಲ. ಕಾಯಿದೆಯ ಮಾತಿನಿಂದ ಒಂದು ವೇಳೆ 'ದಂಗೆ'ಯೆಂದು ಕೆಲವರು ಹೇಳಬಹುದಾದರೂ ಪಂಜಾಬಿನಲ್ಲಿ ಸಂಭವಿಸಿದ್ದು ಒರೆ ಅಕ್ರಮವಲ್ಲದೆ ಇನ್ನೇನು ಅಲ್ಲ, 'ದಂಗೆ' ಎಂದು ಹೆಸರು ಕೊಡಬೇಕಾದರೆ ಆ ಪ್ರಯತ್ನದಲ್ಲಿ ಸರಕಾರವನ್ನು ತಳ್ಳಿಹಾಕುವ ಇಂಗಿತವು ಇರಬೇಕು, ಮತ್ತು ಇಂಥಾ ಇಂಗಿತವಿದ್ದದ್ದು ಸುತರಾಂ ಕಂಡುಬರುವುದಿಲ್ಲ. ಹೀಗಿರಲು ಪಂಜಾಬಿನಲ್ಲಿ ದಂಗೆಯು ಆರೋಪ [illegible]

[illegible] ಮಾತ್ರವಲ್ಲ, ಇದು ಅಲ್ಲಿಯ [illegible] ವಿಷಯವೆಂದು ಅವರ ಅಭಿಪ್ರಾಯವು. ಆದ್ದರಿಂದ ಈ ಸ್ಥಿತಿಯಲ್ಲಿ ಎಂದರೆ ದಂಗೆಯ ನಿಜವಾದ ಕಾರಣಗಳೇ ಇಲ್ಲದಿರುವ ಸಂದರ್ಭದಲ್ಲಿ ಲಷ್ಕರ ಕಾನೂನನ್ನು ಲಗಾವು ಮಾಡುವುದು ಎಷ್ಟು ಸುಸಂಗತವಾದೀತು? ಈ ಪ್ರಶ್ನೆಯ ವಿಷಯದಲ್ಲಿ ಬಹುಮತದವರು ಕಾಲ್ಪನಿಕ ದಂಗೆಯ ವಂಧ್ಯಾಪುತ್ರನು ಜನ್ಮವೆತ್ತುವನೆಂದು ನಂಬಿಕೊಂಡು ಮುಂದರಿಸಿದ್ದ ಕಾರಣ ಅವರಿಗೆ ಆ ವಂಧ್ಯಾಪುತ್ರನ ಬಾಲಗ್ರಹ ರೋಗಕ್ಕೆ ಪಂಜಾಬ ಸರಕಾರವು ಲಷ್ಕರ ಕಾನೂನಿನ ಮಾತ್ರೆಯನ್ನು ಕೊಡಮಾಡಿದ್ದು ಯುಕ್ತವೆಂದು ತೋರುತ್ತದೆ. ಆದರೆ ಇದೂ ಒಂದು ಮತಭೇದದ ಸ್ಥಳವಾದ್ದರಿಂದ ಹಿಂದಿಮೆಂಬರುಗಳು ಲಷ್ಕರ ಕಾನೂನಿನ ಜಾರಿಯನ್ನು ಸಮ್ಮತಿಸುವುದಿಲ್ಲ ದಂಗೆಯ ಮೂಲಕಾರಣಗಳು ಮಾಯಾಮಯವಾದ ಬಳಿಕ ಅವುಗಳ ಆಧಾರದಿಂದ ಲಷ್ಕರ ಕಾನೂನನ್ನು ಜಾರಿಯಲ್ಲಿ ತರುವುದು ಅವಿಚಾರದ ಕೆಲಸವಲ್ಲವೆ? ಲಷ್ಕರ ಕಾನೂನನ್ನು ಜಾಹೀರ ಪಡಿಸುವುದು ಸಾಮಾನ್ಯ ಕೆಲಸವಲ್ಲ ಸೌಮ್ಯತೆಯ ಎಲ್ಲ ಉಪಾಯಗಳು ಕುಂಠಿತವಾದವು, ನಡೆಯುವ ಭಯಂಕರ ಅತ್ಯಾಚಾರಗಳನ್ನು ನಿಲ್ಲಿಸಲು ಇನ್ನೊಂದು ದಾರಿ ಇಲ್ಲ, ಇನ್ನೊಂದು ಸಾಧನವಿಲ್ಲ, ಸರಕಾರದ ಹಾಗು ಜನತೆಯ ಎತ್ತಿದ ಮತಗಳು ಇಷ್ಟರಲ್ಲಿ ಬಿದ್ದು ಅತ್ಯಾಚಾರಿಗಳ ಕೈಕರಿಕ್ಕಿ [illegible] ಈ ತೆರದ ಅಸಹ್ಯ ಪ್ರಸಂಗವು ಯಾವಾಗ ಒದಗಹತ್ತುವುದೋ ಆಗ ವಿಚಾರವಂತವಾದ ಸರಕಾರವು ವಿಚಾರಾಚಾರವೇನೂ ಇಲ್ಲದಿರುವ ಲಷ್ಕರಕಾನೂನಿನ ಬ್ರಹ್ಮಾಸ್ತ್ರವನ್ನು ಒಡುತ್ತದೆ ಆದರೆ ಪಂಜಾಬಿನಲ್ಲಿ ಇಂಥ ಭಯಂಕರ ಪ್ರಸಂಗವು ಒದಗಲಿಲ್ಲ ಆಗ ಲಷ್ಕರ ಕಾನೂನಿನ ಅವಶ್ಯಕತೆ ಎನಿತ್ತು? ಎಂಬುದಾಗಿ ಹಿಂದಿ ಮೆಂಬರುಗಳು ತಕರಾರು ಪಂಜಾಬ ಪ್ರಕರಣದಲ್ಲಿ ಪ್ರಾರಂಭದಿಂದ ಕಡೆಯತನಕ ನಿಲ್ಲುವ ಪ್ರಧಾನ ಪಾತ್ರವು ಯಾವದೆಂದರೆ, ಜನರಲ್ ಡಾಯರ್ ಇವರು ಇವರನ್ನು ಇತ್ತಲಾಗೆ ದೇಶೀಯ ಪತ್ರಿಕಾಕರ್ತರು ಹಾಗು ವಕ್ತ್ರಗಳು ಏಕವಚನದಿಂದ ಸಂಬೋಧಿಸಹತ್ತಿದ್ದಾರೆ. ಪರಂತು ಅವರು ಅನೇಕ ಪ್ರಾಣಗಳನ್ನು ಅಪಹರಿಸಿದ್ದಾರೆ ಹೀಗಿರುವಾಗ ಅವರಿಗೆ ಯಾಕೆ ಏಕವಚನ! ಆ ಅನೇಕ ವಚನೀಯರಾದ ಜನರಲ್ ಡಾಯರ ವಿಷಯದಲ್ಲಿ ಹಂಟರ ಕಮಿಟಿಯ ವರದಿ, ಹಾಗು ಹಿಂದುಸ್ಥಾನ ಸರಕಾರದ ಅಭಿಪ್ರಾಯಪತ್ರಕ, ಮತ್ತು "ಬಾದಶಹಸರಕಾರ"ದ ಹೆಸರಿನಿಂದ ಬರೆದ ಮಾಂಟೆಗ್ಯುಗಳ ಅಭಿಪ್ರಾಯ, ಪತ್ರಕರ್ತರ ಮತ ಇವು ಸಾವ [illegible]ವಾಗಿ ಒಂದು ಅಭಿಪ್ರಾಯ ಪಡಹತ್ತಿವೆ. ಜನರಲ್ ಡಾಯರರು ಜಲಿಯನ್ ವಾಲಾಬಾಗಿನಲ್ಲಿ ನಿಃಶಸ್ತ್ರರಾದ ಜನಸ್ತೋಮದ ಮೇಲೆ ಏಕಪ್ರಕಾರವಾಗಿ ಗುಂಡುಗಳ ವರ್ಷಣವನ್ನು ಮಾಡಿದ್ದಾಗಲೇ ಇಲ್ಲವೆ ಆ ಜನಸ್ತೋಮವು ಗುಂಡುಗಳ ಎಕ್ಸ್ರೇ ಸ್ವರೂಪವನ್ನು ಕಂಡು, ಹೆದರಿ [illegible] ಬಳಿಕವೂ ದೇವರು ಮುಣುಗಿದ್ದರೂ ಗಂಟೆಯ ಧಾರೆಯನ್ನು ಅಭಿಷೇಕ ಮಂತ್ರವು ಮುಗಿಯುವ ವರೆಗೆ ಬಿಡುವಂತೆ ಆ ಮಹಾಶಯರು [illegible] ಗಳ ಬಾಯಿಯನ್ನು ತೆರೆದಿಟ್ಟದ್ದಾಗಲು ಮಾಂಟೆಗ್ಯುಗಳಿಗೆ ಕೇವಲ ಅಸಮರ್ಥನೀಯವೆಂದ ತೋರುತ್ತದೆ "ಇಂಥ ಪ್ರಿಯ ಶಾಸ ಡಾಯರರ ಕೈಯಿಂದ ಸಾವಿರಾರು ನಿರಪರಾಧಿಗಳ ಪ್ರಾಣಗಳು ನಷ್ಟವಾದವು ಎಂಬುದನ್ನು ಹಿಂದುಸ್ಥಾನ ಸರಕಾರವೂ ಮಿ ಮಾಂಟೆಗ್ಯುಗಳೂ ಒಪ್ಪಿಕೊಂಡ ಡಾಯರರ ಆ ಪಾಪಕೃತ್ಯಕ್ಕೆ ಇವರಿಬ್ಬರು ಯಾವ ಪ್ರಾಯಶ್ಚಿತ್ತವನ್ನು ವಿಧಿಸಿದ್ದಾರೆಂದರೆ, ಡಾಯರರಿಗೆ ಹಿಂದುಸ್ಥಾನದಲ್ಲಿ ಇನ್ನು ಮುಂದೆ ಯಾವ ನೌಕರಿಯೂ (employment) ಸಿಗಲಿಕ್ಕಿಲ್ಲ! ಪಂಜಾಬ ಪ್ರಕರಣದೊಳಗಿನ ಪ್ರಧಾನ ಪಾತ್ರವಾದ ಡಾಯರರ ವಿಷಯದಲ್ಲಿ ಇಷ್ಟು ತೀವ್ರವಾದ ಕಠಿಣ ಶಾಸನವನ್ನು ವಿಧಿಸಿದ ಬಳಿಕ ಸರಕಾರ ಮತ್ತು ಮಾಂಟೆಗ್ಯುಗಳು ಈ ಪ್ರಕರಣದ ಸೂತ್ರಧಾರರಾದ ಸರ್ ಓಡಾಯರರ ಬಿನ್ನು ತಪ್ಪಲು ಮಾತ್ರ ಎಂದು ಮರೆತಿಲ್ಲ ಪಂಜಾಬದ ಸಮೀಪದ ಶತ್ರು ರಾಜ್ಯದಿಂದ ಒಳಸಂಚುಗಾರರ ಒಳಸಂಚಾರ ದೀರ್ಘ ಕಾಲ ಯುದ್ಧದ ಪರಿಸಮಾಪ್ತಿಯಿಂದ ಜನರಲ್ಲಿ ಉಂಟಾದ ಒಂದು ಬಗೆಯ ದಣಿ, ಧಾನ್ಯ ಹೆಯ ಮಿತಿಮೀರಿದ ಸ್ಥಿತಿ ಇತ್ಯಾದಿ ಈ ಕಾರಣಗಳಿಂದ ಪಂಜಾಬಿನಲ್ಲಿ ದಂಗೆಯ ಸಂಭವವು ಅಪರಿಹಾರ್ಯವಾಗಿತ್ತಂತೆ ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿ ಪಂಜಾಬದ್ದೆ ಅಲ್ಲ ಇಡೀ ಹಿಂದುಸ್ಥಾನದ ನೌಕೆಯು ಸುರಕ್ಷಿತವಾಗಿ ಪ್ರಯಾಣ ಮಾಡುವಂತೆ ಓಡಾಯರ ಸರದಾರರು ಬಹುದಕ್ಷತೆಯಿಂದ ಲಷ್ಕರ ಕಾನೂನನ್ನು ಜಾರಿಯಲ್ಲಿ ತಂದದ್ದಕ್ಕಾಗಿ ಹಿಂದುಸ್ಥಾನ ಸರಕಾರ ಹಾಗು ಮಿ ಮಾಂಟೆಗ್ಯುಗಳು ಅವರ ಉಪಕಾರಗಳನ್ನು ವ ನ್ನಿಸಿದ್ದಾರೆ' ಡಾಯರರ ಅಣ್ಣಂದಿರಾದ ಓಡಾಯರ ಲೆಫ್ಟನೆಂಟ್ ಗವರ್ನರರಾಗಿದ್ದರು. ಪರಂತು ಅವರು ಬ್ರಿಟಿಷ್ ಸಾಮ್ರಾಜ್ಯದ ಮೇಲೆ ಈ ವಿಧವಾಗಿ ಮಾಡಿರುವ ಉಪಕಾರದ ದೆಸೆಯಿಂದ ಪ್ರಾಂತಿಕ ಗವರ್ನರ್‌ಸ್ಥಾನದ ಮಾಲೆಯನ್ನು ಅವರ ಕುತ್ತಿಗೆಗೆ ಹಾಕಿ ಮಿ ಮಾಂಟೆಗ್ಯುಗಳು ಅವರ ಉಪಕಾರದಿಂದ ಮುಕ್ತರಾಗುತ್ತಾರೋ ಎನೋ!

ಇದು ಕಮ್ಮಿಟಿಯ ವಿಸ್ತೃತ ವರದಿಯಲ್ಲಿ ಸರಕಾರವು ಪ್ರಕಟಿಸಿದ ಸಂಕ್ಷಿಪ್ತ ಸಾರಾಂಶದ ಮುಖ್ಯ ಸ್ವರೂಪವು ಈ ವರದಿಯನ್ನು ಓದಿ ಎಲ್ಲ ದೇಶೀಯ ಪತ್ರಿಕಾಕರ್ತರು ಆಶ್ಚರ್ಯಪಡುತಿದ್ದಾರೆ, ಹಾಗು ವಿಷಾದಪಡುತಿದ್ದಾರೆ. ಹಂಟರ್ ಕಮ್ಮಿಟಿಯು ಇಂಥ ಅಭಿಪ್ರಾಯವನ್ನು ಹೇಗೆ ಕೊಟ್ಟಿತು! ಮಾಂಟೆಗ್ಯು ದೊರೆಗಳು ಆ ಅಭಿಪ್ರಾಯ[illegible] ಆಶ್ಚರ್ಯವಾಗುತ್ತದೆ [illegible] ಬಲಿಯನ್‌ವಾಲಾ, ದಿಲ್ಲಿ, [illegible] ಮುಂತಾದ ಭಾಗಗಳಲ್ಲಿ ತನಖೆ ಆದ ಸಾಕ್ಷಿಗಳ (ಮತ್ತು ಅವುಗಳ ಸ್ವರೂಪವನ್ನು ನಾವು ಈಗಾಗ್ಗೆ ವಾಚಕರ ಮುಂದೆ ಇಟ್ಟಿದ್ದೇವೆ) ದಂಗೆ ಅಥವಾ ಯುದ್ಧದ ಯಾವ ತರದ ಸಂಭವವೂ ಇದ್ದಿಲ್ಲವೆಂಬುದು ಸ್ಪಷ್ಟವಾಗುತ್ತಿದ್ದು ಮತ್ತು ಇದೆ, ಕಾರಣದಿಂದ ಲಷ್ಕರ ಕಾನೂನನ್ನು ಜಾಹೀರ ಪಡಿಸಿ ನಿಃಶಸ್ತ್ರ ಪ್ರಜೆಗಳ ಮೇಲೆ ಗುಂಡುಗಳನ್ನು ಹಾರಿಸಿ ವಿಮಾನಗಳ ಮೇಲಿಂದ ಬಾಂಬುಗಳನ್ನು ಚೆಲ್ಲಿ ಅವರನ್ನು 'ತ್ರಾಹಿ, ತ್ರಾಹಿ' ಮಾಡಿ ಬಿಟ್ಟದ್ದು ಮತ್ತು ಚಿಕ್ಕ ಮಕ್ಕಳು, ಹೆಂಗಸರು ಇವರನ್ನು ಮೊದಲು ಮಾಡಿಕೊಂಡು ವೃದ್ಧರ ವರೆಗೆ ಸರ್ವ ಸಾಧಾರಣ ಅನೇಕ ಜನರನ್ನು ಸರಾಸರಿಯಾಗಿ ಕೊಂದದ್ದು ಸೂರ್ಯಪ್ರಕಾಶದಂತೆ ಸ್ಪಷ್ಟವಾಗಿ ಲೋಕದ ಮುಂದೆ ಬಂದಾಗ್ಯೂ ಹಂಟರ್ ವರದಿಯು ಅದರ ಮೀಮಾಂಸೆಯನ್ನು ಬೇರೆ ವಿಧವಾಗಿ ಮಾಡುತ್ತದೆ. ಹಿಂದುಸ್ಥಾನ ಸರಕಾರವು ಅದನ್ನು ಅನುಮೋದಿಸುತ್ತದೆ, ಹಾಗು ಮಿ ಮಾಂಟೆಗ್ಯುಗಳು ಇದೆಲ್ಲವನ್ನು ನೋಡಿ ತಲೆಯಲ್ಲಾಡಿಸುತ್ತಾರೆ ಇದು ಆಶ್ಚರ್ಯವಲ್ಲವೆ! ಇದು ಖೇದದ ಮತ್ತು ಶೋಚನೀಯವಾದ ಮಾತಲ್ಲವೆ! ಎಂದು ದೇಶೀಯ ಪತ್ರಿಕಾಕರ್ತರು ಉದ್ಗಾರಗಳನ್ನು ತೆಗೆಯುತಿದ್ದಾರೆ. ಈ ಹಂಟರ್ ಕಮ್ಮಿಟಿಯ ವರದಿ ಹಾಗು ಮಾಂಟಗ್ಯುಗಳ ತೀರ್ಪು ಇವುಗಳನ್ನು ನೋಡಿ ಹಿಂದಿ ಜನರಿಗೆ ಬ್ರಿಟಿಷ್ ನ್ಯಾಯದೇವತೆಯ ಮೇಲಿನ ಭಕ್ತಿ ವಿಶ್ವಾಸಗಳು ಮೊದಲಿನಂತೆಯೇ ಹೇಗೆ ಉಳಿದಾವು, ಹಿಂದಿಜನತೆಯ ವಿಷಯವನ್ನು ಬದಿಗಿಟ್ಟರೂ ಇಂಗ್ಲಿಷರ ಮಿತ್ರರಾದ ಇತರ ರಾಷ್ಟ್ರೀಯರು ಉದಾಹರಣಾರ್ಥವಾಗಿ, ಫ್ರೆಂಚ್, ಇಟಲಿಯನ್, ಅಮೇರಿಕನ್ ಮೊದಲಾದವರು ಈ ವರದಿ ಮತ್ತು ಈ ನಿರ್ಣಯ ಇವುಗಳನ್ನು ಕಂಡು ಏನು ಹೇಳಿಯಾರು ಎಂದು ಹಿಂದೀ ಪತ್ರಕಾರರಿಗೆ ಒಂದು ದೊಡ್ಡ ಯೋಚನೆಯು ಹತ್ತಿದೆ. ಪರಂತು, ನಮಗಿನಕ ಇಂಥ ಯೋಚನೆಯೂ ಇಲ್ಲ, ಇಲ್ಲವೆ ಈ ವಿಷಯದಲ್ಲಿ ಅವರಿಗಾದಂತೆ ಆಶ್ಚರ್ಯವಾಗಲಿ ಖೇದವಾಗಲಿ ಉಂಟಾಗುವುದಿಲ್ಲ ಅಥವಾ ನಿಂಪರಾದಗಳಾದ ಕೆಲವು ನೂರು ಹಿಂದಿ ಪ್ರಾಣಗಳನ್ನು ಅಪಹರಿಸಿದ ಡಾಯರರನ್ನು ಬರೇ ಹಿಂದುಸ್ಥಾನದೊಳಗಿನ ನೌಕರಿಯಿಂದ ಬಹಿಷ್ಕಾರ ಹಾಕಿಬಿಟ್ಟದ್ದಕ್ಕಾಗಿ ಹಾಗು ಲಷ್ಕರ ಕಾನೂನಿನ ಸೂತ್ರಧಾರರಾದ ಸರದಾರ ಓಡಾಯರ ಸಾಹೇಬರನ್ನು ಗೌರವಿಸಿದ್ದಕ್ಕಾಗಿ ನಮ್ಮ ದೇಶೀಯ ಪತ್ರಿಕಾಕರ್ತರು ಉದ್ವೇಗಪಡಹತ್ತಿದಂತೆ ನಾವು ಎಂದೂ ಪಡುವುದಿಲ್ಲ ಕಾರಣ, ಈ ವರದಿಯು ಹಾಗು ನಿರ್ಣಯವು ಕಾಕತಾಲೀಯ ನ್ಯಾಯದಂತೆ ಅನಿರೀಕ್ಷಿತವಾದ್ದಲ್ಲ ಈ ವರದಿಯು ಪರದೆಯ ಒಳಗಿನಿಂದ ಈಗ ಹೊರಗೆ ಬಂದದ್ದಾದರೂ ಕಮಿಟಿಯು ಜನ್ಮವೆತ್ತುವಾಗಲೇ ವರದಿಯ ಈ ಹೊತ್ತಿನ ಸ್ವರೂಪವು ವಿಚಾರವಂತರ ಮನಸ್ಸಿಗೆ ಅಂದೇ ಬಂದು ಹೋಗಿದೆ ಪಂಜಾಬ ಮತ್ತು ಹಿಂದುಸ್ಥಾನ ಸರಕಾರಗಳ ಪ್ರಮಾದದಿಂದ ಈ ಪ್ರಕರಣವು ಉದ್ಭವಿಸಿತು ಬಂದ ಮೇಲೆ ಹಿಂದುಸ್ಥಾನ ಸರಕಾರವು ಈ ಪ್ರಕರಣದಲ್ಲಿ ಪ್ರತಿವಾದಿಯಾಯಿತು. ಪ್ರತಿವಾದಿಯ ಪ್ರಮಾದದಿಂದ ಉಂಟಾದ ಅಪಘಾತಗಳ ತನಖೆಯನ್ನು ನಡಿಸಲು ಬಾದಶಹರ ಆಜ್ಞೆಯ ಮೇರೆಗೆ ಪಾರ್ಲಮೆಂಟು ಕಮ್ಮಿಟಿಯನ್ನು ನೇಮಿಸಬೇಕಾದ್ದು ಆದರೆ ಹಿಂದುಸ್ಥಾನ ಸರಕಾರವೇ ಕಮಿಟಿಯನ್ನು ನೇಮಿಸುತ್ತದೆ ಎಂದ ಮೇಲೆ ಆ ಕಮಿಟಿಯು ಎಂಥ ವರದಿಯನ್ನು ಕೊಟ್ಟೀತು? ಕಮ್ಮಿಟಿಯಲ್ಲಿ ಇಂಗ್ಲಿಷ್ ಮೆಂಬರುಗಳ ಸಂಖ್ಯೆ ಹೆಚ್ಚು, ಗಾಯವಿಟ್ಟು ಪ್ರಾಜ್ಞಕಳೆಕೊಂಡ ಹಿಂದಿ ಜನತೆಯ ಮೆಂಬರುಗಳ ಸಂಖ್ಯೆಯು ಕಡಿಮೆ ಇಂಥ ಅಂತಃರಚನೆಯುಳ್ಳ ಕಮಿಟಿಯು ಇನ್ನೆಂಥ ವರದಿಯನ್ನು ಬರೆದೀತು? ಕಮಿಟಿಯು ಕೆಲಸ ನಡೆಯುವಾಗ ಸಾಕ್ಷಿ ಸಮಯದ ಮಟ್ಟಿಗಾದರೂ ಪಂಜಾಬಿನ ಮುಖ್ಯಸ್ಥರನ್ನೂ ಇತರ ಸಾಕ್ಷಿಗಾರರನ್ನೂ ಬಿಟ್ಟುಕೊಡಿರಿ ಎಂದು ಕೇಳಿಕೊಂಡಲ್ಲಿ ಆ ಕೇಳಿಕೆಯು ಗಾಳಿಗೆ ಹಾರಿಹೋಗಿ ಒಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಿಂದ ನೇಮಕವಾದ ಮಂಡಲವು ಈ ಕಮಿಟಿಯಿಂದ ದೂರಕ್ಕೆ ತೊಲಗಿತು, ಮತ್ತು ಲೋಕಪಕ್ಷದ ಅಂಬೋಣವು ಕಮಿಟಿಯ ಮುಂದೆ ಹೇಗೆ ಬರಬೇಕಿತ್ತೋ ಹಾಗೆ ಬರಲಿಲ್ಲ ಇಂಥ ಅಡಚಣೆಗಳನ್ನು ಉಂಟುಮಾಡಿ ಕೊಟ್ಟ ಕಮ್ಮಿಟಿಯು ಇನ್ನೆಂಥ ವರದಿಯನ್ನು ತಯಾರಿಸೀತು? ಸಾರಾಂಶ ಇದರ ಪೂರ್ವ ಚರಿತ್ರವನ್ನು ನೋಡಿದ್ದಲ್ಲಿ ಈ ವರದಿಯಿಂದ ಯಾರಿಗೂ ಆಶ್ಚರ್ಯವಾಗಲಿ ಪಶ್ಚಾತ್ತಾಪವಾಗಲಿ ಉಂಟಾಗುವ ಕಾರಣವಿಲ್ಲ ಈ ವರದಿಯು ಇತ್ತಲಾಗೆ ಪರದೆಯಿಂದ ತನ್ನ ಮುಖವನ್ನು ಹೊರಗೆ ಹಾಕಿದ್ದಿದ್ದರೂ ಕಮಿಟಿಯ ಅಪಾರದರ್ಶಕವಾದ ದಪ್ಪ ಪರದೆಯಲ್ಲಿರುವಾಗಲೆ ಅದರ ಮುಖವು ವಿಚಾರವಂತರ ದೃಷ್ಟಿಗೆ ಬಿದ್ದೆ ಇತ್ತು ಮಗುವು ತನ್ನ ಮುಂದಿನ ಕರ್ತೃತ್ವವನ್ನು ತೊಟ್ಟಿಲಲ್ಲೆ ಸೂಚಿಸುವಂತೆ ಅಥವಾ ಬೆಳೆಯ ಲಕ್ಷಣವು ಮೊಳೆಯಿಂದ ಗೊತ್ತಾಗುವಂತೆ ಈ ವರದಿಯ ಸ್ವರೂಪವು ಪೂರ್ವದಲ್ಲೆ ತಿಳಿದುಬಂದಿರುವ ಕಾರಣ ಆ ಬಗ್ಗೆ ಯಾರೂ ಆಶ್ಚರ್ಯ ಅಥವಾ ವಿಷಾದಪಡುವ ಅಗತ್ಯವಿಲ್ಲ.

ಮೆಸ್ಟನ್ ಕಮ್ಮಿಟಿಯವರ ಹಂಚಿಕೆ.

ಹಿಂದಿನ ಸಂಚಿಕೆಯಲ್ಲಿ ನಮೂದಿಸಿದ್ದ ಈ ಕ್ರಮದಲ್ಲಿ ವರಿಷ್ಠ ಸರಕಾರಕ್ಕೆ ಆಗುವ ನಷ್ಟ ಶಿಲಕನ್ನು ಭರ್ತಿಮಾಡುವುದಕ್ಕೆ [illegible] ವರ್ಷದ ಖರ್ಚನ್ನು ಆದಾಯದಿಂದ ಕಳೆದು ಉಳಿಯುವ ಮುನಾಫೆಯು ದಾರಿಮಾಡಿಯಿಟ್ಟರೆ ತಂತಮ್ಮ ಸಂಸ್ಥಾನಕ್ಕೆ ಅಗತ್ಯವಾದ ಹಲವು ವಿಷಯಗಳನ್ನು [illegible] ಮಾಡಲಾಗದೆ [illegible]

ಯುವಾಗುತ್ತದೆ. ಈಗ ಯುದ್ಧದ ನಿಮಿತ್ತ ಅರವಾಸಿ ಉಂಟಾದದ್ದು ಇದ್ದರೆ, ಅದೇ ಕಾರಣದಿಂದ ವರಿಷ್ಠ ಸರಕಾರದ ನಷ್ಟ ಶಿಲಕು ಭರ್ತಿಯಾಗುವ ವರೆಗೆ ಅತಿ ಉಪವಾಸ ಸಾಯಬೇಕು ಎಂದಂತಾಗುತ್ತದೆ. ಮತ್ತು ಹಲವು ಪ್ರಾಂತಿಕ ಸರಕಾರಂಗಳಿಗೆ ಅತೀ ಆವಶ್ಯವಾದ ಸಲಹೆಗಳು ಯುದ್ಧ ನಿಮಿತ್ತ ಬಾಕಿ ಉಳಿದವೆ ಎಂದು ಕಮ್ಮಿಟಿಯವರು ಒಪ್ಪುತ್ತಾರೆ. ಹಾಗಿದ್ದರೆ ೧೯೨೦—೨೧ನೇ ಇಸವಿಯ ಖರ್ಚಿಗೆ ಇಂಥ ಯಾವ ಹೊಸ ಖರ್ಚನ್ನು ಸೇರಿಸಿಕೊಂಡು ಇನ್ ಮುನಾಫೆಯ ಅಂದಾಜು ಕಟ್ಟಬೇಕೆಂದು ನಿರ್ಧರಿಸುವುದು ಅಸಾಧ್ಯವಾದ್ದರಿಂದ ಚೆಮ್ಸ್‌ಫೋರ್ಡ ಮೊಂಟೆಗ್ಯು ಯೋಜನೆಯ ದಾವಾಶಯ ಸೂಚನೆಯನ್ನು ತಿರಸ್ಕರಿಸಿ ನೂತನ ಸೂಚನೆ ಮಾಡಬೇಕಾಯಿತು ಎಂದು ಕಮ್ಮಿಟಿಯವರ ಅಭಿಪ್ರಾಯ. ಕಮ್ಮಿಟಿಯವರ ಹಂಚಿಕೆಯಲ್ಲಿ ಪ್ರತೀ ಪ್ರಾಂತಿಕ ಸರಕಾರದ ಆದಾಯವು ಹೆಚ್ಚಿದಾಗ ಆಕಸ್ಮಿಕವಾಗಿ ಸಿಕ್ಕಿದ ಈ ಹಣವನ್ನು ಒಂದೇ ಬಾರಿ ಖರ್ಚು ಮಾಡಲಿಕ್ಕೆ ಹೋಗಿ ದುರ್ವ್ಯಯವಾಗದ್ದಾಗೂ, ವರಿಷ್ಠ ಸರಕಾರಕ್ಕಿರುವ ನಷ್ಟವನ್ನು ಭರ್ತಿಮಾಡುವ ಹಾಗೂ ಒಂದು ನೂತನ ಯೋಜನೆಯನ್ನು ತಾವು ಸೃಷ್ಟಿಸಬೇಕಾಯಿತು ಎಂದು ಕಮ್ಮಿಟಿಯವರ ಅಂಬೋಣವಿದೆ.

ಬೇರೆ ಬೇರೆ ಪ್ರಾಂತಗಳಿಗೆ ಒಂದೇ ಬಗೆಯ ದಾವಾಶಯ ಹಾಕದೆ ಇರುವುದಕ್ಕೆ ಕಮ್ಮಿಟಿಯವರು ಇನ್ನೂ ಕಾರಣಗಳನ್ನು ಕೊಟ್ಟಿದ್ದಾರೆ. ಪೆನ್ಶನ್ ಹೊಂದಿದ ತಂದೆಗೆ ಪ್ರಾಯಸ್ಥರಾದ ಇಬ್ಬರು ಅಪ್ರಾಯಸ್ಥರಾದ ಇಬ್ಬರು ಮಕ್ಕಳು ಇದ್ದಾರೆ. ತಂದೆಯು ತನ್ನ ಸರ್ವಾದಿ ಆಸ್ತಿಯನ್ನು ಮಕ್ಕಳಿಗೆ ಹಂಚಿಕೊಟ್ಟು ಆ ಮಕ್ಕಳಿಂದ ತನ್ನ ಜೀವನಾಂಶವನ್ನು ವರ್ಷಂಪ್ರತಿ ಬೇಡಿಕೊಳ್ಳುವುದು ಯಾರಿಗೂ ಒಗ್ಗುವುದಿಲ್ಲ. ಆಸ್ತಿಯನ್ನು ಪಾಲು ಮಾಡಕೊಡುವಾಗ ನಾಲ್ವರಿಗೂ ಕಾನೂನು ಮೇರೆಗೆ ಸಮಪಾಲು ಸಿಗಬೇಕು. ಹಿರೇಮಗನು ವ್ಯಾಪಾರಕ್ಕೆ ಹಣ ಹಾಕಿದ್ದಾನೆ, ಅವನಿಗೆ ಸ್ವಲ್ಪ ಸಹಾಯ ಮಾಡದೆ ಇದ್ದರೆ ಅವನ ವ್ಯಾಪಾರವು ಕೆಟ್ಟು ಹೋಗುತ್ತದೆ. ಎರಡನೆಯ ಮಗನು ಕೃಷಿಕನು. ಅವನ ಹಿಸ್ಸೆಗೆ ಬರಬಹುದಾದ ಆಸ್ತಿಯನ್ನು ನೋಡಿಕೊಳ್ಳಲಿಕ್ಕೆ ಅವನಿಗೆ ಹೆಚ್ಚು ನಗದಿ ಹಣದ ಸಹಾಯ ಬೇಕಿಲ್ಲ. ೩ನೆ ೪ನೆ ಮಕ್ಕಳು ಅಪ್ರಾಯಸ್ಥ ವಿದ್ಯಾರ್ಥಿಗಳು. ಅವರಲ್ಲಿ ಒಬ್ಬನು ಅಪಂಗು, ಅವನು ವಿದ್ಯೆ ಕಲಿತರೂ ತಂದೆಯ ಆಸ್ತಿಯಿಂದಲೇ ವಿಶೇಷವಾಗಿ ತನ್ನ ಜೀವನ ನಡಿಸಬೇಕಲ್ಲದೆ ಹೆಚ್ಚಿಗೆ ದುಡಿಯಲಾರನು. ನಾಲ್ಕನೆಯವನು ಅತೀ ಕಿರಿಯನಾಗಿ ಇನ್ನೂ ಮೊಳಕೆಯಲ್ಲಿ ಎಂಬಂತೆ ಇದ್ದರೂ ಮುಂದೆ ಹಣ ಸಹಾಯ ಸಿಕ್ಕಿದರೆ ಸಿವಿಲ್ ಸರ್ವಿಸು ವರೆಗೆ ಕಲಿಯುವಷ್ಟು ಯೋಗ್ಯತೆಯುಳ್ಳವನು ಎನ್ನುವ. ತಂದೆಯು ಈಗಲೇ ಎಲ್ಲಾ ಆಸ್ತಿಪಾಸ್ತಿಯಲ್ಲಿ ಅಣ್ಣತಮ್ಮಂದಿರಿಗೆ ಸಮಪಾಲು ಕೊಟ್ಟು ತಾನಿರುವ ವರೆಗೆ ಕುಟುಂಬದ ಸಂರಕ್ಷಣೆಯನ್ನು ತನ್ನ ಪೆನ್ಶನ್ ಹಣದಿಂದಲೇ ಸಾಗಿಸಲಿಕ್ಕೆ ಪೆನ್ಶನ್ ಮೊಬಲಗು ಸಾಲದು. ಪ್ರತಿಯೊಬ್ಬನ ಹಿಸ್ಸೆಯಿಂದ ಸ್ವಲ್ಪ ಸ್ವಲ್ಪ ಹಣವನ್ನು ಮನೆವಾರ್ತೆ ಖರ್ಚಿಗೆ ಪಡೆಯಬೇಕಾಗುತ್ತದೆ. ವರಿಷ್ಠ ಮತ್ತು ಪ್ರಾಂತಿಕ ಸರಕಾರಗಳ ಸಂಬಂಧವು ಈಗ ಈ ಸ್ಥಿತಿಗೆ ಬಂದಿದೆ.

ಮುದುಕನು ತನ್ನ ಸ್ಥಿರ ಆಸ್ತಿಯನ್ನು ಸಮಪಾಲಾಗಿ ಮಕ್ಕಳಿಗೆ ಹಂಚಿಕೊಟ್ಟು ತಾನು ಅದರಲ್ಲಿ ಏನೂ ಅಂಶವಿಟ್ಟುಕೊಳ್ಳಲಿಲ್ಲ ಎನ್ನೋಣ. ಹಿಸೆ ಮಾಡಿಕೊಡುವ ವರೆಗೆ ತಂದೆಯು ಒಬ್ಬ ಮಗನಿಗೆ ಖರ್ಚಿಗೆ ಕೊಟ್ಟ ಹಣ ಹೆಚ್ಚು ಇನ್ನೊಬ್ಬನಿಗೆ ಕಡಿಮೆ ಎಂದು ತಂದೆಯ ಸ್ವಾರ್ಜಿತ ಆಸ್ತಿಯ ವಿಷಯವಾಗಿ ಮಕ್ಕಳು ಆಕ್ಷೇಪಿಸಲು ಎಡೆಯಿಲ್ಲ. ಮಕ್ಕಳಿಗೆ "ಎವೊರ್ಡ" ಮೂಲಕ ಹಕ್ಕು ಹುಟ್ಟಿದ ಮೇಲೆ ಮನೆವಾರ್ತೆ ಖರ್ಚಿಗೆ ಆ ಎವೊರ್ಡಿನಲ್ಲಿ ನಿರ್ಣಯಿಸಿದ ಮೇರೆಗೆ ಮಾತ್ರವೇ ಆ ಮಕ್ಕಳ ಹಿಸೆಯಿಂದ ಹಣ ಸಲಬೇಕಾದೀತಲ್ಲದೆ ಅದರಲ್ಲಿ ಅನಂತರ ಭೇದ ಕಲ್ಪಿಸಲು ಸಾಧ್ಯವಿಲ್ಲ. ಎರಡನೆ ಮಗ ಅಂದರೆ ಕೃಷಿಕನ ಹಿಸೆಯ ಆಸ್ತಿಯಿಂದ ದೇವರ ನೇವೇದ್ಯದ ಬೆಳ್ತಿಗೆ ಅಕ್ಕಿ ಹಿಸೆಯಾಗುವ ಮುಂಚೆ ಉಪಯೋಗಿಸುತ್ತಿದ್ದರು ಎಂಬ ಕಾರಣದಿಂದ ಮುಂದೆಯೂ ಅದೇ ಆಸ್ತಿಯ ಅಕ್ಕಿಯನ್ನು ಮನೆ ಖರ್ಚಿಗೂ ದೇವರ ನೇವೇದ್ಯಕ್ಕೂ ಉಪಯೋಗಿಸಬೇಕೆಂದು ತಂದೆಯು ನಿರ್ಧಾರಮಾಡಿದರೆ ಆ ಕೃಷಿಕನು ಪ್ರಯಾಸ ಪಟ್ಟು ಬೆಳ್ತಿಗೆ ಅಕ್ಕಿ ಮಾಡಿ ಇತರ ಭಾಗಸ್ಥರೂ ಕೂಡಿರುವ ಮನೆತನಕ್ಕೆ ತನ್ನ ಹೆಚ್ಚಿನ ಬೆಳೆಯ ಅಕ್ಕಿಯನ್ನು ಉಪಯೋಗಿಸಲಿಕ್ಕೆ ಕೊಡಬೇಕು, ಈ ಪ್ರಮಾಣಕ್ಕೆ ವಿರುದ್ಧವಾಗಬಾರದು, ಉಳಿಕಿಯವರು ತಮ್ಮ ಆಸ್ತಿಯ ಅಕ್ಕಿಯನ್ನು ಮಳೆಗಾಲದಲ್ಲಿ ಬೆಲೆ ಏರಿದ ಹಾಗೆ ಮಾರಿ ದುಡ್ಡು ಕಟ್ಟಿಕೊಳ್ಳಬಹುದು ಎಂದರೆ ಕೃಷಿಕ ಮಗನಿಗೆ ಸಾರ್ವದಾ ನಷ್ಟ ಉಂಟೇ ಉಂಟೆಂದು ಬೇರೆ ಹೇಳಬೇಕಿಲ್ಲ. ಇದಲ್ಲದೆ ವರ್ತಕ ಮಗನಿಗೆ ಹಣದ ತಗಾದೆ ಹೆಚ್ಚು ಇದೆ ಎಂಬದರಿಂದ ಅವನ ವ್ಯಾಪಾರ ವೃದ್ಧಿಗೋಸ್ಕರ ಕೃಷಿಕ ಮಗನ ಮುನಾಫೆಯತ್ತು ವ್ಯಾಪಾರಸ್ಥನಿಗೆ ಕಡಿಮೆ ಬಡ್ಡಿಗೆ ಯಾವಾಗಲೂ ಕೊಡಬೇಕೆಂದೂ ತಂದೆ ಹೇಳಿದರೆ ಹೇಗೆ ಸರಿಯಾದೀತು? ಅಥವಾ ಅಪಂಗುವಾದವನಿಗೆ ಹೆಚ್ಚು ಹಣ ಮುಂದೆ ದುಡಿಯಲು ಸಾಧ್ಯವಿಲ್ಲ, ಆದ್ದರಿಂದ ಮನೆವಾರ್ತೆ ಖರ್ಚಿಗೆ ಅವನ ಹಿಸೆಯಿಂದ ಅಂಶ ಪಡೆಯುವುದು ಬೇಡ, ಸಿವಿಲ್ ಸರ್ವಿಸಿಗೆ ಹೋಗುವವನಿಗೆ ಮುಂದೆ ಹೇರಳ ಹಣದ ಅಗತ್ಯ ಬಿದ್ದೀತು, ಅವನು ಸೀಮೆಗೆ ಹೋಗಿ ತನ್ನ ಹಿಸೆಯನ್ನು ಮಾರಬೇಕಾದೀತು, ಆದ್ದರಿಂದ ಅವನ ಹಿಸೆಯಿಂದಲೂ ಮನೆವಾರ್ತೆ ಖರ್ಚಿಗೆ ವಂತಿಗೆ ಬೇಡ, ಕೃಷಿಕನಿಗೆ ಮಕ್ಕಳು ಇನ್ನೂ ಸಣ್ಣವು ಅವನ ಮಟ್ಟಿಗೆ ಹೆಚ್ಚು ಖರ್ಚು ಇಲ್ಲ, ಆದ್ದರಿಂದ ಮೊದಲಿನಂತೆ ದೇವತಾ ವಿನಿಯೋಗಕ್ಕೂ ಮನೆವಾರ್ತೆ ಖರ್ಚಿಗೂ ಅವನ ಹಿಸೆಯಿಂದ ಅಧಿಕಾಂಶವು ತನಗೆ ಸಿಕ್ಕಬೇಕು ಎಂದು ತಂದೆಯು ಹೇಳಿದರೆ ಈ ಎವೊರ್ಡಿನಿಂದ ಪ್ರಯೋಜನವೇನು? ಈ ಎವೊರ್ಡನ್ನು ಮಾಡದೆನೆ ಮತ್ತು ಮಕ್ಕಳಿಗೆ ತನ್ನ ದೇಹಾಂತ್ಯದ ವರೆಗೆ ತನ್ನ ಸ್ವಾರ್ಜಿತ ಆಸ್ತಿಯ ಮೇಲೆ ಹಕ್ಕು ಹುಟ್ಟಿಸದೆನೇ ಯಾವ ಮಗನಿಗೆ ಯಾವ ಸಲಹೆಗಳಿಗೆ ಹಣ ಹೋಗುವುದು ಲೇಸಿತ್ತಲ್ಲವೆ? ಲೋಕದಲ್ಲಿ ತಾನು ನ್ಯಾಯ ಮಾಡಿದ್ದೇನೆ, ತನ್ನ ನಂತರ ಮಕ್ಕಳು ವ್ಯಾಜ್ಯ ಸಾಜ್ಯ ಮಾಡದಂತೆ ಚೆಲೋ ರೀತಿಯಿಂದ ಆಸ್ತಿ ಹಿಸೆ ಮಾಡಿದಲ್ಲದೆ ಮಕ್ಕಳು ಒಂದೇ ಮನೆಯಲ್ಲಿ ಅನ್ಯೋನ್ಯದಿಂದ ತಂದೆಯ ಹೇಳಿಕೆಯನ್ನು ಅನುಸರಿಸಿ ನಡೆಯುತ್ತಾರೆ ಎಂದು ಬಾಹ್ಯ ದೃಷ್ಟಿಗೆ ತೋರಿಸುವುದಕ್ಕೆ ಈ ಎವೊರ್ಡನ್ನು ಮಾಡಿದಂತಾಯಿತು. ಕಮ್ಮಿಟಿಯವರು ಕೊಟ್ಟ ಕಾರಣಗಳನ್ನು ಓದುವಾಗ ಈ ಎವೊರ್ಡ ನಮ್ಮ ಜ್ಞಪ್ತಿಗೆ ಬರುತ್ತದೆ.

ಮದ್ರಾಸು ಸಂಸ್ಥಾನದಲ್ಲಿ ಖರ್ಚು ಕಡಿಮೆ ಇದ್ದು ಹೊಸ ಎಲವಾರಿಯಲ್ಲಿ ಹೇರಳ ಶಿಲಕು ಉಳಿಯುತ್ತದೆ, ಅದನ್ನು ಹೇಗೆ ಖರ್ಚು ಮಾಡಬಹುದು ಎಂಬದಕ್ಕೆ ತಕ್ಕ ಏರ್ಪಾಡು ಕಂಡುಬಂದಿಲ್ಲ, ಮಹಾಟದಲ್ಲಿ ಅನೇಕ ಸುಧಾರಣೆಗಳು ಅಗತ್ಯ ಇವೆ ಎಂಬದು ನಿಜ, ಮುಂಬಯಿಯಲ್ಲಿ ಖರ್ಚಿನ ದಾವಾಶಯವು ಮೊದಲೇ ಹೆಚ್ಚು ಉಂಟು, ಆದರೂ ಅದರ ಕಂದಾಯವು ಬೇಗನೆ ಹೆಚ್ಚಲಿಕ್ಕೆ ಅವಕಾಶವೂ ಇದೆ, ಆದ್ದರಿಂದ ತನಗೆ ಸಿಗುವ ಮುನಾಫೆಯಿಂದ ಹೆಚ್ಚಿನ ಅಂಶವನ್ನು ಅದು ವರಿಷ್ಠ ಸರಕಾರಕ್ಕೆ ಮುಂದಾದರೂ ಕೊಡಲು ಸಾಧ್ಯವಿದೆ, ಬಂಗಾಳದಲ್ಲಿ ಖರ್ಚು ಕಡಿಮೆ, ಕಂದಾಯವು ಬೇಗನೆ ಏರುವ ಅನುಕೂಲತೆಗಳು ಇಲ್ಲ, ಇನ್ನೂ ಕೆಲವು ಪ್ರಾಂತಗಳು ಅಂದರೆ ಬಿಹಾರ ಒರಿಸ್ಸಾಗಳಲ್ಲಿ ದ್ರವ್ಯಾನುಕೂಲದ ಕುಟ್ಟ ಇದೆ, ಬರ್ಮಾ ಇನ್ನೂ ಪುಷ್ಟಿಯಾಗಿ ಬೆಳೆಯಲಿಲ್ಲ, ಎಂದು ಹುಸಿಂತಾಗಿ ಕಮ್ಮಿಟಿಯವರು ಪ್ರತಿಯೊಂದು ಸಂಸ್ಥಾನದ ಪರವಾಗಿ ತುಲನೆ ಮಾಡಿ ಕಡೆಯಲ್ಲಿ ಮದ್ರಾಸು ಸಂಸ್ಥಾನದ ಮೇಲೆಯೇ ಹೆಚ್ಚಿನ ಭಾರವನ್ನು ಹೊರಿಸಿದ್ದಾರೆ, ಅಂದರೆ "ಬೆಳೆದ ಹೊಪ್ಪೆಯವನನ್ನು ಶೂಲಕ್ಕೆ ಹಾಕಿ" ಎಂಬ ಕಾಗಲವಾಡಿ ಸಂಸ್ಥಾನದ ತೀರ್ಮಾನದ ಸ್ಮರಣೆಯು ಈ ಮೆಸ್ಟನ ಕಮ್ಮಿಟಿಯ ಇತ್ಯರ್ಥದಿಂದ ನಮಗೆ ಬರುತ್ತದೆ, ಇದಕ್ಕೆ ಇನ್ನೂ ಕೆಲವು ಕಾರಣಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡುವೆವು.

ಸ್ಫುಟ ವಿಚಾರಗಳು.

೧. ಈ ವಾರ ಕಾಶೀಕ್ಷೇತ್ರದಲ್ಲಿ ಒಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿಯ ಅಧಿವೇಶನವು ಜರಗುತ್ತಿದೆ. ಈ ಕಮ್ಮಿಟಿಯಲ್ಲಿ ಗಾಂಧಿಗಳ ಅಸಹಕಾರಿತ್ವ, ಹಂಟರ ಕಮ್ಮಿಟಿಯ ವರದಿ, ಕೊಂಗ್ರೆಸ್ ಸಬ್ ಕಮ್ಮಿಟಿಯ ರಿಪೋರ್ಟು ಇತ್ಯಾದಿ ವಿಷಯಗಳು ಮುಖ್ಯವಾಗಿ ಚರ್ಚೆಗೆ ಬರಲಿಕ್ಕಿರುವವು. ಈ ವಿಷಯಗಳು ತೀವ್ರ ಮತಭೇದವುಗಳಾದ ಕಾರಣ ಈ ಅಧಿವೇಶನಕ್ಕೆ ಮಹಾತ್ಮ ಗಾಂಧಿ, ಲೋ. ತಿಲಕ, ಶ್ರೀ ಲಾಲಾಲಜಪತರಾಯ, ಪಂಡಿತ ಮದನ ಮೋಹನ ಮಾಲವೀಯ, ಮಿಸೆಸ್ ಬೆಸೆಂಟ್ ಮುಂತಾದ ಎಲ್ಲಾ ಪಕ್ಷದ ಪ್ರತಿನಿಧಿಗಳು ಹಾಜರಾಗಿದ್ದಾರೆ. ಕಮ್ಮಿಟಿಯಲ್ಲಿ ನಡೆಯುವ ಚರ್ಚೆಯು ಬಹಿರಂಗವಾಗಿ ನಡೆಯುವುದಿಲ್ಲ. ಆ ಅಸಹಕಾರಿತ್ವದ ಠರಾವಿನ ವಿಷಯವು ಇನ್ನು ನಿರ್ಣಯವನ್ನು ಹೊಂದಿಲ್ಲವೆಂದು ತಿಳಿಯುತ್ತದೆ. ತಥಾಪಿ ಕೊಂಗ್ರೆಸ್ ಸಬ್ ಕಮ್ಮಿಟಿಯು ತನ್ನ ರಿಪೋರ್ಟಿನಲ್ಲಿ ಸೂಚಿಸಿದಂತೆ ಲೋರ್ಡ ಚೆಮ್ಸ್‌ಫರ್ಡರನ್ನು ಹಿಂದಕ್ಕೆ ಕರೆಯುವುದು, ಸರ್. ಓಡಾಯರ್, ಡಾಯರ್ ಪ್ರಭೃತಿ ಅಪರಾಧಿಗಳನ್ನು ನ್ಯಾಯಸ್ಥಾನದ ಮುಂದೆ ನಿಲ್ಲಿಸಿ ಅವರ ತನಿಖೆ ನಡಿಸುವುದು, ಇತ್ಯಾದಿ ವಿಷಯಗಳ ಠರಾವುಗಳು ಪಾಸಾದವೆಂದು ಹೇಳುತ್ತಾರೆ. ಆದರೂ ಅಸಹಕಾರಿತ್ವ, ಖಿಲಾಫತ್ತು, ಪಂಜಾಬ ಪ್ರಕರಣ, ಸುಧಾರಣಾ ಕಾನೂನಿನ ಧೋರಣ ಇತ್ಯಾದಿ ವಿಷಯಗಳನ್ನು ಸಾಂಗೋಪಾಂಗವಾಗಿ ನಿರ್ಣಯಿಸುವುದಕ್ಕಾಗಿ ಒಂದು ಸ್ಪೆಶಲ್ (ಜಾದಾ) ಕೊಂಗ್ರೆಸನ್ನು ಕರೆಯಬೇಕೆಂದು ಈ ಅಧಿವೇಶನದಲ್ಲಿ ನಿರ್ಣಯವಾಗಿದೆ. ಈ ಜಾದಾ ಕೊಂಗ್ರೆಸಿನ ಅಧಿವೇಶನವು ಕಲಕತ್ತೆಯಲ್ಲಿ ಜರಗುವದೆಂದು ಊಹಿಸುತ್ತಾರೆ. ಇರಲಿ. ಈ ವಿಷಯದ ಸಮಗ್ರ ಮಾಹಿತಿಯು ಬರುವವಾರ ಜಾಹೀರಾಗುವುದು. ಆಗ ವಿಸ್ತಾರವಾಗಿ ಇದನ್ನು ವಾಚಕರ ಮುಂದೆ ಇಡಬಹುದು.

೨. ಐರ್ಲೆಂಡಿನಿಂದ ಬರುವ ವರ್ತಮಾನಗಳನ್ನು ನೋಡಹೋದರೆ ಅಲ್ಲಿ ದಿನೇ ದಿನೇ ಅನಾಯಕತ್ವವೆ ಪ್ರಸ್ಥಾಪಿತವಾಗಹತ್ತಿದೆ ಎಂದು ಹೇಳಬೇಕಾಗುತ್ತದೆ. ಸಿನ್‌ಫೆನ್ ಪಕ್ಷದವರೂ ಇತರರೂ ಕ್ಷುಬ್ಧರಾಗಿ ದಂಗೆಯಾಗ ಹತ್ತಿದ ಕಾರಣ ಹಾಗೂ ಸಿವಿಲ್ ಗವರ್ನಮೆಂಟಿನ ಅಧಿಕಾರವು ಸಂಪೂರ್ಣ ಸಂಪ್ರಸ್ಪದಲ್ಲಿ ಬಂದು ಸೈನ್ಯ ಪೋಲೀಸ್ ಮುಂತಾದ ಜಬರದಸ್ತಿಯ ಸರಕಾರವು ಅಮಲಿನಲ್ಲಿ ಬಂದ ಕಾರಣ ಈ ಗಲಾಟೆಯಲ್ಲಿ ಎಷ್ಟು ಜನರ ಪ್ರಾಣಗಳು ಖರ್ಚಾದವು, ಎಷ್ಟು ಜನರು ಘಾಯವಾಗಿ ಬಿದ್ದಿದ್ದಾರೆ, ಎಷ್ಟು ಕಾರಖಾನೆಗಳು ಸುಡಲ್ಪಟ್ಟವೆ, ಮತ್ತು ಈ ಕಾರಣದಿಂದ ಎಷ್ಟು ದ್ರವ್ಯ ಹಾನಿಯು ಉಂಟಾಗಿದೆ, ಈ ಎಲ್ಲ ಲೆಕ್ಕವನ್ನು ಯಾರು ಇಟ್ಟಿದಾರೆ! ಐರ್ಲೆಂಡಿನಲ್ಲಿ ಅರಾಜಕತೆಯ ಕಾಡು ಪಸರಿಸಿ ಕೊಂಡಿದೆ ಎಂದು ಹೇಳಿದರೆ ನಮ್ಮ ಕನ್ನಡ ವಾಚಕರಿಗೆ ಅಲ್ಲಿಯ ಸ್ಥಿತಿಯ ಯಥಾರ್ಥ ಕಲ್ಪನೆಯಾದೀತೆಂದು ತೋರುತ್ತಿದೆ. ಇಂಗ್ಲಿಷ್ ಮುತ್ಸದ್ದಿಗಳು ಹೋಮರೂಲನ್ನು ಕೊಡಲು ಸಿದ್ಧತೆಯನ್ನು ತೋರಿಸುತ್ತಿದ್ದಾರಾದರೂ ಐರಿಶರಿಗೆ ಈಗ ಸಂಪೂರ್ಣ ಸ್ವಾತಂತ್ರ್ಯದ ಸ್ವರಾಜ್ಯವೇ ಅಪೇಕ್ಷಿತವಾಗಿದೆ! ಸಾಮ್ರಾಜ್ಯವಾದಿಗಳ ಪಂಕ್ತಿಯಲ್ಲಿ ಅಧಿಷ್ಠಿತರಾದ ಸರ್. ಕರ್ಸನ್ ದೊರೆಗಳು (ಇವರು ಕೂಡ ಐರಿಶರೆ) ಐರ್ಲೆಂಡಿನ ಈ ದುರಾಶೆಗೆ ಹಲ್ಲು ಕಡಿಯುತ್ತಿದ್ದಾರೆ. ಮಾತ್ರವಲ್ಲ, ಐರ್ಲೆಂಡಿನ ಕೇಳಿಕೆಯ ಕಡೆಗೆ ಸಹಾನುಭೂತಿಯಿಂದ ಇದ್ದ ಅಮೇರಿಕದ ಮೇಲೆ ತಿರಸ್ಕಾರದ ಗರಲವನ್ನು ಈ ಕಾರ್ಸನರು ಕಾರುತ್ತಿದ್ದಾರೆ.

೩. ಹಂಟರ ವರದಿಯ ವಿಷಯದಲ್ಲಿ ಸರಕಾರಿ ಮತ್ತು ಜನತೆಯ ಮಾತುಗಳು ಹೇಗಿರುತ್ತವೆ ಎಂಬುದು ಮೇಲಿನ ನಮ್ಮ ಅಗ್ರ ಲೇಖದಿಂದ ತಿಳಿದು ಬರುವ ಹಾಗಿದೆ. ಆದರೂ ಒಂದಾನೊಂದು ಕಾಲದಲ್ಲಿ ನೋಕರ ಶಾಹಿಯ ಶಿಖಾಮಣಿಗಳಾಗಿದ್ದು ಈಗಲೂ ಆ ತೀವ್ರ ವಾಸನೆಯನ್ನು ಬಿಡದೆ ಇದ್ದ ಲೊರ್ಡ್ ಸಿಡನ್‌ಹೆಮ್ ದೊರೆಗಳು ವರದಿಯ ವಿಷಯದಲ್ಲಿ ಯಾವ ಅಭಿಪ್ರಾಯವನ್ನು ಪಡುತ್ತಾರೆ ಎಂಬುವನ್ನು ವಾಚಕರು ತಿಳಿಕೊಳ್ಳುವುದು ಬಹು ಅಗತ್ಯವಾಗಿದೆ. ಸಿಡನ್‌ಹೆಮ ಕಾರದ ಪಂಕ್ತಿಯಲ್ಲಿ ಮೇಲಿನ ಮಣೆಯನ್ನು ಅಲಂಕರಿಸಿದಾಗ್ಯೂ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಡಾಯರ ದೊರೆಗಳ ರೀತಿಯನ್ನು ಸಮರ್ಥಿಸುತ್ತಿದ್ದಾರೆ !! ಸ್ವತಃ ಡಾಯರರಿಂದಲೇ ಆತ್ಮಸಮರ್ಥನವನ್ನು ಮಾಡಲಾಗಲಿಲ್ಲ; ಆದರೆ ಈ ಮಾಜಿ ಗವರ್ನರರು ಈ ಮುದಿ ಪ್ರಾಯದಲ್ಲಿ ತರುಣರನ್ನೂ ನಾಚಿಸುವ ವಿಧದಿಂದ ಇಂಥ ಅಪಕೃತ್ಯಗಳನ್ನು ಸಮರ್ಥಿಸ ತೊಡಗಿದ್ದಾರೆ. ಇದು ಕಾಲ ಮಹಿಮೆಯೆ ಸರಿ.

ಮಂಗಳೂರು.

ಶಾಲೋಪಾಧ್ಯಾಯರು ತಮ್ಮ ಪುರಸತ್ತಿನಲ್ಲಿ ಖಾಸಗಿ ಪಾಠ ಹೇಳುವುದಾದರೆ, ಶಾಲಾ ಇನ್ಸಪೆಕ್ಟರರು ಅವರು ಹೀಗೆ ಕೆಲಸ ಮಾಡುವುದರಿಂದ ಶಾಲಾ ಕೆಲಸಕ್ಕೆ ಯಾವ ತೊಂದರೆಯೂ ಬರಲಾರದೆಂದು ಶಿಫಾರಸು ಮಾಡಿದ ಮೇಲೆ, ಶಾಲಾ ಮೆನೇಜರರು ಅಂಥಾ ಮಾಸ್ತರರಿಗೆ ಹುಕುಂ ಕೊಟ್ಟಲ್ಲಿ ಮಾತ್ರ, ಅವರು ಖಾಸಗಿಯಾಗಿ ಕಲಿಸಬಹುದಾಗಿ ಡೈರೆಕ್ಟರರ ಸರ್ಕಲಾರು ಬಂದದೆ ಎಂದು ತಿಳಿಯುತ್ತೇವೆ.

ಪುತ್ತೂರು ತಾಲೂಕು ಬೋರ್ಡಿಗೆ ಬೇಕಲ್ ಇಲೆಕ್ಟೊರಲ್ ಸರ್ಕಲಿನಿಂದ ಚುನಾವಣೆಯಾಗತಕ್ಕ ಮೆಂಬರಿಕೆಗೆ ಮ| ರಾ| ಬಿ. ರಾಮಚಂದ್ರ ಶಾನಭೋಗ ಮತ್ತು ಮ| ರಾ| ಕೊಡೋತ್ತ ರಾಮಣ್ಣಾಯರರು ಉಮೇದ್ವಾರರಾಗಿ ನಿಂತಿರುವರು.

ಕೆನರಾ ಹೈಸ್ಕೂಲಿನ ೧೯೧೯ನೆ ಇಸ್ವಿಯ ರಿಪೋರ್ಟು ನಮ್ಮ ಬಳಿಗೆ ಬಂದಿದೆ. ಕೆಳತರಗತಿಗಳಿಂದಲೂ ಮೇಲ್ತರಗತಿಯ ವರೆಗೆ ಎಲ್ಲ ಕ್ಲಾಸುಗಳ ಶಿಕ್ಷಣವು ಏಕ ಪ್ರಕಾರವಾಗಿ ಉತ್ತಮವಾಗಿದೆಯೆಂದೂ ಆ ಶಾಲೆಯಲ್ಲಿ ವಿದ್ಯಾಭ್ಯಾಸದ ಸಲಕರಣೆಗಳು ಇಡೀ ಸರ್ಕಲಿನಲ್ಲಿ ಉತ್ಕೃಷ್ಟತಮವಾಗಿವೆಯೆಂದೂ ಇನ್ಸಪೆಕ್ಟರರ ಅಭಿಪ್ರಾಯ. ಈ ವರ್ಷದಿಂದ ಶಾಲೆಯಲ್ಲಿ, ವ್ಯಾಪಾರ ಸಂಬಂಧವಾದ ವಿಷಯಗಳಲ್ಲಿ ಸ್ಕೂಲ ಫಾಯ್ನಲಿನ ಕ್ಲಾಸುಗಳಲ್ಲಿ, ಶಿಕ್ಷಣ ಕೊಡಲಾಗುವುದೆಂದು ತಿಳಿಯುತ್ತೇವೆ.

ದಕ್ಷಿಣಕನ್ನಡ ಡಿಸ್ಟ್ರಿಕ್ಟ ಎಸೋಸಿಯೇಶನ್ನಿನ ಮೀಟಿಂಗು ಕಳೆದ ತಿಂಗಳ ೩೦ನೆ ತಾರೀಕಿಗೆ ರಾವಬಹದ್ದೂರ ಎಸ್. ರಘುನಾಥಯ್ಯನವರ ಅಧ್ಯಕ್ಷತೆಯಲ್ಲಿ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಜರಗಿತು. ಕೊಕ್ಕಡ ಸಹಕಾರ ಸಂಘದವರು, ಪೆರ್ಮಾಳಿನ ವರ್ಗದಾರರು, ದುಗ್ಗಾರ್, ಮುಂಡಾಜೆ ಗ್ರಾಮಗಳ ರೈತರು ದೆಲಂಪಾಡಿ, ಮಯ್ಯಾಳ, ಬೈಪಾಡಿ ಗ್ರಾಮಸ್ಥರು ಮಾಡಿದ ಮನವಿಗಳನ್ನು ಓದಿದಲ್ಲದೆ ಫೊರೆಸ್ಟ ಖಾತೆಯ ನಿಬಂಧನೆಗಳಲ್ಲಿ ಯಾವ ರಿಯಾಯಿತಿಗಳನ್ನು ತಾನು ಮಾಡಲಿಕ್ಕೆ ಇದ್ದೇನೆಂದು ಜಿಲ್ಲಾ ಕಲೆಕ್ಟರರು ತಿಳಿಸಿ ಆ ಕುರಿತು ಎಸೋಸಿಯೇಶನ್ನಿನ ಅಭಿಪ್ರಾಯವನ್ನು ಕೊಡಬೇಕೆಂದು ಬರೆದ ಪತ್ರವನ್ನೂ ಓದಲಾಯಿತು. ಈ ವಿಷಯದಲ್ಲಿ ಕಲೆಕ್ಟರ ದೊರೆಗಳೊಡನೆ ಚರ್ಚಿಸಲಿಕ್ಕೆ ರಾವಬಹದ್ದೂರ ರಘುನಾಥಯ್ಯ, ರಾ| ಯಮ್. ಮಾಧವರಾವ, ಮಿ| ಶಮ್ನಾಡ ಮಹಮ್ಮದ, ರಾ| ಮ| ಶಂಕರ ನಾರಾಯಣರಾವ, ರಾ| ಸುಬ್ಬಯ್ಯ ಪೈ, ಮಿ| ಜೆ. ಎಫ್ ರೇಗೊ, ಮಿ| ಮೈಕೆಲ್ ಆಲ್ವಾರಿಸ್, ರಾ| ಕೆ| ಸದಾಶಿವರಾಯರು ಇವರಿಂದ ಕೂಡಿದ ಕಮ್ಮಿಟಿಯೊಂದು ಆರಿಸಲ್ಪಟ್ಟಿತು.

ನಮ್ಮ ಜಿಲ್ಲೆಯಿಂದ ಪರಬಂದರುಗಳಿಗೆ ಅಕ್ಕಿ ಹೊರಗೆ ರಫ್ತಾಗದಂತೆ ನಿರ್ಬಂಧವನ್ನು ಹಾಕಬೇಕೆಂದೂ ಹಾಗೆ ಮಾಡಿದರೆ ಮಾತ್ರ ಧಾರಣೆ ಇಳಿಯಲಾಗದೆಂದೂ ಕಲೆಕ್ಟರ ದೊರೆಗಳಿಗೆ ತಿಳಿಸಬೇಕೆಂತ ನಿರ್ಣಯಿಸಲಾಯಿತು.

ರಾ| ಎ. ಬಾಲಕೃಷ್ಣ ಶೆಟ್ಟಿ, ರಾ| ಎಮ್. ಮಾಧವರಾವ, ರಾ| ಕೆ| ಸದಾಶಿವರಾವ ಇವರಿಂದ ಕೂಡಿದ ಒಂದು 'ಸಬ್ ಕಮ್ಮಿಟಿಯು ಮಿ| ಇ. ಟಿ. ಸಿ. ವಾಸ್ ಎಮ್. ಎ. ಬಿ. ಎಸ್. ಸಿ. ಇವರ ವಿಷಯವನ್ನು ಪರ್ಯಾಲೋಚಿಸಿ ಮುಂದಿನ ಸಭೆಗೆ ತಮ್ಮ ರಿಪೋರ್ಟನ್ನು ಕೊಡಬೇಕೆಂದು ನಿರ್ಣಯಿಸಲಾಯಿತು.

- ಮೇಲೆ ಹೇಳಿದಂತೆ ಠರಾವಿನ ಮೇರೆಗೆ ಜಿಲ್ಲಾ ಕಲೆಕ್ಟರಿಗೆ ಜಂಗ್ಲಿ ಇಲಾಖೆ ಮತ್ತು ಅಕ್ಕಿ ಧಾರಣೆ ವಿಷಯದಲ್ಲಿ ಕಮ್ಮಿಟಿಯವರು ಕಳೆದ ೩ನೆ ತಾರೀಕಿಗೆ ಮಧ್ಯಾಹ್ನ ಕಂಡು ಮಾತನಾಡಿಸಿದಾಗ ಅವರು ಈ ಕಮ್ಮಿಟಿಯ ಹೇಳಿಕೆಗಳನ್ನು ಬರಕೊಂಡರು. ಈ ಸಂದರ್ಭದಲ್ಲಿ ಉಪಾಧ್ಯಾಯರ ಪರವಾಗಿ ಪ್ರಸ್ತಾಪವೂ ಬಂತು. ಅವರ ಪರವಾಗಿ ಸರಕಾರದವರಿಗೆ ಬೇರೆ ಮನವಿ ಮಾಡಿಕೊಳ್ಳುವುದಾಗಿ ಎಸೋಸಿಯೇಶನ್ನಿನವರ ಅಭಿಪ್ರಾಯವಿದೆ.

ಮಹಿಳಾಸಭೆಯ 'ಹೋಮ್' ಕ್ಲಾಸುಗಳು ಇದೇ ೭ನೆ ತಾರೀಕಿನಿಂದ ಪ್ರಾರಂಭವಾಗಲಿಕ್ಕಿರುವವು. ತಮ್ಮ ಹೊಸ ಕಟ್ಟೋಣದಲ್ಲಿ ತೆರೆಯೋಣಾಗುವ ಈ ಕ್ಲಾಸುಗಳಿಗೆ ಸೇರಲು ಮನಸ್ಸುಳ್ಳವರು ಬೇಗನೇ ಸೇರಬೇಕೆಂದು ವಿಜ್ಞಾಪನೆ ಇದೆ. ಮರಾಠಿ, ಕನ್ನಡ, ಇಂಗ್ಲಿಷು ಭಾಷೆಗಳಲ್ಲಿ ಮುದ್ರಿಸಿದ ಹಲವು ವರ್ತಮಾನ ಪತ್ರಿಕೆಗಳು ಸ್ತ್ರೀಯರ ತಿಳುವಳಿಕೆಯನ್ನೇ ಹೆಚ್ಚಿಸುವಂಥವುಗಳಾಗಿದ್ದು ಮಹಿಳಾ ಸಭೆಯ ಮೆಂಬರರಿಗೂ ಈ ಸಂಸ್ಥೆಯ ಕಡೆಗೆ ವಾತ್ಸಲ್ಯವುಳ್ಳವರಿಗೂ ಯಾವಾಗಲೂ ಓದಲಿಕ್ಕೆ ಸಿಗುವವು. ಮಿಸ್ಸ್ ಜಾನಕಿ ಅಮ್ಮಾಳ್ ಇವರು 'ಮಕ್ಕಳ ಆರೈಕೆ' ಎಂಬ ವಿಷಯದಲ್ಲಿ ಕೊಡಲಿಕ್ಕಿರುವ ಭಾಷಣಗಳಲ್ಲಿ ಮೊದಲನೇದು ಇದೇ ತಿಂಗಳ ೧೩ನೆ ತಾರೀಕಿಗೆ ಜರಗುವುದು. ಎಲ್ಲರಿಗೂ ಇದಕ್ಕೆ ಸುಸ್ವಾಗತವಿದೆ.

ಈ ವರ್ಷದ ಒನರ್ಸ ಬಿ. ಎ. ಪರೀಕ್ಷೆಯಲ್ಲಿ ಮ| ರಾ| ಎಮ್. ಮರಿಯಪ್ಪ ಭಟ್ಟರೂ ಪಾಸಾಗಿದ್ದಾರೆ. ಹವ್ಯಕ ಬ್ರಾಹ್ಮಣರಲ್ಲಿ ಈ ಪರೀಕ್ಷೆಯನ್ನು ತೇರ್ಗಡೆಹೊಂದಿದವರು ಇವರೆ ಮೊದಲನೆಯವರು.

[illegible] ... ಮುಂದಿನ ಚುನಾವಣೆಯಲ್ಲಿ ಐದು ... ಓಟು, ... ಓಟು, ... ಓಟು, ಜಂದಾಕಯ್ಯ ಹೆಗ್ಗಡೇರಿಗೆ ನಿರರ್ಥಕವಾದ ಓಟುಗಳು ... ಹೀಗಾಗಿ ಧರ್ಮಸಾಮ್ರಾಜ್ಯದ ... ನೇಮಿತಾದ ಸದಿವಾಳರು ಮೆಂಬರರಾಗಿ ಆರಿಸಲ್ಪಟ್ಟರು

ಮೊದಲನೆ ಕರ್ಣಾಟಕ ಪರಿಷತ್ತು ಧಾರವಾಡ

ಅಧ್ಯಕ್ಷರಾದ ದಿವಾಣ ಬಹದ್ದೂರ ವಿ. ಪಿ. ಮಾಧವರಾವ ಇವರ ಭಾಷಣದಲ್ಲಿ ಇನ್ನು ಕೆಲವು ಮುಖ್ಯ ಅಂಶಗಳು

ನಮ್ಮ ಹಿಂದುಸ್ಥಾನವೇ ಏಕೆ, ಇಡಿ ಏಶಿಯಾ ಖಂಡದ ಸಂಸ್ಕೃತಿಯೂ ಸುಧಾರಣೆಯೂ ಒಂದೆ ಬಗೆಯುಳ್ಳವು ಯುರೋಪಖಂಡದ ಜನರ ದೃಷ್ಟಿಯೋಘದಿಂದಲೂ ಹೆಮ್ಮೆಯಿಂದಲೂ, ನಮ್ಮ ಏಶಿಯಾ ಖಂಡದ ಸಂಸ್ಕೃತಿಯೂ ಸುಧಾರಣೆಯೂ ಒಂದೇ ಬಗೆಯದಿರುತ್ತದೆಂಬ ಮಾತು ನನ್ನ ಮನಸ್ಸಿನಲ್ಲಿ ಹೆಚ್ಚೆಚ್ಚಿಗೆ ಬರತಕ್ಕದ್ದು. ಅದು ಇಷ್ಟು ದಿವಸ ಸುಷುಪ್ತಾವಸ್ಥೆಯಲ್ಲಿತ್ತು ಇನ್ನು ಜಾಗೃತಾವಸ್ಥೆಯು ಪ್ರಾಪ್ತವಾಗಿರುತ್ತದೆ. ಹಿಂದೂಸ್ಥಾನದ ಮುಸಲ್ಮಾನರು ತುರ್ಕಸ್ಥಾನದ ಖಲೀಫನ ಮರ್ಯಾದೆಯನ್ನೂ ಅಧಿಕಾರವನ್ನೂ ಕಾಯುವದಕ್ಕಾಗಿ ನಡೆಸಿರುವ ಚಳವಳಿಯಲ್ಲಿ ಹಿಂದೂ ಜನರು ಹೇಗೆ ಉತ್ಸಾಹದಿಂದ ಕೂಡಿಕೊಂಡದನ್ನು ನೋಡಿರಿ. ಪರರ ಪ್ರಾಂತಿ ನಿಷ್ಠಾರಣವಾಗಿಯೂ ನಿರ್ಲಜ್ಜತನದಿಂದಲೂ ದೋಚಿಕೊಳ್ಳುವ ಯುರೋಪಖಂಡದ ಸ್ವಾರ್ಥಪರ ಬುದ್ಧಿಯು ಏಶಿಯಾಖಂಡದ ಜನರಲ್ಲಿ ಆತ್ಮಸಂರಕ್ಷಣೆಯ ಬುದ್ಧಿಯನ್ನು ಜಾಗೃತಗೊಳಿಸಲು ಕಾರಣವಾಗಿರುವದು ಸುಚಿಹ್ನವೇ ಸರಿ. ಹಿಂದುಸ್ಥಾನದಲ್ಲಿ ಈ ಆತ್ಮಸಂರಕ್ಷಣ ಬುದ್ಧಿಯು ಜಾಗೃತವಾಗಲಿಕ್ಕೆ ಹೆಚ್ಚಿನ ಕಾರಣಗಳುಂಟು. ಹಿಂದೂಸ್ಥಾನವು ಭೂಗೋಲದೃಷ್ಟಿಯಿಂದ ಏಕರೂಪವು.

"ಬ್ರಿಟಿಷರಾಷ್ಟ್ರಕ್ಕೆ ಕ್ಷೇಮವಾಗಲಿ" (Pax Britanica) ಎಂಬ ಭಾವನೆಯು ಎಲ್ಲ ಇಂಗ್ಲಿಷಜನರಲ್ಲಿ ದೃಢವಾಗಿರುವದರಿಂದ ಅವರ ಹಕ್ಕುಗಳೂ ಜವಾಬ್ದಾರಿಗಳೂ ಕಾಯಿದೆಗಳೂ ಆಕಾಂಕ್ಷೆಗಳೂ ಸರ್ವರಿಗೂ ಸಮಾನವಾಗಿವೆ. ಇದಕ್ಕೆ ಹೆಚ್ಚಿನ ಮಹತ್ವದ ಸಂಗತಿಯೇನಂದರೆ, ದೇಶದೊಳಗಿನ ಸುಶಿಕ್ಷಿತರಲ್ಲಿ ವಿಚಾರವಿನಿಮಯ ಸುಲಭಸಾಧನವಾದ ಒಂದೇ ಇಂಗ್ಲಿಷಭಾಷೆಯು ರೂಢವಾಗಿದೆ. ಈ ಏಕೀಕರಣ ಶಕ್ತಿಮೂಲಕ, ದೇಶದೊಳಗಿನ ಭಿನ್ನಭಿನ್ನವರ್ಗಗಳನ್ನು ಭಿನ್ನಭಿನ್ನದಿಶೆಗೆ ಎಳೆದೊಯ್ಯುವ ಶಕ್ತಿಗಳೆಲ್ಲವೂ ದುರ್ಬಲವಾಗುತ್ತ ಹೋಗುತ್ತವೆ. ಈ ತರದ ಸ್ಫೂರ್ತಿದಾಯಕವಾದ ರಾಷ್ಟ್ರೀಯ ಭಾವನೆಯನ್ನು ಪೋಷಿಸಿ ದೃಢೀಕರಿಸುವುದರ ಮೇಲೆಯೇ ಹಿಂದೀ ರಾಷ್ಟ್ರದ ರಾಜಕೀಯ ಮತ್ತು ಆರ್ಥಿಕ ಉತ್ಕರ್ಷವು ಅವಲಂಬಿಸಿರುತ್ತದೆ. ಈ ರಾಷ್ಟ್ರೀಯ ಭಾವನೆಯು ಪೋಷಿಸಲ್ಪಟ್ಟು ಹಾಗು ದೃಢೀಕರಿಸಲ್ಪಟ್ಟು, ದೇಶದ ಸುಶಿಕ್ಷಿತರನ್ನು ಮಾತ್ರವೇ ಅಲ್ಲ ಸಾಮಾನ್ಯ ಜನರನ್ನು ಕೂಡ ಅದು ಚೇತನಗೊಳಿಸಬೇಕಾದರೆ, ನಮ್ಮ ಜನ್ಮಭೂಮಿಯ ಪೂರ್ವದ ಇತಿಹಾಸ, ಪರಂಪರೆ ಮತ್ತು ಸಂಸ್ಕೃತಿ ಇವುಗಳ ಮನನದಿಂದಲೇ ಆಸಕ್ತಿಯು ಅವರಲ್ಲಿ ಉದಯವಾಗಬೇಕಲ್ಲವೆ?

ಹಿಂದುಸ್ಥಾನದಲ್ಲಿ ಬೇರೆ ಬೇರೆ ಭಾಷೆಗಳನ್ನಾಡುವ ಅನೇಕ ಪ್ರಾಂತಗಳಿದ್ದು ಪ್ರತಿಯೊಂದರಲ್ಲಿ ಒಳ್ಳೇ ವಿಕಾಸ ಹೊಂದಿದ ವಾಙ್ಮಯವೂ ವೈಭವ ಸಂಪನ್ನವಾದ ರಾಜಕೀಯ ಇತಿಹಾಸವೂ ಇರುವದರಿಂದ, ರಾಷ್ಟ್ರೀಯ ದೃಷ್ಟಿಯಿಂದ ಭಾಷಾನುರೋಧವಾಗಿ ಪ್ರಾಂತಗಳನ್ನು ರಚಿಸಬೇಕೆಂಬ ಪ್ರಶ್ನೆಗೆ ಈ ಅತ್ಯಂತ ಮಹತ್ವವು ಪ್ರಾಪ್ತವಾಗಿದೆ. ಅದಕಾರಣ ನಮ್ಮ ಪೂರ್ವಜರ ಇಂಥ ಮಹತ್ಕಾರ್ಯಗಳನ್ನು ಮಾಡಿದರು, ಅಂಥ ಕಾರ್ಯಗಳ ಮಾಡಲಿಕ್ಕೆ ನಾವು ಧೀರರಿದ್ದೇವೆ ಎಂಬುದಾಗಿ ಸಾಮಾನ್ಯ ಜನರಲ್ಲಿ ಸ್ವಾಭಿಮಾನವನ್ನೂ ಉತ್ಸಾಹವನ್ನೂ ಜಾಗೃತಗೊಳಿಸಬೇಕಾದರೆ ಅವರ ಆತ್ಮ ಭಾಷೆಯಿಂದಲೇ ಅವುಗಳನ್ನು ಅವರಿಗೆ ತಿಳಿಸಿ ಹೇಳುವದೇ ಅತ್ಯಂತ ಸುಲಭವಾದ ಉಪಾಯವು. ಮೂವತ್ತು ಕೋಟಿ ಜನರೆಲ್ಲರೂ ಇಂಗ್ಲಿಷ ಭಾಷೆಯ ಪಂಡಿತರಾಗಿ ಆ ಭಾಷೆಯಲ್ಲಿ ಹೇಳುವ ಮಾತುಗಳಿಂದ ರಾಷ್ಟ್ರೀಯ ಭಾವನೆಯಿಂದ ಪ್ರೇರಿತರಾಗುವ ವರೆಗೆ ಮಾರ್ಗ ನೋಡುವುದು ತೀರ ಅಸಂಗತವಾದ ಮಾತು. ನಾವು ನಮ್ಮ ದೇಶಭಾಷೆಗಳ ಆಶ್ರಯವನ್ನು ಮಾಡಿದ ಕೂಡಲೆ ನಮ್ಮ ಮನಸ್ಸಿನಲ್ಲಿ ಅಖಂಡ ಭರತಖಂಡದ ಕಲ್ಪನೆಯು ಅಸ್ಪಷ್ಟವಾಗಿಯೂ, ಚಿಕ್ಕ ದೊಡ್ಡ ಪ್ರಾಂತಗಳ ಚಿತ್ರಗಳೇ ಸ್ಪಷ್ಟವಾಗಿಯೂ, ಮುಂದೆ ಬಂದು ನಿಲ್ಲುತ್ತವೆ. ಈ ಪ್ರಾಂತಿಕ ಭಾವನೆಯು ಒಂದು ದೋಷವೇ ಸರಿ. ಆದರೆ ಇದು ತಪ್ಪದ ಮಾತು. ಅದಾಗ್ಯೂ ಆಯಾ ಪ್ರಾಂತಗಳ ಜನರಿಗೆ ಅವರ ಪೂರ್ವಜರ ಉಚ್ಚವಾದ ಸಂಸ್ಕೃತಿಯ ನೆನಪು ಕೊಟ್ಟು ಅವರಲ್ಲಿ ಗೂಢವಾಗಿರುವ ಕರ್ತೃತ್ವ ಶಕ್ತಿಗಳನ್ನು ಜಾಗ್ರತಗೊಳಿಸಿ ಆ ದೋಷವನ್ನು ದೂರಮಾಡುವ ಸಾಮರ್ಥ್ಯವೂ ಆ ಪ್ರಾಂತಿಕ ಭಾವನೆಯಲ್ಲಿ ಉಂಟು. ತಮ್ಮ ತಮ್ಮ ಭಾಷೆಗಳ ವಾಙ್ಮಯಗಳ ಮತ್ತು ಪೂರ್ವೇತಿಹಾಸಗಳ ಬಗ್ಗೆ ಪ್ರೇಮವನ್ನು ಹುಟ್ಟಿಸುವ ಈ ಹೊಸ ಪ್ರಾಂತಿಕ ಭಾವನೆಗಳು ಒಂದಕ್ಕೊಂದು ವಿರೋಧಕವಾಗದೆ ರಾಷ್ಟ್ರೀಯ ಭಾವನೆಗೆ ಪೋಷಕವಾಗುವಂತೆ ಮಾಡುವುದು ಮುಂದೆ ಸಹಜವಾಗಿ ಆಗಬಹುದಾದ ಕಾರ್ಯವು. ಯಾವದೊಂದು ಪ್ರಾಂತದ ಜನರಿಗೆ ಅವರ ಇತಿಹಾಸವನ್ನು ಮರೆಯಲಿಕ್ಕೆ ಹೇಳುವುದು ಶಕ್ಯವಿಲ್ಲ, ಇಷ್ಟವೂ ಅಲ್ಲ. ಆ ಇತಿಹಾಸವು ಉಜ್ವಲವಾದ ಇತಿಹಾಸವಾಗಿ ವಿಶೇಷವಾದ ಅಭಿಮಾನವನ್ನು ಹುಟ್ಟಿಸುವಂಥದಿದ್ದರಂತೂ ಈ ತರದ ಪ್ರಯತ್ನವು ತೀರ ಅಸಾಧ್ಯವೂ ಅಸಮಂಜಸವೂ ಆಗುತ್ತದೆ. ಅದುದರಿಂದ, ಬಂಗಾಲವು ಇಬ್ಭಾಗವಾದಾಗ ಬಂಗಾಲದ ಜನರು ಮಾಡಿದ ಚಳವಳಿಯು ಕೇವಲ ಸ್ಥಾನಿಕ ಸ್ವರೂಪವುಳ್ಳದ್ದು ಇರುವುದರಿಂದ ರಾಷ್ಟ್ರೀಯ ಸಭೆಯು ಇದರಲ್ಲಿ ಮನಸ್ಸನ್ನು ಹಾಕತಕ್ಕದ್ದಲ್ಲವೆಂದ ಮುಂಬಯಿಯೊಳಗಿನ ಅಲ್ಪಸ್ವಲ್ಪ ಮುಂದಾಳುಗಳು ಅದರ ವಿಷಯದಲ್ಲಿ ತಿರಸ್ಕಾರವನ್ನು ಹುಟ್ಟಿಸಲಿಕ್ಕೆ ಪ್ರಯತ್ನ ಮಾಡಿದರು. ಆದರೆ, ಬಂಗಾಲಕ್ಕೊದಗಿದ ಈ ವಿಪತ್ತು ಇಡೀ ಭರತಖಂಡದ ವಿಪತ್ತೇ ಎಂದು ಸರ್ವ ಪ್ರಾಂತಗಳ ಜನರು ಭಾವಿಸಿ ಬಂಗಾಲಕ್ಕೆ ಬೆಂಬಲವನ್ನು ಕೊಟ್ಟದ್ದರಿಂದ, ಮುಂಬಯಿ ಜನರ ಆ ಪ್ರಯತ್ನವು ನಿಷ್ಫಲವಾಯಿತು. ಸಾರಾಂಶ, ಬಂಗಾಲ ಮತ್ತು ಮಹಾರಾಷ್ಟ್ರ ಪ್ರಾಂತಗಳ ಜನರು ತಮ್ಮ ಸ್ವಭಾಷೆ ಮತ್ತು ವಾಙ್ಮಯ ಇವುಗಳ ಪರಿಪೋಷವನ್ನು ಮಾಡಿ, ಅವುಗಳ ಯೋಗದಿಂದ ಪ್ರಾಂತಿಕ ಅಭಿಮಾನವನ್ನು ಹುಟ್ಟಿಸಿದವರಾದಾಗ್ಯೂ ರಾಷ್ಟ್ರೀಯ ಭಾವನೆಯ ಪರಿಪಕ್ವಕ್ಕೆ ಕೂಡ ಅವರೇ ಮುಖ್ಯ ನಾಯಕರಾಗಿದ್ದಾರೆ. ತಮ್ಮ ಸ್ವಭಾಷೆಗಳನ್ನು ಅಪೇಕ್ಷೆ ಮಾಡಿದ ಇತರ ಪ್ರಾಂತಗಳ ಜನರು ಅವರನ್ನು ಹಿಂದೆ ಬಂದರೂ ಅರ್ಥತಲ್ಲದೆ ಹಿಂಬಾಲಿಸಬೇಕಾಗಿ ಬಂದಿದೆ. ಸ್ವಭಾಷೆಯನ್ನು ಅಪೇಕ್ಷಿಸಿದ ಮದ್ರಾಸ, ಕರ್ನಾಟಕ ಪ್ರಾಂತಗಳಂತೂ ಈ ರಾಷ್ಟ್ರೀಯ ಭಾವನೆಯನ್ನು ತೀರ ಕಡೆಗೆ ಪಡೆದಿವೆ. ಆಂಧ್ರ ಚಳವಳಿಯು ಆರಂಭವಾದಂದಿನಿಂದ ಮದ್ರಾಸ ಇಲಾಖೆಯ ತೆಲುಗು ಜಿಲ್ಲೆಗಳಲ್ಲಿ ಅತಿ ಸ್ವಲ್ಪ ಕಾಲದಲ್ಲಿ ವಿಲಕ್ಷಣವಾದ ರಾಷ್ಟ್ರೀಯ ಜಾಗೃತಿಯುಂಟಾ[illegible] ... ಕರ್ನಾಟಕದಲ್ಲಿ ಮಾತ್ರ ಹಿಂದೂಜನ ... ಬಹಳ ಹಿಂದುಳಿದಿದೆ.

ಕರ್ನಾಟಕ ಪ್ರಾಂತದ ಅವಶ್ಯಕತೆ:— ಹೋದ ಖಾನೇಸುಮಾರಿಯ ಮೇರೆಗೆ, ಕನ್ನಡ ಭಾಷೆಯನ್ನಾಡುವವರ ಜನಸಂಖ್ಯೆಯು ಅಗ ಒಂದು ಕೋಟಿ ಐದುಲಕ್ಷ ಇತ್ತೆಂದು ಗೊತ್ತಾಗುತ್ತದೆ. ಅವರು ಐದು ಭಿನ್ನಭಿನ್ನ ಆಡಳಿತಕ್ಕೆ ಒಳಪಟ್ಟಿರುವರು. ಸುಮಾರು ೩೦ ಲಕ್ಷಕ್ಕಿಂತ ಹೆಚ್ಚು ಜನರು ಮುಂಬಯಿ ಇಲಾಖೆಯಲ್ಲಿ ಇರುವರು. ಮೈಸೂರಿನಲ್ಲಿ ೫೦ ಲಕ್ಷ ಜನರು, ಮದ್ರಾಸ ಇಲಾಖೆಯಲ್ಲಿಯೂ ಹೈದರಾಬಾದಿನಲ್ಲಿಯೂ ಕೂಡಿ ೩೦ ಲಕ್ಷ ಉಳಿದವರು ಕೊಡಗು ಪ್ರಾಂತದಲ್ಲಿ ಇರುವರು. ಅಂದರೆ-ಒಟ್ಟು ಸುಮಾರು ೪೫ ಲಕ್ಷ ಜನರು ಬ್ರಿಟಿಷ ಸರಕಾರದ ಪ್ರಜೆಗಳಾಗಿರುವರು.- ಸಮಾರು ೫೦ ಲಕ್ಷ ಜನರು ಮೈಸೂರ ಮಹಾರಾಜರ ಪ್ರಜೆಗಳೂ ಸುಮಾರು ೧೫ ಲಕ್ಷ ಜನರು, ನಿಜಾಮ ಸರಕಾರದ ಪ್ರಜೆಗಳೂ ಆಗಿರುವರು.

ಮೈಸೂರ ಪ್ರಾಂತ ಹಾಗು ಅದರ ಹತ್ತರಕ್ಕಿರುವ ಪ್ರದೇಶಗಳಾದ ಕೊಯಮುತ್ತೂರ ಸೇಲಮ ಅನಂತಪುರ ಮತ್ತು ಬಳ್ಳಾರಿ ಜಿಲ್ಲೆಗಳ ಮುಖ್ಯ ಭಾಷೆಯು ಕನ್ನಡವು. ಕನ್ನಡದ ಸೀಮೆಯು ಬೀರೆಯ ಮುಂದೆ ಉತ್ತರಕ್ಕೆ ನಿಜಾಮ ಇಲಾಖೆಯೊಳಗಿನ ಬೀದರ ಪಟ್ಟಣದ ವರೆಗೆ ಸಾಗಿದ, ಅಲ್ಲಿಂದ ಅದು ನೆಟ್ಟಗೆ ಪಶ್ಚಿಮಕ್ಕೆ ಸುಮಾರು ಜಿಲ್ಲೆಯ ರೇಖಾಂಶದ ವರೆಗೆ ತಿರುಗಿ ಮುಂದೆ ದಕ್ಷಿಣಕ್ಕಿಳಿದು ಜತ್ತ ಮತ್ತು ಜಮಖಂಡಿಪುರ ಸಂಸ್ಥಾನಗಳನ್ನು ಒಳಕೊಂಡಿರುತ್ತದೆ. ಸಾತಾರಾ ಜಿಲ್ಲೆಯ ಆಗ್ನೇಯ ಮೂಲೆಯಲ್ಲಿ ಅಂದರೆ ಖಾನಾಪುರ ತಾಲೂಕಿನಲ್ಲಿಯೂ, ಕೆಲವು ಮಟ್ಟಿಗೆ ಔಂಧ ಸಂಸ್ಥಾನದಲ್ಲಿಯೂ ಬೆಳಗಾವಿ ಜಿಲ್ಲೆಯಲ್ಲಿಯೂ ಶಹಾಪುರ ಪಟ್ಟಣದ ವರೆಗೆ ಸಹ ಕನ್ನಡ ಭಾಷೆಯು ಪ್ರಚಲಿತವಾಗಿದೆ. ಅಲ್ಲಿಂದ, ಕರ್ನಾಟಕದ ಮೇರೆಯು ಈ ಗೆರೆಯು ಪಶ್ಚಿಮ ಘಟ್ಟಗಳೊಳಗುಂಟು ದಕ್ಷಿಣ ಕಡೆಗೆ ಹೊನ್ನಾವರದ ವರೆಗೆ ಸಾಗಿ ಸಮುದ್ರಕ್ಕೆ ಕೂಡಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ತೀರ ದಕ್ಷಿಣದ ಮೂಲೆಯನ್ನು ಬಿಟ್ಟು ಬಾಕಿ ಕಡೆಗೆ ದರಬಾರ ಭಾಷೆಯು ಕನ್ನಡವು. ಕರ್ನಾಟಕದ ಮೇರೆಯು ಈ ಗೆರೆಯು ಆ ಮೇಲೆ ಮೈಸೂರ ಸೀಮೆಗೆ ಕೂಡುತ್ತದೆ. ನೀಲಗಿರಿಯಲ್ಲಿಯೂ ಕನ್ನಡ ಭಾಷೆಯು ಒಳಭೇದಗಳಾಗಿರುವ ಭಾಷೆಗಳನ್ನೇ ಜನರು ಆಡುತ್ತಾರೆ. ಈ ಭಾಷೆಯು ಕನ್ನಡಿಗರಿಂದ ಇತ್ತ ಮಧುರೆಯ ವರೆಗೂ ಅತ್ತ ಮಧ್ಯಪ್ರಾಂತದವರೆಗೂ ಒಯ್ಯಲ್ಪಟ್ಟಿದೆ"

ಮದ್ರಾಸ ಪಟ್ಟಣದಲ್ಲಿಯೇ ಆಗಲಿ, ಮುಂಬಯಿ ಪಟ್ಟಣದಲ್ಲಿಯೇ ಆಗಲಿ, ಕನ್ನಡಿಗರ ಪರಿಚಿತಿಯು ತೀರ ಕಡಿಮೆ ಇರುತ್ತದೆ. ಆ ಪಟ್ಟಣಗಳಲ್ಲಿ ಜರಗುವ ಸಭೆಗಳಲ್ಲಿ ಈ ಮಾತಿನ ಪ್ರತೀತಿಯು ಬರುತ್ತದೆ. ಮುಂಬಯಿಯಲ್ಲಿ ಆ ವ್ಯಾಖ್ಯಾನಗಳು, ದೇಶಭಾಷೆಯಲ್ಲಾಗುವುದಾದರೆ, ಅವೆಲ್ಲವೂ ಮರಾಠಿ, ಗುಜರಾಥಿ ಭಾಷೆಗಳಲ್ಲಿಯೇ ಆಗುತ್ತವೆ. ಒಮ್ಮೊಮ್ಮೆ ಉರ್ದು ಅಥವಾ ಹಿಂದೀ ಭಾಷೆಗಳಲ್ಲಿ ಸಹ ಆಗುತ್ತವೆ. ಮುಂಬಯಿ ಇಲಾಖೆಯ ದಕ್ಷಿಣಭಾಗವೆಲ್ಲವೂ ಕನ್ನಡ ಪ್ರಾಂತವೇ ಆಗಿದ್ದರೂ, ಮುಂಬಯಿ ಪಟ್ಟಣದಲ್ಲಿ ಆ ಭಾಷೆಯಲ್ಲಿ ಮಾತಾಡುವದೆಂದರೆ, ಯಾವುದೋ ಒಂದು ವಿದೇಶೀಯ ಭಾಷೆಯಲ್ಲಿ ಮಾತಾಡಿದಂತೆಯೇ ಭಾಸವಾಗುತ್ತದೆ. ಮದ್ರಾಸ ಪಟ್ಟಣದಲ್ಲಿಯೂ ಇದೇ ಸ್ಥಿತಿ. ತಮಿಳು ತೆಲಗು ಉರ್ದು ಅಥವಾ ಹಿಂದುಸ್ಥಾನಿ ಇಲ್ಲವೆ ಮಲಿಯಾಳ ಈ ಭಾಷೆಗಳಲ್ಲಿ ಉಪನ್ಯಾಸಗಳಾದರೆ ಕೂಡ ಮದ್ರಾಸದ ಜನರು ಕೇಳಲಿಕ್ಕೆ ಹೋಗುವರು. ಕನ್ನಡ ಭಾಷೆಯಲ್ಲಿ ಆದರೆ ಮಾತ್ರ ಯಾರೂ ಲಕ್ಷ್ಯವನ್ನೇ ಕೊಡುವದಿಲ್ಲ.

ಹೀಗಾಗುವುದು ಕರ್ನಾಟಕಕ್ಕೆ ಭೂಷಣವೋ? ಕರ್ನಾಟಕವು ಒಂದಾನೊಂದು ಕಾಲಕ್ಕೆ ಗೋದಾವರಿಯ ವರೆಗೆ ಹಬ್ಬಿತ್ತಲ್ಲವೆ? ಪಂಢರಪುರದ ಬಡವ ಜನರು ಕನ್ನಡಿಗರೇ ಅಲ್ಲವೆ? ಈಗ ನೋಡಿರಿ ಅವರಿಗೆ ಕನ್ನಡದ ಗಂಧವೇ ಇಲ್ಲ. ಅವರು, ಇದರ ತಪ್ಪು ಕರ್ನಾಟಕರದು ಅಲ್ಲವೆಂದು ಇತಿಹಾಸವು ನಮಗೆ ಹೇಳುತ್ತದೆ. ಈಗಿನ ರಾಜಕೀಯ ವಿಭಾಗಗಳಲ್ಲಿ ಕರ್ನಾಟಕವು ಯಾವ ಸ್ಥಲವನ್ನು ಹೊಂದಿರುವದೆಂಬದನ್ನು ನೋಡಿದರೆ, ಪ್ರತಿಯೊಂದು ವಿಭಾಗದಲ್ಲಿಯೂ ಕನ್ನಡಿಗರು ಆಯಾ ವಿಭಾಗಗಳ ತುಟ್ಟತುದಿಗೆ ಒಂದು ಮೂಲೆಯಲ್ಲಿಯೇ ಇರುವರೆಂಬದು ಗೊತ್ತಾಗುತ್ತದೆ. ಮುಂಬಯಿ ಇಲಾಖೆಯಲ್ಲಿ ಈ ಕನ್ನಡ ಜಿಲ್ಲೆಗಳು ಕಟ್ಟ ತುದಿಗೆ ಹತ್ತಿಕೊಂಡಿವೆ. ಹೈದರಾಬಾದ ಸಂಸ್ಥಾನದಲ್ಲಿ ಅವು ಪಶ್ಚಿಮ ತುದಿಗೆ ಅದೇ ಮೇರೆಗೆ ಬಳ್ಳಾರಿ ಅನಂತಪುರಗಳು, ಕೊಯಮುತ್ತೂರು ಮತ್ತು ಮಂಗಳೂರು ಜಿಲ್ಲೆಗಳು ಮದ್ರಾಸ ಇಲಾಖೆಯ ಮೇರೆಯ ಮೇಲಿರುತ್ತವೆ. ಆದಪರಿಂದ ಆಯಾ ಇಲಾಖೆಗಳ ರಾಜಧಾನಿಗಳಲ್ಲಿರುವ ಸಾರ್ವಜನಿಕ ವಿಚಾರಗಳ ಮುಖಂಡರು ಅವರಿಗೆ ಕಟ್ಟಕಡೆಗೆ ಸೇರಿಕೆದರೆ ಆಶ್ಚರ್ಯವೇನು?

ಅರ್ವಾಚೀನ ವಿಚಾರ ಜ್ಞಾನವಿಲ್ಲದ ಮುಂಚಿನ ಮನಸ್ಸಿನ ತೆಲಗು ಮನಸ್ಯನ ಕೂಡ ತುಕಾರಾಮ ರಾಮದಾಸರೇ ಮೊದಲಾದವರ ಅಭಂಗಗಳೂ ಶ್ಲೋಕಗಳನ್ನೂ ಪ್ರತಿನಿತ್ಯ ಅನ್ವಯ ಪಠಿಸುವದನ್ನಿಟ್ಟು ತನ್ನ ಧಾರ್ಮಿಕ ಸಂಸ್ಕೃತಿ [illegible] ಕಾಯ್ದು ಕೊಂಡಿದ್ದಾನೆ. ವಸ್ತುತಃ ಹಿಂದಿನ ಕಾಲಕ್ಕೆ ಭಜನೆಗಳ ಮೂಲಕವಲ್ಲ — ಪುರಾಣಗಳ ಮೂಲಕ ಈ ಧಾರ್ಮಿಕ ಶಿಕ್ಷಣವು ಕೊಡಲ್ಪಡುತ್ತಿತ್ತು. ಆದರೆ, ಕರ್ನಾಟಕದ ವ್ಯಾಸ್ಯಾಸರೂ ಜಂಗಮರೂ ತಮ್ಮ ವೃತ್ತಿಯನ್ನು ಬಿಟ್ಟು ಕೊಟ್ಟು ಸಾಂಸಾರಿಕ ಉದ್ಯೋಗಗಳ ಬೆನ್ನು ಹತ್ತಿದ್ದರಿಂದ ಸಂಸ್ಕೃತಿಯ ಈ ಪ್ರವಾಹವು ಬತ್ತಿಹೋಗಿದೆ. ಈಗ ಕನ್ನಡ ದೇಶದ ರೈತನು ತಾನು ಹೊಡೆಯುವ ಎತ್ತಿನ ಇಲ್ಲವೆ ಕೋಣದಂತೆ ಅಜ್ಞಾನಪೂರ್ಣನಾಗಿರುತ್ತಾನೆ.

ಗಿರಣಿಗಳಲ್ಲಿ ಕೆಲಸ ಮಾಡುವ ಮರಾಠಾ ಕೂಲಿಕಾರರು ದಿನವೂ ಮಾಡುವವರೂ ಹಗಲು ಎಷ್ಟೇ ದುಡಿದು ದಣಿದರೂ ರಾತ್ರಿಯಲ್ಲಿ ಬಹಳ ಹೊತ್ತಿನ ವರೆಗೆ ತುಕಾರಾಮನ ಅಭಂಗಗಳನ್ನು ಅನ್ನದೆ ಮಲಗುವುದಿಲ್ಲ. ದೇವರು ಅಥವಾ ಬಡವರ ಇವರಿಗಿಂತ ನಾವು ಮತ್ತು ತಮ್ಮ ನಿದ್ರೆಗಾಗಿ ಹೆಚ್ಚಿಗೆ ಕಾಳಜಿ ವಹಿಸುವ ಮಾಮನ ಈಗಿನ ಸುಶಿಕ್ಷಿತರು ಕೂಲಿಕಾರರ ಈ ಸಂಪ್ರದಾಯದ ವಿರುದ್ಧವಾಗಿ ಮುಂಬಯಿ ವೃತ್ತಪತ್ರಗಳಲ್ಲಿ ಮೇಲಿಂದ ಮೇಲೆ ಲೇಖಗಳನ್ನು ಬರೆಯುತ್ತಿರುತ್ತಾರೆ. ತೆಲುಗು ದೇಶದಲ್ಲಿಯೂ ಇದೇ ಸಂಪ್ರದಾಯವಿರುವುದು. ಕನ್ನಡ ಪ್ರಾಂತಗಳಲ್ಲಿ ಮಾತ್ರ ಈ ಬಗೆಯ ಸಂಪ್ರದಾಯ ವಿರುವುದಿಲ್ಲ. ಹಿಂದಿನ ಕಾಲಕ್ಕೆ ಕರ್ನಾಟಕದ ಸ್ಥಿತಿಯು ಹೀಗಿರಲಿಲ್ಲ. ಈ ದೇಶದಲ್ಲಿ ಅನೇಕ ವೈಭವಶಾಲಿಗಳಾದ ರಾಜರು ಆಗಿ ಹೋಗಿರುವರು. ಅನೇಕ ಧಾರ್ಮಿಕ ಗುರುಗಳು, ಸಿಂಹಾಸನ ಸ್ಥಾಪನಾಚಾರ್ಯರೂ ಉದಯ ಹೊಂದಿರುವರು. ಕೆಂಗುಳಿದ ಜನರನ್ನು ಮೇಲಕ್ಕೆ ತರುವ, ಅವರ ಸಂಸ್ಕೃತಿಯು ಲಾಭವನ್ನವರಿಗೆ ಮಾಡಿಕೊಡುವುದು, ಈ ಉದ್ದೇಶದಿಂದ ಕೂಡಿದ ಲಿಂಗಾಯತ ಮತವು ಈ ಕರ್ನಾಟಕದಲ್ಲಿಯೇ ಹುಟ್ಟಿದೆ. ಕನ್ನಡವು ಬಹಳ ಊರ್ಜಿತ ಸ್ಥಿತಿಯಲ್ಲಿ ಹೊಂದಿದ ಭಾಷೆಯಾಗಿದ್ದು ಅದರ ವಾಙ್ಮಯವು ಕೆಲವು ಮಂತಾದ ಭಾಷೆಗಳ ವಾಙ್ಮಯವನ್ನು ಸಂಗಟ್ಟಬಲ್ಲದು, ಅವಂತಿ ಲಿ.

ಈಗಿನ ಹೊಸ ರಾಜಕೀಯ ಸುಧಾರಣೆಗಳಲ್ಲಿ ಕರ್ನಾಟಕವು ತಾನ ಮಾಡತಕ್ಕ ಕಾರ್ಯವನ್ನು ಯೋಗ್ಯವಾಗಿ ಮಾಡಬೇಕಾದರೆ, ಹಾಗು ಹಿಂದುಸ್ಥಾನದ ರಾಷ್ಟ್ರೀಯ ಜೀವನದಲ್ಲಿ ಯೋಗ್ಯವಾಲು ಪಡೆಯಬೇಕಾದರೆ ಕರ್ನಾಟಕದ ಮುಂದಾಳುಗಳು ಇನ್ನು ತಡಮಾಡದ ಎಚ್ಚರಗೊಳ್ಳಬೇಕು. ಮಿಶ್ರ ಪ್ರಾಂತದವರಿಗಿಂತಲೂ, ಕರ್ನಾಟಕದ ಕಾರ್ಯವು ಹೆಚ್ಚು ಗಡಚಾಗಿದೆ. ಮುಂದಾಳುಗಳು ಎಚ್ಚರಪಡದಿದ್ದರೆ ಕರ್ನಾಟವು ಹಿಂದುಸ್ಥಾನದ ರಾಷ್ಟ್ರೀಯ ಪ್ರಗತಿಯ ಮಾರ್ಗದಲ್ಲಿ ಕಾಲ್ತೊಡರಾಗುವುದರಲ್ಲಿ ಸಂದೇಹವಿಲ್ಲ. ಈ ಸಂಗತಿಯು ಕನಿಷ್ಠ ಪಕ್ಷಕ್ಕೆ ಕರ್ನಾಟಕದೊಳಗಿನ, ವಿಶೇಷತಃ ದಕ್ಷಿಣದ ಮೈಸೂರು ಮತ್ತು ಮುಂಬಯಿಯೊಳಗಿನ ಸುಶಿಕ್ಷಿತರಿಗೆ ತಿಳಿದಿದೆ. ಅವರ ಮಾರ್ಗದಲ್ಲಿರುವ ಭಯಂಕರವಾದ ತೊಂದರೆಗಳ ಮೂಲಕವೇ ಅವರಿಂದ ಇನ್ನೂ ಯಾವದೊಂದು ಸುಸಂಘಟಿತ ಯೋಜನೆಯು ಕೈಕೊಳ್ಳಲ್ಪಟ್ಟಿಲ್ಲ. ಆದರೆ ಕ್ರಾಂತಿಕಾರಕವಾದ ಈಗಿನಂತಹ ಕಾಲದಲ್ಲಿ ಇನ್ನು ಮುಂದೆ ಸ್ವಂದ್ರಹಗ್ರಸ್ತರಾಗಿ ಸುಮ್ಮನೇ ಕೂತುಕೊಳ್ಳುವುದು ಉಚಿತವಲ್ಲ. ಅವರು ಏನು ಮಾಡಬೇಕೆಂದರೆ ಮುಖ್ಯ ಕರ್ತವ್ಯ... ಪ್ರಗತಿಯನ್ನು ಹೊಂದಿದ ಪ್ರಾಂತಗಳ ಮುಖಂಡರು ಹೇಗೆ ಮಾಡಿದರೋ ಹಾಗೆಯೇ ಇವರಾದರೂ ಮಾಡಬೇಕೆಂಬುದೇ. ಅದಕ್ಕೆ [illegible] ಮಹಾರಾಷ್ಟ್ರದಲ್ಲಿ ರಾಜಕೀಯ ವಿಷಯದ [illegible] ಹಾಗು ... ವಿಷಯಗಳಲ್ಲಿಯೂ ಉದಾತ್ತ ವಿಚಾರಗಳ ಪರಿಚಯವನ್ನು ಸಾಮಾನ್ಯ ಜನರಿಗೆ ಸತತವಾಗಿ ಮಾಡಿಕೊಡುವ ಉದ್ದೇಶದಿಂದಲೂ ಸಾರ್ವಜನಿಕ ಕಾರ್ಯಗಳನ್ನು ಮಾಡಲಿಕ್ಕೆ ಲೋಕಸ್ವಾತಂತ್ರ್ಯವನ್ನುಂಟು ಮಾಡುವ ಉದ್ದೇಶದಿಂದಲೂ ... ಜನರು, ಅವರು "ಕೇಸರಿ" ಮತ್ತು "ಸುಧಾರಕ" ವೆಂಬ ವೃತ್ತಪತ್ರಗಳನ್ನು ಹೊರಡಿಸಿದರು. ಸರಕಾರವು ಪ್ರಜಾಸತ್ತಾತ್ಮಕವೇ ಇರಲಿ ಅನಿಯಂತ್ರಿತ ಅಧಿಕಾರಯುಕ್ತವಾದದ್ದೇ ಇರಲಿ — ಆಯಾ ಕಾಲದಲ್ಲಿ ದೇಶದೊಳಗೆ ಪ್ರಚಲಿತವಾದ ವಿಚಾರಗಳೇ ನಿಜವಾಗಿ ನಮ್ಮನ್ನು ಆಳುತ್ತವೆಂದು ಇಂಗ್ಲೆಂಡದಲ್ಲಿಯ ಅತ್ಯಂತ ಪ್ರಸಿದ್ಧನಾದ ಮುತ್ಸದ್ದಿಯೊಬ್ಬನು ಹೇಳಿರುವನು. ಆದ ಕಾರಣ ಯಾವದೇ ವಿಷಯದಲ್ಲಿ ಪ್ರಗತಿಯಾಗಬೇಕಾದರೆ ಉಚ್ಚವಾದ ವಿಚಾರಗಳನ್ನು ಪ್ರಸಿಧಿಸಿಕೊಂಡು ಅವುಗಳನ್ನು ಜನರ ಮನಸ್ಸಿಗೆ ಹಿಡಿಸುವುದೇ ಎಲ್ಲಕ್ಕೂ ಮೇಲಾದ ಉಪಾಯವು. ಇದಕ್ಕೆ ಬಹಳ ಉತ್ಸಾಹದಿಂದಲೂ ನಡೆಸಲ್ಪಟ್ಟ ಮುದ್ರಣಾಲಯವೂ ವೃತ್ತಪತ್ರವೂ ಅವಶ್ಯವಾಗಿದ್ದು.

ಮದ್ರಾಸದಲ್ಲಿ ಹಿಂದೂ ಪತ್ರವನ್ನು ತೆಗೆದ ದೇಶಭಕ್ತ ಸಂಘವು ಇದೇ ಮಾರ್ಗವನ್ನವಲಂಬಿಸಿತು. ಕರ್ನಾಟಕದ ಪ್ರತಿಯೊಂದು ಭಾಗದ ಮುಖ್ಯ ಕೊರತೆಯು ಇದೇ. ಮೈಸೂರು ಪ್ರಾಂತವು ಬಹಳ ಪ್ರಗತಿಯನ್ನು ಹೊಂದಿದ ಪ್ರದೇಶವೆಂದು ಜನರ ತಿಳುವಳಿಕೆ ಇರುವುದಷ್ಟೆ. ಆದರೆ ಅಲ್ಲಿ ಉಚ್ಚತರದ ಇಂಗ್ಲಿಷ ವೃತ್ತಪತ್ರವು ಒಂದೂ ಇಲ್ಲ. ಅದು ಮದ್ರಾಸ, ಅಥವಾ ಪುಣೆಯ ವೃತ್ತಪತ್ರಗಳ ಮೇಲೆ ಅವಲಂಬಿಸಬೇಕಾಗಿದೆ. ಮುಂಬಯಿ ಇಲಾಖೆಯ 'ಕೇಸರಿ' ಮುಂಬಯಿ ಸಮಾಚಾರ' 'ಗುಜರಾತಿ' "ಸ್ವದೇಶ ಮಿತ್ರನ್" ಅಥವಾ "ಆಂಧ್ರ ಪತ್ರಿಕೆ" ಎಂಥ ಒಂದೂ ವೃತ್ತಪತ್ರಿಕೆಯು ಇಲ್ಲದ ಪ್ರದೇಶವೆಂದರೆ ಕರ್ನಾಟಕವೇ. ಅದಕಾರಣ ಪ್ರಚಲಿತ ವಿಚಾರಗಳನ್ನು ಹರಡುವ ಮುದ್ರಣಾಲಯವು ಎಲ್ಲಕ್ಕೂ ಮೊದಲು ಕರ್ನಾಟಕಕ್ಕೆ ಬೇಕಾಗಿದೆ. ಇಂಗ್ಲಿಷ ಶಿಕ್ಷಣವನ್ನು ಹೊಂದಿ ಜ್ಞಾನ ಕಾರ್ಯವನ್ನು ಮಾಡುವವರೇ ಎಲ್ಲಿ ಹೋದರೂ ಮುಂದೆ ಬಂದು ಕೆಲಸವನ್ನು ಮಾಡುವವರು. ಐಕ್ಯ ಕಡೆಯ ಮುಂದಾಳುಗಳೊಡನೆ ವ್ಯವಹಾರ ಬೆಳೆಸಲಿಕ್ಕೂ ಪ್ರತಿಯೊಂದು ವಿಷಯದಲ್ಲಿ ಅವರಿಗೆ ಬೆಂಬಲ ಬೇಡುವುದಕ್ಕೂ, ಕೊಡುವುದಕ್ಕೂ ಹಾಗು ಸಾಮಾನ್ಯ ಜನಸಮೂಹದ ವಿಷಯವಾಗಿ ಮಾಡತಕ್ಕ ಕಾರ್ಯವನ್ನು ಮಾಡಲಿಕ್ಕೂ ಸುಶಿಕ್ಷಿತರಿಗೆ ಈ ಮುದ್ರಣಾಲಯದಿಂದ ಸುಗಮವಾಗುವುದು. ಆ ನಂತರ ವ್ಯಾಪಾರವನ್ನು ತೆಗೆದುಕೊಳ್ಳಿರಿ. ಬೇರೊಂದು ದೃಷ್ಟಿಯಿಂದ ನೋಡಿದರೆ ವ್ಯಾಪಾರಸ್ಥರ ವರ್ಗವೇ ಹೆಚ್ಚು ಮಹತ್ವದ್ದು. ಕರ್ನಾಟದ ವ್ಯಾಪಾರವು ಮುಖ್ಯ ಆಧಾರಸ್ತಂಭದಿಂದ ಹಾಗು ಚಾಣಾಕ್ಷತನದಲ್ಲಿಯೂ ಧೈರ್ಯದಲ್ಲಿಯೂ ವಿಖ್ಯಾತರಾದ ಜೈನ ಹಾಗು ಲಿಂಗವಂತ ಜನರ ಈಗಿನ ಕೆಟ್ಟ ಹಿಂದುಳಿದ ಮಾಡುವ ಕಾಲ ... ಇನ್ನೂ ಬದ್ಧವಾಗಿಲ್ಲ. ಆದ ಕಾರಣವೇ ಕರ್ನಾಟಕವು ಐಕ್ಯ ವಿಷಯಗಳಲ್ಲಿ ಹಿಂದುಳಿದಿದ್ದರೂ ವ್ಯಾಪಾರದಲ್ಲಿ ಮುಂದೇ ಬರುತ್ತದೆ ಇದಕ್ಕಾಗಿ ನಾವು ಜೈನರ ಮತ್ತು ಲಿಂಗವಂತರ ಉಪಕಾರವನ್ನು ಎಷ್ಟು ಸ್ಮರಿಸಿದರೂ ಸ್ವಲ್ಪವೇ. ಆದರೆ ಹಿಂದುಸ್ಥಾನವು ಈಗ ಜಗತ್ತಿನಲ್ಲಿ ನಡೆದ ವ್ಯಾಪಾರ ವಿಷಯಕ ಚಳವಳಿಯಲ್ಲಿ ಬಲ ಮೆಯಿಂದ ಸೇರಿಸಲ್ಪಟ್ಟಿದೆ. ಕರ್ನಾಟಕವು ಈ ವಿಷಯದಲ್ಲಿ ತನ್ನ ಪೂರ್ವದ ಉಚ್ಚ ಸ್ಥಳವನ್ನು ಕಾಯ್ದು ಕೊಳ್ಳಬೇಕಾದರೆ ಅದು ಪಾಶ್ಚಿಮಾತ್ಯ ದೇಶಗಳ ಜ್ಞಾನವನ್ನು ಸಂಪಾದಿಸುವುದು ಅವಶ್ಯ. ಮತ್ತು ಪಾಶ್ಚಿಮಾತ್ಯರು ಅನುಸರಿಸುವ ಮಾರ್ಗಗಳನ್ನಾದರೂ ಕರ್ನಾಟಕವು ಅನುಸರಿಸಲಿಕ್ಕೆ ಬೇಕು. ಇದಲ್ಲ, ಸಾಧ್ಯವಾಗಬೇಕಾದರೆ ವ್ಯಾಪಾರ ವಿಷಯಕ ಸಂಗತಿಗಳನ್ನೆಲ್ಲ ಮಾತೃಭಾಷೆಯಲ್ಲಿಯೇ ಸಂಗ್ರಹಿಸಿ ಕರ್ನಾಟಕದ ಪ್ರತಿಯೊಂದು ಅಂಗಡಿಗೂ ಮನೆಗೂ ಆ ಸಂಗತಿಗಳು ತಲುಪುವಂತೆ ದೊಡ್ಡದೊಂದು ಚಳವಳಿಯನ್ನು ಪ್ರಾರಂಭ ಮಾಡಲಿಕ್ಕೆ ಬೇಕು. ಇಂಥ ಪ್ರಚಂಡ ಕಾರ್ಯವು ಸದ್ಯಕ್ಕೆ ಸಾಧ್ಯವಿಲ್ಲದಿದ್ದರೂ ನಾಲ್ಕು ಕಡೆಗೆ ಚಿಂತಾತುಗಳನ್ನು ಕಳಿಸಿ ವ್ಯಾಪಾರವು ಬೆಳೆಯುವಂತೆ ಮಾಡಿದರೂ ಎಷ್ಟೋ ಕಾರ್ಯಭಾಗವಾಗಬಹುದು.

ಮೂರನೇ ವರ್ಗವೆಂದರೆ ರೈತರದು ಮತ್ತು ಕೂಲಿಕಾರರದು. ಅರ್ವಾಚೀನ ಕಾಲದ ವ್ಯಾಪಾರದ ದೃಷ್ಟಿಯಿಂದ ನೋಡಲು ಈಗಿನ ಕಾಲದಲ್ಲಿ ಈ ವರ್ಗಕ್ಕೆ ಬಹಳೇ ಮಹತ್ವವು ಪ್ರಾಪ್ತವಾಗಿದೆ. ಆದರೆ ಸಮಾಜದ ಮುಖಂಡರಾದ ಮೊದಲನೇ ವರ್ಗದವರು ತಮ್ಮ ಕರ್ತವ್ಯವನ್ನು ಚೆನ್ನಾಗಿ ಅರಿಗಿಸದೆ, ಈ ವರ್ಗವನ್ನು ಅಲಕ್ಷ ಮಾಡಿಬಿಟ್ಟದ್ದರಿಂದ ರಾಷ್ಟ್ರ ಘಟನೆಗೆ ಅವಶ್ಯವಾದ ಘಟಕಾವಯವಗಳಲ್ಲಿ ಈ ಅವಯವವು ತೀರ ದುರ್ಬಲವಾಗಿದೆ. ಅದನ್ನು ಉನ್ನತ ಸ್ಥಿತಿಗೆ ತರುವುದು ಈ ಪತ್ರಿಕೆಯ ಮುಖ್ಯ ಕರ್ತವ್ಯವು.

ಕರ್ನಾಟವು ಅಖಂಡವಾದ ಪ್ರಾಂತವಾಗಲಿಕ್ಕೆ ಮೈಸೂರ ಮತ್ತು ಹೈದರಾಬಾದ ಸಂಸ್ಥಾನಗಳ ಅಡ್ಡಬರುವವೆಂಬದೇನೋ ನಿಜ. ಆದರೆ ಆ ಸಂಸ್ಥಾನಗಳು ದೇಶೀಯ ಸಂಸ್ಥಾನಗಳೇ ಇರುವುದರಿಂದ ಈ ವ್ಯಂಗವು ತುಸು ಮಟ್ಟಿಗೆ ಕಡಿಮೆಯಾಗುತ್ತದೆ. ಅವುಗಳನ್ನು ಬಿಟ್ಟರೂ ಸಹ ಬ್ರಿಟಿಷರಿಂದ ೪೫ ಲಕ್ಷ ಜನ ಸಂಖ್ಯೆಯ ಭಾಷೀಸಂಯುಕ್ತ ಹಿಂದುಸ್ಥಾನದಲ್ಲಿ ಪ್ರತ್ಯೇಕವಾದ ಪ್ರಾಂತವಾಗಲಿಕ್ಕೆ ಸಾಕಷ್ಟು ಇರುತ್ತದೆ. (ಮುಂದರಿಸಲಾಗುವುದು)

The Canara Public Conveyance Co., Ltd.,

MANGALORE.

NOTICE.

To

M. R. Ry. N. M. Bhandary and other signatories of the requisition Dated 28th April 1920

The meeting called for by the shareholders is convened for the 24th July at 3 P. M. at a place, which will be duly announced later on. On the Chairman's applying for obtaining the shareholders' Register, which is quite essential for the issue of notices in connection with the above meeting, orders have been passed by the District Munsiff of Mangalore to the effect that the Register may be obtained, subject to the condition that it will have to be returned to Court whenever 1st defendant (Mr. Bolar Vittal Rau) calls upon the Chairman to do so. The meeting has been convened on the express understanding that the above Register will be obtained by the Chairman, and will be suffered to remain long enough in his custody to issue the necessary notices.

V. Shrinivas Kamath,

Chairman, Board of Directors,

The Canara Public Conveyance Co., Ltd.

ಗೊನೊರ್‍ಹ್ಯಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

[illegible] ಹೊಯುವದಕ್ಕೆ, ಮೂತ್ರ [illegible] ಉರಿ, ಹಳದಿವರ್ಣದ ಅಥವಾ ಹಸುರು [illegible] ಮೇಹವು ಹರಿಯುವದಕ್ಕೆ, ಮೂತ್ರ[illegible]ವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಬಂಧವಾದ ಎಲ್ಲಾ ಗುರುಕುರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟು ಕಾಲದ ಹಳೇ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ:— ರೂ. 1—0—0.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು

ವಿಳಾಸ:— ಪಿ. ಪೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೊಪತಿ ಡಿಸ್ಪೆನ್ಸರಿ,
ಮಂಗಳೂರು.

ರಾಜವೈದ್ಯ ನಾರಾಯಣಜೀ ಕೇಶವಜೀ
ಇವರ

ವೈದ್ಯವಿದ್ಯ.

ವೈ ದ್ಯ ವಿ ದ್ಯ	ಈ ಪುಸ್ತಕವು ಎಲ್ಲಾ ಭಾಷೆಗಳಲ್ಲಿಯೂ ಇರುವದು. ಇದನ್ನು ಓದುವದರಿಂದ ಶರೀರದಲ್ಲಿ ಉಂಟಾಗುವ ವ್ಯಾಧಿಗಳನ್ನು ಬಹು ಬೇಗನೆ ಗುಣ ಮಾಡಿಕೊಳ್ಳುವ ಉಪಾಯಗಳು ಮತ್ತು ಔಷಧಗಳು ಗೊತ್ತಾಗುವವು.	ವೈ ದ್ಯ ವಿ ದ್ಯ

ವೈದ್ಯವಿದ್ಯ.

ಇದು ಎಲ್ಲರಿಗೂ ಉಚಿತವಾಗಿ ಕಳುಹಿಸುವೆವು. ವಿಳಾಸವನ್ನು ತಿಳಿಸಿರಿ.

ವಿಳಾಸ —
ರಾಜವೈದ್ಯ ನಾರಾಯಣಜೀ ಕೇಶವಜೀ,
೨೭. ಜೈನಾಬಜಾರು ರೋಡು, ಮದರಾಸು.

To Get
BEST and CHEAPEST
EVERYTHING FROM BOMBAY

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ — ನಾವು ಈ ಕೆಳಗೆ ಹೆಸರು ತೋರುವ ಕಂಪೆನಿಯನ್ನು ಸದ್ಯಾ ತೆರದಿರುತ್ತೇವಾದುದರಿಂದ ಮುಂಬಯಿಯಿಂದ ಬೇಕಾಗುವ ಸಾಮಾನುಗಳನ್ನು ಅತ್ಯಲ್ಪ ಕಮಿಶನಿನ ಮೇಲೆ ಸಪ್ಲೈ ಮಾಡಿಕೊಡುತ್ತೇವೆ. ಸಾಮಾನು ತರಿಸಲಪೇಕ್ಷಿಸುವವರು ನಮ್ಮ ಶರ್ತಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು

ಎಸ್ ರಿ ಸೆಕ್ಸಿ ರೇಜರು ಮತ್ತು ವಸ್ತ್ರಾದಿ ಎಂಟಿಬೇಸ್ ಎಂಬುವ ಜ್ವರದ ಪಿಶ್ರಣವು ನಮ್ಮಲ್ಲಿ ದೊರಕುತ್ತದೆ ಶೀಘ್ರದಲ್ಲಿ ಬರೆಯಿರಿ

TEL. ADDRESS.
PARTSARTHI, Bombay

BOMBAY CANARA TRADING CO.
Jamnadas Building, Pitha Street,
FORT BOMBAY

ಶ್ರೀಮತ್ ಕಲ್ಯಾಣ ಬಂಧುಗಳೇ!

ಇತ್ತ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಅನೇಕ ಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು

S. P RAJA & Co.,
Kalyanakaraka Bishagmandir.
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

BANK OF MADRAS.

ಮದ್ರಾಸ್ ಬ್ಯಾಂಕ್

ಹೆಡ್ ಆಫೀಸು: ಮದ್ರಾಸ್.

ಮೂಲಧನ	ರೂ. 75,00,000
ಕ್ಷೇಮನಿಧಿ	„ 45,00,000

ಸೇವಿಂಗ್ಸ್ ಬ್ಯಾಂಕ್
— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾದಾವು

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ 5,000ಕ್ಕೆ ಮಿಗದ ಮೊಬಲಗನ್ನು ಠೇವಣಾತಿಯಾಗಿಡಬಹುದು

— ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ 10,000ಕ್ಕೆ ಮೀರದ ಮೊಬಲಗಿನ ವರೇಗೆ ಬಡ್ಡಿ ಏನಿಸಲಾಗುವುದು

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿನಿಂದ ಪಡೆಯಬಹುದು

ಸಿ ಎಲ್ ಗೊರ್ಡನ್,
ಏಜಂಟ್, ಮದ್ರಾಸ್ ಬ್ಯಾಂಕ್, ಮಂಗಳೂರು

ಶುದ್ಧಿ ಶಿಲಾಜಿತು
(ಯಾನೆ)
ಉತ್ತಮ ಕಲ್ಪದ.

ತೊಲೆ ೧ಕ್ಕೆ ರೂ ೧ ೫ ತೊಲೆ ಡಬ್ಬಿ೧ಕ್ಕೆ ೨-೧೨-೦.

ಅಂಚೆಹಾಸಲು ೪ ಆಣೆ ಬೇರೆ

ನಾಲ್ಕಾಣೆಯ ಚೀಟು ಕಳುಹಿಸಿದಲ್ಲಿ ನಮೂನೆ (Sample) ಕಳುಹಿಸಬಹುದು

ನಮ್ಮಲ್ಲಿ ಸ್ವಲ್ಪ ಮಾತ್ರ ಉಳಿದಿದೆ. ಬೇಕಾದವರು ತ್ವರೆ ಮಾಡಿರಿ.

ಪತ್ತೆ — ಮನೋಲ್ಲಾಸಿನಿ ಕಂಪನಿ,
Manollasini Co, 4 ಕಂಕನಾಡಿ ಪೋಸ್ಟು
4. Kankanady

ಜಗದ್ವಿಖ್ಯಾತವಾದ ಶ್ರೀ ದೇವಿಪ್ರಸಾದ ಕಂಪೆನಿಯ
ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರಿಂದ ವಾತ, ಕಸ, ಜಗಿತ, [illegible] ಘಾಯ, ತಲೆನೋವು, ಸೊಂಟನೋವು, ಬೆನ್ನುನೋವು, ಮುಂತಾದ ಎಲ್ಲಾ ತರದ ವೇದನೆಗಳು ಅತಿ ಕ್ಷಿಪ್ರದಲ್ಲಿ ಸಂಪೂರ್ಣವಾಗಿ ಗುಣ ಹೊಂದುವವು. ಬಾಟ್ಲಿ ೧ರ ಕಿಮ್ಮತು ೦—೬—೦, ಒಂದು ಡಜನು ಬಾಟ್ಲಿಗಳಿಗೆ ರೂ ೪—೧೨—೦.

"ಗಜಕರ್ಣದ ಮುಲಾಮು"

ಗಜಕರ್ಣ, ಉಸಬು, ಖಜ್ಜಿ, ದದ್ರು, ಹುಳಕಡ್ಡಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಾಗಿಸುವದರೊಳಗೆ ನಿಸ್ಸಂದೇಹವಾಗಿ ಇವರಿಂದ ನಿವಾರಣೆಯಾಗುವವು ಬಾಟ್ಲಿ ೧ಕ್ಕೆ ೦—೪—೦, ಒಂದು ಡಜನಿಗೆ ರೂ ೩—೦—೦.

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಮೆಡಲು ದೊರೆತಿರುವವು ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೂ ಪತ್ರವ್ಯವಹಾರ ಮಾಡೀರಿ

ದಿ. ಮ್ಯಾನೆಜರ್ — ಶ್ರೀ ದೇವಿಪ್ರಸಾದ ಕಂಪೆನಿ,
ಪೋಸ್ಟು ಬಾರಕೂರು, ದ. ಕನ್ನಡ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಓಡಾಟ ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ 5—8—0

ನಮ್ಮ ವಿಳಾಸ:— ವಿ. ಎ ಎಸ್ ಪಾಠಕ ಕಂಪೆನಿ,
ನಾಯಕನಪೇಟ, ಮದ್ರಾಸ್.

ಕನ್ನಡ ಮಾತನ್ನು
ಕಲಿಯುವ ಚಿಕ್ಕಬಾಲಕರಿಗೆ ಉಪಯುಕ್ತವಾದ

ಅಜ್ಜಿ ಕಥೆಗಳು:

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ
ಅರ್ಗಣಿ ಮುದ್ದೆ
ಇಲಿಗಳ ಥಕ್ಕ ಥೈ
ಅಂಗಳ ದುಗ್ಗು
ಗುಡುಗುಡು ಗುಮ್ಮಟದೇವರು
ಸಿಗಡಿ ಯಾಕೆ ಒಣಗಲಿಲ್ಲ? ಹುಲಿಯೊ ಇಲಿಯೊ

ಈ ಎಂಟು ಪುಸ್ತಕಗಳ ಕ್ರಯ ಅಂಚೆ ಹಾಸಲು ಸೇರಿ ರೂ. 0—7—0
ವಿ. ಪಿ. ರೂ. 0—8—0.

ಅಕ್ಷರಮಾಹಿತಿಯನ್ನುಂಟುಮಾಡುವದರಲ್ಲಿ ಸಹಕಾರಿಯಾಗಿವೆ ಶಬ್ದಗಳ ಉಪಯೋಗ, ಅವುಗಳ ಅರ್ಥ ಮತ್ತು ವಾಕ್ಯರಚನೆ ಇವುಗಳನ್ನು ಈ ಕಥೆಗಳ ಮೂಲಕ ಮಕ್ಕಳು ತಿಳಕೊಳ್ಳಬಹುದು. ಬಾಲ್ಯಪ್ರಾಯದಿಂದಲೇ ಕ್ರಮವಾಗಿ ಬೆಳೆದುಬರಬೇಕಾಗಿರುವ **ವಾಚನಪ್ರೀತಿಯು** ಮಕ್ಕಳಲ್ಲಿ ಈ ಚಿಕ್ಕ ಕಥೆಗಳನ್ನು ಓದುವದರಿಂದ ಹುಟ್ಟುವದು.

ವಿಳಾಸ — ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

ತಿರುಚಿ ಸುಗಂಧನಿಧಿ ಕಾರಖಾನೆ

ಅನೇಕ ನಮೂನೆಯ ಮೂಸಾ ಅಂಬರ್, ಜವ್ವಾಜಿ, ಪುನಗು, ಕಸ್ತೂರಿ, ಊದುಬತ್ತಿಗಳು, ಬಿಲ್ಲೆಗಳು, ಅರಗಜ, ಪಿತ್ರಾ, ಅತ್ತರುಗಳು, ಸೆಂಟ್ಸ್‌ಗಳು, ಭೃಂಗಾಮಲಕ ತೈಲ, ಕುಂತಳವರ್ಧಿನಿ ತೈಲ, ಇವೇ ಮೊದಲಾದ ಸುಗಂಧ ದ್ರವ್ಯಗಳು ನಮ್ಮಲ್ಲಿ ತಯಾರಾಗಿ ಬಿಕರಿಯಾಗುತ್ತ, ಮೈಸೂರು, ಮದರಾಸು, ಬೊಂಬಾಯಿ, ಕಲ್ಕತ್ತಾ, ಡಿಲ್ಲಿ, ಪಂಜಾಬು ಮುಂತಾದ ಇಂಡಿಯಾ ದೇಶದಲ್ಲಿಯೂ ಮತ್ತು ಬರ್ಮ, ಸಿಲೋನ್, ಜವಾನ್ ಮುಂತಾದ ದ್ವೀಪಾಂತರಗಳಲ್ಲೂ ನಮ್ಮ ತಯಾರಿಯ ಸುಗಂಧದ್ರವ್ಯಗಳು ಪ್ರಖ್ಯಾತಿ ಹೊಂದಿವೆ. ಒಂದಾವರ್ತಿ ನಮ್ಮ ಪದಾರ್ಥಗಳನ್ನು ತರಿಸಿನೋಡಿದರೆ ಅವುಗಳ ಗುಣಗಳು ತಿಳಿಯಬರುತ್ತ

ರಹಿಂವಾರ್ ಊದುಬತ್ತಿಗಳು ೨೪ ರೂಪಾಯಿ ತೂಕವುಳ್ಳದ್ದು ಶೇರು ೧ಕ್ಕೆ

ಊದುಬತ್ತಿಗಳು

ಸುಗಂಧ ಸಳನಿಧಿ ಬತ್ತಿ ಶೇರು 1ಕ್ಕೆ	12—0—0
ಕುಸುಮಗಂಧವಳ್ಳಿ	8—0—0
ಪುಷ್ಪವಲ್ಲಿನಿ	6—0—0
ನಂಬರ್ ಎ ಅಂಬರ್	5—0—0
„ ಬಿ ಅಂಬರ್	3—0—0
„ ಸಿ ಅಂಬರ್	2—0—0
1ನೇ ಜವ್ವಾಜಿ ಬತ್ತಿ	6—0—0
2ನೇ „	4—0—0
1ನೇ ಕಸ್ತೂರಿ ಬತ್ತಿ	3—0—0
2ನೇ „	2—0—0
1ನೇ ಪುನಗು ಬತ್ತಿ	1—8—0
2ನೇ „	1—0—0

ಅವ್ವಲ್ ಹತೀಬಿಲ್ಲೆಗಳು

	1 ತೊಲೆ	½ ತೊಲೆ	¼ ತೊಲೆ
1ನೇ ನಂಬರ್	1-0-0	0-8-0	0-4-0
2ನೇ „	0-8-0	0-4-0	0-2-0

ಜವ್ವಾಜಿಗಂಧ ಅಥವಾ ಅರಗಜ.

ಅವ್ವಲ್ 1ನೇ ನಂಬರ್ ತೊಲ 1ಕ್ಕೆ	2—0—0
2ನೇ „ „	1—0—0

ಪುದುಕೋಟಿ ಕಸ್ತೂರಿ ಬಿಲ್ಲೆಗಳು.

	1ತೊಲೆ	½ತೊಲೆ	¼ತೊಲೆ
1ನೇ ನಂಬರ್	2-0-0	1-0-0	0-8-0
2ನೇ „	1-0-0	0-8-0	0-4-0

ಉತ್ತಮವಾದ ದಶಾಂಗ ಶೇರು 1ರ ರೂ 1

ತಲೆಗೆ ಹಚ್ಚುವ ಕುಂತಳವರ್ಧಿನಿ ತೈಲ ಸೀಸೆ 1ಕ್ಕೆ ರೂ 1 ಸ್ನಾನಕ್ಕೆ ಉಪಯೋಗಿಸುವ ಭೃಂಗಾಮಲಕ ತೈಲ ಸೀಸೆ 1ಕ್ಕೆ 1—0—0

ಎಲ್ಲಾ ಸಾಮಾನುಗಳಿಗೆ ಟಪ್ಪಾಲು ಚಾರ್ಜು ಬೇರೆ ಬೀಳುತ್ತ, ವ್ಯಾಪಾರಿಗಳಿಗೆ ಕಮಿಶನ್ ದಯಮಾಡಿ ಕಳುಹಿಸುವೆವು. ಬೇಕಾದ ಸಾಮಾನುಗಳ ಹೆಸರು, ನಂಬರು, ಬರೆದರೆ ಅದರಂತೆ ನೋಡಿ ರವಾನಿಸುವೆವು ನಮ್ಮ ಕೈಟಿ ಬಾಗು ಉಚಿತವಾಗಿ ರವಾನಿಸುವೆವು ಸಹುಗೆ ಕಾಗದ ಬರೆಯುತ್ತಕ್ಕವರು, ಹೆಸರು, ಊರು, ಗ್ರಾಮ, ಪೋಸ್ಟು, ಇವುಗಳನ್ನು ಸ್ಪಷ್ಟವಾಗಿ ಬರೆಯಬೇಕು.

Sugandhanidhi Office, ನಮ್ಮ ವಿಳಾಸ— ತಿರುಚಿ ಸುಗಂಧನಿಧಿ ಕಾರಖಾನೆ,
Malepudur, Trichinopoly. ಮೇಲೆಪುದೂರು, ತಿರುಚಿನಾಪಳ್ಳಿ.

M. Anantha Prabhu,
The Tailoring House and School of Scientific Tailor's Cutting,
MANGALORE, SOUTH KANARA.

ಎಲೆಕ್ಟ್ರಿಕ್ ದೀಪ.

ಇದು ವಿದ್ಯುಚ್ಛಕ್ತಿಯ ಸಹಾಯದಿಂದ ಪ್ರಕಾಶವುಳ್ಳದ್ದಾಗಿ ಉರಿಯುತ್ತೆ. ಇದನ್ನು ಹಚ್ಚುವುದಕ್ಕೆ ಬೆಂಕಿಕಡ್ಡಿ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವಿಲ್ಲದೆ ತೆರೆದುಕೊಂಡು ಪ್ರಕಾಶವಾಗಿ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯವಾಗಿ ತೋರುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಆವಶ್ಯಕವೇ ಇರುವದಿಲ್ಲ. ಬೀಡಿ, ಸಿಗರೇಟು ಸೇದುವವರಿಗೂ, ಪ್ರಯಾಣಿಕರಿಗೂ ಅವಶ್ಯವಾಗಿ ಬೇಕಾದದ್ದು. ಇದರ ಬೆಲೆ 1ಕ್ಕೆ 1–8–0.

ನಮ್ಮ ವಿಳಾಸ:— ಸಿಟಿ ವಾಚ್ ಕಂಪೆನಿ.
16. ತಿರುಪಳ್ಳಿಬೀದಿ, ಮದ್ರಾಸು.

ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರ ಲೇಖ್ಯಬೋಧಿನಿ
ಕ್ರಯ ರೂ. 1—8—0

ವಿವೇಕ ಚೂಡಾಮಣಿ.

ಶ್ರೀ ಶಂಕರಾಚಾರ್ಯರವರು ಅದ್ವೈತ ಸಿದ್ಧಾಂತದ ಸಾರವನ್ನು ಸಾಧಕರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗ ಕನ್ನಡದಲ್ಲಿ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮವಿವೇಕ, ಶರೀರತ್ರಯ, ಗುಣತ್ರಯ, ಗುರುಶಿಷ್ಯ ಸಂವಾದ, ಬ್ರಹ್ಮೋಪದೇಶ ಮುಂತಾದ ಅನೇಕ ಪ್ರಕರಣಗಳನ್ನು ಒಳಗೊಂಡಿದೆ. ಇದನ್ನು ಅಭ್ಯಾಸಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ... ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ... ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ.

ಬೆಲೆ 1ಕ್ಕೆ ರೂ. 3–0–0.. ಅಂಚೆ ಖರ್ಚು 4 ಆಣೆ.

ವಿಳಾಸ:—
ಎಚ್. ಎನ್. ರಾವ್. ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುಗಂಧ ಕಲಾನಿಧಿ.

ಅಲ್ಪವಾದ ಬೆಲೆ! ಮಹತ್ತಾದ ವಿಷಯ!!

ಈ ಪುಸ್ತಕದಲ್ಲಿ ಅಪೂರ್ವವಾದ ... ವಿಧ ಊದಿನಕಡ್ಡಿ, ಅನೇಕ ವಿಧ ಗಂಧದ ಬತ್ತಿ, ಸ್ನಾನಚೂರ್ಣಗಳು, ಅಂಬರ್, ದಂತಮಂಜನ, ಅಬೀರ್ ಪುಡಿ, ಅನೇಕ ಬಗೆ ಸುವಾಸನೆ ಎಣ್ಣೆ, ಪೊಮೇಟಂ, ಪನ್ನೀರು, ವಿಲಾಯಿತಿ ಪನ್ನೀರು, ಕರ್ಪೂರ, ಅಭ್ಯಂಗನಕ್ಕನುಕೂಲವಾದ ತೈಲ ಇವೇ ಮೊದಲಾದ ... ವಿಷಯಗಳು, ಮೊದಲನೆ ಭಾಗದಲ್ಲಿಯೂ, ಎರಡನೆ ಭಾಗದಲ್ಲಿ ಗಾಜು, ... ಚೀನಾಪಾತ್ರೆ, ವಾರ್ನಿಷ್, ಸಿಮೆಂಟ್, ಕಾಗದ, ಪೆನ್ಸಿಲ್, ಬೆಂಕಿಕಡ್ಡಿ, ದಂತಕೆಲಸ, ದಂತಕ್ಕೆ ಅನೇಕ ವಿಧ ಬಣ್ಣಕೊಡುವಿಕೆ, ಪಾಲೀಷ್, ಕಾಪಿಂಗ್ ಪ್ರೆಸ್, ಮತ್ತು ಮಸಿ, ಲಿತೋಗ್ರಾಫಿ ಮಸಿ, ಲೆಟರ್ ಪ್ರೆಸ್ ಮಸಿ, ಮತ್ತು ನಾನಾ ವಿಧ ಮಸಿ, ಮಸಿಪುಡಿ, ಕಾಗದಕ್ಕೆ ಮೆರುಗು, ಸ್ಟೇಟುಬೋರ್ಡು, ಫೋಟೋ ಮುಂತಾದ ... ವಿಷಯಗಳು. ಒಬ್ಬರ ಸಹಾಯವಿಲ್ಲದೆ ತಿಳಿಯಬಹುದು. ಈ ಪುಸ್ತಕವು ನಿಮ್ಮ ಬಳಿ ಇದ್ದರೆ ಒಬ್ಬ ಅನುಭವಶಾಲಿಯಾದ ಬೋಧಕನ ಹತ್ತಿರ ಇದ್ದಂತೆಯೇ.

ಬೆಲೆ ರೂ. 1–0–0.

ವಿಳಾಸ:— ಕೆ. ಪುಟ್ಟಪ್ಪ, ಕಲಾಪ್ರಸಾರಕ ಕಾರ್ಯಾಲಯ,
ನಂ. 12 ಟ್ಯಾಂಕ್ ರೋಡು,
ಬೆಂಗಳೂರು ಸಿಟಿ.

ಇದಿಗೋ ಬ್ರಿಟಿಷ್ ಗವರ್ನಮೆಂಟಿನವರಿಂದ ಬಂಗಾರದ ಪದಕಗಳನ್ನು ಪಡೆಯುವ

ವಿಷಧ್ವಂಸಿನಿ.



ಚೇಳು ಕಚ್ಚಿದ ಸ್ಥಳದಲ್ಲಿ ಈ ಔಷಧವನ್ನು ಹಚ್ಚಿದರೆ ... ಒಂದೇ ನಿಮಿಷದಲ್ಲಿ ಉರಿಯನ್ನು ... ಮಾಡುವುದು. ಈ ಔಷಧವು ಚೇಳಿನ ಹೊರತಾಗಿ ... ಹಾವು, ನಾಯಿ, ನರಿ, ... ಮುಂತಾದ ವಿಷಜಂತುಗಳ ... ಕೈ.

ಕ್ರಯ ಬಾಟ್ಲಿನ 1ಕ್ಕೆ ರೂ. 0–8–0 | ಒಂದು ಡಜನ್ ... 12 ಬಾಟ್ಲಿಗೆ ... 5–0–0 | ...

ವಿಳಾಸ:— ... ರಾಮಚಂದ್ರರಾವ್ ಅಂಡ್ ಕೋ,
16 ತಿರುಪಳ್ಳಿ ಬೀದಿ, ಮದರಾಸು.

ಕನ್ನಡ ... ಪುಸ್ತಕಗಳು

...

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.



ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.
ಇಂಡಿಯಾ ಸರಕಾರದಲ್ಲಿ ಸನ್ ... ನೇ ಇಸವಿಯ ... ನೇ ಆಕ್ಟಿನಂತೆ ರಿಜಿಸ್ಟರ್ ಮಾಡಲ್ಪಟ್ಟ

ಅರ್ಕ್ಯಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕ್ಯಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ಸಾ. ... ನೇ ಇಸವಿಯಿಂದ ಸಾ. ... ನೇ ಇಸವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ... ನೇ ಇಸವಿ ಆಕ್ಟೋಬರ್ ತಿಂಗಳಲ್ಲಿ ಇನ್ಫ್ಲೂಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದದ್ದು ಎಂಬುದು ... ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಗಳು ಈ ಅರ್ಕ್ಯಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ. ...

ರೋಗದ ನಾಮಗಳು.

...

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕ್ಯಶಫಾ,
33 ...

... ಬ್ರದರ್ಸ್,
ವೈದ್ಯಾಮೃತ ಮಂದಿರ,
... ದ. ಕನ್ನಡ.

... ಮೈಸೂರು ...
... ಊದು ಬತ್ತಿಗಳು ...

ವಿಳಾಸ:— ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪನಿ,
ಪರಿಮಳ ವ್ಯಾಪಾರಿಗಳು, ಬೆಂಗಳೂರು ಸಿಟಿ.

ರೇಷ್ಮೆ ಪಂಚೆ, ಆಟೋಮೋಹಿನಿ ಸೆಂಟ್.

ಈ ನಿಬ್ಬಿನಲ್ಲಿ ಕಂಡ ಇಂಕಿ ಅದ್ದದೆ ಬರೆಯುವ ಫೌಂಟನ್ ಪೇನಾ ಇದಕ್ಕೆ ... ಬಂಗಾರದ ಮುಳ್ಳು ಹಾಕಿರುತ್ತೆ. ಇದರಿಂದ ಬರೆಯುವದರಿಂದ ಅಕ್ಷರಗಳು ಮುದ್ರಿತಗಳ ಹಾಗೆ ಬರೆಯುವದು. ಈ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೇಷ್ಮೆ ಪಂಚೆ, ಆಟೋಮೋಹಿನಿ ಸೆಂಟ್ ಇನಾಂ ಸಹಿತ ರೂ. 1–4–0,

C. O. LINGAM & Co,
No. 8. Kumarappa Mudaly Street,
Mint Buildings,
POST: MADRAS.

ನೇಟಿವ್ ಡಾಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು.

1. ಮಹಾಮದನ ಕಾಮೇಶ್ವರಿ ಲೇಹ:—ಬಹಳ ಶ್ರಮಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಘಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು.

2. ಮಹಾಜ್ವರಾಂಕುಶ (ಖಾತ್ರಿ ಗುಣ):—ಇನ್ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲು 1ಕ್ಕೆ ಆಣೆ 8.

3. ಬಾಲಗ್ರಹಗುಟಿಕೆ:—ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ. ಡಜನಿಗೆ ಆಣೆ 10.

4. ಕೋಲೆರಾ ಯಾನೆ ವಾಂತಿಬೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಬೇದಿ ಕೂಡಲೆ ಗುಣ. ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ. ಬಾಟ್ಲು 1ಕ್ಕೆ ಆಣೆ 8.

5. ಶ್ವಾಸಕುಠಾರ ಗುಟಿಕೆ:—ಇದು ಶ್ವಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬಸ, ಕೆಮ್ಮು, ಇವು ಗುಣ. ಡಜನಿಗೆ ಆಣೆ 10.

6. ಮೇಹಕುಠಾರ:—ಮೂತ್ರಕೃಚ್ಛ್ರ, ಅಶ್ಮರಿ, ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು; ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ. 16 ದಿವಸದ ಔಷಧಿ. ಕ್ರಯ ರೂ. 2.

7. ಇಚ್ಛಾ ಭೇದಿ:—ಆಯಾಸವನ್ನು ಉಂಟುಮಾಡದ ಸುಖ ವಿರೇಚಕ. ಬಾಟ್ಲು 1ಕ್ಕೆ ಆಣೆ 12.

8. ಭೃಂಗರಾಜತೈಲ:—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ನುಣುಪಾಗಿಯೂ ಮಾಡುವುದು. ಬಾಟ್ಲು 1ಕ್ಕೆ ಆಣೆ 12.

9. ದಂತಮಂಜನ:—(ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ವಸಡು ಬೀಗು, ಕೀವು ಯಾ ರಕ್ತ ಬರುವುದು, ಮುಂತಾದ ದಂತಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2.

ವಿಳಾಸ— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್, ಮಂಗಳೂರು, ದ. ಕ.

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ.

ಪ್ಲೇಗ್, ಕೊಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ.

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು. ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೀಸೆಗೆ ರೂ. 2—2—0 ಕೊಲೇರಾ ಔಷಧದ ದೊಡ್ಡ ಸೀಸೆಗೆ ರೂ. 1—2—0

" ಸಣ್ಣ " " 1—6—0 " ಸಣ್ಣ " " 0-12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸೀಸೆಗೆ ರೂ. 1—12—0.

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಖರ್ಚು ಮತ್ತು ಪೇಕಿಂಗ್ ಪ್ರತ್ಯೇಕ.

ವಿಳಾಸ:— ಮನೇಜರ್, ಆಯುರ್ವೇದಾಶ್ರಮ,

55 ಆಚಾರಪ್ಪನ ಬೀದಿ,

ಜೋರ್ಜಟೌನ್, ಮದರಾಸ್.

ತಂತಿ ವಿಳಾಸ:— ಪಂಡಿತ್, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನ ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ತೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ನಿಸ್ಸತ್ವ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಲ್ಲ ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಅಕ್ಷಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ಕಳಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ಕಳಿಸಿದರೆ ಟಪಾಲು ಖರ್ಚು ಸೇರಿ 2—13—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ಕಳಿಸಿದರೆ ಟಪಾಲು ಖರ್ಚು ಸೇರಿ 5—3—0.

ರಿಜಿಸ್ಟರಾದ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 30 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ.

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆ ರೂ. 1. ಸೀಸೆಗೆ ಒಂದು ಇನಾಮು.

ಶ್ರೀನಿವಾಸತೈಲ—ಪ್ಲೇಗಿನ ಗಡ್ಡೆ ಕರಗುತ್ತದೆ. ಸಂದುಗಳ ನೋವು ಬಿಡಲು ಹೋಗುತ್ತದೆ. ಸೀಸೆಗೆ 8 ಆಣೆ. ಸೀಸೆಗೆ ಒಂದು ಇನಾಮು.

ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ ರೂ. 1. ಸೀಸೆಗೆ ಒಂದು ಇನಾಮು.

ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಹಿತಕರವಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದ ಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ ಆಣೆ 12. ಸೀಸೆಗೆ ಒಂದು ಇನಾಮು.

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಒಂದು ಕುಪ್ಪಿಯ ಕ್ರಯ 14 ಆಣೆ. ಮಂಗಳೂರು ಏಜಂಟ್,

ಕೇ. ಟೀ. ಡೋಂಗರೆ ಕಂಪೆನಿ, ದಿ. ಯುಲನ್ ಮಾರ್ಟ್ಸ್, ಮಂಗಳೂರು.

ಗಿರಗಾಂ, ಮುಂಬಯಿ.

"ಕಾಮಶಾಸ್ತ್ರ"

ಉತ್ತಮವಾದ ಈ ಪುಸ್ತಕವು ಅನುಕೂಲವಾಗಿ ತಮ್ಮ ದೇಹದ ವಿಷಯಕ್ಕೆ ಮತ್ತು ಆರೋಗ್ಯ ಅನುಕೂಲಕ್ಕೆ ತಕ್ಕ ಣ ಬರಿಯುವಲ್ಲಿ ಅಂಚೆಯ ಹಾಸಲು ಸಹಾ ನಿರೀಕ್ಷಿಸದೇ ಕಳುಹಿಸುವೆವು.

ಮತ್ತು

ಪ್ರಸಿದ್ಧವಾದ ಆತಂಕನಿಗ್ರಹ ಗುಳಿಗೆಗಳನ್ನು ಯಾವಾಗಲೂ ತಮ್ಮ ಪ್ರಿಯಮಿತ್ರರ ಹಾಗೆ ಭಾವಿಸಿ ಉಪಯೋಗಿಸುವಲ್ಲಿ ನಿರಾಧಾರವಾದ ಆಲೋಚನೆಗಳನ್ನು ಹೋಗಲಾಡಿಸಿ ಅಮೃತದ ಹಾಗೆ ದೇಹದಾರ್ಢ್ಯವನ್ನುಂಟು ಮಾಡುತ್ತಾ ಇರುವುದು. ಕ್ರಯ ರೂ. 1. ಹೆಸರಿಗೆಯಿಂದ ಮರಿಯಬಾರದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 157, ಜಾಮ್ನಗರ, ಮದರಾಸು.

Local Agents: **Raphael & Co.**,

Brito Buildings.

Hampankatta, MANGALORE.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ.

ಈ "ಸಾಲಾಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನದೋಷವಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಹೆಚ್ಚಿಸುವದು, ಸೊಂಟದ ನೋವು ಸ್ವಲ್ಪಮಾತ್ರವೂ ಇರಲಾರದು. ಈ ಸಾಲಾಮಿಸ್ರಿ ಎಂಬುದು ಕಾಬೂಲ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ.

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ. ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು. ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಪಡೆಯಬಹುದು.

ಒಂದು ಡಬ್ಬಾ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಗುಣ ಕೊಡುತ್ತೆ. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು.

ಕ್ರಯ: ಒಂದು ಡಬ್ಬಿಗೆ ರೂಪಾಯಿ 2.

"ಈಗ ಬಾಂಗಿಯ ಚಾರ್ಜ್ ಹೆಚ್ಚಿರುವುದರಿಂದ ಕೆಲವು ದಿನಗಳ ವರೆಗೆ ಟಪ್ಪಾಲು ಖರ್ಚು 1 ಡಬ್ಬಿಗೆ 8 ಆಣೆ, 2 ಯಾ 3 ಡಬ್ಬಿಗಳಿಗೆ 12 ಆಣೆ."

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಸುಲಭ ಕ್ರಯ!! ಗುಣ ಹೆಚ್ಚು!!!

ರೊಯಲ್ ಇಂಡಿಯನ್ ಬಾಂ.

(ರಿಜಿಸ್ಟರ್ಡ್)

ಇದೇ ಗುರುತನ್ನು ಲಕ್ಷ್ಯದಲ್ಲಿಡಿರಿ. ಬಾಟ್ಲಿ ಒಂದರ ಕ್ರಯ ಆಣೆ ೮.

ROYAL INDIAN PAIN BALM — TRADE MARK — MANORA & Co. BOMBAY.

× ಹಿಂದೂಸ್ಥಾನದಲ್ಲಿ ಬೆಳೆಯುವ ಉತ್ಕೃಷ್ಟವಾದ ವನಸ್ಪತಿಗಳಿಂದ ಪರಿಶೋಧಿಸಿ, ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು:—ಇದರ ಉಪಯೋಗದಿಂದ ತಲೆನೋವು, ಶಿಡಿಕ, ಶಿರೋಭಾರ, ಗಂಟು, ಗಂಟ್ಲು ನೋವು, ಎದೆಶೀತ, ಎದೆನೋವು, ಉಬ್ಬುವದು, ವಾತ, ಸಂಧಿವಾತ, ಅರ್ಧಾಂಗವಾಯು, ಉಳುಕು, ಘಾಯ, ದಮ್ಮು, ಸೊಂಟದ ನೋವು, ಕಜ್ಜಿ ಇವೇ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ರಾಮಬಾಣದಂತೆ ಗುಣಪಡಿಸುತ್ತದೆ. ಸಮುದ್ರ ಪ್ರಯಾಣ, ರೈಲ್ವೆ ಮುಸಾಫಿರಿ, ಯಾ ಹಳ್ಳಿಗಳಲ್ಲಿ ಡಾಕ್ಟರ ಸಹಾಯವಿಲ್ಲದೆ ಇದ್ದ ಪ್ರತಿಯೊಬ್ಬರು ಒಂದು ಬಾಟ್ಲಿಯನ್ನು ಇಟ್ಟುಕೊಳ್ಳುವದು ಅಗತ್ಯ. ಒಂದು ಡಜನಿಗೆ ರೂ. ೫—೦—೦; 24 ಬಾಟ್ಲಿಗೆ ರೂ. ೯—೮—೦; 50 ಬಾಟ್ಲಿಗೆ ರೂ. ೨೦—೦—೦ ವಿ. ಪಿ. ಖರ್ಚು ಪ್ರತ್ಯೇಕ.

"ಗಜಕರ್ಣಾದಿ ಮುಲಾಮು" ಡಬ್ಬಿ ಒಂದರ ಆಣೆ ೪; ಇಂತಹುದೇ ಕಜ್ಜಿ ಮುಲಾಮು ಆಣೆ ೨; ಹೆಯರ್ ಆಯಿಲ್, ಚೇಳು ಕಡಿತದ ಮದ್ದು, ಇನ್ನೂ ಅನೇಕ ತರದ ಮದ್ದುಗಳನ್ನು ತಯಾರಿಸಿದ್ದೇವೆ. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡುವೆವು.

ಸೂಚನೆ:—ನಾವು ಮುಂಬಯಿಯಿಂದ ರೈಲ್ವೆ ಮಾರ್ಗದಿಂದ ಬಂದ ಪೇಟೆಂಟ ಔಷಧಗಳನ್ನೂ, ಇತರ ಮಾಲ್ಲನ್ನೂ ಅದಷ್ಟು ಮಟ್ಟಿನ ಕಮ್ಮಿ ದರದಲ್ಲಿ ಕಳುಹಿಸುವ ಏರ್ಪಾಟನ್ನು ಇಟ್ಟಿರುತ್ತೇವೆ.

Manora & Co.,

Hill Road ...

ಜೆನ್ ವಿನ್ ಹಾರ್ಲೆಮ್ ಆಯಿಲ್

(HAARLEM OIL).

ತ್ವರೆಯುದಲ್ಲಿ ನಿಮ್ಮ ಆರ್ಡರುಗಳನ್ನು ಬರಾಯಿಸಿಕೊಳ್ಳಿರಿ!

ಹಾರ್ಲೆಮ್ ಆಯಿಲ್ ಎಂದೆನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಬಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 300 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭಾವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡೆ (Kidney) ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀ(ಕಲ್ಲ)ನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೀವಸ್ತಿ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ. ಮೂರೇ ದಿನದ ಚಿಕಿತ್ಸೆಯಿಂದ ಇನ್‌ಫ್ಲುಯೆಂಜಾ ಮೊದಲಾದ ಎಂಥಾ ಕಠಿಣ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯ ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೆ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ. ಕ್ರಯ ಸೀಸೆ 1ಕ್ಕೆ ಆಣೆ 8 ವಿ. ಪಿ. ಬೇರೆ.

ಸಿಫಾರಸು ಪತ್ರ

ಕೆಲವು ವರ್ಷಗಳ ಹಿಂದೆ ಮಂಗಳೂರಲ್ಲಿದ್ದ ಜರ್ಮನ್ ಮಿಶ್ಯನರಿ ಲೇಡಿ ಮಿಸೆಸ್ ಹೆರ್ಮನ್ ಬ್ರೇಕ್ಲೆಯವರು ಇದೇ ಕಳದ ಮಾರ್ಚಿ ತಾ. 10ರಲ್ಲು ಸ್ಟುಟ್‌ಗಾರ್ಟ ಪಟ್ಟಣದಿಂದ ವಾನಿಂಗ್‌ಟಿಲ್ಲಿ ಕಂಪೆನಿಯವರಿಗೆ ಈ ರೀತಿ ಬರೆದಿರುತ್ತಾರೆ—ದಯಮಾಡಿ ನಿಮ್ಮ ಕಂಪೆನಿಯ 25 ಶೀಸೆ ಜೆನ್‌ವಿನ್ ಹಾರ್ಲೆಮ್ ಆಯಿಲ್ ಕಳುಹಿಸಿ ಕೊಡಿರಿ. ಇದು ಉತ್ಕೃಷ್ಟವಾದ ಶಾಸ್ತ್ರಿ ಔಷಧಿ ಎಂಬದು ನನ್ನ ಅನುಭವ ಸಿದ್ಧಾಂತ. ನಾನು 1910ನೇ ಇಸವಿಯಲ್ಲಿ ಮಂಗಳೂರಿಗೆ ಹೋಗುವಾಗ ನಿಮ್ಮ ಹಾರ್ಲೆಮ್ ಆಯಿಲಿನ 12 ಶೀಸೆಗಳನ್ನು ಕೊಂಡು ಹೋಗಿದ್ದೆನು. ಇದು ದೇಶೀಯರೊಳಗೆ ಪ್ರಯೋಗಿಸಿದ್ದಲ್ಲಿ ಅತಿ ಸಾಫಲ್ಯವಾಗಿ ಪರಿಣಮಿಸಿತು. ದೇಶೀಯರೊಳಗೆ ಪ್ರಬಲಿಸಿರುವ ಜ್ವರಕ್ಕೆ ಇದು ಅತಿ ಗುಣಕಾರಿಯಾಗಿದೆ ನಂತರ ಕೆಲವು ಕುಟುಂಬಗಳು ಇದನ್ನು ಕುಟುಂಬ ಸಂರಕ್ಷಣೆಯಾಗಿ ಮನೆಮನೆಯಲ್ಲಿ ಇಟ್ಟುಕೊಳ್ಳಲು ತೊಡಗಿದರು. ತನ್ಮಧ್ಯೆ ಯುದ್ಧ ತೊಡಗಿದ್ದರಿಂದ ಹಿಂದೂಸ್ಥಾನದಲ್ಲಿ ಇದರ ವ್ಯಾಪಾರವು ಹ್ಯಾಗಿದೆಂತ ನನಗೆ ಗೊತ್ತಿಲ್ಲ.

ವಿಳಾಸ:— ಹಿಂದೂಸ್ಥಾನದ ಸೋಲ್ ಏಜಂಟರು— ದಿ. ಎಕ್ಲಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

☞ ವಿಶೇಷ ಸೂಚನೆ:—ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲಿನ ಸೀಸೆಗಳ ಮೇಲೆ Waaning-Tilly Bros ಎಂಬ ದಸ್ಕತ್ತುಳ್ಳ ಪತ್ರವಿರುತ್ತದೆ. ಇದೇ ನಿಜವಾದ ಹಾರ್ಲೆಮ್ ಆಯಿಲ್ ಎಂತ ತಿಳಿಯತಕ್ಕದ್ದು. ☜

ಆಯುರ್ವೇದ ಶಾಸ್ತ್ರಾನುಸಾರ

ಡಾಕ್ಟರ್ ಎಚ್. ಲಕ್ಷ್ಮೀನಾರಾಯಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. ಶತಮೂಲಿಕೆಯ ಸತ್ವವು. ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, ಬಹುಕಾಲದ ಕಫ, ರಕ್ತವಾಂತಿಯಾಗುವಿಕೆ, ಹೃದಯದ ದುರ್ಬಲತೆ ಲಿಹ್ವರ (ಕಾಳಜಿ), ಮೂತ್ರಕೋಶದ ವ್ಯಾಧಿಗಳು ವ ಎಲ್ಲ ತರದ ದುರ್ಬಲತೆಯು ನಾಶಹೊಂದಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು. ಇನ್‌ಫ್ಲುಯೆಂಜಾ ಜ್ವರಕ್ಕೂ, ಅಶಕ್ತ ಜನರಿಗೂ, ಬತ್ತಿಬರುವ ಸಣ್ಣ ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣಹೊಂದದ ಅಸಂಖ್ಯ ರೋಗಿಗಳು ಈ ಜೀವನಾವೃತ ಸೇವನೆಯಿಂದ ಪೂರ್ಣಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು. ೧೬ ಔನ್ಸಿನ ಬಾಟ್ಲ ೧ಕ್ಕೆ ರೂ. ೨—೧೨—೦ ಟಿ. ಖ. ವಗೈರೆ ಬೇರೆ.

2. ವಿಜಯಸಂಜೀವಿನಿ ತೈಲ. ಕಾಲತಪ್ಪಿ ಬಹಿಷ್ಟೆಯಾಗುವುದು, ಬಹಿಷ್ಟೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಬಂಧ ವ್ಯಾಧಿಗಳಿಗೆ ದಿವ್ಯ ಔಷಧ. ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ; ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ೧ಕ್ಕೆ ರೂ. ೨.

3. ಕೊಲೇರಾ ಗುಳಿಗೆಗಳು. ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕುದಾಗಿದೆ. ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ. ೪೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ. ೧—೦—೦.

4. ವಾತಾಂತಕ. ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೮—೦.

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷದಲ್ಲಿರಬೇಕು. ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ. ವಿಳಾಸ:—

ಡಾಕ್ಟರ್ ಎಚ್. ಲಕ್ಷ್ಮೀನಾರಾಯಣಪ್ಪಾ ಮತ್ತು ಸನ್ಸ್,
ಶೋರನೂರ, (ಮಲಬಾರ).

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಚಿಕ್ಕ ಸೆಟ್ಟು ೧ಕ್ಕೆ ರೂ. ೨—೦—೮. ಮಧ್ಯಮ ತರದ ಸೆಟ್ಟು ೧ಕ್ಕೆ ರೂ. ೪—೬—೦. ದೊಡ್ಡ ಸೆಟ್ಟು ಉತ್ತಮತರದ ೧ಕ್ಕೆ ರೂ. ೫—೦—೦.
ದೇವ ಸಾಮಾನು ವಗೈರೆ ಕೆಟಲಾಗು ಬೇಕಾದವರಿಗೆ ಇನಾಮಾಗಿ ಕಳಿಸಲಾಗುತ್ತದೆ.
ಪೋಸ್ಟೇಜ್ ಪ್ಯಾಕಿಂಗ್ ಪ್ರತ್ಯೇಕ.

ADDRESS— Siromani Narayanacharya,
Chaukamba, BENARES CITY.

ವಿಳಾಸ— ಶಿರೋಮಣಿ ಉಡುಪಿ ನಾರಾಯಣಾಚಾರ್ಯ,
ಚೌಕಂಬಾ, ಕಾಶಿ.

ರಬ್ಬರಿನ ಅಕ್ಷರಗಳು.

ಈ ಅಕ್ಷರಗಳು ವಿಲಾಯತಿಯಲ್ಲಿ ತಯಾರಾದವು. ಕಾಗದಗಳು ಕಾರ್ಡು ಮುಂತಾದವುಗಳನ್ನು ಕಷ್ಟವಿಲ್ಲದೆ ಬಹು ಅಂದವಾಗಿ ಛಾಪೇ ಪ್ರಿಂಟುಮಾಡಿಕೊಳ್ಳಬಹುದು. ಈ ಪೆಟ್ಟಿಗೆಯೊಂದು ಇದ್ದರೆ ರಬ್ಬರು ಮೊಹರುಗಳ ಅಗತ್ಯವೇ ಬೇಡ. ಇದರಲ್ಲಿ ಇಂಕ್ ಪ್ಯಾಡ್, ಚಿಮುಟ, ಇಂಕ್‌ಬಾಟಲ್ ಸಹಿತ ಸೇರಿದೆ.

ಕ್ರಯ	110	ಅಕ್ಷರಗಳ ಪೆಟ್ಟಿ	ರೂ.	1—8—0
,,	170	,, ,,	,,	1-14—0
,,	250	,, ,,	,,	2—8—0
,,	350	,, ,,	,,	3-12—0

ಸ್ವಿಸ್ ಪಾಕೆಟ್ ವಾಚ್.

೬ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ೧೧ ಬಹುಮಾನ, ೪ ವರ್ಷ ಗ್ಯಾರೆಂಟಿ ಸಹಿತ ರೂ. ೪—೮—೦.

ಈ ಗಡಿಯಾರವು ಮಾಟವಾಗಿರುವದು. ಛಾಯೆ, ಧೂಳು ಸೇರದಂತೆ ಎರಡು ಕದಗಳು ಇರುವವು. ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ. ಇದನ್ನು ತರಿಸಿ ನೋಡಿದರೆ ಗೊತ್ತಾಗುವದು. ಇದನ್ನು ಲೀವರ್ ಕೆಲಸದಿಂದ ನಯವಾಗಿ ತಯಾರಿಸಿದೆ. ಬಹುಮಾನಗಳ ವಿವರ:—ಕರವಸ್ತ್ರ ೧, ಕನ್ನಡಿ ೧, ಗುಂಡಿಗಳು ೪, ಗಿಲೀಟಿನ ರೋಲ್ಡ ಹೂವು ೧, ಬೀಸಣಿಗೆ ೧, ಬ್ರೋಚ್ ೧, ಬಾಚಣಿಗೆ ೧, ಸೆಂಟ್ ಬುಡ್ಡಿ ೧, ಚಾಕು ೧, ೧೧ ಬಹುಮಾನಗಳ ಸಹಿತ ರೂ. ೪—೮—೦.

ವಿಳಾಸ:— ರಾಸ್‌ವಾಚ್ ಎಂಡ್ ಕೊ.,
ಇರುಳಪ್ಪನ ಬೀದಿ, ಮದರಾಸು.

ಶಾಶ್ವತವಾದ ದೇಹಶಕ್ತಿಯನ್ನು ದುರಭ್ಯಾಸಗಳಿಂದ ಚಿಕ್ಕಂದಿನಲ್ಲಿಯೇ ಕಳೆದುಕೊಂಡು ಈ ತರುವಾಂತರವೂ ದುಃಖಿಸುವಿರೇತಕ್ಕೆ?

ಲೋಕಪ್ರಸಿದ್ಧವಾದ

ಸಕಲರೋಗ ಸಂಹಾರಿ

ಎಂಬ ಈ ಔಷಧದ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯ ಹಾದರೂ, ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವಿಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, [illegible] ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವದರಿಂದ ಮೇಲುಶ್ವಾಸ ಬರುತ್ತಿದ್ದರೂ, [illegible] "ಸಕಲರೋಗ ಸಂಹಾರಿ"ಯ ಸೇವನೆಯಿಂದ ಗುಣವಾಗಿ ಶರೀರವನ್ನು [illegible] ರಕ್ತವನ್ನು [illegible] ವೃದ್ಧಿಪಡಿಸುವದರಲ್ಲಿ ಇದಕ್ಕೆ ಸಮಾನವಾದ ಔಷಧವು ಬೇರೆ ಯಾವದು ಇಲ್ಲವು. ಉಪಯೋಗಿಸುವ ವಿಧವು ಔಷಧದ [illegible] ತಿಳಿಸುವೆವು. ಕ್ರಯ 16 ಗುಳಿಗೆಗಳ ಡಬ್ಬಿ 1ಕ್ಕೆ ರೂ. 2—0—0.

ವಿಳಾಸ— ಡಾ॥ ಎಂ. ಪೀಟರ್,
ಇರುಳಪ್ಪನ ಬೀದಿ, ಮದರಾಸು.

Printed & Published by V. S. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರಕ್ಷೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯುಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೪ ಮಂಗಳೂರು, ತಾರೀಕು ೧೧ನೇ ಜೂನ್ ಶುಕ್ರವಾರ ೧೯೨೦. ಸಂಚಿಕೆ ೨೪

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ, ಮೀನು ಗೊಬ್ಬರದಂತೆ ನಾತ ಬಡಿಯುವುದಿಲ್ಲ

ಈ ಗೊಬ್ಬರ ಒಂದು ಹಿಡಿ ಸಾಕಾದ್ದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Director, Chilean Nitrate Committee,
(INDIAN DELEGATION),
1, Royal Exchange Place, CALCUTTA

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣವು ಬೇನೆಗಲದೆ ಮತ್ತೊಂದಕ್ಕಿರದು ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ ಕ್ರಯ ಡಬ್ಬಿ 1ರ 10 ಆಣೆ ಡಜನ್ 1ಕ್ಕೆ ರೂ 5—12—0

ಗಜಕರ್ಣದ ಮುಲಾಮು.— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು ಕ್ರಯ ಡಬ್ಬಿ ಒಂದರ ರೂ 0—6—0

ದಂತಮಂಜನ.— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲುಗಳು ಶುಭ್ರವಾಗುತ್ತವೆ ರಕ್ತ ಬರುವುದು ನಿಲ್ಲುತ್ತವೆ. ಹಲ್ಲುಗಳು ಗಟ್ಟಿಯಾಗುತ್ತವೆ ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ ಡಬ್ಬಿ ಒಂದರ ಆಣೆ 2

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. — 109 ಫ್ರೇಯರ್ ರೋಡ್, ಮುಂಬಯಿ.

ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ತ್ವರೆ ಮಾಡಿರಿ !! ಬೇಗನೇ ಬರೆಯಿರಿ !!

ಪಂಡಿತ ಮಂಗಳೂರು ನಾರಾಯಣಾಚಾರ್ಯರಿಂದ

ಗುಣಿಸಿ ಪರಿಶೋಧಿಸಲ್ಪಟ್ಟ

ರೌದ್ರಿ ಸಂವತ್ಸರದ ಪಂಚಾಂಗವು.

ಬೆಲೆ ಪ್ರತಿ ಒಂದಕ್ಕೆ 3 ಆಣೆ 25 ಪ್ರತಿಗಳಿಗೆ ರೂ 3-12 0

50 ಪ್ರತಿಗಳಿಗೆ ರೂ 7-0-0 100 ಪ್ರತಿಗಳಿಗೆ ರೂ 13 8 0

ಪ್ರತಿಗಳು ಸಿಗುವ ವಿಳಾಸ —

ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು

ಪಾಕಶಾಲಾಯಿ

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿಹೊಂದಿದ ಪ್ರದೇಶವು ಅಲ್ಲಿನ ಕಾಡುಗಳಲ್ಲಿ ಆ ಪ್ರಯೋಜನ ವೈದ್ಯರು ಸಾರುತ್ತಾರೆ. ಗಳಿಂದನಾವು ಅನೇಕ ಉತ್ಕೃಷ್ಟ ಔಷಧಗಳನ್ನು ನಿರ್ಮಿಸಿ, ಅನೇಕ ಕಾಲದಿಂದ ಉಪಯೋಗಿಸಿ ಇದಕ್ಕೆ ಸ್ಮೃತಿಫಲವಾಗಿ, ಅನೇಕಾನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರಶಸ್ತಿಪತ್ರ 'ಸರ್ಟಿಫಿಕೇಟ್'ಗಳು ಬರುತ್ತಲಿವೆ ಈ ಭಾಗದಲ್ಲಿ ಗುಣಹೊಂದಿದವರ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ

ಅಂಥಾ ಉತ್ಕೃಷ್ಟ ಔಷಧಗಳಲ್ಲಿ ನಮ್ಮ "ಪಾಕಶಾಲಾಯಿ" ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂದು, ಅವಯವ ಅಂಗಕೋಶ ಮೊದಲಾದವು ಕೆಂಪಾಗಿ ನೋವುಂಟಾಗುವುದು ನಡೆಯಲಾಗದ ಇರುವುದು ಶೈಶಾಲ ಅಲ್ಲಾಡಿಸುವಾಗ ವಿಪರೀತ ನೋವಾಗುವುದು ಮೂತ್ರದಲ್ಲಿ ದೋಷವಿರುವುದು ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲೀ ನಿಮ್ಮ ಸ್ನೇಹಿತರಲ್ಲಿಯಾಗಲೀ ಕಾಣಿಸಿಕೊಂಡರೆ ಕೂಡಲೇ ನಮ್ಮ "ಕಷಾಯ" ತೆಗೆದುಕೊಳ್ಳಲು ಪ್ರಾರಂಭಮಾಡಿ ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕಾಲರಾ, ಕಾವಲಿ, ಉಬ್ಬಸ, ಕೆಮ್ಮು ಜ್ವರ, ತಲೆನೋವು, ಧಾತುಪುಷ್ಟಿ, ಶೂಲನೋವು ಕಿವಿನೋವು, ಆಮಶಂಕೆ, ಮೊದಲಾದವುಗಳಿಗೆ ದಿವ್ಯೌಷಧಗಳಿವೆ "ಕ್ಯಾಟಲಾಗ್"ನ್ನು ನೋಡಿ

ಕ್ರಯ ರೂ. 4—4—0

ಯು. ಬಿ. ದತ್ತ ಕಂಪೆನಿ,
ಕಲ್ಲಿಕೋಟೆ ಮಲಬಾರ

Come! See! & Try!

P. Narayana Vaijappa Bhandary & Co.,

Cloth Merchants,

Car Street, MANGALORE.

ಮದಿವೆ ಉಪನಯನಗಳ, ಹಬ್ಬ ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗೀ ವಸ್ತ್ರಗಳು, ಧೋತಿಗಳು, ಟೋಪಿಗಳು ಇತ್ಯಾದಿ ಉಡುಪುತೊಡುಪುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

ಸಗಟು ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು. ನಗದಿ ಗಿರಾಕಿಗಳಿಗೆ ಡಿಸ್ಕೌಂಟು ಕೊಡೋಣಾಗುತ್ತದೆ.

ಪ. ನಾರಾಯಣ ವೈಜಪ್ಪ ಭಂಡಾರಿ ಮತ್ತು ಕಂಪೆನಿ,
ರಥಬೀದಿ, ಮಂಗಳೂರು.

ಸಚಿತ್ರ ಮಾಸಪತ್ರಿಕೆ ಸಚಿತ್ರ ಮಾಸಪತ್ರಿಕೆ

ಭಕ್ತಿಸಂದೇಶ

ಡಿಶಂಬ್ರ, ಜನವರಿ, ಫೆಬ್ರವರಿ ತಿಂಗಳ ಸಂಚಿಕೆಯು ಪ್ರಕಟವಾಗಿರುವುದು

ಇದರಲ್ಲಿ ಅನೇಕ ಚಿತ್ರಗಳೂ ಉಪಯುಕ್ತ ವಿಷಯಗಳೂ ಬಂದಿವೆ ಈ ಸಂಚಿಕೆಯು ಚಂದಾದಾರರಿಗಲ್ಲದೆ ಇತರರಿಗೆ ದೊರೆಯಲಾರದು

ಮಾರ್ಚಿ, ಎಪ್ರಿಲ್ ತಿಂಗಳ ಸಂಚಿಕೆಗಳು ಮುದ್ರಣದಲ್ಲಿವೆ

ಇವರಲ್ಲಿ ಬರುವ ವಿಷಯಗಳು — ಶ್ರೀ ಶಿವಾನಂದ ಸರಸ್ವತಿ, ಶ್ರೀ ವಿಷ್ಣು ಬುವಾ ಜೋಗಿ ಇವರ ಜೀವನ ಚರಿತ್ರ (ಚಿತ್ರಸಹಿತ), ಹೊಸವರ್ಷ ಆತ್ಮೀಯರ ತತ್ವ ವರ್ಣನೆ, ಪ್ರಾಸಂಗಿಕ ಟಿಪ್ಪಣಿಗಳು ವಿವೇಕಾನಂದರ ಪತ್ರಗಳು, ಹಿಂದೂ ದೇವತೆ ಇತಿಹಾಸದ ಒಂದು ಆದರ್ಶ ಪಾಠ (ಯಕ್ಷಗಾನ ಪ್ರಸಂಗ), ಇದೇ ಮುಂತಾದ ರಸಭರಿತ ವಿಷಯಗಳೂ ಚಿತ್ರಗಳೂ ಬರುವವು ಈ ಸಂಚಿಕೆಯೂ ಚಂದಾದಾರರಿಗೆ ಮಾತ್ರ ದೊರೆಯುವುದು.

ವಾರ್ಷಿಕ ವರ್ಗಣಿ ರೂ ೩-೦-೦. ಮಾದರೀ ಸಂಚಿಕೆಯ ಬೆಲೆ ೬ ಆ

ಕೆ. ಭಾರದ್ವಾಜ, ವಿದ್ಯಾಭೂಷಣ,
ಭಕ್ತಿ ಸಂದೇಶ ಆಫೀಸು, ಮಂಗಳೂರು, ದ. ಕ.

ಟಿಶ್ಯೂರೆಮಿಡಿಸ್

ಎಂಬ

12 ಜೀವರಸಾಯನಿ ಔಷಧಗಳು

ಮತ್ತು

ಹೊಮ್ಯೋಪಥಿಕ್ ಔಷಧಗಳು.

ನಮ್ಮ ಗಿರಾಕಿಗಳ ಅನುಕೂಲತೆ ಬಗ್ಯೆ ವಾರದ ಎಲ್ಲಾ ದಿವಸಗಳಲ್ಲಿ ಬೆಳಿಗ್ಯೆ 7½ ಘಂಟೆಯಿಂದ ರಾತ್ರೆ 9 ಘಂಟೆ ತನಕ ಸುಲಭವಾದ ದರದಲ್ಲಿ ಮಾರೋಣಾಗುತ್ತವೆ

ಟಿಶ್ಯೂ ರೆಮಿಡಿಸ್ 2 ಡ್ರಾಮಿನ ಸೀಸೆ 1ಕ್ಕೆ	ರೂ	0—3—6
,, 4 ,,	,,	,,	0—6—0
,, 1 ಔನ್ಸಿನ	,,	,,	0—12—0
ಹೋಮಿಯೊಪಥಿಕ್ 2 ಡ್ರಾಮಿನ	,,	,,	0—3—6

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
(ಶಾರದಾ ಛಾಪಖಾನೆ)
ರಥಬೀದಿ, ಮಂಗಳೂರು.

The Canara Banking Corporation, Udipi, (Limited)

ದಿ ಕೆನರಾ ಬೇಂಕಿಂಗ್ ಕಾರ್ಪೊರೇಶನ್, ಉಡುಪಿ, ಲಿಮಿಟೆಡ್.

[illegible] capital	3,20,000—0—0
[illegible] capital	50,000—0—0
[illegible]	38,687—1—11
[illegible]	62,062—0—0
[illegible] Funds as on $31\frac{3}{20}$	8,258—9—6

Fixed deposits received for 3, 6, 9 months at [illegible] for 1 year and above at 7% at the discretion of the Managing Committee. In the case of all deposits interest will be paid quarterly

Cummalative deposits are received repayable in 45 months at Rs. 50/—per each rupee deposited monthly.

Current a/c deposits opened free of charge and interest will be paid @ 3½% per annum on the lowest balance between the 4th and the last day of each month.

Loans granted on proper securities and pledges

A dividend of 8% has been declared for the last year

Payments to the Corporation may be made to the credit of the Corporation at the Bank of Madras, and Canara Bank Mangalore.

UDIPI,

6th June 1920

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,20,000—0—0
ವಂತಿಗೆ ಹಾಕಲಿಕ್ಕೆ ಅರ್ಪಿಸಿದ ವ	
ವಂದಾ ಎತ್ತಿದ ಮೂಲಧನ	„ 50,000—0—0
ಮಾಲ್ಯ ತೆತ್ತ ಮೂಲಧನ	„ 38,687—1—11
ಠೇವಣಾತಿಗಳು,	„ 62,062—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು	„ 8,258—9—6

ಕಾಯಂ ಠೇವಣಾತಿಗಳು ತಿಂಗಳು 3, 6, 9ರ ಅವಧಿಗಳಿಗೆ ಆಡಳಿತ ಸಭೆಯವರ ಮುನಾಸಬು ಪ್ರಕಾರ ಸಾಲಿಯಾನ್ ಶೇಕಡಾ 6½% 1 ವರ್ಷಕ್ಕೆ ಮಿಕ್ಕಿದ ಬಾಬಿನಲ್ಲಿ ಶೇಕಡಾ 7% ದರದಲ್ಲಿ ಬಡ್ಡಿ ಕೊಡಲ್ಪಡುವದು ಎಲ್ಲಾ ಠೇವಣಾತಿಗಳ ಮೇಲಣ ಬಡ್ಡಿ 3 ತಿಂಗಳಿಗೊಮ್ಮೆ ಕೊಡಲ್ಪಡುವದು

ಪ್ರತಿ ತಿಂಗಳಿಗೆ ರೂ 1ರ ಪ್ರಕಾರ 45 ತಿಂಗಳುಗಳವರೆಗೆ ವಸೂಲು ಕೊಡುವ ಸಂಚಯದ ಠೇವಣಾತಿಗಳಿಗೆ 45 ತಿಂಗಳ ಅಂತ್ಯದಲ್ಲಿ ಪ್ರತಿ ತಿಂಗಳಲ್ಲಿ ವಸೂಲು ಕೊಟ್ಟ ರೂ 1ಕ್ಕೆ ರೂ 50/ರಂತೆ ವಾಪಸು ಕೊಡಲ್ಪಡುವದು

ಚಾಲ್ತಿ ಠೇವಣಾತಿಗಳು ಸಂಘದ ಕಡೆಯಾಗಿ ಏನೂ ಖರ್ಚು ಇಲ್ಲದೆ ತಡಕೊಳ್ಳಲ್ಪಡುವವು ಪ್ರತಿ ತಿಂಗಳ 4ನೇ ತಾರೀಕಿನಿಂದ ಆಖೈರು ತಾರೀಕುವರೆಗೆ ಯಾವದಾದರೊಂದು ದಿನ ಇರುವ ಅತಿ ಕಡಿಮೆ ಠೇವಣಾತಿ ಮೊಬಲಗಿನ ಮೇಲೆ ಸಾಲಿಯಾನ್ ಶೇಕಡಾ 3½ ದರದಲ್ಲಿ ಬಡ್ಡಿ ಕೊಡಲ್ಪಡುವದು

ಯೋಗ್ಯ ಜವಾಬ್ದಾರಿಯ ಮತ್ತು ಈಡಿನ ಮೇಲೆ ಸಾಲಗಳು ಕೊಡಲ್ಪಡುತ್ತವೆ

ಪಾಲುವಾಲಿಕರಿಗೆ ಕಳೆದ ವರ್ಷ ಶೇಕಡಾ 8% ದರದ ಬಡ್ಡಿ ಕೊಡಲ್ಪಟ್ಟಿದೆ

ಸಂಘಕ್ಕೆ ಕೊಡಲ್ಪಡುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸು ಬೇಂಕಿನಲ್ಲಿ ಮತ್ತು ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಡಬಹುದು

Naimpalli Ananda Rao,

Secretary

ಕೇಸರ ಕುಂತಳ ತೈಲ.

ಕೂದಲು ಸೊಂಪಾಗಿ ಬೆಳೆಯುವದರಲ್ಲಿ ಅತ್ಯುತ್ತಮವಾದ ತೈಲ. ವೈದ್ಯಶಾಸ್ತ್ರದಲ್ಲಿ ಮುಖ್ಯವಾದ ಹಲವು ಇದನ್ನು ಪರಿಶೋಧಿಸಿ [illegible] ಬಹಳ ಸುವಾಸನೆಯೂ ಇದೆ. ಸ್ಮರಣಾ ಶಕ್ತಿಯನ್ನು ವರ್ಧಿಸುತ್ತದೆ, ಮೆದುಳನ್ನು ತಂಪಾಗಿಡುತ್ತದೆ.

ಕ್ರಯ: — ಸೀಸೆಗೆ ಬೆಲೆ ೧ ರೂಪಾಯಿ.

ಬಿ. ಸಿ. ಶಾಹಾ ಮತ್ತು ಕಂಪೆನಿ,

ಚೀನಾಬಜಾರ್, ಮದ್ರಾಸ್.

ಲೂಯಿಸರ ಎಲಿಕ್ಸಿರ್ ಫೊರ್ ಹೆಲ್ತ್

ಎಂಬುವ ಪಾನಕವು ಟೀ ಮತ್ತು ಕಾಫಿಗಳಿಗಿಂತ ಅತ್ಯಂತ ಹಿತಕರವಾದ ಪಾನವಾಗಿದ್ದು ಬಹುಮೂತ್ರಪೀಡೆ ಬಾರದಂತೆ ಆರೋಗ್ಯ ಕಾಪಾಡುತ್ತದೆ. ಬಾಯಾರಿಕೆ ತಗ್ಗಿಸುತ್ತದೆ ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು. ಪರಿಕ್ಷಾರ್ಥವಾಗಿ ಒಂದು ಸೀಸೆ ಕೊಳ್ಳಿರಿ

18 ಔನ್ಸಿನ ಸೀಸೆಗೆ ಕ್ರಯ ರೂ 1—4—0 ಮಾತ್ರ

ಡಾಯಬೆಟೊನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ. ಪೂರ್ಣ ಗುಣವಾಗುತ್ತದೆ. ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸಗೆ ರೂ. 2 ಮಾತ್ರ ಅಂಚಹಾಸಲು ವಗೈರೆ ಇದರಲ್ಲಿ ಸೇರಿಲ್ಲ. ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವುವು

P. M. Kamath & Co.,

Chemists & General Merchants,

New Court Road, MANGALORE

ಅಥವಾ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಮಿ| ಕೆ ಆರ್ ಲೂವಿಸರನ್ನು ವಿಚಾರಿಸಿದರೆ ಈ ಔಷಧವನ್ನು ಹೊಂದಬಹುದು

ಗ್ರಾಹಕರ ಅನುಕೂಲಕ್ಕಾಗಿ ಆರಂಭ | **ಸದ್ಬೋಧಕ ಗ್ರಂಥಮಾಲೆ.** (ತ್ರೈಮಾಸಿಕ ಪುಸ್ತಕ) | ವಾರ್ಷಿಕ ಚಂದಾ ಅಂಚೆ ಸಹಿತ ರೂ 1 ಮಾತ್ರ

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ ಕಾದಂಬರಿ ನಾಟಕ, ಕಾವ್ಯ ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ ಉಲ್ಲೇಖಸ್ಥ ವಿನೋದಲಹರಿ, ಸ್ಥಳೀಯವಾರ್ತೆ ವಿಮರ್ಶೆ ಮತ್ತು ಸ್ವೀಕಾರ ಇತ್ಯಾದಿ ಲೇಖನವೂ ಪ್ರಕಟವಾಗುವುವು ಸಮಸ್ತ ಕನ್ನಡಿಗರಿಗೂ ಸಂಗ್ರಹಿಸಿಕೊಳ್ಳಲು ತಕ್ಕುದಾಗಿರಬೇಕೆಂದೇ ವಾರ್ಷಿಕ ಚಂದಾ ಅಂಚೆವೆಚ್ಚದೊಡನೆ ಒಂದೇ ರೂಪಾಯಿ ಇಟ್ಟಿರುವೆವು ಈಗಲೇ ತಮ್ಮ ಹೆಸರನ್ನು ತಿಳಿಸಿ ವರ್ಗಣೆದಾರರಾಗಿ ಸೇರುವುದರ ಮೂಲಕ ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ

ವಿಳಾಸ:— ಎಸ್ ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ

"ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ,

ಸುರತಕಲ್ (ದಕ್ಷಿಣ ಕನ್ನಡ)

ಅಥವಾ— S R Hebbar & Bros

General Merchants, SURATKAL, S K

ಕರ್ನಾಟಕ ಮಹಾಶಯರೇ ಓದಿರಿ!

ಮಾನವ ಜಾತಿಯವರ ಶರೀರದ ಮರ್ಮಗಳನ್ನು ಬೋಧಿಸುವ

ಕಾಮಶಾಸ್ತ್ರ ಎನ್ನುವ ಶರೀರ ಮರ್ಮಶಾಸ್ತ್ರ

ಇಲ್ಲದಿದ್ದರೆ ಮರುಟಪ್ಪಾಲಿಗೇನೇ ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಈ ಶಾಸ್ತ್ರವು ಫ್ರೆಂಚ ಇಂಗ್ಲಿಷ, ಅಮೇರಿಕನ ಮೊದಲಾದ ಶಾಸ್ತ್ರಗಳಿಂದ ಕನ್ನಡಕ್ಕೆ ಭಾಷಾಂತರ ಮಾಡಲ್ಪಟ್ಟಿದೆ ಮಾನವ ವರ್ಗದವರಿಗೆ ಬೇಕಾದ ಎಲ್ಲಾ ರಹಸ್ಯಗಳು ವೀರ್ಯವೃದ್ಧಿಸುವದಕ್ಕೆ ಕಾರಣಗಳು, ಗರ್ಭಿಣಿ ಆಗ ಸಂಸುವ ವಿಧವೂ ಗರ್ಭಿಣಿಗೆ ಬೇಕಾದ ಮರ್ಮಗಳು ನವಮಾಸದ ಪಿಂಡದ ವಿವರಗಳು ಶಿಶು ಉತ್ಪತ್ತಿ ವಿಧಿ ಶಿಶು ಸಂರಕ್ಷಣೆ ಮಾಡುವ ವಿಧ ಸ್ತ್ರೀಧರ್ಮನೀತಿಗಳು ಮಾಸದ ತುದೋಷಗಳು ಧಾತುರೋಗ ಶಾಸ್ತ್ರ (ಗುಪ್ತವೈದ್ಯ) ಪ್ರತಿಯೊಂದು ಕುಟುಂಬದಲ್ಲಿಯೂ ಸಂಭವಿಸಬಹುದಾದ ಸ್ತ್ರೀಪುರುಷರ ಮರ್ಮರೋಗಗಳ ಗರ್ಭಿಣಿಯಾದ ಸ್ತ್ರೀಯರಿಗುಂಟಾಗುವ ರೋಗಗಳನ್ನು ಪರಿಹರಿಸಿ ಗರ್ಭಾಶಯಕ್ಕೆ ಶಕ್ತಿಯನ್ನುಂಟು ಮಾಡುವ ಔಷಧಗಳೂ ಇನ್ನು ಶರೀರದ ಭಾಗಗಳ ಚಿತ್ರಗಳ ಸಹಿತ ಗ್ಲೇಜ ಕಾಗದದಲ್ಲಿ ಪ್ರಿಂಟ ಆಗಿ ಮಜಬೂತಿಕ್ಕೆ ಬೈಂಡಾಗಿದೆ ಕ್ರಯ ಪ್ರತಿಗಕ್ಕೆ 12 ಆಣೆ

ಇನೆಯ ಪ್ರತಿಯಲ್ಲಿ ಇನ್ನು ಕೆಲವು ಪ್ರತಿಗಳು ಮಾತ್ರ ಉಳಿದಿದೆ

ಕೋಲ (ಮೊಗ್ಗು) ಮತ್ತು ಪಾಕಶಾಸ್ತ್ರ

ಈ ಪುಸ್ತಕದಲ್ಲಿ ನವೀನರಂಗೋಲೆ ಚಿತ್ರಗಳೂ, ಅಡಿಗೆ ಮಾಡುವ ವಿಧ ಪದಾರ್ಥಗಳೂ ಮತ್ತು ವಿಠಾಯಿ ದಿನುಸುಗಳೂ (Sweetmeats) ಪ್ರಸಾದಗಳೂ ಕೇಕ ಗಳೂ, (Cakes) ಬಿಸ್ಕಿಟ ಗಳೂ (Biscuits) ಶರಬತ್ (Syrup) ಉಪ್ಪಿನಕಾಯಿಗಳ ವಿಧಾನಗಳ ಮೊದಲಾದ ದಿನಸುಗಳನ್ನು ಮಾಡುವ ವಿಧಗಳು ಇದರಲ್ಲಿ ಅಡಗಿವೆ ಪ್ರತಿ ಒಬ್ಬ ಸ್ತ್ರೀಗೂ ಅತಿಶ್ಯವಾಗಿ ಬೇಕಾದ ಪುಸ್ತಕ ಕ್ರಯ ಆಣೆ ೬

ವಿಳಾಸ — ಮಹಾರಾಜ ಪುಸ್ತಕಶಾಲೆ,

೧೫ ಆರ ನ್ಯಾಶಲ ಮೊದಲಿ ಬೀದಿ ಸಾಹುಕಾರ್ ಪೇಟೆ, ಮದರಾಸ್

ಮಲೇಜ್ವರ

ಮಲೇಜ್ವರಹಾರಿ.

ಮಲಜ್ವರ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಪರಿಹಾರ ಬೆಲೆ ೧೨ ಆಣೆ



ವಿಷಮಯವಾದ ಪದಾರ್ಥಗಳು ಒಂದು ರೋಗ ನಿವಾರಣೆಗೆ ಸಹಕಾರಿಯಾದರೂ ಇನ್ನೊಂದು ರೋಗಕ್ಕೆ ಎಡೆಕೊಡುತ್ತವೆ ಅಂಥ ವಿಷಮಯವಾದ ಪದಾರ್ಥಗಳು ಇದರಲ್ಲಿ ಲವಮಾತ್ರವೂ ಇಲ್ಲ

ಹಿಂದುಸ್ಥಾನ, ಬರ್ಮಾ, ಸಿಂಹಳ ಮುಂತಾದ ಪ್ರದೇಶಗಳ ಬೇರೆ ಬೇರೆ ಕೊನೆಗಳಿಂದಲೂ ಕಳೆದ ೩೦ ವರ್ಷಗಳಲ್ಲಿ ಅಸಂಖ್ಯಾತವಾದ ಶಿಫಾರಸು ಪತ್ರಗಳು ನಮಗೆ ಬಂದಿವೆ

ಪುನೆಯ ಕೃಷಿಕಾಲೇಜಿನ ಅಧ್ಯಾಪಕರಾದ ಡಾ| ವೆ ನ್‌ಸ್ಕೋಟರು ಈ ರೀತಿಯಾಗಿ ಬರೆದಿರುತ್ತಾರೆ — "ಬೇರೆ ಬೇರೆ ವಿಧದ ಜ್ವರಗಳ ಸಂದರ್ಭದಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ ಅದರಿಂದ ಕ್ಷಿಪ್ರದಲ್ಲಿ ಗುಣಾಂಶ ಸಿಕ್ಕಿತು"

ನಮ್ಮ ಏಜಂಟರು ಈ ಮೊದಲೇ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು ಕಮ್ಮಿಶನ್ ಮುಂತಾದ ಶರ್ತಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು

ಕರ್ಣಿಕ ಬ್ರದರ್ಸ್,

56 ಗಿರಗಾಂವ, ಮುಂಬಯಿ

Agent — The Woollen Mart, *Mangalore*

ರಾಜವೈದ್ಯರ,

ಮದನಮಂಜರಿ ಮಾತ್ರೆ

[illegible] ಗಳನ್ನು ಸೇವಿಸುವದರಿಂ ದೇಹಶಕ್ತಿಯನ್ನು ಕೂಡ ಮ[illegible] ಹಸ್ತಪ್ರಯೋಗಾದಿಗಳಿಂದ ಹೋಗಿರುವ [illegible] ಶಕ್ತಿಯನ್ನು ಪುನಃ ಕೊಟ್ಟು ಪ್ರಾಯಸದ ಘರ್ಮ[illegible] ಮಾಡುವದು ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರದ ಭಸ್ಮಗಳು ಮತ್ತು ಮಾತ್ರವೂ ಸಮಾನವಾಗಲಾರದು

ಕ್ರಯ ಡಬ್ಬಿ 1ಕ್ಕೆ ರೂ 1—0—0

ವಿಳಾಸ —

ಮದನಮಂಜರಿ ಫಾರ್ಮಸಿ,

೨೭ ಚೈನ ಬಜಾರು ರೋಡ್ ಮದ್ರಾಸ

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಖುದಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ ೩

ಪರಪೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಹೋಲ್ ಸೇಲ್ ಏಜಂಟ್ಸ್:— ಜೆ. ಎಸ್. ಸೋಜ ಮತ್ತು ಕಂಪೆನಿ,

ಹಂಪನಕಟ್ಟಾ, ಮಂಗಳೂರು.

ಇಕ್ಸ್ವಗಂಧಾ ಮೋದಕ

ಅತ್ಯಂತ ಧಾತು ಪೌಷ್ಟಿಕ ಕಾಮೋದ್ದೀಪಕ, ವೀರ್ಯವರ್ಧಕ ಸ್ತಂಭಶಕ್ತಿಯನ್ನು ಕೊಡುವ ಉತ್ತಮ ಪಾಕ ಈ ಪಾಕದಿಂದ ಧಾತುಕ್ಷೀಣತೆಯಿಂದ ಉಂಟಾಗುವ ಎಲ್ಲ ವಿಕಾರಗಳು ಕೂಡಲೆ ನಿಂತು ಹೋಗುವವು ಯಾವ ಕಾರಣದಿಂದಲೂ ಹೋದ ಶಕ್ತಿಯು ಈ ಪಾಕದ ಸೇವನೆಯಿಂದ ಪುನಃ ಉಂಟಾಗುತ್ತದೆ ದೂಷಿತವಾದ ರಕ್ತವು ಕೂಡ ಇದರಿಂದ ಶುದ್ಧವಾಗಿ ರಕ್ತವೃದ್ಧಿಯಾಗುತ್ತದೆ ಹಸಿವೆಯಾಗುತ್ತದೆ ಯಕೃತ (ಲಿವ್ಹರ) ಮತ್ತು ಪ್ಲೀಹಾ (ಸ್ಪ್ಲೀನ್) ಇವುಗಳ ಅತ್ಯ[illegible]ಯು ಬೆಳೆದಿದ್ದರೆ ಅದು ಕಡಿಮೆಯಾಗುತ್ತದೆ ಅಶಕ್ತತೆಯಿಂದ ಉಂಟಾಗುವ ನನ್ನಿನ ದುರ್ಬಲತೆ ಕಣ್ಣು ಕತ್ತಲೆಯಾಗುವುದು ಕೈಕಾಲುಗಳ ಉರಿ ಮತ್ತು ಅವು ಮುರಿದುಬರುವುದು ಸ್ವಲ್ಪ ಕೆಲಸದಿಂದಲೆ ದಣಿವುಂಟಾಗುವುದು ಈ ಮೊದಲಾದ ಎಲ್ಲ ವಿಕಾರಗಳು ಇದರಿಂದ ಹೋಗುತ್ತವೆ ಹಾಗು ಮೇಲಿಂದಮೇಲೆ ನಿದ್ದೆಯು ಬರುವದು ಹಳೆ ಕೆಮ್ಮು ಕ್ಷಯರೋಗದ ಪೂರ್ವಾವಸ್ಥೆಯು ಕೂಡ ಇದರಿಂದ ನಿಂತುಹೋಗುತ್ತದೆ ಡಾ ದೇಸಾಯಿ, ಎಮ್ ಡೀ (ಲಂಡನ್) ಬಿ ಎಸ್ ಎಲ್ ಎಮ್ ಎಸ್ ಮೆಡಿಕಲ್ ಪ್ರ್ಯಾಕ್ಟಿಶನರ್, ಎಂಡ್ ಒನರ್ ಇವರು ತಮ್ಮ ಉಪನ್ಯಾಸದಲ್ಲಿ ಹೇಳುತ್ತಾರೇನಂದರೆ — ಇಕ್ಸ್ವಗಂಧಾ ಇದಕ್ಕೆ ಆಯುರ್ವೈದ್ಯಕದೊಳಗಿನ ಒಂದು ಕೊಡ್ಲಿವರ ಎಂದು ಹೇಳಬಹುದು ಇದರಿಂದ ಶರೀರ ಪುಷ್ಟಿ, ರಕ್ತವೃದ್ಧಿಯಾಗಿ ಕೆಮ್ಮು ನಷ್ಟವಾಗುತ್ತದೆ ಜೀರ್ಣಜ್ವರ ನಾಶವಾಗುತ್ತದೆ. ಕೊಡ್ಲಿವರಗಿಂತ ಇದರ ಸೇವನೆಯಿಂದ ಶರೀರದ ಭಾರವು ಅಭಿವೃದ್ಧಿಯಾಗುತ್ತದೆ ಶರೀರಸ್ಥಿತಿಯು ಒಳ್ಳೆದಾಗುತ್ತದೆ. ಒಳ್ಳೆದಾಗುತ್ತದೆ" ಇತ್ಯಾದಿ —

ಕ್ರಯ — ಅರ್ಧ ಪೌಂಡಿನ ಡಬ್ಬಿಗೆ ರೂ ೧, ೮, ೦ ಒಂದು ಪೌಂಡಿನ ಡಬ್ಬಿಗೆ ರೂ ೨, ೮ ೦ ಮೋಸ್ತ್ರಖಾಸ

ಮೇನೇಜರ,

ಶ್ರೀಸಮರ್ಥ ಆಯುರ್ವೇದೀಯ ಔಷಧಾಲಯ, ಗದ್ದಿಕೇರಿ,

ಆರ್. ಮಾರ್ಟಿನ್ನರ

ಸಾರಸಾಪರಿಲ್ಲಾ

ಈ ಸಾರ್ಸಾಪರಿಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ ಸುಖಭೋಗಕೆಟ್ಟ ರಕ್ತಸಂಬಂಧದಿಂದುಂಟಾದ ಎಲಾ ತರಹದ ಗುಳಿಲೆ, ಉಬ್ಬುವುದು. ನರಗಳಲಿರುವ ನೋವು ವಾತ, ಸಂಧಿವಾತ, ಯಕೃತ್ಸಂಬಂಧ ಕೆಮ್ಮು ಫರಂಗಿ ಹುಣ್ಣು, ಕಜ್ಜ, ಮತ್ತು ಚರ್ಮದ ರೋಗಗಳು ವಿಷಕಡಿತದಿಂದುಂಟಾದ ವ್ಯಾಧಿ, ಪೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು ಯಾವಾಗಲೂ ಆರೋಗ್ಯದಲಿಡುತ್ತದೆ ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ ಬಾಟಿಗಳಿಗೆ ಕ್ರಯ ರೂ ೧-೧೨-೦

ಆರ್ ಮಾರ್ಟಿನ್ನರ ಎಗ್ಯೂ ಮಿಕ್ಸಚರ್

ಇದು ಜ್ವರ ಶೀತಜ್ವರ, ಮಲೇರಿಯಾ ಚಾರಿಜ್ವರ ಸನ್ನಿಪಾತ ಕೆಟ್ಟ ಜ್ವರಯು ವಿಷದಿಂದುಂಟಾದ ರೋಗ ಇವೇ ಮೊದಲಾದ ಎಲಾ ತರಹದ ಜ್ವರ ಸನ್ನು ಕೂಡಲೇ ನಾಶಮಾಡುತ್ತದೆ ಎಲುಬುಗಳಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣವಾಗದಿದ್ದಂಥ ಜ್ವರವನು ಈ ಎರಡೇ ಎರಡು ಬಾಟಿಗಳ ಸೇವನೆಯಿಂದ ಹುಷಾರಾಗಿದೆ. ಬಾಟಿ 1ಕ್ಕೆ ರೂ ೦—೧೪—೦

ಆರ್ ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಉಬ್ಬಿ ಹೊಯ್ಯುವಿಕೆ, ಮರ್ಮಸ್ಥಾನದಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ ಈ ಔಷಧದ ಒಂದೇ ಒಂದು ಬಾಟಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ ಕೆಂಪುಕಲೆ ನೋಯುವ ಮೂಲವ್ಯಾಧಿ ಮತ್ತು ಎಂತ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟ ತೆಗೆದುಕೊಳ್ಳುವವರಿಗೆ ಏನೊಂದು ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ ಬಾಟಿ ಗಳಿಗೆ ರೂ, ೧—೪—೦.

ವಿಳಾಸ:— ಆರ್. ಡಿ. ಕಟ್ಲಿ ಮತ್ತು ಕಂಪೆನಿ,

ನಂಬ್ರ ಡಿ ಫ್ರೆಯರ್ ರೋಡ್,

ರೈಟ್ ಎಂಡ್ ಕೋ ಹತರ, ಫೋರ್ಟ್, ಮುಂಬಯಿ.

R. D. Kately & Co

No. D. Frere Road,

Near Wright & Co. Fort, Bombay.

THE WORD RENOWNED
HAARLEM OIL.
(Genuine Dutch Produce)

A Domestic remedy of extraordinary merits that has stood the test of centuries. A Panacea against all human ailments.

ಲೋಕಪ್ರಸಿದ್ಧವಾದ ಹಾರ್ಲೆಮ್ ತೈಲ.

SUPPLY EXPECTED SHORTLY
Register your orders immediately against disappointment.
CAPABLE AGENCY WANTED.
Prices & particulars from—
The Bombay Stores,
Humpankatta, MANGALORE.

ಬಾಲಕ ತೋಷಣ! ಬಾಲಿಕಾ ಭೂಷಣ!

ಸುಬೋಧ ಕುಸುಮಾಂಜಲಿ ಗ್ರಂಥಮಾಲಾ.

ಚಿಕ್ಕ ಮಕ್ಕಳಿಗೆ ತಿಳಿಯುವಂತೆ ಸುಲಭವಾದ ತಿಳಿಗನ್ನಡ ಭಾಷೆಯಲ್ಲಿ ಬರೆಯಲ್ಪಟ್ಟ ಭಾರತೀಯ ಪ್ರಸಿದ್ಧ ಸ್ತ್ರೀಪುರುಷರ ಚರಿತ್ರರತ್ನಗಳು ಮೈಸೂರು ಸರಕಾರದವರಿಂದ ಬಹುಮಾನಪುಸ್ತಕಗಳಾಗಿಯೂ, ಮದ್ರಾಸು ಸರಕಾರದವರಿಂದ ಪಾಠಶಾಲಾ ಉಪಯೋಗಾರ್ಹಗಳೆಂಬುದಾಗಿಯೂ ಅಂಗೀಕೃತವಾಗಿವೆ. ಪ್ರತಿಯೊಬ್ಬ ಕರ್ನಾಟಕ ಬಾಲಕನೂ, ಬಾಲಿಕೆಯೂ ತಪ್ಪದೆ ಓದಬೇಕು. ಕರ್ನಾಟಕ ಮಾತಾಪಿತೃಗಳೇ ಈ ದಿನವೇ ಬರೆಯಿರಿ, ಬೆಲೆ ಬಲುಸುಲಭ.

ಚಂದ್ರಹಾಸ ರೂ 0-2-0, ಧ್ರುವ ರೂ 0-2-0, ಪ್ರಹ್ಲಾದ ರೂ 0-2-0 ಸಾವಿತ್ರಿ ರೂ 0-2-0, ಹರಿಶ್ಚಂದ್ರ ರೂ 0-2-0 ವಿನಾಯಕ ರೂ 0-1-0 ದಾದಾಭಾಯಿ ನೌರೋಜಿ ರೂ 0-1-0, ಮಹಿಳಾ ಸುನೀತಿ ಶತಕ ರೂ 0-2-0

ಉಪಾಧ್ಯಾಯರುಗಳಿಗೂ ವ್ಯಾಪಾರಿಗಳಿಗೂ ಧಾರಾಳವಾದ ಕಮಿಷನ್

ವಿಳಾಸ.—ಮ್ಯಾನೇಜರ್,
S K ಗ್ರಂಥಮಾಲಾ ಕಾರ್ಯಾಲಯ,
2 ಕ್ಲಾರ್ಕ್ಸ್ ಪೇಟೆ, ಸಿ ಬೆಂಗಳೂರು, ದಂಡು

ಕೇಸರೀಯವರ ಅತ್ಯುತ್ತಮವಾದ ಮೂರು ಔಷಧಗಳು.

ಲೋಧ್ರ

ಅಥವಾ

ಗರ್ಭಾಶಯ ರೋಗ ನಿವಾರಣಿ.—ಇದು ಸ್ತ್ರೀಯರ ದೇಹ ಪ್ರಕೃತಿಯಲ್ಲಿ ಉಂಟಾಗುವ ವಿಪರೀತಗಳಿಂದಾದ ಭಯಂಕರ ರೋಗಗಳನ್ನು ಖಾತ್ರಿಯಾಗಿ ಗುಣಪಡಿಸುವುದು

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ 3, ಸಣ್ಣದಕ್ಕೆ ರೂ 1 10-0

ಅಮೃತ

ಅಥವಾ

ರಕ್ತ ಶುದ್ಧೀಕರಣಕ್ಕೆ ದಿವ್ಯ ಔಷಧ:—ಇದನ್ನು ತೆಗೆದುಕೊಳ್ಳುವುದರಿಂದ ನೀರಕ್ತತ್ವ (ರಕ್ತವು ಕೆಟ್ಟುಹೋಗುವಿಕೆ) ಅಜೀರ್ಣ, ಮಲಬದ್ಧತೆ, ನಿತ್ರಾಣ, ಶಿರೋಭ್ರಮಣ, ಜ್ಞಾನದುರ್ಬಲತೆ ಮುಂತಾದುವು ಪರಿಹಾರವಾಗುತ್ತವೆ

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ 3, ಸಣ್ಣದಕ್ಕೆ ರೂ 1-10 0

ಅರ್ಕ

ಎಂಬ

ಜ್ವರ ಸಂಹಾರಕ್ಕೆ ರಾಮಬಾಣ:—ಈ ಔಷಧಿಯ ಒಂದೆರಡು ತಟಕುಗಳನ್ನು ಸೇವಿಸುವುದರಿಂದ ಇನ್‌ಫ್ಲುಯೆಂಜಾ ಮುಂತಾದ ಸಕಲ ಜ್ವರಗಳೂ ನಿವಾರಣೆಯಾಗುವುವು.

ಕ್ರಯ ಬಾಟ್ಲಿ 1ಕ್ಕೆ ರೂ 1—8—0.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೇಸರೀ ಕುಟೀರಂ,
ಆಯುರ್ವೇದ ಔಷಧಾಲಯ,
33, ಪೋಲೀಸು ಕಮಿಷನರ ಆಫೀಸು ರಸ್ತೆ,
ಎಗ್ಮೋರ, ಮದರಾಸ್.
9 ಬಂದರ್ ಸ್ಟ್ರೀಟ್.
ಜಾರ್ಜಟೌನ್, ಮದರಾಸ್.

ಕೂತಲ್ಲಿಗೆ ಬರುವದು
ಯಾವುದೊಂದು ಖರ್ಚಿಲ್ಲದೆ ಪಂಚವರ್ಣಗಳಿಂದ ತಯಾರಿಸಿದ

1920ನೆಯ ಇಸವಿ ಕ್ಯಾಲಂಡರ್.

ಟಪ್ಪಾಲು ಮತ್ತು ಪೇಕಿಂಗ್ ಖರ್ಚಿಗಾಗಿ ೨ ಆಣೆಯ ಟಪ್ಪಾಲು ಸ್ಟಾಂಪನ್ನು ಕಳುಹಿಸಿರಿ

ವಿಳಾಸ —

ವಿ ಎ ಎಸ್. ಪಾಣಿ ಕಂಪೆನಿ,
ಸಾಹುಕಾರ ಪೇಟೆ, ಮದರಾಸು

NETRANAND SAREES
Cheap and Fashionable

Sarees in all brilliant colours with lustrous borders

Liberal Commission for wholesale Orders

ಚಲೋ ಬಣ್ಣದ ಶೀರೆಗಳು ! ಬಹಳ ಕಮ್ಮಿ ಕ್ರಯ !

ವಿವಿಧ ಬಣ್ಣಗಳ ಥಾಪಾಹೊಡೆದ "ನೇತ್ರಾನಂದ" ತರವಾದ ಶೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಸಿಕ್ಕುವದು

ನೂಲಿನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಡಿಕ್ರಯದಲ್ಲಿ ದೊರಕುವವು

ವಿಶೇಷ ಮಾಹಿತಿಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶ್ರೀ ಶೀತಾರಾಮವಿಠ್ಠಲ ಕಂಪೆನಿ,
ವಿಠಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟೆ ಮಂಗಳೂರು

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹೋಲ್

ಬಹು ನೂತನ ಅಲೋಪತಿ ಮತ್ತು ಹೋಮಿಯೋಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗ ಒಂದು ಸಾರಿ ಬಂದು ಪರೀಕ್ಷಿಸಿ!
ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ ಸೋಪುಗಳೂ, ಫೌಂಟನ್‌ಪೆನ್ ಗಳೂ ಥರಮಾಮಿಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಪ್ರೊಟೆಕ್ಷನ್ ಚೀಲಗಳೂ ಐಸ್ ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸಾ ಸಾಮಗ್ರಿಗಳೂ ಸ್ಟವ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ ನೀಲಗಿರಿಯ ಎಕ್ಸ್ ಎಂಬ ಯೂಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು

ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಿಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆಮಾಡಿ ಧರ್ಮಾರ್ಥವಾಗಿ ಕೊಡುವೆವು

☞ ಔಷಧಗಳನ್ನು ಶಾಸ್ತ್ರರೀತಿಯಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರಿರುವರು

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು

ಸುಲಭ ಬೆಲೆ! ನಗದಿ ವ್ಯಾಪಾರ! ರೋಗಗಳು ಗುಣವಾಗುವದು ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್,

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಧಡವೆ ಹಾಕಿದರೆ ಶಕ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು

ನಮ್ಮ ದರ್ಬಾರ್ ಸೋಪು.

ಗಂಡೆ, ಮೊಡವು, ಬಚ್ಚು, ಕುರು, ಪವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯ ಮಾಡುವುದು

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	ರೂ 0-14-0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	„ 1-10-0
ದೀರ್ಘಾಯುಃ ರೋಮನಾಶಿಕ ಬುಕ್ಕು	„ 0- 8-0.

ವಿಳಾಸ— ವೈರಂ ಅಂಡ್ ಕೋ,
ಇರುಳಪ್ಪನ ಬೀದಿ, ಮದರಾಸು.

ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ಕೇರಳ ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುಣವುಳ್ಳ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ದೊರೆಯುವವು. ಇಲ್ಲಿ ತಯಾರಿಸಿದ ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದ್ದಲ್ಲಿ ತಿಳಿದು ಬರುವುದು

ವೈದ್ಯಶಾಲೆಯ ವ್ಯವಸ್ಥಾಪಕರೂ ಮೇನೇಜರರೂ ಆದ ದಾಮೋದರ ನಂಬೀಶನರು ಆವಶ್ಯವಾದ ಹೊರತು ವಿಶ್ವ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದೆನೇ ಪರಿಶೋಧಿಸಿ, ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವರೆ ಸಿದ್ಧರಾಗಿರುವರು. ಇದರ ಬ್ರಾಂಚು ಮಂಗಳೂರು ರಥಬೀದಿಯಲ್ಲಿ ತೆರೆದಿರುವುದರಿಂದ ಸದರಿ ಎಲ್ಲಾ ಔಷಧಗಳ ಸದರಿ ಬ್ರಾಂಚಿನಲ್ಲಿ ಕೂಡಾ ಬೇಕಾದವನ್ನು ಸಿಕ್ಕುವವು. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ ಪಿ ಮೂಲಕ ಕಳುಹಿಸಲಾಗುವುದು

೧. ಅಮೃತಾರಿಷ್ಟ—ಇದು ಎಲ್ಲಾ ತರದ ವಿಷಮಜ್ವರ (ಇನ್‌ಫ್ಲುಯೆಂಜಾ) ಒಳಜ್ವರ ಪುರಾಣಜ್ವರ ಇವುಗಳ ವೇಲೆ ರಾಮಬಾಣದಂತಿರುವುದ ರಕ್ತಶುದ್ಧಿಗೆ ಸಿದ್ಧೌಷಧ. ೧೨ ಔನ್ಸಿನ ಬಾಟ್ಲಿ ೧ರ ಕ್ರಯ ರೂ ೧-೧೦-೦

೨ ವೀರ್ಯಪ್ರಸಾದ ವಟಿ—ಇದು ಸ್ವಸ್ಥೇಂದ್ರಿಯದಿಂದ ನರಳುತ್ತಿರುವ ಮನುಷ್ಯರಿಗೆ ಅಮೃತವಂತಿರುವುದು. ೩೦ ಮಾತ್ರೆ ಇರುವ ಸೀಸೆ ೧ಕ್ಕೆ ಕ್ರಯ ರೂ ೧

೩. ನವನೀತಮಧುಸ್ನುಹಿ—ಇದು ಫಿರಂಗವ್ಯಾಧಿ (ಸಿಫಿಲಿಸ್) ಮುಂತಾದ ರೋಗಗಳನ್ನು ಒಳ್ಳೇ ರೀತಿಯಿಂದ ಗುಣಪಡಿಸುತ್ತದೆ. ೩೦ ತೊಲೆ ಇರುವ ಡಬ್ಬಿ ೧ಕ್ಕೆ ಕ್ರಯ ರೂ ೩

೪ ವಿಷೂಚಿಕಾ ಸಂಹಾರಿ—ಎಂಬ ವಾಂತಿಭೇದಿ ಮಾತ್ರೆ. ಈ ಮಾತ್ರೆಯ ಸೇವನೆಯಿಂದ ಎಂಥಾ ಕಠಿಣ ತರವಾದ ವಾಂತಿಭೇದಿಯೂ ನಿಂತುಹೋಗುವುದು. ೩೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ರೂ ೧-೦-೦

೫ ನಯನಮೃತಿ—ತಿಮಿರ ಉರಿಗಣ್ಣು ನರ ಎಳೆವಿಕೆ ಮೊದಲಾದ ಕಣ್ಣಿನ ಎಲ್ಲಾ ರೋಗಗಳನ್ನು ಗುಣಪಡಿಸುವ ಸಿದ್ಧೌಷಧವು. ಅರ್ಧ ಔನ್ಸಿನ ಸೀಸೆ ೧ರ ಕ್ರಯ ರೂ ೧-೦-೦

೬ ನಯನಾಮೃತ—ಕಣ್ಣು ತುರಿಸುವಿಕೆ ದೃಷ್ಟಿಮಾಂದ್ಯ ಇರುಳುಗಣ್ಣು, ಕೀವು ಬರುವುದು ತಿಮಿರ ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನು ಬಹು ಜಾಗ್ರತೆಯಾಗಿ ಗುಣಪಡಿಸುವುದು. ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ ೧-೦-೦

ವೈದ್ಯರ್ ವಿ ಕೆ. ದಾಮೋದರ ನಂಬೀಶನ್
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡ

ಇನ್‌ಫ್ಲುಯೇನ್ಜಾ ಜ್ವರಕ್ಕೆ

ಎಮ್ಕೊ.

ಖಾತ್ರಿ ಚಿಕಿತ್ಸೆ!

ಇನ್‌ಫ್ಲುಯೆನ್ಜಾ, ನಿಮೋನಿಯಾ, ಮಲೇರಿಯಾ, ಸಾಧಾರಣ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ನಿಶಮ ಜ್ವರ, ಕೆಮ್ಮು, ಶೀತ, ಮೊದಲಾದ ಬಾಧ್ಯಗಳಿಗೆ ಖಾತ್ರಿ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ ನಾವು ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಖಾತ್ರಿ ಔಷಧಿಯನ್ನು ಈಗತಾನೇ ಪ್ರಚಾರಕ್ಕೆ ತಂದಿರುತ್ತೇವೆ. ಮೇಲಿನ ಬಾಧ್ಯಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬದಕ್ಕೆ ಕಳೆದ ಕೆಲವು ವರ್ಷಗಳಿಂದ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ.

ಎಮ್ಕೊ ಇದು ಎಲ್ಲಾ ರೋಗಾಣುಗಳನ್ನು ಕೊಂದು ಅದರ ವಿಷವನ್ನು ನಾಶಪಡಿಸಿ ಇನ್‌ಫ್ಲುಯೇನ್ಜಾ, ನಿಮೋನಿಯಾ ಮತ್ತು ಅದರಂತಿನ ಇತರ ಸೋಂಕು ರೋಗಗಳು ಹಬ್ಬದಂತೆ ತಡೆಕಟ್ಟಿ ಅದು ಉಲ್ಬಣವಾಗದಂತೆ ಮಾಡುತ್ತದೆ.

ಎಮ್ಕೊ ಇದು ಇನ್‌ಫ್ಲುಯೇನ್ಜಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಿಗಳ ಕೂಟದಿಂದ ಅತಿ ಜಾಗರೂಕತೆಯಿಂದ ತಯಾರಿಸಿರುತ್ತದಾದಕಾರಣ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನ್ನು ಕೊಡಬಹುದು. ಹೆಂಗಸರೂ, ಮಕ್ಕಳೂ ಭಯಭೀತಿ ಇಲ್ಲದೆ ಸೇವಿಸಬಹುದು.

ಎಮ್ಕೊ. ಕಡೆಗೆ ಇದು ಕೋಲೇರಾ ರೋಗಿಗಳನ್ನೂ ಗುಣಪಡಿಸುತ್ತದೆ.

ಕ್ರಯ ಸೀಸೆ ೧ರ ರೂ ೦—೧೨—೦ ಮಾತ್ರ. ವಿ. ಪಿ. ಬೇರೆ

ಪ್ರಾಮುಖ್ಯ ಏಜಂಟರು:— ದಿ ಇಕ್ವಿಟಿ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

The Canara Bank Limited, Mangalore.

ಕೆನರಾ ಬ್ಯಾಂಕ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Subscribed and fully paid up Capital Rs 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಡಲ್ಪಟ್ಟ ಮೂಲಧನವು ರೂ. 300,000—0—0
Reserve and other sinking Funds ,, 138772—0—2	ಕ್ಷೇಮನಿಧಿ ಮತ್ತು ಇತರ ಫಂಡುಗಳು ,, 138,772—0—2

THE BANK RECEIVES FIXED, CURRENT ACCOUNT, & SAVINGS BANK DEPOSITS

ಕಾಯಂ, ಮತ್ತು ಚಾಲ್ತಿ ಠೇವಣಾತಿಗಳನ್ನೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳನ್ನೂ, ತಕೆದುಕೊಳ್ಳಲಾಗುತ್ತದೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd,
Mangalore, 10th May 1920

K. Venkat Rao,
Secretary.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ, ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ 12, 5, 3, 2 8 0, 1 0-0

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು ಶೀಸೆ 1ಕ್ಕೆ 6 ಆಣೆ

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ ಇದು ಗಂಧದ ಬಿಲ್ಲೆಯನ್ನು ಹೋಲುವ ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ಲೆವೆಂಡರ್. ಶೀಸೆ 1ಕ್ಕೆ 1—4—0

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ <u>ಬಹುಮಾನ</u> ಹಂಚಲ್ಪಡುತ್ತೆ ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ವಿಕರಿಗೆ ಸಿದ್ಧವಾಗಿರುತ್ತವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು

ವೈದ್ಯ ವಿದ್ಯ.

ಯಾವುದೊಂದು ವ್ಯಾಧಿಯು ಇಲ್ಲದೆ ಸುಖಸಂಪತ್ತುಗಳಿಂದಿರಬೇಕಾದರೆ ಓದಿರಿ ರಾಜವೈದ್ಯರ

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ ವಿಳಾಸವನ್ನು ತಿಳಿಸಿದ ಮಾತ್ರಕ್ಕೆ ಬರುವದು

ವೈದ್ಯ ವಿದ್ಯ

ವಿಳಾಸ—ರಾಜವೈದ್ಯ ನಾರಾಯಣಜಿ ಕೇಶವಜಿ,
27 ಬ್ಯಾನ ಬಜಾರು ರೋಡು, ಮದ್ರಾಸು

ಕ್ರಯ ರೂ 1—8—0

ಪ್ರಶ್ನೋತ್ತರ

ಅಂಚೆ ವೆಚ್ಚ ಬೇರೆ

ಲೋಕಬೋಧಿನಿ.

7ನೇ ಮುದ್ರಣ: ಅನೇಕ ಉಪಯೋಗಿ ಸಂಗತಿಗಳಿವೆ

ಕ್ಷೇಮ ಸಮಾಚಾರದ ಕಾಗದಗಳು —ಬಗೆಬಗೆಯಾದ ಒಕ್ಕಣೆಗಳಿವೆ ಲೌಕಿಕ ವೈದಿಕ ಮರ್ಯಾದೆಗಳಿವೆ ಪತ್ರಗಳು ಬರೆಯುವ ವಿಧಾನ, ಕ್ರಯ, ದಾನ, ವಿಲ್ಲ, ಮುಂತಾದ ಶಾಸನ ಪತ್ರಗಳು, ಗುತ್ತಿಗೆ, ವಾಲಗಾಂಗೆ, ಚೀಟು, ಇವುಗಳ ನಮೂನೆಗಳು, ವಿಧಾನ, ಸ್ಟ್ಯಾಂಪು ರಜಿಸ್ಟ್ರೇಷನ್, ಸಿವಿಲ್ ಪ್ರೊಸೀಜರ್ ವಿಧಾನ—ಲಾಯರ್ ನೋಟೀಸು, ದಾವೆ ಬರೆಯುವ ರೀತಿ, ಸ್ಮಾಲ್ ಕಾಜ್, ಡಿಸ್ಟ್ರಿಕ್ಟ್, ರೆವ್ಯೂ, ಅಪ್ಪೀಲ, ಸ್ಪೆಷಲ್ ಅಪ್ಪೀಲ್ ದಾವೆಗಳಿಗೆ ನಿಯಮಗಳು, ಕೋರ್ಟ್ ಫೀ ಸ್ಟ್ಯಾಂಪು, ರೆವೆನ್ಯೂ ಮುಂತಾದ ಪ್ರಾಮುಖ್ಯವಾದ ರಾಜ್ಯ ಭಾರಕ್ಕೆ ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ಬರೆಯುವ ಅರ್ಜಿಗಳು, ಕ್ರಿಮಿನಲ್ ಪ್ರೊಸೀಜರ್ ವಿಧಾನ—ಅನೇಕ ಅರ್ಜಿಗಳ ಮಾದರಿಗಳು, ಸರಕಾರದ ಕಾನೂನುಗಳು ಇವೆಲ್ಲ ಅಡಗಿವೆ ಕಾಗದದ ಬರದಿಂದ ಬಹು ಸ್ವಲ್ಪ ಪ್ರತಿಗಳು ಉಳಿದಿವೆ ಬೇಗ ಬರೆದು ತರಿಸಿಕೊಳ್ಳಿ ಕ್ರಯ ರೂಪಾಯಿ 1—8—0; ಅಂಚೆಯ ವೆಚ್ಚ ಬೇರೆ.

[80-19] ವಿಳಾಸ.— "ನವಿನುಡಿ" ಆಫೀಸು,
122, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

"ಟಿಶ್ಯು ರೆಮಿಡಿಸ್"

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು

1 ಕಲ್ಕೇರಿಯ ಫ್ಲೋರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮಗ್ನೆಸಿಯ ಫೋಸ್	12 ಸಿಲಿಸಿಯಾ

ಕ್ರಯ					ರೂ ಆ ಪೈ
ಎರಡು ಡ್ರಾಮಿನ	D	ಸೈಜ್	ಸೀಸೆ	ಒಂದರ	0—3—6
ನಾಲ್ಕು ,,	C	,,	,,	,,	0—6—0
ಒಂದು ಔನ್ಸಿನ	A	,,	,,	,,	0—12—0
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ					3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯ ಶಾಸ್ತ್ರ ಪುಸ್ತಕ ಸಮೇತ					10 0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾರಿಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯಬಹುದು

ಎ. ಫೆರ್ನಾಂಡಿಸ್,
ಎಲೆಕ್ಟ್ರೊ ಹೋಮಿಯೋಪತಿ ಡಿಸ್ಪೆನ್ಸರಿ, ಮಂಗಳೂರು.

ಈ ಡಿಸ್ಪೆನ್ಸರಿಯಲ್ಲಿ ಬಹಳ ಕಡಿಮೆ ಕ್ರಯದ ಅನುಭವಸಿದ್ಧವಾದ ವನೌಷಧಗಳೂ, ಸಿದ್ಧೌಷಧಗಳೂ ಸಿಕ್ಕುತ್ತವೆ. ಇದನ್ನು ಒಂದು ಸಲ ಉಪಯೋಗಿಸಿದವರಿಗೆ ತಕ್ಷಣವೇ ಆಯುರಾರೋಗ್ಯ ಭಾಗ್ಯವುಂಟಾಗುವುದು. ಪಥ್ಯ ವಿಶೇಷ ವಿಲ್ಲ. ಇದನ್ನು ಉಪಯೋಗಿಸಿ ನೋಡಿರಿ.

1. ಶತಮೂಲಿಕಾ ಅಮರಸಂಜೀವನೀ ಟೋನಿಕ್— ಇದರ ಸೇವನೆಯಿಂದ ಕ್ಷಯ, ಕೆಮ್ಮು, ಅಶಕ್ತಿ, ನಿವಾರಣೆಯಾಗಿ ಧಾತುಪುಷ್ಟಿಯಾಗುತ್ತದೆ. 24 ಔನ್ಸಿನ ಬಾಟ್ಲಿ 1ಕ್ಕೆ ರೂ. 3.

2. ಮಧುಮಾಧವಿ ಪಿಲ್ಸ್—ಬಾಣಂತಿಯರು ಇದನ್ನು 12 ದಿವಸ ಸೇವನೆಮಾಡಿ ನಂತರ 2 ತಿಂಗಳ ವರೇಗೆ ಮಧುಮಾಧವಿ ಟೋನಿಕ್ ಸೇವಿಸಬೇಕು. ಇದರಿಂದ ಬಾಣಂತಿಯರ ನಂಜಿನ ಉಪದ್ರವಗಳು ಗುಣವಾಗಿ ದೇಹ ಪುಷ್ಟಿಯಾಗುತ್ತದೆ. ಟೋನಿಕ್ ಬಾಟ್ಲಿ 1ಕ್ಕೆ ರೂ. 1. 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 2—0—0.

3. ಸಿದ್ಧೇಶ್ವರ—ಇದರ ಸೇವನೆಯಿಂದ ಎಲ್ಲಾ ತರದ ಕೆಮ್ಮುಗಳೂ, ಉಬ್ಬಸಗಳೂ, ಕಫವೂ ಗುಣವಾಗುತ್ತದೆ ತೊಲೆ 1ಕ್ಕೆ 1-8-0.

4. ಅಶೋಕಾರಿಷ್ಟ (ಉತ್ತಮ ತರದ್ದು)—ಇದರ ಸೇವನೆಯಿಂದ ಸ್ತ್ರೀಯರ ಮುಟ್ಟಿನದೋಷ, ಗರ್ಭಶೂಲೆ, ಯೋನಿರೋಗಗಳು ಗುಣವಾಗಿ ರಕ್ತಶುದ್ಧಿಯಾಗುವುದು. ಬಾಟ್ಲಿ 1ಕ್ಕೆ 1-4 0

5 ಸುದರ್ಶನ ಮಾಲಿನಿ—ಇದರಿಂದ ಗಂಡಮಾಲೆ, ಫಿರಂಗರೋಗ, ಮೇಹವ್ರಣ, ಮೇಹವಾತ, ಇತ್ಯಾದಿ ದೀರ್ಘಕಾಲದ ರೋಗಗಳು 4 ದಿವಸಗಳಲ್ಲಿ ಗುಣವಾಗುತ್ತದೆ ಬಾಟ್ಲಿ 1ಕ್ಕೆ 4—0—0

6 ವಸಂತಕುಸುಮಾಕರ ತೈಲ್ಯ—ಇದನ್ನು ತಲೆಗೆ ಇಟ್ಟುಕೊಂಡಲ್ಲಿ ಸರ್ವ ಶಿರೋರೋಗಗಳು ಗುಣವಾಗಿ ಜ್ಞಾನಶಕ್ತಿಯನ್ನು ಹೆಚ್ಚಿಸುತ್ತದೆ ಬಾಟ್ಲಿ 1ಕ್ಕೆ ರೂ 1—0—0

ಇದಲ್ಲದೆ ನಮ್ಮ ಡಿಸ್ಪೆನ್ಸರಿಯಲ್ಲಿ ಎಲ್ಲಾ ರೋಗಗಳಿಗೆ ಬೇಕಾಗುವ ಮಾತ್ರೆಗಳೂ, ಭಸ್ಮಗಳೂ, ತೈಲ್ಯಗಳೂ, ಲೇಹಗಳೂ, ಚೂರ್ಣಗಳೂ ಬಹಳ ಕಡಿಮೆ ಕ್ರಯದಲ್ಲಿ ಸಿಕ್ಕುತ್ತವೆ ನಮ್ಮ ಕೆಟಲಾಗನ್ನು ತರಿಸಿರಿ

ಎಸ್ ವಿ ಶಂಕರ, ಉಗ್ರಾಣಕಾರ,
ಮೇನೇಜರ್

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ, ಬ್ರಹ್ಮಾವರ, ದ ಕ

ಅಪೂರ್ವವಾದ ಕನ್ನಡ ವೈದ್ಯಶಾಸ್ತ್ರವು

ಧಾತುರಂಜಿತ—ವೈದ್ಯರತ್ನ.

ಅಕ್ರಮರತಿಯಿಂದ ಶರೀರಕ್ಕೆ ಬೇರಿನಂತಿರುವ, ವೀರ್ಯ ಕಟ್ಟು ನೀರಾಗಿ ಪತನವಾಗಿ ವಿಧವಿಧ ಬಣ್ಣದಿಂದ ಧಾತುಸ್ರಾವ, ನಪುಂಸಕತ್ವ, ಟಾಕಿ, ಇವೇ ಮುಂತಾದ ಬಹು ರೋಗಗಳುಂಟಾಗುವವು. ಇದರಲ್ಲಿ ೫ ಭಾಗಗಳಲ್ಲಿ ಈ ವಿಧದ ರೋಗಗಳ ಸ್ವರೂಪ, ಕಾರಣ, ಚಿಕಿತ್ಸೆಗಳು ವಿವರಿಸಲ್ಪಟ್ಟಿವೆ ಮೂಲೇಂದ್ರಿಯ ರಚನೆ, ವೀರ್ಯ ನಷ್ಟಕ್ರಮ, ನಪುಂಸಕತ್ವ ಭೇದ, ವಂಧ್ಯಾರೋಗ ಭೇದ, ನಿವಾರಣೋಪಾಯ ಇವೆಲ್ಲಕ್ಕೂ ಅನುಭವಸಿದ್ಧಗಳಾದ ನೂರಾರು ವಿಧ ಲೇಹ್ಯ, ರಸಾಯನಾದಿ ದಿವ್ಯೌಷಧಿಗಳನ್ನು ಕಲ್ಪಿಸುವ ವಿಧಾನ ಮತ್ತು ರೂಢಿಯಲ್ಲಿರುವ ಅನೇಕ ವನಸ್ಪತಿಗಳ ಗುಣ, ಉಪಯೋಗಿಸುವ ಕ್ರಮ, ರಣವೈದ್ಯದಲ್ಲಿ ರಾಜವಂಗೇಶ್ವರಾದಿ ಅನೇಕ ಮಹೌಷಧಿಗಳ ನಿರ್ಮಾಣಕ್ರಮ, ಕುಟುಂಬವೈದ್ಯದಲ್ಲಿ ಜ್ವರ, ಅತಿಸಾರಾದಿಗಳ ಚಿಕಿತ್ಸೆ ಎಂತವರಿಗೂ ತಿಳಿಯುವಂತೆ ಬರೆಯಲ್ಪಟ್ಟಿದೆ. ಇದು ಇದ್ದರೆ ಮನೇಲಿ ಒಬ್ಬ ವೈದ್ಯನೇ ಇದ್ದಂತಾಗುವದು ಇದರಲ್ಲಿರುವ ಔಷಧಿಗಳನ್ನು ತಯಾರು ಮಾಡಿ ನೂರಾರು ರೂಪಾಯಿಗಳನ್ನು ಸಂಪಾದಿಸಬಹುದು ಕ್ರಯ ಪುಸ್ತಕ ೧ಕ್ಕೆ ರೂ. ೧—೮—೦

ನಮ್ಮ ವಿಳಾಸ— ಭಾರತಿ ಬುಕ್‌ಡಿಪೊ,
೪೬೧, ನಗರ ರಪೇಟೆ, ಬೆಂಗಳೂರು ಸಿಟಿ

The Indian Tooth-ache Specific

ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ಬಾರಿ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲುನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, ಕೀಗು ಇತ್ಯಾದಿ ಖಂಡಿತವಾಗಿ ಗುಣವಾಗುತ್ತದೆ ಕೊರೆದುಹೋದ ಮತ್ತು ಅಲ್ಲಾಡುವ ಹಲ್ಲುಗಳಿಂದ ಕಠಿಣ ನೋವು ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗಿಸುವ ಅವಶ್ಯವೇ ಇಲ್ಲ. ಈ ಔಷಧದ ಸುಗುಣವನ್ನು ನೀವು ಪರೀಕ್ಷಿಸಿ ಎಲ್ಲರಿಗೂ ತಿಳಿಸಿರಿ

ಶೀಸೆ ೧ಕ್ಕೆ ಕ್ರಯ ರೂ 1—4—0. ಟಪಾಲು ಖರ್ಚು 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ ೧೨ ಶೀಸೆ ತರಿಸಿಕೊಂಡರೆ ರೂ 12 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ

STANY BROTHERS, MANGALORE.

ಸೊಗಸಾದ ಕಾಫಿಹುಡಿ.

I	ಕ್ಲಾಸ್	0—10—0
II	ಕ್ಲಾಸ್	0—8—0
III	ಕ್ಲಾಸ್	0—6—0

ಹೋಟೇಲುಗಳಿಗೂ ಕ್ಲಬ್ಬುಗಳಿಗೂ ಧಾರಾಳವಾಗಿ ಮೈಲಬಾರಿ ಮಾರ್ಗ ದವಾಗಿ ಕೊಡಲಾಗುವದು. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

ಸಾಂಪತ್ರಿಕ ವಿಚಾರ.

ಮೈಸೂರಿನ ದಿವಾನರಲ್ಲಿ ಮಹಾ ಪ್ರತಿಭಾಶಾಲಿ ದೇಶಭಕ್ತರೂ, ಸ್ವಾರ್ಥತ್ಯಾಗಿಗಳೂ, ದೂರದರ್ಶಿಗಳೂ ಆದ ಸರ್. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಅತ್ಯಂತ ಪೂರ್ವಕವಾಗಿ ಪಟ್ಟ ಆಸ್ಥೆಯ ಫಲದಿಂದ ಬಂದ ಸಾಂಪತ್ತಿಕ ವಿಚಾರದ ಶಾಖೆಯು ಮೆಲ್ಲಮೆಲ್ಲಗೆ ಬಲಗೊಳ್ಳುತ್ತದೆ. ವರ್ತಮಾನ ಮೈಸೂರಿನ ಶ್ರೀಮನ್ಮಹಾರಾಜರ ಆಶ್ರಯದ ಆಚರಣೆಯೊಂದಿಗೆ ಪ್ರಾರಂಭಿಸುವ ಈ ಪರಿಷತ್ತಿನ ಅಧಿವೇಶನದಲ್ಲಿ ಸರಕಾರಿ ಮತ್ತು ಜನಸರಕಾರಿ ಸಭಾಸದರು ಸೇರಿ ಮೈಸೂರಿನ ಧನಸಂಪತ್ತು ಹೇಗೆ ವೃದ್ಧಿಯಾಗಬಹುದು ಎಂಬುದನ್ನು ಕುರಿತು ಹಲವು ವರ್ಷಗಳಿಂದ ಚರ್ಚಿಸುತ್ತಿದ್ದಾರೆ. ಈ ಪರಿಷತ್ತಿನ ೧೧ನೆ ಅಧಿವೇಶನವು ಕಳೆದ ೩ನೆ ತಾರೀಖಿಗೆ ಮೈಸೂರಿನಲ್ಲಿ ಜರಗಿದಾಗ ಅಧ್ಯಕ್ಷರಾಗಿದ್ದ ದಿವಾನ ಸಾಹೇಬರು ಹಿಂದಿನ ಒಂಬತ್ತು ವರ್ಷದಲ್ಲಿ ಬೇರೆ ಬೇರೆ ಇಲಾಖೆಗಳಲ್ಲಿ ಯಾವ ಸಾಹಸ ಪ್ರಯತ್ನಗಳು ನಡೆದವು, ಅವುಗಳ ಫಲಿತಾಂಶವೇನಾಯಿತು, ಮುಂದೆ ಯಾವ ನೂತನ ವಿಚಾರಗಳು ಸರಕಾರದ ಮುಂದೆ ಬರಲಿಕ್ಕಿವೆ ಎಂದು ಮುಂತಾಗಿ ತಿಳಿಸಿದರು. ಅದರಲ್ಲಿ ಹಲವು ವಿಷಯಗಳು ದೇಶೀಯ ರಾಜ್ಯದೊಳಗಿನ ಚಟುವಟಿಕೆಯನ್ನು ನಮ್ಮ ಕಣ್ಣಿದುರಿಗೆ ತರುತ್ತವೆ.

ಸೆಂಟ್ರಲ್ ಮತ್ತು ಡಿಸ್ಟ್ರಿಕ್ಟ್ ವರ್ಕ್ ಶಾಪುಗಳನ್ನು ಬಲಗೊಳಿಸುವುದು, ಚರ್ಮ ಹದ, ಲೋಹದ ಕೆಲಸ, ನೇಯಿಗೆಯ ಕಾರ್ಖಾನೆಗಳನ್ನು ಏರ್ಪಡಿಸುವುದು, ಪಿಂಗಾಣಿ, ಕರವಾಯಿ ಚರ್ಮ, ಗಾಜು ಮುಂತಾದ ಕೈಗಾರಿಕೆಯ ಪರಿಶೋಧನೆ, ನೂತನ ಕೈಗಾರಿಕೆಗಳಿಗೆ ದ್ರವ್ಯ ಸಹಾಯದ ಹಂಚಿಕೆ ಈ ಕಡೆಗೆ ಕಳೆದ ವರ್ಷದಲ್ಲಿ ಮೈಸೂರಿನ ಇಂಡಸ್ಟ್ರಿ ಇಲಾಖೆಯು ಹೆಚ್ಚಾಗಿ ಗಮನ ಕೊಟ್ಟಿದೆ ಎಂದು ಈ ಭಾಷಣದ ಮೂಲದಿಂದ ತೋರುತ್ತದೆ.

ಕೃಷಿ ಇಲಾಖೆಯವರು ನೂತನವಾದ ಒಸ್ಟಿನ್ ಮೋಟರ್‌ಪ್ಲೋ ಎಂಬ ಮೋಟರ್ ಸಹಾಯದಿಂದ ನಡೆಯುವ ನೇಗಿಲಿನ ಉಪಯೋಗದ ಪರಿಶೋಧನೆ ಮಾಡುವುದಲ್ಲದೆ ಜಾನುವಾರುಗಳ ವಿಚಾರಕ್ಕೆ ಒಬ್ಬ ಸ್ಪೆಶಲ್ ಆಫೀಸರರು ನೇಮಕವಾಗಿದ್ದಾರೆ. ದೇಶಭಾಷೆಯಲ್ಲಿ ಕೃಷಿ ಶಾಸ್ತ್ರವನ್ನು ಕಲಿಸಲಿಕ್ಕೆ ಹೆಬ್ಬಾಲ್ ಎಂಬಲ್ಲಿರುವ ಶಾಲೆಯಲ್ಲಿ ಏರ್ಪಾಡು ಮಾಡಲಾಗುತ್ತದೆ. ಇದಲ್ಲದೆ ಮಲೆನಾಡಿನಲ್ಲಿ ಕೃಷಿಕರಿಗೆ ಸಾಲದ ರೂಪದಿಂದ ನೆರವಾಗಲಿಕ್ಕೂ, ಆಹಾರ ಪೈರುಗಳ ಪೈದಾಸ್ತು ವೃದ್ಧಿಸಲಿಕ್ಕೂ, ನಿರಾಶ್ರಿತ ಜನರಿಗೆ ದರಖಾಸ್ತಿಗೆ ಸ್ಥಳಗಳನ್ನು ಒದಗಿಸಿ ಕೊಡಲಿಕ್ಕೂ, ಚಾಸೂಪ್ಪಿನ ಕೃಷಿಯನ್ನು ಹೆಚ್ಚಿಸಲಿಕ್ಕೂ ಪ್ರಯತ್ನಗಳು ನಡೆದಿವೆ. ಹೀಗಾದರೂ ಜನತೆಯು ಕೈಗಾರಿಕೆ ಕೃಷಿಗಳ ಸುಧಾರಣೆಗೆ ಇನ್ನೂ ಮುಂದೊತ್ತಿ ಬರುವುದಿಲ್ಲವೆಂದು ದಿವಾನ ಸಾಹೇಬರು ವಿಷಾದಿಸುತ್ತಾರೆ. ೮೮ ಲಕ್ಷ ಎಕ್ರೆ ಜಮೀನು ಸಾಗುವಳಿ ಮಾಡುವ ಸ್ಥಿತಿಯದಾಗಿದ್ದು ಇನ್ನೂ ಬಂಜರು ಬಿದ್ದಿದೆ. ಸೇಕಡಾ ೯೮ರಷ್ಟು ಮಂದಿಗೆ ಇನ್ನೂ ವಿದ್ಯೆಯ ವಾಸನೆ ಇಲ್ಲ. ಟೀ, ಕಾಫಿ, ರಬ್ಬರು, ಕರ್ಪೂರ ಇವುಗಳ ಪೈದಾಸ್ತಿಗೆ ಅನುಕೂಲವಾದ ಎಷ್ಟೋ ವಿಸ್ತೀರ್ಣದ ಕಾಡುಗಳು ಇನ್ನೂ ಉಪಯೋಗಿಸಲ್ಪಡದೆ ಹಾಗೆ ಬಿದ್ದಿವೆ. ೫ ಮಂದಿಗಿಂತ ಹೆಚ್ಚಿಗೆ ಜನರನ್ನು ಕೂಲಿ ಕೆಲಸಕ್ಕೆ ನೇಮಿಸಿದ್ದ ಕಾರ್ಖಾನೆಗಳು ಇಡೀ ಮೈಸೂರ ಸಂಸ್ಥಾನದಲ್ಲಿ ಇನ್ನೂ ೭೦ ಮಾತ್ರ ಇವೆ. ಈ ಕೈಗಾರಿಕೆ ಕಾರ್ಖಾನೆಗಳಿಂದ ಬರೆ ೧೪೫ ಸಾವಿರ ಜನರ ಜೀವನ ಮಾತ್ರ ಸಾಗುತ್ತಿದೆ. ಒಟ್ಟಿಗೆ ೭೫ ಲಕ್ಷ ರೂಪಾಯಿ ಬಂಡವಾಳವಿರುವ ಬರೆ ೬೬ ಕಂಪೆನಿಗಳು ಮಾತ್ರ ಮೈಸೂರು ಸಂಸ್ಥಾನದಲ್ಲಿ ಇವೆ. ಇವುಗಳಲ್ಲಿ ಮೈಸೂರು ಬ್ಯಾಂಕು ಮತ್ತು ೨ ನೇಯಿಗೆ ಕಾರ್ಖಾನೆಗಳನ್ನು ಬಿಟ್ಟರೆ ಉಳಿದ ಕಂಪೆನಿಗಳು ಸಾಮಾನ್ಯ ತರದವುಗಳು ಎಂದು ದಿವಾನ ಸಾಹೇಬರು ಕೊರಗುತ್ತಿದ್ದಾರೆ.

ಚಿನ್ನ ವಿನಾ ಸುಮಾರು ೨ ಲಕ್ಷ ಬೆಲೆ ಬಾಳುವ ಉತ್ಪನ್ನಗಳು ಮೈಸೂರಿನಿಂದ ಪರದೇಶಗಳಿಗೆ ರಫ್ತಾಗುತ್ತಿವೆ. ಹತ್ತಿ, ಉಪ್ಪು, ನೇರಳೆ, ಹೊಗೆಸೊಪ್ಪು ಮುಂತಾದ ಕೈಗಾರಿಕೆಗೆ ಬೇಕಾದ ಪೈರುಗಳು ಬೆಳಸಲಿಕ್ಕೆ ಸಾಧ್ಯವಿರುವ ಸ್ಥಳಗಳಲ್ಲಿ ಸೇಕಡಾ ೨೦ರಷ್ಟು ಅಂಶದಲ್ಲಿ ಸಹಾ ಅವನ್ನು ಬೆಳಸುವುದಿಲ್ಲವಲ್ಲ ಎಂದು ದಿವಾನ ಸಾಹೇಬರು ಹೇಳುತ್ತಾರೆ. ಹೀಗಾದ್ದರಿಂದ ಜನತೆಯೂ ಸರಕಾರವು ಕರದೂ ದೇಶೋಭಿವೃದ್ಧಿಯ ಕಡೆಗೆ ಇನ್ನಷ್ಟು ಮನಸಿಟ್ಟು ಸಾಹಸ ಮಾಡಬೇಕೆಂದು ದಿವಾನ ಸಾಹೇಬರ ಭಾಷಣದ ಮುಖ್ಯ ಸಾರಾಂಶ.

ವಿದ್ಯಾಪ್ರಚಾರ.

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಕಳೆದ ತಿಂಗಳ ೨೬ನೆ ತಾರೀಕಿಗೆ ವಿದ್ಯಾಪ್ರಚಾರವನ್ನು ಕುರಿತು ವಿಶೇಷ ಚರ್ಚೆ ನಡೆಯಿತು. ಸೆಕೆಂಡರಿ ಮತ್ತು ಯೂನಿವರ್ಸಿಟಿ ಶಿಕ್ಷಣವೂ ಮಾಫಿಯಾಗಿ ನಡೆಯಬೇಕೆಂಬದಾಗಿ ಬ್ರಾಹ್ಮಣ ಮಂಗಡವಿರುವ ಅದನ್ನು ಎದುರಿಸಿ ಇತರರೂ ವಾದ ಮಾಡಿದರು. ಪ್ರಾಥಮಿಕ ಶಿಕ್ಷಣವೇ ಇನ್ನೂ ಸಾಕಷ್ಟು ಹಬ್ಬಿಲ್ಲ, ಅದಕ್ಕೆ ಬೇಕಾಗಿರುವ ಹಣವನ್ನು ಉಚ್ಚ ಶಿಕ್ಷಣಕ್ಕಾಗಿ ವೆಚ್ಚ ಮಾಡುವುದು ಎಂದರೆ ಬ್ರಾಹ್ಮಣ ವರ್ಗಕ್ಕೆ ಇನ್ನಷ್ಟು ಸಹಾಯ ಮಾಡಿದಂತಾದೀತು. ಬ್ರಾಹ್ಮಣರು ವಿದ್ಯೆಯಲ್ಲಿ ಮೊದಲೇ ಮುಂದಾಳುಗಳಿದ್ದು ಯೂನಿವರ್ಸಿಟಿಯ ಶಿಕ್ಷಣದಲ್ಲಿ ಹೆಚ್ಚಿನ ವ್ಯಾಸಂಗ ಉಳ್ಳವರು ಎಂದು ಬ್ರಾಹ್ಮಣೇತರರ ಚರ್ಚೆಯ ಮುಖ್ಯ ಸಾರ. ಸರಕಾರದ ಕಡೆಯಿಂದ ಮಿ। ಎ. ಆರ್. ಬ್ಯಾನರ್ಜಿಯವರು ಅದಕ್ಕೆ ಈ ರೀತಿಯಾಗಿ ಉತ್ತರ ಕೊಟ್ಟರು. ಹೈಸ್ಕೂಲು ಕ್ಲಾಸುಗಳಲ್ಲಿ ಈಗ ಸುಮಾರು ೬೦೦೦ ತರುಣರು ಶಿಕ್ಷಣ ಹೊಂದುತಲಿದ್ದಾರೆ. ಅವರ ಪೈಕಿ ಸೇಕಡಾ ೨೦ ಮಂದಿಗೆ ಸಂಬಳ ಮಾಫಿ ಇದೆ. ಇದಲ್ಲದೆ ಅರ್ಧ ಲಕ್ಷ ರೂಪಾಯಿಯ ವೇತನಗಳು ಅವರಿಗೆ ಬೇರೆ ಇವೆ. ಯೂನಿವರ್ಸಿಟಿಯಲ್ಲಿ ೭೦೦ ಮಂದಿ ವಿದ್ಯಾರ್ಥಿಗಳ ಪೈಕಿ ಸೇಕಡಾ ೪೦ರಷ್ಟು ಮಂದಿಗೆ ಫೀಸು ಮಾಫಿ ೨೧೦೦೦ ರೂಪಾಯಿಯ ವೇತನಗಳು. ವಿನಾ ಹಿಂದುಳಿದ ಜಾತಿಯವರಿಗೇನೇ ೧೧,೦೦೦ ರೂಪಾಯಿಯ ವೇತನಗಳೂ ಇವೆ. ಶಾಲೆಗೆ ಹೋಗುವ ಪ್ರಾಯದ ಸುಮಾರು ೨ ಲಕ್ಷಕ್ಕೆ ಮಿಕ್ಕಿರುವ ಮಕ್ಕಳಲ್ಲಿ ೬೭೦೦ ಮಂದಿ ಮಾತ್ರ ಮೇಲೆ ಹೇಳಿದ ರೀತಿಯ ಶಿಕ್ಷಣ ಹೊಂದುತಲಿದ್ದಾರೆ. ಇದು ಬಹಳ ಕಡಿಮೆ ಸಂಖ್ಯೆ ಎನ್ನಬೇಕು. ಹಳ್ಳಿಯಲ್ಲಿ ವಿದ್ಯಾ ಪ್ರಚಾರಕ್ಕೋಸ್ಕರ ೬೦೦ ಎಂಗ್ಲೋವರ್ನಾಕ್ಯುಲರ್ ಶಾಲೆಗಳನ್ನು ಹೆಚ್ಚಿಸಬೇಕೆಂದು ಸರಕಾರದ ಆಶಯವಿದೆ. ಇದಲ್ಲದೆ ಖಾಸಗಿ ಶಾಲೆಗಳನ್ನು ಸರಕಾರದವರು ತಮ್ಮ ಆಡಳಿತೆಯೊಳಗೆ ತೆಗೆದುಕೊಳ್ಳಲಿಕ್ಕೆ ಆಲೋಚಿಸಿರುವರು. ಇದನ್ನೆಲ್ಲ ಪೂರೈಸಲಿಕ್ಕೆ ೧೦ರಿಂದ ೧೫ ಲಕ್ಷದ ವರೆಗೆ ಹಣದ ಆವಶ್ಯಕತೆ ಇದೆ. ಲೋವರ್ ಸೆಕೆಂಡರಿ ಶಾಲೆಗಳಲ್ಲಿ ಈಗಲೇ ಮಾಫಿ ಶಿಕ್ಷಣವಿದೆ. ಇದರಿಂದ ರೂ ೧½ ಲಕ್ಷ ನಷ್ಟವಾಗಿದೆ. ಸೆಕೆಂಡರಿ ಶಿಕ್ಷಣವನ್ನು ಈಗಲೇ ಮಾಫಿಯಾಗಿಸುವುದಕ್ಕೆ ಇನ್ನೂ ೧½ ಲಕ್ಷ ರೂಪಾಯಿ ನಷ್ಟಬಿದ್ದೀತು. ಸಂಸ್ಥಾನವು ವಿದ್ಯಾಪ್ರಚಾರಕ್ಕೆ ವೆಚ್ಚಮಾಡುವ ೪೫ ಲಕ್ಷ ರೂಪಾಯಿಯಲ್ಲಿ ಇದೊಂದು ಹಣ ಎಂದು ಕೆಲವರು ತಿಳಿಯಬಹುದು. ಆದರೆ ಮಾಫಿಯಾಗಬೇಕು ಎಂಬ ತತ್ವವನ್ನು ಒಮ್ಮೆ ಅಂಗೀಕರಿಸುವುದೆ ಈಗ ದೊಡ್ಡ ಜವಾಬ್ದಾರಿಯಾಗಿದ್ದರೂ ಕ್ರಮೇಣ ಅದು ಜಾರಿಗೆ ಬಂದೀತು.”

ವಿದೇಶ ವರ್ತಮಾನ.

ಐರ್ಲೆಂಡಿನ ಚಳವಳಿ—ಇಲ್ಲಿ ಅರಾಜಕತ್ವವು ಹೆಚ್ಚುತ್ತಲೂ ಇದೆ. ಇದಕ್ಕೆ ಕಠಿಣ ರೀತಿಯಿಂದ ಶಾಸನ ನಡೆಸುವ ಉದ್ದೇಶದಿಂದ ಬ್ರಿಟಿಷ ಸೈನ್ಯವು ಅಲ್ಲಿಗೆ ಹೋಗುತ್ತಲೂ ಇದೆ. ಆದರೆ ಕೆಲವೆಡೆಗಳಲ್ಲಿ ಐರಿಷ ರೈಲ್ವೆ ಮಜೂರರು ಸೈನ್ಯ ಸರಂಜಾಮುಗಳನ್ನು ಸಾಗಿಸಿಕೊಡುವುದಿಲ್ಲವೆಂದು ಮುಷ್ಕರ ಹೂಡಿದ ಕಾರಣ ಪ್ರಸ್ತುತ ಸೈನ್ಯ ಬಂಡಿಗಳನ್ನು ಸವಾರಿಯಾಗಿ ಬಂದಿದೆ. ಬ್ರಿಟಿಷ ರೈಲ್ವೆ ಮಜೂರರ ಯೂನಿಯನ್ನಿನ ಪ್ರತಿನಿಧಿಗಳು ಈ ವಿಷಯದಲ್ಲಿ ಮುಖ್ಯ ಮಂತ್ರಿ ಮಿ। ಲೊಯ್ಡು ಜೋರ್ಜರ ಭೇಟಿ ಮಾಡಿದಾಗ ಸರಕಾರದ ಆಜ್ಞೆಯೇ ತಲೆಸ್ತಬ್ಧವಾಗುವ ರೀತಿಯಲ್ಲಿ ಈ ರೈಲ್ವೆ ಮಜೂರರ ವರ್ತನವು ಇದ್ದರೆ ಅವರು ಸರಕಾರದವರೊಡನೆ ಯುದ್ಧ ಮಾಡುವವರ ಪಕ್ಷಕ್ಕೆ ಸೇರಿದರಂತಾಗುತ್ತದೆ, ಅಂಥ ವರ್ತನಕ್ಕೆ ತಕ್ಕ ಶಾಸ್ತಿಯನ್ನು ಮಾಡದೆ ಸುಮ್ಮನಿರಲಾಗುವುದಿಲ್ಲವೆಂದು ಮಿ। ಲೊಯ್ಡು ಜೋರ್ಜರು ತಿಳಿಸಿದರು.

ಬೊಲಶೆವಿಕರು—ಬೊಲಶೆವಿಕರು ಫಾರ್ಸಿಸ್ಥಾನದ ಕರಾವಳಿಯಲ್ಲಿ ಎಂಜೆಲಿ ಎಂಬಲ್ಲಿ ಸೈನ್ಯವಿಳಿಸಿದ್ದು ಅಲ್ಲಿ ಕೆಸ್ಪಿಯನ್ ಸಮುದ್ರದಲ್ಲಿದ್ದ ಡೆನಿಕನ್ ಪಕ್ಷದ ನೌಕಾಪಡೆಯನ್ನು ಮುರಿಯಲಿಕ್ಕೆ ಮಾತ್ರವೇ ಆಗಿತ್ತು, ಆ ಕೆಲಸ ಮುಗಿದ ಕಾರಣ ಬೇಗನೆ ಹಿಂದಕ್ಕೆ ಹೋಗಲಿಕ್ಕಿರುವೆವು. ಫಾರ್ಸಿಸ್ಥಾನದೊಡನೆ ತಮಗೆ ಚರ್ಚೆ ವಿವಾದಗಳೂ ಯಾವುವೂ ಇಲ್ಲ ಎಂದು ಬೊಲಶೆವಿಕರ ಅಧಿನಾಯಕರು ಫಾರ್ಸಿಸ್ಥಾನ ಸರಕಾರದವರಿಗೆ ತಿಳಿಸಿರುವರು. ಆದರೆ ಈ ರೀತಿಯಾಗಿ ಸೈನ್ಯ ಇಳಿಸಿದ್ದು ಜಾನಾಂಗಿಕ ನಡವಳಿಕೆಗೆ ವಿರೋಧವೆಂದು ಈ ವಿಷಯದಲ್ಲಿ 'ಲೀಗ್ ಒಫ್ ನೇಶನ್ಸ್'ಗೆ ಕೊಟ್ಟವರು ಇತ್ಯರ್ಥಿಸಬೇಕೆಂದೂ ತಿಳಿಸಲಿಕ್ಕೆ ಫಾರ್ಸಿಸ್ಥಾನದ ಯುವರಾಜ ಫಿರೋಜರು ವಿಲಾಯತಿಗೆ ಹೋಗುವರು.

ಬೊಲಶೆವಿಕರಿಗೂ ಪೋಲೆಂಡದವರಿಗೂ ನಡೆಯುತ್ತಿರುವ ಯುದ್ಧದ ಸಮಾಚಾರವು ಇನ್ನೂ ಸ್ಪಷ್ಟವಾಗಿ ಗೊತ್ತಾಗುವುದಿಲ್ಲ. ಜಯಾಪಜಯಗಳು ಒಂದೊಂದು ತಂಡಕ್ಕೆ ಆಗಾಗ ಆದ ಸಂಗತಿಯು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ.

ಬೊಲಶೆವಿಕರ ಕಡೆಯಿಂದ ರಾಯಭಾರಿಯೊಬ್ಬರು ಬ್ರಿಟಿಷರೊಡನೆ ರುಶ್ಯದ ವ್ಯಾಪಾರ ವಹಿವಾಟುಗಳನ್ನು ನಡಿಸುವ ಪ್ರಶ್ನೆಯನ್ನು ಚರ್ಚಿಸುವ ಕಾರಣದಿಂದ ಇಂಗ್ಲೆಂಡಿಗೆ ಬಂದಿರುವರು.

ಹಂಟರ್ ಕಮ್ಮಿಟಿಯ ರಿಪೋರ್ಟು—ಈ ವಿಷಯದಲ್ಲಿ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಇದೇ ವಾರದಲ್ಲಿ ಬಹಳ ಚರ್ಚೆ ನಡೆಯಲಿಕ್ಕಿದೆ.

ಒಳದೇಶ ವರ್ತಮಾನ

ಎಲ್ ಇಂಡಿಯಾ ಕೊಂಗ್ರೆಸ್ ಕಮ್ಮಿಟಿ—ಇವರ ಜತೆ ಸೆಕ್ರೆಟರಿಗಳಾದ ಸಾವದಾರ ಪಾಟೇಲರಿಗೆ ವಿಲಾಯತಿಗೆ ಈ ಕಮ್ಮಿಟಿಯವರು ಈ ಕೆಳಗಿನಂತೆ ತಂತಿ ಬಿಟ್ಟಿರುವರು. ಓಲ್ ಇಂಡಿಯಾ ಕೊಂಗ್ರೆಸ ಕಮ್ಮಿಟಿಯು ಕಳೆದ ತಿಂಗಳ ೩೦ ೩೧ನೆ ತಾರೀಕುಗಳ ಅಧಿವೇಶನದಲ್ಲಿ ಸಬ್ ಕಮ್ಮಿಟಿಯೊಂದನ್ನು ಏರ್ಪಡಿಸಿ ಸದರಿ ಸಬ್ ಕಮ್ಮಿಟಿಯು ಜನರಲ್ ಡಾಯರ್ ಮತ್ತು ಪಂಜಾಬದ ಗಲಾಟೆಯಲ್ಲಿ ಉದ್ಧಟವರ್ತನವನ್ನು ಕೈಕೊಂಡ ಇತರ ಆಫೀಸರರಿಗೆ ಸರಿಯಾದ ಕೋರ್ಟ ವಿಚಾರಣೆ ನಡೆಯುವಂತೆ ಪಾರ್ಲಿಮೆಂಟ ಸಭೆಯವರಿಗೆ ಮನವಿಯನ್ನು ತಯಾರಿಸುತ್ತಿದೆ. ನೀವೂ ಬ್ರಿಟಿಷ ಕೊಂಗ್ರೆಸ ಕಮ್ಮಿಟಿಯವರೂ ಪ್ರಯತ್ನಿಸಿ ಈ ವಿಚಾರವು ಪಾರ್ಲಿಮೆಂಟ ಸಭೆಯ ಮುಂದೆ ಚರ್ಚೆಗೆ ಬರುವ ತೆರನಾ ರೌಲೆಟ್ ಕಾನೂನು ರದ್ದಾಗುವಂತೆಯೂ ವಿಲಾಯತಿಯಲ್ಲಿ ಜನಗಳಿಗೆ ಜಾಗೃತಿಯನ್ನುಂಟುಮಾಡಬೇಕು. ಸರ್ವೆಸ್ಟರ ದೀಕ್ಷೆಯು ಈ ಗಲಾಟೆಗೆ ಕಾರಣವಾಗುವ ಬದಲಾಗಿ ಅದ ಅನಾಹುತದ ನಾಗರಿಕತೆಗೆ ನಿರ್ಭಯದ ಮಾತ್ರವಾಯಿತು ಎಂತಲೂ ಕಮ್ಮಿಟಿಯು ಅಭಿಪ್ರಾಯಪಡುತ್ತಿದೆ. ಇದಲ್ಲದೆ ಪಂಜಾಬದ ಗಲಾಟೆಯಲ್ಲಿ ಮಾನ್ಯ ಮತ್ತು ಬ್ರಿಟಿಷ ಸರಕಾರಗಳ ಘೋರವೂ ನ್ಯಾಯಸಮ್ಮತವಲ್ಲದ ರೀತಿಯಲ್ಲಿ ತುರ್ಕಿಗೆ ಕೊಟ್ಟ ಸಂಧಿಶರ್ತುಗಳೂ, ಸುಧಾರಣಾ ಎಕ್ಟಿನ ಜಾರಿಯ ಬಗ್ಗೆ ತಯಾರಿಸಿದ ಕುಂಠಿತವಾದ ನಿಬಂಧನೆಗಳೂ ಇವನ್ನೆಲ್ಲ ಚರ್ಚಿಸುವುದಕ್ಕೂ ಅಸಹಕಾರಿತೆಯ ಠರಾವನ್ನು ಕುರಿತು ಇತ್ಯರ್ಥಿಸಲಿಕ್ಕೂ ರಾಷ್ಟ್ರೀಯ ಸಭೆಯ ವಿಶೇಷ ಅಧಿವೇಶನವು ಸೆಪ್ಟಂಬರ್ ೧೫ನೆ ತಾರೀಕಿನ ಮುಂಚೆ ಕಲ್ಕತ್ತೆಯಲ್ಲಿ ಜರಗುವುದೆಂತಲೂ ಈ ಕಮ್ಮಿಟಿಯವರು ಸಾವದಾರ ಪಾಟೇಲರಿಗೆ ತಿಳಿಸಿದ್ದಾರೆ.

ಪಂಚಮರ ಪರಿಷತ್ತು—ರಾವ ದಿವಾನ ಎಮ್. ಸಿ. ರಾಜ ಇವರ ಅಧ್ಯಕ್ಷತೆಯಲ್ಲಿ ಚಿಲಂಬರದ ಸಮೀಪ ಎನಸೂರು ಎಂಬ ಹಳ್ಳಿಯಲ್ಲಿ ಸುಮಾರು ಎರಡು ಸಾವಿರ ಪಂಚಮರ ಪರಿಷತ್ತು ಸೇರಿ, ಪಂಚಮರಿಗೆ ಕಡ್ಡಾಯದ ಪ್ರಾಥಮಿಕ ಶಿಕ್ಷಣ, ಶಾಲೆಗೆ ಬರುವ ಕಾಲದಲ್ಲಿ ಒಪ್ಪೊತ್ತು ಊಟ ಮತ್ತು ಪಾಠಪುಸ್ತಕಗಳ ಪುರವಣಿ, ದೊಡ್ಡ ನಗರಗಳಲ್ಲಿರುವ ಕೈಗಾರಿಕೆ ಶಾಲೆ, ಕೊಲಿಜ ಸೆಕೆಂಡರಿ ಶಾಲೆಗಳಲ್ಲಿ ಮಾಫಿಯಿಂದ ವಿದ್ಯಾಭ್ಯಾಸ ಮತ್ತು ಅನ್ನಾಕಾಶ, ತಿರುಪತಿಯ ನಂದನಾರ್ ಶಾಲೆಯನ್ನು ಫ್ರೀ ಹೈಸ್ಕೂಲಾಗಿ ಮಾಡುವಂತೆ ಸರಕಾರದಿಂದ ದ್ರವ್ಯವನ್ನು ಕೊಡಲು, ಪಂಚಮರು ಈಗ ಹಂಗಾಮಿಯಾಗಿ ವಾಸವಾಗಿರುವ ಸ್ಥಳಗಳಲ್ಲಿ ಅವರಿಗೆ ಕಾಯಂ ಹಕ್ಕು, ಇಂಥ ಸ್ಥಳಗಳನ್ನು ಇತರರು ಬಲಕಾಯಿಸಿಕೊಳ್ಳದಂತೆ ನಿರ್ಬಂಧ, ಮುಂತಾದ ಹಲವು ಸಲಹೆಗಳನ್ನು ಸರಕಾರದವರೊಡನೆ ಕೇಳಬೇಕೆಂದ ಠರಾವುಗಳು ಮಂಜೂರಾದವು.

ಕಲ್ಕತ್ತಾ ಗ್ಲಾಸ ಮತ್ತು ಸಿಲಿಕೇಟ ವರ್ಕ್ಸ್—೧೫ ಲಕ್ಷ ಬಂಡವಾಳ ಜತುಮಾಡುವ ಅಧಿಕಾರ ಹೊಂದಿ ಒಂದು ಕಂಪೆನಿಯು ಮೇಲಿನ ಹೆಸರಿನಿಂದ ಕಲ್ಕತ್ತೆಯಲ್ಲಿ ರಿಜಿಸ್ಟರಾಗಿದೆ. ಗಾಜಿನ ಸೀಸೆ ಮುಂತಾದ್ದನ್ನು ತಯಾರಿಸುವುದೇ ಈ ಕಂಪೆನಿಯ ಮುಖ್ಯ ಉದ್ದೇಶ.

ಅಲ್ಲಾಹಾಬಾದಿನಲ್ಲಿ ಖಿಲಾಫತ್ ಪರಿಷತ್ತು—ಅಲ್ಲಾಹಾಬಾದಿನಲ್ಲಿ ಖಿಲಾಫತ್ ಕಮ್ಮಿಟಿಯವರ ಒಂದು ವಿಶೇಷ ಅಧಿವೇಶನವು ಇದೇ ತಿಂಗಳ ಆರಂಭದಲ್ಲಿ ಜರಗಿತು. ಇದರಲ್ಲಿ ಅನೇಕ ಹಿಂದೂ ಮುಖಂಡರೂ ಹಾಜರಿದ್ದರು. ಮಹಾತ್ಮಾ ಗಾಂಧಿಯವರು ಮೈಸೂರಿನ ಪ್ರಭುಗಳ ಮುಂದೆ ತುರ್ಕಿಯ ಒಪ್ಪಂದವ ಕುರಿತು ಹಿಂದೀ ಮುಸಲ್ಮಾನರಿಗೂ ಹಿಂದೂಜನರಿಗೂ ಇರುವ ಅಭಿಪ್ರಾಯಗಳನ್ನು ಮನವರಿಕೆ ಮಾಡಿ ಆ ಶರ್ತುಗಳನ್ನು ಬೇಗನೆ ತಪ್ಪಿಸಲು ಮಾಡುವಂತೆ ಸೂಚಿಸಿ ಅದರ ನಂತರ ಒಂದು ತಿಂಗಳ ವಾಯಿದೆಯೊಳಗೆ ಯಾವುದೊಂದು ಏರ್ಪಾಡು ಆಗದಿದ್ದರೆ ಈ ಮೊದಲೇ ಹೇಳಿದಂತೆ ಅಸಹಕಾರಿತೆಯು ನಾಲ್ಕು ಹಂತಗಳಲ್ಲಿ ಪದಾರ್ಪಣ ಮಾಡಬೇಕೆಂಬ ನಿರ್ಧಾರವಾಯಿತು.

ಕಲ್ಲಿಕೋಟೆಯಲ್ಲಿ ಗೇಣಿ ಒಕ್ಕಲುಗಳ ಪರಿಷತ್ತು—ಡಾ। ಕೆ. ಪಿ. ರಾಮನ್ ಮೆನನವರ ಅಧ್ಯಕ್ಷತೆಯಲ್ಲಿ ಜರಗಿದ ಒಂದು ಅಧಿವೇಶನದಲ್ಲಿ ಗೇಣಿ ಒಕ್ಕಲುಗಳೆಲ್ಲ ಸೇರಿ ತಮ್ಮ ಮೇಲೆ ಜನ್ಮಿಗಳು ತೋರಿಸುವ ಪೀಡನದ ಹಲವು ದೃಷ್ಟಾಂತಗಳನ್ನು ವಿವರಿಸಿ ತನ್ನ ಸ್ಥಿತಿಯನ್ನು ಸುಧಾರಿಸಿ ಕಾಪಾಡಿಕೊಳ್ಳಲಿಕ್ಕೆ 'ಮಲಬಾರ್ ಟೆನೆಂಟ್ಸ್ ಲೀಗ್' ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂದು ನಿರ್ಣಯಿಸಿದರು.

ನೋರ್ಥ ವೆಸ್ಟ್ ರೈಲ್ವೆ ಮಜೂರರ ಮುಷ್ಕರ—ಇದು ಆರಂಭಿಸಿ ಒಂದೂವರೆ ತಿಂಗಳಾದರೂ ಇನ್ನೂ ಅಡಗುವ ಸಂಭವವು ತೋರಬರುವುದಿಲ್ಲ. ಜನಸರಕು ಆಮದು ರಫ್ತಿಗೆ ಬಹಳ ತೊಡಕಾಗಿದೆ.

ಡಾ। ಯು. ರಾಮರಾಯರ ಉಮೇದ್ವಾರಿಕೆ—ರಾವಸಾಹೇಬ ಡಾ। ಯು. ರಾಮರಾಯರು ಮುಂದಿನ ಚುನಾವಣೆಯಲ್ಲಿ ಮದ್ರಾಸು ಮ್ಯುನ್ಸಿಪಾಲಿಟಿಯ ಕಡೆಯಿಂದ ಉಮೇದ್ವಾರರಾಗಿ ನಿಂತಿರುವರು.

ಕಟ್ಟೋಣಗಳ ಕಂಪೆನಿ—ಮದ್ರಾಸಿನಲ್ಲಿ 'ದಿ ಡೆಕ್ಕನ್ ರಿಯಲ್ ಪ್ರೊಪರ್ಟಿ ಎಂಡ್ ಹೌಸ್ ಬಿಲ್ಡಿಂಗ್ ಕಂಪೆನಿ' ಎಂಬ ಹೆಸರಿನ ಒಂದು ಕಂಪೆನಿಯು ರಿಜಿಸ್ಟರಾಗಿದೆ. ಪಾಲಿಗೆ ೨೫ ರೂಪಾಯಿಯ ೬೦,೦೦೦ ಪಾಲುಗಳುಳ್ಳ ಬಂಡವಾಳ ೩೦,೦೦೦,೦೦೦ ಎತ್ತಲಿಕ್ಕೆ ಈ ಕಂಪೆನಿಯು ಅಧಿಕಾರ ಹೊಂದಿದೆ. ಮನೆಗಳನ್ನು ಕಟ್ಟಿಸಿ ಮದ್ರಾಸು ಸಂಸ್ಥಾನದಲ್ಲಿಯೂ, ಬ್ರಿಟಿಷ ಹಿಂದೂಸ್ಥಾನ ಮತ್ತು ದೇಶೀಯ ರಾಜ್ಯಗಳಲ್ಲಿ ಮನೆಗಳು ಒತ್ತಟ್ಟಾಗಿ ಇಕ್ಕಟ್ಟಾಗಿರುವ ಪ್ರಸಂಗಗಳಲ್ಲಿ ಸ್ಥಳವನ್ನು ಕೊಂಡುಕೊಂಡು ಒಳ್ಳೇ ರೀತಿಯ ಕಟ್ಟಡಗಳನ್ನು ಕಟ್ಟಿಸಿಕೊಡುವುದೇ ಈ ಕಂಪೆನಿಯ ಉದ್ದೇಶ.

ಮೆಸ್ಟನ್ ಕಮ್ಮಿಟಿಯವರ ಹಂಚಿಕೆ.

ಈ ಹಂಚಿಕೆಯನ್ನು ಮೆಸ್ಟನ್ ಹೊಂದಿದ ತಂದೆಯು ೪ ಮಂದಿ ಮಕ್ಕಳಿಗೆ ಮಾಡಿದ ಪಂಚಾಯತಿಕೆ ಫೈಸಲಿಗೆ ಸರಿಹೋಲಿಸಿ ಕಳೆದ ಸಂಚಿಕೆಯಲ್ಲಿ ಬರೆದವು. ಇಂಡಿಯಾ ಸರಕಾರವು ಪೆನ್ಶನ್ ಹೊಂದಿದ ತಂದೆ, ಈಗ ಆಸ್ತಿಯ ಆಡಳಿತೆಯನ್ನು ತನ್ನ ಮಕ್ಕಳಂತಿರುವ ಪ್ರಾಂತಿಕ ಸರಕಾರಗಳಿಗೆ ವಹಿಸಿಕೊಡಲಿಕ್ಕೆ ಇದೆ. ದೇಶದ ಭದ್ರತೆಗೆ ಬೇಕಾದ ಸೈನ್ಯ, ಅನ್ಯ ದೇಶಗಳೊಡನೆ ಇರುವ ವಹಿವಾಟು ಮುಂತಾದ ಮನೆವಾರ್ತೆ ಆಡಳಿತೆಯನ್ನು ತನ್ನ ಪೆನ್ಶನ್ ಹಣ ಅಥವಾ ತನಗೆ ತೆಗೆದಿಟ್ಟ ಕಂದಾಯದಿಂದ ನಿರ್ವಹಿಸಲಾರದೆ ಪ್ರಾಂತಿಕ ಸರಕಾರಗಳಿಂದ ಸಹಾಯ ಧನವನ್ನು ಅಪೇಕ್ಷಿಸುತ್ತಿದೆ. ಇದರಲ್ಲಿ ಮುಂಬಯಿ ಬಂಗಾಳ ಇವು ವರ್ತಕ ಮಗನಂತೆ, ಮದರಾಸು ಕೃಷಿಕನ ಅಸ್ಸಾಂ ಮಧ್ಯ ಪ್ರಾಂತ್ಯಗಳ, ಮತ್ತು ಬಿಹಾರ, ಒರಿಸ್ಸಾ ಇವು ಅಪಂಗುಗಳಂತೆ ಬಡಪತ್ತಿನಿಂದ ಕೆಲವು ಕಾಲದ ವರೆಗಾದರೂ ಜೀವಿಸಬೇಕಾದವರು. ಬರ್ಮಾ ಮುಂದೆ ಇನ್ನೂ ವೃದ್ಧಿಗೆ ಬರಲಿಕ್ಕೆ ತುಂಬಾ ಎಡೆ ಇದ್ದರೂ ಅದಕ್ಕೋಸ್ಕರ ಹೆಚ್ಚು ಖರ್ಚು ಪ್ರಥಮದಲ್ಲಿ ಬೇಕಾಗುತ್ತದಾದ ಕಿರೀ ಮಗ. ಹೀಗಾಗಿ ಮದ್ರಾಸ ಪ್ರಾಂತಿಕ ಸರಕಾರವು ಇತರ ಸಂಸ್ಥಾನಗಳಿಗಿಂತ ಅತಿ ವಿಶೇಷ ದಾಮಾಶಯದಲ್ಲಿ ಜೀವನಾಂಶವನ್ನು ತೆರಬೇಕೆಂದ ಮೆಸ್ಟನ ಕಮ್ಮಿಟಿಯ ಹಂಚಿಕೆಯು ಮುಖ್ಯ ಸಾರಾಂಶ.

ಇದನ್ನು ಆಕ್ಷೇಪಿಸಿ ಪ್ರಜಾ ಮುಖಂಡರು ಅಲ್ಲಲ್ಲಿ ಸಭೆ ಸೇರಿ ಠರಾವು ಮಾಡಿದ್ದು ಮಾತ್ರವೇ ಅಲ್ಲ, ಸ್ವತಃ ನ್ಯಾಯ ವಿಧಾಯಕ ಸಭೆಯ ಬಿನ್ ಸರಕಾರಿ ಮತ್ತು ಬಿನಸರಕಾರಿ ಮೆಂಬರರು ಏಕ ಮತದಿಂದ ಈ ಆಕ್ಷೇಪವನ್ನು ಮಂಡಿಸಿ ಮಾಡಿ ಠರಾವು ಮಾಡಿದ್ದಾರೆ. ಹೀಗಿಂದ ಮೇಲೆ ಕಮ್ಮಿಟಿಯ ಹಂಚಿಕೆಯು ಮದ್ರಾಸು ಸಂಸ್ಥಾನದವರಿಗೆ ತೀರಾ ಅನ್ಯಾಯವಾಗುತ್ತದೆ ಎಂದು ಬೇರೆ ಹೇಳಬೇಕಾದ್ದಿಲ್ಲ. ಆದರೆ ಈ ಅನ್ಯಾಯದ ಹಂಚಿಕೆ ತಿಳಿಯಬೇಕಾದ್ದು ಜನತೆಗೆ ಆವಶ್ಯಕವಾಗಿದೆ.

ಚೆಮ್ಸ್‌ಫೋರ್ಡ ಮೊಂಟೆಗ ವ್ಯವಸ್ಥಾ ಸೂಚನೆಯ ಮೇರೆಗೆ ಮದ್ರಾಸು ಪ್ರಾಂತಿಕ ಸರಕಾರವು ವರಿಷ್ಠ ಸರಕಾರಕ್ಕೆ ೫೧೧ ಲಕ್ಷ ರೂಪಾಯಿ ಕೊಡಬೇಕಾಗುತ್ತಿತ್ತು. ಆದರೆ ಸಾಮಾನ್ಯ ರಸ್ತೆಯ ೫೬ ಲಕ್ಷ ರೂಪಾಯಿ (೧೯೧೯—೨೦ರಲ್ಲಿ ಇಷ್ಟೆ ಹಣ ಜಮೆ)ಯಷ್ಟನ್ನು ಮದ್ರಾಸು ಸಂಸ್ಥಾನಕ್ಕೆ ಆದಾಯವಾಗಿ ತೋರಿಸಿ ಅದಕ್ಕೆ ಪ್ರತಿಯಾಗಿ ೧೪೮ ಲಕ್ಷ ರೂಪಾಯಿ ಹೆಚ್ಚಿಗೆ ಮದ್ರಾಸು ಸಂಸ್ಥಾನದಿಂದ ವಸೂಲ ಮಾಡಿಕೊಳ್ಳುವ ಏರ್ಪಾಡೇ ಈ ಹಂಚಿಕೆಯ ಫಲಿತಾಂಶವೆಂದು ಮದ್ರಾಸು ಟೈಮ್ಸ್ ಪತ್ರಿಕೆಕಾರನು ತೋರಿಸಿದ್ದಾನೆ. ಮದ್ರಾಸು ಸಂಸ್ಥಾನವು ಈ ಮೊದಲೂ ಇತರ ಸಂಸ್ಥಾನಗಳ ದಾಮಾಶಕ್ಕಿಂತ ಹಿಂದಿನ ಏರ್ಪಾಡುಗಳಿಂದ ನಷ್ಟ ಹೊಂದಿದೆ ಎಂದು ಆಗಾಗ ಅಂದರೆ ೧೯೦೬, ೧೯೦೦ ೧೯೦೧ನೆ ಇಸವಿಗಳಲ್ಲಿ ಮದ್ರಾಸು ಚೇಂಬರ್ ಒಫ್ ಕೊಮರ್ಸ್ (ವರ್ತಕರ ಸಂಘ)ದವರು ವರಿಷ್ಠ ಸರಕಾರದವರಿಗೆ ಬರಕೊಂಡ ಮನವಿಗಳಿಂದ ಸ್ಪಷ್ಟವಾಗುತ್ತದೆ. ಅದನ್ನು ತಿದ್ದುಪಡಿ ಮಾಡಿ ಮದ್ರಾಸಿಗೆ ಸಹಾಯ ಮಾಡುವ ಬದಲು ಇನ್ನೂ ಇನ್ನೂ ಹೆಚ್ಚಿಗೆ ಈ ವಂತಿಗೆಯ ಹೊರೆಯನ್ನು ಮದ್ರಾಸ ಸರಕಾರದ ಬೆನ್ನಿನ ಮೇಲೆ ಹೊರಿಸಿ ಹೊತ್ತು ಹೊತ್ತು ಅಭ್ಯಾಸ ಆದಕ್ಕೆ ಇಷ್ಟು ಎಂದಿಷ್ಟು ಭಾರ ಹೆಚ್ಚಿಗೆ ಹಾಕಿದರೆ ಅದರ ಬೆನ್ನು ಮುರಿಯಲಾರದು ಎಂದು ನೆನೆಸಿದರೆ ದೊಡ್ಡ ಎತ್ತು ತಿಂದು ಆ ಭಾರವನ್ನು ಸುಮ್ಮನೆ ಹೊತ್ತು ಮಗ್ಗರಿಸುತ್ತ ನಡೆಯುವ ಶಕ್ತಿಯಲ್ಲ ಎಂಬ ಭಾವವನ್ನು ಕಳೆದ ಮದ್ರಾಸು ನ್ಯಾಯವಿಧಾಯಕ ಸಭೆಯ ಅಧಿವೇಶನವು ಸರಿಯಾಗಿ ವ್ಯಕ್ತಗೊಳಿಸಿದೆ.

ಮದ್ರಾಸು ಸಂಸ್ಥಾನ ಮುಂಬಯಿ ಸಂಸ್ಥಾನಗಳಲ್ಲಿ ರೈತವಾರಿ ಪದ್ಧತಿಯು ನಡೆಯುತ್ತಿದೆ. ಹೆಚ್ಚು ಪ್ರತಿ ವರ್ಷವೂ ಈ ಸೆಟ್ಲ್‌ಮೆಂಟಿನ ಕ್ರಮಗಳಿಂದ ಜಮೀನ ಕಂದಾಯವು ಏರುತ್ತಲೇ ಇದೆ. ಆದರೆ ಮುಂಬಯಿ ಸಂಸ್ಥಾನದಲ್ಲಿ ಮದ್ರಾಸಿಗಿಂತಲೂ ಖರ್ಚಿನ ದಾಮಾಶಯವು ಮೊದಲೇ ಅಧಿಕ ಇರುವುದರಿಂದಲೂ ಬಂಗಾಳ ಸಂಸ್ಥಾನದಲ್ಲಿ ಜಮೀನ ದಾರಿ ಜಮೀನುಗಳಿಗೆ ಕಾಯಂ ಕಂದಾಯವೇ ಜಾರಿಯಲ್ಲಿರುವುದರಿಂದಲೂ ಮುಂಬಯಿ ಮತ್ತು ಬಂಗಾಳಗಳಿಗೆ ರಿಯಾಯಿತಿ ಮಾಡಿ ಭಾರದ ಅಧಿಕಾಂಶವನ್ನು ಮದ್ರಾಸಿನ ಮೇಲೆ ಹೊರಿಸುವುದು ಹಾಗಲವಾಡಿ ಸಂಸ್ಥಾನದ ತೀರ್ಮಾನವಾಗುತ್ತದೆಂದು ಹಿಂದೆ ಹೇಳಿದೆವು.

ಮದ್ರಾಸಿನಲ್ಲಿ ಸಲರಿ ಕಮ್ಮಿಟಿಯ ಸೂಚನೆ ಮೇರೆಗೆ ಸಂಬಳದ ದರಗಳನ್ನು ಕಾಯಮವಾಗಿ ಹೆಚ್ಚಿಸಲಿಕ್ಕೂ ನೂತನವಾಗಿ ಏರ್ಪಡಿಸಿದ ಇನ್ನೂ ಬಾಲ್ಯಾವಸ್ಥೆಯಲ್ಲಿದ್ದ ಫಿಶರೀಸ್ ಕೃಷಿ ಸಹಕಾರ ಕೈಗಾರಿಕೆ ಇಲಾಖೆಗಳನ್ನು ಪುಷ್ಟಿಗೊಳಿಸಲಿಕ್ಕೂ ಆರೋಗ್ಯ ವೈದ್ಯ ಸೌಕರ್ಯಗಳನ್ನು ಹೆಚ್ಚಿಸಲಿಕ್ಕೂ ಶುದ್ಧ ನೀರಿನ ಪುರವಣಿಯನ್ನು ಮಾಡಿಕೊಳ್ಳಲಿಕ್ಕೂ ಹೇರಳ ಹಣವು ಬೇಕಾಗಿದೆ. ಈ ಇಲಾಖೆಗಳನ್ನು ನಿರ್ಲಕ್ಷ್ಯತನಾವಸ್ಥೆಯಲ್ಲಿ ಇರಗೊಡಿಸಿದರೆ ಈಗ ವೆಚ್ಚಮಾಡುವ ಹಣವೂ ದುರ್ವ್ಯಯವಾದಂತೆ ಆದೀತು. ಬಂಗಾಳ ಮತ್ತು ಮುಂಬಯಿ ತೀರಾ ಕೃಷಿಯಿಂದ ಜೀವಿಸುವ ಸಂಸ್ಥಾನಗಳಲ್ಲ. ವ್ಯಾಪಾರ ಕೈಗಾರಿಕೆ ಅಲ್ಲಿ ಈಗಲೇ ವೃದ್ಧಿಗೆ ಬಂದಿದೆ ಮತ್ತು ಹಿಂದಿನ ಸಂಚಿಕೆಗಳಲ್ಲಿ ಕಾಣಿಸಿದಂತೆ ನೂತನ ಕಂಪೆನಿಗಳು ಈ ಎರಡು ಸಂಸ್ಥಾನಗಳಲ್ಲಿ ಜನ್ಮವೆತ್ತಿದ ಹಾಗೆ ಬೇರೆ ಸಂಸ್ಥಾನಗಳಲ್ಲಿ ಕಾಣಿಸಿಕೊಳ್ಳಲಿಲ್ಲ. ಅಲ್ಲಿ ಹೇರಳ ಹಣ ಜಮೆ ಇದೆ ಎಂಬುದು ಈ ಕಂಪೆನಿಗಳ ಸ್ಥಾಪನೆಯಿಂದಲೇ ಸ್ಪಷ್ಟವಾಗುತ್ತಿದೆ. ವೃದ್ಧಿಗೆ ಈಗಲೇ ಬಂದಿರುವ ಸಂಸ್ಥಾನಗಳನ್ನು ಚಿಲ್ಲರೆ ವಂತಿಗೆಯಿಂದ ಸುಧಾರಿಸುವುದೆಂದರೆ ಹೆಚ್ಚಿಗೆ ಹೊರಿಸಿದರೆ ಅಲ್ಲಿ ಗಲಾಟೆ ಎದ್ದೀತು ಎಂದು ಕಮ್ಮಿಟಿಯವರು ಅಭಿಪ್ರಾಯಪಟ್ಟಿದ್ದಾರೆ ಎಂದು ಅರ್ಥವಾಗುತ್ತದೆ.

ಇದರಲ್ಲಿ ಇನ್ನೊಂದು ವಿಚಾರವೂ ಇದೆ. ಇಂಡಿಯಾ ಸರಕಾರಕ್ಕೆ ಈ ವಂತಿಗೆ ತಿಲಕನ ಬಗ್ಗೆ ಬೇರೆ ಬೇರೆ ಸಂಸ್ಥಾನಗಳು ತೆರಬೇಕೆಂದು ನಿರ್ಧಾರವನ್ನು ಕಮ್ಮಿಟಿಯವರು ಮಾಡುವಾಗ ಈ ಮೊದಲೇ ಆಯಾ ಸಂಸ್ಥಾನದಲ್ಲಿ ಹಿಂದಿನ ಶಿಲಕು ಎಷ್ಟಿದೆ ಎಂದು ವಿಚಾರ ಮಾಡಬೇಕಿತ್ತು. ಮದ್ರಾಸು ಸಂಸ್ಥಾನದಲ್ಲಿ ೧೯೨೦—೨೧ನೆ ವರ್ಷಾರಂಭದಲ್ಲಿ ಬರೆ ೯೦ ಲಕ್ಷ ರೂಪಾಯಿ ಶಿಲಕು ಉಳಿಯಬಹುದೆಂದು ಈ ವರ್ಷದ ಜಮಾ ಖರ್ಚಿನ ಅಂದಾಜು ಪಟ್ಟಿಯಿಂದ ತಿಳಿಯುತ್ತದೆ. ಈ ವರ್ಷದ ಆದಿಯಲ್ಲಿ ಯುದ್ಧ ಕಾಲದಲ್ಲಿ ಖರ್ಚು ಮಾಡದ ದೆಸೆಯಿಂದ ಈ ಶಿಲಕು ಸುಮಾರು ೨೪೦ ಲಕ್ಷವಾಗಿತ್ತು. ಆದರೆ ಬಂಗಾಳ ಮತ್ತು ಮುಂಬಯಿ ಸಂಸ್ಥಾನಗಳಲ್ಲಿ ಈ ಬಗೆಯ ಪ್ರಾಕು ಶಿಲಕು ೩೦೦ ಲಕ್ಷಕ್ಕೆ ಮಿಕ್ಕಿ ಇದೆ ಎಂದು ಟೈಮ್ಸ್ ಪತ್ರಿಕಾರನು ಹೇಳುತ್ತಾನೆ. ಆಗ ಮದ್ರಾಸಿಗೆ ಮುಂದೆ ಖರ್ಚಿನ ತಗಾದೆಯು ಹೆಚ್ಚಿದ್ದಾಗ ಅದರಿಂದ ನ್ಯಾಯವಾಗಿ ಸಿಗಬೇಕಾದ ಮುನಾಫೆಯನ್ನು ಕಸುಕೊಳ್ಳುವುದು ಎಂದೆಂದಿಗೂ ಸರಿಯಾಗಲಾರದು.

ಇಷ್ಟೇ ಅಲ್ಲ. ಈ ಹಂಚಿಕೆಯಲ್ಲಿ ವರಿಷ್ಠ ಸರಕಾರಕ್ಕೆ ವರ್ತಮಾನ ಸಾಲುವಷ್ಟು ಶಿಲಕು ಯಾವಾಗ ಭರ್ತಿಯಾದೀತು, ಯಾವಾಗ ಈ ಪ್ರಾಂತಿಕ ಸರಕಾರಗಳ ವಂತಿಗೆಯ ವಿಚಾರವು ನಿಂತು ಹೋದೀತು ಎಂದು ಸ್ಪಷ್ಟವಾದರೂ [illegible]

[illegible]

ಉಪನ್ಯಾಸಸಂಗ್ರಹಗಳು:—

ಸಂಸ್ಕೃತ [illegible] ೫
[illegible] . . . . . ”
[illegible] . . . . . ”
ಸ್ವದೇಶ ವರ್ತಮಾನ . . . . . ”
[illegible] ವರ ಹಂಚಿಕೆ ೫೬
ಉತ್ತರ ಕನ್ನಡಾ ಜಿಲ್ಲೆಯ ಪರಿಷತ್ತು ಸರ್ ನಾರಾಯಣ ಗಣೇಶ ಚಂದಾವರಕರ ಇವರ ಭಾಷಣ ೮
[illegible] ಹಿಂದೂ ಎಲಿಮೆಂಟರಿ ಶಾಲೆಯ ಪ್ರತಿಷ್ಠೆಯ ಸಮಾರಂಭ
[illegible] ಪುಟಿಂಗು . . . ೧
[illegible] ಬ್ರಾಹ್ಮಣ. (ಪದ್ಯ) . . ೮A
[illegible] ಕರ್ನಾಟಕ ಪರಿಷತ್ತಿನಲಿ ಅಧ್ಯಕ್ಷರು ಮಾಡಿದಭಾಷಣ . ”
ದಿವಂಗತರಾದ ಬಾಲ ದೂಪ ರೈಗಳವರ ಸ್ಮಾರಕ ಫಂಡು ”

ಸ್ವದೇಶಾಭಿಮಾನಿ.

ಶಕ ೧೮೪೧ ಜ್ಯೇಷ್ಠ ಬ|| ೯ ಶುಕ್ರವಾರ

ಸ್ಫುಟ ವಿಚಾರಗಳು.

೧. ಬಾದಶಹರ ಜನ್ಮದಿನದ ಸಲುವಾಗಿ ಕೊಡೋಣಾದ ಬಹುಮಾನಗಳಲ್ಲಿ ಈ ಸಾರಿ ನಮ್ಮ ಜಿಲ್ಲೆಗೆ ಒಂದೇ ಬಹುಮಾನವು ಸಿಕ್ಕಿದೆ. ಉಡುಪಿಯ ಖಾನಸಾಹೇಬ ನಾಮದಾರ ಹಾಜಿ ಅಬ್ದುಲ್ಲಾ ಸಾಹೇಬರಿಗೆ ಖಾನಬಹದೂರ ಪದವಿಯು ಕೊಡಲ್ಪಟ್ಟದೆ. ಇದು ತುಂಬಾ ಸಂತೋಷದ ಮಾತು ಹಾಜಿ ಅಬ್ದುಲ್ಲಾ ಸಾಹೇಬರು ದಕ್ಷಿಣ ಕನ್ನಡದಲ್ಲಿ ಕಳೆದ ವರ್ಷ ಅಕ್ಕಿಯ ಬರಗಾಲವು ಎಂದು ಬಡ ಜನರೂ ಇತರರೂ ಗೋಳಾಡುತಿದ್ದಾಗ ಅಕ್ಕಿಯ ವಿಲೇವಾರಿಯನ್ನು ಮಾಡುವುದರಲ್ಲಿ ದಕ್ಷತೆಯಿಂದ ಪ್ರಯತ್ನ ಪಟ್ಟಿದ್ದರು ಅದಲ್ಲದೆ ಇವರು ಉಡುಪಿ ಕುಂದಾಪುರ ತಾಲೂಕು ಬೋರ್ಡಿನ ಅಧ್ಯಕ್ಷರಾಗಿದ್ದಾಗಲೂ ಸರಕಾರ ಮತ್ತು ಪ್ರಜೆಗಳ ಸೇವೆಯನ್ನು ಉತ್ತಮ ರೀತಿಯಲ್ಲಿ ಮಾಡಿದ್ದರು ಈ ಮೇರೆಗೆ "ನೃಪತಿ ಜನಪದ ಕಾರ್ಯ ಕರ್ತೃರಾದ" ಖಾನ ಸಾಹೇಬ ಅಬ್ದುಲ್ಲಾ ಸಾಹೇಬರಿಗೆ ಸರಕಾರವು ಖಾನ ಬಹದೂರ ಪದವಿಯಿಂದ ಗೌರವಿಸಿದ್ದು ಅದರ ಗುಣಜ್ಞತೆಗೂ ಸಾಹೇಬರ ಗುಣಿತ್ವಕ್ಕೂ ಅನುರೂಪವಾಗಿಯೆ ಇದೆ ಬಹುಮಾನದ ಪದವಿಯನು ಹೊಂದಿದ ಬಗ್ಗೆ ನಾವು ಅಬ್ದುಲ್ಲಾ ಸಾಹೇಬರನ್ನು ಅಭಿನಂದಿಸುವೆವು ಮತ್ತು ಖಾನಬಹದೂರ ಅಬ್ದುಲ್ಲಾ ಸಾಹೇಬರಿಗೆ ಈ ನೂತನ ಬಹುಮಾನವನ್ನು ಅನುಭವಿಸಲು ಹಾಗು ಮೊದಲಿನಿಂದಲೆ ಅಭ್ಯಾಸದಲ್ಲಿ ಬಿದ್ದಿರುವ ಲೋಕ ಸೇವೆಯನ್ನು ಮಾಡಲು ದೇವರು ಅವರಿಗೆ ಆಯುರಾರೋಗ್ಯವನ್ನು ದಯಪಾಲಿಸಲಿ ಎಂದು ಹಾರೈಸುವೆವು

೨ ಲಾಹೋರಿನ 'ಸಿಯಾಸತ ಎಂಬ ದೈನಿಕ ಪತ್ರಕರ್ತರಾದ ಮಿ ಹಬಿಬ್ ಎಂಬವರು ಇನ್ನು ಮುಂದೆ ಅಲ್ಲಿಯ ಡೆಪ್ಯುಟಿ ಕಮಿಷನರರ "ಖಾಸಗಿ ಭೇಟಿಗ' ಬರುವುದಿಲ್ಲವೆಂದು ಜಾಹೀರ ಪಡಿಸಿದ್ದಾರೆ ಅಧಿಕಾರಿಗಳ ಭೇಟಿಯನ್ನು ಹಾರೈಯಿಸಿಕೊಂಡಿರುವವರೂ, ಅವರ ಕರಾಂದೋಲನದಿಂದ ತಮ್ಮನ್ನು ಕೃತಾರ್ಥರನ್ನಾಗಿ ಭಾವಿಸಿಕೊಳ್ಳುವವರೂ ಅನೇಕರಿರುವಾಗ ಮಿ ಹಬೀಬರು ಮಾತ್ರ ಡೆಪ್ಯುಟಿ ಕಮಿಷನರುಗಳ ಭೇಟಿಯನ್ನು ಯಾಕೆ ನಿರಾಕರಿಸುತ್ತಾರೆ ಎಂದು ನಮ್ಮ ಅನೇಕ ವಾಚಕರಿಗೆ ಒಂದು ಜಿಜ್ಞಾಸೆ ಬರುವ ಸಂಭವವಿದೆ. ಅದ್ದರಿಂದ ಇದರ ಪೂರ್ವ ವೃತ್ತವನ್ನು ಅವರ ಮುಂದೆ ತುಸು ಇಡೋಣ. 'ಸಿಯಾಸತ' ಮತ್ತು ಇತರ ಇಬ್ಬರು ಮೂವರು ದೈನಿಕ ಪತ್ರಿಕಾಕಾರರು ಸರಕಾರ ಸಂಬಂಧದ ಒಂದು ಬಾತಮಿಯನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು ಈ ಬಾತಮಿಯು ಪ್ರತಾರಣಾತ್ಮಕವಾದ್ದೆಂದು ಸರಕಾರವು ಹೇಳುತ್ತಿದೆ. ಸರಕಾರ ದೃಷ್ಟಿಯಿಂದ ಪ್ರತಾರಣಾತ್ಮಕವಾದ ಇಂಥ ಬಾತಮಿಯನ್ನು ಪ್ರಕಟಿಸಿದ ಬಗ್ಗೆ ಅಲ್ಲಿಯ ಡೆಪ್ಯುಟಿ ಕಮಿಷನರರು ಈ ಪತ್ರಿಕೆಗಳ ಸಂಪಾದಕರನ್ನು ಕರೆಯಿಸಿ ಅವರ ಮೇಲೆ ಸಿಟ್ಟಿದ್ದು ಕೊನೆಗೆ "ಖಳ" ಮತ್ತು "ಬದಮಾಷ್" ಈ ಶಬ್ದಗಳಿಂದ ಆ ಸಂಪಾದಕರನ್ನು ಬೈದರು. ಕೆಲವು ನಿಮಿಷಗಳು ದಾಟಿದ ಮೇಲೆ ಸಾಹೇಬರವರು ಶುದ್ಧಿಯ ಮೇಲೆ ಬಂದು ತಮ್ಮ ದುರುಕ್ತಿಯ ಬಗ್ಗೆ ಪಶ್ಚಾತ್ತಾಪವನ್ನು ವ್ಯಕ್ತಗೊಳಿಸಿ [illegible] ಉಪಯೋಗಿಸಿದ ಅಪಶಬ್ದಗಳನ್ನು [illegible]

[illegible] ಮಿ [illegible] ತ್ತಾದರೆ, ಅಕಾರಣವಾಗಿ ಬೈಯುವ ಅಭ್ಯಾಸವು ಈ ಸಾಹೇಬರಲ್ಲಿ ಇರುವುದರಿಂದ ಇನ್ನು ಮುಂದೆ ಇವರು ಬೈಯುವ ಮಾತನ್ನು ಮಾಡಲಿಕ್ಕಿಲ್ಲವೆಂದು ಹೇಗೆ ಹೇಳಬಹುದು! ಅದ್ದರಿಂದ ಡೆ. ಕ. ಸಾಹೇಬರ ಭೇಟಿ ಪಡಕೊಳ್ಳುವುದನ್ನು ಅವರು ನಿರಾಕರಿಸಿದ್ದಾರೆ. ಸಿಯಾಸತ ಪತ್ರದ ಸಂಪಾದಕರಾದ ಮಿ. ಏಸ್ ಎಮ್. ಹಬೀಬರು ಈ ಮೇರೆಗೆ ದೊರೆಗಳ ಭೇಟಿಗೆ ಹೋಗುವುದನ್ನು ನಿರಾಕರಿಸಿದ್ದು ಯೋಗ್ಯವೆ, ಆದರೂ ದೊರೆಗಳು ಬೈಯುವ ಅಭ್ಯಾಸವನ್ನು ಮಾಡಿಕೊಂಡಿದ್ದು ಮಾತ್ರ ಯೋಗ್ಯವಲ್ಲವೆಂದು ಯಾರೂ ಹೇಳಬಹುದಾಗಿದೆ ಪತ್ರಕರ್ತರಂಥ ಸನ್ಮಾನ್ಯಗೃಹಸ್ಥರನ್ನು ಕರೆಯಿಸಿ ಖಳ, ಬದಮಾಷ, ಇತ್ಯಾದಿ ದುಃಶಬ್ದಗಳನ್ನು ಉಪಯೋಗಿಸುವುದು ಯಾರ ಶೀಲಕ್ಕೂ, ಯಾರ ಅಧಿಕಾರಕ್ಕೂ ಒಪ್ಪುವುದಿಲ್ಲ. ಸರಕಾರಿ ಅಧಿಕಾರಿಗಳೂ ಜನತೆಯ ಮುಖಂಡರೂ ಪರಸ್ಪರ ಸಹಕಾರ್ಯವನ್ನು ಮಾಡಬೇಕೆಂದು ಒಂದು ಕಡೆಯಲ್ಲಿ ಹೇಳೋಣ, ಮತ್ತು ಇನ್ನೊಂದು ಕಡೆಯಲ್ಲಿ ಲಾಹೋರಿನ ಡಿ. ಕಮಿಷನರುಗಳಂಥ ಅಧಿಕಾರಿಗಳು ಲೋಕಮತ ಪ್ರದರ್ಶಕರಾದ ಪತ್ರಸಂಪಾದಕರನ್ನು "ಬದಮಾಷ್" ಎಂದು ಹರಕು ಬಾಯಿಂದ ಬೈಯೋಣ, ಇದು ಕೇವಲ ಅಸಂಗತವಲ್ಲವೆ? ಇಂಥ ಅಸಂಗತತೆಯು ಕೂಡ ಈಗಿನ ಲೋಕರಕ್ಷಕರ ದರಬಾರಿನಲ್ಲಿ ನಡೆದುಹೋಗುತ್ತದೆ! ಈಗ ಸಾಮಾನ್ಯವಾಗಿ 'ಹಿಂದಿ' ಪತ್ರಕಾರರು ಅಧಿಕಾರಿಗಳ ಪ್ರೀತಿಗೆ ಪಾತ್ರರಾಗಿರುವುದಿಲ್ಲ, ಇದು ನಿಜ ಪರಂತು ಆ ಕಾರಣದಿಂದ ಅವರನ್ನು ಖಾಸಗಿಯಾಗಿ ಕರತರಿಸಿ ಅಪಶಬ್ದಗಳಿಂದ ಸಂಭಾವಿಸುವುದು ಸುಧಾರಣೆಯ ಮತ್ತು ನಾಗರಿಕತೆಯ ಅಭಿಮಾನವನ್ನು ಹೊತ್ತುಕೊಂಡ ಅಧಿಕಾರಿಗಳಿಗೆ ನಿಜವಾಗಿ ಲಜ್ಜಾಸ್ಪದವಾಗಿದೆ

೩. ಪೌರಸ್ತ್ಯ ರಾಷ್ಟ್ರಗಳಲ್ಲಿ ಜಪಾನದೇಶವು ಅಗ್ರೇಸರವಾದದ್ದೆಂಬುದು ಸರ್ವಸಮ್ಮತವಾದ ವಿಷಯವೆ ಸರಿ ಶಿಕ್ಷಣ ಉದ್ಯೋಗ, ರಾಜಕೀಯಸತ್ತೆ, ಸಂಪತ್ತಿ, ಕಲಾಕೌಶಲ್ಯ ಇತ್ಯಾದಿ ರಾಷ್ಟ್ರಪೋಷಕ ವಿಷಯಗಳು ಜಪಾನಿನಲ್ಲಿ ಈ ಹೊತ್ತು ನಾನು, ನಾನು' ಎಂದು ಮೆರೆಯುತ್ತಿವೆ ಮತ್ತು ಅಂಥ ವಿಷಯಗಳು ಎಲ್ಲ ಅಹಮಹಮಿಕೆಯಿಂದ ಅಗ್ರೇಸರತ್ವವನ್ನು ಹೊಂದುವವೊ ಆ ದೇಶವು ವೈಭವದ ಶಿಖರವನ್ನೇರಿದರೆ ಅದರಲ್ಲಿ ಆಶ್ಚರ್ಯವುಂಟೆ? ಜಪಾನಿಗೆ ಇಂಥ ಅಭ್ಯುದಯವು ಹೇಗೆ ಪ್ರಾಪ್ತವಾಯಿತು, ಮತ್ತು ಅದರಿಂದ ನಾವು ಕಲಿಯತಕ್ಕ ಸಾರವು ಯಾವುದು ಎಂಬುದನ್ನು ಪ್ರೊ. ಗೋಡಬೋಲೇ ಎಂಬವರು ವಸಂತವ್ಯಾಖ್ಯಾನ ಮಾಲೆಯಲ್ಲಿ ವಿಸ್ತಾರವಾಗಿ ವಿವೇಚಿಸಿದ್ದಾರೆ. ಅವರ ಉಪನ್ಯಾಸವು ಮನನೀಯವಾಗಿದೆ. ಅವರ ಅಂಬೋಣದ ಮುಖ್ಯ ಸಾರಾಂಶವೇನೆಂದರೆ—ಜಪಾನ ದೇಶದಲ್ಲಿ ಧರ್ಮಪ್ರಸಾರದ ನೆವವನ್ನು ತೋರಿಸಿ ಸ್ವದೇಶದ ವ್ಯಾಪಾರವನ್ನು ಪಸರಿಸುವುದಕ್ಕಾಗಿ ಯುರೋಪಿಯನ್ ಮಿಷನರಿಗಳು ಪ್ರಥಮತಃ ಪ್ರವೇಶಿಸಿದ್ದರು ಆದರೆ ಜಪಾನ ಸರಕಾರವು ಅವರ ಈ ಮರ್ಮವನ್ನು ತಿಳಿದು, ಕೂಡಲೆ ಒಂದೇ ಹುಕುಮಿನಿಂದ, ಅವರನ್ನು ದೇಶದ ಹೊರಗೆ ತಳ್ಳಿತು ಈ ರೀತಿಯಿಂದ ಮಿಕ್ಕ ರಾಷ್ಟ್ರಗಳೊಡನೆ ಸಂಬಂಧವನ್ನಿಡದೆ ಏಕಾಕಿಯಾಗಿ ನಿಂತ ಈ ಜಪಾನಿನೊಡನೆ ರಾಜಕೀಯ ಸ್ನೇಹ ಸಂಬಂಧವನ್ನೂ, ವ್ಯಾಪಾರ ಸಂಬಂಧವನ್ನೂ ಬೆಳೆಸುವುದಕ್ಕಾಗಿ ಅಮೇರಿಕೆಯು ಕೊಮೊಡೂರ ಪೆರಿ ಇವನನ್ನು ಆರು ಯುದ್ಧ ನಾವೆಗಳನ್ನು ಸಂಗಡ ಕೊಟ್ಟು ಜಪಾನಿಗೆ ಕಳುಹಿಸಿತು ಆಗ ಉಪಾಯವಿಲ್ಲದ ಜಪಾನಿಗೆ ಆ ಅಮೇರಿಕನ್ ಗೃಹಸ್ಥನ ವಿಜ್ಞಾಪನೆಯನ್ನು ಮಾನ್ಯ ಮಾಡಿ ಅಮೇರಿಕೆಗೆ ತನ್ನಲ್ಲಿ ವ್ಯಾಪಾರಕ್ಕೆ ಇಂಬು ಕೊಡಬೇಕಾಗಿ ಬಂತು ಆದರೂ ಇದೇ ಸಂದರ್ಭದಲ್ಲಿ ಅದಕ್ಕೆ ತನ್ನ ದುರ್ಬಲತೆಯು ತಿಳಿವು ಚೆನ್ನಾಗಿ ತಿಳಿಯಹತ್ತಿ ತನ್ನ ಸುಧಾರಣೆಯನ್ನು ಮಾಡತೊಡಗಿತು ೧೮೬೮ನೆಯ ಇಸವಿಯಲ್ಲಿ ಅದು ತನ್ನ ರಾಜನನ್ನು ಹೆಸರಿಗ ತಕ್ಕ ಇಟ್ಟುಕೊಂಡು ಸಂಪೂರ್ಣವಾದ ಲೋಕಸತ್ತಾಕ ರಾಜ್ಯವನ್ನು ಸ್ಥಾಪಿಸಿತು. ಜಪಾನಿನಲ್ಲಿ ಈ ಮೇರೆಗೆ ಲೋಕಸತ್ತೆಯ ಉದಯವು ಆದ ಕೂಡಲೆ ಎಲ್ಲ ಭಾಗಗಳಿಂದ ಹಾಗು ಎಲ್ಲ ಅಂಗಗಳಿಂದ ಅದರ ಅಭ್ಯುದಯವು ಆಗತೊಡಗಿತು ಜಪಾನಿನ ಅಭ್ಯುದಯದ ಈ ಇತಿಹಾಸದಲ್ಲಿ ವಿಶೇಷ ಮಹತ್ವದ ಸಂಗತಿಯು ಯಾವುದೆಂದರೆ ಅದು ಪ್ರಾಥಮಿಕ ಶಿಕ್ಷಣದ ಪ್ರಶ್ನೆಯನ್ನು ಮೊದಲು ಕೈಕೊಂಡಿತು ಈ ನವೀನ ಸರಕಾರವು ದೇಶದೊಳಗಿನ ಬರೆ ಸಾಕ್ಷರತೆಯನ್ನು ಮಾತ್ರ ಹೆಚ್ಚಿಸಿ ಸುಮ್ಮನೆ ಕೂಡ್ರಲಿಲ್ಲ, ಆದರೆ ಆಗಾಗ್ಯ ತಜ್ಞರ ಕಮಿಟಿಗಳನ್ನು ನೇಮಿಸಿ ಅವುಗಳನ್ನು ಯುರೋಪದೊಳಗಿನ ಸುಧಾರಿಸಿದ ದೇಶಗಳಲ್ಲೂ ಅಮೇರಿಕೆಯಲ್ಲೂ ಕಳುಹಿಸಿ, ಅಲ್ಲಿಯ ಶಿಕ್ಷಣ ಕ್ರಮದ ಧೋರಣವನ್ನು ಅದು ತನ್ನಲ್ಲಿಯೂ ಪ್ರಾರಂಭಿಸಿತು, ಪಾಶ್ಚಾತ್ಯದೇಶಗಳಲ್ಲಿರುವಂತೆಯೆ ಔದ್ಯೋಗಿಕ ಶಾಲೆಗಳನ್ನು ಸಹ ಉಪಕ್ರಮಿಸಿತು ಜಪಾನಿನ ಈ ಎಲ್ಲ ಪ್ರಯತ್ನದ ಪರ್ಯವಸಾನವು ಈ ಹೊತ್ತು ಅದರ ಅಗ್ರೇಸರತ್ವದಲ್ಲಿ ಉಂಟಾಗಿದೆ ಸುಧಾರಿಸಿದ ಮತ್ತು ಬಲಿಷ್ಠ ರಾಷ್ಟ್ರಮಾಲಿಕೆಯಲ್ಲಿ ಜಪಾನು ಈ ಹೊತ್ತು ಶಿಖಾಮಣಿಯ ಸ್ಥಾನವನ್ನು ಈ ಎಲ್ಲ ಪ್ರಯತ್ನಗಳ ದೆಸೆಯಿಂದಲೆ ಹೊಂದಿದೆ ಎಂದು ಪ್ರೊ. ಗೋಡಬೋಲೆಯವರು ಉತ್ತಮ ರೀತಿಯಿಂದ ನಿರೂಪಿಸಿದ್ದಾರೆ. ಹಿಂದುಸ್ಥಾನದ ಉನ್ನತಿಗಾಗಿ ಹೆಣಗಾಡುವ ಹಿಂದಿಗಳು ಜಪಾನಿನ ಉದ್ಯೋಗಶೀಲತೆಯನ್ನು ಪರಿಶೀಲಿಸಬೇಕೆಂಬುದರಲ್ಲಿ ಸಂದೇಹವಿಲ್ಲ.

೪. ಮೊದನೇರಿವ್ಯೂ ಪತ್ರಿಕೆಯು ಈ ತಿಂಗಳಿನ ಸಂಚಿಕೆಯಲ್ಲಿ [illegible]

[illegible] ದಂಗೆಯ ಆರೋಪವಿಟ್ಟು ಅವರನ್ನು [illegible] ನಡೆದ ಮಾಹಿತಿಯನ್ನು [illegible] ಅಂಬೋಣವನ್ನು ನೋಡಿದಲ್ಲಿ [illegible] ಹಿಂದಿಗಳ ಮೇಲೆ ದಂಗೆಯ ಆರೋಪಣೆಯನ್ನು [illegible] ಹಾಗು ಇದಕ್ಕೆ ಮೂಲಕಾರಣ ಯಾರು ಇತ್ಯಾದಿ ವಿಷಯಗಳು ಸ್ಪಷ್ಟವಾಗಿ ಗೊತ್ತಾಗುತ್ತವೆ. ಫೀಜಿಯಲ್ಲಿ ಜೀನಸುಗಳ ಧಾರಣೆಯು ಸೇಕಡಾ ೫೦ರಿಂದ ೩೦೦ ವರೆಗೆ ಏರಿದ್ದಾಗಲೂ ಹಿಂದಿ ಕೂಲಿಯಾಳಿಗೆ ಬರೆ ೨ ಶಿಲಿಂಗು ದಿನ ಸಂಬಳವು ಸಿಗುತಿತ್ತು. ಅಂಥ ತುಟ್ಟಿಯ ದಿವಸಗಳಲ್ಲಿ ಈ ಸಂಬಳದಿಂದ ಬರೆ ಪ್ರಾಣಧಾರಣಕ್ಕಾಗಿ ಬಂದಿಷ್ಟು ಹೊಟ್ಟೆಗೆ ತಿನ್ನೋಣವೆಂದರೂ ಸಾಧ್ಯವಿದ್ದಿಲ್ಲ, ಅಲ್ಲಿಯ "ಕೊಲೊನಿಯಲ್ ಶುಗರ್ ರಿಫಾಯ್ನಿಂಗ" ಕಂಪನಿಗೆ ವಸ್ತುತಃ ಈ ಕೂಲಿಯಾಳುಗಳಿಂದ ತುಂಬಾ ಪ್ರಯೋಜನವಾಗುತಿತ್ತು. ಆದರೂ ಅವರ ಮುಖದ ಮೇಲೆ ಒಂದಿಷ್ಟು ಚೂರು ಬಿಸಾಡುವುದಕ್ಕಿಂತ ಅದು ಹೆಚ್ಚಿನ ಯಾವ ಕೆಲಸವನ್ನೂ ಮಾಡಲಿಲ್ಲ. ಬೇರೆ ಯುರೋಪಿನ ಕಂಪನಿಗಳೂ ಕೂಡ ಇವರ ದುಃಸ್ಥಿತಿಯ ಕಡೆಗೂ ನೋಡಿಲ್ಲ, ಇಲ್ಲವೆ ಅವರ ಕೇಳಿಕೆಯ ಕಡೆಗೂ ಕಿವಿಗೊಟ್ಟಿಲ್ಲ. ಅಲ್ಲದೆ ಅಲ್ಲಿಯ ಸರಕಾರವಾದರೂ ಈ ಕೂಲಿಗಳಿಗೆ ಸಹಾಯ ಕೊಡಲು ಅಶಕ್ತವಾಗಿತ್ತು ಎನ್ನಬಹುದು ಆದರೂ ಇವರ ಮುಷ್ಕರವನ್ನು ಮುರಿಯುವ ಉದ್ದೇಶದಿಂದ ಅದು ಅವರ ಕೈಯಲ್ಲಿರುವ ಕೋಲುಗಳನ್ನೂ ಕಸಕೊಳ್ಳಲಿಕ್ಕೂ, ಗುಂಪುಗುಂಪಾಗಿ ಇರದಂತೆ ಕಾನೂನುಗಳನ್ನು ಮಾಡಲಿಕ್ಕೂ, ಐದು ಜನರಿಗಿಂತ ಹೆಚ್ಚು ಜನರು ಏಕತ್ರ ಇರಬಾರದೆಂದು ವಿಧಿಸಲಿಕ್ಕೂ, ಅಷ್ಟೆ ಇಲ್ಲದೆ ಮನೆಯಿಂದ ಹೊರಗೆ ಹೊರಡಬಾರದೆಂದು ಕಟ್ಟುಮಾಡಲಿಕ್ಕೂ ತಯಾರಾಯಿತು ಇಷ್ಟು ಅಲ್ಲ, ಅಲ್ಲಿ ಮೂಲನಿವಾಸಿಗಳಾದ ಕಾಡು ಜನರು ಸಹ ಇವರ ಮೇಲೆ ಕ್ರೂರತನವನ್ನು ನಡಿಸತೊಡಗಿದರು ಇಷ್ಟರಿಂದಲೇ ಈ ವಿಘ್ನಸಂತೋಷಿಗಳಿಗೆ ಸಮಾಧಾನವಾಗದೆ, ಯುದ್ಧಭೂಮಿಯಿಂದ ನಿವೃತ್ತರಾಗಿ ಬಂದ ನಾವಿಕರನ್ನೂ, ಸೋಲ್ಜರುಗಳನ್ನೂ ನಗರ ಸಂರಕ್ಷಣದ ನೆವದಿಂದ ಬೀದಿಬೀದಿಗಳಲ್ಲಿ ನಿಲ್ಲಿಸಿದರಿಂದ ಅವರು ಪಶುವೃತ್ತಿಯಿಂದ ಹಿಂದಿ ಸ್ತ್ರೀಯರ ಅಪಮಾನವನ್ನು ಮಾಡತೊಡಗಿದರು ಇದರ ಹೇತುವೇನೆಂದರೆ, ಹಿಂದಿಗಳು ಕ್ಷುಬ್ಧರಾಗಿ ಏನಾದರೂ ಅತ್ಯಾಚಾರಗಳನ್ನು ನಡಿಸಲಿ, ಹಿಂದಿಗಳ ಕ್ಷೋಭದ ಇನ್ನಷ್ಟು ಪ್ರಯೋಜನವನ್ನು ಪಡಕೊಳ್ಳುವುದಕ್ಕಾಗಿ ಯುರೋಪಿಯನರು ಮಿ ಮಣಿಲಾಲರ ಹೆಂಡತಿಯನ್ನು ಸೆರೆಹಿಡಿದಿದೆ' ಎಂದು ಸುಳ್ಳುಸುದ್ದಿಯನ್ನು ಹಬ್ಬಿಸಿದರು ಅರ್ಥಾತ್, ಇದರಿಂದ, ಕಿಚ್ಚಿನಲ್ಲಿ ತುಪ್ಪವೆರೆದಂತಾಗಿ ಎರಡು ಕಡೆಗಳಲ್ಲಿ ಹೆಚ್ಚು ಹೆಣಗಳು ಬೀಳುವಂತೆ ಕಳೆದ ಫೆಬ್ರವರಿಯಲ್ಲಿ ಭಯಂಕರ ಪ್ರಕಾರವುಂಟಾಯಿತು ಇರಲಿ ಮಿ ಮಣಿಲಾಲರು ಬರೆದು ಕಳುಹಿಸಿದ ಈ ವಿವರಣವನ್ನು ನೋಡುವಾಗ ಅಲ್ಲಿಯ ದಂಗೆಯ ಪೂರ್ವರಂಗವು ಸರಿಯಾಗಿ ಗೊತ್ತಾಗುವುದು ಹಿಂದಿಗಳ ಮೇಲೆ ದಂಗೆಯ ಭಯಂಕರ ಆರೋಪಣೆಯನ್ನು ಹೂರಿಸಿ ಅವರನ್ನು ದಂಡನೆಗ ಗುರಿಮಾಡುವುದಕ್ಕಿಂತ ಮುಂಚೆ ಈ ಎಲ್ಲ ಸಂಗತಿಗಳ ತನಖೆಯಾಗುವುದು ಅವಶ್ಯವೆಂದು ಸದರಿ ಲೇಖಕರು ಬರೆದಿರುವರು ಅದರಂತೆ ಹಿಂದುಸ್ಥಾನದ ಲೋಕಮತವು ಅವರಿಗೆ ಅನುಕೂಲವಾದೀತೆಂದು ನಾವು ನಂಬಿದ್ದೇವೆ

೫ ಕಾಶೀಕ್ಷೇತ್ರದಲ್ಲಿ ನೆರೆದ ಒಳ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಸಾಮಾನ್ಯ ವೃತ್ತಾಂತವನ್ನು ಕಳೆದ ವಾರ ಕೊಟ್ಟಿದ್ದೇವಷ್ಟೆ ಕೊಂಗ್ರೆಸ್ ಕಮಿಟಿಯಲ್ಲಿ ಮುಖ್ಯವಾಗಿ ನಿರ್ಣಯವಾದ ಸಂಗತಿಗಳಲ್ಲಿ ಪಂಜಾಬ ಪ್ರಕರಣದ ಸಂಬಂದ ಪಾರ್ಲಿಮೆಂಟಿಗೆ ಒಂದು ಅರ್ಜಿಯನ್ನು ತಯಾರಿಸಬೇಕು, ಸರ್ ಎಮ್ ಓಡ್ವಾಯರರನ್ನು ಅವರ ಆಡಳಿತೆಯ ವಿಷಯವಾಗಿ ಪಾರ್ಲಿಮೆಂಟಿನ ವಿಚಾರಣೆಗೆ ಗುರಿಪಡಿಸಿ ಅವರ ಕೃತ್ಯಗಳಿಗೆ ಸರಿಯಾದ ನಿಷ್ಕೃತಿಯನ್ನು ಕೊಡಬೇಕೆಂದು ಆ ಅರ್ಜಿಯಲ್ಲಿ ವಿಜ್ಞಾಪಿಸಿಕೊಳ್ಳಬೇಕು, ಒ ಇಂ ಕೊ ಕಮಿಟಿಯು ಜನರಲ್ ಡಾಯರ್, ಕರ್ನಲ್ ಜೊನ್ಸನ್ ಕರ್ನಲ್ ಒಬ್ರಾಯನ್, ಮತ್ತು ಬೊಸ್‌ವರ್ಥ ಸ್ಮಿಥ್ ಇವರನ್ನು ಗ್ರೇಟ್‌ಬ್ರಿಟನ್ನಿನೊಳಗಿನ ಬಾದಶಹರ ನ್ಯಾಯಕೋರ್ಟಿನ ಮುಂದೆ ತಂದು ಅವರಿಗ ತಕ್ಕ ಶಿಕ್ಷೆಯನ್ನು ವಿಧಿಸಬೇಕೆಂದು ಠರಾವನ್ನು ಮಾಡಿದೆ ಇದಲ್ಲದೆ, ಅಪರಾಧಿಗಳಾದ ಇತರ ಅಧಿಕಾರಿಗಳ ಯೋಗ್ಯಸಮಾಚಾರವನ್ನು ತಕ್ಕೊಳ್ಳಬೇಕೆಂದು ಸೂಚಿಸಿ ಸದರಿ ಕಮಿಟಿಯು ಪಂಜಾಬ ಪ್ರಕರಣವನ್ನು ಕುರಿತು, ಹಂಟರ ಕಮಿಟಿಯ ಬಹುಮತದವರು, ಹಿಂದುಸ್ಥಾನ ಸರಕಾರ, ಭಾರತ ಮಂತ್ರಿ ಇವರೆಲ್ಲರು ಅಂಗೀಕರಿಸಿದ ಅಸಹಾನುಭೂತಿಯ ಹಾಗೂ ಲೋಕಮತದ ಕಡೆಗಿನ ದುರ್ಲಕ್ಷ್ಯದ ಧೋರಣವನ್ನು ತೀವ್ರ ಶಬ್ದಗಳಿಂದ ನಿಷೇಧಿಸಿದೆ, ಗಾಂಧಿಗಳ ಸತ್ಯಾಗ್ರಹದ ಚಳವಳದಿಂದಲೆ ಪಂಜಾಬ, ದಿಲ್ಲಿ ಮತ್ತು ಇತರ ಕಡೆಗಳಲ್ಲಿ ಅಸ್ವಾಸ್ಥ್ಯವುಂಟಾಯಿತೆಂದು ಕಮಿಟಿಯ ಬಹುಮತವು ಏನು ನೆನೆಸುತ್ತಿದೆಯೊ ಆ ಬಗ್ಗೆ ಕೂಡ ಒ. ಇಂ. ಕೊ. ಕಮಿಟಿಯು ತನ್ನ ಸ್ಪಷ್ಟವಾದ ಅಭಿಪ್ರಾಯವನ್ನು ಕೊಟ್ಟಿದೆ ಏನಂದರೆ—ಸತ್ಯಾಗ್ರಹದಿಂದ ಅಸ್ವಾಸ್ಥ್ಯವುಂಟಾಗಿದೆ ಎಂದು ಇವುಗಳಲ್ಲಿ ಪರಸ್ಪರ ಕಾರ್ಯಕಾರಣ ಭಾವವನ್ನು ಜೋಡಿಸಿದ್ದು ಅಥವಾ ಜೋಡಿಸುವುದು ಕೇವಲ ಅಸಂಗತವು ತುರ್ಕಸ್ಥಾನದೊಡನೆ ಮಾಡಿದ ಒಪ್ಪಂದದ ಶರ್ತಗಳನ್ನು ಹಿಂದಿಮುಸಲ್ಮಾನರ ಮತ್ತು ಇಡಿ ಇಸ್ಲಾಮಿನ ಸಮಾಧಾನವಾಗುವಂತೆ ಬದಲಾಯಿಸಬೇಕೆಂದು ಕೂಡ ಸದರಿ ಕಮಿಟಿಯು ಠರಾಯಿಸಿದೆ ಪಂಜಾಬ ಪ್ರಕರಣ, ಖಿಲಾಫತು, ಸುಧಾರಣಾ [illegible]

ತ್ವದ ವಿಷಯಗಳನ್ನು ಸರಿಯಾಗಿ ಚರ್ಚಿಸಿ ನಿರ್ಧರಿಸುವಂತೆ ಬರುವ ಸಪ್ಟಂಬರ ... ಕಲಕತ್ತೆಯಲ್ಲಿ ರಾಷ್ಟ್ರೀಯ ಸಭೆಯು ಖಾಸಾ ಅಧಿವೇಶನವನ್ನು ಜರಗಿಸಬೇಕೆಂದು ಕೊನೆಗೆ ನಿಶ್ಚಿತವಾಗಿ ಒಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಈ ಅಧಿವೇಶನವು ಮುಕ್ತಾಯವಾಯಿತು. ಈ ಅಧಿವೇಶನದಲ್ಲಿ ಇನ್ನೂ ಹಲವು ಪ್ರಸ್ತಾಪಗಳಿದ್ದವು. ಅವುಗಳ ಯೋಗ್ಯತೆಯನ್ನೂ ಕೂಡ ಯಥಾಪ್ರಕಾರ ತೆಕ್ಕೊಳ್ಳಲ್ಪಟ್ಟಿತೆಂದು ಪುನಃ ಹೇಳಬೇಕಾದ ಅಗತ್ಯವಿಲ್ಲ. ಅಂತು ಕಾಶೀ ಕ್ಷೇತ್ರದಲ್ಲಿ ಜರಗಿದ ಈ ಅಧಿವೇಶನವು ವಿಶೇಷ ಮತಭೇದದ ಬಿರುಗಾಳಿಯಿಲ್ಲದೆ ನೆರವೇರಿತು.

೭. ಕಾಶೀಕ್ಷೇತ್ರದಲ್ಲಿ ಕೊಂಗ್ರೆಸ್ ಕಮಿಟಿಯು ನೆರವೇರಿದಂತೆ ಪ್ರಯಾಗ ಕ್ಷೇತ್ರದಲ್ಲಿ ಖಿಲಾಫತ್ ಕೊನ್‌ಫರೆನ್ಸು ಜರಗಿತು. ಇತಿಹಾಸ ಪ್ರಸಿದ್ಧವಾದ ಯಾವ ಕ್ಷೇತ್ರದಲ್ಲಿ ಗಂಗಾಯಮುನೆಗಳು ಬಂದು ಒಟ್ಟಿಗೆ ಸೇರುತ್ತವೋ ಅಂಥ ಪ್ರಯಾಗ ಕ್ಷೇತ್ರದಲ್ಲಿ ಹಿಂದು ಮುಸಲ್ಮಾನರು ಏಕತ್ರಸೇರಿ ಮುಸಲ್ಮಾನರ ಮೇಲೆ ಬಂದಿರುವ ಖಿಲಾಫತ್ ಧರ್ಮ ಸಂಕಟದ ವಿಚಾರವನ್ನು ನಡಿಸಿದ್ದು ಹಿಂದುಸ್ಥಾನದ ಇತಿಹಾಸದಲ್ಲಿ ಚಿರಸ್ಮರಣೀಯವಾಗದೆ ಇರಲಿಕ್ಕಿಲ್ಲ. ಈ ಖಿಲಾಫತಾ ಕೊನ್‌ಫರೆನ್ಸಿನ ಮುಂದೆ ಅಸಹಕಾರಿತೆಯ ಪ್ರಶ್ನೆಯು ಮುಖ್ಯವಾಗಿತ್ತು. ಅಸಹಕಾರಿತ್ವದ ತತ್ವವು ನಿಜವಾಗಿ ನಿರುಪದ್ರವಿಯಾದರೂ ಅದು ತೋರುವಷ್ಟು ಇಲ್ಲವೆ ನೆನಸುವಷ್ಟು ಸುಸಾಧ್ಯವಲ್ಲವೆಂಬದು ಎಲ್ಲರೂ ಒಪ್ಪಿಕೊಳ್ಳಬೇಕಾದ್ದೇ. ಸರಿ. ತಮ್ಮ ಮತದಂತೆ ಇಂಥದೊಂದು ನಿರ್ಣಯವನ್ನು ಸರಕಾರವು ಮಾಡದೆ ಇದ್ದರೆ ತಾವು ಸರಕಾರದೊಡನೆ ಯಾವ ಸಹಕಾರ್ಯವನ್ನೂ ತೋರಿಸಲಿಕ್ಕಿಲ್ಲವೆಂದು ತಾತ್ವಿಕದೃಷ್ಟಿಯಿಂದ ಆಲೋಚಿಸಿಕೊಳ್ಳುವುದು ಯಾರಿಗೂ ಅಷ್ಟೊಂದು ಕಠಿಣವಲ್ಲ. ಪರಂತು ವ್ಯವಹಾರದಲ್ಲಿ ಅದು ಎಷ್ಟರ ಮಟ್ಟಿಗೆ ಸಾಧ್ಯವೆಂಬುದು ಮುಖ್ಯ ಪ್ರಶ್ನೆ. ಸಾರಾಂಶ ಈ ಅಸಹಕಾರಿತೆಯ ಪ್ರಶ್ನೆಯು ಬಹು ಬಿಗುವಾಗಿರುವುದರಿಂದ ದೇಶದೊಳಗಿನ ವಿಚಾರವಂತರಾದ ಮತ್ತು ದೀರ್ಘದರ್ಶಿಗಳಾದ ಮುಖಂಡರು ಒಟ್ಟಿಗೆ ಸೇರಿ ಸದರಿ ಪ್ರಶ್ನೆಗೆ ಒಂದು ನಿಶ್ಚಿತ ಸ್ವರೂಪವನ್ನು ಕೊಡುವುದು ಅವಶ್ಯಕವಿತ್ತು. ಅಲ್ಲದೆ ಈ ಅಸಹಕಾರಿತ್ವವನ್ನು ಆಚರಿಸತಕ್ಕವರಾದ ಮುಸಲ್ಮಾನರಿಗೆ ಈ ಮೂಲಕ ಯಾವ ಯಾವ ಕಷ್ಟಗಳು ಒದಗಿಯಾವು, ಆ ಕಷ್ಟಗಳ ಪರಿಹಾರವು ಹೇಗೆ ಆಗಬೇಕಾದ್ದು ಮತ್ತು ಈ ಕಾರ್ಯದಲ್ಲಿ ಅವರೊಳಗೆ ಸಂಘಟನೆಯು ಹೇಗೆ ಅವಶ್ಯಕವು ಇತ್ಯಾದಿ ಅಸಹಕಾರಿತ್ವದ ಅಂಗಭೂತವಾದ ಈ ಪ್ರಶ್ನೆಗಳನ್ನು ಕೂಡ ನಿರ್ಣಯಿಸುವುದು ಅವಶ್ಯಕವಿತ್ತು. ಮೇಲಿನ ಈ ಎರಡೂ ಕಾರ್ಯಗಳು ಪ್ರಯಾಗದೊಳಗಿನ ಖಿಲಾಫತ್ ಕೊನ್‌ಫರೆನ್ಸಿನಲ್ಲಿ ಸಂಪೂರ್ಣವಾಗಿ ಸಾಧ್ಯವಾಗಲಿಲ್ಲವಾದರೂ ಇವುಗಳ ಪೂರ್ವ ಸಿದ್ಧತೆಯಾಯಿತೆನ್ನಬಹುದು. ಅಸಹಕಾರಿತೆಯಲ್ಲಿ ನಾಲ್ಕು ಸೋಪಾನಗಳಿವೆ ಎಂಬುದನ್ನು ನಾವು ಹಿಂದೆ ಒಂದೆರಡು ಸಾರಿ ಹೇಳಿರುವುದರಿಂದ ಇಲ್ಲಿ ಪುನಃ ಅದರ ಚರ್ವಿತ ಚರ್ವಣವು ಅಗತ್ಯವಿಲ್ಲ. ಈ ತತ್ವವನ್ನು ಸರಿಯಾಗಿ ಅವಲಂಬಿಸಬೇಕಾದರೆ ಸೆಂಟ್ರಲ್ ಖಿಲಾಫತ್ ಕಮಿಟಿಯು ಸೂಚಿಸಿದಂತೆ ತುರ್ಕಸ್ಥಾನದ ಒಪ್ಪಂದದ ಶರ್ತಗಳನ್ನು ತಿದ್ದಿಕೊಡಬೇಕೆಂದು ಮೊದಲು ವರಿಷ್ಠ ಸರಕಾರಕ್ಕೆ ಕೇಳಬೇಕೆಂದು ಈ ಪರಿಷತ್ತಿನಲ್ಲಿ ನಿರ್ಣಯಿಸೋಣಾಗಿದೆ. ಅಸಹಕಾರಿ ತತ್ವವು ಎಲ್ಲ ಕಡೆಗಳಲ್ಲಿ ಸರಿಯಾಗಿ ವ್ಯವಹಾರ್ಯವಾಗುವಂತೆ ಮಹಾತ್ಮಗಾಂಧಿ, ಮೌಲಾನಾ ಅಬ್ದುಲ್ ಕಾಸಿಮ್ ಅಝಾದ್, ಮೌಲವಿ ಮಹಮದ ಅಲ್ಲಿ ಮುಂತಾದವರ ಒಂದು ಮಂಡಲವು ಸ್ಥಾಪಿಸಲ್ಪಟ್ಟಿದೆ. ಈ ತತ್ವವನ್ನು ಅನುಯಾಯಿಗಳು ದುರುಪಯೋಗಿಸದಂತೆ ಅವರನ್ನು ಉಪದೇಶಿಸುವುದಕ್ಕಾಗಿ ಹಾಗು ಅದರ ಚರಿತಾರ್ಥವು ಸರಿಯಾಗಿ ಸಾಗುವಂತೆ ಮತ್ತು ಈ ಖಿಲಾಫತ್ ಚಳವಳವು ನಡೆಯುವಂತೆ ಬೇಕಾಗಿರುವ ದ್ರವ್ಯನಿಧಿಯನ್ನು ಸಂಗ್ರಹಿಸುವುದಕ್ಕಾಗಿ ಒಂದು ಮಂಡಲವು ನೇಮಿಸಲ್ಪಟ್ಟಿತು. ಇದಲ್ಲದೆ, ಇದರ ಹಣವನ್ನು ಒಟ್ಟುಗೂಡಿಸಲು ಸ್ವಯಂಸೇವಕರು ಅವಶ್ಯಕವೆಂದು ಠರಾಯಿಸಲ್ಪಟ್ಟಿತು. ಸದರಿ ಪರಿಷತ್ತು ತುರ್ಕಸ್ಥಾನದೊಡನೆ ಬ್ರಿಟಿಷ್ ಸರಕಾರವು ಮಾಡಿರುವ ಶರ್ತಗಳನ್ನು ಕುರಿತು ತನ್ನ ತೀವ್ರ ನಿಷೇಧವನ್ನು ವ್ಯಕ್ತಗೊಳಿಸಿತು. ಇವಲ್ಲಿ ಈ ಪರಿಷತ್ತಿಗೆ ಮುಸಲ್ಮಾನರು ಬಂದಿರುವಂತೆ ಅನೇಕ ಹಿಂದೂ ಮುಖಂಡರು ಕೂಡ ಬಂದಿದ್ದರು. ಈ ಎರಡೂ ಧರ್ಮದವರು ಒಟ್ಟಿಗೆ ಸೇರಿ ಏಕಭಾವನೆಯಿಂದ ಈ ಮಹತ್ಕಾರ್ಯವನ್ನು ಕೈಕೊಂಡಿದ್ದಾರೆ. ಇದು ಈಗಿನ ಕಾಲಸ್ಥಿತಿಗೆ ಒಪ್ಪುವಂತೆಯೆ ಇದೆ. ಬ್ರಿಟಿಷ್ ಹಿಂದುಸ್ಥಾನದೊಳಗಿನ ಹಿಂದು ಮುಸಲ್ಮಾನರು ಈ ಪ್ರಕಾರ ವೇಳಾದುತ್ತಿರುವಾಗ ಹೈದರಾಬಾದಿನ ನಿಝಾಮರು ತಮ್ಮ ಸಂಸ್ಥಾನದಲ್ಲಿ "ಇನ್ನು ಮುಂದೆ ಖಿಲಾಫತಿನ "ಪ್ರಸ್ತಾಪವನ್ನೆತ್ತ ಕೂಡದೆ"ಂದು "ಫರ್ಮಾನು" ಹೊರಡಿಸಿದ್ದಾರೆ. ಅದಕ್ಕಾಗಿ ಮೇಲಿನ ಪರಿಷತ್ತು ನಿಝಾಮರ ಈ ಕೃತ್ಯವು ಇಸ್ಲಾಮ ಧರ್ಮಕ್ಕೆ ಒಪ್ಪುವುದಾಗಿರುವುದಿಲ್ಲವೆಂದು ಅವರ ಗೋಚರಕ್ಕೆ ತಂದುಕೊಡಲು ಒಂದು ಠರಾವನ್ನು ಪಾಸುಮಾಡಿದೆ. ಈ ಪ್ರಕಾರದ ನಿರ್ಣಯಗಳಿಂದ ಪರಿಷತ್ತು ಮುಕ್ತಾಯವಾಯಿತು.

೮. ನಮ್ಮ ಮದ್ರಾಸು ಸಂಸ್ಥಾನದ ಬರುವ ಹೊಸ ಕೌನ್ಸಿಲಿನ ಚುನಾವಣೆಯು ಸದ್ಯದಲ್ಲೇ ಆಗಲಿಕ್ಕಿದೆ. ಆದ್ದರಿಂದ ಈ ಸಂಸ್ಥಾನದೊಳಗಿನ ಬೇರೆ ಬೇರೆ ಜಿಲ್ಲೆಗಳಿಂದ ಕೌನ್ಸಿಲು ಪ್ರತಿನಿಧಿಗಳ ಉಮೇದುವಾರರ ಹೆಸರುಗಳು ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿ ... ಎಂಬದನ್ನು ತಿಳಕೊಳ್ಳಲು ಹಲವರಿಂದ ನಮಗೆ ಪತ್ರಗಳು ಬಂದಿವೆ. ಆದರೆ ಇದು ವರೆಗೆ ಪ್ರತಿನಿಧಿಗಳಾಗಿ ನಿಲ್ಲಲು ಒಬ್ಬ ಗೃಹಸ್ಥರಿಂದಲೆ ಪತ್ರವು ಬಂದಿದೆ. ಮತ್ತು ಅದನ್ನು ನಾವು ಕಳೆದ ಸಂಚಿಕೆಯಲ್ಲಿ ಕೊಟ್ಟದ್ದೇವೆ. ಇನ್ನೂ ಯಾರ ಪತ್ರವೂ ಬಂದಿಲ್ಲ. ಬೇರೆಯವರು ಇದೆ ರೀತಿಯಿಂದ ತಮ್ಮ ಹೆಸರುಗಳನ್ನು ಕೊಟ್ಟರೆ ಈ ಜಿಲ್ಲೆಯ ಜನರ ಮಾಹಿತಿಯ ಬಗ್ಗೆ ಅವರ ಹೆಸರುಗಳನ್ನು ಮತ್ತು ಅವರ ಅಭಿಪ್ರಾಯಗಳನ್ನೂ ನಾವು ಪ್ರಕಟಿಸಬಹುದು.

ಉಪ್ಪಿನಂಗಡಿ ತಾಲೂಕಿನ ಶ್ಯಾನುಭೋಗರ ಮನವಿ.

ಉಪ್ಪಿನಂಗಡಿ ತಾಲೂಕಿನ ಶ್ಯಾನುಭಾಗರು ಸೆಲರಿ ಕಮ್ಮಿಟಿಯವರ ಸೂಚನೆಯು ಪ್ರಕಟವಾಗುವ ಮೊದಲೇ ೨೯—೨—೨೦ಲ್ಲು ಕೂಡಿದ ಮಹಾಸಭೆಯಲ್ಲಿ ತಮಗೆ ೨೫, ೩೦, ೩೫ರಂತೆ ಸಂಬಳ ಏರಿಸಬೇಕೆಂದು ನಿರ್ಣಯಿಸಿ ಮನವಿಯನ್ನು ಇಲಾಖಾ ಮೇಲಾಫೀಸರರಿಗೆ ಕಳುಹಿಸಿದ್ದರು. ಸೆಲರಿ ಕಮ್ಮಿಟಿಯ ಸೂಚನೆ ಆಧಾರದ ಮೇಲೆ ಶ್ಯಾನುಭಾಗರಿಗೆ ರೂ. ೧೫ರಂತೆ ಸಂಬಳ ಮಾಡಿಯದೆ ಎಂಬ ಸರಕಾರ ಹುಕುಂ ಹೊರಟಿರುವುದನ್ನು ಕೇಳಿ ಈ ಶ್ಯಾನುಭಾಗರು 'ಪ್ಯಾಡಿಗಳ ರೇಂಕಿಗೆ ಸರಿಯಾಗಿ' ಕೊಟ್ಟ ಅಲ್ಪ ಬಡ್ತಿಯು 'ಸಮರ್ಪಕವಾದ್ದಲ್ಲವೆಂತಲೂ ಕ್ಲಾರ್ಕರಿಗೆ ೨೦ರಿಂದ ೩೦ಕ್ಕೆ ಏರಿಸಿದ ದಾಮಾಶಯದಲ್ಲಿ ಶ್ಯಾನುಭಾಗರಿಗೆ ೧೦ರಿಂದ ೧೫ಕ್ಕೆ ಏರಿಸುವುದು ಸಾಕು ಎಂದು ಸರಕಾರದವರು ಎಣಿಸಿದ್ದು ಸರಿಯಲ್ಲವೆಂತಲೂ ಕ್ಲಾರ್ಕರಿಗೆ ಕೆಲವು ವರ್ಷಗಳ ಹಿಂದೆ ರೂ: ೧೫ರಂತೆ ಇದ್ದ ತಲಬು ಈಗ ಇಮ್ಮಡಿಯಾಯಿತು, ಅವರಿಗೆ ಬಡ್ತಿಯ ಅನುಕೂಲತೆಯೂ ಇದೆ, ಅಂಥಾ ಅನುಕೂಲತೆ ಇಲ್ಲದೆ ಇರುವ ಶ್ಯಾನುಭಾಗರ ವಿಷಯದಲ್ಲಿ ಕ್ಲಾರ್ಕರ ಉದಾಹರಣವನ್ನು ಎತ್ತಿಕೊಳ್ಳುವುದು ಅಯೋಗ್ಯವೆಂತಲೂ, ಮೇಲೆ ಬರೆದಂತೆ ಕಾಯಂ ಆಗಿ ಸಂಬಳ ಏರಿಸಿ, ಅಥವಾ ಅದಕ್ಕೆ ಕಾಲವಿಳಂಬವಾಗುವುದಾದರೆ ಹಂಗಾಮಿಯಾಗಿ ಆದರೂ ಸಂಬಳ ಏರಿಸಿ, ಇಂದಿನಿಂದ ಒಂದು ಹಪ್ತೆಯೊಳಗೆ ಹುಕುಂ ತರಿಸದಿದ್ದರೆ ನಾನು ಬೇರೆ ಕಸಬಿನಿಂದಾದರೂ ಹೊಟ್ಟೆಹೊರಕೊಳ್ಳುವ ಮಾರ್ಗವನ್ನು ನೋಡಬೇಕಾಗಿರುವುದರಿಂದ ಅಲ್ಪ ಸಂಬಳದಿಂದ ಮರ್ಯಾದೆಯಿಂದ ಎಷ್ಟು ಮಾತ್ರಕ್ಕೂ ಈಗಿನ ಕಾಲದಲ್ಲಿ ಈ ಶ್ಯಾನುಭೋಗಿಕೆ ನೋಡಲಿಕ್ಕೆ ಸಾಧ್ಯವೇ ಇಲ್ಲವಾದುದರಿಂದ, ೬ ತಿಂಗಳ ರಜೆ ಕೊಡಿಸಿ ದಫ್ತರು ಯಾರಿಗೆ ವಹಿಸಿಕೊಡಬೇಕೆಂಬದಕ್ಕೆ ಹುಕುಂ ಆಗಬೇಕಾಗಿ ಛಾಪಾ ಮನವಿ ತಯಾರಿಸಿ, ಈಗಲೇ ೫೭ ಮಂದಿ ಅದನ್ನು ಮೇಲಾಫೀಸರರ ಬಳಿಗೆ ಕಳುಹಿಸಿರುವರೆಂದು ತಿಳಿಯುತ್ತೇವೆ.

ಮಂಗಳೂರು.

ಕೊಡಿಯಾಲ ಬೈಲ ಇಗರ್ಜಿಯ ಎದುರಿನ ಕಟ್ಟೋಣದಲ್ಲಿದ್ದ ಪರಸ್ಪರ ಸಹಾಯಕ ಸಂಘಗಳ ಅಸಿಸ್ಟಾಂಟ ರಿಜಿಸ್ಟ್ರಾರರ ಆಫೀಸು ಕಳೆದ ಸೋಮವಾರದಿಂದ ಬಾವುಟೆ ಕಟ್ಟೆಯ ಕೆಳಗಿನ ವಠಾರದ ಕಟ್ಟೋಣಕ್ಕೆ ಒಯ್ಯೋಣಾಗಿದೆ.

ಬಾದಶಹರ ಜನ್ಮದಿನದ ಬಹುಮಾನವಾಗಿ ಉಡುಪಿಯ ಸಾಹುಕಾರ ಮತ್ತು ತಾಲೂಕು ಬೋರ್ಡು ಪ್ರೆಸಿಡೆಂಟರಾದ ಖಾನ ಸಾಹೇಬ ಹಾಜಿ ಅಬುಲ್ಲ ಹಾಜಿ ಖಾಸಿಂ ಸಾಹೇಬ ಬಹದ್ದೂರವರಿಗೆ ಖಾನ್ ಬಹದೂರ ಎಂಬ ಬಿರುದು ಕೊಡೋಣಾಗಿದೆ.

ಕಾರ್ಕಳ ಬೋರ್ಡ ಹೈಸ್ಕೂಲಿನಲ್ಲಿ Vನೇ ಫೋರ್ಮು, ಉಡುಪಿ ಬೋರ್ಡ ಹೈಸ್ಕೂಲಿನಲ್ಲಿ ಮತ್ತು ಮಂಗಳೂರು ಗಣಪತಿ ಸೆಕೆಂಡರಿ ಶಾಲೆಯಲ್ಲಿ VIಫೋರ್ಮು ತೆರೆಯೋಣಾಗಿವೆ. ಕಾಸರಗೋಡಿನ ಶಾಲೆಯಲ್ಲಿ IVಫೋರ್ಮು ತೆರೆಯಲು ಅಪ್ಪಣೆ ದೊರಕಿರುವುದಾಗಿ ವಾರ್ತೆ ಇದೆ.

ಸೆಕೆಂಡರಿ ಉಪಾಧ್ಯಾಯರ ತರಬೇತಿನ ಶಾಲೆಯು ಗವರ್ನಮೆಂಟ ಕೊಲೇಜಿನ ಕಟ್ಟೋಣದಲ್ಲಿಯೇ ಸೇರಿಸೋಣಾಗುವುದು. ಉಪಾಧ್ಯಾಯಿನಿಯರ ತರಬೇತಿನ ಶಾಲೆಯ ಬಗ್ಗೆ ಹೊಸ ಕಟ್ಟೋಣವು ಬಲ್ಮಠ ನೇಯಿಗೆಯ ಕಾರ್ಖಾನೆಯ ಎದುರಿನ ಸ್ಥಳದಲ್ಲಿ ಕಟ್ಟಿಸೋಣಾಗುವುದಾಗಿ ತಿಳಿಯುತ್ತೇವೆ.

ಇಲ್ಲಿಯ ದೇಶೀಯ ಬಾಲಿಕಾ ಪಾಠಶಾಲೆಯು ಬರುವ ಸೋಮವಾರ ದಿನ ತೆರೆಯೋಣಾಗುವುದೆಂದೂ, ಶ್ರೀಮತಿ ಬಿ. ಪದ್ಮಾಬಾಯಿಯವರು ಇದರ ಮುಖ್ಯೋಪಾಧ್ಯಾಯಿನಿಯ (ಪ್ರಿನ್ಸಿಪಲ್) ರಾಗಲು ಒಪ್ಪಿರುವರೆಂದೂ ಸದರಿ ಶಾಲೆಯ ಸೆಕ್ರೆಟರಿಗಳು ತಿಳಿಸುತ್ತಾರೆ.

ನಮ್ಮ ಜಿಲ್ಲೆಯಿಂದ ಹೊಸ ನ್ಯಾಯವಿಧಾಯಕ ಸಭೆಗೆ ಚುನಾವಣೆಯಾಗತಕ್ಕ ಮೆಂಬರಿಕೆಗಳ ಪೈಕಿ ಒಂದು ಸ್ಥಾನಕ್ಕೆ ಮ| ರಾ| ಎಚ್. ರಾಮಯ್ಯ ಶೆಟ್ಟಿ ವರ್ಗದಾರ, ಬ್ರಹ್ಮಾವರ, ಇವರು ಸಹ ಒಬ್ಬ ಉಮೇದ್ವಾರರಾಗುವರಾಗಿ ತಿಳಿಸುತ್ತಾರೆ.

ಬರುವ ಸೋಮವಾರ ಮಧ್ಯಾಹ್ನ ೩ ಗಂಟೆಗೆ ಮಂಗಳೂರ ತಾಲೂಕು ಆಫೀಸಿನಲ್ಲಿ ಮಂಗಳೂರು ತಾಲೂಕುಬೋರ್ಡಿನ ಅಧಿವೇಶನವು ನಡೆಯುವುದು. ಇದರ ಮುಂದೆ ಸದರಿ ತಾಲೂಕು ಬೋರ್ಡಿನ ೧೯೧೯-೨೦ನೇ ವರ್ಷದ ರಿಪೋರ್ಟು ಚರ್ಚೆಗೆ ಇಡೋಣಾಗುವುದು.

ಶ್ರೀಯುತ ಎಸ್. ಶ್ರೀನಿವಾಸ ಅಯ್ಯಂಗಾರರವರು ಗ್ರೆಡ್ಯುವೇಟರ ಪರವಾಗಿ ಲೆಜಿಸ್ಲೇಟಿವ ಕೌನ್ಸಿಲಿಗೆ ಉಮೇದ್ವಾರರಾಗಿ ಎದುರು ಬಂದಿರುವರು. ಇವರಿಗೆ ಈ ಜಿಲ್ಲೆಯ ಗ್ರೆಡ್ಯುವೇಟರ ವೋಟುಗಳನ್ನು ಸಂಗ್ರಹಿಸಲು ಸಾಧನೆಗಳು ನಡೆಯುತ್ತಿವೆ.

ಮಂಗಳೂರಿನ ಕೆಲವು ಮುಖಂಡ ಗೃಹಸ್ಥರಿಂದ ಆಮಂತ್ರಿಸಲ್ಪಟ್ಟ ಒಂದು ಸಭೆಯು ನಿನ್ನೆ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಜರಗಿತು. ತಿರುವಾಂಕೂರಿನ ಚೀಫ್ ಕೋರ್ಟು ವಕೀಲ ಮ| ಟ್ರಾವೆನ್ಕೋರ ನೇಶನಲ್ ಬೇಂಕಿನ ಪ್ರೆಸಿಡೆಂಟರಾದ ಮ| ಮಾಮ್ಮನ್ ಮಾಪಿಳ್ಳೆ ಇವರು ಹಾಜರಿದ್ದರು. ತಿರುವಾಂಕೂರಿನಲ್ಲಿ ಕೃಷಿ ಮತ್ತು ಕೈಗಾರಿಕೆಯ ಅಭಿವೃದ್ಧಿಗೋಸ್ಕರ ಈಗಲೇ ಸ್ಥಾಪಿಸಲ್ಪಟ್ಟ ಒಂದು ಕಂಪೆನಿಯಲ್ಲಿ ನಮ್ಮ ಜಿಲ್ಲೆಯ ಕೆಲವು ಡಿರೆಕ್ಟರುಗಳನ್ನು ಆರಿಸಿ, ಇಲ್ಲಿಯೂ ಅದರ ಒಂದು ಶಾಖೆಯನ್ನು ತತ್ಕಾಲ ಬ್ರಹ್ಮಾವರದಲ್ಲಿ ಸ್ಥಾಪಿಸಿ, ಅಲ್ಲಿಂದ ೭ ಮೈಲು ದೂರವಿರುವ ಕೊಕ್ಕರ್ಣೆಯಲ್ಲಿ ಈ ಮೊದಲೇ ಇದ್ದ ಹಂಚಿನ ಕಾರ್ಖಾನೆಯನ್ನು ವಹಿಸಿಕೊಂಡು ಹಂಚು ಕೈಗಾರಿಕೆಯನ್ನು ಕ್ರಮೇಣ ಕಲ್ಯಾಣಪುರ ಬ್ರಹ್ಮಾವರಗಳಲ್ಲಿ ತೆಂಗಿನ ಸಿಪ್ಪೆಯ ನಾರಿನ ಕೈಗಾರಿಕೆಯನ್ನು ಸ್ಥಾಪಿಸುವ ಉದ್ದೇಶ ಒಂದು, ಅದರೊಂದಿಗೆ ಬ್ರಹ್ಮಾವರ ಬೆಲ್ಲದಕಟ್ಟೆ ... ಜನರನ್ನು ಕೈಗಾರಿಕೆ ಮುಂತಾದ ರೀತಿಯಿಂದ ಜರ್ಮನ ಮಿಶ್ಯನ ಸಂಸ್ಥೆಗಳ ಮಾದರಿಯ ಜನೋಪಕಾರಿಯಾದ ಸಂಸ್ಥೆಗಳ ಮೂಲಕ ಉದ್ಧರಿಸುವ ಉದ್ದೇಶವೊಂದು ಇವನ್ನು ಮೇಲೆ ಹೆಸರು ನಮೂದಿಸಿದ ಮೂರು ಗೃಹಸ್ಥರು ಸವಿಸ್ತಾರವಾಗಿ ವಿವರಿಸಿದರು. ಮ| ಮಾಮನ್ ಮಾಪಿಳ್ಳೆಯವರು ತಿರುವಾಂಕೂರಿನ ಮಲಂಕರಾ ರಬ್ಬರ್ ಎಸ್ಟೇಟಿನ ವಿಷಯವನ್ನು ಆ ಸಂದರ್ಭದಲ್ಲಿ ಪ್ರಸ್ತಾಪಿಸಿ ಅದು ಜನರಲ್ಲಿ ಹೊತ್ತ ಮೊದಲು ಉತ್ಸಾಹವನ್ನು ಹುಟ್ಟಿಸದಿದ್ದರೂ 'ಡಿವಿಡೆಂಡ್' ಕೊಡಲಿಕ್ಕೆ ಶುರುವಾದ ಪ್ರಥಮ ವರುಷದಲ್ಲಿ ಸೇಕಡ ೧೫ರಂತೆ, ಅನಂತರ ಕ್ರಮ ಕ್ರಮವಾಗಿ ೨೫ ಮತ್ತು ೩೦ರಂತೆ ಮುನಾಫೆ ಕೊಡಿಸಿದ್ದರಿಂದ ಅದರ ೩೦ ರೂಪಾಯಿಯ ಪಾಲು ಒಂದಕ್ಕೆ ೧೫೦ ರೂಪಾಯಿ ವರೆಗೆ ಬೆಲೆ ಬಂದಿತ್ತು. ಇಂಥ ದೇಶೀಯ ಸಂಸ್ಥೆಗಳನ್ನು ಇಲ್ಲಿ ಯೂ ಸ್ಥಾಪಿಸಿ, ಬಡ ಜನರಿಗೆ ಉದರನಿರ್ವಾಹಕ್ಕೆ ಆಸ್ಪದವೂ, ಶ್ರೀಮಂತರಿಗೆ ತಮ್ಮ ಧನವನ್ನು ಯುರೋಪಿನ ಸುಧಾರಿತ ವರ್ತಕರ ಮತ್ತು ಕೃಷಿಕರ ಕ್ರಮದಲ್ಲಿ ವೃದ್ಧಿಸಲಿಕ್ಕೆ ಎಡೆಯು ಸಿಗುವಂತೆ ಪ್ರಯತ್ನಿಸುವುದು ಯೋಗ್ಯವೆಂದು ಸವಿಸ್ತಾರವಾಗಿ ಹೇಳಿ, ತಿರುವಾಂಕೂರು ಮತ್ತು ಕೊಚ್ಚಿಯಲ್ಲಿ ಈ ವಿಷಯದಲ್ಲಿ ಆದ ಜಾಗೃತಿಯನ್ನು ವರ್ಣಿಸಿದರು. ಅನಂತರ ರಾವ್ ಬಹದ್ದೂರು ಸುಜೀರ ರಘುನಾಥಯ್ಯನವರು ಈ ವಿಷಯದಲ್ಲಿ ಇಲ್ಲಿಯ ಮುಖಂಡರು ಕೈ ಹಾಕುವುದು ಯೋಗ್ಯವೆಂದು ಭಾಷಣ ಮಾಡಿದರು. ಸಭಾಧ್ಯಕ್ಷರಾಗಿದ್ದ ರಾ| ಸುಜೀರ ನಾಗಪ್ಪ ನಾಯಕರು ಅದನ್ನೇ ಪುಷ್ಟೀಕರಿಸಿದರು.

ಈ ಕಂಪೆನಿಯವರು ಮೇಲೆ ಹೇಳಿದ ಕೈಗಾರಿಕೆ ... ಇನ್ನೂ ಒಳ್ಳೆ ಮೆಣಸಿನ ಕೃಷಿ, ಸಕ್ಕರೆ ಕೈಗಾರಿಕೆ ಇವುಗಳಿಗೂ ಕಣ್ಣಿಟ್ಟಿದ್ದಾರೆಂಬುದು ಮ| ಮಾರ್ಸೆಲ ಸೋಜರು ಈ ಕಂಪೆನಿಯ ಪರವಾಗಿ ನಿನ್ನೆ ಸಭೆಯಲ್ಲಿ ಆಡಿದ ಮಾತುಗಳಿಂದ ತೋರುತ್ತದೆ.

ಸೆಲರಿ ಕಮ್ಮಿಟಿಯವರ ಸೂಚನೆಯನ್ನು ಮದ್ರಾಸು ಸರಕಾರದವರು ನ್ಯಾಯ ವಿಧಾಯಕ ಸಭೆಯ ಜನಸರಕಾರಿ ಪ್ರತಿನಿಧಿ ಮೆಂಬರರ ಕೂಡೆ ಪರ್ಯಾಲೋಚಿಸಿ ಸರಕಾರ ನವುಕರರ ತಲಬನ್ನು ಕುರಿತು ಹುಕುಂ ಹೊರಡಿಸಿದ್ದಾರೆ. ಅದರ ಪ್ರಕಾರ ಉಗ್ರಾಣಿಗಳಿಗೆ ನಮ್ಮ ಜಿಲ್ಲೆ ಮತ್ತು ಮಲಬಾರು ಜಿಲ್ಲೆಗಳಲ್ಲಿ ರೂ ೧೦, ಇತರ ರಯತವಾರಿ ಜಿಲ್ಲೆಗಳಲ್ಲಿ ರೂ ೮, ಶಾನುಭಾಗರಿಗೆ ರೂ ೧೫, ಇದೇ ಎಪ್ರಿಲ ೧ನೆ ತಾರೀಕಿನಿಂದ ಸಿಗುವುದು. ಪಟೇಲರಿಗೆ ಸಂಬಳ ಏರಿಸುವುದು ಅಗತ್ಯವಿಲ್ಲವೆಂದು ಅವರೂ ಜಮಾಬಂದಿ ಮತ್ತು ... ಮಾಡುವುದಕ್ಕೆ ತಾಲೂಕಿಗೆ ಹೋದ ಕಾಲದಲ್ಲಿ ಕಾಯಂ ಬತ್ತೆ ಪಟೇಲರಿಗೆ ರೂ ೧೦, ಶಾನುಭಾಗರಿಗೆ ರೂ ೫, ಉಗ್ರಾಣಿಗಳಿಗೆ ರೂ ೨—೮—೦ರಂತೆ ಸಿಗುವುದು. ಇತರ ವಿಷಯದಲ್ಲಿ ತಾಲೂಕು ಹುಕುಂ ಮೇರೆಗೆ ಇಲೆಕ್ಟೊರಲ್ ರೋಲ್ಸು ಮುಂತಾದ ವಿಶೇಷ ಕೆಲಸಗಳಿಗೆ ತಾಲೂಕು ಆಫೀಸಿಗೆ ಇವರನ್ನು ಕರೆಸಿದರೆ ರೆವಿನ್ಯೂ ಡಿವಿಜನವರ ಮಂಜೂರಾತಿಗೆ ಒಳಪಟ್ಟು ದಿನದ ಬತ್ತೆ ಇವರಿಗೆ ಸಿಗುವುದು.

ಗುಮಾಸ್ತರಿಗೂ ಇತರ ಚಿಲ್ಲರೆ ಸಿಬಂದಿಗೂ ಈ ಮೊದಲೆ ಹಂಗಾಮಿ ಸಂಕ್ಷನಾಗಿದ್ದ ಎಲೌನ್ಸ್ ತತ್ಕಾಲಕ್ಕೆ ಇರಗೊಡಿಸಿ ೨೦ರಿಂದ ೧೦೦ ರೂಪಾಯಿವರೆಗಿನ ಎಲ್ಲಾ ನವುಕರರಿಗೆ ಮಾಹೆಯಾನಾ ೧೦ ರೂಪಾಯಿಯಂತೆ ಎಲೌನ್ಸ ಸಿಗಬೇಕಾಗಿ ನಿರ್ಣಯವಾಗಿದೆ. ಉಳಿದವರ ವಿಷಯವನ್ನೂ ಕಾಯಂ ದರ ಹೆಚ್ಚಿಸುವ ವಿಷಯವನ್ನೂ ಕುರಿತು ಮ| ನೆಪ್ ಸಾಹೇಬರು ರಿಪೋರ್ಟು ಮಾಡುವುದಕ್ಕೆ ಸ್ಪೆಶಲ್ ಡ್ಯೂಟಿ ಮೇಲೆ ನೇಮಕಪಟ್ಟಿದ್ದಾರೆ. ಇದಲ್ಲದೆ ಬೋರ್ಡ ಮತ್ತು ಮ್ಯುನ್ಸಿಪಲ್ ಶಾಲಾ ಉಪಾಧ್ಯಾಯರಿಗೂ ರೂ. ೪ರಂತೆ ಹಂಗಾಮಿ ಎಲೌನ್ಸ ಕೂಡಿಸಿಕೊಡುವಂತೆ ಸರಕಾರದವರು ಆಯಾ ಸಂಸ್ಥೆಗೆ ದ್ರವ್ಯಸಹಾಯ ಮಾಡಲು ನಿರ್ಣಯಿಸಿರುವರು. ಈ ಎಲ್ಲಾ ಏರ್ಪಾಡುಗಳಿಗೆ ರೂ. ೧೪೮ ಲಕ್ಷ ರೂಪಾಯಿ ಹೆಚ್ಚಿಗೆ ವೆಚ್ಚವಾದೀತು ಎಂದು ಅಭಿಪ್ರಾಯಪಟ್ಟಿದ್ದಾರೆ.

Indian Motor Service
ಇಂಡಿಯನ್ ಮೋಟರ್ ಸರ್ವಿಸು
(ಎ. ಸಿ. ಅಂದ್ರಾದೆ, ಪ್ರೊಪ್ರೈಟರ್)

ಇವರ ಮೋಟರ ಬಸ್ಸುಗಳು ಮಂಗಳೂರಿನಿಂದ ಕಾರ್ಕಳಕ್ಕೆ ಪ್ರತಿ ದಿನ ಬೆಳಿಗ್ಗೆ 11½ ಗಂಟೆಗೆ ಮತ್ತು ಕಾರ್ಕಳದಿಂದ ಮಂಗಳೂರಿಗೆ ಬೆಳಿಗ್ಗೆ 10½ ಗಂಟೆಗೆ ಬಿಡೋಣಾಗುವುವು. ಜನ ಒಬ್ಬರ ಫೀಸು 2—8—0.

ಬೇರೆ ಯಾವ ಮಾಹಿತಿ ಬೇಕಾಗಿದ್ದರೂ ನಮ್ಮ ಹಂಪನಕಟ್ಟೆ ಆಫೀಸಿನಲ್ಲಿ ವ ಇತರ ಆಫೀಸುಗಳಲ್ಲಿ ವಿಚಾರಿಸಿದಲ್ಲಿ ತಿಳಿಯುವುದು.

ಹಂಪನಕಟ್ಟೆ, ಮಂಗಳೂರು. ಮಾಧವ ಬಿಲ್ಡಿಂಗ ... A. C. Andrade, Proprietor.

[illegible]

ಕಿರುವ ಅನಾಚಾರಿಯನ್ನು ಮಕ್ಕಳ ಮೇಲೆ ಹೊರಿಸಿದಂತಾಗುವದು

ಉತ್ತರಕಾನಡಾ ಜಿಲ್ಲೆಯ ಪರಿಷತ್ತು.

ಸರ್ ನಾರಾಯಣ ಗಣೇಶ ಚಂದಾವರಕರ ಇವರ ಭಾಷಣ

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

ನವಯುಗದೊಳಗಿನ ಕರ್ತವ್ಯಗಳಿಗಾಗಿ ಸಿದ್ಧರಾಗಿರಿ.

ಜಿಲ್ಲೆಯ ಮೊದಲನೇ ಪ್ರಯತ್ನವಾದ ಈ ರಾಜಕೀಯ ಪರಿಷತ್ತು ಬ್ರಿಟಿಷ ಹಿಂದುಸ್ಥಾನದ ಇತಿಹಾಸದೊಳಗಿನ ಶ್ರೇಷ್ಠ ಸಮಯದಲ್ಲಿ ಜನ್ಮ ತಾಳಿರುವದು. ಬ್ರಿಟಿಷ ಪಾರ್ಲಿಮೆಂಟು ಹೊಸ ಸುಧಾರಣಾಕಾಯದೆಯನ್ನು ನಿರ್ಮಿಸಿರುವದು. ದಯಾಳು ಬಾದಶಹರವರು ಅದಕ್ಕೆ ತಮ್ಮ ಸಮ್ಮತಿಯನ್ನು ದಯಪಾಲಿಸಿರುವರು. ಈ ಕಾಯಿದೆಯು ಮುಂದಿನ ವರುಷ ಪ್ರಚಾರಿಸಲ್ಪಡುವದು. ನಮ್ಮ ಯುವರಾಜರ ಕರಕಮಲದಿಂದ ಚಿತ್ರೈಸಿ ಹೊಸ ಹಿಂದೀ ಕೌನ್ಸಿಲು (ಲೋಕಸಭೆ)ಗಳನ್ನು ತೆರೆದು ನವಸುಧಾರಣೆಗಳ ಗಣೇಶ ಪೂಜೆಯನ್ನು ಮಾಡುವರು. ಹೋದ ದಶಂಬರ ತಿಂಗಳಲ್ಲಿ ಪ್ರಕಟಿಸಲ್ಪಟ್ಟ ಬಾದಶಹಾಹೀ ಜಾಹಿರನಾಮೆಯಲ್ಲಿ ಹೃದಯಂಗಮ ನುಡಿಗಳಿಂದ ಚಕ್ರವರ್ತಿಗಳು ಆಜ್ಞಾಪಿಸಿರುವದೇನಂದರೆ — "ಸುಧಾರಣಾ ಕಾಯಿದೆಯಿಂದ ಜನರಿಗೆ ಲಭಿಸುವ ಜವಾಬದಾರ ರಾಜ್ಯಪದ್ಧತಿಯು ಈ ಮೊದಲನೇ ಹಕ್ಕಿಯು ಬ್ರಿಟಿಷ ಸಾಮ್ರಾಜ್ಯದ [illegible]

[illegible]

[illegible]

ಉಡುಪಿ ಹಿಂದೂ ಎಲಿಮೆಂಟರಿ ಶಾಲೆಯ

ಪ್ರತಿಷ್ಠೆಯ ಸಮಾರಂಭ.

ಈ ಸಮಾರಂಭವು ಮ। ರಾ। ರಾ। ಉಡುಪಿ ರೇಂಜ್ ಶಾಲೆಗಳ ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟರರಾದ ಬಿ ನರಸಿಂಗರಾಯರವರ ಅಧ್ಯಕ್ಷತೆಯಲ್ಲಿ ಜರಗುವಂಥಾದ್ದು ... ಮಂಗಳೂರು ಪ್ರಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಹೆಡ್ ಮಾಸ್ತರ್ ಮ। ರಾ। ರಾ। ... ರಾವ್ ಬಿ ಎ, ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ... [illegible]

[illegible]

ಡಿಸ್ಟ್ರಿಕ್ಟ್ ಬೋರ್ಡ ಮೀಟಿಂಗು

ಕಳೆದ ... ತಾರೀಕಿನ ಮೀಟಿಂಗಿನಲ್ಲಿ ಈ ಕೆಳಗಿನ ಅಂದಾಜು ಪಟ್ಟಿಗಳು ಸಂಕ್ಷನಾದವು — ... ರಸ್ತೆ ದುರುಸ್ತಿಗೆ ರೂ ... , ... I ನಂಬ್ರ A ಮತ್ತು B ಭಾಗಗಳಿಗೆ ರೂ ... [illegible]

ಬೋರ್ಡ ಸೆಕಂಡರಿ ಸಾಲೆಗಳಲ್ಲಿ ಮಕ್ಕಳ ಆರೋಗ್ಯ ಪರೀಕ್ಷೆ ಮಾಡಿಸುವದಕ್ಕೆ ಎಷ್ಟು ಖರ್ಚು ತಗಲಬಹುದು ಎಂದು ಆಯಾ ಸಾಲೆಯ ಹೆಡ್‌ಮಾಸ್ತರಿಂದ ಅಂದಾಜು ಪಟ್ಟಿಗಳನ್ನು ತರಿಸುವದಕ್ಕೆ ನಿರ್ಣಯಿಸಲಾಯಿತು.

ನೀಲೇಶ್ವರ ... ಸಾಲೆಗೆ ಬೇಕಾದ ... ಅಂದಾಜು ಪಟ್ಟಿಯನ್ನು ಸಂಕ್ಷನ್ ಮಾಡಲಾಯಿತು. ಲೋಕಲ್ ಫಂಡು ... [illegible]

ಹುಲಿಯೂ ಬ್ರಾಹ್ಮಣನೂ.

[illegible] ಮನೆ, [illegible] |
[illegible] |
[illegible] ಬಾಗಿಲನು ತೆರೆಯ, |
[illegible] ಈ ಜೀವನದ ಬಗೆಯು" || ೧ ||

ಎಂದು [illegible] ಹುಲಿ ದ್ವಿಜನ |
[illegible] ಬೇಡುತಿರೆ ತನ್ನ ||
[illegible] ಅವನು [illegible], |
ಮುಂದೆ [illegible] ಬಾಗಿಲನು ಸಾರಿ || ೨ ||

[illegible] ಹಾರುವನ ಮೇಲೆ |
[illegible] ಬಳಲುತ್ತಿರುವ ವೇಳೆ ||
ಸೇರಿರುವ ನಿನ್ನ ಹಿಂದಿನ ಹಸಿವೆಯನು |
ತೀರಿಸುವೆ! ಬೇಗ ಸಲಿಸುವೆನು ಬಯಕೆಯನು" || ೩ ||

"ಏನಿದೇನಿದು ಹುಲಿಯೆ! ನಾನೆಂದು ತಿಳಿಯೆ |
ಮಾನವನ ಕಾರ್ಯವನು [illegible]? ||
ಆ ನಿನ್ನ ಚಿನ್ನವನು, ಬಯಸೆನ್ನ! ಎನ್ನಾ |
ಸಾನುರಾಗದಿ ಪೋಗ್ಗೊಳಿಸು! ಮರೆಯ ನಿನ್ನಾ!" || ೪ ||

"ಅರರೆ! ಮರುಗಿದೆಯ! ನಾ ಬಿಡೆ ನಿನ್ನ ದಿಟದಿ |
ಅರಸುವರೆ [illegible] ಲಕೆಯ — ತೆರದಿ ||
ದೊರೆತಿರುವೆ, ಭಾಗ್ಯದಿಂದೆನಗಿಂದು ನೀನು |
ತೊರೆದು ಪೋಗಲು ಬರದೆ — ಮನ ಬರುವುದೇನು?" || ೫ ||

ಎನ್ನುತಾ ಬಡ ವೈದಿಕನ ಹಿಡಿಯುತಂದು, |
ಹೇ! [illegible] ಬೊಬ್ಬಿರಿಯೆ ಕೇಳಿ ನರಿಯೊಂದು, ||
ದೀನತಲ್ಲಣಿಯ ಕಾಪಾಡಬೇಕೆಂದು, |
ತಾನಾಗ ಬಂದುದಲ್ಲಿಗೆ ಬಳಿಸಂದು || ೬ ||

"ಅರರೆ! ಹುಲಿರಾಜ! ಬಲು ಚೋದ್ಯ ಸಂಗತಿಯು |
ಕರುಣೆಯಿಂದರುಹಿದರೆ, ತೀರಿಸುವೆ ನ್ಯಾಯ್ಯ ||
ಚರಣದೊಳುಸುರೆನಲ್ಲ — ಹುಲಿ ಸಕಲವನ್ನೊರೆಯೆ, |
"ಅರಸ! ಪ್ರತ್ಯಕ್ಷ ಕಾಣದೆ ನಾನು ತಿಳಿಯೆ" || ೭ ||

"ಶೀಘ್ರದಲಿ ತೋರಿಸುವೆನೆಂ"ದು ಮುದದಿಂದ, |
ವ್ಯಾಘ್ರನಾ ಪಂಜರವ ಪೊಗಲು, ಹೊರಗಿಂದ ||
ಆಗ್ರತೆಯೊಳಾ ದ್ವಿಜನು ಬಾಗಿಲನು ಬಿಡಲು |
ಉಗ್ರತೆಯಲಿ ಪೂರ್ವಸ್ಥಿತಿಯಲಿ ಮರುಗುತಿರಲು || ೮ ||

"ದುಷ್ಟ ವ್ಯಾಘ್ರನೆ! ಬಾರದೆ ಅಳುಕದಿರು! - ನಿನ್ನ |
ಕಷ್ಟದಿಂ ಬಿಡಿಸಲೆಳಸಿ ಪಡೆದೆ ಬನ್ನ ||
ಸೃಷ್ಟಿಯಲಿ ಸಾರುವೆನು — ದುಷ್ಟಜನರನ್ನ |
ಬಿಟ್ಟಿರುವನೇ ಸಖಿಯು ನಿಜವೆಂಬುದನ್ನ" || ೯ || ಶ್ರೀ

ಜಿ. ಎನ್ ಲಕ್ಷ್ಮಣ ಪೈ

ಮೊದಲನೆ ಕರ್ಣಾಟಕ ಪರಿಷತ್ತು, ಧಾರವಾಡ

ಅಧ್ಯಕ್ಷರಾದ ದಿವಾಣ ಬಹದ್ದೂರ ವಿ. ಪಿ. ಮಾಧವರಾವ ಇವರ ಭಾಷಣದಲ್ಲಿ ಇನ್ನು ಕೆಲವು ಮುಖ್ಯ ಅಂಶಗಳು

ಕರ್ಣಾಟಕ ಪ್ರಾಂತದ ರಾಜಧಾನಿ—ಕಾಶ್ಮೀರ, ಬರೋಡೆ, ಮುಂತಾದ ಸಂಸ್ಥಾನಗಳ ಜನಸಂಖ್ಯೆಯು ಇದಕ್ಕಿಂತ ಕಡಿಮೆ ಇರುವದಲ್ಲವೇ? ಆದುದರಿಂದ ಜನಸಂಖ್ಯೆಯು ಸುಮಾರು ೪೦ ಲಕ್ಷವೇ ಇರುವದೇನೋ ಅಂತಹ ಬಗೆ ಹರಿಯದಂಥ ತೊಂದರೆ ಇರುವದಿಲ್ಲ. ಕೊಡಗು ಪ್ರಾಂತದವರು ತಮ್ಮ ಪ್ರಾಂತವನ್ನು ಮದ್ರಾಸ ಇಲಾಖೆಗೆ ಕೂಡಿಸಬೇಕೆಂಥ ಕೇಳುತ್ತಿದ್ದಾರೆ. ಮೊನ್ನೆ ಮೊನ್ನೆ ಮೈಸೂರಾಯ ಸಾಹೇಬರಿಗೆ ಅಲ್ಲಿಯ ಪ್ಲಾಂಟರ್ಸ್ ಸಂಘದವರು ಕೊಟ್ಟ ಮಾನಪತ್ರದಲ್ಲಿ ಇದಕ್ಕೆ ವಿರುದ್ಧವಾಗಿ ನಿರ್ದೇಶವಿರುವುದು. ಆದರೆ ಸ್ವತಂತ್ರವಾದದ್ದೊಂದು ಕರ್ಣಾಟಕ ಪ್ರಾಂತವನ್ನೆ ಮಾಡಿಬಿಟ್ಟರೆ ಈ ಪರಸ್ಪರ ವಿರುದ್ಧ ವಿಚಾರಗಳೆಲ್ಲವೂ ಹೋಗಿ ಎರಡೂ ಪಕ್ಷದವರಿಗೆ ಸಮಾಧಾನವಾಗಬಹುದು. ಯಾಕೆಂದರೆ ಕರ್ಣಾಟಕ ಪ್ರಾಂತವು ಈಗಿನಗಿಂತ ದೊಡ್ಡದಾಗುವದಾದರೂ ವಿಪರೀತ ದೊಡ್ಡದು ಆಗುವುದಿಲ್ಲ. ಮುಂದೆ ಈ ಬಗೆಯ ಪ್ರಾಂತರಚನೆಯು ಆಗುವದಕ್ಕೆ ಪೂರ್ವ ಸಿದ್ಧತೆಯೆಂದೋ ಏನೋ? ಧಾರವಾಡವು ಈಗಾಗಲೆ ಮುಂಬಯಿ ಇಲಾಖೆಯ ದಕ್ಷಿಣಭಾಗದ ರಾಜಧಾನಿಯಾದಂತೆ ಆಗಿ ಹೋಗಿದೆ. ಇದರ ಹವೆಯು ಬಲು ಸೊಗಸಾಗಿದ್ದು ಇಲ್ಲಿ ರಮ್ಯವಾದ ಸುಳಿಗಾಳಿಯು ಬೀಸುತ್ತದೆ. ಇದಲ್ಲದೆ ಧಾರವಾಡವು ಎಲ್ಲ ಕನ್ನಡ ಜಿಲ್ಲೆಗಳಿಗೆ ಮಧ್ಯವರ್ತಿಯಾದ ನಗರವಾಗಿದೆ. ಮದ್ರಾಸ, ಮುಂಬಯಿ, ಹೈದರಾಬಾದ ಈ ಮೂರು ಊರುಗಳಿಗೂ ಈ ಊರಿಗೂ ನಡುವೆ ಹೊಗೆಬಂಡಿಯ ಮಾರ್ಗಗಳುಂಟು. ಮೈಸೂರಿನವರು ಹಾಕಬೇಕೆಂದಿದ್ದ ಲೋಹ ಮಾರ್ಗವು ಸಿದ್ಧವಾದಕೂಡಲೆ ಧಾರವಾಡದಿಂದ ಕೊಡಗು ಮತ್ತು ಸೇಲಂಗಳಿಗೆ ಹೋಗಲಿಕ್ಕೂ ಸಮೀಪದ ಮಾರ್ಗಗಳಾಗುತ್ತವೆ. ಇಷ್ಟೆಲ್ಲ ಆಗಬೇಕಾದರೆ, ಕೆಲವು ಜಿಲ್ಲೆಗಳು ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಸೇರಬೇಕಾಗುತ್ತದೆ. ಆದರೆ ಇಷ್ಟಕ್ಕೆ ಗಾಬರಿಗೊಂಡು ಯಾರೂ ಸುಮ್ಮನಾಗಿ ಕುಳಿತುಕೊಳ್ಳಬಾರದು. ಹಿಂದಕ್ಕೆ ಹೀಗೆ ಬದಲಾದ ಉದಾಹರಣೆಗಳು ಅನೇಕವಾಗಿವೆ. ಹೋದ ೨೦ ವರ್ಷಗಳಲ್ಲಿ ಆಸಾಮ ಪ್ರಾಂತವು ಈ ಬಗೆಯಾಗಿ ಎರಡುಸಾರೆ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಸೇರಿಸಲ್ಪಟ್ಟಿತು. ಲಾರ್ಡ ಕರ್ಝನ್ ಸಾಹೇಬರು ಮೊದಲು ಅದನ್ನು ಪೂರ್ವ ಬಂಗಾಲಕ್ಕೆ ಕೂಡಿಸಿದರು, ಪುನಃ ಅದು ಅಲ್ಲಿಂದ ತೆಗೆಯಲ್ಪಟ್ಟು ಈಗ ಸ್ವತಂತ್ರ ಪ್ರಾಂತವಾಗಿದೆ. ೧೯೦೫ನೇ ಇಸವಿಯಲ್ಲಿ ಕೆಲವು ಹಿಂದೀ ಭಾಷೆಯನ್ನಾಡುವ ಸಂಸ್ಥಾನಗಳನ್ನು ಮಧ್ಯಪ್ರಾಂತಕ್ಕೆ ಕೊಟ್ಟು, ಒಡಿಸಾ ಭಾಷೆಯನ್ನಾಡುವ ಪ್ರದೇಶಗಳನ್ನು ಒರಿಸಾಕ್ಕೆ ಕೊಟ್ಟರು. ಬಂಗಾಲ ವಿಭಾಗದ ಕೋಲಾಹಲವೇಳಲಿಕ್ಕೆ ಈ ಭಾಷೆಯ ಏಕೀಕರಣವೇ ಮೂಲವಾಗಿತ್ತು. ಆದದರಿಂದ ಮುಂಬಯಿ ಮದ್ರಾಸ ಇಲಾಖೆಗಳಲ್ಲಿರುವ ಕನ್ನಡ ಪ್ರದೇಶಗಳನ್ನೂ, ಕೊಡಗು ಹಾಗು ಬೇರೆ ಕನ್ನಡ ಪ್ರದೇಶಗಳನ್ನು ಒಟ್ಟುಗೂಡಿಸಿ, ಧಾರವಾಡವನ್ನೇ ರಾಜಧಾನಿಯಾಗಿ ಮಾಡಿ, ಮಡಿಕೇರಿಯನ್ನು ಸರಕಾರದ ಬೇಸಗೆಯ ವಾಸಸ್ಥಾನವಾಗಿ ಮಾಡಿ, ಸ್ವತಂತ್ರವಾದ ಬ್ರಿಟಿಶ ಕರ್ಣಾಟಕವನ್ನೇ ಸಿದ್ಧಪಡಿಸಲಿಕ್ಕಿಸುವುದೇ ನಾವು ಮಾಡತಕ್ಕ ಮಹಾಕಾರ್ಯಗಳಲ್ಲಿ ಅತ್ಯಂತ ಮಹತ್ವದ ಕಾರ್ಯವು. ಈ ಹೊಸ ಕರ್ಣಾಟಕ ಪ್ರಾಂತಕ್ಕೆ ಧಾರವಾಡವು ಕೇಂದ್ರವಾಗಿಯೂ, ಕಾರವಾರವು ಪೂರ್ವದ ಮುಖ್ಯ ಪಟ್ಟಣವಾಗಿಯೂ, ಕಾರವಾರ ಮೊದಲಾದ ದಂಡೆಯ ಪಟ್ಟಣಗಳು ಮುಖ್ಯ ಬಂದರಗಳಾಗಿಯೂ ಪರಿಣಮಿಸುವವು. ಈ ಪ್ರಾಂತವು ವಿಸ್ತಾರವಾದರೂ ತೀರ ದೊಡ್ಡದೂ ಅಲ್ಲ, ತೀರ ಸಣ್ಣದೂ ಅಲ್ಲದಂತೆ ಹವಣೆಯಾದದ್ದಾಗುವುದು. ಜನರಾದರೂ ತಮ್ಮದೊಂದು ಸ್ವತಂತ್ರಪ್ರಾಂತವಾದರೆ, ಅದರ ಏಳಿಗೆಯಲ್ಲಿ ವಿಶೇಷ ಮನಸ್ಸು ಹಾಕುವರು.

[illegible] ಕರ್ಣಾಟಕದಲ್ಲಿ ಈ ಚಳವಳಿಯು [illegible] ತಮ್ಮ ಕೇವಲ [illegible]

[illegible] ಜ್ಞಾನವನ್ನು ಮಾರಿಕೊಟ್ಟು, ಅವರ ಭಾವೀಕರು ಒಂದಾನೊಂದು ಕಾಲಕ್ಕೆ ಬರಿದ ಉತ್ಕೃಷ್ಟತೆಗೂ, ಮುಕ್ತ ಪ್ರಾಂತದ ಬಂಧುಗಳು ಪಡೆದಿರುವ ಉನ್ನತಸ್ಥಿತಿಗೂ ಅವರನ್ನು ಒಯ್ದು ತಲ್ಪಿಸುವದೇ ಈ ಚಳವಳಿಯ ಮುಖ್ಯ ಧ್ಯೇಯವಾಗಿರಬೇಕು. ಈ ಬಗೆಯಾದ ಧ್ಯೇಯವನ್ನು ಕರ್ಣಾಟಕದ ಯಾವ ಭಾಗದ ಜನರೂ ತಿರಸ್ಕರಿಸಕೂಡದು. ಮೈಸೂರಿನವರ ಸುದೈವದಿಂದ ಅವರಿಗೇನೋ ಈಗ ಒಂದು ಬಗೆಯ ಸ್ವರಾಜ್ಯವು ದೊರೆತಿದೆ; ಉತ್ತರೋತ್ತರ ದಿವಾಣರು ಒಬ್ಬರ ಮೇಲೊಬ್ಬರು ದೊರೆತಿದ್ದಾರೆ. ಈ ದಿವಾಣರು ಬ್ರಿಟಿಷ್ ಆಳಿಕೆಯ ಕೇವಲ ಅನುಕರಣವನ್ನೇ ಮಾಡದೆ, ಬೇಕಾದರೆ ತಮ್ಮ ಉದಾಹರಣೆಯನ್ನು ತೀಡಬೇಕೆಂಬ ಮಹತ್ವಾಕಾಂಕ್ಷೆಯುಳ್ಳವರಾಗಿದ್ದಾರೆ. ಬ್ರಿಟಿಷ್ ರಾಜ್ಯದಲ್ಲಿ ಪ್ರಚಂಡವಾದ ಚಳವಳಿಯನ್ನು ಮಾಡಿ ದೊರಕಿಸಿದ ಹಕ್ಕುಗಳು ಮೈಸೂರ ಪ್ರಾಂತದ ಜನರಿಗೆ ಅವರ ಸರಕಾರದವರು ತಾವಾಗಿಯೇ ಕೊಟ್ಟಿದ್ದಾರೆ. ಮೊದಲಿನ ದಿವಾಣರು ಹಾಕಿಕೊಟ್ಟ ಈ ಮೇಲುಪಂಕ್ತಿಯನ್ನು ಅವರ ತರುವಾಯದ ಪ್ರತಿಯೊಬ್ಬ ದಿವಾಣರೂ ತಪ್ಪದೆ ಶ್ರದ್ಧೆಯಿಂದ ಅನುಕರಣ ಮಾಡುತ್ತ ಬಂದಿದ್ದಾರೆ. ಇದು ಮಟ್ಟಿಗೆ ಮೈಸೂರು ಬ್ರಿಟಿಷ್ ಕರ್ಣಾಟಕಕ್ಕಿಂತ ಮುಂದೆ ಹೋಗಿರುವದೆಂದು ಹೇಳಲು ಅಭ್ಯಂತರವಿಲ್ಲ. ಆದರೆ ಒಂದು ಮಾತಿನಲ್ಲಿ ಲಾಭವಾದರೆ ಮತ್ತೊಂದು ಮಾತಿನಲ್ಲಿ ಹಾನಿಯಾಗೇ ಆಗುವದೆಂಬುದು ಸ್ವಭಾವಸಿದ್ಧವಾದ ನಿಯಮವಾಗಿದೆ. ಈ ನಿಯಮಕ್ಕನುಸರಿಸಿ ಜನರಿಗೆ ಪ್ರಯಾಸವಿಲ್ಲದೆ ರಾಜಕೀಯ ಹಕ್ಕುಗಳು ದೊರೆಯುವದರಿಂದ ಸಂಕಟಗಳೊಡನೆ ಹೋರಾಡುವಾಗ ದೊರೆಯುವ ಶಿಕ್ಷಣವು ಸಿಗಲಿಕ್ಕೆ ಆಸ್ಪದವಿಲ್ಲದಂತಾಗಿ ಅವರು ತಮಗೂ ತಮ್ಮ ದೇಶಕ್ಕೂ ಕಲ್ಯಾಣವಾಗುವ ಹಾಗೆ ಆ ರಾಜಕೀಯ ಹಕ್ಕುಗಳನ್ನು ಉಪಭೋಗಿಸಲಿಕ್ಕೆ ಅಪಾತ್ರರಾಗುತ್ತಾರೆ. ಸ್ವಾಯತ್ತರಾಷ್ಟ್ರದ ಪ್ರಜೆಗಳಲ್ಲಿ ಅವಶ್ಯವಾಗಿರಬೇಕಾದ ಗುಣಗಳು ಅವರಲ್ಲಿ ಹುಟ್ಟುವುದಿಲ್ಲ. ಆದುದರಿಂದ ತಮಗೆ ದೊರೆತ ಹಕ್ಕುಗಳೊಡನೆಯೇ ತಮ್ಮ ಮೇಲೆ ಜವಾಬದಾರಿಗಳೂ ಬರುತ್ತವೆಂಬ ಸಂಗತಿಯನ್ನು ತಿಳಿಸಿ ಅವರಿಗೆ ಮೇಲಿಂದ ಮೇಲೆ ಎಚ್ಚರಗೊಟ್ಟು ಅವರನ್ನು ನಿಜವಾದ ರಾಜಕೀಯ ಪ್ರಗತಿಯ ಯಥಾರ್ಥವಾದ ಮಾರ್ಗಕ್ಕೆ ಹಚ್ಚುವುದು ಅತ್ಯಂತ ಅವಶ್ಯಕ ಸಂಗತಿಯಾಗಿದೆ.

ಉದಾತ್ತವಾದ ವಿಚಾರಗಳು ಹಾಗು ಯಥಾರ್ಥವಾದ ಸಂಸ್ಕೃತಿ ಇವುಗಳ ದೃಷ್ಟಿಯಿಂದ ನೋಡಿದರೆ ಮೈಸೂರು ಪ್ರಾಂತದೊಳಗಿನ ಸಾಮಾನ್ಯ ಜನರು ಬ್ರಿಟಿಷ್ ಇಲಾಖೆಯೊಳಗಿನ ಜನಸಮೂಹದಂತೆಯೇ ಹಿಂದುಳಿದವರಾಗಿರುವರು. ಆದಕಾರಣ ರಾಜಕೀಯ ಸಾಮಾಜಿಕ ಧಾರ್ಮಿಕ ಹಾಗು ಆರ್ಥಿಕ ವಿಷಯಗಳಲ್ಲಿ ಜಗತ್ತಿನೊಳಗೆ ಯಾವ ಹೊಸ ವಿಚಾರಗಳ ಉದಯವಾಗಿರುವದೆಂಬುದನ್ನು ಜನರಿಗೆ ತಿಳಿಸಿ ಹೇಳುವುದಕ್ಕಾಗ ಬ್ರಿಟಿಷ್ ಇಲಾಖೆಯಲ್ಲಿಯಂತೆಯೇ ಮೈಸೂರ ಇಲಾಖೆಯಲ್ಲಿಯೂ ಈ ಬಗೆಯ ಸತತವಾದ ಚಳವಳಿಯನ್ನು ಮಾಡುವುದ ಅವಶ್ಯವಾಗಿದೆ. ಇನ್ನು ಹೈದರಾಬಾದ ಪ್ರಾಂತದಲ್ಲಿರುವ ಕರ್ಣಾಟಕರನ್ನು ಬ್ರಿಟಿಷ್ ಇಲಾಖೆಯಲ್ಲಿರುವ ಕರ್ಣಾಟಕರ ಸ್ಥಿತಿಗೆ ತರಬೇಕಾದರೆ ಕೂಡ ಅತ್ಯಂತ ಶ್ರಮಪಟ್ಟು ಪ್ರಯತ್ನಮಾಡಬೇಕು. ಹೈದರಾಬಾದ ಪಟ್ಟಣಕ್ಕೂ ಅಲ್ಲಿಯ ಕನ್ನಡ ಜಿಲ್ಲೆಗಳಿಗೂ ಬಹಳ ದೂರ ಅಂತರವಿರುವುದರಿಂದ ರಾಜಧಾನಿಯಲ್ಲಿಯ ಸುಧಾರಣೆಯು ಆ ಜಿಲ್ಲೆಗಳಿಗೆ ಮುಟ್ಟಬೇಕಾದರೆ ಬಹಳ ದಿವಸಗಳು ಬೇಕು. ಹೀಗೆ ಹೇಳಿದ ಮಾತ್ರಕ್ಕೆ ನಾನು ನಿಜಾಮ ಸರಕಾರಕ್ಕೆ ದೋಷ ಕೊಡುತ್ತೇನೆಂದು ಯಾರೂ ಊಹಿಸಕೂಡದು. ನಿಜಾಮ ಸರಕಾರವು ದಿನದಿನಕ್ಕೆ ತೀರ ಹೊಸ ಸುಧಾರಣೆಗಳನ್ನು ಕೂಡ ಅಮಲಿನಲ್ಲಿ ತರಹತ್ತಿದೆ. ಆ ಸರಕಾರದಲ್ಲಾಗುವ ಸುಧಾರಣೆಗಳ ಲಾಭವು ಅಲ್ಲಿಯ ಯಾವತ್ತು ಜನರಿಗೆ ದೊರೆಯುವವು. ಆದರೆ ಅಲ್ಲಿಯ ಕನ್ನಡಿಗರಿಗೆ ಕೆಲವು ಹೆಚ್ಚಿನ ತೊಂದರೆಗಳಿರುತ್ತವೆ. ಅವುಗಳನ್ನು ದೂರ ಮಾಡಲಿಕ್ಕೆ ಅಲ್ಲಿಯ ಕರ್ಣಾಟಕರೇ ಪ್ರಯತ್ನ ಮಾಡಲಿಕ್ಕೆ ಬೇಕು. ಅವರನ್ನು ಈಗಿನ ನಿರುತ್ಸಾಹಜನಕವಾದ ಆಲಸ್ಯದೊಳಗಿಂದಲೂ ಸ್ತಬ್ಧವಾದ ಹಾಗು ನಿರ್ಜೀವವಾದ ಜೀವನ ಕ್ರಮದೊಳಗಿಂದಲೂ ಎತ್ತಿ ತೆಗೆದು ಅವರಲ್ಲಿ ಜಾಗೃತಿಯನ್ನುಂಟುಮಾಡದೆ ಹೋದರೆ, ಅಲ್ಲಿಯ ಜನರು ನಿಜಾಮ ಸಾಹೇಬರು ಪ್ರಜೆಗಳ ಹಿತಕ್ಕಾಗಿ ದಯಪಾಲಿಸುವ ಸುಧಾರಣೆಗಳ ಲಾಭವನ್ನು ತೆಗೆದುಕೊಳ್ಳಲಿಕ್ಕೆ ಅರ್ಹರಾಗರು. ಹೊಸ ಸುಧಾರಣೆಗಳಿಂದುಂಟಾಗುವ ರಾಜಕೀಯ ಪ್ರಗತಿಯ ಮಾರ್ಗದಲ್ಲಿ ಕರ್ನಾಟಕವು ಮುಗ್ಧವಾಗಿ ಅಷ್ಟಕ್ಕೆಹಚ್ಚಿಕೊಂಡು ಕುಳಿತು ಕೊಳ್ಳದೆ ಮುಂದೆ ಹೆಜ್ಜೆಯಿಡಬೇಕಾದರೆ ಈ ಕರ್ನಾಟಕತ್ವದ ಕಲ್ಪನೆಯನ್ನು ಬ್ರಿಟಿಶ್ ಕರ್ನಾಟಕದಲ್ಲಿ ಹಬ್ಬಿಸುವದು ಅತ್ಯಂತ ಅವಶ್ಯ. ಸಾಮಾನ್ಯ ಜನರಿಗೂ ನಾಗರಿಕತ್ವದ ಹಕ್ಕುಗಳು ತಿಳಿಯಹತ್ತಿದರೆ ಮಾತ್ರ ಹೊಸ ಸುಧಾರಣೆಗಳ ಯಶಸ್ವಿಯಾಗುವವು. ವಿದ್ಯಾಕಲಿತವರು ತಾವು ಗಳಿಸಿದ ಜ್ಞಾನವನ್ನು ಜನಸಮೂಹದಲ್ಲಿ ಹಬ್ಬಿಸದೇಕಲ್ಲದೆ ಬೇರೆ ಯಾವ ಮಾರ್ಗವಿದೆ? ಇದು ಸುಶಿಕ್ಷಿತರ ಕರ್ತವ್ಯವೇ ಅಲ್ಲವೇ? ಕರ್ನಾಟಕದ ಸುಶಿಕ್ಷಿತರು ಸ್ವಾರ್ಥವೆಲ್ಲವನ್ನೂ ಒತ್ತಟ್ಟಿಗಿಟ್ಟು ಈ ಕರ್ತವ್ಯವನ್ನು ಮಾಡಲಿಕ್ಕೆ ಟೊಂಕಕಟ್ಟಬೇಕಾಗಿದೆ. ಸುಶಿಕ್ಷಿತರಲ್ಲಿ ಈ ಕರ್ತವ್ಯದ ಅರಿವನ್ನುಂಟು ಮಾಡುವದೂ, ಶಾಲೆಗಳಲ್ಲಿಯೂ, ವಿದ್ಯಾಪೀಠಗಳಲ್ಲಿಯೂ ತಾವು ಸಂಪಾದಿಸಿದ ವಿದ್ಯೆಯ ಬೆಳಕನ್ನು ಹಳ್ಳಿ ಹಳ್ಳಿಗಳಿಗೆ ಸಹ ಒಯ್ದು ಮುಟ್ಟಿಸಿ, ಜನರಲ್ಲಿ ರಾಜಕೀಯ, ಸಾಮಾಜಿಕ ಮತ್ತು ಔದ್ಯೋಗಿಕ ಉನ್ನತಿಯನ್ನು ಉಂಟುಮಾಡುವದಕ್ಕೋಸ್ಕರ ನಿಃಸ್ವಾರ್ಥ ಬುದ್ಧಿಯಿಂದ ದೇಶಹಿತಕ್ಕಾಗಿ ದುಡಿಯುವ ತರುಣರ ಸಂಘವೊಂದನ್ನು ನಿರ್ಮಾಣ ಮಾಡುವದೂ ಈ ಪರಿಷತ್ತಿನ ಮುಖ್ಯ ಉದ್ದೇಶಗಳಾಗಿವೆ. ಆರೋಗ್ಯ ನೀತಿ, ಶಿಕ್ಷಣ ಉದ್ಯೋಗ ಮೊದಲಾದ ಸಕಲ ವಿಷಯಗಳಲ್ಲಿ ಪ್ರಗತಿಯ ಮಾರ್ಗವನ್ನು ತೋರಿಸಿಕೊಟ್ಟು ರಾಜಕೀಯ ಏಳಿಗೆಯನ್ನು ಸುಗಮವಾಗಿ ಮಾಡಿಕೊಡುವಂಥ ಮುದ್ರಣಾಲಯಗಳನ್ನೂ, ವರ್ತಮಾನ ಪತ್ರಗಳನ್ನೂ ಹೊರಡಿಸಿ ಆದರ್ಶ ಕಾರ್ಯಕಾರರು ಹಾಗು ಎರ್ಪಾಡಿನ ಕೆಳಗೆ ಹೇಳಿದ ಭಾವೀಸಂಯುಕ್ತ ಭರತಖಂಡದಲ್ಲಿ ಕರ್ನಾಟಕವು ತನ್ನ ಯೋಗ್ಯವಾದ ಸ್ಥಾನವನ್ನು ಪಡೆಯುವಂತೆ ನಾವೆಲ್ಲರೂ ಪ್ರಯತ್ನಿಸಬೇಕು.

ದಿವಂಗತರಾದ ಬಡಿಲ ದೂಮಪ್ಪೈಗಳವರ ಸ್ಮಾರಕ ಫಂಡು

ಮ ರಾ ಬಡಿಲ ದೂಮಪ್ಪೈಗಳು ದೈವಾಧೀನರಾದ ಕಾರಣ ನಮ್ಮ ಜನರಿಗೆ ಉಂಟಾದ ನಷ್ಟವನ್ನೂ ವ್ಯಸನವನ್ನೂ ವ್ಯಕ್ತಪಡಿಸುವರೆ ತಾ ೩೦ ೫ ೧೯೨೦ರಲ್ಲು ನಮ್ಮ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ರಾವ್ ಬಹದೂರ ಅತ್ತಾವರ ರಾಮಯಪೂಂಜರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಮ! ರಂಗರಾವ ಚೆಟ್ಟಿ ಸುಬ್ಬಯ್ಯಶೆಟ್ರಿ ಕರಿಯಂಗಳ ಮುತ್ತಯ ಶೆಟ್ರಿ ಮತ್ತು ಕೊಡಿಯಾಲ ಗುತ್ತು ತಿಮ್ಮಪ್ಪಾಳ್ವರು ದೂಮಪ್ಪೈಗಳವರ ಗುಣಕಥನವನ್ನು ಮಾಡಿ, ಕಾಲೋಚಿತವಾದ ಭಾಷಣವನ್ನು ಮಾಡಿದನಂತರ ಅವರು ನಮ್ಮ ಸಂಘಕ್ಕೆ ಮಾಡಿದ ಘನವಾದ ಸಹಾಯವು ಚಿರಸ್ಮರಣೀಯವಾಗುವಂತೆ ವಂತಿಗೆಯನ್ನು ಕೂಡಿಸಿ ಅವರ ಭಾವಚಿತ್ರವನ್ನು ಮಾಡಿಸುವುದಲ್ಲದೆ, ಬಾಕಿ ಉಳಿದ ಹಣವನ್ನು ಅವರ ಹೆಸರಲ್ಲಿ ಭವನಕ್ಕೆ ಬೇಕಾದ ಕಟ್ಟೋಣವನ್ನು ಕಟ್ಟಿಸಲಿಕ್ಕೆ ಯಾ ವಿದ್ಯಾರ್ಥಿವೇತನವನ್ನು ಏರ್ಪಡಿಸಲಿಕ್ಕೆ ವಿನಿಯೋಗಿಸಬಹುದೆಂಬುದಾಗಿ ನಿಶ್ಚಯಿಸಿ ಈ ಬಗ್ಗೆ ಅಗತ್ಯವಾದ ಏರ್ಪಾಡು ಮಾಡುವದೆ ಒಂದು ಕಮಿಟಿಯನ್ನು ಆರಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಗೃಹಸ್ಥರು ರೂಪಾಯಿ ೨೦೦ ಧನಸಹಾಯ ಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆ. ವಂತಿಗೆ ವಾಗ್ದಾನ ಮಾಡಿದವರು ಮತ್ತು ಇನ್ನು ಕೊಡಲುಳ್ಳವರು ತಮ್ಮ ಸಹಾಯಧನವನ್ನು ಕೆಳಗಿನ ವಿಳಾಸಕ್ಕೆ ದಯವಿಟ್ಟು ಕಳುಹಿಸಕೊಡಬೇಕಾಗಿ ವಿಜ್ಞಾಪನೆ.

ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನ, ಮಂಗಳೂರು, ತಾ. 31—5—1920 | ಪಿ. ಆರ್. ರಂಗನಾಥ ಪೂಂಜ, ಕಮಿಟಿ ಸೆಕ್ರೆಟರಿ

ಪ್ರಕಟಣೆ.

ಮಂಗಳೂರು ತಾಲೂಕು ಕದ್ರಿ ಗ್ರಾಮದ ಕೆಳಗಿನ [illegible] ರಲ್ಲಿರುವ ಮಿಂಗೇಲ ಮಿನೆಜರ ಮಗ ಸಾಲ್ವದೋರ್ ಮಿನೆಜಸನು ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—ಉಪ್ಪಿನಂಗಡಿ ತಾಲೂಕು ನರ್ಸನಳ್ಳಿ ಮಾಗಣೆ ನಡಗ್ರಾಮದ ಹಿರ್ತಿಲ್ಲಾಡೆ ಎಂಬಲ್ಲಿರುವ ಪುವಣಿ ಗೌಡನ ಮಗ ಚಂದಪ್ಪ ಗೌಡನು ತಾ 10 ೬ 20ರಲ್ಲಿ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿಯೂ ಮತ್ತು ಕಂಠೀರವ [illegible] ಪತ್ರಿಕೆಯಲ್ಲಿಯೂ ಸಹ ಪ್ರಕಟಿಸಿರುತ್ತಾನೆ. ನಾನು ಮತ್ತು ಸದರಿ ನಡ ಗ್ರಾಮದಲ್ಲಿರುವ ಬೋಜಾರ ಚಂದಪ್ಪ ಗೌಡ ಕೂಡ ಸದ್ರಿ ಹಿರ್ತಿಲ್ಲಾಡೆ ಚಂದಪ್ಪ ಗೌಡನಿಗೂ ಆತನ ಅಣ್ಣ ಹುಕ್ರ ಗೌಡನಿಗೂ ಸಹ ಎಂದರೆ ಕುದ್ತಲೆ ಮೊಕದಮೆಗೆ ಒಂದು ಅರ್ಜಿ ಆಗಬೇಕೆಂತ ಮೋಸಗೊಳಿಸಿ ಅವರಿಬ್ಬರಿಂದ ಖಾಲಿ ಕಾಗದದಲ್ಲಿ ಆಸ್ಪೆ ಹೆಬ್ಬೆಟ್ಟು ಪಡೆದು ರೂ 1986—4—0ಕ್ಕೆ ಪ್ರತಿಫಲ ಕೊಡದೆ ಡಿಮಾಂಡು ನೋಟು ಬನಾವಣೆಯಾಗಿ ನನ್ನ ಹೆಸರಲ್ಲಿ ಮಾಡಿದ್ದಾರೆ. ಬೆಳ್ತಂಗಡಿ ಸಬ್ ರಿಜಿಸ್ಟ್ರಾರರ ಆಫೀಸು ನಂಬ್ರ $\frac{350}{19—4—20}$ಕ್ಕೆ ರಿಜಿಸ್ಟ್ರಿಯಾದ ಬನಾವಣೆ ದಸ್ತವೇಜಿನಲ್ಲಿ ಕಂಡುಬರುವುದಾಗಿ ಆ ಕುರಿತ ನನಗ ಅಲ್ಯಾಹಿದ ನೋಟೀಸು ಕೊಟ್ಟಿದ್ದಾನೆಂತ ಹೇಳುವದಾದರು ಆ ಹಿರ್ತಿಲ್ಲಾಡೆ ಹುಕ್ರ ಗೌಡನು ಆ ಹಿರ್ತಿಲ್ಲಾಡೆ ಚಂದಪ್ಪ ಗೌಡ ಕೂಡ ಇಬ್ಬರು ಕೂಡಿ 1916ನೆ ಇಸವಿಯಲ್ಲು ರೂ 1505ಕ್ಕೆ ಡಿಮಾಂಡು ನೋಟು ನನಗೆ ಬರಕೊಟ್ಟ ನಂತರ ಅವರ ಅಸಲು ಬಡ್ಡಿ ಐವಜಿಗೆ ವ ಅನಂತರ ಪಡೆದ ಐವಜಿಗ ಕೂಡ ಆ ಚಂದಪ್ಪ ಗೌಡನು ಹುಕ್ರ ಗೌಡನು ಕೂಡಿ ಮೊತ್ತ ಲೆಕ್ಕ ಮಾಡಿ ತಾರೀಕ 29—6—19ರಲ್ಲು ಪುನಹ ಡಿಮಾಂಡು ನೋಟು ಬರಕೊಟ್ಟಿರುತ್ತಾರೆ. [illegible]ಳೆಯ ಗ್ರಾಮದ ಮಾನ್ಯೊಟ್ಟು ರಾಮ ಗೌಡನು ಮೃತನಾದ ನಂತರ ಸದರಿ ಹುಕ್ರ ಗೌಡನು ಆ ರಾಮ ಗೌಡನ ಆಸ್ತಿಯ ಎಗ್ಜಿಕ್ಯೂಟರನಾಗಿದ್ದು ಆ ಆಸ್ತಿ ಕುಟುಂಬ ಪ್ರಯೋಜನಕ್ಕೆ [illegible] ಆ ರಾಮ ಗೌಡನು ಮಾಡಿ[illegible] ನಾಲಕ್ಕೂ [illegible] ನಂತರ ಪುತ್ತೂರ ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟ ಕ್ರಮಸಂಬ್ರ $\frac{164}{14}$ಕ್ಕೆ ಫೈಸಲು ದಾಖಲ ಮಾಡಿಕ್ಕೂ ಆ ಸಂಬ್ರ [illegible] ವಕೀಲು ವ್ಯಾಜ್ಯ ದಾಖಲು ಮಾಡಲಿಕ್ಕೂ ಸಹ ಸದರಿ ಎಗ್ಜಿಕ್ಯೂಟರ್ ಹುಕ್ರ ಗೌಡನು ಮಾಡಿದ [illegible] ಸಹ ಸದರಿ ರಾಮ ಗೌಡನ ವಿಧವೆ ಮಂಜಕ್ಕು ಸದರಿ ಎಗ್ಜಿಕ್ಯೂಟರ್ ಹುಕ್ರ ಗೌಡ, ಬೋಜಾರ ಚಂದಪ್ಪ ಗೌಡ ಕೂಡ ನನಗೆ ರಿಜಿಸ್ಟ್ರಿ ದಸ್ತವೇಜು ಬರಕೊಡುವಾಗ್ಗೆ ಹಿರ್ತಿಲ್ಲಾಡ ಚಂದಪ್ಪ ಗೌಡನು ಆತನ ಅಣ್ಣ ಸದರಿ ಎಗ್ಜಿಕ್ಯೂಟರ ಹುಕ್ರ ಗೌಡ ಕೂಡ ಬರಕೊಟ್ಟ ನೋಟುಗಳ ವಿವರ ಅಲ್ಯಾಹಿದ ದಸ್ತವೇಜಿನಲ್ಲಿ ತೋರಿಸ್ಸಿಯದೆ. ನನ್ನ ಕುಟುಂಬದ ಕಾಲವಂಗೆ [illegible] ಮೇಲೆ ಮನಕ್ಲೇಶ ಇದ್ದರೂ ನನ್ನಲ್ಲಿ [illegible] ಹೋಗುತ್ತಾ [illegible] ನನ್ನ ಮನೆಯಲ್ಲಿದ್ದ ಕಾಗದಪತ್ರಗಳು ದಸ್ತವೇಜು ನೋಟುಗಳು ವಗೈರೆ ಕಟ್ಟಿ ಇಟ್ಟ ಗಂಟ [illegible] ಆದ ಸಂಗತಿ ಆ ನನ್ನ ಕುಟುಂಬದವರು ಆ ಹಿರ್ತಿಲ್ಲಾಡೆ ಚಂದಪ್ಪ ಗೌಡ ವಗೈರರಿಗೆ ವರ್ತಮಾನ ಕೊಟ್ಟ ಮೇಲ ಆ ಚಂದಪ್ಪ ಗೌಡನು ಸದರಿ ಹುಕ್ರ ಗೌಡ ಆ ಮ್ಯಾನೊಟ್ಟು ಮಂಜಕ್ಕ ವ ನನ್ನ ದ್ವೇಷಿಕರು ಕೂಡ ಒಂದಾಗಿ ನನ್ನ ಹಣ ದಕ್ಕಿಸಿಕೊಳ್ಳಬೇಕೆಂಬ ಇರಾದೆಯಿಂದ ದುರಾಲೋಚನೆ ಸೃಷ್ಟಿ ಮಾಡಿ ನೋಟೀಸು ಮೂಲಕ ಪ್ರಕಟಿಸಿದ ಸಂಗತಿಗಳು ಸುಳ್ಳಾಗಿರುತ್ತವೆ. ಆ ಹಿರ್ತಿಲ್ಲಾಡ ಚಂದಪ್ಪ ಗೌಡ ಹುಕ್ರ ಗೌಡ ಮಂಜಕ್ಕನ ಕೂಡಾ ನನಗೆ [illegible] ರಿಜಿಸ್ಟ್ರಿ ನೋಟೀಸುಗಳಿಗ ಅಲ್ಯಾಹಿದ ಉತ್ತರ ಬರೆದಿರುತ್ತೇನೆ.

S. Minezes.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟು ಕೋರ್ಟಿನಲ್ಲಿ

O P ನಂಬ್ರ $\frac{42}{1920}$

ಎ ಸುಂದರರಾವ ವಗೈರೆ—ಅರ್ಜಿದಾರರು

ಮತ್ತು

ಎ ಲಕ್ಷ್ಮಣ ರಾವ—ರಸ್ಪೊಂಡೆಂಟ

ಸದರಿ ಅರ್ಜಿದಾರರು ಮೃತಪಟ್ಟ ಎ ಅನಂತರಾಯರು ಮ್ಯಾನರ ಮಕ್ಕಳಾದ ರಘುನಾಥ, ದತ್ತಾತ್ರಿಯ ಸಂಜೀವ ಮತ್ತು ಪ್ರಭಾಕರ ಇವರ ದೇಹದ ವ ಇಮ ಹಕ್ಕಿನ ಬಾಬತು ಸೊತ್ತುಗಳ ಗಾರ್ಡಿಯನರಾಗಿ ಸಹ ತಮ್ಮನ್ನು ನೇಮಕ ಮಾಡಬೇಕಾಗಿ ವಗೈರೆ ಅಪೇಕ್ಷಿಸಿ ಅರ್ಜಿ ದಾಖಲು ಮಾಡಿರುತ್ತಾರೆ. ಸದರಿ ಅರ್ಜಿಯು ತನಿಕೆ ಒಗ್ಗ ಮೇಲ್ಕಂಡ ಕೋರ್ಟಿನಲ್ಲಿ ತಾ 2—7—20ಕ್ಕೆ ಇಟ್ಟಿರುತ್ತದೆ.

ಮಂಗಳೂರ ತಾ [illegible] | G KRISHNA RAO, *Vakil for Petitioners*

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟು ಕೋರ್ಟಿನಲ್ಲಿ

ಓ ಪಿ ನಂಬ್ರ $\frac{45}{1920}$

1 ಅರಬಿಬ್ಯಾರಿ
2 ಅವಿಮ್ಮಾ — ಅರ್ಜಿದಾರರು
3 ಐಸಮ್ಮಾ

ಅರಿಕಾಡಿ ಗ್ರಾಮದಲ್ಲಿ ಮೃತಪಟ್ಟ ಮಮ್ಮದಬ್ಯಾರಿಯಿಂದ ಸಾಲವಸೂಲಿ ಕುರಿತು ವಾರಿಸು ಸರ್ಟಿಫಿಕೇಟು ಅಪೇಕ್ಷಿಸಿ ಅರ್ಜಿದಾರರು ಕೊಟ್ಟ ಸದರಿ ಅರ್ಜಿಯು ತಾ 3—7—20ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನಿಕೆಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪ ಇದ್ದರೆ ಸದರಿ ತಾರೀಕಿಗೆ ಕೋರ್ಟ ಮುಂದೆ ಹಾಜರಾಗತಕ್ಕದ್ದು.

ತಾ. 7—6—1920. | B. Venkata Rau Baliga, *Vakil for Petitioners*

ದಿ ಕೆನರಾ ಎಂಟರ್‌ಪ್ರೈಜ್, ಲಿಮಿಟೆಡ್.

ಪುತ್ತೂರು ದಕ್ಷಿಣ ಕನ್ನಡ.

(1913ನೇ ಇಸವಿಯ ಇಂಡಿಯನ್ ಕಂಪೆನಿಗಳ ಆಕ್ಟಿಗನುಸಾರವಾಗಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ.)

ಮೂಲಧನ:—ರೂಪಾಯಿ 200,000—ರೂಪಾಯಿ 25ರ 8,000 ಹಿಸೆಗಳಿಗೆ ವಿಭಾಗಿಸಲ್ಪಟ್ಟಿರುತ್ತದೆ. ಹಿಸೆಗಳನು ಮನವಿ ಮೂಲಕ ಅಪೇಕ್ಷಿಸಿ ಯಾರೂ ಪಡಕೊಳ್ಳಬಹುದು.

ಮನವಿಯೊಂದಿಗೆ ಪ್ರತಿ ಹಿಸೆಗೆ ರೂಪಾಯಿ 5 ಮತ್ತು ಪ್ರವೇಶಫೀಸು ಆಣೆ 4 ಅಂತು ರೂ. 5—4—0; ಮನವಿ ಅಂಗೀಕರಿಸಿದ ಬಳಿಕ ಕೊಡೋಣಾಗುವ ಎಲ್ಲೋಟಿಮೆಂಟ್ ನೋಟಿಸಿನ ವಾಯಿದೆಗೆ ರೂ. 5 ಕೊಡತಕ್ಕದ್ದು. ಬಾಕಿ ರೂ. 15ನ್ನು ಸರಿಯಾದ 3 ಕಂತುಗಳಿಂದ ಕೇಳಿದ ಹಾಗೆ ಪಾವತಿ ಮಾಡತಕ್ಕದ್ದು. ಆದರೆ ಒಂದು ಕಂತು ಕೇಳಿದ ಬಳಿಕ ಕನಿಷ್ಠಪಕ್ಷಕ್ಕೆ 2 ತಿಂಗಳ ಅವಧಿಗೆ ಮುಂಚಿತವಾಗಿ ಇನ್ನೊಂದು ಕಂತು ಕೇಳೋಣಾಗಲಿಕ್ಕಿಲ್ಲ.

ಪ್ರೊಸ್ಪೆಕ್ಟಸಿನ ಬದಲಾಗಿ ಜ್ವೊಯಿಂಟ್ ಸ್ಟಾಕ್ ಕಂಪೆನಿಗಳ ಅಸಿಸ್ಟಾಂಟ್ ರಿಜಿಸ್ಟ್ರಾರರ ಬಳಿ ದಾಖಲು ಮಾಡಿದ ಸ್ಟೇಟ್‌ಮೆಂಟಿನಲ್ಲಿ ಕಾಣಿಸಿದ ಪ್ರಕಾರ ರೂ. 20,000ಕ್ಕೆ ಸರಿಯಾದ 800 ಹಿಸೆಗಳು ಈ ವೊದಲೇ ಹಂಚಲ್ಪಟ್ಟಿರುತ್ತವೆ.

ಡ್ಯಾರೆಕ್ಟರರು.

1. ಮ| ರಾ| ರಾ| ಉಳ್ಳಾಲ ಸಾಂತಯ್ಯ ಕಿಣಿ, ಅವರ್ಗಳ್. ... ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಮಂಗಳೂರು.
2. „ „ ಎಮ್. ನರಸಿಂಹ ಮರ್ತುಭಂಡಾರಿ, „ ... ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ವ ಸಾಹುಕಾರ, ಮಂಗಳೂರು.
3. „ „ ಎಮ್. ಮುದ್ಲಗಿರಿ ಪಾಂಡುರಂಗ ಪೈ, „ ... ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ವ ಸಾಹುಕಾರ, ಮಂಗಳೂರು.
4. „ „ ಎಚ್. ಕೊರಗಪ್ಪ, „ ... ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ಮತ್ತು ಒನರರಿ ಬೆಂಚ್ ಮೆಜಿಸ್ಟ್ರೇಟ್, ಮಂಗಳೂರು.
5. „ „ ಮಂಜೇಶ್ವರ ಜನಾರ್ಧನ ಭಟ್, „ ... ತಾಲೂಕು ಬೋರ್ಡ್ ಮೆಂಬರ್ ವ ಸಾಹುಕಾರ, ಪುತ್ತೂರು.
6. „ „ ಎಚ್. ಅನಂತ ಕಾಮತ್, „ ... ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಪುತ್ತೂರು.
7. „ „ ಅರಿಯಡ್ಕ ಸುಬ್ಬಯ್ಯರೈ, „ ... ವರ್ಗದಾರ, ಅರಿಯಡ್ಕ.
8. „ „ ಸೊರಕೆ ಎಲಿಯಣ್ಣ, „ ... ವರ್ಗದಾರ ಮತ್ತು ಸಾಹುಕಾರ, ಪುತ್ತೂರು.
9. „ „ ಎ. ಗೋವಿಂದ ಶೆಣೈ, „ ... ಮೇನೇಜಿಂಗ್ ಡೈರೆಕ್ಟರ್, ಪುತ್ತೂರು.

ಬೇಂಕರ್ಸ್.

1. ಮದ್ರಾಸ್ ಬೇಂಕ್ ಮತ್ತು 2. ಕೆನರಾ ಬೇಂಕ್, ಲಿಮಿಟೆಡ್, ಮಂಗಳೂರು.

ಲೀಗಲ್ ಎಡ್ವಾಯಿಸರರು.

1. ಮ| ರಾ| ರಾ| ಎಚ್. ಗಣಪತಿರಾವ್, ಅವರ್ಗಳ್,—ಪ್ಲೀಡರ್, ಪುತ್ತೂರು.
2. „ „ ಎಮ್. ಮಾಧವರಾವ್ „ —ಬಿ. ಎ., ಬಿ. ಎಲ್, ಪ್ಲೀಡರ್, ಮಂಗಳೂರು.

ರಿಜಿಸ್ಟ್ರಿ ಮಾಡಲ್ಪಟ್ಟ ಆಫೀಸು.

"ಶ್ರೀ ವರದೇಂದ್ರ ಹೋಲ್" ಪೋಸ್ಟ್ ಆಫೀಸ್ ಬಳಿ, ಪುತ್ತೂರು.

ಸೂಚನಾ ಪತ್ರ.

ಉದ್ದೇಶಗಳು—(1) ಬೇಂಕಿಂಗ್ ಯಾನೆ ಹಣದ ಲೇವಾದೇವಿ ಮಾಡುವದು. (2) ವ್ಯಾಪಾರದ ದಲಾಲಿ ವ ಏಜನ್ಸಿ ಮಾಡುವದು. (3) ಕೈಗಾರಿಕೆ ಕಸಬುಗಳನ್ನು ಮಾಡುವದು. (4) ವ್ಯಾಪಾರ ಮಾಡುವದು. (5) ಕೃಷಿ ಮಾಡುವದು (ಉಪಯುಕ್ತವಾದ ಕೈಗಾರಿಕೆ ಸಮೇತ). (6) ಲಾಭಕರವೆಂತ ಕಂಡುಬರುವ ಇತರ ಯಾವ ಉದ್ಯೋಗವನ್ನಾದರೂ ಮಾಡುವದು.

(1) ಪುತ್ತೂರಿನಲ್ಲಿ ಒಂದು ಬೇಂಕು ಸ್ಥಾಪಿಸಲ್ಪಡುತ್ತಿದೆ.

(2) ಬರುವ ವರ್ಷ ಒಂದು ದಲಾಲಿ ಭಂಡಸಾಲೆ ತೆರಿಯುವ ಆಲೋಚನೆ ಇದೆ.

(3) ಹಿಟ್ಟು ತಯಾರಿಸುವ ಕಾರ್ಖಾನೆಯು ಪಶ್ಚಿಮ ಕರಾವಳಿಯಲ್ಲಿ ಬೊಂಬಾಯಿ ವಿನಹಾ ಬೇರೆ ಎಲ್ಲಿಯೂ ಇರುವದಿಲ್ಲ. ಆದಕಾರಣ ಅಂಥಾದ್ದೊಂದು ಕಾರ್ಖಾನೆಯನ್ನು ಸದ್ಯದಲ್ಲಿಯೇ ಮಂಗಳೂರಿನಲ್ಲಿ ಸ್ಥಾಪಿಸುವ ಆಲೋಚನೆ ಇದೆ.

ಮಿಕ್ಕ ಉದ್ದೇಶಗಳನ್ನು ನೆರವೇರಿಸುವರೆ ಹೆಚ್ಚು ದ್ರವ್ಯಾನುಕೂಲತೆಯು ಅವಶ್ಯಕವು. ಮಾತ್ರವಲ್ಲ, ಅವುಗಳಲ್ಲಿ ಹೆಚ್ಚು ತೊಂದರೆಗಳು ವ ನಷ್ಟ ಸಂಭವ ಕೂಡಾ ಇರಬಹುದಾದ ಕಾರಣ ಅವುಗಳು ಕೆಲವು ವರ್ಷಗಳ ತನಕ ಪ್ರಾರಂಭಿಸಲ್ಪಡಲಾರವು.

ಮುನಾಫೆ.

ಪ್ರಥಮ ವರ್ಷದಲ್ಲಿ ಹೆಚ್ಚಿನ ಸಮಯವು ಹಿಸೆಗಳ ಸಂಪಾದನೆಯಲ್ಲಿಯೇ ಕಳೆದುಹೋಗುವದರಿಂದ ಕಂಪೆನಿಗೆ ಸಾಕಷ್ಟು ಮುನಾಫೆ ಉಳಿಯುವರೆ ಅಸ್ಪದವಿಲ್ಲ. ಪರಂತು ಸದ್ಯದಲ್ಲಿಯೇ ಪ್ರಾರಂಭಿಸಲಿಕ್ಕಿರುವ ಉದ್ಯೋಗಗಳು (ಅಂದರೆ—ಬೇಂಕು, ಹಿಟ್ಟಿನ ಕಾರ್ಖಾನೆ ಮತ್ತು ದಲಾಲಿ ಭಂಡಸಾಲೆ, ನಷ್ಟಕ್ಕೆ ಎಡೆಯಿಲ್ಲದ ಮುನಾಫೆಯು ಮೂಲಿಗಳಾಗಿರುವದರಿಂದ ಬರುವ ವರ್ಷದಲ್ಲಿ ಮುನಾಫೆಯ ಹಣದಿಂದ ಕ್ಷೇಮನಿಧಿಗೋಸ್ಕರ ತಕ್ಕ ಅನುಕೂಲತೆಯನ್ನು ಮಾಡಿಯೂ ಸಾಕಷ್ಟು ಡಿವಿಡೆಂಡು ಹಂಚಲು ಸಾಧ್ಯವಾದೀತೆಂತ ಕಂಪೆನಿಯ ಡ್ಯಾರೆಕ್ಟರರು ಅಭಿಪ್ರಾಯಪಡುತ್ತಾರೆ.

ಹಿಸೆಗಳ ಬಗ್ಗೆ ಮಾಡತಕ್ಕ ಮನವಿ.

ಮನವಿ ಬಗ್ಗೆ ಛಾಪಾ ಫೋರ್ಮುಗಳು ಕ್ರಯ ವಿನಹಾ ಮೇನೆಜಿಂಗ್ ಡ್ಯಾರೆಕ್ಟರರಿಂದ ಒದಗಿಸಲ್ಪಡುವವು. ಮನವಿಗಳು ಫೀಸು ಸಮೇತ ಅವರ ಬಳಿಗೆ ಕಳುಹಿಸಲ್ಪಡತಕ್ಕದ್ದು. ಯಾದಾಸ್ತು ಮತ್ತು ಕ್ರಮಗಳ ಪುಸ್ತಕವನ್ನು ಕಂಪೆನಿಯ ಆಫೀಸಿನಲ್ಲಿ ಕೆಲಸ ಮಾಡುವ ದಿವಸಗಳಲ್ಲಿ ಯಾರೂ ನೋಡಿಕೊಳ್ಳಬಹುದು. ಹಿಸೆಗಳನ್ನು ಪಡಕೊಂಡವರು ಒಂದು ರೂಪಾಯಿ ಕೊಟ್ಟು ಅವುಗಳ ಪ್ರತಿಯನ್ನು ಸಹಾ ಕೊಂಡುಕೊಳ್ಳಬಹುದು. ಮನವಿದಾರರು ಕಂಪೆನಿಯ ಯಾದಾಸ್ತು ಮತ್ತು ಕ್ರಮಗಳನ್ನು ಓದಿನೋಡಿ ಅವುಗಳ ಅರ್ಥವನ್ನು ಸರಿಯಾಗಿ ಮಾಡಿಕೊಂಡಿದ್ದಾರೆಂತ ತಿಳಕೊಳ್ಳೋಣಾಗುವದು.

25 ಹಿಸೆಗಳನ್ನು ಪಡಕೊಂಡ ಮೊಬ್ಬರನು ಡ್ಯಾರೆಕ್ಟರನಾಗಲಿಕ್ಕೆ ಅರ್ಹನಾಗಿರುತ್ತಾನೆ.

☞ ಎಲ್ಲಾ ಕಾಗದಪತ್ರಗಳನ್ನು ಮೇನೆಜಿಂಗ್ ಡ್ಯಾರೆಕ್ಟರರ ವಿಳಾಸಕ್ಕೆ ಕಳುಹಿಸಿಕೊಡಬೇಕು.

ಪುತ್ತೂರು,
1?—?—1920

A. GOVINDA SHENOY,

[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	6-5	6-55
[illegible]	[illegible]	[illegible]	[illegible]	[illegible]	6-6	6-55
[illegible]	[illegible]	[illegible]	[illegible]	[illegible]	6-6	6-55
[illegible]	[illegible]	[illegible]	[illegible]	[illegible]	6-6	6-55
[illegible]	[illegible]	ಮೃಗಶಿರಾ	[illegible]	[illegible]	6-6	6-56
[illegible]	[illegible]	ಆರ್ದ್ರಾ	[illegible]	[illegible]	6-6	6-56
[illegible]	[illegible]	ಪುನರ್ವಸೂ	[illegible]	[illegible]	6-6	6-56

ಮಂಗಳೂರಿನ ವಾಯುಸ್ಥಿತಿ.

(ಗ್ರಾಂಟನೆಯ ಮೇಲ್ಲೆ),

Date ತಾರೀಕು	Temperature: ಉಷ್ಣ (ಕಾವು)		Rainfall ಮಳೆ	
	Maximum ಹೆಚ್ಚಿನದು	Minimum ಕಡಿಮೆ	ದಿನದ ಮಳೆ	[illegible]
4	90—2	76—5	2—87	...
5	84—5	76—6		...
6	86—5	72—5	0—67	...
7	83—4	76—3	5—27	...
8	82—7	73—4	2—58	...
9	82—2	73—6	1—53	—
10	83—6	73—3	0—47	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ.
[illegible] ಅಕ್ಕಿ ಮುಡಿ ಗಳ್ಗೆ ...	8—14	9—8
[illegible] „ „ ...	8—4	8—8
[illegible] ಮುಡಿ ಗಳ್ಗೆ ...	7—13	8—2
[illegible] ...	10—4	10—8
[illegible] ...	9—0	9—4
[illegible] ಗೋಣಿ ಗಳ್ಗೆ ...	16—0	16—8
[illegible] ಗೋಣಿ ಗಳ್ಗೆ ...	25—0	27—8
[illegible] ಗೋಣಿ ಗಳ್ಗೆ ...	13—8	14—8
[illegible] ಗೋಣಿ ಗಳ್ಗೆ ...	17—0	18—8
[illegible] ಗೋಣಿ ಗಳ್ಗೆ ...	—	20—0
[illegible] ಗೋಣಿ ಗಳ್ಗೆ ...	30—0	34—0
[illegible] ಗೋಣಿ ಗಳ್ಗೆ ...	18—8	19—8
ಹೆಸರು ಗೋಣಿ ಗಳ್ಗೆ ...	18—0	18—8
[illegible] ಖಂಡಿ ಗಳ್ಗೆ ...	105—0	110—0
[illegible] ಗೋಣಿ ಗಳ್ಗೆ ...	4—12	6—6
[illegible] ಖಂಡಿ ಗಳ್ಗೆ ...	115—0	125—0
[illegible] ಖಂಡಿ ಗಳ್ಗೆ ...	—	36—8
[illegible] ಖಂಡಿ ಗಳ್ಗೆ ...	57—8	62—8
[illegible] ಮಣ ಗಳ್ಗೆ ...	9—8	10—0
[illegible] ಮಣ ಗಳ್ಗೆ ...	11—0	11—4
[illegible] ...	9—4	9—6
[illegible] ಮಣ ಗಳ್ಗೆ ...	12—0	12—8
[illegible] ಮಣ ಗಳ್ಗೆ ...	8—8	9—8
[illegible] ಮುಡಿ ಗಳ್ಗೆ ...	10—0	10—8
[illegible] ಮುಡಿ ಗಳ್ಗೆ ...	6—0	6—4
[illegible] ಖಂಡಿ ಗಳ್ಗೆ ...	240—0	250—0
[illegible] ಖಂಡಿ ಗಳ್ಗೆ ...	90—0	95—0
[illegible] ...	95—0	100—0
[illegible] ಖಂಡಿ ಗಳ್ಗೆ ...	155—0	160—0
[illegible] ಮಣ ಗಳ್ಗೆ ...	25—0	30—0
[illegible] ಮುಡಿ ಗಳ್ಗೆ ...	3—11	3—12
[illegible] ಖಂಡಿ ಗಳ್ಗೆ ...	100—0	120—0
[illegible] ಮಣ ಗಳ್ಗೆ ...	24—4	25—0
[illegible] ಮಣ ಗಳ್ಗೆ ...	32—0	35—0
[illegible] ಗಳ್ಗೆ ...	31—8	[illegible]
[illegible] ಮಣ ಗಳ್ಗೆ ...	24—0	25—0

ಗೊನೊಕ್ಸ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂತಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿ ಬಣ್ಣದ ಅಥವಾ ಹಸುರುವರ್ಣದ ಕೀವು ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರಮಾಡುವಾಗ, ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಉರುಕುರೋಗಗಳಲ್ಲಿ ಉತ್ತಮ ಔಷಧವು ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ— ರೂ 1—0—0.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು.

ವಿಳಾಸ:— ಪಿ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪೆತಿ ಡಿಸ್ಪೆನ್ಸರಿ,
ಮಂಗಳೂರು.

ಭೃಂಗರಾಜ ತೈಲ

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ ನರೆತ ಕೂದಲು ಕಪ್ಪಾಗುತ್ತದೆ ಕೇಶದಾನಗಳು ವೃದ್ಧಿಹೊಂದುತ್ತವೆ ಕಣ್ಣಿನ ಮೇಲೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ ಪಿತ್ತನಾಶ ಮಾಡುತ್ತದೆ ನಾಲ್ಕು ಟಿನ್ನಿನ ಸೀಸೆ ಒಂದರ ಕ್ರಯ ರೂ 0—12—0

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದನ್ನು ತಲೆಗೆ ಹಚ್ಚಿಕೊಂಡರೆ ಪರಿಹಾರವಾಗುತ್ತದೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ. ನಾಲ್ಕು ಟಿನ್ನಿನ ಸೀಸೆ ಒಂದರ ಕ್ರಯ ರೂ. 1

ಜ್ವರಾಂತಕ ಮಾತ್ರೆ—ಈ ಮಾತ್ರೆಯನ್ನು ಉಪಯೋಗಿಸಿದರೆ ಎಲ್ಲಾ ಜ್ವರಗಳ ಪರಿಹಾರವಾಗುತ್ತದೆ ಉಪಯೋಗಿಸುವ ಕ್ರಮ, ಮತ್ತು ಗುಣ ತಿಳಿಸಿ ಕೊಂಡಲ್ಲಿ ಪ್ರಮಾಣಿಕಪಡಿಸುತ್ತದೆ 25 ಮಾತ್ರೆಗಳುಳ್ಳ ಸೀಸೆ ಒಂದರ ರೂ 1

ಪಂಚಸಾರ ಲೇಹ—ಅಜೀರ್ಣ, ಪಿತ್ತ ವಾತ ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತದೆ ಮತ್ತು ಇಂದ್ರಿಯವನ್ನು ಬಲಪಡಿಸಿ ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ ಒಂದು ಸೇರಿಗೆ ರೂ 1—4—0

ಮೇಲೆ ಬರೆದ ಔಷಧಿಗಳು ಸರ್ವ ವೈದ್ಯರಿಗೂ ಶಿರೋಮಣಿಯಾದ ಶ್ರೀ ಅಷ್ಟಾಂಗಾಮೃತಾವಲಂಬಿಗಳಾದ ಶ್ರೀ ಪೂಜ್ಯವಾದ ಋಷಿ ಪ್ರಣೀತ ವೈದ್ಯಗ್ರಂಥದ ಆಧಾರದಿಂದ ಆ ಪರಮಪೂಜ್ಯರ ಅನುಯಾಯಿಗಳಾದ ನಮ್ಮಿಂದ ತಯಾರಿಸಲ್ಪಟ್ಟಿರುತ್ತವೆ ಆರ್ಷವಚನವು ನಮಗೆ ಎಷ್ಟು ಸತ್ಯವಾಗಿ ತೋರುತ್ತದೋ ಅಷ್ಟೇ ಭರವಸೆಯಿಂದ ಈ ಔಷಧಗಳು ರೋಗಪರಿಹಾರಕವಾಗಿರುತ್ತವೆ

ಸೂಚನೆ—ಅಪೇಕ್ಷಿಸುವವರು ಕೆಟಲಾಗ್ ಬರೆದುಕೊಳ್ಳುವುದು ಉಚಿತವಾಗಿ ಕಳುಹಿಸಲಾಗುವುದು

ವಿಳಾಸ—ಆಯುರ್ವೇದಿಕ್ ಮತ್ತು ಹೊಮಿಯೊಪೆತಿಕ್
ಧರ್ಮವೈದ್ಯಶಾಲಾ, ಧರ್ಮಸ್ಥಳ, ದ ಕನ್ನಡ

To Get
BEST and CHEAPEST
EVERYTHING FROM BOMBAY

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ— ನಾವು ಈ ಕೆಳಗೆ ಹೆಸರು ತೋರುವ ಕಂಪೆನಿಯನ್ನು ಸದ್ಯಾ ತೆರೆದಿರುತ್ತೇವಾದುದರಿಂದ ಮುಂಬಯಿಯಿಂದ ಬೇಕಾಗುವ ಸಾಮಾನುಗಳನ್ನು ಅತ್ಯಲ್ಪ ಕಮಿಶನಿನ ಮೇಲ ಸಪ್ಲೈ ಮಾಡಿಕೊಡುತ್ತೇವೆ ಸಾಮಾನು ತರಿಸಲಪೇಕ್ಷಿಸುವವರು ನಮ್ಮ ಶರ್ತಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು

ಎವರ್ ರೆಡಿ ಸೇಫ್ಟಿ ರೇಜರು ಮತ್ತು ದಸ್ತೂರ ಎಂಟಿಟೇಪ್ ಎಂಬವ ಜ್ವರದ ಔಷಧವು ನಮ್ಮಲ್ಲಿ ದೊರಕುತ್ತದೆ ಶೀಘ್ರದಲ್ಲೇ ಬರೆಯಿರಿ

TEL. ADDRESS.
PARTSARTHI Bombay

BOMBAY CANARA TRADING CO.
Jamnadas Building, Pitha Street,
FORT BOMBAY

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ವೈದ್ಯಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.
Kalyanakaraka Bishagmandir
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

BANK OF MADRAS.
ಮದ್ರಾಸ್ ಬ್ಯಾಂಕ್

ಹೆಡ್ ಆಫೀಸು ಮದ್ರಾಸ್

ಮೂಲಧನ	ರೂ	75,00,000
ಕ್ಷೇಮನಿಧಿ	„	45,00,000

ಸೇವಿಂಗ್ಸ್ ಬ್ಯಾಂಕ್
— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾಗುವವು

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ 5,000ಕ್ಕೆ ಮಿಗದ ಮೊಬಲಗನ್ನು ಠೇವಣಾತಿಯಾಗಿಡಬಹುದು

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ 10,000ಕ್ಕೆ ಮೀರದ ಮೊಬಲಗಿನ ವರೆಗೆ ಬಡ್ಡಿ ಎಣಿಸಲಾಗುವುದು

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿನಿಂದ ಪಡೆಯಬಹುದು

ಸಿ. ಎಲ್ ಗೋರ್ಡನ್,
ಏಜಂಟ್, ಮದ್ರಾಸ್ ಬ್ಯಾಂಕ್ ಮಂಗಳೂರು

MANOLLASINI

ಶುದ್ಧಿ ಶಿಲಾಜಿತು
(ಯಾನೆ)
ಉತ್ತಮ ಕಲ್ಪದ.

ತೊಲೆ ೧ಕ್ಕೆ ರೂ ೧ ೫ ತೊಲೆ ಡಬ್ಬಿ ೧ಕ್ಕೆ ೨ ೧೨-೦.

ಅಂಚೆಹಾಸಲು ೪ ಆಣೆ ಬೇರೆ

ನಾಲ್ಕಾಣೆಯ ಚೀಟು ಕಳುಹಿಸಿದಲ್ಲಿ ನಮೂನೆ (Sample) ಕಳುಹಿಸಬಹುದು

ನಮ್ಮಲ್ಲಿ ಸ್ವಲ್ಪ ಮಾತ್ರ ಉಳಿದಿದೆ ಬೇಕಾದವರು ತ್ವರೆ ಮಾಡಿರಿ

ಪತ್ತೆ— ಮನೋಲ್ಲಾಸಿನಿ ಕಂಪನಿ,
Manollasini Co, 4 ಕಂಕನಾಡಿ ಪೋಸ್ಟು
4 Kankanady

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ
ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್"

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರಿಂದ ವಾತ, ಕಫ, ಜಗ್ಗ ಉಳುಕು ಗಾಯ, ತಲೆನೋವು, ಸೊಂಟನೋವು ಬೆನ್ನುನೋವು ಮುಂತಾದ ಎಲ್ಲಾ ತರದ ಬೇನೆಗಳು ಅತಿ ಕ್ಷಿಪ್ರದಲ್ಲಿ ಸಂಪೂರ್ಣ ಗುಣ ಹೊಂದುವವು. ಬಾಟ್ಲಿ ೧ರ ಕಿಮ್ಮತು ೦—೭—೦ ಒಂದು ಡಜನು ಬಾಟ್ಲಿಗಳಿಗೆ ರೂ ೪—೧೨—೦

"ಗಜಕರ್ಣದ ಮುಲಾಮು"

ಗಜಕರ್ಣ, ಹುಳುಕು ಬಿಷ್ಟಿ, ದದ್ರು, ತುಳಕಜ್ಜಿ, ಸೊ ಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮ ವ್ಯಾಧಿಗಳು ಎಂಥವು ಸಾರಿ ಹಾಗಿರುವವರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು ಬಾಟ್ಲಿ ೧ಕ್ಕೆ ೦—೪—೦ ಒಂದು ಡಜನಿಗೆ ರೂ ೩ ೦—೦

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರರಿಂದಲೂ ಶಿಫಾರಸ ಪತ್ರಗಳು ದೊರೆತಿರುವವು ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ಮಾಡಿರಿ

ದಿ. ಮ್ಯಾನೇಜರ್ — ಶ್ರೀ ದೇವಿಪ್ರಸಾದ ಕಂಪೆನಿ,
ಪೋಸ್ಟು ಜಾರ್ಕಳ, ದ ಕನ್ನಡ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

ಈ ಗಡಿಯಾರವು ಬಹು ಉತ್ಕೃಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು



ತೋರಿಸುವದು ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವದಿಲ್ಲ ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ 5—8—0

ನಮ್ಮ ವಿಳಾಸ — ವಿ. ಎ ಎಸ್ ಪಾಣಿ ಕಂಪೆನಿ,
ಸಾಹುಕಾರಪೇಟೆ, ಮದ್ರಾಸ್

ಕನ್ನಡ ಮಾತನ್ನು
ಕಲಿಯುವ ಚಿಕ್ಕಬಾಲಕರಿಗೆ ಉಪಯುಕ್ತವಾದ

ಅಜ್ಜಿ ಕಥೆಗಳು:

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೊಣಕಿನ ಕಾಳಪ್ಪ
ಅರ್ಗಣಿ ಮುದ್ದೆ
ಇಲಿಗಳ ಧಕ್ಕಧೈ
ಅಂಗಳ ದುಗ್ಗು
ಗುಡುಗುಡು ಗುಮ್ಮಟದೇವರು
ಸಿಗಡಿ ಯಾಕೆ ಒಣಗಲಿಲ್ಲ? ಹುಲಿಯೊ ಇಲಿಯೊ

ಈ ಎಂಟು ಪುಸ್ತಕಗಳ ಕ್ರಯ ಅಂಚೆ ಹಾಸಲು ಸೇರಿ ರೂ 0—7—0
ವಿ ಪಿ ರೂ 0—8—0

ಅಕ್ಷರಮಾಹಿತಿಯನ್ನುಂಟುಮಾಡುವದರಲ್ಲಿ ಸಹಕಾರಿಯಾಗಿವೆ ಶಬ್ದಗಳ ಉಪಯೋಗ, ಅವುಗಳ ಅರ್ಥ ಮತ್ತು ವಾಕ್ಯರಚನೆ ಇವುಗಳನ್ನು ಈ ಕಥೆಗಳ ಮೂಲಕ ಮಕ್ಕಳು ತಿಳಕೊಳ್ಳಬಹುದು ಬಾಲ್ಯಪ್ರಾಯದಿಂದಲೇ ಕ್ರಮವಾಗಿ ಬೆಳೆಯಬೇಕಾಗಿರುವ **ವಾಚನಪ್ರೀತಿಯು** ಮಕ್ಕಳಲ್ಲಿ ಈ ಚಿಕ್ಕ ಕಥೆಗಳನ್ನು ಓದುವದರಿಂದ ಹುಟ್ಟುವದು

ವಿಳಾಸ.— ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

'ತಿರುಚಿ ಸುಗಂಧನಿಧಿ ಕಾರಖಾನೆ

ಅನೇಕ ನಮೂನೆಯ ಹಿನಾ ಅಂಬರ್, ಜವ್ವಾಜ, ಪುನಗು, ಕಸ್ತೂರಿ, ಊದುಬತ್ತಿಗಳು, ಬಿಲ್ಲೆಗಳು, ಅರಗಜ, ಪಿತ್ತಾ, ಅತ್ತರ ಗಳು ಸೆಂಟ್ಸ್‌ಗಳು ಭೃಂಗಾಮಲಕ ತೈಲ, ಕುಂತಳವರ್ಧಿನಿ ತೈಲ, ಇವೇ ಮೊದಲಾದ ಸುಗಂಧ ದ್ರವ್ಯಗಳು ನಮ್ಮಲ್ಲಿ ತಕ್ಕುದಾಗಿ ಚಿಕರಿಯಾಗುತ ಮೈಸೂರ ಮದರಾಸು, ಬೊಂಬಾಯಿ ಕಲ್ಕತ್ತಾ, ಡಿಲ್ಲಿ, ಪಂಜಾಬು ಮುಂತಾದ ಇಂಡಿಯಾ ದೇಶದಲ್ಲಿ ಮತ್ತು ಬರ್ಮ, ಸಿಲೋನ್ ಜಪಾನ್ ಮುಂತಾದ ದ್ವೀಪಾಂತರಗಳಲ್ಲೂ ನಮ್ಮ ತಯಾರಿಯ ಸುಗಂಧದ್ರವ್ಯಗಳು ಪ್ರಖ್ಯಾತಿ ಹೊಂದಿವೆ ಒಂದಾವರ್ತಿ ನಮ್ಮ ಪದಾರ್ಥಗಳನ್ನು ತರಿಸಿನೋಡಿದರೆ ಅವುಗಳ ಗುಣಗಳು ತಿಳಿಯುವುವು

ರಹಿಂವಾರ್ ಊದುಬತ್ತಿಗಳು ೨೪ ರೂಪಾಯಿ ತೂಕವುಳ್ಳದ್ದು ಶೇರು ೧ಕ್ಕೆ

ಊದುಬತ್ತಿಗಳು

ಸುಗಂಧ ಕಳಾನಿಧಿ ಬತ್ತಿ	ಶೇರು	1ಕ್ಕೆ	12—0—0
ಕುಸುಮಗಂಧವರ್ಷಿನಿ	„	„	8—0—0
ಪುಷ್ಪೋಲ್ಲಾಸಿನಿ	„	„	6—0—0
ನಂಬರ್ ಎ ಅಂಬರ್	„	„	5—0—0
„ ಬಿ ಅಂಬರ್	„	„	3—0—0
„ ಸಿ ಅಂಬರ್	„	„	2—0—0
1ನೇ ಜವ್ವಾಜಿ ಬತ್ತಿ	„	„	6—0—0
2ನೇ „	„	„	4—0—0
1ನೇ ಕಸ್ತೂರಿ ಬತ್ತಿ	„	„	3—0—0
2ನೇ „	„	„	2—0—0
1ನೇ ಪುನುಗು ಬತ್ತಿ	„	„	1—8—0
2ನೇ „	„	„	1—0—0

ಅಮ್ಮಾಲಾ ಹತೀಬಿಲ್ಲೆಗಳು

	1 ತೊಲೆ	1/2 ತೊಲೆ	1/4 ತೊಲೆ
1ನೇ ನಂಬರ್	1 0 0	0 8 0	0 4 0
2ನೇ „	0 8 0	0 4 0	0 2 0

ಜವ್ವಾಜಿಗಂಧ ಅಥವಾ ಅರಗಜ

ಅವಲ್ 1ನೇ ನಂಬರ್ ತೊಲ 1ಕ್ಕೆ		2—0—0
„ 2ನೇ „	„	1—0—0

ಪುದುಕೋಟೆ ಕಸ್ತೂರಿ ಬಿಲ್ಲೆಗಳು

	1ತೊಲೆ	1/2ತೊಲೆ	1/4ತೊಲೆ
1ನೇ ನಂಬರ್	2 0 0	1 0 0	0 8 0
2ನೇ „	1 0 0	0 8 0	0 4 0

ಉತ್ತಮವಾದ ದಶಾಂಗ ಸೇರು 1ಕ್ಕೆ ರೂ. 1

ತಲೆಗೆ ಹಚ್ಚುವ ಕುಂತಳವರ್ಧಿನಿ ತೈಲ ಸೀಸೆ 1ಕ್ಕೆ ರೂ 1 ಸ್ನಾನಕ್ಕೆ ಉಪಯೋಗಿಸುವ ಭೃಂಗಾಮಲಕ ತೈಲ ಸೀಸೆ 1ಕ್ಕೆ 1—0—0

ಎಲ್ಲಾ ಸಾಮಾನುಗಳಿಗೆ ಟಪ್ಪಾಲು ಚಾರ್ಜು ಬೇರೆ ಬೀಳುತ್ತೆ ವ್ಯಾಪಾರಿಗಳಿಗೆ ಕಮಿಶನ್ ಪಡಾವಾಡಿ ಕಳುಹಿಸುವೆವು ಬೇಕಾದ ಸಾಮಾನುಗಳ ಹೆಸರು, ನಂಬರು, ಬರೆದರೆ ಆರ್ಡರಂತೆ ನೋಡಿ ರವಾನಿಸುವೆವು ನಮ್ಮ ಕಟ ಲಾಗು ಉಚಿತವಾಗಿ ರವಾನಿಸುವೆವು ನಮಗೆ ಕಾಗದ ಬರೆಯತಕ್ಕವರು ತಮ್ಮ ಹೆಸರು, ಗ್ರಾಮ, ಪೋಸ್ಟು, ಡಿಸ್ಟ್ರಿಕ್ಟು ಸ್ಪಷ್ಟವಾಗಿ ಬರೆಯಬೇಕು

Sugandhanidhi Office, ನಮ್ಮ ವಿಳಾಸ—ತಿರುಚಿ ಸುಗಂಧನಿಧಿ ಕಾರಖಾನೆ,
ಮೇಲಪ್ಪುದೂರು, ತಿರುಚಿರಾಪಳ್ಳಿ.
Malaipudur

"ವೈದ್ಯಾಮೃತ ಮಂದಿರಂ"

ಎಂಬ

[illegible] ಆಯುರ್ವೇದ ವೈದ್ಯಶಾಲೆಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸ[illegible] ಎಲ್ಲಾ ತೈಲಗಳೂ, ಆಸವಾರಿಷ್ಟಗಳೂ, ಕಷಾಯಗಳೂ, ದ್ರವ[illegible]ಗಳೂ, [illegible]ಗಳೂ, ಚೂರ್ಣಗಳೂ, ಮಾತ್ರೆಗಳು ಇತ್ಯಾದಿ ಔಷಧಿಗಳೂ ಮತ್ತು ಕಾಶ್ಮೀರ, ನೇಪಾಲ ದೇಶಗಳಿಂದ ತರಿಸಿದ ಕಸ್ತೂರಿ [illegible] ಕರ್ಪೂರ, ಕುಂಕುಮಕೇಸರ ಮುಂತಾದವುಗಳೂ ಸುಲಭವಾದ ಕ್ರಯಕ್ಕೆ ದೊರಕುತ್ತವೆ. ಪರಸ್ಥಳದವರು ರೋಗದ ಪ್ರಕೃತಿಯನ್ನು ವಿಶದವಾಗಿ ಬರೆದು ತಿಳಿಸಿದರೆ ಅಗತ್ಯವಿರುವ ಔಷಧಿಗಳನ್ನು ಅನುಪಾನ [illegible] ಸಮೇತ ವಿ. ಪಿ. ಮೂಲಕ ಕಳುಹಿಸುವೆವು.

ವಿಳಾಸ — ಕೆ. ಕೆ. ನಾಯರ್ ಎಂಡ್ ಬ್ರದರ್ಸ್,
ವೈದ್ಯಾಮೃತ ಮಂದಿರಂ,
ನೀಲೇಶ್ವರ, ದ. ಕನ್ನಡ

ಅಪೂರ್ವ ಸಂದರ್ಭ

ಅಲ್ಪ ಕಾಲದ ಅಭ್ಯಾಸದಿಂದ ವಿಶೇಷ ಮೂಲಧನವಿಲ್ಲದೇನೇ ಓದುಬರಹ ಬಲ್ಲವರೂ [illegible] ಬಡಗಿಯವರೂ [illegible] ಮುದಿಯರಿಗೆ ಅನುಕೂಲವಾಗುವ ಹೊಲಿಗೆ ವೃತ್ತಿಯು ಎಲ್ಲಾ ತರದ ಶಿಲ್ಪವನ್ನು [illegible] ಶಾಸ್ತ್ರೀಯರೀತ್ಯಾ ಕಲಿಯುವವರಿಗೆ ಅನುಕೂಲವಾದ ಸಮಯ [illegible] ಸ್ಥಳಗಳಲ್ಲಿ ಸುಲಭ ದರಗಳಲ್ಲಿ ಕಲಿಸುವ ಏರ್ಪಾಡು ನಮ್ಮಲ್ಲಿರುವುದು. ನಾಲ್ಕೇ [illegible] ಪತ್ರಗಳನ್ನು ಬೇಕೆನ್ನುವವರು ನಮ್ಮಲ್ಲಿ ಇಂಗ್ಲೀಷಿನಲ್ಲಿ ಅಥವಾ ಅರ್ಧಾಣೆ ಸ್ಟಾಂಪು ಸಮೇತ ತಮಗೆ ಬರದಲ್ಲಿ ತಿಳಿಸಿ ಕೊಡುವೆವು

M. Anantha Prabhu,
The Tailoring House and School of Scientific Tailor's Cutting,
MANGALORE, SOUTH KANARA.

1920ನೇ [illegible]
ಕನ್ನಡ ಪಾಠಪುಸ್ತಕಗಳು

	ರೂ.	ಆ	ಪೈ		ರೂ.	ಆ	ಪೈ
ರಾಮಾಯಣ ಸಂಗ್ರಹ [illegible] ಬಾಲಕಾಂಡ	0	6	0	ಚಂದ್ರಹಾಸ	0	2	0
ಸುಧನ್ವ	0	6	0	ಗುಣಸಾಗರ	0	6	0
ಷಣ್ಮುಖ	0	12	0	ಕೋಶವಿಂಗಡಣೆ ಭಾಗ I	0	4	0
ಪದ್ಯಸಾರ ಭಾಗ I	0	8	0	,, ,, II	0	3	0
ಅಕ್ಬರ್ ಚರಿತ್ರೆ	1	1	0	,, ,, III	0	4	6
ರಾಜಶೇಖರ ಚರಿತ್ರೆ	1	0	0	ಹೊಸ ಪುಸ್ತಕಗಳು			
ಸುಮತಿಮದನಕುಮಾರ				ವಿಶವಲ್ಲಭ	0	6	0
,, ಚರಿತ್ರೆ I	0	8	6	ಸುಶೀಲ	0	1	6
ಅಧರ [illegible] ಚರಿತ್ರೆ	0	6	0	ಚಂದ್ರಮತಿ	0	8	0
ಸಾವಿತ್ರೀ ಚರಿತ್ರೆ	0	2	3	ಸಂತಾಪಕ	0	6	0
ರಮಾಕಾಂತ	0	10	0	ಅಬಲಾಸಚ್ಚರಿತ್ರ ರತ್ನಮಾಲೆ	2	0	0
ಸುವ್ರತ	0	13	0	ನಿರ್ಮಲೆ	0	12	0
ಪ್ರಬಂಧಮಂಜರಿ	0	14	0	ಪದತ್ರಯ (ಬಾಲವ್ಯಾಕರಣ)	0	3	6
ಪದಾರ್ಥವಿಜ್ಞಾನಶಾಸ್ತ್ರ	0	14	0	ಹಿಂದೂ ವ್ರತವಿವೇಕ	0	14	0
ಜ್ಯೋತಿಶಾಸ್ತ್ರ	1	0	0	ಪದ್ಮಿನಿ	0	12	6
ಪ್ರಹ್ಲಾದ	0	2	0	ದಾಕ್ಷಾಯಣಿ	0	8	0
ಧ್ರುವ	0	2	0	ವಿ ಹಾಧರಿಣಿ ಲಕ್ಷ್ಮೀಬಾಯಿ	0	12	0

[illegible] ಎಲ್ಲಾ ಸ್ಕೂಲ್ ಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.

ಚಲೋ ಮೈಸೂರು

ಸುವಾಸಿತ! ಊದು ಬತ್ತಿಗಳು. ಮನೋಹರ!

ಅಂಬರ್ ಬತ್ತಿ ಸೇರಿಗೆ ರೂ [illegible] — ಘನಸುಗು ಬತ್ತಿ ಸೇರು ರೂ [illegible]
ದರ್ಬಾರುಬತ್ತಿ ,, ,, [illegible] — ಅರಗಜ ಕೊಳ್ಳಿ ಗಳು ,, [illegible]
ಜವ್ವಾಜಿ ಬತ್ತಿ ,, ,, [illegible] — ಗಂಧದ ಬತ್ತಿ ,, ,, [illegible]
ಕಸ್ತೂರಿ ಬತ್ತಿ ,, ,, [illegible]

ಅತ್ತರುಗಳು — ಗುಲಾಬ್, ಅಂಬರ್, ಹೀನಾ, ಕೇವಡಿ ,, ,, [illegible]

ಸೆಂಟುಗಳು — ಮಲ್ಲಿಗೆ, ಗುಲಾಬಿ, ಮುಸ್ಕು, ನಾರಸಸ್ (ವಿಲಾಯತಿ, ಅಮ್ನೇ[illegible], ಸ್ಪೇಚಲ್ ಲ್ಯಾಂಡಿನಲ್ಲಿ ತಯಾರಿಸಿದ್ದು) ½ ಔನ್ಸ್ ಬಾಟ್ಲಿ ರೂ [illegible]

[illegible] ಅಥವಾ ಸುಗಂಧ ದ್ರವ, ಸುಗಂಧ ಅರಿಶಿ ಪುಡಿ, ಬಾಲುಮೂಲಿ, [illegible] ಕೂಳದ ಡಬ್ಬಿ ಗಳ್ಳಿ ರೂ [illegible]

ವಿಳಾಸ — ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪನಿ,
ಪರಿಮಳ ವ್ಯಾಪಾರಿಗಳು ಬೆಂಗಳೂರು ಸಿಟಿ

ಎಲಕ್ಟ್ರಿಕ್ ದೀಪ.



ಇದು ವಿದ್ಯುಚ್ಛಕ್ತಿಯ ಬಲೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ. ಇದನ್ನು ಹಚ್ಚುವದಕ್ಕೆ ಬೆಂಕಿಕಡ್ಡಿ ಅವಶ್ಯಕವಿಲ್ಲ. ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತಕ್ಷಣಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ಪ್ರಕಾಶವಾಗಿ ಉರಿಯುತ್ತೆ. ಇದು ನೋಡುವವರಿಗೆ ಆಶ್ಚರ್ಯಕರವಾಗಿ ಕಾಣುತ್ತೆ. ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಯೂ ದೀಪದಕಡ್ಡಿ ಅವಶ್ಯಕವೇ ಇರುವದಿಲ್ಲ. ಬೀಡಿ, ಸಿಗರೇಟು ಸೇದುವವರಿಗೂ, ಪ್ರಯಾಣಿಕರಿಗೂ ಅವಶ್ಯವಾಗಿ ಬೇಕಾದದ್ದು. ಇದರ ಬೆಲೆ 1ಕ್ಕೆ 1—8—0

ನಮ್ಮ ವಿಳಾಸ — ಸಿಟಿ ವಾಚ್ ಕಂಪೆನಿ
16 ತಿರುಪಳ್ಳಿಬೀದಿ, ಮದ್ರಾಸು

ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರ ಲೇಖ್ಯಬೋಧಿನಿ
ಕ್ರಯ ರೂ 1—8—0

ವಿವೇಕ ಚೂಡಾಮಣಿ.

ಶ್ರೀ ಶಂಕರಾಚಾರ್ಯರವರು ಅದ್ವೈತ ಸಿದ್ಧಾಂತದ ಸಾರವನ್ನು ಸಾಧಕರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗ [illegible] ಪ್ರಕಟವಾಗಿದೆ. ಈ ಪುಸ್ತಕವು ಸಾಧನತ್ರಯ, ಆತ್ಮಾನಾತ್ಮವಿವೇಕ, ಶರೀರತ್ರಯ [illegible], [illegible] ಸಂವಾದ, ಬ್ರಹ್ಮೋಪದೇಶ ಮುಂತಾದ [illegible] ಪ್ರಕರಣಗಳನ್ನು ಒಳಗೊಂಡಿದೆ. ಇದನ್ನು ವೈರಾಗ್ಯಸಂಗರಾದವರಿಗೆ ವೇದಾಂತ ವಿಷಯ [illegible] ಮತ್ತು [illegible] ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟ[illegible]ಗಳು [illegible] ಪ್ರತಿಯೊಬ್ಬ ಆಸ್ತಿಕರಿಗೂ ಅತ್ಯಾವಶ್ಯಕವಾದ ಪುಸ್ತಕ

ಬೆಲೆ ಒಂದಕ್ಕೆ ರೂ 3—0—0 ಅಂಚೆ 4 ಆಣೆ

ವಿಳಾಸ: —
ಎಚ್. ಎಸ್. ರಾವ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ

ರೇಷ್ಮೆ ಪಂಚೆ, ಆಟೋಮೋಹಿನಿ ಸೆಂಟ್

ಈ ಚಿತ್ರದಲ್ಲಿ ಕಂಡ ಇಂಕಿ ಅದ್ದದೆ ಬರೆಯುವ ಫೌಂಟನ್ ಪೇನಾ ಇದಕ್ಕೆ [illegible] ಬಂಗಾರದ ಮುಳ್ಳು ಹಾಕಿರುತ್ತೆ. ಇದರಿಂದ ಬರೆಯುವದರಿಂದ ಅಕ್ಷರಗಳು ಮುತ್ತಿನ ಹಾಗೆ ಬರೆಯುವದು. ಈ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೇಷ್ಮೆ ಪಂಚೆ, ಆಟೋಮೋಹಿನಿ ಸೆಂಟ್ ಇನಾಮು ಸಹಿತ ರೂ [illegible]

C. D. LINGAM & Co
No 8 Kumarappa Mudaly Street
Mint Buildings
POST MADRAS

ಸುಗಂಧ ಕಲಾನಿಧಿ.

ಅಲ್ಪವಾದ ಬೆಲೆ! ಮಹತ್ತಾದ ವಿಷಯ!

ಈ ಪುಸ್ತಕದಲ್ಲಿ ಅಪೂರ್ವವಾದ [illegible] ವಿಧ ಊದುಕಡ್ಡಿ, ಅನೇಕ ವಿಧ ಗಂಧದ ಬತ್ತಿ, ಸ್ನಾನಚೂರ್ಣಗಳು, ಅಂಬರ್, ದಂತಧಾವನ ಚೂರ್ಣವು, ಅನೇಕ ಬಗ್ಗೆ ಸುವಾಸನೆ ಎಣ್ಣೆ, ಪೈನ್‌ಬಾಂ, ಪನ್ನೀರು, ವಿಲಾಯತಿ ಪನ್ನೀರು, ಕರ್ಪೂರ, ಅಭ್ಯಂಗನಕ್ಕನುಕೂಲವಾದ ತೈಲ ಇವೇ ಮೊದಲಾದ [illegible] ಯಗಳು, [illegible] ಭಾಗದಲ್ಲಿಯೂ ಎರಡನೆ ಭಾಗದಲ್ಲಿ ಗಾಜು, ರಸ[illegible], ಚೀನಾಪಾತ್ರೆ, ವಾರ್ನೀಸ್, ಸಿಮೆಂಟ್, ಕಾಗದ, ಪೆನಸಿಲ್, ಬೆಂಕಿಕಡ್ಡಿ, [illegible] ಕೆಲಸ, ದಂತಕ್ಕೆ ಅನೇಕ ವಿಧ ಬಣ್ಣಕೊಡ ಐಕೆ, ಪಾಲೀಸ್, ಕಾಫಿಗೆ [illegible], ಮತ್ತು [illegible] ಪ್ರೆಸ್‌ನಿಂದ [illegible] ವಿಧ [illegible], ಕಾಗದಕ್ಕೆ ಮೆರುಗು, ಸ್ಲೇಟು [illegible] ಮುಂತಾದ [illegible] ವಿಷಯಗಳ [illegible] ಈ ಪುಸ್ತಕವು ನಿಮ್ಮ ಬಳಿ ಇದ್ದರೆ ಒಬ್ಬ ಅನುಭವಶಾಲಿಯಾದ [illegible] ನಿಶ್ಚಂತೆಯೇ.

ಬೆಲೆ ರೂ [illegible]

ವಿಳಾಸ — ಕೆ ಪುಟ್ಟಪ್ಪ, ಕಲಾಪ್ರಸಾರಕ ಕಾರ್ಯಾಲಯ,
ನಂ 12 ಟ್ಯಾಂಕ್‌ರೋಡ್
ಬೆಂಗಳೂರು ಸಿಟಿ

ಇದಿಗೋ ಬ್ರಿಟಿಷ್ ಗವರ್ನಮೆಂಟಿನವರಿಂದ ಬಂಗಾರದ ಪದಕಗಳನ್ನು ಪಡೆಯುವ

ವಿಷಧ್ವಂಸಿನಿ.

ಚೇಳು ಕಡಿದ ಸ್ಥಳದಲ್ಲಿ ಈ ಔಷಧವನ್ನು ಹಚ್ಚಿದರೆ [illegible] ನನ್ನು ಕಂಡ ನಿಮಿಷ ಕಳೆಯುವದರೊಳಗೆ ಒಂದೇ ಒಂದು ನಿಮಿಷದಲ್ಲಿ [illegible], ಬೇರು ನುಚ್ಚುವನ್ನು ಮಾಡುವುದು. ಈ ಔಷಧವು [illegible] ಹಾವು, ನಾಯಿ, ನರಿ, ಕೋತಿ, ಮುಂತಾದ [illegible] ಕಡಿ[illegible] ತಕ್ಷಣ ಎತ್ತಿದ ಕೈ

ಕ್ರಯ ಪೆಟ್ಟಿಗೆ 1ಕ್ಕೆ ರೂ 0—8—0 | ಒಂದು ಡಜನ್ 6 ಪೆಟ್ಟಿಗೆಗಳ
12 ಪೆಟ್ಟಿಗೆಗೆ ,, 5—0—0 | ಅಂಚೆ [illegible] 0 4 0

ವಿಳಾಸ — ಟಿ. ರಾಮಚಂದ್ರರಾವ್ ಅಂಡ್ ಕೊ.,
16 ತಿರುಪಳ್ಳಿ [illegible] ಮದರಾಸು.

"ನೇಟಿವ್ ಡೊಕ್ಟರ್ಸ್" ಮೂಲ್ಕಿ ಗಣಪಯ್ಯ ಎಂಡ್ ಸನ್ಸ್‌ರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು

1 ಮಹಾಮದನ ಕಾಮೇಶ್ವರಿ ಲೇಹ — ಬಹಳ ಶ್ರಮಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು ಮಲಬದ್ಧತೆ, ಶರೀರಗಳ ಘಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು

2 ಮಹಾಜ್ವರಾಂಕುಶ (ಬಾತ್ರಿ ಗುಣ) — ಇನ್‌ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಬಾಟ್ಲಿ 1ಕ್ಕೆ ಆಣೆ 6

3 ಬಾಲಗ್ರಹಗುಟಿಕೆ — ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ ಡಜನಿಗೆ ಆಣೆ 10

4 ಕೋಲೆರಾ ಯಾನೆ ವಾಂತಿಬೇದಿ ಗುಟಿಕೆ — ಒಂದೆರಡು ಗುಟಿಕೆಯಿಂದ ವಾಂತಿಬೇದಿ ಕೂಡಲೆ ಗುಣ. ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ ಬಾಟ್ಲಿ 1ಕ್ಕೆ ಆಣೆ 8

5 ಶ್ವಾಸಕುಠಾರ ಗುಟಿಕೆ — ಇದು ಶ್ವಾಸಕ್ಕೆ ಸಿದ್ಧ ಔಷಧಿ ಒಂದೇ ಗುಟಿಕೆಯಿಂದ ಕಫ, ಉಬ್ಬಸ, ಕೆಮ್ಮು, ಇವು ಗುಣ ಡಜನಿಗೆ ಆಣೆ 10

6 ಮೇಹಕುಠಾರ — ಮೂತ್ರಕೃಚ್ಛ್ರ, ಅಶ್ಮರಿ ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು, ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ 16 ದಿವಸದ ಔಷಧಿ ಕ್ರಯ ರೂ 2

7 ಇಚ್ಛಾಭೇದಿ — ಆಯಾಸವನ್ನು ಉಂಟುಮಾಡದ ಸುಖವಿರೇಚಕ ಬಾಟ್ಲಿ 1ಕ್ಕೆ ಆಣೆ 12

8 ಭೃಂಗರಾಜತೈಲ — ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು ಜ್ಞಾಪಕಶಕ್ತಿ ಕುಂದಿಹೋಗುವುದು ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ಸೂಕ್ಷ್ಮವಾಗಿಯೂ ಮಾಡುವುದು ಬಾಟ್ಲಿ 1ಕ್ಕೆ ಆಣೆ 12.

9 ದಂತಮಂಜನ — (ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತಬರುವುದು, ಮುಂತಾದ ದಂತಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2

ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್, ಮಂಗಳೂರು. ದ. ಕ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.
ಇಂಡಿಯಾ ಸರಕಾರದಲ್ಲಿ ಸೆನ್ ಗಲ್ [illegible] ಇಸವಿಯ [illegible] ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಆರ್ಯಶಫಾ ಅಥವಾ ಆರೋಗ್ಯಬಿಂದು.

ಈ ಆರ್ಯಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ [illegible] ಇಸವಿಯಿಂದ [illegible] ಇಸವಿಯವರೆಗೆ [illegible] ಸಾವಿರ ಬಾಟಲಿಗಳು ಖರ್ಚಾದವು. ಮತ್ತು [illegible] ಇಸವಿ [illegible] ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು [illegible] ಬಾಟಲಿಗಳು ಖರ್ಚಾದವು. ಅಂತು ಇವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿ [illegible] ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ [illegible] ಯಷ್ಟು ಯೋಗ್ಯತಾವಂತ ಅದೆ ಇದು ಯಾವತ್ತರೂ ತಾವೇ ಅನುಭವಕ್ಕೆ ತಂದು [illegible] ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ [illegible]. ಆರೋಗ್ಯಬಿಂದು ಇದೇ ಕರ್ಣ [illegible] ರೋಗಗಳು ಈ ಆರ್ಯಶಫಾದಿಂದಲೇ ಗುಣಹೊಂದಿದ [illegible] ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದದ್ದರ [illegible] ಇನಾಮು [illegible]ಗಳು ಸಹ ದೊರೆತಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. [illegible] ಈ ಔಷಧವನ್ನು ಎಲ್ಲರೂ [illegible] ರೋಗಿಗಳು [illegible] ರೋಗದ ಹಾಳ್ಯೆಯ ಸಲುವಾಗಿ ಬೇರೆ ಡಾಕ್ಟರ ಮತ್ತು [illegible] ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ [illegible] ರೋಗಗಳ ಮೇಲೆ ಉಪಯೋಗಮಾಡಿ ರೋಗ [illegible] ಮಾಡಿಕೊಳ್ಳಬೇಕು.

ರೋಗದ ನಾಮಗಳು

ಕ್ಷಯರೋಗ, ಹಡದರೋಗ, ಪಾಂಡುರೋಗ ಸ್ತ್ರೀರೋಗ, ಮೂಲರೋಗ, ಮಹಾಮಾರಿ, (ಕಾಲರಾ) ಪ್ಲೇಗು ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಶೀತಕಾಲೆ, ಮೂಗಿನೊಳಗಿನ ಪೀನಸ, ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋದು ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಕ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ಪಡಶೂಲಿ, ವಾತಶೂಲಿ, ರಕ್ತಿಪಿತ್ತ, ಗುಲ್ಮವ್ಯಾಧಿ ಪೀನ, ಹುರುಳು, ಕಜ್ಜಿ, ಗಜಕರ್ಣ ಕದ್ದು, ಇಸಬು, ಥಾಯಿವ್ಯಾಧಿ, ನಾರುಹುಣ್ಣು, ಸ್ತ್ರೀಯರ ಮುಟ್ಟು ಶೂಲಿ, ಹಡದ ಬಂದು, ಸಣ್ಣ ಕೂಸುಗಳ ಬಾಲಗ್ರಹ, ಕೊರಡೆಗೆಮ್ಮು, ಅರಬಿ, ಮುಟ್ಟುದೋಷ, ಹಚ್ಚೆ ದೊಡ್ಡದಾಗೋದು, ಮೈ ಹೊರಳಿಕೊಳ್ಳೋದು ಮತ್ತು [illegible] ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇವ ಅನೇಕ ರೋಗಗಳು, ಜೇಳು ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅವಾಚ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ ಒಂದುಸಾಲುಶೀಶೆ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಕ್ಕ [illegible] ಆಣೆ ಕೂಡದ ಬಾಟ್ಲಿ ಒಂದಕ್ಕೆ 8 ಆಣೆ [illegible] ವಿ. ಪಿ. ಖರ್ಚು ಬೇರೆ ಬೀಳುವದು ಒಂದ್ಸೂ ಡಜನ್ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಷನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. [illegible] ರ ಬಾಟಲಿಗಳ ವರೆಗೆ ತೆಗೆದುಕೊಂಡರೆ ಕಮಿಷನ್ ಇರುವದಿಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಸಾಲುಶೀಶೆಯ 3 ಬಾಟಲಿಗಳು ಒಂದೆ ಸಾರಿ ತೆಕ್ಕೊಂಡರೆ ಒಂದು ಬಾಟಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಟೋ ಹೊರತು ಪರರ ತಕ್ಕೊಳ್ಳಕೂಡದು. ಮತ್ತು ಹೆಚ್ಚಿನ [illegible] ಚೀಲವು ಪೋಸ್ಟ್ ತಿಳಿಸಿ ಅಗಳ ಇದರ ಹೊರತು ದೊರೆಯಲಿಕ್ಕಿಲ್ಲ. ಅನುಪಾನ ಪತ್ರಗಳು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪರದಿ ಪ್ರಕಾರ ಛಾಪ್ಪಿಯ ನೋಟಿಸ ನಿಗುವದು. ತಮ್ಮ ವಿಳಾಸ ಇಂಗ್ಲೀಷ, ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಆರ್ಯಶಫಾ,
32 ಹೆಚ್ ಅಶೀಸ್ ಶಹಾಪೂರ, (ಬೆಳಗಾಂವ).

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ

ಪ್ಲೇಗ್, ಕೋಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು. ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೆಟ್ಟಿಗೆ ರೂ 2—2—0	ಕೋಲೇರಾ ಔಷದದ ದೊಡ್ಡ ಸೆಟ್ಟಿಗೆ ರೂ 1—2—0
„ ಸಣ್ಣ „ „ 1—6—0	„ ಸಣ್ಣ „ „ 0 12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸೆಟ್ಟಿಗೆ ರೂ 1—12—0

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ.

ವಿಳಾಸ.— ಮೆನೇಜರ್, ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜೋರ್ಜಟೌನ್, ಮದರಾಸ್

ತಂತಿ ವಿಳಾಸ —
ಪಂಡಿತ್, ಮದರಾಸ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ತೊರೆಯುವುದು ನಿಜವಾಗಿಯೂ ತಪ್ಪುವುದು

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ ಕೆಟ್ಟ ಹವಾ ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಅಕ್ಷಯವಾಗುವಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ಕರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ಕರಿಸಿದರೆ ಟಪಾಲು ಖರ್ಚು ಸೇರಿ 2—13—1
ಪ್ರತಿ 26 ಸೀಸೆಗಳನ್ನು ಒಟ್ಟಿಗೆ ಕರಿಸಿದರೆ ಟಪಾಲು ಖರ್ಚು ಸೇರಿ ೬—3—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 460 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ) — ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ ಒಂದೇಒಂದ್ ಲಕ್ಷ್ಮೀವಿಲಾಸ ರಸದ ಸೀಸೆಯು ಹಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ ದಿನಜ್ವರ, ವಿಷಮ ಸಾನ್ನಿಪಾತ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ ಸೀಸೆಗೆ ರೂ 1 5ಕ್ಕೆ ಒಂದು ಇನಾಮು

ಶ್ರೀನಿವಾಸತೈಲ — ಪ್ಲೇಗಿನ ಗಡ್ಡೆ ಕರಗುತ್ತದೆ ಸಂದುಗಳ ನೋವು ಸೀಘ್ರ ಹೋಗುತ್ತದೆ ಸೀಸೆಗೆ 8 ಆಣೆ 5ಕ್ಕೆ ಒಂದು ಇನಾಮು

ವೈಶ್ವಾನರಾಸವ — ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ ಸೀಸೆಗೆ ರೂ 1 5ಕ್ಕೆ ಒಂದು ಇನಾಮು

ಸಾಗುವಳಿಗೆ ಹೆಚ್ಚಾಗಿ ಭೂಮಿ ದೊರಕುವ ಸರಕಾರಿ ಗ್ರಾಮಗಳಲ್ಲಾ ಕಲೆಕ್ಟರರು ೨ ಹಿಂದುಳಿದು ಹೀನಸ್ಥಿತಿಯಲ್ಲಿರುವ ಜನರಿಗೆ ಅಂಥಾ ಭೂಮಿಯಲ್ಲಿ ವ್ಯಕ್ತವಾದ ಪ್ರದೇಶವನ್ನು ಆ ಜನರ ಉಪಯೋಗಕ್ಕೆ ಮೊದಲು ಪ್ರತ್ಯೇಕವಾಗಿಡಬೇಕು. ಕಲೆಕ್ಟರಿಗೆ ಅಗತ್ಯಕಂಡು ಬಂದರೆ ಇತರ ಗ್ರಾಮಗಳಲ್ಲೂ ಸಹ ಇದರಂತೆ ಸರಕಾರಿ ಭೂಮಿಯೆಷ್ಟು ಅಂಥ ಜನರ ಉಪಯೋಗಕ್ಕೆ ತಕ್ಕಮಟ್ಟಿಗೆ ಬೇಕಾದಷ್ಟು ಭಾಗವನ್ನು ಪ್ರತ್ಯೇಕವಾಗಿ ತೆಗೆದಿಡಬಹುದು. ಇಂಥಾ ಭೂಮಿಗೆ ದರಖಾಸ್ತು ಬಂದಲ್ಲಿ ಅದನ್ನು ಮೇಲೆ ತಿಳಿಸಿರುವ ಕಟ್ಟಳೆಗಳ ಸಾರವಾಗಿ ತೀರ್ಮಾನಿಸಬೇಕು. ಹಿಂದುಳಿದು ಹೀನಸ್ಥಿತಿಯಲ್ಲಿರುವ ಮನುಷ್ಯನಿಂದಲಾಗಲಿ ಅಥವಾ ನಿಜವಾಗಿಯೂ ಅವನ ಮನುಷ್ಯರಿಂದಾಗಲಿ ದರಖಾಸ್ತು ಬಾರದಿದ್ದರೆ ಯಾವ ಅರ್ಜಿಯನ್ನೂ ಅಂಗೀಕರಿಸಬಾರದು. ಇಂಥಾ ಭೂಮಿಗಳನ್ನು ಹಿಂದುಳಿದು ಹೀನಸ್ಥಿತಿಯಲ್ಲಿರುವ ಜನರು ತಮ್ಮೊಳಗೆ ತಾವೆ ಪರಬಾರೆ ಮಾಡಿಕೊಳ್ಳಬಹುದು. ಬೇರೆ ಜನರಿಗಾಗಲಿ ಅಥವಾ ಬೇರೆ ಸಂಗಡದವರಿಗಾಗಲಿ ಅವುಗಳನ್ನು ಕೊಡಬಹುದು. ಹೊರತಾದ ಪೋರಂಬೋಕ ಜಮೀನನ್ನಾಗಲಿ ಅಥವಾ ಆ ಕಾರಣದ ಬಂಜರು ಜಮೀನನ್ನಾಗಲಿ ಆಕಾರ ದಾಖಲಾದಲ್ಲಿ ಅಂದರೆ 'ರಿಸರ್ವ ಫಾರೆಸ್ಟ್' ಆಗಲಿ, ಗೋಮಾಳವನ್ನೇ ಆಗಲಿ ಆಕಾರ ಕಾಣಿಸಿ ಸಾಗುವಳಿಗೆ ಕಡುವ ವಕ್ತ ಈ ಹಿಂದುಳಿದು ಹೀನಸ್ಥಿತಿಯಲ್ಲಿರುವ ಜನಗಳ ಈಗಿನ ಮತ್ತು ಮುಂದೆ ಒದಗಬಹುದಾದ ಆವಶ್ಯಕತೆಗಳನ್ನು ಆಲೋಚಿಸಿ ಗಣನೆಯಲ್ಲಿಡತಕ್ಕದ್ದು.

ಕರ್ನಾಟಕ ಹಾಲಮತ (ಕುರುಬರ) ವಿದ್ಯಾವರ್ಧಕ ಮತ್ತು ಸಮಾಜದ ಮೊದಲನೇ ಸಭೆಯು.

ಶ್ರೀಮಂತ ಮ| ರಾ| ರಾ| ಸೋಮನಗೌಡ, ಬಸನಗೌಡ, ಪಾಟೀಲ ಸಾ|| ಹರ್ಲಾಪೂರ ತಾಲೂಕ ಗದಗ ಈ ಮಹನೀಯರ ಅಧ್ಯಕ್ಷತೆಯಲ್ಲಿ ತಾ. ೩ ಮತ್ತು ೪ನೇ ಜುಲಾಯಿ ೧೯೨೦ರಲ್ಲಿ ಈ ಎರಡು ದಿವಸಗಳಲ್ಲಿ ಧಾರವಾಡ ಜಿಲ್ಹಾ ನವಲಗುಂದ ತಾಲೂಕ ನಲವಡಿ ಗ್ರಾಮದಲ್ಲಿ ಕೂಡುವುದು. ಈ ಸಭೆಗೆ ಬರತಕ್ಕ ಸದ್ಗೃಹಸ್ಥರನ್ನು ಕರೆದೊಯ್ಯಲಿಕ್ಕೆ ಸದರ್ನ ಮರಾಠಾ ರೈಲ್ವೆಯ ಅಣ್ಣಿಗೇರಿ ಮತ್ತು ಕುಸುಗಲ್ಲ ಈ ಎರಡು ಸ್ಟೇಷನ್‌ಗಳಲ್ಲಿ ಎತ್ತಿನ ಬಂಡಿಗಳನ್ನು ಇಡಲ್ಪಡುವುವು. ವಿಶೇಷ ಮಾಹಿತಿಯು ಪ್ರಕಟನಾಪತ್ರಿಕೆಗಳಲ್ಲಿ ಪ್ರಸಿದ್ಧಮಾಡಲ್ಪಡುವುದು. ಈ ಸಂಗತಿಯನ್ನು ತಮ್ಮ ಸುಪ್ರಸಿದ್ಧ ಪತ್ರದಲ್ಲಿ ಪ್ರಸಿದ್ಧಮಾಡುವರೆಂದು ಆಶಿಸುತ್ತೇನೆ.

ತಮ್ಮ ಪ್ರೀತಿಯ ಎಲ್ಲಪ್ಪ, ನಿಂಗಪ್ಪ, ಗೊಂದಪ್ಪನವರ ಸಾ|| ನಲವಡಿ ಉಪಾಧ್ಯಕ್ಷ, ಸ್ವಾಗತ ಸಂಘ ಕ. ಹಾ. ವಿ. ಸಾ. ಸಭೆ.

[illegible]
ಅಭ್ಯರ್ಥಿ ತಮ್ಮ ಚರ್ಚೆಯ ಉಮೇದ್ವಾರರು. ,,
ಪತ್ರಿಕೆಗಳ ಅಭಿಪ್ರಾಯ ,,
[illegible] ,,
ಸಂಗ್ರಹಗಳು:—
[illegible] ೫
ಸ್ವದೇಶ ವರ್ತಮಾನ
[illegible] ಕಾಸರಗೋಡು, ಕಲ್ಯಾಣಪುರ, ರಾಮೇಶ್ವರ ,,
[illegible] ,,
ಹಂಟರ್ ಕಮಿಟಿಯ ರಿಪೋರ್ಟು ,,
ಹಿಂದುಸ್ತಾನದ ಹೀನಸ್ಥಿತಿಯಲ್ಲಿರುವ ಜನಾಂಗ ಭೂಮಿಯನ್ನು ಕೊಡತಕ್ಕ ವಿಷಯ ೯
ಕರ್ನಾಟಕ ಹಾಲಮತ ಕುರ ಬರ ವಿದ್ಯಾವರ್ಧಕ ಮತ್ತು ಸಮಾಜಕ ಮೊದಲನೇ ಸಭೆಯ ,,
ಉತ್ತರಕನ್ನಡಾ ಜಿಲ್ಲೆಯ ಪರಿಷತ್ತು ೮
ವ್ಯವಹಾರ ೧, ೨, ೩, ,,

ಸ್ವದೇಶಾಭಿಮಾನಿ.

ಶಕ ೧೮೪೨ ಆಶಾಢ ಶು ೨ ಶುಕ್ರವಾರ

ಸ್ಫುಟ ವಿಚಾರಗಳು.

೧ ಇನ್ನೊಂದು ಕಡೆಯಲ್ಲಿ ಕಲ್ಕತ್ತೆಯ ಯುರೋಪಿಯನ್ ಅಸೋಸಿಯೇಶನ್ನಿನ ಮತ್ತು ಪೂನೆಯ ಡೆಕ್ಕನ ಸಭೆಯ ಮತ್ತು ಮುಂಬಯಿಯ ವೆಸ್ಟರ್ನ್ ಇಂಡಿಯಾ ನೆಶನಲ್ ಲಿಬರಲ್ ಎಸೋಸಿಯೇಶನ್ನಿನ ತಂತಿಗಳ ಉತಾರನ್ನು ಕೊಟ್ಟಿದ್ದೇವೆ ರಾಷ್ಟ್ರೀಯ ಸಭೆಯ ಮತವು ಕಳೆದ ಸಂಚಿಕೆಯಲ್ಲಿಯೇ ಪ್ರಕಟವಾಗಿದೆ ಯುರೋಪಿಯನ್ ಎಸೋಸಿಯೇಶನ್ನಿನವರು ಹಂಟರಕಮಿಟಿಯ ಅಭಿಪ್ರಾಯವನ್ನು ತೀರಾ ತಿರಸ್ಕರಣ ಮಾಡಿ, ಡಾಯರ ಸಾಹೇಬನ ತಲೆಯ ಹೊಣೆಗಾರದಿಂದ ಬ್ರಿಟಿಷ ಜನತೆಗೆ ಎಚ್ಚರಿಸಲಿಕ್ಕಿದ್ದಾರೆ ಇವರ ಧೋರಣವಂತು ನಮಗೆ ಇಂದೇ ಪರಿಚಯವಲ್ಲ ಇವರು ಎಲ್ಲಾ ವಿಷಯಗಳಲ್ಲಿಯೂ ಹಿಂದಿ ಜನತೆಯಲ್ಲಿ ಉತ್ಸಾಹಭಂಗ ಮಾಡುವ ಬಗೀರಥ ಪ್ರಯತ್ನಗಳನ್ನು ಮಾಡುತ್ತಲಿ ಇದ್ದಾರೆ ಆದರೆ ರಾಷ್ಟ್ರೀಯ ಪಕ್ಷದವರೊಡನೆ ಸೇರಲಾರೆನೆಂದು ಕಟ್ಟಿ ಮುರಿದು ನಿಂತ ಸರ್ ವಾಛ್ಛಾರಂತಹ ಶಾಂತಪಕ್ಷೀಯರು ಸಹಾ ವರಿಷ್ಠ ಸರಕಾರದ ಮತ್ತು ಸರ್ ಓಡಾಯರರ ಧೋರಣವು ನಿಂದಾಸ್ಪದವೆಂಬೇ ಹೇಳುತ್ತಾರೆ. ರಾಷ್ಟ್ರೀಯ ಅಥವಾ ಕೊಂಗ್ರೆಸ ಪಕ್ಷದವರಿಗೂ ಈ ಶಾಂತ ಪಕ್ಷೀಯರಿಗೂ ಪಂಜಾಬ ಗಲಾಟೆಯ ತೀರ್ಮಾನದಲ್ಲಿ ಅಭಿಪ್ರಾಯವು ಒಂದೇಯಾಗಿದ್ದರೂ ಒರೆ ಒಕ್ಕಣೆಯಲ್ಲಿ ಮಾತ್ರ ವ್ಯತ್ಯಾಸವಿದ್ದಂತೆ ಇದೆ ಇಬ್ಬರೂ ಓಡಾಯರ ಸಾಹೇಬರ ಮತ್ತು ವರಿಷ್ಠ ಸರಕಾರದ ಧೋರಣವನ್ನೆ ಸ್ಪಷ್ಟೋಕ್ತಿಗಳಲ್ಲಿ ಖಂಡಿಸಿದ್ದಾರೆ ರಾಷ್ಟ್ರೀಯರು ಗಲಾಟೆ ಕಾಲದಲ್ಲಿ ತಾಂಡವ ಮಾಡಿದ ಅಧಿಕಾರರನ್ನು ಶಾಸನಕ್ಕೆ ಒಳಗಾಗಿಸಬೇಕು ಅನ್ನುವುದಲ್ಲದೆ ವೈಸರಾಯರನ್ನು ಕೆಲಸದಿಂದ ನಿವೃತ್ತರಾಗಿ ಮಾಡಬೇಕೆಂದು ಕೇಳಿಕೊಂಡಿದ್ದಾರೆ ಶಾಂತಪಕ್ಷೀಯರು ಅಷ್ಟು ದೂರಕ್ಕೆ ಲೇಖನಿ ಚಾಚುವುದಿಲ್ಲ ಅದಕ್ಕೆ ಬದಲಾಗಿ ಇವರ ವರ್ತನವು ಸರಿಯಾದ್ದಲ್ಲವೆಂಬ ಸಂಗತಿಯನ್ನು ಪಾರ್ಲಿಮೆಂಟಿನಲ್ಲಿ ಒತ್ತಿಹೇಳಬೇಕೆಂದು ಕೇಳಿಕೊಂಡಿದ್ದಾರೆ ಅಂತೂ ಪರಿಣಾಮವು ಒಂದೇ ಪಾರ್ಲಿಮೆಂಟು ವೈಸರಾಯರ ವರ್ತನವನ್ನು ಖಂಡಿಸಿದರೆ ಸಹಜವಾಗಿಯೇ ಅವರು ರಾಜಿನಾಮೆ ಕೊಡಬೇಕಾಗುತ್ತದೆ ಇನ್ನು ಈ ವಿಷಯದಲ್ಲಿ ಪಾರ್ಲಿಮೆಂಟಿನವರ ರಾವು ಹೇಗೆ ರೂಪಗೊಳ್ಳುತ್ತದೆಂಬದನ್ನು ಹಿಂದೀ ಜನತೆಯು ಕುತ್ತಿಗೆ ಎತ್ತಿ ಎದುರು ನೋಡುತ್ತಿದೆ.

೨ ಸೂಕ್ಷ್ಮವಿಚಾರ ಮಾಡಿದರೆ ವರಿಷ್ಠ ಸರಕಾರವಾಗಲೀ ಸರ್ ಓಡಾಯರರಾಗಲೀ ತಮ್ಮ ಧೋರಣವನ್ನು ಕುರಿತು ಪಾರ್ಲಿಮೆಂಟಿಗೆ ಮಂಕುತ್ತಿಳಿಸಿದರೂ ಅವರ ವರ್ತನದಿಂದ ಬ್ರಿಟಿಷ ಆಡಳಿತೆಯ ವಿಶೇಷ ಲಕ್ಷಣವೆನ್ನಿಸುವ ಸಮಾನದೃಷ್ಟಿ, ಮತ್ತು ವಿವೇಚನೆ ಎಂಬ ಗುಣಗಳ ಮೇಲೆ ಕಲಂಕವನ್ನು ತಂದೊಡ್ಡಿದ್ದು ಮಾತ್ರವೇ ಅಲ್ಲ, ಬಾದಶಹರ ಘೋಷಣೆಯ ಮೇಲೂ ಉದ್ದಕ್ಕೂ ಕಪ್ಪು ಶಾಯಿಯ ಕಲೆಯನ್ನು ಬಳಿದಂತಾಯಿತು ಡಾಯರು ಲಷ್ಕರಿನವನು, ಸಾಮಾನ್ಯವಾಗಿಯೂ ಈ ಜನಗಳಿಗೆ ಕಡುಹೆಯೆಂಬದು ತಿಳಿಯದು ಅದರಲ್ಲಿಯೂ ಯುದ್ಧದಿಂದ ಆಗಲೇ ಬ್ರಿಟಿಷ ಜನಾಂಗವು ಗೆದ್ದು ಇರುವ ಜಯಘೋಷವು ಕಿವಿಯಾರೆ ತುಂಬಿ ಉನ್ಮತ್ತನಾಗಿದ್ದು ಬ್ರಿಟಿಷ ಶಸ್ತ್ರದ ಪೌರುಷವನ್ನು ನಿಃಶಸ್ತ್ರಜನಗಳ ಮೇಲೆ ತೋರಿಸಿ ಬಿಡೋಣವೆಂದು ಶ್ರಮವೆಂದು ಮಾಡಿದರೆ ಇದಕ್ಕೆ ಸೈಗುಟ್ಟಿದವರ ಮತ್ತು [illegible] ಯು [illegible] ಕಾರಣವಾದರೂ ಯಾವುದಾದರೂ ವಿಚಾರಣೆಗೆ [illegible] ಅಧಿಕಾರದಿಂದ [illegible] ಮಂಜೂರಾದದ್ದು ಕೂಡಾ ಈ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ.

ಇದೇ ಸಮಯದಲ್ಲಿ ನಮ್ಮ ದೃಷ್ಟಿಯನ್ನು ಐರ್ಲಂಡದ ಕಡೆಗೆ ತಿರುಗಿಸೋಣ: ಈಗ ಕೆಲವು ತಿಂಗಳಿಂದಲೂ ಅಲ್ಲಿ ಐರಿಷರು ಸಶಸ್ತ್ರ ದಂಡೆಗಳಾಗಿ ವಿವಿಧ ರೀತಿಯಿಂದ ರಾಜ್ಯಾಡಳಿತೆಯು ತಟಸ್ಥವಾಗುವಂತೆ ಯತ್ನಿಸುತಿದ್ದಾರೆ ಪೋಲಿಸ್ ಲೈನುಗಳನ್ನು ಸುಟ್ಟು ಹಾಕುವುದು, ಶಾಂತಿಯನ್ನು ಕಾಪಾಡಬೇಕಾದವರನ್ನು ವಿವಿಧ ರೀತಿಯಿಂದ ಹಿಂಸೆ ಮಾಡುವುದು ಇಂತಹ ಕೃತ್ಯಗಳು ಪ್ರತಿ ದಿನದ ತಂತಿ ವರ್ತಮಾನಗಳಲ್ಲಿಯೂ ಕಿವಿಯನ್ನು ಹೊಡೆಯುತ್ತಿವೆ ಬಂದರ ಲಷ್ಕರನ್ನೂ ಅವರ ಯುದ್ಧ ಸಾಮಗ್ರಿಯನ್ನೂ, ಹಡಗಿನಿಂದ ಇಳಿಸಲಿಕ್ಕೆ ಮುಂದೆ ಒಳಪ್ರಾಂತ್ಯಕ್ಕೆ ಸಾಗಿಸಲಿಕ್ಕೆ ರೈಲ್ವೆ ನವುಕರರೂ ಬಂದರಿನ ನವುಕರರೂ ತಿರಸ್ಕಾರಮಾಡಿದ್ದರಿಂದ ಈ ಕೆಲಸ ಲಷ್ಕರಿನವರೇ ಮಾಡಬೇಕಾಯಿತು. ಹೀಗಿದ್ದರೂ ಪಂಜಾಬದಲ್ಲಿ ಅಶಸ್ತ್ರರಾದವರನ್ನು ದಂಡಿಸಿದಂತೆ ಈ ಜನಗಳನ್ನು ದಂಡಿಸಲು ಯಾಕೆ ಯತ್ನಿಸಲಿಲ್ಲ? ಡಾಯರನಂಥ ವೀರನನ್ನು ಅಲ್ಲಿ ಯಾಕೆ ಕಳುಹಿಸಲಿಲ್ಲ? ಈ ವಿಚಾರಗಳು ಜನತೆಯ ಮನಸ್ಸಿನಲ್ಲಿ ಸಹಜವಾಗಿಯೂ ಬಂದೇ ಬರುವವು

೩. ಪಂಜಾಬ ಪ್ರಕರಣವನ್ನು ಕುರಿತು ಹಂಟರ ವರದಿಯು ಹೊರಗೆಬಂದ ಮೇಲೆ ಕೆಲವು ವಿಧಿಗಳಾಗತಕ್ಕ ಶಿಷ್ಟಾಚಾರವು ಇದೆ. ಈ ವಿಧಿಗಳಲ್ಲಿ ಜನರಲ್ ಡಾಯರ್ ಮತ್ತು ಇತರ ಲಷ್ಕರಿ ಅಧಿಕಾರಿಗಳ ವಿಚಾರಣೆಯು ಒಂದಾಗಿದೆ. ಹಂಟರ ವರದಿಯು ಹೊರಬಿದ್ದ ಮೇಲೆ ಹಿಂದುಸ್ಥಾನದೊಳಗಿನ ಎಲ್ಲ ರಾಜಕೀಯ ಪಕ್ಷಗಳು ಏಕಕಂಠದಿಂದ ವರದಿಯೊಳಗಿನ ಬಹುಮತ ಮತ್ತು ಹಿಂದುಸ್ಥಾನ ಸರಕಾರದ ಹಾಗು ಮಿ ಮೊಂಟೆಗ್ಯುಗಳ ಅಭಿಪ್ರಾಯ ಇವುಗಳ ಬಗ್ಗೆ ತಮ್ಮ ಅಸಮ್ಮತಿಯನ್ನು ವ್ಯಕ್ತಗೊಳಿಸುವಂತೆ ವಿಲಾಯತಿಯೊಳಗಿನ ಲೇಬರ ಪಾರ್ಟಿ ಹಾಗು ಇತರರನೇಕರು ಪಶ್ಚಾತ್ತಾಪ ಪಡುತಿದ್ದಾರೆ ವಿಶೇಷತಃ ಜನರಲ್ ಡಾಯರ್ ಪ್ರಭೃತಿಗಳನ್ನು, ಸಾಮಾನ್ಯ ತರದ ತಪ್ಪು ಮಾಡಿದವರನ್ನು ಬಿಟ್ಟುಬಿಡುವಂತೆ—ಹೆಚ್ಚಾದರೆ ಬಹು ಅಲ್ಪ ಶಿಕ್ಷೆಯಿಂದ ವಿಮೋಚನೆ ಮಾಡುವಂತೆ—ಹಿಂದುಸ್ಥಾನ ಸರಕಾರವು ಬಿಡುಗಡೆ ಪಡಿಸಿದ್ದು ಹಸಿ ಅನ್ಯಾಯವೆಂದು ಲೇಬರ ಪಾರ್ಟಿಯ ಮುಖಂಡರಿಗೂ ತೋರದೆ ಇರಲಿಲ್ಲ ಈ ಮೇರೆಗೆ ವಿಲಾಯತಿಯೊಳಗಿನ ಲೋಕಮತವು ಕೊಂಚ ಬಿಸಿಯಾದದ್ದನ್ನು ಕಂಡು, ಅಲ್ಲಿಯ ಕೊಮನ್ಸ್ ಸಭೆಯಲ್ಲಿ ಜನರಲ್ ಡಾಯರ ಪ್ರಶ್ನೆಯ ಚರ್ಚೆಯ ದಿನವನ್ನು ವಿಲಾಯತಿ ಸರಕಾರವು ಮುಂದಕ್ಕೆ ನೂಕಹತ್ತಿದೆ. ಈ ಚರ್ಚೆಯ ಅವಧಿಯನ್ನು ಮುಂದಕ್ಕೆ ಹಾಕುವುದು ಯುಕ್ತವಲ್ಲವೆಂದು ಲೋಕ ಸಭೆಯಲ್ಲಿ ಸರ್ ಡಿ ಮೆಕ್ಲೀನ ಮುಂತಾದವರು ಸೂಚಿಸಿದ್ದಲ್ಲದೆ, 'ಆರ್ಮಿಕೌನ್ಸಿಲ ನ ಮುಂದೆ ಸದ್ಯಕ್ಕೆ ಜ ಡಾಯರನ ವಿಷಯ ವಿಚಾರಣೆಯು ನಡೆದಿದ್ದು, [illegible] ಮುಗಿದ ಬಳಿಕ ಪಾರ್ಲಿಮೆಂಟಿನ ಚರ್ಚೆಯು ಪ್ರಾರಂಭವಾಗುವುದು ಎಂಬ ಮಾಹಿತಿಯನ್ನು ಮಿ. ಬೋನರಲೊ ಇವರು ಕಡೆಯಿಂದ ಹೊರಪಡಿಸಿದರು ಈ ಸಂದರ್ಭದಲ್ಲಿ ಆರ್ಮಿ ಕೌನ್ಸಿಲಿನವರು ಡಾಯರನ ಪಕ್ಷವಾಗಿ ಇದ್ದಾರೆಯೆ ಎಂದು ಕೇಳಿದ ವರ್ತುಲಕ ಪ್ರಶ್ನೆಗೆ ಮಿ ಬೋನರಲೊ ಇವರಿಗೆ ಇಲ್ಲವೆಂದೆ ಹೇಳಬೇಕಾಯಿತು ಲಾರ್ಡ ಸಭೆಯಲ್ಲಿ ಕೂಡ ಇದೇ ರೀತಿಯ ಪ್ರಶ್ನೋತ್ತರಗಳು ನಡೆದವು ಚರ್ಚೆಯ ದಿವಸಗಳನ್ನು ಮುಂದಕ್ಕೆ ದೂಡಿದ್ದು ಒಳ್ಳೆಯದಲ್ಲವೆಂದು ಕರ್ಝನ ಸಾಹೇಬರಿಗೂ ತೋರುತ್ತಿದೆ ಅಷ್ಟರಿಂದ ಸಾಧ್ಯವಿದ್ದಷ್ಟು ಬೇಗನೆ ಡಾಯರ ಪ್ರಶ್ನೆಯನ್ನು ಚರ್ಚಿಸಬಹುದೆಂದು ಅವರೂ ಆಶ್ವಾಸನವನ್ನು ಕೊಟ್ಟಿದ್ದಾರೆ ಪಾರ್ಲಿಮೆಂಟಿನೊಳಗೆ ನಡೆಯತಕ್ಕ ಈ ಚರ್ಚಾವಿಧಿಯ ಪರ್ಯವಸಾನವು ಏನಾದೀತೆಂಬುದನ್ನು ಈ ಹೊತ್ತೇ ನಿಶ್ಚಿತವಾಗಿ ಹೇಳಲು ಯಾರಿಗೂ ಸಾಧ್ಯವಿಲ್ಲವಾದರೂ ಒಕ್ಸ್‌ಫರ್ಡ ಯೂನಿಯನಿನವರು ಪಂಜಾಬ ಪ್ರಕರಣದೊಳಗಿನ ಅಧಿಕಾರಿಗಳ ವರ್ತನದ ನಿಷೇಧವನ್ನು ಸೂಚಿಸುವ ಠರಾವನ್ನು ಬಹುಮತದಿಂದ ಪಾಸು ಮಾಡಿದ್ದಾರೆ, ಇದರ ಮೇಲಿಂದ ಹಾಗು ನಾಮದಾರ ಪಟೇಲ ಮತ್ತು ಬ್ರಿಟಿಷ್ ಕೊಂಗ್ರೆಸ್ ಕಮಿಟಿ ಇವರ ಚಳವಳದ ಮೇಲಿಂದ ಏನಾದರೂ ನಿಷ್ಪನ್ನವಾಗದೆ ಇರಲಿಕ್ಕಿಲ್ಲ, ಕಡಿಮೆ ಪಕ್ಷದಲ್ಲಿ ಕಲವು ಸಮಯ ಕಳೆಯುವ ಮಟ್ಟಿಗಾದರೂ ಇದರಿಂದ ಒಂದು ಪ್ರಯೋಜನವಾದೀತೆಂದು ತೋರುತ್ತದೆ

೪ ಹಂಟರ ಕಮಿಟಿಯ ವರದಿಯು ಹೊರಗೆ ಬಂದ ಬಳಿಕ ಆಗತಕ್ಕ ವಿಧಿಗಳಲ್ಲಿ ಒಂದು ಮೇಲಿನದಾಯಿತಲ್ಲವೆ, ಇನ್ನೊಂದು ಕಡೆಯಲ್ಲಿ ಸರ್ ಓಡಾಯರರ ಸಾಮಗಾನದ ವಿಧಿಯು ಪ್ರಾರಂಭವಾಗಿದೆ ಕಮಿಟಿಯೂ, ಹಿಂದುಸ್ಥಾನ ಸರಕಾರವೂ, ಭಾರತ ಮಂತ್ರಿಗಳೂ ತನ್ನ ಆಡಳಿತೆಯ ಬಗ್ಗೆ ಶ್ಲಾಘನೆಯನ್ನು ಕೊಟ್ಟ ಬಳಿಕ 'ಬರೆ ಹಿಂದುಸ್ಥಾನದ ಮಾತ್ರವಲ್ಲ, ಬ್ರಿಟಿಷ್ ಸಾಮ್ರಾಜ್ಯವನ್ನು ಕಾಪಾಡನೆಂದು ತನ್ನ ಬೆನ್ನು ತಟ್ಟಿದ ಬಳಿಕ, ಸರದಾರ ಓಡಾಯರರು ಈಗ ಮೆಲ್ಲನೆ ಲಂಡನ್ ಟೈಮ್ಸ್ ನಲ್ಲಿ ಒಂದು ಪತ್ರವನ್ನು ಪ್ರಕಟಿಸಿ ಸಾಮಗಾನವನ್ನು ಮಾಡ ತೊಡಗಿದ್ದಾರೆ. ಅವರ ಗಾಯನದೊಳಗಿನ ಪ್ರಥಮಾಲಾಪದ ಸ್ವರವು ಯಾವುದೆಂದರೆ —ಹಂಟರ ಕಮಿಟಿಯ ವರದಿಯನ್ನು ಇಷ್ಟು ವಿಲಂಬದಿಂದ ಪ್ರಕಟಿಸಿದ್ದು ಬಹಳ ತಪ್ಪಾಯಿತು ಈ ರೀತಿಯಿಂದ ವಿಲಂಬ ಮಾಡಿದ್ದರಿಂದ ಜನರಲ್ ಡಾಯರ್ ಹಾಗು ಬೇರೆ ಅಧಿಕಾರಿಗಳು ಲಷ್ಕರ ಕಾನೂನಿನ ಗಲಾಟೆಯಲ್ಲಿ ಮಾಡಿದ ಕೃತ್ಯಗಳ ಮೇಲೆ ಸರಕಾರವು ಹೊದಿಕೆಯನ್ನು ಹಾಕುತ್ತದೆ ಎಂಬುದಾಗಿ ಜನರು ಸಂಶಯ ಪಡಲಿಕ್ಕೆ ಒಂದು ಕಾರಣವಾಯಿತು. ಸರ್ ಓಡಾಯರರ ಈ ವಿಧಾನದ ಅರ್ಥವೇನೆಂದರೆ, ಡಾಯರನು ಯಾವ ದುಷ್ಕೃತ್ಯವನ್ನೂ ಮಾಡಿಲ್ಲ, ಆದರೂ ಅವನ ಮೇಲೆ ವಿನಾಕಾರಣ ಸಂಶಯವನ್ನು ತೆಕ್ಕೊಳ್ಳಲಾಯಿತು ಮತ್ತು ಅವರಿಗೆ ಹಾಗೆ ಸಂಶಯ ಪಡಲು ಹಂಟರ ರಿಪೋರ್ಟಿನ ಪ್ರಕಟನೆಯ ಈ ವಿಲಂಬವು ಬಲಪಡಿಸಿದಂತಾಗಿದೆ. ಆದರೆ ಸರದಾರ ಓಡಾಯರರ ಈ ತರ್ಕಶಾಸ್ತ್ರವು ಅಥವಾ ಯುಕ್ತಿವಾದವು ಎಷ್ಟರ ಮಟ್ಟಿಗೆ ಸತ್ಯವಿದೆ ಎಂಬದನ್ನು ನೋಡಬೇಕಾದ ಅವಶ್ಯವೇ ಇಲ್ಲ, ಸಮಯವನ್ನು ದೂಡಿದ್ದರಿಂದ ನಿಜವಾಗಿ ಅಪರಾಧಿಗಳಿಗೆ ಹಾನಿಯು ಒದಗುತ್ತದೆ ಎಂಬ ಓಡಾಯರ ಸಿದ್ಧಾಂತವು ಕೇವಲ ವಿಸಂಗತವಾಗಿದೆ. ವಾರನ್ ಹೆಸ್ಟಿಂಗ್ಸನ ಅಪರಾಧಗಳ ತನಖಿಯು ~~೭ ವರ್ಷಗಳ ವಿಲಂಬವು ದಾಟಿದ ಬಳಿಕ ಆದದ್ದರಿಂದ ಅಲ್ಲವೆ~~ ಅವನಿಗೆ ಅಷ್ಟು ಸೌಮ್ಯವಾದ ನಡತೆಯು ಸಿಕ್ಕಿತು! ಪಾರ್ಲಿಮೆಂಟಿನಲ್ಲಿ ನ್ಯಾಯ ಪ್ರಿಯನಾದ ಎಡ್‌ಮಂಡ್ ಬರ್ಕನು ಹೆಸ್ಟಿಂಗ್ಸನ ಅಮಾನುಷ ಮತ್ತು ಮೋಸದ ಕೃತ್ಯಗಳ ಪುರಾಣವನ್ನು ಹೇಳುವಾಗ ಶ್ರೋತೃ ಸಮಾಜದೊಳಗಿನ ಅನೇಕ ಸ್ತ್ರೀಯರಿಗೆ ಮೂರ್ಛೆಯು ಬಂದು ಹೋಯಿತೆಂದು ಚರಿತ್ರೆಯಿಂದ ಕಂಡು ಬರುತ್ತದೆ. ಇಂಥ ಭಯಂಕರ ಕೃತ್ಯಗಳನ್ನು ನಡಿಸಿದವನ ತನಖಿಯನ್ನು ಅಷ್ಟು ಸಮಯ ಕಳೆದು ಮಾಡಿದ್ದರಿಂದ ಅವನ ಒಂದು ಕೂದಲಿಗೂ ಕೂಡ ಬಾಧಕವಾಗಲಿಲ್ಲ ಇತಿಹಾಸದೊಳಗಿನ ಇತ್ತಲಾಗಿನ ಇಷ್ಟು ಹೊಸ ಉದಾಹರಣವಿರುವಾಗ ಓಡಾಯರರು ವಿಲಂಬದಿಂದ ಅಪರಾಧಿಗಳಿಗೆ ಹಾನಿ ಒದಗುತ್ತದೆಂದು ಹೇಳುತ್ತಾರೆ ಇದು ಐತಿಹಾಸಿಕ ಜ್ಞಾನಶೂನ್ಯತೆಯ ಒಂದು ದೃಷ್ಟಾಂತವಾಗಿದೆ ಇತಿಹಾಸ ಜ್ಞಾನವಿಲ್ಲದಿರುವುದು ಒಂದು ದೊಡ್ಡ ಕೊರತೆ ಎಂದು ನೆನಸಿಕೊಳ್ಳಲಾಗದು ಆದರೆ ಮನುಷ್ಯ ಸ್ವಭಾವದ ಜ್ಞಾನವಿಲ್ಲದಿರುವುದು ಮನುಷ್ಯತೆಗನೇ ಕುಂದಲ್ಲವೆ? ಅಪರಾಧಗಳು ಹೊಸದಿರುವಾಗ ಮನುಷ್ಯನ ಮನಸ್ಸು ಬಹು ತೀವ್ರವಾಗಿರುತ್ತದೆ ಹಾಗಯೇ ಸಮಯವು ದಾಟಿದ ಹಾಗೆ ಸಂತಾಪದ ಡಿಗ್ರಿಯು ಕಡಿಮೆಯಾಗುತ್ತ ಬರುತ್ತದೆ, ಇದು ಲೋಕ ಸ್ವಭಾವವು ಈ ಲೋಕ ಸ್ವಭಾವವನ್ನರಿತೇ ಚಾಣಾಕ್ಷರಾದ ಮಿ ಮೊಂಟಗ್ಯು ಪ್ರಭೃತಿಗಳು ಹಂಟರ ವರದಿಯ ಪ್ರಕಟನೆಯನ್ನು ವಿಲಂಬಿಸಿದ್ದಾರೆ ಅನೇಕ ಅನಾಹೂತಗಳ ಸಂಭವದಿಂದ ಸಂತಪ್ತವಾದ ಜನತೆಯ ಮನಸ್ಸಿನ ಮೇಲೆ ಕಾಲವು ಮೆಲ್ಲಮೆಲ್ಲನೆ ವಿಸ್ಮರಣೆಯ ಶೀತಲ ತುಷಾರಗಳನ್ನು ಸಿಂಪಡಿಸಲಿ ಎಂಬುದರಿಂದಲೆ ಹಂಟರ ಕಮಿಟಿಯೂ ಹಾಗು ಭಾರತ ಮಂತ್ರಿಗಳೂ ಸಮಯವನ್ನು ದೂಡಿದ್ದು ಈ ಕಾಲಹರಣದಿಂದ ಯಾರಿಗಾದರೂ ಗುಣವಾಗಿದ್ದರೆ ಅದು ಜನರಲ್ ಡಾಯರ ಮುಂತಾದವರಿಗೆ ಅಲ್ಲದೆ ಇತರರಿಗಲ್ಲ ಇದಕ್ಕೆ ಬಿಸಿಬಿಸಿ ದೃಷ್ಟಾಂತವನ್ನು ತೋರಿಸಿಕೊಡಬೇಕಾದರೆ ಡಾಯರ ಪ್ರಶ್ನೆಯ ಚರ್ಚೆಯನ್ನು ಪಾರ್ಲಿಮೆಂಟಿನವರು ಹೇಗೆ ಮುಂದರಿಸುತ್ತಿದ್ದಾರೆ ಎಂಬುದನ್ನು ನೋಡಬೇಕಾಗಿದೆ [illegible] ಓಡಾಯರರ ಸಾಮಗಾನದೊಳಗಿನ ಪ್ರಥಮಾಲಾಪವು ಶುದ್ಧ ವಿಸಂಗತವಾದ್ದೆಂಬುದು ಸ್ಪಷ್ಟವಾಗುತ್ತದೆ ಈ ವಿಸಂಗತತೆಯು ಸ್ವತಃ 'ಸರದಾರರಿಗೆ' ತಿಳಿಯಲಿಲ್ಲವೆಂದಿಲ್ಲ, ಆದರೆ ದಿಕ್ಕು ತಪ್ಪಿದವನು [illegible] ವಂತೆ ಅಥವಾ ನೀರಿನಲ್ಲಿ ಮುಳುಗುವವನು ಹುಲ್ಲು ಕಡ್ಡಿಯನ್ನು ಆಧಾರಕ್ಕೆ ಹಿಡಿಯಲು ಒದ್ದಾಡುವಂತೆ ಸರದಾರರು ಯದ್ವಾತದ್ವಾ ಒದರುವ ಹತ್ತಿದ್ದಾರೆ

೫ 'ಸರದಾರ ಓಡಾಯರರ ಬರವಣಿಗೆಯಲ್ಲಿ ಇನ್ನೂ ಅನೇಕ ಹೇತ್ವಾಭಾಸಗಳಿದ್ದಾವ ಅವುಗಳನ್ನೆಲ್ಲ ಪ್ರಕಟಿಸ ಹೋದರೆ ನಮ್ಮ ಸ್ಥಳವು ಸಾಲದು ಆದರೂ ಒಂದೆರಡು ಸಂಗತಿಗಳನ್ನು ವಾಚಕರಿಗೆ ತಿಳಿಸದೆ ಇರಲಾಗುವುದಿಲ್ಲ ಹಂಟರ ಕಮಿಟಿಯ ರಚನೆಯೆ ಸದೋಷವಾದ್ದೆಂದು ಓಡಾಯರರ ಮೊದಲನೆ ಆಕ್ಷೇಪ ಈ ಆಕ್ಷೇಪವು ಓಡಾಯರರ ದೃಷ್ಟಿಗೆ ತೋರುವಂತೆ ಹಿಂದಿಗಳ ದೃಷ್ಟಿಗೂ ತೋರುತ್ತದೆ ಕಮಿಟಿಯಲ್ಲಿ ಬಹು ಸಂಖ್ಯಾಕರು ಇಂಗ್ಲಿಷರು, ಅಲ್ಪಸಂಖ್ಯಾಕರು ಹಿಂದಿಗಳು ಎಂಬ ಕಾರಣ ಈ ಕಮಿಟಿಯ ರಚನೆಯು ಸದೋಷವಲ್ಲವೆ? ಪರಂತು ಓಡಾಯರರಿಗೆ ಈ ರಚನೆಯು ಸದೋಷವಾಗಿ ತೋರಲಿಕ್ಕೆ ಇದು ಕಾರಣವಾಗಿರಲಿಕ್ಕಿಲ್ಲ ಕಮಿಟಿಯಲ್ಲಿ ಹಿಂದಿ ಮೆಂಬರುಗಳ ಸಂಖ್ಯೆಯು ಅಲ್ಪವಾಗಿರುವುದರಿಂದ ಕಮಿಟಿಯ ರಚನೆಯು ಸದೋಷವಾಗಿದೆ ಎಂದು ಓಡಾಯರು ಹೇಳುವ ಪಕ್ಷದಲ್ಲಿ, ಹಿಂದುಸ್ಥಾನ ಸರಕಾರ ಮತ್ತು ಮೊಂಟಗ್ಯು ಇವರು ತಮ್ಮ ಚತುರ್ಭುಜಗಳಿಂದ ಓಡಾಯರರ ಬೆನ್ನು ತಟ್ಟುವುದರ ಬದಲು ನಾವೇ ಹಿಂದಿಗಳು ಒಂದುಕೋಟಿ ಕೈಗಳಿಂದ ಶಹಬಾಸ ಎಂದು ಅವರ ಬೆನ್ನು ತಟ್ಟಬಹುದಿತ್ತು! ಆದರೆ ಈ ಭಾಗ್ಯವು ಅವರ ಪಾಲಿಗೆ ಇಲ್ಲವೆಂದು ತೋರುತ್ತದೆ. ದೊರೆಗಳಿಗೆ ಕಮಿಟಿಯ ರಚನೆಯಲ್ಲಿ ಕಾಣುವ ಸದೋಷತೆಯು ಅಲ್ಪಸಂಖ್ಯಾಕ ಹಿಂದಿಗಳನ್ನಾದರೂ ಇಲ್ಲಿ ಯಾಕೆ ಸೇರಿಸಿಕೊಂಡರು, ಸಂಪೂರ್ಣ ಇಂಗ್ಲಿಷ್ ಮೆಂಬರರೆ ಯಾಕೆ—ಇರಬಾರದಿತ್ತು ಎಂಬೀ ವಿಷಯವಾಗಿರಬಹುದೆಂದು ಅವರು ಮಾಡಿದ ನಿರ್ಣಯದ ಮೇಲಿಂದ ತಿಳಿಯಬಹುದಾಗಿದೆ ಪಂಜಾಬಿನಲ್ಲಿ ದಂಗೆಯ ಕುರುಹುಗಳು ಮೊದಲೇನೂ, ಇದ್ದಿಲ್ಲವೆಂದು ಹಂಟರ ಕಮಿಟಿಯು ಅಭಿಪ್ರಾಯಪಡುತ್ತದೆ ಆದರೆ ಓಡಾಯರರಿಗೆ ಅದು ಏನೂ ಸಮ್ಮತವಿಲ್ಲ. ಅಲ್ಲಿ ಮೊದಲಿನಿಂದಲೆ ದಂಗೆಯ ಅಂತರ್ರಚನೆಯು ನಡೆಯುತಿತ್ತೆಂದು ಅವರು ಹೇಳುತ್ತಾರೆ. ಮತ್ತು ಅವರು ಹೀಗೆ ಹೇಳದಿದ್ದರೆ ಬೇಕುಬೇಕು ಎಂದು ಬೇಡಿಕೊಂಡ ಲಷ್ಕರ ಕಾನೂನಿನ ಸಮರ್ಥನವನ್ನು ಅವರು ಹೇಗೆ ಮಾಡಬಹುದಿತ್ತು? ಈ ರೀತಿಯಿಂದ ಓಡಾಯರರು ಆತ್ಮಸಮರ್ಥನವನ್ನೂ ಲಷ್ಕರಕಾನೂನಿನ ಸಮರ್ಥನವನ್ನೂ ಮಾಡಿ ಮಿ. ಮೊಂಟೆಗ್ಯುಗಳೊಡನೆ ಈ ವಿಷಯದಲ್ಲಿ ಸರಿಯಾಗಿ ಚರ್ಚೆಯನ್ನು

ನಡಿಸು ... ಅವರಿಗೆ ಮತ್ತು ಇಂಡಿಯಾ ಆಫೀಸಿನೊಳಗಿನ ಮಿತ್ರ ಗೃಹಸ್ಥರಿಗೆ ಕಳೆದ ೧೯೧೯ನೆಯ ಜೂನಿನಲ್ಲಿ ಪಂಜಾಬಿನ, ಅಮೃತಸರದ ಮತ್ತು ಇತರ ಕಡೆಗಳಲ್ಲಿಯ ಸಂಪೂರ್ಣ ಪರಿಸ್ಥಿತಿಯನ್ನು ತಿಳಿಸಿಕೊಟ್ಟಿದ್ದೇನೆ ಎಂದು ಬರೆಯುತ್ತಿದ್ದಾರೆ. ಆದರೆ ಕೆಲವು ದಿವಸಗಳ ಹಿಂದೆ ಮೊಂಟೆಗ್ಯು ದೊರೆಗಳು ತಮಗೆ ಈ ವಿಷಯವು ಗೊತ್ತಿಲ್ಲವೆಂದು ಕಿವಿಯ ಮೇಲೆ ಕೈ ಇಟ್ಟುಕೊಂಡಿದ್ದರು ಇಲ್ಲಿ ಬರುವ ಒಂದು ಪ್ರಶ್ನೆ ಯಾವದೆಂದರೆ, ಓಡಾಯರರು ಮೊಂಟೆಗ್ಯುಗಳ ಮೇಲೆ ಹಾಕುವ ಈ ಜವಾಬದಾರಿಯು ಹೌದೋ ಅಥವಾ ಮೊಂಟೆಗ್ಯುಗಳು ಅರುಹೇರಿಸಿದ ಮಾತು ಹೌದೋ? ಸಾರಾಂಶ, ಮೇಲೆ ತೋರಿಸಿ ಕೊಟ್ಟ ವಿಸಂಗತತೆಯನ್ನು ತಿಳಿಯದಷ್ಟು ಓಡಾಯರರ ಮಿದುಳು ಓತಲ್ಲವಾದರೂ, ಇಲ್ಲವೆ ಅವರು ಈಗ ಮಿಲ್ನರ ತನ್ನ ಕುತ್ತಿಗೆಗೆ ಬಿದ್ದಿರುವ ಜವಾಬದಾರಿಯ ದಾರವನ್ನು ಕಡಿಯಲು ಯತ್ನಿಸುವ ದಾದರೂ, ಹಿಂದುಸ್ಥಾನ ಸರಕಾರದೊಟ್ಟಿಗೆ ಸ್ವತಃ ಓಡಾಯರರೂ ಕೂಡಿ ಪಂಜಾಬಿನ ಅನರ್ಥಕ್ಕೆ ಕಾರಣವಾಗಿದ್ದರೆಂಬುದು ಈಗ ಮರೆಸದಲ್ಲ

೫. ಶ್ಯಾನುಭೋಗರ ಮನವಿ:—ಗ್ರಾಮ ಉದ್ಯೋಗಸ್ಥರಿಗೆ ಹಂಗಾಮಿಯಾಗಿ ೧೦ ರೂಪಾಯಿಗೆ ಸಂಬಳ ಏರಿಸಿ ಬಂದ ಸರಕಾರ ಹುಕುಂ ತಮಗೆ ಸಾಕಷ್ಟು ಉತ್ತೇಜಕವಾಗುವ ಬದಲಾಗಿ ನಿರಾಶೆ ಯನ್ನು ಹುಟ್ಟಿಸಿದೆ, ಅದನ್ನು ಬೇಗನೆ ಬದಲಾಯಿಸಲಿಕ್ಕೆ ಸಾಧ್ಯವಿಲ್ಲದಿದ್ದರೆ ತಮಗೆ ಬೇರೆ ವೃತ್ತಿಯನ್ನಾದರೂ ಅವಲಂಬಿಸುವಂತೆ ೬ ತಿಂಗಳ ರಜೆ ದಯಪಾಲಿಸಬೇಕೆಂಬದಾಗಿ ಉಪ್ಪಿನಂಗಡಿ ತಾಲೂಕಿನ ಶ್ಯಾನುಭೋಗರು ಮಾಡಿದ ಮನವಿಯ ಸಾರಾಂಶವನ್ನು ಹಿಂದಿನ ಸಂಚಿಕೆಯಲ್ಲಿ ಸೂಚಿಸಿದ್ದೇವೆ. ಈಗ ಜಾರಿಯಲ್ಲಿರುವ ಸಂಬಳವು ೧೮೯೮ನೆ ಇಸವಿಯಲ್ಲಿ ಜಾರಿಗೆ ಬಂದಿದ್ದು ೧೯೧೪ನೆ ಇಸವಿಯಲ್ಲಿ ದರಗಳನ್ನು ಏರಿಸಬೇಕೆಂದು ಮಾಡಿದ ಮನವಿಗೆ ೧೯೧೮ರಲ್ಲಿ ನಿರ್ಣಯಿಸಿದ ದರಗಳನ್ನು ಅಷ್ಟು ಬೇಗನೆ ತಬ್ದೀಲುಮಾಡಲು ಸಾಧ್ಯವಿಲ್ಲವೆಂದು ಸರಕಾರದವರು ಹುಕುಂ ದಯಪಾಲಿಸಿದರು ಆದರೆ ಮಿ। ದತ್ತ ಎಂಬವರು ಇಂಡಿಯಾ ಸರಕಾರದವರ ಪರವಾಗಿ ಧಾರಣೆಗಳ ವಿಚಾರವನ್ನು ಮಾಡಿದ್ದರಲ್ಲಿ ಮದ್ರಾಸು ಸಂಸ್ಥಾನದಲ್ಲಿ ೧೮೯೦ರಿಂದ ೧೯೧೨ರ ವರೆಗೆ ಅಕ್ಕಿಯ ಧಾರಣೆಯು ಸೇಕಡಾ ೪೭ರಂತೆಯೂ ಇತರ ಆಹಾರ ಸಾಮಗ್ರಿಗಳ ಧಾರಣೆಯು ಸೇಕಡಾ ೩೦ರಂತೆಯೂ ಏರಿದೆ ಎಂತಲೂ ಅಜಮಾಯಿಷಿ ಮಾಡಿದ್ದಾರೆ ಆ ಕಾಲದಿಂದ ಯುದ್ಧ ಅಂತ್ಯವಾದ ನಂತರ ೧೯೧೯ನೆ ಇಸವಿಯ ವರೆಗೆ ಬೆಲೆಗಳ ಪಟ್ಟಿಯನ್ನು ನೋಡಿದರೆ ಸರಿಯಾಗಿ ಇಮ್ಮಡಿಗಿಂತಲೂ ಹೆಚ್ಚಿದೆ ಎಂದು ಸೆಲರಿಕಮ್ಮಿಟಿಯವರೇ ಒಪ್ಪಿದ್ದಾರೆ ಹಾಗಿರುವ ಸಂದರ್ಭದಲ್ಲಿ ೧೮೯೮ನೆ ಇಸವಿಯಲ್ಲಿ ನಿರ್ಣಯಿಸಿದ ಸಂಬಳದ ಸೇಕಡಾ ೫೦ರಷ್ಟು ಮಾತ್ರ,—ಅದು ಕೂಡಾ ಇದೇ ಎಪ್ರಿಲ್ ೧ನೆ ತಾರೀಕಿನಿಂದ—ಸಿಗಬೇಕಾಗಿ ಮಾಡಿದ ನಿರ್ಣಯವು ತೀರ ಅನುದಾರವಾಗಿದೆ ಎಂಬದರಲ್ಲಿ ಸಂಶಯವೇನೂ ಇಲ್ಲ ಶ್ಯಾನುಭೋಗರಿಗೆ ಬೇರೆ ಜಿಲ್ಲೆಗಳ ಕೆಲಸಗಳಿಂದ ಹಳ್ಳಿಯಿಂದ ಆದಾಯವುಂಟು, ಈ ಕೆಲಸಕ್ಕೆ ಒಬ್ಬ ಬಿಟ್ಟುಹೋದರೆ ಮೇಲೆಬಿದ್ದು ಬರುವವರು ಎಷ್ಟೋ ಮಂದಿ ಇದ್ದಾರೆ ಎಂದು ಮುಂತಾಗಿ ಕಾರಣಗಳನ್ನು ಕೊಟ್ಟು ಈ ಅತ್ಯಾವಶ್ಯಕವಾದ ಮತ್ತು ಕಂದಾಯಗಳ ಲೆಕ್ಕಪತ್ರಗಳನ್ನು ಜಾಗ್ರತೆಯಿಂದ ನೋಡಿಕೊಳ್ಳುವಂಥ ನವುಕರರನ್ನು ಸರಕಾರದವರು ವ್ಯಾಪಾರದರ್ಮದಿಂದ ತುಲನೆಮಾಡಿ ಸಂಬಳಗಳನ್ನು ನಿರ್ಣಯಿಸುವುದು ಎಂದೆಂದಿಗೂ ಸಮಂಜಸವಲ್ಲ ಮದ್ರಾಸು ಸರಕಾರವೇ ಜೀನಾವಸ್ಥೆಯಲ್ಲಿ ಕಾಲಹರಣ ಮಾಡಿ ಈಗ ತನಗೆ ನ್ಯಾಯವಾಗಿ ಸಿಗಬೇಕಾದ ಅಂಶದಲ್ಲಿ ದೊಡ್ಡದೊಂದು ಭಾಗವನ್ನು ಮೆಸ್ಟನ್‌ಕಮ್ಮಿಟಿಯವರು ಪರಿಷ್ಠ ಸರಕಾರಕ್ಕೆ ಕೊಡಲಿಕ್ಕೆ ಇದೆ ಎಂದು ಬೆಚ್ಚಿಬಿದ್ದು, ಹಟ್ಟಿಯಿಂದ ಎತ್ತು ಓಡಿಹೋದ ಮೇಲೆ ಹಟ್ಟಿಯ ಅಗಳಿ ಭದ್ರಪಡಿಸಲು ನೋಡುತ್ತಿದೆ ಈ ಜೀನದೇವರಿಗೆ ರೆವಿನ್ಯೂಬೋರ್ಡ ಒಂದು ಪೂಜಾರಿ ರವಿನ್ಯೂಬೋರ್ಡ ಅನುದಾರವಾದ ವಿಚಾರಗಳಿಗೆ ತೌರುಮನೆಯಾಗಿದೆ ಎಂಬದರಿಂದಲೇ ಅದರ ಕೆಳಗಿದ್ದ ಕೆಲವು ನೂತನ ಇಲಾಖೆಗಳು ಅದರ ಅಂಕುಶವನ್ನು ತಪ್ಪಿಸಿಕೊಂಡು ನೆಟ್ಟಗೆ ಸರಕಾರದ ಎಗ್ಜಿಕ್ಯೂಟಿವ ಕೌನ್ಸಿಲಿನ ಕೆಳಗೆ ಆಶ್ರಯ ಸೇರುತ್ತಿವೆ ಅಥವಾ ಸೇರಲು ನೋಡುತ್ತಿವೆ ಹೀಗಾಗಿ ಈ ಎರಡು ಮೇಲ್ವಿಚಾರಕರ್ತರ ಅನುದಾರ ಕ್ರಮಗಳಿಂದ ಈ ಬಡ ಶ್ಯಾನುಭೋಗರು ತಮ್ಮ ಕೆಲಸಕ್ಕನೆ ತಿಲಾಂಜಲಿಕೊಟ್ಟು ಅನ್ಯರೀತಿಯಿಂದ ಜೀವನಮಾಡಿಕೊಳ್ಳಲು ಯತ್ನಿಸಿದ್ದಾರೆಂದು ತಿಳಿಯುತ್ತೇವೆ ಆದರೆ ಸರಕಾರವು ಈ ರೀತಿಯಲ್ಲಿ ನಿರ್ಣಯವಾಗಲಾರದೆಂದು ನಾವು ಹಾರಯಿಸುತ್ತೇವೆ

೬ ನಮ್ಮ ಜಿಲ್ಲೆಯಿಂದ 'ರಿಜರ್ವ್ ಸೀಟಿ'ಗೆ ರಾವ ಬಹದ್ದೂರ ಎ. ರಾಮಯ್ಯ ಪೂಂಜರೂ 'ಜನರಲ್ ಸೀಟಿ'ಗೆ ರಾವ ಬಹದ್ದೂರ ನಯಂಪಳ್ಳಿ ಸುಬ್ಬರಾಯರೂ ಮದ್ರಾಸು ನ್ಯಾಯವಿಧಾಯಕ ಸಭೆಗೆ ಮೆಂಬರರಾಗಲು ಉಮೇದ್ವಾರರಾಗಿರುವುದನ್ನು ಪ್ರಕಟಿಸಿರುವೆವು ಇಬ್ಬರು ನಮ್ಮ ಜಿಲ್ಲೆಯವರಿಗೆ ಸಂಪೂರ್ಣ ಪರಿಚಿತರು ಮೊದಲನೆಯವರು ಬಿ ಎ ಬಿ. ಎಲ್.,ವರೆಗೆ ಪಾಸಾಗಿದ್ದು ಕೊಡಗಿನಲ್ಲಿ ಸಬ್‌ಜಡ್ಜರಾಗಿ ಕೆಲವು ಕಾಲ ಕೆಲಸ ನೋಡಿ ಆ ಮೇಲೆ ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟಿನ ಡಿಸ್ಟ್ರಿಕ್ಟ್ ಜಡ್ಜರಾಗಿ 'ಪೆನ್ಶನ್' ಹೊಂದಿದವರು ಎರಡನೆಯವರು ವಿದ್ಯೆಯಲ್ಲಿ ಅಷ್ಟು ಪರಿಶ್ರಮ ಮಾಡದೆ ಇದ್ದರೂ ರಾಜಕೀಯ ಮತ್ತು ಸಾಮಾಜಿಕ ವಿಷಯಗಳಲ್ಲಿ ಅನುಭವಸ್ಥರಾಗಿ ಹೆಸರುವಾಸಿಯಾಗಿದ್ದ ತಂದೆಯ ತೊಡೆಗಳಲ್ಲಿಯೇ ಈ ವಿಷಯಗಳ ಜ್ಞಾನವನ್ನು ಹೊಂದಿದಲ್ಲದೆ ಸ್ವತಃ ಮುನ್ಸಿಪಲ್ ಚೇರಮನ್ನರಾಗಿಯೂ ಈಚೆಗೆ ಡಿಸ್ಟ್ರಿಕ್ಟ್‌ಬೋರ್ಡ ಪ್ರೆಸಿಡೆಂಟರಾಗಿಯೂ ಸ್ಥಾನಿಕ ರಾಜ್ಯಭಾರದ ತತ್ವಗಳನ್ನು ಸ್ವಂತ ಅನುಭವದಿಂದ ಜಾರಿಗೆ ತರಲು ಯತ್ನಿಸಿದವರು. ಇದಲ್ಲದೆ ಹಿಂದು ಕಾಲದಲ್ಲಿ ಕೆಲವು ವರ್ಷಗಳ ಹಿಂದೆ ನ್ಯಾಯವಿಧಾಯಕ ಸಭೆಯಲ್ಲಿ ಚುನಾವಣೆ ಮೆಂಬರರಾಗಿದ್ದು ಈಗ ಸರಕಾರ ನಿಯುಕ್ತ ಮೆಂಬರರಾಗಿದ್ದಾರೆ. ಇವರು ನ್ಯಾಯವಿಧಾಯಕ ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಸರಕಾರ ನಿಯುಕ್ತರಾದರೂ ನಿದಾಕ್ಷಿಣ್ಯದಿಂದ ಹೇಳುತಿದ್ದುದು ನಮ್ಮ ಪತ್ರಿಕೆಯ ವಾಚಕರಿಗೂ ಗೊತ್ತಿರುವ ಸಂಗತಿಯಾಗಿದೆ, ಇಬ್ಬರೂ ದೊಡ್ಡ ವರ್ಗದಾರರಾಗಿ ಹೆಸರುವಾಸಿಯಾದ ಮನೆತನದವರು ಇಬ್ಬರೂ ಈಗಿನ ಅವರ ಪ್ರಯತ್ನಗಳಲ್ಲಿ ಯಶಸ್ವಿಯಾಗಲೆಂದು ನಾವು ಹೃತ್ಪೂರ್ವಕವಾಗಿ ಹಾರಯಿಸುತ್ತೇವೆ

೭ ಈಗ ಎಷ್ಟೋ ವರ್ಷಗಳಿಂದ ಕರ್ನಾಟಕವಾಙ್ಮಯದ ಮತ್ತು ದೇಶದ ಸೇವೆಯನ್ನು ದಾಕ್ಷಿಣ್ಯ ಹಾಗು ಅಂಜಿಕೆ ಇಲ್ಲದೆ ನಡಿಸುತಿದ್ದ ಧಾರವಾಡದ ಚಂದ್ರೋದಯ ಪತ್ರವು ವಿಶ್ರಾಂತಿಯನ್ನು ತೆಕ್ಕೊಂಡಿದೆ ಎಂದು ಚಂದ್ರೋದಯದ ಪ್ರೀತಿಂದ ತಿಳಿದು ನಾವು ತುಂಬಾ ವಿಷಾದಪಡುತ್ತೇವೆ ಅಲ್ಲದೆ ಮೂರು ನಾಲ್ಕು ವರ್ಷಗಳಿಂದ ಹೊರಡುತಿದ್ದ ಧಾರವಾಡದ ಶುಭೋದಯವೂ ಕೂಡ ಕೆಲವು ಸಮಯದ ವಿಶ್ರಾಂತಿಯನ್ನು ಪಡೆದಿದೆ ಎಂದು ತಿಳಿದು ಬರುತ್ತದೆ ನಮ್ಮ ಬಂಧುಗಳಾದ ಕಾನಡಾ ವೃತ್ತಕಾರರು ಹೇಳಿರುವಂತೆ ಲೋಕಮತ ನಿದರ್ಶಕವಾದ ಪತ್ರಿಕೆಗಳ ಸಂಖ್ಯೆಯು ಹೆಚ್ಚ ಬೇಕಾದ ಈ ಕಾಲದಲ್ಲಿ ಚಂದ್ರೋದಯದಂಥ ರಾಷ್ಟ್ರೀಯ ಪಕ್ಷದ ಪ್ರಮುಖ ಪತ್ರವು ಅಸ್ತವನ್ನು ಹೊಂದುವುದಾಗಲಿ ಶುಭೋದಯದ ಗೈರಹಾಜರಿಯು ಅನಿಯಮಿತವಾಗುವುದಾಗಲಿ ಕರ್ನಾಟಕದ ಹಿತಕ್ಕೆ ತುಂಬಾ ಬಾಧಕವಾಗಿದೆ ಮೊಂಟೆಗ್ಯು ಸುಧಾರಣೆಗಳ ಧ್ವಜದ ಕೆಳಗೆ ಹೊಸ ಕೌನ್ಸಿಲುಗಳು ಪ್ರಾರಂಭವಾಗತಕ್ಕ ಇಂಥ ಸಮಯದಲ್ಲಿ ಅಜ್ಞಜನಸಮಾಜಕ್ಕೆ ರಾಜಕಾರಣದೊಳಗಿನ ಗೂಢ ಪ್ರಶ್ನೆಗಳ ಶಿಕ್ಷಣವನ್ನು ದಾಕ್ಷಿಣ್ಯ ರಹಿತವಾದ ಒರ್ಜಯಿಂದ ಕೊಡುವುದು ಅತ್ಯಂತ ಆವಶ್ಯಕವಾದ್ದೆಂದು ಹೇಳಬೇಕಾದ್ದಿಲ್ಲ ಅದ್ದರಿಂದ ಮಿ ಗದಿಗೆಯ್ಯಾ ಹೊನ್ನಾಪುರ ಮಠ ಇವರು ಇದು ವರೆಗೆ ರಾಷ್ಟ್ರೀಯ ಪಕ್ಷದ ಮತಗಳನ್ನು ಇದ್ದದ್ದು ಇದ್ದ ಹಾಗೆ ಪ್ರತಿಪಾದಿಸುವ ಯಾವ ಅಸಿಧಾರಾ ವ್ರತವನ್ನು ಕೈಕೊಂಡಿದ್ದರೊ ಅದನ್ನೇ ತಮ್ಮ ಪತ್ರಿಕೆಯನ್ನು ಪ್ರಾರಂಭಿಸಿ ನಡಿಸಿಯಾರು, ಹಾಗು ಅವರಿಗೆ ಧಾರವಾಡದ ಇತರ ಪುಢಾರಿಗಳೂ ಚಂದಾದಾರರೂ ಯೋಗ್ಯ ಪ್ರೋತ್ಸಾಹವನ್ನು ಕೊಟ್ಟಾರೆಂದು ನೆನಸುತ್ತೇವೆ

೮ ಪೂರ್ವ ಆಫ್ರಿಕದಿಂದ ಹಿಂತೆರಳಿ ಬಂದ ಮಿ. ಸಿ ಎಫ್ ಎಂಡ್ರ್ಯೂಸ್ ಇವರ ಭೇಟಿಯನ್ನು ಎಸೋಸಿಯೇಟೆಡ್ ಪ್ರೆಸ್ಸಿನ ಒಬ್ಬ ಬಾತಮಿದಾರನು ಪಡಕೊಂಡಾಗ ಅವರು ಅಲ್ಲಿಯ ಹಿಂದಿಗಳ ಭಯಂಕರ ಸ್ಥಿತಿಯನ್ನು ವರ್ಣಿಸಿದ್ದಾರೆ ಅಲ್ಲಿರುವ ಯುರೋಪಿಯನರಿಗೆ ಹಿಂದಿಗಳನ್ನು ಹೇಗಾದರೂ ಉಚ್ಚಾಟನೆ ಮಾಡಬೇಕೆಂದು ತೋರುತ್ತದೆ ಮತ್ತು ಅದಕ್ಕಾಗಿ ಯೂರೋಪಿಯನರು ವಿಧವಿಧದ ಉಪಾಯಗಳನ್ನು ಕೈಕೊಳ್ಳುತಿದ್ದಾರೆ ಹಿಂದಿಗಳಿಗೆ ಮತದಾರತನದ ಹಕ್ಕು ಇರಬಾರದು, ಹಿಂದಿಗಳಿಗೆ ದೊಡ್ಡ ದೊಡ್ಡ ಜಿಲ್ಲೆಗಳಲ್ಲಿ ಜಮೀನು ಪಡಕೊಳ್ಳುವ ಹಕ್ಕಿರಬಾರದು, ನಾಗರಿಕತೆಯ ಯಾವ ಯಾವ ಸಂಗತಿಗಳಿದ್ದಾವೊ ಅವುಗಳಲ್ಲಿ ವರ್ಣವಿಭಾಗವು ಸ್ಪಷ್ಟವಾಗಿ ತೋರುವಂತಿರಬೇಕು ಎಂದು ಮುಂತಾದ ನಿಯಮಗಳನ್ನು ಅಲ್ಲಿಯ ಯುರೋಪಿಯನರು ಮಾಡಹತ್ತಿದ್ದಾರೆ ಮಿ ಎಂಡ್ರ್ಯೂಸರು ಮುಂದೆ ಹೇಳುತ್ತಾರೇನೆಂದರೆ, ವೈಸರಾಯರು ೧೯೨೦ನೆಯ ಜನವರಿ ತಿಂಗಳಲ್ಲಿ ಸೇರಿದ ಕೌನ್ಸಿಲಿನಲ್ಲಿ ಬಾದಶಹರ ಪ್ರಜೆಗಳು ಸಮಾನರು ಎಂದು ಹೇಳಿದ್ದರು, ಈ ಮಾತನ್ನು ಲೊ ಮಿಲ್ನರರ ಕಿವಿಗೆ ಹಾಕಿದರೆ ಅವರು ಅದನ್ನು ಒಪ್ಪಿಕೊಳ್ಳುವುದಿಲ್ಲ ಹಿಂದುಸ್ಥಾನ ಸರಕಾರವು ತಾನು ಒಮ್ಮೆ ನುಡಿದ ಮಾತುಗಳಲ್ಲಿ ಏನಾದರೂ ಅರ್ಥವಿದೆ ಎಂದು ತಿಳಕೊಳ್ಳುವುದಾದರೆ ಮತ್ತು ಹಾಗೆ ತಿಳಿದು ಗಟ್ಟನಿಲ್ಲುವುದಾದರೆ ಇನ್ನೂ ಆಸೆ ಇದೆ ಎಂದು ಮಿ ಎಂಡ್ರ್ಯೂಸರು ಅಭಿಪ್ರಾಯಪಡುತ್ತಾರೆ, ಬಾದಶಹರ ಪ್ರಜೆಗಳೆಲ್ಲರೂ ಸಮಾನಹಕ್ಕಿನವರೆಂದು ದೊಡ್ಡ ದೊಡ್ಡ ಮುತ್ಸದಿಗಳು ಉದ್ದುದ್ದ ಬಾಷಣಗಳನ್ನೆ ಕೊಡುತ್ತಾರಲ್ಲದೆ "ಲಾಭಕಾಲೆತು ಸಂಪ್ರಾಪ್ತೇ ಯೂಯಂ ಯೂಯಂ ವಯಂ ವಯಮ್,' ಎಂದು ಹೇಳಿದಂತೆ ಅವರು ಹಕ್ಕುಗಳ ವಿಭಾಗದ ಸಮಯವು ಬಂದಾಗ ನೀವು ಬೇರೆ ನಾವು ಬೇರೆ' ಎಂಬೀ ತತ್ವವನ್ನೆ ಅನುಸರಿಸುತ್ತಾರೆ ಇದು ಖೇದಜನಕವಲ್ಲವೆ?

೯ ಪೂರ್ವ ಆಫ್ರಿಕದೊಳಗಿನ ಹಿಂದಿಗಳ ಅವಸ್ಥೆಯು ಈಗ ಮೇಲೆ ಹೇಳಿದಂತೆ ಆಯಿತಲ್ಲವೆ? ದಕ್ಷಿಣ ಆಫ್ರಿಕದೊಳಗಿನ ಹಿಂದಿಗಳ ದಶೆಯು ಹೇಗಿದೆ ಎಂಬದನ್ನು ನೋಡಹೋದರೆ ಇದು ಅದರ ಅಣ್ಣನೊ ಏನೆಂಬುದು ಗೊತ್ತಾಗುವುದಿಲ್ಲ ದಕ್ಷಿಣ ಆಫ್ರಿಕದಲ್ಲಿ ಹಿಂದಿಗಳನ್ನು ಇರಗೊಡಬಾರದೆಂಬುದೆ ಅಲ್ಲಿಯ ಸರಕಾರದ ಅಭಿಮತವೆಂದು ಸ್ಪಷ್ಟವಾಗುತ್ತದೆ ಯಾಕೆಂದರೆ ಹಿಂದಿಗಳ ಬಗ್ಗೆ ಆಫ್ರಿಕನ್ ಕಮಿಷನು Repatriation ನಿಸ ಎಂದರೆ ಗಂಟು ಮೂಟೆಗಳನ್ನು ಕಟ್ಟಿಕೊಂಡು ಸ್ವದೇಶಕ್ಕೆ ತೆರಳುವುದರ ಒಂದು ಯೋಜನೆಯನ್ನು ತಯಾರಿಸಿದೆ ಈ ಯೋಜನೆಯು ಹೇಗಿದೆ ಎಂದರೆ ಅದರ ಶರ್ತಗಳು ಹೇಗಿವೆ ಎಂಬುದು ಇನ್ನೂ ಗೊತ್ತಾಗಿಲ್ಲ ಇಂಥ ಪರಿಸ್ಥಿತಿಯಲ್ಲಿ— ಹೊಸ ಯೋಜನೆಯ ಸಂಪೂರ್ಣ ತಿಳುವಳಿಕೆಯುಂಟಾಗುವ ಪೂರ್ವದಲ್ಲಿ ಆಫ್ರಿಕನ್ ಕಮಿಷನು ತಯಾರಿಸಿದ ಹೊಸ ಯೋಜನೆಯನ್ನು ಹಿಂದುಗಳು ಎಂದೂ ಒಪ್ಪಿಕೊಳ್ಳಬಾರದು, ಮತ್ತು ಹಿಂದುಸ್ಥಾನ ಸರಕಾರವು ಇಲ್ಲಿಯ ಲೋಕಮತವನ್ನು ಲಾಲಿಸಿದ ಹೊರತು ಮುಂದರಿಸಬಾರದು ಎಂದು ಮಹಾತ್ಮಾ ಗಾಂಧಿಗಳು ಪ್ರಕಟಿಸಿದ್ದಾರೆ ಮಹಾತ್ಮರು ಕೊಟ್ಟಿರುವ ಈ ಎಚ್ಚರಿಕೆಯನ್ನು ಹಿಂದೂಸ್ಥಾನ ಸರಕಾರವು ಉಪಯೋಗಿಸಿ ಕೊಂಡೀತೆಂದು ಭರವಸೆ ಇದೆ.

ಮಂಗಳೂರು.

ನ್ಯಾಯವಿಧಾಯಕ ಸಭೆಗೆ ಉಮೇದ್ವಾರರು — ... ಜಡ್ಜರಾಗಿದ್ದು ಪೆನ್ಶನ್ ಹೊಂದಿದ ರಾವ ಬಹದ್ದೂರ ಅ... ರಾಮಯ್ಯ ಪೂಂಜರು ಬಿ. ಎ, ಬಿ. ಎಲ್ ಇವರು 'ರಿಜರ್ವ ಸೀಟಿ'... ರಾವ ಬಹದ್ದೂರ ನಯಂಪಳ್ಳಿ ಸುಬ್ಬರಾಯರು 'ಜನರಲ್ ಸೀಟಿ'... ಉಮೇದ್ವಾರರಾಗಿ ನಿಂತಿರುವುದಾಗಿ ನಮಗೆ ತಿಳಿಸಿರುವರು

ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಮುಖ್ಯ ಉಪಾಧ್ಯಾಯಿನಿಯರಾದ ಶ್ರೀಮತಿ ಪದ್ಮಾಬಾಯಿಯವರು ಕಳೆದ ಎಪ್ರಿಲ್ ತಿಂಗಳಲ್ಲಿ ಜರುಗಿದ ಅಹಲ್ಲಾಬಾದ್ ವಿಶ್ವವಿದ್ಯಾಲಯದ ಬಿ. ... ಕ್ಲಾಸಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ಮಂಗಳೂರ ತಾಲೂಕು ಬೋರ್ಡ ಮೆಂಬರಿಕೆಗೆ ಮಂಗಳೂರ ಇಲೆಕ್ಟೋರಲ್ ಸರ್ಕಲಿನಿಂದ ಚುನಾವಣೆಯಾಗ ತಕ್ಕ ಸ್ಥಾನಕ್ಕೆ ಮ। ರಾ। ರಾ। ನೆಲ್ಲಿಕ್ಕಾಯ ವೆಂಕಟರಾಯರು ಮತ್ತು ಮ। ರಾ। ಕರಿಯಂಗಳ ಮುತಯ್ಯ ಶೆಟ್ರು ಉಮೇದ್ವಾರರಾಗಿರುವರು. ಸದರಿ ತಾಲೂಕು ಬೋರ್ಡಿಗೆ ಬಂಟವಾಳ ಇಲೆಕ್ಟೋರಲ ಸರ್ಕಲಿನಿಂದ ನಡಿಯತಕ್ಕ ಚುನಾವಣೆಗೆ ಮ। ರಾ। ನರಸಿಂಹ ಮರ್ತು ಭಂಡಾರಿಯವರೊಬ್ಬರೇ ಉಮೇದ್ವಾರರಾಗಿರುವುದರಿಂದ ಈ ಸ್ಥಾನಕ್ಕೆ ಇವರೇ ಚುನಾಯಿಸಲ್ಪಡ ಬರುವರು ನಾಮದಾರ ಯನ್ ಸುಬ್ಬರಾವ್‌ರವರು ಪುನಃ ಜಿಲ್ಲಾ ಬೋರ್ಡ ಮೆಂಬರರಾಗಿ ಆದ ಚುನಾವಣೆಯು ಮಂಜೂರಾಗಿದೆ.

ಕಳೆದ ತಾ ೧೪ರಿಂದ ಮಂಗಳೂರಿಂದ ಮದ್ರಾಸ ಕಡೆಗೆ ಬಿಡೋಣಾಗುವ ಮೈಲು ಟ್ರೈನು ಪ್ರಾತಃಕಾಲ ೬ ಗಂಟೆಗೆ ಹೊರಡುವುದು ಇದು ಮರುದಿನ ಪ್ರಾತಃಕಾಲ ೬ ಗಂಟೆಗೆ ಮದ್ರಾಸನ್ನು ಸೇರುವುದು ಈ ತಪ್ಸಿಲಿಯಿಂದ ಮೈಲು ಬಂಡಿಯು ಮಂಜೇಶ್ವರ ಸ್ಟೇಶನಿನಲ್ಲಿಯೂ ನಿಲ್ಲುವುದು ಮೋಟಾರ ಬಂಡಿಯು ಎಂದಿನಂತೆ ಪ್ರಾತಃಕಾಲ ೯-೩೦ಕ್ಕೆ ಇಲ್ಲಿಗೆ ಮುಟ್ಟುವುದು ಮತ್ತು ಪೂರ್ವಾಹ್ನ ೧೧ ಗಂಟೆಗೆ ಹಿಂತೆರಳುವುದು ಸಾಯಂಕಾಲ ಇಲ್ಲಿಂದ ೫-೧೦ ಗಂಟೆಗೆ ಪೆಸೆಂಜರ್ ಟ್ರೈನು ಬಿಡಲಾಗುವುದು

ಶ್ರೀಯುತ ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯರು ಮತ್ತು ಶ್ರೀಯುತ ಕೂಲಕೆ ಪರಮೇಶ್ವರ ಮಯ್ಯ ಇವರು ಮದ್ರಾಸ ಯುನಿವರ್ಸಿಟಿಯ ಸಂಸ್ಕೃತ ಶಿರೋಮಣಿ ಪರೀಕ್ಷೆಯ ಕಡೇ ವರ್ಷದ ಪರೀಕ್ಷೆಯಲ್ಲೂ ಕೊನೆ ಹೊಂದಿರುತ್ತಾರೆ

ಮಂಗಳೂರ ಸೆಕೆಂಡರಿ ಟ್ರೈನಿಂಗ ಶಾಲೆಯ ೧ನೇ ಅಸಿಸ್ಟಾಂಟ ಉಪಾಧ್ಯಾಯರಾದ ಮ। ರಾ। ರಾ। ಕೋಟೆಕಾರ ರಾಮರಾವ್‌ರವರು ಬಳ್ಳಾರಿಯ ಹ್ಯಾಯರ ಎಲಿಮೆಂಟರಿ ಶಾಲೆಯ Iನೇ ಅಸಿಸ್ಟಾಂಟ ಉಪಾಧ್ಯಾಯರಾಗಿ ವರ್ಗ ಹೊಂದಿರುವರು ಇವರ ಹುದ್ದೆಯಲ್ಲಿ ಬಳ್ಳಾರಿಯ ಗವರ್ನಮೆಂಟ ಟ್ರೈನಿಂಗ ಶಾಲೆಯ IIನೇ ಅಸಿಸ್ಟಾಂಟರಾದ ಮ। ರಾ ಎ ವೆಂಕಟರಾವ್‌ರವರು ನೇಮಕವಾಗಿದ್ದಾರೆ.

ಕಳೆದ ತಾರೀಕು ೬ರಲ್ಲು ನೇತ್ರಾವತಿ ನದಿಯ ಜಪ್ಪು ಕಡವಿನ ಬಳಿ ಒಂದು ಶವವು ತೇಲುತ್ತಿತು ತನಿಖೆಯಲ್ಲಿ ಇದು ರಿಟಾಯರ್ಡ ಡಿಪ್ಯುಟಿ ಕಲೆಕ್ಟರರಾದ ಮಿ ಆಲ್ಫ್ರೆಸ ಸಾಲ್ಡಾನರ ದೇಹವಾಗಿ ನಿರ್ಧರಿಸಲಾಯಿತು ಆತ್ಮಹತ್ಯವೇ ಇದರ ಕಾರಣವಾಗಿರಬೇಕೆಂದು ತನಿಖೆಗಾರರಿಗೆ ಲಕ್ಕೆ ನೆನಸಿದೆ ಪೋಲಿಸ ತನಿಖೆಯು ನಡಿಯುತ್ತಿದೆ

ಸ್ಕೂಲ ಫೈನಲ ಪರೀಕ್ಷೆಯ ಫಲಿತಾಂಶ —ಗವರ್ನಮೆಂಟ ಕೊಲೇಜ ೩೩ರಲ್ಲಿ 21 ಕೆನರಾಹೈಸ್ಕೂಲ 91ರಲ್ಲಿ 38 ಮಿಶನ್ ಹೈಸ್ಕೂಲ 30ರಲ್ಲಿ 13 ಈ ರೀತಿ ತೇರ್ಗಡೆ ಹೊಂದಿರುತ್ತಾರೆ

ಮಿ। ರೇನ್ಸ್‌ಫರ್ಡ ಸಾಹೇಬರು ಈ ಸರ್ಕಲಿನ ಶಾಲಾ ಇನ್ಸ್‌ಪೆಕ್ಟರರಾಗಿ ಬರುವರೆಂದು ವರ್ತಮಾನವಿದೆ

ಡಿಪ್ಯೂಟಿ ಕಲೆಕ್ಟರರ ಸಂಬಳದ ದರಗಳು—ಪ್ರೊವಿನ್ಶಲ್ ಸರ್ವಿಸಿನಲ್ಲಿ ಈ ಹುದ್ದೆಯ ವರೆಗೆ ಈ ವರೆಗೆ ರೂ ೩೫೦ರಿಂದ ೭೦೦ರ ವರೆಗೆ ಸಂಬಳದ ದರಗಳಿದ್ದವು ಈಗ ಈ ಗ್ರೇಡಿನ ಉಮೇದ್ವಾರರಿಗೆ ಪ್ರೊಬೇಶನರಾಗಿ ರೂ ೨೫೦, ಪರೀಕ್ಷೆ ಪಾಸಾದ ಮೇಲೆ ೨೩೦ ರೂ ೩೦೦ ಆಗುವಂತೆ ರೂ ೪೦೦ ಮತ್ತು ವರ್ಷಕ್ಕೆ ರೂ ೪೦ರ ಮೇರೆಗೆ ಏರಿ ೫ ವರ್ಷಗಳ ನಂತರ ೫೦೦ ರೂ ಸಿಗುವುದು. ಆದರ ನಂತರ ಯೋಗ್ಯತೆ ಮತ್ತು ಕೆಲಸದ ಚಟುವಟಿಕೆಯ ಮೇಲೆ ಹೊಂದಿ ರೂ ೫೦೦ರಿಂದ ವರ್ಷಪ್ರಂತಿ ೫೦ರ ಮೇರೆ ೮೫೦ ರೂ ಸಿಗತಕ್ಕದ್ದು ಆ ಮೇಲೆ ಈ ಹುದ್ದೆಯವರ ಪೈಕಿ ಸೇಕಡಾ ೩೩ರಷ್ಟು ಮಂದಿಗೆ ರೂ. ೧೦೦೦ದಿಂದ ೧೦೦ ರೂ ವರ್ಷಪ್ರಂತಿ ಏರಿ ೧೨೦೦ರ ವರೆಗೆ ಸಂಬಳ ಸಿಗುವುದೆಂತಲೂ ಈ ಕ್ರಮವು ಕಳೆದ ಡಿಸೆಂಬರ್ ತಿಂಗಳ ೧ನೆ ತಾರೀಕಿನಿಂದ ಜಾರಿಗೆ ಬರುವುದೆಂತಲೂ ಮದ್ರಾಸು ಪ್ರಾಂತಿಕ ಸರಕಾರದ ಜಾಹಿರಾತು ಇದೆ

Mr. ALEX ALVOREZ Dentist.

OF MANDALAY UPPER BURMA

Will attend patients here for the following in Particular —

1 Painless extraction of teeth 2 Making of false teeth 3 Filling the teeth with silver, gold, porceline 4 Gold bridge and Crowns 5 Porceline Crowns 6 Cleaning teeth

Can be consulted at—

The Electro Homoeopathic Dispensary,
Hampankatta, MANGALORE

ಅಪ್ಪರ ಬರ್ಮದ ಮಂಡಲೆ ಪಟ್ಟಣದ ದಂತ ಚಿಕಿತ್ಸರಾದ

ಮಿ. ಎಲೆಕ್ಸ ಅಲ್ವಾರಿಸ್

ಇವರು ಹಲ್ಲು ಬೇನೆಯಿಂದ ನರಳುತ್ತಿರುವವರ ಹಲ್ಲುಗಳನ್ನು ಸ್ವಲ್ಪವೂ ನೋಯದಂತೆ ಬುಡಸಹಿತ ಕಿತ್ತು ತೆಗೆಯೋಣ, ಕೃತ್ರಿಮ ಹಲ್ಲುಗಳನ್ನು ಮಾಡಿ ಇಡೋಣ, ಹಲ್ಲುಗಳಲ್ಲಿ ಉಂಟಾದ ರಂಧ್ರಗಳನ್ನು ಬೆಳ್ಳಿ, ಬಂಗಾರ, ಪಿಂಗಾಣಿ ಇವುಗಳಿಂದ ಮುಚ್ಚೋಣ ಬಂಗಾರದ ಕೃತ್ರಿಮ ದಂತಮಾಲೆಯನ್ನು ಬುಡ ಸಹಿತ ಕೂರಿಸೋಣ, ಪಿಂಗಾಣಿ ಹಲ್ಲುಮಾಲೆಯನ್ನು ಕೂರಿಸೋಣ ಮತ್ತು ಹಲ್ಲುಗಳನ್ನು ಶುಚಿಮಾಡೋಣ ಇವೇ ಮುಂತಾದ ದಂತ ಚಿಕಿತ್ಸೆಯನ್ನು ಮಾಡುವರು ... ಇವರು ಈಗ ... ಒಂದು ಹಂಪನಕಟ್ಟೆಯಲ್ಲಿರುವ ... ಎಲೆಕ್ಟ್ರೋ ಹೋಮಿಯೋಪತಿಕ್ ಡಿಸ್ಪೆನ್ಸರಿಯಲ್ಲಿ ನೋಡಸಿಗುವರು.

[illegible]

ನಡಿಸಿದ ಲೋಕನಾಯಕರು ಕಾಗದದ ಮೇಲೆ ಹಾಕಿ ರಾಜ್ಯಪದ್ಧತಿಯನ್ನು ತಯಾರಿಸಿದರು. ಆದರೆ ವ್ಯವಹಾರದೊಳಗೆ ಅವರು ಅದನ್ನು ಉಪಯೋಗಿಸಲಾರಂಭಿಸಲು ಅವರು ದಿಕ್ಕು ತಪ್ಪಿ ಎಲ್ಲಿಂದ ಎಲ್ಲಿಯೋ ಹೋಗಿ ಮುಟ್ಟಿದರು. ಹೀಗಾದ ಮೇಲೆ ಹಳ್ಳಿ ಆಗರೂಕರಾದ, ಮತ್ತು ಸಮತೋಲ ಬುದ್ಧಿಯ ನಾಯಕರಿಗೆ ಈ ಜವಾಬ್ದಾರ ರಾಜ್ಯಪದ್ಧತಿಯ ಕಾರ್ಯವನ್ನು ಮುಂದೆ ಸಾಗಿಸಬೇಕಾಯಿತು. ಇಟಾಲಿಯ ದೇಶಭಕ್ತನಾದ ಕಾವ್ಹೂರನ ಚಾತುರ್ಯದಿಂದ ಇನ್ನು ನಾವು ಬೋಧ ತಕ್ಕೊಳ್ಳಬೇಕು.

ಪತ್ರ ವ್ಯವಹಾರ.

ಅಯ್ಯಾ ಪತ್ರಿಕರ್ತರೆ,

ನಮ್ಮ ಜಿಲ್ಲೆಯ ಪರವಾಗಿ ಈಗ ಹಲವು ಮಂದಿ ಮದ್ರಾಸು ನ್ಯಾಯವಿಧಾಯಕ ಸಭೆಗೆ ಮೆಂಬರರಾಗಲು ಉಮೇದ್ವಾರರಾಗಿ ಬರುವರೆಂದು ನಿಮ್ಮ ಪತ್ರದಲ್ಲಿ ಪ್ರಕಟಿಸಿರುವಿರಿ. ಇವರಲ್ಲಿ ಕೆಲವರು ನಮ್ಮ ಜಿಲ್ಲೆಯ ಸುಮಾರು ೩೦೦೦೦ ಮಂದಿ ಓಟರರಿಗೆ ತೀರಾ ಅಪರಿಚಿತರು, ಆ ಕಾರಣದಿಂದ ಅವರು ಆ ಪದವಿಗೆ ಅನರ್ಹರು ಎಂದು ನಾನು ಪ್ರತಿಪಾದಿಸುವುದಿಲ್ಲ. ಆದರೂ ನಮ್ಮ ಪ್ರಾಂತಿಕ ಸರಕಾರದ ಯಾವ ಕಾರ್ಯಗಳನ್ನು ಜನೋಪಕಾರದಲ್ಲಿ [illegible]

[illegible]

ಸರ್ವರಿಗೂ ತಿಳಿಯಬರುವಂತೆ ಗಾಡಿ ಚೌಕದ ಗಡಿಯನ್ನು ತಿಂಗಡಿಸಿ ದೊಡ್ಡ ಅಕ್ಷರಗಳಿಂದ ಇಂತಿಷ್ಟು ಕಾಲಕ್ಕೆ ಇಂತಿಷ್ಟು ಫೀಸು ಕಂಟ್ರ್ಯಾಕ್ಟರರಿಗೆ ಸಲತಕ್ಕದ್ದು ಎಂಬವನ್ನು ಕಾಣಿಸುವ ಒಂದು ಸೈನ್ ಬೋರ್ಡನ್ನು ಹಾಕಿಸಿ ಈ ತರದ ಬಟವಾಡಿ ನಡಿಯುದಂತೆ ಸಂಬಂಧಪಟ್ಟ ಉದ್ಯೋಗಸ್ಥರು ಮಾಡುವರೆಂಬ ನಂಬಿಗೆಯಿಂದ ಈ ಲೇಖನವನ್ನು ಬರಕೊಂಡಿದ್ದೇನೆ.

ಪ್ರಯಾಣಿಕ.

ಅಯ್ಯಾ,

ಶಿಲಾರ್ಪಾಲು, ಮೊಗರು, ನಾವರ ಈ ಮೂರು ಗ್ರಾಮಗಳ ರೈತರು ಸರಕಾರ ಕಾಡಿನಿಂದ ಸೊಪ್ಪು, ಒಣಗಲು, ಕಟ್ಟಿಗೆ ಮತ್ತು ಜಾನುವಾರುಗಳ ಮೇಯಿಸುವಲ್ಲಿ ವಸೂಲು ಮಾಡುವ ಫೀಸನ್ನು ಮಾಫಿ ಮಾಡಬೇಕೆಂತಲೂ ಮತ್ತು ಜಾನುವಾರು ಮತ್ತು ಬೆಳೆ ನಾಶವಾಗುವ ದುಷ್ಟ ಮೃಗಗಳನ್ನು ತಿಂಗಳಿಗೆ ಎರಡಾವರ್ತಿ ಕಾಡಿಗೆ ಹೋಗಿ ಶಿಕಾರಿ ಮಾಡುವ ಹಾಗೆ ಹುಕುಂ ಆಗುವುದಲ್ಲದೆ ಕಾಡಿಗೆ ಬೆಂಕಿ ಹಬ್ಬದಂತೆ ಮತ್ತು ಮನುಷ್ಯಜಾತಿ ಮರಗಳಿಗೆ ಅಪಾಯ ಬಾರದಂತೆ ಕಾಪಾಡುತ್ತೇವೆಂತ ಐವತ್ತರಾಂನಿತಿ ಕಳದ ಸೆಪ್ಟೆಂಬರ ತಿಂಗಳಲ್ಲಿ ಮೆಹರ್ಬಾನ್ ದಕ್ಷಿಣಕನ್ನಡಾ ಜಿಲ್ಲಾ ಕಲೆಕ್ಟರ್ ದೊರೆಗಳವರ ಸನ್ನಿಧಾನಕ್ಕೆ ಟಪ್ಪಾಲು ರಿಜಿಸ್ಟ್ರಿ ಸಹಿ ಅರ್ಜಿ ಬರಕೊಂಡದ್ದಕ್ಕೆ ಯಾವದೊಂದು ಹುಕುಂ ದಯಪಾಲಿಸಿ ಕೊಡಲಿಲ್ಲ, ಇನ್ನಾದರೂ ಈ ಅಧಿಕಾರಿಗಳು ಈ ವಿಷಯದಲ್ಲಿ ನಮಗೆ ಕೊಡಬೇಕಾಗಿ ತಮ್ಮ ಪತ್ರಿಕೆಯ ಮೂಲಕ ತಿಳಿಸುವ,

ಶಿಲಾರ್ಪಾಲು ಗ್ರಾಮಸ್ಥ.

ಬಂಟರ ಯಾನೆ ನಾಡವರ ಸಂಘಕ್ಕೆ ತಾ. 18—5—'20ರ ನಂತರ ಶುಭಕಾರ್ಯಗಳ ಸಂದರ್ಭಗಳಲ್ಲಿ ವಸೂಲಾದದ್ದು.

ರಾ. ಹಂದಾಡಿ ರಾಮಯ ಶೆಟ್ರಿಂದ ರೂ.	೨೫—೦—೦
,, ಮರಳದ ಸುಬ್ಬಯ ಶೆಟ್ರ ಮೂಲಕ	೨೦—೦—೦
,, ಕಳವಾರು ಮಂಜಪ್ಪ ಶೆಟ್ರಿಂದ	೧೫—೦—೦
,, ನಿಟ್ಟೆ ನಾರಾಯಣ ಅಧಿಕಾರಿಯವರಿಂದ	೧೫—೦—೦
,, ಕೆದಿಂಜೆ ರಾಮಯ ಹೆಗ್ಗಡೆಯಿಂದ	೮—೦—೦
,, ಕಡೆಂಬ ಅಪ್ಪಯ ಭಂಡಾರಿಗಳಿಂದ	೮—೦—೦
,, ಮುಳ್ಳ ಚಂದಯ ಶೆಟ್ರ ಮೂಲಕ	೪—೦—೦
,, ಕೋಲ್ಯಾರು ಸುಬ್ಬಯ ಶೆಟ್ರಿಂದ	೪—[illegible]—೦
,, ಅಯಕಳ ಅಣ್ಣು ಶೆಟ್ರಿಂದ	೪—೦—೦
	ರೂ. ೧೦೩—೦—೦

ಮಂಗಳೂರು,
ತಾ. 16-6-'20.

ಎ. ಬಿ. ಶೆಟ್ಟಿ,
ಕೋಶಾಧಿಕಾರಿ.

ನೋಟೀಸು.

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಕಂಪೆನಿಯ ಬಾಬತು ಕೇರ ಬೀದಿಯಲ್ಲಿ ಶಾರದಾ ಛಾಪಖಾನೆಯ ಎದುರಿರುವ ಹಳೇ ಕಟ್ಟಡದ ಅಡ್ಡಗಳು, ಮರದ ಹಲಿಗೆಗಳು ವಗೈರೆ ಮಲ್ಪುರಿಯ ಸಾಮಾನುಗಳು ಇದೇ ಬರುವ ಆದಿತ್ಯವಾರ (20—6—20) ರಲ್ಲು ಮಧ್ಯಾಹ್ನ ೩ ಗಂಟೆಗೆ ಬಹಿರಂಗವಾಗಿ ಏಲಂ ಮಾಡೋಣಾಗುವದು. ಶರ್ತ ನಗದಿ.

ಮಂಗಳೂರು,
ತಾ. 17-6-1920.

M. K. SHRIDHARA KUDVA.
Secretary,
Canara Public Conveyance Co.,
LTD., MANGALORE.

ದಿ ಕೆನರಾ ಎಂಟರ್‌ಪ್ರೈಜ್, ಲಿಮಿಟೆಡ್.

ಪುತ್ತೂರು ದಕ್ಷಿಣ ಕನ್ನಡಾ.

(1913ನೇ ಇಸವಿಯ ಇಂಡಿಯನ್ ಕಂಪೆನಿಗಳ ಆಕ್ಟಿಗನುಸಾರವಾಗಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ)

ಮೂಲಧನ:—ರೂಪಾಯಿ 200,000—ರೂಪಾಯಿ 25ರ 8,000 ಹಿಸೆಗಳಿಗೆ ವಿಭಾಗಿಸಲ್ಪಟ್ಟಿರುತ್ತದೆ. ಹಿಸೆಗಳನು ಮನವಿ ಮೂಲಕ ಅಪೇಕ್ಷಿಸಿ ಯಾರೂ ಪಡಕೊಳ್ಳಬಹುದು.

ಮನವಿಯೊಂದಿಗೆ ಪ್ರತಿ ಹಿಸೆಗೆ ರೂಪಾಯಿ 5 ಮತ್ತು ಪ್ರವೇಶಫೀಸು ಆಣೆ 4 ಅಂತು ರೂ 5—4—0, ಮನವಿ ಅಂಗೀಕರಿಸಿದ ಬಳಿಕ ಕೊಡೋಣಾಗುವ ಎಲ್ಲೋಟ್‌ಮೆಂಟ್ ನೋಟಿಸಿನ ವಾಯಿದೆಗೆ ರೂ 5 ಕೊಡತಕ್ಕದ್ದು. ಬಾಕಿ ರೂ 15ನ್ನು ಸರಿಯಾದ 3 ಕಂತುಗಳಿಂದ ಕೇಳಿದ ಹಾಗೆ ಪಾವತಿ ಮಾಡತಕ್ಕದ್ದು ಆದರೆ ಒಂದು ಕಂತು ಕೇಳಿದ ಬಳಿಕ ಕನಿಷ್ಟಪಕ್ಷಕ್ಕೆ 2 ತಿಂಗಳ ಅವಧಿಗೆ ಮುಂಚಿತವಾಗಿ ಇನ್ನೊಂದು ಕಂತು ಕೇಳೋಣಾಗಲಿಕ್ಕಿಲ್ಲ.

ಪ್ರಾಸ್ಪೆಕ್ಟಸಿನ ಬದಲಾಗಿ ಜೈಂಟ್ ಸ್ಟಾಕ್ ಕಂಪೆನಿಗಳ ಅಸಿಸ್ಟಾಂಟ್ ರಿಜಿಸ್ಟ್ರಾರರ ಬಳಿ ದಾಖಲು ಮಾಡಿದ ಸ್ಟೇಟ್‌ಮೆಂಟಿನಲ್ಲಿ ಕಾಣಿಸಿದ ಪ್ರಕಾರ ರೂ 20,000ಕ್ಕೆ ಸರಿಯಾದ 800 ಹಿಸೆಗಳು ಈ ಮೊದಲೇ ಹಂಚಲ್ಪಟ್ಟಿರುತ್ತವೆ

ಡೈರೆಕ್ಟರರು

1 ಮ|| ರಾ|| ರಾ|| ಉಳ್ಳಾಲ ಸಾಂತಯ್ಯ ಶೆಣೈ, ಅವರ್ಗಳ್ — ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಮಂಗಳೂರು
2. „ „ ಎಮ್. ನರಸಿಂಹ ಮರ್ತುರಭಂಡಾರಿ, — ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ವ ಸಾಹುಕಾರ, ಮಂಗಳೂರು
3. „ „ ಎಮ್. ಮುಡ್ಲಗಿರಿ ಪಾಂಡುರಂಗ ಪೈ, „ — ಲೇಂಡಿಂಗ್ ವ ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ವ ಸಾಹುಕಾರ, ಮಂಗಳೂರು
4. „ „ ಎಚ್ ಕೊರಗಪ್ಪ, „ — ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ಮತ್ತು ಒನರರಿ ಬೆಂಚ್ ಮೆಜಿಸ್ಟ್ರೇಟ್, ಮಂಗಳೂರು
5 „ „ ಮಂಜೇಶ್ವರ ಜನಾರ್ಧನ ಭಟ್, „ — ತಾಲೂಕ ಬೋರ್ಡ್ ಮೆಂಬರ್ ವ ಸಾಹುಕಾರ ಪುತ್ತೂರು
6. „ „ ಎಚ್. ಅನಂತ ಕಾಮತ್, — ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ ಪುತ್ತೂರು
7. „ „ ಅರಿಯಡ್ಕ ಸುಬ್ಬಯ್ಯರೈ, „ — ವರ್ಗದಾರ, ಅರಿಯಡ್ಕ
8 „ „ ಸೊರಕೆ ಎಲಿಯಣ್ಣ, „ — ವರ್ಗದಾರ ವ ತು ಸಾಹುಕಾರ, ಪುತ್ತೂರು
9 „ „ ಎ ಗೋವಿಂದ ಶೆಣೈ, „ — ಮೆನೇಜಿಂಗ್ ಡೈರೆಕ್ಟರ್, ಪುತ್ತೂರು

ಬೇಂಕರ್ಸ್

1 ಮದ್ರಾಸ್ ಬೇಂಕ್ ಮತ್ತು 2 ಕೆನರಾ ಬೇಂಕ್, ಲಿಮಿಟೆಡ್ ಮಂಗಳೂರು

ಲೀಗಲ್ ಎಡ್ವೈಸರರು

1. ಮ|| ರಾ|| ರಾ|| ಎಚ್ ಗಣಪತಿರಾವ್, ಅವರ್ಗಳ್,—ಪ್ಲೀಡರ್ ಪುತ್ತೂರು
2 „ „ ಎಮ್ ಮಾಧವರಾವ್ „ —ಬಿ ಎ, ಬಿ ಎಲ್, ಪ್ಲೀಡರ್, ಮಂಗಳೂರು

ರಿಜಿಸ್ಟ್ರಿ ಮಾಡಲ್ಪಟ್ಟ ಆಫೀಸು

"ಶ್ರೀ ವರದೇಂದ್ರ ಹೋಟೆಲ್" ಪೋಸ್ಟ್ ಆಫೀಸ್ ಬಳಿ, ಪುತ್ತೂರು

ಸೂಚನಾ ಪತ್ರ

ಉದ್ದೇಶಗಳು—(1) ಬೇಂಕಿಂಗ್ ಯಾನೆ ಹಣದ ಲೇವಾದೇವಿ ಮಾಡುವದು (2) ವ್ಯಾಪಾರದ ದಲಾಲಿ ವ ಏಜನ್ಸಿ ಮಾಡುವದು (3) ಕೈಗಾರಿಕೆ ಕಸಬುಗಳನ್ನು ಮಾಡುವದು (4) ವ್ಯಾಪಾರ ಮಾಡುವದು (5) ಕೃಷಿ ಮಾಡುವದು (ಉಪಯುಕ್ತವಾದ ಕೈಗಾರಿಕೆ ಸಮೇತ) (6) ಲಾಭಕರವೆಂತ ಕಂಡುಬರುವ ಇತರ ಯಾವ ಉದ್ಯೋಗವನ್ನಾದರೂ ಮಾಡುವದು

(1) ಪುತ್ತೂರಿನಲ್ಲಿ ಒಂದು ಬೇಂಕು ಸ್ಥಾಪಿಸಲ್ಪಡುತ್ತಿದೆ
(2) ಒರುವ ವರ್ಷ ಒಂದು ದಲಾಲಿ ಧಂಡಸಾಲೆ ತೆರಿಯುವ ಆಲೋಚನೆ ಇದೆ
(3) ಹಿಟ್ಟು ತಯಾರಿಸುವ ಕಾರ್ಖಾನೆಯು ಪಶ್ಚಿಮ ಕರಾವಳಿಯಲ್ಲಿ ಬೊಂಬಾಯಿ ವಿನಹಾ ಬೇರೆ ಎಲ್ಲಿಯೂ ಇರುವದಿಲ್ಲ ಆದಕಾರಣ ಅಂಥಾದ್ದೊಂದು ಕಾರ್ಖಾನೆಯನ್ನು ಸದ್ಯದಲ್ಲಿಯೇ ಮಂಗಳೂರಿನಲ್ಲಿ ಸ್ಥಾಪಿಸುವ ಆಲೋಚನೆ ಇದೆ

ಮಿಕ್ಕ ಉದ್ದೇಶಗಳನ್ನು ನೆರವೇರಿಸುವರೆ ಹೆಚ್ಚು ದ್ರವ್ಯಾನುಕೂಲತೆಯು ಅವಶ್ಯಕವು. ಮಾತ್ರವಲ್ಲ ಅವುಗಳಲ್ಲಿ ಹೆಚ್ಚು ತೊಂದರೆಗಳು ವ ನಷ್ಟ ಸಂಭವ ಕೂಡಾ ಇರಬಹುವಾದ ಕಾರಣ ಅವುಗಳು ಕೆಲವು ವರ್ಷಗಳ ತನಕ ಪ್ರಾರಂಭಿಸಲ್ಪಡಲಾರವು

ಮುನಾಫೆ

ಪ್ರಥಮ ವರ್ಷದಲ್ಲಿ ಹೆಚ್ಚಿನ ಸಮಯವು ಹಿಸೆಗಳ ಸಂಪಾದನೆಯಲ್ಲಿಯೇ ಕಳೆಯುಹೋಗುವದರಿಂದ ಕಂಪೆನಿಗೆ ಸಾಕಷ್ಟು ಮುನಾಫೆ ಉಳಿಯುವರೆ ಆಸ್ಪದವಿಲ್ಲ ಪರಂತು ಸದ್ಯದಲ್ಲಿಯೇ ಪ್ರಾರಂಭಿಸಲಿಕ್ಕಿರುವ ಉದ್ಯೋಗಗಳು (ಅಂದರೆ—ಬೇಂಕು ಹಿಟ್ಟಿನ ಕಾರ್ಖಾನೆ ಮತ್ತು ದಲಾಲಿ ಧಂಡಸಾಲೆ, ನಷ್ಟಕ್ಕೆ ಎಡೆಯಿಲ್ಲದ ಮುನಾಫೆಯ ಮೂಲಿಗಳಾಗಿರುವದರಿಂದ ಒರುವ ವರ್ಷದಲ್ಲಿ ಮುನಾಫೆಯ ಹಣದಿಂದ ಕ್ಷೇಮನಿಧಿಗೋಸ್ಕರ ತಕ್ಕ ಅನುಕೂಲತೆಯನ್ನು ಮಾಡಿಯೂ ಸಾಕಷ್ಟು ಡಿವಿಡೆಂಡು ಹಂಚಲು ಸಾಧ್ಯವಾದೀತೆಂತ ಕಂಪೆನಿಯ ಡೈರೆಕ್ಟರರು ಅಭಿಪ್ರಾಯಪಡುತ್ತಾರೆ

ಹಿಸೆಗಳ ಬಗ್ಗೆ ಮಾಡತಕ್ಕ ಮನವಿ

ಮನವಿ ಬಗ್ಗೆ ಖಾಸಾ ಫೋರ್ಮುಗಳು ಕ್ರಯ ವಿನಹಾ ಮೇನೆಜಿಂಗ್ ಡೈರೆಕ್ಟರರಿಂದ ಒದಗಿಸಲ್ಪಡುವವು. ಮನವಿಗಳು ಫೀಸು ಸಮೇತ ಅವರ ಬಳಿಗೆ ಕಳುಹಿಸಲ್ಪಡತಕ್ಕದ್ದು ಯಾದಾಸ್ತು ಮತ್ತು ಕ್ರಮಗಳ ಪುಸ್ತಕವನ್ನು ಕಂಪೆನಿಯ ಆಫೀಸಿನಲ್ಲಿ ಕೆಲಸ ಮಾಡುವ ದಿವಸಗಳಲ್ಲಿ ಯಾರೂ ನೋಡಿಕೊಳ್ಳಬಹುದು ಹಿಸೆಗಳನ್ನು ಪಡಕೊಂಡವರು ಒಂದು ರೂಪಾಯಿ ಕೊಟ್ಟು ಅವುಗಳ ಪ್ರತಿಯನ್ನು ಸಹಾ ಕೊಂಡುಕೊಳ್ಳಬಹುದು ಮನವಿದಾರರು ಕಂಪೆನಿಯ ಯಾದಾಸ್ತು ಮತ್ತು ಕ್ರಮಗಳನ್ನು ಓದಿನೋಡಿ ಅವುಗಳ ಅರ್ಥವನ್ನು ಸರಿಯಾಗಿ ಮಾಡಿಕೊಂಡಿದ್ದಾರೆಂತ ತಿಳಕೊಳ್ಳೋಣಾಗುವದು

25 ಹಿಸೆಗಳನ್ನು ಪಡಕೊಂಡ ಮೆಂಬರನು ಡೈರೆಕ್ಟರನಾಗಲಿಕ್ಕೆ ಅರ್ಹನಾಗಿರುತ್ತಾನೆ

☞ ಎಲ್ಲಾ ಕಾಗದಪತ್ರಗಳನ್ನು ಮೇನೆಜಿಂಗ್ ಡೈರೆಕ್ಟರರ ವಿಳಾಸಕ್ಕೆ ಕಳುಹಿಸಿಕೊಡಬೇಕು

ಪುತ್ತೂರು,
18—3—1920

A. GOVINDA SHENOY,
Managing Director

ಅಪೂರ್ವ ಸಂದರ್ಭ.

ಅಕ್ಕಲ್ಪ ಕಾಲದ ಅಭ್ಯಾಸದಿಂದ, ವಿಶೇಷ ಮೂಲಧನವಿಲ್ಲದೇಲೇ ಹಿಮಟಾರದ ವರಾದರೂ ಕೂಡಾ ಹಳ್ಳಿಗಳಲ್ಲಾದರೂ ಪಟ್ಟಣಗಳಲ್ಲಾದರೂ ಚಲೋ ಜೀವನ ದುಡಿಯಲಿಕ್ಕೆ ಅನುಕೂಲವಾಗುವ ಹೊಲಿಗೆ ವೃತ್ತಿಯು ಎಲ್ಲಾ ತರದ ಶಿಕ್ಷಣವನ್ನು ಅತ್ಯಾಧುನಿಕ ಶಾಸ್ತ್ರೀಯರೀತ್ಯಾ ಕಲಿಯುವವರಿಗೆ ಅನುಕೂಲವಾದ ಸಮಯ ವ ಸ್ಥಳಗಳಲ್ಲಿ ಸುಲಭ ದರಗಳಲ್ಲಿ ಕಲಿಸುವ ಏರ್ಪಾಡು ನಮ್ಮಲ್ಲಿರುವದು ಮಾಹಿತಿ ಪತ್ರಗಳನ್ನಪೇಕ್ಷಿಸುವವರು ನಮ್ಮಲ್ಲಿ ವಿಚಾರಿಸಿದಲ್ಲಿ ಅಥವಾ ಅರ್ಧಾಣೆ ಸ್ಟಾಂಪು ಸಮೇತ ನಮಗೆ ಬರೆದಲ್ಲಿ ಫಳಟ ಕೊಡುವೆವು

M. Anantha Prabhu.
The Tailoring House and
School of Scientific Tailor's Cutting.
MANGALORE, SOUTH KANARA.

ರೇಷ್ಮೆ ಪಂಚೆ, ಆಟೋಮೋಹಿನಿ ಸೆಂಟ್

ಈ ನಕ್ಷೆಯಲ್ಲಿ ಕಂಡ ಇಂಕಿ ಅಷ್ಟದೆ ಬರೆಯುವ ಫೌಂಟನ್ ಪೇನಾ ಅದಕ್ಕೆ ಕ್ಯಾರಟ್ ಭಂಗಾರದ ಮುಳ್ಳು ಹಾಕಿರುತ್ತ ಇದರಿಂದ ಬರೆಯುವದರಿಂದ ಅಕ್ಷರಗಳು ಮುತ್ತುಗಳ ಹಾಗೆ ಬರೆಯುವದು ಈ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೇಷ್ಮೆ ಪಂಚೆ, ಆಟೋಮೋಹಿನಿ ಸೆಂಟ್ ಇನಾಂ ಸಹಿತ ರೂ ೧—೪—೨,

O. C. LINGAM & Co,
No. 5. Kumarappa Mudaly Street,
Mint Buildings,
Post. MADRAS.

ಹರಿವಾಹನಶಕ ೧೮೪೨ ನೆಯ ರೌದ್ರಿ ಸಂದ ಉತ್ತರಾಯಣಂ ಆಷಾಢ ಶು|| ೩ ಶನಿವಾರದಿಂದ ರೌದ್ರಿ ಸಂ ಆಷಾಢ ಶು|| ೯ (ಉತ್ತರಾಯಣಂ) ಶುಕ್ರವಾರದ ವರೆಗಿನ ಪಂಚಾಂಗ

(೧೯೨೦ ನೆಯ ಜೂನ್; ವೃಷಭ ದೇಶ)

[illegible]	[illegible]	[illegible]	[illegible]	[illegible]	[illegible]	[illegible]	ಸೂರ್ಯ ಉ.	ಅಸ್ತ.
19	ಶನಿ	೩	೧೮ ೧೬	ಪುಷ್ಯಾ	೪೨ ೩೧	೫	6 6	6·56
20	ರವಿ	೪	೧೪ ೦	ಆಶ್ಲೇಷಾ	೪೯ ೧೦	೬	6 7	6·57
21	ಸೋಮ	೫	೮ ೪೬	ಮಘಾ	೪೬ ೪೬	೭	6 7	6·57
22	ಕುಜ	೬	೫ ೨	ಹುಬ್ಬಾ	೪೬ ೧೦	೮	6 7	6 57
23	ಬುಧ	೭	೨,೫೦	ಉತ್ತರಾ	೪೬ ೧೬	೯	6 7	6·57
24	ಗುರು	೮	೧ ೧೦	ಹಸ್ತಾ	೪೭ ೨೮ ೧೦		6 7	6 58
25	ಶುಕ್ರ	೯	೧ ೧೬	ಚಿತ್ರಾ	೪೦ ೦ ೧೧		6 7	6 58

ಮಂಗಳೂರಿನ ವಾಯುಸ್ಥಿತಿ

(೧೯೨೦ನೆಯ ಮೇ)

Date ತಾರೀಖು	Temperature ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall ಮಳೆ ದಿನದ ಮಳೆ	ಜನವರಿ ೧ರಿಂದ
11	90—2	76—5	2—87	
12	84—5	70—6	—	
13	86—0	72—5	0—67	
14	83—4	76—3	5—27	
15	82—7	73—4	2—58	
16	82—2	73—6	1—53	—
17	83—6	73—3	0—47	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ ಆ	ವರೆಗೆ ರೂ ಆ
ಮುಸ್ಕು ಅಕ್ಕಿ ಮುಡಿ ಗಳ್ಳೆ	8 14	9— 5
ಗುಸ್ತು	8 4	8— 8
ರಾಸಿ ಮಡಿ ಗಳ್ಳೆ	7—13	8 2
ಅವ್ವಲ್ ಬೆಳ್ತಿಗೆ	1— 4	10— 8
ಗುದ್ದು ಬೆಳ್ತಿಗೆ	9—	9— 4
ರಂಗೂನ ಬೆಳ್ತಿಗೆ ಗೋಣಿ ಗಳ್ಳೆ	10—	16— 8
ಗೋಧಿ ಗೋಣಿ ಗಳ್ಳೆ	25— 0	27— 8
ಹುರುಳಿ ಗೋಣಿ ಗಳ್ಳೆ	13 8	14— 8
ಕಡಲೆ ಗೋಣಿ ಗಳ್ಳೆ	17— 0	18— 8
ತೊಗರಿ ಗೋಣಿ ಗಳ್ಳೆ		20— [illegible]
ತೊಗರಿಬೇಳೆ ಗೋಣಿ ಗಳ್ಳೆ	31 0	34— [illegible]
ಉದ್ದು ಗೋಣಿ ಗಳ್ಳೆ	18— 8	19— 8
ಹೆಸರು ಗೋಣಿ ಗಳ್ಳೆ	18— 0	18— 8
ಊರು ಬೆಲ್ಲ ಖಂಡಿ ಗಳ್ಳೆ	105— 0	110— [illegible]
ಉಪ್ಪು ಗೋಣಿ ಗಳ್ಳೆ	4— 1	0— 6
ಕೊಬ್ರಿ ಖಂಡಿ ಗಳ್ಳೆ	115— 0	125— 0
ಕೊಬ್ರಿ ಹಿಂಡಿ ಖಂಡಿ ಗಳ್ಳೆ	—	36— 8
ಎಳ್ಳಿಂಡಿ ಖಂಡಿ ಗಳ್ಳೆ	60— [illegible]	62— 0
ಕೊಬ್ರಿ ಎಣ್ಣೆ ಮುಡಿ ಗಳ್ಳೆ	9— 8	10— 0
ಎಳ್ಳೆಣ್ಣೆ ಮುಡಿ ಗಳ್ಳೆ	11— 0	11— 4
ಹಿಪ್ಪೆಎಣ್ಣೆ ಪೆಟ್ಟಿಗೆ ಗಳ್ಳೆ	9— 4	9— 6
ಮೋರಿಸ ಸಕ್ಕರೆ ಮುಡಿ ಗಳ್ಳೆ	12— 0	12— 8
ಊರ ಮೆಣಸಿನ ಕಾಯಿ ಮುಡಿ ಗಳ್ಳೆ	8— 5	9— 8
ಸಾಸಿವೆ ಮುಡಿ ಗಳ್ಳೆ	10— [illegible]	10— 8
ಕೊತ್ತಂಬರಿ ಮುಡಿ ಗಳ್ಳೆ	6— 0	6— 4
ಕಾಫಿ ಖಂಡಿ ಗಳ್ಳೆ	240— 0	250— 0
ಬೆಳಗೋಟು ಅಡಿಕೆ ಖಂಡಿ ಗಳ್ಳೆ	105— 0	110— 0
ಹಳೆ ಬೆಳಗೋಟು	95— 0	100— 0
ಕಾಳುಮೆಣಸು ಖಂಡಿ ಗಳ್ಳೆ	155— 0	160— 0
ಯಾಲಕ್ಕಿ ಮುಡಿ ಗಳ್ಳೆ	25— 0	30— 0
ಗೇರುಬೀಜ ಮುಡಿ ಗಳ್ಳೆ	3—11	3—12
ಕಬ್ಬಿಣ ಖಂಡಿ ಗಳ್ಳೆ	100— 0	120— 0
ತಾಂಬ್ರ ತಗಡು ಮುಡಿ ಗಳ್ಳೆ	24— 4	25— 0
ತಾಂಬ್ರ ಪಾತ್ರೆಗಳು ಮುಡಿ ಗಳ್ಳೆ	32— 0	35— 0
ಚೀನ ಬೆಳ್ಳಿ ಸೇರು ಗಳ್ಳೆ	31— 8	
ಹಿತ್ತಾಳೆ ತಗಡು ಮುಡಿ ಗಳ್ಳೆ	24— 0	26— 0

The Canara Bank Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.
Authorised and fully paid up Capital Rs 300,000—0—0
Reserve and other sinking Funds „ 188772—0—2

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 188,772—0—2

THE BANK RECEIVES FIXED, CURRENT ACCOUNT, & SAVINGS BANK DEPOSITS.
ಕಾಯಂ, ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.
☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು

Canara Bank Ltd.
Mangalore, 10th May 1920

K. Venkat Rao,
Secretary.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ, ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ 12, 5, 3, 2 8-0, 1 0 0

ಅರಗಜ ಮತ್ತು ಬಿಲ್ಲೆಗಳು. ತೊಲ 1ಕ್ಕೆ ರೂ 3, 2, 1

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಬೇನೆಗೆ ಸಂಜೀವನವಾದ ಧೂಪ ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ ಟಿನ್ 1ಕ್ಕೆ 8 ಆಣೆ

ಜರದ. ಹುಡಿಗೆಯಿಸ್ಸು ಚಿಕ್ಕಮಕ್ಕಳವರಿಗೆ ಅತಿ ರುಚಿಕರವಾದದ್ದು ಶೀಸೆ 1ಕ್ಕೆ 6 ಆಣೆ

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ ಇದು ಗಂಧದ ಬಿಲ್ಲೆಯನ್ನು ಹೋಲುತ್ತಿದೆ ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ಲೆವೆಂಡರ್. ಶೀಸೆ 1ಕ್ಕೆ 1—4—0

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ವಿಕರಿಗೆ ಸಿದ್ಧವಾಗಿರುತ್ತವೆ

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು

ವೈದ್ಯ ವಿದ್ಯ

ಯಾವುದೊಂದು ವ್ಯಾಧಿಯು ಇಲ್ಲದೆ ನೂರಿನೆಂಪತ್ತು ಗೊಂದಿರಬೇಕಾದರೆ ಓದಿರಿ ಎಂಬ ಜ್ವಾಲೆ,

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಈ ಪುಸ್ತಕಕ್ಕೆ ಯಾವ ವಿರ್ಜನ್ನು ಕೊಡಬೇಡಿ ಎಳಾಸವನ್ನು ತಿಳಿಸಿದ ಮಾತ್ರಕ್ಕೆ ಎರುವದು

ವೈದ್ಯ ವಿದ್ಯ

ವಿಳಾಸ —ರಾಜವೈದ್ಯ ನಾರಾಯಣಜಿ ಕೇಶವಜಿ,
27 ಬ್ಯಾನ ಬಜಾರು ರೋಡು ಮದ್ರಾಸು

"ಟಿಪ್ಸ್ಯ ರೆಮಿಡಿಸ್"

ಎಂಬ

ತುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು

1 ಕಲ್ಕೇರಿಯ ಪ್ಲೋರ್	5 ಕಾಲಿ ಮ್ಯೂರ್	9 ನಾಟ್ರಮ್ ಮ್ಯೂರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮಗ್ನೆಸಿಯ ಫೋಸ್	12 ಸಿಲಿಸಿಯ

ಕ್ರಯ	ರೂ ಆ ಪೈ
ಎರಡು ಡ್ರಾಮಿನ D ಸೈಜ್ ಸೀಸೆ ಒಂದರ	0—3—6
ನಾಲ್ಕು „ „ „ „	0—6—0
ಒಂದು ಟೆನ್ನಿನ „ „ „	0—12—0
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ	3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯಶಾಸ್ತ್ರ ಪುಸ್ತಕ ಸಮೇತ	10—0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು ಇದು ಮೇಲೆ ಹೇಳಿದ ಟಿಷ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಯಿಲೆ ಕಸಾಲೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ ಈ ಪುಸ್ತಕವು ಎಲ್ಲರಿಗೂ ಸುಲಭದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ ಕ್ರಯ 12 ಆಣೆ ಮಾತ್ರ

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು

ಎ. ಫೆರ್ನಾಂಡಿಸ್,
ಎಲ್ಲಿಕ್ಸ್ಪೆ ಹೋಮಿಯೊಪತಿ ಡಿಸ್ಪೆನ್ಸರಿ, ಮಂಗಳೂರು.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.
ಇಂಡಿಯಾ ಸರಕಾರದಲ್ಲಿ ಸನ್ ೧೯೧೬ನೇ ಇಸವಿಯ ೨೫ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟಿತ್ತು.

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಗಳಿಗೆ ಮನವರಿಕೆಯಾಗಿ ಸಾ ೧೯೦೬ನೇ ಇಸವಿಯಿಂದ ಸಾ ೧೯೧೯ನೇ ಇಸವಿಯವರೆಗೆ ನಮಗೆ ಕಾಲುಲಕ್ಷ ಸಾವಿರ ಬಾಟಲಿಗಳು ಖರ್ಚಾದವು ಮತ್ತು ಸನ್ ೧೯೧೮ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಇನ್‍ಫ್ಲೂಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದು ಇವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಸಹಿತ ಮೂವತ್ತೈದೆಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ಬರುವ ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅನ್ನುತವೆ ಈ ಆರೋಗ್ಯಬಿಂದು ಇದೇ ಕೆರ್ನಾ ಎಂದು ತಿಳಿದ ಸ್ವೀಕಾರಮಾಡುತ್ತಿದ್ದಾರೆ ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಹಳ ದೇಶಗಳಲ್ಲಿ ಹೋಗಿ ರೋಗಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಅನೇಕ ಯಾವತ್ತು ರೋಗಗಳಿಗೆ ಉಪಯೋಗ ಆದದ್ದಕ್ಕೆ ಎಸ್ಪೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ ಅವು ಬರೆಯುವುದಕ್ಕೆ ಸ್ಥಳವು ಸಾಲದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕಾರ ರೋಗಗಳಿಂದಾಗುವ ತೊಂದರೆ ನಿವಾರಿಸಿರಿ ರೋಗದ ಪರೀಕ್ಷೆಯು ಹಲವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಬಿಲ್ಲುಗಳಿಂದಲೂ ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗ ನಿವಾರಣ ಮಾಡಿಕೊಳ್ಳಬೇಕು

ರೋಗದ ನಾಮಗಳು

ಕ್ಷಯರೋಗ, ಹವಾರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‍ಫ್ಲೂಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕೆಮ್ಮು, ಮೂಗಿನೊಳಗಿನ ಪಿಡಿಸ, ಮೊದಲಾದ ರೋಗವು, ಕಣ್ಣುಗಳಿಗೆ ಹೂವು ಬೀಳೋದು ಮತ್ತು ಕಣ್ಣು ನೋವು, ದಮ್ಮು, ಕೆಮ್ಮು, ಕ್ಷಯ, ಅಜೀರ್ಣ, ಇದ್ದಾಲಿಸ, ಅತಿಸಾರ, ಹೊಟ್ಟೆಶೂಲೆ, ವ್ಯಾಳಿ, ಅರ್ಧತಲೆಶೂಲೆ, ನರಶೂಲೆ ವಾತಶೂಲೆ, ರಕ್ತಪಿತ್ತ, ಗುಪ್ತವ್ಯಾಧಿ, ಹುರುಕು, ಕಜ್ಜಿ, ಗಜಕರ್ಣ, ಕಡ್ಡು ಇಸಬು, ಧಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟು ರೋಗ, ಪಾದದ ನಂಜು, ಹಲ್ಲು ಬೇನೆ, ಚೇಳು ಕಡಿತ, ತೇಲುಗೆಗಳು, ಅರಿಷ್ಟ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋದು, ವೃಷಣ ದೊಡ್ಡದಾಗೋದು, ಸುತ್ತು ಸಣ್ಣ ಕಾಯಿಲೆಗಳಿಗೆ ಬೇರೆ ಔಷಧಗಳು ಇದೇ ಅನೇಕ ರೋಗಗಳು, ಬೇಡು ನಿಮ್ಮ ಸರ್ವರಿಂದ ಇದರ ಹೊರತು ಇನ್ನು ಅನೇಕ ರೋಗಗಳು ಖಾತ್ರಿಯಿಂದ ವಾಸಿಯಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ಅನುಸರಿಸಿ ಕಂಡು ಬಂದಲ್ಲಿ ಎರಡನೇ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ ಒಂದು ಬಾಟಲಿ ಒಂದಕ್ಕೆ 2 ರೂಪಾಯಿ ನಮೂನೆ ಬುದ್ಧಿಕ್ಕ ೦ ಆಣೆ ತೂಕದ ಬಾಟ್ಲಿ ಒಂದಕ್ಕೆ 8 ಆಣೆ ವಿ ಪಿ ಖರ್ಚು ಬೇರೆ ಬೀಳುವದು ಒಂದು ಡಜನ್ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಷನ್ ಕೊಡುತ್ತೇವೆ. ಇದಕ್ಕೆ ಎಂಟ ಆಣೆ ಖರ್ಚು ಬರುವದು ೧೦೦೦ ೧೧ ಬಾಟಲಿಗಳ ವರೆಗೆ ತೆಗೆದುಕೊಂಡರೆ ಅವ ರೈಲ್ ಇರುವದಿಲ್ಲ ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು ಒಂದುಕಾಲುಕೂಲಿಯು 3 ಬಾಟಲಿಗಳ ಒಂದೆ ಸಾರಿ ತಕ್ಕೊಂಡರೆ ಒಂದು ಬಾಟಲಿ ಕಮಿಷನ್ ಕೊಡುತ್ತೇವೆ ಅದಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು ಈ ಕೆಲಸದ ಮಾಡಿ ಸತ್ಯಸ್ವಭಾವ ಮತ್ತು ಹೆಚ್ಚಿನ ನೂರಾರು ವರ್ತನ ಮಾಡಿರುವ ದೇಶದಲ್ಲಿ ಪೋಸ್ಟ್ ಏಜಂಟ ಬಗ್ಗೆ ಇದರ ಹೊರತು ದೊರೆಯುವದಿಲ್ಲ ಅನುಪಾನ ಪತ್ರಗಳು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆ ಗಳಲ್ಲಿ ಛಾಪಿಸಿದ್ದವೆ ಪಸಂದಿ ಪ್ರಕಾರ ಬಾಟ್ಲಿಯು ಸೇರುತ್ತ ಸಿಗುತ್ತವೆ ನಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು

ಹಚ್. ಎಂ ಮುಲ್ಲಾ, ಸಂಪಾದಕ ಅರ್ಕುಶಫಾ,
33 ಹೆಡ್ ಆಫೀಸ್ ಶಹಾಪೂರ, (ಬೆಳಗಾಂವ).

The Indian Tooth-ache Specific.

ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ಸಾರೆ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲು ನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, ಕೀವು ಇತ್ಯಾದಿ ಖಂಡಿತವಾಗಿ ಗುಣವಾಗುತ್ತದೆ ಕೊರೆದುಹೋದ ಮತ್ತು ಅಲ್ಲಾಡುವ ಹಲ್ಲುಗಳಿಂದ ಕಡಿಯ ನೋವು ಬಾಧಿಸುವದಕ್ಕೆ ಇದು ಒಂದು ದಿವ್ಯ ಔಷಧವಾಗಿದೆ ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಯುವ ಅವಶ್ಯತೇ ಇಲ್ಲ. ಈ ಔಷಧದ ಗುಣವನ್ನು ತಾವೆ ಪರೀಕ್ಷಿಸಿ ಎಲ್ಲರಿಗೂ ತಿಳಿಸಿರಿ

ಶೀಸೆ ಒಂದಕ್ಕೆ ಕ್ರಯ ರೂ 1—4—0, ಟಪಾಲು ಖರ್ಚು 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ ೧೨ ಶೀಸೆ ತರಿಸಿಕೊಂಡರೆ ರೂ 12 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ

STANY BROTHERS, MANGALORE.

ಸೊಗಸಾದ ಕಾಫಿಹುಡಿ.

I	ಕ್ಲಾಸ್	. . .	0—10—0
II	ಕ್ಲಾಸ್	. . .	0— 8—0
III	ಕ್ಲಾಸ್	. . .	0— 6—0

ಹೊಟೇಲುಗಳಿಗೂ ವರ್ತಕರಿಗೂ ಧಾರಾಳವಾಗಿ ವ್ಯಾಪಾರಕ್ಕೆ ಮೇಲೆ ಕಮಿಷನ್ ಕೊಡಲಾಗುವದು. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

ಕ್ರಯ ರೂ. 1—8—0 ಅಂಚೆ ವೆಚ್ಚ ಬೇರೆ

ಪ್ರಶ್ನೋತ್ತರ ಲೇಖ್ಯಬೋಧಿನಿ.

೨ನೇ ಮುದ್ರಣ: ಅನೇಕ ಉಪಯೋಗ ಸಂಗತಿಗಳಿವೆ

ಕ್ಷೇಮ ಸಮಾಚಾರದ ಕಾಗದಗಳು—ಟಪಾಲಿನ ವಿಧಿ ಪತ್ರಗಳಿಗೆ ವ್ಯಾಪಾರಿಕ ವೈದಿಕ ವ್ಯವಹಾರಗಳ ಪತ್ರಗಳು ಬರೆಯುವ ವಿಧಾನ, ಕ್ರಯ, ದಸ್ತೆ, ವಿಲ್ಲು, ವಿಭಾಗಪತ್ರ, ಬಾಡಿಗೆ ಪತ್ರ, ಗುತ್ತಿಗೆ, ಪಾಲುಗಾರಿಕೆ, ಹುಂಡಿ ಚೆಕ್ಕು, ಇತರ ವ್ಯವಹಾರಗಳು, ವಿಧಗಳು, ಸ್ಟಾಂಪು, ರಿಜಿಸ್ಟ್ರೇಶನ್, ಸಿವಿಲ್ ಕೋರ್ಟ್ ವಿಧಾನ—ಲಾಯರ್ ನೋಟೀಸು, ದಾವೆ ಬರೆಯುವ ರೀತಿ, ಸ್ಮಾಲ್ ಕಾಸ್, ಒರಿಜಿನಲ್, ರಿಟ್ಟು, ಅಪೀಲು, ಸ್ಪೆಷಲ್ ಅಪೀಲ್ ಅವಧಿಗಳಿಗೆ ವಕೀಲ ಕೋರ್ಟ್ ಫೀ ಸ್ಟಾಂಪು, ರೆವಿನ್ಯೂ ಮುಂತಾದ ಪ್ರಾಮುಖ್ಯವಾದ ರಾಜ್ಯ ಕಾರ್ಯಕ್ಕೆ ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ಬರೆಯುವ ಅರ್ಜಿಗಳು, ಕ್ರಿಮಿನಲ್ ಕೋರ್ಟ್ ವಿಧಾನ—ಅನೇಕ ಅರ್ಜಿಗಳ ಮಾದರಿಗಳು, ಸರಕಾರದ ಕಾನೂನು ಗಳನ್ನೂ ಇದರಲ್ಲಿ ಅಡಗಿದೆ. ಕಾಗದದ ಬರಹದ ಬಹು ಸ್ವಲ್ಪ ಪುಟಗಳಿಗೆ ಮುಗಿಸಿದ. ಬೇಗ ಬರೆದು ತರಿಸಿಕೊಳ್ಳಿ ಕ್ರಯ ರೂಪಾಯಿ. 1—8—0, ಅಂಚೆಯ ವೆಚ್ಚ ಬೇರೆ.

[80-19]

ವಿಳಾಸ — "ನವಿನುಡಿ" ಆಫೀಸು,
192, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತವೆ

ಪ್ಲೇಗ್ ಕೋಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು — ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೆಟ್ಟಿಗೆ ರೂ. 2—2—0	ಕೋಲೇರಾ ಔಷಧದ ದೊಡ್ಡ ಸೆಟ್ಟಿಗೆ ರೂ. 1—2—0
„ ಸಣ್ಣ „ „ 1—6—0	„ ಸಣ್ಣ „ „ 0-12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸೆಟ್ಟಿಗೆ ರೂ 1—12—0

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ

ವಿಳಾಸ — ಮೆನೇಜರ್, ಆಯುರ್ವೇದಾಶ್ರಮ,

ತಂತಿ ವಿಳಾಸ.— 55 ಆಚಾರಪ್ಪನ ಬೀದಿ,

ಪಂಡಿತ್, ಮದರಾಸ್ ಜೋರ್ಜಟೌನ್, ಮದರಾಸ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್ ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಿಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ.

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ) — ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ ಒಂದೇಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ನಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ ದಿನಜ್ವರ, ಮೂರನೆ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ ಸೀಸೆಗೆ ರೂ 1 5ಕ್ಕೆ ಒಂದು ಇನಾಮು

ಶ್ರೀನಿವಾಸತೈಲ—ಪ್ಲೇಗಿನ ಗಡ್ಡೆ ಕರಗುತ್ತದೆ ಸಂದುಗಳ ನೋವು ಸೆಡಲು ಹೋಗುತ್ತದೆ ಸೀಸೆಗೆ 8 ಆಣೆ 5ಕ್ಕೆ ಒಂದು ಇನಾಮು

ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ ಸೀಸೆಗೆ ರೂ 1 5ಕ್ಕೆ ಒಂದು ಇನಾಮು

ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ ಅಜೀರ್ಣದ ಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇನ್ನೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ ಸೀಸೆಗೆ ಆಣೆ 12 5ಕ್ಕೆ ಒಂದು ಇನಾಮು

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ— **ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.**

ಒಂದು ಕುಪ್ಪಿಯ ಕ್ರಯ ೧೨ ಆಣೆ. ಮಂಗಳೂರು ಏಜಂಟ್,

ಕೇ. ಟೀ. ಡೋಂಗರೆ ಕಂಪೆನಿ, ದಿ. ಉಲನ್‌ಮಾರ್ಟ್—ಮಂಗಳೂರು.

ಗಿರಗ್ಯಾಂ ಮುಂಬಯಿ

"ಕಾಮಶಾಸ್ತ್ರ"

ಉತ್ತಮವಾದ ಈ ಪುಸ್ತಕವು ಅನುಕೂಲವಾಗಿ ತಮ್ಮ ದೇಹದ ವಿಷಯಕ್ಕೆ ಮತ್ತು ಆರೋಗ್ಯ ಅನುಕೂಲಕ್ಕೆ ತಕ್ಷಣ ಬರೆಯುವಲ್ಲಿ ಅಂಚೆಯ ಹಾಸಲು ಸಹಾ ನಿರೀಕ್ಷಿಸದೇ ಕಳುಹಿಸುವೆವು

ಮತ್ತು

ಪ್ರಸಿದ್ಧವಾದ ಅತಂಕನಿಗ್ರಹ ಗುಳಿಗೆಗಳನ್ನು ಯಾವಾಗಲೂ ತಮ್ಮ ಪ್ರಿಯಮಿತ್ರರ ಹಾಗೆ ಭಾವಿಸಿ ಉಪಯೋಗಿಸುವಲ್ಲಿ ನಿರಾಧಾರವಾದ ಆಲೋಚನೆಗಳನ್ನು ಹೋಗಲಾಡಿಸಿ, ಅಮೃತದ ಹಾಗೆ ದೇಹಧಾರ್ಢ್ಯವನ್ನುಂಟು ಮಾಡಿಸುತ್ತಾ ಇರುವುದು. ಕ್ರಯ ರೂ 1. ಎಚ್ಚರಿಗೆಯಿಂದ ಮರೆಯಬಾರದು.

ವಿಳಾಸ —

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಅತಂಕನಿಗ್ರಹ ಔಷಧಾಲಯ. 137, ಒಟ್ಟೆ, ಮದರಾಸು

Local Agents Raphael & Co,

Brito Building

Hampankatta, MANGALORE.

ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ ಚೂರ್ಣ, ಅವಲೇಹ ಭಸ್ಮ ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ಕಣ್ಣು ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುಣವುಳ್ಳ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಮಾರುವರೆ ತಯಾರಿವೆ ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದ್ದಲ್ಲಿ ತಿಳಿದು ಬರುವುದು

ವೈದ್ಯಶಾಲೆಯ ಮ್ಯಾನೇಜರೂ ವೈದ್ಯರೂ ಆದ ದಾಮೋದರ ನಂಬೀಶನವರು ಅವಿಶ್ರಾಂತ ಹೊರತು ವಿಶ್ವ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದೇ ಪರಿಶೋಧಿಸಿ, ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವವರಾಗಿರುವರು ಇದರ ಬ್ರಾಂಚು ಮಂಗಳೂರು ರಥಬೀದಿಯಲ್ಲಿ ತೆರೆದಿರುವುದರಿಂದ ಸದರಿ ಎಲ್ಲಾ ಔಷಧಗಳು ಸದರಿ ಬ್ರಾಂಚಿನಲ್ಲಿ ಕೂಡಾ ಬೇಕಾದಷ್ಟು ಸಿಕ್ಕುವುವು ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ. ಪಿ. ಮೂಲಕ ಕಳುಹಿಸಲಾಗುವುದು

೧. ಅಮೃತಾರಿಷ್ಟ—ಇದು ಎಲ್ಲಾ ತರದ ವಿಷಮಜ್ವರ (ಇನ್‌ಫ್ಲುಯೆಂಜಾ) ಒಂದು ಸಾರಿ ಇವುಗಳ ಮೇಲೆ ರಾಮಬಾಣದಂತಿರುವುದು. ರಕ್ತಶುದ್ಧಿಗೆ ಸಿದ್ಧೌಷಧ ೧೨ ಔನ್ಸಿನ ಬಾಟ್ಲಿ ೧೨ ಕ್ರಯ ರೂ ೧—೧೦—೦

೨ ವೀರ್ಯಪ್ರಸಾದ ವಟಿ—ಇದು ಸ್ವಸ್ಥೇಂದ್ರಿಯದಿಂದ ನರಳುತ್ತಿರುವ ಮನುಷ್ಯರಿಗೆ ಅಮೃತಂತೆ ಇದೆ ೨೪ ಮಾತ್ರೆ ಇರುವ ಸೀಸೆ ೧ಕ್ಕೆ ಕ್ರಯ ರೂ ೧

೩. ನವನೀತಮಧುಸ್ನುಹಿ—ಇದ ಫಿರಂಗುಪ್ಪು (ಲಿಥಿ ಸಿಫಿಲಿಸ್) ಮೇಹ ಮುಂತಾದ ರೋಗಗಳನ್ನು ಒಳ್ಳೇ ರೀತಿಯಿಂದ ಗುಣಪಡಿಸುತ್ತದೆ ೨೪ ತೊಲೆ ಇರುವ ಡಬ್ಬಿ ೧ಕ್ಕೆ ಕ್ರಯ ರೂ ೩

೪ ವಿಷೂಚಿಕಾ ಸಂಹಾರಿ—ಎಂಬ ವಾಂತಿಭೇದಿ ಮಾತ್ರೆ ಮಾತ್ರೆಯು ಸೇವನೆಯಿಂದ ಎಂಥಾ ಕಠಿಣ ತರವಾದ ವಾಂತಿಭೇದಿಯೂ ನಿಂತು ಹೋಗುವುದು ೨೪ ಮಾತ್ರೆ ಉಳ್ಳ ಸೀಸೆ ೧ಕ್ಕೆ ಕ್ರಯ ರೂ ೧—೦—೦

೫ ನಯನಮ್ಯುತಿ—ಇದು ಉಂಗಿಲ್ಲ ನರ ಏಳುವಿಕೆ ಮೊದಲಾದ ಕಣ್ಣಿನ ಎಲ್ಲಾ ರೋಗಗಳನ್ನು ಗುಣಪಡಿಸುವ ಸಿದ್ಧೌಷಧ ಅರ್ಧ ಔನ್ಸಿನ ಸೀಸೆ ೧ರ ಕ್ರಯ ರೂ ೧—೦—೦

೬ ನಯನಾಮೃತ—ಕಣ್ಣು ತುರಿಸುವಿಕೆ ದೃಷ್ಟಿಮಾಂದ್ಯ, ಇರುಳು ಗಣ್ಣು, ಕೀವು ಬರುವುದು ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನೂ ಬಹು ಜಾಗ್ರತೆಯಾಗಿ ಗುಣಪಡಿಸುವುದು ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ ೧—೦—೦

ವೈದ್ಯರ್ ವಿ ಕೆ ದಾಮೋದರ ನಂಬೀಶನ್,

ಅಮೃತಕಲ್ಪ ವೈದ್ಯಶಾಲಾ,

ಕಾಸರಗೋಡು, ದ ಕನ್ನಡ

ಸುಲಭ ಕ್ರಯ!! ಗುಣ ಹೆಚ್ಚು!!!

ರೋಯಲ್ ಇಂಡಿಯನ್ ಬಾಂ.

(ರಿಜಿಸ್ಟರ್ಡ)

ಇದೇ ಗುರುತನ್ನು ಲಕ್ಷ್ಯದಲ್ಲಿಡಿರಿ

ಬಾಟ್ಲಿ ಒಂದರ ಕ್ರಯ ಆಣೆ ೮.

ಹಿಂದೂಸ್ಥಾನದಲ್ಲಿ ಬೆಳೆಯುವ ಉತ್ಕೃಷ್ಟವಾದ ವನಸ್ಪತಿಗಳಿಂದ ಪರಿಶೋಧಿಸಿ, ತಯಾರಿಸಲ್ಪಟ್ಟ ಬೇಸಿಗೆ ತೈಲವು — ಇದರ ಉಪಯೋಗದಿಂದ ತಲೆನೋವು, ಶಿರಃ ಶಿರೋಭ್ರಮ ಗಂಟು ಗಂಟು ನೋವು, ಎದೆಶೀತ ಎದೆ ನೋವು, ಉಬ್ಬುವದ, ವಾತ ಸಂಧಿವಾತ, ಅರ್ಧಾಂಗವಾಯು, ಉಳುಕು, ಗಾಯ, ಚಳುಮು, ಸೊಂಟದ ನೋವು, ಕಜ್ಜಿ ಇವೇ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ರಾಮಬಾಣದಂತೆ ಗುಣಪಡಿಸುತ್ತದೆ ಸಮುದ್ರ ಪ್ರಯಾಣ, ಪೈಲ್ಸ್ ಮುಖಾಂತ್ರ, ಯಾ ಹಳ್ಳಿಗಳಲ್ಲಿ ಡಾಕ್ಟರ ಸಹಾಯವಿಲ್ಲದೆ ಇದ್ದ ಪ್ರತಿಯೊಬ್ಬರೂ ಒಂದು ಬಾಟ್ಲಿಯನ್ನು ಇಟ್ಟುಕೊಳ್ಳುವದು ಅಗತ್ಯ ಒಂದು ಡಜನಿಗೆ ರೂ ೫—೦—೦, ೨೪ ಬಾಟ್ಲಿಗೆ ರೂ ೯—೮—೦, ೬೦ ಬಾಟ್ಲಿಗೆ ರೂ ೨೦—೦—೦ ವಿ ಪಿ ಖರ್ಚು ಪ್ರತ್ಯೇಕ

"ಗಜಕರ್ಣದ ಮುಲಾಮು" ಡಬ್ಬಿ ಒಂದರ ಆಣೆ ೪, ದಂತಮಂಜನ ಕಣ್ಣಿನ ಲಾಮು ಆಣೆ ೩, ಹೆಯರ್ ಆಯಿಲ್, ಬೇರು ಕಡಿತದ ಮದ್ದು, ಇನ್ನೂ ಅನೇಕ ತರದ ಮದ್ದುಗಳನ್ನು ತಯಾರಿಸಿದ್ದೇವೆ. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಶನ್ ಕೊಡುವೆವು.

ಸೂಚನೆ—ನಾವು ಮುಂಬಯಿಂದ ರವಾನಗಿಕಕ್ಕೆ ವಿಲಾಯಿತಿಯಿಂದ ಬಂದ ಪೇಟಂಟ ಔಷಧಗಳನ್ನು ಅದರ ಮಾಲಿಕರು ಹೇಳುವ ಬೆಲೆಗೆ ಮತ್ತೆ ನಿಮ್ಮ ದರದಲ್ಲಿ ಕಳುಹಿಸುವ ಏರ್ಪಾಟನ್ನು ಇಟ್ಟಿರುತ್ತೇವೆ

Manora & Co.,

BOMBAY

ಜೆನ್ ವಿನ್ ಹಾರ್ಲೆಮ್ ಆಯಿಲ್

(HAARLEM OIL),

ತ್ವರ್ಯದಲ್ಲಿ ನಿಮ್ಮ ಆರ್ಡರುಗಳನ್ನು ಬರಾಯಿಸಿಕೊಳ್ಳಿರಿ!

ಹಾರ್ಲೆಮ್ ಆಯ್ಲ್ ಎಂದೆನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 200 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭಾವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ ಮೂತ್ರಗುಡ್ಡು (Kidney,) ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಆಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ ಮೂರೇ ದಿನದ ಚಿಕಿತ್ಸೆಯಿಂದ ಇನ್‌ಫ್ಲುಯೆಂಜಾ ಮೊದಲಾದ ಎಂಥಾ ಕಠಿಣ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯು ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು ಮಕ್ಕಳಿಗೆ ಅವರವರ ಪ್ರಾಯದಷ್ಟೆ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ. ಕ್ರಯ ಸೀಸೆ 1ಕ್ಕೆ ಆಣೆ 8 ವಿ ಪಿ ಬೇರೆ

ಸಿಫಾರಸು ಪತ್ರ

ಕೆಲವು ವರ್ಷಗಳ ಹಿಂದೆ ಮಂಗಳೂರಲ್ಲಿದ್ದ ಜರ್ಮನ್ ಮಿಶ್ಯನೆರಿ ಲೇಡಿ ಮಿಸೆಸ್ ಹೆರ್ಮನ್ ಪ್ರೇಕ್ಷಯವರ ಇದೇ ಕಳೆದ ಮಾರ್ಚಿ ತಾ 10ರಲ್ಲಿ ಸ್ಟುಟ್‌ಗಾರ್ಟ್ ಪಟ್ಟಣದಿಂದ ವಾನಿಂಗ್‌ಟಿಲ್ಲಿ ಕಂಪೆನಿಯವರಿಗೆ ಈ ರೀತಿ ಬರೆದಿರುತ್ತಾರೆ —ದಯಮಾಡಿ ನಿಮ್ಮ ಕಂಪೆನಿಯ 25 ಶೀಸೆ ಜೆನ್‌ವಿನ್ ಹಾರ್ಲೆಮ್ ಆಯಿಲ್ ಕಳುಹಿಸಿ ಕೊಡಿರಿ ಇದು ಉತ್ಕೃಷ್ಟವಾದ ಖಾತ್ರಿ ಔಷಧಿ ಎಂದು ನನ್ನ ಅನುಭವ ಸಿದ್ಧಾಂತ. ನಾನು 1910ನೇ ಇಸವಿಯಲ್ಲಿ ಮಂಗಳೂರಿಗೆ ಹೋಗುವಾಗ ನಿಮ್ಮ ಹಾರ್ಲೆಮ್ ಆಯಿಲಿನ 12 ಶೀಸೆಗಳನ್ನು ಕೂಂಡು ಹೋಗಿದ್ದೆನು ಇದು ದೇಶೀಯರೊಳಗೆ ಪ್ರಯೋಗಿಸಿದ್ದಲ್ಲಿ ಅತಿ ಸಾಫಲ್ಯವಾಗಿ ಪರಿಣಮಿಸಿತು ದೇಶೀಯರೊಳಗೆ ಪ್ರಬಲಿಸಿರುವ ಜ್ವರಕ್ಕೆ ಇದು ಅತಿ ಗುಣಕಾರಿಯಾಗಿದೆ ನಂತರ ಕೆಲವು ಕುಟುಂಬಗಳು ಇದನ್ನು ಕುಟುಂಬ ಸಂರಕ್ಷಣೆಯಾಗಿ ಮನೆಯಲ್ಲಿ ಇಟ್ಟುಕೊಳ್ಳಲು ತೊಡಗಿದರು ತನ್ಮಧ್ಯೆ ಯುದ್ಧ ತೊಡಗಿದ್ದರಿಂದ ಹಿಂದೂಸ್ಥಾನದಲ್ಲಿ ಇದರ ವ್ಯಾಪಾರವು ಹ್ಯಾಗಿದೆಂತ ನನಗೆ ಗೊತ್ತಿಲ್ಲ

ವಿಳಾಸ — ಹಿಂದೂಸ್ಥಾನದ ಸೋಲ್ ಏಜಂಟರು— ದಿ. ಎಕ್ಲಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು

☞ ವಿಶೇಷ ಸೂಚನೆ —ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲಿನ ಸೀಸೆಗಳ ಮೇಲೆ Waaning Tilly Bros ಎಂಬ ಮುದ್ರೆ ಇರುವ ಪತ್ರವು ಸುತ್ತಿದೆ ಇದೇ ನಿಜವಾದ ಹಾರ್ಲೆಮ್ ಆಯಿಲ್ ಎಂತ ತಿಳಿಯತಕ್ಕದ್ದು ☜

ಆಯುರ್ವೇದ ಶಾಸ್ತ್ರಾನುಸಾರ

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1 ಶತಮೂಲಿಕೆಯ ಸತ್ವವು ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, ಬಹುಕಾಲದ ಕಫ, ರಕ್ತವಾಂತಿಯಾಗುವಿಕೆ ಹೃದಯದ ದುರ್ಬಲತೆ ಲಿಹ್ವರ (ಕಾಳಜಿ), ಮೂತ್ರಕೋಶದ ವ್ಯಾಧಿಗಳು ವ ಎಲ್ಲ ತರದ ದುರ್ಬಲತೆಯು ನಾಶಹೊಂದಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು ಇನ್‌ಫ್ಲುಯೆಂಜಾ ಜ್ವರಕ್ಕೂ, ಅಶಕ್ತ ಜನರಿಗೂ, ಬೆಳೆಯುವ ಸಣ್ಣ ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣ ಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು. ೧೬ ಔನ್ಸಿನ ಒಂದು ೧ಕ್ಕೆ ರೂ ೨—೧—೦ ಟ ಖ ವಗೈರೆ ಬೇರೆ

2 ವಿಜಯಸಂಜೀವಿನಿತೈಲ ಕಾಲಕ್ಕೆ ಬಹಿಷ್ಠೆಯಾಗುವುದು, ಬಹಿಷ್ಠೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಮಂಧ ವ್ಯಾಧಿಗಳಿಗೆ ದಿವ್ಯ ಔಷಧ ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ, ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ೧ಕ್ಕೆ ರೂ. ೨

3 ಕೊಲೇರಾ ಗುಳಿಗೆಗಳು ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕುದಾಗಿದೆ ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ. ೪೮ ಗುಳಿಗೆಗಳ ಬಾಕ್ಸಿಗೆ ಕ್ರಯ ರೂ ೧—೦—೦

4 ವಾತಾಂತಕ ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ! ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು ಕ್ರಯ ಬಾಟ್ಲಿ ೧ಕ್ಕೆ ರೂ. ೧-೮ ೦

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ ಪತ್ರವ್ಯವಹಾರವು ಇಂಗ್ಲಿಷದಲ್ಲಿರಬೇಕು, ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ ವಿಳಾಸ —

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್,
ಶೋರನೂರ, (ಮಲೆಬಾರ).

ರೂ. 1,000 ಬಹುಮಾನ.

ಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿ ಇಡುವುದು. ಮನುಷ್ಯರಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಶೇಖರಿಸುವುದು, ಸೊಂಟದನೋವು ಸ್ವಲ್ಪವೂ ಇರದಂತೆ ಮಾಡುವದು ಈ ಸಾಲಾಮಿಸ್ರೀ ಕಾಬೂಲ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಸಿಂಗಾಪೂರ್, ಆಫ್ರಿಕ, ಕಲ್ಕತ್ತಾ ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುವದು, ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟಿನ ಮೂಲಕ ಪಡೆಯಬಹುದು

ಒಂದು ಡಬ್ಬಾ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಗುಣ ಕೊಡುತ್ತೆ. ಉಪಯೋಗಿಸುವ ವಿಧಾನ ಡಬ್ಬಿಯ ಮೇಲೆಯಲ್ಲಿರುವುದು
ಕ್ರಯ ಒಂದು ಡಬ್ಬಿಗೆ ರೂಪಾಯಿ 2

ಈಗ ಭಾಂಗಿಯ ಬಾಜಾರ್ ಹೆಚ್ಚಿರುವುದರಿಂದ ಕೆಲವು ದಿನಗಳ ಮಟ್ಟಿಗೆ ಟಪ್ಪಾಲು ಖರ್ಚು 1 ಡಬ್ಬಿಗೆ 8 ಆಣೆ, 2 ಯಾ 3 ಡಬ್ಬಿಗಳಿಗೆ 12 ಆಣೆ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೊ, ಬೆಂಗಳೂರು ಸಿಟಿ

ರಬ್ಬರಿನ ಅಕ್ಷರಗಳು.

ಈ ಅಕ್ಷರಗಳು ವಿಲಾಯತಿಯಲ್ಲಿ ತಯಾರಾದವು ಕಾಗದಗಳು ಕಾರ್ಡು ಮುಂತಾದವುಗಳನ್ನು ಕಷ್ಟವಿಲ್ಲದೆ ಬಹು ಅಂದವಾಗಿ ನಾವೇ ಪ್ರಿಂಟ ಮಾಡಿಕೊಳ್ಳಬಹುದು ಈ ಪೆಟ್ಟಿಗೆಯೊಂದು ಇದ್ದರೆ ರಬ್ಬರು ಮೊಹರುಗಳ ಅಗತ್ಯವೇ ಬೇಡ. ಇದರಲ್ಲಿ ಇಂಕ್‌ಪ್ಯಾಡ್, ಚಿಮುಟ, ಇಂಕ್‌ಬಾಟಲ್ ಸಹಿತ ಸೇರಿದೆ

ಕ್ರಯ	110	ಅಕ್ಷರಗಳ	ಪೆಟ್ಟಿ	ರೂ	1—8—0
„	170	„	„	„	1 14—0
„	200	„	„	„	2—8—0
„	300	„	„	„	3 12—0

ಸ್ವಿಸ್ ಪಾಕೆಟ್ ವಾಚ್

ಈ ತಿಂಗಳೊಳಗಾಗಿ ಖರಿದಿಸಿಕೊಳ್ಳುವವರಿಗೆ ೧೧ ಬಹುಮಾನ, ೪ ವರ್ಷ ಗ್ಯಾರಂಟಿ ಸಹಿತ ರೂ ೪—೮—೦

ಈ ಗಡಿಯಾರವು ಮಜಬೂತಾಗಿರುವದು ಘಾಳಿ, ಧೂಳು ಸೇರದಂತೆ ಎರಡು ಕದವೂ ಮೂಡು ಇರುವದು ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ ಇದನ್ನು ಖರಿದಿ ನೋಡಿದರೆ ಗೊತ್ತಾಗುವದು ಇದನ್ನು ಲೀವರ್ ಕೆಲಸದಿಂದ ನಯವಾಗಿ ತಯಾರಿಸಿದ್ದೆ ಬಹುಮಾನಗಳ ವಿವರ — ಕರವಸ್ತ್ರ ೧, ಕನ್ನಡಿ ೧, ಗುಂಡಿಗಳು_೪, ೧ಟೀನ ರೋಜಾ ಹೂವು ೧, ಬೀಸಣಿಗೆ ೧, ಬ್ರೋಚ್ ೧, ಬಾಚಣಿಗೆ ೧, ಸೆಂಟ್ ಬುಡ್ಡಿ ೧, ಉಂಗುರ ೧೧ ಬಹುಮಾನಗಳ ಸಹಿತ ರೂ ೪—೮—೦,

ವಿಳಾಸ — ರಾಸ್‌ವಾಚ್ ಎಂಡ್ ಕೊ.
ಇರುಳಪ್ಪನ ಬೀದಿ, ಮದರಾಸು.

ಶಾಶ್ವತವಾದ ದೇಹಶಕ್ತಿಯನ್ನು ದುರಭ್ಯಾಸಗಳಿಂದ ಚಿಕ್ಕಂದಿನಲ್ಲಿಯೇ ಕಳೆದುಕೊಂಡು ಈ ಮರಣಾಂತರವು ದುಃಖಿಸುವರೇಕೆ?

ಲೋಕಪ್ರಸಿದ್ಧವಾದ

ಸಕಲರೋಗ ಸಂಹಾರಿ

ಎಂಬ ಈ ಔಷಧದ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯ ಪಾದರೂ, ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವಿಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕೈ ಕಾಲುಗಳು ಉರಿಯುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವದರಿಂದ ಮೇಲುಶ್ವಾಸ ಬರುತ್ತಿದ್ದರೂ, ತಲೆನೋವು ಇವುಗಳೆಲ್ಲವೂ "ಸಕಲರೋಗ ಸಂಹಾರಿ"ಯ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಬಲ್ಲವನ್ನು ಹೆಚ್ಚಿಸಿ ಧಾತುವನ್ನು ವೃದ್ಧಿಪಡಿಸುವುದರಲ್ಲಿ ಇದಕ್ಕೆ ಸಮಾನವಾದ ಔಷಧವು ಬೇರೆ ಯಾವದು ಇಲ್ಲವು ಉಪಯೋಗಿಸುವ ವಿಧವು ಔಷಧದ ಜೊತೆಯಲ್ಲಿ ಕಳುಹಿಸುವೆವು ಕ್ರಯ 16 ತೊಲೆ ಡಬ್ಬಿ 1ಕ್ಕೆ ರೂ 2—0—0

ವಿಳಾಸ— ಡಾ॥ ಎಂ. ಪೀಟರ್,
ಇರುಳಪ್ಪನ ಬೀದಿ, ಮದರಾಸು.

Printed & Published by V S. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ಹೊರೆಯುಲಘುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ! । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೪ | ಮಂಗಳೂರು, ತಾರೀಕು ೨೫ನೇ ಜೂನ್ ಶುಕ್ರವಾರ ೧೯೨೦. | ಸಂಚಿಕೆ ೨೬

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಏನೂ ಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕಾದ್ದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Director, Chilean Nitrate Committee,
(INDIAN DELEGATION),
1, Royal Exchange Place, CALCUTTA.

ಗುರುತ್ವಾಕರ್ಷಣದ ತತ್ವದ ಮೇಲೆ ಈ ಲೋಕವು ಅವಲಂಬಿಸಿದೆ ಎಂದು ಶಾಸ್ತ್ರಜ್ಞರು ಕಂಡುಕೊಂಡಿದ್ದಾರೆ. ಸೂರ್ಯ, ಚಂದ್ರ, ಪೃಥ್ವಿ ಮೊದಲಾದ ಎಲ್ಲ ಗೋಲಗಳು ಪರಸ್ಪರರನ್ನು ಆಕರ್ಷಿಸುತ್ತಿರುವುದರಿಂದ ಹಾಗು ಅವುಗಳ ವಿವಕ್ಷಿತ ಆಕರ್ಷಣಶಕ್ತಿಯು ಆಯಾ ಗೋಲಕಗಳನ್ನು ಒಂದು ವಿಶಿಷ್ಟವಾದ ಸಮಾಂತರದಲ್ಲಿ ನಿಯಮಿಸುವುದರಿಂದ ಈ ಸೃಷ್ಟಿಯ ಕ್ರಮವು ಈಗಿನ ರೂಪದಲ್ಲಿ ನಡಕೊಂಡಿದೆ. ಗ್ರಹಗೋಲಗಳ ಗುರುತ್ವಾಕರ್ಷಣದ ಈಗಿರುವ ಪ್ರಮಾಣದಲ್ಲಿ ನ್ಯೂನಾಧಿಕ್ಯವು ಸಂಭವಿಸಿದ್ದಾದರೆ ಈಗಿನ ಸೃಷ್ಟಿಕ್ರಮವು ಪಲ್ಲಟಿಸದೆ ಇರಲಿಕ್ಕಿಲ್ಲ. ಉದಾಹರಣಾರ್ಥವಾಗಿ, ಸೂರ್ಯನು ಒಂದು ವಿವಕ್ಷಿತ ಪ್ರಮಾಣದಲ್ಲಿ ಇತರ ಗ್ರಹಗಳನ್ನು ಆಕರ್ಷಿಸುತಿದ್ದಾನೆ. ಆ ಪ್ರಮಾಣವು ಹೆಚ್ಚು ಕಡಿಮೆಯಾದರೆ, ಅವನ ಆಕರ್ಷಣದ ಮೇಲೆ ಅವಲಂಬಿಸಿರುವ ಪೃಥ್ವಿ ಇತ್ಯಾದಿ ಗ್ರಹಗಳ ಅಂತರವು ವ್ಯತ್ಯಸ್ತವಾಗಿ, ಪೃಥ್ವಿಯು ಮತ್ತು ಅದರ ಮೇಲಿನ ಪ್ರಾಣಿಗಳ ಜೀವನಕ್ಕೆ ಆವಶ್ಯಕವಾದ ಸೆಕೆ, ಮಳೆ, ಚಳಿ, ಇತ್ಯಾದಿ ಸಾಧನಗಳು ತಂತಮ್ಮ ಕ್ರಮವನ್ನು ಬಿಟ್ಟುಬಿಡುವವು. ಸೂರ್ಯನಲ್ಲಿ ಆಕರ್ಷಣವಿರುವಂತೆ ಪೃಥ್ವಿಯಲ್ಲೂ ಆ ಸಾಮರ್ಥ್ಯವಿದೆ ಎಂದು ತಿಳಿಯಬೇಕು. ಸಾರಾಂಶ, ಗುರುತ್ವಾಕರ್ಷಣವು ಲೋಕಕ್ಕೆ ಆಧಾರವಾಗಿರುವಂತೆ ಲೋಕಸ್ಥಿತಿಗೂ ಸಾಧನವಾಗಿರುವುದರಿಂದ ಅದು ಸರ್ವಗಾಮಿಯಾಗಿದೆ ಎಂಬದು ಸಿದ್ಧವಾಗುತ್ತದೆ.

ಈ ಗುರುತ್ವಾಕರ್ಷಣಕ್ಕೆ ಈಗಿನ ಭಾಷೆಯಲ್ಲಿ ಸಹಕಾರಿತತ್ವ ಎಂದು ಹೆಸರು ಕೊಡಬಹುದು. ಕೋ-ಒಪರೇಟಿವ್ ಸೊಸೈಟಿ, ಸಹಕಾರಿ ಸಂಘ ಮುಂತಾದ ಹೆಸರುಗಳಿಂದ ನಾವು ಯಾವ ಸಂಸ್ಥೆಗಳನ್ನು ಗುರುತಿಸುತ್ತೇವೊ ಆ ಸಂಸ್ಥೆಗಳಲ್ಲಿ ಕೆಳಗಿನ ಮತ್ತು ಮಧ್ಯಮ ತರಗತಿಯ ಜನರು ಒಟ್ಟಿಗೆ ಸೇರಿ ತಮ್ಮ ವ್ಯವಹಾರಕ್ಕೆ ಬೇಕಾಗಿರುವ ದವಸಧಾನ್ಯ, ಮದ್ದುಗುಣ್ಣಿ, ಉಡಿಗೆತೊಡಿಗೆ ಮುಂತಾದ ಅನುಕೂಲತೆಗಳನ್ನು ಒದಗಿಸಿಕೊಳ್ಳುವುದನ್ನು ನಾವು ನೋಡುತ್ತೇವೆ. ಸಹಕಾರಿತತ್ವದಲ್ಲಿ ವಿನಿಮಯದ ಸಾಧನದಿಂದ ಒಬ್ಬರನ್ನೊಬ್ಬರು ಆದರಿಸಿ ಹಿಡಕೊಳ್ಳುವರು. ಗುರುತ್ವಾಕರ್ಷಣವಾದರೂ ಇದೆ ಕೆಲಸ ಮಾಡುತ್ತದೆಂಬುದನ್ನು ಮೇಲೆ ತೋರಿಸಿದ್ದೇವೆ. ಸಹಕಾರ್ಯವು ಸಮಾಜದಲ್ಲಿ ಇರುವಂತೆ ರಾಜಪ್ರಜೆಗಳಲ್ಲಿ ಕೂಡ ಉಂಟೇ ಉಂಟು. ಪ್ರಜೆಗಳ ವಿತ್ತಜೀವಿತದ ಸಂರಕ್ಷಣವು ರಾಜನಿಂದ ಉಂಟಾಗಬೇಕಾದ್ದು; ರಾಜಕಾರ್ಯದ ನಿರ್ವಾಹವು ಪ್ರಜೆಗಳಿಂದ ಆಗಬೇಕಾದ್ದು. ಮುಖ್ಯ ತಾತ್ಪರ್ಯವೇನೆಂದರೆ ಗುರುತ್ವಾಕರ್ಷಣದಂತೆ, ಈ ರಾಜಪ್ರಜಾ ವ್ಯವಹಾರದ ಸಹಕಾರ್ಯವು ಉಭಯಾನ್ವಯಿ ಆಗಿರುತ್ತದೆ.

ಸಹಕಾರದ ವಿವರಣವನ್ನು ಇನ್ನೂ ಕೊಡಬಹುದು. ಆದರೆ ಅದು ಎಲ್ಲ ಕಡೆಯಲ್ಲಿ ಬೆರತಿರುವುದರಿಂದ ಮತ್ತು ಈಚೆಗಂತೂ ಪರಸ್ಪರ ಸಹಾಯದ ಕಾರ್ಯವನ್ನು ನಡಿಸುವಂಥ ಸಂಸ್ಥೆಗಳು ಮೂರ್ತಿಮತ್ತಾಗಿ ಅಲ್ಲಲ್ಲಿರುವುದರಿಂದ ಅದರ ವ್ಯಾಖ್ಯೆಯನ್ನಾಗಲಿ, ವಿವೇಚನೆಯನ್ನಾಗಲಿ ಬಹು ಉದ್ದವಾಗಿ ಕೊಡುವ ಅವಶ್ಯಕತೆ ತೋರುವುದಿಲ್ಲ. ಅಲ್ಲದೆ, ಈ ಹೊತ್ತು ನಮ್ಮ ಪ್ರತಿಪಾದ್ಯ ವಿಷಯವು 'ಸಹಕಾರಿತತ್ವ' ಎಂಬುದಲ್ಲ; ಅಸಹಕಾರಿತ್ವದ ಮೀಮಾಂಸೆಯಾಗಿದೆ. ಹಾಗಿದ್ದರೆ, ಇಲ್ಲಿ ಒಂದು ಆಕ್ಷೇಪವು ಬರುವಹಾಗಿದೆ. ಅಸಹಕಾರಿತ್ವವನ್ನು ವಿವೇಚಿಸಬೇಕಾದ ಸಂದರ್ಭದಲ್ಲಿ ಸಹಕಾರಿತ್ವದ ಪ್ರತಿಪಾದನವು ಯಾಕೆ? ಅವಶ್ಯವಿಲ್ಲ, ನಿಜ. ತಥಾಪಿ ಸಾಧರ್ಮ್ಯದಿಂದ ಒಂದು ವಸ್ತುವನ್ನು ಬೋಧಿಸಿಕೊಡುವಂತೆ ವೈಧರ್ಮ್ಯದಿಂದಲೂ ಕೆಲವು ಸಂದರ್ಭಗಳಲ್ಲಿ ವಸ್ತುಜ್ಞಾನವನ್ನು ಹುಟ್ಟಿಸಿಕೊಡಬೇಕಾಗುತ್ತದೆ. ಕಾದುಕೋಣವು ಗೋವಿನಂತಿದೆ ಎಂದು ಹೇಗೆ ಹೇಳುತ್ತಾರೋ ಹಾಗೆಯೆ ಘನಪದಾರ್ಥದ ವ್ಯಾಖೆಯನ್ನು 'ದ್ರವದ್ರವ್ಯಕ್ಕೆ ವಿಪರೀತವಾದ್ದು' ಎಂಬ ಶಬ್ದಗಳಿಂದ ಹೇಳಬಹುದು. ಹುಟ್ಟಿದಂದಿನಿಂದ ಕೇವಲ ದುಃಖವನ್ನೇ ಅನುಭವಿಸಿಕೊಂಡಿರುವವನಿಗೆ ಸುಖದ ಕಲ್ಪನೆಯನ್ನು ದುಃಖವಿಪರೀತವಾದ್ದು ಸುಖವೆಂಬ ಮಾತಿನಿಂದ ತಂದುಕೊಡಬಹುದು. ಈ ಮೇರೆಗೆ ವೈಧರ್ಮ್ಯದಿಂದ ವಸ್ತುಬೋಧವುಂಟಾಗುವ ಕಾರಣ ವಿಧರ್ಮಿಯಾದ ಅಸಹಕಾರಿತ್ವದ ಕಲ್ಪನೆಯನ್ನು ತಂದುಕೊಡಲು ಸಹಕಾರ್ಯದ ಬಗ್ಗೆ ಮೇಲೆ ಒಂದೆರಡು ಮಾತುಗಳನ್ನು ಹೇಳಿದ್ದು ಅಸಂಬದ್ಧವಲ್ಲ. ಅಸಹಕಾರಿತೆಯು ಸಹಕಾರಿತೆಗೆ ವಿಧರ್ಮಿಯಾಗಿದೆಂದು ಹೇಳಿದ ಮಾತ್ರಕ್ಕೆ ಕತ್ತಲೆ ಬೆಳಕಿಗೂ ಇಲ್ಲವೆ ಎಣ್ಣೆ ಸೀಗೆಕಾಯಿಗೂ ಹೇಗೆ ವಿರೋಧವಿದೆಯೊ ಹಾಗೆ ಇವು ವಿರುದ್ಧವಾದವುಗಳೆಂದು ಯಾರಾದರೂ ತಿಳಿದರೆ ಅದು ಕೇವಲ ಅಸಂಗತವಾದೀತು. ಒಬ್ಬರಿಗೊಬ್ಬರು ಉಪಕಾರಮಾಡಿಕೊಳ್ಳುವುದು ಸಹಕಾರ್ಯವೆಂಬುದರಿಂದ ಪರಸ್ಪರ ಅಪಕಾರವೆ ಅಸಹಕಾರಿತೆಯೆಂದು ಹೇಳಬಹುದೆ? ವೈಧರ್ಮ್ಯವನ್ನು ತೋರಿಸಬೇಕೆಂದು ಅಪಕಾರವೇ ಅಸಹಕಾರವೆನ್ನಬಹುದೇ? ಸಹಕಾರ್ಯವಲ್ಲದ್ದು ಅಸಹಕಾರಿತೆ ಎಂದು ಹೇಳಿದರೆ ಅದು ಅಸಹಕಾರಿತೆಯು ವಿರೋಧಿಯೆ ಆಗಿರಬೇಕೆಂದು ನಿಯಮವಿದೆಯೆ? ಇಲ್ಲ. ಸಹಕಾರಿತೆಯಲ್ಲದ್ದು ಬಿದ್ದ [illegible]

[illegible]

ನಾದಲ್ಲಿ ಯಾವ ಯಾವ ಪ್ರಕಾರಗಳು ಅವರೊಳಗೆ ನಡೆದಾವು [illegible] ದನ್ನು ಕೊಂಚಮಟ್ಟಿಗೆ ಚಿತ್ರಿಸಿ ನೋಡೋಣ. ಒಡೆಯನೊಟ್ಟಿಗೆ ಒಕ್ಕಲುಗಳು ಕೇಳಿಕೊಂಡ ರಿಯಾಯತಿಯು ಸಿಗಲಿಲ್ಲ. ಆಗ ಒಂದು ಸಾರಿ, ಎರಡು ಸಾರಿ, ಮೂರು ಸಾರಿ ಈ ವಿಧವಾಗಿ ಅನೇಕ ಸಾರಿ ವಿಜ್ಞಾಪನೆಯ ನಿರಾಕರಣೆಯು ಆದ ಬಳಿಕ ಒಕ್ಕಲುಗಳು ತಮ್ಮ ಸಹಕಾರ್ಯವನ್ನು ನಿಲ್ಲಿಸುತ್ತಾರೆ. "ನಮ್ಮಿಂದ ಯಾವ ಉಪಕಾರವೂ ಅಗತ್ಯವಿಲ್ಲವೆಂಬಂತೆ ಒಡೆಯನು ನಮ್ಮ ಬಿನ್ನಹಕ್ಕೆ ಕಿವಿಗೊಡುವುದಿಲ್ಲ. ಆದ್ದರಿಂದ ನಾವಾದರೂ ಅವನೊಡನೆ ಯಾಕೆ ಸಹಕಾರ್ಯವನ್ನು ಇಟ್ಟುಕೊಳ್ಳೋಣ." ಎಂದು ಆಲೋಚಿಸಿ ಅವರು ಅಸಹಕಾರ್ಯದ ಅಸ್ತ್ರವನ್ನು ಬಿಡಲು ಉಪಕ್ರಮಿಸುವರು. "ಒಡೆಯನ ಬಿಟ್ಟಿಗೆ ಬರಬಾರದು, ಒಡೆಯನ ಮನೆಯಲ್ಲಾಗುವ ಮದುವೆ ಮಂಗಲಗಳಿಗೆ ಹೋಗಬಾರದು, ಕಾಯಿಪಲ್ಲೆಯ ಹೊರೆಗಳನ್ನು ಕಳುಹಿಸಬಾರದು, ಊಟ ಉಪಚಾರಗಳನ್ನು ಕೊಟ್ಟರೂ ಸ್ವೀಕರಿಸಬಾರದು" ಎಂದು ಮುಂತಾಗಿ ಅವರು ನಿರ್ಣಯಿಸಿಕೊಳ್ಳುವರು. ಅಂತರಂಗದಲ್ಲಿ ಪ್ರೀತಿ ಇದ್ದರೂ ಅದೊಂದು ಲೆಕ್ಕವಲ್ಲ. ಅದನ್ನು ವ್ಯಕ್ತಗೊಳಿಸುವ ಸಂದರ್ಭದಲ್ಲಿ ತೋರ್ಪಡಿಸಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಆ ಪ್ರೀತಿಯನ್ನು ತೋರಿಸದೇ ಮೇಲಾಗಿ ಮೋರೆ ತಿರುವಿ ಒಂದು ತರದ ಮುಷ್ಕರವನ್ನು ಹಾಕಿ ಕೂತುಕೊಳ್ಳುವುದೇ ಅಸಹಕಾರಿತ್ವವು. "ಗೇಣಿಯಕ್ಕಿ ಕಡಿಮೆ ಮಾಡಿರಿ" ಎಂದು ಎದೆಬಡಕೊಂಡು ಒದರಿದರೂ ಕೇಳದ ಯಜಮಾನನೊಡನೆ, ನ್ಯಾಯವಾದ ಕೇಳಿಕೆಯ ಕಡೆಗೆ ದುರ್ಲಕ್ಷ್ಯ ಮಾಡುವ ಒಡೆಯನೊಡನೆ, ಸಹಕಾರಿತೆಯು ಯಾಕೆ ಎಂಬ ಆಲೋಚನೆಯು ಅವರ ತಲೆಯಲ್ಲಿ ಅಂಕುರಿಸುವುದು. ನಮ್ಮನ್ನು ನೀವು ಯಾವ ಭಾವನೆಯಿಂದ ನೋಡುವಿರೊ ಅದೇ ಭಾವನೆಯಿಂದ ನಾವಾದರೂ ನಿಮ್ಮನ್ನು ಯಾಕೆ ಉಪಚರಿಸಬಾರದು ಎಂದು ಈಗಿನ ವ್ಯಕ್ತಿ ಸ್ವಾತಂತ್ರ್ಯದ ಯುಗದಲ್ಲಿ ಆ ಒಕ್ಕಲುಗಳು ನೆನಸಹತ್ತುವರು. ಇದೀಗ ಒಕ್ಕಲುಗಳ ಅಸಹಕಾರಿತ್ವವು. ಈ ರೀತಿಯಿಂದ ಒಕ್ಕಲುಗಳು ತಮ್ಮ ಸಹಕಾರ್ಯವನ್ನು ಹೇಗೆ ಕಡಿದುಕೊಳ್ಳುವರೊ ಹಾಗೆಯೆ ರಾಜಕಾರಣದಲ್ಲಿ ಪ್ರಜೆಗಳು ಕೂಡ ಇದನ್ನೆ ಅನುವರ್ತಿಸುವರು. ರಾಜನೊಡನೆ ಅಥವಾ ಸರಕಾರದೊಡನೆ ಸಹಕಾರಿಯನ್ನು ಮಾಡಬಾರದೆಂದು ಅವರು ತಮ್ಮ ಆಕಾಂಕ್ಷೆಗಳು ವಿಫಲವಾದ ಬಳಿಕ ನಿಶ್ಚಯಿಸ ತೊಡಗುವರು. "ನಿಮ್ಮ ಬಹುಮಾನಬೇಡ, ನಿಮ್ಮ ಚಾಕರಿಬೇಡ, ನಿಮ್ಮ ಅನುಗ್ರಹಬೇಡ, ನಿಮ್ಮ ಒಡನಾಟ ಬೇಡ." ಎಂದು ಪ್ರಜೆಗಳು ನಿಶ್ಚಯಿಸುವರು. ನಮ್ಮ ಸತ್ವದ, ನಮ್ಮ ಅಂತಃಕರಣಕ್ಕೆ ಪ್ರಿಯವಾದ, ನಮ್ಮ ಧರ್ಮಸಂಬಂಧದ ಆಂದೋಲನವನ್ನು ನೀವು ನಿರಾಕರಿಸುತ್ತೀರಾದರೆ ನಿಮ್ಮೊಡನೆ ನಾವು ಯಾಕೆ ಸಹಕಾರ್ಯವನ್ನು ಮಾಡಬೇಕು ಎಂದು ಅವರು ವಾದಿಸುವರು. ಆದರೆ ಈ ರೀತಿಯಿಂದ ಅವರು ತಮ್ಮ ಸಹಕಾರ್ಯವನ್ನು ನಿಲ್ಲಿಸುತಾರಂಬದರಿಂದ ಅವರಲ್ಲಿ ಅಪ್ರೀತಿಯ ಮನೋವೃತ್ತಿಗಳು ಉಂಟಾಗುತ್ತವೆ ಎಂದು ಯಾರಾದರೂ ಹೇಳಿದರೆ ಅವರಿಗೆ ಅಸಹಕಾರಿತ್ವದ ರಹಸ್ಯವೆ ತಿಳಿಯಲಿಲ್ಲವೆಂದು ಹೇಳಬೇಕಾಗುತ್ತದೆ. ಅಸಹಕಾರಿತ್ವವನ್ನು ಮಾಡುವಾಗಲೂ ಆ ಪ್ರಜೆಗಳಲ್ಲಿ ಪ್ರೀತಿಯು ಇದ್ದೇ ಇರುತ್ತದೆ. ಈ ಅಂಶವನ್ನು ಇನ್ನೊಮ್ಮೆ ವಿಸ್ತಾರವಾಗಿ ಹೇಳಬಹುದು.

ಯುನಿವರ್ಸಿಟಿಯ ಪರೀಕ್ಷೆಗಳು.

ಮದ್ರಾಸ ಯುನಿವರ್ಸಿಟಿಯ ಈ ವರ್ಷದ ಪರೀಕ್ಷೆಯು ಎಂದಿನಂತೆ ಬಿಗುವಾಗಿತ್ತೆಂದು ಹೇಳಬಹುದು. ಹಿಂದುಸ್ಥಾನದೊಳಗಿನ ಯುನಿವರ್ಸಿಟಿಗಳು ಪರೀಕ್ಷೆಯ ಮಟ್ಟಿಗೆ—ಹೆಚ್ಚು ಉಮೇದವಾರರನ್ನು ಪಾಸುಮಾಡದ ಮಟ್ಟಿಗೆ—ಬಹಳ ಜಾಗ್ರತೆಯನ್ನು ತೆಕ್ಕೊಳ್ಳುತ್ತವೆ ಎಂದು ಸೆಡ್‌ಲರ್ ಕಮಿಟಿಯು ಸ್ಪಷ್ಟವಾಗಿ ಅಭಿಪ್ರಾಯ ಕೊಟ್ಟದೆಯಷ್ಟೆ. ಎಲ್ಲ ಯುನಿವರ್ಸಿಟಿಗಳಲ್ಲಿ ವಿದ್ಯಾರ್ಥಿಗಳನ್ನು ಪಾಸುಮಾಡುವ ಬಗ್ಗೆ ಸಾಮಾನ್ಯವಾಗಿ ಕೃಪಣತ್ವವಿದ್ದದ್ದು ಹೌದಾದರೂ ನಮ್ಮ ಮದ್ರಾಸ ಯುನಿವರ್ಸಿಟಿಯು ಈ ಬಗ್ಗೆ ಬಹು [illegible]ಯನ್ನು ಹೊಂದಿದೆ! ಮಾತ್ರವಲ್ಲ, 'ಮದ್ರಾಸ ಯುನಿವರ್ಸಿಟಿಯಲ್ಲಿ ಪಾಸಾಗುವುದು ಸುಲಭವಲ್ಲ, ಬಹಳ ಬಿಗುಪರೀಕ್ಷೆ' ಎಂದು ಸ್ವಾಭಿಮಾನವಾಗಿ ಉದ್ಗಾರಿಸುವವರು ಅನೇಕರಿದ್ದಾರೆ! [illegible] ಮದ್ರಾಸ ಯುನಿವರ್ಸಿಟಿಯ ಕೀರ್ತಿಯು [illegible] ಕೀರ್ತಿಯನ್ನು ಅದು ಈ ವರ್ಷವೂ ಬಿಟ್ಟಿಲ್ಲವೆಂದು ಪರೀಕ್ಷೆಗಳ ಈ ವರ್ಷದ ಫಲಿತಾಂಶವನ್ನು ನೋಡಿದ್ದಲ್ಲಿ ಸ್ಪಷ್ಟವಾಗುತ್ತದೆ. ಈ ಮಾತಿಗೆ ಈ ವರ್ಷದ [illegible] ಇಂಟರ್‌ಮೀಡಿಯಟ್ ಮುಂತಾದ ಪರೀಕ್ಷೆಗಳ ಫಲಿತಾಂಶವನ್ನು ಉದಾಹರಿಸಬಹುದು. ಬಿ. ಎ. ಮುಂತಾದ್ದರಲ್ಲಿ [illegible] ಉತ್ತೀರ್ಣರು, [illegible] ಅನುತ್ತೀರ್ಣರು ಎಂದು [illegible] ರೀತಿಯಿಂದ [illegible] ಹೊರಗೆ ಬರಲಿಲ್ಲವಾದರೂ [illegible] ಫಲಿತಾಂಶದ ಪಟ್ಟಿಯನ್ನು ನೋಡುವಾಗ ಬಿ. ಎ. ಪರೀಕ್ಷೆಯಲ್ಲಿ [illegible]

[illegible] ವಿದ್ಯಾರ್ಥಿಗಳಿಗೆ ಬಿ. ಎ. [illegible] ಕೊಂಡದ [illegible] ಯನ್ನು [illegible] ಪದವಿಯನ್ನು ತೆಗೆದುಕೊಳ್ಳಲು [illegible] ಸ್ಕೂಲುಗಳ ಪ್ರಮಾಣದಿಂದ ನಿರ್ಣ[illegible] ಜನರಿಗೆ ಕಾಲೇಜಿನಲ್ಲಿ [illegible] ಬಿ. ಎ. ಪದವಿಯನ್ನು ತೆಗೆದುಕೊಳ್ಳುವ [illegible] ಈ ದೋಷವು ಯಾರದು? [illegible] ಕಾಲೇಜಿನೊಳಗಿನ ಅಧ್ಯಾಸದ [illegible] ಹೇಗೆ? [illegible] ಶೇಕಡಾ ೬೦ ಅನುತ್ತೀರ್ಣರಾಗುವುದು ಯಾಕೆ? ಎಂದರೆ ಪರೀಕ್ಷಾ ಯಂತ್ರವು ವಿದ್ಯಾರ್ಥಿಯಲ್ಲಿ ಬಿ. ಎ. ಎಂಬ ಹೆಸರು ಕೊಳ್ಳಬೇಕಾದರೆ ಜ್ಞಾನದ ಯಾವ ತರಗತಿಯನ್ನು ಅಪೇಕ್ಷಿಸುತ್ತಿರುತ್ತದೋ ಆ ತರಗತಿಯು ನಾಲ್ಕು ವರ್ಷದ ಅಭ್ಯಾಸಯಂತ್ರದಲ್ಲಿ ಅವನಿಗೆ ಲಭಿಸುತ್ತದೋ, ಹೇಗೆ? ಸಾರಾಂಶ, ಒಂದೇ ಮಾತಿನಿಂದ, ಅಧ್ಯಯನಕ್ಕೂ 'ಪರೀಕ್ಷೆಗೂ ಸಾಂಗತ್ಯವಿದೆಯೋ ಹೇಗೆ ಎಂಬೀ ಪ್ರಶ್ನೆಯು ಬರುತ್ತದೆ. ಈ ಪ್ರಶ್ನೆಯನ್ನು ಉತ್ತರಿಸುವುದಾದರೆ ಅವುಗಳಲ್ಲಿ ಪರಸ್ಪರ ಸಾಂಗತ್ಯವಿಲ್ಲವೆಂದು ಶೇಕಡಾ ೬೦ ಅನುತ್ತೀರ್ಣರ ಸಂಖ್ಯೆಯು ಮೇಲಿಂದ ಯಾರೂ ಸ್ಪಷ್ಟವಾಗಿ ಹೇಳುವರು. ಬಿ. ಎ. ಕ್ಲಾಸಿನ ಅನುತ್ತೀರ್ಣತೆಯ ಪ್ರಮಾಣವು ೬೦ ಆಯಿತಲ್ಲವೇ? ಇಂಟರ್‌ಮೀಡಿಯೇಟಿನವರದಂತೂ ೭೫ ಬೀಳುತ್ತದೆ; ಇದು ಎಷ್ಟು ಶೋಚನೀಯವು! ಇದರ ಲಾಂಛನವು ಯೂನಿವರ್ಸಿಟಿಗೆ ಹೇಗೋ ಹಾಗೆ ಕಾಲೇಜುಗಳಿಗೂ ತಟ್ಟುತ್ತದೆ. ಈಗ ಇಂಟರ್‌ಮೀಡಿಯೆಟಿನಲ್ಲಿ ಹಾಗು ಬಿ. ಎಯಲ್ಲಿ ಹೆಚ್ಚು ಮಂದಿಗಳು ಅನುತ್ತೀರ್ಣರಾಗುವ ಆ ದೋಷದ ಮಡಿಕೆಯನ್ನು ಹೈಸ್ಕೂಲಿನ ಶಿಕ್ಷಣದ ತಲೆಯ ಮೇಲೆ ಬಡಿಯೋಣವೆಂದರೆ, ಅದಕ್ಕೂ ಎಡೆ ಇಲ್ಲ. ಕಾರಣ, ಸ್ಕೂಲ್‌ಫೈನಲಿನ ಪರೀಕ್ಷೆಯಲ್ಲೇ ಪರೀಕ್ಷಕರ ನಿಷ್ಠುರ ಯಂತ್ರವು ಪ್ರಾರಂಭವಾಗಿರುತ್ತದೆ. ಎಂದ ಮೇಲೆ ಆ ನಿಷ್ಠುರ ಯಂತ್ರದ ಬಾಯಿಯಿಂದ ಕಾಲೇಜಿಗೆ ಪ್ರವೇಶಿಸುವವರು ಪರೀಕ್ಷಕರ ಅನುಗ್ರಹದ ಮುದ್ರೆಯನ್ನು ಪಡೆದವರೆ ಸರಿ. ಆದರೆ ಅವರೇ ಪುನಃ ಇಂಟರ್‌ಮೀಡಿಯಟಿನಲ್ಲಿ ಪಾಸಾಗಲಿಕ್ಕಾಗಲಿ, ಮುಂದೆ ಬಿ. ಎ. ಡಿಗ್ರಿಯನ್ನು ಪಡೆಕೊಳ್ಳಲಿಕ್ಕಾಗಲಿ ಶೇಕಡಾ ೬೦ರಷ್ಟು ಅಯೋಗ್ಯರಾಗುತ್ತಾರೆ! ಇದು ಪರಸ್ಪರ ವಿರುದ್ಧವಲ್ಲವೆ? ತನ್ನದನ್ನು ತಾನೇ ಖಂಡಿಸಿಕೊಳ್ಳುವುದಲ್ಲವೆ? ಹೀಗಲ್ಲವಾದರೆ ಅದು ಪರೀಕ್ಷಾಯಂತ್ರದ ಅಸಹಿಷ್ಣುತೆಯೂ ಆಗಿರಬಹುದು.

ಈ ದುರವಸ್ಥೆಯ ದೋಷವು ಸಂಪೂರ್ಣವಾಗಿ ಕಾಲೇಜುಗಳ ಮತ್ತು ಪರೀಕ್ಷಕರ ಸೆರಗಿನಲ್ಲೇ ಬೀಳುತ್ತದೆ ಎಂದು ನಮ್ಮ ಅಭಿಪ್ರಾಯವಲ್ಲ. ಅಭ್ಯಾಸಕ್ಕಾಗಿ ತಂತಮ್ಮ ಮನೆಮಾರು ಮತ್ತು ಜನರನ್ನು ಬಿಟ್ಟು ಬೇರೆ ಕಡೆಗಳಲ್ಲಿ ಹೋಗಿ ನಿಂತ ವಿದ್ಯಾರ್ಥಿಗಳಲ್ಲಿ ಅನೇಕರು ವಿದ್ಯಾರ್ಥಿಯ ದಶೆಗೆ ಮೀರಿರುವ ಅಲ್ಲಸಲ್ಲದ ಸಂಗತಿಗಳಲ್ಲಿ, ಮಿತಿ ಮೀರಿ ಪ್ರವೃತ್ತರಾಗುವುದನ್ನು ನಾವು ನೋಡುತ್ತೇವೆ. ಕಾಲೇಜ ವಿದ್ಯಾರ್ಥಿಗಳಂಥ ಪ್ರೌಢರಿಗೆ ವಿಚಾರಸ್ವಾತಂತ್ರ್ಯವಾಗಲಿ, ವ್ಯಕ್ತಿಸ್ವಾತಂತ್ರ್ಯವಾಗಲಿ ತಕ್ಕ ಮಟ್ಟಿಗೆ ಇರಬೇಕಾದ್ದು ನ್ಯಾಯ್ಯ. ತಥಾಪಿ "ಅತಿಸರ್ವತ್ರ ವರ್ಜಯೇತ್" ಎಂದು ಹೇಳಿದಂತೆ ಅಭ್ಯಾಸದ ಹೊರಗಿನ ವಿಷಯಗಳಲ್ಲಿ ಅತ್ಯಾಸಕ್ತಿಯು ಅವರನ್ನು ಕೊನೆಗೆ ಸುಳಿಯಲ್ಲಿ ಹಾಕುತ್ತದೆ. ಕಾಲೇಜಿನಿಂದ ಹೊರಗೆ ಬರುವ ತರುಣರ ಮೇಲೆ ಪ್ರಪಂಚ, ಸಮಾಜ, ರಾಷ್ಟ್ರ ಮುಂತಾದವುಗಳಿಗೆ ಸಂಬಂಧಪಟ್ಟ ಅನೇಕ ಮಹತ್ವದ ಕರ್ತವ್ಯಗಳನ್ನು ನೆರವೇರಿಸುವ ಜವಾಬದಾರಿಯು ಇರುತ್ತದೆ. ಕಾಲೇಜಿನಲ್ಲಿ ಹೇಗೆ ಅಭ್ಯಾಸದ ವರ್ತುಲದಲ್ಲೆ ಸುಳಿದಾಡಬೇಕಾಗುವುದೋ ಹಾಗೆ ಮುಂದಿನ ಆಯುಷ್ಯದಲ್ಲಿ ಅಷ್ಟು ಸಂಕುಚಿತವಾಗಿ ಅವರು ನಡೆದರೆ ಸಾಲದು. ಮುಂದಿನ ವ್ಯಾಪಕಕರ್ತವ್ಯಗಳನ್ನು ಮಾಡಲು ಪ್ರಬಲವಾದ ಸಾಮರ್ಥ್ಯದ ಶಿಕ್ಷಣವು ಅವರಿಗೆ ವಿದ್ಯಾರ್ಥಿದಶೆಯಲ್ಲಿ ದೊರಕಬೇಕಾದ್ದು ನ್ಯಾಯ್ಯ ಇತ್ಯಾದಿ ಸಂಗತಿಗಳು ನಿಜ. ಈ ವಿಷಯವನ್ನು ಅನುದಾರಿಯು ಒಂದು ವೇಳೆ ನಿರಾಕರಿಸಿದರೂ ಸಾಮಾನ್ಯ ವಿಚಾರವಂತನು ಎಂದೂ ನಿರಾಕರಿಸಲಿಕ್ಕಿಲ್ಲ. ಆದರೂ ಅಧ್ಯಯನ ವಿಷಯವನ್ನು ಬದಿಗಿಟ್ಟು ತಮ್ಮ ಬುದ್ಧಿ ಮತ್ತು ಪ್ರಯತ್ನ ಸರ್ವಸ್ವವನ್ನು ಖರ್ಚುಮಾಡಿ ತಾದಾತ್ಮ್ಯದಿಂದ ಅನ್ಯ ವಿಷಯಗಳಲ್ಲಿ ಪ್ರವರ್ತಿಸುವುದರಿಂದ ಅವರ ಮುಂದಿನ ಪ್ರಪಂಚದ ಕಟ್ಟೋಣವೆ ಜಾರಿಬೀಳುತ್ತದೆ! ಈ ಆತ್ಮಘಾತಕ ಪ್ರವೃತ್ತಿಯನ್ನು ಯಾರೂ ಶ್ಲಾಘಿಸಲಿಕ್ಕಿಲ್ಲ. ತರುಣ ವಿದ್ಯಾರ್ಥಿಗಳಿಗೆ ಪುಸ್ತಕ ಶಿಕ್ಷಣದಂತೆಯೆ ಧರ್ಮ, ದೇಶ, ಸಮಾಜ ಮುಂತಾದ ಎಲ್ಲ ವಿಷಯಗಳ ಶಿಕ್ಷಣವು ಅಯಾಮಿತಿಯಲ್ಲಿ ಇರಲೆ ಬೇಕು. ಪರಂತು ಅವರ ಪರೀಕ್ಷೆಯು ಅವರಿಗೆ ಮಹತ್ವವಾದ್ದೆಂಬದನ್ನು ಯಾರೂ ಮರೆಯಬಾರದು.

ಸ್ಫುಟವಿಚಾರಗಳು.

೧. ಮದ್ರಾಸ ಸಂಸ್ಥಾನದ ಪ್ರಾಂತಿಕ ಪರಿಷತ್ತು ಪೂರ್ವದಲ್ಲಿ ಪ್ರಕಟವಾದಂತೆ [illegible]ವೆಲ್ಲಿಯಲ್ಲಿ ಈ ತಿಂಗಳ ತಾರೀಕು ೧೧ಕ್ಕೆ ಪ್ರಾರಂಭವಾಗಿ ಮೂರುನಾಲ್ಕು ದಿವಸ ನಡೆಯಿತು. ಅಮೃತಸರ ರಾಷ್ಟ್ರೀಯ ಸಭೆಯು [illegible] ಬಳಿಕ ಈ ಸಂಸ್ಥಾನದ ಲೋಕಮತವು ಸಮಷ್ಟಿ ರೂಪದಲ್ಲಿ ತೋರದಿದ್ದರಲ್ಲಿಲ್ಲ. ಬೇರೆಬೇರೆ ಜಿಲ್ಲಾ ಸಭೆಗಳಾಗಿ [illegible]ಮೂಲಕ ಅಲ್ಲಲ್ಲಿ ಲೋಕಮತವು ವ್ಯಕ್ತವಾಗುತ್ತಿತ್ತಾದರೂ ಅದಕ್ಕೆ ಪ್ರಾಂತಿಕ ಸ್ವರೂಪದ ಮಹತ್ವವು ಇದ್ದಿಲ್ಲ. ಅದ್ದರಿಂದ [illegible] ಕಾನೂನು, ಕೌನ್ಸಿಲಿನ ಚುನಾವಣೆ, ಅಸಹಕಾರಿತ್ವ [illegible] [illegible] ಕುತ್ತಿವ [illegible] ಮತ್ತು [illegible] ಮುಂದೆ ಬರುವುದು ಅವಶ್ಯವಿತ್ತು. ಅದು ತಿನ್ನೆವೆಲ್ಲಿಯ ಅಧಿವೇಶನದಲ್ಲಿ ಪ್ರಕಟವಾಯಿತೆಂದು ಹೇಳಬಹುದು. ಸ್ವಾಗತಮಂಡಲದ ಪೀಠಸ್ಥರಾಗಲಿ, ಪರಿಷತ್ತಿನ ಅಧ್ಯಕ್ಷರಾಗಲಿ ಮಾಡಿದ ಭಾಷಣದಲ್ಲಿ ಈಗಿನ ಲೋಕಮತದ ಛಾಯೆಯು ಸ್ಪಷ್ಟವಾಗಿ ಪ್ರತಿಬಿಂಬಿತವಾಗಿದೆ. ವಿಶೇಷತಃ ಅಧ್ಯಕ್ಷರ ಭಾಷಣದೊಳಗಿನ—ಸುಧಾರಣಾ ಏಕ್ಟು ಬಂದ ಬಳಿಕ ಮಿ. ಮೊಂಟೆಗ್ಯುಗಳ ಸುತ್ತುಮುತ್ತಲು ಕುಣಿಯ ಹತ್ತಿದವರ ವಿಷಯ, ರಾಷ್ಟ್ರೀಯ ಸಭೆಯ ಲೋಕಸತ್ತಾವಾದ, ಕೌನ್ಸಿಲಿನ ಚುನಾವಣೆ, ಮೊದಲಾದ ವಿಷಯಗಳು ಬಹು ಮಹತ್ವವುಳ್ಳವುಗಳಾಗಿವೆ. ಪ್ರಾಂತಿಕ ಪರಿಷತ್ತಿನ ಈ ಎಲ್ಲ ಸಂಗತಿಗಳನ್ನು ಸ್ಥಿರೀಭಾವದ ದೆಸೆಯಿಂದ ಮುಂದರಿಸಬೇಕಾಗುತ್ತದೆ.

೨. ಪವನುಗಳ ಕ್ರಯ ತಗ್ಗುವ ಕಾಲವು ಸಮೀಪಿಸ ಹತ್ತಿತು. ಇದು ಸಂತೋಷದ ಮಾತು. ಬರುವ ಜುಲೈ ತಾ. ೧೫ರ ವರೆಗಿನ ಮುದತನ್ನು ಕೊಟ್ಟು ಈ ಮುದತಿನಲ್ಲಿ ಜನರು ತಮ್ಮ ಕಡೆಗಿರುವ ಪವನುಗಳನ್ನು ಸರಕಾರಿ ಖಜಾನೆಗೆ ತಂದು ಕೊಟ್ಟರೆ ಪವನೊಂದಕ್ಕೆ ರೂ. ೧೫ರಂತೆ ಅವರಿಗೆ ಕ್ರಯವು ಸಿಕ್ಕೀತು. ಮುಂದೆ ವರಿಷ್ಠ ಕೌನ್ಸಿಲಿನಲ್ಲಿ ಅದರ ಕ್ರಯದ ವಿಷಯವಾಗಿ ಠರಾವು ಬರುವುದಿದೆ. ಆಗ ಅಲ್ಲಿ ಅದಕ್ಕೆ ಯಾವ ಬೆಲೆಯು ನಿಶ್ಚಿತವಾದೀತೊ ಅದು ಚಲಾವಣೆಯಲ್ಲಿ ಬಂದೀತು ಎಂದು ಸರಕಾರದ ಕಡೆಯಿಂದ ನೋಟೀಸು ಪ್ರಕಟವಾಗಿದೆ. ಈ ನೋಟಿಸಿನಲ್ಲಿ ಪವನಿನ ಇನ್ನು ಮುಂದಿನ ನಿಶ್ಚಿತ ಬೆಲೆಯು ಕೌನ್ಸಿಲಿನಲ್ಲಿ ನಿರ್ಧರಿಸಲ್ಪಟ್ಟೀತೆಂದು ಹೇಳಿದರ ಮೇಲಿಂದ ಒಂದು ವೇಳೆ ಅದರ ಬೆಲೆಯು ಹೆಚ್ಚೂ ಹಾಗಬಹುದೆಂದು ಯಾರೂ ಭೀತಿ ಪಡುವ ಅವಶ್ಯವಿಲ್ಲ. ಹಿಂದೆ ಒಂದು ಸಾರಿ ನಾಣ್ಯ ಕಮಿಷನಿನ ವರದಿಯ ಸಾರಾಂಶವನ್ನು ಕೊಡುವಾಗ ನಾವು ಸೂಚಿಸಿರುವಂತೆ ಅದರ ಬೆಲೆಯು ಸಾಧಾರಣವಾಗಿ ೧೦ರೂಪಾಯಿಗೆ ಬಂದು ನಿಂತೀತು. ಆದ್ದರಿಂದ ಪವನುಗಳಿದ್ದವರು ಮೇಲಿನ ಮುದತಿನೊಳಗೆ ಸರಕಾರಿ ಖಜಾನೆಯಲ್ಲಿ ಅವನ್ನು ಕೊಟ್ಟು ಈಗಿನ ರೂ. ೧೫ರಂತಿರುವ ಕ್ರಯವನ್ನು ಪಡಕೊಳ್ಳುವುದು ಹಿತಾವಹವಾಗಿದೆ. ಜನರಲ್ಲಿರುವ ಪವನುಗಳನ್ನು ಸಂಗ್ರಹಿಸಲು ಇದೊಂದು ಸಾಧನವೆಂದು ವೃಥಾ ನೆನಸಿಕೊಳ್ಳುವವರೂ ಅನೇಕರಿರಬಹುದು. ಆದರೆ ಅಂಥ ಕಲ್ಪನೆಗಳಿಗೆ ಈ ಸಂದರ್ಭದಲ್ಲಿ ಏನೂ ಎಡ ಇಲ್ಲವೆಂದು ನಾವು ಸ್ಪಷ್ಟವಾಗಿ ಹೇಳುತ್ತೇವೆ.

೩. ಇಂಗ್ಲಂಡ ಫ್ರಾನ್ಸ ಮುಂತಾದ ದೇಶಗಳಿಗೆ ಗೋದಿಯು ಅವಶ್ಯಕವಾಗಿರುತ್ತದೆ. ಆದರೆ ಗೋದಿ ಬೆಳೆಯತಕ್ಕ ದೇಶಗಳಾದ ರಷ್ಯಾ, ಹಂಗೇರಿ ಮುಂತಾದ ಕಡೆಗಳಲ್ಲಿ ಮಹಾಯುದ್ಧದ ಉರಿಯು ಉರಿಯುತಿದ್ದುದರಿಂದ ಮತ್ತು ಇದು ವರೆಗೂ ಅಲ್ಲಿ ಶಾಂತತೆಯು ನೆಲಗೊಳ್ಳಲಿಲ್ಲವಾದ್ದರಿಂದ ಗೋದಿಯ ಬೆಳೆಯು ಆಗಲಿಲ್ಲ. ಆದ್ದರಿಂದ ಇಂಗ್ಲಂಡಿಗೆ ಅಲ್ಲಿಂದ ಗೋದಿಯನ್ನು ತರಿಸೋಣವೆಂದರೆ ಸಾಧ್ಯವಿಲ್ಲವಾಗಿದೆ. ಯುರೋಪಿನೊಳಗಿನ ಇತರ ದೇಶಗಳಲ್ಲಿ ಕೂಡ ಹವಾದೋಷದಿಂದ ಗೋದಿಯ ಬೆಳೆಯು ಕೆಟ್ಟುಹೋಗಿದೆ. ಅಂತು ಯುರೋಪಿನವರಿಗೆ ಗೋದಿಯ ಗೋಳಾಟವು ಪ್ರಾರಂಭವಾಗಿದೆ. ಅಮೇರಿಕದಿಂದ ಗೋದಿಯನ್ನು ತರಿಸಿಕೊಳ್ಳೋಣವೆಂದರೆ ಅಮೇರಿಕದೊಳಗಿನ ಸಂಯುಕ್ತ ಸಂಸ್ಥಾನದವರಿಗೇನೆ ಗೋದಿಯ ಅಭಾವದಿಂದ ಕೆನಡಾದ ಕಡೆಗೆ ಹೋಗಬೇಕಾಗಿದೆ. ಆದ್ದರಿಂದ ಅಲ್ಲಿಂದಲೂ ಯುರೋಪಿಗೆ ಗೋದಿಯ ಆಸೆ ಇಲ್ಲ. ಆಸ್ಟ್ರೇಲಿಯಾದೊಳಗೂ ಈ ವರ್ಷ ಬೆಳೆಯು ಮೋಸಕೊಟ್ಟ ಕಾರಣ ಅವರು ಒಂದೇ ಒಂದು ಕಾಳನ್ನು ಹೊರ ಕಳುಹಿಸಬಾರದೆಂದು ನಿರ್ಣಯಿಸಿಕೊಂಡಿದ್ದಾರೆ. ದಕ್ಷಿಣ ಅಮೇರಿಕದೊಳಗಿನ ಅರ್ಜೆಂಟೈನ್ ರಿಪಬ್ಲಿಕ್ ಸಂಸ್ಥಾನದವರು ಸಹ ಇದೇ ರೀತಿಯ ಠರಾವನ್ನು ಮಾಡಿದ್ದಾರೆ. ಈ ಮೇರೆಗೆ ಎಲ್ಲ ಕಡೆಗಳಲ್ಲಿ ಅರ್ಧಜಂಪ್ರವನ್ನು ಹೊಂದಲು ಸಿದ್ಧವಾದ ಉಪೋಷಿತ ಯುರೋಪು ಹಿಂದೂಸ್ಥಾನದ ಕಡೆಗೆ ಕಣ್ಣು ಇಡಹತ್ತಿದೆ. ಇಂಥ ಸಂದರ್ಭದಲ್ಲಿ ಹಿಂದಿ ವ್ಯಾಪಾರಿಗಳು ಮತ್ತು ಮುಖಂಡರು ಒಟ್ಟುಗೂಡಿ ನಿರ್ಗತವಾಗುವ ಧಾನ್ಯದ ಮೇಲ ಯೋಗ್ಯವಾದ ಜಕಾತಿ ಕರವನ್ನು ಹೊರಿಸುವ ಉಪಾಯವನ್ನು ಸರಕಾರವು ಕೈಕೊಳ್ಳುವಂತೆ ಮಾಡಬೇಕು. ಹಿಂದೂಸ್ಥಾನ ಸರಕಾರವು ಪ್ರಜೆಗಳ ಮತ್ತು ಹಿಂದೂಸ್ಥಾನದ ಹಿತವನ್ನು ನೋಡುವುದರ ಬದಲು ಸ್ವಜಾತಿ ವರ್ಗದ ಕಡೆ ಗಿಳಿದರೆ ಮಾತ್ರ ಎಲ್ಲ ಕೆಲಸವೂ ಕೆಟ್ಟುಹೋದೀತು.

೪. ಪೂನಾ ಪಟ್ಟಣದಲ್ಲಿ ಪ್ರೊ. ಕರ್ವೆಯವರು ಸಂಸ್ಥಾಪಿಸಿದ "ದಿ ಇಂಡಿಯನ ವಿಮೆನ್ಸ ಯುನಿವರ್ಸಿಟಿ"ಯ ಎರಡನೆ ವರ್ಷದ ಪದವಿದಾನ ಸಮಾರಂಭವು ಜರಗಿತು. ಈ ಯುನಿವರ್ಸಿಟಿಗೆ ಮುಂಬಯಿಯ ಸುಪ್ರಸಿದ್ಧ ವ್ಯಾಪಾರಿಗಳಾದ ಸರ ವಿಠ್ಠಲದಾಸ ಠಾಕರಸಿ ಎಂಬ ಸದ್ಗೃಹಸ್ಥರು ೧೫ಲಕ್ಷ ರೂಪಾಯಿಯನ್ನು ದಾನ ಮಾಡಿದ್ದಾರೆ ಎಂದು ತಿಳಿಸಲು ತುಂಬಾ ಸಂತೋಷ ಪಡುತ್ತೇವೆ. ಶಿಕ್ಷಣದ ಕಾರ್ಯದಲ್ಲಿ ವ್ಯಾಪಾರಿಗಳಾಗಿ ಇಷ್ಟು ದೊಡ್ಡ ಔದಾರ್ಯವನ್ನು ತೋರಿಸಿದವರು ನಮ್ಮ ಹಿಂದೀ ದೇಶದಲ್ಲಿ ಅತಿ ವಿರಳರು. ಡೊ. ರಾಶ ಬಿಹಾರಿಘೋಶರು ೧೫ಲಕ್ಷ ರೂಪಾಯಿಯನ್ನು ಶಿಕ್ಷಣದ ಅಭಿವೃದ್ಧಿಗೆ ದಾನಮಾಡಿದ್ದಾರೆ; ಆದರೂ ಸರ ವಿಠ್ಠಲದಾಸರ ದಾನವು ಅದಕ್ಕೂ ಅಧಿಕವಾಗಿದೆ. ಮಾತ್ರವಲ್ಲ, ಇದುವರೆಗೆ ಜನತೆಯ ಮತ್ತು ಸರಕಾರದ ದುರ್ಲಕ್ಷಕ್ಕೆ ಪಾತ್ರವಾದ ಸ್ತ್ರೀ ಶಿಕ್ಷಣದ ಅಭಿವೃದ್ಧಿಗಾಗಿ ಕೊಟ್ಟಿದ್ದಂತೂ ವಿಶೇಷ ಅಭಿನಂದನೀಯ ಸಂಗತಿಯು. ಸ್ತ್ರೀ ಶಿಕ್ಷಣದ ಯುನಿವರ್ಸಿಟಿಯನ್ನು ಪ್ರಾರಂಭಿಸಿದ ಪ್ರೊ. ಕರ್ವೆಯವರಿಗೂ ಅದನ್ನು ಪೋಷಿಸಿದ ಸರ ವಿಠ್ಠಲದಾಸ ಠಾಕರಸಿಯವರಿಗೂ ಹಿಂದೀ ಸ್ತ್ರೀವರ್ಗವು ಋಣಿಯಾಗದೆ ಇರಲಿಕ್ಕಿಲ್ಲ.

೫. ಇಲ್ಲಿಯ ಗವರ್ನಮೆಂಟ್ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ಕ್ಲಾಸಿಗೆ ನೆಚರಲ್ [illegible] ವಿಷಯವನ್ನು [illegible] ಎಂದು ಕೇಳುತ್ತೇವೆ. ಈ ಹೊಸ ಏರ್ಪಾಡಿನಿಂದ ಮೆಡಿಕಲ್ ಕಾಲೇಜಿಗೆ ಹೋಗಲಪೇಕ್ಷಿಸುವ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲತೆಯುಂಟಾಗಿದೆ ಎಂದು ಹೇಳಲು ಯಾವ ಸಂಕೋಚವೂ ಇಲ್ಲ. ಈ ಕ್ಲಾಸಿಗೆ ಹೋಗಲು ಸಾಧ್ಯವಿಲ್ಲದವರು ಸೈನ್ಸ ಬಿ. ಎಯನ್ನು ಸಾಧ್ಯಮಾಡಿಕೊಳ್ಳಬಹುದು. ಅಂತು ನೆಚರಲ್ ಸೈನ್ಸಿನ ಹೊಸ ವಿಷಯದಿಂದ ಪಡಕೊಳ್ಳಬೇಕಾದ ಲಾಭವನ್ನು ಇಲ್ಲಿ ವಿದ್ಯಾರ್ಥಿ ವರ್ಗವು ಪಡಕೊಂಡೀತೆಂದು ನಾವು ಭರವಸೆ ಪಡುತ್ತೇವೆ.

ಮಂಗಳೂರು.

ರಾಯಸಾಹೇಬ ಇ. ಸಿ. ಮಸ್ಕರೇಂಞಸರು:—ಇವರು ಮದ್ರಾಸು ನ್ಯಾಯ ವಿಧಾಯಕ ಸಭೆಯಲ್ಲಿ ದಕ್ಷಿಣ ಕನ್ನಡ, ಮಲಬಾರು, ಸೇಲಂ, ಕೊಯಮುತ್ತೂರು, ನೀಲಗಿರಿ, ಜಿಲ್ಲೆಗಳ ಕ್ರೈಸ್ತರ ಪರವಾಗಿ ಮೆಂಬರಾಗಲು ಉಮೇದ್ವಾರರಾಗಿದ್ದು ತಾನು ಈ ಕೆಳಗಿನ ವಿಷಯಗಳಲ್ಲಿ ಸಾಧನೆ ಮಾಡುವುದಾಗಿ 'ಹಿಂದೂ' ಪತ್ರಿಕೆಯ ೧೦ನೆ ತಾರೀಕಿನ ಸಂಚಿಕೆಯಲ್ಲಿ ಪ್ರಕಟಿಸಿರುವರು:—(೧) ಕ್ರೈಸ್ತಮತದ ಧರ್ಮಸಂಬಂಧವಾದ ಕಾನೂನಿಗೆ ವಿರೋಧವಾದ ಯಾವುದೊಂದು ಕಾನೂನು ಏರ್ಪಡದಂತೆ ಯತ್ನಿಸುವುದು. (೨) ಸರಕಾರಿ ಇಲಾಖೆಗಳಲ್ಲಿಯೂ, ಡಿಸ್ಟ್ರಿಕ್ಟ್ ಬೋರ್ಡು, ಮುನಿಸಿಪಾಲಿಟಿ, ಯೂನಿಯನ್ ಮತ್ತು ಗ್ರಾಮ ಪಂಚಾಯತುಗಳಲ್ಲಿಯೂ ಕ್ರೈಸ್ತರ ಸಾಕಷ್ಟು ಪ್ರತಿನಿಧಿಗಳು ಬರುವಂತೆ ಸಾಧಿಸುವುದು. (೩) ಅಶಿಕ್ಷಿತ ಜನಸಾಮಾನ್ಯರ ಏಳ್ಗೆಗೆ ಸಹಕಾರಿಯಾದ ಸಲಹೆಗಳು ಸಿಗುವಂತೆ ಯತ್ನಿಸುವುದು. (೪) ದೇಶದ ಜನರ ಸ್ಥಿತಿಯು ಉಚ್ಚಗತಿಗೆ ಬರುವುದಕ್ಕೆ ಬೇಕಾದ ಏರ್ಪಾಡುಗಳು ಮಂಜೂರಾಗುವಂತೆ ಯತ್ನಿಸುವುದು. ಇವರ ಪ್ರಯತ್ನಗಳು ಸಫಲವಾಗಲೆಂದು ಮಂಗಳೂರಿನ ಲೋರ್ಡ ಬಿಶಪ್‌ಸಾಹೇಬರು ಬಯಸಿರುವರು.

ಕಾಸರಗೋಡಿನಲ್ಲಿ ಹೊಸತಾಗಿ ತೆರಿಯೋಣಾಗುವ ಎಡಿಶನಲ್ ಮುನ್ಸಿಪಕೋರ್ಟು ಬರುವ ತಾರೀಕು ೯ರಿಂದ ಪ್ರಾರಂಭಿಸಲ್ಪಡುವುದು.

ಗವರ್ನಮೆಂಟಕಾಲೇಜಿನ ಅಧ್ಯಾಪಕರಾದ ಶ್ರೀಯುತ ಕೆ. ಯಲ್. ವ್ಯಾಸರಾಯ ಶಾಸ್ತ್ರಿಗಳು ಶಿರೋಮಣಿ ಪರೀಕ್ಷೆಯ ವ್ಯಾಸಂಗದ ಪ್ರಿಲಿಮಿನರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರಾಗಿ ತಿಳಿಯುತ್ತೇವೆ.

ಗೌಡಸಾರಸ್ವತ ಬ್ರಾಹ್ಮಣರ ಗುರುಗಳಾದ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀ ಪಾದಂಗಳವರು ಹೊಸದುರ್ಗದಲ್ಲಿನ ಶ್ರೀ ವೆಂಕಟರಮಣ ದೇವಸ್ಥಾನದ ಬ್ರಹ್ಮಕಲಶ ಪ್ರತಿಷ್ಠೆಯನ್ನು ನೆರವೇರಿಸಿ, ಅಲ್ಲಿಯ ವಂತಿಗೆ ವರಾಡ ಮೊದಲಾದುವುಗಳಾದ ತರುವಾಯ ಕುಂಬಳೆಗೆ ಚಿತ್ತೈಸಿದರು. ಅಲ್ಲಿ ಶಿಷ್ಯ ವೃಂದದ ಪೈಕಿ ಕವಿಗಳಾದ ಮ| ರಾ| ಕುಂಬಳೆ ನರಸಿಂಹ ಲಕ್ಷ್ಮಣನಾಯ್ಕರವರಿಗೆ ಕವಿರತ್ನ ಎಂಬ ಬಿರುದನ್ನೂ ಚಿನ್ನದ ಪದಕವನ್ನೂ ಬಹುಮಾನವಾಗಿ ಇತ್ತು ಪ್ರೋತ್ಸಾಹಿಸುವವರಾದರು. ವಂತಿಗೆ ವರಾಡದ ಕೆಲಸವನ್ನು ಮುಗಿಸಿ, ಕಳೆದ ಸೋಮವಾರ ಸಾಯಂಕಾಲ ಮಂಗಳೂರಿಗೆ ದಯಮಾಡಿರುವರು. ಶ್ರೀ ಪಾದಂಗಳವರು ಈ ವರುಷದ ಚಾತುರ್ಮಾಸವನ್ನು ಇಲ್ಲೇ ಮುಗಿಸುವರು. ವಾಲ್ಕೇಶ್ವರ ರಾಮೇಶ್ವರ ಇವೇ ಮುಂತಾದ ಮಠಗಳ ಜೀರ್ಣೋದ್ಧಾರದ ಕೆಲಸವನ್ನು ಪೂರೈಸುವ ಬಗ್ಗೆ ಮ| ರಾ| ನಕ್ಷೇಶ ಶ್ರೀನಿವಾಸಪೈ ಮತ್ತು ಮ| ರಾ| ಕಸ್ತೂರಿ ಸರ್ವೋತ್ತಮ ಪೈಗಳವರು ಇಲ್ಲಿಂದ ಹೊರಟಿರುವರು. ಈ ಜೀರ್ಣೋದ್ಧಾರ ಕೆಲಸದ ಬಗ್ಗೆ ಇದು ವರೇಗೆ ವಸೂಲು ಕೊಟ್ಟ ಗೃಹಸ್ಥರ ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ಮ. ರಾ. ರಾ. ಬೆನಗಲ ರಾಮರಾವ ಎ. ಸಿ. ಯಸ್. ರವರು ಗವರ್ನಮೆಂಟ ರೆವೆನ್ಯು (ಸ್ಪೆಶಲ್) ಡಿಪಾರ್ಟಮೆಂಟಿನ ಆಂಡರ ಸೆಕ್ರಿಟರಿಗಳಾಗಿ ಹಂಗಾಮಿಯಾಗಿ ನೇಮಕ ಹೊಂದಿರುವರು.

ಮಲಬಾರಿನ ಡಿಸ್ಟ್ರಿಕ್ಟ ಮೆಡಿಕಲ್ ಮತ್ತು ಸೆನಿಟರಿ ಆಫೀಸರ ಮತ್ತು ಲುನೆಟಿಕ್ ಎಸ್ಯಾಲಮಿನ ಸುಪರಿಂಟೆಂಡೆಂಟರಾದ ಲೆಫ್ಟನೆಂಟ ಕರ್ನೆಲ್ ಟಿ. ಯಸ್. ರೋಸ್‌ರವರು ರಜೆಯನ್ನು ಹೊಂದಿರುವುದರಿಂದ ನಮ್ಮ ಜಿಲ್ಲೆಯವರಾದ ಮ. ರಾ. ಚೋಲಪಾಡಿ ರಾಮ ಕಾಮತ್ ಯಮ್. ಬಿ. ಸಿ. ಯಮ್‌ರವರು ಈ ಹುದ್ದೆಗೆ ನೇಮಕ ಪಟ್ಟಿರುತ್ತಾರೆ.

ಇಲ್ಲಿಯ ಗವರ್ನಮೆಂಟ ಕಾಲೇಜಿನಲ್ಲಿ ಇಂಟರಮೀಡಿಯೇಟ ಕ್ಲಾಸಿಗೆ ನೆಚರಲ್ ಸಾಯನ್ಸನ್ನು ಒಪಶನಲ್ ಸಬ್‌ಜೆಕ್ಟ ಆಗಿ ಕಲಿಸುವ ಏರ್ಪಾಡು ಮಾಡೋಣಾಗಿದೆ.

ನೊನ್ ಗಜೇಟೆಡ್ ಸರಕಾರಿ ನೌಕರರು ಕಾಸರಗೋಡಿನಲ್ಲಿ ಸಭೆಕೂಡಿದ ವೃತ್ತಾಂತವೂ ಸಭೆಯಲ್ಲಿ ಈ ಆಫೀಸರರಿಗೆ ಸಂಬಳವನ್ನು ಏರಿಸಿದ ವಿಷಯ ಇದಂಥ ಅನ್ಯಾಯವನ್ನು ಕುರಿತು ನಿರ್ಣಯಗಳೂ ಈ ದಿನವೇ ನಮ್ಮ ಬಳಿ ಬಂದು ತಪ್ಪಿದ್ದರಿಂದ ಇದನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲು ಆಗಲಿಲ್ಲ. ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ಓದಿರಿ! **ಹೊಸ ಪುಸ್ತಕ!** ಓದಿರಿ!

ಲೋಕಮಾನ್ಯ

ಬೆಲೆ] **ಬಾಳ ಗಂಗಾಧರ ಟಿಳಕ** [೨ ಆಣೆ.

ಲೋಕಮಾನ್ಯರ ಅತ್ಯಂತ ಹೃದಯಂಗಮವಾದ ಈ ಚರಿತ್ರವನ್ನು ಪ್ರತಿ ಒಬ್ಬರು ಅವಶ್ಯ ಓದಲೇ ಬೇಕು. ಬರೀ ೨ ಆಣೆಯ ಸ್ಟಾಂಪುಗಳನ್ನು ಕಳುಹಿಸುವವರಿಗೆ ಈ ಚಿಕ್ಕ ಪುಸ್ತಕವನ್ನು ಬುಕ್‌ಪೋಸ್ಟಿನಿಂದ ರವಾನಿಸುವೆವು.

ಪತ್ತೆ:—ವ್ಹಿ. ಎಸ್. ರಂಗ್ನೇಕರ[illegible],
[illegible]—[illegible],
[illegible]—[illegible].

[illegible]

...ಇದು ಅನೇಕ ಕೃಷಿಕರು [illegible] ಇಂಥ ಫಲದಾಯಕ ಗೊಬ್ಬರ [illegible] ದೊರೆಯುವುದು; ನೆಲವೂ ಸಂಪನ್ನ [illegible] ಅದುಕಾರಣ ಇದರ ಕಡೆಯ ಸುಲಭ ಉಪಾಯಕ್ಕೆ ಎಲ್ಲ ರೈತರು [illegible] ಗಳೆಂದು ಕೋರಬಹುದಾಗಿದೆ.

ಉತ್ತರ ಕಾನಡಾ ಜಿಲ್ಲೆಯ ಪರಿಷತ್ತು.

ಸರ್. ನಾರಾಯಣ ಗಣೇಶ ಚಂದಾವರಕರ ಇವರ ಭಾಷಣ.

(ಕಳೆದ ಸಂಚಿಕೆಯಿಂದ ಮುಂದುವರಿಸಿದುದು.)

[illegible] ಇಡೀ ಹಿಂದುಸ್ಥಾನಕ್ಕೆ ಸಾಮಾನ್ಯವಾದ ಪ್ರಶ್ನೆಯನ್ನು ಪರ್ಯಾಲೋಚಿಸಿದೆವು. ಇನ್ನು ಈ ಜಿಲ್ಲೆಯ ವಿಶಿಷ್ಟ ಪ್ರಶ್ನೆಗಳ ಕಡೆಗೆ ತಿರುಗುವೆನು. ನೀವು ನನ್ನನ್ನು ಈ ಪರಿಷತ್ತಿನ ಅಧ್ಯಕ್ಷರನ್ನಾಗಿ ಅಕಸ್ಮಾತ್ತಾಗಿ ಆರಿಸಿದರಿಂದ ಈ ಜಿಲ್ಲೆಗೆ ಸಂಬಂಧಿಸಿದ ರಾಜಕೀಯ ವಿಷಯಗಳ ಬಗ್ಗೆ ವಿಚಾರ ಮಾಡಲಿಕ್ಕೂ, [illegible] ನಿಮಗೆಲ್ಲ ಸಮಾಧಾನಕರವಾಗುವಂತೆ ಅವುಗಳನ್ನು ಚರ್ಚಿಸಲಿಕ್ಕೂ ನನಗೇನು ಹೊತ್ತು ದೊರೆಯಲಿಲ್ಲ. ಆದಕಾರಣ ನಾನು ಅವುಗಳ ದಿಗ್ದರ್ಶನವನ್ನಷ್ಟು ಮಾಡುವೆನು. ಪರಿಷತ್ತಿನ ಈ ಅಧಿವೇಶನದಲ್ಲಿ ಮುಂದೆ ಬರುವ [illegible] ಗಳೂ ಅವುಗಳ ಮೇಲೆ ಮಾತಾಡುವ ವಕ್ತಾರೂ, "ಕಾನಡಾಜಿಲ್ಲೆಯ [illegible] ಕೊರತೆಗಳು ಯಾವ, ಸಂಕಟಗಳು ಏನಿವೆ" ಎಂಬುದನ್ನೆಲ್ಲ ವಿಶದ [illegible]

[illegible]

ಆದರ ಕಳವಾದ ಸಂಪತ್ತಲ್ಲ. ಆ ದೇಶದ ಜನರ ಸದ್ಗುಣಗಳೇ ನಿಜವಾದ ಸಂಪತ್ತಾಗಿರುವುವು. ಆ ದೇಶದ ಜನರು ದೇವರ ಮತ್ತು ಮಾತೃಭೂಮಿಯ ಸೇವೆಗೆಂದು ದುಡಿಯುವಾಗ, ಅಪಯಶದ ಮತ್ತು ನಿರಾಶೆಯ ಎಷ್ಟೋ ಪ್ರಸಂಗಗಳು ಬಂದರೂ ಇಂಥ ಪ್ರಸಂಗಗಳಿಂದ ಎದೆಗುಂದದೇ ಇಂಥ ಎಡರುಗಳಿಂದಲೆ ಮತ್ತಷ್ಟು ಹೆಚ್ಚು ಪ್ರಯತ್ನಗಳು ಮಾಡಿರೆಂದು ಹೇಳುವ ಬೋಧನೆಗಳಿಂದ, ನನಸಿ, ನಿರಾಶೆಪಡದೇ, ಆತ್ಮವಿಶ್ವಾಸದಿಂದ ದೇಶಹಿತಕಾರ್ಯವನ್ನು ಸಾಗಿಸುತ್ತಿರುವರೋ, ಅವರಲ್ಲಿ ಇವೆಲ್ಲ ಸದ್ಗುಣಗಳಿದ್ದರೆ ಇವೇ ಅವರ ನಿಜವಾದ ಸಂಪತ್ತು. ಇಂಥ ಸದ್ಗುಣಗಳೇ ನಮ್ಮ ಸಂಪತ್ತಾಗಿರಲಿ! ಉತ್ಸಾಹದಿಂದ, ಶೀಲವಂತರಾದ ಜನರೂ, ಸ್ಥಿರಬುದ್ಧಿಯ ಧೈರ್ಯವಂತರಾದ ಒಕ್ಕಲಿಗರೂ, ಎಲ್ಲ ಜನಸ್ತೋಮದ ನಿಜವಾದ ಹಿತಕ್ಕೆಂದು ಅವಿಶ್ರಾಂತ ದುಡಿಯುವ ದೇಶಸೇವಕರೂ ನಿಮ್ಮಲ್ಲಿ ದಿನೇ ದಿನೇ ಬೆಳೆಯುವಂತೆ ಕಾನಡಾ ಜಿಲ್ಲೆಯ ಈ ಮೊದಲನೇ ಪರಿಷತ್ತು ನಿಮಗೆ ಸಹಾಯ ಮಾಡಲಿ!

(ಸಮಾಪ್ತಿ.)

ಪತ್ರ ವ್ಯವಹಾರ.

[illegible]

[illegible] ನಿಮ್ಮ ಪತ್ರಿಕೆಯ ಪ್ರೋತ್ಸಾಹಕರಾಗಿ ನ್ಯಾಯ ಬಲ್ಲ ಕೆಲವರು ಬಾಕಿ ಇನ್ನೂ ವಾದಿಸಿದ್ದಲ್ಲಿ ಗುರುಗಳ ಹತ್ತಿರ [illegible] ನಡೆಸಿಕೊಳ್ಳುವುದಾಗಿ [illegible] ಯಲ್ಲಿ ಅರ್ಜಿ ನ್ಯಾಯ ಭಾಗದಲ್ಲಿ [illegible] ಸರ್ವರ ಉದಾಹರಣೆ [illegible] "ಯಥಾ ಪೂರ್ವಂ" ಎಂಬ ವ್ಯವಸ್ಥೆಯಿಲ್ಲದೆ ಬೇಜಾರ ಪಡುತ್ತಾರೆ. ದೃಗ್ಗಣಿತವೇ ಆಗಬೇಕಾಗಿ [illegible] ಯಲ್ಲಿ ಕಾಣುತ್ತದೆ. ಹೀಗಿರಲು, ನವೀನ ದೃಗ್ಗಣಿತವನ್ನು ಪ್ರಚಾರ ಪಡಿಸುವ ವಿಷಯದಲ್ಲಿ ಇವರ ಚರಿತ್ರವನ್ನು ಕುರಿತು ಹೆಚ್ಚು ಸಂತೋಷ ಪಡುತ್ತೇನೆ. ಕರ್ಣಾಟಕ ದೇಶೀಯರೆಲ್ಲರೂ ಕಾಲೋಚಿತ ತಿಳಿದು ಇವರನ್ನು ಮುಂದೆ ಕೂಡ ಉದಾರ್ಯದಿಂದ ಪ್ರೋತ್ಸಾಹ ಪಡಿಸುವರೆಂತ ನಂಬುತ್ತೇನೆ. ಇಂತಿ.

ತಾ. 30-5-1917.
ಮು. ತಿರುವಾಂಕೂರು.

ದಂಡ ತೀರ್ಥ ಮಠದ ರಾಮಕೃಷ್ಣ
ಜೋಯಿಸ. ತಿರುವಾಂಕೂರು ಗವರ್ನ
ಮೆಂಟ್ ಪಂಚಾಂಗಕರ್ತ.

ಸ್ವಾಮಿ,

ತಮ್ಮ ಪತ್ರಿಕೆಯಲ್ಲಿ ನ್ಯಾಯವಿಧಾಯಕ ಸಭೆಗೆ ಹಲವು ಮಂದಿ ಉಮೇದ್ವಾರರು ಇರುವುದನ್ನು ಪ್ರಕಟಿಸಿರುವಿರಿ. ಆದರೆ ಕೆಲವು ಜಾತಿಗಳ ಪ್ರತಿನಿಧಿಗಳು ಇನ್ನೂ ತಮ್ಮ ಅಭಿಪ್ರಾಯವನ್ನು ಪ್ರಕಟಿಸಲಿಲ್ಲ, ಇದರ ಕಾರಣ ತಿಳಿಯಲಿಲ್ಲ. ನಮ್ಮ ಜಿಲ್ಲೆಯಲ್ಲಿ ಬಿಲ್ಲವರು ಹಿಂದುಳಿದ ಜಾತಿಯವರಾಗಿದ್ದು ಈಗಲೂ ಹಳ್ಳಿ ಹಳ್ಳಿ ಮುಟ್ಟಬಾರದವರೆಂದು ಭಾವಿಸಲ್ಪಡುತ್ತಾರೆ. ಹಳ್ಳಿ ಸಾಲೆಗಳಲ್ಲಿ ಅವರು [illegible] ಮೇಲು ಜಾತಿಯವರೆನ್ನಿಸುವವರ ಒಟ್ಟಿಗೆ ಅವರನ್ನು ಕೂಡುಕೊಳ್ಳುವುದಿಲ್ಲ. ಅಬಕಾರಿ ಇಲಾಖೆಯ ಉಪದ್ರದಿಂದ ಅವರ ವೃತ್ತಿಗೂ ಹಲವು ತೊಂದರೆಗಳು ಇವೆ. ಈ ಹಿಂದುಳಿದ ಜಾತಿಯವರು ಏಳಿಗೆಯಾಗಬೇಕಾದರೆ ಅವರ ಪ್ರತಿನಿಧಿಗಳು ನ್ಯಾಯವಿಧಾಯಕ ಸಭೆಯಲ್ಲಿ ಇದ್ದೇ ತೀರಬೇಕು. ಈ ಜಾತಿಯಲ್ಲಿ ರಾ! ಸಾಂತಪ್ಪ ಸುವರ್ಣ ಇವರು ಬಿ. ಎ. ಬಿ. ಎಲ್. ಪಾಸಾಗಿ ಉತ್ತಮ ವಕೀಲರಾಗಿಯೂ ಇರುವುದಲ್ಲದೆ ಜಾತಿಯ ಅಭಿವೃದ್ಧಿಗಾಗಿ ಪ್ರಯತ್ನ ಪಡುತ್ತಿದ್ದಾರೆ. ಇವರು ಈ ಜಾತಿಪರವಾಗಿ ಯಾಕೆ ನ್ಯಾಯವಿಧಾಯಕ ಸಭೆಯ ಮೆಂಬರರಾಗಬಾರದು?

ಇವರು ಇನ್ನೂ ಚಿಕ್ಕವಯಸ್ಸಿನವರೆಂದು ಎಣಿಸುವುದಾದರೆ ರಾ! ಕೊಯಿಗೆ ಕೊರಗಪ್ಪನವರು ವ್ಯಾಪಾರ ಸಹವಾಸದಲ್ಲಿಯೆ ಬೆಳೆದವರಾಗಿ ಬಂದರು ಮೇಯರ ಮ್ಯುನಿಸಿಪಾಲ್ಟಿ, ತಾಲೂಕು ಬೋರ್ಡು ಮೊದಲಾದ, ಡಿಸ್ಟ್ರಿಕ್ಟ ಕಮಿಟಿಯ ಮೆಂಬರು, ದೇವಸ್ಥಾನದ ಆಡಳಿತದಾರ ಮುಂತಾದ ಹಲವು ಗೌರವದ ಸ್ಥಾನಗಳನ್ನು ಸೇರಿ ಕೆಲಸ ನಡಿಸಿದವರು. ಇವರೂ ಇಂಗ್ಲಿಷಿನ ಅಭ್ಯಾಸ ವಿಶೇಷವಿಲ್ಲದವರೆಂದಾದರೆ ತಿಸ್ಸಾರೆ ಬದ್ದರಾಗಿ ಪೆನ್ಸನ್ ಹೊಂದಿ ಕೆಲವು ಕಾಲದವರೆಗೆ ಮ್ಯುನಿಸಿಪಲ್ ಚೆಯರ್ಮನರಾಗಿಯೂ ಇದ್ದ ರಾಜಕೀಯ ಮತ್ತು ಸಾಮಾಜಿಕ ವಿಷಯಗಳ [illegible] ಬುದ್ಧಿಯೂ ಇರುವ ದಿವಾನಬಹದ್ದೂರ ಮುಂಡಪ್ಪ ಬಂಗೇರರು ಯಾಕೆ ನಿಲ್ಲಬಾರದು? ಇಂಥ ಜನರು ತಮ್ಮ ಅನುಭವವನ್ನು ತಮ್ಮ ಜಾತಿಪರಸ್ಪರ ಪರವಾಗಿಯೂ ಹಾಗೆಯೇ ಜಿಲ್ಲೆಯ ಪರವಾಗಿಯೂ ಉಪಯೋಗಿಸುವ ಸಮಯ ಬಂದಾಗ ಸುಮ್ಮನೆ ಇದ್ದರೆ ಈ ಜಾತಿಯ ಅಭಿವೃದ್ಧಿ ಆಗುವ ಸಮಯ ಯಾವುದು?

ಹಳ್ಳಿ ಬಿಲ್ಲವ.

Mr. ALEX ALVAREZ Dentist,

OF MANDALAY, UPPER BURMA.

Will attend patients here for the following in Particular:—

Charges Moderate.

1. Painless extraction of teeth. 2. Making of false teeth. 3. Filling the teeth with silver, gold, porceline. 4. Gold bridge and Crowns. 5. Porceline Crowns. 6. Cleaning the teeth. 7. Pyorrhoea treatment.

Can be consulted at:—

The Electro Homoeopathic Dispensary, *Hampankatta, MANGALORE.*

ಮಿ. ಅಲೆಕ್ಸ ಅಲ್ವರಿಸ್ ದಂತವೈದ್ಯ.

[illegible]

ದಿ. ಕೆನರಾ ಎಂಟರ್‌ಪ್ರೈಜ್, ಲಿಮಿಟೆಡ್.

ಪುತ್ತೂರು, ದಕ್ಷಿಣ ಕನ್ನಡಾ.

(1913ನೇ [illegible] ಇಂಡಿಯನ್ ಕಂಪೆನಿಗಳ ಆಕ್ಟಿಗನುಸಾರವಾಗಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ.)

ಮೂಲಧನ ರೂಪಾಯಿ 200,000—ರೂಪಾಯಿ 25ರ 8,000 ಹಿಸೆಗಳಿಗೆ ವಿಭಾಗಿಸಲ್ಪಟ್ಟಿರುತ್ತದೆ. ಹಿಸೆಗಳನು ಮನವಿ ಮೂಲಕ [illegible] ತೆಗೆದುಕೊಳ್ಳಬಹುದು.

ಮನವಿಯೊಂದಿಗೆ ಪ್ರತಿ ಹಿಸೆಗೆ ರೂಪಾಯಿ 5 ಮತ್ತು ಪ್ರವೇಶಫೀಸು ಆಣೆ 4 ಅಂತು ರೂ 5—4—0, ಮನವಿ ಅಂಗೀಕರಿಸಿದ ಬಳಿಕ ಕೊಡೋಣಾಗುವ ಎಲೋಟ್‌ಮೆಂಟ್ ನೋಟೀಸಿನ ವಾಯಿದೆಗೆ ರೂ 5 ಕೊಡತಕ್ಕದ್ದು ಬಾಕಿ ರೂ. 15ನ್ನು ಸರಿ ಮಾಡಿ 3 ಕಂತುಗಳಿಂದ ಕೇಳಿದ ಹಾಗೆ ಪಾವತಿ ಮಾಡತಕ್ಕದ್ದು. ಆದರೆ ಒಂದು ಕಂತು ಕೇಳಿದ ಬಳಿಕ ಕನಿಷ್ಠಪಕ್ಷಕ್ಕೆ 2 ತಿಂಗಳ ಅವಧಿಗೆ ಮುಂಚಿತವಾಗಿ ಇನ್ನೊಂದು ಕಂತು ಕೇಳೋಣಾಗಲಿಕ್ಕಿಲ್ಲ.

ಪ್ರೊಸ್ಪೆಕ್ಟಸಿನ ಬದಲಾಗಿ ಜೊಯಿಂಟ್ ಸ್ಟಾಕ್ ಕಂಪೆನಿಗಳ ಅಸಿಸ್ಟಾಂಟ್ ರಿಜಿಸ್ಟ್ರಾರರ ಬಳಿ ದಾಖಲು ಮಾಡಿದ ಸ್ಟೇಟ್‌ಮೆಂಟಿನಲ್ಲಿ ಕಾಣಿಸಿದ ಪ್ರಕಾರ ರೂ. 20,000ಕ್ಕೆ ಸರಿಯಾದ 800 ಹಿಸೆಗಳು ಈ ಮೊದಲೇ ಹಂಚಲ್ಪಟ್ಟಿರುತ್ತವೆ.

ಡ್ಯಾರೆಕ್ಟರರು

1. ಮ| ರಾ| ರಾ| ಉಳ್ಳಾಲ ಸಾಂತಯ್ಯ ಕಿಣಿ, ಅವರ್ಗಳ್ — ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಮಂಗಳೂರು
2. " " ಎಮ್. ನರಸಿಂಹ ಮುತ್ತುರ್ಭಂಡಾರಿ, " — ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ವ ಸಾಹುಕಾರ, ಮಂಗಳೂರು
3. " " ಎಮ್. ಮುಡ್ಲಗಿರಿ ಪಾಂಡುರಂಗ ಪೈ, " — ಲೇಂಡಿಂಗ್ ವ ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ವ ಸಾಹುಕಾರ, ಮಂಗಳೂರು
4. " " ಎಚ್. ಕೊರಗಪ್ಪ, " — ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ಮತ್ತು ಒನರರಿ ಬೆಂಚ್ ಮೆಜಿಸ್ಟ್ರೇಟ್, ಮಂಗಳೂರು
5. " " ಮಂಜೇಶ್ವರ ಜನಾರ್ಧನ ಭಟ್, " — ತಾಲೂಕ. ಬೋರ್ಡ್ ಮೆಂಬರ್ ವ ಸಾಹುಕಾರ ಪುತ್ತೂರು
6. " " ಎಚ್. ಅನಂತ ಕಾಮತ್, — ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಪುತ್ತೂರು
7. " " ಅರಿಯಡ್ಕ ಸುಬ್ಬಯ್ಯಶೆಟ್ಟಿ, " — ವರ್ಗದಾರ, ಅರಿಯಡ್ಕ
8. " " ಕೊರಕೆ ಎಲಿಯಣ್ಣ, " — ವರ್ಗದಾರ ಮತ್ತು ಸಾಹುಕಾರ ಪುತ್ತೂರು
9. " " ಎ ಗೋವಿಂದ ಶೆಣೈ, " — ಮೆನೇಜಿಂಗ್ ಡೈರೆಕ್ಟರ್, ಪುತ್ತೂರು

ಬೇಂಕರ್ಸ್

1. ಮೆದ್ರಾಸ್ ಬೇಂಕ್ ಮತ್ತು 2 ಕೆನರಾ ಬೇಂಕ್, ಲಿಮಿಟೆಡ್, ಮಂಗಳೂರು

ಲೀಗಲ್ ಎಡ್ವೈಸರರು

1. ಮ| ರಾ| ರಾ| ಎಚ್. ಗಣಪತಿರಾವ್, ಅವರ್ಗಳ್,—ಪ್ಲೀಡರ್, ಪುತ್ತೂರು
2. " " ಎಮ್. ಮಾಧವರಾವ್ " —ಬಿ ಎ, ಬಿ ಎಲ್, ಪ್ಲೀಡರ್, ಮಂಗಳೂರು

ರಿಜಿಸ್ಟ್ರಿ ಮಾಡಲ್ಪಟ್ಟ ಆಫೀಸು

"ಶ್ರೀ ವರದೇಂದ್ರ ಹೋಲ್" ಪೋಸ್ಟ್ ಆಫೀಸ್ ಬಳಿ, ಪುತ್ತೂರು

ಸೂಚನಾ ಪತ್ರ

ಉದ್ದೇಶಗಳು—(1) ಬೇಂಕಿಂಗ್ ಯಾನೆ ಹಣದ ಲೇವಾದೇವಿ ಮಾಡುವದು (2) ವ್ಯಾಪಾರದ ದಲಾಲಿ ವ ಏಜನ್ಸಿ ಮಾಡುವದು (3) ಕೈಗಾರಿಕೆ ಕಸಬುಗಳನ್ನು ಮಾಡುವದು (4) ವ್ಯಾಪಾರ ಮಾಡುವದು (5) ಕೃಷಿ ಮಾಡುವದು (ಉಪಯುಕ್ತವಾದ ಕೈಗಾರಿಕೆ ಸಮೇತ) (6) ಲಾಭಕರವೆಂತ ಕಂಡುಬರುವ ಇತರ ಯಾವ ಉದ್ಯೋಗವನ್ನಾದರೂ ಮಾಡುವದು

(1) ಪುತ್ತೂರಿನಲ್ಲಿ ಒಂದು ಬೇಂಕು ಸ್ಥಾಪಿಸಲ್ಪಡುತ್ತಿದೆ
(2) ಒರುವ ವರ್ಷ ಒಂದು ದಲಾಲಿ ಭಂಡಸಾಲೆ ತೆರಿಯುವ ಆಲೋಚನೆ ಇದೆ
(3) ಹಿಟ್ಟು ತಯಾರಿಸುವ ಕಾರ್ಖಾನೆಯು ಪಶ್ಚಿಮ ಘಟ್ಟಾವಳಿಯಲ್ಲಿ ಬೊಂಬಾಯಿ ವಿನಹಾ ಬೇರೆ ಎಲ್ಲಿಯೂ ಇರುವದಿಲ್ಲ ಆದಕಾರಣ ಅಂಥಾದ್ದೊಂದು ಕಾರ್ಖಾನೆಯನ್ನು ಸದ್ಯದಲ್ಲಿಯೇ ಮಂಗಳೂರಿನಲ್ಲಿ ಸ್ಥಾಪಿಸುವ ಆಲೋಚನೆ ಇದೆ

ಮಿಕ್ಕ ಉದ್ದೇಶಗಳನ್ನು ನೆರವೇರಿಸುವರೆ ಹೆಚ್ಚು ದ್ರವ್ಯಾನುಕೂಲತೆಯು ಅವಶ್ಯಕವು. ಮಾತ್ರವಲ್ಲ, ಅವುಗಳಲ್ಲಿ ಹೆಚ್ಚು ತೊಂದರೆಗಳು ವ ನಷ್ಟ ಸಂಭವ ಕೂಡಾ ಇರಬಹುದಾದ ಕಾರಣ ಅವುಗಳು ಕೆಲವು ವರ್ಷಗಳ ತನಕ ಪ್ರಾರಂಭಿಸಲ್ಪಡಲಾರವು

ಮುನಾಫ

ಪ್ರಥಮ ವರ್ಷದಲ್ಲಿ ಹೆಚ್ಚಿನ ಸಮಯವು ಹಿಸೆಗಳ ಸಂಪಾದನೆಯಲ್ಲಿಯೇ ಕಳೆದುಹೋಗುವದರಿಂದ ಕಂಪನಿಗೆ ಸಾಕಷ್ಟು ಮುನಾಫ ಉಳಿಯುವರೆ ಆಸ್ಪದವಿಲ್ಲ. ಪರಂತು ಸದ್ಯದಲ್ಲಿಯೇ ಪ್ರಾರಂಭಿಸಲಿಕ್ಕಿರುವ ಉದ್ಯೋಗಗಳು (ಅಂದರೆ—ಬೇಂಕು, ಹಿಟ್ಟಿನ ಕಾರ್ಖಾನೆ ಮತ್ತು ದಲಾಲಿ ಭಂಡಸಾಲೆ, ನಷ್ಟಕ್ಕೆ ಎಡೆಯಿಲ್ಲದ ಮುನಾಫೆಯ ಮೂಲಗಳಾಗಿರುವದರಿಂದ ಒರುವ ವರ್ಷದಲ್ಲಿ ಮುನಾಫೆಯು ಹಣದಿಂದ ಕ್ಷೇಮನಿಧಿಗೋಸ್ಕರ ತಕ್ಕ ಅನುಕೂಲತೆಯನ್ನು ಮಾಡಿಯೂ ಸಾಕಷ್ಟು ಡಿವಿಡೆಂಡು ಹಂಚಲು ಸಾಧ್ಯವಾದೀತೆಂತ ಕಂಪೆನಿಯ ಡ್ಯಾರೆಕ್ಟರರು ಅಭಿಪ್ರಾಯಪಡುತ್ತಾರೆ.

ಹಿಸೆಗಳ ಬಗ್ಗೆ ಮಾಡತಕ್ಕ ಮನವಿ

ಮನವಿ ಬಗ್ಗೆ ಛಾಪಾ ಫೋರ್ಮುಗಳು ಕ್ರಯ ವಿನಹಾ ಮೇನೆಜಿಂಗ್ ಡ್ಯಾರೆಕ್ಟರರಿಂದ ಒದಗಿಸಲ್ಪಡುವವು. ಮನವಿಗಳ್ ಫೀಸು ಸಮೇತ ಅವರ ಬಳಿಗೆ ಕಳುಹಿಸಲ್ಪಡತಕ್ಕದ್ದು. ಯಾದಾಸ್ತು ಮತ್ತು ಕ್ರಮಗಳ ಪುಸ್ತಕವನ್ನು ಕಂಪೆನಿಯ ಆಫೀಸಿನಲ್ಲಿ ಕೆಲಸ ಮಾಡುವ ದಿವಸಗಳಲ್ಲಿ ಯಾರೂ ನೋಡಿಕೊಳ್ಳಬಹುದು ಹಿಸೆಗಳನ್ನು ಪಡಕೊಂಡವರು ಒಂದು ರೂಪಾಯಿ ಕೊಟ್ಟು ಅವುಗಳ ಪ್ರತಿಯನ್ನು ಸಹಾ ಕೊಂಡುಕೊಳ್ಳಬಹುದು ಮನವಿದಾರರು ಕಂಪೆನಿಯ ಯಾದಾಸ್ತು ಮತ್ತು ಕ್ರಮಗಳನ್ನು ಓದಿನೋಡಿ ಅವುಗಳ ಅರ್ಥವನ್ನು ಸರಿಯಾಗಿ ಮಾಡಿಕೊಂಡಿದ್ದಾರೆಂತ ತಿಳಕೊಳ್ಳೋಣಾಗುವದು

25 ಹಿಸೆಗಳನ್ನು ಪಡಕೊಂಡ ಮೆಂಬರನು ಡ್ಯಾರೆಕ್ಟರನಾಗಲಿಕ್ಕೆ ಅರ್ಹನಾಗಿರುತ್ತಾನೆ

☞ ಎಲ್ಲಾ ಕಾಗದಪತ್ರಗಳನ್ನು ಮೇನೆಜಿಂಗ್ ಡ್ಯಾರೆಕ್ಟರರ ವಿಳಾಸಕ್ಕೆ ಕಳುಹಿಸಿಕೊಡಬೇಕು

ಪುತ್ತೂರು,
13—3—1920.

A. GOVINDA SHENOY,
Managing Director

ಅಪೂರ್ವ ಸಂದರ್ಭ.

ಅಕ್ಷಲು ಹಿಂದಿನ ಅಭ್ಯಾಸದಿಂದ ಶಿಕ್ಷಣ ಮೂಲಧನವಿಲ್ಲದೇನೇ ಓದುಬಾರದವರಾದರೂ ಕೇವಲ ಹಳ್ಳಿಗರಾದ್ದು [illegible] ಜೀವನ ವೃತ್ತಿಯಲ್ಲಿ ಅನುಕೂಲವಾಗುವ ಹೊಲಿಗೆ ವೃತ್ತಿಯು ಎಲ್ಲಾ ತರದ ತಿಕ್ಷಣವನ್ನು ಅತ್ಯಾಧುನಿಕ ಶಾಸ್ತ್ರೀಯರೀತ್ಯಾ ಕಲಿಯುವವರಿಗೆ ಅನುಕೂಲವಾದ ಸಮಯ ವ ಶ್ರೇಣಿಗಳಲ್ಲಿ ಸುಲಭ ದರಗಳಲ್ಲಿ ಕಲಿಸುವ ಏರ್ಪಾಡು ನಡೆಯುತ್ತಿರುವದು. ಮಾಹಿತಿ ಪತ್ರಗಳನ್ನಪೇಕ್ಷಿಸುವವರು ನಮ್ಮಲ್ಲಿ ವಿಚಾರಿಸಲಿ ಅಥವಾ ಅರ್ಜಿ ಸ್ಟಾಂಪು ಸಮೇತ ನಮಗೆ ಬರೆದಲ್ಲಿ ಕಳುಹಿಸಿ ಕೊಡುವೆವು.

M. Anantha Prabhu,
The Tailoring House and School of Scientific Tailor's Cutting,
MANGALORE, SOUTH KANARA.

ರೇಷ್ಮೆ ಪಂಚೆ, ಆಟೋಮೋಹಿನಿ ಸೆಂಟ್

ಈ ನಶ್ಯೆಯಲ್ಲಿ ಕಂಡ ಇಂಕಿ ಅದ್ಭುತ ಬರೆಯುವ ಫೌಂಟನ್ ಪೇನಾ ಇದಕ್ಕೆ ಕ್ಯಾರೆಟ್ ಭಂಗಾರದ ಮುತ್ತು ಹಾಕಿರುತ್ತೆ ಇದರಿಂದ ಬರೆಯುವದರಿಂದ ಅಕ್ಷರಗಳು ಮುತ್ತುಗಳ ಹಾಗೆ ಬರೆಯುವದು. ಈ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೇಷ್ಮೆ ಪಂಚೆ, ಆಟೋಮೋಹಿನಿ ಸೆಂಟ್ ಇನಾಂ ಸಹಿತ ರೂ. ೧—೪—೦,

D. Q. LINGAM & Co.,
No. 8, Kumarappa Naidu Street,
Mint Buildings,
Post. MADRAS.

ಶಾಲಿವಾಹನಶಕ ೧೮೪೨ನೆಯ ರೌದ್ರಿ ಸಂದ ಉತ್ತರಾಯಣಂ ಆಷಾಢ ಶು| ೧೦, ಶನಿವಾರದಿಂದ ರೌದ್ರಿ ಸಂ| ಆಷಾಢ ಶು| ೧೬ (ಉತ್ತರಾಯಣಂ) ಶುಕ್ರವಾರದ ವರೆಗಿನ ಪಂಚಾಂಗ.

(೧೯೨೦ ನೆಯ ಜೂನ್: ವೃಷಭ ಮಾಸ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನ	ಸೂರ್ಯ ಉ.	ಅಸ್ತ.
						ಮಿ.		
26	ಶನಿ	೧೦	೨ ೨೩	ಸ್ವಾತಿ	೪೩-೫೦	೧೨	6-8	6-58
27	ರವಿ	೧೧	೪ ೫೩	ವಿಶಾಖಾ	೪೮-೨೫	೧೩	6-8	6-58
28	ಸೋಮ	೧೨	೮ ೨೮	ಅನುರಾಧಾ	೫೪ ೧೬	೧೪	6-8	6-58
29	ಕುಜ	೧೩	೧೩. ೦	ಜ್ಯೇಷ್ಠಾ	೬೦ ೦	೧೫	6 9	6 58
30	ಬುಧ	೧೪	೧೭ ೫೦	ಜ್ಯೇಷ್ಠಾ	೦ ೧೬	೧೬	6 9	6-59
1	ಗುರು	○	೨೨ ೪೬	ಮೂಲಾ	೬ ೫೦	೧೭	6 9	6 59
2	ಶುಕ್ರ	೧	೨೭ ೧೪	ಪೂ ಷಾ	೧೨ ೫೮	೧೮	6 9	6-59

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಮೇ)

Date ತಾರೀಖು	Temperature ಉಷ್ಣ (ತಾವ) Maximum ಅಧಿಕತಮ	Minimum ಅಲ್ಪತಮ	Rainfall ಮಳೆ ದಿನದ ಮಳೆ	ಎಪ್ರಿಲ್ ೧ರಿಂದ
18	80—6	75—4	1—54	
19	82—9	73—3	4—00	
20	84—2	74—8	1—80	
21	87—9	75—8	0—64	
22	88—4	74—7	1—70	
23	82—0	73—4	2—63	—
24	86—9	75—8	0—51	47—81

ಮಂಗಳೂರಿನ ಪೇಟೆ ಧಾರಣೆ

ಜಿನಸು	ಇಂದ	ವರೆಗೆ
	ರೂ. ಆ.	ರೂ. ಆ.
ಸುಗ್ಗಿ ಅಕ್ಕಿಮುಡಿ ಒಳ್ಳೆ	8—14	9—8
ಗುಸ್ತು ,,	8—4	8—8
ರಾಶಿ ಮುಡಿ ಒಳ್ಳೆ	7—13	8—2
ಅವ್ವಲ್ ಬೆಳ್ತಿಗೆ ,,	10—4	10—5
ಗುಡ್ಡು ಬೆಳ್ತಿಗೆ	9—0	9—4
ರಂಗೂನ ಬೆಳ್ತಿಗೆ ಗೋಣಿ ಒಳ್ಳೆ	15—8	16—0
ಗೋದಿ ಗೋಣಿ ಒಳ್ಳೆ	25—0	27—8
ಹುರುಳಿ ಗೋಣಿ ಒಳ್ಳೆ	13—8	14—8
ಕಡಲೆ ಗೋಣಿ ಒಳ್ಳೆ	17—0	18—8
ತೊಗರಿ ಗೋಣಿ ಒಳ್ಳೆ	—	20—0
ತೊಗರಿಬೇಳೆ ಗೋಣಿ ಒಳ್ಳೆ	30—0	34—0
ಉದ್ದು ಗೋಣಿ ಒಳ್ಳೆ	18—8	19—8
ಹೆಸರು ಗೋಣಿ ಒಳ್ಳೆ	18—0	18—8
ಊರು ಬೆಲ್ಲ ಖಂಡಿ ಒಳ್ಳೆ	105—0	110—0
ಉಪ್ಪು ಗೋಣಿ ಒಳ್ಳೆ	4—12	5—6
ಕೊಬ್ಬರಿ ಖಂಡಿ ಒಳ್ಳೆ	116—0	125—0
ಕೊಬ್ಬರಿ ಹಿಂಡಿ ಖಂಡಿ ಒಳ್ಳೆ	36—8	37—0
ಎಳ್ಳಿಂಡಿ ಖಂಡಿ ಒಳ್ಳೆ	50—0	55—0
ಕೊಬ್ಬರಿ ಎಣ್ಣೆ ಮುಣ ಒಳ್ಳೆ	10—0	11—8
ಎಳ್ಳೆಣ್ಣೆ ಮುಣ ಒಳ್ಳೆ	11—0	11—4
ಹರಳೆಣ್ಣೆ ಪೆಟ್ಟಿಗೆ ಒಳ್ಳೆ	9—4	9—6
ಮೋರಿಸ ಸಕ್ಕರೆ ಮುಣ ಒಳ್ಳೆ	12—0	12—8
ಊರ ಮೆಣಸಿನ ಕಾಯಿ ಮುಣ ಒಳ್ಳೆ	8—8	9—8
ಸಾಸಿವೆ ಮುಡಿ ಒಳ್ಳೆ	10—0	10—8
ಕೊತ್ತುಂಬರಿ ಮುಡಿ ಒಳ್ಳೆ	6—0	6—4
ಕಾಫಿ ಖಂಡಿ ಒಳ್ಳೆ	245—0	250—0
ಬೆಗೋಟು ಅಡಿಕೆ ಖಂಡಿ ಒಳ್ಳೆ	105—0	110—0
ಹಳೆ ಬೆಗೋಟು	95—0	100—0
ಕಾಳುಮೆಣಸು ಖಂಡಿ ಒಳ್ಳೆ	150—0	155—0
ಯಾಲಕ್ಕಿ ಮುಣ ಒಳ್ಳೆ	25—0	30—0
ಗೇರುಬೀಜ ಮುಡಿ ಒಳ್ಳೆ ...	3—11	3—12
ಕಬ್ಬಿಣ ಖಂಡಿ ಒಳ್ಳೆ ...	100—0	120—0
ಹಾಂಟ್ಸ್ ಕಗಸು ಮುಣ ಒಳ್ಳೆ ...	24—4	25—0
ಹಾಂಟ್ಸ್ ಸಾಪ್ಸ್‌ಗಳು ಮುಣ ಒಳ್ಳೆ ..	32—0	34—0
ಬೀಡ ಚಿಪ್ಸ್ ಸೀರು ಒಳ್ಳೆ ...	31—8	
ಹಿಮ್ಮ್ಯಾಕ ಕಗಸು ಮುಣ ಒಳ್ಳೆ ...	24—0	25—0

[illegible] ಬ್ಯಾಂಕ್ ಲಿಮಿಟೆಡ್, ಮಂಗಳೂರು.

[illegible] JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
[illegible] fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ [illegible] ಮೂಲಧನವು ರೂ. 300,000—0—0
[illegible] other sinking Funds „ 138772—0—2	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 138,772—0—2

THE BANK RECEIVES FIXED, CURRENT ACCOUNT, & SAVINGS BANK DEPOSITS.

[illegible] ಮತ್ತು ಚಾಲ್ತಿ ಠೇವಣಾತಿಗಳು, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು, ಪಡಕೊಳ್ಳಲಾಗುತ್ತವೆ.

For further particulars apply to the Secretary.

ವಿಶೇಷ ವರ್ತಮಾನದ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

[illegible] Bank Ltd.,
[illegible] 10th May 1920

K. Venkat Rao,
Secretary.

ಮೈಸೂರು ಊದುಬತ್ತಿಗಳು.

[illegible] ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ [illegible] ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ 12, 5, 3, 2-8 0, 1-0-0

ಅರಗಜ ಮತ್ತು ಬಿಲ್ಲೆಗಳು. ತೊಲ 1ಕ್ಕೆ ರೂ 3, 2, 1

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ ಇದಕ್ಕಿಂತಲೂ ಬೇರೆ ವಿಧವಾದ [illegible] ಇಲ್ಲ. ಟಿನ್ 1ಕ್ಕೆ 8 ಆಣೆ

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು ಶೀಸೆ 1ಕ್ಕೆ 6 ಆಣೆ

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ [illegible] ಸುವಾಸನೆಯಾಗಿ ತಯಾರಿಸಿರುತ್ತೆ 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ

ಲವೆಂಡರ್. ಶೀಸೆ 1ಕ್ಕೆ 1—4—0

[illegible] ವರ್ತನೆಯಾಗಿ ನಮ್ಮ ಸಾಮಾನುಗಳನ್ನು ಕರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ ಈ ಮೇ[illegible] ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ವಿಕರಿಗೆ ಸಿದ್ಧವಾಗಿರುತ್ತವೆ

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ವೈದ್ಯ ವಿದ್ಯ.

ಯಾವುದೊಂದು ವ್ಯಾಧಿಯು ಇಲ್ಲದೆ ಸುಖಸಂಪತ್ತು ಗಳೊಂದಿರಬೇಕಾದರೆ ಓದಿರಿ ವೈದ್ಯ ವಿದ್ಯ

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ ವಿಳಾಸವನ್ನು ತಿಳಿಸಿ ಮಾತ್ರಕ್ಕೆ ಬರುವದು

ವೈದ್ಯ ವಿದ್ಯ.

ವಿಳಾಸ — ರಾಜವೈದ್ಯ ನಾರಾಯಣಜಿ ಕೇಶವಜಿ,
27 ಜೈನ ಬಜಾರು ರೋಡು ಮದ್ರಾಸು

ಟಿಷ್ಯು ರೆಮಿಡಿಸ್

ಎಂ —

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು

1 ಕಲ್ಕೇರಿಯ ಫ್ಲೋರ್	5 ಕಾಲಿ ಮ್ಯೂರ್	9 ನಾಟ್ರಮ್ ಮ್ಯೂರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮಗ್ನೇಸಿಯ ಫೋಸ್	12 ಸಿಲಿಸಿಯ

ಕ್ರಯ			ರೂ ಆ ಪೈ
ಎರಡು ಡ್ರಾಮಿನ	D	ಸೈಜ್ ಸೀಸೆ ಒಂದರ	0—3—6
ನಾಲ್ಕು „	C	„ „ „	0—6—0
ಒಂದು ಔನ್ಸಿನ	A	„ „ „	0—12—0
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ			3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯ ಶಾಸ್ತ್ರ ಪುಸ್ತಕ ಸಮೇತ			10—0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು ಇದು ಮೇಲೆ ಹೇಳಿದ ಟಿಷ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾರಿಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ. ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಪಿ. ಫೆರ್ನಾಂಡಿಸ್,
ಎಲಕ್ಟ್ರೋ ಹೋಮಿಯೋಪತಿ ಡಿಸ್ಪೆನ್ಸರಿ, ಮಂಗಳೂರು.

ಕ್ರಯ ರೂ 1—8—0

ಪ್ರಶ್ನೋತ್ತರ

ಅಂಚೆ ವೆಚ್ಚ ಬೇರೆ

ಲೇಖ್ಯಬೋಧಿನಿ.

7ನೇ ಮುದ್ರಣ: ಅನೇಕ ಉಪಯೋಗ ಸಂಗತಿಗಳಿವೆ

ಕ್ಷೇಮ ಸಮಾಚಾರದ ಕಾಗದಗಳು —ಬಗೆಬಗೆಯಾದ [illegible] ಲೌಕಿಕ ವೈದಿಕ ಮರ್ಯಾದೆಗಳಿವೆ ಪತ್ರಗಳು ಬರೆಯುವ ವಿಧಾನ, ಕ್ರಯ, [illegible] ಬಿಲ್ಲು, ವ್ಯವಹಾಸನ, ಪಾರೀಖತ್ತು, ಗುತ್ತಿಗೆ, ಪಾಲುಗಾರಿಕೆ, ಹುಂಡಿ, [illegible] ಇವುಗಳ ಮಾದರಿಗಳು, ವಿಧಗಳು, ಸ್ಟಾಂಪು ರಿಜಿಸ್ಟ್ರೇಷನ್, ಸಿವಿಲ್ [illegible] ವಿಧಾನ—ಡಾಖಲ್ ನೋಟೀಸು, ದಾವ ಬರೆಯುವ ರೀತಿ, ಸ್ಮಾಲ್ [illegible] ಒಂಡಸರ್, ಅಪ್ಪೀಲು, ಸ್ಪೆಷಲ್ ಅಪ್ಪೀಲ್, ಅವುಗಳಿಗೆ [illegible] ಕೋರ್ಟು ಫೀ ಸ್ಟಾಂಪು, ರವೆನ್ಯೂ ಮುಂತಾದ ಪ್ರಾಮುಖ್ಯವಾದ ರಾಜ್ಯ [illegible] ಸಂಬಂಧಿಸಿದ ಎಲ್ಲಾ ಇಲಾಖೆಗೆ ಬರೆಯುವ ಅರ್ಜಿಗಳು; ಕ್ರಿಮಿನಲ್ [illegible] ವಿಧಾನ—ಅನೇಕ ಅರ್ಜಿಗಳ ಮಾದರಿಗಳು, [illegible] ಇದರಲ್ಲಿ ಅಡಗಿವೆ. [illegible] ಬೇಗ ಬರೆದು ತರಿಸಿಕೊಳ್ಳಿ ಕ್ರಯ ರೂಪಾಯಿ 1—8—0 ಅಂಚೆಯ ವೆಚ್ಚ ಬೇರೆ.

80-12]. ವಿಳಾಸ — "ಸವಿನುಡಿ" ಆಫೀಸು,
122, [illegible] ರೋಡ್, ಬೆಂಗಳೂರು ಸಿಟಿ.



[illegible] ಔಷಧವು

ಅರ್ಕುಶಫಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ [illegible] ರೋಗಕ್ಕೆ [illegible] [illegible] ಸಾವಿರ ಬಾಟಲಿಗಳು [illegible] ಮತ್ತು [illegible] ಅಕ್ಟೋಬರ್ ತಿಂಗಳಲ್ಲಿ [illegible] ಒಂದೇ ತಿಂಗಳಲ್ಲಿ [illegible] ಸಾವಿರ ಬಾಟಲಿಗಳು [illegible] ವರೆಗೆ [illegible] ದೊಡ್ಡ ಬಾಟಲಿಗಳು [illegible] ಸಾವಿರ ಬಾಟಲಿಗಳು ಖರ್ಚಾದವು, ಅಂದ ಮೇಲೆ ಈ ಔಷಧವು [illegible] ಅನುಭವಕ್ಕೆ ತಂದು [illegible] ಇದ್ದುದರಿಂದ ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರುವರು. ಈ ಆರೋಗ್ಯಬಿಂದು [illegible] ದೇಶಕ್ಕೆಲ್ಲಾ ಹೋಗಿ, ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವಷ್ಟು ರೋಗಗಳಿಗೆ ಉಪಯೋಗ ಆದವೆಂಬುದಕ್ಕೆ ಎಷ್ಟೋ [illegible] ಸರ್ಟಿಫಿಕೇಟುಗಳು ಸಹ ದೊರೆತಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು, ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ. [illegible] ವೈದ್ಯರ [illegible] ಬೀಳುವುದಿಲ್ಲ. ಇದರ ಮೇಲೆ ಈ ಆರೋಗ್ಯಬಿಂದುವಿನ ಮೇಲೆ [illegible] ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗ [illegible] ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, [illegible], ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, [illegible] [illegible] ಕರ್ಣರೋಗ, [illegible] ತಲೆನೋವು, [illegible] ಕೆಮ್ಮು, ಶ್ವಾಸ, [illegible] ಅಜೀರ್ಣ, ಹೊಟ್ಟೆಶೂಲೆ, [illegible] ವಾತಶೂಲೆ, [illegible] ಸ್ತ್ರೀಯರ [illegible] ಅನೇಕ ರೋಗಗಳು, [illegible] ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು [illegible] ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ [illegible] ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ [illegible] ಒಂದು ದೊಡ್ಡ ಬಾಟಲಿ ಒಂದಕ್ಕೆ 1 ರೂಪಾಯಿ. [illegible] ಸಣ್ಣ ಬಾಟ್ಲಿ ಒಂದಕ್ಕೆ 8 ಆಣೆ. [illegible] ಒಂದು ಡಜನ್ ಬಾಟ್ಲಿ [illegible] ನಾಲ್ಕು ಬಾಟ್ಲಿಗಳನ್ನು [illegible] ಇದಕ್ಕೆ ಎಂಟು ಆಣೆ ಖರ್ಚು ಬರುವದು [illegible] ವರೆಗೆ [illegible] ಕಮಿಷನ್ ಇರುವದಿಲ್ಲ [illegible] ನಾಲ್ಕು ಆಣೆ ಖರ್ಚು ಬರುವದು [illegible] ಬಾಟಲಿಗಳ [illegible] ಒಂದು ಬಾಟಲಿ ಕಮಿಷನ್ ಕೊಡುತ್ತೇವೆ [illegible] ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು [illegible] ಮತ್ತು [illegible] ಫೋಟೋ [illegible] ಭಾಷೆಗಳಲ್ಲಿ [illegible] [illegible] ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
33 ಪೆಠ್ ಆಫೀಸ್ [illegible], (ಬೆಳಗಾಂವ).

The Indian Tooth-ache Specific.
ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ಸಾರೆ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲು ನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ [illegible], [illegible], ವ್ರಣ, ಬೇಗು ಇತ್ಯಾದಿ ಖಂಡಿತವಾಗಿ ಗುಣವಾಗುತ್ತದೆ. [illegible] ಮತ್ತು ಅಲ್ಲಾಡುವ ಹಲ್ಲುಗಳಿಂದ [illegible] ನೋವು ಬಾಧಿಸುವವರಿಗೆ ಇದು [illegible] ಔಷಧವಾಗಿದೆ ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು [illegible] ಅವಶ್ಯವೇ ಇಲ್ಲ ಈ ಔಷಧದ ಗುಣವನ್ನು ನೀವು ಪರೀಕ್ಷಿಸಿ ಎಲ್ಲರಿಗೂ ತಿಳಿಸಿರಿ.

ಶೀಸೆ 1ಕ್ಕೆ ಕ್ರಯ ರೂ 1—4—0, [illegible] ಖರ್ಚು 4 ಆಣೆ [illegible] ಒಮ್ಮೆಯೇ [illegible] ಶೀಸೆ ತರಿಸಿಕೊಂಡರೆ ರೂ. 12 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

[illegible] ಕಾಫಿ ಪುಡಿ.

I	ಕ್ಲಾಸ್ [illegible]	0—10—0
II	ಕ್ಲಾಸ್ [illegible]	0—8—0
III	ಕ್ಲಾಸ್ [illegible]	0—6—0

[illegible] ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ

ಪ್ಲೇಗ್, ಕೋಲೇರಾ ಮತ್ತು ಇನ್ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು. ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೆಟ್ಟಿಗೆ ರೂ. 2—2—0	ಕೋಲೇರಾ ಔಷಧದ ದೊಡ್ಡ ಸೆಟ್ಟಿಗೆ ರೂ 1—2—0
„ ಸಣ್ಣ „ „ 1—6—0	„ ಸಣ್ಣ „ „ 0-12—0

ಇನ್ಫ್ಲುಯೆಂಜಾ ಔಷಧದ ಪ್ರತಿ ಸೆಟ್ಟಿಗೆ ರೂ 1—12—0

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ

ವಿಳಾಸ — ಮೆನೇಜರ್, ಆಯುರ್ವೇದಾಶ್ರಮ,

55 ಆಚಾರಪ್ಪನ ಬೀದಿ,

ಜೋರ್ಜಟೌನ್, ಮದರಾಸ್

ತಂತಿ ವಿಳಾಸ.—

ಪಂಡಿತ್, ಮದರಾಸ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್ ಮಲಯ ಸ್ಟೇಟ್, ಗೋವಾ, ಫೀಜಿವಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಕು ವಣಿಗೂ ವೈದ್ಯರ ಸಮಯವನ್ನು ಕಾದು ನೋಡುತ್ತಿರುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ ಮಲಬದ್ಧ ಕೆಮ್ಮು, ಗಸಟೀಸ ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 6—3—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ) — ಲಕ್ಷಾಂತರ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ ಸೀಸೆಗೆ ರೂ 1 ಒಕ್ಕೆ ಒಂದು ಇನಾಮು

ಶ್ರೀನಿವಾಸತೈಲ — ಪ್ಲೇಗಿನ ಗಡ್ಡೆ ಕರಗುತ್ತದೆ ಸಂದುಗಳ ನೋವು ಹೇದಲ ಹೋಗುತ್ತದೆ ಸೀಸೆಗೆ 8 ಆಣೆ ಒಕ್ಕೆ ಒಂದು ಇನಾಮು

ವೈಶ್ವಾನರಾಸವ — ಸೇವಿಸಿದ ಕೂಡಲೇ ವೇಳೆಯಿಂದಲೇ ವಾಂತಿಭೇದಿ • ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ ಸೀಸೆಗೆ ರೂ 1 ಒಕ್ಕೆ ಒಂದು ಇನಾಮು

ಬಾಲಸುಧೋದಯ — ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ ಅಜೀರ್ಣದ ಭೇದಿ ಕೃಶತ್ವ ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ ಸೀಸೆಗೆ ಆಣೆ 13 ಒಕ್ಕೆ ಒಂದು ಇನಾಮು

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ— **ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.**



ಒಂದು ಕುಪ್ಪಿಯ ಕ್ರಯ ೧೨ ಆಣೆ. ಮಂಗಳೂರು ಏಜಂಟ್,

ಕೇ. ಟೀ. ಡೋಂಗರೆ ಕಂಪೆನಿ, ಡಿ. ಉಲನ್ ಮಾರ್ಟ್, ಮಂಗಳೂರು

ಗಿರಗಾಂ ಮುಂಬಯಿ.

"ಕಾಮಶಾಸ್ತ್ರ"

ಉತ್ತಮವಾದ ಈ ಪುಸ್ತಕವು ಅನುಕೂಲವಾಗಿ ತಮ್ಮ ದೇಹದ ವಿಷಯಕ್ಕೆ ಮತ್ತು ಆರೋಗ್ಯ ಅನುಕೂಲಕ್ಕೆ ತಕ್ಕ ಈ ಬರಿಯುವಲ್ಲಿ ಅಂಚೆಯ ಹಾಸಲು ಸಹಾ ನಿರೀಕ್ಷಿಸದೇ ಕಳುಹಿಸುವೆವು

ಮತ್ತು

ಪ್ರಸಿದ್ಧವಾದ ಆತಂಕನಿಗ್ರಹ ಗುಳಿಗೆಗಳನ್ನು ಯಾವಾಗಲೂ ತಮ್ಮ ಪ್ರಿಯಮಿತ್ರರ ಹಾಗೆ ಭಾವಿಸಿ ಉಪಯೋಗಿಸುವಲ್ಲಿ ನಿರಾಧಾರವಾದ ಆಲೋಚನೆಗಳನ್ನು ಹೋಗಲಾಡಿಸಿ ಅಮೃತದ ಹಾಗೆ ದೇಹಧಾರ್ಢ್ಯವನ್ನುಂಟು ಮಾಡುತ್ತಾ ಇರುವುದು ಕ್ರಯ ರೂ 1 ಹೆಚ್ಚರಿಗೆಯಿಂದ ಮರಿಯಬಾರದು

ವಿಳಾಸ —

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು

Local Agents **Raphael & Co,**

Brito Buildings

Hampankatta, MANGALORE

ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ ಚೂರ್ಣ, ಅವಲೇಹ ಭಸ್ಮ ಘೃತ ತೈಲ ಆಸವ ಅರಿಷ್ಟ ದ್ರಾವಕ ಮೊದಲಾದುವುಗಳು, ಕಡ್ಡಾ ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುರುಲಬ್ಧವಾದ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಮಾರು ವರು. ತಯಾರಿಸಿದ ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದಲ್ಲಿ ತಿಳಿದು ಬರುವುದು

ವೈದ್ಯಶಾಲೆಯ ಪ್ರೊಪ್ರೈಟರೂ ಮೆನೇಜರರೂ ಆದ ದಾಮೋದರ ನಂಬೀಶನರು ಆದಿತ್ಯವಾರ ಹೊರತು ಬಾಕಿ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದೇ ಪರಿಶೋಧಿಸಿ ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವರೆ ಸಿದ್ಧರಾಗಿರುವರು ಇದರ ಬ್ರಾಂಚು ಮಂಗಳೂರು ರಥಬೀದಿಯಲ್ಲಿ ತೆರೆದಿರುವುದರಿಂದ ಇದರ ಎಲ್ಲಾ ಔಷಧಗಳ ಇದರ ಬ್ರಾಂಚಿನಲ್ಲಿ ಕೂಡಾ ಬೇಕಾದಷ್ಟು ಸಿಕ್ಕುವವು ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ ಪಿ ಮೂಲಕ ಕಳುಹಿಸಲಾಗುವುದು

೧. ಅಮೃತಾರಿಷ್ಟ—ಇದು ಎಲ್ಲಾ ತರದ ವಿಷಮಜ್ವರ (ಇನ್ಫ್ಲುಯೆಂಜಾ) ಒಳಜ್ವರ ಪ್ರಾತಃಜ್ವರ ಇವುಗಳ ಮೇಲೆ ರಾಮಬಾಣದಂತಿರುವುದು ರಕ್ತಶುದ್ಧಿಗೆ ಸಿದ್ಧೌಷಧ ೧೨ ಔನ್ಸಿನ ಬಾಟ್ಲಿ ೧ರ ಕ್ರಯ ರೂ ೧—೧೨—೦

೨ ವೀರ್ಯಪ್ರಸಾದ ವಟಿ—ಇದು ಸ್ವಪ್ನೇಂದ್ರಿಯದಿಂದ ನರಳುತ್ತಿರುವ ಮನುಷ್ಯರಿಗೆ ಅಮೃತವಂತಿರುವುದು ೩೪ ಮಾತ್ರೆ ಇರುವ ಸೀಸೆ ೧ಕ್ಕೆ ಕ್ರಯ ರೂ ೧

೩. ನವನೀತಮಧುಸ್ನುಹಿ—ಇದು ಫಿರಂಗವ್ಯಾಧಿ ಸಿಫಿಲಿಸ್ ಮೇಹ ಮುಂತಾದ ರೋಗಗಳನ್ನು ಒಳ್ಳೇ ರೀತಿಯಿಂದ ಗುಣಪಡಿಸುತ್ತದೆ ೩೪ ತೊಲೆ ಇರುವ ಡಬ್ಬಿ ೧ಕ್ಕೆ ಕ್ರಯ ರೂ ೪

೪ ವಿಷೂಚಿಕಾ ಸಂಹಾರಿ—ಎಂಟು ವಾಂತಿಭೇದಿ ಮಾತ್ರೆ, ಈ ಮಾತ್ರೆಯು ಸೇವಿಸಿದರೆ ಎಂಥಾ ಕಠಿಣ ತರವಾದ ವಾಂತಿಭೇದಿಯೂ ನಿಂತು ಹೋಗುವುದು ೩೪ ಮಾತ್ರೆಗಳ ಸೀಸೆ ೧ಕ್ಕೆ ಕ್ರಯ ರೂ ೧—೦—೦

೫ ನಯನದ್ಯುತಿ—ಕಣ್ಣಿನ ಉರಿ ... ಕಣ್ಣಿನ ಎಲ್ಲಾ ರೋಗಗಳನ್ನು ಗುಣಪಡಿಸುವ ಸಿದ್ಧೌಷಧವು ಅರ್ಧ ಔನ್ಸಿನ ಸೀಸೆ ೧ರ ಕ್ರಯ ರೂ ೧—೦—೦

೬. ನಯನಾಮೃತ—ಕಣ್ಣು ಮಸುಕು ದೃಷ್ಟಿಮಾಂದ್ಯ ಇರುಳು ಗಣ್ಣು ಕೀವು ಬರುವುದು ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನು ಬಹು ಜಾಗ್ರತೆಯಾಗಿ ಗುಣಪಡಿಸುವುದು ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ ೧—೦—೦

ವೈದ್ಯರ್ ವಿ ಕೆ ದಾಮೋದರ ನಂಬೀಶನ್

ಅಮೃತಕಲ್ಪ ವೈದ್ಯಶಾಲಾ,

ಕಾಸರಗೋಡು ದ ಕನ್ನಡಾ

ಸುಲಭ ಕ್ರಯ!! ಗುಣ ಹೆಚ್ಚು!!!

ರೊಯಲ್ ಇಂಡಿಯನ್ ಬಾಂ.

(ರಿಜಿಸ್ಟರ್ಡ)

ಇದೇ ಗುರುತನ್ನು ಲಕ್ಷ್ಯದಲ್ಲಿಡಿರಿ

ROYAL INDIAN PAIN BALM — TRADE MARK — MANORA & CO. BOMBAY.

ಬಾಟ್ಲಿ ಒಂದರ ಕ್ರಯ ಆಣೆ ೮.

ಹಿಂದೂಸ್ಥಾನದಲ್ಲಿ ಬೆಳೆಯುವ ಉತ್ಕೃಷ್ಟವಾದ ವನಸ್ಪತಿಗಳಿಂದ ಪರಿಶೋಧಿಸಿ, ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು — ಇದರ ಉಪಯೋಗದಿಂದ ತಲೆನೋವು ಕಡಿತ ಶಿರೋಭಾರ, ಗಂಟು ಗಂಟಿನ ನೋವು ಎದೆಶೀತ, ಎದೆನೋವು, ಉಬ್ಬುವುದು, ವಾತ ಸಂಧಿವಾತ, ಅರ್ಧಾಂಗವಾಯು, ಉಳುಕು, ಗಾಯ, ಚಳುವು, ಸೊಂಟದ ನೋವು, ಕಜ್ಜಿ ಇವೇ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ರಾಮಬಾಣದಂತೆ ಗುಣಪಡಿಸುತ್ತದೆ ಸಮುದ್ರ ಪ್ರಯಾಣದಲ್ಲಿ, ಮುಖ್ಯಾಂತ್ರ ಯಾ ಹಳ್ಳಿಗಳಲ್ಲಿ ಡಾಕ್ಟರ ಸಹಾಯವಿಲ್ಲದೆ ಇದ್ದ ಪ್ರತಿಯೊಬ್ಬರು ಒಂದು ಬಾಟ್ಲಿಯನ್ನು ಇಟ್ಟುಕೊಳ್ಳುವುದು ಅಗತ್ಯ ಒಂದು ಡಜನಿಗೆ ರೂ ೫—೮—೦ ೨೪ ಬಾಟ್ಲಿಗೆ ರೂ ೯—೮—೦ ೫೦ ಬಾಟ್ಲಿಗೆ ರೂ ೨೦—೦—೦ ವಿ ಪಿ ಖರ್ಚು ಪ್ರತ್ಯೇಕ

"ಗಜಕರ್ಣದ ಮುಲಾಮು" ಡಬ್ಬಿ ಒಂದರ ಆಣೆ ೪, ದಂತಮಂಜನ ಕಜ್ಜಿ ಮುಲಾಮು ಆಣೆ ೩, ಹೆಯರ್ ಆಯಿಲ್, ಬೇಳು ಕಡಿತದ ಮದ್ದು, ಇನ್ನೂ ಅನೇಕ ತರದ ಮದ್ದುಗಳನ್ನು ತಯಾರಿಸಿದ್ದೇವೆ ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡುವೆವು

ಸೂಚನೆ—ನಾವು ಮುಂಬಯಿಂದ ರತ್ನಾಗಿರಿಕ್ಕೆ ವಿಲಾಯಿತಿಯಿಂದ ಬಂದ ಪೇಟೆಂಟ ಔಷಧಗಳನ್ನೂ, ಇತರ ಮಾಲ್ಲನ್ನೂ ಬೇಕಾದಷ್ಟು ಮಟ್ಟಿನ ಕಮಿ ದರದಲ್ಲಿ ಕಳುಹಿಸುವ ಏರ್ಪಾಟನ್ನು ಇಟ್ಟಿರುತ್ತೇವೆ

Manora & Co,

Hill Road, P. O, Bandra, **BOMBAY.**

ವಾಸಿಂಗ್‌ಟಲ್ಲಿ Waaning Tilly

ಜೆನ್ ಎನ್ ಹಾರ್ಲೆಮ್ ಆಯಿಲ್

(HAARLEM OIL).

ತ್ವರ್ಯದಲ್ಲಿ ನಿಮ್ಮ ಆರ್ಡರುಗಳನ್ನು ಬರಾಯಿಸಿಕೊಳ್ಳಿರಿ!

ಹಾರ್ಲೆಮ್ ಆಯ್‌ಲ್ ಎಂದೆನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 300 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭಾವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ ಮೂತ್ರಗುಡ್ಡು (Kidney,) ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ ಮೂರೇ ದಿನದ ಚಿಕಿತ್ಸೆಯಿಂದ ಇನ್‌ಫ್ಲುಯೆಂಜಾ ಮೊದಲಾದ ಎಂಥಾ ಕಠಿಣ ಜ್ವರವಾದರೂ ಮಣಿಯುವದು

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯು ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು ಮಕ್ಕಳಿಗೆ ಅವರವರ ಪ್ರಾಯದಷ್ಟೆ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ಜೋಡು ಪತ್ರವಿದೆ ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ.

ಕ್ರಯ ಸೀಸೆ 1ಕ್ಕೆ ಆಣೆ ೭ ವಿ. ಪಿ. ಬೇರೆ

ಸಿಫಾರಸು ಪತ್ರ

ಕೆಲವು ವರ್ಷಗಳ ಹಿಂದೆ ಮಂಗಳೂರಲ್ಲಿದ್ದ ಜರ್ಮನ್ ಮಿಶ್ಯನೆರಿ ಲೇಡಿ ಮಿಸೆಸ್ ಹೆರ್ಮನ್ ಬ್ರೇಕ್ಲಯವರು ಇದೇ ಕಳೆದ ಮಾರ್ಚಿ ತಾ 10ರಲ್ಲಿ ಸ್ಟುಟ್‌ಗಾರ್ಟ ಪಟ್ಟಣದಿಂದ ವಾಸಿಂಗ್‌ಟಲ್ಲಿ ಕಂಪೆನಿಯವರಿಗೆ ಈ ರೀತಿ ಬರೆದಿರುತ್ತಾರೆ—ದಯಮಾಡಿ ನಿಮ್ಮ ಕಂಪನಿಯ 25 ಶೀಸೆ ಜಿನ್ ಎನ್ ಹಾರ್ಲೆಮ್ ಆಯಿಲ್ ಕಳುಹಿಸಿ ಕೊಡಿರಿ. ಇದು ಉತ್ಕೃಷ್ಟವಾದ ಖಾತ್ರಿ ಔಷಧಿ ಎಂಬದು ನನ್ನ ಅನುಭವ ಸಿದ್ಧಾಂತ. ನಾನು 1910ನೇ ಇಸವಿಯಲ್ಲಿ ಮಂಗಳೂರಿಗೆ ಹೋಗುವಾಗ ನಿಮ್ಮ ಹಾರ್ಲೆಮ್ ಆಯಿಲಿನ 12 ಸೀಸೆಗಳನ್ನು ಕೊಂಡು ಹೋಗಿದ್ದೆನು ಇದು ದೇಶೀಯರೊಳಗೆ ಪ್ರಯೋಗಿಸಿದ್ದಲ್ಲಿ ಅತಿ ಸಾಫಲ್ಯವಾಗಿ ಪರಿಣಮಿಸಿತು ದೇಶೀಯರೊಳಗೆ ಪ್ರಬಲಿಸಿರುವ ಜ್ವರಕ್ಕೆ ಇದು ಅತಿ ಗುಣಕಾರಿಯಾಗಿದೆ ನಂತರ ಕೆಲವು ಕ್ರೈಸ್ತ ಕುಟುಂಬಗಳು ಇದನ್ನು ಕುಟುಂಬ ಸಂರಕ್ಷಣೀಯವಾಗಿ ಮನೆಯಲ್ಲಿ ಇಟ್ಟು ಕೊಳ್ಳಲು ತೊಡಗಿದರು ತನ್ಮಧ್ಯ ಯುದ್ಧ ತೊಡಗಿದ್ದರಿಂದ ಹಿಂದೂಸ್ಥಾನದಲ್ಲಿ ಇದರ ವ್ಯಾಪಾರವು ಹ್ಯಾಗಿದೆಂತ ನನಗೆ ಗೊತ್ತಿಲ್ಲ

ವಿಳಾಸ — ಹಿಂದೂಸ್ಥಾನದ ಸೋಲ್ ಏಜಂಟರು— ದಿ ಎಕ್ಲಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು

☞ ವಿಶೇಷ ಸೂಚನೆ —ವಾಸಿಂಗ್‌ಟಲ್ಲಿ ಹಾರ್ಲೆಮ್ ಆಯಿಲಿನ ಸೀಸೆಗಳ ಮೇಲೆ Waaning Tilly Bros ಎಂಬ ಎಸ್ಕ್ರೂ ಕಾಗದ ಪತ್ರವಿರುತ್ತದೆ ಇದೇ ನಿಜವಾದ ಹಾರ್ಲೆಮ್ ಆಯಿಲ್ ಎಂತ ತಿಳಿಯತಕ್ಕದ್ದು ☜

ಆಯುರ್ವೇದ ಶಾಸ್ತ್ರಾನುಸಾರ

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. ಶತಮೂಲಿಕೆಯ ಸತ್ವವು ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, ಬಹುಕಾಲದ ಕಫ, ರಕ್ತವಾಂತಿಯಾಗುವಿಕೆ, ಹೃದಯದ ದುರ್ಬಲತೆ ಲಿಹ್ವರ (ಕಾಳಜಿ), ಮೂತ್ರಕೋಶದ ವ್ಯಾಧಿಗಳು ಮ ಎಲ್ಲ ತರದ ದುರ್ಬಲತೆಯು ನಾಶಹೊಂದಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು ಇನ್‌ಫ್ಲುಯೆಂಜಾ ಜ್ವರಕ್ಕೂ, ಅಶಕ್ತ ಜನರಿಗೂ, ಒತ್ತಿಬರುವ ಸಣ್ಣ ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣ ಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣ ಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು. ೧೬ ಓನ್ಸಿನ ಬಾಟ್ಲಿ ೧ಕ್ಕೆ ರೂ ೨—೧೨—೦ ಟ. ಖ ವಗೈರೆ ಬೇರೆ

2 ವಿಜಯಸಂಜೀವಿನಿ ತೈಲ ಕಾಲತ್ತು ಒಹಿಸ್ಸೆಯಾಗುವುದು, ಒಹಿಸ್ಸೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಬಂಧ ವ್ಯಾಧಿಗಳಿಗೆ ದಿವ್ಯ ಔಷಧ ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ೧ಕ್ಕೆ ರೂ ೨

3. ಕೂಲೇರಾ ಗುಳಿಗೆಗಳು. ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕುದಾಗಿದೆ ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣ ರೋಗಕ್ಕೂ ಅತಿಸಾರಕ್ಕೂ ಉತ್ತಮ. ೪೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ ೧—೦—೦

4 ವಾತಾಂತಕ ದೀರ್ಘ ಕಾಲದ ಮತ್ತು ಯಾವ ತರದ ವಾತ ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು ಕ್ರಯ ಬಾಟ್ಲಿ ೧ಕ್ಕೆ ರೂ ೧ ಲ ೦

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ ಜಮೀನದಾರರಿಂದಲೂ ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ ಪತ್ರವ್ಯವಹಾರವು ಇಂಗ್ಲಿಷದಲ್ಲಿರಬೇಕು ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ ವಿಳಾಸ —

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್.
ಕೋರನೂರ, (ಮಲೆಬಾರ).

೧೦೦೦ ರೂ. ಬಹುಮಾನ.

... ಸಾಲಾಮಿಸ್ತ್ರೀ ಎಂಬುದು ... ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ. ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಪಡೆಯಬಹುದು

ಒಂದು ಡಬ್ಬಾ ಮುರಬ್ಬವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಗುಣ ಕೊಡುತ್ತೆ. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು
ಕ್ರಯ ಒಂದು ಡಬ್ಬಿಗೆ ರೂಪಾಯಿ 2

"ಈಗ ಭಾಂಗಿಯ ಖರ್ಚು ಹೆಚ್ಚಿರುವುದರಿಂದ ಕೆಲವು ದಿವಸಗಳ ವರೆಗೆ ಟಪಾಲು ಖರ್ಚು 1 ಡಬ್ಬಿಗೆ 8 ಆಣೆ, 2 ಯಾ 3 ಡಬ್ಬಿಗಳಿಗೆ 12 ಆಣೆ."

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ತ್ರಿ ಮುರಬ್ಬ ಡಿಪ್ಪೊ, ಬೆಂಗಳೂರು ಸಿಟಿ

ರಬರಿನ ಅಕ್ಷರಗಳು.

ಈ ಅಕ್ಷರಗಳು ವಿಲಾಯಿತಿಯಲ್ಲಿ ತಯಾರಾದವು ಕಾಗದಗಳು ಕಾರ್ಡು ಮುಂತಾದವುಗಳ ಕೆಲಸದಲ್ಲಿ ಬಹು ಅಂದವಾಗಿ ... ಪ್ರಿಂಟ ಮಾಡಿಕೊಳ್ಳಬಹುದು ಈ ಪೆಟ್ಟಿಗೆಯೊಂದು ಇದ್ದರೆ ಪ್ರತಿ ವೊಹರುಗಳ ಅಗತ್ಯವೇ ಬೇಡ ಇದರಲ್ಲಿ ಇಂಕ್‌ಪ್ಯಾಡ್, ಚಿಮಟ, ಇಂಕ್‌ಬಾಟ್ಲ್ ಸಹಿತ ಕಳುಹಿಸಿದೆ

ಕ್ರಯ	110 ಅಕ್ಷರಗಳ	ಪೆಟ್ಟಿಗೆ	ರೂ	1—8—0
"	170	"	"	1 14—0
"	250	"	"	2—8—0
"	300	"	"	3 12—0

ಸ್ವಿಸ್ ಪಾಕೆಟ್ ವಾಚ್

ಈ ಕೆಳಗಿನವುಗಳಿಗೆ ತರಿಸಿಕೊಳ್ಳುವವರಿಗೆ ೧೧ ಬಹುಮಾನ, ೪ ವರ್ಷ ಗ್ಯಾರಂಟಿ ಸಹಿತ ರೂ ೪—೮—೦.



ಈ ಗಡಿಯಾರವು ಮಜಬೂತಾಗಿರುವದು ಧೂಳಿ, ಧರೆಗೆ ಬಿದ್ದರೆ ... ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ ಇದನ್ನು ತರಿಸಿ ನೋಡಿದರೆ ಗೊತ್ತಾಗುವದು ಇವನ್ನು ಲೀವರ್ ಕೆಲಸದಿಂದ ಸಮವಾಗಿ ತಯಾರಿಸಿದ ಬಹುಮಾನಗಳ ವಿವರ — ಕರವಸ್ತ್ರ ೧, ಕನ್ನಡಿ ೧, ಗುಂಡಿಗಳು ೪, ಗಿಲೀಟಿನ ರೋಲ್ಡಾ ಪುಪ್ಪೂ ೧, ಬೀಸಣಿಗೆ ೧, ಟ್ರೋಚ್ ೧, ಚಾಚಣಿಗೆ ೧, ಸೆಂಟ್ ಬಡ್ಡಿ ೧, ಜಮ್ಮಾ ೧೧ ಬಹುಮಾನಗಳ ಸಹಿತ ರೂ ೪—೮—೦.

ವಿಳಾಸ — ರಾಸ್‌ವಾಚ್ ಎಂಡ್ ಕೋ,
ಇರುಳಪ್ಪನ ಬೀದಿ, ಮದ್ರಾಸು.

ಶಾಶ್ವತವಾದ

ದೇಹಶಕ್ತಿಯನ್ನು ದುರಭ್ಯಾಸಗಳಿಂದ ಚಿಕ್ಕಂದಿನಲ್ಲಿಯೇ ಕಳೆದುಕೊಂಡು ಈ ಮರಣಾಂತರವೂ ದುಃಖಿಸುವಿರೇತಕ್ಕೆ?

ಲೋಕಪ್ರಸಿದ್ಧವಾದ

ಸಕಲರೋಗ ಸಂಹಾರಿ

ಎಂಬ ಈ ಔಷಧದ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನಸ್ಖಲನ ಆಗುತ್ತಿದ್ದರೂ, ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವಿಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರ ಬರುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವದರಿಂದ ಮೇಲುಶ್ವಾಸ ಬರುವುದೂ, ತಲೆನೋವು ಇವುಗಳೆಲ್ಲವೂ "ಸಕಲರೋಗ ಸಂಹಾರಿ"ಯ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ಧಾತುವನ್ನು ವೃದ್ಧಿಪಡಿಸುವುದರಲ್ಲಿ ಇದಕ್ಕೆ ಸಮಾನವಾದ ಔಷಧವು ಬೇರೆಯಾವದು ಇಲ್ಲವು ಉಪಯೋಗಿಸುವ ವಿಧವು ಔಷಧದ ಜತೆಯಲ್ಲಿ ಕಳುಹಿಸುವೆವು ಕ್ರಯ 15 ತೊಲೆ ಡಬ್ಬಿ 1ಕ್ಕೆ ರೂ 2—0—0.

ವಿಳಾಸ— ಡಾ॥ ಎಂ. ಪೀಟರ್,
ಇರುಳಪ್ಪನ ಬೀದಿ, ಮದರಾಸು.

Printed & Published by V S Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲು ಮಹಾರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಳವ ಕಂಡರೆ! ಸುಧೆಯನು । ದೊರೆತು ತೃಪ್ತರ ತೆರದಿ ಕುಳಿತರೆ! । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯ | ಮಂಗಳೂರು, ತಾರೀಕು ೬ನೇ ಜುಲಾಯಿ ಶುಕ್ರವಾರ ೧೯೨೦. | ಸಂಚಿಕೆ ೬೭

‘ನೈಟ್ರೇಟ್ ಒಫ್ ಸೋಡಾ’

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಎಲೆಬಳ್ಳಿ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಎಲೆನ ಗೊಬ್ಬರದಂತೆ ನಾಶ ಬಡೆಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕಾದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಜೊತೆಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

“ಕೃಷಿ ಸುಧಾರಣೆ” ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,

1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Director, Chilean Nitrate Committee,
(INDIAN DELEGATION),
1, Royal Exchange Place, CALCUTTA.

ಇಲ್ಲಿ ನೋಡಿರಿ! ತ್ವರೆಮಾಡಿರಿ!! ಗುಣ ಪಡೆಯಿರಿ!!!

ಪ್ರತಿಯೊಬ್ಬ ಕುಟುಂಬಿಕನೂ ಹತ್ತಿರವೇ ಇಟ್ಟುಕೊಳ್ಳಬೇಕಾದ

ಸರಸ್ವತಿವಿಲಾಸದವರ ಸುದರ್ಶನತೈಲ.

ಈ ತೈಲವನ್ನು ಶರೀರಕ್ಕೆ ಹಚ್ಚುವುದರಿಂದ ಕಣ್ಣುಹೊರು, ಕರ್ಣಶೂಲೆ, ಅಸಾಧ್ಯವಾದ ಶೂಲೆ, ಗಡಕರ್ಣ, ಮಕ್ಕಳ ಮೊಣಕಾಲಿನ ಭಯಂಕರವಾದ ಶೂಲೆ, ಪ್ಯಾರಲೈಸಿಸ್ ವ್ಯಾಪಿಸಿರುವ ಕಜ್ಜಿ ಮುಂತಾದ ಅಸಾಧ್ಯಕರವಾದ ವ್ಯಾಧಿ, ವಿವಿಧ ಪ್ರಾಣಿ ಯಾನೆ ಚಾವುಗಳಿಗೆ ಒಂದುಸಲ ಹಚ್ಚಿದರೆ ತ್ವರಿತವಾಗಿ ಅಡಗಿಸಿ, ಕ್ಷಣಮಾತ್ರದಲ್ಲೇ ಗುಣಪಡಿಸುವುದು. ಇದರಲ್ಲಿ ಯಾವ ಸಂದೇಹವೂ ಇಲ್ಲ. ಪ್ರತಿಯೊಂದು ಶೀಸೆಯೊಂದಿಗೆ ಅನುಪಾನಪಟ್ಟಿಯನ್ನೂ ಕಳುಹಿಸುವೆವು.

ಒಂದು ಬಾರಿ ಒಂದು ಬಾಟ್ಲಿಯನ್ನು ಪರೀಕ್ಷಿಸಿ ನೋಡಿರಿ!

ಒಂದು ಔನ್ಸಿನ ಶೀಸೆಯೊಂದರ ಕ್ರಯ ರೂ. 0—4—0 ಮಾತ್ರ. ಇದಲ್ಲದೆ, ನಮ್ಮಲ್ಲಿ ಸುಗಂಧದ್ರವ್ಯ, ವ್ಯಾಪಾರ ಉಪಯುಕ್ತ, ವಿದ್ಯಾರ್ಥಿಗಳಿಗೆ ಅಗತ್ಯವಾದ ಕಾಗದ, ಪೆನ್ಸಿಲು, ಸ್ಲೇಟುಗಳು, ಅಲ್ಲದೆ ಇನ್ನೂ ಅನೇಕ ಸ್ಟೇಷನರಿ, ಕಟ್ಲರಿ ಸಾಮಾನುಗಳು, ಸಿಗರೇಟುಗಳು ನಾನಾ ತರದ ಹಲವು ಬಣ್ಣದ ಶಾಯಿ, ಗಜಕರ್ಣ ಮುಲಾಮು, ದಶಾಂಗದೂಪ, ಸೀಗೆ ಎಣ್ಣೆ ಇವೇ ಮುಂತಾದವುಗಳು ಮಾರಾಟಕ್ಕೆ ಸಿದ್ಧವಿರುತ್ತವೆ. ವಿಶೇಷ ಮಾಹಿತಿಯನ್ನು ತಿಳಿಯಬಯಸುವವರು ನಮ್ಮಲ್ಲಿ ಬಂದು ವಿಚಾರಿಸಲಿ ಅಥವಾ ಅರ್ಧಾಣೆ ಸ್ಟಾಂಪು ಸಮೇತ ನಮಗೆ ಬರೆದಲ್ಲಿ ತಿಳಿಸುವೆವು.

ನಮ್ಮ ವಿಳಾಸ:— ಎಮ್. ಸುಬ್ರಾಯ ಗಿರಿಭಟ್ಟ ಎಂಡ್ ಸನ್ಸ್,

ಸರಸ್ವತಿ ವಿಲಾಸ, ರಥಬೀದಿ ಮಂಗಳೂರು, ದ. ಕ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖ್ಯಾತಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಥಿಲವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ಆರ ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ. ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0

ಗಜಕರ್ಣಾದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ ಒಂದರ ರೂ. 0—6—0.

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲುಗಳು ಶುಭ್ರವಾಗುತ್ತವೆ. ರಕ್ತ ಬರುವುದು ನಿಲ್ಲುತ್ತವೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ ಗರ ಆಣೆ 2.

ಅಮೃತಾಂಜನ ಡಿಪ್ಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು. | 109 ಫ್ರೇಯರ್ ರೋಡ್ಡ್, ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ವಾತಕಷಾಯ

U. B. DUTT & Co. CALICUT.

ವಾಳೆಯವರ ಪೇಟವು ಔಷಧಗಳಿಗೆ ಕೀರ್ತಿಹೊಂದಿದ ಪ್ರದೇಶ, ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಪವಿತ್ರವೇ ಸಿಕ್ಕುವ ನಾರುಬೇರುಗಳಿಂದಲೂ ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಅದರಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ “ಆರ್ಡರ್‌ಗಳು” ಬರುತ್ತಲಿವೆ. ಈ ಭಾಗದಲ್ಲಿ, ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ “ವಾತಕಷಾಯವು” ಎಲ್ಲಾ ವಿಧದ ವಾತಗಳನ್ನು ಗುಣಪಡಿಸುವುದು. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂಧು, ಅದಮುನ, ಅಂತಃಕೋಶ ವೃದ್ಧಿಯಾಗುತ್ತ ಕೆಂಪಾಗಿ ನೋವುಂಟಾಗುವುದ; ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಮೂತ್ರದಲ್ಲಿ ದೋಷವಿರುವುದು; ಇತ್ಯಾದಿಗಳಲ್ಲಿ ಯಾವುದಾದರೂ ಒಂದು ಚಿಹ್ನೆಯಾಗಲೀ ನಿಮ್ಮ ಸ್ನೇಹಿತರಲ್ಲಿಯಾಗಲೀ ಕಾಣಿಸಿಕೊಂಡರೆ, ಕೂಡಲೇ ನಮ್ಮ “ಕಷಾಯ” ತೆಗೆದುಕೊಳ್ಳಲು ಪ್ರಾರಂಭಮಾಡಿ. ಇದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ, ಇದಲ್ಲದೆ ಪಿತ್ಥ, ವಾತ, ಕಫ, ಅಜೀರ್ಣ, ಕೆಮ್ಮು, ದಮ್ಮು, ಉಬ್ಬಸ, ಶೀತ, ಜ್ವರ, ತಲೆನೋವು, ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಕ್ರಮವಾದ ವಿಷಮಜ್ವರ ಮುಂತಾದವುಗಳಿಗೆ ದಿವ್ಯೌಷಧಗಳಿವೆ. “ಕ್ಯಾಟಲಾಗ್”ನ್ನು ನೋಡಿ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ,

ಕಲ್ಲಿಕೋಟೆ ಮಲಬಾರ.

Come! See! & Try!

P. Narayana Vaijappa Bhandary & Co.,

Cloth Merchants.

Car Street, MANGALORE.

ಮದುವೆ ಉಪನಯನಗಳ, ಹಬ್ಬ ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಿಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗಿ ವಸ್ತ್ರಗಳು, ಶಾಲುಗಳು, ಟೋಪಿಗಳು ಇತ್ಯಾದಿ ಉಡುಪುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು. ನಗದು ಗಿರಾಕಿಗಳಿಗೆ ರಿಯಾಯಿತಿ ಕೊಡಲಾಗುತ್ತದೆ.

ಪಿ. ನಾರಾಯಣ ವೈಜಪ್ಪ ಭಂಡಾರಿ ಮತ್ತು ಕಂಪೆನಿ,

ರಥಬೀದಿ, ಮಂಗಳೂರು.

ಸಚಿತ್ರ ಮಾಸಪತ್ರಿಕೆ. ಸಚಿತ್ರ ಮಾಸಪತ್ರಿಕೆ.

ಭಕ್ತಿಸಂದೇಶ

ಡಿಸೆಂಬ್ರ, ಜನವರಿ, ಫೆಬ್ರವರಿ ತಿಂಗಳ ಸಂಚಿಕೆಯು ಪ್ರಕಟವಾಗಿರುವುದು

ಇದರಲ್ಲಿ ಅನೇಕ ಚಿತ್ರಗಳೂ ಉಪಯುಕ್ತ ವಿಷಯಗಳೂ ಬಂದಿವೆ. ಈ ಸಂಚಿಕೆಯು ಚಂದಾದಾರರಿಗಲ್ಲದೆ ಇತರರಿಗೆ ದೊರೆಯಲಾರದು.

ಮಾರ್ಚ್, ಎಪ್ರಿಲ್ ತಿಂಗಳ ಸಂಚಿಕೆಗಳು ಮುದ್ರಣದಲ್ಲಿವೆ.

ಇವರಲ್ಲಿ ಬರುವ ವಿಷಯಗಳು:—ಶ್ರೀ ಶಿವಾನಂದ ಸರಸ್ವತಿ, ಶ್ರೀ ವಿಷ್ಣುಬಾವಾ ಜೋಗ ಇವರ ಜೀವನ ಚರಿತ್ರೆ (ಚಿತ್ರಸಹಿತ), ಬೋಧವಚನ, ಕಾಶೀಯಾತ್ರಾ ವರ್ಣನೆ, ಸಾಮಯಿಕ ಟಿಪ್ಪಣಿಗಳು, ವಿವೇಕಾನಂದರ ಪತ್ರಗಳು, ಹಿಂದೂ ದೇವತಾ ವಿಚಾರ ಹಾಗು ಅವತಾರಗಳು (ಯಕ್ಷಗಾನ ಪ್ರಸಂಗ), ಇವೇ ಮುಂತಾದ ರಸಭರಿತ ವಿಷಯಗಳೂ ಚಿತ್ರಗಳೂ ಬರುತವೆ. ಈ ಸಂಚಿಕೆಯೂ ಚಂದಾದಾರರಿಗೆ ಮಾತ್ರ ದೊರೆಯುವುದು.

ವಾರ್ಷಿಕ ವರ್ಗಣಿ ರೂ. ೩-೦-೦. ಮಾದರೀ ಸಂಚಿಕೆಯ ಬೆಲೆ ೮. ೬.

ಡಿ. ಕೆ. ಭಾರದ್ವಾಜ, ವಿದ್ಯಾಭೂಷಣ,

ಭಕ್ತಿಸಂದೇಶ ಆಫೀಸು, ಮಂಗಳೂರು, ದ. ಕ.

ಟಿಶ್ಯೂರೆಮಿಡಿಸ್

ಎಂಬ

12 ಜೀವರಸಾಯನಿ ಔಷಧಗಳು

ಮತ್ತು

ಹೋಮಿಯೋಪೆಥಿಕ್ ಔಷಧಗಳು.

ನಮ್ಮ ಗಿರಾಕಿಗಳ ಅನುಕೂಲತೆ ಬಗ್ಯೆ ವಾರದ ಎಲ್ಲಾ ದಿವಸಗಳಲ್ಲಿ ಬೆಳಿಗ್ಯೆ 7½ ಘಂಟೆಯಿಂದ ರಾತ್ರೆ 9 ಘಂಟೆ ತನಕ ಸುಲಭವಾದ ದರದಲ್ಲಿ ಮಾರೋಣಾಗುತ್ತವೆ.

ಟಿಶ್ಯೂ ರೆಮಿಡಿಸ್ 2 ಡ್ರಾಮಿನ ಸೀಸೆ 1ಕ್ಕೆ			ರೂ.	0—3—6
”	4	”	”	0—6—0
”	1 ಔನ್ಸಿನ	”	”	0—12—0
ಹೋಮಿಯೋಪೆಥಿಕ್ 2 ಡ್ರಾಮಿನ		”	”	0—3—6

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

(ಕಾರ್ಪೋರೇಶನ್ ಖಾತೆ)

ರಥಬೀದಿ, ಮಂಗಳೂರು.

[illegible]

[illegible]	38,687—1—11
[illegible]	62,062—0—0
[illegible] and other Funds as on 31-3-20	8,258—9—6

Fixed deposits received for 3, 6, 9 months [illegible] for a year and above at 7% at the discretion of the Managing Committee. In the case of all [illegible] will be paid quarterly.

Cummulative deposits are received repayable in 45 months at Rs. 50/—per each rupee deposited monthly.

Current a/c deposits opened free of charge and interest will be paid @ 3½% per annum on the lowest balance between the 4th and the last day of each month.

Loans granted on proper securities and pledges.

A dividend of 8% has been declared for the last year.

Payments to the Corporation may be made to the credit of the Corporation at the Bank of Madras, and Canara Bank Mangalore.

UDIPI,
6th June 1920.

[illegible]	[illegible]	50,000—0—0
[illegible] ಮೂಲಧನ	„	38,687—1—11
ಠೇವಣಾತಿಗಳು	„	62,062—0—0
ಕ್ಷೇಮನಿಧಿ ಮತ್ತು [illegible] ಫಂಡುಗಳು ...	„	8,258—9—6

[illegible] ಠೇವಣಾತಿಗಳನ್ನು 3, [illegible] ಅವಧಿಗಳಿಗೆ ಆಡಳಿತ ಸಭೆಯವರ ಮುನಾಸಬು ಪ್ರಕಾರ ಸಾಲಿಯಾನ್ ಶೇಕಡಾ 6½% 1 ವರ್ಷಕ್ಕೆ ಮಿಕ್ಕಿದ ಬಾಬಿನಲ್ಲಿ ಶೇಕಡಾ 7% ದರದಲ್ಲಿ ಬಡ್ಡಿ ಕೊಡಲ್ಪಡುವದು. ಎಲ್ಲಾ ಠೇವಣಾತಿಗಳ ಮೇಲಣ ಬಡ್ಡಿ 3 ತಿಂಗಳಿಗೊಮ್ಮೆ ಕೊಡಲ್ಪಡುವದು.

ಪ್ರತಿ ತಿಂಗಳಿಗೆ ರೂ. 1ರ ಪ್ರಕಾರ 45 ತಿಂಗಳುಗಳವರೆಗೆ ವಸೂಲು ಕೊಡುವ ಸಂಚಯದ ಠೇವಣಾತಿಗಳಿಗೆ 45 ತಿಂಗಳ ಅಂತ್ಯದಲ್ಲಿ ಪ್ರತಿ ತಿಂಗಳಲ್ಲಿ ವಸೂಲು ಕೊಟ್ಟ ರೂ. 1ಕ್ಕೆ ರೂ. 50/ರಂತೆ ವಾಪಸು ಕೊಡಲ್ಪಡುವದು.

ಚಾಲ್ತಿ ಠೇವಣಾತಿಗಳು ಸಂಘದ ಖರ್ಚಿಲ್ಲದೆ [illegible] ಪಡಕೊಳ್ಳಲ್ಪಡುವವು. ಪ್ರತಿ ತಿಂಗಳ 4ನೇ ತಾರೀಕಿನಿಂದ ಆಖೈರು ತಾರೀಕುವರೆಗೆ ಯಾವದಾದರೊಂದು ದಿನ ಇರುವ ಅತಿ ಕಡಿಮೆ ಠೇವಣಾತಿ ಮೊಬಲಗಿನ ಮೇಲೆ ಸಾಲಿಯಾನ್ ಶೇಕಡಾ 3½ ದರದಲ್ಲಿ ಬಡ್ಡಿ ಕೊಡಲ್ಪಡುವದು.

ಯೋಗ್ಯ ಜವಾಬ್ದಾರಿಯ ಮತ್ತು ಅಡವಿನ ಮೇಲೆ ಸಾಲಗಳು ಕೊಡಲ್ಪಡುವವು.

ಪಾಲುದಾರರಿಗೆ ಕಳೆದ ವರ್ಷ ಶೇಕಡಾ 8% ದರದ ಬಡ್ಡಿ ಕೊಡಲಾಗಿಯದೆ.

ಸಂಘಕ್ಕೆ ಕೊಡಲ್ಪಡುವ ಹಣಗಳನ್ನು ಸಂಘದ ಲೆಕ್ಕಕ್ಕೆ ಮಂಗಳೂರಲ್ಲಿ ಮದ್ರಾಸು ಬ್ಯಾಂಕಿನಲ್ಲಿ ಮತ್ತು ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಡಬಹುದು.

Naimpalli Ananda Rao,
Secretary.

[illegible] ಮತ್ತು ಕಂಪೆನಿ,
[illegible], ಮದ್ರಾಸ್.

[illegible]

[illegible] ಅತ್ಯಂತ [illegible] ಬಹುಮೂತ್ರರೋಗ ಬಾರದಂತೆ ಆರೋಗ್ಯ [illegible] ಕಡಿಮೆ ಮಾಡುತ್ತದೆ. ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. [illegible] ಉಪಯೋಗಿಸಿದರೆ ಮಾತ್ರ ಇದನ್ನು ಬಿಡರು. [illegible] ಒಂದು ಸೀಸೆ [illegible]. [illegible] ಕ್ರಯ ರೂ. 1—4—0 ಮಾತ್ರ.

ಡಾಯಬೆಟೂನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ. ಪೂರ್ಣ ಗುಣಮಾಡುತ್ತದೆ. ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸೆಗೆ ರೂ. 2 ಮಾತ್ರ. ಅಂಚೆಹಾಸಲು ವಗೈರೆ ಇದರಲ್ಲಿ ಸೇರಿಲ್ಲ. ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವವು.

P. M. Kamath & Co.
Chemists & General Merchants,
New Court Road, MANGALORE.

ಅಥವಾ ಕುಂದಾಪುರದಲ್ಲಿ ಆ ಔಷಧವನ್ನು ತಯಾರಿಸುವ ಮಿ॥ ಕೆ. ಆರ್. [illegible] ವಿಚಾರಿಸಿದರೆ ಆ ಔಷಧವನ್ನು ಹೊಂದಬಹುದು.

ಸದ್ಬೋಧಕ ಗ್ರಂಥಮಾಲೆ.
(ತ್ರೈಮಾಸಿಕ ಪುಸ್ತಕ).

[illegible] | [illegible] ರೂ. 1 ಮಾತ್ರ.

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ, ಕಾದಂಬರಿ, ನಾಟಕ, ಕಾವ್ಯ, [illegible] ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವು [illegible] ಪ್ರಕಟವಾಗುವದು. ಸಮಸ್ತ ಕನ್ನಡಿಗರೂ ಸಂಗ್ರಹಿಸಿಕೊಳ್ಳಲು [illegible] "ಭಾಷಾ" ಪೋಷಕರೆಂದೆ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ.

ವಿಳಾಸ:— ಎಸ್. ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ,
"ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ).

ಅಥವಾ— S. R. Hebbar & Bros.,
General Merchants, SURATKAL, S. K.

ರಾಜ ವೈದ್ಯರ

ಮದನಮಂಜರಿ ಮಾತ್ರೆ

ಗಳನ್ನು ಸೇವಿಸುವದರಿಂದ ದೇಹಶಕ್ತಿಯನ್ನು ಕೊಡುವದು. ಹಸ್ತಪ್ರಯೋಗಾದಿಗಳಿಂದ ಹೋಗಲಾಡಿಸಿಕೊಂಡ ಶಕ್ತಿಯನ್ನು ಪುನಃ ಕೊಟ್ಟು ಪ್ರಾಯಸಮರ್ಥರನ್ನಾಗಿ ಮಾಡುವದು. ಈ ಮಾತ್ರೆಗಳಿಗೆ ಬೆಳ್ಳಿ ಭಂಗಾರದ ಭಸ್ಮಗಳು ಎಷ್ಟು ಮಾತ್ರವೂ ಸಮಾನವಾಗಲಾರದು.

ಕ್ರಯ ಡಬ್ಬಿ 1ಕ್ಕೆ ರೂ. 1—0—0.

ವಿಳಾಸ:—

ಮದನಮಂಜರಿ ಫಾರ್ಮಸಿ,
27. ಜೈನ ಬಜಾರು ರೋಡ ಮದ್ರಾಸು.

ಇನ್‌ಫ್ಲುಯೇನ್ಜಾ ಜ್ವರಕ್ಕೆ
ಎಮ್ಕೊ.

ಖಾತ್ರಿ ಚಿಕಿತ್ಸೆ!

ಇನ್‌ಫ್ಲುಯೆನ್ಜಾ, ನಿಮೋನಿಯಾ, ಮಲೇರಿಯಾ, ಸಾಧಾರಣ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ವಿಷಮ ಜ್ವರ, ಕೆಮ್ಮು, ಶೀತ, ಮೊದಲಾದ ವ್ಯಾಧಿಗಳಿಗೆ ಖಾತ್ರಿ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾಲಕ್ಕೆ ಸಾಕ್ಷ ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಖಾತ್ರಿ ಔಷಧಿಯನ್ನು ಈಗಷ್ಟೇ ಪ್ರಚಾರಕ್ಕೆ ತಂದಿರುತ್ತೇವೆ. ಮೇಲಿನ ವ್ಯಾಧಿಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬದಕ್ಕೆ ಕಳೆದ ಕೆಲವು ವರ್ಷಗಳಿಂದ [illegible] ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ.

ಎಮ್ಕೊ. ಇದು ಎಲ್ಲಾ ರೋಗಾಣುಗಳನ್ನು ಕೊಂದು ಅವರ ವಿಷವನ್ನು ನಾಶಪಡಿಸಿ, ಇನ್‌ಫ್ಲುಯೆನ್ಜಾ, ನಿಮೋನಿಯಾ ಮತ್ತು ಅದರಂತಿನ ಇತರ ಸೋಂಕು ರೋಗಗಳು ಹಬ್ಬದಂತೆ ತಡೆಕಟ್ಟಿ ಅವು ಉಲ್ಬಣವಾಗದಂತೆ ಮಾಡುತ್ತದೆ.

ಎಮ್ಕೊ. ಇದು ಇನ್‌ಫ್ಲುಯೇನ್ಜಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ.

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಿಗಳ ಕೂಟದಿಂದ ಅತಿ ಜಾಗರೂಕತೆಯಿಂದ [illegible] ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನ್ನು ಕೊಡಬಹುದು. ಹೆಂಗಸರೂ, ಮಕ್ಕಳೂ ಭಯಭೀತಿ ಇಲ್ಲದೆ ಸೇವಿಸಬಹುದು.

ಎಮ್ಕೊ. ಈಚೆಗೆ ಇದು ಕೊಲೇರಾ ರೋಗಿಗಳನ್ನೂ ಗುಣಪಡಿಸಿರುತ್ತದೆ.

ಕ್ರಯ ಸೀಸೆ ೧ರ ರೂ. ೦—೧೨—೦ ಮಾತ್ರ, ವಿ. ಪಿ. ಬೇರೆ.

ಪ್ರಾಮುಖ್ಯ ಏಜಂಟರು:— ದಿ ಇಕ್ಲಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು

ಮಲೆಜ್ವರ.
ಮಲೆಜ್ವರಹಾರಿ.

ಮಲೆಜ್ವರ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಪರಿಹಾರ. ಬೆಲೆ ೧೨ ಆಣೆ.

[illegible] ಒಂದು ರೋಗ [illegible] ಅಂಥ ವಿಷಮಯವಾದ ಪದಾರ್ಥಗಳು ಇದರಲ್ಲಿ ಲವಲೇಶವೂ ಇಲ್ಲ.

ಹಿಂದುಸ್ಥಾನ, ಬರ್ಮಾ, ಸಿಂಹಳ ಮುಂತಾದ ಪ್ರದೇಶಗಳ ಬೇರೆ ಬೇರೆ ಕಡೆಗಳಿಂದಲೂ ಕಳೆದ ೩೦ ವರ್ಷಗಳಲ್ಲಿ [illegible] ಪತ್ರಿಗಳು ಬರುತ್ತಿರುವವು.

ಪೂನಾ ಕೃಷಿಕಾಲೇಜಿನ ಅಧ್ಯಾಪಕರಾದ [illegible] ಅವರು ಈ ರೀತಿಯಾಗಿ ಬರೆಯುತ್ತಾರೆ:—"ಬೇರೆ ಬೇರೆ ವಿಧದ ಜ್ವರಗಳ ಸಂದರ್ಭದಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ ಅದರಿಂದ ಶೀಘ್ರದಲ್ಲಿ ಗುಣಕಾಣಿಸಿತು."

ನಮ್ಮ ಏಜಂಟರು ಈ ಮೊದಲೇ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು. ಕಮೀಶನ್ ಮುಂತಾದ ಶರ್ತುಗಳನ್ನು ನಮಗೆ ಬರೆದು ತಿಳಿಯಬಹುದು.

ಕರ್ಣಿಕ ಬ್ರದರ್ಸ್,
56 ಗಿರಗಾಂವ, ಮುಂಬಯಿ.

Agent: — The Woollen Mart, *Mangalore.*

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವಲ್ಲಿ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರಿಗೆ ಅನುಕೂಲವಾಗಿ ಬಹುಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಪುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರಸ್ಥಳಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಹೋಲ್ ಏಜಂಟ್:— ಜಿ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟೆ, ಮಂಗಳೂರು.

ಅಶ್ವಗಂಧಾ ಮೋದಕ.

ಅತ್ಯಂತ ಧಾತುಪುಷ್ಟಿಕ, ಕಾಮೋದ್ದೀಪಕ, ವೀರ್ಯವರ್ಧಕ, ಸ್ಮರಣಶಕ್ತಿ ದಾಯಕವಾದ ಉತ್ತಮ ಪಾಕ! ಈ ಪಾಕದಿಂದ ಧಾತುಕ್ಷೀಣತೆಯಿಂದ ಉಂಟಾಗುವ ಎಲ್ಲ ವಿಕಾರಗಳು ಕೂಡಲೆ ನಿಂತುಹೋಗುವವು. [illegible] ಹೋದ ಶಕ್ತಿಯು ಈ ಪಾಕದ ಸೇವನೆಯಿಂದ ಪುನಃ ಉಂಟಾಗುತ್ತದೆ. [illegible] ರಕ್ತವು ಕೂಡ ಇದರಿಂದ ಶುದ್ಧವಾದ ರಕ್ತವೃದ್ಧಿಯಾಗುತ್ತದೆ. [illegible] ಯಕೃತ್ (ಲಿವ್ಹರ) ಮತ್ತು ಪ್ಲೀಹಾ (ಸ್ಪ್ಲೀನ) [illegible] ಆಯಾ ಬಲಪಡುವ ಇದು ಆವು ಕಡಿಮೆಯಾಗುತ್ತದೆ. [illegible] ಮನಸ್ಸಿನ ದುರ್ಬಲತೆ, ಕಣ್ಣು ಕತ್ತಲೆಯಾಗುವದು, [illegible] ಮತ್ತು ಬಳ್ಳ ಮುರಿದುಬರುವದು. [illegible] ಎಲ್ಲ ವಿಕಾರಗಳು ಇದರಿಂದ ಹೋಗುತ್ತವೆ. [illegible] ಮುದುಕರಿಗೂ [illegible] ಉಪಯೋಗವಾಗುವದು, ಹಳೆ ಕೆಮ್ಮು, ಕ್ಷಯರೋಗದ ಪೂರ್ವಾವಸ್ಥೆಯು ಕೂಡ ಇದರಿಂದ ನಿಂತುಹೋಗುತ್ತವೆ. ಡಾ. [illegible] ಎಲ್. ಎಮ್. ಎಸ್. [illegible] ತಮ್ಮ ಅಭಿಪ್ರಾಯವನ್ನು ಹೀಗೆ ಕೊಡುತ್ತಾರೆ:— ಇಕ್ಕಗಂಧಾ [illegible] ವೈದ್ಯಕಶಾಸ್ತ್ರದಲ್ಲಿ [illegible] ಪುಷ್ಟಿ, ರಕ್ತವೃದ್ಧಿಯಾಗಿ ಕೆಮ್ಮು ನಿಶ್ಶೇಷವಾಗುತ್ತದೆ. [illegible] ಕೊಡ್ಡ ಪರಿಣಾಮ ಇದರ ಸೇವನೆಯಿಂದ [illegible]

ಕ್ರಯ— [illegible] ರೂ. ೩. [illegible] ಮಾತ್ರ.

ಮ್ಯಾನೇಜರ,
[illegible]

ಆರ್. ಮಾರ್ಟಿನ್ನರ ಲಪ್ತ ಎಣ್ಣೆ.

ಇದರ ವಾಸನೆಯು, (ಸುವಾಸನೆ) ಬಹಳ ಅಂದವಾಗಿಯೂ ಇರುವದಲ್ಲದೆ, ಬಹಳ ಹೊತ್ತಿನವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವದರಿಂದ, ಕಣ್ಣುಗಳು ತಂಪಾಗಿಯೂ, ಸ್ವಚ್ಛವಾಗಿಯೂ, ಆಗುವದಲ್ಲದೆ, ಮಯಲು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವದರಿಂದ ತಲೆಯಲ್ಲಿ [illegible] ತಲೆಯ ಕೂದಲುಗಳಲ್ಲಿರುವ ಹೇನುಗಳು [illegible] ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳುತ್ತಾರೆ.

ಕ್ರಯ ಬಾಟ್ಲಿ ೧ಕ್ಕೆ ರೂಪಾಯಿ ೧—೯—೦.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

[illegible] ಎಲ್ಲಾ ವಿಧವಾದ ಕೆಮ್ಮುಗಳು, ಗೂರಲು, ಶ್ವಾಸ, ಸೀತ, ನೆಗಡಿ, [illegible] ಮುಂತಾದ ರೋಗಗಳಿಂದ [illegible] ಗುಣಪಡಿಸುತ್ತದೆ. [illegible]

ಆರ್. ಮಾರ್ಟಿನ್ನರ ಗ್ಲ್ಯೂಡಿಯಮ್.

[illegible] ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ [illegible]

ವಿಳಾಸ:— ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೀಯರ ರೋಡು,
[illegible], ಫೋರ್ಟ, ಮುಂಬಯಿ.

R. D. Kately & Co.
No. D. Frere Road,
Near Wright & Co. Fort, Bombay.

ಗೊನೊರಿಹ್ಯಾ

ಮೇಹರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹರೋಗಗಳಲ್ಲಿ ... ಮೇಹವು ಹೆಚ್ಚಾದರೆ, ಮೂತ್ರದ್ವಾರದಲ್ಲಿ ಉರಿ, ಕೆಂಪುವರ್ಣದ ಅಥವಾ ಹಸುರುವರ್ಣದ ... ಸುರಿಯುವದಕ್ಕೆ, ... ಇಂದ್ರಿಯದಲ್ಲಿ ಉರಿ ಮುಂತಾದ ಮೇಹ ಸಂಬಂಧವಾದ ಎಲ್ಲಾ ಉಪರೋಗಗಳಿಗೆ ಉತ್ತಮ ಔಷಧವು ಇದರ ಸೇವನೆಯಿಂದ ಎಷ್ಟು ಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ... ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ:— ರೂ. 1—0—0.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು

ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪತಿ ಡಿಸ್ಪೆನ್ಸರಿ,
ಮಂಗಳೂರು.

ಶ್ರೀಮತ್ ಕಲ್ಯಾಣಿ ... ಗಳು

ಈ ಕಡೆ ನೋಡಿರಿ.

ಕಲ್ಯಾಣಕಾರಕ ... ದಿಂದಲೂ ... ರಾ ... ದುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ... ಔಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸವಿಸ್ತಾರವಾಗಿ ತಿಳಿಯುವದು.

S. P. RAJA & Co.,
Kalyanakaraka Bishagmandir.
POLALY, POST S. C

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟ್ ಪೊಳಲಿ, ದ. ಕ.

BANK OF MADRAS.

ಮದ್ರಾಸ್ ಬ್ಯಾಂಕ್

ಹೆಡ್ ಆಫೀಸು ಮದ್ರಾಸ್.

ಮೂಲಧನ	ರೂ 75,00,000
ಕ್ಷೇಮನಿಧಿ	,, 45,00,000

ಸೇವಿಂಗ್ಸ್ ಬ್ಯಾಂಕ್
— ವರ್ಷಕ್ಕೆ ನೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳನ್ನು ಪಡೆಯಲಾದಾವು

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ 5,000ಕ್ಕೆ ಮಿಗದ ಮೊಬಲಗನ್ನು ಠೇವಣಾತಿಯಾಗಿಡಬಹುದು

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ನೇಕಡಾ 4ರಂತೆ ರೂ 10,000ಕ್ಕೆ ಮೀರದ ಮೊಬಲಗಿನ ವರೇಗೆ ಬಡ್ಡಿ ಎಣಿಸಲಾಗುವುದು

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿನಿಂದ ಪಡೆಯಬಹುದು

ಸಿ ಎಲ್ ಗೊರ್ಡನ್,
ಏಜೆಂಟ್, ಮದ್ರಾಸ್ ಬ್ಯಾಂಕ್, ಮಂಗಳೂರು

ಜಗತ್ಪ್ರಸಿದ್ಧವಾದ ಶ್ರೀ ದೇವೀಪ್ರಸಾದ ಕಂಪೆನಿಯ ಸುಪ್ರಸಿದ್ಧವಾದ ಮಹೌಷಧಗಳು.



"ಧನ್ವಂತರೀ ಬಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರಿಂದ ವಾತ, ಕಫ, ಜಗತ, ಉಳುಕು ಘಾಯ, ತಲೆನೋವು, ಸೊಂಟನೋವು, ಬೆನ್ನುನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಕ್ಷಿಪ್ರದಲ್ಲಿ ಸಂಪೂರ್ಣವಾಗಿ ಗುಣಹೊಂದುವವು. ಬಾಟ್ಲಿ ೧ರ ಕಿಮ್ಮತ್ತು ೦—೭—೦, ಒಂದು ಡಜನು ಬಾಟ್ಲಿಗಳಿಗೆ ರೂ ೪—೧೨—೦

"ಗಜಕರ್ಣದ ಮುಲಾಮು"

ಗಜಕರ್ಣ, ಉಸಬು, ಖಜ್ಜಿ, ದಮ್ರು, ಹುಳುಕಡ್ಡಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಾಗಿಸುವದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು ಬಾಟ್ಲಿ ೧ಕ್ಕೆ ೦—೩—೦, ಒಂದು ಡಜನಿಗೆ ರೂ. ೩—೦—೦.

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಮೆಡಲು ದೊರೆತಿರುವವು ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೂ ಪತ್ರವ್ಯವಹಾರ ಮುಖೇನ

ದಿ. ಮ್ಯಾನೆಜರ್ — ಶ್ರೀ ದೇವಿಪ್ರಸಾದ ಕಂಪೆನಿ,
ಪೋಸ್ಟ್ ಬಾರಕೂರು, ದ. ಕನ್ನಡ.

ಭೃಂಗರಾಜ ತೈಲ.

ಇದನ್ನು ತಲೆಗೆ ಹಚ್ಚಿದರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ ನರೆತ ಕೂದಲು ಕಪ್ಪಾಗುತ್ತದೆ. ಕೇಶದ್ರಾಮಗಳು ವೃದ್ಧಿಹೊಂದುತ್ತವೆ. ಶರೀರದ ಮೇಲೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ. ಪಿತ್ತನಾಶ ಮಾಡುತ್ತದೆ ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ. 0—12—0

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದನ್ನು ತಲೆಗೆ ಹಚ್ಚಿಕೊಂಡರೆ ಪರಿಹಾರವಾಗುತ್ತದೆ. ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ. ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ 1

ಜ್ವರಾಂತಕ ಮಾತ್ರೆ—ಈ ಮಾತ್ರೆಯನ್ನು ಉಪಯೋಗಿಸಿದರೆ ಎಲ್ಲಾ ಜ್ವರಗಳ ಪರಿಹಾರವಾಗುತ್ತದೆ ಉಪಯೋಗಿಸುವ ಕ್ರಮ, ಮತ್ತು ಗುಣ ತರಿಸಿಕೊಂಡಲ್ಲಿ ಪ್ರಸಿದ್ಧಪಡಿಸುತ್ತದೆ 25 ಮಾತ್ರೆಗಳುಳ್ಳ ಸೀಸೆ ಒಂದರ ರೂ 1.

ಪಂಚಸಾರ ಲೇಹ—ಅಜೀರ್ಣ, ಪಿತ್ತ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತದೆ ಮತ್ತು ಇಂದ್ರಿಯವನ್ನು ಬಲಪಡಿಸಿ ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ ಒಂದು ಸೇರಿಗೆ ರೂ 1—4—0

ಮೇಲೆ ಬರೆದ ಔಷಧಿಗಳು ಸರ್ವ ವೈದ್ಯರಿಗೂ ಶಿರೋಮಣಿಯಾದ ಶ್ರೀ ಆರ್ಯಾವರ್ತಾವಲಂಬಿಗಳಾದ ಶ್ರೀ ಪೂಜ್ಯರಾದ ಋಷಿ ಪ್ರಣೀತ ವೈದ್ಯಗ್ರಂಥದ ಆಧಾರದಿಂದ ಆ ಪರಮಪೂಜ್ಯರ ಅನುಯಾಯಿಗಳಾದ ನಮ್ಮಿಂದ ತಯಾರಿಸಲ್ಪಟ್ಟಿರುತ್ತವೆ ... ನಮಗೆ ಎಷ್ಟು ... ದೇವರ ... ದಯೆಯಿಂದ ಈ ಔಷಧಗಳು ರೋಗಪರಿಹಾರಕವಾಗಿರುತ್ತವೆ

ಸೂಚನೆ—ಅಪೇಕ್ಷಿಸುವವರು ಕೆಟಲಾಗಿಗೆ ಬರೆದುಕೊಳ್ಳುವುದು ... ಉಚಿತವಾಗಿ ಕಳುಹಿಸಲಾಗುವುದು

ವಿಳಾಸ.—ಆಯುರ್ವೇದಿಕ್ ಮತ್ತು ಹೊಮಿಯೊಪತಿಕ್
ಧರ್ಮವೈದ್ಯಶಾಲಾ, ಧರ್ಮಸ್ಥಳ, ದ ಕನ್ನಡ

To Get
BEST and CHEAPEST
EVERYTHING FROM BOMBAY

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ — ನಾವು ಈ ಕೆಳಗೆ ಹೆಸರು ತೋರುವ ಕಂಪೆನಿಯನ್ನು ಸದ್ಯಾ ತೆರದಿರುತ್ತೇವಾದುದರಿಂದ ಮುಂಬಯಿಯಿಂದ ಬೇಕಾಗುವ ಸಾಮಾನುಗಳನ್ನು ಅತ್ಯಲ್ಪ ಕಮಿಶನಿನ ಮೇಲೆ ಸಪ್ಲೈ ಮಾಡಿಕೊಡುತ್ತೇವೆ ಸಾಮಾನು ತರಿಸಲಪೇಕ್ಷಿಸುವವರು ನಮ್ಮ ಶರ್ತಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು

ಎವರ್ ರೆಡಿ ಸೇಫ್ಟಿ ರೇಜರು ಮತ್ತು ದಸ್ತೂರರ ಎಂಟಿಪೇಪ್ ಎಂಬ ಜ್ವರದ ಮಿಶ್ರಣವು ನಮ್ಮಲ್ಲಿ ದೊರೆಯುತ್ತದೆ ಕ್ಷಿಪ್ರದಲ್ಲಿ ಬರೆಯಿರಿ

TEL. ADDRESS.
PARTSARTHI, Bombay

BOMBAY CANARA TRADING CO.
Jamnadas Building, Pitha Street,
FORT. BOMBAY

ಶುದ್ಧ ಶಿಲಾಜಿತು
(ಯಾನೆ)
ಉತ್ತಮ ಕಲ್ಪದ.

ತೊಲೆ ೧ಕ್ಕೆ ರೂ ೧ ೫ ತೊಲೆ ಡಬ್ಬಿ ೧ಕ್ಕೆ ೨-೧೨-೦.

ಅಂಚೆಹಾಸಲು ೪ ಆಣೆ ಬೇರೆ

ನಾಲ್ಕಾಣೆಯ ಚೀಟು ಕಳುಹಿಸಿದಲ್ಲಿ ನಮೂನೆ (Sample) ಕಳುಹಿಸಬಹುದು

ನಮ್ಮಲ್ಲಿ ಸ್ವಲ್ಪ ಮಾತ್ರ ಉಳಿದಿದೆ. ಬೇಕಾದವರು ತ್ವರೆ ಮಾಡಿರಿ

ಪತ್ತೆ — ಮನೋಲ್ಲಾಸಿನಿ ಕಂಪನಿ,
Manollasini Co, 4 ಕಂಕನಾಡಿ ಪೋಸ್ಟ್
4 *Kankanady*

ಜರ್ಮನಾ ಬಳ್ಳಿಯ ರಿಸ್ಟ್ ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ

ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ...ಯಾರ 1ಕ್ಕೆ ರೂ 5—8—0

ನಮ್ಮ ವಿಳಾಸ — ಪಿ. ಎ ಎಸ್ ವಾಚ್ ಕಂಪೆನಿ,
ಸಾಹುಕಾರಪೇಟೆ, ಮದ್ರಾಸ್.

ಚಿಲೂರೀ ಮೈಸೂರು

ಸವಾಸ್ ಊದು ಬತ್ತಿಗಳು. ಮನೋರಂಜಕ !

ಅಂಬರ್ ಬತ್ತಿ, ಸೇರಿಗೆ ರೂ ೮ ೬ ೪, ೩, ೨		ಧೂಪದ ಬತ್ತಿ ಸೇರು ರೂ,	೩
ಮಲ್ಲಾರ ಬತ್ತಿ , , ೯		ಅರಗಜ ತೊಲ ೧ಕ್ಕೆ ,,	೨
ಜವ್ವಾಜಿ ಬತ್ತಿ , ೩			
ಕಸ್ತೂರಿ ಬತ್ತಿ , ೩		ಗಂಧದ ಬಟ್ಟಿ , ,,	೧

ಅತ್ತರುಗಳು — ಗುಲಾಬ್ ಅಂಬರ್ ಹೀನಾ ತೊಲೆ ,, ,, ೪

ಸೆಂಟುಗಳು — ಮಲ್ಲಿಗೆ, ಗುಲಾಬಿ ಮುಸ್ಕು, ನಾರಿಸಸ್ (ವಿಲಾಯಿತಿ, ಅಮೇರಿಕ, ಸ್ವೀಟ್‌ಲ್ಯಾಂಡಿನಲ್ಲಿ ತಯಾರಿಸಿದ್ದು) ½ ಔನ್ಸ್ ಬಾಟ್ಲಿ ರೂ ೪

ದಶಾಂಗ ಅಥವಾ ಸುಗಂಧ ರಜಕ ಸುಗಂಧ ಅಡಿಕೆ ಪುಡಿ, ಹಾಲುಮಡ್ಡಿ, ಸೇರು ತೂಕದ ಡಬ್ಬಿ ೧ಕ್ಕೆ ರೂ ೧

ವಿಳಾಸ— ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪನಿ,
ಪರಿಮಳ ವ್ಯಾಪಾರಿಗಳು, ಬೆಂಗಳೂರು ಸಿಟಿ

ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರ ಲೇಖ್ಯಬೋಧಿನಿ

ಕ್ರಯ. ರೂ 1—8—0

ವಿವೇಕ ಚೂಡಾಮಣಿ.

ಶ್ರೀ ಶಂಕರಾಚಾರ್ಯರವರ ಅದ್ವೈತ ಸಿದ್ಧಾಂತದ ಸಾರವನ್ನು ಸಾವಧಾನವಾಗಿ ಬೋಧಿಸುವದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯ ಸಂವಾದ, ಬ್ರಹ್ಮೋಪದೇಶ ಮುಂತಾದ ಅತಿ ಪ್ರಕರಣಗಳನ್ನು ಒಳಗೊಂಡಿದೆ ಇವನ್ನು ವ್ಯಾಸಂಗಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಸ್ಸಿಗೆ ಬರುವವು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು ಒಟ್ಟು ಪುಟಸಂಖ್ಯೆಗಳುಳ್ಳ ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ

ಬೆಲೆ ೧ಕ್ಕೆ ರೂ 3—0—0, ಹಾಸಲು 4 ಆಣೆ.

ವಿಳಾಸ:—

ಎಚ್. ಎಸ್. ರಾವ್, ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ

ತಿರುಚಿ ಸುಗಂಧನಿಧಿ ಕಾರಖಾನೆ

ಅನೇಕ ನಮೂನೆಯ ಮಿಶಾ ಅಂಬರ್, ಜವ್ವಾಜಿ, ಪುನಗು, ಕಸ್ತೂರಿ, ಊದುಬತ್ತಿಗಳು ಬಿಲ್ಲೆಗಳು, ಅರಗಜ, ಹಿನಾ ಅತ್ತರುಗಳ ಸೆಂಟುಗಳ ಶೃಂಗಾರ ಮಲಕ ತೈಲ, ಕುಂತಳವರ್ಧಿನಿ ತೈಲ, ಇವೇ ಮೊದಲಾದ ಸುಗಂಧ ದ್ರವ್ಯಗಳು ನಮ್ಮಲ್ಲಿ ತಯಾರಾಗಿ ಬಿಕರಿಯಾಗುತ್ತ, ಮೈಸೂರು, ... ಚೆನ್ನಾಯಿ ಕಲ್ಕತ್ತಾ, ಡಿಲ್ಲಿ, ಪಂಜಾಬು ಮುಂತಾದ ಇಂಡಿಯಾ ದೇಶದಲ್ಲೂ ಮತ್ತು ಬರ್ಮ, ಸಿಲೋನ್, ಜಪಾನ್ ಮುಂತಾದ ದ್ವೀಪಾಂತರಗಳಲ್ಲೂ ನಮ್ಮ ತಯಾರಿಯ ಸುಗಂಧದ್ರವ್ಯಗಳು ಪ್ರಖ್ಯಾತಿ ಹೊಂದಿವೆ. ಒಂದಾವರ್ತಿ ನಮ್ಮ ಪದಾರ್ಥಗಳನ್ನು ತರಿಸಿನೋಡಿದರೆ ಅವುಗಳ ಗುಣಗಳ ತಿಳಿಯುವುದು.

ರಖಂವಾರ್ ಊದುಬತ್ತಿಗಳು ೨೪ ರೂಪಾಯಿ ತೂಕವುಳ್ಳದ್ದು ಶೇರು ೧ಕ್ಕೆ

ಊದುಬತ್ತಿಗಳು

ಸುಗಂಧ ಕಲಾನಿಧಿ ಬತ್ತಿ ಶೇರ್	1ಕ್ಕೆ		12—0—0
ಕುಸುಮಗಂಧವರ್ಷಿನಿ	,,	,,	8—0—0
ಮಚ್ಚೆಮ್ವೇಲಿಸಿ...	,,	,,	6—0—0
ನಂಬರ್ ಎ ಅಂಬರ್	,,	,,	5—0—0
,, ಬಿ ಅಂಬರ್	,,	,,	3—0—0
,, ಸಿ ಅಂಬರ್	,,	,,	2—0—0
1ನೇ ಜವ್ವಾಜಿ ಬತ್ತಿ	,,	,,	6—0—0
2ನೇ ,,	,,	,,	4—0—0
1ನೇ ಕಸ್ತೂರಿ ಬತ್ತಿ	,,	,,	3—0—0
2ನೇ ,,	,,	,,	2—0—0
1ನೇ ಚಂದನಗಂಧ ಬತ್ತಿ	,,	,,	1—8—0
2ನೇ ,,	,,	,,	1—0—0

ಅವ್ವಲ್ ಹಶೀಬಿಲ್ಲೆಗಳು

	1 ತೊಲೆ	½ ತೊಲೆ	¼ ತೊಲೆ
1ನೇ ನಂಬರ್	1 0 0	0 8 0	0 4 0
2ನೇ ,,	0-8-0	0 4 0	0 2 0

ಜವ್ವಾಜಿಗಂಧ ಅಥವಾ ಅರಗಜ

ಅವಲ್ 1ನೇ ನಂಬರ್ ತೊಲ 1ಕ್ಕೆ	2—0—0
,, 2ನೇ ,, ,,	1—0—0

ಪುದುಕೋಟೆ ಕಸ್ತೂರಿ ಬಿಲ್ಲೆಗಳು

	1ತೊಲೆ	½ತೊಲೆ	¼ತೊಲೆ
1ನೇ ನಂಬರ್	2-0-0	1-0-0	0-8-0
2ನೇ ,,	1-0-0	0-8-0	0-4-0

ಉತ್ತಮವಾದ ದಶಾಂಗ ಸೇರು 1ಕ್ಕೆ ರೂ 1

ತಲೆಗೆ ಹಚ್ಚುವ ಕುಂತಳವರ್ಧಿನಿ ತೈಲ ಸೀಸೆ 1ಕ್ಕೆ ರೂ 1 ಸ್ನಾನಕ್ಕೆ ಉಪಯೋಗಿಸುವ ಶೃಂಗಾರಮಲಕ ತೈಲ ಸೀಸೆ 1ಕ್ಕೆ 1—0—0

ಎಲ್ಲಾ ಸಾಮಾನುಗಳಿಗೆ ಟಪ್ಪಾಲು ಚಾರ್ಜು ಬೇರೆ ಬೀಳುತ್ತ, ವ್ಯಾಪಾರಿಗಳಿಗೆ ಕಮಿಶನ್ ವಜಾಮಾಡಿ ಕಳುಹಿಸುವೆವು ಬೇಕಾದ ಸಾಮಾನುಗಳ ಹೆಸರು, ನಂಬರು, ಬರೆದರೆ ಅದರಂತೆ ನೋಡಿ ರವಾನಿಸುವೆವು ನಮ್ಮ ಕಟುಹಾಗು ಉಚಿತವಾಗಿ ರವಾನಿಸುವೆವು ನಮಗೆ ಕಾಗದ ಬರೆಯತಕ್ಕವರು ತಮ್ಮ ಹೆಸರು, ಗ್ರಾಮ, ಪೋಸ್ಟು ಇತ್ಯಾದಿಗಳು ಸ್ಪಷ್ಟವಾಗಿ ಬರೆಯಬೇಕು

Sugandhanidhi Office,
Melepudur, Trichinopoly

ನಮ್ಮ ವಿಳಾಸ—ತಿರುಚಿ ಸುಗಂಧನಿಧಿ ಕಾರಖಾನೆ,
ಮೇಲೆಪುದೂರು, ತಿರುಚಿನಾಪಳ್ಳಿ.

HAARLEM OIL.

(Genuine Dutch Produce)

A Domestic remedy of extraordinary merits that has stood the test of centuries. A Panacea against all human ailments.

ಲೋಕಪ್ರಸಿದ್ಧವಾದ ಹಾರ್ಲೆಮ್ ತೈಲ.

SUPPLY EXPECTED SHORTLY

Register your orders immediately against disappointment.

CAPABLE AGENCY WANTED.

Prices & particulars from—

The Bombay Stores,

Humpankatta, MANGALORE.

ನಮ್ಮ ... ಕೊಳ್ಳಿ ...

3 ... 0—14—0.
... 2 ... 1—10—0.
... 0—8—0.

ವಿಳಾಸ— ... ಅಂಡ್ ಕೊ,
... ಬೀದಿ, ಮದರಾಸು.

ಬಾಲಕ ತೋಷಣ! ಬಾಲಿಕಾ ಭೂಷಣ!

ಸುಬೋಧ ಕುಸುಮಾಂಜಲಿ ಗ್ರಂಥಮಾಲಾ.

... ಮಕ್ಕಳಿಗೆ ತಿಳಿಯುವಂತೆ ಸುಲಭವಾದ ತಿಳಿಗನ್ನಡ ಭಾಷೆಯಲ್ಲಿ ಬರೆಯಲ್ಪಟ್ಟ ಭಾರತೀಯ ಪ್ರಸಿದ್ಧ ಸ್ತ್ರೀಪುರುಷರ ಚರಿತ್ರರತ್ನಗಳು. ಮೈಸೂರು ಸರಕಾರದವರಿಂದ ಬಹುಮಾನಪುಸ್ತಕಗಳಾಗಿಯೂ, ಮದ್ರಾಸು ಸರಕಾರದವರಿಂದ ... ಉಪಯೋಗಾರ್ಹಗಳೆಂಬುದಾಗಿಯೂ ಅಂಗೀಕೃತವಾಗಿವೆ. ಪ್ರತಿಯೊಬ್ಬ ಕರ್ನಾಟಕ ಬಾಲಕನೂ, ಬಾಲಿಕೆಯೂ ತಪ್ಪದೆ ಓದಬೇಕು. ಕರ್ನಾಟಕ ಮಹಾಜನಗಳೇ! ಈ ದಿನವೇ ಬರೆಯಿರಿ, ಬೆಲೆ ಬಲುಸುಲಭ.

ಚಂದ್ರಹಾಸ ರೂ. 0—2—0; ಧ್ರುವ ರೂ. 0—2—0; ಪ್ರಹ್ಲಾದ ರೂ. 0—2—0; ಸಾವಿತ್ರಿ ರೂ. 0—2—0; ಹರಿಶ್ಚಂದ್ರ ರೂ. 0—2—0; ... ರೂ. 0—1—0; ದಾದಾಭಾಯಿ ನೌರೋಜಿ ರೂ. 0—1—0; ... ಶತಕ ರೂ. 0—2—0.

ಉಪಾಧ್ಯಾಯರುಗಳಿಗೂ ವ್ಯಾಪಾರಿಗಳಿಗೂ ಧಾರಾಳವಾದ ಕಮಿಷನ್.

ವಿಳಾಸ—ಮ್ಯಾನೇಜರ್,
... ಗ್ರಂಥಮಾಲಾ ಕಾರ್ಯಾಲಯ,
... ಸಿ. ಬೆಂಗಳೂರು, ದಂಡು.

ನೇಟಿವ್ ಡಾಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು.

1. ಮಹಾಮದನ ಕಾಮೇಶ್ವರಿ ಲೇಹ:—ಬಹಳ ಶ್ರಮಪಟ್ಟು ಕೆಲಸಮಾಡುವ ... ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರದ ಘಳಿತದಿಂದ ಅಶಕ್ತ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸುವಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು.

2. ಮಹಾಜ್ವರಾಂಕುಶ (ಖಾತ್ರಿ ಗುಣ):—ಇನ್‌ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 8.

3. ಬಾಲಗ್ರಹಗುಟಿಕೆ:—ಕೂಸು ವ ಮಕ್ಕಳ ಅಪಸಾರಕ್ಕೆ ರಾಮಬಾಣ. ಡಜನಿಗೆ ಆಣೆ 10.

4. ಕೊಲೆರಾ ಯಾನೆ ವಾಂತಿಬೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಬೇದಿ ಕೂಡಲೆ ಗುಣ. ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಜೊರಕಡೆ ಗುಣ, ಬಾಟ್ಲಿ 1ಕ್ಕೆ ಆಣೆ 8.

5. ಖಾಸಕುಠಾರ ಗುಟಿಕೆ:—ಇದು ಖಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬಸ, ಕೆಮ್ಮು, ಇವು ಗುಣ. ಡಜನಿಗೆ ಆಣೆ 10.

6. ಮೇಹಕುಠಾರ:—ಮೂತ್ರಕೃಚ್ಛ್ರ, ಅಶ್ಮರಿ, ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು; ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ. 16 ದಿವಸದ ಔಷಧಿ. ಕ್ರಯ ರೂ. 2.

7. ಇಚ್ಛಾ ಭೇದಿ:—ಆಯಾಸವನ್ನು ಉಂಟುಮಾಡದ ಸುಖವಿರೇಚಕ. ಬಾಟ್ಲಿ 1ಕ್ಕೆ ಆಣೆ 12.

8. ಭೃಂಗರಾಜತೈಲ:—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ಸುಖಪಾಗಿಯೂ ಮಾಡುವುದು. ಬಾಟ್ಲಿ 1ಕ್ಕೆ ಆಣೆ 12.

9. ದಂತಮಂಜನ:—(ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ನಸಡು ನೋವು, ಕೀವು ಯಾ ರಕ್ತ ಬರುವುದು, ಮುಂತಾದ ದಂತಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2.

ವಿಳಾಸ— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್, ಮಂಗಳೂರು ದ. ಕ.

ಕೂತಲ್ಲಿಗೆ ಬರುವದು

ಯಾವುದೊಂದು ಖರ್ಚಿಲ್ಲದೆ ಪಂಚವರ್ಣಗಳಿಂದ ತಯಾರಿಸಿದ

1920ನೆಯ ಇಸವಿ ಕ್ಯಾಲಂಡರ್.

ಟಪ್ಪಾಲು ಮತ್ತು ಪೇಕಿಂಗ್ ಖರ್ಚಿಗಾಗಿ ೨ ಆಣೆಯ ಟಪ್ಪಾಲು ಸ್ಟಾಂಪನ್ನು ಕಳುಹಿಸಿರಿ.

ವಿಳಾಸ:—
ವಿ. ಎ. ಎಸ್. ಪಾಣಿ ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

NETRANAND SAREES

Cheap and Fashionable

Sarees in all brilliant colours with lustrous borders.

Liberal Commission for wholesale Orders.

ಚೆಲೋ ಬಣ್ಣದ ಶೀರೆಗಳು! ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ... "ನೇತ್ರಾನಂದ" ಶರವಾದ ಶೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ.

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಸಿಕ್ಕುವದು.

ನೂಲಿನ ಕೆಂಪು (Congo Red) ಹರದಿ ಮತ್ತು ಇತರ ಬಣ್ಣಗಳು ಕಮ್ಮಿಕ್ರಯದಲ್ಲಿ ದೊರಕುವವು.

ವಿಶೇಷ ಮಾಹಿತಿಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶ್ರೀ ಶೀತಾರಾಮವಿಠ್ಠಲ ಕಂಪೆನಿ,
ಮಿಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟೆ ಮಂಗಳೂರು.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹಾಲ್

ಬಹು ನೂತನ ಅಲೋಪತಿ ಮತ್ತು ಹೋಮಿಯೋಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!
ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್‌ಪೆನ್ ಗಳೂ, ಥರಮಾಮಿಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಫೊಮೆಂಟೇಶನ್ ಚೀಲಗಳೂ, ಐಸ್‌ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸಕ ಸಾಮುಗ್ರಿಗಳೂ ಸ್ಪಿರ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ, ನೀಲಗಿರಿಯ ಎಣ್ಣೆ, ಎಂಬ ಯುಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು.

ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಿಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆಮಾಡಿ, ಧರ್ಮಾರ್ಥವಾಗಿ ಕೊಡುವವು.

☞ ಔಷಧಗಳನ್ನು ಶಾಸ್ತ್ರೋಕ್ತವಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರುಂಟು.

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ! ವಗದಿ ವ್ಯಾಪಾರ! ರೋಗಗಳು ಗುಣವಾಗುವುದು ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

ಸುಗಂಧ ಕಲಾನಿಧಿ.

ಅಲ್ಪವಾದ ಬೆಲೆ! ಮಹತ್ವಾದ ವಿಷಯ!

ಈ ಪುಸ್ತಕದಲ್ಲಿ ಅಪೂರ್ವವಾದ ೨೦ ವಿಧ ಊದಕಡ್ಡಿ, ಅನೇಕ ವಿಧ ಗಂಧದ ಬಿಲ್ಲೆ, ಸ್ನಾನಚೂರ್ಣಗಳು, ಅಂಬರ್, ದಂತಮಂಜನ, ಅಬೀರ್ ಪುಡಿ, ಅನೇಕ ಬಗೆ ಸುವಾಸನೆ ಎಣ್ಣೆ, ಪೈನಾಬಾಂ, ಪನ್ನೀರು, ವಿಲಾಯತಿ ಪನ್ನೀರು ಕರ್ಪೂರ, ಅಭ್ಯಂಗಕ್ಕನುಕೂಲವಾದ ತೈಲ ಇವೇ ಮೊದಲಾದ ೧೦೩ ವಿಷಯಗಳು, ಮೊದಲನೆ ಭಾಗದಲ್ಲಿಯೂ, ಎರಡನೆ ಭಾಗದಲ್ಲಿ ಗಾಜು, ಪಚಗನ್ನಡಿ, ಚೀನಾಪಾತ್ರೆ, ವಾರ್ನಿಶ್, ಸಿಮೆಂಟ್, ಕಾಗದ, ಪೆನ್ಸಿಲ್, ಬೆಂಕಿಕಡ್ಡಿ, ದಂತ ಕೆಲಸ, ದಂತಕ್ಕೆ ಅನೇಕ ವಿಧ ಬಣ್ಣಕೊಡುವಿಕೆ, ಪಾಲೀಶ್, ಕಾಫಿಂಗ್‌ಪ್ರಸ್ ಮತ್ತು ಯಂತ್ರ, ಲಿಥೋಗ್ರಾಫಿಯಂತ್ರ, ಲಿಥೋ ಪ್ರೆಸ್‌ಯಂತ್ರ, ಮತ್ತು ನಾನಾ ವಿಧ ಯಂತ್ರ, ಯಂತ್ರಪೌಡರು, ಕಾಗದಕ್ಕೆ ಮೆರುಗು, ಸ್ಲೇಟುಬೋರ್ಡು, ಫೋಟೋ ಮುಂತಾದ ೬೦ ವಿಷಯಗಳು. ಒಬ್ಬರ ಸಹಾಯವಿಲ್ಲದೆ ತಿಳಿಯಬಹುದು. ಈ ಪುಸ್ತಕವು ನಿಮ್ಮ ಬಳಿ ಇದ್ದರೆ ಒಬ್ಬ ಅನುಭವಶಾಲಿಯಾದ ಬೋಧಕನಿದ್ದಂತೆಯೇ. ಬೆಲೆ ರೂ. ೧—೦—೦.

ವಿಳಾಸ:— ಕೆ. ಪುಟ್ಟಪ್ಪ, ಕಲಾಪ್ರಸಾರಕ ಕಾರ್ಯಾಲಯ,
ನಂ. 12 ಟ್ಯಾಂಕ್‌ರೋಡು,
ಬೆಂಗಳೂರು ಸಿಟಿ.

"ವೈದ್ಯಾಮೃತ ಮಂದಿರಂ"

ಎಂಬ

ನಮ್ಮ ಆಯುರ್ವೇದ ವೈದ್ಯಶಾಲೆಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ಎಲ್ಲಾ ತೈಲಗಳೂ, ಆಸವಾರಿಷ್ಟಗಳೂ, ಕಷಾಯಗಳೂ, ದ್ರವದ್ರಾವಕಗಳೂ, ಭಸ್ಮಗಳೂ, ಚೂರ್ಣಗಳೂ, ಮಾತ್ರೆಗಳು ಇತ್ಯಾದಿ ಔಷಧಿಗಳೂ ಮತ್ತು ಕಾಶ್ಮೀರ, ನೇಪಾಳ ದೇಶಗಳಿಂದ ತರಿಸಿದ ಕಸ್ತೂರಿ, ಪಚ್ಚಕರ್ಪೂರ, ಕುಂಕುಮಕೇಸರ ಮುಂತಾದವುಗಳೂ ಸುಲಭವಾದ ಕ್ರಯಕ್ಕೆ ದೊರಕುತ್ತವೆ. ಪರಸ್ಥಳದವರು ರೋಗದ ಪ್ರಕೃತಿಯನ್ನು ವಿಶದವಾಗಿ ಬರೆದು ತಿಳಿಸಿದರೆ ಅಗತ್ಯವಿರುವ ಔಷಧಿಗಳನ್ನು ಅನುಪಾನ ಪತ್ರಿಕೆ ಸಮೇತ ವಿ. ಪಿ. ಮೂಲಕ ಕಳುಹಿಸುವೆವು.

ವಿಳಾಸ:— ಕೆ. ಕೆ. ನಾಯರ್ ಎಂಡ್ ಬ್ರದರ್ಸ್,
ವೈದ್ಯಾಮೃತ ಮಂದಿರಂ,
ನೀಲೇಶ್ವರ, ದ. ಕನ್ನಡ

ಮದ್ರಾಸ್ ಸರ್ಕಾರದವರಿಂದ 1920ನೇ ವರ್ಷದ ಪರೀಕ್ಷೆಗಳಿಗೆ ನೇಮಿಸಲ್ಪಟ್ಟಿರುವ

ಕನ್ನಡ ಪಾಠಪುಸ್ತಕಗಳು

	ರೂ.	ಆ.	ಪೈ.		ರೂ.	ಆ.	ಪೈ.
ರಾಮಾಯಣ ಸಂಗ್ರಹ—ಬಾಲಕಾಂಡ	0	6	0	ಚಂದ್ರಹಾಸ	0	2	0
ಸುಭದ್ರೆ	0	6	0	ಗುಣಸಾಗರ	0	6	0
ಪಂಚುಕಾ	0	12	0	ನೀತಿಚಿಂತಾಮಣಿ ಭಾಗ I	0	4	[illegible]
ಪದ್ಯಸಾರ ಭಾಗ I	0	8	0	,, ,, II	0	3	[illegible]
ಅಕ್ಬರ್ ಚರಿತ್ರೆ	1	1	0	,, ,, III	0	4	6
ರಾಜಶೇಖರ ಚರಿತ್ರೆ	1	0	0	ಹೊಸ ಪುಸ್ತಕಗಳು			
ಕುಮುದಮದನಕುಮಾರ ಚರಿತ್ರೆ I	0	8	6	ವಿಶ್ವವಲ್ಲಭ	0	6	0
ಅಧಿಕಪಾಠಗಳ ಪುಸ್ತಕ	0	6	0	ಸುಶೀಲ	0	1	6
ಸಾವಿತ್ರೀ ಚರಿತ್ರೆ	0	2	3	ಚಂದ್ರಮತಿ	0	8	0
ರಮಾನಂದ	0	10	0	ಸಂತಾಪಕ	0	6	0
ಸುವ್ರತ	0	13	0	ಅಬಲಾಸಚ್ಚರಿತ್ರ ರತ್ನಮಾಲೆ	2	0	0
ಪ್ರಬಂಧಮಂಜರಿ	0	14	0	ನಿರ್ಮಲೆ	0	12	0
ಪದಾರ್ಥವಿಜ್ಞಾನಸಾರ	0	14	0	ಪದತ್ರಯ (ಬಾಲವ್ಯಾಕರಣ)	0	3	6
ಜ್ಯೋತಿಶ್ಶಾಸ್ತ್ರ	1	0	0	ಹಿಂದು ಪ್ರತಿಪವೇಶ	0	10	0
ಪ್ರಹ್ಲಾದ	0	2	0	ಪದ್ಯಾ	0	12	6
ಧ್ರುವ	0	2	0	ದಾಕ್ಷಾಯಣಿ	0	8	0
				ಝಾನ್ಸಿಯ ಲಕ್ಷ್ಮೀಬಾಯಿ	0	12	0

ಇತ್ಯಾದಿ ಎಲ್ಲಾ ಸ್ಕೂಲುಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ.

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.

ಸಿಂಹಾವಲೋಕನ.

[illegible]

ವಿದೇಶ ವರ್ತಮಾನ.

[illegible]

ಪಾರ್ಲಿಮೆಂಟಿನಲ್ಲಿ ಹಂಟರ ಕಮ್ಮಿಟಿಯ ಚರ್ಚೆ—ಹಂಟರ ಕಮ್ಮಿಟಿಯ ರಿಪೋರ್ಟನ್ನು ಆಧರಿಸಿ ಜನರಲ್ ಡಾಯರನ ವರ್ತನವನ್ನು ಆಕ್ಷೇಪಿಸಿ ಕಳೆದ ೩ನೇ ತಾರೀಕಿಗೆ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ದಿವಸ ನಿಶ್ಚಯವಾಗಿತ್ತು. ಆದರೆ ಅಷ್ಟು ವಾಯಿದೆಯೊಳಗೆ ಡಾಯರನ ಹೇಳಿಕೆಯು 'ಆರ್ಮಿ ಕೌನ್ಸಿಲ'ನವರ ಮುಂದೆ ಇಡಲು ತಯಾರಾಗಿ ತಲಪಲಾರದು ಎಂಬ ಸಂದೇಹ ಬಂದ ನಿಮಿತ್ತ ಚರ್ಚೆಯ ತಾರೀಕನ್ನು ಮುಂದರಿಸಿಟ್ಟಿದೆ.

ಐರ್ಲಂಡಿನ ಅನಾಯಕತ್ವ—ರೈಲ್ವೆಯ ಮಜೂರರು ಕೆಲಸ ಮಾಡಲು ನಿರಾಕರಿಸಿದ್ದರಿಂದ ಬಂಡಿಗಳಲ್ಲಿರುವ ಪೋಲೀಸಿನವರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಈ ಧಾಂದಲೆಯನ್ನು ಅಡಗಿಸಲು ಹೋಗಲಾರರು. ಹೀಗಾಗಿ ಐರ್ಲಂಡದ ನೈಋತ್ಯ ಭಾಗದಲ್ಲಿ ಅಧಿಕಾಂಶದಲ್ಲಿ ಎಲ್ಲಾ ಬಗೆಯ ಚಲಾವಣೆಗೆ ತೊಡಕಾಗಿದೆ. ಲಂಡಂಡರಿ ಎಂಬಲ್ಲಿ ಜನಗಳಿಗೂ, ಉಪ್ಪರನವರಿಗೂ ಹೊಡೆದಾಗಿ ೧೭ ಮಂದಿ ಮಡಿದರು. ೪೯ ಮಂದಿಗೆ ವಿಶೇಷ ಪೆಟ್ಟು ತಗಲಿತು. ಅಲ್ಸ್ಟರ್ ಪ್ರಾಂತದ ಯೂನಿಯನಿಸ್ಟ್ ಪಕ್ಷ (ಐರ್ಲಂಡನ್ನು ಬ್ರಿಟನ್ನಿನಿಂದ ಕಳಚಿ ಬಿಡಬಾರದೆಂದು ವಾದಿಸುವವರು) ದವರು ಈ ಸಿನ್‌ಫೆನ್ನರ ಹಾವಳಿಯನ್ನು ಸಹಿಸಲಾರದೆ ತಮ್ಮ ಜೀವರಕ್ಷಣೆ ಮಾಡಬೇಕೆಂದೂ ಅಗತ್ಯವಿದ್ದರೆ ಸೈನ್ಯದ ರಕ್ಷಣೆಯ ಬಗ್ಗೆ ರಾಜಭಕ್ತಿಯುಳ್ಳ ಜನಗಳನ್ನು (ತಮ್ಮನ್ನು) ಈ ಕೆಲಸಕ್ಕೆ ಹಚ್ಚಬೇಕೆಂದೂ ಕೇಳಿಕೊಂಡಿದ್ದಾರೆ.

ಮೆಸೊಪೊಟೆಮಿಯ—ಇಲ್ಲಿ ಅರಬ್ಬಿ ಮುಖಂಡರ ಒಂದು ಕೌನ್ಸಿಲನ್ನು ಸ್ಥಾಪಿಸಿ ಬ್ರಿಟಿಷ ಅಧಿಕಾರಿಗಳ ಸಹಾಯದಿಂದ ಈ ಕೌನ್ಸಿಲು ರಾಜಕಾರ್ಯ ನಡೆಸಬೇಕೆಂದು ಬ್ರಿಟಿಷ ಮಂತ್ರಿಕೂಟದವರು ನಿರ್ಣಯಿಸಿದ್ದಾರೆ. ಆದರೆ ಮೆಸೊಪೊಟೆಮಿಯದಲ್ಲಿ ಶಾಂತಿ ಇದ್ದ ಹಾಗೆ ತೋರುವದಿಲ್ಲ. ಅಲ್ಲಿ ಆಡಳಿತೆಯ ಕ್ರಮವ್ಯವಸ್ಥೆಗೆ ಬರುವದಕ್ಕೋಸ್ಕರ ಶ್ರೀಮಂತ ಆಗಾಖಾನರ ಸಹಾಯವನ್ನು ಬ್ರಿಟಿಷ ಸರಕಾರದವರು ಅಪೇಕ್ಷಿಸಿದ್ದಾರೆ. ಅಂದಿನ್ನು ಟಾಯಿಮ್ಸು ಪತ್ರದಲ್ಲಿ ಹೇಳುವ ಮೇರೆಗೆ ಮೆಸೊಪೊಟೆಮಿಯದಲ್ಲಿ ಹಾಲಿ ಇರುವ ಹಿಂದಿ ಲಷ್ಕರವನ್ನು ಮೇಲೆ ಅಲ್ಲಿಂದ ಹೊರಡಿಸಿ [illegible] ... ಅವರ ನಿಜತ್ವವು ಗೊತ್ತಾಗುವದಿಲ್ಲ.

ಇಂಗ್ಲೆಂಡಿಗೆ ಹೋದ ಖಿಲಾಫತ ಡೆಪ್ಯುಟೇಶನ್—ಇವರು ಪರಿಷ [illegible] ಹೋಗಿ ಅಲ್ಲಿಂದ ಇಟೆಲಿಗೆ ತಲಪಿ ಅಲ್ಲಿಯ ಜನಗಳ ಮುಂದೆಯೂ ಸರಕಾರದ ಮುಂದೆಯೂ ತಮ್ಮ ಉದ್ದೇಶವನ್ನು ಕುರಿತು ಚರ್ಚಿಸುವವರಿದ್ದಾರೆ.

ಬೊಲೋನದಲ್ಲಿ ಮಿತ್ರಪಕ್ಷದ ಕಾನ್ಫರೆನ್ಸ್—ಇಲ್ಲಿ ಬ್ರಿಟನ್, ಇಟೆಲಿ, ಜಪಾನ, ಬೆಲ್ಜಿಯಮ್, ಫ್ರಾನ್ಸ್ ಈ ದೇಶಗಳ ಪ್ರತಿನಿಧಿಗಳು ಕಳೆದ ಜೂ°೨೦ನೇ ತಾರೀಕಿಗೆ ಸಭೆ ಸೇರಿ ಜರ್ಮನಿಯಿಂದ ವಸೂಲು ಮಾಡಬೇಕಾದ ದಂಡ, ಜರ್ಮನಿಯಲ್ಲಿ ಇರಗೊಡಿಸಬೇಕಾದ ಕನಿಷ್ಠ ಮಿತಿ ಲಷ್ಕರಲ್ಲ ಮುಂತಾದ ವಿಷಯಗಳನ್ನು ಗೊತ್ತುಮಾಡಿಕೊಂಡತು. ಜರ್ಮನಿಯಿಂದ ವರ್ಷಕ್ಕೆ ೧೫೦ ಮಿಲ್ಲಿಯ ಪೌಂಡುಗಳ ಕಂತಿನಿಂದ ೪೫೦೦ ಮಿಲ್ಲಿಯ ಪೌಂಡು ದಂಡವನ್ನು ವಸೂಲು ಮಾಡಬೇಕೆಂದು ಮಿತ್ರಪಕ್ಷದವರು ಅಭಿಪ್ರಾಯ ಪಟ್ಟರು.

ಒಳದೇಶ ವರ್ತಮಾನ.

ಫಿಶ್ಶರೀಸ್ ಇಲಾಖೆ—ಈ ಇಲಾಖೆಯು ಕೆಲಸವು ಹೆಚ್ಚುತ್ತ ಬಂದಿದ್ದ ಕಾರಣ ಅಸಿಸ್ಟಾಂಟ ಡೈರೆಕ್ಟರರ ಕೆಳಗೆ ಈಗ ಹಾಲಿ ಇರುವ ಮೂರು ಅಸಿಸ್ಟಾಂಟ ಇನ್‌ಸ್ಪೆಕ್ಟರುಗಳ ಸಂಖ್ಯೆ ಸಾಲದೆಂದು ಅಸಿಸ್ಟಾಂಟ ಡೈರೆಕ್ಟರರೂ ಡಿರೆಕ್ಟರರೂ ಮದ್ರಾಸು ಪ್ರಾಂತಿಕ ಸರಕಾರದವರಿಗೆ ಬರಕೊಂಡದ್ದರಿಂದ ಈಗ ಈ ಕೆಳಗಿನ ಹೊಸ ಹುದ್ದೆಗಳನ್ನು ಹೆಚ್ಚಿಗೆ ಸಂಕ್ಷನ್ ಮಾಡಿರುವರು:—ರೂ ೩೦—೪—೫೦ರ ೩ ಅಸಿಸ್ಟಾಂಟ ಇನ್‌ಸ್ಪೆಕ್ಟರುಗಳು, ೨೦—೨—೩೦ರ ೭ ಓವರ್‌ಸಿಯರು, ೧೫—೧—೨೦ರ ಒಬ್ಬ ಫಿಲ್ಡ್‌ಮೆನ್, ೧೨—½—೧೫ರ ಒಬ್ಬ ಫೀಲ್ಡ್‌ಮೆನ್.

ಮೂಲಗೇಣಿ ಕಾನೂನು ಮಸೂದೆ—ದಕ್ಷಿಣ ಕನ್ನಡ ಜಿಲ್ಲೆಯ ಮೂಲಗೇಣಿ ಪಟ್ಟಾದಾರರ ಅನನುಕೂಲತೆಗಳ ಪರಿಹಾರಕ್ಕಾಗಿ ಮಂಜೂರು ಮಾಡಲು ತಯಾರಾದ ಈ ಕಾನೂನಿನ ಮಸೂದೆಯು ಕಳೆದ ತಿಂಗಳ ೨೬ನೆ ತಾರೀಕಿನ ಫೋರ್ಟಸೆಂಟ ಜೋರ್ಜ ಗೆಜೇಟಿನಲ್ಲಿ ಪ್ರಕಟವಾಗಿದೆ. ಇದು ನ್ಯಾಯವಿಧಾಯಕ ಸಭೆಯ ಮುಂದಿನ ಅಧಿವೇಶನಗಳಲ್ಲಿ ಚರ್ಚೆಗೆ ಬರಲಿಕ್ಕಿರುವುದರಿಂದ ಇದರ ಮುಖ್ಯ ಸಾರಾಂಶವನ್ನು ಮುಂದಿನ ಸಂಚಿಕೆಗಳಲ್ಲಿ ಟೀಕಿಸುವೆವು.

ಮದ್ರಾಸ ಎಗ್ರಿಕಲ್ಚರಲ್ ಕೊಲೆಜು—ಇಲ್ಲಿ ೧೯೧೯ನೆ ಇಸವಿಯ ವರ್ಷಾವಧಿಯ ಪರೀಕ್ಷೆಯ ಫಲಿತಾಂಶಗಳನ್ನು ಪರ್ಯಾಲೋಚಿಸಿ ಈ ಸಂಸ್ಥೆಗೆ ವಿದ್ಯಾರ್ಥಿಗಳಾಗಿ ಬರತಕ್ಕವರಲ್ಲಿ ಅನೇಕರು ಅಯೋಗ್ಯರಿರುತ್ತಾರೆ ಎಂಬದಾಗಿ ಡಿರೆಕ್ಟರ್ ಒಫ್ ಎಗ್ರಿಕಲ್ಚರ್ ಇವರು ಮದ್ರಾಸು ಸರಕಾರದವರಿಗೆ ಬರಕೊಂಡ ನಿಮಿತ್ತ ಈ ಸ್ಥಿತಿಯನ್ನು ಹೋಗಲಾಡಿಸಲಿಕ್ಕೆ ಉಪಾಯಗಳನ್ನು ನಿಶ್ಚಯಿಸುವ ಬಗ್ಗೆ ಒಂದು ಕಮಿಟಿಯು ನೇಮಕವಾಗಿತ್ತು. ಇವರು ಮಾಡಿದ ಹಲವು ಸೂಚನೆಗಳನ್ನು [illegible]

[illegible]

ಕರ್ಣಾಟಕದ ಬ್ರಾಹ್ಮಣೇತರರ ಸಮ್ಮೇಲನ—ಇದೇ ಜುಲೈ ೩ನೇ [illegible] ತಾರೀಕುಗಳಲ್ಲಿ ಹುಬ್ಬಳ್ಳಿಯಲ್ಲಿ ಮದ್ರಾಸಿನ ಸರ್. ಪಿ. ತ್ಯಾಗರಾಯ ಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಇದರ ಸಮ್ಮೇಲನವು ಜರಗಲಿಕ್ಕಿದೆ.

ಮದ್ರಾಸ ಗ್ರಾಮಪಂಚಾಯತ್ತು ಮತ್ತು ಲೋಕಲ್ ಬೋರ್ಡು ಗಳು—ಇವುಗಳನ್ನು ಕುರಿತು ಹೊಸ ಕಾನೂನಿನ ಮಸೂದೆಗಳು ಫೋರ್ಟಸೆಂಟ ಜೋರ್ಜ ಗಜೆಟಿನಲ್ಲಿ ಪ್ರಕಟವಾಗಿವೆ. ಇವನ್ನು ಮುಂದಿನ ಸಂಚಿಕೆಗಳಲ್ಲಿ ಟೀಕಿಸಲಿಕ್ಕಿರುವೆವು.

ಪವನುಗಳ ದರ—ಇದೇ ಜುಲೈ ೧೨ನೆ ತಾರೀಕು ವರೆಗೆ ಮಾತ್ರವೆ ಪವನುಗಳನ್ನು ಸರಕಾರಿ ಖಜಾನೆಗೆ ತಂದುಕೊಟ್ಟಲ್ಲಿ ಅವಕ್ಕೆ ೧೫ ರೂಪಾಯಿ ದರ ದಕ್ಕೆ ಬೆಲೆ ಕೊಡೋಣಾಗುವುದು ಎಂತಲೂ ರೂಪಾಯಿಯ ಬದಲಾಗಿ ಪವನುಗಳನ್ನು ಕೊಡುವ ಜಿಲೆವಾರಿಯನ್ನು ಸರಕಾರದವರು ವಹಿಸಿಕೊಳ್ಳಲ್ಲಿಲ್ಲವೆಂತಲೂ ಮದ್ರಾಸಿನ ಪಬ್ಲಿಸಿಟಿ ಬಿರೋದವರು ತಿಳಿಸುತ್ತಾರೆ.

ಹಜ್ಜದ ಯಾತ್ರಿಕರು—ಹಜ್ಜಕ್ಕೆ ಹೋಗುವ ಬಗ್ಗೆ ಮುಂಬಯಿಗೆ ಬಂದ ಯಾತ್ರಿಕರಲ್ಲಿ ಹಬ್ಬಿದ ವಾಂತಿಭೇದಿ ಈಗ ಉಪಶಮನವಾದ್ದರಿಂದ ಆ ದಾರಿಯಾಗಿ ಯಾತ್ರಿಕರು ಬರಲಿಕ್ಕೆ ನಿರ್ಬಂಧವಿಲ್ಲ ಎಂದು ಮುಂಬಯಿ ಸರಕಾರದವರು ತಿಳಿಸಿರುವರು.

ದಕ್ಷಿಣ ಕನ್ನಡ.

ಆಲೆಟ್ಟಿ:—ಇಲ್ಲಿ ಪೋರೆಸ್ಟು ಡಿಪಾರ್ಟಮೆಂಟಿನವರಿಂದ ಕಟ್ಟಿಸಲು ಎಂಬಲ್ಲಿ ಒಂದು ಬಂಗ್ಲೆಯು ಕಟ್ಟಿಸಿದ್ದು ತುಂಬಾ ಸಂತೋಷ. ಆದರೆ ಕೂತುಕೊಳ್ಳುವರೆ ಕುರ್ಚಿಗಳು ಮಂಚಗಳು ವಗೈರೆ ಇಲ್ಲದೆ ಇರುವುದು ತುಂಬಾ ಅಸಂತೋಷ.

ಹುಲಿಗಳು ಜಾನುವಾರುಗಳನ್ನು ನಾಶಮಾಡುವ ಹಾಗೆ ಮೊಸಳೆ ಕೂಡಾ ಅಲ್ಲಿ ಆಗಾಗ್ಯೆ ಜಾನುವಾರುಗಳನ್ನು ನಾಶಮಾಡುವುದು ಶೋಚನೀಯವೆ ಸರಿ.

ಆರಂತೋಡು:—ಇಲ್ಲಿಯ ಬಂಗ್ಲೆ ಬಗ್ಗೆ ತೆಗಿಸುವ ಭಾವಿ ಕೆಲಸವು ಇನ್ನು ಬಾಕಿ ಇರುವದರಿಂದ ಪ್ರಯಾಣಸ್ಥರಿಗೆ ತುಂಬಾ ಕಷ್ಟ. ಬಂಗ್ಲೆಯ ಸುತ್ತ ಕಳೆದ ಮಾರ್ಚಿಯಲ್ಲಿ ಮಾಡಿಸಿದ ಮಣ್ಣಿನ ಗೋಡೆಯು ಪೂರಾ ಬಿರಿದುಬಿದ್ದು ಹೆಚ್ಚಿನ ನಷ್ಟ. ಹೊರತು ಸದರಿ ಗೋಡೆಯಿಂದ ಪ್ರಯೋಜನವೇನೂ ಇಲ್ಲ.

ಸುಳ್ಯ:—ಇಲ್ಲಿಯ ಆಸ್ಪತ್ರೆಯ ಮುಂಭಾಗ ಇರುವ ದೊಡ್ಡಿಯನ್ನು ಬೇರೆ ಕಡೆಗೆ ಹಾಕುತ್ತಿದ್ದರೆ ಆರೋಗ್ಯಕ್ಕೆ ಬಹಳ ಒಳ್ಳೇದಾಗುತ್ತಿತ್ತು.

ಎಟ್ಲ ಬಾಗಾಯಿತು ಕೃಷಿಕರ ಸಂಘ—ಇವರ ಮೆನೆಜಿಂಗ್ ಡಿರೆಕ್ಟರಾಗಿದ್ದ ಚಕ್ರಕೋಡಿ ರಾಮಶಾಸ್ತ್ರಿಗಳನ್ನು ಅವರ ಕೈಕೆಳಗೆ ಗುಮಾಸ್ತರಾಗಿದ್ದು ಈಚೆಗೆ ಬೇರೆ ಬಂದಸಾಲೆಮಾಡಿದ ಅವರ ಭಾವಮೈದನ ತಲೆಕಳ ಮಹಾಬಲೇಶ್ವರ ಭಟ್ಟರನ್ನೂ ಸದರಿ ಸಂಘದಲ್ಲಿ ನಡೆಸಿದ ಕೆಲವು ಅಕೃತ್ಯಗಳ ಆರೋಪದ ಮೇಲೆ ಪೋಲೀಸಿನವರು ಕೈದುಮಾಡಿದ್ದಾರೆ.

ಸ್ವೀಕಾರ.

ಪದ್ಯಾವಳಿ:—ಕಾರ್ಕಳ ಬೋರ್ಡು ಹೈಸ್ಕೂಲು ಅಸಿಸ್ಟಾಂಟ ಮಾಸ್ಟರ್ ರಾ॥ ಕೊಡಿಯಾಲ್ ಶ್ರೀನಿವಾಸರಾಯರಿಂದ ರಚಿತವಾದ ಈ ಚಿಕ್ಕ ಗ್ರಂಥವು ನಮ್ಮ ಕೈಗೆ ಗ್ರಂಥಕಾರರಿಂದ ಬಂದಿದೆ. 'ಭೀಮಸಿಂಹನ ಕನಸು', ನೂರಜಹಾನ್ ಮುಂತಾದ ಇತಿಹಾಸ ವಿಷಯಗಳನ್ನು ಎತ್ತಿಕೊಂಡು ಸುಲಭಶೈಲಿಯಲ್ಲಿದ್ದು ಶಾಲಾ ವಿದ್ಯಾರ್ಥಿಗಳಿಗೆ ಇತಿಹಾಸದಲ್ಲಿ ಅಭಿರುಚಿಯನ್ನು ಉಂಟುಮಾಡಲಿಕ್ಕಿರುವ ಈ ಗ್ರಂಥದ ಬೆಲೆ ಬರಿ ೨ ಆಣೆ ಮಾತ್ರ. ಇಂಥ ಪುಸ್ತಕವನ್ನು ವಿದ್ಯಾರ್ಥಿಗಳು ಪ್ರೋತ್ಸಾಹಿಸುವರೆಂದು ನಂಬುತ್ತೇವೆ.

ಕೀರ್ತನ ಸಮ್ಮೇಲನ.

ರಾಜಸಭಾಭೂಷಣ ರಾ॥ ಕರ್ಪೂರ ಶ್ರೀನಿವಾಸರಾವ್ ರಿಟೈರ್ಡ ಚೀಫ್ ಇಂಜಿನಿಯರ್ ಮೈಸೂರ ಸ್ಟೇಟ್, ಇವರು ಸ್ವಾಗತಸಭೆಯ ಅಧ್ಯಕ್ಷರಾಗಿ ಈ ಸಮ್ಮೇಲನವನ್ನು ಬೆಂಗಳೂರಿನಲ್ಲಿ ಶ್ರೀ ಶಂಕರಮಠದಲ್ಲಿ ಜುಲೈ ತಾ. ೪ರಿಂದ ೧೧ರ ವರೆಗೆ ಜರಗಿಸಲಿಕ್ಕಿರುವರು. ಈ ಸಮ್ಮೇಲನಕ್ಕೆ ಮ॥ ರಾ॥ ವಿ. ಪಿ. ಮಾಧವರಾವ್ (ಮೈಸೂರಿನ ಮಂತ್ರಿವರ್ಯರಾಗಿ ಪೆನ್ಶನ್ ಹೊಂದಿರುವವರು) ಅಧ್ಯಕ್ಷರಾಗಿರುವರು. ಸುಪ್ರಸಿದ್ಧ ಕೀರ್ತನಕಾರರ ಕೀರ್ತನಗಳು ಈ ಸಮ್ಮೇಲನದ ಕಾಲದಲ್ಲಿ ಜರಗಲಿಕ್ಕಿರುವವು. ೫ ರೂಪಾಯಿ ಪ್ರವೇಶಧನ ಕೊಟ್ಟವರಿಗೆ ಸಮ್ಮೇಲನದ ಕಾಲದಲ್ಲಿ ಸ್ಥಳ ಕಾದಿರಿಸಲಾಗುವುದು ಎಂತಲೂ, ಪೂರ್ತಿ ಸಮ್ಮೇಲನಕ್ಕೆ ಶ್ರೋತೃಗಳಾಗಿ ಬರುವವರಿಗೆ ಗಂಡಸರಿಗೆ ರೂ. ೩, ಇತರರಿಗೆ ರೂ. ೧—೮—೦ ಪ್ರಕಾರ ಟಿಕೇಟುಗಳ ವರಗಳು ಇರುವವು. ಪ್ರತಿನಿತ್ಯ ದಿನ ೧ಕ್ಕೆ ಗಂಡಸರಿಗೆ ೮ ಆಣೆ ಇತರರಿಗೆ ೪ ಆಣೆ ದರದ ಟಿಕೇಟು ಪಡೆದಲ್ಲಿ ಆಯಾ ದಿವಸ ಕೀರ್ತನೆ ಕೇಳಲು ಏರ್ಪಾಡನ್ನು ಮಾಡಲಾಗುವುದು ಎಂದು ಸದರಿ ಸಮ್ಮೇಲನದ ಸೆಕ್ರೆಟರಿಗಳಾದ ರಾ॥ ಜಯರಾಮಾಚಾರ್ಯ ಕೊಪ್ಪಳ ಇವರ ಪ್ರಕಟಣೆ ಇದೆ.

ಬಂಟರ ಯಾನೆ ನಾಡವರ ಸಂಘಕ್ಕೆ

ಶುಭಕಾರ್ಯಗಳ ಸಂದರ್ಭಗಳಲ್ಲಿ ವಸೂಲಾದ ದಾನ.

ಜೂನು ೧೮ರ ನಂತರ

ಬೈಂದೂರು ಫಿರ್ಕೆಯಲ್ಲಿ ಯಡ್ತರೆ ಕೃಷ್ಣಪ್ಪ ಶೆಟ್ರು ಮುಖಾಂತರ ರೂ. [illegible] ಬಡಗುಬೆಟ್ಟು ರಾಮಯ್ಯ ಹೆಗ್ಗಡೆಯವರ ಮನೆಯ ಲಗ್ನದಲ್ಲಿ ೧೧—೦—೦. [illegible] ಶೆಟ್ರ ಮನೆಯ ಲಗ್ನದಲ್ಲಿ ೨೪—೦—೦. ಪೂರ್ವದ [illegible] ಕೆಳಮನೆ [illegible] ಶೆಟ್ರ ಮನೆ ಲಗ್ನದಲ್ಲಿ ೧೧—೦—೦. [illegible] ಶೆಟ್ರಿಂದ [illegible]

ಜುಮ್ಲಾ ೩೦೯—೮—೦.

ಮಂಗಳೂರು
ತಾ. 1—7—1920.

[illegible] ಬಿ. ಶೆಟ್ಟಿ.
ಕೋಶಾಧಿಕಾರಿ.

[illegible]

ಸ್ವದೇಶಾಭಿಮಾನಿ.

ಶಕ ೧೮೪೫. ಆಶಾಢ ಬ ೧ ಶುಕ್ರವಾರ.

ಅಸಹಕಾರಿತ್ವದ ಮೀಮಾಂಸೆ.

(೬)

ಪ್ರಜೆಗಳು ಅಸಹಕಾರಿತ್ವವನ್ನು ಕೈಕೊಳ್ಳುವುದರಿಂದ ರಾಜನ ಅಥವಾ ಸರಕಾರದ ಮೇಲಿನ ಅವರ ಗುಪ್ತಪ್ರೇಮಕ್ಕೆ ತೊಡಕು ಬರುತ್ತದೆ, ತೆಂಬಹುದಾ ಅವರಲ್ಲಿ ಪ್ರೀತಿಯ ಅಭಾವವುಂಟಾಗುತ್ತದೆ ಎಂದು ಮುಂತಾದ ರೀತಿಯಲ್ಲಿ ಭಾವಿಸಿಕೊಳ್ಳುವುದು ಯಾಕೆ ಸರಿಯಲ್ಲವೆಂಬುದನ್ನು, ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ ಈ ಹೊತ್ತು ಪ್ರಸ್ತಾಪಿಸೋಣ.

ಅರಸರು ರಾಜ್ಯವ್ಯವಸ್ಥೆಯನ್ನು ಸರಿಯಾಗಿ ನಡಿಸುವಂತೆ ನಿಗ್ರಹಾನುಗ್ರಹದ ಅಧಿಕಾರಗಳನ್ನು ಪಡೆದಿರುವರು. ಸುಪ್ರಸಿದ್ಧ ರಾಜನೀತಿ ಶಾಸ್ತ್ರಜ್ಞನಾದ ಚಾಣಕ್ಯನು ಹೇಳುವಂತೆ—ಅರಸನು ಅತಿ ಮೆತ್ತಗಾದರೆ ಪರಾಭವವನ್ನು ಹೊಂದುತ್ತಾನೆ. ಇದ್ದರಿಂದ ಅವನಲ್ಲಿ ನಿಗ್ರಹದ ಸಾಮರ್ಥ್ಯವು ಬೇಕು. ಈ ನಿಗ್ರಹದ ಸಾಮರ್ಥ್ಯವನ್ನು ಅವನು ಯಾವಾಗ ಉಪಯೋಗಿಸುವನೋ ಆಗ ಅವನಲ್ಲಿ ಆ ನಿಗ್ರಾಹ್ಯನ ವಿಷಯವಾಗಿ ದುಷ್ಟ ಮನೋವೃತ್ತಿಗಳು ಉಂಟಾಗಿದ್ದಾವೆಂದು ಹೇಳಲು ಸಾಧ್ಯವಿಲ್ಲ. 'ರಾಜನು' 'ಸರಕಾರವು' ಇತ್ಯಾದಿ ವ್ಯಕ್ತಿಗಳನ್ನು ಬಿಟ್ಟು ಅವರಲ್ಲಿ ಶಾಸಕತ್ವವೆಂಬ ಯಾವ ಧರ್ಮವುಂಟೋ ಆ ಧರ್ಮಕ್ಕನುಸಾರವಾಗಿ ಬಂದಿರುವ ಅವರ ನಿಗ್ರಹಾನುಗ್ರಹಗಳೆಂಬೀ ಕರ್ತವ್ಯಗಳನ್ನು ಮಾತ್ರ ಆಲೋಚಿಸಿ ನೋಡಿದರೆ; ಜನತೆಯನ್ನು ಅನುಗ್ರಹಿಸುವಾಗ ಹೇಗೆ ಆ ಶಾಸಕನಲ್ಲಿ ಪ್ರೀತಿಯು ಇರುತ್ತದೊ ಹಾಗೆಯೆ ನಿಗ್ರಹಿಸುವಾಗ ಕೂಡ ಅದೆ ಪ್ರೀತಿಯು ಗುಪ್ತವಾಗಿ ಹರಿದುಕೊಂಡಿರುತ್ತದೆ. ಅನುಗ್ರಹದ ಚಂದ್ರೋದಯದ ಕಾಲದಲ್ಲಿ ಪ್ರೀತಿನದಿಗೆ ಭರತಿಯು ಬಂದು ಅದರ ತೆರೆಗಳು ತಟದ ಸೀಮೆಯನ್ನು ಕೂಡ ಉಲ್ಲಂಘಿಸಿ ಹೊಡೆಯುವಂತೆ ನಿಗ್ರಹದ ಕಾಲದಲ್ಲಿ ಆ ತೆರೆಗಳು ಮೇಲಕ್ಕೆ ಅಪ್ಪಳಿಸುವುದಿಲ್ಲ. ಇದು ನಿಜವಾದರೂ ಈ ಎರಡನೆಯ ಅವಸ್ಥೆಯಲ್ಲಿ ಆ ಪ್ರೀತಿನದಿಯೆ ಆರಿಹೋಗಿದೆ ಎಂದು ಹೇಳಬಹುದೆ? ಪುನಃ ನಾವು ಹೇಳುವುದೇನೆಂದರೆ 'ರಾಜ'ವೆಂಬ ವೈಯಕ್ತಿಕ ಸಂಗತಿಯನ್ನು ಬಿಟ್ಟುಬಿಡೋಣ. ಕಾರಣ, ಇದಕ್ಕೆ ಹಲವು ಅಪವಾದಗಳೂ ಇರಬಹುದು. ಕೇವಲ ಶಾಸಕತ್ವ ಧರ್ಮವನ್ನು ತೆಕ್ಕೊಂಡು ವಿಚಾರಿಸಿದರೆ ಅದರ ನಿಗ್ರಹಾನುಗ್ರಹಗಳ ಎರಡೂ ಅವಸ್ಥೆಗಳಲ್ಲಿ ಪ್ರಜಾವಿಷಯಕವಾದ ಪ್ರೀತಿರಸವು ಆ ಶಾಸಕ ಕಿರೀಟವನ್ನು ಅಭಿಷೇಕಿಸುತ್ತದೆ. ಸಾರಾಂಶ, ನಾರಸಿಂಹಾವತಾರವನ್ನು ತಾಳಿ ಶಾಸಕನು ದಂಡಿಸುವಾಗ ಅವನ ಘೋರ ನಾಡಿಗಳು ಮಾಂಸವನ್ನು ಹರಿಯುತ್ತವಾದರೂ ಹೃದಯವು ಪ್ರೇಮಾರ್ದ್ರವಾಗಿರುತ್ತದೆ ಎಂಬುದಕ್ಕೆ ಸಂಶಯವಿಲ್ಲ. ನಮ್ಮ ಈ ವಿಧಾನವನ್ನು ಕೇಳಿ ಬಾಹ್ಯ ಕೃತಿಗೆ ವಿರುದ್ಧವಾಗಿ ಅಂತರಂಗದ ಸ್ಥಿತಿಯನ್ನು ಊಹಿಸುವುದು ವಿಚಿತ್ರವೆಂದು ಕೆಲವರು ನೆನಸಬಹುದು. ಆದರೆ, ದಂಡನೆಯದಾಗಲಿ, ಶಿಕ್ಷೆಯದಾಗಲಿ ಮುಖ್ಯೋದ್ದೇಶವು ಆ ದಂಡ್ಯನ ಒಳ್ಳಿತಾಗ ಬೇಕೆಂದಿರುವುದರಿಂದ ಕೃತಿಗೂ, ಅಂತರಂಗಕ್ಕೂ ವೈಲಕ್ಷಣ್ಯವನ್ನು ಉಪಪಾದಿಸಲು ಸಾಧ್ಯವಿಲ್ಲ. ಇರಲಿ. ಶಾಸಕನಲ್ಲಿ ಪ್ರಜಾಪ್ರೇಮವು ಹೇಗೆ ಯಾವಾಗಲೂ ಇದ್ದೇ ಇರಬೇಕೊ, ಮತ್ತು ಇದ್ದೇ ಇರುವುದೊ, ಹಾಗೆಯೆ ಪ್ರಜೆಗಳಲ್ಲಿ ಕೂಡ ಸಹಕಾರಿತೆ—ಅಸಹಕಾರಿತೆ ಈ ಎರಡೂ ಅವಸ್ಥೆಗಳಲ್ಲಿ ಪ್ರೀತಿಯು ಇದ್ದೇ ಇರುವುದು. ಅದಕ್ಕೆ ಯಾವ ಕಾರಣದಿಂದಲೂ ಕುಂದಿರುವ ಸಂಭವವಿಲ್ಲ. ಜನತೆಯು ತನ್ನ ನ್ಯಾಯವಾದ ಆಕಾಂಕ್ಷೆಯನ್ನು ಪೂರಯಿಸಿಕೊಳ್ಳುವುದಕ್ಕಾಗಿ ಮಾತ್ರ ಅಸಹಕಾರಿತೆಯನ್ನು ಕೈಕೊಂಡಿರುವುದು. ಅಸಹಕಾರಿತೆಯಿಂದ ಶಾಸಕನ ಶಾಸನ ವ್ಯವಹಾರದಲ್ಲಿ ಅಡಚಣಿಗಳು ಉತ್ಪನ್ನವಾಗಿ, ಅವನ ಯಂತ್ರವು ಸರಾ [illegible]

[illegible] ವಿಷಯವಾಗಿ ಇಷ್ಟು ಶುಭ್ರಬುದ್ಧಿಯು ಇರುತ್ತದಾದರೆ, ಅವರಾದರೂ ಅಸಹಕಾರಿತ್ವದ ಅಸಹ್ಯ ಅಸ್ತ್ರವನ್ನು ಯಾಕೆ ಕೈಕೊಳ್ಳಬೇಕು ಎಂಬ ಪ್ರಶ್ನೆಯು ಬರುತ್ತದೆ. ಮತ್ತು ಈ ಪ್ರಶ್ನೆಗೆ ಸರಳವಾದ ಉತ್ತರವನ್ನು ಕೊಡುವುದಾದರೆ ನಾವು ಈ ಲೇಖದ ಪ್ರಥಮಾಂಕದ ಶಿರೋಭಾಗದಲ್ಲಿ ನಿರ್ದೇಶಮಾಡಿದ ಗೀತಾವಚನವನ್ನೇ ಉದಾಹರಿಸಬಹುದು. ಪ್ರಜೆಗಳ ಆಕಾಂಕ್ಷೆಯು ನ್ಯಾಯವಾಗಿರುತ್ತ ಅದು ಕಡೆಗೆ ಸರಕಾರವು ದುರ್ಲಕ್ಷ್ಯ ಮಾಡುತ್ತದೆ ಎಂದಾದರೆ ತಾವು ಕೂಡ ಅದೇ ವೃತ್ತಿಯನ್ನು—ಅದೇ ಭಾವನೆಯನ್ನು ಯಾಕೆ ಅಂಗೀಕರಿಸಬಾರದು, ಶಾಸಕರಲ್ಲಿ ಪ್ರೀತಿಯು ಒಳಗೆ ಅಡಗಿಕೊಂಡಿದೆ. ಮತ್ತು ಅಸಡ್ಡೆತನವು ಹೊರಗೆ ತಲೆಹಾಕಿದೆ. ಇದು ಹೇಗೊ ಹಾಗೆಯೆ ರಾಜಭಕ್ತಿಯು ಹೃದಯದಲ್ಲಿರಲಿ, ಅಸಹಕಾರಿತೆಯು ಆಚಾರದಲ್ಲಿ ಬರಲಿ ಎಂದು ಪ್ರಜೆಗಳು ನಿಶ್ಚಯಿಸಿಕೊಳ್ಳುವರು. "ಯಾರು ನನ್ನನ್ನು ಯಾವ ರೀತಿಯಿಂದ ಭಜಿಸುವರೊ ಅವರಿಗೆ ನಾನು ಆ ತರದ ಫಲವನ್ನು ಕೊಡುವೆನು." ಎಂದು ಭಗವಂತನು ಗೀತೆಯಲ್ಲಿ ಹೇಳಿದಂತೆ 'ಯಥಾ ರಾಜಾ ತಥಾ ಪ್ರಜಾ' ಎಂಬೀ ನ್ಯಾಯವನ್ನು ಅವರು ಅನುವರ್ತಿಸುವರು. ನಿಮ್ಮಲ್ಲಿ ಒಳಗೆ ಪ್ರೀತಿ, ಹೊರಗೆ ಅನುಗ್ರಹವಾದರೆ ನಮ್ಮಲ್ಲಿ ಒಳಗೆ ಭಕ್ತಿ, ಹೊರಗೆ ಆಜ್ಞಾಧಾರಕತೆ. ನಿಮ್ಮಲ್ಲಿ ಒಳಗೆ ಪ್ರೀತಿ, ಹೊರಗೆ ಅಸಡ್ಡೆತನವಾದರೆ ನಮ್ಮಲ್ಲಿ ಒಳಗೆ ಭಕ್ತಿ, ಹೊರಗೆ ಅಸಹಕಾರಿತೆ ಎಂದು ಅಸಹಕಾರಿತ್ವವಾದಿಗಳ ಮತವು. ಒಟ್ಟಾರೆ, ಈ ಎಲ್ಲ ಉಪಪಾದನದ ಮೇಲಿಂದ ಅಸಹಕಾರಿತ್ವವನ್ನು ಕೈಕೊಂಡ ಪ್ರಜೆಗಳಲ್ಲಿ ಪ್ರೀತಿಯ ಅಭಾವವಿರಬಹುದೆಂದು ಭಾವಿಸುವುದು ನಿರ್ಯುಕ್ತಿಕವಾದ್ದೆಂದು ಪುನಃ ಸೂಚಿಸಬೇಕಾದ ಅವಶ್ಯವಿಲ್ಲ.

ಆದರೂ ಇಲ್ಲಿ—ಈ ಮೀಮಾಂಸೆಯನ್ನು ಮುಗಿಸುವ ಮುಂಚೆ ಒಂದು ಸಂಗತಿಯನ್ನು ಹೇಳುವುದು ಅವಶ್ಯಕವಾಗಿದೆ. ಪ್ರಜೆಗಳು ಯಾವಾಗ ಅಸಹಕಾರಿತ್ವವನ್ನು ಕೈಕೊಳ್ಳುವರೊ ಆಗ ಪ್ರಾಜ್ಞನಾದ ಶಾಸಕನು ಆ ಅಸಹಕಾರಿತ್ವದ ಅವಧಿಯನ್ನು ಹೆಚ್ಚಿಸಲು ಬಿಡಬಾರದು. ಯಾಕೆಂದರೆ, ಅಸಹಕಾರಿತ್ವವು ಸ್ವತಃ ಪ್ರೀತಿಯ ಅಭಾವದ ದ್ಯೋತಕವಲ್ಲವಾದರೂ ಅಪ್ರೀತಿಯ ಮೇಲೆ ಹೆಚ್ಚೆಚ್ಚು ಹೊದಿಕೆಗಳನ್ನು ಹಾಕುತ್ತದೆ. ಮತ್ತು ಅದರಮೇಲೆ ಹೀಗೆ ಹೊದಿಕೆಗಳು ಬೀಳುವುದು ಉಚಿತವಲ್ಲ. ಚೀನಾ ದೇಶದ ತತ್ವಜ್ಞಾನಿಯಾದ ಮತ್ತು ಅಲ್ಲಿಯವರಿಗೆ "ಮನುಸ್ಮೃತಿ"ಯನ್ನು ಕೊಟ್ಟ ಕೊನ್‌ಫ್ಯೂಶಿಯಸ್ ಎಂಬವನು ತನ್ನ ಶಿಷ್ಯನ ಪ್ರಶ್ನೆಯನ್ನು ಉತ್ತರಿಸುವಾಗ ಒಮ್ಮೆ ಹೇಳುತ್ತಾನೇನೆಂದರೆ—(ಜನರಲ್ಲಿ) "ಆಹಾರ ಸಾಧನದ ಸಮೃದ್ಧಿ, ವಿಪುಲವಾದ ಸೈನ್ಯ, ಮತ್ತು ಜನತೆಯ ಸಹಕಾರಿತೆ ಇವು ಮೂರು ರಾಜ್ಯ ಸ್ಥಿರತೆಯ ಮುಖ್ಯ ಸಾಧನಗಳು. ಇವುಗಳಲ್ಲಿ ಆಹಾರದ ಸಾಧನವು ಒಂದು ವೇಳೆ ಕಡಿಮೆಯಾದರೂ ಸೈನ್ಯದ ಬಲದಿಂದ ರಾಜ್ಯ ರಕ್ಷಣವನ್ನು ಮಾಡಬಹುದು. ಜನರಿಗೆ ತಿನ್ನಲು ಆಹಾರವೂ ಇಲ್ಲ, ಅರಸನಲ್ಲಿ ಸಾಕಷ್ಟು ಸೈನ್ಯವೂ ಇಲ್ಲ; ಇಂಥ ಪರಿಸ್ಥಿತಿಯಲ್ಲಿ ಕೂಡ ಬರೆ ಜನರ ಸಹಕಾರಿತೆಯ ಬಲದಿಂದ ಅನೇಕ ರಾಜ್ಯಗಳು ಚಿರಕಾಲ ಬಾಳಿದ್ದಾವೆ. ಆದರೆ ಪ್ರಜೆಗಳ ಸಹಕಾರಿತ್ವವು ಇಲ್ಲವಾದರೆ ಮಾತ್ರ ತುಂಬಾ ತೊಂದರೆಯು ಒದಗುತ್ತದೆ." ಹಲವು ಸಾವಿರ ವರ್ಷಗಳ ಹಿಂದೆ ಬರೆದಿಟ್ಟ ಕೊನ್‌ಫ್ಯೂಶಿಯಸನ ಈ ಮಾತುಗಳಲ್ಲಿ ಸತ್ಯವು ಎಷ್ಟರ ಮಟ್ಟಿಗೆ ತುಂಬಿದೆ ಎಂಬುದನ್ನು ಈ ಹೊತ್ತು ಬರೆದು ತೋರಿಸುವ ಅಗತ್ಯವಿಲ್ಲ. ಸಹಕಾರಿತೆಯ ಮಹತ್ವವು ಎಷ್ಟಿದೆ ಎಂಬುದು ಪ್ರತಿಯೊಬ್ಬನಿಗೆ ತಿಳಿಯುವ ವಿಷಯವಾಗಿದೆ. ಅದರ ಮಹತ್ವ ಮಾತ್ರವಲ್ಲ, ಅದರ ಅವಶ್ಯಕತೆಯು ಕೂಡಾ ನಿರ್ವಿವಾದ ವಿಷಯವು. ಅಸಹಕಾರಿತ್ವದ ಆಯುಷ್ಯವು ಹೆಚ್ಚಾಗುತ್ತ ಹೋದರೆ ರಾಜ್ಯಯಂತ್ರದ ಚಲನಕ್ಕೆ ಆವಶ್ಯಕವಾದ ಸಹಕಾರಿತೆಯು ಲುಪ್ತವಾಯಿತೆಂಬ ಅರ್ಥವೆ ನಿಷ್ಪನ್ನವಾಗುತ್ತದೆ. ಇಂಥ ಅಡಚಣಿಯ ಪರಿಸ್ಥಿತಿಯನ್ನು ಯಾರೂ ತಂದುಕೊಳ್ಳುವುದು ಇಷ್ಟವಲ್ಲ. ದಿನೇ ದಿನೇ ಲೋಕವು ಅಭಿವೃದ್ಧಿಯನ್ನು ಹೊಂದುತ್ತಿದೆ, ಮಾನವನು ಸುಧಾರಿಸುತ್ತಿದ್ದಾನೆ ಎಂದು ಇತಿಹಾಸಕರ್ತರು ಹಾಗು ಸಮಾಜ ಶಾಸ್ತ್ರಜ್ಞರು ಬರೆಯುತ್ತಿರುತ್ತಾರೆ. ತಥಾಪಿ ಕೆಲವು ಸಂಗತಿಗಳನ್ನು ನೋಡುವಾಗ ಅಥವಾ ಅಸಹಕಾರಿತ್ವದಂಥ ತತ್ವದ ಚರಿತ್ರವನ್ನು ನೋಡುವಾಗ ಮಾನವನು ಸುಧಾರಿಸುವುದು ನಿಜವೊ ಹೇಗೆ ಎಂಬ ಸಂಶಯವು ಬರುತ್ತದೆ. 'ರಾಜರು ರಾಜರಿಗಾಗಿ ಜೀವಿಸುವುದಲ್ಲ, ಪ್ರಜೆಗಳಿಗಾಗಿ ಜೀವಿಸುವುದು' ಎಂದ ಮೇಲೆ ಎರಡೂ ಕಡೆಯಿಂದ ಒಂದೇ ಧ್ಯೇಯವು ನಿಶ್ಚಿತವಾದ ಬಳಿಕ ಈ ವೈಮನಸ್ಯ, ಈ ಅತ್ತ ಸೆಳೆತ, ಈ ದೊಡ್ಡ ಗೋಡೆ ಇವೆಲ್ಲ ಯಾಕೆ? ಇದು ಲೋಕದ ಸುಧಾರಣಾಪಥದ ಚಿಹ್ನೆಯೊ, ಕುಧಾರಣಾ ಕೋಟೆಯ ಬಾವುಟವೊ? ಆದರೂ ಇಲ್ಲಿ ಒಂದು ಬಗೆಯಿಂದ ಸಮಾಧಾನವನ್ನು ಮಾಡಿಕೊಳ್ಳಬಹುದೆಂದು ತೋರುತ್ತದೆ. ಏನೆಂದರೆ, ಈ ತರದ ದ್ವಂದ್ವದಿಂದ, ಈ ತರದ ಹೋರಾಟದಿಂದ, ಅಲ್ಲಲ್ಲಿ ಅಡಗಿಕೊಂಡಿರುವ ಕೆಡಕು ಓಡಿಹೋಗಿ ಸಮುದಾತ್ತತ್ವವು ಬರಬೇಕು. ಇದೇ ಭಾವನೆಯು ಅಸಹಕಾರಿತ್ವದ ಅಡಿಯಲ್ಲಿ ಇರಬಹುದೆಂದು ತೋರುತ್ತದೆ. ಸಾರಾಂಶ, ಅಸಹಕಾರಿತ್ವದ ಮೂಲ ತತ್ವವು ವಿಶುದ್ಧವಾಗಿಯೆ ಇದೆ.

ಸ್ಫುಟ ವಿಚಾರಗಳು.

೧. ಹಿಂದೂಸ್ಥಾನದೊಳಗಿನ ರಾಜಕಾರಣದಲ್ಲಿ ಮೂರು ಪ್ರಶ್ನೆಗಳು ಸದ್ಯಕ್ಕೆ ಅತಿ ಮಹತ್ವದ ಸ್ಥಾನವನ್ನು ಹೊಂದಿವೆ. ಹೊಸ ಕೌನ್ಸಿಲುಗಳ ಚುನಾವಣೆ, ಹಂಟರ್ ಕಮಿಟಿಯ ವರದಿ, ಖಿಲಾಫತಿನ ಚಳವಳಿ—ಅಸಹಕಾರಿತೆ. ಈ ಮೂರು ಪ್ರಶ್ನೆಗಳು ಈಗ ಎಷ್ಟರಮಟ್ಟಿನ [illegible]

[illegible] ಹೇಗೆ ಹೆಚ್ಚಾಗಿದೆ ಎಂಬುದನ್ನು ವಿಶದಪಡಿಸಿದರು. ವರಿ [illegible] ಸರಕಾರದ ಕಾರಭಾರದಲ್ಲಿ ಲೋಕಮತಕ್ಕೆ ಪ್ರವೇಶವನ್ನು ಕೊಡದಿದ್ದದ್ದು, ಪ್ರಾಂತಿಕ ಸ್ವರಾಜ್ಯವನ್ನು ಕೊಡದೆ ಇದ್ದದ್ದು [illegible] ನೆಯ ಬೀಗದಕೈಗಳನ್ನು ಮಂತ್ರಿಗಳಿಗೆ ಒಪ್ಪಿಸದೆ ಇದ್ದದ್ದು ಈ ತ್ರಿದೋಷಗಳನ್ನು ಕಾನೂನಿಂದ ತಪ್ಪಿಸಬೇಕಾದರೆ, ಬರುವ ಹೊಸ ಕೌನ್ಸಿಲಿನಲ್ಲಿ ಅಮೃತಸರ ರಾಷ್ಟ್ರೀಯ ಸಭೆಯ ಕಡು ಅನುಯಾಯಿಗಳಾದ ವೈದ್ಯರೇ ಚುನಾಯಿಸಿ ಬರುವುದು ದೇಶದ ಶ್ರೇಯಸ್ಸಿಗೆ ಅವಶ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಹೊಸ ಕಾಯ್ದೆ ಮಂಡಲಗಳ ರಚನೆಯು ಒಳನಿಯಮಗಳನ್ನು ಸರಕಾರದ ಕಮಿಟಿಯ ಸಹಾಯದಿಂದ ತಯಾರಿಸಿದೆ. ಈ ನಿಯಮಗಳು [illegible] ತದ ಪ್ರಗತಿಗೆ ಹಲವು ವಿಧದಿಂದ ಪ್ರತಿಗಾಮಿಗಳಾಗಿವೆ ಎಂದು ಈಗ ಎಲ್ಲರಿಂದ ಒಪ್ಪಲ್ಪಡುತ್ತದೆ. ಇಂಥ ನಿಯಮಗಳನ್ನು [illegible] ಕಮ್ಮಿಟಿಯು ಪ್ರಸವಿಸುವ ಸಮಯದಲ್ಲಿ ಹಾಜರಿದ್ದ ಮೊಡರೇಟರು ಅವುಗಳಿಗೆ ಅಡ್ಡಿಯನ್ನು ತರಬಾರದಿತ್ತೆ? ಆದರೆ ಅವರು ಅಡ್ಡಿಯನ್ನು ತರುವ ಬದಲು ಸೂಲಗಿತ್ತಿಯ ಕೆಲಸವನ್ನು ಮಾಡಿ ಪ್ರತಿಗಾಮಿಗಳಾದ ನಿಯಮಗಳನ್ನು ಹೊರಚೆಲ್ಲಿಸಿದ್ದಾರೆ. ಸಾರಾಂಶ, ಇಂಥ ಭಾವನೆಯ ಮತ್ತು ವಿಚಾರದ ಜನರು ನಾಳೆ ಕೌನ್ಸಿಲುಗಳಿಗೆ ಬಂದ ಮೇಲೆಯಾದರೂ ದೇಶಕ್ಕೆ ಯಾವ ಉಪಕಾರವನ್ನು ಮಾಡಬಲ್ಲರು ಎಂದು ಅಧ್ಯಕ್ಷರು ಅಭಿಪ್ರಾಯಪಡುತ್ತಾರೆ. "ರಾಮಾಯ ಸ್ವಸ್ತಿ, ರಾವಣಾಯ ಸ್ವಸ್ತಿ" ಎಂಬಂತೆ ಒಂದು ಕಡೆಯಲ್ಲಿ ಸರ್. ಓಡಾಯರರನ್ನೂ, ಇನ್ನೊಂದು ಕಡೆಯಲ್ಲಿ ಲೋರ್ಡ ಚೆಮ್ಸ್‌ಫೋರ್ಡರನ್ನೂ ಬೆನ್ನುತಟ್ಟುವ ಹಂಟರ ಕಮ್ಮಿಟಿಯ ವರದಿಯ ವಿಷಯವಾಗಿ ಶ್ರೀಯುತ ಶ್ರೀನಿವಾಸ ಐಯಂಗಾರರು ತಮ್ಮ ಸ್ವಚ್ಛವಾದ ಅಸಮ್ಮತಿಯನ್ನು ವ್ಯಕ್ತಗೊಳಿಸಿದ್ದಾರೆ. ಪಂಜಾಬದಲ್ಲಿ ಉಂಟಾದ ಅತ್ಯಾಚಾರಗಳ ತನಖೆಗಾಗಿ ನೇಮಿಸಿದ ಹಂಟರ ಕಮ್ಮಿಟಿಯ ವರದಿಯನ್ನು ಎತ್ತಿ ಹೇಳುವಾಗ ಅಧ್ಯಕ್ಷರು ಮೇಲಿನಂತೆ ಅಸಮ್ಮತಿಯನ್ನು ತೋರಿಸಿದ್ದು ಮಾತ್ರವಲ್ಲದೆ ಮುಂದೆ ಹೇಳುತ್ತಾರೇನೆಂದರೆ:—"ಸರಕಾರದ ಆಡಳಿತೆ, ಧೋರಣ, ನೌಕರಶಾಹಿಯು ಪ್ರವಾದ ಮುಂತಾದುವುಗಳನ್ನು ವಿಚಾರಮಾಡಲು ಕಮಿಷನ್‌ಗಳನ್ನಾಗಲಿ, ಕಮ್ಮಿಟಿಗಳನ್ನಾಗಲಿ ನೇಮಿಸುವುದೆ ತಪ್ಪು. ಅವುಗಳಿಂದ ನ್ಯಾಯವಾದ ನಿರ್ಣಯವನ್ನು ನಿರೀಕ್ಷಿಸುವುದು ಸತರಾಂ ತಪ್ಪು. ಒಂದು ವೇಳೆ ಅಂಥ ಕಮ್ಮಿಟಿಗಳನ್ನು ನೇಮಿಸುವುದೇ ಆದರೆ ಅವುಗಳಲ್ಲಿ ಬಿನ್‌ಸರಕಾರಿ ಹಿಂದಿಗಳ ಸಂಖ್ಯಾಧಿಕ್ಯವಿರಬೇಕು; ಹಿಂದಿ ಗೃಹಸ್ಥರು ಇಲ್ಲವೆ ಪಾರ್ಲಿಮೆಂಟಿನ ಕೊಮನ್ಸ್ ಸಭೆಯ ಮೆಂಬರರು ಯಾರಾದರೂ ಅಧ್ಯಕ್ಷರಾಗಬೇಕು."

೩. ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾದ ಶ್ರೀನಿವಾಸ ಐಯಂಗಾರರು ತಮ್ಮ ಭಾಷಣದಲ್ಲಿ ಮೇಲಿನ ಎರಡು ಮುಖ್ಯ ವಿಷಯಗಳನ್ನು ಈ ಮೇರೆಗೆ ಹೀಗೆ ಪ್ರತಿಪಾದಿಸಿದರೊ ಹಾಗೆಯೆ ಪರಿಷತ್ತಾದರೂ ಆ ವಿಷಯಗಳ ಮೇಲಿನ ಠರಾವನ್ನು ಬಹುಮತದಿಂದ ಪಾಸು ಮಾಡಿತು. ಸುಧಾರಣಾ ಕಾನೂನಿನ ಠರಾವು ಪರಿಷತ್ತಿನ ಮುಂದೆ ಬಂದಾಗ "ಅಮೃತಸರ ರಾಷ್ಟ್ರೀಯ ಸಭೆಯ ಅನುಯಾಯಿಗಳನ್ನೆ ಮತದಾರರು ಚುನಾಯಿಸಿ ಕೂಡಬೇಕೆಂಬ ಮಾತಿಗೆ ಮೊಡರೇಟ್ ಪಕ್ಷದ ಶ್ರೀ. ಶ್ರೀನಿವಾಸಶಾಸ್ತ್ರೀ, ಶ್ರೀ. ರಾಮಸ್ವಾಮಿ ಮುಂತಾದ ಮುಖಂಡರು ಅಡ್ಡಿ ತಂದರು. ರಾಷ್ಟ್ರೀಯ ಸಭೆಯು ತಮಗೆ (ಮೊಡರೇಟರಿಗೆ) ಮಾನ್ಯವಾಗಿದೆ. ಆದರೆ ಅಮೃತಸರದ ಅಧಿವೇಶನದ ಠರಾವನ್ನು ಮನ್ನಿಸಲೇ ಬೇಕು ಮತ್ತು ಅದನ್ನು ಮನ್ನಿಸುವವರೆ ಚುನಾಯಿಸಿ ಬರಬೇಕೆಂದು ಹಟ ಹಿಡಿಯುವುದು ಯೋಗ್ಯವಲ್ಲ. ಅಮೃತಸರದ ಅಧಿವೇಶನದಲ್ಲಿ ನಿರ್ಣೀತವಾದ ಮತವನ್ನು ತಕ್ಕೊಳ್ಳಬೇಕೆಂದರೆ ನಾಳೆ ಇನ್ನೊಂದು ಅಧಿವೇಶನದಲ್ಲಿ ಅದರ ಮತವು ಬೇರೆ ವಿಧವಾಗಿಯಾದರೆ ಆಗ ಇದನ್ನು ಸ್ವೀಕರಿಸಬೇಕೊ, ಅಥವಾ ಅಮೃತಸರದ ಮತವನ್ನೆ ಹಿಡಿದಿರಬೇಕೊ? ಇಂಥ ಅನವಸ್ಥೆಯು ಬರುವುದರಿಂದ ರಾಷ್ಟ್ರೀಯ ಸಭೆಯ ಸಾಮಾನ್ಯ ಮತವನ್ನು ಮಾತ್ರ ಅಂಗೀಕರಿಸುವುದೇ ಒಳ್ಳೆದು" ಎಂಬಿತ್ಯಾದಿ ಯುಕ್ತಿವಾದವನ್ನು ಎದುರು ಕಡೆಯವರು ಎತ್ತಿತೋರಿಸಿದರು. ರಾಷ್ಟ್ರೀಯ ಪಕ್ಷದವರು—ಮುಖ್ಯತಃ ನಾಮದಾರ ಯಾಕೊಬ ಹಸನ ಮುಂತಾದವರು—ಈ ಮತಗಳನ್ನು ಸಯುಕ್ತಿಕವಾಗಿ ಖಂಡಿಸಿದರು. ಈ ಹೊತ್ತು ಅಮೃತಸರದಲ್ಲಿ ಒಂದು ವಿಧ, ನಾಳೆ ನಾಗಪುರದಲ್ಲಿ ಇನ್ನೊಂದು ವಿಧ, ನಾಡದ್ದು ಅಹಮದಾಬಾದಿನಲ್ಲಿ ಮೂರನೆಯ ವಿಧ ಈ ಪ್ರಕಾರ ರಾಷ್ಟ್ರೀಯ ಸಭೆಯು ತನ್ನ ಟೋಪಿಯನ್ನು ವಿಧವಿಧದಿಂದ ತಿರುಗಿಸುತ್ತ ಕೂತುಕೊಂಡೀತೆಂದು ನೆನಸುವುದು ಕೆಲವರ ಸ್ವಾನುಭವದ ಉತ್ಪ್ರೇಕ್ಷೆಯೆ ಆಗಿದೆ ಅಲ್ಲದೆ ಅದು ವಸ್ತುಸ್ಥಿತಿಯಲ್ಲ. ರಾಷ್ಟ್ರೀಯ ಸಭೆಯು ತನ್ನ ಧ್ಯೇಯದ ಆಕಾಂಕ್ಷೆಯ ಮಾರ್ಗದಲ್ಲಿ ದಿನೇ ದಿನೇ ಮುಂದೆಯೆ ಹೋಗುತ್ತದಲ್ಲದೆ, ಅದರ ಹೆಜ್ಜೆಯು ಹಿಂದಕ್ಕೆ ಬರುವುದಿಲ್ಲ ಎಂದ ಮೇಲೆ ಇದರಿಂದ ಅದರ ಅನುಯಾಯಿಗಳಿಗೆ ಬರುವ ಬಾಧೆಯು ಯಾವುದು? ಸಾರಾಂಶ ಮೊಡರೇಟರ ಯುಕ್ತ್ಯಾಭಾಸಗಳು ಸುಪ್ರಸಿದ್ಧ ವಕ್ತಾರ ಪ್ರಭಾವಿ ಭಾಷಣದಿಂದ ಹಾರಿಹೋದವು. ಹಾಗು ಸದರಿ ಠರಾವು ಬಹುಮತದಿಂದಲೆ ಅಲ್ಲ, ಸಾಮಾನ್ಯವಾಗಿ ಸರ್ವಮತದಿಂದ ಪಾಸಾಯಿತು ಎಂದು ಹೇಳಬಹುದು.

[illegible] ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಶ್ರೀನಿವಾಸ ಅಯ್ಯಂಗಾರರು [illegible] ಕಮಿಟಿ ಇತ್ಯಾದಿ [illegible] ವಿಷಯಗಳ ಮೇಲೆ [illegible] ಮತವನ್ನು ಪ್ರಕಟಿಸಿದಂತೆ [illegible] ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು [illegible] ತಮ್ಮ ಮತವನ್ನು—ಪ್ರಸ್ತಾವಿತ ಭಾಷಣದಲ್ಲಿ ವ್ಯಕ್ತಗೊಳಿಸಿದ್ದಾದರೂ [illegible] ಅವರಿಗೆ ಈ ವಿಷಯದ [illegible] ಅಭಿಪ್ರಾಯವನ್ನು [illegible] ನಾಡಿತು. ಪರಿಷತ್ತಿನಲ್ಲಿ ಅಸಹಕಾರಿತ್ವದ ಠರಾವು ಬಂದಿತ್ತು. ಮುಸಲ್ಮಾನರ ಧಾರ್ಮಿಕ [illegible] ಬ್ರಿಟಿಷ್ ಸರಕಾರವು ಖಲೀಫತ್ತಿನ ಪ್ರಶ್ನೆಯನ್ನು ಅನುಕೂಲವಾಗಿ ತೀರ್ಮಾನಿಸುವುದಿಲ್ಲವಾದರೆ ಹಿಂದು ಮುಸಲ್ಮಾನರು ಅಸಹಕಾರಿತ್ವವನ್ನು ಅಂಗೀಕರಿಸಬೇಕು, ಮತ್ತು ಹಿಂದಿ [illegible] ವನ್ನು ಪಾಸು ಮಾಡುವ ಬಗ್ಗೆ ಬರುವ ಒಗಸ್ಟಿನಲ್ಲಿ ಜರಗಲಿಕ್ಕಿರುವ ಜಾದಾ (ಸ್ಪೆಷಲ್) ರಾಷ್ಟ್ರೀಯ ಸಭೆಗೆ ವಿಜ್ಞಾಪನೆ ಮಾಡಿಕೊಳ್ಳತಕ್ಕದ್ದು ಎಂಬೀ ಅಭಿಪ್ರಾಯದ ಠರಾವು ಪರಿಷತ್ತಿನ ಮುಂದೆ ಬಂದಿತ್ತು. ಈ [illegible] ಚರ್ಚೆಯ ಸಮಯದಲ್ಲಿ ಕೂಡ, ಕೌನ್ಸಿಲ್ ಚುನಾವಣೆಯ [illegible] ಸಮಯದಲ್ಲುಂಟಾದಂತೆ ತುಂಬಾ ಭವತಿ—ನಭವತಿ ನಡೆಯಿತು. ಅಸಹಕಾರಿತೆಯು ಸನದುಶೀರಾದ ಉಪಾಯವಾದರೂ ಪ್ರಸ್ತುತ ಅದನ್ನು ಸಾಧ್ಯಕೋಟಿಯಲ್ಲಿ ಸೇರಿಸಲು ಎಡೆಯಿಲ್ಲವೆಂದು ಒಂದು ಕಡೆಯವರು ವಾದಿಸುವರು. ಇನ್ನೊಂದು ಕಡೆಯವರು ಸಾಧ್ಯವಿದ್ದ ಮಟ್ಟಿಗೆ ಅದನ್ನು ಸಾಧಿಸಲು ಯತ್ನಿಸಬೇಕು, ಮುಸಲ್ಮಾನರ ಮತವು ಸರಕಾರದ ಈ ಅನ್ಯಾಯದ ತೀರ್ಮಾನದಿಂದ ಚಲಪಿಚಲವಾಗಹತ್ತಿದೆ, ಆದಕ್ಕೆ ಅಸಹಕಾರಿತೆಯು ಉತ್ತಮವಾದ ಉಪಾಯವೆಂದು ಸಮರ್ಥಿಸುವರು. ಈ ರೀತಿಯಿಂದ ಎರಡೂ ಪಕ್ಷಗಳು ತಂತಮ್ಮ ಆಲೋಚನೆಗಳನ್ನು ಮಂಡಿಸುವ ಸಂದರ್ಭದಲ್ಲಿ ಅಸಹಕಾರಿತೆಯ ಬಗ್ಗೆ ಈ ವರೆಗೆ ಮುಗ್ಧರಾಗಿದ್ದ ಅಧ್ಯಕ್ಷರಿಗೆ ತಮ್ಮ ಮತಗಳನ್ನು ಹೇಳಬೇಕಾಗಿ ಬಂತು. ಅವರು ಅಸಹಕಾರಿತ್ವದ ಪಕ್ಷಪಾತಿಗಳೆ. ಅಸಹಕಾರಿತೆಯ ಠರಾವಿಗಿಂತ ಆಚರಣವು ಬೇಕಾದ್ದು ಎಂದು ಅವರು ಹೇಳಿದರು. ಈ ತತ್ವದ ಸಾಧ್ಯಾಸಾಧ್ಯತೆಯು ಇನ್ನು ಮುಂದೆ ಸ್ಪಷ್ಟವಾಗಿ ಗೊತ್ತಾದೀತೆಂದು ಅವರ ತಾತ್ಪರ್ಯ. ಅಧ್ಯಕ್ಷರು ಈ ಮೇರೆಗೆ ತಮ್ಮದನ್ನು ಪ್ರಕಟಿಸಿದ ಬಳಿಕ ಸದರಿ ಠರಾವು ಪ್ರಚಂಡ ಬಹುಮತದಿಂದ ಪಾಸಾಯಿತು.

೪. ಅಸಹಕಾರಿತ್ವದ ಪ್ರಸ್ತಾವವು ಮದ್ರಾಸಿನ ಪ್ರಾಂತಿಕ ಸಭೆಯಲ್ಲಿ ಮಾತ್ರ ಅಥವಾ ದೇಶದಲ್ಲಿ ಮಾತ್ರ ನಡಕೊಂಡುಂಟು ಎಂದಲ್ಲ, ಅದು ವೈಸರಾಯರ ವರೆಗೆ ಸಹ ಹೋಗಿ ತಲಪಿದೆ. ಖಿಲಾಫತ್ತಿನ ಸಂಗತಿಗಳನ್ನು ತಮ್ಮ ಮುಸಲ್ಮಾನ ಬಾಂಧವರಿಗೆ ಸರಿಯಾಗಿ ತಿಳಿಸಿಕೊಡುವ ಉದ್ದೇಶದಿಂದಲೂ, ಸರಕಾರ ದರಬಾರಿನಲ್ಲಿ ಆ ವಿಷಯವನ್ನು ವಿಜ್ಞಾಪಿಸಿಕೊಳ್ಳುವ ಉದ್ದೇಶದಿಂದಲೂ, ಸ್ಥಾಪಿತವಾದ ಸೆಂಟ್ರಲ್ ಖಿಲಾಫತ್ ಕಮಿಟಿಯ ಸುಮಾರು ೯೦ ಜನ ಪ್ರಮುಖ ಸಭಾಸದರು ವೈಸರಾಯರಿಗೆ ಒಂದು ಮನವಿಯನ್ನು ಕಳುಹಿಸಿಕೊಟ್ಟಿದ್ದಾರೆ. ಹಾಗು ಮಹಾತ್ಮ ಗಾಂಧಿಗಳು ಕೂಡ ಆ ಮನವಿಯ ಒಟ್ಟಿಗೆ ತಮ್ಮ ವಿಜ್ಞಾಪನೆಯೊಂದನ್ನು ಜೋಡಿಸಿದ್ದಾರೆ. ಮುಸಲ್ಮಾನ ಮುಖಂಡರು ಮಾಡಿಕೊಂಡ ಮನವಿಯಲ್ಲಿ ನಿರ್ದಿಷ್ಟವಾದ ಅಂಶಗಳು ಯಾವುವೆಂದರೆ, ಮುಸಲ್ಮಾನರ ಧಾರ್ಮಿಕ ಮನೋವೃತ್ತಿಗಳನ್ನು ನೋಯಿಸುವ ಯಾವ ಶರ್ತಗಳನ್ನೂ ತುರ್ಕಿಯೊಡನೆ ಮಾಡಲಿಕ್ಕಿಲ್ಲವೆಂದು ಮೊದಲು ವಚನಕೊಟ್ಟು ಬ್ರಿಟಿಷ ಸರಕಾರವು ತಹನಾಮೆಯಲ್ಲಿ ಕೊನೆಗೆ ತುರ್ಕಿಯನ್ನು ವಿರೂಪ ಪಡಿಸಿತು. ವೈಸರಾಯರು ಮಧ್ಯಸ್ಥಿಕೆಯನ್ನು ಮಾಡಿ ಆ ಶರ್ತಗಳನ್ನು ಬದಲಾಯಿಸಬೇಕು. ವೈಸರಾಯರ ಮಾತಿಗೆ ಬ್ರಿಟಿಷ್ ಮಂತ್ರಿಮಂಡಲವು ಕಿವಿಗೊಡುವುದಿಲ್ಲವೆಂದು ತೋರಿದರೆ ವೈಸರಾಯರು ಕೂಡ ಮುಸಲ್ಮಾನರಂತೆ ಅಸಹಕಾರಿತನವನ್ನು ಕೈಕೊಳ್ಳಬೇಕು, ಎಂದರೆ ಅವರು ತಮ್ಮ ಹುದ್ದೆಗೆ ರಾಜಿನಾಮೆಯನ್ನು ಕೊಡಬೇಕು. ಮಂತ್ರಿಮಂಡಲದ ಕಣ್ತೆರೆಯಲು ವೈಸರಾಯರು ಈ ಉಪಾಯವನ್ನು ಮಾಡುವುದಿಲ್ಲವೆಂದಾದರೆ ಬರುವ ಒಗಸ್ಟು ತಾ. ೧ರಿಂದ ಮುಸಲ್ಮಾನ ಬಂಧುಗಳು ಅಸಹಕಾರಿತೆಯನ್ನು ಅಂಗೀಕರಿಸಲು ಸಿದ್ಧರಾಗಿದ್ದಾರೆ, ಮತ್ತು ಹಿಂದು ಬಾಂಧವರನ್ನು ಕೂಡ ತಮ್ಮೊಡನೆ ಸೇರಿಕೊಳ್ಳಲು ಕೇಳುವವರಿದ್ದಾರೆ. ಮನವಿಯಲ್ಲಿ ಸೂಚಿಸಿರುವ ಅಸಹಕಾರಿತೆಯ ವಿಷಯವು, ಭಯವನ್ನು ಹುಟ್ಟಿಸುವುದಕ್ಕಾಗಲಿ ಇಲ್ಲವೆ ಸರಕಾರದ ವಿಷಯದಲ್ಲಿ ಅಗೌರವ [illegible] ಸೂಚಿಸುವುದಕ್ಕಾಗಲಿ ಉಲ್ಲೇಖಿಸಲ್ಪಟ್ಟಿದೆ ಎಂದು ತಿಳಕೊಳ್ಳಬಾರದು ಎಂಬುದಾಗಿ ಅದರಲ್ಲಿ ಮುಸಲ್ಮಾನ ಬಂಧುಗಳು ಬರೆದಿರುವರು. ಮಹಾತ್ಮ ಗಾಂಧಿಗಳ ಅನಾವೃತ ಪತ್ರವಾದರೂ ಇದರ ಸೂಚನೆಯನ್ನೇ ಕೊಟ್ಟಿದೆ. ಅವರು ತಮ್ಮ ಪತ್ರದಲ್ಲಿ ಹಿಂದಿ ಮುಸಲ್ಮಾನರ ಸಂಕಷ್ಟಗಳನ್ನು ವಿವರಿಸಿ ಹೇಳಿ, 'ಬ್ರಿಟಿಷ್ ಸರಕಾರವು ಈ ವಿಷಯದಲ್ಲಿ ವಚನ ಭಂಗವನ್ನು ಮಾಡಿದ್ದರಿಂದ ಮುಸಲ್ಮಾನರಲ್ಲೂ ಹಿಂದುಗಳಲ್ಲೂ ಇರುವ ಬ್ರಿಟಿಷ್ ನ್ಯಾಯದೇವತೆಯ ಮೇಲಿನ ವಿಶ್ವಾಸವು ಹಾರಿಹೋಗಿದೆ. ಇಂಥ ಪರಿಸ್ಥಿತಿಯಲ್ಲಿ ನೀವು ತಹನಾಮೆಯನ್ನು ತಿದ್ದಿಸಿ ತುರ್ಕಿಯ ಪೂರ್ವವತ್ ವ್ಯವಸ್ಥೆಯನ್ನು ಮಾಡದಿದ್ದರೆ ಅಸಹಕಾರಿತೆಯು ಒಂದೇ ಉಪಾಯವು ಜನರ ಕೈಯಲ್ಲಿರುತ್ತದೆ' ಎಂದು ತಿಳಿಸಿದ್ದಾರೆ. ಅಸಹಕಾರಿತೆಯ ಆಚರಣವು ನಡೆಯುವಾಗ ಯಾವ ತರದ ಅತ್ಯಾಚಾರವುಂಟಾಗದಂತೆ ಸಂಪೂರ್ಣ ಕ್ಷತೆಯನ್ನು ತಕ್ಕೊಂಡೇವು ಎಂದು ಮಹಾತ್ಮ ಗಾಂಧಿಗಳೂ, ಮನವಿ ಕರ್ತೃಗಳೂ ಬರೆದಿದ್ದಾರೆ. ಇರಲಿ, ಈ ಮೇರೆಗೆ ಅಸಹಕಾರಿತೆಯ ವಾರ್ತೆಯು ವೈಸರಾಯರ ಕಿವಿಯ ವರೆಗೆ ಹೋಗಿ ತಲಪಿದೆ. ದೂರದರ್ಶಿಗಳಾದ ವೈಸರಾಯರು ಯಾವ ಮಾರ್ಗವನ್ನು ಅವಲಂಬಿಸುತ್ತಾರೆಂಬುದನ್ನು ನೋಡಬೇಕು.

[illegible] ಹಿಂದುಸ್ಥಾನದ ರಾಜಕಾರಣದೊಳಗಿನ ಮಹತ್ವದ ಪ್ರಶ್ನೆಗಳಲ್ಲೊಂದಾದ ಅಸಹಕಾರಿತೆಯ ವಾರ್ತೆಯು ಈ ಮೇರೆಗೆ ವೈಸರಾಯರ ಕರ್ಣರಂಧ್ರದಲ್ಲಿ ತಾನನ್ನು ಮಾಡಹತ್ತಿದಂತೆ ಇನ್ನೊಂದು ಮಹತ್ವದ ಪ್ರಶ್ನೆಯಾದ ಹಂಟರ್ ರಿಪೋರ್ಟಿನ ಉತ್ತರ ಚರಿತ್ರೆಯು ವಿಲಾಯತಿಯಲ್ಲಿ ಭಾರತ ಮಂತ್ರಿಗಳ ಬೆನ್ನು ಹಿಡಿಯಹತ್ತಿದೆ. ಅವಿಚಾರದ ಮತ್ತು ನಿರಂಕುಶತನದ ಪ್ರಭುತ್ವವನ್ನು ಮೆರೆಯಿಸಿ ಆ ಮೂಲಕ ಮಹಾನರ್ಥಗಳನ್ನು ಬರಮಾಡಿದಲ್ಲದೆ ಕೊನೆಗೆ ನಿರ್ದೋಷತೆಯ ಮಂಗಳಾರತಿಯನ್ನು ಹಂಟರ ಕಮಿಟಿ, ಭಾರತ ಮಂತ್ರಿ, ಮತ್ತು ಹಿಂದುಸ್ಥಾನ ಸರಕಾರ ಇವು ತನ್ನ ಮುಖಕ್ಕೆ ಯಾವಾಗ ಮಾಡತೊಡಗಿದವೋ, ಆಗ ಇದರ ಸಂಪೂರ್ಣ ಪ್ರಯೋಜನವನ್ನು ಪಡಕೊಳ್ಳುವುದೇ ಜಾಣತನವೆಂದೆಣಿಸಿ ಸರ ಒಡಾಯರರು ತನ್ನ ಹಸ್ತಕನಾದ ಜನರಲ್ ಡಾಯರ ಸಾಹೇಬನಿಗೂ ಇದೇ ಉಡುಗೆರೆಯನ್ನು ದೊರಕಿಸಿ ಕೊಡುವುದಕ್ಕೆ ಈಗ ಒದ್ದಾಡುತ್ತಿದ್ದಾರೆ! ಸರ ಒಡಾಯರ ಮತ್ತು ಜನರಲ್ ಡಾಯರ ಈ ಇಬ್ಬರು ಬಹಾದೂರರ ಪಕ್ಷದವರು ಮಿ. ಮೊಂಟೆಗ್ಯುಗಳನ್ನು ಪಾರ್ಲಿಮೆಂಟ್ ಸಭೆಯಲ್ಲಿ ನಾನಾ ತರದ ಸವಾಲುಗಳನ್ನು ಮಾಡಹತ್ತಿದ್ದಾರೆ. ಈ ಡಾಯರ್ ಪಕ್ಷದವರ ಅಭಿಪ್ರಾಯವೇನಂದರೆ, ಮಿ. ಮೊಂಟೆಗ್ಯುಗಳನ್ನು ಸವಾಲುಗಳ ಚಕ್ರಬಿಂಬವ್ಯೂಹದಲ್ಲಿ ಹಾಕಿ ಜರ್ಜರ ಪಡಿಸಬೇಕು. ಸರ್ ಒಡಾಯರರು ತಮ್ಮ ಖಾಸಗಿ ಭೇಟಿಯಲ್ಲಿ ಮೊದಲೆ ಎಲ್ಲ ಸಂಗತಿಗಳನ್ನೂ—ಕೂಲಂಕಷ ವಿವರಣವನ್ನೂ ತಿಳಿಸಿರುತ್ತ ಪಂಜಾಬದ ಯಾವ ಸಂಗತಿಯೂ ಗೊತ್ತಿಲ್ಲವೆಂದು ನೀವು ಆ ಮೇಲೆ ಯಾಕೆ ಹೇಳಿದಿರಿ ಎಂದು ಮೊಂಟೆಗ್ಯು ಮಂತ್ರಿಗಳಿಗೆ ಸಭಾಸದರಲ್ಲೊಬ್ಬನು ಪ್ರಶ್ನೆಮಾಡಿದನು. ಆಗ ಮಿ. ಮೊಂಟೆಗ್ಯುಗಳು ಉತ್ತರ ಕೊಟ್ಟದ್ದೇನಂದರೆ ಜನಗಳಿಗೆ ಮೊದಲು ಸೂಚನೆ ಕೊಡದೆ ಗುಂಡುಗಳನ್ನು ಹಾರಿಸಿದ ವಿಷಯ, ಜನರು ಓಡಿಹೋದರೂ ಮದ್ದು ತೀರುವ ತನಕ ಗುಂಡುಗಳನ್ನು ಹಾರಿಸಿದ ಸಂಗತಿ, ಹಾಗು ಜನರಲ್ ಡಾಯರನು ಯಾವ ಸಿದ್ಧಾಂತಗಳ ಮೇಲೆ ನಡಕೊಂಡಿದ್ದನೊ ಆ ಸಿದ್ಧಾಂತಗಳು ಈ ಎಲ್ಲ ವಿಷಯಗಳ ಮಾಹಿತಿಯು ತನಗೆ ಬಂದಿದ್ದಿಲ್ಲ. ಒಡಾಯರರು ಎಲ್ಲ ವಿವರಣಗಳನ್ನು ಕೊಟ್ಟಿದ್ದೇನೆಂದು ಬರೆಯುತ್ತಾರೆ; ಮೊಂಟೆಗ್ಯುಗಳು ಮೇಲಿನ ಸಂಗತಿಗಳ ಮಾಹಿತಿಯು ತನಗೆ ಕೊಟ್ಟಿಲ್ಲವೆಂದು ಹೇಳುತ್ತಾರೆ. ಈ ಪರಸ್ಪರ ವಿರುದ್ಧ ಸಂಗತಿಯಲ್ಲಿ ನಾವು ಯಾರನ್ನು ನಂಬಬೇಕೆಂದು ಒಂದು ವೇಳೆ ವಾಚಕರು ಕೇಳಬಹುದು. ಆದರೆ ಅವರಿಗೆ 'ಸರ'ದಾರ ಒಡಾಯರರ ಗುರುತು, ಕೇಳಿ ಚನ್ನಾಗಿ ಗೊತ್ತಿರುವುದರಿಂದ ಈ ವ್ಯವಹಾರದೊಳಗಿನ ಸತ್ಯಾಸತ್ಯತೆಯನ್ನು ಅವರು ತಾವೇ ಅರಿತಾರು ಎಂದು ನಂಬಿದ್ದೇವೆ.

ಮಂಗಳೂರು.

ತಾಲೂಕುಬೋರ್ಡ ಮೆಂಬರರ ಚುನಾವಣೆ— ಪುತ್ತೂರು ತಾಲೂಕುಬೋರ್ಡಿನ ವಿಭಜನೆಯಾಗಿ ಉಪ್ಪಿನಂಗಡಿ ತಾಲೂಕು ಬೋರ್ಡಿಗೆ ಸುಳ್ಯ ಸರ್ಕಲಿಗೆ ೨, ಉಪ್ಪಿನಂಗಡಿ ಸರ್ಕಲಿಗೆ ೨, ಬೆಳ್ತಂಗಡಿ ಸರ್ಕಲಿಗೆ ೩, ಕಾಸರಗೋಡು ತಾಲೂಕುಬೋರ್ಡಿನ ಹೊಸದುರ್ಗ ಸರ್ಕಲಿಗೆ ೨, ಬೇಕಲ ಸರ್ಕಲಿಗೆ ೨, ಕಾಸರಗೋಡು ಸರ್ಕಲಿಗೆ ೩, ಮಂಜೇಶ್ವರ ಸರ್ಕಲಿಗೆ ೩, ಮೆಂಬರರ ಚುನಾವಣೆ ಆಗುವುದಕ್ಕೆ ಪುತ್ತೂರು ಡಿವಿಜನಲ್ ಆಫೀಸರರ ಪ್ರಕಟಣೆಯು ಹೊರಟಿರುವುದು. ಇವಕ್ಕೆ ಉಮೇದ್ವಾರರ ಶಿಫಾರಸು ಪತ್ರಗಳು ಉಪ್ಪಿನಂಗಡಿ, ಸುಳ್ಯ, ಫಿರ್ಕೆಗಳ ಬಗ್ಗೆ ಉಪ್ಪಿನಂಗಡಿ ತಾಲೂಕು ತಹಸಿಲ್ದಾರರ ಬಳಿಗೂ, ಬೆಳ್ತಂಗಡಿ ಸರ್ಕಲಿನ ಬಗ್ಗೆ ಬೆಳ್ತಂಗಡಿ ಡಿಪ್ಯುಟಿ ತಹಸಿಲ್ದಾರರ ಬಳಿಗೂ, ಬೇಕಲ ಹೊಸದುರ್ಗ ಸರ್ಕಲಿನ ಬಗ್ಗೆ ಹೊಸದುರ್ಗ ಡಿಪ್ಯುಟಿ ತಹಸಿಲ್ದಾರರ ಬಳಿಗೂ, ಕಾಸರಗೋಡು ಸರ್ಕಲಿನ ಬಗ್ಗೆ ಕಾಸರಗೋಡು ಸ್ಟೇಶನರಿ ಮೆಜಿಸ್ಟ್ರೇಟರ ಬಳಿಗೂ, ಮಂಜೇಶ್ವರ ಸರ್ಕಲಿನ ಬಗ್ಗೆ ಕಾಸರಗೋಡು ತಹಸಿಲ್ದಾರರ ಬಳಿಗೂ ಇದೇ ಜುಲೈ ೧೦ನೆ ತಾರೀಕಿನ ಸಾಯಂಕಾಲ ೫ ಗಂಟೆಯೊಳಗೆ ತಲಪಬೇಕಾಗುವುದು. ಈ ಹೆಸರುಗಳು ಜುಲೈ ೧೨ನೆ ತಾರೀಕಿಗೆ ಪ್ರಕಟವಾಗುವುವು. ಆಕ್ಷೇಪಗಳಿದ್ದರೆ ಅವುಗಳ ವಿಚಾರವು ಕುಂಬಳೆ ಮೊಕ್ಕಾಮಿನಲ್ಲಿ ಜುಲೈ ೧೭ನೆ ತಾರೀಕಿಗೆ ಆಗುವುದು. ಮಂಜೂರಾತಿ ಶಿಫಾರಸು ಪತ್ರಗಳ ಪಟ್ಟಿಯು ಜುಲೈ ೨೧ನೆ ತಾರೀಕಿಗೆ ಪ್ರಕಟವಾಗಿ ಉಮೇದ್ವಾರರು ಹೆಚ್ಚಿಗೆ ಮಂದಿ ಇರುತಲ್ಲಿ ಒಗಸ್ಟ ೧೭ನೆ ತಾರೀಕಿಗೆ ವೋಟುಗಳ ಸಂಗ್ರಹವು ಆಗಲಿಕ್ಕಿರುವುದು.

ಪಾಲಘಾಟಿನ ಅಸಿಸ್ಟಾಂಟ ಇಂಜಿನಿಯರರಾದ ಮ| ರಾ| ಪಂಜೆ ಶಂಕರರಾಯರು ಕರ್ನೂಲಿನ ಡಿಸ್ಟ್ರಿಕ್ಟಬೋರ್ಡ ಇಂಜಿನಿಯರರಾಗಿ ನೇಮಕವಾಗಿ, ಕಾಸರಗೋಡಿನ ಅಸಿಸ್ಟಾಂಟ ಇಂಜಿನಿಯರರಾದ ಮ| ರಾ| ರಗಡೆ ಶಂಕರರಾಯರಿಗೆ ಪಾಲಘಾಟಿನ ಅಸಿಸ್ಟಾಂಟ ಇಂಜಿನಿಯರರಾಗಿ ವರ್ಗವಾಗಿದೆ.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟಬೋರ್ಡಿನ ಅಧಿವೇಶನವು ಕಲೆಕ್ಟರ ದೊರೆಗಳವರ ಕಛೇರಿಯಲ್ಲಿ ಬರುವ ತಾ. ೧೦ನೇ ಶನಿವಾರ ಕೂಡುವುದು. ೧೯೧೯-೨೦ನೇ ವರ್ಷದ (ಆಡಳಿತೆ) ರಿಪೋರ್ಟು ಈ ಅಧಿವೇಶನದ ಮುಂದಿಡಲಾಗುವುದು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಎಸೋಸಿಯೇಶನಿನ ಅಧಿವೇಶನವು ಈ ತಿಂಗಳ ತಾ. ೧೦ನೇ ಶನಿವಾರ ಸಾಯಂಕಾಲ ೬ ಗಂಟೆಗೆ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಜರಗುವುದು. ಈ ಅಧಿವೇಶನದಲ್ಲಿ ಕೆಳಗಿನ ವಿಷಯಗಳು ಚರ್ಚೆಗೆ ಬರುವವು—

೧. ಕಳೆದ ಅಧಿವೇಶನದಲ್ಲಿ ಆರಿಸಲ್ಪಟ್ಟ ಪ್ರತಿನಿಧಿಗಳು ಫೋರೆಸ್ಟ ಖಾತೆಯ ಕಾನೂನಿನ ಅಡಚಣೆಗಳು ಮುಂತಾದುದನ್ನು ಕುರಿತು ಜಿಲ್ಲಾ ಕಲೆಕ್ಟರ ದೊರೆಗಳವರಿಗೆ ನಿವೇದಿಸಿಕೊಂಡ್ದ ಸಲಹೆಗಳಿಗೆ ದೊರೆಗಳು ಯಾವ ತರದ ವಿಲೆವಾರಿಯನ್ನು ಮಾಡಿರುವರೆಂದು ತಿಳಿಸಿದ ಸಂಗತಿ. ೨. ಕುಂದಾಪುರ ತಾಲೂಕಿನಲ್ಲಿ ಸೊಪ್ಪುಸದೆಗಳ/ಗೊಬ್ಬರವನ್ನು ಒದಗಿಸಿಕೊಳ್ಳಲು ಇರುವ ತೊಂದರೆಗಳನ್ನು ಸೂಚಿಸಿ ಕೆನಾರಲ [illegible] ಮತ್ತು ಹಿಂಬದಿಯ [illegible] ಗ್ರಾಮದ ರೈತರೂ, ಒಕ್ಕಲಿಗರೂ ಬರೆದ ಮನವಿ. ೩. ಉಪ್ಪಿನಂಗಡಿ ತಾಲೂಕಿನ ಉಪಾಧ್ಯಾಯರು ತಮ್ಮ ಸಭೆಯಲ್ಲಿ ಮಾಡಿಕೊಂಡ ನಿರ್ಣಯಗಳು. ೪. ಮ| ರಾ| ಟಿ. ಸಿ. ವಾಸರು ಬರಕೊಂಡ ಮನವಿಯನ್ನು ಸಮಾಲೋಚಿಸಲು ಸಂಘವು ನೇಮಿಸಿದ ಕಮ್ಮಿಟಿಯು ಬರಕೊಂಡ ವರದಿ. ೫. ಅಲ್ಲದೆ ಇನ್ನು ಸಭೆಯ ಮುಂದೆ ಬರುವ ಇತರ ವಿಷಯಗಳು ಸಹ.

ಈ ಸರ್ಕಲಿನ ಶಾಲಾ ಇನ್ಸ್‌ಪೆಕ್ಟರರಾದ ಮಿ. ಎಟ್ಸ್ ದೊರೆಗಳವರ ರಜಾ ಕಾಲದಲ್ಲಿ ಆರನೇ ಸರ್ಕಲಿನ ಇನ್ಸ್‌ಪೆಕ್ಟರರಾದ ಮಿ| ರನ್ಸವರ್ದ ದೊರೆಗಳು ಈ ಸರ್ಕಲಿನ ಚಾರ್ಜನ್ನು ನೋಡುವರಾಗಿ ಪ್ರಕಟವಾಗಿದೆ.

ಕಳೆದ ಬುಧವಾರ ಮ| ರಾ| ಭೋಜರಾಯರ ಬಂಗ್ಲೆಯ ಬಳಿಯಲ್ಲಿರುವ ಸಂಕಕ್ಕೆ ತಾಗಿರುವ ತೋಡಿನಲ್ಲಿ ಒಂದು ಎಳೇ ಶಿಶುವಿನ ಶವವು ದೊರಕಿದೆ. ಇದರ ತನಖಿಯು ನಡಿಯುತ್ತಿದೆ. ಇದೇ ದಿನ ರಾತ್ರೆ ಮಾರ್ಕೆಟ ರಸ್ತೆಯಲ್ಲಿ ಮಿ. ಮೆರಿಯನ್ ಪಿರೇರರ ಜವುಳಿ ಅಂಗಡಿಯಿಂದ ಸುಮಾರು ರೂ. ೧೫೦೦ರ ಬೆಲೆ ಬಾಳುವ ಜವುಳಿ ಕಳವಾಗಿದೆ. ಕಳವು ಮಾಡಲು ಮಾಳಿಗೆಯನ್ನು ಸೇರುವುದಕ್ಕೆ ಮಾಡಿನ ಹೆಂಚನ್ನು ತಪ್ಪಿಸಿ ದಾರಿಮಾಡಿತ್ತಾಗಿ ತಿಳಿದುಬರುತ್ತದೆ.

ಪುತ್ತೂರು ರೆವೆನ್ಯು ಡಿವಿಜನಲ್ ಆಫೀಸರರ ಸರ್ಕಿಟು:— ತಾ. ೪ ಪುತ್ತೂರು; ತಾ. ೫ ಮಂಗಳೂರು, ತಾ. ೭ರಿಂದ ೧೦ರ ವರೇಗೆ ಕಾಸರಗೋಡು.

ಪುತ್ತೂರು ತಾಲೂಕು ಬೋರ್ಡಿಗೆ ಹೊಸದುರ್ಗ ಇಲೆಕ್ಟೊರಲ್ ಸರ್ಕಲಿನಿಂದ ಚುನಾವಣೆಯಾಗತಕ್ಕ ಮೆಂಬರಿಕೆಗೆ ಮ| ರಾ| ವಿ. ಸಿ. ರಾಮವರ್ಮರಾಜರು ಮತ್ತು ಮ| ರಾ| ಸಿ. ಮಂಜುನಾಥ ಕಮ್ತಿರು ಉಮೇದ್ವಾರರಾಗಿ ಎದುರು ಒಂದಿರುತ್ತಾರೆ.

ನಾವುದಾರ ನಯಂಪಳ್ಳಿ ಸುಬ್ಬರಾಯರು ಪುನಃ ಡಿಸ್ಟ್ರಿಕ್ಟ ಬೋರ್ಡ ಮೆಂಬರರಾಗಿ ಚುನಾವಣೆಯಾಗಿದ್ದು ಮಂಜೂರಾಗಿ ಬಂದಿರುತ್ತದೆ.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ ಮುನಸೀಫ ಕೋರ್ಟಿನಲ್ಲಿ

O. P. N 34/1920.

1. ಭವಾನಿಬಾಯಿ ವಂಡ್ಸೆ ಅನಂತಯ್ಯನವರ ವಿಧವೆ.
2. ಸದಾಶಿವರಾವ-ಸದ್ರಿ ಅನಂತಯ್ಯನವರ ಮಗ ಮುಂಬಯಿ ಮುನ್ಸಿಪಾಲಿಟಿಯ ಸಬ್ ಓವರಸಿಯರ. ಹಾಲಿ ಕುಂದಾಪುರ ತಾಲೂಕು ನಂಬ್ರ 44ನೆ ಕಟ್ಟಬೇಲ್ತೂರು ಗ್ರಾಮ. } ಅರ್ಜಿದಾರರು.

ಮತ್ತು

ವಂಡ್ಸೆ ರಾಮರಾವ್ ಅಣ್ಣಪ್ಪಯ್ಯನವರ ಮಗ ಮದ್ರಾಸ ಸಮೀಪ ಪೆರಂಬೂರ ಎಂಬಲ್ಲಿಯ ಎಮ್. ಎಸ್. ಎಮ್. ರೈಲ್ವೆಯ ಲೋಕೊ ಸುಪರಿಂಟೆಂಡ ಆಫೀಸಿನ ಕ್ಲಾರ್ಕನಾಗಿರುತ್ತಾನೆ. } ಎದ್ರಿ.

ಸದ್ರಿ ಎದ್ರಿಗೆ ವ ಇತರ ಸಮಸ್ತರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ—

ಮೃತ ಪಟ್ಟ ವಂಡ್ಸೆ ಅನಂತಯ್ಯಗೆ-ಮದ್ರಾಸ ಮತ್ತು ಸದರ್ನ ಮರಾಟಾ ರೈಲ್ವೆ ಕಂಪೆನಿಯಿಂದ ಬರತಕ್ಕ ಪ್ರೊವಿಡೆಂಟ ಫಂಡಿನ ಹಣದ ವಸೂಲಿಯ ಬಗ್ಗೆ ಆತನ ವಿಧವೆಯಾದ 1ನೇ ಅರ್ಜಿದಾರಳಿಗೆ ಪಾರಿಸಿ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಬರಕೊಂಡ ಸದ್ರಿ ಅರ್ಜಿ ಕುರಿತು ಯಾರದ್ದಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ಅರ್ಜಿಯು ತನಿಕೆಗೆ ಇಟ್ಟ ತಾರೀಕು 14—7—1920ನೆ ಹಗಲು 11 ಘಂಟೆಗೆ ಸದ್ರಿ ಕೋರ್ಟ ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ಹ್ಯಾಜರು ಮಾಡಿಕೊಳ್ಳತಕ್ಕದ್ದು.

ಕುಂದಾಪುರ ತಾ. 22-6-1920. } T. GANESHA RAU. ಅರ್ಜಿದಾರರ ವಕೀಲ.

Mr. ALEX ALVAREZ Dentist.

OF MANDALAY, UPPER BURMA.

Will attend patients here for the following in Particular:—

Charges Moderate.

1. Painless extraction of teeth. 2. Making of false teeth. 3. Filling the teeth with silver, gold, porceline. 4. Gold bridge and Crowns. 5. Porceline Crowns. 6 Cleaning the teeth. 7. Pyorrhoea treatment.

Can be consulted at:—

The Electro Homoeopthic Dispensry,
Hampankatta, MANGALORE.

ಮಿ. ಆಲೆಕ್ಸ್ ಆಲ್ವಾರಿಸ್ ದಂತವೈದ್ಯ.

ಇವರು ಹಲ್ಲು ಬೇನೆಯಿಂದ ನರಳುತ್ತಿರುವವರ ಹಲ್ಲುಗಳನ್ನು ಸ್ವಲ್ಪವೂ ನೋಯದಂತೆ ಬಾಧೆರಹಿತ ಕಿತ್ತು ತೆಗೆಯೋದು, ಕೃತ್ರಿಮ ಹಲ್ಲುಗಳನ್ನು ಮಾಡಿ ಇಡೋದು, ಹಲ್ಲುಗಳಲ್ಲಿ ಉಂಟಾದ ರಂಧ್ರಗಳನ್ನು ಬೆಳ್ಳಿ, ಬಂಗಾರ, ಪಿಂಗಾಣಿ ಇವುಗಳಿಂದ ಮುಚ್ಚೋದು, ಬಂಗಾರದ ಕೃತ್ರಿಮ ದಂತಮಾಲೆಯನ್ನು [illegible] ಇಡೋದು, ಪಿಂಗಾಣಿ ಹಲ್ಲುಮಾಲೆಯನ್ನು ಇಡೋದು ಮತ್ತು ಹಲ್ಲುಗಳನ್ನು ಶುಚಿಮಾಡೋದು ಮುಂತಾದ ದಂತಚಿಕಿತ್ಸೆಯನ್ನು, ಪಯೋರಿಯಾ ಚಿಕಿತ್ಸೆಯನ್ನು ಮಾಡುವರು. ಇವರು ಹಂಪನಕಟ್ಟೆಯಲ್ಲಿರುವ ಮಿ| ಎ. ಫೆರ್ನಾಂಡಿಸ್, ಇಲೆಕ್ಟ್ರೊ ಹೋಮಿಯೋಪಥಿಕ್ ಡಿಸ್ಪೆನ್ಸರಿಯಲ್ಲಿ ಮೊಕ್ಕಾಂ ಮಾಡಿರುತ್ತಾರೆ.

[illegible]

... ಮೆಂಬರರುಗಳು ಹಾಜರಿದ್ದರು. ಸಭಾರಂಭದಲ್ಲಿ ... ಹೇಳಿದ ಅರ್ಜಿಯು ಓದಲಾಯಿತು, ಮತ್ತು ನೆರೆದ ಸಭಿಕರ ಸರ್ವ ಸಮ್ಮತಿಯಿಂದ ಈ ಕೆಳಗಿನ ಠರಾವುಗಳು ಮಂಜೂರುಮಾಡಲ್ಪಟ್ಟವು —

(೧) ಇದೇ ತಿಂಗಳ ೩೦ ೧೯೩೧ ಮದ್ರಾಸು ಗವರ್ನಮೆಂಟಿನವರು ... ನವರ ವರೆಗೆ ಕೆಲಸ ಸಿಗುವ ಸರಕಾರಿ ನೌಕರರಿಗೆ ರೂಪಾಯಿ ... ಹಂಗಾಮಿ ಎಲವೆನ್ಸು ಎಂಬದಾಗಿ ಸೆಂಕ್ಷನ್ ಮಾಡಿರುದು ಈಗಿನ ... ಸಮಾಧಾನಕರವಲ್ಲ. ಸದರಿ ಎಲವೆನ್ಸನ್ನು ಈಗ ಕಿರಸ್ಕರಿಸಿ ... ಸಿಕ್ಕದಿದ್ದ ಪ್ರಯುಕ್ತ, ಪ್ರತಿಯೊಬ್ಬನು ಅದನ್ನು ಪಡೆಕೊಂಡು, ... ದಲ್ಲಿ ಸಂಘದ ಪ್ರಯೋಜನಾರ್ಥವಾಗಿ ಉಪಯೋಗಿಸುವರೆ, ಒಂದು ... ಏರ್ಪಡಿಸಬೇಕಾಗಿಯೂ,

(೨) ... ರಿಗೆ ಕನಿಷ್ಟ ಪಕ್ಷಕ್ಕೆ ತಿಂಗಳು ೧೮ ರೂಪಾಯಿ ಸಂಬಳ ... ವಮಂಜೂರಾದವರಿಗೆ ರೂ ... ಕ್ಕಿಂತ ಕಡಿಮೆಯಾದ ಸಂಬಳವನ್ನು ... ಹರಣ ಮಾಡಿ ಸರಕಾರಿ ಉದ್ಯೋಗವನ್ನು ಸಾಂಗ್ಯವಾಗಿ ನಡಿಸುವುದು ತಮ್ಮಿಂದ ಎಷ್ಟು ... ಕ್ಕೂ ಸಾಧ್ಯವಲ್ಲವೆಂತಲೂ, ಮತ್ತು ಮೇಲೆ ಹೇಳಿದ ಈ ಸಂಬಳವನ್ನು, ತಮಗೆ ೧೯೧೯ನೇ ಇಸವಿ, ಎಪ್ರಿಲ್ ೩೦ ೧೮ ರ ಲಾಗಾಯತಾದರೂ ಕೊಡಬೇಕಾಗಿಯೂ,

(೩) ಸೆಲಂ ಕಮಿಟಿಯವರು ವ್ಯರ್ಥವಾಗಿ ಸುಮಾರ ೮ ತಿಂಗಳುಗಳನ್ನು ವ್ಯಯಮಾಡಿ ಕೊನೆಗೆ ಬಡ ನೌಕರರ ಗೋಳನ್ನು ನಿವಾರಣೆ ಮಾಡುವ ಯೋಗ್ಯವಾದ ಯಾವ ಏರ್ಪಾಡನ್ನೂ ಮಾಡದೆ ಇರುವುದರಿಂದ ಮಾನ್ಯ ಸರಕಾರದವರು ಸಂಬಳವನ್ನು ಏರಿಸುವ ವಿಷಯದಲ್ಲಿ ಸ್ಪೆಶ್ಯಲ್ ಆಫೀಸರರ ಯಾ ಕಮಿಟಿಯವರ ನೇಮಕದಿಂದ ತಮಗೆ ಹಿತವಾಗಬಹುದೆಂದು ಇದ್ದ ಭರವಸೆಯು ತೀರಾ ಅಳಿದು ಹೋಗಿರುವುದರಿಂದ ಅಂಥಾ ಸ್ಪೆಶ್ಯಲ್ ಆಫೀಸರರ ನೇಮಕವು ಅಗತ್ಯವಿಲ್ಲವೆಂತಲೂ, ಅವರ ಬದಲಿಗೆ ಇಂಡಿಯನ್ ಮತ್ತು ಪ್ರೊವಿನ್ಸಿಯಲ್ ಸರ್ವಿಸಿನ ಆಫೀಸರರ ಸಂಬಳ ಏರಿಸುವ ಬಾಬಿನಲ್ಲಿ ನೇಮಕವಾದಂತೆ ನೊನ್ ಗಜೆಟೆಡ್ ಆಫೀಸರರ ಸಂಬಳವನ್ನೂ ಏರಿಸುವರೆ ತಮ್ಮವರ ಪೈಕಿ ಮೆಂಬರರನ್ನು ಚುನಾಯಿಸಿ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂತಲೂ, ಯಾ ನಿರ್ವಾಹವಿಲ್ಲದ ಸಂದರ್ಭದಲ್ಲಿ ಸದ್ರಿ ನೇಮಕವಾದ ಆಫೀಸರರು ಆಯಾ ಇಲಾಖೆಯ ಮುಖಂಡರೊಡನೆ ಮಾತ್ರ ಆಲೋಚಿಸದೆ ಸಂಸ್ಥಾನದ ಎಲ್ಲಾ ನೋನ್ ಗಜೆಟೆಡ್ ಎಸೋಸಿಯೇಶನವರ ಅಭಿಪ್ರಾಯವನ್ನೂ ಸಹಾ ಪಡಕೊಳ್ಳಬೇಕೆಂತಲೂ

(೪) (೧೦೦೦) ಸಾವಿರ ಗಟ್ಟಿಯಲ್ಲಿ ಸಂಬಳವಿರುವ ಮೇಲಾಫೀಸರರಿಗೆ ಮಾತ್ರ ಹಟಾತ್ತಾಗಿ ಒಂದಕ್ಕೆ ಇಮ್ಮಡಿಯಾಗಿ ಸಂಬಳವನ್ನು ಏರಿಸಿ ಬಡ ನೌಕರರ ಅಹೀನುಗಳ ಬಿನ್ನಹಗಳೂ ಆದ ಅವರಂಥವರು ತಮ್ಮ ಜೀವಿತಕ್ಕೆ ತಕ್ಕಂತೆ ಸಂಬಳವನ್ನು ಕೇಳಿದಾಗ್ಯೂ ಅದಕ್ಕೆ ತಕ್ಕಷ್ಟು ಪ್ರಾಮುಖ್ಯವಿಲ್ಲ ಎಂಬುದರಲ್ಲಿ ಅರ್ಥವಿಲ್ಲವೆಂತಲೂ, ಇನ್ನಾದರೂ ತಮಗೆ ಈಗಿನ ಕಾಲಸ್ಥಿತಿಗನುಸರಿಸಿ ಸಂಬಳ ಸಿಗುವಂತೆ ಮಾಡಬೇಕೆಂತಲೂ, ಇನ್ನೂ ಹಲವು ವಿಷಯಗಳ ಸಹಾ ನಿರ್ಧರಿಸಲ್ಪಟ್ಟವು. ಅದಲ್ಲ ಕಳೆದ ತಮಿಳು ... ಪರವಾಗಿಯೂ ಎಸೋಸಿಯೇಶನಿನ ಪ್ರತಿನಿಧಿಯಾಗಿಯೂ ಐಕ್ಯತೆಯ ವಿಷಯದಲ್ಲಿ ಇಲ್ಲಿಯ ... ಕಲೆಕ್ಟರ್ ಮಾ। ರಾ। ರಾ। ... ರವರು ಒಂದು ಗಂಭೀರವಾದ ಭಾಷಣವನ್ನು ಕೊಟ್ಟರು. ಅಲ್ಲದೆ ಈ ದಿನ ಇಲ್ಲಿಯ ಮುನ್ಸಿಫ್ ಕೋರ್ಟ್ ರಿಜಿಸ್ಟ್ರಾರರವರ ಆಫೀಸು ಅಟ್ಯಾಚ್ ಆಫೀಸು ... ತಾಲೂಕ ಖಚೇರಿಯೇ ಮೊದಲಾದ ಎಲ್ಲಾ ಆಫೀಸಗಳ ... ನೌಕರರ ಕೆಲಸವನ್ನು ಮುಚ್ಚಿ ಹಾಜರಿದ್ದರು. ಇವರೆಲ್ಲರ ಪರವಾಗಿ ತಾಲೂಕ ... ಬಿ ರಾಮಚಂದ್ರನು ತಮ್ಮ ಹಾಲ್‌ ... ಸಭೆ ... ಮುಂದಿಟ್ಟು ... ತಮಗೆಲ್ಲರಿಗೂ ... ಸಭೆಗೆ ಚಿತ್ತೈಸಿದ್ದ ಇಲ್ಲಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಮಾ। ರಾ। ರಾ। ಎಮ್ ಆರ್. ಶಂಕರ ಅಯ್ಯರ್ ಬಿ. ಎ. ಬಿ. ಎಲ್ ಇವರಿಗೆ ಧನ್ಯವಾದವನ್ನಿತ್ತು ಸಭೆಯು ವಿಸರ್ಜನೆಯಾಯಿತು.

ಖಿಲಾಫತ ಪ್ರಶ್ನೆ

ಸೆಂಟ್ರಲ್ ಖಿಲಾಫತ ಕಮಿಟಿಯ ... ಈಚೆಗೆ ಅಲಹಾಬಾದಿನ ಅಧಿವೇಶನದಲ್ಲಿ ನಿಶ್ಚಯಿಸಿದ ಮೇರೆಗೆ ಸುಮಾರು ೯೦ ಮಂದಿ ಮುಸಲ್ಮಾನ ಮುಖಂಡರು ಮುಂಬಯಿಯಿಂದ ಒಂದು ಪತ್ರವನ್ನು ವೈಸರಾಯಿ ಪ್ರಭುಗಳವರಿಗೆ ನಿವೇದಿಸಿದ್ದಾರೆ. ಅದರಲ್ಲಿ ಹೀಗೆ ಇದೆ.

ಪ್ರಜೆಗಳೆ ಈ ಕೆಳಗೆ ಸಹಿಮಾಡಿದ ನಾವು ಹಿಂದೂಸ್ಥಾನದ ಮುಸಲ್ಮಾನರಲ್ಲಿ ಬಹುಮಂದಿಯ ಪ್ರತಿನಿಧಿಗಳಾಗಿರುತ್ತೇವೆ. ತುರ್ಕಿಗೆ ಕೊಟ್ಟ ಶರ್ತಗಳನ್ನು ಚೆನ್ನಾಗಿ ಪರ್ಯಾಲೋಚಿಸಿದಾಗ ಅವು ಮುಸಲ್ಮಾನರ ಧರ್ಮಶಾಸನಕ್ಕೆ ತೀರಾ ವಿರುದ್ಧವಾದವು ಎಂದು ಕಂಡು ಬರುವದೆ. ಬ್ರಿಟಿಷ ಮಂತ್ರಿಗಳು ಕೊಟ್ಟ ಭಾಷೆಗೆ ಅವು ತೀರಾ ವ್ಯತ್ಯಸ್ತವಾಗಿವೆ. ಆ ಭಾಷೆಯ ಮೇಲಣ ವಿಶ್ವಾಸದಿಂದಲೆ ಯುದ್ಧಕಾಲದಲ್ಲಿ ಮುಸಲ್ಮಾನರು ಯುದ್ಧಸೈನ್ಯದಲ್ಲಿ ದಾಖಲಾಗಲು ತವಕಪಟ್ಟರೆಂಬದು ಒಪ್ಪತಕ್ಕದ್ದು. ಬ್ರಿಟಿಷ ಸಾಮ್ರಾಜ್ಯದಲ್ಲಿದ್ದಷ್ಟು ಮುಸಲ್ಮಾನ ಪ್ರಜೆಗಳು ಬೇರೆ ರಾಜ್ಯಗಳಲ್ಲಿ ಇಲ್ಲ. ತುರ್ಕಿ ಸಾಮ್ರಾಜ್ಯವು ಮುಸಲ್ಮಾನರ ಖಿಲಾಫತದ ಕೇಂದ್ರಸ್ಥಾನವಾಗಿದೆ. ಆದ್ದರಿಂದ ಇತರ ವಿಜಿತ ದೇಶಗಳಂತೆ ತುರ್ಕಿಯನ್ನು ನಡಿಸುವುದು ಸರಿಹೋಗದು ಎಂದು ನಾವು ಪ್ರತಿಪಾದಿಸುತ್ತೇವೆ. ಕೆಲವು ವಿಷಯಗಳಲ್ಲಿ ತುರ್ಕಿಗೆ ಇತರ ರಾಜ್ಯಗಳಿಗಿಂತಲೂ ಹೀನಸ್ಥಿತಿಯಲ್ಲಿ ನಡಿಸಿದ್ದಾರೆ ಎಂದು ನಮ್ಮ ವಾದವಿದೆ. ತುರ್ಕಿಯನ್ನು ... ಇತ್ಯರ್ಥಿಸುವಾಗ ಹಿಂದೀ ಮುಸಲ್ಮಾನರ ನ್ಯಾಯವಾದ ಕಾಂಕ್ಷೆಗಳ ... ದೃಷ್ಟಿ ಇಟ್ಟುಬಿಡಬೇಕೆಂದು ನಾವು ಆದರಪೂರ್ವಕವಾಗಿ ಕೇಳಿಕೊಳ್ಳುತ್ತೇವೆ. ... ತುರ್ಕಿ ಸುಲ್ತಾನರು ಜರ್ಮನರ ಪಕ್ಷಕ್ಕೆ ಸೇರಲು ಕಾರಣವೇನಾಯಿತೆಂದು ಈಗ ನಾವು ಚರ್ಚಿಸುವುದು ಪ್ರಸಕ್ತವಲ್ಲ, ಆದರೆ ಹಾಗೆ ಸೇರಿದ ನಿಮಿತ್ತ ಸುಲ್ತಾನರ ರಾಜಕೀಯ ಅಧಿಕಾರಕ್ಕೆ ಊನವನ್ನು ಶಿಕ್ಷಾರೂಪವಾಗಿ ತಂದದ್ದು ಮುಸಲ್ಮಾನರಿಗೆ ಒಗ್ಗುವದಿಲ್ಲ. ಆದರೂ ಆತ್ಮನಿರ್ಣಯದ ತತ್ವಗಳಿಗೆ ... ಯಾವದೊಂದು ಏರ್ಪಾಡನ್ನು ನಾವು ಕೇಳಿಕೊಳ್ಳುವದಿಲ್ಲ. ತುರ್ಕಿಯು ಅನ್ಯಾಯದ ಕೃತ್ಯಗಳನ್ನು ಮಾಡುತ್ತಿದೆ ಎಂಬ ಆರೋಪವಿದೆ. ಅಂಥ ... ನಾವು ತುರ್ಕಿಯ ಬೆನ್ನು ತಟ್ಟುತ್ತೇವೆ ಎಂದು ಭಾವಿಸಬಾರದು. ತುರ್ಕಿಯ ಆರ್ಮೇನಿಯದಲ್ಲಿ ಮಾಡಿದ್ದೆಂಬ ದುಷ್ಕೃತ್ಯಗಳನ್ನು ಕುರಿತು ನಿಷ್ಪಕ್ಷಪಾತವಾದ ಒಂದು ಕಮಿಶನ್ನಿನಿಂದ ವಿಚಾರವಾಗಬೇಕೆಂದು ನಮ್ಮ ... ಕೇಳಿಕೊಂಡಿದ್ದಾರೆ ತುರ್ಕಿಯನ್ನು ...

ಅನೇಕ ನಮೂನೆಯ ವಿಧ ಅಂಬರ್, ಜವ್ವಾಜಿ ಪುನಗು ಕಸ್ತೂರಿ ಊದಬತ್ತಿಗಳ ಬಿಲ್ಲೆಗಳ ಅರಗಜ ಎಲಾ ಅತ್ತರುಗಳು ಸೆಂಟ್ಸ್‌ಗಳ ಭೃಂಗಾ ಮಲಕ ತೈಲ ಕುಂತಳವರ್ಧಿನಿ ತೈಲ ಇವೆ ಮೊದಲಾದ ಸುಗಂಧ ದ್ರವ್ಯಗಳು ನಮ್ಮಲ್ಲಿ ತಯಾರಾಗಿ ಬಿಕರಿಯಾಗುತ್ತ ದ್ವೈಸೂರು ಮದರಾಸು ಬೊಂಬಾಯಿ ಕಲ್ಕತ್ತಾ ದಿಲ್ಲಿ ಪಂಜಾಬು ಮುಂತಾದ ಇಂಡಿಯಾ ದೇಶದಲ್ಲು ಸಿಲೋನ್, ಜಪಾನ್ ಮುಂತಾದ ದ್ವೀಪಾಂತರಗಳಲ್ಲೂ ನಮ್ಮ ತಯಾರಿಯ ಪದಾರ್ಥಗಳು ಪ್ರಖ್ಯಾತಿ ಹೊಂದಿವೆ. ಒಂದಾವರ್ತಿ ನಮ್ಮ ಪದಾರ್ಥಗಳನ್ನು ತರಿಸಿನೋಡಿದರೆ ಅವುಗಳ ಗುಣಗಳು ತಿಳಿದ ಬರುತ್ತವೆ.

ರಬಿಂನಾರ್ ಊದುಬತ್ತಿಗಳು ೨೪ ರೂಪಾಯಿ ತೂಕವುಳ್ಳದ್ದು ಶೇರು ೧ಕ್ಕೆ

ಊದುಬತ್ತಿಗಳು		
ಸುಗಂಧ ಕಳಾನಿಧಿ ಬತ್ತಿ ಶೇರು 1ಕ್ಕೆ		12—0—0
ಕುಸುಮಗಂಧವರ್ತಿನಿ	„	8—0—0
ಪುಷ್ಪೋದ್ಯಾನಸಿನಿ	„	6—0—0
ನಂಬರ್ ೧ ಅಂಬರ್	„	5—0—0
„ ೨ ಅಂಬರ್	„	3—0—0
„ ೩ ಅಂಬರ್	„	2—0—0
1ನೇ ಜವ್ವಾಜಿ ಬತ್ತಿ	„	6—0—0
2ನೇ „	„	4—0—0
1ನೇ ಕಸ್ತೂರಿ ಬತ್ತಿ	„	3—0—0
2ನೇ „	„	2—0—0
1ನೇ ಪುನಗು ಬತ್ತಿ	„	1—8—0
2ನೇ „	„	1—0—0

ಅವ್ವಲ್ ಹತೀಬಿಲ್ಲೆಗಳು

	1 ತೊಲೆ	½ ತೊಲೆ	¼ ತೊಲೆ
1ನೇ ನಂಬರ್	1 0 0	0 8 0	0 4 0
2ನೇ „	0 8 0	0 4 0	0 2 0

ಜವ್ವಾಜಿಗಂಧ ಅಥವಾ ಅರಗಜ

ತೊಲೆ 1ನೇ ನಂಬರ್ ತೊಲೆ 1ಕ್ಕೆ 2—0—0
„ 2ನೇ „ 1—0—0

ಪುದುಕೋಟೆ ಕಸ್ತೂರಿ ಬಿಲ್ಲೆಗಳು

	1 ತೊಲೆ	½ ತೊಲೆ	¼ ತೊಲೆ
1ನೇ ನಂಬರ್	2 0 0	1 0 0	0 8 0
2ನೇ „	1 0 0	0 8 0	0 4 0

ಉತ್ತಮವಾದ ದಶಾಂಗ ಶೇರು 1ಕ್ಕೆ ರೂ 1

ತಲೆಗೆ ಹಚ್ಚುವ ಕುಂತಳವರ್ಧಿನಿ ತೈಲ ಸೀಸೆ 1ಕ್ಕೆ ರೂ 1

ಸ್ನಾನಕ್ಕೆ ಉಪಯೋಗಿಸುವ ಭೃಂಗಾಮಲಕ ತೈಲ ಸೀಸೆ 1ಕ್ಕೆ 1—0—0

ಎಲ್ಲಾ ಸಾಮಾನುಗಳಿಗೆ ಟಪಾಲು ಖರ್ಚು ಬೇರೆ. ಬೇಕಾದ ಸಾಮಾನುಗಳ ಹೆಸರು ಮತ್ತು ಕ್ರಮಾಂಕ ಸ್ಪಷ್ಟವಾಗಿ ಬರೆದು ಟಪಾಲಿನ ಮೂಲಕ ಕಳುಹಿಸುವೆವು. ಆರ್ಡರ ಅದರೊಡನೆ ನೋಟು ರವಾನಿಸುವವರು ನಮ್ಮ ಕಟ್ಟಳೆಗಳು ಅನುಸರಿಸಬೇಕು. ನಮಗೆ ಕಾಗದ ಬರೆಯುವವರು ತಮ್ಮ ಹೆಸರು ಗ್ರಾಮ ಪೋಸ್ಟು ಜಿಲ್ಲೆ ಸ್ಪಷ್ಟವಾಗಿ ಬರೆಯಬೇಕು.

Sugandhanidhi Office,
Melepudur, Trichinopoly.

ನಮ್ಮ ವಿಳಾಸ— ತಿರುಚಿ ಸುಗಂಧನಿಧಿ ಕಾರಖಾನೆ.
ಮೇಲೆಪುದೂರು, ತಿರುಚಿನಾಪಳ್ಳಿ

The Canara Banking Corporation, Udipi, (Limited).

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್, ಉಡುಪಿ, ಲಿಮಿಟೆಡ್.

Authorised capital	3,00,000—0—0
Issued and subscribed capital	50,000—0—0
Paid up capital	38,687—1—11
Deposits	62,062—0—0
Reserve and other Funds as on 3-3-20	8,258—9—6

Fixed deposits received for 3, 6, 9 months at 6½% for 1 year and above at 7% at the discretion of the Managing Committee. In the case of all deposits interest will be paid quarterly.

Cummalative deposits are received repayable in 45 months at Rs. 50/—per each rupee deposited monthly.

Current a/c deposits opened free of charge and interest will be paid @ 3½% per annum on the lowest balance between the 4th and the last day of each month.

Loans granted on proper securities and pledges.

A dividend of 8% has been declared for the last year.

Payments to the Corporation may be made to the credit of the Corporation at the Bank of Madras, and Canara Bank Mangalore

ಅಧಿಕೃತ ಮೂಲಧನ ...	ರೂ. 3,00,000—0—0
ವಿಕ್ರಯಕ್ಕೆ ಇಟ್ಟ ಮತ್ತು ಶೇರು ತೆಗೆದುಕೊಂಡ ಮೂಲಧನ ...	„ 50,000—0—0
ವಸೂಲು ಆದ ಮೂಲಧನ ...	„ 38,687—1—11
ಠೇವಣಾತಿಗಳು...	„ 62,062—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು ...	„ 8,258—9—6

ಕಾಯಂ ಠೇವಣಾತಿಗಳು ತಿಂಗಳು 3, 6, 9ರ ಅವಧಿಗಳಿಗೆ ಆಡಳಿತ ಸಭೆಯವರ ಮನಸ್ಸಿನಂತೆ ಪ್ರಕಾರ ಸಾಲಿಯಾನ ಶೇಕಡಾ 6½% 1 ವರ್ಷಕ್ಕೆ ಮಿಕ್ಕಿದ ಬಾಬ್ತಿನಲ್ಲಿ ಶೇಕಡಾ 7% ದರದಲ್ಲಿ ಬಡ್ಡಿ ಕೊಡಲಾಗುವದು. ಎಲ್ಲಾ ಠೇವಣಾತಿಗಳ ಮೇಲಿನ ಬಡ್ಡಿ 3 ತಿಂಗಳಿಗೊಮ್ಮೆ ಕೊಡಲ್ಪಡುವದು.

ಪ್ರತಿ ತಿಂಗಳಿಗೆ ರೂ 1ರ ಪ್ರಕಾರ 45 ತಿಂಗಳುಗಳವರೇಗೆ ವಸೂಲು ಕೊಡುವ ಸಂಚಯದ ಠೇವಣಾತಿಗಳಿಗೆ 45 ತಿಂಗಳ ಅಂತ್ಯದಲ್ಲಿ ಪ್ರತಿ ತಿಂಗಳಲ್ಲಿ ವಸೂಲು ಕೊಟ್ಟ ರೂ. 1ಕ್ಕೆ ರೂ. 50ರಂತೆ ವಾಪಸು ಕೊಡಲ್ಪಡುವದು.

ಚಾಲ್ತಿ ಠೇವಣಾತಿಗಳು ಸಂಘದ ಪರವಾಗಿ ಏನೂ ಖರ್ಚು ಇಲ್ಲದೆ ತೆರೆಯಲ್ಪಡುವವು ಪ್ರತಿ ತಿಂಗಳ 4ನೇ ತಾರೀಕಿನಿಂದ ಆಖೈರು ತಾರೀಕುವರೆಗೆ ಯಾವದಾದರೊಂದು ದಿನ ಇರುವ ಅತಿ ಕಡಿಮೆ ಠೇವಣಾತಿ ಮೊಬಲಗಿನ ಮೇಲೆ ಸಾಲಿಯಾನ ಶೇಕಡಾ 3½ ದರದಲ್ಲಿ ಬಡ್ಡಿ ಕೊಡಲ್ಪಡುವದು.

ಯೋಗ್ಯ ಜವಾಬ್ದಾರಿಯ ಮತ್ತು ಈಡಿನ ಮೇಲೆ ಸಾಲಗಳು ಕೊಡಲ್ಪಡುವವೆ.

ಪಾಲುವಾಲಿಕರಿಗೆ ಕಳೆದ ವರ್ಷ ಶೇಕಡಾ 8% ದರದ ಬಡ್ಡಿ ಕೊಡಲಾಗಿಯದೆ

ಸಂಘಕ್ಕೆ ಕೊಡಲ್ಪಡುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸು ಬೇಂಕಿನಲ್ಲಿ ಮತ್ತು ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಡಬಹುದು

UDIPI,
6th June 1920

Naimpalli Ananda Rao,
Secretary

BANK OF MADRAS.

ಮದ್ರಾಸ್ ಬ್ಯಾಂಕ್.

ಹೆಡ್ ಆಫೀಸು ಮದ್ರಾಸ್.

ಮೂಲಧನ	ರೂ. 75,00,000
ಠೇವಣಿ	45,00,000.

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾದಾವು.

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ. 5,000ಕ್ಕೆ ಮೀರದ ಮೊಬಲಗನ್ನು ಠೇವಣಾತಿಯಾಗಿಡಬಹುದು

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ. 10,000ಕ್ಕೆ ಮೀರದ ಮೊಬಲಗಿನ ವರೇಗೆ ಬಡ್ಡಿ ಎಣಿಸಲಾಗುವುದು.

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿನಿಂದ ಪಡೆಯಬಹುದು.

ಸಿ. ಎಲ್. ಗೊರ್ಡನ್,
ಏಜಂಟ್, ಮದ್ರಾಸ್ ಬ್ಯಾಂಕ್, ಮಂಗಳೂರು

ಸದ್ಬೋಧಕ ಗ್ರಂಥಮಾಲೆ.

(ತ್ರೈಮಾಸಿಕ ಪುಸ್ತಕ)

ಗತ ಜನವರಿಯಿಂದ ಆರಂಭ | ವಾರ್ಷಿಕ ಚಂದಾ ಅಂಚೆ ಸಹಿತ ರೂ 1 ಮಾತ್ರ

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ, ಉಲ್ಲೇಖನ, ವಿನೋದಲಹರಿ, ಸ್ಥಳೀಯವಾರ್ತೆ, ವಿಮರ್ಶೆ ಮತ್ತು ಸ್ವೀಕಾರ ಇತ್ಯಾದಿ ಲೇಖನವೂ ಪ್ರಕಟವಾಗುವವು ಸಮಸ್ತ ಕನ್ನಡಿಗರಿಗೂ ಸಂಗ್ರಹಿಸಿಕೊಳ್ಳಲು ತಕ್ಕುದಾಗಿರಬೇಕೆಂದೇ ವಾರ್ಷಿಕ ಚಂದಾ ಅಂಚೆವೆಚ್ಚದೊಡನೆ ಒಂದೇ ರೂಪಾಯಿ ಇಟ್ಟಿರುವೆವು ಈಗಲೇ ತಮ್ಮ ಹೆಸರನ್ನು ತಿಳಿಸಿ, ವರ್ಗದಾರರಾಗಿ ಸೇರುವುದರ ಮೂಲಕ ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ

ವಿಳಾಸ — ಎಸ್ ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ,
ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ)

ಅಥವಾ — S R Hebbar & Bros,
General Merchants, SURATKAL, S. K

ರಾಜ ವೈದ್ಯರ,

ಮದನಮಂಜರಿ ಮಾತ್ರೆ

ಗಳನ್ನು ಸೇವಿಸುವದರಿಂದ ದೇಹಶಕ್ತಿಯನ್ನು ಕೂಡುವದು ಹಸ್ತಪ್ರಯೋಗಾದಿಗಳಿಂದ ಹೋಗಲಾಡಿಸಿಕೊಂಡ ಶಕ್ತಿಯನ್ನು ಪುನಃ ಕೊಟ್ಟು ಪ್ರಾಯಸಮರ್ಥನನ್ನಾಗಿ ಮಾಡುವದು. ಈ ಮಾತ್ರೆ ೯೯ ಬೆಳ್ಳಿ ಬಂಗಾರದ ಬಸ್ಮಗಳು ಎಷ್ಟು ಮಂತ್ರವೂ ಸಮೇನವಾ ಅಡ...

ಕ್ರಯ ಡಬ್ಬಿ 1ಕ್ಕೆ ರೂ 1—0—0

ವಿಳಾಸ —

ಮದನಮಂಜರಿ ಫಾರ್ಮಸಿ,
27 ಜೈನ ಬಜಾರು ರೋಡ್ ಮದ್ರಾಸು

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಸೋರುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳುವದು.

ಹೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟೆ, ಮಂಗಳೂರು.

ಇನ್‌ಫ್ಲುಯೇನ್ಜಾ ಜ್ವರಕ್ಕೆ

ಎಮ್ಕೊ.

ಖಾತ್ರಿ ಚಿಕಿತ್ಸೆ!

ಇನ್‌ಫ್ಲುಯೆನ್ಜಾ, ನಿಮೋನಿಯಾ, ಮಲೇರಿಯಾ, ಸಾಧಾರಣ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ವಿಷಮ ಜ್ವರ, ಕೆಮ್ಮು, ಶೀತ, ಮೊದಲಾದ ಜಾಡ್ಯಗಳಿಗೆ ಖಾತ್ರಿ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ ನಾವು ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಖಾತ್ರಿ ಔಷಧಿಯನ್ನು ಈಗತಾನೇ ಪ್ರಚಾರಕ್ಕೆ ತಂದಿರುತ್ತೇವೆ ದೇಶೀಯ ಜಾಡ್ಯಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬದಕ್ಕೆ ಕಳೆದ ಕೆಲವು ವರ್ಷಗಳಿಂದ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ

ಎಮ್ಕೊ ಇದು ಎಲ್ಲಾ ರೋಗಾಣುಗಳನ್ನು ಕೊಂದು ಅವುಗಳ ವಿಷವನ್ನು ನಾಶಪಡಿಸಿ ಇನ್‌ಫ್ಲುಯೇನ್ಜಾ, ನಿಮೋನಿಯಾ ಮತ್ತು ಅದರಂತಿರುವ ಇತರ ಸಾಂಕ್ರಾಮಿಕ ರೋಗಗಳು ತಟ್ಟದಂತೆ ತಡೆಕಟ್ಟು ಆದ ಉಲ್ಬಣವಾಗದಂತೆ ಮಾಡುತ್ತದೆ

ಎಮ್ಕೊ ಇದು ಇನ್‌ಫ್ಲುಯೇನ್ಜಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಕ್ಷಣ ಗುಣಪಡಿಸುತ್ತದೆ

ಎಮ್ಕೊ ಇದನ್ನು ಬಹಳ ಜಾಗ್ರತೆಯಿಂದ ಔಷಧಿಗಳ ಸಹಾಯದಿಂದ ಅತಿ ಜಾಗರೂಕತೆಯಿಂದ ತಯಾರಿಸಿದ ಶ್ರೇಷ್ಠ ಔಷಧ ಜ್ವರ ಬರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನ್ನು ಕೊಡಬಹುದು ಹೆಂಗಸರೂ ಮಕ್ಕಳೂ ಭಯ ಭೀತಿ ಇಲ್ಲದೆ ಸೇವಿಸಬಹುದು

ಎಮ್ಕೊ ಈವರೆಗೆ ಇದು ಕೋಟ್ಯಾವಧಿ ರೋಗಿಗಳನ್ನು ಗುಣಪಡಿಸಿರುತ್ತದೆ

ಕ್ರಯ ಸೀಸೆಗೆ ರೂ 0—12—0 ಮಾತ್ರ ವಿ ಪಿ ಬೇರೆ/

ಪ್ರಾಮುಖ್ಯ ಏಜಂಟರು — ದಿ ಇಕ್ವಿಟಿ ಏಜೆನ್ಸಿ,
ಬಲ್ಮಠ ರಸ್ತೆ, ಮಂಗಳೂರು

ಅಶ್ವಗಂಧಾ ಮೋದಕ

ಅತ್ಯಂತ ಧಾತು ಪೌಷ್ಟಿಕ, ಕಾಮೋದ್ದೀಪಕ, ವೀರ್ಯವರ್ಧಕ, ಸ್ಮರಣಶಕ್ತಿದಾಯಕವಾದ ಉತ್ತಮ ಪಾಕ ಈ ಪಾಕದಿಂದ ಧಾತುಕ್ಷೀಣತೆಯಿಂದ ಉಂಟಾಗುವ ಎಲ್ಲ ವಿಕಾರಗಳು ಕೂಡಲೆ ನಿಂತ ಹೋಗುವವು ಯಾವ ಕಾರಣದಿಂದಲೂ ಹೋದ ಶಕ್ತಿಯು ಈ ಪಾಕದ ಸೇವನೆಯಿಂದ ಪುನಃ ಉಂಟಾಗುತ್ತದೆ. ದೂಷಿತವಾದ ರಕ್ತವು ಕೂಡ ಇದರಿಂದ ಶುದ್ಧವಾಗಿ ರಕ್ತವೃದ್ಧಿಯಾಗುತ್ತದೆ ಹಸಿವೆಯಾಗುತ್ತದೆ, ಯಕೃತ (ಲಿವ್ಹರ) ಮತ್ತು ಪ್ಲೀಹಾ (ಸ್ಪ್ಲೀನ್) ಇವುಗಳ ಅಶಕ್ತತೆಯು ಬೆಳೆದಿದ್ದರೆ ಅದು ಕಡಿಮೆಯಾಗುತ್ತದೆ ಅಶಕ್ತತೆಯಿಂದ ಉಂಟಾಗುವ ಮಾನಸಿಕ ದುರ್ಬಲತೆ, ಕಣ್ಣು ಕತ್ತಲೆಯಾಗುವದು, ಕೈಕಾಲು ಗಳ ಉರಿ ಮತ್ತು ಅವು ಮುರಿದು ಬರುವುದು ಸ್ವಲ್ಪ ಕೆಲಸದಿಂದಲೆ ದಣಿವುಂಟಾಗುವದು ಈ ಮೊದಲಾದ ಎಲ್ಲ ವಿಕಾರಗಳು ಇದರಿಂದ ಹೋಗುತ್ತವೆ. ಹಾಗು ಮೇಲಿಂದಮೇಲೆ ನೆಗಡಿಯುಂಟಾಗುವದು, ಹಳೆ ಕೆಮ್ಮು, ಕ್ಷಯರೋಗದ ಪೂರ್ವಾವಸ್ಥೆಯು ಕೂಡ ಇದರಿಂದ ನಿಂತುಹೋಗುತ್ತವೆ ಡಾ॥ ದೇಸಾಯಿ, ಎಲ್ ಸಿ (ಲಂಡನ್) ಬಿ ಎಸ್ ಎಲ್ ಎಮ್ ಎಸ್ ಮೆಡಿಲಿಸ್ಟ್, ಫ್ರಾಯ್‌ಡ್‌ಮನ್, ಎಂಡ್ ಓನರ್ಸ ಇವರು ತಮ್ಮ ಉಪನ್ಯಾಸದಲ್ಲಿ ಹೇಳುತ್ತಾರೇನಂದರೆ — ಅಶ್ವಗಂಧಾ ಇದಕ್ಕೆ ಆಯುರ್ವೈದ್ಯಕದೊಳಗಿನ ಒಂದು ಕೊಡ್ಲಿವರ್ ಎಂದು ಹೇಳಬಹುದು ಇದರಿಂದ ಶರೀರ ಪುಷ್ಟಿ, ರಕ್ತವೃದ್ಧಿಯಾಗಿ ಕೆಮ್ಮು ನಷ್ಟವಾಗುತ್ತದೆ ದೀರ್ಘಜ್ವರ ನಾಶವಾಗುತ್ತದೆ ಕೊಡ್ಲಿವರಿನಗಿಂತ ಇದರ ಸೇವನೆಯಿಂದ ಶರೀರದ ಭಾರವು ಇಮ್ಮಡಿಯಾಗುತ್ತದೆ ಶರೀರಸ್ಥಿತಿಯು ಒಳ್ಳೆದಾತ್ತದೆ. ಒಳ್ಳೆದಾಗುತ್ತದೆ" ಇತ್ಯಾದಿ—

ಕ್ರಯ — ಅರ್ಧ ಪೌಂಡಿನ ದಬ್ಬಿಗೆ ರೂ ೧, ೮, ೦ ಒಂದು ಪೌಂಡಿನ ದಬ್ಬಿಗೆ ರೂ ೨, ೮, ೦ ಪೋಸ್ಟೇಜ

ಮೇನೇಜರ,
ಶ್ರೀಸಮರ್ಥ ಆಯುರ್ವೇದೀಯ ಔಷಧಾಲಯ, ಗಡ್ಡಿಕೇರಿ,
ಮಂಗಳೂರು, ದ. ಕನ್ನಡಾ.

ಭೃಂಗರಾಜ ತೈಲ.

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ ನರೆತ ಕೂದಲು ಕಪ್ಪಾಗುತ್ತದೆ ಕೇಶದಾವುಗಳು ವೃದ್ಧಿಹೊಂದುತ್ತವೆ ಕಂಠದ ಮೇಲೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ ಪಿತ್ತನಾಶ ಮಾಡುತ್ತದೆ ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ 1—12—0

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದನ್ನು ತಲೆಗೆ ಹಚ್ಚಿಕೊಂಡರೆ ಪರಿಹಾರವಾಗುತ್ತದೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ 1

ಜ್ವರಾಂತಕ ಮಾತ್ರೆ—ಈ ಮಾತ್ರೆಯನ್ನು ಉಪಯೋಗಿಸಿದರೆ ಎಲ್ಲಾ ಜ್ವರಗಳ ಪರಿಹಾರವಾಗುತ್ತದೆ ಉಪಯೋಗಿಸುವ ಕ್ರಮ, ಮತ್ತು ಗುಣ ಪರೀಕ್ಷೆಯಿಂದಲ್ಲಿ ಪ್ರಮಾಣಿಕ ಪಡಿಸುತ್ತದೆ 20 ಮಾತ್ರೆಗಳುಳ್ಳ ಸೀಸೆ ಒಂದರ ರೂ 1

ಪಂಚಸಾರ ಲೇಹ—ಅಜೀರ್ಣ, ಪಿತ್ತ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲ ಇದರಿಂದ ಪರಿಹಾರವಾಗುತ್ತದೆ ಮತ್ತು ಇಂದ್ರಿಯವನ್ನು ಬಲಪಡಿಸಿ ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ ಒಂದು ಸೇರಿಗೆ ರೂ 1—4—0

ಮೇಲೆ ಬರೆದ ಔಷಧಿಗಳು ಸರ್ವ ವೈದ್ಯರಿಗೂ ಶಿರೋಮಣಿಯಾದ ಶ್ರೀ ಆಯುರ್ವೇದಾಚಾರ್ಯರಾದ ಶ್ರೀ ಪೂಜ್ಯಪಾದ ಋಷಿ ಪ್ರಣೀತ ವೈದ್ಯಗ್ರಂಥ ಆಧಾರದಿಂದ ಆವರೂ, ಪೂರ್ವದ ಅನುಯಾಯಿಗಳಿಂದ ನಮ್ಮಿಂದ ತಯಾರಿಸಲ್ಪಡುತ್ತವೆ ಅರ್ಥವಚನವು ನಮಗೆ ಎಷ್ಟು ಸ್ಪಷ್ಟವಾಗಿ ತೋರುತ್ತದೋ ಅಷ್ಟೇ ಧೃಢನಿಷ್ಠೆಯಿಂದ ಈ ಔಷಧಿಗಳು ರೋಗನಿವಾರಕವಾಗಿರುತ್ತವೆ.

ಸೂಚನೆ—ಅಪೇಕ್ಷಿಸುವವರು ಕಾಗದ ಬರೆದು ಕೇಳುವುದು ಉಚಿತವಾಗಿ ಕಳುಹಿಸಲಾಗುವದು.

ಆಯುರ್ವೇದಿಕ್ ಮತ್ತು ಹೋಮಿಯೋಪತಿಕ್

ವಿಳಾಸ —

ಧರ್ಮ ವೈದ್ಯಶಾಲಾ,
ಧರ್ಮಸ್ಥಳ ದಕ್ಷಿಣ, ಕನ್ನಡ

To Get
BEST and CHEAPEST
EVERYTHING FROM BOMBAY

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ.—ನಾವು ಈ ಕೆಳಗೆ ತೋರುವ ಕಂಪೆನಿಯನ್ನು ಸಧ್ಯಾ ತೆರೆದಿರುತ್ತೇವಾದುದರಿಂದ ಮುಂಬಯಿಯಿಂದ ಬೇಕಾಗುವ ಸಾಮಾನುಗಳನ್ನು ಅತ್ಯಲ್ಪ ಕಮಿಶನಿನ ಮೇಲೆ ಸಪ್ಲೈ ಮಾಡಿಕೊಡುತ್ತೇವೆ ಸಾಮಾನು ತರಿಸಲಪೇಕ್ಷಿಸುವವರು ನಮ್ಮ ಶರ್ತಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ವರ್ನರ್ ರಿಡಿ ಸೇಫ್ಟಿ ರೇಜರು ಮತ್ತು ಪ್ರಖ್ಯಾತ ಎಂಟಿಟೀವ್ ಎಂಬುವ ಜ್ವರದ ವಿಶ್ರಾಂತಿ ನಮ್ಮಲ್ಲಿ ದೊರಕುತ್ತದೆ ಶೀಘ್ರದಲ್ಲಿ ಬರೆಯಿರಿ

TEL. ADDRESS:
PARTSARTHI, Bombay

BOMBAY CANARA TRADING CO.,
Jamnadas Building, Pitha Street,
FORT: BOMBAY.

ವಿದೇಶ ವರ್ತಮಾನ

[illegible]

... ಮೇಲೆ [illegible] ಅಧಿಕಾರವನ್ನು ಒಪ್ಪಿಕೊಳ್ಳುತ್ತಿದ್ದ [illegible] ಸಮುದ್ರದಲ್ಲಿರುವ ದ್ವೀಪಗಳ [illegible] ಸಾಮ್ರಾಜ್ಯ, ಮೆಸೊಪೊಟೇಮಿಯ [illegible] ಪ್ರದೇಶಗಳ ಸ್ವತಂತ್ರ್ಯವನ್ನು ಒಪ್ಪಿಕೊಳ್ಳ [illegible] ಅರೇಬಿಯ, ಸುಡಾನ್, ಮತ್ತು ಸಾಯ್ಪ್ರಸ್, [illegible] ಮೇಲಣ ಅಧಿಕಾರ [illegible] ಎಲ್ಲ ಸುಸಂಧಿಯನ್ನು ಎಲ್ಲಾ ರಾಷ್ಟ್ರಗಳು ಪ್ರವೇಶಿಸಬಹುದೆನ್ನುತ್ತಿದೆ. ಆದರೆ ಅದರ ಮೇಲಣ ಅಧಿಕಾರವನ್ನು ತುರ್ಕಿ ಕಾಲವೆಯ ಮೇಲಣ ಮೇಲ್ವಿಚಾರದಂತೆ ಇರಗೊಡಬೇಕೆಂದು ಕೇಳುತ್ತಿದೆ. ಇದಲ್ಲದೆ ಥ್ರೇಸ್, ಸ್ಮರ್ನಾ ಇವನ್ನು ಗ್ರೀಸ್ ರಾಜ್ಯದವರಿಗೆ ಒಪ್ಪಿಸಿ ಕೊಟ್ಟದ್ದನ್ನು ಆಕ್ಷೇಪಿಸುವುದಲ್ಲದೆ ಗ್ರೀಕರು ಸ್ಮರ್ನಾದಿಂದ ಬಿಟ್ಟು ಹೋಗಬೇಕೆಂದು ಹೇಳುತ್ತಿದೆ. ಸ್ಮರ್ನದ ಸಂಸ್ಥೆ ಆಡಿಯ ಮೂದಲಿಕೆ, ಸಾಮ್ರಾಜ್ಯದ ಒಂದು ಕಡ್ಡಿಯ ಮೇಲ್ವಿಚಾರಕ್ಕೆ ಹಗಲೊಡ್ಡಲೊಪ್ಪಿ ಆಕ್ಷೇಪಿಸುವುದಿಲ್ಲ. ಜಲಸಂಧಿಯ ಮೇಲ್ವಿಚಾರದ ಕಮಿಟಿಯಲ್ಲಿ ತುರ್ಕಿಯ ಪ್ರತಿನಿಧಿಗಳು ಇರಬೇಕೆಂತಲೂ ಹೇಳುವುದಲ್ಲದೆ ಅದರ ಇಂತಿಷ್ಟು ದೂರದ ವರೆಗೆ ಕೋಟೆಕೊತ್ತಳಗಳಿದ್ದುದನ್ನು ನೆಲಸಮ ನಾಡಬೇಕೆಂದು ಮಿತ್ರಪಕ್ಷದವರು ಹೇಳುವಂಥದ್ದು ತುರ್ಕಿಯ ರಾಜ್ಯದ ಅಧಿಕಾರಕ್ಕೂ ಗೌರವಕ್ಕೆ ಭಂಗವನ್ನು ತರುತ್ತದೆಂತಲೂ ಅದು ವಾದಿಸುತ್ತಿದೆ. ಹೆಜಾಜದ ಸ್ವಾತಂತ್ರ್ಯಕ್ಕೆ ಸಮ್ಮತಿಸುವುದಾದರೂ ಮುಸಲ್ಮಾನರ ಪವಿತ್ರ ಕ್ಷೇತ್ರಗಳ ಮೇಲೆ ತುರ್ಕಿಯ ಸುಲ್ತಾನರು ಖಲೀಫರಾಗಿದ್ದ ಪದವಿಗೆ ಲೋಪಬರಬಾರದೆಂದು ತುರ್ಕಿಯ ಹೇಳಿಕೆಯಾಗಿದೆ. ಈ ವಿಷಯಗಳಲ್ಲಿ ಕೊನೆಸ್ಟಾಂಟಿನೋಪಲನ್ನು ತುರ್ಕಿ ಸಂಸ್ಥಾನದ ರಾಜಧಾನಿಯಾಗಿ ಇರಗೊಡಿಸಿದಕ್ಕೆ ಉಪಕಾರ ಸ್ಮರಣೆಯ ... ಗ್ರೀಕರು ಕಿತ್ತುಕೊಳ್ಳಲಿಕ್ಕೆ ಇರುವ ಸ್ಥಳಕ್ಕೆ ಆಕ್ಷೇಪಣೆಯೂ, ಜಲಸಂಧಿಯ ಮೇಲ್ವಿಚಾರದ ಕಮಿಟಿಯಲ್ಲಿ ತುರ್ಕಿಯ ರಾಜ್ಯಕ್ಕೆ ಪ್ರತಿನಿಧಿತ್ವದ ಹಕ್ಕು ಸ್ಥಾಪನೆಯೂ, ಪವಿತ್ರ ಕ್ಷೇತ್ರಗಳ ಮೇಲೆ ಖಲೀಫತನದ ಮಂಜೂರಾತಿಯೂ ಮುಖ್ಯ ಕೇಳಿಕೆಗಳಾಗಿವೆ.

ಜರ್ಮನಿಯೊಡನೆ ಸ್ಪಾ ಎಂಬಲ್ಲಿ ಇತ್ಯರ್ಥಿಸ ತಕ್ಕ ವಿಷಯಗಳನ್ನು ಬ್ರುಸ್ಸೆಲ್ಸದಲ್ಲಿ ಮಿತ್ರಪಕ್ಷದ ಪ್ರತಿನಿಧಿಗಳು ಪುನಃ ಸೇರಿ ಚರ್ಚಿಸಿದರು. ಜರ್ಮನಿಯು ವಾರ್ಸೆಲ್ಸ ಒಪ್ಪಂದದ ಮೇರೆಗೆ ಫ್ರಾನ್ಸಿಗೆ ಇನ್ನೂ ಕೊಡಬೇಕಾದಷ್ಟು ಬೇಕಾದ ಕಲ್ಲಿದ್ದಲನ್ನು ಕೊಡದಿಲ್ಲವಾದ್ದರಿಂದ ಅದನ್ನು ಸರಾಗವಾಗಿ ವಸೂಲು ಮಾಡುವುದು, ಜರ್ಮನಿಯಿಂದ ಯುದ್ಧದಂಡವನ್ನು ಎತ್ತಿ ಮಿತ್ರ ಪಕ್ಷದವರು ಅದನ್ನು ಪರಸ್ಪರ ದಾಮಾಶಯಿಂದ ಹಂಚಿಕೊಳ್ಳುವುದು, ಜರ್ಮನಿಯಲ್ಲಿರುವ ಸೈನ್ಯ ಸರಂಜಾಮನ್ನು ಇನ್ನೂ ಕಡಿಮೆ ಮಾಡುವುದು ಇವೇ ಪ್ರಶ್ನೆಗಳು ಪ್ರಸ್ತಾಪಿಸಲ್ಪಟ್ಟವು. ಒಂದನೆ ಮೂರನೆ ವಿಷಯಗಳಲ್ಲಿ ಬೇಗನೆ ಒಮ್ಮತವಾಯಿತು. ಅಲ್ಲಿ ಸೇರಿದ ಬ್ರಿಟಿಷ, ಫ್ರೆಂಚ, ಬೆಲ್ಜಿಯಮ್ ಇಟಲಿ ಮತ್ತು ಜಪಾನಿಯರ ಪ್ರತಿನಿಧಿಗಳೊಳಗೆ ದಂಡದ ಹಣ ಫ್ರಾನ್ಸಿಗೆ ನೇಕಡಾ ೫೨ ಅಂಶ, ಬ್ರಿಟನ್ನಿಗೆ ನೇಕಡಾ ೨೨, ಉಳಿದ ೨೬ ಅಂಶಗಳು ಇತರ ರಾಜ್ಯಗಳಿಗೆ ಎಂಬಂತೆ ನಿರ್ಣಯಿಸಿದರೂ ಈ ೨೬ ಅಂಶಗಳ ಹಂಚಿಕೆಯಲ್ಲಿಯೂ ಚರ್ಚೆ ಎದ್ದಿತು. ಇಟಲಿಯು ತನಗೆ ನೇಕಡಾ ೨೦ರಷ್ಟು ಅಂಶ ಸಿಗಬೇಕೆಂತಲೂ ರೂಮೇನಿಯವು ತನಗೆ ಉಂಟಾದ ನಷ್ಟದ ದಾಮಾಶಯದಲ್ಲಿ ತನಗೆ ನಷ್ಟ ಭರ್ತಿಯಾಗಬೇಕೆಂದು ವಾಗ್ವಾದ ಮಾಡಿದವು. ಕಡೆಗೆ ಬೆಲ್ಜಿಯಮ್ಮಿಗೆ ನೇಕಡಾ ೧೪ರಷ್ಟು ಕೊಡಬಹುದೆಂದು ಸೂಚನೆ ಬಂತು. ಈ ಚರ್ಚೆಯ ಅಖೈರ ತೀರ್ಮಾನ ಇನ್ನೂ ಪ್ರಕಟವಾಗಲಿಲ್ಲ.

ಜರ್ಮನಿಯ ೨೨ ಮಂದಿ ಅರ್ಥಶಾಸ್ತ್ರಜ್ಞರು ಸಹಿಮಾಡಿ ಜುಲೈಯ ೧ನೇ ತಾರೀಕಿಗೆ ಸಂಧಿ ಪರಿಷತ್ತಿನವರಿಗೆ ಒಪ್ಪಿಸಿದ ಮನವಿಯಲ್ಲಿ ಜರ್ಮನಿಯು ನೊಡಲು ಸೂಚಿಸಿದ ರೀತಿಯಲ್ಲಿ ದಂಡ ತೆರಲಿಕ್ಕೆ ಸಾಮರ್ಥ್ಯವಿಲ್ಲದೆ ಕಂಗಾಲಾಗಿದೆ ಎಂದು ಕಾರಣಗಳನ್ನು ಕೊಟ್ಟಿರುವರು. ಸ್ಪಾದಲ್ಲಿ ಈ ವಿಚಾರವು ಯಾವ ಪರಿಣಾಮ ಹೊಂದುವುದೆಂದು ಮುಂದೆ ಗೊತ್ತಾಗುವುದು.

ಬೊಲಶೆವಿಕರು—ಪೋಲಿಂಡದವರು ಆಕ್ರಮಿಸಿಯಿಂದ ಇದ್ದುದನ್ನು ಕಳೆದುಕೊಳ್ಳುವ ಹಂಚಿಕೆ ಮೂಡಿದಂತೆ ತೋರುತ್ತಿದೆ. ಬೊಲಶೆವಿಕ ಸೈನ್ಯವನ್ನು ಎದುರಿಸಲಾರದೆ ಹಿಮ್ಮೆಟ್ಟಿ ಹೋದ ವರ್ತಮಾನಗಳು ಇವೆ. ಫಾರ್ಸಿಸ್ಥಾನದಲ್ಲಿಯೂ ಬೊಲಶೆವಿಕ ಸೈನ್ಯವು ಹಿಂದೆ ಹೇಳಿದ ಮಾತಿಗೆ ಸರಿಯಾಗಿ ತಾನು ಹಿಡಿದ ಸ್ಥಳಗಳನ್ನು ಬಿಟ್ಟು ಕೊಡಲಿಲ್ಲ. ಹಿಂದಿನ ಸಂಚಿಕೆಯಲ್ಲಿ ಹೇಳಿದಂತೆ ಕುಚಿಕ್‌ಖಾನನು ಫಾರ್ಸಿಸ್ಥಾನದ ಪ್ರಜಾಪ್ರಭುತ್ವದಲ್ಲಿ ತಾನು ಪ್ರೆಸಿಡೆಂಟನಾಗುವುದಕ್ಕೆ ಬೊಲಶೆವಿಕರ ಸಹಾಯವನ್ನು ಅಪೇಕ್ಷಿಸಿ ಹಾಗೆ ಸಹಾಯ ಸಿಕ್ಕಿದ್ದಲ್ಲಿ ಮೆಸೊಪೊಟೇಮಿಯಕ್ಕೂ ಹಿಂದುಸ್ಥಾನಕ್ಕೂ ಹೋಗುವ ದಾರಿಯನ್ನು ಸುಲಭ ಮಾಡಿಕೊಡುವೆನೆಂದು ಒಪ್ಪಂದ ಮಾಡಿರುವುದಾಗಿ ಫಾರ್ಸಿಸ್ಥಾನದ ಅಧಿಕಾರ ವರ್ಗದಲ್ಲಿ ವರ್ತಮಾನ ಕೇಳಿಸುತ್ತಿದೆ. ಫಾರ್ಸಿಸ್ಥಾನದ ರಾಯಭಾರಿಯಾಗಿ ಬಿಲಾಯತಿಗೆ ಬಂದ ಪ್ರಿನ್ಸ್ ಫಿರೋಜರು ಲೀಗ್ ಒಫ್ ನೇಶನ್ಸ್ ಕೊಟಡದವರಿಂದ ಇನ್ನು ಸವರ್ಗವಾದ ಉತ್ತರವನ್ನು ಹೊಂದಲಿಲ್ಲ. ಈ ಕೂಟದವರು ಬೊಲಶೆವಿಕರನ್ನು ತಗ್ಗಿಸುವುದಕ್ಕೆ ಯಾವ ತಜವೀಜು ನಡಿಸಲಿಕ್ಕಿದ್ದಾರೆಂದು ಇನ್ನೂ ಹೊರಬೀಳಲಿಲ್ಲ.

ಐರ್ಲೆಂಡು—ಇಲ್ಲಿಯ ಗಲಾಟೆ ಇನ್ನೂ ಇನ್ನೂ ಹೆಚ್ಚುತ್ತಲೇ ಇದೆ. ಸಿನ್ನ್‌ಫೆನ್ನ ಪಕ್ಷದವರು ಜನರಲ್ ಲುಕಸ್ ಎಂಬವನನ್ನು ಸೆರೆಹಿಡಿದು ಕೊಂಡೊಯ್ದು ಅವನನ್ನು ಬಿಡುಗಡೆ ಮಾಡಿಲ್ಲ. ಲಂಡಂಡೇರಿಯಲ್ಲಿ ನಡೆದ [illegible] ಅಲ್ಲಲ್ಲಿ ವಿಶೇಷ ಪ್ರಜಾಸತ್ತಾತ್ಮಕ ತಂಡದ ಲಕ್ಷ್ಯ ರಿಸಿದರು [illegible] ಪ್ರಕಟನೆಗಳಲ್ಲಿ [illegible] ತಮ್ಮ ಹುದ್ದೆಗಳಿಗೆ ರಾಜೀನಾಮೆ [illegible] ಇಲ್ಲವಾದರೆ ಕಷ್ಟಕ್ಕೆ ಗುರಿಯಾಗುವರೆಂತಲೂ ಎಚ್ಚರಿಸಿದ್ದಾರೆ. ಬ್ರಿಟಿಷ ಸೈನ್ಯವು ಇನ್ನು ಇನ್ನೂ ಐರ್ಲೆಂಡಿಗೆ ಬರುತ್ತಿದೆ. [illegible] ಹಿಬ್ಬನ ಭಾಗದಲ್ಲಿ ಸೈನ್ಯ ಸಮೂಹದ ಮುತ್ತಿಗೆ [illegible] ನಿಂತುಹೋಗಿದೆ.

[illegible]—ವಿಶ್ವಾಮಿತ್ರನ ಎನಟೋಲಿಯ ಪ್ರಾಂತದಲ್ಲಿ [illegible] ಪಕ್ಷದವರು ಮುಂದೊತ್ತಿ ಬರುತ್ತಿದ್ದಾರೆಂದು ತಿಳಿದು, [illegible] ಮಿತ್ರಪಕ್ಷದ ಹಡಗುಗಳ ಸಹಾಯದಿಂದ ಗ್ರೀಕ್ [illegible] ಈ ನೇಶನಲಿಸ್ಟರೊಡನೆ ಯುದ್ಧಮಾಡುತ್ತಲಿದ್ದಾರೆ.

ಸ್ವದೇಶ ವರ್ತಮಾನ

ಶಿವನುಗಳನ್ನು ಸರಕಾರದವರು ವಾಪಸು ಪಡೆಕೊಳ್ಳುವುದು—ಇದೇ ೧೯೨೦ ಕಾರ್ತಿಕ ವರೆಗೆ ೧೧೦ ಶಿವನುಗಳಿಗಿಂತ ಹೆಚ್ಚು ಪತ್ರಗಳನ್ನು ಖಜಾನೆಗೆ ತಂದುಕೊಟ್ಟು ಬೆಲೆ ಪಡೆಕೊಳ್ಳುವವರ ಹೆಸರನ್ನು ಖಜಾನೆಯಲ್ಲಿ ಬರೆದಿಟ್ಟುಕೊಳ್ಳುತ್ತಾರೆಂಬ ವರ್ತಮಾನ ತಾರೀಖು ಮುಳ್ಳೆಂದು ಸರಕಾರದವರು ಪ್ರಕಟಿಸಿದ್ದಾರೆ.

ಶಿವಮೊಗ್ಗ ಡಿಸ್ಟ್ರಿಕ್ಟ ಬೋರ್ಡ ಮೆಂಬರು—ಗುಡಿವಾಡಾ ತಾಲೂಕು [illegible] ಇವರು ಕೃಷ್ಣಾಜಿಲ್ಲೆಯ ಡಿಸ್ಟ್ರಿಕ್ಟ ಬೋರ್ಡಿಗೆ ಮೆಂಬರರಾಗಿ ಸುಬ್ಬ [illegible] ಎಂಬ ಪಂಚಮ ಜಾತಿಯ ಗೃಹಸ್ಥರನ್ನು ಮೆಂಬರರಾಗಿ ಆರಿಸಿದ್ದಾರೆ. [illegible] ಬೋರ್ಡಿಗೆ ಹೀಗೆ ಪಂಚಮರು ನೇಮಕವಾದದ್ದು ಇದೇ ಮೊದಲು [illegible]

ಮುಂಬೈಯಲ್ಲಿ ಬೆಂಕಿಯ [illegible] ಅವಳಿ—ಬಂಚ್‌ಬಂದರ್ ರಸ್ತೆಯಲ್ಲಿ ತೆಂಗಿನಕಾಯಿ, ಎಣ್ಣೆಕಾಳು ಮು [illegible] ತುಂಬಿಸಿಟ್ಟ ಒಂದು ಬಂಡಸಾಲೆಗೆ ಆಕಸ್ಮಾತ್ತಾಗಿ ಬೆಂಕಿಬಿದ್ದು [illegible] ಬೆಲೆಯ ದಾಗಿನೆಗಳು ಸುಟ್ಟುಹೋದವು. ಈ ಬಂಡಸಾಲೆಯು ಮೂವತ್ [illegible] ಸಾಹುಕಾರರದಂತೆ.

ಪ್ರಿನ್ಸ್ ಒಫ್ ವೇಲ್ಸರ ಸ್ವಾಗತ ಫಂಡು—ಮದ್ರಾಸಿನಲ್ಲಿ ಈ ಫಂಡಿಗೆ ಇದೇ ತಿಂಗಳ ೫ನೆ ತಾರೀಕು ವರೆಗೆ ರೂ. ೧೧,೦೦೦ ವಸೂಲಾಯಿತು.

ಬೋರ್ಡಸಾಲಗಳಲ್ಲಿ ಫೀಸು ಮಾಫಿ—ಬೋರ್ಡ ಪ್ರಾಥಮಿಕ ಸಾಲೆಗಳಲ್ಲಿ ಫೀಸ ಪಡೆಯುವ ವಿಷಯದಲ್ಲಿ ಡಿಸ್ಟ್ರಿಕ್ಟಬೋರ್ಡುಗಳ ಅಭಿಪ್ರಾಯವನ್ನು ಕೇಳಿದ ಸರಕಾರ ಹುಕುಂ ತಂಜಾವೂರು ಡಿಸ್ಟ್ರಿಕ್ಟಬೋರ್ಡಿನ ಮೀಟಿಂಗಿನಲ್ಲಿ ಚರ್ಚೆಗೆ ಬಂದಾಗ ಬೋರ್ಡ ಸಾಲೆಗಳಲ್ಲಿ ಫೀಸು ಮಾಫಿಮಾಡಿದೊಡನೆ ಮಕ್ಕಳು ಬೋರ್ಡಸಾಲೆಯನ್ನು ಸೇರಿ ಸಮೀಪದ ಖಾಸಗಿ ಸಾಲೆಗಳನ್ನು ಬರಿದಾಗ ಮಾಡುವವು, ಆದ್ದರಿಂದ ಬೋರ್ಡ ಸಾಲೆಗಳಲ್ಲಿ ಸಿಬ್ಬಂದಿ ಹೆಚ್ಚಿಸಬೇಕಾಗುವದು, ಈ ಖರ್ಚನ್ನು ಈಗ ಸಹಿಸಿಕೊಳ್ಳಲು ಬೋರ್ಡುಗಳಿಗೆ ಸಾಧ್ಯವಿಲ್ಲ. ಓಕಸ್ಟು ಸಾಲೆಗಳ ಸಂಸ್ಥಾಪನೆಯಾದ ನಂತರ ಈ ವಿಷಯ ಚರ್ಚಿಸಬಹುದಾಗಿ ಕೆಲವರು ಅಭಿಪ್ರಾಯಪಟ್ಟರು. ಕಡೆಗೆ ಓಟು ಸಂಗ್ರಹಿಸಿದಾಗ ಹಾಜರಿದ್ದವರಲ್ಲಿ ಅರ್ಧಾಂಶ ಮೆಂಬರರು ಫೀಸನ್ನು ಈಗ ತೆಗೆದುಹಾಕಬೇಕೆಂದೂ ಉಳಿದವರು ಅದನ್ನು ತೆಗೆದ ಹಾಕಬಾರದೆಂದೂ ಹೇಳಿದಂತೆ ತಿಳಿದ ಕಾರಣ ಈ ವಿಷಯವನ್ನು ಸರಕಾರದವರಿಗೆ ಬರೆಕೊಳ್ಳಬೇಕೆಂದು ನಿರ್ಣಯ ಮಾಡಿತು.

ದಿವಾನ ಬಹದ್ದೂರ ಎಮ್ ಕೃಷ್ಣಸ್ವಾಮಿಯರು—ಇವರು ಕೆಲವು ವರ್ಷಗಳ ಹಿಂದೆ ದಕ್ಷಿಣ ಕನ್ನಡ ಮಲಬಾರ ಜಿಲ್ಲೆಗಳ ಪರವಾಗಿ ಮದ್ರಾಸ ನ್ಯಾಯವಿಧಾಯಕ ಸಭೆಗೆ ಮೆಂಬರರಾಗಿ ಆರಿಸಲ್ಪಟ್ಟಿದ್ದರು. ಅನಂತರ ತಿರುವಾಂಕೂರಿನ ದಿವಾನರಾಗಿ ನೇಮಿಸಲ್ಪಟ್ಟಿದ್ದು ಈಗಲೇ ತಮ್ಮ ಕೆಲಸದಿಂದ ನಿವೃತ್ತರಾಗಲಿಕ್ಕೆ ಇರುವರು. ಇವರಿಗೆ ತಿರುವಾಂಕೂರ ಸಂಸ್ಥಾನದವರು ೧೦೦೦೦ ರೂಪಾಯಿ ಬೋನಸ್ ಮೂರು ತಿಂಗಳ ಸಂಬಳವಾಗಿ ರೂ ೬೦೦೦, ಮತ್ತು ಒಂದು ಮೋಟರ್‌ಕಾರ್ ಖರೀದಿಸುವ ಬಗ್ಗೆ ರೂ ೬೦೦೦ ಉಚಿತವಾಗಿ ಕೊಟ್ಟಿರುವರು. ಇವರು ಜನಗಳ ಪ್ರೀತಿಗೂ ಸಂಸ್ಥಾನದ ವಿಶ್ವಾಸಕ್ಕೂ ಪಾತ್ರರಾಗಿದ್ದರು ಎಂಬುದಕ್ಕೆ ಅವರಿಗೆ ಅಲ್ಲಲ್ಲಿ ನಡೆಸುವ ಗೌರವ ಉಪಚಾರಗಳೇ ಸಾಕ್ಷಿಯಾಗಿವೆ.

ದಿ ಇಂಡೊ ಒವರ್ಸೀ ಸ್ಟೀಮ ನೆವಿಗೇಶನ್ ಕಂಪೆನಿ—ಈ ಹೆಸರಿನ ಒಂದು ಕಂಪೆನಿಯು ಕಲ್ಕತ್ತೆಯಲ್ಲಿ ಸ್ಥಾಪನೆಯಾಗಿದೆ. ಅಧಿಕೃತ ಹೊಂದಿದ ಬಂಡವಾಳವು ೫ ಕೋಟಿ ರೂಪಾಯಿ. ಬರ್ಮಾದಿಂದ ಹಿಂದೂಸ್ಥಾನ ತೀರದಲ್ಲೆಲ್ಲ ಮುಖ್ಯ ಬಂದರಗಳಿಗೆ ಹಡಗು ಚಲಾವಣೆಯನ್ನು ಒದಗಿಸಿಕೊಡುವುದೇ ಈ ಲಿಮಿಟೆಡ್ ಕಂಪೆನಿಯ ಉದ್ದೇಶ.

ದೆಹಲಿ ಹಿಂದುಗಳ ನ್ಯಾಯ [illegible]—ಕಲ್ಕತ್ತೆಯಲ್ಲಿ [illegible] ಮಾಹಿಳೆಯ ಬಳಿಯಲ್ಲಿ ರಿಕ್ಷಾ ನಿಕ್ಕಲ್ ಒಂದಾಣೆಸಾಮ್ಯಗಳು ಇದ್ದು ಅವನ್ನು ತಾಜಾ ನಾಣ್ಯಗಳಂತೆ ಚಲಾವಣೆ ಮಾಡಲಿಕ್ಕೆ ಆತನು ಯತ್ನಿಸಿದನೆಂಬ ಅಪವಾದನೆ ಮೇಲೆ ಅಲ್ಲಿಯ ೧ ಕ್ಲಾಸು ಮಜಿಸ್ಟ್ರೇಟರು ಒಂದು ವರ್ಷದ ಕಠಿಣ ಸಜೆ ವಿಧಿಸಿದರು.

ವೈಸರಾಯಿ ಪ್ರಭುಗಳಿಗೆ
ಮಹಾತ್ಮಗಾಂಧಿಯವರ ಪತ್ರ

ಮಹಾತ್ಮ ಯವರಿಂದ ಮುಸಲ್ಮಾನ ಮುಖಂಡರು ವೈಸರಾಯಿ ಪ್ರಭುಗಳಿಗೆ ನಿವೇದಿಸಿದ ಪತ್ರದ ಸಾರಾಂಶವನ್ನು ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಿದೆವು. ಅದಕ್ಕೆ ಹಿಂದೆಯೇ ಮಹಾತ್ಮಾಗಾಂಧಿಯವರೂ ಒಂದು ಪತ್ರವನ್ನು ಪ್ರಭುಗಳ ಬಳಿಗೆ ರವಾನಿಸಿರುವರು. ಅದರಲ್ಲಿರುವುದೇನೆಂದರೆ —

ಈ ವಂತ ತಮ್ಮ ವಿಶ್ವಾಸಕ್ಕೆ ಪಾತ್ರನಾಗಿ ಕೆಲ ಚಮಚಗೆ ಇದ್ದುದರಿಂದಲೂ ಬ್ರಿಟಿಷ ಸಾಮ್ರಾಜ್ಯದ ಅನನ್ಯಭಾವದ ಹಿತೇಚ್ಛುಗಳಲ್ಲಿ ನಾನೊಬ್ಬನೆಂದ ನಾನು ತಿಳಿದಿರುವುದರಿಂದಲೂ ಅವರಗೂ ತಮ್ಮ ಮೂಲಕ ಬ್ರಿಟಿಷ ಮಂತ್ರಿಕೂಟದವರಿಗೂ ಈ ಖಿಲಾಫತ ಪ್ರಶ್ನೆಯಲ್ಲಿ ನಾನು ಕೈಹಾಕಿದ ಕಾರಣವನ್ನು ಸ್ಪಷ್ಟಗೊಳಿಸುವುದು ನನ್ನ ಕರ್ತವ್ಯವಾಗಿದೆ. ಯುದ್ಧದ ಆರಂಭದಲ್ಲಿಯು ನಾನು ಲಂಡನ್ನಿನಲ್ಲಿ ಇದ್ದು ದೇಶೀಯ ಉಮೇದ್ವಾರರ ಎಂಬ್ಯುಲೆನ್ಸ್ (ಹಮಾಲ) ಪಡೆಯನ್ನು ನಾನು ಸಿದ್ಧಗೊಳಿಸ ಮಾಗಲೂ ಈ ಖಿಲಾಫತ ಪ್ರಶ್ನೆಯು ನನ್ನ ಮನಸ್ಸನ್ನು ಕ್ಷೋಭೆಗೊಳಿಸಿತು. ೧೯೧೫ನೆ ಇಸವಿಯಲ್ಲಿ ನಾನು ಹಿಂದೂಸ್ಥಾನಕ್ಕೆ ಮರಳಿ ಬಂದಾಗ ನನಗೆ ಭೇಟಿಯಾದ ಮುಸಲ್ಮಾನರಲ್ಲಿಯೂ ಇದೇ ರೀತಿ ಒಂದು ಬಗೆಯ ಕಳವಳವು ಎದ್ದಿತ್ತು ಎಂದು ನನಗೆ ಗೊತ್ತಾಯಿತು. ಮಿತ್ರಪಕ್ಷದ ರಾಜ್ಯಗಳೊಡನೆ ಉಂಟಾದ ಗುಪ್ತ ಒಪ್ಪಂದಗಳ ಗುಟ್ಟು ಬಯಲಾಗ ಹತ್ತಿದಾಗ ಈ ಜನಗಳಲ್ಲಿ ಒಂದು ಬಗೆಯ ಕಳವಳವು ತಲೆದೋರಿತು. ಬ್ರಿಟಿಷ ಪ್ರಧಾನರ ಕಡೆಗೆ ಸಂದೇಹವೂ ಒಂದು ಬಗೆಯ ನಿರಾಶೆಯೂ ಅದರಲ್ಲಿ ವ್ಯಾಪಿಸಿತು. ಆ ಸಮಯದಲ್ಲಿ ಕೂಡಾ ಮುಸಲ್ಮಾನರು ತಮ್ಮ ಕಾಂಕ್ಷೆಗಳೇನು ಸಂದೇಹಗಳೇನು ಎಂಬುದನ್ನು ಕಾಯಿದೆಶೀರ ಮಾರ್ಗದಿಂದ ವ್ಯಕ್ತಗೊಳಿಸಬೇಕೆಂದೂ ನಿರಾಶೆಗೆ ಇಂಬು ಕೊಡಬಾರದೆಂದೂ ನಾನು ನನ್ನ ಮುಸಲ್ಮಾನ ಬಂಧುಗಳಿಗೆ ಸೂಚಿಸಿದೆನು. ಮುಸಲ್ಮಾನ ವರ್ಗದವರೆಲ್ಲ ಕಳೆದ ೫ ವರ್ಷಗಳಲ್ಲಿ ಅಪೂರ್ವವಾದ ತಾಳ್ಮೆಯಿಂದಲೂ ಸಹಿಷ್ಣುತೆಯಿಂದಲೂ ವರ್ತಿಸಿದ್ದಾರೆಂದು ಎಲ್ಲರೂ ಒಪ್ಪಬೇಕಾದ್ದು. ಅವರ ಮುಖಂಡರು ಜನಸಾಮಾನ್ಯರನ್ನು ಹತೋಟಿಯಲ್ಲಿಟ್ಟು ಗಲಾಟೆ ಎಬ್ಬಿಸುವ ಜನಗಳನ್ನು ತಮ್ಮ ಹತೋಟಿಯೊಳಗೆ ಇಟ್ಟಿದ್ದರು ಎಂಬುದೂ ನಿರ್ವಿವಾದ. ತುರ್ಕಿಯೊಡನೆ ಸಂಧಿಶರ್ತಗಳೂ ಅವುಗಳನ್ನು ಸ್ವೀಕರಿಸಿದ ತಮ್ಮ ನುಡಿಗಳೂ ಮುಸಲ್ಮಾನರ ಎದೆಗೆ ನಾಟಿ ವೇದನೆಯನ್ನುಂಟು ಮಾಡಿವೆ. ಈ ಗಾಯವು ಮಾಯುವುದು ಬಹಳ ಕಷ್ಟ. ಈ ಶರ್ತಗಳು ಮಂತ್ರಿವರ್ಯರು ಕೊಟ್ಟ ಭಾಷೆಯನ್ನೂ ಹಿಂದಿನಂತೆ ಆಗುವುದಲ್ಲದೆ ಮುಸಲ್ಮಾನರ ಮನಸ್ಸಿಗೆ ತುಂಬಾ ವ್ಯಾಕುಲವನ್ನು ಉಂಟುಮಾಡಿವೆ. ಹಿಂದು ಧರ್ಮಾಭಿಮಾನಿಯಾಗಿದ್ದು ನಮ್ಮ ಮುಸಲ್ಮಾನ ದೇಶಬಾಂಧವರೊಡನೆ ಅನ್ಯೋನ್ಯ ಭಾವದಿಂದ ಇರಬೇಕೆಂದು ನನಗೆ ತುಂಬಾ ಕುತೂಹಲವಿರುವುದರಿಂದ ಮುಸಲ್ಮಾನರಿಗೆ ಕಷ್ಟ ಬಂದ ಕಾಲದಲ್ಲಿ ಅವರಿಗೆ ನಾನು ಬಂಧುತ್ವದ ಕೈಬಿಟ್ಟಿದ್ದರೆ ನನ್ನ ದೇಶದ ಸತ್ಪುತ್ರನಾಗಲಿಕ್ಕಿಲ್ಲ ಎಂದು ನನ್ನ ತಿಳುವಳಿಕೆಯಾಗಿದೆ. ನ್ಯಾಯ ಬಲವು ಅವರ ಕಡೆಗೆ ಇದೆ ಎಂದು ನನ್ನ ಅಭಿಪ್ರಾಯ. [illegible] ತುರ್ಕಿಗೆ ಶಿಕ್ಷಿಸಬಾರದು ಎಂದು ಅವರ ಕೋರಿಕೆ. ತಮ್ಮ ಖಲೀಫನನ್ನು ಶಿಕ್ಷಿಸುವ ಅಥವಾ ಅವರ ರಾಜ್ಯದ ಅಂಶಗಳನ್ನು ಕಳಚಿಬಿಡುವ ಉದ್ದೇಶದಿಂದ ಮುಸಲ್ಮಾನರು ಈ ಯುದ್ಧಕ್ಕೆ ನೆರವಾಗಿ ಬರಲಿಲ್ಲ. ಈ ಐದು ವರ್ಷಗಳಲ್ಲಿ ಮುಸಲ್ಮಾನರು ತಮ್ಮ ಅಭಿಮತವನ್ನು ಏಕೋದ್ದೇಶದಿಂದಲೇ ಪ್ರಕಟಿಸಿದ್ದಾರೆ. ಆದರಿಂದ ವ್ಯಕ್ತಸ್ಥನಾಗಿಲ್ಲ. ಮುಸಲ್ಮಾನರ ಮನಸ್ಸನ್ನು ಕ್ರೂರ ರೀತಿಯಿಂದ ನೋಯಿಸುವ ಪ್ರಯತ್ನಗಳನ್ನು ಎದುರಿಸಲಿಕ್ಕೆ ಸಾಮ್ರಾಜ್ಯದ ಕಡೆಗೆ ಇರುವ ನನ್ನ ಕರ್ತವ್ಯಜ್ಞಾನವೂ ರಾಜಭಕ್ತಿಯೂ ನನ್ನನ್ನು ಮುಂದೊತ್ತುತ್ತಿವೆ. ನನಗೆ ತಿಳಿದ ಮಟ್ಟಿಗೆ ಹಿಂದೀ ಮುಸಲ್ಮಾನರಿಗೂ ಹಿಂದೂಗಳಿಗೂ ಬ್ರಿಟಿಷ ನ್ಯಾಯಪರಿಪಾಲನೆಯ ಕಡೆಗೆ ಶ್ರದ್ಧೆ ಕಳೆದಿದೆ. ಹಂಟರ ಕಮಿಟಿಯಲ್ಲಿ ಬಹುಮತದವರ ರಿಪೋರ್ಟು, ಆ ಕುರಿತು ತಮ್ಮ ಡಿಸ್ಪ್ಯಾಚ ಮಾಂಟೆಗೋರ ಮಾತುಗಳು ಈ ಅವಿಶ್ವಾಸವನ್ನು ಇನ್ನೂ ಬಲಪಡಿಸಲ ಕಾರಣವಾಗಿವೆ. ಇಂಥ ಸಂದರ್ಭದಲ್ಲಿ ನನ್ನಂಥವನಿಗೆ ಎರಡು ದಾರಿಗಳಿವೆ. ಬ್ರಿಟಿಷ ಅಧಿಕಾರದೊಳಗಿನಿಂದ ದೂರ ಇರುವುದು ಒಂದು. ಅಥವಾ ಈಗ ಪ್ರಚಾರದಲ್ಲಿರುವ ರಾಜಕೀಯ ರಚನೆಗಳೊಳಗೆ ಬ್ರಿಟಿಷ ರಾಜ್ಯಾಧಿಕಾರ ರಚನೆಯ ಮೇಲೆ ನಿಜವಾದ ವಿಶ್ವಾಸವು ನನಗಿದ್ದರೆ ಆ ವಿಶ್ವಾಸದ ಮೇಲೆ ಈಗ ಕವಿದ ಮುಸುಕನ್ನು ತೆಗೆದುಹಾಕುವಂತೆ ಈಗ ಉಂಟಾದ ಅನ್ಯಾಯವನ್ನು ಹೋಗಲಾಡಿಸಲು ಯತ್ನಿಸುವುದು ಒಂದು. ಬ್ರಿಟಿಷ ರಾಜಕೀಯ ಸಂಸ್ಥೆಗಳ ಮೇಲೆ ನನಗೆ ತುಂಬಾ ವಿಶ್ವಾಸವಿದೆ. ಆದ್ದರಿಂದ ನನ್ನಲ್ಲಿ ನಿರಾಶೆ ಹುಟ್ಟಲಿಲ್ಲ. ಕಷ್ಟ ಸಹಿಷ್ಣುತೆಯ ಬಲವು ನನ್ನಲ್ಲಿ ಇದ್ದರೆ ಹಿಂದಲ್ಲ ಒಂದು ಕಾಲದಲ್ಲಿ ನನಗೆ ನ್ಯಾಯವು ಸಿಗುವುದು ನಿಶ್ಚಯ. ಬ್ರಿಟಿಷ ರಾಜಕೀಯ ಸಂಸ್ಥೆಗಳ ಮುಖ್ಯ ಲಕ್ಷಣವೇನೆಂದರೆ— ಅವು ಸ್ವಪ್ರಯಾಸ ಮಾಡುವವರಿಗೆ ಫಲದಾಯಕವಾಗಿವೆ. ಆದರೆ ಬಲಹೀನರಿಗೆ ರಕ್ಷಣೆ ಮಾಡಲಾರವು. ಬಲಾಢ್ಯರಿಗೆ ತಮ್ಮ ಶಕ್ತಿಯನ್ನು ತೋರಿಸಿಕೊಂಡು ಅದನ್ನು ಇನ್ನೂ ವೃದ್ಧಿ ಸಲಿಕ್ಕೆ ಅವು ಸಹಕಾರಿಯಾಗಿವೆ. ಬಲಹೀನರಾದವರ ಮಟ್ಟಿಗೆ ಅವುಗಳ ಬೆಂಬಲವಿಲ್ಲದೆ ಹಿಮ್ಮೆಟ್ಟಬೇಕಾಗುತ್ತಿದೆ. ನನ್ನಲ್ಲಿ ಬ್ರಿಟಿಷ ರಾಜಕೀಯ ವಿಚಾರ ಸಂಸ್ಥೆಗಳ ಮೇಲೆ ವಿಶ್ವಾಸವಿದ್ದುದರಿಂದಲೇ ಮುಸಲ್ಮಾನರ ಕಾಂಕ್ಷೆಗಳ ಸಾಧನವಾಗಿಯೂ ಮಂತ್ರಿವರ್ಯರ ಭಾಷೆಗೆ ಅನುಸಾರವಾಗಿಯೂ ಸಂಧಿಶರ್ತಗಳನ್ನು ತಿದ್ದುಪಡಿ ಮಾಡದಿದ್ದರೆ ತಮ್ಮ ಸಂಕಟ ದುಃಖಗಳ ಕಡೆಗೆ ಮುಸಲ್ಮಾನರು ತಿಳುಹಿಕ ರಕ್ಷಣೆಯನ್ನು ತೋರ್ಪಡಿಸಬೇಕೆಂದೂ ಇದಕ್ಕೆ ... ಮುಂದಾಗಲೊಡಬೇಕೆಂದೂ [illegible] ಮಂತ್ರಿಕೂಟದವರು ಕೊನೆಗೆ [illegible] ಯಾವ ಅನ್ಯಾಯಕ್ಕೆ ತಮ್ಮ ಸಹಾಯ ಭೂತಿಯನ್ನು ಕೊಟ್ಟರೊ ಆ ಕೃತ್ಯದ ಕಡೆಗೆ ಮುಸಲ್ಮಾನರ ತಮ್ಮ ಅಸಂತೋಷವನ್ನು ಸ್ಪಷ್ಟವಾಗಿ ತೋರಿಸಲಿಕ್ಕೆ ದಾರಿಗಳು ಮೂರು ಇವೆ. (೧) ಎದುರಿಸಲಿಕ್ಕೆ ಕೈಯೆತ್ತಿದರೆ ಅದು (೨) ಶಾಂತವಾಗಿ ಪರದೇಶಗಳಿಗೆ ಹೋಗಿ ನೆಲಸುವುದು (೩) ಸರಕಾರದೊಡನೆ ಅಸಹಕಾರಿತ್ವವನ್ನು ತೋರಿಸಿ ಸರಕಾರದ ವರ್ತನದ ಕಡೆಗೆ ಸಹಭಾಗಿಯಾಗದಿರುವುದು.

ಒಂದು ಕಾಲದಲ್ಲಿ ಮುಸಲ್ಮಾನರಲ್ಲಿ ಉದ್ರೇಕದ ಮತ್ತು ವಿವೇಕ ಶಕ್ತಿ ಇದಿರಾದ ಕೆಲವರು ಶಸ್ತ್ರಪ್ರಯೋಗವನ್ನು ಸೂಚಿಸಿದ್ದು ... ಅಲ್ಲ, ದೇಶಾಂತರವಾಗಿ ಹೋಗುವುದು ಇನ್ನೂ ನಿಲ್ಲಲಿಲ್ಲ. ಕೈಎತ್ತುವ ಕಡೆಯಿಂದ ಅವರಿಗೆ ತಾಂಬಡಿಸಲು ನಾನು ಸಾಧನೆ ಮಾಡಿರುವುದಾಗಿ ಧೈರ್ಯದಿಂದ ಹೇಳುತ್ತೇನೆ. ಶಸ್ತ್ರಪ್ರಯೋಗವು ನೀತಿಗೆ ವಿರೋಧವಾದದ್ದು ಎಂಬ ಕಾರಣಗಳನ್ನು ಕೊಟ್ಟು ಅವರಿಗೆ ತಡೆಯಲು ನನ್ನಿಂದಾಗಲಿಲ್ಲ. ಆದರೆ ಆ ಪ್ರಯೋಗವು ಅಸಾಧ್ಯವೆಂದು ನಾನು ಅವರಿಗೆ ಸಮಾಧಾನ ಪಡಿಸಿದೆನು. ... ಈ ರೀತಿಯ ದುಃಖಕ್ಕೆ ಅವರು ಕೈಹಾಕಿದ ಮೇಲೆ ನಿಜ ಸ್ವದೇಶ ಬಿಟ್ಟು ಹೋಗಬೇಕೆಂದಿರುವ ಅಭಿಪ್ರಾಯಕ್ಕೂ ಈಗ ಸ್ವಲ್ಪ ತಡೆಯಾಗಿದೆ. ಈ ಜನಗಳಿಗೆ ಅವರು ಅನೇಕ ಸಂಖ್ಯೆಯಿಂದ ಕೂಡಿಕೊಂಡು ಬಹಳ ಕಷ್ಟಪಟ್ಟು ಸಾಧಿಸಬೇಕಾದ ... ತಡೆದಿದ್ದರೆ ಅವರನ್ನು ಎಷ್ಟು ರೀತಿಯಿಂದ ಹಿಡಿದರೂ ತಗ್ಗಿಸಲಾರದ ಭಯಂಕರವಾದ ಉತ್ಪಾತಾವಸ್ಥೆಯು ಉಂಟಾಗುತ್ತಿತ್ತು ಎಂದು ನಾನು ಪ್ರತಿಪಾದಿಸುತ್ತೇನೆ. ಅಸಹಕಾರಿತ್ವವೆಂಬುದೆ ನಾನು ಅವರ ಮುಂದೆ ಇಟ್ಟ ಗೌರವಾಸ್ಪದವಾದ ದಾರಿ. ಅನ್ಯಾಯದ ಧೋರಣವನ್ನು ಕೈಕೊಂಡ ಅಧಿಕಾರಿಗೆ ರಾಜಕೀಯದಲ್ಲಿ ಸಹಾಯಮಾಡದಿರುವುದೇ ಪ್ರಜೆಗಳಿಗೆ ಅನಾದಿಯಿಂದಲೂ ಜಾರಿಯಲ್ಲಿರುವ ಮಂಜೂರಾದ ಹಕ್ಕು ಆಗಿದೆ. ಆದರೆ ಜನಸಾಮಾನ್ಯರು ಈ ಅಸಹಕಾರಿತ್ವವನ್ನು ಕೈಕೊಳ್ಳುವುದರಿಂದ ಅಪಾಯಗಳು ಬರುವ ಸಂಭವವಿದೆ ಎಂದು ನಾನು ಬಲ್ಲೆ. ಆದರೂ ಮುಸಲ್ಮಾನರಿಗೆ ಈಗ ಒದಗಿರುವ ಇಕ್ಕಟ್ಟಿನಲ್ಲಿ ಅಂಥಾ ಅಪಾಯಗಳಿಲ್ಲದಿರುವ ಯಾವ ಹೊಸ ದಾರಿಯನ್ನು ಹಿಡಿದರೂ ಅವರ ಕಾಂಕ್ಷೆಯು ನೆರವೇರುವುದು ಸಾಧ್ಯವಲ್ಲ. ಈಗ ಸ್ವಲ್ಪ ಅಪಾಯಗಳಿವೆ ಎಂದು ಬೆದರಿ ಸುಮ್ಮಗಾದರೆ ಮುಂದೆ ಇನ್ನೂ ಅಪಾಯಗಳು ಬರಲೂ ಬಹುದು. ಅಷ್ಟೇಕೆ ನ್ಯಾಯ ನೀತಿಗಳ ದೇಶದ ಸಮೃದ್ಧಿ ಇವಕ್ಕೆ ಭಂಗವುಂಟಾಗುವ ಸಂದರ್ಭ ಒದಗಿಸುವುದು. ಇನ್ನಾದರೂ ಈ ಅಸಹಕಾರಿತ್ವದ ಘಟನೆಯಿಂದ ಪಾರಾಗುವ ಉಪಾಯವಿದೆ. ದಕ್ಷಿಣ ಆಫ್ರಿಕದ ಗಲಾಟೆಯಲ್ಲಿ ತಮ್ಮ ಹಿಂದಿನ ವೈಸರಾಯಿಗಳು ಸ್ವತಃ ಹಿಂದಿ ಜನಗಳ ಚಳವಳಕ್ಕೆ ಕೈಕೊಟ್ಟಂತೆ ಮುಸಲ್ಮಾನರ ಈಗಿನ ಚಳವಳಕ್ಕೆ ತಾವು ಮುಂದಾಳಾಗಲು ಸಾಧ್ಯವಿದೆ. ಅದು ತಮಗೆ ಇಷ್ಟವಿಲ್ಲವೆಂತಾದರೆ ಅಸಹಕಾರಿತ್ವವನ್ನು ಅನುವರ್ತಿಸುವುದೇ ನನ್ನ ಕರ್ತವ್ಯವಾಗುತ್ತದೆ. ಹೀಗಾದ್ದರಿಂದ ನನ್ನ ಈ ಆಲೋಚನೆಯನ್ನು ಅನುವರ್ತಿಸಿದವರೂ ನಾನೂ ಈ ಕೆಲಸದಲ್ಲಿ ಬರೇ ನಮ್ಮ ಕರ್ತವ್ಯ ಪ್ರವೃತ್ತಿಯ ಅಂದಕ ಸೇರಿದ್ದೇವೆ ಎಂಬುದು ಧರ್ಮಚಿತ್ತಕ್ಕೆ ಬರಾಂಬರೇ ಇರಲಿ.

[illegible]

ಸ್ಫುಟವಿಚಾರಗಳು:—

೧. ... ಆಹಾರದ ಅಭಾವದ ಯೋಗ [illegible]

೨. ... ಶಾಂತಪಕ್ಷದವರ ಮತ

೩. ಅಸಹಕಾರಿತ್ವಕ್ಕೆ ಒದಗಿದ ಸಾಧನೆಗಳು

೪. ... ಹಿಂದುಗಳು

ಮಂಗಳೂರು

ವರ್ತಮಾನಸಂಗ್ರಹಗಳು:—

ವಿದೇಶ ವೃತ್ತಾಂತ ೫

ಸ್ವದೇಶ ವರ್ತಮಾನ . . . . . . "

ವೃಷಲಾಯುಷ್ಯಭೂಗಳಿಗೆ ಮಹಾತ್ಮಗಾಂಧಿಯವರ ಪತ್ರ . . . "

ದಕ್ಷಿಣಕನ್ನಡ, ಕಾಸರಗೋಡು ೬

ಮದ್ರಾಸು. ಲೋಕಲ್‌ಬೋರ್ಡುಗಳ ಬಿಲ್ . . . . "

ಅಸಹಕಾರಿತ್ವ . . . . "

ಪತ್ರವ್ಯವಹಾರ ೧. . . . . . . "

ಸ್ವದೇಶಾಭಿಮಾನಿ.

ಶಕ ೧೮೪೧ ಆಷಾಢ ಬ॥೮ ಶುಕ್ರವಾರ.

ಗೋಧಿಯ ರಫ್ತು.

ಯೂರೋಪಖಂಡದಲ್ಲಿ ಗೋಧಿಯ ಬೆಳೆಯು ಬೆಳೆಯುದಿಲ್ಲವಾದಕಾರಣ ಅಲ್ಲಿಯವರಿಗೆ—ಬ್ರಿಟಿಷರಿಗೂ ಕೂಡ ಉಪವಾಸದ್ದುಃಕಾಲವು ಒದಗುವ ಸಂದರ್ಭವು ಬಂದಿದೆ ಎಂಬುದನ್ನು ನಾವು ಹಿಂದೊಮ್ಮೆ ಸ್ಫುಟವಿಚಾರಗಳಲ್ಲಿ ಪ್ರಸ್ತಾಪಿಸಿದ್ದೇವೆ ಉಪೋಷಿತ ಯುರೋಪಿಗೆ ಅಮೇರಿಕಾ ಮುಂತಾದ ಗೋಧಿ ಬೆಳೆಸುವ ಸೀಮೆಗಳಿಂದ ಸಹಾಯ್ಯವು ಆಗುವ ಸಂಭವ ಕಡಿಮೆ ಎಂಬದನ್ನು ಸಹ ನಾವು ಅಂದೆ ತಿಳಿಸಿದ್ದೇವೆ. ಈ ಮೇರೆಗೆ ಸ್ವಂತ ಮನೆಯಲ್ಲಿ ಉಪೋಷಣ, ಅಮೇರಿಕಾ ಖಂಡದಂಥ ಹತ್ತಿರದಲ್ಲವಾದರೂ ಕೊಂಚ ದೂರದ ನೆರೆಮನೆಯಿಂದ— ಕಾಳು ದೊರೆಕದು, ಈ ಕಾರಣಗಳಿಂದ ಯುರೋಪವು ಹಿಂದುಸ್ಥಾನದ ಗೋಧಿಯಿಂದ ಪ್ರಾಣವನ್ನು ಮಾಡಬೇಕೆಂದು ನೆನಸಿದೆ ಎಂದು ತೋರುತ್ತದೆ ಈ ಅನುಮಾನವು ನಮಗೆ ಮೊದಲೇ ಬಂದಿತ್ತು. ಆದರೆ ಹಿಂದುಸ್ಥಾನದಲ್ಲಾದರೂ ಧಾನ್ಯದ ಅಷ್ಟೊಂದು ಸಮೃದ್ಧಿ ಇಲ್ಲ, ಆದ್ದರಿಂದ ಆಸ್ಟ್ರೇಲಿಯಾ ಮುಂತಾದ ಕಡೆಗಳಿಂದ ತಮಗೆ ಬೇಕಾದ ಗೋಧಿಯನ್ನು ತಂದು ಯುರೋಪು ತನ್ನ ಹೊಟ್ಟೆ ತುಂಬಿಸಿಕೊಂಡೀತು ಎಂದು ನೆನಸಲು ಆಸ್ಪದವಿದ್ದದ್ದರಿಂದ ನಮ್ಮ ಮೇಲಿನ ಅನುಮಾನವನ್ನು ನಾವು ಆಗ ಅಷ್ಟೊಂದು ಸ್ಪಷ್ಟವಾಗಿ ವಾಚಕರ ಮುಂದೆ ಇಟ್ಟಿರಲಿಲ್ಲ. ಹಿಂದುಸ್ಥಾನದ ಗೋಧಿಯ ಮೇಲೂ ಇತರ ಆಹಾರ ಜೀನಸುಗಳ ಮೇಲೂ ಹೊರಗೆ ರಫ್ತಾಗದಂತೆ ಇರುವ ಪ್ರತಿಬಂಧವನ್ನು ಸರಕಾರವು ತೆಗೆಯುವ ಆಲೋಚನೆಯಲ್ಲಿದೆ ಎಂದು ಹೇಳುತ್ತಾರೆ.

ಹಿಂದುಸ್ಥಾನದ ಗೋಧಿಯ ಮತ್ತು ಇತರ ಆಹಾರ ಜೀನಸುಗಳ ಬಗ್ಗೆ ಸರಕಾರವು ಮೇಲಿನ ತರದ ಧೋರಣವನ್ನು ತೆಕ್ಕೊಳ್ಳುವದು ನಿಜವಾದ್ದಾದರೆ ಅದು ಕೇವಲ ಶೋಚನೀಯ ಮತ್ತು ಉದ್ವೇಗಕರವೆಂದೆ ಹೇಳಬೇಕು. ಇಂಗ್ಲಂಡ್, ಬೆಲ್‌ಜಮ್, ಫ್ರಾನ್ಸ್ ಮೊದಲಾದ ದೇಶಗಳಲ್ಲಿ ಪ್ರಕೃತ ಗೋಧಿಯ ಆವಶ್ಯಕತೆಯು ತುಂಬಾ ಇರಬಹುದು. ಇಂಗ್ಲಂಡಿಗೆ ಗೋಧಿಯ ಅಭಾವದಿಂದ ಏಕಾದಶಿಯ ಉಪೋಷಣವು ಇನ್ನು ಮುಂದೆ ಘಟಿಸುವ ಸಂದರ್ಭವು ಒದಗಲಿಕ್ಕೆ ಸಾಕು. ಅಥವಾ ಒಂದು ವೇಳೆ ಈಗಲೆ ಅಂಥ ಸಂದರ್ಭವು ಒದಗಿಯೂ ಇರಬಹುದು. ಸಾರಾಂಶ ಇಂಗ್ಲಂಡಿಗೆ ಗೋಧಿಯ ದಸೆಯಿಂದ ಕಷ್ಟ ಪ್ರಸಂಗವು ಒದಗಿದೆ ಎಂಬುದನ್ನು ಒಪ್ಪಿಕೊಳ್ಳೋಣ. ಇದನ್ನು ಒಪ್ಪಿಕೊಂಡರೂ ಹಿಂದುಸ್ಥಾನದಿಂದ ಈಗಿನ ಪರಿಸ್ಥಿತಿಯಲ್ಲಿ ಗೋಧಿಯ ಗೋಣಿಗಳ ಪ್ರವಾಹವನ್ನು ಹಿಂದೀ ಮಹಾಸಾಗರಕ್ಕೆ ಬಿಟ್ಟುಕೊಡುವದು ಉಚಿತವೋ? ಈ ದೇಶಕ್ಕೆ ಹಿತಕರವೋ? ಈ ಪ್ರಶ್ನೆಯನ್ನು ಯಾರಾದರೂ ಹೆಚ್ಚು ಆಳವಾಗಿ ಆಲೋಚಿಸಬೇಕಾದ ಅಗತ್ಯವಿಲ್ಲ. ಈ ದೇಶದಲ್ಲಿ ಬರಗಾಲಗಳು ಕಾಯಮಿನ ವಸತಿ [illegible] ಇರುವಾಗ ಪ್ರಸ— ಈಗ ನಾಲ್ಕು [illegible] ಧಾನ್ಯದ ದರವು ಕಡಿಮೆ ಆಗಿ ಮೇಲಿನ [illegible] ಯಲ್ಲಿ ಇನ್ನಷ್ಟು ಧರತಿಯು ಏಳಹತ್ತಿದೆ. [illegible] ಯಲ್ಲಿ ಇಲ್ಲಿಂದ ಗೋಧಿಯನ್ನು ಹೊರ[illegible] ಹೋಗಗೊಡುವುದು ಉಚಿತವಲ್ಲ. ಹಿಂದುಸ್ಥಾನದೊಳಗೆ [illegible] ಜನಗಳಿಗೆ ಸಾಕಾಗುವಷ್ಟು ಆಹಾರವು ಇಲ್ಲಿ ಉಂಟೋ ಹೇಗೆ ಎಂಬುದನ್ನು ಸಂಪೂರ್ಣವಾಗಿ ನಿರ್ಧರಿಸದೆ ಇಲ್ಲಿಂದ ಅನ್ಯತ್ರ ಧಾನ್ಯಗಳನ್ನು ಹೋಗಗೊಡುವುದು ನ್ಯಾಯವಲ್ಲ ಮತ್ತು ಹಿತಾವಹವೂ ಅಲ್ಲ. ತನ್ನ ಸ್ವಂತ ಪ್ರಜೆಗೆ ಸಾಕಷ್ಟು ಆಹಾರವಿಲ್ಲದೆ ಇರುವಾಗ ಆ ದೇಶದೊಳಗಿಂದ ಆಹಾರ ಜೀನಸನ್ನು ಯಾವ ಸರಕಾರವಾದರೂ ಹೊರಗೆ ಹೋಗಗೊಡಲಿಕ್ಕಿಲ್ಲ. ಈ ದೃಷ್ಟಿಯಿಂದ ವಿಚಾರಮಾಡಿದ್ದಲ್ಲಿ ಹಿಂದುಸ್ಥಾನ ಸರಕಾರವು ಇಲ್ಲಿಯ ಕಳೆದ ವರ್ಷದ ಗೋಧಿ ಮತ್ತು ಅಕ್ಕಿಯ ಪೈರು ಎಷ್ಟರ ಮಟ್ಟಿಗೆ ಬೆಳೆದಿದೆ, ಅದು ಜನರಿಗೆ ಸಾಕಾಗಬಹುದೊ ಹೇಗೆ ಎಂದು ಮುಂತಾದ ಸಂಗತಿಗಳನ್ನು ಸರಿಯಾಗಿ ಆಲೋಚಿಸಿ ಅದರಂತೆ ವರ್ತಿಸುವುದು ಅದರ ಕರ್ತವ್ಯವೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ, ಪ್ರಕೃತಿಪರಿಸ್ಥಿತಿಯ ಮಾಹಿತಿಯು ಸರಕಾರದ ಬಳಿಯಲ್ಲಿ ಇದ್ದರೆ ಅಥವಾ ಈಗ ಸಂಗ್ರಹಿಸುತ್ತಿರುವುದಾದರೆ ಅದನ್ನು ಜನರ ತಿಳಿವಳಿಕೆಯ ಬಗ್ಗೆ ಜಾಹೀರಪಡಿಸುವುದು ವಿಹಿತವಾಗಿದೆ. ಸರಕಾರಕ್ಕೆ ನಾವು ಈ ಸೂಚನೆಯನ್ನು ಕೊಡುವುದರ ಕಾರಣವೇನೆಂದರೆ, ಕಳೆದ ವರ್ಷದ ಈ ದೇಶದ ಪೈರು ಹಿಂದುಸ್ಥಾನಕ್ಕೆ ಸಾಕಾಗಿ ಬೇರೆ ದೇಶಗಳಲ್ಲಿ ಕಳುಹಿಸುವಷ್ಟು ಖಂಡಿತವಾಗಿಲ್ಲವೆಂಬುದು ನಮ್ಮದೆ ಅಲ್ಲ, ಅನೇಕರ ಅಂಬೋಣವಿದೆ. ಇಂಥ ಸಂದರ್ಭದಲ್ಲಿ ಅಂಥ ಮಾಹಿತಿಯನ್ನು ಜನರ ಮುಂದೆ, ಅವರ ಅನುಭವದ ಬಗ್ಗೆ ಇಡದೆ ಒಳಗಿಂದೊಳಗೆ ಗೋಧಿಯನ್ನು ಖರೀದಿಮಾಡಿ ಪರದೇಶಗಳಿಗೆ ಕಳುಹಿಸಲುದ್ಯುಕ್ತವಾದರೆ ಅದು ಉಚಿತವಲ್ಲ. ನಮ್ಮ ಸುಪ್ರಬುದ್ಧವಾದ ಸರಕಾರವು ಇಲ್ಲಿಯ ಜನರು ಉಪವಾಸದಲ್ಲಿ ಬೀಳುವಾಗ ಇಲ್ಲಿಂದ ಧಾನ್ಯರಾಶಿಗಳನ್ನು ಪರದೇಶಗಳಿಗೆ ಕಳುಹಿಸಿಕೊಟ್ಟಿತು ಎಂಬ ಅಪವಾದಕ್ಕೆ ಪಾತ್ರವಾಗಲಿಕ್ಕಿಲ್ಲವೆಂಬ ಭರವಸೆ ಇದೆ.

ನಮ್ಮ ಈ ಭರವಸೆಯು ನಿಜವಾಗಬೇಕಾದರೆ ಇದೇ ವಿಷಯವಾಗಿ ಮುಂಬಯಿಯ ಸಭೆಯಲ್ಲಿ ಮೊನ್ನೆ ನಿರ್ಣಯವಾದಂತೆ ಸರಕಾರದ ಪ್ರಥಮ ಕರ್ತವ್ಯವು ಯಾವುದೆಂದರೆ, ಇಲ್ಲಿಂದ ಧಾನ್ಯವು ಹೊರಗೆ ಹೋಗದಂತೆ ಅದರ ಮೇಲೆ ಯಾವ ಪ್ರತಿಬಂಧವುಂಟೊ ಅದನ್ನು ಹಾಗೆಯೇ ಇರಗೊಡಬೇಕು ಅನ್ಯರಿಗೆ ಸಹಾಯ ಮಾಡುವುದು ಉತ್ತಮವಾದ ನೀತಿಯಾದರೂ ತನ್ನನ್ನು ಉಳಿಸಿಕೊಳ್ಳುವುದು ಈ ಲೋಕದಲ್ಲಿ ಆವಶ್ಯಕ ಮತ್ತು ಶ್ರೇಷ್ಠವಾದ ಕರ್ತವ್ಯವಾಗಿದೆ.

ಇಲ್ಲಿಯ ಜನರಿಗೆ ಸಾಕಾಗುವಷ್ಟು ಗೋಧಿಯು ಇದ್ದು ಅಧಿಕವಾಗಿ ಇನ್ನು ಉಳಿಯುತ್ತದೆ ಎಂದಾದರೆ ಇಲ್ಲಿಂದ ಅದನ್ನು ಹೊರ ಕಳುಹಿಸಲು ಯಾರೂ ಆಕ್ಷೇಪಿಸಲಿಕ್ಕಿಲ್ಲ. ಆದರೆ ಈ ರೀತಿಯಿಂದ ಕಳುಹಿಸುವುದಾದರೆ ಅದರ ಮೇಲೆ ಸುಂಕವನ್ನಾದರೂ ಏರಿಸಬೇಕು.

ಸ್ಫುಟ ವಿಚಾರಗಳು.

೧. ಲೋಕಲ್‌ಫಂಡ್ ಕಾಮಗಾರಿಗಳ ಬಗ್ಗೆ ಸರಕಾರವೂ ಆಗಾಗ ದ್ರವ್ಯ ಸಹಾಯ ಮಾಡುತ್ತಿದೆ, ಮತ್ತು ಲೋಕಲ್ ಬೋರ್ಡುಗಳು ತಮ್ಮ ಸ್ವಂತ ಆದಾಯದಿಂದಲೂ ಹಲವು ಕಾಮಗಾರಿಗಳನ್ನು ನಡಿಸುತಿದ್ದು ಈಗ ಹುದ್ದೆದಾರ ಮೆಂಬರರನ್ನೂ ಈ ಬೋರ್ಡುಗಳಿಂದ ತೆಗೆದು ಹಾಕುವ ಆಲೋಚನೆ ಇರುವುದರಿಂದ ಇಂಥ ಕಾಮಗಾರಿಗಳ ಮೇಲ್ವಿಚಾರ ಮತ್ತು ಪರಿಶೋಧನೆಯ ಕೆಲಸವು ಇನ್ನಷ್ಟು ಉತ್ತಮತರವಾಗುವಂತೆಯೂ ಈ ಹಣವು ದುರ್ವ್ಯಯವಾಗದಂತೆಯೂ ನೋಡಿಕೊಳ್ಳುವುದಕ್ಕೆ ಎಂಜಿನಿಯರ್ ಕೆಲಸದ ಅನುಭವವುಳ್ಳ ಸರಕಾರ ನವುಕರರನ್ನು ಇನ್ಸ್‌ಪೆಕ್ಟರರಾಗಿ ನೇಮಿಸುವುದು, ಅಥವಾ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಸುಪರಿಂಟೆಂಡಿಂಗ್ ಇಂಜಿನಿಯರುಗಳ ಸಂಖ್ಯೆ ಹೆಚ್ಚಿಸುವುದು ಇವರ ಫೇರಿಯನ್ನು ಸಣ್ಣದಾಗಿ ಮಾಡಿ ಈ ಮೇಲ್ವಿಚಾರದ ಕೆಲಸ ಇವರು ಮಾಡುವಂತೆ ಏರ್ಪಡಿಸುವುದು, ಈ ಪೈಕಿ ಯಾವುದು ಬೋರ್ಡುಗಳಿಗೆ ಸಮ್ಮತವಾದೀತು ಎಂದು [illegible] ಪ್ರತಿನಿಧಿಯುಳ್ಳ [illegible] ಸ್ಥಳೀಯ ಮುನಿಸಿಪಲ್ ಕೆಲವು ಸಂದರ್ಭಗಳಲ್ಲಿ [illegible] ಯೂನಿವರ್ಸಿಟಿಗಳಲ್ಲಿ ವ್ಯಾಸಂಗ ನಡೆಸಿ [illegible] ಅನುಭವ ಪಡೆದವರು. ಇವರ ಮೇಲೆ ಇರುವ ಈ ಸುಪರಿಂಟೆಂಡಿಂಗ್ ಎಂಜಿನಿಯರುಗಳ ಮೇಲ್ವಿಚಾರವು ಯಾಕೆ? ದೊಡ್ಡ ಸೇತುವೆಗಳನ್ನು ಅಪರೂಪವಾಗಿ ಕಟ್ಟಿಸುವ ಸಂದರ್ಭವಿದ್ದರೆ ಆಗ್ಗೆ ಏನಾದರು ಸಾಧಾರಣಕ್ಕೆ ಮಿಕ್ಕಿದ ಅಂದಾಜು ಪಟ್ಟಿಗಳು ಈ ಸೂಪರಿಂಟೆಂಡಿಂಗ್ ಎಂಜಿನಿಯರುಗಳ ಅಥವಾ ಎಕ್ಸಿಕ್ಯೂಟಿವ ಎಂಜಿನಿಯರುಗಳ ಪರಿಶೋಧನೆಗಳಿಗೆ ಒಳಗಾಗಿವೆ. ಬರೇ ರಸ್ತೆಗಳ ಕಾಮಗಾರಿಯಲ್ಲಿ ಜಲ್ಲಿಕಲ್ಲು ಸಂಗ್ರಹ, ಮಣ್ಣಿನ ಕೆಲಸ, ಇವುಗಳ ದರಗಳು ಕೂಡಾ ಈ ಸರಕಾರಿ ಎಂಜಿನಿಯರುಗಳ ಪರಿಶೋಧನೆಗೆ ಒಳಪಟ್ಟಿವೆ. ಹೀಗಿದ್ದ ಮೇಲೆ ಈ ಸರಕಾರಿ ಎಂಜಿನಿಯರುಗಳು ತೀರಿ ಈ ಕೆಲಸದ ಮೇಲ್ವಿಚಾರ ನೋಡುವುದೆಂದರೆ ಈ ಎರಡು ಇಲಾಖೆಗಳಿಗೂ ಈಗ ವಿದ್ಯಾಶಾಲೆಯಲ್ಲಿರುವಂತೆ ಜಗಳಗಳಿಗೆ ಎಡೆ ಕೊಡಲಿಕ್ಕನೇ ಆದೀತು ಎಂದು ನಾವು ದೃಢವಾಗಿ ಹೇಳುತ್ತೇವೆ. ಮೇಲ್ವಿಚಾರವೆಂಬ ನೆವದಿಂದ ಈ ದೊಡ್ಡ ದೊಡ್ಡ ಸಂಬಳದ ಹುದ್ದೆದಾರರ ಸಂಖ್ಯೆ ಏರಿಸಿದ್ದೇ ಫಲವಾದೀತಲ್ಲದೆ ಬೇರೆ ಸುಪರಿಣಾಮವು ಇದರಿಂದ ನಿಜವಾಗಿಯೂ ಆಗದು. ಏನೂ ಪಾಸಾಗದೆ ಬರೆ ಶಿಫಾರಸು ಪತ್ರದ ಆಧಾರದಿಂದ ಲೋಕಲ್‌ಬೋರ್ಡುಗಳಲ್ಲಿ ಡಿಸ್ಟ್ರಿಕ್ಟ್ ಎಂಜಿನಿಯರುಗಳು ಆದವರು ಈಗ ಇದ್ದರೆ ಅವರನ್ನು ಅದಷ್ಟು ತ್ವರೆಯಿಂದ ನಿವೃತ್ತಿ ಪಡಿಸಿ, ಪರೀಕ್ಷೆ ಪಾಸಾದ ಮತ್ತು ಅನುಭವಶಾಲಿಯಾಗಿ ಸ್ಥಳೀಯ ಮಾಹೀತಿಯುಳ್ಳವರನ್ನು ಡಿಸ್ಟ್ರಿಕ್ಟ್‌ಬೋರ್ಡು ಎಂಜಿನಿಯರಾಗಿಟ್ಟು, ಅವರ ಕೈಕೆಳಗೆ ಇರುವ ಸಿಬ್ಬಂದಿಯ ಮುಖ್ಯವಾಗಿ ಓವರ್ಸಿಯರ್ ಸಬ್ ಓವರ್ಸಿಯರರ ಸಂಬಳವನ್ನು ಏರಿಸಿ ಈ ಹುದ್ದೆಗಳಿಗೆ ಯುನಿವರ್ಸಿಟಿ ಪರೀಕ್ಷೆ ಪಾಸಾದವರನ್ನೆ ನೇಮಿಸಿದರೆ ಇನ್ನೂ ಬೇರೆ ಮೇಲ್ವಿಚಾರ ಅಗತ್ಯವಿರಲಾರದು. ಈ ಯುನಿವರ್ಸಿಟಿಯ ಪರೀಕ್ಷೆ ಪಾಸು ಮಾಡಿದವರೂ ಈ ಕೆಲಸಗಳಿಗೆ ಯೋಗ್ಯವಲ್ಲವೆಂತಾದರೆ, ಅಂಥಾ ಎಂಜಿನಿಯರಿಂಗ್ ಕಾಲೇಜಿನಲ್ಲಿ ಯಾವ ಬಗೆಯ ಸುಧಾರಣೆ ಬೇಕೆಂಬದನ್ನು ಬೇಗನೆ ಆಲೋಚಿಸುವುದು ಅಗತ್ಯ. ಹೀಗೆ ಮಾಡದೆ ಇಲ್ಲಿಯ ಯೂನಿವರ್ಸಿಟಿಯ ಮುದ್ರಾಧಾರಣೆಯವರನ್ನು ಕಡಿಮೆ ಸಂಬಳಕ್ಕಿರಿಸಿ, ತನ್ಮೂಲಕ ಅವರ ಅನುಭವದ ಕಡೆಗೆ ಲಾಂಛನವನ್ನು ಹಚ್ಚಿ, ದೊಡ್ಡ ಸಂಬಳದ ಹುದ್ದೆಗಳ ಸಂಖ್ಯೆ ಏರಿಸಿ ವಿಲಾಯತಿಯಿಂದ ಉಮೇದುವಾರರನ್ನು ತಂದು ಇರಿಸುವುದು ಅನುಚಿತವು. ಈ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳು ತಮ್ಮ ಅಭಿಪ್ರಾಯವನ್ನು ನಿರ್ದಾಕ್ಷಿಣ್ಯದಿಂದ ವ್ಯಕ್ತಗೊಳಿಸಬೇಕಾಗಿದೆ.

೨. ಹಂಟರ ವರದಿಯು ಹೊರ ಬಿದ್ದ ಬಳಿಕ ಹಿಂದಿ ಲೋಕಮತದ ಸ್ವರೂಪವನ್ನು ತಿಳಿಸಿಕೊಡುವಾಗ ಶಾಂತಪಕ್ಷದವರೆನ್ನಿಸಿಕೊಳ್ಳುವವರೂ ಕೂಡ ಹೇಗೆ ಬಹುಮತದ ವರದಿಯನ್ನು ಟೀಕಿಸಿದ್ದಾರೆ ಎಂಬುದನ್ನು ನಾವು ಹಿಂದೆ ಬರೆದರು ಸಾರಿ ತೋರಿಸಿ ಕೊಟ್ಟಿದ್ದೇವೆ. ಈ ವಾರದಲ್ಲೂ ಇದೇ ನಮೂನೆಯ ವರ್ತಮಾನಗಳು ಪ್ರಕಟವಾಗಿವೆ. ಮ॥ ಗಾಂಧಿಗಳು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದರಷ್ಟೆ. ಆ ವರದಿಯಲ್ಲಿ ಜನರಲ್ ಡಾಯರ ಮುಂತಾದ ಅಪರಾಧಿಗಳನ್ನು ಶಿಕ್ಷಿಸಬೇಕೆಂಬ ಒತ್ತಾಯವನ್ನು ಮಾಡಿದ್ದಿಲ್ಲ. ಇದು ಎಲ್ಲರಿಗೆ ಗೊತ್ತಿದ್ದ ಸಂಗತಿಯು. ಮ॥ ಗಾಂಧಿಗಳ ಹೃದಯವು ಅಷ್ಟು ದಯಾಪೂರ್ಣವಾದ್ದು. ಆದರೆ ಲೋಕನಾಯಕನು ಎನಿಸಿಕೊಳ್ಳುವವನು ಪ್ರಚಂಡ ಲೋಕಮತಕ್ಕೆ ತಲೆ ತಗ್ಗಿಸಬೇಕಾಗುತ್ತದೆ, ಅದನ್ನು ಅನುಸರಿಸಬೇಕಾಗುತ್ತದೆ. ಒಂದು ಸಂಗತಿಯಿಂದ ಜನತೆಯ ಅಂತಃಕರಣವು ನಿಜವಾಗಿ ವ್ಯಥಿತವಾಗಿದೆ ಎಂದಿದ್ದರೆ ಆ ಸಂಗತಿಯನ್ನು ವಿಚಾರಕ್ಕೆ ತೆಕೊಳ್ಳಬೇಕಾಗುತ್ತದೆ. ಇದು ಲೋಕನಾಯಕರ ಕರ್ತವ್ಯ. ಮತ್ತು ಈ ಕರ್ತವ್ಯವನ್ನು ಮ॥ ಗಾಂಧಿಗಳು ಜನರಲ್ ಡಾಯರ ಪ್ರಭೃತಿಗಳ ದಂಡನೆಯ ವಿಷಯದಲ್ಲಿ ಮಾಡಹತ್ತಿದ್ದಾರೆ ಎಂದು ಹೇಳಬಹುದು. "ಅವರವರ ಕರ್ಮವೇ ಅವರಿಗೆ ಗತಿ. ಈಶ್ವರನೆ ಅಪರಾಧಿಗಳನ್ನು ದಂಡಿಸುತ್ತಾನೆ. ನಾವು ಯಾಕೆ ಈ ಕೆಲಸ

[illegible] ... ರಾಯರ [illegible] ಅಸಾಧ್ಯವಾಗಿದೆಯೆಂದು ಅವ[illegible] ... ಸರಿಯಾಗಿ [illegible] ದ್ದರಿಂದ ಅವರು ತಮ್ಮ ಪೂರ್ವ [illegible] ಮತವನ್ನು [illegible] ಈ ವಿಧಾನಕ್ಕೆ ಮುಂಬಯಿ

ಯಲ್ಲಿ [illegible] ಅಧ್ಯಕ್ಷತೆಯಲ್ಲಿ ನೆರೆದ ಮಹಾಸಭೆಯೊಳಗೆ ಮಹಾತ್ಮಗಾಂಧಿಗಳು ವ್ಯಕ್ತಗೊಳಿಸಿದ ಮತವೇ ಮುಖ್ಯ ದೃಷ್ಟಾಂತವಾಗಿದೆ. ಜನರಲ್ ಡಾಯರ್ ಮುಂತಾದ ಅಪರಾಧಿಗಳನ್ನು ಕೋರ್ಟಿನ ಮುಂದೆ ತನಿಖೆ ನಡಿಸಿ ದಂಡಿಸಬೇಕು, ಸರ್ ಎಮ್. ಒಡಾಯರ್ ಇವರನ್ನು ಇಂಪೀಚ್ ಮಾಡಬೇಕು ಎಂದಿರುವ ಮುಖ್ಯ ಠರಾವಿಗೆ ಮಹಾತ್ಮಗಾಂಧಿಗಳು ತಮ್ಮ ದೃಢೀಕರಣವನ್ನು ಕೊಟ್ಟರು.

೩. ಮ. ಗಾಂಧಿಗಳು 'ಶಾಂತಪಕ್ಷದವರು' ಎಂಬ ಹೆಸರನ್ನು ಧರಿಸಿದವರಲ್ಲವಾದರೂ ಅವರ ಮನೋವೃತ್ತಿಯು ನಿಜವಾಗಿ ಶಾಂತವಾದದ್ದು, ಆದ್ದರಿಂದ ಅಂಥವರು ಸಹ ಲೋಕಮತವನ್ನು ಹೇಗೆ ಅನುಮೋದಿಸಹತ್ತಿದ್ದಾರೆ ಎಂಬುದು ಮೇಲಿನ ದೃಷ್ಟಾಂತದಿಂದ ತೋರುತ್ತದೆ. ಈಗ 'ಶಾಂತಪಕ್ಷ'ದವರೊಳಗಿನ ಮತ್ತೊಂದು ಉದಾಹರಣವನ್ನು ತೋರಿಸಬೇಕಾದರೆ ಮುಂಬಯಿಯ ಇನ್ನೊಂದು ಸಭೆಯ ವೃತ್ತಾಂತವನ್ನು ಹೇಳುವದಾಗಿದೆ. ಕಳೆದವಾರ ಸರ್ ನಾರಾಯಣರಾವ್ ಚಂದಾವರಕರರ ಅಧ್ಯಕ್ಷತೆಯಲ್ಲಿ ಅಲ್ಲಿಯ ನಾಗರಿಕರ ಸಭೆಯು ಜರಗಿತ್ತು. ಸಭಾಧ್ಯಕ್ಷರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಹಂಟರ ಕಮಿಟಿಯ ವರದಿಯಲ್ಲಿ ನಿರ್ದಿಷ್ಟವಾದ ಅನೇಕ ಸಂಗತಿಗಳೊಳಗೆ ಉದಾಹರಣಾರ್ಥವಾಗಿ, ಹೊಟ್ಟೆ ಹರಿಸಿಕೊಂಡು ಬರೋಣ, ವಿದ್ಯಾರ್ಥಿಗಳನ್ನು ಕ್ರೂರತೆಯಿಂದ ನಡೆಸಿದ್ದು ಮುಂತಾದವುಗಳಿಂದ ಲಷ್ಕರಿ ಕಾನೂನಿನ ಹೆಸರಿನಿಂದ ಅಲ್ಲಿಯ ಅಧಿಕಾರಿಗಳು ಎಂಥ ಅವಮಾನದ ಕೆಲಸ ಮಾಡಿದರೆಂಬುದನ್ನು ತೋರಿಸಿಕೊಟ್ಟು, ಲೊ. ಚೆಮ್ಸಫರ್ಡರನ್ನು ಅವರ ಉಚ್ಚ ಅಧಿಕಾರದಿಂದ ಹಿಂದಕ್ಕೆ ಕರೆಯಿಸಬೇಕೆಂದಿರುವ ಠರಾವನ್ನು ಕುರಿತು ಪ್ರಸ್ತಾಪಿಸಿದರು. ಲೊ. ಚೆಮ್ಸಫರ್ಡರ ವಿಷಯದಲ್ಲಿ ಸರ್ ನಾರಾಯಣರಾಯರಿಗೆ ಅಂತಃಕರಣದಲ್ಲಿ ಸಹಾನುಭೂತಿ ಇದ್ದರೂ ಚೆಮ್ಸಫರ್ಡರ ಅಸಹಾನುಭೂತಿಯ ಆಳಿಕೆಯ ದೆಸೆಯಿಂದ ಅವರನ್ನು ಹಿಂದಕ್ಕೆ ಕರೆಯಿರೆಂದು ಹೇಳಬೇಕಾಗುತ್ತದೆ ಎಂದು ಸರ್ ಸಾಹೇಬರು ಅಭಿಪ್ರಾಯ ತೋರಿಸಿದರು. ಅನಂತರ ವಿ. ನಟರಾಜನ್ ಎಂಬ ಇನ್ನೊಬ್ಬ ಮಾಡರೇಟರು ಹಂಟರ ಕಮಿಟಿಯ ವರದಿಯನ್ನು ನಿಷೇಧಿಸುವ ಮತ್ತು ಲೊರ್ಡ್ ಚೆಮ್ಸಫರ್ಡರನ್ನು ಹಿಂದಕ್ಕೆ ಕರೆಯಬೇಕೆಂದಿರುವ ಠರಾವನ್ನು ತಂದರು; ಪಂಡಿತ ಮಾಲವೀಯರು ಅದನ್ನು ಅನುಮೋದಿಸಿದರು; ಮತ್ತು ಸದರಿ ಠರಾವು ಸರ್ವಾನುಮತದಿಂದ ಪಾಸಾಯಿತು. ಅಂತು ೭ ತಿಂಗಳ ಹಿಂದೆ ರಾಷ್ಟ್ರೀಯ ಸಭೆಯು ಚೆಮ್ಸಫರ್ಡ ದೊರೆಗಳ ವಿಷಯದಲ್ಲಿ ಯಾವ ಠರಾವನ್ನು ಪಾಸುಮಾಡಿತ್ತೋ ಅದನ್ನು ಈಗ ಮೆಲ್ಲಮೆಲ್ಲನೆ ಮೊಡರೇಟರು ಅನುಸರಿಸಹತ್ತಿದ್ದಾರೆ. ಹೇಗೂ ಇರಲಿ; ಒಮ್ಮತವು ರಾಷ್ಟ್ರಕ್ಕೆ ಬೇಕಾದ್ದು.

೪. ಈಗ ಚರ್ಚೆಯಲ್ಲಿರುವ ಅಸಹಕಾರಿತೆಯ ಪ್ರಶ್ನೆಗೆ ಬೇರೆ ಬೇರೆ ಕೊಂಬೆಗಳು ಒಡೆಯಹತ್ತಿವೆ. ಖಿಲಾಫತಿನ ವಿಷಯವು ಹಿಂದಿ ಮುಸಲ್ಮಾನರ ಧಾರ್ಮಿಕ ಆಕಾಂಕ್ಷೆಗಳಿಗೆ ಅನುಗುಣವಾಗಿ ತೀರ್ಮಾನಿಸಲ್ಪಡದಿದ್ದರೆ ಸರಕಾರದೊಡನೆ ಸಹಕಾರಿತೆಯನ್ನು ನಿಲ್ಲಿಸಬೇಕೆಂದು ಖಿಲಾಫತ್ ಸೆಂಟ್ರಲ್ ಕಮ್ಮಿಟಿಯು ಮತ್ತು ಮ. ಗಾಂಧಿಗಳು ಹೇಳುತಿದ್ದಾರಷ್ಟೆ. ಪಂಜಾಬದ ದೇಶಭಕ್ತರಾದ ಲಾಲಾ ಲಜಪತರಾಯರು ಖಿಲಾಫತ್ತು ಹಂಟರ ರಿಪೋರ್ಟು ಮುಂತಾದುವುಗಳ ದೆಸೆಯಿಂದ ರಾಷ್ಟ್ರೀಯ ಪಕ್ಷವು ಅಸಹಕಾರಿತ್ವವನ್ನು ತೋರಿಸಬೇಕೆಂದಿದ್ದರೆ ಆ ಪಕ್ಷದವರು ಬರುವ ಕೌನ್ಸಿಲುಗಳ ಚುನಾವಣೆಯಲ್ಲಿ ಉಮೇದುವಾರರಾಗಿ ನಿಂತುಕೊಳ್ಳಬಾರದು; ಸರಕಾರಿ ಪದವಿ, ಸರಕಾರಿ ನೌಕರಿ ಮುಂತಾದ್ದನ್ನು ಬಹಿಷ್ಕರಿಸುವಂತೆ ಹೊಸ ಕೌನ್ಸಿಲುಗಳನ್ನು ಕೂಡ ಬಹಿಷ್ಕರಿಸಬೇಕು ಎಂದು ಅಂದಿದ್ದಾರೆ. ಲಾಲಾ ಲಜಪತರಾಯರ ಈ ಮತವನ್ನು ಗಾಂಧಿಗಳು ಕೂಡ ಅನುಮೋದಿಸಿದ್ದಾರೆ. ಬರೆ ಅಸಹಕಾರಿತ್ವದ ತತ್ವವನ್ನೆ ಆಲೋಚಿಸಿ ನೋಡಿದರೆ ಲಜಪತರಾಯರ ಮತ್ತು ಗಾಂಧಿಗಳ ಈ ಮತವು ಅಸಮಂಜಸವೆಂದು ಕಂಡುಬರುವುದಿಲ್ಲ. ಸರಕಾರದ ಪದವಿ, ನೌಕರಿ ಮುಂತಾದ್ದು ಬೇಡವಾದ ಮೇಲೆ ಕೌನ್ಸಿಲಾದರೂ ಯಾಕೆ? ಈಗ ಆ

[illegible] ರಾಷ್ಟ್ರೀಯಸಭೆಯು, ರಾಷ್ಟ್ರೀಯ [illegible] ಅಸಮಾಧಾನಕರ, ನಿರಾಶಾಜನಕವೆಂದು ಹೇಳಿ ಅದರ ವಿಷಯವಾಗಿ ತನ್ನ ಅಸಮ್ಮತಿಯನ್ನು ತೋರಿಸಿದೆಯೋ ಅದೇ ಕಾನೂನಿನ ಮೇರೆಗೆ ರಚಿಸಲ್ಪಟ್ಟ ಕೌನ್ಸಿಲುಗಳಿವೆ. ಇಂಥ ಕೌನ್ಸಿಲುಗಳಿಗೆ ರಾಷ್ಟ್ರೀಯರು ಯಾಕೆ ಹೋಗಬೇಕು? ಎಂದು ಗಾಂಧಿ ಮುಂತಾದವರ ಅಂಬೋಣವಿದೆ. ಈ ಅಂಬೋಣವು ತಾತ್ವಿಕ ದೃಷ್ಟಿಯಿಂದ ಹಾಗಾದರೂ ವ್ಯವಹಾರದಲ್ಲಿ ಎಷ್ಟರಮಟ್ಟಿಗೆ ಪ್ರಯೋಜನಕಾರಿಯಾದೀತೆಂದು ಹೇಳಲು ಸಾಧ್ಯವಿಲ್ಲ. ಅಸಹಕಾರಿತ್ವವನ್ನು [illegible] ರಾಷ್ಟ್ರೀಯರು ಕೌನ್ಸಿಲಿನ ಚುನಾವಣೆಗೆ ನಿಲ್ಲುವುದನ್ನು ನಿಲ್ಲಿಸಿದರೆ ಅಯತ್ನದಿಂದಲೆ ಇತರರು ಆ ಎಲ್ಲ ಸ್ಥಾನಗಳನ್ನು ಆಕ್ರಮಿಸುವರು. ಈ ಅಸಹಕಾರಿತ್ವವನ್ನು ಮತದಾರರು ಉಪಯೋಗಿಸಿದರೆ ಅದು ನಿಜವಾಗಿ ಒಳ್ಳೆಯದಾಗುವುದು: ಮತದಾರರು ಯಾರನ್ನೂ ಚುನಾಯಿಸಿ ಕೊಡುವುದಿಲ್ಲ ಎಂಬ ಹಟವನ್ನು ಅಂಗೀಕರಿಸಿದರೆ, ಈ ಅಸಹಕಾರಿತ್ವವನ್ನು ಕೈಕೊಂಡರೆ ಅದು ಒಳ್ಳೆಯದಾಗುವುದು. ಆದರೆ ಮತದಾರ ಸಂಖ್ಯೆಯು ವಿಪುಲವಾಗಿರುವುದರಿಂದಲೂ, ಅದರಲ್ಲಿ ಸುಶಿಕ್ಷಿತರಂತೆಯೇ ಅಶಿಕ್ಷಿತರೂ ಇರುವುದರಿಂದಲೂ ಈ ತತ್ವದ ಮಹತ್ವವು ಅವರ ತಲೆಯಲ್ಲಿ ಬರುವುದು ಬಹು ಪ್ರಯಾಸದ ಸಂಗತಿಯು. ಈ ಎಲ್ಲ ಪರಿಸ್ಥಿತಿಯನ್ನು ಆಲೋಚಿಸುವಾಗ ಲಜಪತರಾಯರ ಮತ್ತು ಗಾಂಧಿಗಳ ಮತವು ಎಷ್ಟರಮಟ್ಟಿಗೆ ವಿಚಾರಣೀಯವೆಂಬುದನ್ನು ಹೇಳಲಾಗುವುದಿಲ್ಲ. ಅಂದರೆ ಚುನಾವಣೆಯಲ್ಲಿ ಅಂಗೀಕರಿಸಬೇಕಾದ ಅಸಹಕಾರಿತ್ವವು ತಪ್ಪೆಂದು ನಮ್ಮ ಅಭಿಪ್ರಾಯವಲ್ಲ. ಆದರೆ ಇದರಿಂದ ಪ್ರತಿಸ್ಪರ್ಧಿಗಳ ಮನೋರಥವು ಅಥವಾ ಕಾರ್ಯವು ಸಿದ್ಧವಾಗದೆ ಇದ್ದರೆ ಸರಿ. ಇಷ್ಟೇ ನಮ್ಮ ಅಂಬೋಣವು.

೫. ದಕ್ಷಿಣ ಆಫ್ರಿಕದಲ್ಲಿಯ ಹಿಂದಿಗಳು ಹಿಂದುಸ್ಥಾನಕ್ಕೆ ಹಿಂತಿರುಗಿ ಬರುವ ಪ್ರಶ್ನೆಯನ್ನು ಆಲೋಚಿಸಲು ಏಸಿಯಾಟಿಕ್ ಎನ್‌ಕ್ವಾಯರಿ ಕಮಿಷನು ನೇಮಕಪಟ್ಟಿತು. ಅದು ದಕ್ಷಿಣ ಆಫ್ರಿಕದ ಗವರ್ನರ ಜನರಲನಿಗೆ ತನ್ನ ರಿಪೋರ್ಟನ್ನು ಸಾದರಪಡಿಸಿತ್ತು. ಆ ರಿಪೋರ್ಟು ಅಲ್ಲಿಯ ಸರಕಾರದಿಂದ ಹಿಂದಿ ಸರಕಾರದ ಕಡೆಗೆ ಕಳುಹಿಸಲ್ಪಟ್ಟಿದೆ. ಎನ್‌ಕ್ವಾಯರಿ ಕಮಿಷನಿನ ವರದಿಯನ್ನು ನೋಡುವಾಗ ಅದು ಹಿಂದಿಗಳಿಗೆ ದಕ್ಷಿಣ ಆಫ್ರಿಕವನ್ನು ಬಿಟ್ಟು ಹಿಂದುಸ್ಥಾನಕ್ಕೆ ಹಿಂತಿರುಗಲು ಉಪದೇಶಿಸಿದೆ ಎಂದು ಕಂಡುಬರುತ್ತದೆ. ದಕ್ಷಿಣ ಆಫ್ರಿಕದಲ್ಲಿ ಅಕ್ಕಿ ಮುಂತಾದ ಆಹಾರ ಜೀನಸಿನ ನ್ಯೂನತೆಯು ಉಂಟಾದ ಕಾರಣ ಅಲ್ಲಿಯವರಿಗೆ ತುಂಬಾ ಪೇಚಾಟವು ಉಂಟಾಗಿದೆ. ಹಿಂದುಸ್ಥಾನದಲ್ಲಿ ಈಗ ಉದ್ಯೋಗಿಕ ವ್ಯವಸಾಯಗಳು ಪ್ರಾರಂಭವಾಗುವ ಸಮಯವು ಬಂದು ಒದಗಿದೆ. ಇಂಥ ಸಂದರ್ಭದಲ್ಲಿ ಹಿಂದುಸ್ಥಾನಕ್ಕೆ ಹಿಂತಿರುಗಲು ಒಪ್ಪಿಕೊಳ್ಳುವ ಹಿಂದಿಗಳಿಗೆ ದಕ್ಷಿಣ ಆಫ್ರಿಕದ ಸರಕಾರವು ಬೇಕಾದ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂದು ಕಮಿಷನು ಸೂಚಿಸಿಯದೆ. ಹಿಂದಿಗಳು ಎಷ್ಟೋ ಸಮಯದಿಂದ ಅಲ್ಲಿ ಇದ್ದವರಾದ ಕಾರಣ ಅವರ ಆಸ್ತಿಪಾಸ್ತಿ ಮುಂತಾದ್ದು ಇರುತ್ತದೆಯಷ್ಟೆ. ಇವನ್ನು ಸರಕಾರಕ್ಕೆ ಸೇರಿಸಬೇಕೆಂದಾಗಲಿ ಅನ್ಯಪಥದ ತೊಂದರೆಯಾಗಲಿ ಸದರಿ ರಿಪೋರ್ಟಿನಲ್ಲಿ ಕಂಡುಬರುವುದಿಲ್ಲ. ಇದೊಂದು ಸುದೈವದ ಮಾತೇ ಸರಿ ಎಂದು ಹೇಳಬೇಕಾಗುತ್ತದೆ. ಮಹಾತ್ಮಾ ಗಾಂಧಿಗಳು ಪ್ರಕಟವಾದ ಈ ರಿಪೋರ್ಟನ್ನು ನೋಡಿ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. "ಆತ್ಮಸಂತೋಷದಿಂದ ಅಲ್ಲಿಂದ ಹಿಂತಿರುಗಿ ಬರುವ ಹಿಂದಿಗಳಿಗೆ ಸರಕಾರವು ಪ್ರಯಾಣದ ಖರ್ಚಿಲ್ಲದೆನೆ ಇಲ್ಲಿಗೆ ತಂದು ಬಿಡಬೇಕು." ಗಾಂಧಿಗಳ ಈ ಸೂಚನೆಯು ಸರಕಾರದವರ ಲಕ್ಷ್ಯಕ್ಕೆ ಬಂದೀತೆಂದು ನಂಬಿದ್ದೇವೆ. ಯಾಕಂದರೆ ಅಲ್ಲಿಂದ ಹಿಂತಿರುಗುವ ಹಿಂದಿಗಳು ಆತ್ಮಸಂತೋಷದಿಂದ ಬರುವವರಾದರೂ ದಕ್ಷಿಣ ಆಫ್ರಿಕದ ಯುರೋಪಿಯನರ ಮತ್ತು ಸರಕಾರದ ಹಿತಕ್ಕಾಗಿಯೇ ಬರುತ್ತಾರೆಂಬುದನ್ನು ಯಾರೂ ಮರೆಯಬಾರದು.

ಮಂಗಳೂರು.

'ಪಬ್ಲಿಸಿಟಿ ಬಿರೋ'ದವರು 'ಆಗಲೇ ಹುಟ್ಟಿದ ಕೂಸಿನ ಆರೈಕೆ' ಎಂಬ ಪತ್ರಿಕದಲ್ಲಿ ಪ್ರಕಟಿಸಿದ ಸೂಚನೆಗಳನ್ನು ಕನ್ನಡದಲ್ಲಿ ಜೋಗುಳ ಹಾಡಿನಂತೆ ಹೆಂಗಸರು ಬಾಯಿಪಾಠ ಮಾಡುವ ರೀತಿಯಲ್ಲಿ ಪದ್ಯರೂಪವಾಗಿ ಬರೆದು ಕೊಡುವವರಿಗೆ ೫೦ ರೂಪಾಯಿಯ ಬಹುಮಾನ ಕೊಡಬಹುದಾಗಿ ಇದರ ಮೂಲಕ ತಿಳಿಸಲ್ಪಡುತ್ತದೆ. ಈ ಪದ್ಯಗಳನ್ನು ದಪ್ಪ ಕಾಗದದ ಒಂದು ಮೈಯಲ್ಲಿ ಬರೆದು ಲಕ್ಕೋಟೆಯೊಳಗೆ ಮಲ್ಲಾರ ವಿಷಯ [illegible] ಮುದ್ರಿಸಬೇಕು. ಇದೇ ಸೆಪ್ಟೆಂಬರ ೧೫ನೇ ತಾರೀಕಿನೊಳಗೆ ಕಲೆಕ್ಟರ ದೊರೆಗಳಿಗೆ ತಲಪುವಂತೆ ರವಾನಿಸಬೇಕು, ಲಕ್ಕೋಟೆಯ ಹೊರಮೈಯಲ್ಲಿ 'ಬಲ್ಲಡ್ ಕೊಂಪಿಟಿಶನ' ಎಂದು ಬರೆಯಬೇಕು, ಈ ಪದ್ಯಗಳನ್ನು ಡಿಸ್ಟ್ರಿಕ್ಟ್ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನ್ನಿನವರು ಇದೇ ಒಕ್ಟೋಬರದಲ್ಲಿ ಜರಗಿಸಲಿಕ್ಕಿರುವ ವಸ್ತುಪ್ರದರ್ಶನದ ಕಾಲದಲ್ಲಿ ಹಾಡುವಂತೆ ಮಾಡಿ ಅವುಗಳಲ್ಲಿ ಉತ್ತಮವೆಂದು ಮಂಜೂರ ಮಾಡಿದ ಹಾಡು ಬರೆದವರಿಗೆ ಇನಾಮು ಸಿಗುವುದು ಎಂದು ಈ ಜಿಲ್ಲೆಯ ಕಲೆಕ್ಟರರ ಆಫೀಸಿನಿಂದ ಒಂದು ಪ್ರಕಟಣೆ ಬಂದಿರುವುದು.

ಮಂಗಳೂರ ವಿದ್ಯಾರ್ಥಿ ಭ್ರಾತೃ ಸಂಘ (ಸ್ಟುಡೆಂಟ್ಸ್ ಬ್ರದರ್ ಹುಡ್)ದವರು ಬರುವ ಆದಿತ್ಯವಾರ ೬ ಗಂಟೆಗೆ ಗವರ್ನಮೆಂಟ ಕೊಲೇಜಿನಲ್ಲಿ ಪುನಃ ಒಟ್ಟುಗೂಡುವರು. ನಾಮದಾರ ಎನ್ ಸುಬ್ಬರಾಯರು ಅಂದಿನ ಅಧ್ಯಕ್ಷರಾಗುವರು. ಈ ಸಂದರ್ಭದಲ್ಲಿ ಸೆಂಟ ಆಲ್ಲೊಸಿಯಸ್ ಕೊಲೇಜಿನ ಅಧ್ಯಾಪಕರಾದ ಪಾದರ ಪ್ರೆಸರ್ಸಿಯೊ ಎಮ್. ಎ. ಯವರು ಭಾಷಣ ಮಾಡುವರು.

ಮಂಗಳೂರಿನಲ್ಲಿರುವ ವಕೀಲರ ಸಭೆಯೊಂದು ಕಳೆದ ಮಂಗಳವಾರ ಸಾಯಂಕಾಲ ಕೂಡಿತು. ತಾವು ಪಡಕೊಳ್ಳುವ ವಕಾಲತುಗಳಲ್ಲಿ ಹೇಗೆ ರುಸುಮನ್ನು ಏರಿಸಬಹುದು ಮತ್ತು ತಮ್ಮ ವೃತ್ತಿಯಲ್ಲಿ ಯಾವ ತರದ ಸುಧಾರಣೆಗಳನ್ನು ಮಾಡತಕ್ಕದ್ದು ಎಂಬುದನ್ನು ಆಲೋಚಿಸುವುದು ಈ ಸಭೆಯ ಉದ್ದೇಶವಾಗಿತ್ತು. ಸಭೆಯಲ್ಲಿ ಮೇಲಿನ ಉದ್ದೇಶಗಳನ್ನು ಸಮಾಲೋಚಿಸಲು ಒಂದು ಕಮ್ಮಿಟಿಯನ್ನು ಆರಿಸಲಾಯಿತು.

ಇದೇ ಬರುವ ತಾರೀಕು ೧೧ನೇ ಆದಿತ್ಯವಾರ ಮಧ್ಯಾಹ್ನ ೩ ಗಂಟೆಗೆ ಮಂಗಳೂರ ಬೆಂಚ್ ಕೋರ್ಟ ಆಫೀಸಿನಲ್ಲಿ ಹಜೂರ್ ಶಿರಸ್ತೆದಾರರಾದ ಮ| ರಾ| ಯಂ ಜಿಚ್ಚುತ್ತಯ್ಯನವರ ಅಧ್ಯಕ್ಷತೆಯಲ್ಲಿ ಇಲ್ಲಿಯ ನೊನ್ ಗಜೇಟೇಡ್ ಆಫೀಸರರ ಸಭೆಯೊಂದು ಸೇರತಕ್ಕದಿದೆ.

ಮಂಗಳೂರಲ್ಲಿರುವ ವೆನ್‌ಲೋಕ ಆಸ್ಪತ್ರೆಯನ್ನು ಅದು ಈಗ ಇರುವ ವಠಾರದಲ್ಲೇ ಪುನಃ ಹೊಸದಾಗಿ ಕಟ್ಟಲ್ಪಡಲಾಗುವದೆಂತ ತಿಳಿದಿದ್ದಷ್ಟೆ. ಈಗ ಈ ಆಸ್ಪತ್ರೆಯನ್ನು ಪೆಂಟಲಂಪ ಪೇಟೆಯಲ್ಲಿ ಕಟ್ಟಲ್ಪಡಲಾಗಬಹುದೆಂಬ ಆಲೋಚನೆಗಳೂ ನಡೆಯುತ್ತಿರುವುದಾಗಿ ವರ್ತಮಾನವಿದೆ.

ಕಳೆದ ಜೂನ್ ತಿಂಗಳಲ್ಲಿ ಪಟ್ಟಣದಲ್ಲಿ ೧೪೯ ಜನನಗಳೂ, ೮೭ ಮರಣಗಳೂ ಸಂಭವಿಸಿದವು. ಗತವರುಷದ ಜೂನ್ ತಿಂಗಳಲ್ಲಿ ೧೩೦ ಜನನಗಳೂ ೧೨೦ ಮರಣಗಳೂ ಇದ್ದವು.

ಮಂಗಳೂರ ತಾಲೂಕು ಲೋಕಲ್ ಫಂಡ ಒವರ್ಸಿಯರ ಮ| ರಾ| ಬೇಕಲ ಲಿಂಗಪ್ಪಯ್ಯನವರಿಗೆ ಕೊಯಮುತ್ತೂರು ಡಿಸ್ಟ್ರಿಕ್ಟಿನ ತಿರುಪುರ ಮುನಿಸಿಪಾಲಿಟಿಯ ಸಬ್ ಇಂಜನಿಯರರಾಗಿ ವರ್ಗವಾಗಿದೆ ಎಂದು ಕೇಳುತ್ತೇವೆ.

ಇಲ್ಲಿಯ ಲೆಂಡ್ ರಿಕೋರ್ಡ್ ತಹಸಿಲ್‌ದಾರರಾದ ಮ| ರಾ| ಪಿ. ಮಹಾಬಲೇಶ್ವರಯ್ಯನವರು ಮದರಾಸ ಲೆಂಡರಿಕೋರ್ಡ ತಹಸಿಲದಾರರಾಗಿ ಕೆಲಸ ನೋಡುವರೆ ಹುಕುಂ ಹೊರಟಿದೆ.

ನಾಮದಾರ ನಯಂಪಳ್ಳಿ ಸುಬ್ಬರಾಯರವರು ಇಲ್ಲಿಯ ಡಿಸ್ಟ್ರಿಕ್ಟಬೋರ್ಡಿನ ಪ್ರೆಸಿಡೆಂಟರಾಗಿ ಪುನಃ ನೇಮಕವಾಗಿ ಕಳೆದ ತಾರೀಕು ೩ರಿಂದ ಈ ಹುದ್ದೆಯ ಚಾರ್ಜನ್ನು ವಹಿಸಿಕೊಂಡಿರುವರು.

ಮಂಗಳೂರು ತಾಲೂಕು ಬೋರ್ಡಿನ ಮೆಂಬರ ಪೈಕಿ ಒಬ್ಬ ಮೆಂಬರರನ್ನು ಡಿಸ್ಟ್ರಿಕ್ಟ ಬೋರ್ಡ ಮೆಂಬರರಾಗಿ ಚುನಾಯಿಸುವರೆ ಮಂಗಳೂರ ತಾಲೂಕು ಬೋರ್ಡಿನ ಅಧಿವೇಶನವು ಈ ತಿಂಗಳ ತಾರೀಕು ೨೦ನೇ ಮಂಗಳವಾರ ೩ ಗಂಟೆಗೆ ಸದರಿ ತಾಲೂಕು ಬೋರ್ಡ ಆಫೀಸಿನಲ್ಲಿ ನೆರೆಯುವುದು.

ಸಲರಿ ಕಮ್ಮಿಟಿಯವರ ಶಿಫಾರಸು ಮೇರೆಗೆ ಗ್ರಾಮ ಉದ್ಯೋಗಸ್ಥರಿಗೆ ನಿರ್ಣಯಿಸಿದ ಸಂಬಳದ ಮತ್ತು ಇವರ ಇತರ ಅಹವಾಲುಗಳ ಕುರಿತು ತಮ್ಮ ಅಂಬೋಣವನ್ನು ಗವರ್ನರ ದೊರೆಗಳ ಮುಂದಿಡುವರೇ ತಮ್ಮದೊಂದು ಡೆಪ್ಯುಟೇಶನನ್ನು ಕಳುಹಿಸುವರೆ ಈ ಉದ್ಯೋಗಸ್ಥರು ಆಲೋಚಿಸಿಕೊಂಡಿರುವರು. ಈ ಕುರಿತು ಒಂದು ಸಭೆಯು ಮ| ರಾ| ವಕೀಲ ಯ್ಯಂ ಮಾಧವ ರಾಯರ ಅಧ್ಯಕ್ಷತೆಯಲ್ಲಿ ಬರುವ ತಾರೀಕು ೨೮ರಲ್ಲು ಮಧ್ಯಾಹ್ನ ೨ ಗಂಟೆಗೆ ಕೆನರಾ ಹೈಸ್ಕೂಲಿನ ಸಭಾಸದನದಲ್ಲಿ ಕೂಡುವುದು. ಈ ಸಭೆಗೆ ಪ್ರತಿ ತಾಲೂಕಿನ ಗ್ರಾಮ ಉದ್ಯೋಗಸ್ಥರೂ ಅವರ ಪ್ರತಿನಿಧಿಗಳೂ ಬರಬೇಕಾಗಿ ಕೋರಿದೆ.

ಕಳೆದ ತಾ. 27ರಲ್ಲಿ ಜರುಗಿದ ಕುಂದಾಪುರ ತಾಲೂಕಿನ ಶಾನುಭೋಗರ ಸಭೆಯ ನಿರ್ಣಯಗಳು ನಮ್ಮ ಬಳಿಗೆ ತಲ್ಪಿವೆ. ಅವನ್ನು ಸ್ಥಳಸಂಕೋಚದಿಂದ ಇಂದು ಪ್ರಕಟಿಸಲು ಆಗಲಿಲ್ಲ; ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

[illegible]

ಚೀಫ್ ಆಫೀಸರು ಕೆಲಸ ಕಟ್ಟಡವನ್ನು ರಿಮಾಂಡಿನಲ್ಲಿರಿಸಿರು ತ್ತಾರೆ. ಈ ಕೆಲವಾದ ವಿಸಗರ್ ತಿರಿಸುವುದರೊಡನೆ ಸಿಕ್ಕಿರುತ್ತವೆ.

ಇಲ್ಲಿಯ ನೋನ್‌ಗಜೆಟೆಡ್ ಆಫೀಸರರವರ ಸಭೆಯೊಂದು ಪುನಃ ಕಳದ ತಿಂಗಳ ತಾ. ೨೭ನೆಯ ಆದಿತ್ಯವಾರ ಶ್ಯಾಮ ಭಟರ ತಕ್ಕ ಹುಸಾರ ಗೋಡು ಸಬ್ ಮಾಜಿಸ್ಟ್ರೇಟ್ ಮ. ರಾ. ಎಮ್. ರಾಘವೇಂದ್ರರಾಯರವರ ಅಧ್ಯಕ್ಷತೆಯಲ್ಲಿ ಜರಗಿ ಸರಕಾರಿ ನೌಕರಿಗೋಸ್ಕರ ಕೋಪರೇಟಿವ್ ಸೊಸೈಟಿಯೊಂದನ್ನು ಸ್ಥಾಪಿಸುವರೆ, ಅಸಿಸ್ಟೆಂಟ್ ರಿಜಿಸ್ಟ್ರಾರರವರಿಗೆ ಒಂದು ಅರ್ಜಿ ಬರಕೊಂಡಿರುತ್ತದೆ. ಇವರ ಈ ಪ್ರಯತ್ನವು ಸಫಲವಾಗಲಿ.

ಇಲ್ಲಿಯ ತಾಲೂಕು ಬೋರ್ಡು ಮೆಂಬರಿಕೆಗೆ ಉಮೇದ್ವಾರರಾಗಿ ನಿಂತ ಮ. ರಾ. ರಾ. ಪಿ. ಅನಂದರಾವ್ ವಕೀಲರವರಿಗೆ ೩೬ ವೋಟು ಗಳೂ, ಮ. ರಾ. ರಾ. ಸಾಹುಕಾರ ಗೋಪಾಲಕೃಷ್ಣ ಪೈಗಳಿಗೆ ೩೮ ವೋಟುಗಳೂ, ಮ. ರಾ. ರಾ. ವಕೀಲ್ ಎಚ್. ಶ್ರೀನಿವಾಸ ಕಾಮ್ತರಿಗೆ ೮೮ ವೋಟುಗಳೂ ದೊರಕಿದುದರಿಂದ, ಸದರಿ ಕಾಮತರನ್ನೇ ಮೆಂಬರರಾಗಿ ಚುನಾಯಿಸಲಾಯಿತು.

ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯು ಕಳದ ತಾ. ೨೯ರಿಂದ ಗವರ್ನಮೆಂಟಿನ ಹುಕುಂ ಮೇರೆಗೆ ಹೈಯರ್ ಎಲಿಮೆಂಟರಿ ಶಾಲೆಯಾಗಿ IVನೇ ಫೋರ್ಮ್ ತೆರೆಯೋಣಾದ ಸಂಗತಿಯು ಸಂತೋಷಕರವಾದ ವಾರ್ತೆಯೇ ಸರಿ.

ಮದ್ರಾಸು ಲೋಕಲ್ ಬೋರ್ಡುಗಳ ಬಿಲ್ಲ್.

ಡಿಸೆಂಟ್ರಲಾಯ್ಜೇಶನ್ ಕಮಿಟಿಯ ಸೂಚನೆಗಳು, ಅವುಗಳನ್ನು ವಿಮರ್ಶಿಸಿ ವರಿಷ್ಠ ಸರಕಾರದವರೂ ಇಂಡಿಯಾ ಸೆಕ್ರೆಟರಿಗಳೂ ಬರೆದ ಸೂಚನೆಗಳು, ಸ್ಥಾನಿಕ ರಾಜ್ಯಭಾರದ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ವರಿಷ್ಠ ಸರಕಾರದವರು ಬರೆದ ಠರಾವಣೆ ಇವನ್ನು ಆಧರಿಸಿ ಈ ಹೊಸ ಮಸೂದೆಯು ತಯಾರಿಸಲ್ಪಟ್ಟಿದೆ. ಸಂಸ್ಥಾನದ ಬೇರೆ ಬೇರೆ ತಾಲೂಕು ಬೋರ್ಡು, ಡಿಸ್ಟ್ರಿಕ್ಟ್ ಬೋರ್ಡುಗಳ ಬಿನಸರಕಾರಿ ಪ್ರೆಸಿಡೆಂಟರುಗಳ ಪೈಕಿ ಕೆಲವರ ಅಭಿಪ್ರಾಯಗಳನ್ನೂ ಡಿಸ್ಟ್ರಿಕ್ಟ್ ಮ್ಯುನಿಸಿಪಾಲಿಟಿಗಳ ಕಾನೂನನ್ನೂ ಅನುಸರಿಸಿ ಕೆಲವು ತಿದ್ದುಪಡಿಗಳನ್ನು ಮಾಡಿದ್ದಾಗಿ ಈ ಕಾನೂನು ಮಸೂದೆಯ ಪ್ರಸ್ತಾವನೆಯು ಹೇಳುತ್ತದೆ. ಈ ಕೆಳಗಿನ ಬದಲಾವಣೆಗಳು ಈ ಹೊಸ ಮಸೂದೆಯಲ್ಲಿ ಕಾಣುತ್ತವೆ.

ಈ ವರೆಗೆ ರೆವಿನ್ಯೂ ಡಿವಿಜನಲ್ ಆಫೀಸರರು ತಾಲೂಕು ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳ ಹುದ್ದೆದಾರ ಮೆಂಬರರಾಗಿದ್ದರು. ಇದನ್ನು ಈ ಮಸೂದೆಯಲ್ಲಿ ಲೋಪಮಾಡಿರುವರು. ಅದಕ್ಕೆ ಬದಲಾಗಿ ಪ್ರತಿಯೊಂದು ತಾಲೂಕು ಬೋರ್ಡಿನ ಪ್ರೆಸಿಡೆಂಟರು ಡಿಸ್ಟ್ರಿಕ್ಟ್ ಬೋರ್ಡಿನ ಹುದ್ದೆದಾರ ಮೆಂಬರರಾಗುವರು. ಸರಕಾರದ ನೌಕರರಲ್ಲಿ ಗ್ರಾಮದ ಪಟೇಲರ ವಿನಾ ಇತರರು ಲೋಕಲ್ ಬೋರ್ಡುಗಳ ಚುನಾವಣೆ ಮೆಂಬರರಾಗ ಕೂಡದಾಗಿ ನಿರ್ಬಂಧವನ್ನು ಈ ಹೊಸ ಮಸೂದೆಯು ಇಟ್ಟಿದೆ. ಲೋಕಲ್ ಬೋರ್ಡುಗಳಲ್ಲಿ ಬೇರೆ ಬೇರೆ ಇಲಾಖೆಗಳ ಮೇಲ್ವಿಚಾರದ ಬಗ್ಗೆ ಸಬ್ ಕಮಿಟಿಗಳನ್ನು ಏರ್ಪಡಿಸುವುದಕ್ಕೆ ಎಡೆ ಇಟ್ಟಿದೆ. ಈಗಿನ ಆಕ್ಟಿನ ಮೇರೆಗೆ ಆತುರಾದ ಸಂದರ್ಭಗಳಲ್ಲಿ ರೆವಿನ್ಯೂ ಡಿವಿಜನಲ್ ಆಫೀಸರರು ಲೋಕಲ್ ಬೋರ್ಡಿನ ಮಂಜೂರಾತಿ ನಿರೀಕ್ಷಣೆಯಿಂದ ಕೆಲವು ಕಾಮಗಾರಿಗಳನ್ನೂ ಆರೋಗ್ಯ ರಕ್ಷಣೆಯ ಏರ್ಪಾಡುಗಳನ್ನೂ ಮಾಡಬಹುದಾಗಿತ್ತು. ಈ ಅಧಿಕಾರವನ್ನು ಈ ಆಫೀಸರರ ಕೈಯಿಂದ ತಪ್ಪಿಸಿದೆ. ಆದರೆ ಕೆಲವು ಸಂದರ್ಭಗಳಲ್ಲಿ ಕಲೆಕ್ಟರರಿಗೆ ಇದ್ದ ಈ ಬಗೆಯ ಅಧಿಕಾರವನ್ನು ಹೊಸ ಮಸೂದೆಯಲ್ಲಿಯೂ ಇರಗೊಡಿಸಿದೆ.

ಬೋರ್ಡುಗಳಲ್ಲಿ ದಕ್ಷಿಣ ಕನ್ನಡಾ, ಮಲಬಾರ ಮತ್ತು ನೀಲಗಿರಿ ಜಲ್ಲೆಯವುಗಳಿಗೆ ಭೂಕಂದಾಯದಲ್ಲಿ ರೂಪಾಯಿಗೆ ೨ ಆಣೆ ವರೆಗೆ, ಇತರ ಬೋರ್ಡುಗಳಲ್ಲಿ ರೂಪಾಯಿಗೆ ೧ ಆಣೆಗೆ ಮೀರದಷ್ಟು ಲೆಂಡ ಸೆಸ್ ವಸೂಲು ಮಾಡುವ ಅಧಿಕಾರವು ಹಾಲಿ ಆಕ್ಟಿನಲ್ಲಿದೆ. ಈಗ ಎಲ್ಲಾ ಬೋರ್ಡುಗಳಿಗೂ ೩ ಆಣೆಯ ಮಿತಿಯನ್ನು ಈ ಹೊಸ ಮಸೂದೆಯಲ್ಲಿ ಕೊಟ್ಟಿದೆ. ಇದಕ್ಕಿಂತಲೂ ವಿಶೇಷ ಸೆಸ್ ವಸೂಲು ಮಾಡಬೇಕಾದರೆ ಆಲೋಚನಾ ಸಭಾಯುಕ್ತ ಗವರ್ನರ ಸಾಹೇಬರ ಹುಕುಂ ಪಡೆಯಬೇಕಾಗಿ ಹೊಸ ಮಸೂದೆಯು ಹೇಳುತ್ತದೆ. ಈ ಮಿತಿಗೆ ಒಳಪಟ್ಟು ಬೋರ್ಡುಗಳು ತಂತಮ್ಮ ಶಿರ್ತಿಯೊಳಗೆ ಸೆಸ್ಸ ಎಷ್ಟು ಎತ್ತಬೇಕೆಂದು ನಿರ್ಣಯಿಸುವುದಕ್ಕೆ ಅವುಗಳಿಗೆ ಸ್ವಾತಂತ್ರ್ಯವಿದೆ. ಕಾನೂನು ಮೇರೆಗೆ ಇಟ್ಟ ಮಿತಿಗೆ ಒಳಪಟ್ಟ ಸೆಸ್ಸು ಮತ್ತು ಗೇಟುಗಳ ಆದಾಯವನ್ನು ಕಡಿಮೆ ಮಾಡಲಿಕ್ಕೆ ಅಧಿಕಾರವು ಬೋರ್ಡುಗಳಿಗೆ ಕೊಡೋಣಾಗುವುದು. ಹೀಗೆ ತಗ್ಗಿಸಿದ ಕೂಡಲೇ ಅವು ಆ ಸಂಗತಿ ಪ್ರಾಂತಿಕ ಸರಕಾರದವರಿಗೆ ಬರಕೊಳ್ಳಬೇಕಾಗಿದೆ. ಆದರೆ ಸರಕಾರದಿಂದ ಸಾಲ ಪಡೆದ ಬೋರ್ಡುಗಳು ಈ ರೀತಿಯಾಗಿ ತಗ್ಗಿಸಬೇಕಾದರೆ ಮೊದಲೇ ಸರಕಾರದವರ ಹುಕುಂ ಪಡೆಯಬೇಕೆಂದು ಇದೆ.

ಈಗ ಸರಕಾರದವರು ಎತ್ತುವ ಕಂದಾಯ ತೆರಿಗೆಯ ಅರ್ಧಾಂಶಕ್ಕೆ ಮೀರದಷ್ಟು ಆದಾಯ ತೆರಿಗೆಯನ್ನೂ ಬೋರ್ಡುಗಳು ಇನ್ನು ಮುಂದೆ ಎತ್ತಬಹುದು. ಆದರೆ ಈ ಮಿತಿಗೆ ಒಳಪಟ್ಟು ವರ್ಷಂಪ್ರತಿ ಎಷ್ಟು ಅಂಶವನ್ನು ಎತ್ತಬೇಕೆಂಬ ಆಲೋಚನಾಸಭಾಯುಕ್ತ ಗವರ್ನರ ಹುಕುಂ ಮೊದಲೇ ಪಡೆಯಬೇಕು. ಅದರ ನಂತರ ಈ ದರವನ್ನು ಪ್ರತಿ ಸಲ ಏರಿಸುವಾಗಲೂ ಅಪ್ಪಣೆ ಹೊಂದಬೇಕು.

ಪವಿತ್ರ ಕ್ಷೇತ್ರಗಳಿಗೆ ಯಾತ್ರಿಕರು ತಂಡ ತಂಡವಾಗಿ ನೆರೆಯುವಲ್ಲಿ ಆರೋಗ್ಯ ರಕ್ಷಣೆಯ ಸಂಬಂಧದ ಖರ್ಚನ್ನು ಸಹಿಸಲಿಕ್ಕೆ ಬೋರ್ಡುಗಳ ದ್ರವ್ಯಾನುಕೂಲವು ಸಾಕಷ್ಟಿಲ್ಲದ್ದರಿಂದ ಇಂಥ ಸ್ಥಳಗಳಲ್ಲಿ ರೈಲು ದಾರಿಯಾಗಿ ಬರುವ ಜನಗಳ ಟಿಕೇಟು ದರಗಳ ಮೇಲೆ ನಿರ್ಣಯಿಸಿದ ದರದ ಸ್ವಲ್ಪ ಹೆಚ್ಚಿನ ಫೀಸು ಆಯಾ ರೈಲ್ವೆ ಕಂಪೆನಿಯವರೇ ವಸೂಲು ಮಾಡಿ ಅದನ್ನು ಆಯಾ ಬೋರ್ಡಿನವರಿಗೆ ಈ ಆರೋಗ್ಯರಕ್ಷಣೆ ಬಗ್ಗೆ ಒಪ್ಪಿಸಿಕೊಡಬೇಕೆಂದು ಈ ಹೊಸ ಮಸೂದೆಯು ಹೇಳುತ್ತದೆ.

[illegible]

ಬೋರ್ಡುಗಳಿಗೆ ಸ್ವಾತಂತ್ರ್ಯವಿರಲಾರದು.

ಪ್ರತಿ ವರ್ಷದ ಅಕ್ಷರಕ್ಕೆ [illegible] ಡಿಂದ ಪಡೆದ ಸಾಲ ಸಲ್ಲಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿ ಉಳಿಯುವ ಅಂಶವನ್ನು ಉಪಯೋಗಿಸುವುದಕ್ಕೆ ವರ್ಷಾವಧಿ ಅಂದಾಜು ಪಟ್ಟಿಗಳನ್ನು ಈಗಿನಂತೆ ಸರಕಾರದ ಮಂಜೂರಾತಿಗೆ ಒಳಪಡದೆ ತಯಾರಿಸುವ ಸ್ವಾತಂತ್ರ್ಯವು ಈ ಹೊಸ ಆಕ್ಟಿನಿಂದ ಬೋರ್ಡುಗಳಿಗೆ ಸಿಗಲಿಕ್ಕಿದೆ.

ಚುನಾವಣೆ ಕಾಲದಲ್ಲಿ ಲಂಚ ಕೊಡುವುದು ಮುಂತಾದ ಅಕ್ರಮಗಳಿಗೋಸ್ಕರ ಶಿಕ್ಷೆಗೆ ಗುರುಪಡಿಸುವ ವಿಲೆವಾರಿಯೂ ಈ ಹೊಸ ಆಕ್ಟಿನಲ್ಲಿದೆ.

ಇದಲ್ಲದೆ ಇನ್ನೂ ಕೆಲವು ಹೊಸ ಅಧಿಕಾರಗಳು ಈ ಬೋರ್ಡುಗಳಿಗೆ ಸಿಗಲಿಕ್ಕಿರುವುವು. ರೈಲ್ವೆ ಮತ್ತು ಟ್ರೇಮವೇಗಳನ್ನು ಬೇರೆ ಬೇರೆ ಬೋರ್ಡುಗಳು ಜತೆಯಿಂದ ರಚಿಸಲಿಕ್ಕೂ, ಬೋರ್ಡುಗಳಿಗೆ ವಹಿಸಿಕೊಟ್ಟ ದಾರಿ ಸ್ಥಳವನ್ನು ಆಕ್ರಮಣಮಾಡಿದ್ದಕ್ಕಾಗಿ ದಂಡಿಸುವುದಕ್ಕೂ, ಅಪ್ರಾಣ ಸ್ಥಳ, ಹಾಳು ಬಾವಿ ಮುಂತಾದ ಅನಾರೋಗ್ಯಕರವಾದ ಸ್ಥಳಗಳಿಗೆ ಮುಚ್ಚುಮುಚ್ಚಲಿಕ್ಕೂ ಭಯಂಕರವಾದ ರೋಗಗಳು ಅಲ್ಲಲ್ಲಿ ಹಬ್ಬಿಕೊಳ್ಳದಂತೆ ಈಗ ಡಿಸ್ಟ್ರಿಕ್ಟ್ ಮ್ಯುನಿಸಿಪಾಲಿಟಿಗಳಿಗೆ ಕೊಟ್ಟ ವಿಧದ ಅಧಿಕಾರಗಳನ್ನು ಕೊಡಲಿಕ್ಕೂ ಈ ಹೊಸ ಕಾನೂನಿನಲ್ಲಿ ಏರ್ಪಾಡು ಇದೆ.

ಅಸಹಕಾರಿತ್ವ.

ಸೆಂಟ್ರಲ್ ಖಿಲಾಫತ್ ಕಮಿಟಿಯವರು ಅಲಹಾಬಾದಿನ ಅಧಿವೇಶನದಲ್ಲಿ ನೇಮಕ ಮಾಡಿದ ಸಬ್ ಕಮಿಟಿಯಲ್ಲಿ ಮಹಾತ್ಮಾಗಾಂಧಿಯವರು ಅಧ್ಯಕ್ಷರಾಗಿಯೂ ಮಿ। ಶೌಕತ್ ಅಲ್ಲಿ, ಮೌಲಾನಾ ಹಜಾರತ್ ಮೊಹಾನಿ, ಡಾ। ಕಿಚಲೂ ಇವರು ಮೆಂಬರರಾಗಿಯೂ ಇರುವರು. ಈ ಸಬ್ ಕಮಿಟಿಯು ಮುಂದಿನ ಕಾರ್ಯಕ್ರಮವನ್ನು ಪ್ರಕಟಿಸಿದೆ. ಸಾಧ್ಯವಿದ್ದಷ್ಟು ಹೆಚ್ಚು ಮಂದಿಯನ್ನು ಈ ಅಸಹಕಾರಿತ್ವದ ದೀಕ್ಷೆ ಹಿಡಿಯುವಂತೆ ಕೇಳಿಕೊಳ್ಳುತ್ತಿರುವಾಗ ಸರಿಯಾಗಿ ಕಂಕಣ ಕಟ್ಟಿಕೊಳ್ಳಲು ಅನುಕೂಲವಿಲ್ಲದವರು ಕೂಡಾ ದ್ರವ್ಯಸಹಾಯದಿಂದಲೂ ಕಾರ್ಯಕರ್ತೃತ್ವದಿಂದಲೂ ಈ ಪಕ್ಷಕ್ಕೆ ತಮ್ಮ ಸಹಾನುಭೂತಿಯನ್ನು ಕೊಡಬೇಕೆಂದು ಈ ಸಬ್ ಕಮಿಟಿಯವರು ಬಿನ್ನೈಸುತ್ತಾರೆ. ಅಸಹಕಾರಿತ್ವವನ್ನು ಕೈಕೊಳ್ಳುವ ಆಗತ್ಯ ಬೀಳುವುದಾದರೆ ಅದರ ಪ್ರಥಮ ಹೆಜ್ಜೆಯ ವಿವರವು ಹೀಗಿದೆ. (೧) ಸರಕಾರಿ ಬಿರುದುಗಳನ್ನೂ ಗೌರವಾರ್ಥದ ಉದ್ಯೋಗಗಳನ್ನೂ ಬಿಟ್ಟುಬಿಡುವುದು. (೨) ವಕೀಲರು ವ್ಯವಹರಿಸುವ ಉದ್ಯೋಗವನ್ನು ಬಿಟ್ಟು ಖಾಸಗಿ ಪಂಚಾಯತಿಕೆಗಳಿಂದ ವ್ಯಾಜ್ಯಗಳ ತೀರ್ಮಾನಮಾಡುವುದು. (೩) ಸರಕಾರವು ಪ್ರಕಟಿಸಿರುವ ಸರಕಾರಿ ಸಾಲಕ್ಕೆ ಹಣ ಒದಗಿಸದಿರುವುದು. (೪) ಹೆತ್ತವರು ತಮ್ಮ ಮಕ್ಕಳನ್ನು ಸರಕಾರಿ ಸಾಲೆಗಳಿಗೆ ಕಳುಹಿಸುವುದನ್ನು ನಿಲ್ಲಿಸುವುದು. (೫) ಹೊಸ ಕೌನ್ಸಿಲುಗಳ ಚುನಾವಣೆಯಲ್ಲಿ ಉಮೇದ್ವಾರರಾಗದಿರುವುದು. (೬) ಸರಕಾರದ ಕಡೆಯಿಂದ ಇರುವ ಆಮಂತ್ರಣಗಳನ್ನು ಸ್ವೀಕರಿಸದಿರುವುದು. (೭) ಮೆಸೊಪೊಟೇಮಿಯಾದಲ್ಲಿ ಸಿವಿಲ್ ಅಥವಾ ಮಿಲಿಟರಿ ಹುದ್ದೆಯನ್ನು ಸ್ವೀಕರಿಸದಿರುವುದು; ಮುಖ್ಯವಾಗಿ ಕೆಟ್ಟ ಮಾತಿಗೆ ವಿರೋಧವಾಗಿ ಈಗ ಬ್ರಿಟಿಷರು ಅಧಿಕಾರ ನಡೆಸುವ ತುರ್ಕಿಯ ಪ್ರಾಂತಗಳಲ್ಲಿರುವ ದಂಡಿಗೆ ಸೇರದೆ ಇರುವುದು. (೮) ದೇಶೀಯ ವಸ್ತುಗಳನ್ನೆ ಜನಗಳು ಉಪಯೋಗಿಸುವುದಕ್ಕೆ ಪ್ರೋತ್ಸಾಹಗೊಳಿಸುವುದು. ಈ ಅಸಹಕಾರಿತ್ವದ ಆಚರಣೆಯು ಆಗಸ್ಟ ೧ನೆ ತಾರೀಕಿನ ವರೆಗೆ ಜಾರಿಗೆ ಬರುವುದಿಲ್ಲವೆಂತಲೂ ಸಾಧ್ಯವಿದ್ದ ಮಟ್ಟಿಗೆ ಈ ಆಚರಣೆಯ ಅವಶ್ಯಕತೆ ಬೀಳದಂತೆ ಪ್ರಯತ್ನಗಳು ನಡೆಯುವವೆಂದೂ, ಯಾರೂ ಒಂಟಿಯಾಗಿ ದುಡುಕದೆ ಆಗಾಗ ಕೊಡುವ ಸೂಚನೆಗಳನ್ನು ಸೂಕ್ಷ್ಮವಿಚಾರದಿಂದ ಆರಿಸಿಕೊಂಡು ಅನುಸರಿಸಬೇಕೆಂದೂ ಈ ಪ್ರಕಟಣೆಯು ಹೇಳುತ್ತದೆ.

ಪತ್ರವ್ಯವಹಾರ.

ಸ್ವಾಮಿ, ಪತ್ರಾಧಿಪರೆ,

ಲೋಕೋಪಯುಕ್ತವಾದ ಮುಂದಿನ ಎರಡು ಪಂಕ್ತಿಗಳಿಗೆ ತಮ್ಮ ಪತ್ರಿಕೆಯಲ್ಲಿ ಸ್ಥಳ ದೊರಕಬೇಕೆಂದು ಭರವಸೆ ಇದೆ.

ನಮ್ಮ ಕಡೆಯ ಭಾಗದಲ್ಲಿ ಕಾಪುದೊಳಗಿನ ಹೊಸ ಮಾರಿಗುಡಿ ದೇವಸ್ಥಾನವು ಬಹಳ ಪ್ರಸಿದ್ಧವಿದೆ. ಈ ದೇವಸ್ಥಾನದ ಆಡಳಿತೆಯಲ್ಲಿ ಹಲವು ಬಗೆಯ ಅವ್ಯವಸ್ಥೆಯುಂಟಾಗಿದ್ದದರಿಂದ ಕೋರ್ಟಿನಲ್ಲಿ ವ್ಯಾಜ್ಯ ವಗೈರೆ ನಡೆದು ಕೊನೆಗೆ ಮೊದಲಿನ ಮನೆಜರರನ್ನು ತೆಗೆದು ಕೋರ್ಟಿನ ಮುಖಾಂತರ ಈಗ ಅಲ್ಲಿಯ ಆಡಳಿತೆಗೆ ಹೊಸ ಸ್ಕೀಮು ವಗೈರೆ ತಯಾರಾಗುವ ತನಕ ರಿಸೀವರರು ನೇಮಕರಾಗಿದ್ದಾರೆ. ಈ ಸಂಗತಿಯು ನಮ್ಮಲ್ಲಿ ಎಲ್ಲರಿಗೆ ಗೊತ್ತೇ ಇದೆ. ಈ ಮಾರಿಗುಡಿಯಲ್ಲಿ ಪ್ರತಿ ಮಂಗಳವಾರ ದರ್ಶನವಾಗುತ್ತಿರುವ ಪದ್ಧತಿಯುಂಟು. ಈ ದರ್ಶನದ ಸಮಯದಲ್ಲಿ ದೇವರ ಭಂಡಾರಕ್ಕೆ ಭಕ್ತರಿಂದ ಕಾಣಿಕೆಯು ಬರುತ್ತದೆ. ಮೊದಲು ಈ ಕಾಣಿಕೆಯು ಎಷ್ಟು ಬರುತಿತ್ತು, ಮತ್ತು ಅದರ ವಿನಿಯೋಗವು ಏನಾಗುತಿತ್ತು ಎಂಬುದು ಹೆಚ್ಚಾಗಿ ಯಾರಿಗೂ ಗೊತ್ತಿದ್ದಿಲ್ಲ. ಆದರೆ ಈಗಿನ ರಿಸೀವರರಾದ ಮ। ರಾ। ಎಸ್. ಬಿ. ಭಿಡೇ ವಕೀಲರವರ ಆಡಳಿತೆಯ ಮೂರು ತಿಂಗಳ ಅವಧಿಯಲ್ಲಿ ೧೫೦೦ ರೂಪಾಯಿ ಕಾಣಿಕೆಯಾಗಿ ಬಂದಿದೆ ಎಂದು ತಿಳಿದುಬರುತ್ತದೆ. ಪ್ರತಿ ಮಂಗಳವಾರದ ಸಾಧಾರಣ ಕಾಣಿಕೆಯಿಂದಲೆ ಮೂರು ತಿಂಗಳಲ್ಲಿ ಇಷ್ಟು ಧನವು ಒಟ್ಟುಗೂಡುತ್ತದಾದರೆ ವರ್ಷಾವಧಿಯ ಜಾತ್ರೆಗಳ ಉತ್ಪತ್ತಿಯಿಂದ ಈ ಧನವು ಎಷ್ಟು ದೊಡ್ಡದಾದೀತೆಂಬುದನ್ನು ದೇವಿಯ ಭಕ್ತರೇ ಆಲೋಚಿಸುವುದು ಒಳ್ಳೇದು.

[illegible]

ಧರವಸವಡುತ್ತೇನೆ.

ಕಾಪು, } ಭಕ್ತ.
ತಾ. ೮—೭—1920 }

ಬಂಟರ ಯೂನಿಯನ್ ನಾಡವರ ಸಂಘದ ಬಡ ವಿದ್ಯಾರ್ಥಿ ಸಹಾಯಕ ಫಂಡು.

ಈ ಕೆಳಗೆ ನಮೂದಿರುವ ಮಹನೀಯರು ಬಡವಿದ್ಯಾರ್ಥಿಗಳ ಪರವಾಗಿ ಶ್ರಮಗೊಂಡು ಮಾಡಿದ ಸಹಾಯಕ್ಕಾಗಿ ನಮ್ಮ ವಂದನೆಗಳನ್ನು ಈ ಮೂಲಕ ತಿಳಿಸಲು ತುಂಬಾ ಸಂತೋಷಪಡುತ್ತೇವೆ.

ಮ। ರಾ। ರಾ। ಕರಿಯಾಲ ಮುತ್ತಯ ಶೆಟ್ರು ಮುಖಾಂತರ ಪೊಳಲಿ ಜಾತ್ರೆಯಲ್ಲಿಟ್ಟ ಧರ್ಮ ಪೆಟ್ಟಿಗೆಯಲ್ಲಿ ರೂ. ೨೮—೮—೩, ಮ। ರಾ। ರಾ। ಬೃಹತ್ಪುರ ಕುಮಾರರಾಯ ಸಣ್ಣ ಹಿರಿಮನೆ ರಾಮಣ್ಣ ಶೆಟ್ರು ಬಾಳ್ತದ್ದು ಲಗ್ನದಲ್ಲಿ ವ್ಯಯಮಾಡಿದ್ದು ರೂ. ೨೫—೧೨—೦, ಮ। ರಾ। ರಾ। ಬಿರಿಕುದ್ರು ಶಿವಪ್ಪಣ್ಣ ಶೆಟ್ರು ಮತ್ತು ಪಕ್ವಾಡಿ ಸುಬ್ಬಣ್ಣ ಶೆಟ್ರು ಕೂಡ ಸಂಗ್ರಹಿಸಿದ್ದನ್ನು ಬಸರೂರು ಸಂಕ್ರಯ ಶೆಟ್ರ ಮುಖಾಂತರ ರೂ. ೧೪—೩—೦, ಮ। ರಾ। ರಾ। ಪಟ್ಟಮಾಗೇರು ಮುಂಜಣ್ಣ ಆಳ್ವರ ಮುಖಾಂತರ ಧರ್ಮ ಪೆಟ್ಟಿಗೆಯಲ್ಲಿ ೬—೫—೩ ಮ। ರಾ। ರಾ। ನಾಗಪ್ಪ ಶೆಟ್ರು ಮತ್ತು ತಮ್ಮಂದಿಯರಿಂದ ರೂ. ೪—೦—೦.

ಜುಮ್ಲಾ ರೂ. ೭೯—೧—೩

ಮಂಗಳೂರು, } ಪಿ. ಆರ್. ರಂಗನಾಥ ಪೂಂಜ,
ತಾ. ೬—7—1920. } ಸೆಕ್ರೆಟರಿ.

ಜಾಹೀರಾತು.

ಬೊಂಬಾಯಿ ಸ್ಟೀಮ ನೇವಿಗೇಶನ್ ಕಂಪೆನಿ ಲಿಮಿಟೆಡ್.

ಕೆಳಗೆ ನಮೂದಿಸಿದ ಕಾಮಗಾರಿಗಳ ಬಗ್ಗೆ ಮೊಹರು ಹಾಕಲ್ಪಟ್ಟ ಟೆಂಡರುಗಳು ಇದೇ ತಿಂಗಳ ತಾರೀಕು ೩೧ರ ಒಳಗೆ ಇದರಡಿಯಲ್ಲಿ ಸಹಿಮಾಡಿದವರ ಬಳಿಗೆ ತಲ್ಪಿಸತಕ್ಕದ್ದು.

ಈ ಕಂಪೆನಿಯ ಮಂಜಿಗಳಲ್ಲಿ ಬಂದ ಸರಕನ್ನು ದಕ್ಕೆಗೆ ಇಳಿಸಿ ಬಂದರಿನಲ್ಲಿರುವ ಸರಕಾರಿ ಕೋಠಿ (ಗೋದಾಮು)ಗೆ ಸಾಗಿಸುವ ಕಂತ್ರಾಕ್ಟಿನ ಟೆಂಡರುಗಳು; ಇದರಲ್ಲಿ ಟನ್ ಒಂದರ ಸಾಗಿಸುವ ದರವನ್ನು ತೋರಿಸತಕ್ಕದ್ದು.

ಸ್ಟೀಮರುಗಳಲ್ಲಿ ಬಂದ ಸರಕನ್ನು ಮಂಜಿಗಳಲ್ಲಿ ಇಳಿಸುವ ಮತ್ತು ಸ್ಟೀಮರುಗಳಲ್ಲಿ ಸಾಗಿಸಲು ಮಂಜಿಗಳಲ್ಲಿ ತುಂಬಿ ಬಂದ ಸಾಮಾನನ್ನು ಸ್ಟೀಮರುಗಳಲ್ಲಿ ತುಂಬಿಸುವ ಕಂತ್ರಾಕ್ಟಿನ ಟೆಂಡರುಗಳು: ಈ ಟೆಂಡರುಗಳಲ್ಲಿ ಕೂಲಿಯಾಳುಗಳ ಮಜೂರಿಯ ದರವನ್ನು ಕಾಣಿಸತಕ್ಕದ್ದು.

NOTICE.

Tenders are invited for a Landing Contractor to discharge cargo from this Company's Manjis alongside the wharf. Rate per ton to be quoted in tenders.

Tenders are also invited for a Stevedore Contractor for work on this Company's steamers. Rate per Cooly to be quoted in tenders.

Sealed tenders should reach the undersigned not later than 31st July superscribed "Tender for Landing Contractor" or "Tender for Stevedore Contractor" as the case may be.

Wm. W. FANAKAN,
Agent,
Bombay Steam Navigation, Co.
MANGALORE.

ದಿ. ಕೆನರಾ ಎಂಟರ್‌ಪ್ರೈಜ್, ಲಿಮಿಟೆಡ್.

ಪುತ್ತೂರು ದಕ್ಷಿಣ ಕನ್ನಡಾ.

(1913ನೇ ಇಸವಿಯ ಇಂಡಿಯನ್ ಕಂಪೆನಿಗಳ ಆಕ್ಟಿನನುಸಾರವಾಗಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ.)

ಮೂಲಧನ:—ರೂಪಾಯಿ 200,000—ರೂಪಾಯಿ 25ರ 8,000 ಹಿಸೆಗಳಿಗೆ ವಿಭಾಗಿಸಲ್ಪಟ್ಟಿರುತ್ತದೆ. ಹಿಸೆಗಳನ್ನು ಮನವಿ ಮೂಲಕ ಅಪೇಕ್ಷಿಸಿ ಯಾರೂ ಪಡಕೊಳ್ಳಬಹುದು.

ಮನವಿಯೊಂದಿಗೆ ಪ್ರತಿ ಹಿಸೆಗೆ ರೂಪಾಯಿ 5 ಮತ್ತು ಪ್ರವೇಶಫೀಸು ಆಣೆ 4 ಅಂತು ರೂ. 5—4—0; ಮನವಿ ಅಂಗೀಕರಿಸಿದ ಬಳಿಕ ಕೊಡೋಣಾಗುವ ಎಲ್ಲೋಟ್‌ಮೆಂಟ್ ನೋಟಿಸಿನ ವಾಯಿದೆಗೆ ರೂ. 5 ಕೊಡತಕ್ಕದ್ದು. ಬಾಕಿ ರೂ. 15ನ್ನು ಸರಿಯಾದ 3 ಕಂತುಗಳಿಂದ ಕೇಳಿದ ಹಾಗೆ ಪಾವತಿ ಮಾಡತಕ್ಕದ್ದು. ಆದರೆ ಒಂದು ಕಂತು ಕೇಳಿದ ಬಳಿಕ ಕನಿಷ್ಠಪಕ್ಷಕ್ಕೆ 2 ತಿಂಗಳಲವಧಿಗೆ ಮುಂಚಿತವಾಗಿ ಇನ್ನೊಂದು ಕಂತು ಕೇಳೋಣಾಗಲಿಕ್ಕಿಲ್ಲ.

ಪ್ರೊಸ್ಪೆಕ್ಟಸಿನ ಬದಲಾಗಿ ಜ್ಯೋಂಟ್‌ಸ್ಟಾಕ್ ಕಂಪೆನಿಗಳ ಆಸಿಸ್ಟಾಂಟ್ ರಿಜಿಸ್ಟ್ರಾರರ ಬಳಿ ದಾಖಲು ಮಾಡಿದ ಸ್ಟೇಟ್‌ಮೆಂಟಿನಲ್ಲಿ ಕಾಣಿಸಿದ ಪ್ರಕಾರ ರೂ. 20,000ಕ್ಕೆ ಸರಿಯಾದ 800 ಹಿಸೆಗಳು ಈ ಮೊದಲೇ ಹಂಚಲ್ಪಟ್ಟಿರುತ್ತವೆ.

ಡ್ಯಾರೆಕ್ಟರರು.

1. ಮ| ರಾ| ರಾ| ಉಳ್ಳಾಲ ಸಾಂತಯ್ಯ ಕಿಣಿ, ಅವರ್ಗಳ್. ಒನರರಿ ಬೆಂಚ್ ಮಜಿಸ್ಟ್ರೇಟ್ ವ ಸಾಹುಕಾರ, ಮಂಗಳೂರು.
2. „ ಎಮ್. ನರಸಿಂಹ ಮತ್ತುರ್ಭಂಡಾರಿ, „ ಡಿಸ್ಟ್ರಿಕ್ಟ್ ಬೋರ್ಡ ಮೆಂಬರ್ ವ ಸಾಹುಕಾರ, ಮಂಗಳೂರು.
3. „ ಎಮ್. ಮುಡ್ಲಗಿರಿ ಪಾಂಡುರಂಗ ಪೈ, „ ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ವ ಸಾಹುಕಾರ, ಮಂಗಳೂರು.
4. „ ಎಚ್. ಕೊರಗಪ್ಪ, „ ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ಮತ್ತು ಒನರರಿ ಬೆಂಚ್ ಮೆಜಿಸ್ಟ್ರೇಟ್, ಮಂಗಳೂರು.
5. „ ಮಂಜೇಶ್ವರ ಜನಾರ್ಧನ ಭಟ್, „ ತಾಲೂಕು ಬೋರ್ಡ ಮೆಂಬರ್ ವ ಸಾಹುಕಾರ, ಪುತ್ತೂರು.
6. „ ಎಚ್. ಅನಂತ ಕಾಮತ್, „ ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಪುತ್ತೂರು.
7. „ ಅರಿಯಡ್ಕ ಸುಬ್ಬಯ್ಯಶೆಟ್ಟಿ, „ ವರ್ಗದಾರ, ಅರಿಯಡ್ಕ.
8. „ ಸೊರಕೆ ಎಲಿಯಣ್ಣ, „ ವರ್ಗದಾರ ಮತ್ತು ಸಾಹುಕಾರ, ಪುತ್ತೂರು.
9. „ ಎ. ಗೋವಿಂದ ಶೆಣೈ, „ ಮೆನೇಜಿಂಗ್ ಡೈರೆಕ್ಟರ್, ಪುತ್ತೂರು.

ಬೇಂಕರ್ಸ್.

1. ಮದ್ರಾಸ್ ಬೇಂಕ್ ಮತ್ತು 2. ಕೆನರಾ ಬೇಂಕ್, ಲಿಮಿಟೆಡ್, ಮಂಗಳೂರು.

ಲೀಗಲ್ ಎಡ್ವಾಯಿಸರರು.

1. ಮ| ರಾ| ರಾ| ಎಚ್. ಗಣಪತಿರಾವ್, ಅವರ್ಗಳ್,—ಪ್ಲೀಡರ್, ಪುತ್ತೂರು.
2. „ „ ಎಮ್. ಮಾಧವರಾವ್ „ ಬಿ.ಎ., ಬಿ. ಎಲ್, ಪ್ಲೀಡರ್, ಮಂಗಳೂರು.

ರಿಜಿಸ್ಟ್ರಿ ಮಾಡಲ್ಪಟ್ಟ ಆಫೀಸು.

"ಶ್ರೀ ವರದೇಂದ್ರ ಹೋಟೆಲ್" ಪೋಸ್ಟ್ ಆಫೀಸ್ ಬಳಿ, ಪುತ್ತೂರು.

ಸೂಚನಾ ಪತ್ರ.

ಉದ್ದೇಶಗಳು—(1) ಬೇಂಕಿಂಗ್ ಯಾನೆ ಹಣದ ಲೇವಾದೇವಿ ಮಾಡುವದು. (2) ವ್ಯಾಪಾರದ ದಲಾಲಿ ವ ಏಜನ್ಸಿ ಮಾಡುವದು. (3) ಕೈಗಾರಿಕೆ ಕಸಬುಗಳನ್ನು ಮಾಡುವದು. (4) ವ್ಯಾಪಾರ ಮಾಡುವದು. (5) ಕೃಷಿ ಮಾಡುವದು (ಉಪಯುಕ್ತವಾದ ಕೈಗಾರಿಕೆ ಸಮೇತ). (6) ಲಾಭಕರವೆಂತ ಕಂಡುಬರುವ ಇತರ ಯಾವ ಉದ್ಯೋಗವನ್ನಾದರೂ ಮಾಡುವದು.

(1) ಪುತ್ತೂರಿನಲ್ಲಿ ಒಂದು ಬೇಂಕು ಸ್ಥಾಪಿಸಲ್ಪಡುತ್ತಿದೆ. (2) ಬರುವ ವರ್ಷ ಒಂದು ದಲಾಲಿ ಭಂಡಸಾಲೆ ತೆರಿಯುವ ಆಲೋಚನೆ ಇದೆ. (3) ಹಿಟ್ಟು ತಯಾರಿಸುವ ಕಾರ್ಖಾನೆಯು ಪಶ್ಚಿಮ ಕರಾವಳಿಯಲ್ಲಿ ಬೊಂಬಾಯಿ ವಿನಹಾ ಬೇರೆ ಎಲ್ಲಿಯೂ ಇರುವದಿಲ್ಲ.

ಆದಕಾರಣ ಅಂಥಾದ್ದೊಂದು ಕಾರ್ಖಾನೆಯನ್ನು ಸಧ್ಯದಲ್ಲಿಯೇ ಮಂಗಳೂರಿನಲ್ಲಿ ಸ್ಥಾಪಿಸುವ ಆಲೋಚನೆ ಇದೆ.

ಮಿಕ್ಕ ಉದ್ದೇಶಗಳನ್ನು ನೆರವೇರಿಸುವರೆ ಹೆಚ್ಚು ದ್ರವ್ಯಾನುಕೂಲತೆಯು ಅವಶ್ಯಕವು ಮಾತ್ರವಲ್ಲ, ಅವುಗಳಲ್ಲಿ ಹೆಚ್ಚು ತೊಂದರೆಗಳು ವ ನಷ್ಟ ಸಂಭವ ಕೂಡಾ ಇರಬಹುದಾದ ಕಾರಣ ಅವುಗಳು ಕೆಲವು ವರ್ಷಗಳ ತನಕ ಪ್ರಾರಂಭಿಸಲ್ಪಡಲಾರವು.

ಮುನಾಫೆ.

ಪ್ರಥಮ ವರ್ಷದಲ್ಲಿ ಹೆಚ್ಚಿನ ಸಮಯವು ಹಿಸೆಗಳ ಸಂಪಾದನೆಯಲ್ಲಿಯೇ ಕಳೆದುಹೋಗುವದರಿಂದ ಕಂಪೆನಿಗೆ ಸಾಕಷ್ಟು ಮುನಾಫೆ ಉಳಿಯುವರೆ ಆಸ್ಪದವಿಲ್ಲ. ಪರಂತು ಸಧ್ಯದಲ್ಲಿಯೇ ಪ್ರಾರಂಭಿಸಲಿಕ್ಕಿರುವ ಉದ್ಯೋಗಗಳು (ಅಂದರೆ—ಬೇಂಕು, ಹಿಟ್ಟಿನ ಕಾರ್ಖಾನೆ ಮತ್ತು ದಲಾಲಿ ಭಂಡಸಾಲೆ, ನಷ್ಟಕ್ಕೆ ಎಡೆಯಿಲ್ಲದ ಮುನಾಫೆಯುಳ್ಳ ಮೂಲಿಗಳಾಗಿರುವದರಿಂದ ಬರುವ ವರ್ಷದಲ್ಲಿ ಮುನಾಫೆಯ ಹಣದಿಂದ ಕ್ಷೇಮನಿಧಿಗೋಸ್ಕರ ತಕ್ಕ ಅನುಕೂಲತೆಯನ್ನು ಮಾಡಿಯೂ ಸಾಕಷ್ಟು ಡಿವಿಡೆಂಡು ಹಂಚಲು ಸಾಧ್ಯವಾದೀತೆಂತ ಕಂಪೆನಿಯ ಡ್ಯಾರೆಕ್ಟರರು ಅಭಿಪ್ರಾಯಪಡುತ್ತಾರೆ.

ಹಿಸೆಗಳ ಬಗ್ಗೆ ಮಾಡತಕ್ಕ ಮನವಿ.

ಮನವಿ ಬಗ್ಗೆ ಖಾಸಾ ಫೋರ್ಮುಗಳು ಕ್ರಯ ವಿನಹಾ ಮೇನೆಜಿಂಗ್ ಡ್ಯಾರೆಕ್ಟರರಿಂದ ಒದಗಿಸಲ್ಪಡುವವು. ಮನವಿಗಳು ಫೀಸು ಸಮೇತ ಅವರ ಬಳಿಗೆ ಕಳುಹಿಸಲ್ಪಡತಕ್ಕದ್ದು. ಯಾದಾಸ್ತು ಮತ್ತು ಕ್ರಮಗಳ ಪುಸ್ತಕವನ್ನು ಕಂಪೆನಿಯ ಆಫೀಸಿನಲ್ಲಿ ಕೆಲಸ ಮಾಡುವ ದಿವಸಗಳಲ್ಲಿ ಯಾರೂ ನೋಡಿಕೊಳ್ಳಬಹುದು. ಹಿಸೆಗಳನ್ನು ಪಡಕೊಂಡವರು ಒಂದು ರೂಪಾಯಿ ಕೊಟ್ಟು ಅವುಗಳ ಪ್ರತಿಯನ್ನು ಸಹಾ ಕೊಂಡುಕೊಳ್ಳಬಹುದು. ಮನವಿದಾರರು ಕಂಪೆನಿಯ ಯಾದಾಸ್ತು ಮತ್ತು ಕ್ರಮಗಳನ್ನು ಓದಿನೋಡಿ ಅವುಗಳ ಅರ್ಥವನ್ನು ಸರಿಯಾಗಿ ಮಾಡಿಕೊಂಡಿದ್ದಾರೆಂತ ತಿಳಕೊಳ್ಳೋಣಾಗುವದು.

25 ಹಿಸೆಗಳನ್ನು ಪಡಕೊಂಡ ಮೆಂಬರನು ಡ್ಯಾರೆಕ್ಟರನಾಗಲಿಕ್ಕೆ ಅರ್ಹನಾಗಿರುತ್ತಾನೆ

☞ ಎಲ್ಲಾ ಕಾಗದಪತ್ರಗಳನ್ನು ಮೇನೆಜಿಂಗ್ ಡ್ಯಾರೆಕ್ಟರರ ವಿಳಾಸಕ್ಕೆ ಕಳುಹಿಸಿಕೊಡಬೇಕು.

ಪುತ್ತೂರು,
13—3—1920.

A. GOVINDA SHENOY,
Managing Director.

ಅಪೂರ್ವ ಸಂದರ್ಭ.

ಅಕ್ಕಲ್ಪ ಕಾಲದ ಅಭ್ಯಾಸದಿಂದ ವಿಶೇಷ ಮೂಲಧನವಿಲ್ಲದೇನೇ ಓದುಬಾರದವರಾದರೂ ಕೂಡಾ ಹಳ್ಳಿಗಳಲ್ಲಾದರೂ ಪಟ್ಟಣಗಳಲ್ಲಾದರೂ ಚಲೋ ಜೀವನ ದುಡಿಯಲಿಕ್ಕೆ ಅನುಕೂಲವಾಗುವ ಹೊಲಿಗೆ ವೃತ್ತಿಯ ಎಲ್ಲಾ ತರದ ಶಿಕ್ಷಣವನ್ನು ಆಧುನಿಕ ಶಾಸ್ತ್ರೀಯರೀತ್ಯಾ ಕಲಿಯುವವರಿಗೆ ಅನುಕೂಲವಾದ ಸಮಯ ವ ಸ್ಥಳಗಳಲ್ಲಿ ಸುಲಭ ದರಗಳಲ್ಲಿ ಕಲಿಸುವ ಏರ್ಪಾಡು ನಮ್ಮಲ್ಲಿರುವುದು. ಮಾಹಿತಿ ಪತ್ರಗಳನ್ನಪೇಕ್ಷಿಸುವವರು ನಮ್ಮಲ್ಲಿ ವಿಚಾರಿಸಿದಲ್ಲಿ ಅಥವಾ ಅರ್ಧಾಣೆ ಸ್ಟಾಂಪು ಸಮೇತ ಬರೆದಲ್ಲಿ ಪ್ರಕಟ ಕೊಡುವೆವು.

M. Anantha Prabhu.
The Tailoring House and School of Scientific Tailor's Cutting,
MANGALORE, SOUTH KANARA.

ರೇಷ್ಮೆ ಪಂಚೆ, ಆಟೋಮೋಹಿನಿ ಸೆಂಟ್.

ಈ ನಳ್ಳಿಯಲ್ಲಿ ಕಂಡ ಇಂಕಿ ಆದ್ದದೆ ಬರೆಯುವ ಫೌಂಟನ್ ಪೇನಾ ಇದಕ್ಕೆ ಕ್ಯಾರಟ್ ಭಂಗಾರದ ಮುಳ್ಳು ಹಾಕಿರುತ್ತೆ. ಇದರಿಂದ ಬರೆಯುವದರಿಂದ ಅಕ್ಷರಗಳು ಮುತ್ತುಗಳ ಹಾಗೆ ಬರೆಯುವದು. ಈ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೇಷ್ಮೆ ಪಂಚೆ, ಆಟೋಮೋಹಿನಿ ಸ್ಪ್ರಿಂಗ್ ಇನಾಂ ಸಹಿತ ರೂ. ೧—೪—೦,

C. O. LINGAM & Co,
No. 8. Kumarappa Mudaly Street,
Mint Buildings,
POST: MADRAS.

ಕಾಲಿವಾಹನಶಕ ೧೮೧೪ನೆಯ ರೌದ್ರಿ ಸಂ|ದ ಉತ್ತರಾಯಣಂ ಆಷಾಢ ಬ| ೧ ಶನಿವಾರದಿಂದ ರೌದ್ರಿ ಸಂ| ಆಷಾಢ ಬ| ೮ (ಉತ್ತರಾಯಣಂ) ಶುಕ್ರವಾರದ ವರೆಗಿನ ಪಂಚಾಂಗ.

(೧೯೨೦ನೆಯ ಜೂನ್; ವೃಷಭ ದೇಶ)

ತಾರೀಕು.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೂರ್ಯಸ್ಪಷ್ಟ	ಸೂರ್ಯ ಉ.	ಸೂರ್ಯ ಅಸ್ತ.
						ಡಿ.		
10	ಶನಿ	೯	೩೬.೪೫	ಅಶ್ವಿನಿ	೨೮.೪೬	೨೬	6·12	7· 0
11	ರವಿ	೧೦	೨೨.೧೪	ಭರಣಿ	೨೫.೧೪	೨೭	6·12	7· 0
12	ಸೋಮ	೧೧	೧೬.೪೬	ಕೃತ್ತಿಕಾ	೨೧.೪೪	೨೮	6·12	7· 0
13	ಕುಜ	೧೨	೧೦.೫೮	ರೋಹಿಣಿ	೧೮.೨	೨೯	6·12	7· 0
14	ಬುಧ	೧೩	೪.೫೦	ಮೃಗಶಿರಾ	೧೩.೪೪	೩೦	6·12	7· 0
15	ಗುರು		೫೭.೪೬	ಆರ್ದ್ರಾ	೯.೪೫	೩೧	6·13	7· 0
16	ಶುಕ್ರ	೧	೪೭.೧೪	ಪುನರ್ವಸು	೫.೪೬	೧	6·13	7· 0

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಮೇ)

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚು	Minimum ಕಡಿಮೆ	Rainfall. ಮಳೆ ದಿನದ ಮಳೆ	ಎಪ್ರಿಲ್ ನಿಂದ
2	84—6	72—5	1—85	...
3	83—6	71—6	2—59	...
4	81—8	74—3	1—38	...
ಮಾಧವ ಬಿಲ್ಡಿಂಗ್ಸ್ ಸಮೀಪ
ಎ. ಸಿ. ಅಂದ್ರಾದೆ,
ಪ್ರೊಪ್ರೈಟರ್

ಮಳೆಜ್ವರ.

ಮಲೆಜ್ವರಹಾರಿ.

ಮಲಜ್ವರ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಪರಿಹಾರ ಬೆಲೆ ಆ ೧೨

ವಿಷಮಯವಾದ ಪದಾರ್ಥಗಳು ಒಂದು ರೋಗನಿವಾರಣೆಗೆ ಸಹಕಾರಿಯಾದರೂ ಇನ್ನೊಂದು ರೋಗಕ್ಕೆ ಎಡೆಕೊಡುತ್ತವ ಅಂಥ ವಿಷಮಯವಾದ ಪದಾರ್ಥಗಳು ಇದರಲ್ಲಿ ಲವಮಾತ್ರವೂ ಇಲ್ಲ

ಹಿಂದುಸ್ಥಾನ ಬರ್ಮಾ ಸಿಂಹಳ ಮುಂತಾದ ಪ್ರದೇಶಗಳ ಬೇರೆ ಬೇರೆ ಕಡೆಗಳಿಂದಲೂ ಕಳೆದ ೨೦ ವರ್ಷಗಳಲ್ಲಿ ಅಸಂಖ್ಯಾತವಾದ ಶಿಫಾರಸು ಪತ್ರಗಳು ಜಮೆಗೆಬಂದಿವೆ

ಪುನೆಯ ಕೃಷಿಕಾಲೇಜಿನ ಅಧ್ಯಾಪಕರಾದ ಡಾ। ಮೆನ್‌ಸಾಹೇಬರು ಈ ರೀತಿಯಾಗಿ ಬರೆದಿರುತ್ತಾರೆ —"ಬೇರೆ ಬೇರೆ ವಿಧದ ಜ್ವರಗಳ ಸಂದರ್ಭದಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ ಅದರಿಂದ ಕ್ಷಿಪ್ರದಲ್ಲಿ ಗುಣಕಂಡಿತು"

ನಮ್ಮ ಏಜಂಟರು ಈ ವರೆಗೆ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು ಕಮ್ಮಿಶನ್ ಮುಂತಾದ ಕರಾರುಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು

ಕರ್ಣಾಟಕ ಬ್ರದರ್ಸ್,
56 ಗಿರಗಾಂವ, ಮುಂಬಯಿ

Agent

The Woollen Mart, *Mangalore*

ಲೂಯಿಸರ ಎಲಿಕ್ಸಿರ್ ಫೊರ್ ಹೆಲ್ತ್.

ಎಂಬುವ ಪಾನಕವು ಚಾ ಮತ್ತು ಕಾಫಿಗಳಿಗಿಂತ ಅತ್ಯಂತ ಹಿತಕರವಾದ ಪಾನವಾಗಿದ್ದು ಒಹುಮೂತ್ರಪೀಡೆ ಬಾರದಂತೆ ಆರೋಗ್ಯ ಕಾಪಾಡುತ್ತದೆ ಬಾಯಾರಿಕೆ ತಗ್ಗಿಸುತ್ತದೆ ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ ಒಮ್ಮೆ ಉಪಯೋಗಿಸಿದರ ಮತ್ತೆ ಇದನ್ನು ಬಿಡರು ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ

೨ ಔನ್ಸಿನ ಸೀಸೆಗೆ ಕ್ರಯ ರೂ 1—4—0 ಮಾತ್ರ

ಡಾಯಬೆಟೋನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ ಪೂರ್ಣ ಗುಣಮಾಡುತ್ತದೆ ರೋಗಿಗಳಿಗೆ ಅಮೃತಪ್ರಾಯವಾಗಿದೆ 8 ಔನ್ಸಿನ ಸೀಸೆಗ ರೂ 2 ಮಾತ್ರ ಪಥ್ಯಕಾಪಾಡಲು ಪಟ್ಟಿ ಇದರಲ್ಲಿ ಸೇರಿಲ್ಲ ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವುವು

P. M. Kamath & Co.

Chemists & General Merchants,
New Court Road, MANGALORE

ಅಥವಾ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಮಿ। ಕೆ. ಆರ್. ಲೂವಿಸರನ್ನು ವಿಚಾರಿಸಿದರೆ ಈ ಔಷಧವನ್ನುಹೊಂದಬಹುದು

ತಿರುಚಿ ಸುಗಂಧನಿಧಿ ಕಾರಖಾನೆ

ಅನೇಕ ನಮೂನೆಯ ವಿಶಾ ಅಂಬರ್, ಜವ್ವಾಜಿ, ಪುನಗು, ಕಸ್ತೂರಿ, ಊದುಬತ್ತಿಗಳು, ಬತ್ತಿಗಳು, ಅರಗಜ, ಪಿತ್ಲಾ, ಅತ್ತರುಗಳು ಸೆಂಟ್ಸ್‌ಗಳ ಭೃಂಗಾಮಲಕ ತೈಲ, ಕುಂತಳವರ್ಧಿನಿ ತೈಲ, ಇವ ಮೊದಲಾದ ಸುಗಂಧ ದ್ರವ್ಯಗಳು ನಮ್ಮಲ್ಲಿ ತಯಾರಾಗಿ ವಿಕರಿಯಾಗುತ್ತ ಮೈಸೂರು, ಮದರಾಸು ಬೊಂಬಾಯಿ ಕಲ್ಕತ್ತಾ, ಡಿಲ್ಲಿ, ಪಂಜಾಬು ಮುಂತಾದ ಇಂಡಿಯಾ ದೇಶದಲ್ಲಿ ಮತ್ತು ಬರ್ಮಾ, ಸಿಲೋನ್, ಜಪಾನ್ ಮುಂತಾದ ದ್ವೀಪಾಂತರಗಳಲ್ಲೂ ನಮ್ಮ ತಯಾರಿಯ ಸುಗಂಧದ್ರವ್ಯಗಳು ಪ್ರಖ್ಯಾತಿ ಹೊಂದಿವೆ ಒಂದಾವರ್ತಿ ನಮ್ಮ ಪದಾರ್ಥಗಳನ್ನು ತರಿಸಿನೋಡಿದರೆ ಅವುಗಳ ಗುಣಗಳು ತಿಳಿಯಬರುತ್ತ

ರಖಂವಾರ್ ಊದುಬತ್ತಿಗಳು ೨೪ ರೂಪಾಯಿ ತೂಕವುಳ್ಳದ್ದು ಶೇರು ೧ಕ್ಕೆ

ಊದುಬತ್ತಿಗಳು			
ಸುಗಂಧ ಕಳಾನಿಧಿ ಬತ್ತಿ ಶೇರು 1ಕ್ಕೆ			12—0—0
ಕುಸುಮಗಂಧವಲ್ಲಿನಿ	„	„	8—0—0
ಪುಷ್ಪವಲ್ಲಿ ಸಿನಿ	„	„	6—0—0
ನಂಬರ್ ೧ ಅಂಬರ್	„	„	5—0—0
„ ೨ ಅಂಬರ್	„	„	3—0—0
„ ೩ ಅಂಬರ್	„	„	2—0—0
1ನೇ ಅಮ್ರಿತ ಬತ್ತಿ	„	„	6—0—0
2ನೇ „	„	„	4—0—0
1ನೇ ಕಸ್ತೂರಿ ಬತ್ತಿ	„	„	3—0—0
2ನೇ „	„	„	2—0—0
1ನೇ ಪುನಗು ಬತ್ತಿ	„	„	1—8—0
2ನೇ „	„	„	1—0—0

ಅವ್ವಲ್ ಹಶೀಬಿಲ್ಲೆಗಳು

	1 ತೊಲ	½ ತೊಲ	¼ ತೊಲ
1ನೇ ನಂಬರ್	1 0 0	0 8 0	0 4 0
2ನೇ „	0 8 0	0 4 0	0 2 0

ಜವ್ವಾಜಿಗಂಧ ಅಥವಾ ಅರಗಜ

ಅವ್ವಲ್ 1ನೇ ನಂಬರ ತೊಲ 1ಕ್ಕೆ		2—0—0
„ 2ನೇ „		1—0—0

ಪುದುಕೋಟೆ ಕಸ್ತೂರಿ ಬಿಲ್ಲೆಗಳು

	1 ತೊಲೆ	½ ತೊಲ	¼ ತೊಲೆ
1ನೇ ನಂಬರ್	2 0 0	1 0 0	0-8 0
2ನೇ „	1-0 0	0 8 0	0 4-0

ಉತ್ತಮವಾದ ದಶಾಂಗ ಶೇರು 1ಕ್ಕೆ ರೂ 1

ತಲೆಗೆ ಹಚ್ಚುವ ಕುಂತಳವರ್ಧಿನಿ ತೈಲ ಸೀಸೆ 1ಕ್ಕೆ ರೂ 1

ಸ್ನಾನಕ್ಕೆ ಉಪಯೋಗಿಸುವ ಭೃಂಗಾಮಲಕ ತೈಲ ಸೀಸೆ 1ಕ್ಕೆ 1—0—0

ಎಲ್ಲಾ ಸಾಮಾನುಗಳಿಗೆ ಟಪ್ಪಾಲು ಚಾರ್ಜು ಬೇರೆ ಬೇಕು ವ್ಯಾಪಾರಿಗಳಿಗೆ ಕಮಿಶನ್ ಕೊಡಲಾಗುವದು ಬೇಕಾದ ಸಾಮಾನುಗಳ ಹೆಸರು ನಂಬರು, ಬರೆದರೆ ಅದರಂತೆ ನೋಡಿ ರವಾನಿಸುವೆವು ನಮ್ಮ ರೇಟು ಬಹಳ ಉಚಿತವಾಗಿ ರವಾನಿಸುವೆವು ನಮಗೆ ಕಾಗದ ಬರೆಯತಕ್ಕವರು ತಮ್ಮ ಹೆಸರು, ಗ್ರಾಮ, ಪೋಷ್ಟು, ಜಿಲ್ಲೆ ಸ್ಪಷ್ಟವಾಗಿ ಬರೆಯಬೇಕು

Sugandhanidhi Office,
Melepudur, Trichinopoly.

ನಮ್ಮ ವಿಳಾಸ—ತಿರುಚಿ ಸುಗಂಧನಿಧಿ ಕಾರಖಾನೆ,
ಮೇಲಪುದೂರು, ತಿರುಚಿನಾಪಳ್ಳಿ.

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ.

ಪ್ಲೇಗ್, ಕೊಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ.

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುತವೆ. ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೆಟ್ಟಿಗೆ ರೂ. 2—2—0 | ಕೊಲೇರಾ ಔಷಧದ ದೊಡ್ಡ ಸೆಟ್ಟಿಗೆ ರೂ 1—2—0
" ಸಣ್ಣ " " 1—6—0 | " ಸಣ್ಣ " " 0 12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸೆಟ್ಟಿಗೆ ರೂ 1—12—0

(ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪಾಲು ಕೂಲಿ ಮತ್ತು ಪೇಕಿಂಗ್ ಪ್ರತ್ಯೇಕ.

ವಿಳಾಸ.— ಮೆನೇಜರ್, ಆಯುರ್ವೇದಾಶ್ರಮ,

ತಂತಿ ವಿಳಾಸ.— 55 ಆಚಾರಪ್ಪನ ಬೀದಿ,
ಪಂಡಿತ್, ಮದರಾಸ್ ಜೋರ್ಜ್‌ಟೌನ್, ಮದರಾಸ್

ಶಾಲಿವಾಹನಶಕ ೧೮೪೦ನೆಯ ರೌದ್ರಿ ಸಂದ ದಕ್ಷಿಣಾಯನಂ ಆ. ಶ್ರಾ. ಶು. ೯ ಶನಿವಾರದಿಂದ ರೌದ್ರಿ ಸಂ. ಆ. ಶ್ರಾ. ಶು. ೧೪ (ದಕ್ಷಿಣಾಯನಂ) ಶುಕ್ರವಾರದವರೆಗಿನ ಪಂಚಾಂಗ.

(೧೯೨೦ ನೆಯ ಜುಲಾಯಿ ಕರ್ಕಾಟಕ)

							ಸೂರ್ಯ	
							ಉ.	ಅಸ್ತ.
24	ಶನಿ	೯	[illegible]	ಸ್ವಾತಿ	[illegible]	೯	6-15	6 59
25	ರವಿ	೧೦	೩೭. ೨	ವಿಶಾಖಾ	[illegible]	೧೦	6-16	6.59
26	ಸೋಮ	೧೧	೪೧ ೧೪	ಅನುರಾಧಾ	[illegible] ೧೪	೧೧	6-16	6.58
27	ಕುಜ	೧೨	೪೭. ೫	ಜ್ಯೇಷ್ಠಾ	೧೮ ೩೨	೧೨	6 16	6 58
28	ಬುಧ	೧೩	೫೧. ೩	ಮೂಲಾ	೨೫ ೦	೧೩	6 16	6 58
29	ಗುರು	೧೪	೫೫ ೨೮	ಪೂ ಷ	೩೧. ೧೬	೧೪	6-17	6 57
30	ಶುಕ್ರ	○	೫೯ ೩೨	ಉ ಷ	೩೭. ೫	೧೫	6-17	6.57

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಜುಲಾಯಿ)

Date ತಾರೀಕು	Temperature ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall ಮಳೆ ದಿನದ ಮಳೆ	ಎಪ್ರಿಲ್ ೧ರಿಂದ
16	86—3	75—2	0—58	...
17	88—3	75—1	0—68	...
18	87—2	74—7	0—22	...
19	85—5	75—7	0—89	
20	85—8	75—1	0—64	
21	86—9	75—1	0—49	—
22	85—9	77—9	2—21	—

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಹಿಂದುಸ್ಥಾನದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳತು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—5—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—1
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ [illegible]

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು [illegible] 4 [illegible]

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ)—ಲಕ್ಷಾವಧಿ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯ [illegible] ಪ್ಲೇಗಿಗೆ [illegible] ಬೇರೊಂದಿಲ್ಲವೆಂದು ನಾವು ಹೇಳುವೆವು [illegible] ಸೀಸೆಗೆ ರೂ 1—8 ಒಂದು ಆಣೆ

ಶ್ರೀನಿವಾಸತೈಲ—ಪ್ಲೇಗಿನ ಗಡ್ಡೆ [illegible] ಸೀಸೆಗೆ [illegible] ಒಂದು ಆಣೆ

ವೈಶ್ವಾನರಾಸವ—ಸೇವಿಸಿದ ಮೊದಲನೇ ದಿವಸದಿಂದಲೇ ವಾಂತಿಭೇದಿ, [illegible] ಭೇದಿಗಳು ಗುಣವಾಗುತ್ತಾ ಬರುತ್ತವೆ ಸೀಸೆಗೆ ರೂ 1 ಒಂದು ಆಣೆ

ಬಾಲಸುಧೋದಯ—ಮಕ್ಕಳಿಗೆ ಬಲಹೀನ, [illegible] ಮಂದ, ಮಲಬದ್ಧ, ಅಜೀರ್ಣ, ಭೇದಿ, ಕೃಶತ್ವ, ಹೊಟ್ಟೆ [illegible] ಸೀಸೆಗೆ ಆಣೆ 12 ಒಂದು ಆಣೆ ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ. ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ	ರೂ. ಆ
ಮುಡಿ ಅಕ್ಕಿಮುಡಿ ಒಕ್ಕೆ	8— 8	9— 4
ಗುಡ್ಡು " "	8— 4	8— 8
ರಾಶಿ ಮುಡಿ ಒಕ್ಕೆ	8— 0	8— 4
ಅವ್ವಲ್ ಬೆಳ್ತಿಗೆ "	10— 4	10— 8
ಗುಡ್ಡು ಬೆಳ್ತಿಗೆ "	9— 0	9— 4
ರಂಗೂನ ಬೆಳ್ತಿಗೆ ಗೋಣಿ ಒಕ್ಕೆ	1?— 8	16— 0
ಗೋದಿ ಗೋಣಿ ಒಕ್ಕೆ	25— 0	2?— 8
ಹುರಳಿ ಗೋಣಿ ಒಕ್ಕೆ	13— 8	14— 0
ತಡಲೆ ಗೋಣಿ ಒಕ್ಕೆ	10— 0	16— 0
ಅಗರಿ ಗೋಣಿ ಒಕ್ಕೆ	—	20— 0
ತೊಗರಿಬೇಳೆ ಗೋಣಿ ಒಕ್ಕೆ	31— 0	34— 0
ಉದ್ದು ಗೋಣಿ ಒಕ್ಕೆ	18— 8	19— 8
ಹೆಸರು ಗೋಣಿ ಒಕ್ಕೆ	18— 0	18— 8
ಊರು ಬೆಲ್ಲ ಖಂಡಿ ಒಕ್ಕೆ	105— 0	110— 0
ಉಪ್ಪು ಗೋಣಿ ಒಕ್ಕೆ	4—12	9— 6
ಕೊಬ್ರಿ ಖಂಡಿ ಒಕ್ಕೆ	115— 0	125— 0
ಕೊಬ್ರಿ ಹಿಂಡಿ ಖಂಡಿ ಒಕ್ಕೆ	37— 0	37— 8
ಎಳ್ಳಿಂಡಿ ಖಂಡಿ ಒಕ್ಕೆ	59— 0	
ಕೊಬ್ರಿ ಎಣ್ಣೆ ಮಣ ಒಕ್ಕೆ	10— 4	11— 8
ಎಳ್ಳೆಣ್ಣೆ ಮಣ ಒಕ್ಕೆ	11— 0	11— 4
ಚಿಮಿಣಿಎಣ್ಣೆ ಪೆಟ್ಟಿಗೆ ಒಕ್ಕೆ	9— 4	9— 6
ಮೋರಿಸ ಸಕ್ಕರೆ ಮಣ ಒಕ್ಕೆ	12— 8	13— 8
ಊರ ಮೆಣಸಿನ ಕಾಯಿ ಮಣ ಒಕ್ಕೆ	8— 8	9— 8
ಸಾಸಿವೆ ಮುಡಿ ಒಕ್ಕೆ	10— 0	10— 8
ಕೊತ್ತಂಬರಿ ಮುಡಿ ಒಕ್ಕೆ	5— 0	
ಕಾಫಿ ಖಂಡಿ ಒಕ್ಕೆ	245— 0	255— 0
ಬಿಳಿಗೋಟು ಅಡಿಕೆ ಖಂಡಿ ಒಕ್ಕೆ	105— 0	110— 0
ಹಳೆ ಬೆಳಗೋಟು	95— 0	100— 0
ಕಾಳುಮೆಣಸು ಖಂಡಿ ಒಕ್ಕೆ	150— 0	155— 0
ಯಾಲಕ್ಕಿ ಮಣ ಒಕ್ಕೆ	25— 0	30— 0
ಗೇರುಬೀಜ ಮುಡಿ ಒಕ್ಕೆ	3—11	3—12
ಕಪ್ಪಿನ ಖಂಡಿ ಒಕ್ಕೆ	100— 0	120— 0
ಹಾಂಟ್ರಿ ತಗಡು ಮಣ ಒಕ್ಕೆ	24— 4	25— 0
ಹಾಂಟ್ರಿ ಪಾತ್ರೆಗಳು ಮಣ ಒಕ್ಕೆ	32— 0	34— 0
ಚೀನಿ ಬೆಲ್ಲ ಸೇರು ಒಕ್ಕೆ	31— 8	
ಹಿತ್ತಾಳೆ ತಗಡು ಮಣ ಒಕ್ಕೆ	24— 0	25— 0

ಒಂದು ಕುಪ್ಪಿಯ ಕ್ರಯ ೧೨ ಆಣೆ. ಮಂಗಳೂರು ಏಜಂಟ್,

ಕೇ. ಟೀ. ಡೋಂಗರೆ ಕಂಪೆನಿ, ದಿ. ಉಲನ್‌ಮಾರ್ಟ್, ಮಂಗಳೂರು

ಗಿರಗಾಂ ಮುಂಬಯಿ

[illegible]

... ಅಂದು ಪ್ರಶ್ನೆ ... ದೊರೆತಂತಾಗಿ ... ಒಂ ... ಸಂಪೂರ್ಣ ... ಮಾಡಲು ಸಾಧ್ಯವಾಗಲಿಲ್ಲ, ... ಆಹಾರ ಸರಿಯಾಗಿ ... ಅಗಿದ್ದಾರರು, ಜರ್ಮ ... ಮಿತ್ರಪಕ್ಷದವರು ಹೇಳ ... ಕಲ್ಪಿಸ್ಪಲ್ಪು ಶರ್ತಗಳಿಗೆ ... ನಡೆಸಿದರೆ ತಾವು ಒಪ್ಪಿ ... ವರಿಗೆ ನಮ್ಮ ಮಾತನ್ನು ... ಜರ್ಮನ ಪ್ರತಿನಿಧಿಗಳು ವಾದಿಸಿದರು ... ಮಾತನ್ನು ಅಲ್ಲಗಳೆಯುವ ... ಪ್ರದೇಶವನ್ನು ಬಿಡಬೇಕಾದೀತು ಎಂದು ... ಪುನಃ ಆಲೋಚನೆ ಮಾಡುವುದಾಗಿ ತಿಳಿ ... ಕಾಲುಹಿಡಿಗಿದರೆ ಕೊಡಲೇ ... ಮಿತ್ರಪಕ್ಷದ ಪ್ರಭುಬ ... ಹೀಗಾದ್ದರಿಂದ ಜರ್ಮನರು ಹೇಳಿದ್ದಕ್ಕೆ ... ಹಿಂತೆಗೆದರು.

... ಪೋಲೆಂಡದವರು ಬೋಲಶೆವಿಕರ ಪೆಟ್ಟು ತಾಳದೆ ಬಹಳ ಹಿಂದೆ ಸರಿಯ ... ಈಗ ಬ್ರಿಟಿಷರು ಯುದ್ಧ ನಿಲ್ಲಿಸಿ ಇತ್ತಟ್ಟಿನ ಚರ್ಚೆಗಳನ್ನು ಮಿತ್ರಪಕ್ಷದವರ ... ಬಿಟ್ಟುಕೊಡಬೇಕೆಂದು ತಿಳಿಸಿದ್ದಲ್ಲದೆ ಪೋಲಿಂಡ ... ತವರು ... ಅಂಕವನ್ನು ಬಿಟ್ಟು ತಮ್ಮ ಗಡಿಯೊಳಗೆ ನಿಲ್ಲಬೇ ... ವಾಗುವವರೆಗೆ ಪುನಃ ಯುದ್ಧಕ್ಕೆ ಬೋಲಶೆವಿಕರು ... ಮಿತ್ರಪಕ್ಷದವರು ಪೋಲೆಂಡಕ್ಕೆ ಸಹಾಯ ಮಾಡುವರೆಂದೂ ತಿಳಿಸಿದ್ದಾರೆ. ... ದುರಾಶೆಗೆ ತಕ್ಕ ಶಾಸ್ತಿಯಾಯಿತನ್ನಬೇಕು ... ಸ್ವಾತಂತ್ರ್ಯವನ್ನು ... ರಾಜ್ಯ ವಿಸ್ತಾರದ ... ಪೋಲೆಂಡಕ್ಕೆ ಹತ್ತಿತು ... ರುಕ್ಕವು ಅನಾಯಕವಾಗದ ಎಂದು ಹಿಗ್ಗಿ ... ಅದರ ಮೇಲೆ ಚಾಚಿ ಬೋಲಶೆವಿಕ ರಿಂದ ... ಕೊಂಡಿತು.

"ಲೀಗ್ ಒಫ್ ನೇಶನ್ಸ್" ಸ್ಥಾಪನೆಯಾದೊಡನೆ ಲೋಕದ ಶಾಂತಿಗೆ ... ಎಂದು ಅದರ ಸ್ಥಾಪಕರು ಲೋಕಕ್ಕೆಲ್ಲ ತಿಳಿಸಿ ದರು. ಆದರೆ ಲೋಕವು ... ನೀತಿಯ ಸೂತ್ರಗಳಿಂದಲೇ ... ಯುವ ದಿಲ್ಲ. ... ಮುಂದರಿಸುವವರು ವಿರೋಧಗಳಿಗೆ ಶಿಕ್ಷೆ ಮಾಡುವ ಸಾಮರ್ಥ್ಯವುಳ್ಳವರಾಗಲೂ ಬೇಕು. ಅಂಥಾ ಬಲವು ಈ ಲೀಗಿಗೆ ಇದೆಯೇ ಎಂದು ಹಲವು ರಾಜ್ಯಜ್ಞರು ಆಗಾಗ ಪ್ರಶ್ನಿಸುತ್ತಿದ್ದರು. ಅಂತು 'ಲೀಗ್ ಒಫ್ ನೇಶನ್ಸ'ನ ಪ್ರಶ್ನವು ... ಈಗಲೇ ಬೋಲಶೆವಿಕರು ಪರ್ಶಿಯಕ್ಕೆ ... ಆಯಿತು. ಪರ್ಶಿಯದಲ್ಲಿ ... ಯುವರು ... ಯುದ್ಧಕಾಲದಲ್ಲಿ ಬ್ರಿಟಿಷರು ಪರ್ಶಿಯದ ಅಧಿಕಾರ ಸೂತ್ರಗಳನ್ನು ... ಅಲ್ಲಿಂದ ಬಾಕೂ ವರೆಗೆ ಸೈನ್ಯ ಇಟ್ಟಿದ್ದರು. ಆದರೆ ಅಲ್ಲಿಯು ಜನರು ಕಡೆಗೆ ... ಚಿಂತನೆ ಮಾಡಿದ ಕಾರಣ ಬ್ರಿಟಿಷ್ ಸೈನ್ಯವು ಪುನಃ ಪರ್ಶಿಯಕ್ಕೇನೆ ಬಂದಿತು. ಈಗ ಬೋಲ ಶೆವಿಕರು ಕಸ್ಪಿಯನ್ ಸಮುದ್ರದಲ್ಲಿದ್ದ ನೌಕಾಪಡೆಯನ್ನು ಹಿಡಿದು ಎಂಜೆಲಿ ಎಂಬಲ್ಲಿ (ಪರ್ಶಿಯದ ...) ಸೈನ್ಯ ಇಳಿಸಿದರು. ಆದ್ದರಿಂದಾಗಿ ಪರ್ಶಿ ಯದವರು "ಲೀಗ್ ಒಫ್ ನೇಶನ್ಸ"ಗೆ ಮೊರೆ ಇಟ್ಟರು. "ನೀವು ಮಾಡಿದ್ದು ಚೆನ್ನಾಯಿತು. ಲೀಗ್ ಒಫ್ ನೇಶನ್ಸ'ನ ಮೇಲೆ ನೀವು ಭರವಸೆ ಇಟ್ಟ ಕಾರಣ ... ಕೊಡುವ ನಮ್ಮ ಧರ್ಮವನ್ನು ನಾವು ಪರಿಪಾಲಿಸುವೆವು" ಎಂದು ಈ ಕೂಟದವರು ಪರ್ಶಿಯಕ್ಕೆ ಬೆನ್ನು ತಟ್ಟು ವುದೇ ಅಲ್ಲದೆ ವಾಸ್ತವ್ಯದ ನಿದರ್ಶನಗಳು ಮಾತ್ರ ಕಾಣದಿಲ್ಲ. ತಮ್ಮ ಮಾನವನ್ನು ... ಕೊಟದವರು ... ಕೊಳ್ಳುತಿದ್ದಾರೆ.

ಬೋಲಶೆವಿಕರಲ್ಲಿ ದಳವಾಯಿತನದ ಸಾಮರ್ಥ್ಯದೊಂದಿಗೆ ರಾಜ ಕೀಯ ಕೌಶಲವು ನಾಕಷ್ಟು ಇದೆ ಎಂದು ಸ್ಪಷ್ಟವಾಗುತಿದೆ. ಬೋಲಶೆವಿಕರು ನೀಚರು, ಅಧರ್ಮಿಗಳು, ಸಾಲೆ ಮುಕ್ಕುವವರು ಎಂದು ಕಂಠಾಬಟ್ಟೆಯಾಗಿ ಮಿತ್ರಪಕ್ಷದ ಮುಖಂಡರೆಲ್ಲರೂ ಅವರನ್ನು ಈಗ ಒಂದೆರಡು ವರ್ಷಗಳಿಂದ ... ಅಂದು ಬಗೆಯಲ್ಲಿ ಬಹಿಷ್ಕಾರವಿಟ್ಟಿದ್ದಾರೆ. ಅಂಥ ವರಲ್ಲಿ ಯಥೇಷ್ಟ ಧಾನ್ಯಕೋಶಾದಿಗಳು ಇವೆ, ಅವು ಮಿತ್ರಪಕ್ಷದವರಿಗೆ ಅಗತ್ಯವಿದೆ ಎಂದು ತಿಳಿದು ಅವನ್ನು ಮಿತ್ರಪಕ್ಷದವರಿಗೆ ಕೊಡುತ್ತೇವೆಂದೂ ಅದಕ್ಕೆ ಬದಲಾಗಿ ತಮಗೆ ಬದಲಾಗಿ ಬೇಕಾದ ಸಾಹಿತ್ಯಗಳನ್ನು ಮಿತ್ರಪಕ್ಷ ದವರು ಒದಗಿಸಬೇಕೆಂದೂ ಈ ರೀತಿ ವ್ಯಾಪಾರ ವಹಿವಾಟುಗಳ ಚಲಾವಣೆ ... ಪ್ರಸ್ತಾಪಿಸುವುದಕ್ಕೆ ಬೋಲಶೆವಿಕರು ತಮ್ಮ ಪ್ರತಿನಿಧಿ ಯನ್ನು ಕಳುಹಿಸುತ್ತೇವೆಂದು ಪ್ರಕಟಿಸಿದರು. ಅಂಥಾ ಚಲಾವಣೆ ... ಅಗತ್ಯವಿಲ್ಲ ... ಅವರಿಗೆ ... ಮಿತ್ರಪಕ್ಷದವರಿಂದ ರುಶ್ಯದ ಸರ ಕಾರವು ಹಿಂದೆ ಪಡೆದ ಸಾಲವನ್ನು ಬೋಲಶೆವಿಕರು ತೆರಲು ನಿರಾಕರಿಸುತ್ತಾರೆ, ಆ ಸಾಲದ ಜವಾಬ್ದಾರಿ ವಹಿಸಿಕೊಂಡರೆ ಮಾತ್ರವೇ ಅವರು ಮಾಡಿದ ... ಎಂದು ಮಿತ್ರಪಕ್ಷ ದವರು ... ಹೇಳಿದರು. ಆದರೆ ಬಾಯಾಂದ ಕಾಲದಲ್ಲಿ ... ಅಂತರ್ಯದಲ್ಲಿ ... ರುಶ್ಯ ಸರಕಾರದವರು ಪಡೆಕೊಂಡ ಸಾಲವನ್ನು ನಾವು ತೆರ ... ಸರಕಾರದವರೊಡನೆ ಯುದ್ಧಕಾಲದಲ್ಲಿ ... ಭಾಷೆಯ ... ಮುಂಚಾದ ... ಅಂಶಗಳನ್ನು ... ನಾವು ಕೇಳಬೇಕಾದೀತು ಎಂದು ಬೋಲ ... ಮಿತ್ರಪಕ್ಷದವರು ಮೆಲ್ಲನೆ ... ಸಹಾಯ ಮಾಡು ... ಪರ್ಶಿಯಕ್ಕೆ ಸೈನ್ಯ ... ಬ್ರಿಟಿಷರು ಅಧಿಕಾರಸೂತ್ರ

[illegible] ... ಸಹಾಯ ಮಾಡಿದ್ದರಿಂದ ಹೀಗೆ ಬೋಲಶೆವಿಕರ ... ಅವರು ಹೇಳಿದ ವಿಷಯವನ್ನು ... ಅವರು ಹೇಳಿಯು ವಸ್ತು ಪೋಲೆಂಡದ ಪ್ರಶ್ನೆಗಳಲ್ಲಿ ಬಿಟ್ಟಂದಕ್ಕೆ ಕಾಲದಾರು ಇಲ್ಲದಾರೆ ಅವರನ್ನು ಎದುರಿಸಲಿಕ್ಕೆ ಮಿತ್ರಪಕ್ಷದವರು ಒಂದು ಕಡೆಗೆ ಪೋಲೆಂಡದಲ್ಲಿಯೂ ಇನ್ನೊಂದು ಕಡೆಗೆ ಪರ್ಶಿಯದಲ್ಲಿಯೂ ಸೈನ್ಯ ಇಟ್ಟು ಬೇಕಾದೀತು. ಜರ್ಮನರ ಸಂಧಿಯು ಜಾರಿಯು ಇನ್ನೂ ಆಗದೆ ಅವರ ಮೇಲೆ ಪುನಃ ಕೈಮಾಡುವ ಅಗತ್ಯ ಬಿದ್ದೀತೋ ಎಂದು ಸಂದೇಹಪಡುತ್ತಿರುವ ಮಿತ್ರಪಕ್ಷದವರಿಗೆ ಈಗ ಪೋಲೆಂಡ ಮತ್ತು ಪರ್ಶಿಯ ಇವನ್ನು ಉದ್ಧರಿಸುವುದು ಸಾಧ್ಯವೆಲ್ಲಿ? ಹೀಗಿರುವಾಗ ಹಿಂದೆ ಹೇಳಿದಂತೆ ಲೀಗ್ ಒಫ್ ನೇಶನ್ಸಿನ ಬೆಂಬಲಕ್ಕೆ ಒಮ್ಮತವಾದ ರಾಜ್ಯಗಳ ಬಲವಾದ ಸೈನ್ಯವಿಲ್ಲದೆ ಇದ್ದಲ್ಲಿ ಈ ಕೂಟದ ಇತ್ಯರ್ಥಗಳು ಅದನ್ನು ಬರೆದ ಕಾಗದದಷ್ಟು ಬೆಲೆ ಬಾಳಲಾರವು. ಜರ್ಮನರು ರುಶ್ಯದ ಬೋಲಶೆವಿಕರಿಗೆ ಹಿಂದೆ ಬೇಗಡೆ ಯಾಗಿ ನಿಂತಿಗ ಬೋಲಶೆವಿಕರ ಯಶಸ್ಸು ಮೆರೆಯುತ್ತ ಬಂದಿದೆ ಎಂದು ಹೇಳಲೂ ಆಧಾರ ಇಲ್ಲ. ಈ ಕಷ್ಟಸಂದರ್ಭದಲ್ಲಿ ತಮ್ಮ ಸೈನ್ಯ ಸಾಕಷ್ಟು ಇದೆ ಎಂದು ಮಿತ್ರಪಕ್ಷದವರು ಕೈ ದುಡುಕುವರೊ ಅಥವಾ ತಾಳ್ಮೆಯಿಂದ ಲೂ ಉದಾರ ಬುದ್ಧಿಯಿಂದಲೂ ಜರ್ಮನ ಮತ್ತು ಬೋಲಶೆವಿಕ ಪ್ರಶ್ನೆ ಗಳನ್ನು ಇತ್ಯರ್ಥಗೊಳಿಸುವರೊ ನೋಡಲಿಕ್ಕೆ ಇದೆ.

ಕ್ರೈಸ್ತಮತದವರಾದ ಅರ್ಮೇನಿಯನರ ರಾಜ್ಯಭಾರ ಮೇಲ್ವಿಚಾರ ಮತ್ತು ಅವರಿಗೆ ತುರ್ಕಿಯಿಂದ ಬರಬಹುದಾದ ಕಂಟಕಯ ನಿವಾರಣೆ ಈ ಕೆಲಸಕ್ಕೆ ಮಿತ್ರಪಕ್ಷದ ಕ್ರೈಸ್ತ ರಾಜ್ಯಗಳಲ್ಲಿ ಪ್ರತಿಯೊಬ್ಬರು ಹಿಂದೆ ಸರಿದರು. ಈ ಭಾರವನ್ನು ದೂರದ ಅಮೇರಿಕಕ್ಕೆ ವಹಿಸಿಕೊಡಲು ಯತ್ನಿಸಿದ್ದಲ್ಲಿ ಅವರೂ ಕಿವಿ ಝಾಡಿಸಿಬಿಟ್ಟರು. ಆದರೆ ಸಾಯ್ರಿಯಾ, ಪೆಲೆಸ್ಟೈನ, ಮೆಸೊಪೊಟೆಮಿಯಾ ಈ ಮುಸಲ್ಮಾನ ರಾಜ್ಯಗಳು ಮುಂದೆ (!) ಆತ್ಮನಿರ್ಣಯದ 'ಸುನ್ನತ್' ಪಡೆದು ಸ್ವತಂತ್ರಾಧಿಕಾರಕ್ಕೆ ಅರ್ಹರಾಗುವ ವರೆಗೆ ಅವರನ್ನು ಪಕ್ಷಪುಟ್ಟಗಳಲ್ಲಿ ಇಟ್ಟುಕೊಳ್ಳುವುದಕ್ಕೆ ಈ ಮಿತ್ರಪಕ್ಷದ ರಾಜ್ಯಗಳಿಗೆ ಲವಲವಿಕೆ ಇದ್ದುದು ತಂಬಾ ಚೋದ್ಯ. ಇರಲಿ ಈ ಅಜ್ಞಾನಾಂಧರು ಮಾತ್ರ ಈ ರೀತಿಯ ಗುಟ್ಟಿಗೆ ಕಾಯುವ ಹಾಗಿಲ್ಲವೆಂಬಂತೆ ತಂತಿ ವರ್ತಮಾನಗಳು ಇವೆ. ಅದ್ದರಿಂದ ಸಾಯ್ರಿಯದಲ್ಲಿ ಅಮೀರ ಫೈಜಲರನ್ನು — ಇವರು ಒಂದು ಕಾಲದಲ್ಲಿ ಮಿತ್ರಪಕ್ಷದ ಪರವು ಗೆಳೆಯರಾಗಿದ್ದರು — ಲೀಗ್ ಒಫ್ ನೇಶನ್ಸಿನ ಇತ್ಯರ್ಥದ ಮೇರೆಗೆ ಫ್ರೆಂಚರ ಮಾರ ಹೊಗಿಸಲಿಕ್ಕೆ ಎಲ ತಾಕಿನ ವಾಯಿದೆ ಕೊಟ್ಟು ಈಗಾಗಲೇ ಫ್ರೆಂಚ ಸೈನ್ಯ ಸರಂಜಾಮು ಆಲೆಪ್ಪೊ ಮತ್ತು ಡಮಸ್ಕಸದ ಕಡೆಗೆ ಮುಂದೊತ್ತಿದೆ. ಅವರನ್ನು ಎದುರಿಸಲಿಕ್ಕೆ ಡಮಸ್ಕಸದಲ್ಲಿ ಬೆದುಇನ್ ನಾಯಕರು ತಯಾರು ನಡೆಸುತಿದ್ದಾರೆ. ಅಷ್ಟು ಅಲ್ಲ, ಮೆಸೊಪೊಟೆಮಿಯದಲ್ಲಿಯೂ ಅಲ್ಲಲ್ಲಿ ಚದುರಿದ ತಂಡಗಳು ರುಮೆಯಲಾ ಎಂಬಲ್ಲಿ ಬ್ರಿಟಿಷರ ಒಂದು ಸೈನ್ಯವನ್ನು ಮುತ್ತಿಕೊಂಡಿವೆ ಎಂತಲೂ ಸ್ವಲ್ಪ ಸೈನ್ಯ ನಷ್ಟವಾಯಿತೆಂತಲೂ ಕೆಲವು ಕಡೆಗಳಲ್ಲಿ ರೈಲ್ವೆ ಬೆಲುವಣಿಗೆ ಕೊಡಕ ಗಳಿವೆ ಎಂತಲೂ ಇವರ ನಿವಾರಣೆಗೆ ಬಾಗ್ದಾದದಿಂದ ಬ್ರಿಟಿಷರ ದೊಡ್ಡ ಸೈನ್ಯವು ಹೊರಟಿದೆ ಎಂತಲೂ ಈ ಫುಂಡರನ್ನು ಅಡಗಿಸ ಪುವು ಕಷ್ಟವಲ್ಲವೆಂತಲೂ ಮಿ! ಚರ್ಚಹಿಲ್ಲರು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ವಿವರಿಸಿದರು. ಈ ಮುಸಲ್ಮಾನ ಜನಾಂಗಗಳು ಅವರ ಉನ್ನತಿಗಾಗಿ ಪೇಚಾಡುವ ಈ ಪಾಶ್ಚಾತ್ಯ ರಾಜ್ಯಗಳಿಗೆ ವಿರೋಧನದಿಂದ ಎದುರಿಸುವುದರಿಂದ ಪುರ ಸಾರ್ಥವೇನು? ತಮ್ಮೊಳಗೆ ಸ್ವಾತಂತ್ರ್ಯರಕ್ಷಣೆ ಮಾಡುವುವೆಂದರೆ ಬಿರಿದ ಬಟ್ಟೆ ಹಕ್ಕುವ ಒಣ ಆಯಾಸವಲ್ಲವೆ?

ಒಳದೇಶ ವರ್ತಮಾನ

ಸ್ಥಾನಿಕ ರಾಜ್ಯಭಾರದ ಸಮ್ಮೇಲನ—ಲೋಕಲ್‌ಫಂಡು ಮತ್ತು ಮ್ಯುನ್ಸಿಪಲ್ ಆಡಳಿತೆಯಲ್ಲಿ ಇರುವ ಕೆಲವು ಅಡಚಣೆಗಳನ್ನು ಮುಖ್ಯವಾಗಿ ಬಂಧಿಯ ಅಡಚಣೆಗಳನ್ನು ಚರ್ಚಿಸುವ ಸಂಬಂಧವಾಗಿ ಮದ್ರಾಸಿನ ಗವರ್ನರ್ ಸಾಹೇಬರವರು ಒಂದು ಸಮ್ಮೇಲನವನ್ನು ಇದೇ ೧೭ನೇ ತಾರೀಕಿಗೆ ಮದ್ರಾಸಿನಲ್ಲಿ ಜರಗಿಸಿದರು. ನಮ್ಮ ಜಿಲ್ಲೆಯಿಂದ ಇದಕ್ಕೆ ರಾವ್ ಬಹದ್ದೂರ್ ಸುಬ್ಬರಾವ್, ಮ| ರಾ| ರಾ| ಬಿ ವಿ ಬಾಬಲ ಹೆಗ್ಗಡೆ, ಖಾನ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬ ಬಹದ್ದೂರರು ಆಮಂತ್ರಿತರಾಗಿದ್ದರು. ಇದೇ ರೀತಿಯಲ್ಲಿ ಇತರ ಲೋಕಲ ಮತ್ತು ಮ್ಯುನ್ಸಿಪಲ್ ಪ್ರತಿನಿಧಿಗಳೂ ಸರಕಾರದ ಕಡೆಯ ಮೆಂಬರರೂ ಹಾಜರಿದ್ದರು. ಪ್ರಸ್ತಾವನಾ ಭಾಷಣದಲ್ಲಿ ಗವರ್ನರ ಸಾಹೇಬರು ಈ ಸಮ್ಮೇಲನದ ಉದ್ದೇಶ — ಮುಖ್ಯವಾಗಿ ಯೋಗ್ಯ ಖರ್ಚುಳ್ಳ ಸವಕಳ ಎಂಜಿನಿಯರಿಂಗ್ ಮತ್ತು ಆರೋಗ್ಯ ಇಲಾಖೆಗಳಲ್ಲಿ ಸಿಗುವಂತೆ ಯಾವ ಏರ್ಪಾಡುಗಳನ್ನು ಮಾಡಬೇಕಾಗುವುದು ಎಂದು ಚರ್ಚಿಸಬೇಕು — ಎಂಬ ವಿಷಯದಲ್ಲಿ ಸಭಿಕರ ಅಭಿಪ್ರಾಯವನ್ನು ರೂಪುಗೊಳಿಸುವುದು ಅಗತ್ಯವೆಂದು ವಿವರಿಸಿದರು. ಈ ಸಂಸ್ಥೆಗಳ ಮೇಲೆ ತಮ್ಮ ಹಿಡಿತವನ್ನು ಬಿಗಿಯಬೇಕೆಂದು ಸರಕಾರದವರಿಗೆ ಇಷ್ಟವಿಲ್ಲ, ಆದರೆ ಸಂಯೋಜನ ಆಡಳಿತೆಯ ಅನುಕೂಲತೆಯ ಬಗ್ಗೆ ಯಾವ ಹಂಚಿಕೆ ಮಾಡಬಹುದೆಂದು ನಿರ್ಧರಿಸಬೇಕಾಗಿ ತಿಳಿಸಿದರು. ಅನಂತರದ ಚರ್ಚೆಗಳು ಪತ್ರಿಕೆಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಚರ್ಚಿಸಲ್ಪಡಲಿಲ್ಲ. ಇವುಗಳ ಗೊತ್ತುವಳಿಯು ಸರಕಾರದವರಿಂದಲೇ ಶೀಘ್ರದಲ್ಲಿ ಪ್ರಕಟವಾಗುವಂತಿದೆ.

ಅಸಹಕಾರಿತೆಯ ಕಮಿಟಿ— ಅಸಹಕಾರಿತೆಯ ಚಳವಳದ ಪೀಠಿಕೆಯಾಗಿ ಓಗಸ್ಟ ೧ನೆ ತಾರೀಕಿಗೆ ಉಪವಾಸ ವ್ರತವನ್ನು ಆಚರಿಸಬೇಕೆಂದು ಈ ಕಮಿಟಿಯವರು ನಿರ್ಣಯಿಸಿರುವುದಾಗಿ ತಿಳಿದುಬರುತ್ತದೆ. ಆ ದಿನ ಸರಕಾರದ ಅಂದರೆ ಪೋಲೀಸ ಮತ್ತು ಮೆಜಿಸ್ಟ್ರೇಟ ಇಲಾಖೆಯ ಹುಕುಂಗಳಿಗೆ ಉಲ್ಲಂಘಿಸಬಾರದೆಂದು ಸೂಚನೆಯೂ ಇದೆ.

ಒನಾರಸಿನ ಹಿಂದೂ ಯುನಿವರ್ಸಿಟಿ—ಮುಂಬಯಿಯಲ್ಲಿ ನಾಮದಾರ ಮದನಮೋಹನ ಮಾಲವೀಯರ ಪ್ರಯತ್ನದಿಂದ ಈ ಯುನಿವರ್ಸಿಟಿಗೆ ೧೭ ಲಕ್ಷ ರೂಪಾಯಿ ಸಹಾಯಧನವಾಗಿ ವಂತಿಗೆಯಾದ್ದಲ್ಲದೆ ಹೊಸ್ಟೆಲುಗಳ ಬಗ್ಗೆ ೫ ಲಕ್ಷ ೩ ಸಾವಿರ ರೂಪಾಯಿ ವಾಗ್ದಾನವಾಯಿತು.

ವರಿಷ್ಠ ಕೌನ್ಸಿಲಿಗೆ ಹಿಂದಿ ಮೆಂಬರ—ವರಿಷ್ಠ ಎಕ್ಸಿಕ್ಯುಟಿವ್ ಕೌನ್ಸಿಲಿಗೆ ಈ ವರೆಗೆ ಒಬ್ಬರೇ ದೇಶೀಯ ಮೆಂಬರರು (ನಾಮದಾರ ಶಫಿ) ಇದ್ದಾರೆ. ಈಗ ರಾವ ಬಹದ್ದೂರ ಬಿ ಎನ್ ಶರ್ಮಾ ಇವರು ಇನ್ನೊಬ್ಬ ಮೆಂಬರರಾಗಿ ನೇಮಕವಾಗಿದ್ದಾರೆ. ಕೃಷಿ ಮತ್ತು ರೆವಿನ್ಯೂ ಇಲಾಖೆಗಳು.

[illegible] ... ನಡೆವ ಸೂಚನೆಗೆ ಅನುಸರಿಸಿ ಇದೆ.

ಸಂಯುಕ್ತ ಸಂಸ್ಥಾನದ ಪೆನ್ಶನರುಗಳು— 'ಯುನೈಟೆಡ್ ಪ್ರೊವಿನ್ಸ' ಈ ಸಂಸ್ಥಾನದ ಪೆನ್ಶನರುಗಳು ತಮ್ಮ ಪೆನ್ಶನುಗಳನ್ನು ಹೆಚ್ಚಿಸಬೇಕೆಂದು ಅಲ್ಲಿಯ ಲೆಫ್ಟಿನೆಂಟ್ ಗವರ್ನರರ ಮೂಲಕ ಹಿಂದುಸ್ಥಾನ ಸರಕಾರದ ಪ್ರಭುಗಳಿಗೆ ಮನವಿ ಬರಕೊಂಡಿದ್ದಾರೆ.

ಆರೋಗ್ಯ ಶಿಕ್ಷಣ ಪ್ರಚಾರ:—೧೯೧೬—೧೭ರಲ್ಲಿಯೂ ಅದರ ನಂತರ ಎರಡು ವರ್ಷಗಳಲ್ಲಿಯೂ ಮಾಯಾಬಾಂಧ್ರಗಳ ಸಹಾಯದಿಂದ ಆರೋಗ್ಯ ಸೂತ್ರಗಳ ಪ್ರಚಾರದ ಕೆಲಸವು ಸರಕಾರದವರಿಂದ ನಡೆಯಿತು. ೧೯೧೯—೨೦ರಲ್ಲಿ ಅಸಿಸ್ಟಂಟ ಸರ್ಜನರುಗಳ ಕಡಿಮೆಯಾದ್ದರಿಂದ ಈ ಕೆಲಸವನ್ನು ಜಾರಿಮಾಡಲಾಗಲಿಲ್ಲ. ಈಗ ಮದ್ರಾಸಿನಲ್ಲಿ ಸ್ಥಾಪನೆಯಾದ ಸೌತ್ ಇಂಡಿಯನ್ ಹೆಲ್ತ್ ಎಂಡ್ ವೆಲ್ಫೇರ್ ಎಸೋಸಿಯೇಶನ್ನವರು ಇದೇ ಸಂಸ್ಥಾನದಲ್ಲಿ ಈ ಬಗೆಯ ಜ್ಞಾನವನ್ನು ಪಸರಿಸಲು ಸಾಧ್ಯವಿದೆ ಎಂಬುದರಿಂದ ಅವರ ಆ ಕೆಲಸವನ್ನು ಲೋಕಲ್ ಬೋರ್ಡ ನವರೊಡನೆ ಪ್ರಸ್ತಾಪಿಸಿ ಕೈಕೊಳ್ಳಬೇಕಾಗಿ ಮದ್ರಾಸು ಸರಕಾರದವರು ಅವರಿಗೆ ಸೂಚಿಸಿರುವರು.

ಹಜ್ಜಕ್ಕೆ ಯಾತ್ರಿಕರು—ಮುಂಬಯಿಗೆ ಬಂದು ಸೇರಿದ ಯಾತ್ರಿಕರಲ್ಲಿ ಪುನಃ ವಾಂತಿಬೇಧಿ ಪ್ರಾರಂಭವಾದ್ದರಿಂದಲೂ ಸ್ಥಳ ಸಂಕೋಚವಾದ್ದರಿಂದಲೂ ಈ ವರ್ಷ ಇನ್ನು ಯಾತ್ರಿಕರು ಹೊರಡಲು ಸಾಧ್ಯವಾಗಲಾರದು ಎಂದು ಎಚ್ಚರಿಸಬೇಕಾಗಿ ಮುಂಬಾಯಿ ಸರಕಾರದವರ ತಂತಿ ಇದೆ.

ದಕ್ಷಿಣ ಕನ್ನಡ.

ಪುತ್ತೂರು:—ಇದೇ ತಿಂಗಳ ತಾ ೧೧—೭—೨೦ರಲ್ಲಿ ಇಲ್ಲಿಯ ತಾಲೂಕು ಕಚೇರಿಯಲ್ಲಿ ಜರಗಿದ ನೋನ್‌ಗಜೇಟೆಡ್ ಆಫೀಸರವರ ಎಸೋಸಿಯೇಶನ್ ಸಭೆಯಲ್ಲಿ ಮ| ರಾ| ರಾ| ಬಿ ಕೃಷ್ಣಾಚಾರಿಯರವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡನಂತರ ಮದ್ರಾಸು ನೋನ್‌ಗಜೆಟೆಡ್ ಆಫೀಸರಿಂದ ಬಂದ ರೂಲುಗಳನ್ನು ಕೂಡಿದ ಸಭಿಕರೆಲ್ಲರು ಕೇಳಿ ಇಲ್ಲಿ ಒಂದು ಸಂಘವನ್ನು ಸ್ಥಾಪಿಸಿದರು. ಅದಕ್ಕೆ ಮ| ರಾ| ರಾ| ಬಿ ಕೃಷ್ಣಚಾರಿಯವರು ಅಧ್ಯಕ್ಷರು. ಮ| ರಾ| ರಾ| ರಗಪ ಶಿವರಾವ್‌ರವರು ಉಪಾಧ್ಯಕ್ಷರು. ರಾ ಬೀ, ವೆಂಕಟ್ರಮಣಾಚಾರ್ಯರವರು ಕಾರ್ಯದರ್ಶಿ, ತಾಲೂಕು ಶಿರಸ್ತೇದಾರ ರಾ| ಸದಾಶಿವರಾಯರು ಖಜಾನ್ಚಿ ಎಂಬದಾಗಿ ನೇಮಕವಾದದ್ದಲ್ಲದೆ ಎಕ್ಸಿಕ್ಯೂಟಿವ್ ಮೆಂಬರರಾಗಿ ಮ| ರಾ| ರಾ| ಪೋಲೀಸ ಇನ್ಸ್‌ಪೆಕ್ಟರ್ ಚಮ್ಮಾಡು ಸಾಹೇಬರು, ಪುತ್ತೂರು ರೇಂಜ ಆಫೀಸರರು, ಪಿ ಡಬ್ಲ್ಯು ಡಿ ಸುಪರ್‌ವೈಸರ್, ಮುನ್ಸಿಫ ಕೋರ್ಟ ಹೆಡ್ ಕ್ಲಾರ್ಕರು ಮ| ರಾ| ರಾ| ಪಿ ಅಚ್ಯುತ ಭಂಡಾರಿಗಳು ಡಿವಿಜನಲ್ ಆಫೀಸ ಹೆಡ್‌ಕ್ಲಾರ್ಕರು ಮ| ರಾ| ರಾ| ಬಿ ನರಸಿಂಗರಾಯರ ಆರಿಸಲ್ಪಟ್ಟರು. ಮಿ| ನೇಪ ಧೊರೆಗಳವರು ಈ ಜಿಲ್ಲೆಗೆ ಬಿಜಯಿಸಿದಾಗ ತಮ್ಮ ಕುಂದುಕೊರತೆಗಳನ್ನು ಕೇಳಿಕೊಳ್ಳುವರೆ ಒಂದು ಡೆಪ್ಯುಟೇಶನ್ ಜಿಲ್ಲಾ ಕಲೆಕ್ಟರ ದೊರೆಗಳವರ ಮುಖಾಂತರ ಕಳುಹಿಸಿಕೊಡುವ ವಿಲೆವಾರಿ ಸೆಕ್ರೆಟರಿಯವರು ಮಾಡಬೇಕೆಂತ ನಿರ್ಣಯಿಸಲಾಯಿತು.

ಗೌಡ ಜಾತಿಯವರ ಸ್ಕೂಲ್ ನಿವೃತ್ತಿ ರಾವ ಕೃಷ್ಣ ಗೌಡರ ಮಗ ಮುದ್ದಪ್ಪನವರು ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು ತುಂಬಾ ಶ್ಲಾಘನೀಯವೇ ಸರಿ.

ಕಾಸರಗೋಡು—ಇಲ್ಲಿಯ ನೋನ್ ಗಜೆಟೆಡ್ ಆಫೀಸರರ ಸಂಘದ ಅಧಿವೇಶನವು ಕಾಸರಗೋಡು ತಾಲೂಕು ಕಚೇರಿಯಲ್ಲಿ ಇದೇ ತಿಂಗಳ ತಾ ೨೫ನೆಯ ಆದಿತ್ಯವಾರ ದಿನ ಜರಗಲಿಕ್ಕಿರುವುದು. ಸರಕಾರಿ ಎಲ್ಲಾ ಇಲಾಖೆಯ ನೌಕರರು ದಯಮಾಡಿ ಈ ಅಧಿವೇಶನಕ್ಕೆ ಬರಬೇಕಾಗಿ ವಿನಂತಿ ಇದೆ.

ಇಲ್ಲಿ ಹೊಸತಾಗಿ ತೆರೆಯಲ್ಪಡಲಿಕ್ಕಿರುವ ಕಾಸರಗೋಡು ತಾಲೂಕು ಬೋರ್ಡ್ ಆಫೀಸು ಆಗೋಸ್ಟು ತಾ ೧ನೆಗೆ ತೆರೆಯಲ್ಪಡುವುದೆಂದು ಪ್ರಕಟವಾಗಿರುತ್ತದೆ.

ಸ್ವೀಕಾರ.

ಶ್ರೀ ಶಾರದಾ ಸ್ತ್ರೀಸಮಾಜದ ಆರನೆ ವರ್ಷದ ರಿಪೋರ್ಟು—೧೯೧೮ನೆ ಮೇ ತಿಂಗಳಿಂದ ೧೯೧೯ನೆ ಮೇ ವರೆಗಿನ ವರ್ಷದ ರಿಪೋರ್ಟು ಹಸ್ತಗತವಾಗಿದೆ. ಸಮಾಜದ ಮೀಟಿಂಗುಗಳ ಸಂಖ್ಯೆಯನ್ನೂ ಅವುಗಳಲ್ಲಿ ಬೇರೆ ಬೇರೆ ಸತ್ಪುರುಷರು ಕೊಟ್ಟ ಉಪನ್ಯಾಸಗಳ ಪಟ್ಟಿಯನ್ನೂ ಓದುವಾಗ, ಸ್ತ್ರೀಶಿಕ್ಷಣ ಮತ್ತು ಸುಧಾರಣೆಯ ಕರ್ತವ್ಯವನ್ನು ಈ ಸಮಾಜವು ಧ್ಯೇಯವಾಗಿಟ್ಟುಕೊಂಡು ಅದರ ಕಡೆಗೆ ಸಾಹಸವಾಡುತ್ತದೆ ಎಂಬುದು ಸ್ಪಷ್ಟವಾಗುವುದು. ಇದಲ್ಲದೆ ಹಿಂದಿನ ವರ್ಷದಲ್ಲಿ 'ಸೆಂಟ ಜೋನ್ಸ್ ಎಂಬುಲೆನ್ಸ್' ಆರೋಗ್ಯಪ್ರಚಾರದ ಅನುಭವ ಯುದ್ಧದಲ್ಲಿ ಕೈ ಹಾಕಿದ ಸಿಪಾಯರ ಬಗ್ಗೆ ಅಂಗಿ, ಚೀಲ ಮುಂತಾದ್ದನ್ನು ಒದಗಿಸಿ ಕೊಡೋಣಾದ ಯತ್ನಗಳು ನಡೆದಿವೆ.

ಹಿಂದಿನ ಶಿಲಕು ಕೂಡಿ ಈ ವರದಿ ವರ್ಷದ ಜಮಾ ರೂ ೫೫೫—೬—೦ಲ್ಲಿ ೧೯೦—೮—೦ ಖರ್ಚುಮಾಡಿ, ರೂ ೩೬೪—೧೦—೦ನ್ನು ಠೇವಣಾತಿಯಾಗಿ ಪ್ರೊವಿನ್ಸಿಯಲ್ ಕೋಓಪರೇಟಿವ ಬೇಂಕಿನಲ್ಲಿ ಇಟ್ಟಿರುವರು. ಕಟ್ಟಡಕ್ಕೆ ವಾಗ್ದಾನವಾಗಿರುವ ರೂ ೬೫೦ರಲ್ಲಿ ರೂ. ೪೦೦ ವಸೂಲಾಗಿದೆ. ನಮ್ಮ ಜಿಲ್ಲೆಯ ಮಿಡಾರಿನ ಸೆಂಟ್‌ಸೆಬಾಸ್ಟಿಯನ್ ಸ್ಕೂಲ ಹೆಡ್ ಮೋಸ್ತರರಾದ ರಾ| ಸೀತಾರಾಮ ಭಟ್ಟರು ಕಟ್ಟಡದ ಸಹಾಯಕ್ಕಾಗಿ ರೂ ೧೦೦ನ್ನು ವಾಗ್ದಾನಮಾಡಿರುವುದಾಗಿ ತಿಳಿಯುತ್ತೇವೆ.

ಹೆಣ್ಣುಮಕ್ಕಳಿಗೆ ಮನೆಯ ಕೈಕಸಬುಗಳನ್ನೂ ಹೊಲಿಗೆ ಚಿತ್ರದ ಕೆಲಸ ಮುಂತಾದ್ದನ್ನೂ ಕಲಿಸುವ ಏರ್ಪಾಡು ಈ ಸಂಸ್ಥೆಯಲ್ಲಿದೆ.

ಸಮಾಜಕ್ಕೆ ಬೇರೆ ಪುಸ್ತಕಾಲಯವೂ ಇರುವುದಲ್ಲದೆ ಒಂದು ಪತ್ರಿಕೆಯು ಹೊರಟು ಈಗ ಎರಡನೆ ವರ್ಷದಲ್ಲಿ ಕಾಲಿಟ್ಟಿದೆ.

ಬೆಂಗಳೂರಿನಲ್ಲಿ ಇದಕ್ಕೋಸ್ಕರ ಒಂದು ಕಟ್ಟಡದ ಬಗ್ಗೆ ಸ್ಥಳ ಸಿಕ್ಕಿ ಕಟ್ಟಡದ ಅಂದಾಜು ರೂ ೧೫೦೦೦ಕ್ಕೆ ಮಾಡಿರುವಲ್ಲಿ ಅದರ ಸಾಹಾಯ್ಯದ ನಿಮಿತ್ತ ಇನ್ನೂ ಉದಾರ ಮನಸ್ಕರು ಸಹಾಯಮಾಡಲೆಂದು ಸಂಘದ ಒನರರಿ ಸೆಕ್ರೆಟರಿಗಳಾಗಿರುವ ಆರ್. ಕಲ್ಯಾಣಮ್ಮ ಪೋಷಕರನ್ನು ಕೇಳಿಕೊಳ್ಳುತ್ತಾರೆ. ಇವರ ಉದ್ದೇಶವು ಬೇಗನೆ ಕೈಗೂಡುವುದೆಂದು ನಾವು ನಂಬುತ್ತೇವೆ.

[illegible]

ಸಂಪಾದಕೀಯ:—

೧. ಪಟೇಲರ ಸಂಬಳ

೨. ಬ್ರಾಹ್ಮಣ ವಿತಂತು ನಿವಾಸಗ್ರಹ

೩. [illegible] ಹಕಾರಿತ್ವ

೪. [illegible] ವರ್ಷ ಫಂಡು ೬

೫. ವೊಂಬಯಿ ಗವರ್ನರರ ಭಾಷಣ . . . . ,,

ಮುಂಗಳವಿರು. . . . . ,,

ವರ್ತಮಾನಸಂಗ್ರಹಗಳು:—

ಸಂಕ್ಷಿಪ್ತ ಉತ್ಕರಕಾಂಡ ೫

ಪರದೇಶ ವರ್ತಮಾನ . . . . ,,

ದಕ್ಷಿಣಕನ್ನಡ — ಪುತ್ತೂರು, ಕಾಸರಗೋಡು, ಸ್ವೀಕಾರ . . ,,

ಮದ್ರಾಸು ನ್ಯಾಯವಿಧಾಯಕ ಸಭೆ ೮

ಗ್ರಾಮ ಪಂಚಾಯತುಗಳ ಬಿಲ್ . . . . ,,

ಅಸ್ಪೃಶ್ಯತಾದಿಯನ್ನೆಂದಿಗೂ ನಂಬರು (ಪದ್ಯ) . . . . ,,

ಪಕ್ವವಾದ ಹಣ್ಣುಗಳನ್ನು ಕೆಡಲಿಕ್ಕೆ ಹೋಗದ ಹಾಗೆ ಕಾಪಾಡುವುದು ,,

ಪತ್ರವ್ಯವಹಾರ — ೧, ... ,,

ಸ್ವದೇಶಾಭಿಮಾನಿ.

ಶಕ ೧೮೪೩ ಆ. ಶ್ರಾ. ಶು ೮ ಶುಕ್ರವಾರ.

ಸ್ಫುಟ ವಿ ಚಾ ರ ಗ ಳು.

೧. ಪಟೇಲರ ಸಂಬಳ — ಈ ತಿಂಗಳ ಮದ್ರಾಸು ಪ್ರಾಂತಿಕ ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಚರ್ಚೆಗೆ ಬಂದ ಠರಾವುಗಳಲ್ಲಿ ಪಟೇಲರಿಗೆ ಉದರನಿರ್ವಾಹಕ್ಕೆ ಸಾಕಷ್ಟು ಅಥವಾ ಕನಿಷ್ಠ ಪಕ್ಷಕ್ಕೆ ಮಾಹೆಯಾನಾ ೧೫ ರೂಪಾಯಿಯಂತೆ ತಲಬು ಸಿಗಬೇಕೆಂದು ನಾಮದಾರ ನರಸಿಂಹ ಅಯ್ಯರು ತಂದ ಠರಾವು ಒಂದು. ಉಗ್ರಾಣಿಗಳಿಗೆ ಸಹ ರೂಪಾಯಿ ೭ ಯಾ ೮ ತಲಬು ಸಿಗುವಾಗ ಈ ಅತಿ ಜವಾಬ್ದಾರಿಯ ಗ್ರಾಮ ಉದ್ಯೋಗಸ್ಥರಿಗೆ ಬರೇ ೫ ರೂಪಾಯಿ ಸಿಗುವುದೆಂದರೆ ನ್ಯಾಯವಾಗಲಾರದು ಎಂದು ನಾಮದಾರ ಶಿವರಾಯರು ಮೇಲಿನ ಠರಾವನ್ನು ಪುಷ್ಟೀಕರಿಸಿದರು. ಈ ಠರಾವನ್ನು ಎದುರಿಸಿದ ನಾಮದಾರ ರಾಮಾನುಜಾಚಾರ್ಯರು "ಪಟೇಲರು ಬಡವರು, ಅವರಿಗೆ ಜೀವನಕ್ಕೆ ಸಾಕಷ್ಟು ಸಿಗಬೇಕು, ಆದ್ದರಿಂದ ಅವರ ಸಂಬಳ ಏರಿಸಬೇಕು ಎಂದು ಹೇಳುವುದಾದರೆ ಅಂಥಾ ಬಡವರನ್ನು ಆದಷ್ಟು ಬೇಗನೆ ಪಟೇಲನ ಉದ್ಯೋಗದಿಂದ ತೆಗೆದುಹಾಕುವುದೇ ಒಳ್ಳೇದು, ಈ ಜವಾಬ್ದಾರಿಯ ಹುದ್ದೆಗೆ ಉಮೇದ್ವಾರರು ತುಂಬಾ ಇದ್ದಾರೆ" ಎಂದು ಹೇಳಿದರು. ನಾಮದಾರ ನಾ| ಸುಬ್ಬರಾಯರು ಹೇಳಿದ ಮಾತಿನಲ್ಲಿ "ಈ ಹುದ್ದೆಗೆ ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ದೊಡ್ಡ ವರ್ಗದಾರರೇ ಮೊತ್ತಮೊದಲು ಇದರ ಗೌರವಕ್ಕೋಸ್ಕರ ಉಮೇದ್ವಾರರಾಗುತಿದ್ದರು, ಈಗ ಪರಿಸ್ಥಿತಿಯು ಬದಲಾಯಿಸಿ ಈ ಹುದ್ದೆಯು ಸರಕಾರನೌಕರಿ ಎಂಬ ಭಾವನೆ ಬರಹತ್ತಿದರಿಂದ ಅಂಥ ವರ್ಗದಾರರು ಹಿಂಜರಿಯುತ್ತಾರೆ, ವಾರೀಸು ಹಕ್ಕಿನಿಂದ ಈ ಹುದ್ದೆಗೆ ನೇಮಕವಾಗುವುದಲ್ಲವಾದರೆ ರೂ. ೧೫ ಸಹ ಈ ಕೆಲಸಕ್ಕೆ ಅತೀ ಕಡಿಮೆಸಂಬಳವೆನ್ನಬೇಕು" ಎಂದರು. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಮೊದಲೇ ಸವಿಸ್ತಾರವಾಗಿ ಬರೆದಿದ್ದೇವೆ. ಈಗ ಇಷ್ಟೇ ಹೇಳಿದರೆ ಸಾಕು. ರಾ| ಸುಬ್ಬರಾಯರು ಹೇಳಿದಂತೆ 'ಇದು ನೌಕರಿ' ಎಂಬ ಸ್ಥಿತಿಗೆ ಇಳಿಯದಿದ್ದರೆ, ಮತ್ತು ಹಳ್ಳಿ ಪಟೇಲನು ರೆವಿನ್ಯೂ ಮತ್ತು ಬೇರೆ ಎಲ್ಲಾ ಇಲಾಖೆಗಳ ಗುಲಾಮನೆಂಬ ಭಾವನೆಯು ಹರಡದಿದ್ದರೆ ಮೊದಲಿನಂತೆ ಅದರ ಗೌರವಕ್ಕೋಸ್ಕರ ವರ್ಗದಾರರು ಮುಂದೆ ಬರುತ್ತಲೆ ಇದ್ದಾರು. ಸರಬರಾಯಿ ಜವಾಬ್ದಾರಿಯನ್ನು ಇವರಿಂದ ತಪ್ಪಿಸಿ, ಇವರು ಯಾವ ಆಫಿಸಿಗೆ ಬಂದರೂ ಹೊರಗೆ ಗೋಳಿಮರದ ಬುಡದಲ್ಲಿ ಕಾಯುವ ಬದಲಾಗಿ ಇವರಿಗೆ ಸರಿಯಾದ ಆಸನ ಸಿಗುತ್ತದೆ, ರೇಗಿದ ತಹಸಿಲ್ದಾರ ಅಥವಾ ಡಿಪ್ಯೂಟಿ ತಹಸಿಲ್ದಾರರು ಇವರಿಗೆ ಬಯ್ಯುವ ಅಥವಾ ಕುತ್ತಿಗೆ ಕೈಹಾಕಿ ದೊಬ್ಬುವ ಹಂಚಿಕೆ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಗೊತ್ತಾದರೆ ಇದಕ್ಕೆ ಮೊದಲಿನಂತೆ ಯೋಗ್ಯ ವರ್ಗದಾರರು ಗೌರವಕ್ಕೋಸ್ಕರವೇ ಉಮೇದ್ವಾರರಾಗಿ ಬರುವರೆಂಬದಕ್ಕೆ ಸಂಶಯವೇನೂ ಇಲ್ಲ. ಉದರನಿರ್ವಾಹದ ಪ್ರಶ್ನೆಯು ಈ ಸಂದರ್ಭದಲ್ಲಿ ಬರಲೇ ಬಾರದು. ದೇವಸ್ಥಾನದ ಭೂತಸ್ಥಾನಗಳ ಮೊಕ್ತೇಸರರಿಗೆ ಸಂಬಳ ಯಾರು ಕೊಡುತ್ತಾರೆ? ತಾಲೂಕು ಮತ್ತು ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರುಗಳಿಗೆ ಸಂಬಳ ಎಲ್ಲಿ ಸಿಗುತ್ತದೆ? ಹಾಗಿದ್ದರೂ ಅದಕ್ಕೆ ಉಮೇದ್ವಾರರು ಇಲ್ಲವೆ? ಇವರು ತಾಲೂಕು ಕಚೇರಿಗೆ ಸರಕಾರಿ ಕೆಲಸದ ಮೇಲೆ ಹೋದಾಗ ಇವರಿಗೆ ಬೋರ್ಡ ಮೆಂಬರರಂತೆ ಬತ್ತೆ ಸಿಗಬೇಕು. ಕಂದಾಯ ವಸೂಲಿಯ ಕೆಲಸವು ಗ್ರಾಮಚಾವಡಿಯಲ್ಲಿ ಆಗಬೇಕಲ್ಲದೆ ಮನೆಮನೆಗೆ ಪಟೇಲರು ರಸೀದಿ ಹಿಡಿದು 'ತಿರುಗುವ ಕ್ರಮವು' ರದ್ದಾಗಬೇಕು, [illegible] ಕೆಲಸಕ್ಕೆ ಉಪಾವಣೆಯಾಗಬೇಕು. ಆಗ ಮಾತ್ರವೇ ಸಂಬಳ ಎಲ್ಲದಿದ್ದರೂ ಈ ಕೆಲಸವು ಗೌರವದ ಬಲದಿಂದ ನಡೆಯಬಲ್ಲುದು. ಸರಕಾರವು ಈ ಹುದ್ದೆದಾರರನ್ನು ನೌಕರರ ಪದವಿಗೆ ತಳ್ಳಿದಾಗ ಇವರು ರೆವಿನ್ಯೂ ನೌಕರರಲ್ಲಿ ಕೀಳುವರ್ಗಕ್ಕೆ ಸೇರಬೇಕಾಗುತ್ತದೆ. ಹೀಗಾಗಿ ತಲಬಿನ ಪ್ರಶ್ನೆಯು ಹೊರಡಲಿಕ್ಕೆ ಕಾರಣವಾಯಿತು. ವಾರೀಸು ಹಕ್ಕಿನಿಂದ ಈ ಉದ್ಯೋಗಕ್ಕೆ ಸೇರುವವರಲ್ಲಿ ಹಲವು ಖಾಲಿಪೋಲಿ ಜನರೂ ನಿರಕ್ಷರ ಜನರೂ ಬರುವುದರಿಂದ ಈ ಉದ್ಯೋಗದ 'ಭರಮು' ಕಡಿಮೆಯಾಗಿದೆ. ಈ ಗೌರವವನ್ನು ಹೆಚ್ಚಿಸಲು ಸರಕಾರವು ಉದ್ಯುಕ್ತವಾಗಬೇಕಲ್ಲದೆ ಸಂಬಳದ ವಿಷಯವನ್ನು ಚರ್ಚಿಸುವುದರಿಂದ ಪ್ರಯೋಜನವಿಲ್ಲ. ಸರಕಾರಕಡೆಯಿಂದ ನಾಮದಾರ ಟೊಡ್ಹಂಟರ ಸಾಹೇಬರು ಕೊಟ್ಟ ಉತ್ತರದ ಮೇರೆಗೆ "ಈ ಸಿಬಂದಿಗೆ ರೂಪಾಯಿ ೧೫ರಂತೆ ತಲಬು ಕೊಡುವುದಾದರೆ ೩೨ ಲಕ್ಷ ರೂಪಾಯಿ ಬೇಕಾಗುವುದು. ಎಲ್ಲಾ ಸಿಬಂದಿಗೆ ದರಗಳನ್ನು ಹೆಚ್ಚಿಸುವುದಾದರೆ ಇಡೀ ಭೂಕಂದಾಯದ ಪ್ರಾಂತಿಕ ಅಂಶದಲ್ಲಿ ಅರ್ಧಾಂಶದಷ್ಟು ಇದಕ್ಕೆನೆ ವೆಚ್ಚವಾದೀತು" ಎಂದರು. ಗ್ರಾಮಕೋರ್ಟುಗಳ ಏರ್ಪು ಮತ್ತು ಗ್ರಾಮಪಂಚಾಯತುಗಳ ಏರ್ಪು ಜಾರಿಗೆಬಂದೊಡನೆ ಪಟೇಲರ ಕೆಲಸ ತುಂಬಾ ಕಡಿಮೆಯಾಗುವುದು ಎಂತಲೂ ನಾ| ಟೊಡ್ಹಂಟರರು ಹೇಳಿದ್ದಾರೆ. ಈಗ ಶ್ಯಾನುಭಾಗರಿಗೂ ಉಗ್ರಾಣಿಗಳಿಗೂ ಸಂಬಳಗಳನ್ನು ಏರಿಸಬೇಕೆಂಬದು ನಿರ್ವಿವಾದ. ಅದರೊಂದಿಗೆ ಪಟೇಲರಿಗೂ ಸಂಬಳ ಏರಿಸಿದರೆ ಗ್ರಾಮದ ಕಂದಾಯದ ಅಧಿಕಾಂಶವು ಆ ಗ್ರಾಮಕ್ಕೆನೆ ಕಂದಾಯ ವಸೂಲಿ ಬಗ್ಗೆ ವೆಚ್ಚವಾದಂತಾದೀತು. ಇದನ್ನು ನಾವು ಜ್ಞಾಪಕವಲ್ಲಿಡಬೇಕಾಗಿದೆ.

೨. ಬ್ರಾಹ್ಮಣ ವಿತಂತು ನಿವಾಸಗ್ರಹ — ನ್ಯಾಯವಿಧಾಯಕ ಸಭೆಗಳಲ್ಲಿ ಚರ್ಚಿಸುವ ಮೆಂಬರರು ಕೆಲವು ವೇಳೆ ತಮ್ಮ ಸೂಚನೆಗಳನ್ನು ಪುಷ್ಟೀಕರಿಸುವುದಕ್ಕೆ ಅಗತ್ಯವಿರುವ ಸಂಪೂರ್ಣ ಅನುಭವಹೊಂದದೆ ಯದ್ವಾತದ್ವಾ ಆಡಿ ಪರಿಹಾಸ್ಯಕ್ಕೆ ಗುರಿಯಾಗುವುದುಂಟು. ಇಂಥದೊಂದು ವಿಚಾರವು ಕಳೆದ ಮದ್ರಾಸಿನ ಅಧಿವೇಶನದಲ್ಲಿ ಒದಗಿತು. ಪಂಚಮರ ಉದ್ಧಾರದಲ್ಲಿ ಕಂಕಣ ಕಟ್ಟಿಕೊಂಡಿರುವ ನಾಮದಾರ ರಾಜರು ಮದ್ರಾಸಿನಲ್ಲಿ ಬ್ರಾಹ್ಮಣ ವಿಧವೆಯರಿಗೋಸ್ಕರ ಮಾತ್ರವೇ ಒಂದು ನಿವಾಸ ಗೃಹವನ್ನು ವಿದ್ಯಾಇಲಾಖೆಯವರು ಏರ್ಪಡಿಸಿದ್ದು ಸರಿಯಲ್ಲ, ಸರಕಾರದವರು ನಿಷ್ಪಕ್ಷಪಾತ ಧರ್ಮವನ್ನು ಅವಲಂಬಿಸಬೇಕು ಎಂದು ಹೇಳಿದ್ದಲ್ಲದೆ ಬ್ರಾಹ್ಮಣರಿಂದಲೂ ಅಬ್ರಾಹ್ಮಣರಿಂದಲೂ ಪಂಚಮರು ಹಿಂಸೆಗೆ ಗುರಿಯಾಗುತ್ತಾರೆ, ಅವರ ಕಡೆಗೆ ನಿರ್ದಯರಾಗಿ ಬ್ರಾಹ್ಮಣ ವಿಧವೆಯರ ಉದ್ಧಾರಕ್ಕೆ ಕೈ ಹಚ್ಚಿದುದು ಸರಿಯಲ್ಲವೆಂದು ಸಂಪೂರ್ಣ ತಿಳುವಳಿಕೆಯಲ್ಲದೆ ಒಂದು ಅಸ್ತ್ರವನ್ನು ಬಿಟ್ಟರು. ಆದರೆ ಮಿ| ಡಿರೆಕ್ಟರ ಸಾಹೇಬರು ಹೇಳುವ ಮೇರೆಗೆ ವಿಧವೆಯರ ನಿವಾಸಗೃಹವೆಂಬ ಹೆಸರಿನ ಸಂಸ್ಥೆಯಲ್ಲಿ ಬ್ರಾಹ್ಮಣವಿತಂತುಗಳು ಬಹಳ ಕಡಿಮೆ, ವಾಸ್ತವವಾಗಿಯೂ, ಅದು ಬ್ರಾಹ್ಮಣವಿದ್ಯಾರ್ಥಿನಿಯರ ನಿವಾಸಗೃಹ, ಅದೇ ರೀತಿಯಲ್ಲಿ ದೇಶೀಯ ಕ್ರೈಸ್ತರಿಗೂ ಬ್ರಾಹ್ಮಣೇತರರಿಗೂ ಬೇರೆ ಗೃಹಗಳನ್ನು ಸರಕಾರದವರು ಏರ್ಪಡಿಸಿದ್ದಾರೆಂಬು ಗೊತ್ತಾಗುತ್ತದೆ. ಇದಲ್ಲದೆ ಪಂಚಮ ಕನ್ನಿಕೆಯು ಈ 'ಬೋರ್ಡಿಂಗ್ ಹೌಸ್'ಗಳಲ್ಲಿ ಇದ್ದು ಶಿಕ್ಷಣಹೊಂದಲು ಈ ವರೆಗೆ ಮುಂದು ಬಂದಿಲ್ಲ, ಬಂದರೆ ತಕ್ಕ ಏರ್ಪಾಡು ಮಾಡೋಣಾಗುವುದು ಎಂದು ಸರಕಾರದ ಉತ್ತರ ಬಂತು. ಅಂಥಾ ಅರ್ಜಿಗಳನ್ನು ಕೊಡಿಸದೆ ಸರಕಾರದ ಮೇಲೆ ವಿನಾಕಾರಣವಾಗಿ ನಂಜನ್ನು ಕಾರುವುದರಿಂದ ಪಂಚಮ ವರ್ಗಕ್ಕೆ ನಿಜವಾಗಿಯೂ ಸುಪರಿಣಾಮವಾದೀತು ಎಂದು ನಾವು ಹೇಳಲಾರೆವು. ವಿದ್ಯಾಇಲಾಖೆಯವರು ಈ ಊಟದ ಮನೆಗಳಲ್ಲಿ ಆಯಾ ಜಾತಿಯ ಕಟ್ಟಳೆಗಳನ್ನು ಉಲ್ಲಂಘಿಸುವುದಿಲ್ಲ. ಇದಕ್ಕೆ ಬದಲಾಗಿ ಒಮ್ಮೆಲೇ ಪಂಚಮ ಸ್ತ್ರೀಯನ್ನು ಬ್ರಾಹ್ಮಣ ಸ್ತ್ರೀಯೊಡನೆ ಊಟಕ್ಕೆ ಕೂಡ್ರಿಸಿ ತನ್ನ ಕಣ್ಣುಗಳಿಗೆ ತೃಪ್ತಿಕೊಡಬೇಕೆಂದು ಗುಪ್ತಾಲೋಚನೆಯನ್ನು ಮರೆಮಾಡಿ ಈ ವಿಚಿತ್ರ ಠರಾವನ್ನು ನಾಮದಾರರು ತಂದಿದ್ದರೆ ನಿಷ್ಕಾರಣವಾಗಿ ಪಂಚಮರಲ್ಲದವರನ್ನು ರೇಗಿಸಿ ಕೋಲಾಹಲವೆಬ್ಬಿಸುವುದೊಂದೇ ಅಲ್ಲದೆ ಮತ್ತೇನು ಪುರುಷಾರ್ಥವಿರದು. ನಾಮದಾರರು ತಮ್ಮ ಉತ್ಸಾಹದಲ್ಲಿ ದುಡುಕಿ ಕಾರ್ಯ ಕೆಡಿಸಿಕೊಳ್ಳಬಾರದೆಂದು ನಾವು ಸೂಚಿಸುತ್ತೇವೆ.

೩. ಈ ಚರ್ಚೆಯಲ್ಲಿ ಇನ್ನೊಂದು ಕಿರುಚರ್ಚೆ ಎದ್ದಿತು. ನಾಮದಾರ ರಾಜರ ಠರಾವನ್ನು ಪುಷ್ಟೀಕರಿಸುವ ತವಕದಲ್ಲಿ ಪಿಟ್ಟಾಪುರದ ಮತ್ತು ಪರ್ಲಾಕಿಮಿಡಿಯ ಜಮೀನುದಾರರು ಹಿಂದೆ ಇಂಥ ಜಮೀನುದಾರರಿಗೋಸ್ಕರ ಸರಕಾರವು ಒಂದು ಕೊಲೇಜನ್ನು ಏರ್ಪಡಿಸಬೇಕೆಂದಿತ್ತು ಎಂಬದನ್ನು ಮರೆತು ಪ್ರಜೆಗಳಲ್ಲಿ ಒಂದು ವರ್ಗದ ಕಡೆಗೆ ಸರಕಾರವು ಲೀನವಾಗುವುದು ಅನುಪಯುಕ್ತವೆಂದು ವಾದಿಸಿದರು. ಅವರಿಬ್ಬರನ್ನೂ ನಾಮದಾರ ಸಿವರಾಯರು ಕೂಡಲೇ ಈ ವಿಸ್ಮೃತಿಯಿಂದ ಎಚ್ಚರಿಸಿದರು. ಜಮೀನುದಾರರು ಮಾತ್ರ ಕುಲೀನರು, ಇತರ ಜನಸಾಮಾನ್ಯರೊಡನೆ ಬೆರತುಕೊಂಡರೆ ಅವರ ಗೌರವಕ್ಕೆ ಹಾನಿ ಬಂದೀತು, ಆದ್ದರಿಂದ ಅವರಿಗೋಸ್ಕರ ಬೇರೆ ವಿದ್ಯಾಲಯವಿರುವುದು ಅಗತ್ಯವೆಂದು ಈ ಜಮೀನುದಾರರು ಪ್ರತಿಪಾದಿಸುವುದಾದರೆ ಯುವಕ ಜಮೀನುದಾರರ ವಿಷಯದಲ್ಲಿ ನ್ಯೂವಿಂಗ [illegible]

[illegible] ಈ ಚರ್ಚೆಯಲ್ಲಿ [illegible] ಲಿಕ್ಕೆ ಎದುರಾಳಿ [illegible] ಯರ ಬಹುದ್ದು [illegible] ಅನಾದಿಯಿಂದಲೂ [illegible] ಗಳಲ್ಲಿ ಬೆರಕುಕೊಳ್ಳದ [illegible] ಸಿಥಿಲತೆ ಬಂದಿದ್ದರೂ [illegible] ಲ್ಲಿಯೂ ಬ್ರಾಹ್ಮಣ ಸ್ತ್ರೀಯರು [illegible] ಸರಿಸುವುದಕ್ಕೆ [illegible] ರಣೆಗೆ ತನ್ನ ಜಾತಿಧರ್ಮವನ್ನು ಹಿಂದೂಗಳು [illegible] ಹಿಂದೂಗಳಲ್ಲಿ ಬ್ರಾಹ್ಮಣರಲ್ಲಿ ವಿಧವೆಯರ ಸಂಖ್ಯೆ ಕಡಿಮೆಯಾಗುವುದಕ್ಕೆ ಸಂದೇಹವಿಲ್ಲ" ಎಂದು ವಿಚಿತ್ರ ಸೂಚನೆ ಕೊಟ್ಟರು. "ನ್ಯಾಯ ಇತ್ಯರ್ಥಕ್ಕೆ ನಮ್ಮ ಹಳ್ಳಿಗೆ ಬನ್ನಿ, ಇಲ್ಲದಿದ್ದರೆ ನಿಮ್ಮ ದೇವಸ್ಥಾನಕ್ಕೆ ನಾನು ಬರುತ್ತೇನೆ" ಎಂಬ ನಾಣ್ಣುಡಿಗೆ ಅರ್ಥವಿಲ್ಲದೆ ಇಲ್ಲ ಎಂದು ಖಾನಬಹದ್ದೂರರ ಮಾತಿನಿಂದ ವ್ಯಕ್ತವಾಗುವುದು.

೪. ಅಸಹಕಾರಿತ್ವ — ವಿಲಾಯತಿಯೊಳಗಿನ ಪಾರ್ಲಿಮೆಂಟನಲ್ಲಿ ಹಿಂದುಸ್ಥಾನದ ಪ್ರಸ್ತಾಪವು ಬರುವುದು ಬಹಳ ಕಡಿಮೆ. ಈ ಸಂಪ್ರದಾಯವು ಮೊದಲಿನಿಂದಲೆ ಉಂಟು. ಆದರೂ ಇತ್ತಿತ್ತಲಾಗಿ ಹಿಂದೂಸ್ಥಾನದೊಳಗಿನ ಕೆಲಕೆಲವು ಸಂಗತಿಗಳನ್ನು ಕುರಿತು ಆಗಾಗ್ಗೆ ಪ್ರಶ್ನೋತ್ತರಗಳು ನಡೆಯುತ್ತಿವೆ. ಇತ್ತಲಾಗಿನ ಈ ಕ್ರಮಕ್ಕನುಸಾರವಾಗಿ 'ಕೊಮನ್ಸ' ಸಭೆಯಲ್ಲಿ ಮಹಾತ್ಮಗಾಂಧಿ ಮತ್ತು ಖಲಿಫತ್ ಕಮಿಟಿಯ ವಿಷಯವಾಗಿ ಒಂದೆರಡು ಪ್ರಶ್ನೋತ್ತರಗಳು ನಡೆದವು. ಖಲಿಫತ್ ಪ್ರಶ್ನೆಯು ಸರಿಯಾಗಿ ತೀರ್ಮಾನಿಸಲ್ಪಡದೆ ಇದ್ದರೆ ಅಸಹಕಾರಿತ್ವ—ಹರತಾಳ ಪ್ರಾರಂಭವಾದೀತೆಂದು ಕೆಲವು ದಿವಸಗಳ ಹಿಂದೆಯೇ ಖಲಿಫತ್ ಕಮಿಟಿಯುಮತ್ತು ಗಾಂಧಿಗಳು ವೈಸರಾಯರಿಗೆ ತಿಳಿಸಿದ್ದರಷ್ಟೆ. ಈ ವಿಷಯವು ಪಾರ್ಲಿಮೆಂಟನಲ್ಲಿ ಪ್ರಶ್ನರೂಪದಿಂದ ಬಂತು. ಖಲಿಫತಿನವರು ಮತ್ತು ಗಾಂಧಿಗಳು ತಮ್ಮ ಮನ ಬಂದಂತೆಸತ್ಯಾಗ್ರಹದ ಹೆಸರಿನಿಂದ ಅಸಹಕಾರಿತ್ವವನ್ನು ಮಾಡಲು ಹೊರಟಿದ್ದಾರೆ, ಇದು ಯೋಗ್ಯವೆ? ಇದು ವಿಲಾಯತಿಯ ಸರಕಾರದ ದೃಷ್ಟಿಗೆ ಬಂದಿದೆಯೆ? ಇದಕ್ಕೆ ಏನಾದರೂ ಯೋಗ್ಯವಾದ ಪ್ರತಿಕಾರವನ್ನು ಸರಕಾರದವರು ಮಾಡಬಾರದೆ? ಎಂದು ವಿಲಾಯತಿಯಲ್ಲಿ ಪಾರ್ಲಿಮೆಂಟನವರು ಮಿ. ಮೊಂಟೆಗ್ಯುಗಳಿಗೆ ಪ್ರಶ್ನೆಮಾಡಿದರು. ಈ ಸಂದರ್ಭದಲ್ಲಿ ಮಿ. ಮೊಂಟೆಗ್ಯುಗಳು ಮಾಡಿದ ಭಾಷಣವು ನಿಜವಾಗಿ ಕೊಂಚ ಭಯಜನಕವಾಗಿದೆ. ಮಿ. ಮೊಂಟೆಗ್ಯುಗಳು ತಮ್ಮ ಭಾಷಣದ ಆದಿಯಲ್ಲಿ ಹಿಂದೂಸ್ಥಾನದ ಮಹತ್‌ಸೇವೆಯನ್ನು ಮಾಡುತಿದ್ದ ಬಗ್ಗೆ ಗಾಂಧಿಗಳನ್ನು ಹೊಗಳಿದ್ದಾರಾದರೂ ಮತ್ತೆ ಮತ್ತೆ ಪ್ರದರ್ಶಿಸಿದ ಅವರ ವಿಚಾರಗಳು ಭಯಜನಕವಾಗಿದ್ದವು. "ಗಾಂಧಿಗಳು ಕಳೆದ ವರ್ಷ ಮಾಡಿದಂತೆಯೆ ಪುನಃ ಚಳವಳವನ್ನು ಮಾಡಹತ್ತಿದ್ದಾರೆಂದು ತೋರುತ್ತದೆ. ಆದರೆ ಕಳೆದ ವರ್ಷ ಅವರ ಚಳವಳದ ವಿಷಯದಲ್ಲಿ ಸರಕಾರವು ಸಮಾಧಾನವನ್ನು ತಾಳಿದಂತೆ ಈಗಲೂ ಅದನ್ನು ತಾಳುವುದು ಶಕ್ಯವಿಲ್ಲ. ಹಿಂದೂಸ್ಥಾನ ಸರಕಾರ ಮತ್ತು ಪ್ರಾಂತಿಕ ಸರಕಾರಗಳು ಈ ಚಳವಳದಿಂದ ಸಂಭವಿಸುವ ಸಂಗತಿಗಳನ್ನು ಬಹು ಜಾಗರೂಕತೆಯಿಂದ ನೋಡುತಲಿದ್ದಾವೆ. ಮತ್ತು ಯೋಗ್ಯವಾದ ಮುಂಜಾಗ್ರತೆಯನ್ನು ತೆಕೊಳ್ಳುತಲಿದ್ದಾವೆ. ಶಾಂತತೆ ಮತ್ತು ಸುಕ್ರಮ ಇವು ನೆಲಗೊಳ್ಳುವಂತೆ ಅವಶ್ಯಕವಾದ ಉಪಾಯಗಳನ್ನು ಅವು ಮಾಡಿಯಾವು ಎಂಬ ಭರವಸೆಯು ಇದೆ. ಈ ವಿಷಯದಲ್ಲಿ ಇಂಥಿಂಥ ಉಪಾಯಗಳನ್ನು ಮಾಡಬೇಕೆಂದು ಸೂಚಿಸುವುದು ಕೊಮನ್ಸ ಸಭೆಗೆ ಹಿತಾವಹವಲ್ಲ. ಗಾಂಧಿಗಳ ಪ್ರಯತ್ನವಾಗಲಿ, ಚಳವಳವಾಗಲಿ ಕೇವಲ ತುಂಟುತನದ್ದಾಗಿರುವುದರಿಂದ ಹಿಂದೂಸ್ಥಾನದೊಳಗಿನ ಅಧಿಕಾರಿಗಳು ಅದನ್ನು ತಗ್ಗಿಸಲು ಯೋಗ್ಯವಾದ ಹಾದಿಯನ್ನು ಕಂಡುಹಿಡಿದಾರು. ಪ್ರಸ್ತುತದ ಪರಿಸ್ಥಿತಿಯನ್ನು ಸರಿಗೊಳಿಸಲು ಹಿಂದೂಸ್ಥಾನ ಸರಕಾರವು ಯಾವ ಉಪಾಯವನ್ನು ಕೈಕೊಂಡರೂ ಅದಕ್ಕೆ ವಿಲಾಯತಿ ಸರಕಾರದ ಬೆಂಬಲವು ದೊರಕುವುದು." ಮಿ. ಮೊಂಟೆಗ್ಯುಗಳು ಈ ಮೇರೆಗೆ ಪಾರ್ಲಿಮೆಂಟಿನ 'ಕೊಮನ್ಸ' ಸಭೆಯಲ್ಲಿ ತರ್ಜನಿಯನ್ನು ಎತ್ತಿ ಭಾಷಣಮಾಡಿದ್ದಾರೆ. ಇವರ ಭಾಷಣವನ್ನು ಪರ್ಯಾಲೋಚಿಸುವಾಗ ಹಿಂದೂಸ್ಥಾನದಲ್ಲಿ ಪುನಃ ನೋಕರಶಾಹಿಯ ಕಠಿಣ ಕಾರಭಾರವು ಪ್ರಾರಂಭವಾದೀತೋ ಎಂದು ಸಂಶಯವು ಬರಹತ್ತಿದೆ.

೫. ಹಿಂದೂಸ್ಥಾನ ಸರಕಾರ, ಪ್ರಾಂತಿಕ ಸರಕಾರ ಮತ್ತು ಭಾರತಮಂತ್ರಿಗಳು ಹಾಗು ವಿಲಾಯತಿಯೊಳಗಿನ ಕೆಲವು ಪಾ. ಸಭಾಸದರು ಗಾಂಧಿಗಳ ಖಲಿಫತ ಚಳವಳದ ವಿಷಯವಾಗಿ ಬಹಳ ಗಾಬರಿ ಪಡುತ್ತಾರಾದರೂ, ಗಾಂಧಿಗಳ ಚಳವಳದಲ್ಲಿ ತುಂಟುತನವನ್ನು ನೋಡುತ್ತಾರಾದರೂ ಮಹಾತ್ಮಾಗಾಂಧಿಗಳು ಬಹು ಶಾಂತತೆಯಿಂದ ಅಸಹಕಾರಿತ್ವದ ಚಳವಳವನ್ನು ಮುಂದರಿಸುವವರಿದ್ದಾರೆ. ಮೊದಲು ವೈಸರಾಯರಿಗೆ ಅನಾವೃತ ಪತ್ರವನ್ನು ಬರೆದು ತಿಳಿಸಿದ್ದಂತೆ ಬರುವ ಆಗೋಸ್ತು ತಾ. ೧ರಿಂದ ಅಸಹಕಾರಿತ್ವವನ್ನು ಅವರು ಕೈಕೊಳ್ಳುವವರಿದ್ದಾರೆ. ಒಗಸ್ತ ತಾ. ೧ರಲ್ಲಿ ಖಲಿಫತ ಕಮಿಟಿಯು ಸಂಪೂರ್ಣ ಹರತಾಳನ್ನು ಆಚರಿಸಬೇಕೆಂದು [illegible]

[illegible] ಭಂಗಕರವಾದ ಯಾವ ಕೃತ್ಯವನ್ನೂ ಮಾಡ [illegible] ಮಾಡಕೂಡದು ಎಂದು [illegible] ಸುತ್ತಿದ್ದಾರೆ. ಅಧಿಕಾರಿ [illegible] ಜನರಲ್ಲಿ ಪ್ರಾಣವನ್ನು ಹುಡುಕು [illegible] ಸಂಪೂರ್ಣವಾಗಿ ಗೊತ್ತಿದೆ [illegible] ತಮ್ಮ ಅನುಯಾಯಿಗಳಿಗೆ ಸಾರ್ವಜನಿಕ [illegible] ಎಳ್ಳಷ್ಟು ಕೂಡ ಭಂಗಗೊಳಿಸದಂತೆ ವರ್ತಿಸ [illegible] ಉಪದೇಶಿಸ ಹತ್ತಿದ್ದಾರೆ

[illegible] ಡಾಯರ ಪರ್ಸ್‌ಫಂಡು — ಹಿಂದೀ ಪ್ರಜೆಗಳಿಗೆ ಇತ [illegible] ಮತ್ತು ಪಂಜಾಬ ಪ್ರಕರಣ ಈ ಎರಡು ಸಂಗೆ [illegible] ಕಳವಳ ಉಂಟಾಗದೆಯಾದರೂ ಇಲ್ಲಿಯ ಜನ [illegible] ಐರ್ಲಂಡ ಮುಂತಾದ ದೇಶಗಳಲ್ಲಿ ಇಂತಹ ಅತ್ಯಾಚಾರಕ್ಕೆ ಈಡಾಗಿರುವುದಿಲ್ಲ, ಇನ್ನು ಮುಂದೆಯೂ ಈಡಾಗಲಿಕ್ಕಿಲ್ಲ ಈ ಸಂಗತಿಯು ಇಂಗ್ಲಂಡಿನೊಳಗಿನ ಮುತ್ಸದಿಗಳಿಗೆ ಸರಿಯಾಗಿ ಗೊತ್ತಾಗಿದೆ ಎಂದು ಮಿ॥ ಚರ್ಚಹಿಲ್‌ರು ಡಾಯರ ಪ್ರಕರಣದ ಪ್ರಸ್ತಾಪದಲ್ಲಿ ಮಾತಾಡಿದ ಮಾತುಗಳಿಂದ ಸ್ಪಷ್ಟವಾಗುತ್ತದೆ ಆದರೆ ಹಿಂದಿಗಳ ಈ ಸೌಮ್ಯ ಕಿಂಬಹುನಾ ಶಾಂತಸ್ವಭಾವದ ಪ್ರಯೋಜನವನ್ನು ಕೆಲವರು ಮಿತಿಮೀರಿ ಪಡಕೊಳ್ಳಲು ಯತ್ನಿಸುತ್ತಿದ್ದಾರೆಂದು ತೋರುತ್ತದೆ ನಮ್ಮ ಈ ವಿಧಾನಕ್ಕೆ ಡಾಯರ 'ಪರ್ಸ್‌ಫಂಡ' ಸಾಕ್ಷಿಯಾಗಿದೆ. ಡಾಯರನ ಸಹಸ್ರಾಪರಾಧಗಳಿಗೆ ಮುಂದಿನ ಅವನ ನೌಕರಿಯ ಮನಾಯಿಯು ಪ್ರಾಯಶ್ಚಿತ್ತವಾಗಿ ವಿಧಿಸಲ್ಪಟ್ಟಿದೆ ಎಂಬುದು ಈಗ ಎಲ್ಲರಿಗೆ ತಿಳಿದಿರುತ್ತದೆ ಈ ಶಿಕ್ಷೆಯು ಅಧಿಕವಾಯಿತು, ಹಿಂದುಸ್ಥಾನವನ್ನು ರಕ್ಷಿಸಿದ್ದಕ್ಕಾಗಿ ಅವನಿಗೆ ಮನ್ನಣೆಕೊಡುವುದನ್ನು ಬಿಟ್ಟು ನೌಕರಿಯಿಂದ ಅವನನ್ನು ತೆಗೆದುಹಾಕುವುದು ಯೋಗ್ಯವೆ ಎಂದು ಕಳವಳಪಡುವ ಕೆಲವು ಮಹಾತ್ಮರು ಡಾಯರನಿಗೆ ದ್ರವ್ಯದಾನವನ್ನು ಉಚಿತವಾಗಿ ಅರ್ಪಿಸಲು ನಿಶ್ಚಯಿಸಿ ಕೊಂಡಿದ್ದಾರೆ ಸರಕಾರವು ಯಾರನ್ನು, ಅವನ ಅಸಮರ್ಥನೀಯವಾದ ಅಮಾನುಷ ಕೃತ್ಯಗಳ ಬಗ್ಗೆ ಡಿಸ್‌ಮಿಸ್ ಮಾಡಿತೊ ಅಂಥವನನ್ನು ಪರ್ಸಫಂಡಿನ ಮುಖಾಂತರ ಬಹುಮಾನಿಸುವುದು, ಒಂದು ತರದಿಂದ ಸರಕಾರದ ಅಪಮಾನವಲ್ಲವೆ? ಪರಂತು ಸಾಮ್ರಾಜ್ಯದ ಛತ್ರದ ಕೆಳಗೆ ಇರುವ ಆ ಡಾಯರ ಪಕ್ಷೀಯರು ಸರಕಾರದ ಅಪಮಾನವನ್ನು ಗಣನೆಗೆ ಯಾಕೆ ತರುತ್ತಾರೆ? ಸರಕಾರದ ಮಾನಾಪಮಾನದ ಪ್ರಶ್ನೆಯು ಹೇಗೂ ಇರಲಿ, ಅದನ್ನು ನಾವು ಹಿಂದಿಗಳು ಅಷ್ಟೊಂದು ಆಸಕ್ತಿಯಿಂದ ತಲೆಯಲ್ಲಿ ಹಾಕಿಕೊಳ್ಳಬೇಕಾದ್ದಿಲ್ಲ ಆದರೆ ಅನೇಕ ತರದ ಅನಾಹೂತಗಳನ್ನೂ ಅತ್ಯಾಚಾರಗಳನ್ನೂ ಮಾಡಿದ ಮನುಷ್ಯನಿಗೆ, ಅವನ ಈ ಅಮಾನುಷ ಕೃತ್ಯಗಳು ಮನೋದೇವತೆಗೆ ಸರಿಯಾಗಿ ಗೊತ್ತಿರುವಾಗ ಪುನಃ ಬಹುಮಾನದ ದಕ್ಷಿಣೆಯನ್ನು ಕೊಡುವುದು ಸ್ವಾತಂತ್ರ್ಯ ಮತ್ತು ನ್ಯಾಯಪ್ರಿಯತೆಯ ಖ್ಯಾತಿಹೊಂದಿದ ಬ್ರಿಟಿಷ ಜನಾಂಗಕ್ಕೆ ಒಪ್ಪುತ್ತದೆಯೇ? ಇನಾಮುಗಳನ್ನೂ ದಕ್ಷಿಣೆಯನ್ನೂ ಕೊಡುವುದರಿಂದ ಅವನ ಕೃತ್ಯಗಳನ್ನು ಮನ್ನಿಸಿದಂತಾಗುವುದು, ಅವನಿಗೆ ಸಹಾನುಭೂತಿಯನ್ನು ತೋರಿಸಿದಂತಾಗುವುದು ಮಾತ್ರವಲ್ಲ, ಅವನ ಕೃತ್ಯದ ಮೇಲ್‌ಪಂಕ್ತಿಯನ್ನು ಅನ್ಯರಿಗೆ ಹಾಕಿಕೊಟ್ಟಂತಾಗುವುದು ಇದೆಲ್ಲ ಇಂಗ್ಲಿಷ್ ಜನಾಂಗಕ್ಕೆ ಒಪ್ಪುವುದೇ? ಅವರು ಅಂಗೀಕರಿಸಿರುವ ಸ್ವಾತಂತ್ರ್ಯ ಪ್ರಿಯತೆಗೆ ಒಪ್ಪುವುದೇ?

ಮುಂಬಯಿ ಗವರ್ನರರ ಭಾಷಣ — ಕೆಲವು ದಿನಗಳ ಹಿಂದೆ ಮುಂಬಯಿಯ ಗವರ್ನರ ಸಾಹೇಬರು ಧಾರವಾಡದ ಕರ್ನಾಟಕ ಕೊಲೇಜಿನ ಗೃಹಪ್ರವೇಶವನ್ನು ಮಾಡಿಸಿದ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಹೇಳಿದ ಮಾತುಗಳೆರಡು ಅತೀ ಅರ್ಥಗರ್ಭಿತವಾಗಿವೆ ಹಿಂದುಸ್ಥಾನಕ್ಕೆ ಈಗ ಸುಧಾರಣಾ ಏಣಿಯಂತೆ ಮೆಟ್ಟಿಲುಗಳನ್ನು ನಡಿಸಲಿಕ್ಕೂ ಜನತೆಗೆ ತನ್ನ ಹಕ್ಕುಬಾಧ್ಯತೆಗಳನ್ನು ಸರಿಯಾಗಿ ಬೋಧಿಸಿ ಅವರನ್ನು ಸುಪಥಕ್ಕೆ ಏರಿಸುವುದಕ್ಕೂ ಯೋಗ್ಯ ಕರ್ಣಧಾರರು ಬೇಕು ಎಂಬದೊಂದು. "ವಿದ್ಯಾರ್ಥಿಗಳು ಕೊಲೇಜಿನ ಮೆಟ್ಟಿಲುಗಳನ್ನು ಇಳಿದೊಡನೆ ರಾಜಕೀಯ ವಿಷಯಗಳಲ್ಲಿ ತಾವು ಪಾರಂಗತರಾಗಿದ್ದೇವೆ, ಯಾವುದೊಂದು ರಾಜಕೀಯ ಪ್ರಶ್ನೆಯಲ್ಲಿ ತಾವು ಪುಟ್ಟಿ ಗೋಖಲೆಯವರಾಗಿದ್ದೇವೆ ಎಂದು ತಿಳಿಯುತ್ತಾರೆ ಇದು ಶುದ್ಧ ಭ್ರಮೆ. ಗೋಖಲೆರಂಥವರು ಜನಪ್ರೀತಿಗೂ ವಿಶ್ವಾಸಕ್ಕೂ ಪಾತ್ರರಾಗುವ ಸ್ಥಾನವನ್ನು ಪಡೆಯಬೇಕಾದರೆ ಎಷ್ಟೋ ಸಾಧನೆ ಮೊದಲು ಮಾಡಿದ್ದಾರೆ, ಹಾಗಿಲ್ಲದೆ ಅವರಿಗೆ ಅಗತ್ಯವಿರುವ ಕರ್ತವ್ಯಜ್ಞಾನವು ಪ್ರಾಪ್ತಿಯಾಗಿಲ್ಲ" ಎಂದು ಸರ್ ಜೋರ್ಜ ಲ್ಲೋಯ್ಡ ಸಾಹೇಬರು (ಗವರ್ನರರು) ಹೇಳಿದರು ಬರೇ 'ಕುಡ್ತಾ' ತೊಟ್ಟು, ಶಾಲು ಹೊದ್ದುಕೊಂಡೊಡನೆ ಅಥವಾ ತಲೆಯನ್ನು ಒಂದು ಬಗೆಯಾಗಿ ಬಾಚಿಕೊಂಡು ವೀರಕಚ್ಚೆಯನ್ನು ಹಾಕಿಕೊಂಡೊಡನೆ ನಮಗೆ "ಹೋಮ್‌ರೂಲ್" ಹಸ್ತಗತವಾಯಿತು!" ಎಂಬಂತೆ ನಟಿಸುವ, ಮತ್ತು ಕಾಲಸ್ಥಿತಿಯನ್ನರಿಯದೆ, ಜನಗಳ ಪ್ರೋತ್ಸಾಹ ಬಳಿಕೆಯಿಲ್ಲದೆ, ಅವರ ಸ್ಥಿತಿಗತಿಗಳ ಪರಿಚಯವೇನೂ ಇಲ್ಲದೆ ಉಗ್ರಪಕ್ಷದ ತೀವ್ರ ಭಾಷಣಗಳ ಸೊಲ್ಲು ಒಂದೆರಡು ಇಲ್ಲೊಂದು ಅಲ್ಲೊಂದು ಎಂಬಂತೆ ಗುಟುಕು ಹಾಕಿ, ಯವ್ವಾತದ್ವಾ ಆಡಿ ತಮ್ಮ ಸ್ವಂತ ಕರ್ತವ್ಯವನ್ನು ಮರೆತು, ಕಾಲವ್ಯಯ ಮಾಡುವ ವಿದ್ಯಾರ್ಥಿ ತರುಣರು ಸರ್ ಲೋಯ್ಡರ ಸೂಕ್ತಿಗಳನ್ನು ಸ್ಮರಣೆಯಲ್ಲಿಟ್ಟುಕೊಂಡರೆ ಲೋಕಕ್ಕೆ ಉಪಕಾರವಾದೀತು ಎಂದು ನಾವು ತಿಳಿಯುತ್ತೇವೆ. "ಹೋಮ್‌ರೂಲು ಹಸ್ತಗತವಾಗಬೇಕಾದರೆ ಮೇಲಿನ ಬಾಹ್ಯ ವೇಷಾಡಂಬರಗಳು ಎಂದೆಂದಿಗೂ ಮೆಟ್ಟಲುಗಳಲ್ಲ. ಅಂತರ್ಯಶುದ್ಧಿ, ಕಾರ್ಯಕಾರ್ಯ ವಿಚಾರದ ಅನುಭವ, ಜನತೆಯ ನಿಜಸ್ಥಿತಿಯ ಪರಿಚಯ, ಕ್ಲೃಪ್ತವಾದ ಒಂದು ಧ್ಯೇಯ, ಆ ಧ್ಯೇಯವನ್ನು ಕೈಗೂಡಿಸುವುದಕ್ಕೆ ಹಟಯೋಗ ಇವೇ ಕಾರ್ಯಸಿದ್ಧಿಗೆ ಬೇಕಾದ್ದಲ್ಲದೆ 'ಕುಡ್ತಾಗಳೂ' ಅಲ್ಲ, ಉದ್ದಕ್ಕೆ ಮಡಚಿ ಸುತ್ತಿಕೊಂಡ ಶಾಲು ಜೋಡಿಯೂ ಅಲ್ಲ

ಮಂಗಳೂರು.

ರಸೆ ಪೆಂಡರರ ಸಂಕಷ್ಟಗಳು ಮತ್ತು ಮಸ್ಲಿಮ ವೋಟರರಿಗೆ ವಿಜ್ಞಾಪನೆ ಎಂಬುದನ್ನು ಕುರಿತು ಬಂದ ಟಿಪ್ಪಣಿಗಳನ್ನು ಈ ಸಂಚಿಕೆಯಲ್ಲಿ ಎಡೆ ದೊರೆಯಲಿಲ್ಲವಾದ್ದರಿಂದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು

ಮಂಗಳೂರಿನಲ್ಲಿರುವ ಗರ್ಲ್ಸ ಗವರ್ನಮೆಂಟ ಟ್ರೈನಿಂಗ ಶಾಲೆಯ ಉಪಾಧ್ಯಾಯಿನಿಯಾದ ಮಿಸ್ ಅಂಜೇಲಾ ಯಂ ಪಿ ಸಿಕ್ವೇರ ಇವರು ಸಬ್ ಅಸಿಸ್ಟೆಂಟ ಇನ್ಸ್‌ಪೆಕ್ಟ್ರೆಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಬಳ್ಳಾರಿಯ ಗರ್ಲ್ಸ ಗವರ್ನಮೆಂಟ ಟ್ರೈನಿಂಗ ಶಾಲೆಯ ಉಪಾಧ್ಯಾಯಿನಿಯಾಗಿ ನೇಮಕವಾಗಿದ್ದಾರೆಂದು ತಿಳಿಯುತ್ತೇವೆ.

ಕಾಸರಗೋಡಿನ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾದ ಮ॥ ರಾ॥ ಮಂಜೇಶ್ವರ ರಾಘವೇಂದ್ರ ರಾಯರು ಒಂದುವರೆ ತಿಂಗಳ ಪ್ರಿವಿಲೆಜ್ ರಜೆಯನ್ನು ಹೊಂದಿರುವುದರಿಂದ ಮಂಗಳೂರ ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾದ ಮ॥ ರಾ॥ ಪಕ್ಕಾಡಿ ವೆಂಕಟರಾಯರಿಗೆ ಕಾಸರಗೋಡಿನ ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿ ವರ್ಗವಾಗಿದೆ ಮತ್ತು ಮ॥ ರಾ॥ ಮೂಡಬಿದ್ರೆ ಗಣೇಶರಾಯರು ಮಂಗಳೂರ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾಗಿ ನೇಮಕವಾಗಿದ್ದಾರೆ

ಮ॥ ರಾ॥ ನರಸಿಂಹ ಪರ್ತು ಭಂಡಾರಿಗಳವರು ಮಂಗಳೂರ ತಾಲೂಕಬೋರ್ಡ ಮೆಂಬರರಾಗಿ ಚುನಾವಣೆಯಾದದ್ದು ಸರಕಾರದಿಂದ ಮಂಜೂರಾಗಿ ಬಂದಿರುತ್ತದೆ ಮಂಗಳೂರ ತಾಲೂಕು ಬೋರ್ಡಿಗೆ ಮಂಗಳೂರ ಇಲೆಕ್ಟೋರಲ್ ಸರ್ಕಲಿನಿಂದ ಮ॥ ರಾ॥ ಕರಿಯಂಗಳ ಮುತ್ತಯ ಶೆಟ್ರು ಚುನಾಯಿಸಲ್ಪಟ್ಟಿದ್ದಾರೆ ಡಿಸ್ಟ್ರಿಕ್ಟ ಬೋರ್ಡಿಗೆ ಮಂಗಳೂರ ತಾಲೂಕು ಬೋರ್ಡ ಮೆಂಬರರಿಂದ ಚುನಾವಣೆಯಾಗತಕ್ಕ ಒಂದು ಸ್ಥಾನಕ್ಕೆ ಮ॥ ರಾ॥ ಬೋಳ ಮಾಧವರಾವ್ ಮತ್ತು ಮ॥ ರಾ॥ ಕೆ ಮುತ್ತಯಶೆಟ್ರು ಉಮೇದ್ವಾರರಾಗಿ ಎದುರು ಬಂದಿದ್ದರು ಚುನಾವಣೆ ಬಗ್ಗೆ ಕಳೆದ ತಾ ೨೦ರಲ್ಲಿ ಜರುಗಿದ ಮಂಗಳೂರ ತಾಲೂಕು ಬೋರ್ಡಿನ ಅಧಿವೇಶನದಲ್ಲಿ ರಾ॥ ಮಾಧವರಾಯರಿಗೆ ಬಹುಮತದ ಓಟುಗಳು ದೊರಕಿ ಅವರೇ ಚುನಾಯಿಸಲ್ಪಟ್ಟರು

ಇದೇ ೨೫ನೆ ತಾರೀಕಿಗೆ ಗವರ್ನಮೆಂಟ ಕೊಲೆಜ ಹೊಲಿನಲ್ಲಿ ಸಾಯಂಕಾಲ ೬ ಗಂಟೆಗೆ ಸ್ಟೂಡೆಂಟ ಬ್ರದರ್ ಹೂಡ್ ಇದರ ಒಂದು ಮೀಟಿಂಗಿನಲ್ಲಿ ಇಲ್ಲಿಯ ಬೆರಿಷ್ಟರ್ ಮಿ ಆರ್ ಯಮ್ ರೇಯವರು ಹಿಂದೀ ಜನರು ಒಂದು ಜನಾಂಗ ಎಂಬ ವಿಷಯವನ್ನು ಎತ್ತಿ ಚರ್ಚಿಸುವರು ಮಿ ಜೆ ಯಚ್ ಎ ಮಸ್ಕರೇಂಞಾಸ್ ಬಿ ಎ ಎಲ್ ಎಲ್ ಬಿ ಇವರು ಅನುಮೋದಿಸುವರು ರಾ॥ ಎನ್ ಎಸ್ ಸುವರ್ಣ ಬಿ ಎ ಎಲ್ ಎಲ್ ಬಿ ಇವರೂ ಇವರ ಜತೆಯಲ್ಲಿ ರಾ॥ ಕುಡುಪಿ ವೆಂಕಟ್ರಾವ್ ಬಿ ಎ ಎಲ್ ಟಿ ಇವರೂ ವಿರುದ್ಧವಾದ ಮಾತಾಡಲಿಕ್ಕಿರುವರು ಸರ್ವರಿಗೂ ಸಂಬಂಧಪಟ್ಟ ವಿಷಯವಾದ್ದರಿಂದ ಸಭಿಕರು ತಮ್ಮ ಅಭಿಪ್ರಾಯಗಳನ್ನು ಕೊಡಬಹುದು ಎಲ್ಲರಿಗೆ ಸುಸ್ವಾಗತವಿದೆ ಸ್ತ್ರೀಯರಿಗೆ ಬೇರೆ ಸ್ಥಳ ಏರ್ಪಡಿಸಿಡುವ ಏರ್ಪಾಡು ಇದೆ ಎಂದು ಈ ಬ್ರದರ್ ಹೂಡಿನ ಸೆಕ್ರೆಟರಿಗಳು ತಿಳಿಸಿರುವರು

ಇದೇ ಜುಲೈ ೧೬ನೆ ತಾರೀಕಿಗೆ ಇದೇ ಬ್ರದರ್ ಹೂಡದ ಒಂದು ಮೀಟಿಂಗಿನಲ್ಲಿ ಮಿ ಆರ್ ಎಮ್ ರೇಯವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಮಹಾಜನದ ಒಂದು ಠರಾವು ಒಮ್ಮತದಿಂದ ಮಂಜೂರಾಗಿ ಅದರ ಯಥಾನಕಲನ್ನು ಯೂನಿವರ್ಸಿಟಿಯ ವೈಸಚಾನ್ಸಲರ ಬಳಿಗೆ ಕಳುಹಿಸಿಕೊಟ್ಟಿರುವರು

'೧೯೨೦ನೆ ಇಸವಿಯ ಇಂಟರ್‌ಮೀಡಿಯೇಟ್ ಮತ್ತು ಬಿ ಎ ಪರೀಕ್ಷೆಗಳಲ್ಲಿ ಇಂಗ್ಲಿಷ ಭಾಷಾಜ್ಞಾನ ಪರೀಕ್ಷೆಯಲ್ಲಿ ಅಪೂರ್ವ ರೀತಿಯಲ್ಲಿ ವಿದ್ಯಾರ್ಥಿಗಳು ಫೈಲಾದ್ದರಿಂದ ಬರುವ ಒಕ್ಟೋಬರದಲ್ಲಿ ಮತ್ತು ೧೯೨೧ನೆ ಏಪ್ರಿಲಿನಲ್ಲಿ ಸಹಾ ಈ ಪರೀಕ್ಷೆಗಳನ್ನು ಪುನಃ ಜರಗಿಸಿ, ಹಿಂದೆ ವಿದ್ಯಾರ್ಥಿಗಳು ಕಳೆದ ಪರೀಕ್ಷೆಗೆ ಓದಿದ ಪುಸ್ತಕಗಳಲ್ಲಿಯೇ ಸವಾಲು ಕೊಡಬೇಕೆಂದು ಮದ್ರಾಸು ಯೂನಿವರ್ಸಿಟಿಯ ವೈಸಚಾನ್ಸಲರರಿಗೂ ಸಿಂಡಿಕೇಟ (ಆಡಳಿತೆ ಸಭೆ) ಯರಿಗೂ ಈ ಸಭೆಯವರು ಕೇಳಿಕೊಳ್ಳುತ್ತಾರೆ ಈ ಠರಾವನ್ನು ರಾ॥ ಎಮ್ ಎಸ್ ಮಾಧವರಾವ್ ಬಿ ಎ ಇವರು ಚರ್ಚೆಗೆತ್ತಿ ಅದು ರಾ॥ ಚೆನ್ನಪ್ಪ ನಾಯರ್ ಮತ್ತು ರಾ॥ ಅಪ್ಪಾಜಿ ಸುವರ್ಣ ಇವರಿಂದ ಪುಷ್ಟೀಕರಿಸಲ್ಪಟ್ಟಿತು

"ಈ ಠರಾವಿನ ಯಥಾ ನಕಲನ್ನು ಯೂನಿವರ್ಸಿಟಿಯ ಸಿಂಡಿಕೇಟಿದವರ ಬಳಿಗೆ ರವಾನಿಸಿಕೊಡಬೇಕು' ಎಂಬ ಠರಾವನ್ನು ರಾ॥ ಪಿ ಪದ್ಮನಾಭ ಮೇನನ್ ಬಿ ಎ ಬಿ. ಎಲ್ ಇವರು ಸಭೆಯ ಮುಂದಿಟ್ಟು, ರಾ॥ ನಾರಾಯಣ್ಣ ನಂಬಿಯರ್ ಮತ್ತು ರಾ॥ ಎಮ್ ಜಿ ಅನಂದ ಇವರಿಂದ ಅನುಮೋದಿಸಲ್ಪಟ್ಟಿತು ಈ ಠರಾವುಗಳೆರಡೂ ಸರ್ವಾನುಮತದಿಂದ ಮಂಜೂರಾದವು.

ಈ ತಿಂಗಳ ಸೆಷ್ಷನಿನಲ್ಲಿ ಬಂಟವಾಳ ಸಬ್ ಮೆಜಿಸ್ಟ್ರೇಟರಿಂದ 'ಕಮ್ಮಿಟ್' ಆದ ಕ್ರಿಮಿನಲ್ ಮೊಕದ್ದಮೆಯ ವಿಚಾರವಾಯಿತು ಓಬಯ್ಯ ಮತ್ತು ೩ ಜನರು ಸದಾಶಿವ ಭಟ್ಟ ಎಂಬವನನ್ನು ಅವರಿಗೂ ಮೂರನೆ ಮುದ್ದೈಆತೆ ತಿಮ್ಮಯ್ಯನ ಹೆಂಡತಿಗೂ ಗುಟ್ಟಿನಲ್ಲಿ ಪ್ರೇಮವಿತ್ತು ಎಂಬ ಸಂದೇಹದ ಮೇಲೆ ಇದೇ ಕಳೆದ ಮಾರ್ಚ ೧೩ನೇ ತಾರೀಕಿಗೆ ಹೊಡದು ಕೊಂದು ಹಾಕಿದರೆಂಬ ಆಪಾದನೆ ಮೇಲೆ 'ಕಮ್ಮಿಟ್' ಮಾಡಲ್ಪಟ್ಟಿದ್ದರು ೨ನೆ ೩ನೆ ಆಪಾದಿತರು ತಪ್ಪುಗಾರರೆಂದು ಎಸೆಸ್ಸರರು ಅಭಿಪ್ರಾಯಪಟ್ಟರು ಅದು ಸರಿಯಲ್ಲವೆಂದು ತಿಳಿದು ಜಡ್ಜರು ಎಲ್ಲಾ ಆರೋಪಿಗಳನ್ನು ಖುಲಾಸೆ ಮಾಡಿಬಿಟ್ಟರು

ಇನ್ನೊಂದು ಮೊಕದ್ದಮೆಯಲ್ಲಿ ಹಸನ್ ಮತ್ತು ೫ ಜನರು ಸರಕಾರಿ ನವುಕರನೊಬ್ಬನು ಸರಕಾರಿ ಹುಕುಂ ಜಾರಿ ನಡಿಸುವ ಸಂದರ್ಭದಲ್ಲಿ ಆತಂಕ ಮಾಡಿ ಹೊಡೆದು ಗಾಯಪಡಿಸಿದರೆಂಬ ತಕ್ಸೀರಿನ ಮೇಲೆ ಕಾಸರಗೋಡು ಸಬ್ ಮೆಜಿಸ್ಟ್ರೇಟರಿಂದ 'ಕಮ್ಮಿಟ' ಮಾಡಲ್ಪಟ್ಟಿದ್ದರು ಮಂಜೇಶ್ವರ ಅಬಕಾರಿ ಸಬ್ ಇನ್ಸ್‌ಪೆಕ್ಟರ್ ಮಿ॥ ಡಿ ಆರ್ ಕೊರೆಯ ಇವರು ಕಳೆದ ಮಾರ್ಚ ೧೯ನೆ ತಾರೀಕಿನ ರಾತ್ರೆ ೨ ಗಂಟೆಗೆ ಹೊಸಬೆಟ್ಟು ಫಿಶಕ್ಯೂರಿಂಗ್ ಯಾರ್ಡಿಗೆ ಫಕ್ಕನೆ ಹೋದಾಗ ೧ನೆ ೨ನೆ ಆಪಾದಿತರು ಒಂದು ಚೀಲ ಹೊತ್ತುಕೊಂಡು ಹೋಗುವುದನ್ನು ಕಂಡು ಅದು ಕಳ್ಳಾಟಿಕೆಯಿಂದ ತೆಗದ ಉಪ್ಪು ಆಗಿರಬೇಕೆಂದು ಊಹಿಸಿ, ಅದರ ತನಿಖೆ ನೋಡಲಿಕ್ಕೆ ಯತ್ನಿಸಿದಾಗ, ೧ನೆ ೨ನೆ ಆಪಾದಿತರು ತಡೆಗಟ್ಟಿ ೩ ೪ ೫ ಆಪಾದಿತರು ಅಲ್ಲಿಗೆ ಬಂದು ಗುಲ್ಲೆಬ್ಬಿಸಿದರು ಆಗ ಸುಮಾರು ಹತ್ತಿಪ್ಪತ್ತು ಮಂದಿ ಕೂಡಿದರು ಆ ಪೈಕಿ ೬ನೆ ಆಪಾದಿತನು ಒಬ್ಬನು ಇವರೆಲ್ಲರೂ ಕೂಡಿ ಸಬ್‌ಇನ್ಸ್‌ಪೆಕ್ಟರನ್ನು ಹೊಡೆದು ಅವರ ಕೆಲಸಕ್ಕೆ ಆತಂಕ ಮಾಡಿದರೆಂಬದು ಇವರ ಮೇಲಣ ಆರೋಪ ಜಡ್ಜರು ಈ ಕಥನವನ್ನು ನಂಬಿ ೧, ೨ ೪, ೫, ೬ನೆ ಆರೋಪಿಗಳಿಗೆ ೪ ತಿಂಗಳ ಕಠಿಣ ಸಜಾ, ಮತ್ತು ೨೫ ರೂಪಾಯಿ ಜುರುಮಾನೆ ೩ನೆಯವನಿಗ ೧ ವರ್ಷದ ಕಠಿಣ ಸಜೆ ಮತ್ತು ೧೦೦ ರೂಪಾಯಿ ಜುರುಮಾನೆ ವಿಧಿಸಿದರು

ಪುತ್ತೂರ ಸಬ್ ಮೆಜಿಸ್ಟ್ರೇಟರಿಂದ ಕಮಿಟ್ ಆದ ಮೊಕದ್ದಮೆಯು ಅನಂತರ ವಿಚಾರಕ್ಕೆ ಬಂತು ಕೊರಗ ಎಂಬವನು ತರಕತ್ತಿಯಿಂದ ಪಕೀರ ಎಂಬವನಿಗೆ ತಿವಿದು ಕೊಂದನು ಎಂದು ಬಂದ ಮೊಕದ್ದಮೆಯಲ್ಲಿ ಹೈಕೋರ್ಟಿನ ಮಂಜೂರಾತಿಗೆ ಒಳಪಟ್ಟು ಫಾಶಿಶಿಕ್ಷೆ ವಿಧಿಸಲಾಯಿತು

ಮಂಗಳೂರು ಪಟ್ಟಣದಲ್ಲಿ ಶಿಶುಗಳ ಪಾಲನವು ಯೋಗ್ಯ ರೀತಿಯಲ್ಲಿ ನಡಿಯುವುದಿಲ್ಲವಾದ್ದರಿಂದ ಇಲ್ಲಿ ವರುಷಂಪ್ರತಿ ಶಿಶುಗಳ ಮರಣದ ಸಂಖ್ಯೆಯು ಏರುತ್ತಿರುವುದರಿಂದ ಮಕ್ಕಳಲ್ಲಿ ಆರೋಗ್ಯವನ್ನು ಪಸರಿಸಿ ಮರಣವನ್ನು ತಗ್ಗಿಸಲು ಯೋಗ್ಯ ಏರ್ಪಾಡುಗಳನ್ನು ಮಾಡಲು ಆಲೋಚಿಸುವರೆ ನಿನ್ನೆ ದಿನ ಮಧ್ಯಾಹ್ನ ಕಲೆಕ್ಟರ ದೊರೆಗಳ ಅಧ್ಯಕ್ಷತೆಯಲ್ಲಿ ಪಟ್ಟಣದ ಹಲವು ಗೃಹಸ್ಥರ ಮತ್ತು ಗೃಹಿಣೀಯರ ಸಭೆಯೊಂದು ಕೂಡಿ ಶಿಶುಗಳ ಆರೋಗ್ಯರಕ್ಷಣೆಯ ಬಗ್ಗೆ ಚಿಲ್ಡ್ರನ್ಸ್ ಹೆಲ್ತ್ ಎಂಡ್ ವೆಲ್‌ಫೇರ್ ಎಸೋಸಿಯೇಶನ್ ಎಂಬ ಸಭೆಯನ್ನು ಸ್ಥಾಪಿಸಿ, ಈ ಸಂಘದ ಅಗತ್ಯವುಳ್ಳ ಕಾರ್ಯಗಳನ್ನು ನಿರ್ವಹಿಸಲು ಮಂಗಳೂರ ಲೇಡಿಸ್ ಕ್ಲಬ್ಬಿನ ಪ್ರತಿನಿಧಿಯಾದ ಮಿಸೆಸ್ ಯಂ. ಎಸ್ ಶ್ರೀಪ್ಪ ಮಹಿಳಾಸಭೆಯ ಪ್ರತಿನಿಧಿಯಾದ ಶ್ರೀಮತಿ ಮನೋರಮಾಬಾಯಿ ಮತ್ತು ಇತರ ಆರು ಮಂದಿ ಗೃಹಸ್ಥರಿಂದ ಕೂಡಿದ ಒಂದು ಕಮಿಟಿಯು ನೇಮಕವಾಯಿತು ಅಲ್ಲದೇ ಸದ್ಯದಲ್ಲಿ ಒಂದು ಮಹಾಸಭೆಯನ್ನು ಜರುಗಿಸಬೇಕಾಗಿಯೂ ನಿರ್ಣಯಿಸಿ ಸಭೆಯು ತೀರಿತು

ಪುತ್ತೂರು ಲೋಕಲಫಂಡು ತಾಲೂಕನ್ನು ಉಪ್ಪಿನಂಗಡಿ ಲೋಕಲಫಂಡು ತಾಲೂಕು ಕಾಸರಗೋಡು ಲೋಕಲಫಂಡು ತಾಲೂಕು ಎಂತಲೂ ಇಬ್ಭಾಗವಾಗಿ ವಿಭಾಗಿಸಬೇಕಾಗಿ ಪುತ್ತೂರು ತಾಲೂಕು ಬೋರ್ಡಿನವರೂ ಡಿಸ್ಟ್ರಿಕ್ಟ ಬೋರ್ಡಿನವರೂ ಏರಕೊಂಡ ಮೇರೆಗೆ ಇದೇ ಬರುವ ಒಗಸ್ಟ ತಾ ೧ರಿಂದ ಮೇಲಿನ ವ್ಯವಸ್ಥೆಯು ಜಾರಿಗೆ ಬರಬಹುದಾಗಿ ಸರಕಾರದ ಹುಕುಂ ಹೊರಟಿರುವುದಾಗಿ ತಿಳಿಯುತ್ತೇವೆ.

ದಕ್ಷಿಣ ಕನ್ನಡಾ ಸಬೋರ್ಡಿನೇಟ್ ಕೋರ್ಟಿನಲ್ಲಿ.

ಕ್ರಮ ನಂಬ್ರ $\frac{26}{1915}$

ಚೆರ್ಡಪ್ಪ ಕಮ್ತಿ ಕೂಡಾ — ವಾದಿರು

ಮತ್ತು

ಶ್ರೀನಿವಾಸ ಶ್ಯಾನಭಾಗ ಕೂಡಾ — ಪ್ರತಿವಾದಿರು

ಮೂಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಮುಂದಿನ ಆಡಳಿತೆ ಕುರಿತು ವಾದಿರು ಹಾಜರು ಪಡಿಸಿದ ಸ್ಕೀಮಿನ ಕ್ರಮಗಳನ್ನು ತಿದ್ದುಪಡಿಸುವರೆ ಮೂಲ್ಕಿ ವ ಹತ್ತರದ ಗ್ರಾಮಗಳ ಗೌಡ ಸಾರಸ್ವತ ಬ್ರಾಹ್ಮಣ ವೃಂದದವರಲ್ಲಿ ಯಾರೊಬ್ಬರಾದರೂ ತಮ್ಮ ಸೂಚನೆಗಳನ್ನು ತಾ. 11—8—1920ಕ್ಕೆ ಸದ್ರಿ ಕೋರ್ಟಿಗೆ ಮನವಿ ಮಾಡಿಕೊಳ್ಳಬಹುದು

ತಾ 23 – 7 – 1920 **A Varada Rau,**
Vakil for plffs

[illegible]

[illegible] ಸರಕಾರ [illegible] ಕೆಲಸ [illegible]

ತರ್ಕ್, ಬಿಟ್ಟಿತು. ಪ್ರಶಾನಿಯುಕ್ತ ಮೆಂಬರರಲ್ಲಿ ಅನೇಕರು ಇದನ್ನು ಸಮರ್ಥಿಸಿದರು. ಸರಕಾರ ಕಡೆಯಿಂದ ಬಂದ ಉತ್ತರದಲ್ಲಿ ಇದು ಯುಕ್ತವಲ್ಲ. ಆದರೆ ಸಭಿಕರು ಅಥವಾ ಸೆನೆಟದವರು ಇತ್ಯರ್ಥ ಸಲ್ಲ ಬೇಕಾದ್ದರಿಂದ ಆ ಸಭೆಯವರಿಗೆ ಈ ವಿಷಯದಲ್ಲಿ ಪ್ರಥಮತಃ ಎಲ್ಲರಿಗೆ ತಿಳಿಸದೆ ಇಲ್ಲಿ ವಾದಿಸಿ ಫಲವಿಲ್ಲವೆಂದು ತಿಳಿಯಿತು. ಆದರೂ ಈ ಠರಾವು ಬಹುಮತದಿಂದ ಮಂಜೂರಾಯಿತು. ಇನ್ನು ಸೆನೆಟದವರು ಈ ವಿಷಯದಲ್ಲಿ ಹೇಗೆ ವರ್ತಿಸುವರೆಂದು ನೋಡಲಿಕ್ಕಿದೆ.

ಹೊಸ ಸೆಟ್ಲಮೆಂಟು ಜಾರಿಗೆ ತರುವುದಕ್ಕೆ ಈಗ ಕೆಲವು ಜಿಲ್ಲೆಗಳಲ್ಲಿ ನಡೆಸುವ ಕೆಲಸವನ್ನು ಸ್ಥಗಿತಗೊಳಿಸಿ, ಮತ್ತು ಸಟ್ಲಮೆಂಟು ತತ್ವಗಳನ್ನು ಸ್ಥಿರವಾಗಿ ಒಂದು ಕಾನೂನು ಏರ್ಪಡಿಸಬೇಕು ಎಂಬದಾಗಿ ತಂದ ಠರಾವು ಮಂಜೂರಾಗಲಿಲ್ಲ. ಆ ಕೆಲಸ ನಿಲ್ಲಿಸಿದರೆ ಅದಕ್ಕೆ ನೇಮಿಸಿದ ೩೦೦೦ ನವುಕರರು ಕೆಲಸದಿಂದ ನಿವೃತ್ತಿ ಹೊಂದಬೇಕಾಗುವುದು. ಈಗ ಜಾರಿಗೆ ತರಲಿಕ್ಕಿದ್ದ ಕಾನೂನು ಮಸೂದೆ, ವರಿಷ್ಠ ಸರಕಾರದಿಂದ ಮಂಜೂರಾಗಿ ಈ ಸಭೆಯಲ್ಲಿ ಚರ್ಚೆಗೆ ಇನ್ನು ಕೆಲವು ಕಾಲ ಬೇಕಾದೀತು ಎಂದು ಸರಕಾರ ಕಡೆಯಿಂದ ಉತ್ತರ ಬಂತು.

ಬೇರೆ ಬೇರೆ ಇಲಾಖೆಗಳಲ್ಲಿ ಸರಕಾರದ ಖರ್ಚು ಕಡಿಮೆಮಾಡುವುದಕ್ಕೆ ಸೂಚನೆಗಳನ್ನು ತಯಾರಿಸಲು ಸ್ಪೆಶಲ್ ಡ್ಯೂಟಿ ಮೇಲೆ ಇದ್ದ ನಾಮ ದಾರ ಮಾರ್ನೆಲ್ ಸಾಹೇಬರಿಗೆ ಸಹಾಯ ಮಾಡುವುದಕ್ಕೆ ದೇಶೀಯರಲ್ಲಿ ಸರಕಾರ ಹುದ್ದೆಯವನೊಬ್ಬನು ಹುದ್ದೆದಾರನಲ್ಲದವನೊಬ್ಬನು ನೇಮಕ ವಾಗಬೇಕೆಂದು ತಂದ ಠರಾವಿಗೆ ಸರಕಾರದವರು ಒಪ್ಪದಿರುವುದರಿಂದ ಹಿಂದೆಗೆಯಲಾಯಿತು.

ಈ ಸಂಸ್ಥಾನದಲ್ಲಿ ಕಾಗದದ ಕೈಗಾರಿಕೆಯ ಪ್ರೋತ್ಸಾಹದ ಬಗ್ಗೆ ಆವಶ್ಯ ಸಾಮಗ್ರಿಗಳು ಎಷ್ಟು ಸಿಗಬಹುದು ಎಂದು ಮೊದಲಾದ ವಿಷಯದಲ್ಲಿ ವಿಚಾರ ನಡಿಸುವದಕ್ಕೆ ಸರಕಾರವು ಈ ಮೊದಲೇ ಉದ್ಯುಕ್ತವಾಗಿದೆ ಎಂದು ತಿಳಿದು ಬಂದದರಿಂದ ಈಗ ಸ್ಥಾಪನೆಯಾದ ಕರ್ನಾಟಕ ಪೇಪರ್ ಮಿಲ್ಸ್ ಕಂಪೆನಿಯವರಿಗೆ ಸರಕಾರ ಕಾಡುಗಳಿಂದ ಸಾಕಷ್ಟು ಸಾಮಗ್ರಿಗಳನ್ನು ಒದಗಿಸಬೇಕೆಂದು ಸೂಚಿಸಿ ಆ ಸಂಬಂಧದ ಠರಾವನ್ನು ಹಿಂದೆಗೆಯಲಾಯಿತು.

ಲೋಕಲ್ ಬೋರ್ಡುಗಳಲ್ಲಿ-ಪ್ರೆಸಿಡೆಂಟರನ್ನು ಚುನಾಯಿಸುವ ಅಧಿಕಾರವನ್ನು ಆದಷ್ಟು ಬೇಗನೇ ಎಲ್ಲಾ ಬೋರ್ಡುಗಳಿಗೆ ಕೊಡಿಸಬೇಕೆಂಬ ಠರಾವು ಆ ವಿಷಯವನ್ನು ಹೊಸ ಲೋಕಲ್ ಬೋರ್ಡು ಎಕ್ಟಿನ ಚರ್ಚೆಕಾಲದಲ್ಲಿ ತರಬಹುದೆಂದು ಹಿಂದೆಗೆಯಲಾಯಿತು.

ಸಾಲೆಗಳಲ್ಲಿ ಬೆಳಿಗ್ಗೆ ೧೧ರಿಂದ ೫ರ ವರೆಗೆ ಕೆಲಸ ಮಾಡುವ ಬದಲಾಗಿ ಬೆಳಿಗ್ಗೆ ಮತ್ತು ಸಾಯಂಕಾಲ ಅಂದರೆ ಬಿಸಿಲಿನ ಧಾವತಿ ವಿರುದ್ಧ ವ್ಯವಸ್ಥೆ ಮಾಡುವಂತೆ ತಂದ ಠರಾವಿನ ವಿಷಯದಲ್ಲಿ ಆಯಾ ಸಾಲೆಯ ಮೆನೆಜರುಗಳಿಗೆ ಸ್ವಾತಂತ್ರ್ಯವಿದೆ ಎಂದು ತಿಳಿಸಿದ್ದರಿಂದ ಚರ್ಚೆ ವಿಶೇಷ ನಡೆಯಲಿಲ್ಲ.

ಸಬ್ ರಜಿಸ್ಟ್ರಾರುಗಳ ಸಂಬಳ ಏರಿಸುವ ವಿಷಯದಲ್ಲಿ ಸರಕಾರವು ಈಗ ಮಾಡುತ್ತಿರುವ ಹಂಚಿಕೆಯು ಬೇಗನೆ ಹೊರಬೀಳಲಿಕ್ಕಿರುವುದು ಎಂದು ತಿಳಿದ ನಿಮಿತ್ತ ಚರ್ಚೆ ಮುಂದೊತ್ತಲಿಲ್ಲ. ಈ ಇಲಾಖೆಯಲ್ಲಿ ಗ್ರೆಡ್ಯುವೇಟರ ಸಂಖ್ಯೆ ಕಡಿಮೆಯಾಗುತ್ತ ಬಂದದ್ದು ಬ್ರಾಹ್ಮಣೇತರ ಸಂಖ್ಯೆಯನ್ನು ಇಲಾಖೆಯಲ್ಲಿ ಹೆಚ್ಚಿಸುವ ಪ್ರಯತ್ನದಿಂದಲೇ ಆಯಿತು ಎಂದು ತಿಳಿಯುತ್ತದೆ.

ಈಗ ನೊನ್‌ಗಜೆಟೆಡ್ ಆಫೀಸರರಿಗೆ ಕೊಟ್ಟ ಹಂಗಾಮಿ ಬತ್ತೆಯನ್ನು ಏರಿಸಬೇಕೆಂದು ಹೇಳಿ ಮುಂಬೆಯ ದರಗಳನ್ನು ಕೋರಿಸಿದಾಗ ಮುಂಬಯಿಯ ಬಜೆಟನ್ನು ನೋಡಿದರೆ ಬರುವ ವರ್ಷಾಂತ್ಯದಲ್ಲಿ ೩೯೯ ಲಕ್ಷ ರೂಪಾಯಿ ಶಿಲಕು ಉಳಿಯುವಂತಿದೆ, ಆದರೆ ಮದ್ರಾಸಿನಲ್ಲಿ ಬರಿ ೪೫ ಲಕ್ಷ ರೂಪಾಯಿ ಮಾತ್ರ ಉಳಿದೀತು ಎಂದು ಸರಕಾರದವರು ತಿಳಿಸಿದರು. ಮುಖ್ಯವಾಗಿ ಹಣದ ಶಿಲಕು ಕಡಿಮೆಯಾಗಿದ್ದುದೇ ಕೈ ಬಿಗಿಹಿಡಿಯುವುದಕ್ಕೆ ಸರಕಾರದವರಿಗೆ ಒತ್ತಾಯ ಪಡಿಸುತ್ತದೆ ಎಂದು ನಾವು ತಿಳಿಯುತ್ತೇವೆ.

ದೇಶೀಯ ಗಿಡಮೂಲಿಕೆಗಳನ್ನು ಔಷಧಗಳ ಬಗ್ಗೆ ಸರಕಾರದವರು ಬೆಳೆಸುವ ಯತ್ನಮಾಡಬೇಕೆಂಬ ಸೂಚನೆಯು ಬಿದ್ದುಹೋಯಿತು. ಈ ಪ್ರಯತ್ನದಲ್ಲಿ ಸರಕಾರದವರಿಗೆ ವಿಶ್ವಾಸವಿಲ್ಲವೆಂದು ಚರ್ಚೆಯಿಂದ ತಿಳಿದು ಬರುತ್ತದೆ.

ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಭಾಷಾಜ್ಞಾನದ ವಿಷಯ ಬಿಟ್ಟು ಬಾಕ್ಯುಳಿದವುಗಳಲ್ಲಿ ಈಗಿನಂತೆ ಇಂಗ್ಲಿಷ ಭಾಷೆಯಲ್ಲಿ ಉತ್ತರಿಸುವ ಬದಲಾಗಿ ದೇಶಭಾಷೆಗಳಲ್ಲಿ ಉತ್ತರ ಕೊಡುವುದಕ್ಕೆ ನಿರ್ಬಂಧವೇನೂ ಇಲ್ಲ, ಆ ಬಗ್ಗೆ ಅರ್ಜಿಗಳು ಬಂದಲ್ಲಿ ಸರಕಾರದವರ ಅಪ್ಪಣೆ ಪಡಕೊಳ್ಳಲಿಕ್ಕಿದ್ದೀತೆ ಎಂದು ಮ| ಡಿರೆಕ್ಟರ್ ಸಾಹೇಬರು ತಿಳಿಸಿದರು.

ಗ್ರಾಮಪಂಚಾಯತುಗಳ ಬಿಲ್ಲ್.

ಗ್ರಾಮ ಪಂಚಾಯತುಗಳನ್ನು ಏರ್ಪಡಿಸಿ ತನ್ಮೂಲಕ ಹಳ್ಳಿಯ ಸಂಸ್ಥೆಗಳ ವಿಚಾರಸಬಾರ ನಡಿಸಬೇಕೆಂದು ಡಿಸೆಂಟ್ರಲಾಯ್ಜೇಶನ್ ಕಮಿಶನದವರು ಸೂಚನೆ ಮಾಡಿದ ಮೇರೆಗೆ ೧೯೧೩-೧೪ರಲ್ಲಿ ಲೋಕಲ್ ಬೋರ್ಡು ಎಕ್ಟಿನಲ್ಲಿ ಕೆಲವು ತಿದ್ದುಪಡಿ ಮಾಡಿ ಸಣ್ಣ ಯೂನಿಯನ್ ಪಂಚಾಯತುಗಳನ್ನು ಸ್ಥಾಪಿಸಬೇಕೆಂತಲೂ ಕಂದಾಯ ಎತ್ತುವ ಅಧಿಕಾರವಿಲ್ಲದೆ ಬೋರ್ಡಿನವರಾಗಲಿ ಸರಕಾರದವರಾಗಲಿ ಒಪ್ಪಿಸಿಕೊಟ್ಟ ಹಣದ ಸಹಾಯದಿಂದ ಆಡಳಿತೆ ನಡಿಸುವ ಬೇರೆಯದೊಂದ ಪಂಚಾಯತುಗಳನ್ನು

[illegible]

[illegible] ಈ ಹೊಸ ಚಳವಳಿಗೆ [illegible] ಮಸೂದೆ ತಯಾರಾಗಿ ಬರುವ ನ್ಯಾಯವಿಧಾಯಕ ಸಭೆಯಲ್ಲಿ ಪ್ರಥಮ ಚರ್ಚೆಗೆ ಬರಲಿಕ್ಕಿರುವದು.

[illegible] ಕೆಲವು ಸವಲತ್ತುಗಳನ್ನು ಕಾಯಿದೆಯ ಬಲದಿಂದ ಈ ಹೊಸ ಪಂಚಾಯತುಗಳು ಒದಗಿಸಿಕೊಡಲಿಕ್ಕಿರುವವು. ಗ್ರಾಮದ ಪಟೇಲರು ಇದಕ್ಕೆ ಒಬ್ಬ ಹುದ್ದೆದಾರಿ ಮೆಂಬರರು. ಇತರ ಮೆಂಬರರನ್ನು ಆಯಾ ಗ್ರಾಮದವರೇ ಚುನಾಯಿಸಬೇಕಾಗುವುದು. ಸರಕಾರದಿಂದ ನಿಶ್ಚಿತವಾದ ಮಿತಿಗೆ ಒಳಪಟ್ಟು, ಕಂದಾಯ ಎತ್ತುವ ಅಧಿಕಾರವು ಈ ಪಂಚಾಯತುಗಳಿಗೆ ಇರುವುದು. ಪ್ರಥಮದಲ್ಲಿ ಈ ಪಂಚಾಯತುಗಳು ವಹಿಸಿಕೊಳ್ಳುವ ಜವಾಬ್ದಾರಿಗಳು ಕಡಿಮೆಯಾಗಿದ್ದರೂ ಈ ಜವಾಬ್ದಾರಿಗಳನ್ನು ನಿರ್ವಹಿಸುವ ಸಾಮರ್ಥ್ಯವು ಬೆಳೆದ ಮೇಲೆ ಹೊಸ ಜವಾಬ್ದಾರಿಗಳನ್ನು ಒಂದೊಂದಾಗಿ ಈ ಪಂಚಾಯತುಗಳಿಗೆ ವಹಿಸಿಕೊಡುವದಾಗಿ ಸರಕಾರದವರು ನಿಶ್ಚಯಿಸಿದ್ದಾರೆ. ಗ್ರಾಮ ಕೋರ್ಟುಗಳ ಎಕ್ಟಿನಲ್ಲಿ ಇನ್ನೂ ಕೆಲವು ಬದಲಾವಣೆಗಳು ಆಗಿರುವುದರಿಂದ ಗ್ರಾಮ ಕೋರ್ಟುಗಳಿಗೆ ಇರುವ ಅಧಿಕಾರವನ್ನು ಈ ಪಂಚಾಯತುಗಳಿಗೆ ಒಪ್ಪಿಸಿಕೊಡುವ ಆಲೋಚನೆಯು ಸರಕಾರದವರಿಗೆ ಇಲ್ಲ. ಒಂದೇ ಗ್ರಾಮದಲ್ಲಿ ಬೇರೆ ಬೇರೆ ಬಗೆಯ ಪಂಚಾಯತುಗಳನ್ನು ಬೇರೆಯಾಗಿ ನಿರ್ಮಿಸುವ ಅಧಿಕಾರವು ಈ ಹೊಸ ಎಕ್ಟಿನಲ್ಲಿ ಇಟ್ಟಿರುವುದಾದರೂ ಸಾಮಾನ್ಯವಾಗಿ ಹಳ್ಳಿಗೆ ಒಂದೇ ಪಂಚಾಯತನ್ನು ಮಾಡಿ ಅದಕ್ಕೆ ಆಯಾ ಗ್ರಾಮದ ವಿದ್ಯಾಭ್ಯಾಸ, ಆರೋಗ್ಯ ರಕ್ಷಣೆ, ಕಾಡುಗಳ ಸಂರಕ್ಷಣೆ ಮುಂತಾದ ಅಧಿಕಾರಗಳು ಸಿಗಲಿಕ್ಕಿರುವವು.

ಈ ಪಂಚಾಯತುಗಳನ್ನು ರಿಜಿಸ್ಟರುಮಾಡಿ ಅವುಗಳಿಗೆ ದಾರಿ ತೋರಿಸುವದಕ್ಕೂ ಅವುಗಳ ಮೇಲ್ವಿಚಾರ ನೋಡಲಿಕ್ಕೂ ಒಬ್ಬ ರಿಜಿಸ್ಟ್ರಾರರು ನೇಮಕವಾಗುವರು. ಸಂಪೂರ್ಣ ಸ್ವತಂತ್ರ ಬುದ್ಧಿಯಿಂದ ಹಳ್ಳಿಯ ಜನರು ಈ ಬಗೆಯ ಸಂಸ್ಥೆಗಳನ್ನು ನಡಿಸಲು ಪ್ರಾಪ್ತರಾಗುವ ವರೆಗೆ ಈ ರಿಜಿಸ್ಟ್ರಾರರ ಇಲಾಖೆ ಜಾರಿಯಲ್ಲಿರುವದು.

ಅನೃತವಾದಿಯನ್ನೆಂದಿಗೂ ನಂಬರು.

॥ ಧೋಗಿ ಪಟ್ಟದ — ತಿರುಕನೋರ್ವ ಸೂರಮುಂದೆ ಎಂಬಂತೆ ॥

ಅರಿವೆಗಳನು ತೊಳೆದು ಜನರ, । ಬರುವ ಹಣದಿ ತನ್ನ ಒಡಲ ।
ಹೊರಿಸುತಿದ್ದ ಅಗಸನೋರ್ವನೊಂದು ದಿನದಲಿ ॥
ಕೆರೆಗೆ ಹೋಗಿ ಬಟ್ಟೆಯೊಗೆಯು । ತಿರಲು ಹಾಸ್ಯಕೆಂದು ಬರಿದೆ ।
"ಅರರೆ! ಮೊಸಳೆ ಬಂತು, ಮೊಸಳೆ"ಯೆಂದು ಕೂಗಿದ ॥ ೧ ॥
ದೊರೆಯ ಕೇಳಿ ನೆರೆಯ ಜನರು । ಕರೆದು ನೆಗಳೆಯನ್ನು ಅಬಲ ।
ನರನ ಘೋರೆಯ, ದೊಣ್ಣೆ ಕತ್ತಿಗಳನು ಹಿಡಿಯುತ ॥
ಕೆರೆಯ ಸೇರಿ ನೋಡೆ, ನಕ್ರ । ನರಲೆ, ಇಲ್ಲ; ಕೈಯ ತಟ್ಟಿ ।
ಜರುಷದಿಂದ ನಗುವ ರಜಕನನ್ನು ಕಂಡರು ॥ ೨ ॥
"ಸುಳ್ಳುಗಾರನಿವನು ನೋಡೆ । ಕೇಳಿ ಕಾರ್ಯನಾದ ದಯದಿ ।
ಪಾಲಿಸಲ್ಕೆ ಬಂದು ನಾವು ಮೋಸಹೋದೆವು ॥
ಎಳ್ಳನಿತುಂ ನಂಬ ಬೇಡಿ । ಪೆಳ್ಳ ನಟಿಯನೆಂದು ಅವನ ।
ಪಳಿದು ಪಳಿದು ಜನರು ತಮ್ಮ ಮನೆಗೆ ನಡೆದರು ॥ ೩ ॥
ಕಳೆಯ ಸ್ವಲ್ಪಕಾಲ, ಕೆರೆಯ । ಒಳಗೆ ಇದ್ದ ಮೊಸಳೆ ಮೇಲೆ ।
ಸುಳಿಯೆ, ಅವನು —"ಮೊಸಳೆ ಬಂತು, ಮೊಸಳೆ"ಯೆನ್ನುತ ॥
ಛಲದಿ ಒದರೆ, ಮೊದಲಿನಂತೆ । ಅಳುತಿರುವನು ಬರಿದೆ ಎಂದು ।
ತಿಳಿದು ಮನದಿ ಜನರು ಸುಮ್ಮಗಿರಲು, ಅಗಸನ ॥ ೪ ॥
ಕಾಲಹಿಡಿದು ಮೊಸಳೆ ಕೆರೆಯ । ಆಳವಾದ ತಳವ ಸೇರೆ, ।
ಗೋಳನಿಟ್ಟು ಮರುಗಿ ತನ್ನ ಪ್ರಾಣಬಿಟ್ಟನು ॥
ಸುಳ್ಳನಾಡುವವನು ತಾನು । ಮೇಲೆನಿಸುವ ಸತ್ಯವನ್ನು ।
ಪೇಳೆ ಕೂಡ ನಂಬದಿಹರು! ಸತ್ಯನುಡಿಯೊ ನೀ ಸ್ಥಿರ ॥ ೫ ॥

ಜಿ. ಎನ್. ಲಕ್ಷ್ಮಣಪೈ.

ಪಕ್ವವಾದ ಹಣ್ಣುಗಳನ್ನು ಕೊಳೆತು ಹೋಗದ ಹಾಗೆ ಕಾಪಾಡುವುದು.

ಸೀಲೋನ ದೇಶದ Tropical Agriculturist ಎಂಬ ಮಾಸಪತ್ರಿಕೆಯ ಕಳೆದ ಮೇ ತಿಂಗಳ ಅಂಕೆಯಲ್ಲಿ ಪಕ್ವವಾದ ಹಣ್ಣುಗಳನ್ನು ಹಾಳಾಗದೆ ಉಳಿಯುವಂತೆ ಒಂದು ಕ್ರಮವನ್ನು ತಿಳಿಸೋಣವಾಗಿದೆ. ಸಿಪ್ಪೆ ಸುಲಿಯದೆ ಇಡೀ ಹಣ್ಣುಗಳನ್ನು ಬಾಯಿಯಲ್ಲಿ ಹಾಕಿ ತಿನ್ನುವ ಸಂಗತಿಯಲ್ಲಿ ಈ ಕೆಳಗಿನ ಕ್ರಮವು ಹೇಳಿಯದೆ.

ಬಾವಿಯಿಂದ ತೆಗೆದ ತಣ್ಣೀರಲ್ಲಿ ನೀರಿನ ೧೦೦ ಪಾಲಿಗೆ ಮೂರರಷ್ಟು (ಶೇಕಡಾ ೩) ಮದ್ದಿನ ವಸ್ತುಗಳ ಅಂಗಡಿಗಳಲ್ಲಿ ಮಾರುವಂಥಾ Commercial formalin ಎಂಬ ದ್ರಾವಕವನ್ನು ತಂದು ಬೆರಸಿ ಅಂಥಾ ನೀರಿನಲ್ಲಿ ೧೦ ಮಿನಿಟುಗಳ ಪರಿಯಂತ ಅಂಥಾ ಹಣ್ಣುಗಳನ್ನು ಮುಳುಗಿಸಿ ಇಟ್ಟು ನಂತರ ಅದನ್ನು ತೆಗೆದು ೫ ಮಿನಿಟುಗಳ ಪರಿಯಂತರ ಬಾವಿಯಿಂದ ತೆಗೆದಂಥಾ ಒಳ್ಳೇ ತಣ್ಣೀರಲ್ಲಿ ಮುಳುಗಿಸಿಟ್ಟು ಆ ದ್ರಾವಕದ ವಾಸನೆ ವಗೈರೆ ಚೆನ್ನಾಗಿ ಹೋಗುವಂತೆ ಮಾಡಿ, ನಂತರ ಅವನ್ನು ಆ ನೀರಿನಿಂದ ತೆಗೆದು ಚೆನ್ನಾಗಿ ನೀರು ಇಳಿದು ಹೋಗುವಂತೆಯೂ ಆ ಹಣ್ಣುಗಳಿಗೆ ನೀರಿನ ಪಸೆ ಇಲ್ಲದಂತೆ ಆಗುವರೆ ಅವುಗಳನ್ನು ಲೋಹದ ಸರಿಗೆಯ ಬಲೆಯ ಮೇಲೆ ಯಾ ಈ ನಮೂನೆಯ ಬೇರೆ ಯಾವದಾದರೊಂದು ಬಲೆಯಂತೆ ಇರುವುದರ ಮೇಲೆ ನೀರು ಇಳಿದು ಹೋಗುವಂತೆ ಇಡಬೇಕು. ಮಾವಿನಕಾಯಿ ಬಾಳೆಹಣ್ಣು ಮುಂತಾಗಿ ಸುಲಿದು ತಿನ್ನಲಿಕ್ಕೆ ಆಗುವಂಥಾ ಹಣ್ಣುಗಳ ಸಂಗತಿಯಲ್ಲಿ ಇನ್ನೊಮ್ಮೆ ಅಚ್ಚ ತಣ್ಣೀರಲ್ಲಿ ಮುಳುಗಿಸಿ ಇಡುವುದು ಅಗತ್ಯವಿಲ್ಲ. ಮಾತ್ರವಲ್ಲ ಹಾಗೆ ಮಾಡದ ನೀರು ಪಸೆ ಇಳಿದು ಹೋಗುವಂತೆ ಇಡುವುದು ಉತ್ತಮವಂತೆ. ಹೀಗೆ ಮಾಡಿದ್ದಲ್ಲಿ ಬಾಳೆಹಣ್ಣುಗಳು ಏನೂ ಹಾಳಾಗದೆ ೧೦ ದಿವಸಗಳ ವರೆಗೆ

[illegible]

ಅದರಲ್ಲಿ ಉಂಟಾದ ಹಾನಿಯು [illegible] ಹಿಂದೆ ಬಾರ್ಬಡೋಸ (Barbados) ಎಂಬ [illegible] ಕಳೆದ ವರ್ಷ ಶಾಂತತೆ.

ಎಲ್ಲೂರ ಸುಬ್ಬರಾವ್.

ಪತ್ರವ್ಯವಹಾರ.

ಮಹಾ ಸ್ವಾಮಿ,

ನಮ್ಮ ಜಿಲ್ಲೆಯಿಂದ ಮದ್ರಾಸಿನ ನ್ಯಾಯವಿಧಾಯಕ ಸಭೆಗೆ ಮೆಂಬರರಾಗುವವರ ಯೋಗ್ಯತೆಗಳೇನಿರಬೇಕು ಎಂದು ತಮ್ಮ ಹಿಂದಿನ ಸಂಚಿಕೆಯಲ್ಲಿ ಸದ್ಗೃಹಸ್ಥರೊಬ್ಬರು ವಿವರವಾಗಿ ತಿಳಿಸಿದ್ದಾರೆ. ಆ ರೀತಿಯಲ್ಲಿ ನಮ್ಮ ಜಿಲ್ಲೆಯಿಂದ ತುಲನೆ ಮಾಡುವುದಾದರೆ ಒಬ್ಬಿಬ್ಬರಾದರೂ ಸಿಗುವರೋ ಎಂಬ ಸಂದೇಹವಿದೆ. ಮತ್ತು ಆ ಜಾಗೆಗಳಿಗೆ ಈಗ ಬೇರೆ ಬೇರೆ ಜಿಲ್ಲೆಗಳ ಮುಂದಾಳುಗಳು ಉದ್ಯುಕ್ತರಾಗಿರುವವರನ್ನು ನೋಡಿದರೆ ಪುಷ್ಕಳ ಚಿನ್ನ ಸಿಗುವುದು ಅಪರೂಪ. ಅಂತು ಅಷ್ಟು ಸ್ಥಿತಿಯನ್ನು ಪರ್ಯಾಲೋಚಿಸಿ ನಾವು ಮೆಂಬರರನ್ನು ಆರಿಸಬೇಕೆಂಬುದು ನಿಜ. ಕೆಲವರು ಯೋಗ್ಯರೆಂದೇ ಭಾವಿಸಿ ನಾವು ಆರಿಸಿದ್ದಲ್ಲಿ ಅವರು ಬಾಯ್ತೆರೆಯದ ಸಂದರ್ಭಗಳು ಇವೆ. ಅನುಭವಶಾಲಿಗಳಲ್ಲದವರು ಅಲ್ಲಿ ಹೋಗಿ ಯದ್ವಾತದ್ವ ಆಡಿ ಮರ್ಯಾದೆ ಮಾನ ಹಚ್ಚಿಕೊಳ್ಳುವುದು ಲೇಸಲ್ಲ. ಆದ್ದರಿಂದ ಇಷ್ಟಿಷ್ಟು ಮಂದಿ ಉಮೇದ್ವಾರರಾಗಿ ನಿಂತು ಬಿಟ್ಟರೆ ವೋಟರುಗಳಿಗೆ ತಕ್ಕ ಮಟ್ಟಿಗೆ ಆ ಜನಗಳ ಮೇಲಿದ್ದ ಪರಿಚಯದಿಂದ ಇವರು ಏನೇನೂ ಮಾಡಿಯಾರು ಎಂದು ಊಹೆ ಕಟ್ಟಲು ಸುಲಭವಾಗುತ್ತದೆ. ಆದ್ದರಿಂದ ರಂಗಸ್ಥಳಕ್ಕೆ ಇಳಿಯ ಬೇಕಾದವರು ಇನ್ನೂ ಪರದೆಯ ಒಳಗೆ ಕಾಣದೆ ಕಾಲವಿಳಂಬ ಮಾಡದೆ ತಮ್ಮ ಮುಖವನ್ನು ಕಾಣಿಸಿಕೊಳ್ಳಲಿ. ಆಗ ಬರುವ ವೇಷವು ದೊಡ್ಡ ಕಿರೀಟ ಮಾತ್ರ ಇಟ್ಟು ಎಡಬಲದಲ್ಲಿ ಪಂಜುಗಳನ್ನು ಉರಿಸಿ ಕೈಬೆರಳುಗಳ ಸಂಜ್ಞೆಗಳನ್ನು ಮಾಡಿ ಮತ್ತು ಮುಖವಿಂದ ಅಂಗಭಂಗಿ ವಗೈರೆ [illegible] ಯಗಳನ್ನು ತೋರಿಸುವ ಬಣ್ಣದ ವೇಷವೂ ಅಥವಾ ಚಲೋ ನಾಟ್ಯದಿಂದ ಉತ್ಕೃಷ್ಟವಾದ ನುಡಿಗಳಿಂದ ಸಭಿಕರನ್ನು ಸಂತೋಷಗೊಳಿಸುವ [illegible] ವೇಷವೊ ಎಂದು ಗೊತ್ತಾಗುವುದು.

ವೋಟರರಲ್ಲೊಬ್ಬ.

ನೋಟೀಸು.

ದಕ್ಷಿಣ ಕನ್ನಡಾ ಸಬೋರ್ಡಿನೇಟ ಕೋರ್ಟಿನಲ್ಲಿ.

ಕ್ರಮ ನಂಬ್ರ 37/1920

1. ಮಂಜೇಶ್ವರ ಪದ್ಮನಾಭ ಭಟ್ಟ,
2. ಎಮ್. ಗೋವಿಂದ ಪೈ } ವಾದಿರು.

ಮತ್ತು

ದಕ್ಷಿಣ ಕನ್ನಡಾ ಜಿಲ್ಲೆಯ ಗೌಡಸಾರಸ್ವತ ಬ್ರಾಹ್ಮಣವೃಂದ — ಇವರ ಕಡೆ.

1. ಮಂಜೇಶ್ವರ ನರ್ಣಯ್ಯ ಶ್ಯಾನಭಾಗ. 2. ಮಂಜೇಶ್ವರ ವೈಕುಂಠ ಭಕ್ತ 3. ಅಡಿಗೆ ಶ್ರೀನಿವಾಸರಾವ್. 4. ಮಿಜಾರ ರಾಮಕೃಷ್ಣ ಪೈ. 5. ಉಳ್ಳಾಲ ಸಾಂತಯ್ಯ ಶೆಣೈ. 6 ಮಂಗಳೂರು ನರಸಿಂಹ ಮರ್ತುಭಂಡಾರಿ. 7. ಕುಂಬಳೆ ನರಸಿಂಹ ರಾಯಪ್ಪನಾಯ್ಕ. 8. ಕೆ. ಪಿ. ಕೇಶವರಾವ್. 9. ಎಚ್. ಗಣಪತಿರಾವ್. 10. ಬಂಟ್ವಾಳ ಮಂಜುನಾಥ ಕಮ್ತಿ. 11. ಕೊಡ್ಯಾಲ ಪದ್ಮನಾಭಪೈ. 12. ವಕೀಲ್ ಎಮ್. ರಾಮಚಂದ್ರ ಕಾಮತ್ ಕುಂದಾಪುರ. 13. ಮೂಲ್ಕಿ ನರಸಿಂಹ ವಾಸುದೇವ ಕಮ್ತಿ. 14. ವಕೀಲ ರಾಮ ಹೆಗ್ಗಡೆ. ಕಾರ್ಕಳ. } ಪ್ರತಿವಾದಿಗಳು

ಮಂಜೇಶ್ವರ ಶ್ರೀ ಮದನಂತೇಶ್ವರ ದೇವಸ್ಥಾನದ ಮುಂದಿನ ಆಡಳಿತೆ ಕುರಿತು ಸದರಿ ವಾದಿರು ದಾಖಲು ಮಾಡಿದ ಸ್ಕೀಮಿನ ದಾವೆಯು ಸದರಿ ಕೋರ್ಟಿನಲ್ಲಿ ತಾ. ೧೦-೮-೧೯೨೦ [illegible] ಇಟ್ಟಿರುತ್ತದೆ. ಸದರಿ ದಾವೆಯ ಸಂಗಡ [illegible] ಸ್ಕೀಮಿನ ಕ್ರಮಗಳನ್ನು ತಿದ್ದುಪಡಿಸುವರೆ ದಕ್ಷಿಣ ಕನ್ನಡ ಜಿಲ್ಲೆಯ ಗೌಡಸಾರಸ್ವತ ಬ್ರಾಹ್ಮಣ ವೃಂದದವರಲ್ಲಿ [illegible] ರೊಬ್ಬರಾದರೂ ತಮ್ಮ ಸೂಚನೆಗಳನ್ನು ಸದ್ರಿ [illegible] ಕೋರ್ಟಿಗೆ ಮನವಿ ಮಾಡಿಕೊಳ್ಳಬಹುದು. [illegible] ವಾದಿರು ಹಾಜರು ಮಾಡಿದ ಸ್ಕೀಮಿನ ನಕಲು ವಾದಿ ವಕೀಲ್ ಕಡಿಗೆ ವರದರಾವ್ [illegible] ನಲ್ಲಿ ದೊರಕುವುದು. [illegible] ಹಾಸಲು ಪ್ರತ್ಯೇಕ.

ಮಂಗಳೂರು,
ತಾ. 10-7-1920 } [illegible] Varada [illegible]
Vakil for [illegible]

ಪ್ರಕಟಣೆ.

ದಕ್ಷಿಣ ಕನ್ನಡಾ ಸಬೋರ್ಡಿನೇಟು ಕೋರ್ಟಿನಲ್ಲಿ

ಕ್ರಮ ನಂಬ್ರ 28/18

ವೆಂಕಟರಮಣ ಯಾನೆ ಪುಟ್ಟಣ್ಣ ಭಟ್ಟ ಕೂಡಾ— ವಾದಿರು.

ಮತ್ತು

ಮಂಜಪ್ಪ ಯಾನೆ ನಾಗರಾಜ ಬಲ್ಲಾಳ ಕೂಡಾ—ಪ್ರತಿವಾದಿರು.

ಸದರಿ ಪ್ರಾಬ್ರದಲ್ಲಿ ವಾದಿರ ಕಡೆಯಿಂದ ಹಾಜರುಪಡಿಸಿದ ಸ್ಕೀಮಿನ ಮಸೂದೆ.

ಗೌಡಸಾರಸ್ವತ ಬ್ರಾಹ್ಮಣರ ಹೊರತು ಇತರ ಎಲ್ಲಾ ಜಾತಿ ಹಿಂದು ಜನರು ಭಜನೆ ಬರುವ ಕಳತ್ತೂರು, ಪಡು, ಉಳಿಯಾರು ಗೋಳಿ ಮಲ್ಲೂರು, ಮೂಲೂರು ಮತ್ತು ಕವಲ (ಇದು ಈಗ ಉಳಿಯಾರು ಗೋಳಿ ಗ್ರಾಮಕ್ಕೆ ಸೇರಿ ಇರುತ್ತದೆ) ಕೂಡಾ 5 ಗ್ರಾಮಗಳು ಸೇರಿದ ಕಾಪು ಸೀಮೆಗೆ ಸಂಬಂಧಪಟ್ಟ ಶುಮಾರು 1860ನೆಯ ಇಸವಿಯಲ್ಲಿ ಸ್ಥಾಪನೆಯಾದ ಕಾಪು ಹೊಸ ಮಾರಿಗುಡಿ ಎಂಬ ಹತ್ತು ಸಮಸ್ತರ ಬಾಬ್ತು ಒಂದು ಮತ ಸ್ಥಾಪನೆಯು ಉಡುಪಿ ತಾಲೂಕು ಪಡು ಗ್ರಾಮದಲ್ಲಿರುತ್ತದೆ.

ಸದರಿ ಸ್ಥಾಪನೆಯು ಬಗ್ಗೆ ಕಾನೂನು ಪ್ರಕಾರ ಏರ್ಪಟ್ಟ ಯಾವ ವಿಲವಾರಿಯಾಗಲಿ ಕಾನಸ್ಟಿಟ್ಯೂಶನ್ ಆಗಲಿ ಇರುವದಿಲ್ಲ ಮತ್ತು ಆ ಸ್ಥಾಪನೆಯು ಆಡಳಿತೆಯ ಮೇಲ್ವಿಚಾರ ನೋಡುವ ಬಗ್ಗೆ ಕೂಡಾ ಕ್ರಮವಾದ ವಿಲೇವಾರಿಯು ಏರ್ಪಡಲಿಲ್ಲ.

ಪುಟ್ಟಣ್ಣ ಯಾನೆ ವೆಂಕಟರಮಣ ಭಟ್ಟ ಮತ್ತು ಕೀಕಲ ಗುತ್ತು ಬಸಪ್ಪ ಶೆಟ್ಟಿ ಕೂಡಾ 2 ಜನರು ಜಿಲ್ಲಾ ಕಲೆಕ್ಟರವರಿಂದ ಸೆಂಕ್ಷನ್ ಪಡಕೊಂಡು ಸದರಿ ಸ್ಥಾಪನೆಯ ಆಡಳಿತೆ ಬಗ್ಗೆ ಒಂದು ಸ್ಕೀಮು ಏರ್ಪಡಿಸಬೇಕಾಗಿ ದಕ್ಷಿಣ ಕನ್ನಡಾ ಸಬೋರ್ಡಿನೇಟು ಕೋರ್ಟಿನಲ್ಲಿ ನಂಬ್ರ 28/18ಕ್ಕೆ ದಾವೆ ಮಾಡಿದ್ದಲ್ಲಿ ಸದರಿ ಕೋರ್ಟಿನವರು ತಾರೀಕು 22—9—1919ನೆಯಲ್ಲಿ ಕೊಟ್ಟ ಡಿಕ್ರಿನಲ್ಲಿ ಸದರಿ ವಾದಿರು ಸದರಿ ಸ್ಥಾಪನೆಯ ಆಡಳಿತೆಯು ಸರಿಯಾಗಿ ನಡಿಯುವಂತೆ ಒಂದು ಸ್ಕೀಮನ್ನು ಏರ್ಪಡಿಸಿಕೊಳ್ಳಲಿಕ್ಕೆ ಅರ್ಹರೆಂತ ವಿಧಿಸಿರುತ್ತಾರೆ.

ಸ್ಕೀಮಿನ ವಿವರ.

1. ಕಾಪು ಹೊಸ ಮಾರಿಗುಡಿ ಮತ್ತು ಅದರ ಆಸ್ತಿಗಳ ಹಕ್ಕು ಈ ಸ್ಕೀಮಿನ ಪ್ರಕಾರ ಏರ್ಪಡುವ ಮನೇಜರುಗಳ ಬೋರ್ಡಿನದ್ದಾಗಿರತಕ್ಕದ್ದು.

2. ಸದರಿ ಬೋರ್ಡು ಮೇಲೆ ಹೇಳಿದ 5 ಗ್ರಾಮಗಳ ನಿವಾಸಿಕರಿಂದ ಚುನಾಯಿಸಲ್ಪಡುವ 7 ಜನ ಮೆಂಬರು ಉಳ್ಳದ್ದಾಗಿರತಕ್ಕದ್ದು.

3. ಸದರಿ ಬೋರ್ಡಿನ ಪ್ರತಿ ಒಬ್ಬ ಮೆಂಬರನು ತನ್ನ ಜೀವಕಾಲದಲ್ಲಿ ರಾಜಿಕೊಡದೆ ಹೋದರೆ ಯಾ ಮೆಂಬರ ಕೆಲಸದಿಂದ ತೆಗೆದು ಹಾಕಲ್ಪಡದೆ ಹೋದರೆ ಯಾ ಮೆಂಬರ ಕೆಲಸಕ್ಕೆ ಯೋಗ್ಯತೆ ಹೀನನಾದರೆ ಮಾತ್ರ ಹೊರ್ತು, ಇಲ್ಲವಾದರೆ ತನ್ನ ಜೀವಾಂತ್ಯಕಾಲದ ವರೆಗೆ ಮೆಂಬರನಾಗಿರುವನು.

4. ಕಾಪು ಸೀಮೆಗೆ ಒಳಪಟ್ಟ 5 ಗ್ರಾಮಗಳ ಪೈಕಿ ಯಾವದಾದರು ಒಂದು ಗ್ರಾಮದಲ್ಲಿ ಕಾಯಂ ವಾಸ್ತವ್ಯವುಳ್ಳವನಾಗಿ 21 ವರ್ಷಕ್ಕೆ ಮಿಕ್ಕಿದ ವಯಸ್ಸಿನವನಾಗಿ ಬುದ್ಧಿಸ್ವಾಸ್ಥ್ಯತೆ ಉಳ್ಳವನಾಗಿ, ತನ್ನ ಸ್ವಂತಕ್ಕಾಗಲಿ ಯಾ ತನ್ನ ಅವಿಭಕ್ತ ಕುಟುಂಬಕ್ಕಾಗಲಿ 10 ರೂಪಾಯಿ ತೀರ್ವೆ ಯಾ ಇನ್‌ಕಂಟ್ಯಾಕ್ಸು ಕೊಡುವ ಗಂಡಸು ಬೋರ್ಡಿನ ಮೆಂಬರನಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗಿರುತ್ತಾನೆ. ಯಾವ ಮನುಷ್ಯನು ಕ್ರಿಮಿನಲ್ ಕೋರ್ಟಿನಿಂದ ಯಾವದಾದರೂ ತಕ್ಸೀರು ಸಂಬಂಧ ಶಿಕ್ಷಿಸಲ್ಪಡುತ್ತಾನೋ ಯಾ ಪಾಪರನಾಗುತ್ತಾನೋ ಅಂಥಾ ಮನುಷ್ಯನು ಬೋರ್ಡಿನ ಮೆಂಬರನಾಗಿ ಚುನಾಯಿಸಲ್ಪಡಲಿಕ್ಕಾಗಲಿ ಯಾ ಚುನಾಯಿಸಲ್ಪಟ್ಟಿದ್ದರೆ ಮೆಂಬರನಾಗಿರಲಿಕ್ಕಾಗಲಿ ಅಯೋಗ್ಯನಾಗುತ್ತಾನೆ.

5. ಬೋರ್ಡಿನಲ್ಲಿ ಯಾವದಾದರೂ ಮೆಂಬರಿ ಇಸಮು ಖಾಲಿ ~~ಆದ~~ ಪಕ್ಷದಲ್ಲಿ ಹಾಗೆ ಖಾಲಿಬಿದ್ದ ತಾರೀಕಿನಿಂದ 4 ತಿಂಗಳ ಒಳಗೆ ಸದರಿ ಖಾಲಿಬಿದ್ದ ಇಸಮನ್ನು ಮೇಲೆ ಹೇಳಿದ ರೂಲುಗಳಿಗೆ ಅನುಸಾರವಾಗಿ ಬೋರ್ಡಿನ ಬಾಕಿ ಮೆಂಬರುಗಳು ಭರ್ತಿ ಮಾಡಲು ಅರ್ಹರಾಗಿರುವರು. ಬೋರ್ಡಿನ ಆಕ್ಕಿ ಮೆಂಬರುಗಳು ಹಾಗೆ ಖಾಲಿಬಿದ್ದ ಇಸಮನ್ನು ಭರ್ತಿ ಮಾಡುವರೆ ತಪ್ಪಿದಪಕ್ಷದಲ್ಲಿ ಯಾರಾದರೂ ಒಬ್ಬ ಗ್ರಾಮದ ಭಜಕನು ಸದರಿ ಖಾಲಿಬಿದ್ದ ಇಸಮನ್ನು ಭರ್ತಿ ಮಾಡುವ ಬಗ್ಗೆ ಕೋರ್ಟಿಗೆ ಮನವಿ ಮಾಡುವರೆ ಅರ್ಹನಾಗಿರುವನು. ಆ ಸಂಬಂಧ ಸದರಿ ಅರ್ಜಿದಾರರಿಗೆ ತಗಲುವ ಖರ್ಚು ಸ್ಥಾಪನೆಯ ಫಂಡಿನಿಂದ ಕೊಡಲ್ಪಡುವದು.

6. ಸ್ಥಾಪನೆಯ ಬಾಬ್ತು ಲೆಖ್ಖಗಳನ್ನು ಬರೆಯುವರೆ ಬೋರ್ಡಿನವರು ಪಾನು ಹಾಕಿದ ಬೈಂಡು ಮಾಡಿದ ಒಂದು ಪುಸ್ತಕವನ್ನು ಸುಖಿಯಾಗಿಡಬೇಕು. ಮತ್ತು ಮೀಟಿಂಗಿನಲ್ಲಿ ನಡೆದ ಚರ್ಚೆಗಳನ್ನು ನಿರ್ಣಯಗಳನ್ನು ಬರಿಯುವರೆ ಅಂಥಾದ್ದೆ ಇನ್ನೊಂದು ಪುಸ್ತಕವನ್ನು ಇಡಬೇಕು. ಸದರಿ 2 ಪುಸ್ತಕಗಳು ಏಕಕಾಲದ ಒಬ್ಬನೆ ಮೆಂಬರನ ಹತ್ತರ ಇರಕೂಡದು.

7. ಬೋರ್ಡಿನವರು ಕನಿಷ್ಟಪಕ್ಷಕ್ಕೆ 4 ತಿಂಗಳಿಗೊಮ್ಮೆ ಯಾದರೂ ತಮ್ಮ ಸಭೆಯನ್ನು ಕೂಡಿಸಬೇಕು. ಅಂಥಾ ಸಭೆಯನ್ನು ಮಾರಿಪೂಜೆಯ ಮರುದಿವಸ ಕೂಡಿಸಬೇಕು. ಮತ್ತು ಪ್ರೋಸೀಡಿಂಗ್ಸು ಬೂಕಿನಲ್ಲಿ ಮೀಟಿಂಗಿನಲ್ಲಿ ನಡೆದ ಚರ್ಚೆಗಳನ್ನು ನಿರ್ಣಯಗಳನ್ನು ಬರಾಯಿಸುವದಲ್ಲದೆ ಮುಂಚಿನ ದಿವಸದ ಮಾರಿ ಪೂಜೆಯಲ್ಲಿ ವಸೂಲಾದ ಐವಜು ವಗೈರೆಯನ್ನು ಮತ್ತು ಕಳೆದ ಮೀಟಿಂಗಿನ ಲಾಗಾಯತು ಜಮೆಯಾದ ಐವಜು ವಗೈರೆಯನ್ನು ಸಹಾ ಬರಾಯಿಸಬೇಕು. ಅಂಥಾ ಮೀಟಿಂಗಿನ ಕೋರಮ್ ಬಗ್ಗೆ 5 ಜನ ಮೆಂಬರರು ಹಾಜರಿರಬೇಕು. ಯಾವದಾದರು ಒಂದು ಕಾರಣದಿಂದ ಮೀಟಿಂಗಿನ ದಿವಸ ಕೋರಮ್ ಭರ್ತಿ ಇಲ್ಲದೆ ಹೋದರೆ ಹಾಜರಿದ್ದ ಮೆಂಬರರು ಪ್ರೋಸೀಡಿಂಗ್ಸು ಬೂಕಿನಲ್ಲಿ ಮುಂಚಿನ ದಿವಸದ ಮಾರಿ ಪೂಜೆಯಲ್ಲಿ ಜಮೆ ಆದ ಐವಜು ವಗೈರೆ ಮತ್ತು ಕಳೆದ ಮೀಟಿಂಗಿನ ಲಾಗಾಯತು ಜಮೆ ಆದ ಐವಜು ವಗೈರೆ ಬರಾಯಿಸಿ ಉಳ್ಳ ಸಂಗತಿಗಳ ಬಗ್ಗೆ ಮೀಟಿಂಗನ್ನು ಸದರಿ ತಾರೀಕಿನ 2 ಹಪ್ತೆಗಳ ಒಳಗಾಗಿ 1 ದಿವಸಕ್ಕೆ ಮುಂದರಿಸಿ ಇಡಬೇಕು.

8. ಬೋರ್ಡಿನ ಪ್ರತಿ ಮೀಟಿಂಗಿನಲ್ಲಿ ಹಾಜರು ಇದ್ದ ಮೆಂಬರರು ತಮ್ಮ ಪೈಕಿ ಒಬ್ಬ ಮೆಂಬರನು ಪ್ರೆಸಿಡೆಂಟನಾಗಿ ಚುನಾಯಿಸತಕ್ಕದ್ದು. ಮೀಟಿಂಗಿನಲ್ಲಿ ನಡಿಯುವ ಚರ್ಚೆಯಲ್ಲಿ ಹೆಚ್ಚಿನ ಪಕ್ಷದ ಮೆಂಬರರ ಅಭಿಪ್ರಾಯವು ಮುಂಜೂರಾಗಿರತಕ್ಕದ್ದು. ಮೀಟಿಂಗಿನಲ್ಲಿ ಮೆಂಬರರ ಅಭಿಪ್ರಾಯವು ಸರಿಯಾಗಿ ವಿಭಾಗವಾದ ಪಕ್ಷದಲ್ಲಿ ಪ್ರೆಸಿಡೆಂಟರಿಗೆ ಕಾಸ್ಟಿಂಗು ವೋಟನ್ನು ಉಪಯೋಗಿಸತಕ್ಕದ್ದು. ಪಾರಗಿತವಾಗಿ 3 ಮೀಟಿಂಗುಗಳಿಗೆ ಬೋರ್ಡಿನ ಯಾವನೊಬ್ಬ ಮೆಂಬರನು ನ್ಯಾಯವಾದ ಸಬಬು ಇಲ್ಲದ ಹಾಜ್ರಾಗಲಿಕ್ಕೆ ತಪ್ಪಿದರೆ ಅಂಥಾ ಮೆಂಬರನು ತನ್ನ ಮೆಂಬರಸ್ಥಾನವನ್ನು ಕಳಕೊಳ್ಳುವನು. ಮತ್ತು ಹಾಗೆ ಖಾಲಿಬೀಳುವ ಇಸಮನ್ನು ಈ ಸ್ಕೀಮು ಪ್ರಕಾರ ಏರ್ಪಟ್ಟ ರೂಲುಗಳ ಮೇರೆಗೆ ಭರ್ತಿಮಾಡತಕ್ಕದ್ದು.

9. ಬೋರ್ಡಿನವರು ತಮ್ಮ ಪೈಕಿ ಯಾರೊಬ್ಬ ಮೆಂಬರನನ್ನು ಆಡಳ್ತೆ ನೋಡುವದಕ್ಕೆ ಮೀಟಿಂಗಿನಲ್ಲಿ ನೇಮಿಸಿ ಆ ಬಗ್ಗೆ ಮಾಡಿದ ನಿರ್ಣಯವನ್ನು ಪ್ರೊಸೀಡಿಂಗ್ಸು ಬೂಕಿನಲ್ಲಿ ಬರಾಯಿಸತಕ್ಕದ್ದು. ಮತ್ತು ಅಂಥಾ ಆಡಳ್ತೆ ನೋಡುವ ಹಕ್ಕು ಎಷ್ಟುಕಾಲ ಊರ್ಜಿತ ಇರಬೇಕು ಎಂಬ ಸಂಗತಿಯನ್ನು ಪ್ರತಿ ಮೀಟಿಂಗಿನಲ್ಲಿ ರಿಕಾರ್ಡುಮಾಡಬೇಕು. ಬೋರ್ಡಿನವರು ಆಡಳ್ತೆ ನೋಡುವ ಮೆಂಬರನಿಂದ ಆತನ ಆಡಳ್ತೆ ಕಾಲದಲ್ಲಿ ಆದ ಜಮಾಖರ್ಚಿನ ಲೆಖ್ಖವನ್ನು ಕೊಡಬೇಕೆಂದು ಕೇಳುವದಕ್ಕೆ ಅರ್ಹರಾಗಿರುತ್ತಾರೆ.

10. ಪ್ರತಿ ಮೀಟಿಂಗಿನ ಪ್ರೊಸೀಡಿಂಗ್ಸಿನಲ್ಲಿ ತಾರೀಕು ಮತ್ತು ಹಾಜರು ಇದ್ದ ಮೆಂಬರರ ಹೆಸರು ನಮೂದಿಸುವದಲ್ಲದೆ ಪ್ರೊಸೀಡಿಂಗ್ಸಿಗೆ ಕನಿಷ್ಟಪಕ್ಷಕ್ಕೆ ಪ್ರೆಸಿಡೆಂಟರ ದಸ್ಕತು ಆದರೂ ಇರಬೇಕು.

11. ಆಗಿಂದಾಗ್ಯೆ ಆಡಳ್ತೆ ನೋಡುವ ಮೆಂಬರನು ತನ್ನ ಆಡಳ್ತೆ ಕಾಲದಲ್ಲಿ ಜಮೆ ಆಗುವ ಐವಜು ವಗೈರೆ ಬಾಬ್ತು ನಿಜವಾದ ಮತ್ತು ಸಂಪೂರ್ಣವಾದ ರೋಜುವಾರು ಲೆಖ್ಖವನ್ನು ಇಡಬೇಕು ಮತ್ತು ಅಂಥಾ ಲೆಖ್ಖವನ್ನು ಮಾರಿಪೂಜೆ ಮರುದಿವಸ ನಡಿಯುವ ಬೋರ್ಡಿನ ಮೀಟಿಂಗಿನ ಮುಂದೆ ಹಾಜರುಪಡಿಸತಕ್ಕದ್ದು. ಹಾಗೆ ಹಾಜರುಪಡಿಸಿದಕ್ಕೆ ಕನಿಷ್ಟಪಕ್ಷಕ್ಕೆ ಆಯಾಯ ಮೀಟಿಂಗಿನ ಪ್ರೆಸಿಡೆಂಟರ ದಸ್ಕತು ಆದರೂ ಇರತಕ್ಕದ್ದು.

12. ಸ್ಥಾಪನೆ ಬಾಬ್ತು ಆಭರಣಗಳ ಮತ್ತು ಚರಸೊತ್ತುಗಳು ಸ್ವಾಧೀನತೆಯ, ಬಂದೋಬಸ್ತಿನ ಬಗ್ಗೆ ಬೋರ್ಡಿನವರು ತಕ್ಕ ವಿಲೆವಾರಿ ಮಾಡಲು ಅರ್ಹರಾಗಿರುತ್ತಾರೆ. ಮತ್ತು ಬೋರ್ಡಿನ ಪ್ರತಿ ಮೀಟಿಂಗಿನಲ್ಲಿ ಸ್ಥಾನಗಳು ಮತ್ತು ಚರಸೊತ್ತುಗಳು ಬಂದೋಬಸ್ತಿನಲ್ಲಿ ಸಾಬೀತಾಗಿ ಉಂಟುಎಂಬ ಬಗ್ಗೆ ಪ್ರೊಸಿಡಿಂಗ್ಸ್ ಬೂಕಿನಲ್ಲಿ ಸರ್ಟಿಫಿಕೇಟು ರಿಕಾರ್ಡುಮಾಡಬೇಕು.

13. ಆಡಳ್ತೆ ನೋಡುವ ಮೆಂಬರನು ತನ್ನ ಆಡಳ್ತೆ ಕಾಲದಲ್ಲಿ ಜಮೆ ಆಗುವ ಸಮಸ್ತ ಐವಜು ವಗೈರೆಯನ್ನು ಬೋರ್ಡಿನ ಮೀಟಿಂಗು ಆಗುವ ವರೆಗೆ ತನ್ನ ಸುಪರ್ದಿ ಇಟ್ಟುಕೊಳ್ಳಬೇಕು. ಸದರಿ ಮೀಟಿಂಗಿನಲ್ಲಿ ಹೆಚ್ಚು ಪಕ್ಷದ ಮೆಂಬರರು ನಿರ್ಣಯಿಸುವಂತೆ ಸದರಿ ಐವಜು ವಗೈರೆಯನ್ನು ಡಿಪೋಜಿಟು ಯಾ ಇನವೆಸ್ಟು ಮಾಡಬೇಕು.

ಸಾಯ್ಬೀರಿಯದಲ್ಲಿ ಬೊಲಶವಿಕರ ಕೈಚಾಲಕ ನಡೆಯುತ್ತಿದೆ ಎಂದು ಕೇಳಿಸುತ್ತದೆ. ಈ ಬೊಲಶವಿಕರು ಇಲ್ಲಿ ತಮ್ಮ ಒಳಸಂಚು ನಡಿಸುವುದು ಒಂದು ಕಡೆ; ಇನ್ನೊಂದು ಕಡೆಯಲ್ಲಿ 'ಪೋಲೆಂಡದವರೊಡನೆ ರಾಜಿಯಾಗಿರಿ' ಎಂದು ಮಿತ್ರಪಕ್ಷದವರು ಹೇಳಿದ್ದಕ್ಕೆ ಕ್ರಿಮಿಯಾ ಎಂಬಲ್ಲಿ ತಮ್ಮನ್ನು ಎದುರಿಸುವ ಜನರಲ್ ರೆಂಗಲ್ ಎಂಬವನನ್ನು ತಮಗೆ ಒಪ್ಪಿಸಿಕೊಡಬೇಕು, ಪೋಲೆಂಡದ ಸೈನ್ಯವು ತನ್ನ ರಾಜ್ಯದ ಗಡಿಸೇರಬೇಕು ಎಂದು ಮುಂತಾಗಿ ಶರ್ತಗಳನ್ನು ಕೇಳಿಕೊಟ್ಟಿದ್ದಾರೆ. ಬೊಲಶವಿಕರು ಯುದ್ಧ ತತ್ಕಾಲ ನಿಲ್ಲಿಸಿ ಸಂಧಿ ಶರ್ತಗಳ ಚರ್ಚೆಗೆ ಬಾರದಿದ್ದರೆ ಪೋಲೆಂಡಕ್ಕೆ ತಾವು ಸಹಾಯ ಮಾಡಬೇಕಾದೀತು ಎಂದು ಮಿತ್ರಪಕ್ಷದವರು ಎಚ್ಚರಿಸಿದ್ದಾರೆ. ಆದರೆ ಮಿತ್ರಪಕ್ಷದ ಸೈನ್ಯ ಸರಂಜಾಮವು ಪೋಲೆಂಡಕ್ಕೆ ಹೋಗಬೇಕಾದರೆ ಜರ್ಮನ ರಾಜ್ಯವನ್ನು ಹಾಯು ಹೋಗದೆ ಸಾಧ್ಯವಿಲ್ಲ. ಹೀಗನ್ನುವಾಗ ಜರ್ಮನರು ತಮ್ಮ ರಾಜ್ಯದೊಳಗಿಂದ ಸೈನ್ಯ ಸರಂಜಾಮವು ಹೋಗಲಿಕ್ಕೆ ದಾರಿಕೊಡಲಾರೆವೆಂದು ಹೇಳಿದ್ದಾರೆ. ದಾರಿ ಕೊಡಬೇಕಾದರೆ ತಮ್ಮ ಮೇಲಣ ಶರ್ತಗಳ ಬಿಗುವನ್ನು ಸಡಲಿಸಬೇಕೆಂದು ಜರ್ಮನರ ಮನಸ್ಸಿನಲ್ಲಿದೆ ಎಂಬಂತೆ ತೋರುತ್ತಿದೆ. ಹೇಗೂ ಇರಲಿ, ಸ್ಪಾದಲ್ಲಿ ಬಿಸಿಬಿಸಿ ಪಂಚಾಯಿತಿ' ಮಾಡಿದಂತೆ ತಲೆ ಅಲ್ಲಾಡಿಸಿ ಇನ್ನೂ ಧಂಡದ ಕಂತುಗಳನ್ನು ಕುರಿತು ಪುನಃ ಜಿನಿವಾ ಎಂಬಲ್ಲಿ ಸೇರಿ ಇತ್ಯರ್ಥಪಡಿಸಬೇಕೆಂದು ನಿಶ್ಚಯಿಸಿದ್ದಾರೆ. ಈ ಸಂಧಿಯ ಚರ್ಚೆಗಳು ಹಿಂದನೆಯ ಭಾಳದಂತೆ ಕೊನೆಗಾಣುವುದಿಲ್ಲ ಎಂಬಂತಿದೆ. ಯಾಕೆಂದರೆ ಇದರೊಳಗಿನ ಯುದ್ಧದಲ್ಲಿ ಕೈಹಾಕಿದ ಒಸ್ಟ್ರೀಯದ ಸಂಧಿಕರಾರು ಮುಂಚಿತವಾಗಿ ಬ್ರಿಟಿಷ ರಾಯಭಾರಿಯು ಈಗ ಒಸ್ಟ್ರೀಯದಲ್ಲಿ ಹೋಗಿ ಇದ್ದಾನೆ.

ಐರ್ಲೆಂಡು—ಇಲ್ಲಿಯ ಚಳವಳವೂ ಅನಾಯಕತ್ವವೂ ದಿನಕ್ಕೊಂದು ಬಣ್ಣವೆಂಬಂತೆ ಬೆಳೆಯುತ್ತಿವೆ. ಕೊರ್ಕ ಎಂಬ ಊರಿನಲ್ಲಿ ಗಲಾಟೆ ಎದ್ದು ಅತ್ಯಾಚಾರಗಳು ಶಾಂತವಾಗ ವಷ್ಟರಲ್ಲಿ ಈಗ ಬೆಲಫಾಸ್ಟ ಎಂಬಲ್ಲಿಂದ ಈ ದುರ್ವಾರ್ತೆ ಕೇಳಿಸುತ್ತಿದೆ.

ಐರ್ಲೆಂಡದಲ್ಲಿ ಮೂರು ತಂಡಗಳಿವೆ. ಉಗ್ರಪಕ್ಷವಾದ ಸಿನ್ನಫೇನರು ಈಗ ಕೆಲವು ಕಾಲದಿಂದಲೂ ಬ್ರಿಟಿಷರ 'ಬಾಯಂಬಲಕ್ಕೆ ಕೈಯೊಡ್ಡಿ' ನಿಲ್ಲಲು ಸಮ್ಮತಿಸದೆ ಸ್ವತಂತ್ರ ಪ್ರಜಾಸತ್ತೆಯನ್ನ ಸ್ಥಾಪಿಸಲು ಯತ್ನಿಸುತಿದ್ದಾರೆ. ಅಲ್ಸಟರ್ ಪ್ರಾಂತದಲ್ಲಿ ಇನ್ನೊಂದು ಪಕ್ಷವಿದೆ. ಇದು ಮೊದಲಿಂದಲೂ ತಮ್ಮನ್ನು ಬ್ರಿಟಿಷ ಪಾರ್ಲಿಮೆಂಟಿನಿಂದ ಕಳಚಿ ಬಿಡಬಾರದು, ಐರಿಷ ಕೆಥೊಲಿಕರ ಕೈಯಲ್ಲಿ ಹಾಕಬಾರದು ಎಂದು ಸಾಧನೆ ಮಾಡುತಿದ್ದು ಮಹಾಯುದ್ಧದ ಮೊದಲು ಬ್ರಿಟಿಷ ಪಾರ್ಲಿಮೆಂಟಿನವರು ಪಾಸುಮಾಡಿದ ಹೋಮರೂಲ್ ಎಳ್ಳು ಜಾರಿಗೆ ಬಂದರೆ ಅದನ್ನು ಎದುರಿಸಿ ತಮ್ಮ ಸ್ವಾತಂತ್ರ್ಯವನ್ನು ಸ್ಥಾಪಿಸುವವರೆಗೆ ಮುಂದೊತ್ತಲು ನಿಶ್ಚಯ ಮಾಡಿಕೊಂಡು ಸ್ವಯಂ ಸೇವಕ ಸೇನೆಯನ್ನು ಹವಣಿಸುತಿತ್ತು. ಅಷ್ಟರಲ್ಲಿ ಮಹಾಯುದ್ಧವು ಬ್ರಿಟಿಷ ಜನಾಂಗಕ್ಕೆ ಕೈಗೆ ಅಂಟಿದ್ದರಿಂದ ಹೋಮ ರೂಲ್ ಬಿಲ್ಲು ಬದಿಗಿರಿಸಲಾಯಿತು. ಈ ಅಲ್ಸಟರಿನವರ ಚಳವಳವೂ ತತ್ಕಾಲಕ್ಕೆ ತಗ್ಗಿತ್ತಾಯಿತು. ಇವರ ಕಡೆಗೆ ಸರ್ ಎಫ್ ಇ. ಸ್ಮಿತ್, ಸರ್ ಎಡವರ್ಡ ಕಾರ್ಸನ್ ಎಂಬಿಬ್ಬರು ಮುಖಂಡರು. ಈ ಸ್ಮಿತ ಎಂಬವನೆಯವರು ಬ್ರಿಟಿಶ ಮಂತ್ರಿಕೂಟದಲ್ಲಿ ಒಬ್ಬರಾಗಿದ್ದು ಈ ಹಟದಲ್ಲಿ ತನ್ನ ರಕ್ತವನ್ನು ಸುರಿಸಲಿಕ್ಕೆ ಸಿದ್ಧರಾಗಿದ್ದರು.

ಐರ್ಲೆಂಡದಲ್ಲಿ ಹೋಮರೂಲವಾದಿಗಳಾದ ಇನ್ನೊಂದು ತಂಡವಿದೆ. ಇದು ಐರ್ಲೆಂಡವನ್ನು ಒಂದೇ ಅಧಿಕಾರದೊಳಗಿಟ್ಟು 'ಹೋಮರೂಲ್' ಪಡೆಯಬೇಕೆಂಬುದು. ಇವರು ಈಗ ಒಂದೊಂದು ಶತಮಾನಕ್ಕಿಂತ ಹೆಚ್ಚಿನ ಕಾಲದಿಂದಲೂ ಹೋರಾಡುತಿದ್ದಾರೆ. ಇವರು ತೀರಾ ಕೆಥೊಲಿಕರು. ಬ್ರಿಟಿಷರ ಮುಖ್ಯರಿಂದ ಈ ಹೋಮರೂಲನ್ನು ಪಡೆಯಲಿಕ್ಕೆ ಇವರು ಮಾಡಿದ ಪ್ರಯತ್ನಗಳು ಈ ವರೆಗೆ ನಿರರ್ಥಕವಾದ್ದರಿಂದ ಐರಿಷ ಜನಗಳಿಗೆ ಇವರ ಮೇಲಣ ವಿಶ್ವಾಸವು ಕಡಿಮೆಯಾದ ಕಾರಣ ಇವರು ದೇಶದ ಅಧಿಕಾರವನ್ನು [illegible] ಸರಕಾರದ ಕೈಗೆ ಇದ್ದಾರೆ.

ಈ ನಡುವೆ ಐರಿಷ ಲೇಬರ್ ತಂಡದವರು ಬ್ರಿಟಿಷ್ ಲೇಬರ್ ತಂಡದವರ ಸಹಾಯ ಭೂತಿಯಿಂದಾದರೂ ಸ್ವಾತಂತ್ರ್ಯವನ್ನು ಹೊಂದಬೇಕೆಂದು ಯತ್ನಿಸಿ, ಒಂದು ಕಡೆ ಬ್ರಿಟಿಷ ಸರಕಾರದ ಅಧಿಕಾರಿಗಳ ಕಡೆಗೆ ಅಸಹಕಾರತೆಯನ್ನು ತೋರಿಸುತ್ತ ಸೈನ್ಯ ಸರಂಜಾಮುಗಳನ್ನು ಚಳವಳದ ಕೇಂದ್ರ ಸ್ಥಾನಗಳಿಗೆ ಸಾಗಿಸಲಿಕ್ಕೆ ವಿಘ್ನಕರಗಳನ್ನು ತಂದೊಡ್ಡುತಿದ್ದಾರೆ. ಬ್ರಿಟಿಷ ಲೇಬರ ತಂಡದವರು ಇವರ ಪಕ್ಷವಾಗಿ ಬ್ರಿಟಿಷ ಮಂತ್ರಿವರ್ಗರಿಗೆ ಭೇಟಿಯಾದಲ್ಲಿ ದೇಶದಲ್ಲಿ ಶಾಂತಿ ನೆಲಸದ ವಿನಾ ಯಾವುದೊಂದು ಅಧಿಕಾರ ಸ್ವಾತಂತ್ರ್ಯದ ವಿಧಾನವನ್ನು ಹಚ್ಚಲು ಬರುವುದಿಲ್ಲ, ಶಾಂತಿ ನೆಲೆಗೊಳಿಸುವ ಯತ್ನಕ್ಕೆ ಅಡ್ಡಿ ತರುವ ರೈಲ್ವೆ ನೌಕರ ಮುಂತಾದ ಲೇಬರ ತಂಡದವರಿಗೆ ಸರಕಾರ ವಿರೋಧಿಗಳೆಂದು ಭಾವಿಸಿ ತಕ್ಕ ಶಾಸ್ತಿ ಮಾಡಲು ಬಂದೀತೆಂದು ಮಿ| ಲೊಯ್ಡ ಜೋರ್ಜರು ಎಚ್ಚರಿಸಿದನ್ನು ಹಿಂದಿನ ಸಂಚಿಕೆಯಲ್ಲಿ ಹೇಳಿದ್ದೇವೆ. ಹೀಗಿದ್ದರೂ ಈ ವರೆಗೆ ಮಾತುಗಳ ಗುಡುಗೇ ಕೇಳಿಸುತ್ತದಲ್ಲದೆ ಈ ಅನಾಯಕತ್ವವಾದಿಗಳನ್ನು ಸದೆಬಡಿಗೆ ತರುವ ಪ್ರಯತ್ನಗಳು ಸಫಲವಾದಂತೆ ಕಂಡು ಬರಲಿಲ್ಲ. ಅನಾಹುತ ನಡೆಸಿದವರನ್ನು ಕೈದು ಮಾಡುವುದೇ ಕಷ್ಟ. ಅಂಥವರನ್ನು ಹಿಡಿದರೆ ಸಾಕ್ಷಿ ಹೇಳುವರಿಲ್ಲ. ಜೂರಿಯವರಾಗಿ ಬರಲಿಕ್ಕೆ ಜನಗಳು ಒಪ್ಪುವುದಿಲ್ಲ. ಹೀಗೆಲ್ಲ ಸಂಕಷ್ಟಗಳು ಇರುವುದರಿಂದ ನ್ಯಾಯ ತೀರ್ಮಾನದ ಕ್ರಮವು ಸುಲಭವಾಗುವ ಹಾಗೂ ತಂಟೆಕೋರರನ್ನು ಕ್ಷಣದಲ್ಲಿ ವಿಚಾರ ನಡಿಸಿ ಶಿಕ್ಷೆಗೆ ಗುರಿಪಡಿಸಲು ಸಾಧ್ಯವಾಗುವ ಹಾಗೂ ಹೊಸ ಕಾನೂನುಗಳ ಅಸ್ತ್ರಗಳನ್ನು ಬ್ರಿಟಿಷ ಪಾರ್ಲಿಮೆಂಟಿನವರು ಮಸೆಯುತ್ತಿದ್ದಾರೆ.

ಬ್ರಿಟಿಷ ಪಾರ್ಲಿಮೆಂಟ—ಇಲ್ಲಿಯ ಹೌಸ್ ಒಫ್ ಲೊರ್ಡ ಸಭೆಯಲ್ಲಿ ಜನರಲ್ ಡಾಯರನ ಶಿಕ್ಷೆಯ ಸಂಬಂಧವಾಗಿ ಚರ್ಚೆ ನಡೆದಾಗ ಡಾಯರನಿಗೆ ಕೊಟ್ಟ ಶಿಕ್ಷೆಯು ಅತಿ ಕಠಿಣತರದ್ದಾಗಿದೆ. ಡಾಯರನ ವರ್ತನದಿಂದ ಅನೇಕ ಮಂದಿ ಯುರೋಪಿಯನರ ಭಯಂಕರ ಕೊಲೆಯಾಗುವ ಅವಘಡವು ತಪ್ಪಿತು ಎಂದು ಮುಂತಾಗಿ ವಿಚಿತ್ರ ರೀತಿಯ ಭಾಷಣಗಳು ಇದ್ದವು. ಬಹುಮತವು ಇದೇ ಅಭಿಪ್ರಾಯವನ್ನು ಒಪ್ಪಿಕೊಂಡಿತು. ಮತ್ತು ಈ ವಿಷಯದಲ್ಲಿ ವಿರೋಧಿಸಿ ಮಾಡಿದ ಲೊರ್ಡ ಸಿಂಹರ ವಾದವು ನಿರರ್ಥಕವಾಯಿತು. ಇಂಡಿಯಾ ಸರಕಾರ, ಬ್ರಿಟಿಷ ಮಂತ್ರಿಕೂಟ ಆರ್ಮಿ ಕೌನ್ಸಿಲ್ ಈ ಮೂರ ಅಧಿಕಾರಿ ವರ್ಗದವರ ತೀರ್ಮಾನಗಳನ್ನು ಹರಕು ಬುಟ್ಟಿಯಂತೆ ಮಾಡಿದ ಲೊರ್ಡ ಸಭೆಯವರಿಗೆ ಮಹಾ ಪುರಸ್ಕಾರನ್ನಬೇಕು. ಯಾಕೆಂದರೆ ಬ್ರಿಟಿಷ ಜನಾಂಗಕ್ಕೆ ಸೇರಿದ ಒಬ್ಬಿಬ್ಬರ ರಕ್ತಪಾತವೇ ಮಹತ್ವದ್ದಾಗಿ ಇವರಿಗೆ ಕಂಡಿತಲ್ಲದೆ ಡಾಯರನು ಅಶಸ್ತ್ರಧಾರಿಗಳಾದ ಹೆಂಗಸು ಮಕ್ಕಳು ಮುಂತಾದವರ ಮೇಲೆ ಗುಂಡುಹಾರಿಸಿದ್ದು, ದಾರಿಹೋಕರನ್ನು ರಸ್ತೆಯ ಮೇಲೆ ತೆವಳಿಕೊಂಡು ಹೋಗಬೇಕೆಂದು ನಿರ್ಬಂಧಪಡಿಸಿದ್ದು ಮತ್ತು ಇತರ ರೀತಿಯಲ್ಲಿ ಜನಗಳ ಗೌರವಕ್ಕೆ ಭಂಗ ತರುವ ಘೋರದಂಡವನ್ನು ಅನುಸರಿಸಿದ ಯಾವುದೂ ಅವರ ಕಣ್ಣೆದುರಿಗೆ ಸುಳಿಯಲಿಲ್ಲ. ಇದು ವಿಷಾದಕರವಾದ ವಾರ್ತೆಯೆನ್ನಬೇಕಾಗಿದೆ.

ಒಳದೇಶ ವರ್ತಮಾನ.

ಪ್ರಾಂತಿಕ ಸರಕಾರಗಳಿಗೆ ಸಾಲದ ಅಧಿಕಾರ—ಪ್ರಾಂತಿಕ ಸರಕಾರಗಳ ಸುಧಾರಣಾ ಎಕ್ಟಿನ ಮೇರೆಗೆ ವರಿಷ್ಠ ಸರಕಾರದ ಅನುಮತಿಯಿಂದ ಹೊರಗಿನಿಂದ ಸಾಲ ಪಡೆಯಬಹುದೆಂಬ ಕ್ರಮವು ಬಳಕೆಗೆ ಬರಲಿಕ್ಕಿದೆ. ಒಡನೆಯೆ ನೀರಾವರಿ, ಹೊಸ ರಸ್ತೆಗಳು, ಕೈಗಾರಿಕೆಗೆ ವಿದ್ಯುತ್ ಶಕ್ತಿಯ ಪೂರವಠೆ, ಮನೆ ಕಟ್ಟೋಣಗಳ ಸಂಘಗಳ ಏರ್ಪಾಟು, ಊರುಗಳ ಕೊಳೆನೀರು ಹೊರಗೆ ಹೊಗುವುದಕ್ಕೆ ತಡಮೆ, ಊರುಗಳನ್ನು ಸುರಕ್ಷಿತಪಡಿಸಿ ಆರೋಗ್ಯದ ಮೈದಾನಗಳಿಂದ ಹೊಸ ಕೈಗಾರಿಕೆಗಳ ಸ್ಥಾಪನೆ ಮುಂತಾದ ದೇಶೋಭಿವೃದ್ಧಿಯ ಕೆಲಸಗಳ ಬಗ್ಗೆ ಪ್ರಾಂತಿಕ ಸರಕಾರಗಳ ಸಾಲ ಪಡೆಯಲಿಕ್ಕಿರುವರು. ಈ ನಿಮಿತ್ತವಾಗಿ ಸಂಬಂಧಪಟ್ಟ ಇಲಾಖೆಗಳವರು ಅಗತ್ಯವಿರುವ ಅನುಭವವನ್ನು ಸಂಗ್ರಹಿಸಿ ಸ್ಕೀಮುಗಳನ್ನು ತಯಾರಿಸಬೇಕಾಗಿ ಮದ್ರಾಸ ಪ್ರಾಂತ ಸರಕಾರದವರು ಹುಕುಂ ಮಾಡಿರುವರು. (ಪಬ್ಲಿಸಿಟಿ ಬಿರೊ)

ಸಹಕಾರಿ ಇಲಾಖೆ—ಈ ವರ್ಷದಲ್ಲಿ ಸಹಕಾರಿ ಇಲಾಖೆಯ ಮೇಲ್ವಿಚಾರದ ಬಗ್ಗೆ ಒಟ್ಟಿಗೆ [illegible] ಸರ್ಕಲ್ ಆಫೀಸುಗಳು ಏರ್ಪಟ್ಟು [illegible] ಅಸಿಸ್ಟಾಂಟ ರಿಜಿಸ್ಟ್ರಾರರ ಕೈಕೆಳಗಿರುವವು. ಈ ಪೈಕಿ ನಮ್ಮ ಜಿಲ್ಲೆಯ ಆಫೀಸು ಒಂದಾಗಿದೆ. (ಪಬ್ಲಿಸಿಟಿ ಬ್ಯೂರೊ)

ರಾಜಮಹೇಂದ್ರಿ ಪುಷ್ಕರೋತ್ಸವ.—ಇದು ೧೨ ವರ್ಷಗಳಿಗೊಮ್ಮೆ ಜರಗುತ್ತದೆ. ಈ ವರ್ಷ ನಡೆಯಲಿಕ್ಕಿರುವ ಈ ಮಹೋತ್ಸವ ಕಾಲದಲ್ಲಿ ಕೂಡುವ ಜನರ ಆರೋಗ್ಯದ ಬಗ್ಗೆ ಸರಕಾರದವರು ೩೦,೦೦೦ ರೂಪಾಯಿ, ಗೋದಾವರಿ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮ್ಯುನ್ಸಿಪಲ್ ಕೌನ್ಸಿಲು ಇವೆರಡು ಕೂಡಿ ರೂ. ೧೪,೦೦೦ ವೆಚ್ಚದ ಬಗ್ಗೆ ವಿಂಗಡಿಸಿಟ್ಟಿರುವರು. ಕೋಟಿಲಿಂಗಂ ದೇವಾಲಯದ ಸಮೀಪದಲ್ಲಿ ಯಾತ್ರಿಕರ ಬಗ್ಗೆ ಬಿಡಾರಗಳು ಸಿದ್ಧವಾಗಲಿಕ್ಕಿರುವವು. ಇವುಗಳಲ್ಲಿ ಸುಮಾರು ಐದಾರು ಸಾವಿರ ಜನರು ತಂಗುವುದಕ್ಕೆ ಎಡೆಯಾಗುವುದು. ರಾಜಮಹೇಂದ್ರಿಯಲ್ಲಿಯೇ ಈ ದಿನಗಳ ಬಗ್ಗೆ ಬಿಡಾರಗಳು ಸಿದ್ಧವಾಗುವುವು. ಬಂದವರಿಗೆ ಊಟದ ಸಾಹಿತ್ಯ, ಕಟ್ಟಿಗೆ ಮುಂತಾದ್ದು ಯೋಗ್ಯ ಬೆಲೆಗೆ ಸಿಗುವಂತೆಯೂ ಏರ್ಪಡಿಸುವುದಲ್ಲದೆ ದಾರಿ ತೋರಿಸಲಿಕ್ಕೂ ಬೇರೆ ಅಗತ್ಯವಿರುವ ಸಹಾಯ ಮಾಡುವುದಕ್ಕೂ ಬೋಯ ಸ್ಕೌಟುಗಳ ಸ್ವಯಂಸೇವಕರು ಸಿದ್ಧವಿರುವರು.

ಹುಬ್ಬಳ್ಳಿಯ ಬ್ರಾಹ್ಮಣೇತರ ಪರಿಷತ್ತು—ಇದರ ಅಧಿವೇಶನವು ಇದೇ ೨೬ನೇ ತಾರೀಕಿಗೆ ಹುಬ್ಬಳ್ಳಿಯಲ್ಲಿ ಮದ್ರಾಸಿನ ನಾಮಧಾರಿ ಸರ್ ಪಿ ತ್ಯಾಗರಾಯಚೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಇವರ ಭಾಷಣದಲ್ಲಿ ದೇಶದ ಅಭಿವೃದ್ಧಿಗೆ ಬ್ರಾಹ್ಮಣೇತರ ವೃಂದದ ಏಳ್ಗೆಯು ಅತ್ಯಾವಶ್ಯಕ, ಬ್ರಾಹ್ಮಣೇತರರ ಚಳವಳವು ಬ್ರಾಹ್ಮಣರ ಮೇಲೆ ದ್ವೇಷದಿಂದ ಉದ್ಭವಿಸಿದ್ದಲ್ಲ, ಆದರೆ ಬ್ರಾಹ್ಮಣರು ರಾಷ್ಟ್ರೀಯ ಸಭೆಯನ್ನು ತಮ್ಮ ಕೈವಶಮಾಡಿಕೊಂಡು ಅದರ ಕೀರ್ತಿಯುತ ಸ್ಥಾಪಕರ ಮತ್ತು ಮೂಲಪುರುಷರ ಧ್ಯೇಯಗಳನ್ನು ಬದಿಗಿಟ್ಟು, ತೀರಾ ತಮ್ಮ ಸ್ವಾರ್ಥಪರವಾದ ಹೋರಾಟಕ್ಕೆ ನಾಟ್ಯರಂಗವಾಗಿ ಮಾಡಿದ್ದಾರೆ. ಈ ಬ್ರಾಹ್ಮಣರ ಒಳಸಂಚು, ಸ್ವಾರ್ಥಪರತೆ ಮತ್ತು ಕುಹಕವನ್ನು ನಿರ್ಮೂಲಮಾಡುವುದು ಅತಿ ಅಗತ್ಯವಾಗಿದೆ. ಕೆಲವು [illegible] ಪ್ರೋತ್ಸಾಹದಿಂದ ಮುಸಲ್ಮಾನ ಬಂಧುಗಳು ದಾರಿತಪ್ಪಿ ಕಾಡಿಗೆ ಅಲೆಯುವುದೆಷ್ಟು ಕಾಣುವಾಗ ಪಶ್ಚಾತ್ತಾಪ ಹುಟ್ಟುತ್ತಿದೆ ಎಂದು ಮುಂತಾಗಿ ಭಾಷಣಮಾಡಿದರು.

ಮುಂಬಯಿಯಲ್ಲಿ ಯಜ್ಞೇಶ್ವರನಿಗೆ ಆಹುತಿ—ಮುಂಬಯಿಯಲ್ಲಿ ಮಂಗಲದಾಸ ಜಿರಾ ಮಾರ್ಕೆಟಿನಲ್ಲಿ ಥಳ್ಳನೆ ಬೆಂಕಿಹತ್ತಿ ಸುಮಾರು ೪೦೦ ದೊಡ್ಡ ಮಳಿಗೆಗಳು ನಾಶವಾದವು. ಈ ಮಳಿಗೆಸಾಹುಕಾರರು ತಮ್ಮ ಇವೇ ಮಾತ್ರವಲ್ಲ, ಮನೆಯ ನಗದಾಗಿನೆಗಳನ್ನೂ ದ್ರವ್ಯಸಂಚಯವನ್ನೂ ಇಲ್ಲಿಯೇ ಇಟ್ಟಿದ್ದರಂತೆ. ನಷ್ಟವಾದ ಸಾಮಾನಿನ ಬೆಲೆ ೨ ಕೋಟಿ ರೂಪಾಯಿಗೆ ಮಿಕ್ಕೀತು ಎಂದು ಅಂದಾಜುಕಟ್ಟುತ್ತಾರೆ.

ಟಾಟಾ ಕನ್ಸ್ಟ್ರಕ್ಶನ್ ಕಂಪೆನಿ—ಮುಂಬಯಿಯಲ್ಲಿ ಈ ಹೆಸರಿನ ಒಂದು ಕಂಪೆನಿಯು ಈಗಲೇ ರಿಜಿಸ್ಟರಾಗಿದೆ. ಇದರ ಬಂಡವಾಳ ೨ ಕೋಟಿ ರೂಪಾಯಿ. ಕಟ್ಟೋಣಗಳನ್ನು ಕಟ್ಟಿಸಿಕೊಡುವುದು, ಇದಕ್ಕೆ ಬೇಕಾದ ಸಾಹಿತ್ಯಗಳನ್ನು ಒದಗಿಸುವುದು ಮುಂತಾದ ಕೆಲಸಗಳು ಈ ಕಂಪೆನಿಯಲ್ಲಿ ಸಾಗುವವು.

ಆಯುರ್ವೇದ ಪಂಡಿತರು—ಮದ್ರಾಸು ಮಹಾಜನ ಸಭೆಯ ಹೆಲ್ತ್ ಕಮಿಟಿಯವರ ಪ್ರೋತ್ಸಾಹದಿಂದ ಮದ್ರಾಸು ಶಹರಿನ ಆಯುರ್ವೇದ ಪಂಡಿತರ ಮತ್ತು ಹಕೀಮರ ಒಂದು ಮೀಟಿಂಗು ೨೪ನೆ ತಾರೀಕಿಗೆ ಜರಗಿತು. ಅದರಲ್ಲಿ ರಾವಸಾಹೇಬ ಡಾ ಯು ರಾಮರಾಯರೂ ಇತರ ಕೆಲವು ಗೃಹಸ್ಥರೂ ಹಾಜರಿದ್ದರು. ಮದ್ರಾಸು ಸಂಸ್ಥಾನದೊಳಗಣ ಈ ಬಗೆಯ ವೈದ್ಯರ ಒಂದು ರಿಜಿಸ್ಟರನ್ನು ತೆರೆಯಬೇಕೆಂತಲೂ ಈ ರಿಜಿಸ್ಟ್ರಿಗೆ ದಾಖಲುಮಾಡುವ ಯೋಗ್ಯತೆಯುಳ್ಳವರನ್ನು ಗೊತ್ತುಹಚ್ಚಲಿಕ್ಕೆ ೧೨ ಮಂದಿ ಪ್ರಖ್ಯಾತವೈದ್ಯರ ಒಂದು ಕಮಿಟಿಯನ್ನೂ ಏರ್ಪಡಿಸಬೇಕೆ ತಲೂ ನಿರ್ಣಯಿಸಲಾಯಿತು.

ಮುಂಬಯಿ ಯೂನಿವರ್ಸಿಟಿ—ಈ ಯೂನಿವರ್ಸಿಟಿಯವರು ಸರ್ ನಾರಾಯಣ ಚಂದಾವರಕರ ಮತ್ತು ನ್ಯಾಯಮೂರ್ತಿ ಸರ್ ಚಿಮನಲಾಲ ಸೆತಲವಾಡ ಇವರಿಗೆ 'ಡೊಕ್ಟರ್ ಒಫ್ ಲೊ' ಎಂಬ ಡಿಗ್ರಿ (ಬಿರುದನ್ನು) ಕೊಡುವಂತೆ ನಿಶ್ಚಯಿಸಿದ್ದಾರೆ.

ಪ್ರಿನ್ಸ್ ಒಫ್ ವೇಲ್ಸರ ಸ್ವಾಗತದ ಫಂಡು—ಇದಕ್ಕೆ ಮದ್ರಾಸಿನಲ್ಲಿ ಈ ವರೆಗೆ ರೂ ೧೯೧೧೩—೦—೬ ಜಮೆ ಆಯಿತು. ಈ ಜಿಲ್ಲೆಯ ನಂದವಾರ ಜಾನಬಹದ್ದೂರ ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬರು ಇದಕ್ಕೆ ರೂ ೧೦೦೦ರನ್ನು ವಂತಿಗೆ ಕೊಟ್ಟಿರುವರು.

ಇಂಡಿಯನ್ ವೋರ್ ಲೋನ್—ವರಿಷ್ಠ ಸರಕಾರದವರು ಸೇಕಡಾ ೬ರ ದರದಲ್ಲಿ ಬಡ್ಡಿ ನಿಗದಿ ೧೯೩೦ನೆ ಇಸವಿಯಲ್ಲಿ ತೆರುವುದಕ್ಕೆ ಹಾಗತ್ತ ಮಾಡಿದ ವೋರ್ ಬೋಂಡುಗಳಿಗೆ ರೂ ೧೨ [illegible] ಮುತಿಗೆ ಯಾಯಿತು. ಇದಕ್ಕೆ ವಿವರ —

ಬಂಗಾಳ	ರೂ	೪೭,೩೦೫,೩೦೦
ಮುಂಬಯಿ	,	೪೫,೯೭೬,೨೦೦
ಮದ್ರಾಸು	,	೧೧,೬೧೮,೭೦೦
ಸಂಯುಕ್ತ ಪ್ರಾಂತ		[illegible]
ಪಂಜಾಬು		೧೬೬೦,೧೦೦
ಸೆಂಟ್ರಲ್ ಪ್ರಾಂತ	,,	೩೬೦೫ [illegible]
ಬರ್ಮಾ		೩೪೦೩,೭೦೦
ಬಿಹಾರ ಮತ್ತು ಒರಿಸ್ಸಾ		೧೦೪೩೮೦೦
ಅಸ್ಸಾಂ		೩೬ ೫೦೦
ಇತರ ಚಿಕ್ಕ ಪ್ರಾಂತಗಳ		೩೪೬೬ [illegible]

೧೯೧೫ರಿಂದ ೧೯೫೫ರ ಒಳಗೆ ತೆರಲಿಕ್ಕಿರುವ ಸೇಕಡಾ ೫ ಬಡ್ಡಿ (ಇನ್‌ಕಂಟ್ಯಾಕ್ಸ ಇಲ್ಲ) ಸಾಲಕ್ಕೆ ೩೬೧೦,೭೦೦ ರೂಪಾಯಿ ವಂತಿಗೆ ಯಾಯಿತು —

ಬಂಗಾಳ	ರೂ	೩೨೪೩೬೦೦
ಮುಂಬಯಿ		೨೪೯೦೦
ಮದ್ರಾಸು		೮,೭೫೦
ಬರ್ಮಾ	,	೧೫೫ ೫೦೦
ಅಸ್ಸಾಂ		೭೦೦೦

ಇದು ಜುಲೈ ೨೦ನೆ ತಾರೀಕು ವರೆಗೆ ಲೆಖ್ಖವಾಗಿರುತ್ತವೆ.

ದಕ್ಷಿಣ ಕನ್ನಡ.

ಪುತ್ತೂರು.—ಪುತ್ತೂರು ತಾಲೂಕು ಬೋರ್ಡಿಗೆ ಉಪ್ಪಿನಂಗಡಿ ಇಲೆಕ್ಟೊರಲ್ ಸರ್ಕಲಿನಿಂದ ೪ ಸ್ಥಾನಗಳಿಗೆ ರಾ। ಎಚ್ ಗಣಪತಿರಾವ್ ರಾ। ಬೆಳ್ಳಿಪಾಡಿ ದಾಸಪ್ಪ ರಾ। ಮೊಳಹಳ್ಳಿ ಶಿವರಾವ್ ಉಪ್ಪಿನಂಗಡಿ ಸರ್ಕಲಿಗೆ ೨ ಸ್ಥಾನಗಳಿಗೆ ರಾ। ಬಿ ರಾಮರಾವ್, ರಾ। ಸರಾಫ ನರಸಿಂಹ ನಾಯಕರು, ರಾ। ಕೇವಳ ವಾಸುದೇವ ನಾಯಕರ ಉಪ್ಪಿನಂಗಡಿ ಸರ್ಕಲಿನ ೨ ಸೀಟುಗಳಿಗೆ ರಾ। ಮಂಜೇಶ್ವರ ಅನಾಥೇಶ ಭಟ್ಟರ, ರಾ। ಮಂಗಲ್ಪಾಡಿ ಕೃಷ್ಣಯ್ಯ ರಾ। ಆ ನಂದ್ಯ ಸುಬ್ಬಯ್ಯ ರೈ ಬೆಳ್ಳಂಗಡಿ ಸರ್ಕಲಿನ ೪ ಸೀಟುಗಳಿಗೆ, ರಾ। ಕೆ ಪೂವಣಿ ಹೆಗಡೆ ರಾ। ಕೃಷ್ಣ ಪದವಣ್ಣಾಯ, ರಾ। ಗುಂಡಿ ನಾರಾಯಣಪದ್ಮನಾಭ ಖಾಡಿಲಕರ್, ಕಾಸರಗೋಡು ತಾಲೂಕು ಬೋರ್ಡಿಗೆ ಕಾಸರಗೋಡು ಸರ್ಕಲಿಗೆ ೪ ಸೀಟುಗಳಿಗೆ ರಾ। ಎಸ್ ರಾಮಯ್ಯ ಆಳ್ವ, ರಾ। ಕೆ ನರಸಿಂಗ ನಾಯಕರ, ರಾ। ಎಸ್ ಸುಂದರರಾಮರಾವ, ರಾ। ಕೆ ಗೋಪಾಲಕೃಷ್ಣ ಪೈ, ಹೊಸದುರ್ಗ ಸರ್ಕಲಿಗೆ ೨ ಸೀಟುಗಳಿಗೆ ರಾ। ಎಚ್ ಶ್ರೀನಿವಾಸ ಕಾಮತ್ ರಾ। ಸಿ ಮಂಜುನಾಥ ಕಾಮತ್, ರಾ। ಕೆ ರಾಮವರ್ಮ ರಾಜರು ರಾ। ಎ ಸಿ ರವಿವರ್ಮ ರಾಜರು, ಬೇಕಲ್ ಸರ್ಕಲಿನ ೨ ಸೀಟುಗಳಿಗೆ ರಾ। ಎಮ್ ಕೆ ಮಹಮ್ಮದ ಬ್ಯಾರಿ, ರಾ। ಕೆ ಮುತ್ತಣ್ಣ ಶೆಟ್ಟಿ ರಾ। ಕೆ ರಾಮಣ್ಣಾಯರು, ರಾ। ಕೆ ಕೋರಣ್ಣಾಯರು, ರಾ। ರಾಮಚಂದ್ರ ಕ್ಯಾನುಭೋಗರು, ಮಂಜೇಶ್ವರ ಸರ್ಕಲಿನ ೪ ಸೀಟುಗಳಿಗೆ ಡಾ। ಎಮ್ ಗೋವಿಂದ ಪೈ, ರಾ। ಎ ಮಂಜಪ್ಪಳ್ಳ, ರಾ। ಕೆ ಪದ್ಮನಾಭ ಶೆಟ್ಟಿ, ರಾ। ಎಮ್ ವೈಕುಂಠ ಭಕ್ತರು, ರಾ। ಬಿ. ವೆಂಕಪ್ಪ ಪುಂಡರು ರಾ। ಮ ಅನಂತ ಕೃಷ್ಣರಾಯರು, ರಾ। ಕಣಿಯೂರ ಬಾಳ್ತಿಲ್ಲು ತಿಮ್ಮಪ್ಪ ಶೆಟ್ಟಿ ಇವರೆಲ್ಲರ ಶಿಫಾರಸು ಪಟ್ಟಿಗಳು ಮಂಜೂರಾಗಿವೆ. ಇನ್ನೂ ಚುನಾವಣೆಯ ಫಲ ಗೊತ್ತಾಗ ಬೇಕಿದೆ.

[illegible]

ಅಗ್ರಲೇಖನಗಳು:—

ಇದು ದೂರದೃಷ್ಟಿಯ ಧೋರಣವಲ್ಲ

ಸ್ಫುಟವಿಚಾರಗಳು:—

೧. ಉಗ್ರಧೋರಣವು ಪ್ರಾರಂಭವಾಗುವಂತೆ ತೋರುತ್ತದೆ ,,
೨. ಮಾಳವೀಯರ ಸೂಚನೆ ೭
೩. ಬ್ರಾಹ್ಮಣೇತರ ಪರಿಷತ್ತು ,,
೪. ಮ. ಶಾ. ಶಾಸ್ತ್ರಿಗಳು ,,
೫. ಕಾಗದದ ಬರಗಾಲ ,,
ಮಂಗಳೂರು ,,

ವರ್ತಮಾನಸಂಗ್ರಹಗಳು:—

ಯುದ್ಧದ ಉತ್ತರಕಾಂಡ ೫
ಒಳದೇಶ ವರ್ತಮಾನ
ದಕ್ಷಿಣಕನ್ನಡ—ಪುತ್ತೂರು, ಉಡುಪಿ, ಕೊಕ್ಕಡ, ವಣಾಡ್ಯೂರು ೮
ಡಿಸ್ಟ್ರಿಕ್ಟ್ ಬೋರ್ಡ ಮೀಟಿಂಗು ,,
ಗ್ರಾಮ ಉದ್ಯೋಗಸ್ಥರ ಮೀಟಿಂಗು ,
ಪತ್ರವ್ಯವಹಾರ—೧, ೨, ೩, ೪ ೫, ೯

ಸ್ವದೇಶಾಭಿಮಾನಿ.

ಶಕ ೧೮೪೨ ಆ. ಶ್ರಾ. ಶು| ೧೫ ಶುಕ್ರವಾರ

ಇದು ದೂರದೃಷ್ಟಿಯ ಧೋರಣವಲ್ಲ!

ಮಹಾಭಾರತದಲ್ಲಿ ಎಲ್ಲ ತರದ ಪ್ರಸಂಗಗಳು ಉಪಲಬ್ಧವಾಗುತ್ತವೆ ಧಾರ್ಮಿಕ ಮತ್ತು ತಾತ್ವಿಕ ವಿಚಾರಗಳೊಡನೆಯೆ ವ್ಯಾವಹಾರಿಕ ಹಾಗು ರಾಜಕೀಯ ವಿಷಯಗಳ ವಿವಿಧ ಪ್ರಸಂಗಗಳು ಮಹಾಭಾರತದಲ್ಲಿ ಆಖ್ಯಾನ—ಉಪಾಖ್ಯಾನಗಳ ಮೂಲಕವಾಗಿ ವಾಚಕರ ಮುಂದೆ ಸಜೀವ ಚಿತ್ರದಂತೆ ನಿಲ್ಲಿಸಲ್ಪಟ್ಟಿವೆ ಈ ಮಹಾಪುರಾಣದಲ್ಲಿ ಇಲ್ಲದ ವಿಷಯಗಳು ಲೋಕದಲ್ಲಿ ಇಲ್ಲವೆಂದು ಹೇಳಿದರೆ ಅದು ಅತಿಶಯೋಕ್ತಿಯ ವಿಧಾನವಾಗಲಿಕ್ಕಿಲ್ಲ ' ಮತ್ತು ಇದೇ ಕಾರಣದಿಂದ "ವ್ಯಾಸೋಚ್ಛಿಷ್ಟಂ ಜಗತ್ಸರ್ವಮ್ ' ಎಂದು ಪ್ರಾಚೀನರು ಹೇಳಿರುತ್ತಾರೆ ಇರಲಿ ಮಹಾಭಾರತದ ಶ್ರೇಷ್ಠತ್ವವನ್ನು ವರ್ಣಿಸುವುದು ನಮ್ಮ ಪ್ರಕೃತ ಕಾರ್ಯವಲ್ಲ ಅದರಲ್ಲಿ ವರ್ಣಿಸಲ್ಪಟ್ಟ ವಿವಿಧ ಪ್ರಸಂಗಗಳಲ್ಲಿ ಎಷ್ಟೋ ಪ್ರಸಂಗಗಳು ಈ ಹೊತ್ತಿನ ೨೦ನೆಯ ಶತಮಾನದೊಳಗಿನ ಸುಧಾರಿಸಿದ ರಾಜ್ಯಗಳಲ್ಲಿ ಸಹ ಸಂಭವಿಸಿ ಹೋಗುತ್ತವೆ ಎಂಬುದನ್ನು ತೋರಿಸುವುದೇ ನಮ್ಮ ಈ ಹೊತ್ತಿನ ಮುಖ್ಯ ಉದ್ದೇಶವಾಗಿದೆ ದ್ರೌಪದಿಯ ವಸ್ತ್ರಾಪಹರಣದ ಪ್ರಸಂಗವು ಕನ್ನಡ ವಾಚಕರಿಗೆ ಅಪರಿಚಿತವಲ್ಲ ಮದಮತ್ತ ಅವಿಚಾರಿ ಮತ್ತು ಅವಿವೇಕಿಯಾದ ದುಃಶಾಸನನಂಥ ಪುಂಡಯುವಕರು ತಮ್ಮ ಅವಿವೇಕದ ಬಲದಲ್ಲಿ ರಾಜಸ್ತ್ರೀಯನ್ನು ಸಭೆಯಲ್ಲಿ ಕರತಂದು ನಾನಾ ತರದ ವಿಡಂಬನೆಯಿಂದ ಅವಳ ಮರ್ಯಾದೆಯನ್ನು ಅಪಹರಿಸಲು ಯತ್ನಿಸಿದ್ದು ಆ ಪುಂಡರ ಸ್ವಭಾವ, ಶಿಕ್ಷಣ ಮತ್ತು ಅಭ್ಯಾಸ ಇವುಗಳಿಗೆ ಶೋಭಿಸುವಂತೆಯೆ ಇದೆ ಎನ್ನಬಹುದು ಒಂದು ವೇಳೆ ಇಂಥ ಕೃತ್ಯಕ್ಕೆ 'ಶೋಭಿಸು' ಎಂಬ ಮಾತು ಉಪಯೋಗಿಸಿದ್ದು ಆ ಶಬ್ದದ ಛಲನೆಯಾಗುತ್ತದೆ ಎಂದಿದ್ದರೆ ಆ ಪುಂಡ ತರುಣರ ಕೃತ್ಯಗಳು ಈಗ ಹೇಳಿದ ಅವರ ಗುಣಗಳಿಗೊಪ್ಪುವಂತಿವೆ ಎಂದು ಹೇಳಲು ಯಾವ ಸಂಕೋಚವೂ ಇಲ್ಲ ಸಭೆಯಲ್ಲಿ ವಿರಾಜಮಾನರಾಗಿದ್ದ ಭೀಷ್ಮ, ದ್ರೋಣ, ಕೃಪ ಮೊದಲಾದ ಹಿರಿ ಮುತ್ಸದ್ದಿಗಳು ಪುಂಡರ ಈ ಕೃತ್ಯವನ್ನು ನಿಷೇಧಿಸುವುದರ ಬದಲು ಅದನ್ನು ಸಮರ್ಥಿಸಲು ಹೊರಟಿದ್ದು ನೀತಿ ದೃಷ್ಟಿಯಿಂದ ಶೋಚನೀಯ ಮಾತ್ರವಲ್ಲ, ವಿವೇಕ ಭ್ರಷ್ಟತೆಯ ಮೂರ್ತಿಮಂತವಾದ ದೃಷ್ಟಾಂತವಾಗಿದೆ ಕೌರವರ ಪ್ರತಿಷ್ಠೆ(prestige)ಯನ್ನು ಕಾಯುವುದು ಈ ಪಕ್ಷದವರಿಗೆ, ರಾಜನೀತಿಯ ತತ್ವಕ್ಕನುಸಾರವಾಗಿ ಒಂದು ಮುಖ್ಯ ಕರ್ತವ್ಯವಾದರೂ ದೀರ್ಘ ದೃಷ್ಟಿಯಿಂದ ವಿಚಾರಮಾಡಿದರೆ ಈ ತಾತ್ಕಾಲಿಕ ಪ್ರತಿಷ್ಠೆಗೆ ಅಥವಾ ಗೌರವಕ್ಕೆ ಅಷ್ಟೊಂದು ಮಹತ್ವವನ್ನು ಕೊಟ್ಟಿದ್ದು ಒಳ್ಳೆದಲ್ಲ ಮುತ್ಸದ್ದಿಗಳು ದೀರ್ಘದರ್ಶಿಗಳಾಗಿರಬೇಕು ದೂರದೃಷ್ಟಿಯವರಾಗಿರಬೇಕು ನ್ಯಾಯನೀತಿಯ ವತ್ಸಲರಾಗಿರಬೇಕು ಇದೊಂದೂ ಸಂಗತಿಯನ್ನು ಭೀಷ್ಮ, ದ್ರೋಣಾದಿಕ ಮಹಾ ಮುತ್ಸದ್ದಿಗಳು, ಹಸ್ತಿನಾಪುರದ ಕನಸ್ಸರವೇಟಿವ್ ಪಕ್ಷದ ಲೋರ್ಡರು ತೋರಿಸಲಿಲ್ಲ ತಥಾಪಿ ಈ ಹೊತ್ತಿನ ಕೊಮನ್ಸ ಸಭೆಯ ಅಂದಿನ ಪ್ರತಿನಿಧಿಯಾದ ವಿದುರನಿಗೆ ಪುಂಡರ ಕೃತ್ಯವು ರುಚಿಸಲಿಲ್ಲ ವಾಂತಿಯಾಗುವಷ್ಟು ಆ ಕೃತ್ಯದಲ್ಲಿ ಜಿಹಾಸೆಯು ಲೇಬರ ಪಾರ್ಟಿಯ ಪ್ರಮುಖನಾದ ವಿದುರನಲ್ಲುಂಟಾಯಿತು [illegible] ತರುಣರ ಪುಂಡುತನದ ಕೃತ್ಯವು ರಾಜಸಭೆಯಲ್ಲಿ ಶಿಷ್ಟಮಾನ್ಯವಾಗಿ ನಡೆದುಹೋಯಿತು. ಇದು ಭಾರತದ ಪ್ರಸಂಗವು.

ಇದೆ ಪ್ರಸಂಗವು "ಡಾಯರ ಡಿಬೇಟ"ನಲ್ಲಿ ಕೂಡಾ ಯಥಾಪ್ರತಿಯಾಗಿ ನಿಂತಿದೆ. ಕೊಮನ್ಸಿನಲ್ಲಿ ಸ್ಪಷ್ಟ ಮಿ| ಮೊಂಟೆಗ್ಯುಗಳ ಅಂತಃಕರಣಪೂರ್ವಕವಾದ ಭಾಷಣದಿಂದಾಗಲಿ ಅಥವಾ ವಿದುರನಂತೆ ನಿಃಸ್ಪೃಹ ಮತ್ತು ನ್ಯಾಯಪ್ರಿಯರಾದ ಹಲವು ಲೇಬರ ಪಾರ್ಟಿಯ ಮೆಂಬರುಗಳ ಭಾಷಣದಿಂದಾಗಲಿ ಡಾಯರನಿಗೆ ಹಲವು ವಾಗ್ದಂಡನೆಗಳು ಸಿಕ್ಕಿದವು, ಅವನಿಗೆ ವಿಧಿಸಿದ ಶಿಕ್ಷೆಯು ಹೆಚ್ಚಿನದಲ್ಲ ಅಥವಾ ತಪ್ಪಲ್ಲವೆಂದು ನಿರ್ಣಯಿಸೋಣಾಯಿತಷ್ಟೆ ಈ ನಿರ್ಣಯದಿಂದ ಮೊಂಟೆಗ್ಯುಗಳಿಗೆ ಮತ್ತು ಹಿಂದಿ ಸರಕಾರಕ್ಕೆ ಒಂದೆರಡು ದಿವಸ ಸಮಾಧಾನದಿಂದ ಕೊಂಚ ನಿದ್ದೆ ಬರುವ ಹಾಗಿತ್ತು ಅಷ್ಟರಲ್ಲಿ, ಡಾಯರನ ಕಡೆಯವರ ಸುದರ್ಶನ ಚಕ್ರವು ಕೆಬಿನೆಟ್ ಮತ್ತು ಹಿಂದುಸ್ಥಾನ ಸರಕಾರದ ಬೆನ್ನು ಹಿಡಿಯಹತ್ತಿದೆ! ಲೊರ್ಡರ ಸಭೆಯಲ್ಲಿ ಡಾಯರನನ್ನು ಕೆಲಸದಿಂದ ನಿವೃತ್ತಪಡಿಸಿದ್ದು ಅನ್ಯಾಯ, ಈ ಬಗ್ಗೆ ಹಿಂದುಸ್ಥಾನ ಸರಕಾರ ಮತ್ತು ಕೆಬಿನೆಟಿನ ನಿಷೇಧವನ್ನು ಮಾಡತಕ್ಕದ್ದು ಎಂಬದೊಂದು ಠರಾವನ್ನು ತಂದು ಬಹುಮತದ ಬಲದಿಂದ ಡಾಯರ್ ಪಾರ್ಟಿಯವರು ಅದನ್ನು ಪಾಸುಮಾಡಿಸಿಕೊಂಡರು

ಈ ಸಂದರ್ಭದಲ್ಲಿ ಕೆಲವು ಲೊರ್ಡ ಶಿಖಾಮಣಿಗಳು ಆಡಿದ ಮಾತುಗಳನ್ನು ಮನಸ್ಸಿಗೆ ತಂದರೆ ಇಂಥ ಮುತ್ಸದ್ದಿಗಳ ವಿವೇಕಶಕ್ತಿಯು ಎಲ್ಲ ಮಲಗಿ ಬಿದ್ದಿದೆ, ಅಥವಾ ಕೆಲವು ಮದ್ದುಸಾಮಾನುಗಳು ಈ ಯುದ್ಧದಲ್ಲಿ ಖರ್ಚಾಗಿ ಹೋದಂತೆ ಈ ಮುತ್ಸದ್ದಿಗಳ ಸಾರಾಸಾರ ಬುದ್ಧಿಯೂ ಸವೆದುಹೋಯಿತೆ ಎಂಬ ಸಂಶಯವು ಬರುತ್ತದೆ ಡಾಯರನು ಪಂಜಾಬವನ್ನು ಉಳಿಸಿದ್ದಾನೆ ಗಲಾಟೆಯ ಸಂದರ್ಭದಲ್ಲಿ ದೀರ್ಘ ವಿಚಾರಮಾಡುವಷ್ಟು ಪುರಸತ್ತು ಅವನಿಗಿರಲಿಲ್ಲ, ಬ್ರಿಟಿಷ್ ಸಾಮ್ರಾಜ್ಯದ ನಿಷ್ಠೆಯಿಂದ ವರ್ತಿಸಿದ ಮಹಾತ್ಮನಿಗೆ ಇನ್ನುಮುಂದೆ ಕೆಲಸವೆ ಇಲ್ಲವೆಂದು ಹೇಳುವುದು ನ್ಯಾಯವೆ? ಅವನ ಸಾಹಸ, ಅವನ ಶೌರ್ಯ, ಅವನ ಪ್ರಸಂಗಾವಧಾನತೆ ಇವೆಲ್ಲ ಸಾಮ್ರಾಜ್ಯದ ಸೇವೆಗೆ ಅರ್ಪಿಸಲ್ಪಟ್ಟವು ಇಂಥವನಿಗೆ ಹಿಂದುಸ್ಥಾನ ಸರಕಾರವು ಮತ್ತು ಕೆಬಿನೆಟು ಇವು ಕೊನೆಗೆ ಕೊಟ್ಟ ಇನಾಮು ಯಾವುದು? ಉಚ್ಚಾಟನೆ! ಅಹಹಾ! ಇದೇ ಇನಾಮು! ಸರಕಾರದ ಇಂಥ ಪ್ರವೃತ್ತಿಯನ್ನು ನಿಷೇಧಿಸದೆ ಇದ್ದರೆ ಮುಂದೆ ಬಹು ದೊಡ್ಡ ಹಾನಿಯು ಬರುವ ಸಂಭವವಿದೆ ಎಂದು ಮುಂತಾದ ರೀತಿಯಲ್ಲಿ ಡಾಯರನ ಅಲ್ಪ ಕೃತ್ಯದ ಸವರ್ಣನವನ್ನೂ ಅವನಿಗೆ ದೊರಕಿದ ಸ್ವಲ್ಪ ಶಿಕ್ಷೆಯ ಬಗ್ಗೆ ಕೂಡಾ ಹಿಂದುಸ್ಥಾನ ಸರಕಾರದ ನಿಷೇಧವನ್ನೂ ವಿಲಾಯತಿಯ ಲೊರ್ಡ ಮಹಾಜನರು ತಮ್ಮ ಕೂಟದಲ್ಲಿ ಸ್ಪಷ್ಟವಾಗಿ—ಅತಿ ಸ್ಪಷ್ಟವಾಗಿ ಮಾಡಿದರು ಡಾಯರ ಪಕ್ಷದವರಾದ ಲೊರ್ಡ ಮಹಾತ್ಮರ ರಾಜಕೀಯ ನೀತಿಯ ಮುಖ್ಯ ಸೂತ್ರವೇನೆಂದರೆ, ಡಾಯರನು ಪಂಜಾಬದಲ್ಲಿ ತನ್ನ ಕತ್ತಿಗೆ ಯಾಜಮಾನ್ಯವನ್ನು ಕೊಟ್ಟದ್ದು ತಪ್ಪಲ್ಲ

ಡಾಯರನು ಮತ್ತು ಅವನ ಸಖರು ಪಂಜಾಬದಲ್ಲಿ ತಮ್ಮ ಕತ್ತಿಗಳಿಗೆ ಪ್ರಭುತ್ವವನ್ನು ಕೊಟ್ಟು ಯಾವ ಹಾನಿಯನ್ನು ಉಂಟುಮಾಡಿದ್ದಾರೊ ಅದು ವ್ಯವಹಾರಿಕ ದೃಷ್ಟಿಯಿಂದ ಎಷ್ಟು ಭಯಂಕರವಾಗಿದೆಯೊ ಅದಕ್ಕಿಂತಲೂ ಪಾರ್ಲಿಮೆಂಟಿನ ಈ ಮಹಾತ್ಮರು ಆ ಕೃತ್ಯದ ಸಮರ್ಥನವನ್ನು ಮಾಡಿದ್ದು ನೀತಿದೃಷ್ಟಿಯಿಂದ ಅತಿ ಭಯಂಕರವಾಗಿದೆ. ಯಾಕೆಂದರೆ, ಡಾಯರನ ಶಿಕ್ಷಣ ತರಗತಿ ಕಸಬು ಮತ್ತು ಇವೆಲ್ಲವುಗಳ ಪರಿಪಾಕವೆಂಬಂತೆ ಇರುವ ಅವಿವೇಕ ಇವುಗಳನ್ನು ಆಲೋಚಿಸಿದರೆ ಇಂಥ ಸದ್ಗುಣಮಂಡಿತನಾದ ವೀರನು ಲಷ್ಕರಕಾನೂನಿನ ಧಾಂದ್ಲೆಯ ಮಾಸದ ಸಂದರ್ಭವು ಒದಗಿದ ಮೇಲೆ ಮದವೇರಿ ಆ ಭರದಲ್ಲಿ ಅಮಾನುಷ ಕೃತ್ಯಗಳನ್ನು ಮಾಡುವುದು ಒಂದು ವೇಳೆ ಅವನ ಆ ಗುಣಗಳಿಗೆ ಒಪ್ಪುವಂತಿದೆ ಇಲ್ಲವೆ ತಕ್ಕಂತಿದೆ ಎನ್ನಬಹುದು, ಪರಂತು ರಾಜ್ಯಸೂತ್ರಗಳನ್ನು ಶಾಂತ ಮನಸ್ಸಿನಿಂದ, ದೂರದೃಷ್ಟಿಯಿಂದ ಲೋಕ ಕಲ್ಯಾಣದ ಇಚ್ಛೆಯಿಂದ ನಡೆಸುವ ಮುತ್ಸದ್ದಿಗಳು ಯಾವಾಗ ಬ್ರಿಟಿಷರ ಪ್ರತಿಷ್ಠೆಗೆ ಕುಂದು ಬರಬಾರದೆಂಬ ಉದ್ದೇಶವನ್ನು ಮುಂದಿಟ್ಟುಕೊಂಡು ನೋಕರಶಾಹಿಯ ಪ್ರಭಾವಳಿಯೊಳಗಿನ ಒಂದೆ ಒಂದು ವ್ಯಕ್ತಿಗೆ ಎಳ್ಳಷ್ಟು ಬಾಧಕವಾಗಬಾರದೆಂದು ನೆನಸಿ ಅವಿವೇಕಿಗಳ ಅತ್ಯಾಚಾರಗಳನ್ನು ಸಮರ್ಥಿಸತೊಡಗುವರೊ ಆಗ ಅವರು ತಮ್ಮ ಮುತ್ಸದ್ದಿತನಕ್ಕೆ ಪಾಪರ ಅರ್ಜಿಯನ್ನು ಹಾಕಿದರೆಂದು ಹೇಳಬಹುದು ಇಂಥ ಶೋಚನೀಯ ಸ್ಥಿತಿಯನ್ನು ಕೆಲವರು ಮೊನ್ನೆಯ ಲೊರ್ಡರ 'ಡಿಬೇಟಿ'ನಲ್ಲಿ ಪ್ರದರ್ಶಿಸುತ್ತಿರುವಲ್ಲಿ, "ಆ [illegible]

ಯನ್ನು [illegible] ಧೋರಣವನ್ನು [illegible] ಎಷ್ಟೋ ವಾದಿಸಿದಾಗ್ಯೂ [illegible] ಬಹುಮತವು [illegible] ಹಿಂದುಸ್ಥಾನ ಸರಕಾರದ [illegible] ಠರಾವು ಪಾಸಾಯಿತು!

ಈ ಎಲ್ಲ ಪರಿಸ್ಥಿತಿಯನ್ನೂ, ಪಾರ್ಲಿಮೆಂಟಿನಲ್ಲಿ ಮೊಂಟೆಗ್ಯುಗಳು ಗಾಂಧಿಗಳ ವಿಷಯವಾಗಿ ಹೊರಡಿಸಿದ ಉದ್ಗಾರಗಳನ್ನೂ ಆಲೋಚಿಸುವಾಗ ಮುಂದೆ ಬರುವ ಕಾಲವು ಸುಧಾರಣೆಗಳದೊ ಅಥವಾ ದುರ್ಧಾರಣೆಗಳದೊ ಎಂಬುದು ಗೊತ್ತಾಗುವುದಿಲ್ಲ ಇದೇ ತರದ ಸಂಶಯವು ಬಂದು ಒಬ್ಬ ಬಾತಮಿದಾರನು ಮಹಾಕವಿ ರವೀಂದ್ರನಾಥ ಟಾಗೋರರ ಬಳಿಗೆ ಹೋಗಿ ತನ್ನ ಸಂಶಯವನ್ನು ನಿವೇದಿಸಿದಾಗ ಅವರು "ಕಠಿಣ ಸಮಯವು ಬರುವಂತೆ ತೋರುತ್ತದೆ ದೂರದೃಷ್ಟಿಯ ಧೋರಣಕ್ಕೆ ಅಧಿಕಾರಿಗಳು ರಾಜೀಕೊಟ್ಟಂತೆ ಕಾಣುತ್ತದೆ. ಜನತೆಯು ಒಳಭೇದಗಳನ್ನು ಬಿಟ್ಟು ಬರುವ ಸಂಕಟಗಳನ್ನು ಐಕ್ಯದಿಂದ ಸಹಿಸಲು ಸಿದ್ಧರಾಗಬೇಕು" ಎಂಬ ಸಂದೇಶವನ್ನು ಹೇಳಿದ್ದಾರೆ. ಟಾಗೋರರ ಸಂದೇಶದ ಈ ಸಾರಾಂಶವನ್ನು ಎಲ್ಲರೂ ಜಪಿಸುವುದು ಆವಶ್ಯಕವಾಗಿದೆ.

ಸ್ಫುಟವಿಚಾರಗಳು.

೧ ಎರಡು ವಾರದ ಹಿಂದೆ ಪಾರ್ಲಿಮೆಂಟಿನಲ್ಲಿ ಮಿ. ಮೊಂಟೆಗ್ಯುಗಳು ಮಹಾತ್ಮಾಗಾಂಧಿಗಳ ವಿಷಯವಾಗಿ ಆಡಿ ತೋರಿಸಿದ ವಿಚಾರಗಳಿಗೆ ಹಿಂದುಸ್ಥಾನದಲ್ಲಿ ಮೊಳಕೆಗಳು ಬರಹತ್ತಿವೆ ಎಂದು ಈಗ ಹೇಳಬಹುದಾಗಿದೆ ದಿಲ್ಲಿಯ ಕಮಿಷನರರು ರಾಜಕೀಯ ಸಭೆಗಳನ್ನು ದಿಲ್ಲಿ ಪ್ರಾಂತದಲ್ಲಿ ಕೂಡಿಸಬಾರದೆಂದು ಹುಕುಮು ಹೊರಡಿಸಿದ್ದಾರೆ ಮುಂಬಯಿ ಸರಕಾರವಾದರೂ ಇದನ್ನೆ ಅನುಕರಿಸಿದೆ ಆದರೆ ಅದು ಪ್ರಕಟಿಸಿದ ಹುಕುಮಿನಲ್ಲಿ ಕೆಲವು ಹೆಚ್ಚಿನ ಮಾಹಿತಿಯು ವಿವರಿಸಲ್ಪಟ್ಟಿದೆ. ಸಿಂಧದಲ್ಲಿ ಖಿಲಾಫತ್ತಿನ ವಿಷಯವಾಗಿ ಸೇರಿದ ಹಲವು ಸಭೆಗಳಲ್ಲಿ ರಾಜದ್ರೋಹಕರವಾದ ಭಾಷಣಗಳೂ, ವರ್ಣದ್ವೇಷಕರವಾದ ಉಪನ್ಯಾಸಗಳೂ ಆಗುತ್ತಿದ್ದವೆಂದು ಮುಂಬಯಿ ಸರಕಾರದ ಕಿವಿಯ ಮೇಲೆ ಬಂದಿದೆ ಆದ್ದರಿಂದ ಸದರಿ ಪ್ರಾಂತ್ಯದಲ್ಲಿ ಇನ್ನು ಮುಂದೆ ರಾಜಕೀಯ ಸಭೆಗಳನ್ನು ಸೇರಿಸಬಾರದೆಂದು ಅದು ಹುಕುಮು ಹೊರಡಿಸಿದೆ ಸಾಧ್ಯವಿದ್ದ ಮಟ್ಟಿಗೆ ಕಠೋರ ಉಪಾಯಗಳನ್ನು ಕೈಕೊಳ್ಳಬಾರದೆಂದು ಮುಂಬಾಯಿ ಸರಕಾರದ ಮನಸ್ಸಿನಲ್ಲಿ ಉಂಟು ಪರಂತು ಖಿಲಾಫತ್ತಿನ ಚಳವಳವು ಅದರ ಮನಸ್ಸಿನಲ್ಲಿ ಇದ್ದಂತೆ ನಡಿಯಲು ಬಿಡುವುದಿಲ್ಲ ಆದ್ದರಿಂದ ಸಭಾ ಪ್ರತಿಬಂಧದ ಕಾನೂನನ್ನು ಜಾರಿಯಲ್ಲಿ ನಿರುಪಾಯದಿಂದ ಅದು ತರಬೇಕಾಗಿದೆ ಎಂದು ಮುಂಬಾಯಿ ಸರಕಾರವು ತನ್ನ ಹುಕುಮಿನಲ್ಲಿ ಹೇಳುತ್ತದೆ ಸರಕಾರವು ಈ ರೀತಿಯಿಂದ ಹೇಳಿಕೊಳ್ಳುವಾಗ ಮಹಾತ್ಮಾ ಗಾಂಧಿಗಳ ಮನಸ್ಸಿನಲ್ಲಾದರೂ ಶಾಂತತಾಭಂಗ ಮಾಡಬೇಕೆಂದಿಲ್ಲ ಇಷ್ಟೆ ಅಲ್ಲ, ಅವರು ತಮ್ಮ ಮನಸ್ಸಿನಲ್ಲಿದ್ದಂತೆಯೆ ನಡತೆಯಲ್ಲೂ ನಿರಾಕ್ಷೇಪತನವನ್ನು ತಂದಿದ್ದಾರೆ, ಮತ್ತು ತಮ್ಮ ಅನುಯಾಯಿಗಳನ್ನೂ ಉಪದೇಶಿಸುತ್ತಿದ್ದಾರೆ ಗಾಂಧಿ ಮತ್ತು ಮುಂಬಯಿ ಸರಕಾರ ಇವರಿಬ್ಬರಲ್ಲಿ ಸಾಧರ್ಮ್ಯವನ್ನು ತೋರಿಸುವುದಾದರೆ, ಅವರಿಬ್ಬರ ಮನಸ್ಸು ಶಾಂತತಾಭಂಗವಾಗಬಾರದೆಂದೇ ಉಂಟು ಹಾಗೆಯೆ ಅವರಲ್ಲಿ ವೈಧರ್ಮ್ಯವನ್ನು ತೋರಿಸಿಕೊಡುವುದಾದರೆ, ಮುಂಬಯಿ ಸರಕಾರವು ತರ್ಜನಿಯನ್ನು ಎತ್ತಿ ಹಿಡಿದದೆ ಮತ್ತು ಗಾಂಧಿಗಳು ಬುದ್ಧನಂತೆ ಶಾಂತಿಹಸ್ತವನ್ನು ತೋರಿಸುತಿದ್ದಾರೆ ಗಾಂಧಿಗಳು ಅಲ್ಲಲ್ಲಿ ಸಂಚರಿಸಿ ಅಸಹಕಾರಿತ್ವದ ಚಳವಳವನ್ನು ಪ್ರಾರಂಭಿಸುವಾಗ ಹಾಗು ಹರತಾಳಿನ ಸಂದರ್ಭದಲ್ಲಿ ಅತಿಶಾಂತತೆಯಿಂದ ನಡೆಕೊಳ್ಳಬೇಕೆಂದು ಅನುಯಾಯಿಗಳಿಗೆ ಸ್ಪಷ್ಟವಾಗಿ ತಿಳಿಸುತಿದ್ದಾರೆ. ಆದರೆ ಸರಕಾರವು ಮತ್ತು ಮೊಂಟೆಗ್ಯು ದೊರೆಗಳು ತರ್ಜನಿಯನ್ನು ಎತ್ತಿ ತೋರಿಸಿದರ ಮೇಲಿಂದ ಖಿಲಾಫತಿನ ಪ್ರಶ್ನೆಯೇ ಸರಕಾರಕ್ಕೆ ಅಪ್ರಿಯವಾಗಿದೆ ಎಂದು ತೋರುತ್ತದೆ. ಎಂದ ಮೇಲೆ ಉಗ್ರಧೋರಣವನ್ನು ಪ್ರಕಟಿಸಲಿಕ್ಕೆ ಸರಕಾರಕ್ಕೆ "ನೀನಲ್ಲವಾದರೆ ನಿನ್ನ ತಂದೆಯು ವೈರಿಯಿರಬಹುದು" ಎಂಬಂತೆ ಯಾವ ಕಾರಣವಾದರೂ ಸಿಗದೆ ಇರಲಿಕ್ಕಿಲ್ಲ.

೨ ಅಸಹಕಾರಿತ್ವದ ಆಂದೋಲನದ ವಿಷಯವಾಗಿ ಮ [illegible] ಬರುವ ಆಗಸ್ಟ ತಾ ೧ [illegible] ಪ್ರಾರಂಭಿಸಲು ನಿಶ್ಚಯ ಮಾಡಿದ್ದಾರಾದರೂ ಪಂಡಿತ ಮದನಮೋಹನ ಮಾಲವೀಯರು ಮೊನ್ನೆ ಒಂದು ಸಭೆಯಲ್ಲಿ ಭಾಷಣ ಮಾಡುವಾಗ ಹೇಳಿದ್ದೇನೆಂದರೆ, ಅಸಹಕಾರಿತ್ವದ [illegible] ಸಂಪೂರ್ಣ ಸನ್ನದ್ಧತೆಯೆಂಬುದಕ್ಕೆ ಸಂಶಯವಿಲ್ಲ [illegible] ಬರುವ [illegible] ರಾಷ್ಟ್ರೀಯ ಸಭೆಯಲ್ಲಿ ಅದರ ಗ್ರಾಹ್ಯಾಗ್ರಾಹ್ಯತೆಯನ್ನು ಕುರಿತು ಚರ್ಚೆಯಾಗಲಿಕ್ಕಿದೆ ಆ ಪ್ರಕಾರ ಅಲ್ಲಿ ಚರ್ಚೆಯಾಗಿ ಯಾವ ನಿರ್ಣಯವಾದೀತೊ ಅದನ್ನು [illegible] ಕಾಯಬೇಕು [illegible] ಕಮಿಟಿಯೂ ಮ. ಗಾಂಧಿಗಳೂ ಆ ನಿರ್ಣಯವಾಗುವುದಕ್ಕಿಂತ ಮುಂಚೆ ಮುಂದರಿಸಬಾರದೆಂದು ಪಂಡಿತ ಮಾಲವೀಯರು ವಿಜ್ಞಾಪಿಸಿ ಕೊಳ್ಳುವವರಿದ್ದಾರೆಂದು ಅವರ ಭಾಷಣದ ಮೇಲಿಂದ ತಿಳಿದು ಬರುತ್ತದೆ ಪಂಡಿತ ಮಾಲವೀಯರು ಈ ವಿಷಯದಲ್ಲಿ ಜನಗಳಿಗೆ ಕೊಟ್ಟ ಎಚ್ಚರವು ಯೋಗ್ಯವಿದೆ ಎಂದು ನಮ್ಮ ಅಭಿಪ್ರಾಯವಿದೆ

೩ ಕಳೆದ ವಸಂತದಲ್ಲಿ ಅಖಿಲ ಕರ್ನಾಟಕ ಪರಿಷತ್ತು ಧಾರವಾಡದಲ್ಲಿ ಸೇರಿತಷ್ಟೆ, ಇದರಲ್ಲಿ ಬ್ರಾಹ್ಮಣರೂ, ಬ್ರಾಹ್ಮಣೇತರರೂ, ಹಿಂದುಗಳೂ, ಮುಸಲ್ಮಾನರೂ ಎಲ್ಲರೂ ಒಟ್ಟಿಗೆ ಸೇರಿ ಕರ್ನಾಟಕದ ಹಿತಚಿಂತನೆಯನ್ನು ಮಾಡಿದ್ದಾರೆ ಅದರಲ್ಲಿ ಯಾವುದಾದರೂ ಒಂದು ವಿಶಿಷ್ಟ ಜಾತಿಯ ಹಿತವನ್ನೆ ನೋಡಿರಲಿಲ್ಲ ಆ ಪರಿಷತ್ತು ಎಲ್ಲರ ಹಿತಕ್ಕಾಗಿತ್ತು ಆದರೂ ಆ ವಾಸಂತಿಕ ಸಭೆಯಲ್ಲಿ ಕೆಲವರಿಗೆ ಸೇರುವುದು ಇಷ್ಟವಾಗಲಿಲ್ಲ ಅಂಥವರು ಈ ವರ್ಷಾ ಕಾಲದಲ್ಲಿ ಧಾರವಾಡದ ಹತ್ತರ ಹುಬ್ಬಳಿಯಲ್ಲಿ ಸರ್. ತ್ಯಾಗರಾಜ ಚೆಟ್ಟಿಗಳವರ ಛತ್ರದ ನೆರಳಿನ ಕೆಳಗೆ ಸೇರಿ ಟಂ ಟಂ ಮಾಡುತಿದ್ದಾರೆ. ಇರಲಿ, ಹುಬ್ಬಳಿಯಲ್ಲಿ ಬ್ರಾಹ್ಮಣೇತರರ ಪರಿಷತ್ತು ಕೂಡಿ ಏನು ಮಾಡಿತೆಂದು ನೋಡಿದರೆ ವರ್ಣಾಶ್ರಮಗಳ ಸಂಸ್ಥೆಯ ಮೇಲೆ ಯಥೇಚ್ಛವಾಗಿ ಪುಷ್ಪಾಂಜಲಿಯನ್ನು ಹಾಕಿ ಕೊನೆಗೆ ಹಲವು ಠರಾವುಗಳನ್ನು ಪಾಸು ಮಾಡಿತು ಇದಕ್ಕಿಂತ ವಿಶೇಷ ಕರ್ತವ್ಯವು ಈಗಿನ ಕಾಲದಲ್ಲಿ ಸದರಿ ಪರಿಷತ್ತಿಗೆ ಬೇರೆ ಕಾಣುವುದಿಲ್ಲ!

೪ ಮದ್ರಾಸ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ನಡೆದ ಪ್ರಶ್ನೋತ್ತರಗಳಲ್ಲಿ ಮಹತ್ವಾದವುಗಳನ್ನು ಹಾಗು ಇತರ ಕೆಲವು ಠರಾವುಗಳನ್ನು ನಾವು ಕಳೆದ ವಾರ ಮತ್ತು ಅದರ ಹಿಂದಿನ ವಾರ ಪ್ರಕಟಿಸಿದ್ದೇವೆ ಈ ಅಧಿವೇಶನದಲ್ಲಿ "ಟೌನ್ ಪ್ಲೆನಿಂಗ ಬಿಲ್" ಮತ್ತು "ಲೋಕಲ್ ಬೋರ್ಡ ಬಿಲ್" ಇವೆರಡು ಮಹತ್ವದ ಬಿಲುಗಳು ಬಂದಿದ್ದವು ಇವುಗಳಲ್ಲಿ ಟೌನ್ ಪ್ಲೆನಿಂಗ್ ಬಿಲು ಪಾಸಾಯಿತು ಈ ಎರಡು ಬಿಲುಗಳಲ್ಲದೆ ಬೇರೆ ಎಷ್ಟೋ ಠರಾವುಗಳು ಬಂದಿದ್ದವು ಅವುಗಳಲ್ಲಿ ಎಷ್ಟೋ ವಾಡಿಕೆಯಂತೆ, ಬಿದ್ದು ಹೋದವು ಕೆಲವು ಹಿಂದಕ್ಕೆ ಎಳೆಯಲ್ಪಟ್ಟವು. ಬಿದ್ದು ಹೋದ ಠರಾವುಗಳಲ್ಲಿ ಕಲೆಕ್ಟರ ಕಾನ್ಫರೆನ್ಸಿನ ಠರಾವು ಮಹತ್ವದ್ದಿತ್ತು ಆಯಾ ಜಿಲ್ಲೆಯ ಕಲೆಕ್ಟರರು ತಂತಮ್ಮ ಜಿಲ್ಲೆಗಳಲ್ಲಿ ಆರು ತಿಂಗಳಿಗೊಮ್ಮೆ ಪ್ರಜಾಮುಖಂಡರ ಪರಿಷತ್ತುಗಳನ್ನು ಕೂಡಿಸುವಂತೆ ಕಲೆಕ್ಟರರಿಗೆ ಸರಕಾರವು ತಿಳಿಸಬೇಕೆಂದು ನಾಮದಾರ ವೆಂಕಟಪತಿ ರಾಜುಗಳು ಠರಾವನ್ನು ತಂದರು ನಾಮದಾರ ಎನ್ ಸುಬ್ಬರಾವ ಇವರು ಅದನ್ನು ಅನುಮೋದಿಸುವಾಗ ದಕ್ಷಿಣ-ಕನ್ನಡ ಜಿಲ್ಲೆಯಲ್ಲಿ ಕಲೆಕ್ಟರರು ಈ ಕ್ರಮವನ್ನು ಮಾಡುತ್ತಲಿದ್ದಾರೆ ಮತ್ತು ಇದರಿಂದ ಲೋಕಹಿತವಾಗ ಹತ್ತಿದೆ ಎಂದು ಹೇಳಿದರು ಆದರೆ ಸರ್ ತ್ಯಾಗರಾಜ ಚೆಟ್ಟಿಗಳು ಇದನ್ನು ಉಪರೋಧಿಸಿದರು ಕಲೆಕ್ಟರರು ಪ್ರಜಾಮುಖಂಡರ ಪರಿಷತ್ತು ಕೂಡಿಸಲು ಉಪಕ್ರಮಿಸಿದ್ದಾದರೆ ಕೆಲವು ವರ್ಗದವರು ಮಾತ್ರ ಕಲೆಕ್ಟರ ಸುತ್ತುಮುತ್ತಲು ತಿರುಗಾಡ ಹತ್ತುವರು, ಇದರಿಂದ ಕಲೆಕ್ಟರರಿಗೆ ಸರಿಯಾದ ಲೋಕಮತವು ಗೊತ್ತಾಗಲಿಕ್ಕಿಲ್ಲ, ಅದಕ್ಕಿಂತ ಜಿಲ್ಲೆಯಲ್ಲಿ ಸಂಕೀಟಿನ ಮೇಲೆ ಹೋದಾಗಲೆ ಆಯಾ ಹಳ್ಳಿಗಳ ಜನರನ್ನು ಕಂಡು ಅವರಿಂದ ಅನುಭವವನ್ನು ಕಲೆಕ್ಟರರು ಪಡಕೊಳ್ಳುವುದೆ ಉತ್ತಮವೆಂಬ ಕಾರಣವನ್ನು ತೋರಿಸಿ ಸದರಿ ಚೆಟ್ಟಿಗಳು ಠರಾವನ್ನು ಉಪರೋಧಿಸಿದರು ಇದನ್ನು ಮತಕ್ಕೆ ಹಾಕಲು ಬಹುಮತದಿಂದ ಬಿದ್ದು ಹೋಯಿತು ಚೆಟ್ಟಿಗಳಿಗೆ ಬ್ರಾಹ್ಮಣ ಬ್ರಾಹ್ಮಣೇತರ ಪ್ರಶ್ನೆಯ ಅಡಚಣಿಯು ಪ್ರತಿಯೊಂದರಲ್ಲಿ ಬರುವಂತೆ ಮೇಲಿನ ನಿರುಪದ್ರವಿಯಾದ ಠರಾವಿನಲ್ಲೂ ಬಂದು ಆ ಕಾರಣದ ಮೇಲಿಂದ ಅವರು ಉಪರೋಧಿಸುವುದು ಸಹಜವೆ ಎನ್ನೋಣ ಪರಂತು ಇತರ ಸರಕಾರಿ ಸಭಾಸದರಿಗೆ ಇದರಲ್ಲಿ ಯಾವ ಅವಗುಣವು ಹೊಳೆಯಿತೊ ಏನೊ, ಅಂತು ಅದು ಬಿದ್ದು ಹೋಯಿತೆಂಬುದು ನಿಜ ಕೌನ್ಸಿಲಿನಲ್ಲಿ ಬಂದ ಲೋಕಪಕ್ಷದ ಠರಾವುಗಳೆಲ್ಲ ಬಿದ್ದು ಹೋಗುವುವೆಂದಲ್ಲ, ಅಪವಾದಕ್ಕೆ ಎಲ್ಲಾದರೂ ಒಂದೆರಡು ಪಾಸಾಗುವುದೂ ಉಂಟು ಮೆಡಿಕಲ್ ಸ್ಟೋರ್ಸ್ ಡಿಪೋವು ಔಷಧವನ್ನು ಸರಕಾರಕ್ಕೆ ಇಲ್ಲವೆ ಧರ್ಮಾರ್ಥದ ಆಸ್ಪತ್ರಿಗಳಿಗೆ ಯಾವ ದರದಲ್ಲಿ ಮಾರುತ್ತದೊ ಅದೇ ದರದಲ್ಲಿ ಲೋ ಬೋರ್ಡುಗಳಿಗೂ ಮಾರಿಕೊಡುವಂತೆ ಹಿಂದೂಸ್ಥಾನ ಸರಕಾರಕ್ಕೆ ತಿಳಿಸಬೇಕು ಎಂಬದೊಂದು ಉಪಯುಕ್ತವಾದ ಠರಾವು ಕೌನ್ಸಿಲಿನ ಮುಂದೆ ಬಂತು. ಸರಕಾರಕ್ಕೆ ಮತ್ತು ಧರ್ಮದ ಆಸ್ಪತ್ರಿಗಳಿಗೆ ಸುಲಭ ದರದಲ್ಲಿ ದೊರೆವ ಔಷಧವು ಸಿಗುವಂತೆ ಸಾರ್ವಜನಿಕ ಹಿತದ ಸಲುವಾಗಿ ಇರುವ ಲೋ ಬೋರ್ಡಿಗಾದರೂ ಯಾಕೆ ಸಿಗಬಾರದು ಎಂಬೀ ಅಪೇಕ್ಷೆಯು ಸರಿಯಾದದ್ದು. ಈ ಠರಾವನ್ನು ಕ್ರಮದಂತೆ ಮೇಜರ್ ಜನರಲ್‌ರು ಉಪರೋಧಿಸಿದಾಗ್ಯೂ ಬಹುಮತದಿಂದ ಅದು ಪಾಸಾಯಿತು ಇದು ಸುದೈವದ ಮಾತಾಗಿದೆ

೫ ಯುದ್ಧವು ಮುಗಿದ ಮೇಲೆ ಹಿಂದುಸ್ಥಾನದಲ್ಲಿ ಕಾಗದವು ಎಷ್ಟರ ಮಟ್ಟಿಗೆ ಅಪರೂಪವಾಗಹತ್ತಿದೆ ಎಂದರೆ ಕಾಗದದ ಅಭಾವದಿಂದ ಎಷ್ಟೊ ಪತ್ರಿಕೆಗಳು ನಿಂತವು, ಇನ್ನೂ ಎಷ್ಟೊ ಚಿಕ್ಕವಾದವು, ಇನ್ನೂ ಹಲವಂತು ಹೇಗಾದರೂ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕೆಂದು ಬೇರೆ ಬೇರೆ ಬಣ್ಣದ ಉಡುಪುಗಳನ್ನು ಧರಿಸಿದ್ದಾವೆ! ಪ್ರತ್ಯಕ್ಷ ಯುದ್ಧಕಾಲದಲ್ಲಿ ಕೂಡ ಪ್ರೆಸ್ಸುಗಳಿಗೆ ಇಂಥ ಆಪತ್ತು ಒದಗಿರಲಿಲ್ಲ ಕಾಗದವು ಹಿಂದುಸ್ಥಾನದಲ್ಲಿ ಬೇರೆ ದೇಶಗಳಿಂದ ಈ ದೇಶಕ್ಕೆ ಬರುವುದು ಬಹಳ ಕಡಿಮೆಯಾದ ಕಾರಣ ಅದರ ದರವು ಈಗ ಎಷ್ಟೊ ಪಾಲಿನಿಂದ ಹೆಚ್ಚಾಗಹತ್ತಿದೆ ಹಿಂದುಸ್ಥಾನದಲ್ಲಿ ಇಂಥ ಬರಗಾಲವು ಉಂಟಾಗಲಿಕ್ಕೆ ಮುಖ್ಯ ಕಾರಣವು ಯಾವುದೆಂದರೆ ಕಾಗದದ ವಿಷಯದಲ್ಲಿ ಅದು ಕೇವಲ ಪರಾವಲಂಬಿಯಾಗಿದೆ ಆದ್ದರಿಂದ ಹಿಂದುಸ್ಥಾನದಲ್ಲಿ ಕಾಗದದ ಕೈಗಾರಿಕೆಯನ್ನು ಪ್ರಾರಂಭಿಸುವ ಬಗ್ಗೆ ಹಾಗು ಅಂಥ ಕಾರಖಾನೆಗಳಿದ್ದರೆ ಅವುಗಳಿಗೆ ಉತ್ತೇಜನವನ್ನು ಕೊಡುವ ಬಗ್ಗೆ ಸರಕಾರಕ್ಕೆ ಸೂಚಿಸುವುದು ಅಪರಿಹಾರ್ಯವಾಗಿತ್ತು ಮತ್ತು ಆದ್ದರಿಂದಲೆ ಮೊನ್ನೆಯ ಕೌನ್ಸಿಲಿನಲ್ಲಿ ಕಾಗದದ ಕೈಗಾರಿಕೆಯ ಪ್ರಸ್ತಾಪವು ಒಂದು ಠರಾವಿನ ರೂಪದಿಂದ ಬಂದಿತ್ತು ಕಾಗದಕ್ಕೆ ಬೇಕಾದ ಯಾವ ಯಾವ ಸಾಹಿತ್ಯವು ಈ ಸಂಸ್ಥಾನದ ಯಾವ ಯಾವ ಭಾಗದಲ್ಲಿ ಉಂಟು ಎಂಬದನ್ನು ಶೋಧಿಸಬೇಕೆಂದು ನಾಮದಾರ ಶಿವರಾಯರು ಒಂದು ಠರಾವನ್ನು ತಂದರು ಅವರು ತಮ್ಮ ಭಾಷಣದಲ್ಲಿ ಹಿಂದುಸ್ಥಾನದೊಳಗಿನ ಪ್ರಕೃತದ ಕಾಗದದ ಬರಗಾಲವನ್ನು ವಿವರಿಸಿ ಹೇಳುವಾಗ ಈ ದೇಶದಲ್ಲಿ ಖರ್ಚಾದ ೮೦ ಸಾವಿರ ಟನ್ ಕಾಗದದಲ್ಲಿ ಬರೆ ೩೦ ಸಾವಿರ ಟನ್ ಕಾಗದವು ಈ ದೇಶದಲ್ಲಿ ತಯಾರಾದದ್ದು ಎಂದು ಮಾಹಿತಿಯನ್ನು ಕೊಟ್ಟರು ಹಿಂದುಸ್ಥಾನ ಸರಕಾರವು ಕಾಗದದ ಬಗ್ಗೆ ಪ್ರಕಟಿಸಿದ ತನ್ನ ರಿಪೋರ್ಟಿನಲ್ಲಿ— ಕಾಗದಕ್ಕೆ ಬೇಕಾದ ಸಾಹಿತ್ಯವು ದಕ್ಷಿಣ ಹಿಂದುಸ್ಥಾನ ಎಂದರೆ ಮದ್ರಾಸ ಸಂಸ್ಥಾನದಲ್ಲಿ ಧಾರಾಳವಾಗಿ ಸಿಗುತ್ತದೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುವಾಗ ಆ ಬಗ್ಗೆ ಸರಕಾರವು ಯಾವ ಪ್ರಯತ್ನವನ್ನೂ ನಡಿಸುವುದಿಲ್ಲವೆಂದು ಅವರು ವಿಷಾದಪಟ್ಟರು ಈ ಠರಾವನ್ನು ಅನುಮೋದಿಸುವ ಸಂದರ್ಭದಲ್ಲಿ ನಾಮದಾರ ಡೇವಿಡ್‌ಸನ್‌ರು ಕಾಗದದ ಕ್ರಯವು ದಿನೇ ದಿನೇ ಹೇಗೆ ಏರುತ್ತ ಹೋಗಿದೆ ಎಂಬದನ್ನು ತಿಳಿಸಿ ಕೊಡುವಾಗ ಕಾಗದವು ಈಗ ಸೇಕಡಾ ೮೦೦ ಪಾಲಿನಿಂದ ಏರಿದೆ ಎಂದು ಹೇಳಿದರು ಸಾರಾಂಶ ಕಾಗದದ ಕೈಗಾರಿಕೆಯು ಹಿಂದುಸ್ಥಾನದಲ್ಲಿ ಅತ್ಯಾವಶ್ಯಕವೆಂಬುದಕ್ಕೆ ಯಾವ ಅಡ್ಡಿಯೂ ಇಲ್ಲ ಈ ಪ್ರಶ್ನೆಯನ್ನು ಸರಕಾರವು ಸಹಾನುಭೂತಿಯ ದೃಷ್ಟಿಯಿಂದ ವಿಚಾರದಲ್ಲಿ ತೆಕ್ಕೊಳ್ಳುವ ಬಗ್ಗೆ ಆಶ್ವಾಸನವನ್ನು ಕೊಟ್ಟ ಕಾರಣ ಸದರಿ ಠರಾವು ಹಿಂದಕ್ಕೆ ತೆಕ್ಕೊಳ್ಳಲ್ಪಟ್ಟಿತು

ಮಂಗಳೂರು

ಮಂಗಳೂರ ಕೆಥೋಲಿಕ ಕೋ ಒಪರೇಟಿವ್ ಸೊಸೈಟಿಯ ಸಕ್ರೆಟರಿಗಳಾದ ಮಿ . ಯಮ್ ಪಿಂಟೊ ಇವರು ಕೆಲವು ಡಿಪೊಜಿಟರ ಹಣಗಳನ್ನು ಸೊಸೈಟಿಯ ಲೆಕ್ಕಕ್ಕೆ ದಾಖಲು ಮಾಡದೆ ದುರ್ವಿನಿಯೋಗ ಪಡಿಸಿದರೆಂಬ ಆಪಾದನೆ ಮೇಲೆ ಕೈದು ಮಾಡಲ್ಪಟ್ಟು ರಿಮಾಂಡಿನಲ್ಲಿರುತ್ತಾರೆ ಇವರ ಸಾಲಮೂಲಗಳ ಪಟ್ಟಿಯನ್ನು ಇವರು ಈ ಮೊದಲೇ ಕಾಣಿಸಿ ದಿವಾಳಿ ಅರ್ಜಿಯನ್ನು ಕೊಟ್ಟಿರುತ್ತಾರೆಂದೂ ನಾವು ಕೇಳುತ್ತೇವೆ ಇವರಿಂದ ಹೊರಗೆ ಸಲುವ ಸಾಲಗಳು ೧ ಲಕ್ಷ ೭೦ ಸಾವಿರಕ್ಕೆ ಮಿಕ್ಕಿವೆ ಎಂಬದಾಗಿ ವರ್ತಮಾನವಿದೆ

ಕೆನರಾ ಪಬ್ಲಿಕ್ ಕನ್ಸೆಯನ್ಸ್ ಕಂಪನಿಯ ಪಾಲುಮಾಲಿಕರ ಮಹಾ ಸಭೆಯು ಈ ಮೊದಲು ಸೂಚಿಸಲ್ಪಟ್ಟಂತೆ ಇದೇ ತಿಂಗಳ ತಾ ೨೪ ಮತ್ತು ೨೫ರಲ್ಲು ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಕೂಡಿತು ಹ್ಯಾಕೋರ್ಟ ವಕೀಲ ಮ| ರಾ| ರಾ| ಯು ನ ಕೃಷ್ಣಚೆಟ್ಟರವರು ಎರಡು ದಿನಗಳಲ್ಲಿಯೂ ಸಭಾಧ್ಯಕ್ಷರಾಗಿದ್ದರು ಈ ಕೆಳಗಿನ ನಿರ್ಣಯಗಳು ಸಭಿಕರಿಂದ ಮಂಜೂರುಮಾಡಲ್ಪಟ್ಟಿವೆ ಈಗಿನ ಡ್ಯಾರೆಕ್ಟರರ ಆಡಳಿತೆಯು ಪ್ರಾರಂಭವಾದಂದಿನಿಂದ ಕಳೆದ ಜೂನು ಅಂತ್ಯದ ವರೆಗೆ ಕಂಪೆನಿಯ ಆದಾಯ ವೆಚ್ಚಗಳ ಪಟ್ಟಿಯು ಸಭೆಯಲ್ಲಿ ಓದೋಣಾಗಿ ಇದರ ಪರ್ಯಾಲೋಚನೆಯು ಕಂಪೆನಿಗೆ ಲೆಕ್ಕ ಪರಿಶೋಧಕರ ನೇಮಕದ ವರೆಗೆ ಬಾಕಿ ಇಡಬೇಕೆಂತ ನಿರ್ಣಯಿಸಲ್ಪಟ್ಟಿತು ಕಳೆದ ಎರಡು ವರುಷಗಳ ಬಗ್ಗೆ ಕಂಪೆನಿಯ ಪಾಲುಮಾಲಿಕರಿಗೆ ಪ್ರತಿ ವರುಷಕ್ಕೆ ಸೇಕಡಾ ೧೦ರಂತೆ "ಇಂಟೆರಿಮ್" ಮುನಾಫೆಯನ್ನು ಕೊಡಬೇಕೆಂತ ನಿರ್ಣಯಿಸಲ್ಪಟ್ಟಿತು ಈ ಮೊದಲು ಕಂಪೆನಿಯ ಲೆಕ್ಕ ಪರಿಶೋಧಕರಾಗಿದ್ದ ಮ| ರಾ| ರಾ| ಯಮ್ ಎಸ್ ಕೃಷ್ಣರಾಯರನ್ನು ೧೯೨೦ನೆ ಮಾರ್ಚ ಅಂತ್ಯದ ವರೆಗೆ ಲೆಕ್ಕ ಪರಿಶೋಧಕರನ್ನಾಗಿ ನೇಮಿಸಬೇಕೆಂತಲೂ, ೧೯೨೦ನೇ ಮಾರ್ಚ ಅಂತ್ಯದ ವರೆಗಿನ ವರುಷಗಳ ಕಂಪೆನಿಯ ಸಾಲಮೂಲಗಳ ತಖ್ತೆ ಇತ್ಯಾದಿಗಳನ್ನು ಕ್ರಮ ಪ್ರಕಾರ ತಯಾರಿಸಿ ಲೆಕ್ಕ ಪರಿಶೋಧಕರ ರಿಪೋರ್ಟಿನೊಡನೆ ಅವು ಮಹಾ ಸಭೆಯ ಮುಂದಕ್ಕೆ ಬರುವ ತನಕ ಡ್ಯಾರೆಕ್ಟರ ಚುನಾವಣೆಯನ್ನು ಬಾಕಿ ಇಡಬೇಕೆಂತಲೂ ಈ ಮಹಾಸಭೆಯನ್ನು ಬರುವ ನವಂಬರ ತಿಂಗಳ ತಾ [illegible] ಅಥವಾ ಆ ಸಮಯದೊಳಗೆ ಬರ ಮಾಡಬೇಕೆಂತಲೂ ನಿರ್ಣಯಿಸಲ್ಪಟ್ಟಿದೆ

ಕಳೆದ ಮಂಗಳವಾರ ಕೆನರಾ ಹೈಸ್ಕೂಲಿಗೆ ಹೋಗುತ್ತಿರುವ ವಕೀಲ ರಾ| ಬೋಳ ನಾಗೇಶರಾಯರ ಬಾಲಕನನ್ನು ಸವಿನುಡಿಗಳನ್ನಾಡಿ ಬಾವಿಕಟ್ಟೆಯ ಗುಡ್ಡೆಗೆ ಕರಕೊಂಡು ಹೋಗಿ ಕಂಠದಲ್ಲಿದ್ದ ಚಿನ್ನದ ಗೋಪನ್ನು ಒಬ್ಬ ಅಕ್ಕಸಾಲಿಗನು ಅಪಹರಿಸಿದ್ದಾನಾಗಿ ತಿಳಿಯುತ್ತೇವೆ

ಮಂಗಳೂರು ತಾಲೂಕು ಬೋರ್ಡಿಗೆ ಕಥೊಲಿಕ ಗೃಹಸ್ಥರ ಪೈಕಿಯೊಬ್ಬರಾದ ಮಿ ಅಲ್ಫಾನ್ಸೊ ಪೇರಿಯನ್ ಲಿಗೋರಿ ಡಿ ಸೋಜರ ನೇಮಕವಾಗಿ ಸರಕಾರದ ಮಂಜೂರಾತಿ ಬಂದಿದೆ

ಮಂಗಳೂರ ಕಲೆಕ್ಟರ ಆಫೀಸಿನ ಹೆಡ್ ಎಕೌಂಟೆಂಟರಾದ ಮ ರಾ ಬಿ ರಘುನಾಥ ಬಂಡಾರಿಗಳು ಒಂದು ತಿಂಗಳ ಪ್ರಿವಿಲೇಜ್ ರಜೆಹೊಂದಿರುವರು

ಗವರ್ನಮೆಂಟ ಟೆಕನಿಕಲ್ ಪರೀಕ್ಷೆಯ ಪೈಕಿ ಟಾಯ್ಪ ರಾಯ್‌ಟಿಂಗ್ ಪರೀಕ್ಷೆಯು ತಲಶೇರ್ರಿ ಮತ್ತು ಮಂಗಳೂರ ಉಮೇದ್ವಾರರಿಗೆ ಒಗಸ್ಟ ತಾರೀಕು ೪ರಲ್ಲಿ ತಲಚೇರಿಯ ಗವರ್ನಮೆಂಟ ಬ್ರೆನೆನ್ ಕೊಲೇಜಿನಲ್ಲಿ ನಡಿಯುವುದು

ಮಂಗಳೂರ ಸ್ಟುಡೆಂಟ್ಸ ಬ್ರದರ ಹುಡ್ಡಿನವರಿಂದ ಈ ವರುಷದ ಸ್ಕೂಲ್ ಫೈನಲ್, ಇಂಟರಮಿಡಿಯೇಟ್ ಮತ್ತು ಬಿ ಎ. ಪರೀಕ್ಷೆಗಳಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಬರುವ ಆದಿತ್ಯವಾರ ೪ ಗಂಟೆಗೆ "ಎಟ್ ಹೋಮ್" ಎಂಬ ಆದರಸತ್ಕಾರವು ಗಣಪತಿ ಸೆಕೆಂಡರಿ ಸಾಲೆಯಲ್ಲಿ ನಡಿಯಲಿಕ್ಕಿರುವುದು

ಹಿಂದುಸ್ಥಾನದ ಸೆಂಟ್ರಲ ಖಿಲಾಫತ್ ಕಮ್ಮಿಟಿಯವರು ಬರುವ ಒಗಸ್ಟ ತಾರೀಕು ೧ನೆಯ ಆದಿತ್ಯವಾರದಿನ 'ಹರತಾಲವನ್ನು' ಆಚರಿಸಬೇಕಾಗಿ ನಿರ್ಣಯಿಸಿದಂತೆ ಮಂಗಳೂರ ಖಿಲಾಫತ್ ಕಮ್ಮಿಟಿಯವರೂ ಈ ದಿನಾಚರಣೆಯನ್ನು ಮಾಡಬೇಕಾಗಿ ನಿಶ್ಚಯಿಸಿದ್ದಾರೆ ಅಂದು ಸಕಲಕಾರ್ಯಗಳನ್ನು ನಿವೃತ್ತಿ ಪಡಿಸೋಣ ವ್ಯಾಪಾರಸ್ಥರ ಮುಂತಾದವನ್ನು ಮುಚ್ಚೋಣ ದೇವತಾ ಆರಾಧನೆಯನ್ನು ಗೈಯೋಣ ಸಾಯಂಕಾಲ 6 ಗಂಟೆಗೆ ಇಸ್ಲಾಮಿಯಾ ಕ್ಲಬ್ಬಿನಲ್ಲಿ ಒಂದು ಮಹಾಸಭೆಯನ್ನು ಜರಗಿಸೋಣ ಇವೆಲ್ಲವೂ ಈ ದಿನಾಚರಣೆಯ ಕಾರ್ಯಕ್ರಮದಲ್ಲಿ ಸೇರಿವೆ

ಗೌಡಸಾರಸ್ವತ ಶ್ರೀ ಮದನಂತೇಶ್ವರ ದೇವಸ್ಥಾನದ ಬಗ್ಗೆ ತಯಾರಿಸೋಣಾದ ಸ್ಕೀಮಿನ ಮೇರೆಗೆ ಸ್ವಜಾತಿಯ ವಿದ್ವದ್ವೈದಿಕರ ಮಾನ್ಯತೆ ಪಾದ ಅಧಿಕಾರಕ್ಕೆ ಯಾವತ್ತೂ ಕುಂದು ಕವೂ ಬಾರದ ಹಾಗ ಯಾವ ಏರ್ಪಾಡಗಳನ್ನು ಮಾಡತಕ್ಕದ್ದು ಎಂಬದನ್ನು ಆಲೋಚಿಸುವರೆ ಸ್ವಜಾತಿಯ ವೈದಿಕರ ಒಂದು ಸಭೆಯು ಮಂಗಳೂರ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಬರುವ ಆದಿತ್ಯವಾರ ಮಧ್ಯಾಹ್ನ ೩ ಗಂಟೆಗೆ ನೆರೆಯಲಿಕ್ಕಿರುವುದು

ಈಗ ಸುಮಾರು ಹದಿನೈದು ವರುಷಗಳಿಂದ ಆರ್ಯ ಸಮಾಜದ ಬೋಧಕರಾದ ಲಾಹೋರಿನ ಶ್ರೀಯುತ ಪಂಡಿತ ಅಮರನಾಥರೆಂಬವರು ಈಗ ತಾನೆ ಮಂಗಳೂರಿಗೆ ಬಂದಿರುವರು ಇವರು ಬರುವ ಆದಿತ್ಯವಾರ ಮೊದಲುಗೊಂಡು ನಂತರದ ಮೂರು ಆದಿತ್ಯವಾರಗಳಲ್ಲಿ ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಸಾಯಂಕಾಲ 4 ಗಂಟೆಯಿಂದ ಕೆಳಗಿನ ವಿಷಯಗಳನ್ನು ಕುರಿತು ಅನುಕ್ರಮದಿಂದ ಭಾಷಣಮಾಡುವರು ಮೊದಲನೇ ಸಾರಿ ಆರ್ಯ ಸಮಾಜ ಮತ್ತು ಪಂಜಾಬದೊಳಗಿನ ಸಾಮಾನ್ಯ ಜೀವನ, ನಂತರ ಕರ್ಮಯೋಗ ಕೊನೆಗ ಬ್ರಹ್ಮಚರ್ಯದ ಮಹತ್ವ ಎಂಬ ವಿಷಯಗಳನ್ನು ಎತ್ತಿಕೊಳ್ಳುವರು

ಹಿಂದಿಭಾಷೆಯನ್ನು ಜನರಲ್ಲಿ ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ಪಸರಿಸುವ ಮುಖ್ಯ ಉದ್ದೇಶದಿಂದ ಲಾಹೋರಿನ ಆರ್ಯ ಪ್ರದೇಶಿಕ ಪ್ರತಿನಿಧಿ ಸಭೆಯವರಿಂದ ಈ ಮಹನೀಯರನ್ನು ಇಲ್ಲಿಗೆ ಕಳುಹಿಸಿದ್ದಾಗಿರುವುದು ಸದರಿ ಸಭೆಯ ಆಶಯದ ಮೇರೆಗೆ ಹಿಂದೀಭಾಷೆಯನ್ನು ಧರ್ಮಾರ್ಥವಾಗಿ ಕಲಿಸುವ ಕ್ಲಾಸುಗಳು ಗಣಪತಿ ಸೆಕೆಂಡರಿ ಸಾಲೆಯಲ್ಲಿ ತೆರಿಯೋಣಾಗಿವೆ. ಈ ಕ್ಲಾಸುಗಳು ವಿದ್ಯಾರ್ಥಿಗಳಿಗೆ ಪ್ರತಿದಿನ ಸಾಯಂಕಾಲ 5 ರಿಂದ 6ರ ವರೆಗೆ ಇತರರಿಗೆ ಸೋಮವಾರ ಬುಧವಾರ ಶುಕ್ರವಾರ ಈ ಮೂರುದಿನಗಳಲ್ಲಿ ಮಾತ್ರ ಸಾಯಂಕಾಲ 6ರಿಂದ 7ರ ವರೆಗೆ ತೆರಿಯೋಣಾಗಿರುವುವು

ಕಳೆದ ಆದಿತ್ಯವಾರ ಮಂಗಳೂರಿನಲ್ಲಿ ಕೂಡಿದ ಜಿಲ್ಲೆಯ ಗ್ರಾಮ ಉದ್ಯೋಗಸ್ಥರ ಸಭೆಯಲ್ಲಿ ಪಾಸಾದ ಠರಾವುಗಳನ್ನು ಈ ಸಂಚಿಕೆಯ ಇನ್ನೊಂದು ಕಡೆಯಲ್ಲಿ ಪ್ರಕಟಿಸಿದ್ದೇವೆ.

ಅನುಕ್ರಮ.

ಅಗ್ರಲೇಖಗಳು:—

ಇದು ದೂರದೃಷ್ಟಿಯ ಧೋರಣವಲ್ಲ . . . ೬

ಸ್ಫುಟವಿಚಾರಗಳು:—

೧. ಉಗ್ರಧೋರಣವು ಪ್ರಾರಂಭವಾಗುವಂತೆ ತೋರುತ್ತದೆ . . ,,
೨. [illegible] ಸಂಚಿಕೆ . . . ೭
೩. ಬ್ರಾಹ್ಮಣೇತರ ಪರಿಷತ್ತು . . . ,,
೪. ಮ. ಶಾ. ಶಾಲೆಗಳು . . . ,,
೫. ಬಾಗಲಕ [illegible] ಬರಗಾಲ . . . ,,
ಬೆಂಗಳೂರು . . . ,,

ವರ್ತಮಾನಸಂಗ್ರಹಗಳು:—

ಯುದ್ಧದ ಉತ್ತರಕಾಂಡ . . . ೫
ಒಳದೇಶ ವರ್ತಮಾನ . . . ,,
ದಕ್ಷಿಣಕನ್ನಡ — ಪುತ್ತೂರು, ಉಡುಪಿ, ಕೊಕ್ಕಡ, ಪಾಣೆಮಂಗಳೂರು . . ೮
ಡಿಸ್ಟ್ರಿಕ್ಟ್‌ಬೋರ್ಡ ಮೀಟಿಂಗು . . . ,,
ಗ್ರಾಮ ಉದ್ಯೋಗಸ್ಥರ ಮೀಟಿಂಗು . . . ,,
ಪತ್ರವ್ಯವಹಾರ — ೧, ೨, ೩, ೪, ೫, . . . ೯

ಸ್ವದೇಶಾಭಿಮಾನಿ.

ಶಕ ೧೮೪೨ ಆ. ಶ್ರಾ. ಶು| ೧೫ ಶುಕ್ರವಾರ.

ಇದು ದೂರದೃಷ್ಟಿಯ ಧೋರಣವಲ್ಲ!

ಮಹಾಭಾರತದಲ್ಲಿ ಎಲ್ಲ ತರದ ಪ್ರಸಂಗಗಳು ಉಪಲಬ್ಧವಾಗುತ್ತವೆ. ಧಾರ್ಮಿಕ ಮತ್ತು ತಾತ್ವಿಕ ವಿಚಾರಗಳೊಡನೆಯೆ ವ್ಯಾವಹಾರಿಕ ಹಾಗು ರಾಜಕೀಯ ವಿಷಯಗಳ ವಿವಿಧ ಪ್ರಸಂಗಗಳು ಮಹಾಭಾರತದಲ್ಲಿ - ಆಖ್ಯಾನ—ಉಪಾಖ್ಯಾನಗಳ ಮೂಲಕವಾಗಿ ವಾಚಕರ ಮುಂದೆ ಸಜೀವ ಚಿತ್ರದಂತೆ ನಿಲ್ಲಿಸಲ್ಪಟ್ಟಿವೆ. ಈ ಮಹಾಪುರಾಣದಲ್ಲಿ ಇಲ್ಲದ ವಿಷಯಗಳು ಲೋಕದಲ್ಲಿ ಇಲ್ಲವೆಂದು ಹೇಳಿದರೆ ಅದು ಅತಿಶಯೋಕ್ತಿಯ ವಿಧಾನವಾಗಲಿಕ್ಕಿಲ್ಲ. ಮತ್ತು ಇದೇ ಕಾರಣದಿಂದ "ವ್ಯಾಸೋಚ್ಛಿಷ್ಟಂ ಜಗತ್ಸರ್ವಮ್" ಎಂದು ಪ್ರಾಚೀನರು ಹೇಳಿರುತ್ತಾರೆ. ಇರಲಿ. ಮಹಾಭಾರತದ ಶ್ರೇಷ್ಠತ್ವವನ್ನು ವರ್ಣಿಸುವುದು ನಮ್ಮ ಪ್ರಕೃತ ಕಾರ್ಯವಲ್ಲ. ಅದರಲ್ಲಿ ವರ್ಣಿಸಲ್ಪಟ್ಟ ವಿವಿಧ ಪ್ರಸಂಗಗಳಲ್ಲಿ ಎಷ್ಟೋ ಪ್ರಸಂಗಗಳು ಈ ಹೊತ್ತಿನ ೨೦ನೆಯ ಶತಮಾನದೊಳಗಿನ ಸುಧಾರಿಸಿದ ರಾಜ್ಯಗಳಲ್ಲಿ ಸಹ ಸಂಭವಿಸಿ ಹೋಗುತ್ತವೆ ಎಂಬುದನ್ನು ತೋರಿಸುವುದೇ ನಮ್ಮ ಈ ಹೊತ್ತಿನ ಮುಖ್ಯ ಉದ್ದೇಶವಾಗಿದೆ. ದ್ರೌಪದಿಯ ವಸ್ತ್ರಾಪಹರಣದ ಪ್ರಸಂಗವು ಕನ್ನಡ ವಾಚಕರಿಗೆ ಅಪರಿಚಿತವಲ್ಲ. ಮದಮತ್ತ ಅವಿಚಾರಿ ಮತ್ತು ಅವಿವೇಕಿಯಾದ ದುಃಶಾಸನನಂಥ ಪುಂಡಯುವಕರು ತಮ್ಮ ಅವಿವೇಕದ ಭರದಲ್ಲಿ ರಾಜಸ್ತ್ರೀಯನ್ನು ಸಭೆಯಲ್ಲಿ ಕರತಂದು, ನಾನಾ ತರದ ವಿಡಂಬನೆಯಿಂದ ಅವಳ ಮರ್ಯಾದೆಯನ್ನು ಅಪಹರಿಸಲು ಯತ್ನಿಸಿದ್ದು ಆ ಪುಂಡರ ಸ್ವಭಾವ, ಶಿಕ್ಷಣ, ಮತ್ತು ಅಭ್ಯಾಸ ಇವುಗಳಿಗೆ ಶೋಭಿಸುವಂತೆಯೆ ಇದೆ ಎನ್ನಬಹುದು. ಒಂದು ವೇಳೆ ಇಂಥ ಕೃತ್ಯಕ್ಕೆ 'ಶೋಭಿಸು' ಎಂಬ ಮಾತು ಉಪಯೋಗಿಸಿದ್ದು ಆ ಶಬ್ದದ ಛಲನೆಯಾಗುತ್ತದೆ ಎಂದಿದ್ದರೆ ಆ ಪುಂಡ ತರುಣರ ಕೃತ್ಯಗಳು ಈಗ ಹೇಳಿದ ಅವರ ಗುಣಗಳಿಗೊಪ್ಪುವಂತಿವೆ ಎಂದು ಹೇಳಲು ಯಾವ ಸಂಕೋಚವೂ ಇಲ್ಲ. ಸಭೆಯಲ್ಲಿ ವಿರಾಜಮಾನರಾಗಿದ್ದ ಭೀಷ್ಮ, ದ್ರೋಣ, ಕೃಪ ಮೊದಲಾದ ಹಿರಿ ಮುತ್ಸದಿಗಳು ಪುಂಡರ ಈ ಕೃತ್ಯವನ್ನು ನಿಷೇಧಿಸುವುದರ ಬದಲು ಅದನ್ನು ಸಮರ್ಥಿಸಲು ಹೊರಟಿದ್ದು ನೀತಿ ದೃಷ್ಟಿಯಿಂದ ಶೋಚನೀಯ ಮಾತ್ರವಲ್ಲ, ವಿವೇಕ ಭ್ರಷ್ಟತೆಯ ಮೂರ್ತಿಮಂತವಾದ ದೃಷ್ಟಾಂತವಾಗಿದೆ. ಕೌರವರ ಪ್ರತಿಷ್ಠೆ(prestige)ಯನ್ನು ಕಾಯುವುದು ಈ ಪಕ್ಷದವರಿಗೆ, ರಾಜನೀತಿಯ ತತ್ವಕ್ಕನುಸಾರವಾಗಿ ಒಂದು ಮುಖ್ಯ ಕರ್ತವ್ಯವಾದರೂ. ದೀರ್ಘ ದೃಷ್ಟಿಯಿಂದ ವಿಚಾರಮಾಡಿದರೆ ಈ ತಾತ್ಕಾಲಿಕ ಪ್ರತಿಷ್ಠೆಗೆ ಅಥವಾ ಗೌರವಕ್ಕೆ ಅಷ್ಟೊಂದು ಮಹತ್ವವನ್ನು ಕೊಟ್ಟದ್ದು ಒಳ್ಳೆದಲ್ಲ. ಮುತ್ಸದಿಗಳು ದೀರ್ಘ ದರ್ಶಿಗಳಾಗಿರಬೇಕು, ದೂರ ದೃಷ್ಟಿಯುಳ್ಳವರಾಗಿರಬೇಕು, ನ್ಯಾಯನೀತಿಯ ವತ್ಸಲರಾಗಿರಬೇಕು. ಇದೊಂದೂ ಸಂಗತಿಯನ್ನು ಭೀಷ್ಮ, ದ್ರೋಣಾದಿಕ ಮಹಾ ಮುತ್ಸದಿಗಳು, ಹಸ್ತಿನಾಪುರದ ಕನಸ್ಸರವೇಟಿವ್ ಪಕ್ಷದ ಲೋರ್ಡರು ತೋರಿಸಲಿಲ್ಲ. ತಥಾಪಿ ಈ ಹೊತ್ತಿನ ಕೊಮನ್ಸ ಸಭೆಯ ಅಂದಿನ ಪ್ರತಿನಿಧಿಯಾದ ವಿದುರನಿಗೆ ಪುಂಡರ ಕೃತ್ಯವು ರುಚಿಸಲಿಲ್ಲ. ವಾಂತಿಯಾಗುವಷ್ಟು ಆ ಕೃತ್ಯದಲ್ಲಿ ಬೇಹಾಸೆಯು ಲೇಬರ ಪಾರ್ಟಿಯ ಪ್ರಮುಖನಾದ ವಿದುರನಲ್ಲುಂಟಾಯಿತು. [illegible] ತರುಣರ ಪುಂಡುತನದ ಕೃತ್ಯವು ರಾಜಸಭೆಯಲ್ಲಿ ಶಿಷ್ಟಮಾನ್ಯವಾಗಿ ನಡೆದುಹೋಯಿತು. ಇದು ಭಾರತದ ಪ್ರಸಂಗವು.

ಇದೆ ಪ್ರಸಂಗವು 'ಡಾಯರ ಡಿಬೇಟ'ನಲ್ಲಿ ಕೂಡಾ ಯಥಾಪ್ರತಿಯಾಗಿ ನಿಂತಿದೆ. ಕೊಮನ್ಸಿನಲ್ಲಿ ಸ್ವತಃ ಮಿ| ಮೊಂಟೆಗ್ಯುಗಳ ಅಂತಃಕರಣಪೂರ್ವಕವಾದ ಭಾಷಣದಿಂದಾಗಲಿ, ಅಥವಾ ವಿದುರನಂತೆ ನಿಃಸ್ಪೃಹ ಮತ್ತು ನ್ಯಾಯಪ್ರಿಯರಾದ ಹಲವು ಲೇಬರ ಪಾರ್ಟಿಯ ಮೆಂಬರುಗಳ ಭಾಷಣದಿಂದಾಗಲಿ ಡಾಯರನಿಗೆ ಹಲವು ವಾಗ್ದಂಡನೆಗಳು ಸಿಕ್ಕಿದವು. ಅವನಿಗೆ ವಿಧಿಸಿದ ಶಿಕ್ಷೆಯು ಹೆಚ್ಚಿನದಲ್ಲ ಅಥವಾ ತಪ್ಪಲ್ಲವೆಂದು ನಿರ್ಣಯಿಸೋಣಾಯಿತಷ್ಟೆ. ಈ ನಿರ್ಣಯದಿಂದ ಮೊಂಟೆಗ್ಯುಗಳಿಗೆ ಮತ್ತು ಹಿಂದಿ ಸರಕಾರಕ್ಕೆ ಒಂದೆರಡು ದಿವಸ ಸಮಾಧಾನದಿಂದ ಕೊಂಚ ನಿದ್ದೆ ಬರುವ ಹಾಗಿತ್ತು. ಅಷ್ಟರಲ್ಲಿ, ಡಾಯರನ ಕಡೆಯವರ ಸುದರ್ಶನ ಚಕ್ರವು ಕೆಬಿನೆಟ್ ಮತ್ತು ಹಿಂದುಸ್ಥಾನ ಸರಕಾರದ ಬೆನ್ನು ಹಿಡಿಯಹತ್ತಿದೆ! ಲೋರ್ಡರ ಸಭೆಯಲ್ಲಿ ಡಾಯರನನ್ನು ಕೆಲಸದಿಂದ ನಿವೃತ್ತಪಡಿಸಿದ್ದು ಅನ್ಯಾಯ, ಈ ಬಗ್ಗೆ ಹಿಂದುಸ್ಥಾನ ಸರಕಾರ ಮತ್ತು ಕೆಬಿನೆಟಿನ ನಿಷೇಧವನ್ನು ಮಾಡತಕ್ಕದ್ದು ಎಂಬದೊಂದು ಠರಾವನ್ನು ತಂದು ಬಹುಮತದ ಬಲದಿಂದ ಡಾಯರ್ ಪಾರ್ಟಿಯವರು ಅದನ್ನು ಪಾಸುಮಾಡಿಸಿಕೊಂಡರು.

ಈ ಸಂದರ್ಭದಲ್ಲಿ ಕೆಲವು ಲೋರ್ಡ ಶಿಖಾಮಣಿಗಳು ಆಡಿದ ಮಾತುಗಳನ್ನು ಮನಸ್ಸಿಗೆ ತಂದರೆ ಇಂಥ ಮುತ್ಸದಿಗಳ ವಿವೇಕಶಕ್ತಿಯು ಎಲ್ಲಿ ಮಲಗಿ ಬಿದ್ದಿದೆ, ಅಥವಾ ಕೆಲವು ಮದ್ದುಸಾಮಾನುಗಳು ಈ ಯುದ್ಧದಲ್ಲಿ ಖರ್ಚಾಗಿ ಹೋದಂತೆ ಈ ಮುತ್ಸದಿಗಳ ಸಾರಾಸಾರ ಬುದ್ಧಿಯೂ ಸವೆದುಹೋಯಿತೆ ಎಂಬ ಸಂಶಯವು ಬರುತ್ತದೆ. ಡಾಯರನು ಪಂಜಾಬವನ್ನು ಉಳಿಸಿದ್ದಾನೆ. ಗಲಾಟೆಯ ಸಂದರ್ಭದಲ್ಲಿ ದೀರ್ಘ ವಿಚಾರಮಾಡುವಷ್ಟು ಪುರಸತ್ತು ಅವನಿಗಿರಲಿಲ್ಲ, ಬ್ರಿಟಿಷ್ ಸಾಮ್ರಾಜ್ಯದ ನಿಷ್ಠೆಯಿಂದ ವರ್ತಿಸಿದ ಮಹಾತ್ಮನಿಗೆ "ಇನ್ನುಮುಂದೆ ಕೆಲಸವೆ ಇಲ್ಲ"ವೆಂದು ಹೇಳುವುದು ನ್ಯಾಯವೆ? ಅವನ ಸಾಹಸ, ಅವನ ಶೌರ್ಯ, ಅವನ ಪ್ರಸಂಗಾವಧಾನತೆ ಇವೆಲ್ಲ ಸಾಮ್ರಾಜ್ಯದ ಸೇವೆಗೆ ಅರ್ಪಿಸಲ್ಪಟ್ಟವು. ಅಂಥವನಿಗೆ ಹಿಂದುಸ್ಥಾನ ಸರಕಾರವು ಮತ್ತು ಕೆಬಿನೆಟು ಇವು ಕೊನೆಗೆ ಕೊಟ್ಟ ಇನಾಮು ಯಾವುದು? ಉಚ್ಚಾಟನ! ಅಹಹಾ! ಇದೀಗ ಇನಾಮು! ಸರಕಾರದ ಇಂಥ ಪ್ರವೃತ್ತಿಯನ್ನು ನಿಷೇಧಿಸದೆ ಇದ್ದರೆ ಮುಂದೆ ಬಹು ದೊಡ್ಡ ಹಾನಿಯು ಬರುವ ಸಂಭವವಿದೆ ಎಂದು ಮುಂತಾದ ರೀತಿಯಲ್ಲಿ ಡಾಯರನ ಅಲ್ಪ ಕೃತ್ಯದ ಸಮರ್ಥನವನ್ನೂ, ಅವನಿಗೆ ದೊರಕಿದ ಸ್ವಲ್ಪ ಶಿಕ್ಷೆಯ ಬಗ್ಗೆ ಕೂಡಾ ಹಿಂದುಸ್ಥಾನ ಸರಕಾರದ ನಿಷೇಧವನ್ನೂ ವಿಲಾಯತಿಯ ಲೋರ್ಡ ಮಹಾಜನರು ತಮ್ಮ ಕೂಟದಲ್ಲಿ ಸ್ಪಷ್ಟವಾಗಿ—ಅತಿ ಸ್ಪಷ್ಟವಾಗಿ ಮಾಡಿದರು. ಡಾಯರ ಪಕ್ಷದವರಾದ ಲೋರ್ಡ ಮಹಾತ್ಮರ ರಾಜಕೀಯ ನೀತಿಯ ಮುಖ್ಯ ಸೂತ್ರವೇನೆಂದರೆ, ಡಾಯರನು ಪಂಜಾಬದಲ್ಲಿ ತನ್ನ ಕತ್ತಿಗೆ ಯಜಮಾನ್ಯವನ್ನು ಕೊಟ್ಟದ್ದು ತಪ್ಪಲ್ಲ.

ಡಾಯರನು ಮತ್ತು ಅವನ ಸಖರು ಪಂಜಾಬದಲ್ಲಿ ತಮ್ಮ ಕತ್ತಿಗಳಿಗೆ ಪ್ರಭುತ್ವವನ್ನು ಕೊಟ್ಟು ಯಾವ ಹಾನಿಯನ್ನು ಉಂಟುಮಾಡಿದ್ದಾರೊ ಅದು ವ್ಯವಹಾರಿಕ ದೃಷ್ಟಿಯಿಂದ ಎಷ್ಟು ಭಯಂಕರವಾಗಿದೆಯೊ ಅದಕ್ಕಿಂತಲೂ ಪಾರ್ಲಿಮೆಂಟಿನ ಈ ಮಹಾತ್ಮರು ಆ ಕೃತ್ಯದ ಸಮರ್ಥನವನ್ನು ಮಾಡಿದ್ದು ನೀತಿದೃಷ್ಟಿಯಿಂದ ಅತಿ ಭಯಂಕರವಾಗಿದೆ. ಯಾಕೆಂದರೆ, ಡಾಯರನ ಶಿಕ್ಷಣ, ತರಗತಿ, ಕಸಬು ಮತ್ತು ಇವೆಲ್ಲವುಗಳ ಪರಿಪಾಕವೆಂಬಂತೆ ಇರುವ ಅವಿವೇಕ ಇವುಗಳನ್ನು ಆಲೋಚಿಸಿದರೆ ಇಂಥ ಸದ್ಗುಣಮಂಡಿತನಾದ ವೀರನು ಲಷ್ಕರಕಾನೂನಿನ ಭಾದ್ರಪದ ಮಾಸದ ಸಂದರ್ಭವು ಒದಗಿದ ಮೇಲೆ ಮದವೇರಿ ಆ ಭರದಲ್ಲಿ ಅಮಾನುಷ ಕೃತ್ಯಗಳನ್ನು ಮಾಡುವುದು ಒಂದು ವೇಳೆ ಅವನ ಆ ಗುಣಗಳಿಗೆ ಒಪ್ಪುವಂತಿದೆ ಇಲ್ಲವೆ ತಕ್ಕಂತಿದೆ ಎನ್ನಬಹುದು; ಪರಂತು ರಾಜ್ಯಸೂತ್ರಗಳನ್ನು ಶಾಂತ ಮನಸ್ಸಿನಿಂದ, ದೂರ ದೃಷ್ಟಿಯಿಂದ ಲೋಕ ಕಲ್ಯಾಣದ ಇಚ್ಛೆಯಿಂದ ನಡೆಸುವ ಮುತ್ಸದಿಗಳು ಯಾವಾಗ ಬ್ರಿಟಿಷರ ಪ್ರತಿಷ್ಠೆಗೆ ಕುಂದು ಬರಬಾರದೆಂಬ ಉದ್ದೇಶವನ್ನು ಮುಂದಿಟ್ಟುಕೊಂಡು ನೋಕರಶಾಹಿಯ ಪ್ರಭಾವಳಿಯೊಳಗಿನ ಒಂದೆ ಒಂದು ವ್ಯಕ್ತಿಗೆ ಎಳ್ಳಷ್ಟು ಬಾಧಕವಾಗಬಾರದೆಂದು ನೆನಸಿ 'ಅವಿವೇಕಿಗಳ ಅತ್ಯಾಚಾರಗಳನ್ನೆ ಸಮರ್ಥಿಸತೊಡಗುವರೊ ಆಗ ಅವರು ತಮ್ಮ ಮುತ್ಸದಿತನಕ್ಕೆ 'ಪಾಪರ' ಅರ್ಜಿಯನ್ನು ಹಾಕಿದರೆಂದು ಹೇಳಬಹುದು. ಇಂಥ ಶೋಚನೀಯ ಸ್ಥಿತಿಯನ್ನು ಕೆಲವರು ಮೊನ್ನೆಯ ಲೋರ್ಡರ 'ಡಿಬೇಟ'ನಲ್ಲಿ ಪ್ರದರ್ಶಿಸುತ್ತಿರುವಲ್ಲಿ, ಆ [illegible] ಠರಾವು ಪಾಸಾಯಿತು!

ಈ ಎಲ್ಲ ಪರಿಸ್ಥಿತಿಯನ್ನೂ, ಪಾರ್ಲಿಮೆಂಟಿನಲ್ಲಿ ಮೊಂಟೆಗ್ಯುಗಳು ಗಾಂಧಿಗಳ ವಿಷಯವಾಗಿ ಹೊರಡಿಸಿದ ಉದ್ಗಾರಗಳನ್ನೂ ಆಲೋಚಿಸುವಾಗ ಮುಂದೆ ಬರುವ ಕಾಲವು ಸುಧಾರಣೆಗಳದೊ ಅಥವಾ ದುರ್ಧಾರಣೆಗಳದೊ ಎಂಬುದು ಗೊತ್ತಾಗುವುದಿಲ್ಲ. ಇದೇ ತರದ ಸಂಶಯವು ಒಂದು ಒಬ್ಬ ಬಾತಮಿದಾರನು ಮಹಾಕವಿ ರವೀಂದ್ರನಾಥ ಟಾಗೋರರ ಬಳಿಗೆ ಹೋಗಿ ತನ್ನ ಸಂಶಯವನ್ನು ನಿವೇದಿಸಿದಾಗ ಅವರು "ಕಠಿಣ ಸಮಯವು ಬರುವಂತೆ ತೋರುತ್ತದೆ. ದೂರದೃಷ್ಟಿಯ ಧೋರಣಕ್ಕೆ ಅಧಿಕಾರಿಗಳು ರಾಜೀನಾಮೆಕೊಟ್ಟಂತೆ ಕಾಣುತ್ತದೆ. ಜನತೆಯು ಒಳಭೇದಗಳನ್ನು ಬಿಟ್ಟು ಬರುವ ಸಂಕಟಗಳನ್ನು ಐಕ್ಯದಿಂದ ಸಹಿಸಲು ಸಿದ್ಧರಾಗಬೇಕು" ಎಂಬ ಸಂದೇಶವನ್ನು ಹೇಳಿದ್ದಾರೆ. ಟಾಗೋರರ ಸಂದೇಶದ ಈ ಸಾರಾಂಶವನ್ನು ಎಲ್ಲರೂ ಜಪಿಸುವುದು ಆವಶ್ಯಕವಾಗಿದೆ.

ಸ್ಫುಟ ವಿ ಚಾ ರ ಗ ಳು.

೧. ಎರಡು ವಾರದ ಹಿಂದೆ ಪಾರ್ಲಿಮೆಂಟಿನಲ್ಲಿ ಮಿ. ಮೊಂಟೆಗ್ಯುಗಳು ಮಹಾತ್ಮಾಗಾಂಧಿಗಳ ವಿಷಯವಾಗಿ ಆಡಿ ತೋರಿಸಿದ ವಿಚಾರಗಳಿಗೆ ಹಿಂದುಸ್ಥಾನದಲ್ಲಿ ಮೊಳಕೆಗಳು ಬರಹತ್ತಿವೆ ಎಂದು ಈಗ ಹೇಳಬಹುದಾಗಿದೆ. ದಿಲ್ಲಿಯ ಕಮಿಷನರರು ರಾಜಕೀಯ ಸಭೆಗಳನ್ನು ದಿಲ್ಲಿ ಪ್ರಾಂತದಲ್ಲಿ ಕೂಡಿಸಬಾರದೆಂದು ಹುಕುಮು ಹೊರಡಿಸಿದ್ದಾರೆ. ಮುಂಬಯಿ ಸರಕಾರವಾದರೂ ಇದನ್ನೆ ಅನುಕರಿಸಿದೆ. ಆದರೆ ಅದು ಪ್ರಕಟಿಸಿದ ಹುಕುಮಿನಲ್ಲಿ ಕೆಲವು ಹೆಚ್ಚಿನ ಮಾಹಿತಿಯು ವಿವರಿಸಲ್ಪಟ್ಟಿದೆ. ಸಿಂಧದಲ್ಲಿ ಖಲಿಫತ್ತಿನ ವಿಷಯವಾಗಿ ಸೇರಿದ ಹಲವು ಸಭೆಗಳಲ್ಲಿ ರಾಜದ್ರೋಹಕರವಾದ ಭಾಷಣಗಳೂ, ವರ್ಣದ್ವೇಷಕರವಾದ ಉಪನ್ಯಾಸಗಳೂ ಆಗುತ್ತಿದ್ದವೆಂದು ಮುಂಬಯಿ ಸರಕಾರದ ಕಿವಿಯ ಮೇಲೆ ಬಂದಿದೆ. ಅದ್ದರಿಂದ ಸದರಿ ಪ್ರಾಂತ್ಯದಲ್ಲಿ ಇನ್ನು ಮುಂದೆ ರಾಜಕೀಯ ಸಭೆಗಳನ್ನು ಸೇರಿಸಬಾರದೆಂದು ಅದು ಹುಕುಮು ಹೊರಡಿಸಿದೆ. ಸಾಧ್ಯವಿದ್ದ ಮಟ್ಟಿಗೆ ಕಠೋರ ಉಪಾಯಗಳನ್ನು ಕೈಕೊಳ್ಳಬಾರದೆಂದು ಮುಂಬಾಯಿ ಸರಕಾರದ ಮನಸ್ಸಿನಲ್ಲಿ ಉಂಟು. ಪರಂತು ಖಲಿಫತ್ತಿನ ಚಳವಳವು ಅದರ ಮನಸ್ಸಿನಲ್ಲಿ ಇದ್ದಂತೆ ನಡಿಯಲು ಬಿಡುವುದಿಲ್ಲ. ಅದ್ದರಿಂದ ಸಭಾ ಪ್ರತಿಬಂಧದ ಕಾನೂನನ್ನು ಜಾರಿಯಲ್ಲಿ ನಿರುಪಾಯದಿಂದ ಅದು ತರಬೇಕಾಗಿದೆ ಎಂದು ಮುಂಬಾಯಿ ಸರಕಾರವು ತನ್ನ ಹುಕುಮಿನಲ್ಲಿ ಹೇಳುತ್ತದೆ. ಸರಕಾರವು ಈ ರೀತಿಯಿಂದ ಹೇಳಿಕೊಳ್ಳುವಾಗ ಮಹಾತ್ಮಾ ಗಾಂಧಿಗಳ ಮನಸ್ಸಿನಲ್ಲಾದರೂ ಶಾಂತತಾಭಂಗ ಮಾಡಬೇಕೆಂದಿಲ್ಲ. ಇಷ್ಟೆ ಅಲ್ಲ, ಅವರು ತಮ್ಮ ಮನಸ್ಸಿನಲ್ಲಿದ್ದ ರೀತಿಯು ನಡತೆಯಲ್ಲೂ ನಿರಾಕ್ಷೇಪತನವನ್ನು ತಂದಿದ್ದಾರೆ, ಮತ್ತು ತಮ್ಮ ಅನುಯಾಯಿಗಳನ್ನೂ ಉಪದೇಶಿಸುತ್ತಿದ್ದಾರೆ. ಗಾಂಧಿ ಮತ್ತು ಮುಂಬಯಿ ಸರಕಾರ ಇವರಿಬ್ಬರಲ್ಲಿ ಸಾಧರ್ಮ್ಯವನ್ನು ತೋರಿಸುವುದಾದರೆ, ಅವರಿಬ್ಬರ ಮನಸ್ಸು ಶಾಂತತಾಭಂಗ ವಾಗಬಾರದೆಂದೇ ಉಂಟು. ಹಾಗೆಯೆ ಅವರಲ್ಲಿ ವೈಧರ್ಮ್ಯವನ್ನು ತೋರಿಸಿಕೊಡುವುದಾದರೆ, ಮುಂಬಯಿ ಸರಕಾರವು ತರ್ಜನಿಯನ್ನು ಎತ್ತಿ ಹಿಡಿದದೆ ಮತ್ತು ಗಾಂಧಿಗಳು ಬುದ್ಧನಂತೆ ಶಾಂತಿಹಸ್ತವನ್ನು ತೋರಿಸುತಿದ್ದಾರೆ. ಗಾಂಧಿಗಳು ಅಲ್ಲಲ್ಲಿ ಸಂಚರಿಸಿ ಅಸಹಕಾರಿತ್ವದ ಚಳವಳವನ್ನು ಪ್ರಾರಂಭಿಸುವಾಗ ಹಾಗು ಹರತಾಳಿನ ಸಂದರ್ಭದಲ್ಲಿ ಅತಿಶಾಂತತೆಯಿಂದ ನಡಕೊಳ್ಳಬೇಕೆಂದು ಅನುಯಾಯಿಗಳಿಗೆ ಸ್ಪಷ್ಟವಾಗಿ ತಿಳಿಸುತಿದ್ದಾರೆ. ಆದರೆ ಸರಕಾರವು ಮತ್ತು ಮೊಂಟೆಗ್ಯು ದೊರೆಗಳು ತರ್ಜನಿಯನ್ನು ಎತ್ತಿ ತೋರಿಸಿದರ ಮೇಲಿಂದ ಖಿಲಾಫತಿನ ಪ್ರಶ್ನೆಯೇ ಸರಕಾರಕ್ಕೆ ಅಪ್ರಿಯವಾಗಿದೆ ಎಂದು ತೋರುತ್ತದೆ. ಎಂದ ಮೇಲೆ ಉಗ್ರಧೋರಣವನ್ನು ಪ್ರಕಟಿಸಲಿಕ್ಕೆ ಸರಕಾರಕ್ಕೆ "ನೀನಲ್ಲವಾದರೆ ನಿನ್ನ ತಂದೆಯು ಕೈದಿಬಹುದು" ಎಂಬಂತೆ ಯಾವ ಕಾರಣವಾದರೂ ಸಿಗದೆ ಇರಲಿಕ್ಕಿಲ್ಲ.

[illegible] ಅಸಹಕಾರತ್ವದ ಅನ್ವಯದ ವಿಷಯವಾಗಿ ಮ. ಗಾಂಧಿಗಳು [illegible] ಬರುವ [illegible] ಗಿಂದ ಅದನ್ನು ಪ್ರಾರಂಭಿಸಲು ನಿಶ್ಚಯ ಮಾಡಿದ್ದಾರಾದರೂ ಪಂಡಿತ [illegible] ಮಾಲವೀಯರು ಮೊನ್ನೆ ಬಂದು ಸಭೆಯಲ್ಲಿ ಭಾಷಣ ಮಾಡುವಾಗ ಹೇಳಿದ್ದೇನೆಂದರೆ, ಅಸಹಕಾರಿತ್ವದ ಅನ್ವಯವು ಸಂಪೂರ್ಣ ಸನದುಕೀರೆಂಬುದಕ್ಕೆ ಸಂಶಯವಿಲ್ಲ. [illegible] ಬರುವ [illegible] ರಾಷ್ಟ್ರೀಯ ಸಭೆಯಲ್ಲಿ ಅದರ ಗ್ರಾಹ್ಯಾಗ್ರಾಹ್ಯತೆಯನ್ನು ಕುರಿತು ಚರ್ಚೆಯಾಗಲಿಕ್ಕಿದೆ. ಆ ಪ್ರಕಾರ ಅಲ್ಲಿ ಚರ್ಚೆಯಾಗಿ ಯಾವ ನಿರ್ಣಯವಾದೀತೊ ಅದನ್ನು ಜನರು ಕಾಯಬೇಕು, ಮ. ಕಮಿಟಿಗೂ ಮ. ಗಾಂಧಿಗಳಿಗೂ ಆ ನಿರ್ಣಯವಾಗುವುದಕ್ಕಿಂತ ಮುಂಚೆ ಮುಂದರಿಸಬಾರದೆಂದು ಪಂಡಿತ ಮಾಲವೀಯರು ವಿಜ್ಞಾಪಿಸಿ ಕೊಳ್ಳುವವರಿದ್ದಾರೆಂದು ಅವರ ಭಾಷಣದ ಮೇಲಿಂದ ತಿಳಿದು ಬರುತ್ತದೆ. ಪಂಡಿತ ಮಾಲವೀಯರು ಈ ವಿಷಯದಲ್ಲಿ ಜನಗಳಿಗೆ ಕೊಟ್ಟ ಎಚ್ಚರವು ಯೋಗ್ಯವಿದೆ ಎಂದು ನಮ್ಮ ಅಭಿಪ್ರಾಯವಿದೆ.

೩. ಕಳೆದ ವಸಂತದಲ್ಲಿ ಅಖಿಲ ಕರ್ನಾಟಕ ಪರಿಷತ್ತು ಧಾರವಾಡದಲ್ಲಿ ಸೇರಿತಷ್ಟೆ. ಇದರಲ್ಲಿ ಬ್ರಾಹ್ಮಣರೂ, ಬ್ರಾಹ್ಮಣೇತರರೂ, ಹಿಂದುಗಳೂ, ಮುಸಲ್ಮಾನರೂ ಎಲ್ಲರೂ ಒಟ್ಟಿಗೆ ಸೇರಿ ಕರ್ನಾಟಕದ ಹಿತಚಿಂತನೆಯನ್ನು ಮಾಡಿದ್ದಾರೆ. ಅದರಲ್ಲಿ ಯಾವುದಾದರೂ ಒಂದು ವಿಶಿಷ್ಟ ಜಾತಿಯ ಹಿತವನ್ನೆ ನೋಡಿರಲಿಲ್ಲ. ಆ ಪರಿಷತ್ತು ಎಲ್ಲರ ಹಿತಕ್ಕಾಗಿತ್ತು. ಆದರೂ ಆ ವಾಸಂತಿಕ ಸಭೆಯಲ್ಲಿ ಕೆಲವರಿಗೆ ಸೇರುವುದು ಇಷ್ಟವಾಗಲಿಲ್ಲ. ಅಂಥವರು ಈ ವರ್ಷಾ ಕಾಲದಲ್ಲಿ ಧಾರವಾಡದ ಹತ್ತರ ಹುಬ್ಬಳಿಯಲ್ಲಿ ಸರ್. ತ್ಯಾಗರಾಜ ಚಟ್ಟಿಗಳವರ ಛತ್ರದ ನೆರಳಿನ ಕೆಳಗೆ ಸೇರಿ ಟಲಾಂ ಟರಾಂ ಮಾಡುತಿದ್ದಾರೆ. ಇರಲಿ, ಹುಬ್ಬಳಿಯಲ್ಲಿ ಬ್ರಾಹ್ಮಣೇತರರ ಪರಿಷತ್ತು ಕೂಡಿ ಏನು ಮಾಡಿತೆಂದು ನೋಡಿದರೆ ವರ್ಣಾಶ್ರಮಗಳ ಸಂಸ್ಥೆಯ ಮೇಲೆ ಯಥೇಚ್ಛವಾಗಿ ಪುಷ್ಪಾಂಜಲಿಯನ್ನು ಹಾಕಿ ಕೊನೆಗೆ ಹಲವು ಠರಾವುಗಳನ್ನು ಪಾಸು ಮಾಡಿತು. ಇದಕ್ಕಿಂತ ವಿಶೇಷ ಕರ್ತವ್ಯವು ಈಗಿನ ಕಾಲದಲ್ಲಿ ಸದರಿ ಪರಿಷತ್ತಿಗೆ ಬೇರೆ ಕಾಣುವುದಿಲ್ಲ!

೪. ಮದ್ರಾಸ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ನಡೆದ ಪ್ರಶ್ನೋತ್ತರಗಳಲ್ಲಿ ಮಹತ್ತ್ವಾದವುಗಳನ್ನು ಹಾಗು ಇತರ ಕೆಲವು ಠರಾವುಗಳನ್ನು ನಾವು ಕಳೆದ ವಾರ ಮತ್ತು ಅದರ ಹಿಂದಿನ ವಾರ ಪ್ರಕಟಿಸಿದ್ದೇವೆ. ಈ ಅಧಿವೇಶನದಲ್ಲಿ "ಟೌನ್ ಪ್ಲೆನಿಂಗ ಬಿಲ" ಮತ್ತು "ಲೋಕಲ್ ಬೋರ್ಡ ಬಿಲ" ಇವೆರಡು ಮಹತ್ವದ ಬಿಲುಗಳು ಬಂದಿದ್ದವು. ಇವುಗಳಲ್ಲಿ ಟೌನ್ ಪ್ಲೆನಿಂಗ್ ಬಿಲು ಪಾಸಾಯಿತು. ಈ ಎರಡು ಬಿಲುಗಳಲ್ಲದೆ ಬೇರೆ ಎಷ್ಟೋ ಠರಾವುಗಳು ಬಂದಿದ್ದವು. ಅವುಗಳಲ್ಲಿ ಎಷ್ಟೋ ವಾಡಿಕೆಯಂತೆ, ಬಿದ್ದು ಹೋದವು. ಕೆಲವು ಹಿಂದಕ್ಕೆ ಎಳೆಯಲ್ಪಟ್ಟವು. ಬಿದ್ದುಹೋದ ಠರಾವುಗಳಲ್ಲಿ ಕಲೆಕ್ಟರ ಕೊನ್‌ಫರೆನ್ಸಿನ ಠರಾವು ಮಹತ್ವದ್ದಿತ್ತು. ಆಯಾ ಜಿಲ್ಲೆಯ ಕಲೆಕ್ಟರರು ತಂತಮ್ಮ ಜಿಲ್ಲೆಗಳಲ್ಲಿ ಆರು ತಿಂಗಳಿಗೊಮ್ಮೆ ಪ್ರಜಾಮುಖಂಡರ ಪರಿಷತ್ತುಗಳನ್ನು ಕೂಡಿಸುವಂತೆ ಕಲೆಕ್ಟರರಿಗೆ ಸರಕಾರವು ತಿಳಿಸಬೇಕೆಂದು ನಾಮದಾರ ವೆಂಕಟಪತಿ ರಾಜುಗಳು ಠರಾವನ್ನು ತಂದರು. ನಾಮದಾರ ಎನ್. ಸುಬ್ಬರಾವ ಇವರು ಅದನ್ನು ಅನುಮೋದಿಸುವಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲೆಕ್ಟರರು ಈ ಕ್ರಮವನ್ನು ಮಾಡುತ್ತಲಿದ್ದಾರೆ ಮತ್ತು ಇದರಿಂದ ಲೋಕಹಿತವಾಗ ಹತ್ತಿದೆ ಎಂದು ಹೇಳಿದರು. ಆದರೆ ಸರ್ ತ್ಯಾಗರಾಜ ಚಟ್ಟಿಗಳು ಇದನ್ನು ಉಪರೋಧಿಸಿದರು. ಕಲೆಕ್ಟರರು ಪ್ರಜಾಮುಖಂಡರ ಪರಿಷತ್ತು ಕೂಡಿಸಲು ಉಪಕ್ರಮಿಸಿದ್ದಾದರೆ ಕೆಲವು ವರ್ಗದವರು ಮಾತ್ರ ಕಲೆಕ್ಟರ ಸುತ್ತುಮುತ್ತಲು ತಿರುಗಾಡ ಹತ್ತುವರು, ಇದರಿಂದ ಕಲೆಕ್ಟರರಿಗ ಸರಿಯಾದ ಲೋಕಮತವು ಗೊತ್ತಾಗಲಿಕ್ಕಿಲ್ಲ, ಅದಕ್ಕಿಂತ ಜಿಲ್ಲೆಯಲ್ಲಿ ಸಂಚಾರದ ಮೇಲೆ ಹೋದಾಗಲ ಆಯಾ ಹಳ್ಳಿಗಳ ಜನರನ್ನು ಕಂಡು ಅವರಿಂದ ಅನುಭವವನ್ನು ಕಲೆಕ್ಟರರು ಪಡಕೊಳ್ಳುವುದೆ ಉತ್ತಮವೆಂಬ ಕಾರಣವನ್ನು ತೋರಿಸಿ ಸದರಿ ಚಟ್ಟಿಗಳು ಠರಾವನ್ನು ಉಪರೋಧಿಸಿದರು. ಇದನ್ನು ಮತಕ್ಕೆ ಹಾಕಲು ಬಹುಮತದಿಂದ ಬಿದ್ದು ಹೋಯಿತು. ಚಟ್ಟಿಗಳಿಗೆ ಬ್ರಾಹ್ಮಣ ಬ್ರಾಹ್ಮಣೇತರ ಪ್ರಶ್ನೆಯು ಅಡಚಣಿಯು ಪ್ರತಿಯೊಂದರಲ್ಲಿ ಬರುವಂತೆ ಮೇಲಿನ ನಿರುಪದ್ರವಿಯಾದ ಠರಾವಿನಲ್ಲೂ ಬಂದು ಆ ಕಾರಣದ ಮೇಲಿಂದ ಅವರು ಉಪರೋಧಿಸುವುದು ಸಹಜವೆ ಎನ್ನೋಣ. ಪರಂತು ಇತರ ಸರಕಾರಿ ಸಭಾಸದರಿಗೆ ಇದರಲ್ಲಿ ಯಾವ ಅವಗುಣವು ಹೊಳೆಯಿತೊ ಏನೊ, ಅಂತು ಅದು ಬಿದ್ದುಹೋಯಿತೆಂಬುದು ನಿಜ. ಕೌನ್ಸಿಲಿನಲ್ಲಿ ಬಂದ ಲೋಕಪಕ್ಷದ ಠರಾವುಗಳೆಲ್ಲ ಬಿದ್ದುಹೋಗುವುವೆಂದಲ್ಲ, ಅಪವಾದಕ್ಕೆ ಎಲ್ಲಾದರೂ ಒಂದೆರಡು ಪಾಸಾಗುವುದೂ ಉಂಟು. ಮೆಡಿಕಲ್ ಸ್ಟೋರ್ ಡಿಪೋವು ಔಷಧವನ್ನು ಸರಕಾರಕ್ಕೆ ಇಲ್ಲವೆ ಧರ್ಮಾರ್ಥದ ಆಸ್ಪತ್ರೆಗಳಿಗೆ ಯಾವ ದರದಲ್ಲಿ ಮಾರುತ್ತದೊ ಅದೇ ದರದಲ್ಲಿ ಲೋ. ಬೋರ್ಡುಗಳಿಗೂ ಮಾರಿಕೊಡುವಂತೆ ಹಿಂದೂಸ್ಥಾನ ಸರಕಾರಕ್ಕೆ ತಿಳಿಸಬೇಕು ಎಂಬದೊಂದು ಉಪಯುಕ್ತವಾದ ಠರಾವ ಕೌನ್ಸಿಲಿನ ಮುಂದೆ ಬಂತು. ಸರಕಾರಕ್ಕೆ ಮತ್ತು ಧರ್ಮದ ಆಸ್ಪತ್ರೆಗಳಿಗೆ ಸುಲಭ ದರದಲ್ಲಿ ಔಷಧವು ಸಿಗುವಂತೆ, ಸಾರ್ವಜನಿಕ ಹಿತದ ಸಲುವಾಗಿ ಇರುವ ಲೋ. ಬೋರ್ಡಿಗಾದರೂ ಯಾಕೆ ಸಿಗಬಾರದು ಎಂಬ ಅಪೇಕ್ಷೆಯು ಸರಿಯಾದದ್ದು. ಈ ಠರಾವನ್ನು ಕ್ರಮದಂತೆ ಮೇಜರ್ ಜನರಲ್‌ರು ಉಪರೋಧಿಸಿದಾಗ್ಯೂ ಬಹುಮತದಿಂದ ಅದು ಪಾಸಾಯಿತು. ಇದು ಸುದೈವದ ಮಾತಾಗಿದೆ.

೫. ಯುದ್ಧವು ಮುಗಿದ ಮೇಲೆ ಹಿಂದುಸ್ಥಾನದಲ್ಲಿ ಕಾಗದವು ಎಷ್ಟರ ಮಟ್ಟಿಗೆ ಅಪರೂಪವಾಗಹತ್ತಿದೆ ಎಂದರೆ ಕಾಗದದ ಅಭಾವದಿಂದ ಎಷ್ಟೊ ಪತ್ರಿಕೆಗಳು ನಿಂತವು, ಇನ್ನು ಎಷ್ಟೊ ಚಿಕ್ಕವಾದವು, ಇನ್ನು ಹಲವಂತು ಹೇಗಾದರೂ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕೆಂದು ಬೇರೆ ಬೇರೆ ಬಣ್ಣದ ಉಡುಪುಗಳನ್ನು ಧರಿಸಿದ್ದಾವೆ! ಪ್ರತ್ಯಕ್ಷ ಯುದ್ಧಕಾಲದಲ್ಲಿ ಕೂಡ ಪ್ರೆಸ್ಸುಗಳಿಗೆ ಇಂಥ ಆಪತ್ತು ಒದಗಿರಲಿಲ್ಲ. ಕಾಗದವು ಹಿಂದುಸ್ಥಾನದಲ್ಲಿ ಬೇರೆ ದೇಶಗಳಿಂದ ಈ ದೇಶಕ್ಕೆ ಬರುವುದು ಬಹಳ ಕಡಿಮೆಯಾದ ಕಾರಣ ಅದರ ದರವು ಈಗ ಎಷ್ಟೊ ಪಾಲಿನಿಂದ ಹೆಚ್ಚಾಗಹತ್ತಿದೆ. ಹಿಂದುಸ್ಥಾನದಲ್ಲಿ ಇಂಥ ಬರಗಾಲವು ಉಂಟಾಗಲಿಕ್ಕೆ ಮುಖ್ಯ ಕಾರಣವು ಯಾವುದೆಂದರೆ ಕಾಗದದ ವಿಷಯದಲ್ಲಿ ಅದು ಕೇವಲ ಪರಾವಲಂಬಿಯಾಗಿದೆ. ಆದ್ದರಿಂದ ಹಿಂದುಸ್ಥಾನದಲ್ಲಿ ಕಾಗದದ ಕೈಗಾರಿಕೆಯನ್ನು ಪ್ರಾರಂಭಿಸುವ ಬಗ್ಗೆ ಹಾಗು ಅಂಥ ಕಾರಖಾನೆಗಳಿದ್ದರೆ ಅವುಗಳಿಗೆ ಉತ್ತೇಜನವನ್ನು ಕೊಡುವ ಬಗ್ಗೆ ಸರಕಾರಕ್ಕೆ ಸೂಚಿಸುವುದು ಅಪರಿಹಾರ್ಯವಾಗಿತ್ತು. ಮತ್ತು ಆದ್ದರಿಂದಲೆ ಮೊನ್ನೆಯ ಕೌನ್ಸಿಲಿನಲ್ಲಿ ಕಾಗದದ ಕೈಗಾರಿಕೆಯ ಪ್ರಸ್ತಾಪವು ಒಂದು ಠರಾವಿನ ರೂಪದಿಂದ ಬಂದಿತ್ತು. ಕಾಗದಕ್ಕೆ ಬೇಕಾದ ಯಾವ ಯಾವ ಸಾಹಿತ್ಯವು ಈ ಸಂಸ್ಥಾನದ ಯಾವ ಯಾವ ಭಾಗದಲ್ಲಿ ಉಂಟು ಎಂಬದನ್ನು ಶೋಧಿಸಬೇಕೆಂದು ನಾಮದಾರ ಶಿವರಾಯರು ಒಂದು ಠರಾವನ್ನು ತಂದರು. ಅವರು ತಮ್ಮ ಭಾಷಣದಲ್ಲಿ ಹಿಂದುಸ್ಥಾನದೊಳಗಿನ ಪ್ರಕೃತದ ಕಾಗದದ ಬರಗಾಲವನ್ನು ವಿವರಿಸಿ ಹೇಳುವಾಗ ಈ ದೇಶದಲ್ಲಿ ಖರ್ಚಾದ ೮೦ ಸಾವಿರ ಟನ್ ಕಾಗದದಲ್ಲಿ ಬರೆ ೩೦ ಸಾವಿರ ಟನ್ ಕಾಗದವು ಈ ದೇಶದಲ್ಲಿ ತಯಾರಾದದ್ದು ಎಂದು ಮಾಹಿತಿಯನ್ನು ಕೊಟ್ಟರು. ಹಿಂದುಸ್ಥಾನ ಸರಕಾರವು ಕಾಗದದ ಬಗ್ಗೆ ಪ್ರಕಟಿಸಿದ ತನ್ನ ರಿಪೋರ್ಟಿನಲ್ಲಿ ಕಾಗದಕ್ಕೆ ಬೇಕಾದ ಸಾಹಿತ್ಯವು ದಕ್ಷಿಣ ಹಿಂದುಸ್ಥಾನ ಎಂದರೆ ಮದ್ರಾಸ ಸಂಸ್ಥಾನದಲ್ಲಿ ಧಾರಾಳವಾಗಿ ಸಿಗುತ್ತದೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುವಾಗ ಆ ಬಗ್ಗೆ ಸರಕಾರವು ಯಾವ ಪ್ರಯತ್ನವನ್ನೂ ನಡಿಸುವುದಿಲ್ಲವೆಂದು ಅವರು ವಿಷಾದಪಟ್ಟರು. ಈ ಠರಾವನ್ನು ಅನುಮೋದಿಸುವ ಸಂದರ್ಭದಲ್ಲಿ ನಾಮದಾರ ಡೇವಿಡ್‌ಸನ್‌ರು ಕಾಗದದ ಕ್ರಯವು ದಿನೇ ದಿನೇ ಹೇಗೆ ಏರುತ್ತ ಹೋಗಿದೆ ಎಂಬದನ್ನು ತಿಳಿಸಿ ಕೊಡುವಾಗ ಕಾಗದವು ಈಗ ಸೇಕಡಾ ೬೦೦ ಪಾಲಿನಿಂದ ಏರಿದೆ ಎಂದು ಹೇಳಿದರು. ಸಾರಾಂಶ ಕಾಗದದ ಕೈಗಾರಿಕೆಯು ಹಿಂದುಸ್ಥಾನದಲ್ಲಿ ಅತ್ಯಾವಶ್ಯಕವೆಂಬುದಕ್ಕೆ ಯಾವ ಅಡ್ಡಿಯೂ ಇಲ್ಲ. ಈ ಪ್ರಶ್ನೆಯನ್ನು ಸರಕಾರವು ಸಹಾನುಭೂತಿಯ ದೃಷ್ಟಿಯಿಂದ ವಿಚಾರದಲ್ಲಿ ತೆಕ್ಕೊಳ್ಳುವ ಬಗ್ಗೆ ಆಶ್ವಾಸನವನ್ನು ಕೊಟ್ಟ ಕಾರಣ ಸದರಿ ಠರಾವು ಹಿಂದಕ್ಕೆ ತೆಕ್ಕೊಳ್ಳಲ್ಪಟ್ಟಿತು.

ಮಂಗಳೂರು

ಮಂಗಳೂರು ಕೆಥೋಲಿಕ ಕೊ ಒಪರೆಟಿವ್ ಸೊಸೈಟಿಯ ಸೆಕ್ರೆಟರಿಗಳಾದ ಮಿ| [illegible] ಇವರು ಕೆಲವು ಡಿಪೋಜಿಟರ ಹಣಗಳನ್ನು ಸೊಸೈಟಿಯ ಲೆಕ್ಕಕ್ಕೆ ದಾಖಲು ಮಾಡದೆ ದುರ್ವಿನಿಯೋಗ ಪಡಿಸಿದರೆಂಬ ಅಪಾದನೆ ಮೇಲೆ ಕೈದು ಮಾಡಲ್ಪಟ್ಟು ರಿಮಾಂಡಿನಲ್ಲಿರುತ್ತಾರೆ. ಇವರ ಸಾಲಮೂಲಗಳ ಪಟ್ಟಿಯನ್ನು ಇವರು ಈ ಮೊದಲೇ ಕಾಣಿಸಿ ದಿವಾಳಿ ಅರ್ಜಿಯನ್ನು ಕೊಟ್ಟಿರುತ್ತಾರೆಂದೂ ನಾವು ಕೇಳುತ್ತೇವೆ. ಇವರಿಂದ ಹೊರಗೆ ಸಲುವ ಸಾಲಗಳು ೧ ಲಕ್ಷ ೭೫ ಸಾವಿರಕ್ಕೆ ಮಿಕ್ಕಿವೆ ಎಂಬದಾಗಿ ವರ್ತಮಾನವಿದೆ.

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿಯ ಪಾಲುಮಾಲಿಕರ ಮಹಾ ಸಭೆಯು ಈ ಮೊದಲು ಸೂಚಿಸಲ್ಪಟ್ಟಂತೆ ಇದೇ ತಿಂಗಳ ತಾ ೨೫ ಮತ್ತು ೨೬ರಲ್ಲು ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಕೂಡಿತು. ಹೈಕೋರ್ಟ ವಕೀಲ ಮ| ರಾ| ರಾ| ಯು ಸಿ ಕೃಷ್ಣಬಟ್ಟರವರು ಎರಡು ದಿನಗಳಲ್ಲಿಯೂ ಸಭಾಧ್ಯಕ್ಷರಾಗಿದ್ದರು. ಈ ಕೆಳಗಿನ ನಿರ್ಣಯಗಳು ಸಭಿಕರಿಂದ ಮಂಜೂರುಮಾಡಲ್ಪಟ್ಟಿವೆ. ಈಗಿನ ಡ್ಯಾರೆಕ್ಟರರ ಆಡಳಿತೆಯು ಪ್ರಾರಂಭವಾದಂದಿನಿಂದ ಕಳೆದ ಜೂನು ಅಂತ್ಯದ ವರೆಗ ಕಂಪೆನಿಯ ಆದಾಯ ವೆಚ್ಚಗಳ ಪಟ್ಟಿಯು ಸಭೆಯಲ್ಲಿ ಓದೋಣಾಗಿ ಇದರ ಪರ್ಯಾಲೋಚನೆಯು ಕಂಪೆನಿಗೆ ಲೆಕ್ಕ ಪರಿಶೋಧಕರ ನೇಮಕದ ವರೆಗೆ ಬಾಕಿ ಇಡಬೇಕೆಂತ ನಿರ್ಣಯಿಸಲ್ಪಟ್ಟಿತು. ಕಳೆದ ಎರಡು ವರುಷಗಳ ಬಗ್ಗೆ ಕಂಪೆನಿಯ ಪಾಲುಮಾಲಿಕರಿಗ ಪ್ರತಿ ವರುಷಕ್ಕೆ ಸೇಕಡಾ ೧೦ರಂತೆ "ಇಂಟರಿಮ್" ಮುನಾಫೆಯನ್ನು ಕೊಡಬೇಕೆಂತ ನಿರ್ಣಯಿಸಲ್ಪಟ್ಟಿತು. ಈ ಮೊದಲು ಕಂಪೆನಿಯ ಲೆಕ್ಕ ಪರಿಶೋಧಕರಾಗಿದ್ದ ಮ| ರಾ| ರಾ| ಯಮ್ ಎಸ್ ಕೃಷ್ಣರಾಯರನ್ನು ೧೯೨೦ನೇ ಮಾರ್ಚ ಅಂತ್ಯದ ವರೆಗೆ ಲೆಕ್ಕ ಪರಿಶೋಧಕರನ್ನಾಗಿ ನೇಮಿಸಬೇಕೆಂತಲೂ ೧೯೨೧ನೇ ಮಾರ್ಚ ಅಂತ್ಯದ ವರೆಗಿನ ವರುಷಗಳ ಕಂಪೆನಿಯ ಸಾಲಮೂಲಗಳ ತಖ್ತೆ ಇತ್ಯಾದಿಗಳನ್ನು ಕ್ರಮ ಪ್ರಕಾರ ತಯಾರಿಸಿ ಲೆಕ್ಕ ಪರಿಶೋಧಕರ ರಿಪೋರ್ಟ ನೊಡನೆ ಅವು ಮಹಾ ಸಭೆಯ ಮುಂದಕ್ಕೆ ಬರುವ ತನಕ ಡ್ಯಾರೆಕ್ಟರ ಚುನಾವಣೆಯನ್ನು ಬಾಕಿ ಇಡಬೇಕೆಂತಲೂ ಈ ಮಹಾಸಭೆಯನ್ನು ಬರುವ ನವಂಬರ ತಿಂಗಳ ತಾ ೧೫ಕ್ಕೆ ಅಥವಾ ಆ ಸಮಯದೊಳಗೆ ಬರ ಮಾಡಬೇಕೆಂತಲೂ ನಿರ್ಣಯಿಸಲ್ಪಟ್ಟಿದೆ.

ಕಳೆದ ಮಂಗಳವಾರ ಕೆನರಾ ಹೈಸ್ಕೂಲಿಗೆ ಹೋಗುತ್ತಿರುವ ವಕೀಲ ರಾ| ಬೋಳ ನಾಗೇಶರಾಯರ ಬಾಲಕನನ್ನು ಸವಿನುಡಿಗಳನ್ನಾಡಿ ಬಾವಟೆಕಟ್ಟೆಯ ಗುಡ್ಡೆಗ ಕರಕೊಂಡು ಹೋಗಿ ಕಂಠದಲ್ಲಿದ್ದ ಚಿನ್ನದ ಗೋಪನ್ನು ಒಬ್ಬ ಅಕ್ಕಸಾಲಿಗನು ಅಪಹರಿಸಿದ್ದಾನಾಗಿ ತಿಳಿಯುತ್ತೇವೆ.

ಮಂಗಳೂರು ತಾಲೂಕು ಬೋರ್ಡಿಗೆ ಕೆಥೊಲಿಕ ಗೃಹಸ್ಥರ ಪೈಕಿಯೊಬ್ಬರಾದ ಮಿ. ಅಲ್ಫಾನ್‌ಸೊ ಮೇರಿಯನ್ ಲಿಗೋರಿ ಡಿ ಸೋಜರ ನೇಮಕವಾಗಿ ಸರಕಾರದ ಮಂಜೂರಾತಿ ಬಂದಿದೆ.

ಮಂಗಳೂರ ಕಲೆಕ್ಟರ ಆಫೀಸಿನ ಹೆಡ್ ಎಕೌಂಟಂಟರಾದ ಮ. ರಾ. ಬಿ. ರಘುನಾಥ ಎಂಡಾರಿಗಳು ಒಂದು ತಿಂಗಳ ಪ್ರಿವಿಲೇಜ್ ರಜೆಹೊಂದಿರುವರು.

ಗವರ್ನಮೆಂಟ ಟೆಕನಿಕಲ್ ಪರೀಕ್ಷೆಯ ಪೈಕಿ ಟಾಯ್ಪರಾಯಟಿಂಗ್ ಪರೀಕ್ಷೆಯು ತಲಚೇರಿ ಮತ್ತು ಮಂಗಳೂರ ಉಮೇದ್ವಾರರಿಗೆ ಒಗಸ್ಟ ತಾರೀಕು ೨೮ಕ್ಕೆ ತಲಚೇರಿಯ ಗವರ್ನಮೆಂಟ ಬ್ರೆನೆನ್ ಕೋಲೇಜಿನಲ್ಲಿ ನಡಿಯುವುದು.

ಮಂಗಳೂರ ಸ್ಟುಡೆಂಟ್ಸ ಬ್ರದರ ಹುಡ್ಡಿನವರಿಂದ ಈ ವರುಷದ ಸ್ಕೂಲ್ ಫೈನಲ್, ಇಂಟರಮಿಡಿಯೇಟ್ ಮತ್ತು ಬಿ. ಎ. ಪರೀಕ್ಷೆಗಳಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಬರುವ ಆದಿತ್ಯವಾರ ೪ ಗಂಟೆಗೆ "ಎಟ್ ಹೋಮ್" ಎಂಬ ಆದರಸತ್ಕಾರವು ಗಣಪತಿ ಸೆಕೆಂಡರಿ ಸಾಲೆಯಲ್ಲಿ ನಡಿಯಲಿಕ್ಕಿರುವುದು.

ಹಿಂದುಸ್ಥಾನದ ಸೆಂಟ್ರಲ ಖಿಲಾಫತ್ ಕಮ್ಮಿಟಿಯವರು ಬರುವ ಒಗಸ್ಟ ತಾರೀಕ ೧ನೆಯ ಆದಿತ್ಯವಾರದಿನ 'ಹರತಾಳವನ್ನು' ಆಚರಿಸಬೇಕಾಗಿ ನಿರ್ಣಯಿಸಿದಂತೆ ಮಂಗಳೂರ ಖಿಲಾಫತ್ ಕಮಿಟಿಯವರೂ ಈ ದಿನಾಚರಣೆಯನ್ನು ಮಾಡಬೇಕಾಗಿ ನಿಶ್ಚಯಿಸಿದ್ದಾರೆ. ಅಂದು, ಸಕಲಕಾರ್ಯಗಳನ್ನು ನಿವೃತ್ತಿ ಪಡಿಸೋಣ, ವ್ಯಾಪಾರಸ್ಥರ ಮುಂತಾದವನ್ನು ಮುಚ್ಚೋಣ, ದೇವತಾ ಆರಾಧನೆಯನ್ನು ಗೈಯೋಣ. ಸಾಯಂಕಾಲ 6 ಗಂಟೆಗೆ ಇಸ್ಲಾಮಿಯಾ ಕ್ಲಬ್ಬಿನಲ್ಲಿ ಒಂದು 'ಮಹಾಸಭೆಯನ್ನು' ನಡಿಸೋಣ ಇವೆಲ್ಲವೂ ಈ ದಿನಾಚರಣೆಯ ಕಾರ್ಯಕ್ರಮದಲ್ಲಿ ಸೇರಿವೆ.

ಗೌಡಸಾರಸ್ವತ ಶ್ರೀ ಮದನಂತೇಶ್ವರ ದೇವಸ್ಥಾನದ ಬಗ್ಗೆ ತಯಾರಿಸೋಣಾದ ಸ್ಕೀಮಿನ ಮೇರೆಗೆ ಸ್ವಜಾತಿಯ ವಿದ್ವದ್ವೈದಿಕರ ಮಾನ್ಯರಾದ [illegible] ಅಧಿಕಾರಕ್ಕೆ [illegible] ಕಂದುಕವೂ ಬಾಧೆ [illegible] ಯಾವ ವಿಷಾರತೆಗಳನ್ನು ಮಾಡತಕ್ಕದ್ದು ಎಂಬದನ್ನು ಆಲೋಚಿಸುವದೆ ಸ್ವಜಾತಿಯ ವೈದಿಕರ ಒಂದು ಸಭೆಯು ಮಂಗಳೂರು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಬರುವ ಆದಿತ್ಯವಾರ ಮಧ್ಯಾಹ್ನ ೩ ಗಂಟೆಗೆ ನೆರೆಯಲಿಕ್ಕಿರುವುದು.

ಈಗ ಸುಮಾರು ಹದಿನೈದು ವರುಷಗಳಿಂದ ಆರ್ಯಸಮಾಜದ ಬೋಧಕರಾದ ಲಾಹೋರಿನ ಶ್ರೀಯುತ ಪಂಡಿತ ಅಮರನಾಥರೆಂಬವರು ಈಗ ತಾನೆ ಮಂಗಳೂರಿಗ ಬಂದಿರುವರು. ಇವರು ಬರುವ ಆದಿತ್ಯವಾರ ಮೊದಲುಗೊಂಡು ನಂತರದ ಮೂರು ಆದಿತ್ಯವಾರಗಳಲ್ಲಿ ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಸಾಯಂಕಾಲ 4 ಗಂಟೆಯಿಂದ ಕೆಳಗಿನ ವಿಷಯಗಳನ್ನು ಕುರಿತು ಅನುಕ್ರಮದಿಂದ ಭಾಷಣಮಾಡುವರು. ಮೊದಲನೇ ಸಾರಿ ಆರ್ಯ ಸಮಾಜ ಮತ್ತು ಪಂಜಾಬದೊಳಗಿನ ಸಾಮಾನ್ಯ ಜೀವನ ನಂತರ ಕರ್ಮಯೋಗ ಕೊನೆಗ ಬ್ರಹ್ಮಚರ್ಯದ ಮಹತ್ವ ಎಂಬ ವಿಷಯಗಳನ್ನು ಎತ್ತಿಕೊಳ್ಳುವರು.

ಹಿಂದಿಭಾಷೆಯನ್ನು ಜನರಲ್ಲಿ ವಿಶೇಷವಾಗಿ 'ವಿದ್ಯಾರ್ಥಿಗಳಲ್ಲಿ ಪಸರಿಸುವ ಮುಖ್ಯ ಉದ್ದೇಶದಿಂದ ಲಾಹೋರಿನ ಆರ್ಯ ಪ್ರದೇಶಿಕ ಪ್ರತಿನಿಧಿ ಸಭೆಯವರಿಂದ ಈ ಮಹನೀಯರನ್ನು ಇಲ್ಲಿಗೆ ಕಳುಹಿಸಿದ್ದಾಗಿರುವುದು. ಸದರಿ ಸಭೆಯ ಆಶಯದ ಮೇರೆಗೆ ಹಿಂದೀಭಾಷೆಯನ್ನು ಧರ್ಮಾರ್ಥವಾಗಿ ಕಲಿಸುವ ಕ್ಲಾಸುಗಳು ಗಣಪತಿ ಸೆಕೆಂಡರಿ ಸಾಲೆಯಲ್ಲಿ ತೆರಿಯೋಣಾಗಿವೆ. ಈ ಕ್ಲಾಸುಗಳು ವಿದ್ಯಾರ್ಥಿಗಳಿಗೆ ಪ್ರತಿದಿನ ಸಾಯಂಕಾಲ 5 ರಿಂದ 6ರ ವರೆಗೆ. ಇತರರಿಗೆ ಸೋಮವಾರ ಬುಧವಾರ ಶುಕ್ರವಾರ ಈ ಮೂರುದಿನಗಳಲ್ಲಿ ಮಾತ್ರ ಸಾಯಂಕಾಲ 6ರಿಂದ 7ರ ವರೆಗೆ ತೆರಿಯೋಣಾಗಿರುವುವು.

ಕಳೆದ ಆದಿತ್ಯವಾರ ಮಂಗಳೂರಿನಲ್ಲಿ ಕೂಡಿದ ಜಿಲ್ಲೆಯ ಗ್ರಾಮ ಉದ್ಯೋಗಸ್ಥರ ಸಭೆಯಲ್ಲಿ ಪಾಸಾದ ಠರಾವುಗಳನ್ನು ಈ ಸಂಚಿಕೆಯ ಇನ್ನೊಂದು ಕಡೆಯಲ್ಲಿ ಪ್ರಕಟಿಸಿದ್ದೇವೆ.

[illegible]

...ತನವಿ ನಡೆದು, ಮಧ್ಯದಲ್ಲಿ ಶ್ರೀ ಸೋದೆ ಸ್ವಾಮಿಯವರನ್ನು [illegible] —ಬಾಕಿ ಇಬ್ಬರ ಮೇಲೆ ಚಾರ್ಜ್ ಮಾಡಲ್ಪಟ್ಟಿತ್ತು. [illegible] ಆರೋಪಿಗಳು [illegible] ಕೊಟ್ಟು ಖುಲಾಸು ಪಡಿಸಿರುತ್ತಾರೆ.

ಕೊಕ್ಕಡ:— ಈ ಗ್ರಾಮದ ಲೋಕಲ್ ಫಂಡ್ ರಸ್ತೆಗೆ ಅಡ್ಡವಾಗಿರುವ ಕೊಕ್ಕಡ ಹಳ್ಳವನ್ನು ಮಳೆಗಾಲದಲ್ಲಿ ದಾಟಲಿಕ್ಕೆ ಸಾಧ್ಯವಿರುವದಿಲ್ಲ. ಈ ರಸ್ತೆಯಿಂದ ಸಂಚರಿಸುತ್ತಿರುವ ಪ್ರಯಾಣಿಕರಿಗೆ ಈ ಹಳ್ಳದ ದೆಸೆಯಿಂದ ಅನೇಕ ತೊಂದರೆಗಳಾಗುತ್ತವೆ ಇದಕ್ಕೆ ಸಂಕವಿಲ್ಲದಿರುವುದರಿಂದ ಪ್ರಯಾಣಿಕರ ಜೀವಕ್ಕೆ ಅಪಾಯ ಬರುವ ಸಂಭವವಿರಬಹುದು ಲೋಕಲ್ ಫಂಡ್ ರಸ್ತೆಗೆ ಅಡ್ಡವಾಗಿರುವ ಎಲ್ಲಾ ಸಣ್ಣದೊಡ್ಡ ಹಳ್ಳಗಳಿಗೂ ಕೂಡಾ ಮಳೆಗಾಲದಲ್ಲಿ ಹಂಗಾಮಿ ಸಂಕವನ್ನು ಲೋಕಲ್ ಫಂಡಿನವರು ಹಾಕಿಸುತ್ತಾರೆ. ಆದ್ದರಿಂದ ದಯಾಳು ತಾಲೂಕುಬೋರ್ಡಿನವರು ಬಡ ಪ್ರಯಾಣಿಕರ ಮೇಲೆ, ಪೂರ್ಣ ಪ್ರೀತಿ ಇಟ್ಟು ಜರೂರು ಈ ಹಳ್ಳಕ್ಕೆ ಒಂದು ಹಂಗಾಮಿ ಸಂಕ ಹಾಕಿಸಬೇಕಾಗಿ ಪ್ರಾರ್ಥನೆ ಈ ರಸ್ತೆಯು ಅಂದರೆ ಬೆಳ್ತಂಗಡಿ, ಉಪ್ಪಿನಂಗಡಿ, ಸರ್ಕಲಿನ ತಾಲೂಕು ಬೋರ್ಡು ಮೆಂಬರರ ಗಮನಕ್ಕೆ ಕೂಡಾ ಈ ಸಂಗತಿ ಗೊತ್ತಿಲ್ಲದಿರುವುದು ತುಂಬಾ ಆಶ್ಚರ್ಯವಾಗಿಯೇ ಕಂಡು ಬರುತ್ತದೆ

ಮೂಡಬಿದ್ರೆ:— ಇಲ್ಲಿಯ ಹಿಲ್ಲೋದಾದ ಬೋರ್ಡು ಶಾಲೆಯ ಅತೀ ಸಮೀಪ ಇರುವ ದೊಡ್ಡಿಯನ್ನು ದೂರಪಡಿಸಬಾರದೇ ಮಕ್ಕಳ ಆರೋಗ್ಯಕ್ಕೆ ಹಾನಿಕರವಲ್ಲವೋ?

ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು.

ಇದೇ ತಿಂಗಳ ೧೦ನೆ ತಾರೀಕಿನ ಮೀಟಿಂಗಿನಲ್ಲಿ ಜಾಲ್ಸೂರಿನ ಗೇಟ್ ಶೆಡ್ಡಿನ ಬಗ್ಗೆ ರೂ ೬೬೦ ಕಾಸರಗೋಡ ಹಾಯರ್ ಎಲಿಮೆಂಟರಿ ಶಾಲೆಯ ಕಟ್ಟಡದ ಎದುರುಗಡೆಯ ಜಗಲಿಯ ಮೇಲೆ ಕ್ಲಾಸುಗಳನ್ನು ಇರಿಸುವಂತೆ ದುರುಸ್ತಿ ಬಗ್ಗೆ ರೂ ೨೭೫, ಕಾರ್ಕಳ ಹೈಸ್ಕೂಲಿನ ಬಗ್ಗೆ ಲಾಯಬ್ರರಿ, ಸಾಯನ್ಸ್ ಸಾಹಿತ್ಯಗಳು ಮುಂತಾದುವುಗಳ ಬಗ್ಗೆ ರೂ ೧೧೯೭, ಕಾಸರಗೋಡು ಆಸ್ಪತ್ರೆಯ ಕಟ್ಟಡದ ಬಗ್ಗೆ ರೂ ೮೭೫೦ ಮತ್ತು ಕೆಲವು ಚಿಲ್ಲರೆ ಅಂದಾಜು ಪಟ್ಟಿಗಳು ಸೆಂಕ್ಷನಾದವು

ಕಾರ್ಕಳ ಸೆಕೆಂಡರಿ ಶಾಲೆಯ ಬಗ್ಗೆ Vನೆ ಫಾರ್ಮ ಇರಗೊಡಿಸಲಿಕ್ಕೆ ಹಂಗಾಮಿ ಕಟ್ಟಡದ ಬಾಡಿಗೆ ಮಾಹೆಯನಾ ೪ ರೂಪಾಯಿಯಂತೆ ಸೆಂಕ್ಷನ್ ಮಾಡಲಾಯಿತು ಇಲ್ಲಿ ಈ ಕ್ಲಾಸನ್ನು ಇಡುವುದಕ್ಕೆ ಸೆಂಕ್ಷನ್ ಸಿಕ್ಕಿತು, ಡಿರೆಕ್ಟರರ ಅನುಮತಿ ಮೇರೆಗೆ ಕಾಸರಗೋಡಿನಲ್ಲಿ IV ಫಾರ್ಮ ತೆರೆಯಲಾಯಿತು ಅದಕ್ಕೆ ಹೆಡ್‌ಮಾಸ್ತರರೊಬ್ಬರಿಗೆ ರೂ ೧೨೫, ಅಸಿಸ್ಟಾಂಟರಿಗೆ ರೂ ೮೦ ಮಲೆಯಾಳ ಮತ್ತು ಸಂಸ್ಕೃತ ಕಲಿಸುವ ಪಂಡಿತರೊಬ್ಬರಿಗೆ ರೂ ೩೦ ಡ್ರಿಲ್ ಮತ್ತು ಡ್ರಾಯಿಂಗ್ ಮಾಸ್ತರರಿಗೆ ರೂ ೨೫ ವೇದಿಗೆ ರೂ ೭೮ ಪ್ರಕಾರ ಸೆಂಕ್ಷನ್ ಮಾಡಲಾಯಿತು

ಇದೇ ಜೂನ್ ೧ನೆ ತಾರೀಕಿನಿಂದ ಇನ್ನೂ ಒಂದು ವರ್ಷದ ವರೆಗೆ ಜಾನುವಾರಗಳನ್ನು ಚಿಕಿತ್ಸೆಗೆ ಫೀಸು ಇಲ್ಲದೆ ಆರೈಕೆ ಮಾಡಬೇಕೆಂದು ವೆಟನರಿ ಅಸಿಸ್ಟಾಂಟರು ಬರೆದ ಪತ್ರದ ಅಭಿಪ್ರಾಯವನ್ನು ಅನುಮೋದಿಸಿ ಬರೆದ ವೆಟನರಿ ಸೂಪರಿಂಟೆಂಡೆಂಟರ ಸೂಚನೆಯನ್ನು ಅಂಗೀಕರಿಸಲಾಯಿತು. ಕಾರ್ಕಳ ಸೆಕೆಂಡರಿ ಶಾಲೆಯ ಕಟ್ಟಡದ ಬಗ್ಗೆ ಆಗತ್ಯವಿರುವ ಸ್ಥಳದ ನಕ್ಷೆಯನ್ನು ರಾ ಸದಾಶಿವ ಭಟ್ಟರ ಬಳಿಗೆ ರವಾನಿಸಿ ಅವರ ಸ್ಥಳವಂದಿಗರೊಡನೆಯೂ ಸರ್ಕಲ ಇನ್ಸ್‌ಪೆಕ್ಟರೊಡನೆಯೂ ಆಲೋಚನೆ ನಡೆದು ಇನ್ನೊಂದ ಒಳ್ಳೆ ಸ್ಥಳವನ್ನೂ ಆಟದ ಬಯಲವನ್ನೂ ಆರಿಸ ವಂತೆ ಮಾಡಿಸಬೇಕೆಂದ ನಿರ್ಣಯವಾಯಿತು

ಇದೇ ಎಪ್ರಿಲ್ ೨೧ನೆ ತಾರೀಕಿನಿಂದ ಕಾರ್ಕಳ ಬೋರ್ಡ ಸೆಕೆಂಡರಿ ಶಾಲೆಯ ೩ನೆ ಮಾಸ್ತರ ರಾ। ಕೆ ಅಣ್ಣಪ್ಪಯ್ಯನವರಿಗೆ ಸರ್ಕಲ್ ಇನ್ಸ್‌ಪೆಕ್ಟರರ ಶಿಫಾರಸಿನ ಮೇಲೆ ಮಾಹೆಯನಾ ೨೦ ರೂಪಾಯಿಯಂತೆ ಪರ್ಸನಲ್ ಎಲೋವೆನ್ಸ್ ಸೆಂಕ್ಷನಾಯಿತು

ಬೋರ್ಡ ಹೈಸ್ಕೂಲಿನ ೫ನೆ ಮಾಸ್ತರ ರಾ। ಜಿ ಮುಕುಂದರಾಯರಿಗೂ ಉಡುಪಿ ಬೋರ್ಡ ಸೆಕೆಂಡರಿ ಶಾಲೆಯ ರಾ ಅನಂತರಾಯರಿಗೂ ಸ್ಕೌಟ್ ಟ್ರೈನಿಂಗಿಗೆ ವೆಲ್ಲೂರಿಗೆ ಹೋದ ಬಗ್ಗೆ ಸಿಂಗ್ಲ್ ಸೆಕೆಂಡ ಕ್ಲಾಸ ರೈಲ್ ಬತ್ತ ಸೆಂಕ್ಷನಾಯಿತು

ಬೋರ್ಡು ಪ್ರಾಥಮಿಕ ಶಾಲೆಗಳಲ್ಲಿ ಫೀಸನ್ನು ತೆಗೆದುಹಾಕುವ ವಿಷಯವಾಗಿ ವಿನಿಮಯವಾಡಬಹುದೆಂಬ ಕೇಳಿದ ಸರಕಾರ ಹುಕುಮಿಗೆ ಪ್ರತ್ಯುತ್ತರವಾಗಿ ೫ನೆ ದರ್ಜೆ ವರೆಗೆ ಫೀಸು ಮಾಫಿಮಾಡಬಹುದೆಂದು ಸೂಚಿಸುವಂತೆ ನಿರ್ಣಯಿಸಲಾಯಿತು

ಪುತ್ತೂರು ಮತ್ತು ಕಾಸರಗೋಡು ತಾಲೂಕು ಬೋರ್ಡುಗಳನ್ನು ವಿಂಗಡಿಸುವುದನ್ನು ಇದೇ ಬರುವ ಒಕ್ಟೋಬರ ೧ನೇ ತಾರೀಕು ವರೆಗೆ ಮುಂದರಿಸಿದಕ್ಕಾಗಿಯೂ ಉಪ್ಪಿನಂಗಡಿ ತಾಲೂಕು ಬೋರ್ಡು ಎನ್ನುವ ಬದಲಾಗಿ ಪುತ್ತೂರು ತಾಲೂಕ ಬೋರ್ಡು ಎಂಬ ಹೆಸರನ್ನು ಮಂಜೂರು ಮಾಡಬೇಕಾಗಿಯೂ ಸರಕಾರದವರಿಗೆ ಬರಕೊಳ್ಳುವುದಕ್ಕೆ ನಿರ್ಣಯವಾಯಿತು

ಲೋಕಲ್ ಬೋರ್ಡುಗಳ ಗತವರ್ಷದ ವರ್ತಮಾನದ ರಿಪೋರ್ಟನ್ನು ಓದಿ ಮಂಜೂರು ಮಾಡಲಾಯಿತು

ಗ್ರಾಮ ಉದ್ಯೋಗಸ್ಥರ ಮೀಟಿಂಗು

ಇದೇ ೨೪ನೆ ತಾರೀಕಿಗೆ ಮಂಗಳೂರಲ್ಲಿ ಮ। ರಾ। ಯಮ್ ಮಾಧವರಾಯರ ಅಧ್ಯಕ್ಷತೆಯಲ್ಲಿ ಜರಗಿದ ಈ ಮೀಟಿಂಗಿನಲ್ಲಿ ಈ ಕೆಳಗಿನ ಠರಾವುಗಳು ಮಂಜೂರಾದವು —

೧ ಪ್ರಿನ್ಸ್ ಒಫ್ ವೇಲ್ಸರಿಗೆ ಹಿಂದುಸ್ಥಾನಕ್ಕೆ ಈ ಗ್ರಾಮ ಉದ್ಯೋಗಸ್ಥರು ಹೃತ್ಪೂರ್ವಕವಾಗಿ ಸುಸ್ವಾಗತವನ್ನು ಮಾಡುತ್ತಾರೆ

[illegible] III [illegible]

[illegible] ಮತ್ತು ಪಟೇಲರಿಗೆ [illegible] ಸರಕಾರದ ಕೆಲಸದ ಕುರಿತು [illegible] ಮತ್ತು ಪ್ರಯಾಣದ ಭತ್ತೆ [illegible] ಸರಕಾರದವರೊಡನೆ ನಮ್ರಭಾವದಿಂದ ಕೇಳಿಕೊಳ್ಳುತ್ತಾರೆ

೪ ಈಗಲೇ ಮಾಡಿ ಪೂರೈಸದಷ್ಟು ಕೆಲಸವು ಇರುವುದರಿಂದ ಈಗಿನ ಸಿಬಂದಿ ಕಡಿಮೆ ಮಾಡುವುದು ಯೋಗ್ಯವಲ್ಲ

೫ ಸರಬರಾಯಿ ಕೆಲಸವನ್ನು ಸರಕಾರದವರು ನಿಲ್ಲಿಸಿಬಿಡಬೇಕಾಗಿಯೂ, ಇಲ್ಲವಾದರೆ ಈಗಿನ ಸರಬರಾಯಿ ಕ್ರಮಗಳನ್ನು ತನಿಖಿಸಿ ತಿದ್ದುಪಡಿ ಮಾಡುವುದಕ್ಕೆ ಕೌನಸಿಲ ಮೆಂಬರರ ಒಂದು ಕಮಿಟಿಯನ್ನು ನೇಮಿಸಬೇಕಾಗಿಯೂ ವಿನಯದಿಂದ ಕೇಳಿಕೊಳ್ಳುತ್ತಾರೆ.

೬ ಲೈಸನ್ಸು ಇಲ್ಲದ ಕೋವಿಗಳನ್ನು ಹಿಡಿಯುವುದಕ್ಕೆ ಗ್ರಾಮ ಉದ್ಯೋಗಸ್ಥರಿಗೆ ಅಧಿಕಾರ ಕೊಡಬೇಕಾಗಿ ವಿನಯದಿಂದ ಬೇಡುತ್ತಾರೆ

೭ ವಿನಾಕಾರಣವಾಗಿ ಗ್ರಾಮ ಉದ್ಯೋಗಸ್ಥರಿಗೆ ಕೊಡುವ ಶಿಕ್ಷೆಗಳು ಹೆಚ್ಚಿದ್ದಕ್ಕಾಗಿ ವ್ಯಸನಪಡುವುದಲ್ಲದೆ ಇಂಥವುಗಳನ್ನು ತಗ್ಗಿಸುವ ಅಥವಾ ತೆಗೆದುಹಾಕುವುದಕ್ಕೋಸ್ಕರ ಇಂಥ ತಪ್ಪುಗಳ ಸ್ಥಿತಿಗತಿಯ ವಿಚಾರವು ಸರಕಾರದಿಂದ ಆಗಬೇಕಾಗಿ ಕೇಳಿಕೊಳ್ಳುತ್ತಾರೆ

೮ ತಮ್ಮ ಗ್ರಾಮದ ಹೊರಗೆ ಒಂದು ಮೈಲ ಫಾಸಲೆಯೊಳಗೆ ಈ ಉದ್ಯೋಗಸ್ಥರು ವಾಸಮಾಡಬಹುದಾಗಿ ನಿಯಮಿಸಿ ಸಿಗುವಂತೆ ಕೇಳಿಕೊಳ್ಳುತ್ತಾರೆ

೯. ವಿವಾರಿ ಹಕ್ಕನ್ನು ಇರಗೊಡಿಸುವುದಾದರೂ ವರ್ಷಕ್ಕೊಂದು ತಿಂಗಳು ಪ್ರಿವಿಲೆಜ ರಜೆಯ ಹಕ್ಕನ್ನು ಈ ಅಧಿಕಾರಿಗಳಿಗೆ ಕೊಡುವುದಾಗಿ ಕೇಳಿಕೊಳ್ಳುತ್ತಾರೆ

೧೦ ಮೇಲೆ ಹೇಳಿದ ರೀತಿಯಲ್ಲಿ ಸಂಬಳದ ದರಗಳನ್ನು ಏರಿಸಲು ಸಾಧ್ಯವಿಲ್ಲದಂತಾದರೆ ಸರಕಾರಿ ಖರ್ಚಿನಿಂದ ಪಟೇಲರಿಗೆ ಒಬ್ಬ ಗುಮಾಸ್ತರನ್ನು ಕೊಟ್ಟು ಪಟೇಲರ ಉದ್ಯೋಗವನ್ನು ಗೌರವಾರ್ಥದ (ಸಂಬಳವಿಲ್ಲದ) ಹುದ್ದೆಯಾಗಿ ಮಾಡಬಹುದೆಂದ ವಿಜ್ಞಾಪನೆ ಇದೆ

೧೧ ಒಮ್ಮೆ ಸರ್ವೆ ಟ್ರೈನಿಂಗ್ ಹೊಂದಿದ ಶ್ಯಾನುಭೋಗರಿಗೆ ಪುನಃ ಟ್ರೈನಿಂಗ ಹೊಂದಲು ಒತ್ತಾಯಪಡಿಸಬಾರದಾಗಿ ಕೇಳಿಕೊಳ್ಳುತ್ತಾರೆ

೧೨. ಪಬ್ಲಿಸಿಟಿ ಬಿರೋವಿನ ನಂಬ್ರ ೧ನೆ ಪತ್ರಿಕವು ಶ್ಯಾನುಭೋಗರಲ್ಲಿ ವಿಶ್ವಾಸಘಾತಕ, ಬಡವರಿಗೆ ಪೀಡನ ಮುಂತಾದ್ದು ಇವೆ ಎಂದು ಪ್ರಕಟಿಸಿದ್ದಕ್ಕೆ ಈ ಉದ್ಯೋಗಸ್ಥರು ಸ್ವಸಹ್ಯೋತ್ತಿಗಳಿಂದ ಕ್ರೋಧಗೊಂಡಿದ್ದಾರೆ ಅಡಿವೆ ಸಲಬಿನಿಂದಲೂ ಈ ನವುಕರರು ತಮ್ಮ ಕೆಲಸವನ್ನು ಪ್ರಾಮಾಣಿಕತನದಿಂದಲೂ ವಿಶ್ವಾಸದಿಂದಲೂ ನಡಿಸಿದ್ದರಾಗಿ ಈ ಮೀಟಿಂಗಿನ ಅಭಿಪ್ರಾಯವಿದೆ

೧೩ ಸಂಬಳದ ಬಡ್ತಿಯು ಕಳೆದ ೧೯೧೯ನೆ ಎಪ್ರಿಲ ೧ನೆ ತಾರೀಕಿನಿಂದಲೇ ಸಿಗಬೇಕಾಗಿದೆ

೧೪ ಪಟೇಲರೂ ಉಗ್ರಾಣಿಗಳೂ ತಮ್ಮ ಉಗ್ರಾಣಿಗಳ ಬದಲಿ ನೇಮಕಗಳನ್ನು ಮಾಡುವ ಅಧಿಕಾರವನ್ನು ಹೊಂದಬೇಕು

೧೫ ಜಿಲ್ಲೆಯ ಗ್ರಾಮ ಉದ್ಯೋಗಸ್ಥರ ವರ್ಷಕ್ಕೊಮ್ಮೆ ಒಂದೊಂದು ತಾಲೂಕಿನಲ್ಲಿ ಸಮ್ಮೇಲನವನ್ನು ಜರಗಿಸಬೇಕಾಗಿದೆ

೧೬ ರಾ। ಕೊಡಿಯಾಲಬೈಲ ದೇವು ಶೆಟ್ಟಿ ರಾ। ಎಸ್ ಎಚ್ ಮಂಗೇಶರಾವ ರಾ। ವ್ಯ ಸರ್ವೋತ್ತಮರಾವ್ ರಾ। ವಾಸುದೇವ ಕೆಡಮಲಾಯ ರಾ। ದೇವು ಮೂಡ, ರಾ ಪಿ ವಾಸುದೇವಯ್ಯ ರಾ ಎಚ್ ಎನ್ ಕಾಮತ್ ರಾ। ಜಿ ಭವಾನಿಶಂಕರರಾವ್, ರಾ। ಎಸ್ ನಾರಾಯಣರಾವ್ ರಾ। ಪಿ ಅನಂತ ಪದ್ಮನಾಭ ಭಟ್ಟ ರಾ ಜಿ ಗಣಪಯ್ಯ ರಾ। ಕೆ ಅನಂತಯ್ಯ ಶೆಟ್ಟಿ, ರಾ। ಬಿ ವಿ ಪ್ರಭು ಇಷ್ಟು ಮಂದಿ ಈ ಸಭೆಯ ಪ್ರತಿನಿಧಿಗಳಾಗಿ ಮದ್ರಾಸಿನ ಮಾನ್ಯ ಗವರ್ನರ ಸಾಹೇಬರ ಮುಂದೆ ಗ್ರಾಮ ಉದ್ಯೋಗಸ್ಥರ ಅಹವಾಲೆಗಳನ್ನು ಇಡಬೇಕ

೧೭ ಈ ಠರಾವುಗಳ ನಕಲುಗಳನ್ನು ಜಿಲ್ಲಾ ಕಲೆಕ್ಟರ ಸಾಹೇಬರಿಗೂ ಮಾನ್ಯ ಗವರ್ನರ್ ಸಾಹೇಬರಿಗೂ ವರ್ತಮಾನ ಪತ್ರಿಕಾಕರ್ತರಿಗೂ ರವಾನಿಸಬೇಕು

ನೋಟೀಸು.

ಕಾಸರಗೋಡು ಪ್ರಿನ್ಸಿಪಾಲ್ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

ಕ್ರಮ ನಂಬ್ರ $\frac{270}{1920}$

ಲೃತು ಪೂಜಾರಿ ಸಹಾ—ವಾದಿರು

ಮತ್ತು

ಸಂಕಪ್ಪ ರೈ ಸಹಾ—ಪ್ರತಿವಾದಿರು

ಇವರೊಳಗೆ

೫ನೆ ಲಾಗಾಯ್ತಿನ ಪ್ರತಿವಾದಿರು ೧ನೆ ಪ್ರತಿವಾದಿಗೆ ರೂಪಾಯಿ ೮೦೦೦ಕ್ಕೆ ಬರಕೊಟ್ಟ ತಾ ೧೨—೫—೧೯ನೆ ರಿಜಿಸ್ಟ್ರಿ ಇಳಿದಾರವಾರ ದಸ್ತೈವಜು ಸದರಿ ೫ನೆ ಲಾಗಾಯ್ತಿನ ಪ್ರತಿವಾದಿರ ಕುಟುಂಬಕ್ಕೆ ಬಾಧಿಸತಕ್ಕದ್ದಲ್ಲವೆಂತ ಸ್ಥಾಪಿಸುವ ಬಗ್ಗೆ ಕುಟುಂಬದವರ ಪೈಕಿ ಕೆಲವರಾದ ವಾದಿರು ಇಡಿ ಕುಟುಂಬದವರ ಕಡೆಯಿಂದ ಮೇಲ್ಕಂಡ ವ್ಯಾಜ್ಯಮಾಡಿರುತ್ತಾರೆ. ಸದರಿ ಕುಟುಂಬದ ಮೆಂಬರರ ಪೈಕಿ ಯಾರಿಗಾದರೂ ಸದರಿ ವ್ಯಾಜ್ಯದಲ್ಲಿ ಕಕ್ಷಿಯಲ್ಲಿ ಸೇರಿ ವ್ಯವಹರಿಸಬೇಕೆಂತ ಮನಸುಳ್ಳವರು ಮೇಲ್ಕಂಡ ಕೋರ್ಟಿನಲ್ಲಿ ತಾ ೨೪—೯—೧೯೨೦ರಲ್ಲು ಹಾಜರಾಗಿ ಜ್ಯಾಹಿರು ಮಾಡಿಕೊಳ್ಳತಕ್ಕದ್ದು

ಕಾಸರಗೋಡು } S S Rama Rao
ತಾ 17—7—1920 } *Pleader for Plaintiffs*

NOTICE.

[illegible] is hereby given that the preliminary electoral roll for the [illegible] Constituency of the Legislative Assembly will be informally published on the 30th instant by posting up copies thereof in the offices of the Collector, the Revenue Divisional Officers, Tahsildars and Deputy Tahsildars of the District.

South Kanara Collector's Office, Mangalore, 23rd July 1920. } P. K. Nambiar, for Collector & Registration Officer.

ನೋಟೀಸು.

ದಕ್ಷಿಣ ಕನ್ನಡಾ ಸಬೋರ್ಡಿನೇಟ ಕೋರ್ಟಿನಲ್ಲಿ.

ಕ್ರಮ ನಂಬ್ರ $\frac{37}{1920}$

1 ಮಂಜೇಶ್ವರ ಪದ್ಮನಾಭ ಭಟ್ಟ ... }
2 ಎಮ್. ಗೋವಿಂದ ಪೈ. ... } ವಾದಿರು.

ಮತ್ತು

ದಕ್ಷಿಣ ಕನ್ನಡಾ ಜಿಲ್ಲೆಯ ಗೌಡಸಾರಸ್ವತ ಬ್ರಾಹ್ಮಣ ವೃಂದ—ಇವರ ಪರ.

1 ಮಂಜೇಶ್ವರ ನರ್ಸಯ್ಯ ಶ್ಯಾನಭಾಗ, 2 ಮಂಜೇಶ್ವರ ವೈಕುಂಠ ಭಕ್ತ 3 ಅಡಿಗೆ ಶ್ರೀನಿವಾಸರಾವ್ 4 ಮಿಜಾರ ರಾಮಕೃಷ್ಣ ಪೈ. 5 ಉಳ್ಳಾಲ ಸಾಂತಯ್ಯ ಶೆಣೈ. 6 ಮಂಗಳೂರು ನರಸಿಂಹ ಮತ್ತುಭಂಡಾರಿ 7 ಕುಂಬಳೆ ನರಸಿಂಹ ರಾಯಪ್ಪ ನ್ಯಾಕ 8 ಕೆ ಪಿ ಕೇಶವರಾವ್ 9 ಎಚ್ ಗಣಪತಿರಾವ್ 10. ಬಂಟ್ವಾಳ ಮಂಜುನಾಥ ಕಮ್ತಿ 11 ಕೊಚ್ಚಿ ರಾರ ಪದ್ಮನಾಭ ಪೈ 12 ವಕೀಲ್ ಎಮ್. ರಾಮಚಂದ್ರ ಕಾಮತ್ ಕುಂದಾಪುರ 13 ಮೂಲ್ಕಿ ನರಸಿಂಹ ವಾಸುದೇವ ಕಮ್ತಿ 14 ವಕೀಲ ರಾಮ ಹೆಗ್ಗಡೆ ಕಾರ್ಕಳ } ಪ್ರತಿವಾದಿರು

10	[illegible]	[illegible]	[illegible]	[illegible]	[illegible]	[illegible]	6-19	6 53
11	ಬುಧ	[illegible]	[illegible]	[illegible]	[illegible]	[illegible]	6-19	6 52
12	ಗುರು	[illegible]	[illegible]	[illegible]	[illegible]	[illegible]	6-1[illegible]	[illegible] 52
13	ಶುಕ್ರ	[illegible]	[illegible]	[illegible]	[illegible]	[illegible]	6-19	6.[illegible]

ಮಂಗಳೂರಿನ ವಾಯುಸ್ಥಿತಿ.

(ಗಾಣಂತೆಯ ಬುಲಾಯು)

Date ತಾರೀಖು	Temperature ಉಷ್ಣ (ಕಾವು)		Rainfall ಮಳೆ	
	Maximum ಹೆಚ್ಚಿನದು	Minimum ಕಡಿಮೆ	ದಿನದ ಮಳೆ	ಏಪ್ರಿಲ್ ಗಿಂದ
30	87—3	74—9	0—24	...
31	82—2	72—3	1—88	...
1	80—2	71—8	2—46	...
2	87—1	73—1	2—77	...
3	84—8	75—2	0—20	
4	85—9	73—9	0—60	—
5	86—2	75—4	0—04	—

ಷೊಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದು ತೋರೆಯುವುದು [illegible]

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ ಮಂದ, ಮಲಬದ್ಧ, ಕೆಮ್ಮು, ಗಸವೇನೆ, ಬಲಹೀನತೆ, ಕಟ್ಟು ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿರೇಚ, ಮುಕ್ಕಿರ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—5—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 4—13—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 9—3—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಡಬ್ಬಿಗೆ 4 ಆಣೆ ಮಾತ್ರ

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ)—ಲಕ್ಷಾವಧಿ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ನಿಮ್ಮಲ್ಲಿದ್ದರೆ ಪ್ಲೇಗಿಗೆ ಸ್ಪರ್ಧಿಸುವ ಬೇರೆ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ ದಿನಜ್ವರ, ಮೂರರ ನಾಲ್ಕರ ಜ್ವರಗಳು ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ ಸೀಸೆಗೆ ರೂ 1 ರಕ್ಕೆ ಒಂದು ಇನಾಮು

ಶ್ರೀನಿವಾಸತೈಲ—ಪ್ಲೇಗಿನ ಗಡ್ಡೆ ಕರಗುತ್ತದೆ ಸಂಧಿಗಳ ನೋವು ನೀಗಲು ಹೋಗುತ್ತದೆ ಸೀಸೆಗೆ 8 ಆಣೆ ರಕ್ಕೆ ಒಂದು ಇನಾಮು

ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ ಸೀಸೆಗೆ ರೂ 1 ರಕ್ಕೆ ಒಂದು ಇನಾಮು

ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ ಅಜೀರ್ಣದ ಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳುಳ್ಳವರಾಗುತ್ತಾರೆ ಪುಷ್ಟಿಯ ಚಟುವಟಿಕೆ ಸೀಸೆಗೆ ಆಣೆ 12 ರಕ್ಕೆ ಒಂದು ಇನಾಮು ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ. ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು

ದೇವಸು	ಇಂದ	ವರೆಗೆ
	ರೂ. ಆ.	ರೂ. ಆ.
ಮಸ್ಕತಿ ಅಕ್ಕಿ ಮುಡಿ ಗಳ್ಕೆ	8— 0	9— 0
ಗುಡ್ಡು „ „	7— 8	8— 0
ರಾಶಿ ಮುಡಿ ಗಳ್ಕೆ	7— 2	7— 8
ಅವ್ವಲ್ ಬೆಳ್ತಿಗೆ „	9— 8	10— 0
ಗುಡ್ಡು ಬೆಳ್ತಿಗೆ „	8— 8	9— 0
ರಂಗೂನ ಬೆಳ್ತಿಗೆ ಗೋಣೆ ಗಳ್ಕೆ	15— 8	16— 0
ಗೋದಿ ಗೋಣೆ ಗಳ್ಕೆ	25— 0	26— 8
ತೊಗರಿ ಗೋಣೆ ಗಳ್ಕೆ	13— 8	14— 0
ಕಡಲೆ ಗೋಣೆ ಗಳ್ಕೆ	16— 0	18— 0
ಕೊಗರು ಗೋಣೆ ಗಳ್ಕೆ	—	20— 0
ಕೊಂಗಂಡೇಳ ಗೋಣೆ ಗಳ್ಕೆ	30— 0	34— 0
ಉದ್ದು ಗೋಣೆ ಗಳ್ಕೆ	18— 8	19— 8
ಹೆಸರು ಗೋಣೆ ಗಳ್ಕೆ	18— 0	18— 8
ಊರು ಬೆಲ್ಲ ಖಂಡಿ ಗಳ್ಕೆ	105— 0	110— 0
ಉಪ್ಪು ಗೋಣೆ ಗಳ್ಕೆ	4—12	5— 8
ಕೊಬ್ಬರಿ ಖಂಡಿ ಗಳ್ಕೆ	115— 0	125— 0
ಕೊಬ್ಬರಿ ಹಿಂಡಿ ಖಂಡಿ ಗಳ್ಕೆ	37— 0	37— 8
ಎಳ್ಳಿಂಡಿ ಖಂಡಿ ಗಳ್ಕೆ	50— 0	51— 4
ಕೊಬ್ಬರಿ ಎಣ್ಣೆ ಮುಡಿ ಗಳ್ಕೆ	10— 0	11— 8
ಎಳ್ಳೆಣ್ಣೆ ಮುಡಿ ಗಳ್ಕೆ	11— 0	11— 4
ಚಿಮಣಿಎಣ್ಣೆ ಪೆಟ್ಟಿಗೆ ಗಳ್ಕೆ	9— 4	[illegible]
ವೋರಿನ ಸಕ್ಕರೆ ಮುಡಿ ಗಳ್ಕೆ	14— 0	14— 8
ಊರ ಮೆಣಸಿನ ಕಾಯಿ ಮುಡಿ ಗಳ್ಕೆ	8— 8	9— 8
ಸಾಸಿವೆ ಮುಡಿ ಗಳ್ಕೆ	10— 0	10— 8
ಕೊತ್ತುಂಬರಿ ಮುಡಿ ಗಳ್ಕೆ	5— 0	. .
ಶಾಲಿ ಖಂಡಿ ಗಳ್ಕೆ	245— 0	255— 0
ಬೆಳ್ಗೋಟು ಅಡಿಕೆ ಖಂಡಿ ಗಳ್ಕೆ	105— 0	110— 0
ಹಳೆ ಬೆಳ್ಗೋಟು	95— 0	100— 0
ಕಾಳುಮೆಣಸು ಖಂಡಿ ಗಳ್ಕೆ	150— 0	155— 0
ಯಾಲಕ್ಕಿ ಮುಡಿ ಗಳ್ಕೆ	25— 0	30— 0
ಗೇರುಬೀಜ ಮುಡಿ ಗಳ್ಕೆ	3—11	3—12
ಶಕ್ಕರ ಖಂಡಿ ಗಳ್ಕೆ	100— 0	120— 0
ಕಾಂಟ್ರ ಕಣಜ ಮುಡಿ ಗಳ್ಕೆ	24— 4	26— 0
ಕಾಂಟ್ರ ಹಾಸ್ಯಗಳು ಮುಡಿ ಗಳ್ಕೆ	32— 0	34— 0
ಬೀಜ ಬೆಳ್ಳಿ ಸೇರು ಗಳ್ಕೆ	31— 8	. .
ಹಿತ್ತಾಳೆ ಕಣಜ ಮುಡಿ ಗಳ್ಕೆ	24— 0	25— 0

ಒಂದು ಕುಪ್ಪಿಯ ಕ್ರಯ 14 ಆಣೆ. ಮಂಗಳೂರು ಏಜೆಂಟ್,

ಕೇ. ಟೀ. ಡೋಂಗರೆ ಕಂಪೆನಿ, ಡಿ. ಉಲನ್ ಮಾರ್ಟ್, ಮಂಗಳೂರು

ಗಿರಗಾಂ ಮುಂಬಯಿ.

ಯುದ್ಧದ ಉತ್ತರಕಾಂಡ.

ತುರ್ಕಿಯೊಡನೆ ಜಯಶಾಲಿ ಸಂಧಿಕಾರರಿಗೆ ಸಹಿಹಾಕುವುದಕ್ಕೆ ತುರ್ಕಿಯ ಪ್ರತಿನಿಧಿಗಳು ಬಂದು ವಾರ್ಸೆಲ್ಸ್‌ಗೆ ತಲುಪಿದರು. ಅಂತು ತುರ್ಕಿಯು ಸಂಧಿಗೆ ಸಹಿಹಾಕುತ್ತದೆ ಎನ್ನೋಣ, ಆದರೆ, [illegible] ಆದರ ಫಲಾಫಲಗಳೇನು? ಈಗ ತುರ್ಕಿಯ ಸುಲ್ತಾನರು ಕಾನಸ್ಟೆಂಟಿನೋಪಲಿನ ಸುತ್ತುಮುತ್ತಲಿರುವ ಒಂದಿಷ್ಟು ಸ್ಥಳದ ಮೇಲೆ ಮಾತ್ರವೇ ತಮ್ಮ ಶಕ್ತಿಯನ್ನು ನಡೆಸುತ್ತಿದ್ದಾರೆ. ಆಡ್ರಿಯನೋಪಲವನ್ನು ಗ್ರೀಕರು ಹಿಡಿದರು. ಅಲ್ಲಿ ವರೆಗೆ ಅವರ ಅಧಿಕಾರವೇ ಈಗ ನಡೆಯುತ್ತಿದೆ. ಏಷ್ಯಾದ ತುರ್ಕಿಯಲ್ಲಿ ಒಂದು ಕಡೆಯಲ್ಲಿ ಕೆಮಾಲಪಾಶಾ ಇವರು ಸ್ವತಂತ್ರ [illegible] ತುರ್ಕಿಯ ಸುಲ್ತಾನರ ಅಧಿಕಾರವನ್ನು ಯುರೋಪಿನ ಇತರ [illegible] ಸ್ಥಳವನ್ನು ಧಿಕ್ಕರಿಸಿ [illegible] ವಿರೋಧಿಸಿದ್ದಾರೆ. ಇವರನ್ನು ಮುರಿಯಲಿಕ್ಕೆ ಗ್ರೀಕರ ಸೈನ್ಯವು ಆಗಾಗ ಹೋಗಿ ಅವರನ್ನು ಹಿಂದಕ್ಕೆ ಅಟ್ಟುತ್ತಿದೆ.

ಇನ್ನೊಂದು ಕಡೆ ಸಿರಿಯಾ, ಪೆಲೆಸ್ತಿನ, ಮೆಸೋಪೊಟೇಮಿಯ ಇವು ತುರ್ಕಿಯ ಅಧಿಕಾರದಿಂದ ಕಳೆದುಹೋದವು. ಸಿರಿಯದಲ್ಲಿ ಮಿತ್ರಪಕ್ಷದವರೇ ಇಟ್ಟ ಅರಬರ ನೈಜಲನು ಫ್ರೆಂಚರ 'ಮೆಂಡೇಟ'ನ್ನು (ಮೇಲ್ವಿಚಾರಣೆಯನ್ನು) ಒಪ್ಪದೆ ಇದ್ದುದರಿಂದ ಫ್ರೆಂಚರು ಅವನನ್ನು ಪಟ್ಟದಿಂದ ತಳ್ಳಿಹಾಕಿರುವರು ಎಂದು ಪ್ರಕಟಿಸಿದ್ದಾರೆ. ಆತನ ತಂದೆ ಹುಸ್ಸೇನರು ಇದನ್ನು ಕೇಳಿ — ಇವರೂ ಬ್ರಿಟಿಷರ ಮಿತ್ರರು — ತಮ್ಮ ಪ್ರತಿನಿಧಿಯನ್ನು ಫ್ರಾನ್ಸ ದೇಶದ ಹಿರಿಯರಲ್ಲಿ ಕಳಿಸಿದ್ದಾರೆ. ಅಂತು ಹೆಜಾಜವಾಗಲಿ ಮೆಸೊಪೊಟೇಮಿಯವಾಗಲಿ ಸಿರಿಯವಾಗಲಿ ಯಾವದೇ ಕಾರಣದಿಂದಲಾದರೂ ಮಿತ್ರಪಕ್ಷದವರ ಮೆಂಡೇಟನ್ನು ಕ್ಷೇಮಕರವೆಂದು ಎಣಿಸದೆ ತಮ್ಮ ಸ್ವಾತಂತ್ರ್ಯ ಪಾಲನಕ್ಕಾಗಿ ಮಿತ್ರಪಕ್ಷದವರನ್ನು ಎದುರಿಸುತಿದ್ದಾವೆ. ಇವರನ್ನು ಒಮ್ಮೆ ಬಗ್ಗಿಸಿ, ಅಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡಿ, ಆ ಮೇಲೆ ಅವರಿಗೆ ಕಿರುಕುಳವಾಗದೆ ಆ ಪ್ರದೇಶವನ್ನು ಬಿಟ್ಟುಹೋಗಲಿದ್ದೇವೆ ಎಂದೂ ಫ್ರೆಂಚರೂ ಬ್ರಿಟಿಷರೂ ಪ್ರಕಟಿಸುತಿದ್ದಾರೆ. ಆದರೆ ಈ ವ್ಯವಸ್ಥೆಯನ್ನು ಕೊನೆಗಾಣುವ ಸಮಯಾಗವು ಯಾವ ಕಾಲದಲ್ಲಿ ಈ ಜನಾಂಗಗಳಿಗೆ ಬರಬೇಕು ಎಂಬುದನ್ನು ನಿರ್ಧರಿಸಲು ಆವಶ್ಯವಾಗಿದೆ. ಪರೋಪಕಾರದ ಈ ಉದ್ದೇಶಕ್ಕಾಗಿ ಮಿತ್ರಪಕ್ಷದವರು ಇಷ್ಟು ದೊಡ್ಡ ಜವಾಬ್ದಾರಿಯನ್ನು ವಹಿಸಿ, ಹೇರಳ ಖರ್ಚುಮಾಡಿಸಲು ಮುಂದುವರಿದದ್ದು ಆಯಾ ಜನಾಂಗಗಳಿಗೆ ಸೇರಿದ ಪ್ರಜಾಮುಖಂಡರಿಗೂ, ವರ್ತಮಾನಪತ್ರಿಕೆಗಳಿಗೂ ವಿಶೇಷ ರುಚಿಸಲಿಲ್ಲವೆಂದು ಇಂಗ್ಲೀಷ ಪತ್ರಿಕೆಗಳಿಂದ ಕಂಡುಬರುತ್ತದೆ. ಆದರೆ ಪಾಪ! ಪರೋಪಕಾರದ ದೀಕ್ಷೆಯನ್ನು ಕಟ್ಟಿಕೊಂಡ ಈ ಮಿತ್ರಪಕ್ಷದವರಿಗೆ ಜನಾಪವಾದ ಭೀತಿಯಲ್ಲದೆ ತಮ್ಮ ಧ್ಯೇಯವನ್ನು ಕಾಯಬೇಕೆಂಬ ತವಕವಿದ್ದಂತೆ ತೋರುತ್ತದೆ.

ಇನ್ನೊಂದು ಕಡೆ ಯೆಹೂದಿಯರು ಈಗ ಎರಡು ಸಾವಿರ ವರ್ಷಗಳಿಗಿಂತ ಹಿಂದೆ ತಮ್ಮ ಧರ್ಮಬೋಧೆಯ ಗ್ರಂಥಗಳಲ್ಲಿ ನಿರ್ಧರಿಸಿದ ಮೇರೆಗೆ ತಮ್ಮ ಮೋಕ್ಷಸ್ಥಾನವನ್ನು ಸೇರಿ ಯೆರೂಸಲೆಮನ್ನು ಜೀರ್ಣೋದ್ಧಾರಮಾಡಬೇಕೆಂಬ ಲವಲವಿಕೆಯಿಂದ ಅಲ್ಲಲ್ಲಿ ಸಭೆಗಳು ಸೇರಿ ಯೆಹೂದಿಯರು ಬ್ರಿಟಿಷ ಛತ್ರದ ಕೆಳಗೆ ಮತ್ತು ಲೀಗ್ ಒಫ್ ನೇಶನ್ಸಿನ ಸಂದೇಶದ ಮೇರೆಗೆ ಹಣಸಂಗ್ರಹ ಮಾಡುತಲಿದ್ದು ಪೆಲೆಸ್ತೀನಕ್ಕೆ ಹೊರಡುವುದಕ್ಕೆ ಶುಭ ಎತ್ತ ಸಮಯ ಎದುರು ನೋಡುತಿದ್ದಾರೆ.

ಬೊಲ್ಶೆವಿಕರು ಪೋಲೆಂಡದ ದಾಳಿಯನ್ನು ಮುರಿದು ಅವರ ರಾಜಧಾನಿಯ ಕಡೆಗೆ ಕಾಲುಚಾಚುತಲಿದ್ದು ಆ ನಡುವೆ ಪೋಲೆಂಡದೊಡನೆ ಕೈಗೆ ಅಂಟಿದ ಸಂಧಿಯ ನಟನೆಯನ್ನು ತೋರಿಸುತ್ತಿದ್ದಾರೆ.

ಐರ್ಲೆಂಡ — ಇಲ್ಲಿಯ ಚಳವಳಿಯು ಲವಲೇಶವಾದರೂ ಕಡಿಮೆಯಾದಂತೆ ತೋರುವುದಿಲ್ಲ. ಈಗ ಬ್ರಿಟಿಷರ ಬೇರೆ ವಸಾಹತುಗಳಿಗೆ ಕೊಟ್ಟ ವಿಧದ ಅಧಿಕಾರ ಸ್ವಾತಂತ್ರ್ಯವನ್ನು ಐರ್ಲೆಂಡಕ್ಕೂ ಕೊಟ್ಟು ಅದನ್ನು ಬ್ರಿಟಿಷ ವಸಾಹತುಗಳ ಸರದಲ್ಲಿಯೇ ಸೇರಿಸುವಂತೆ ಮಾಡಬೇಕೆಂದು ಐರ್ಲೆಂಡದ ವರ್ತಕ ವೃಂದದವರು ಬ್ರಿಟಿಷ ಮಂತ್ರಿವರ್ಯರೊಡನೆ ಭೇಟಿಮಾಡಲಿಕ್ಕಿರುವರು. ಆದರೆ ಸಿನ್‌ಫೇನ್ ಕೂಟದವರು ಮಾಡುತ್ತಿರುವ ಹಾವಳಿಯು ಕಡಿಮೆಯಾಗಲಿಲ್ಲ. ಬಹಿರಂಗವಾಗಿ ಪೋಲಿಸ್ ಮತ್ತು ಲಶ್ಕರದವರಿಗೆ ಕೊಲೆಮಾಡುವ ಕಕ್ಷಿಯನ್ನು ಅವರು ಇನ್ನೂ ಬೆಳಸುತ್ತಲೇ ಇದ್ದಾರೆ.

ಡಾಯರ್ ಮಹಾತ್ಮೆ — ಈ ಮಹಾತ್ಮೆಯ ವ್ಯಾಖ್ಯಾನವು ಇನ್ನೂ ಮುಗಿದಂತೆ ತೋರುವುದಿಲ್ಲ. ಹಂಟರ್ ಕಮಿಟಿ ಇಂಡಿಯಾ ಸರಕಾರ, ಬ್ರಿಟಿಷ ಕೆಬಿನೆಟು (ಮಂತ್ರಿಕೂಟ) ಆರ್ಮಿ ಕಮಿಟಿ ಇವೆಲ್ಲವೂ ಡಾಯರನ ಕೃತ್ಯವನ್ನು ಅಮಾನುಷವೆಂದು ಎಣಿಸುವಂತೆ ಇನ್ನೊಂದು ಪಕ್ಷದವರೂ ಎಣಿಸುತಿದ್ದು ಚಳವಳಿಯು ಇನ್ನೂ ತೀರಲಿಲ್ಲ. ಒಂದು ಕಡೆಯಲ್ಲಿ 'ಅಮಾನುಷ' ಎಂಬುದನ್ನು ಮನುಷ್ಯನಿಗೆ — ಮುಖ್ಯವಾಗಿ ನಾಗರಿಕ ಸಂಸ್ಥಾನದ ಪ್ರತಿನಿಧಿಯಾದವನಿಗೆ ಅಯೋಗ್ಯವಾದ ಕೃತ್ಯವೆಂದು ತಿಳಿಯಲಿಕ್ಕೆಂದಿದ್ದರೂ ಬ್ರಿಟಿಷ ಹೌಸ್ ಒಫ್ ಲೋರ್ಡ್ಸ ಸಭೆಯವರೂ ಇದು ಅಮಾನುಷ ಅಂದರೆ ಮನುಷ್ಯನ ಶಕ್ತಿಗೆ ಮೀರಿದ ಅಸಾಮಾನ್ಯ ಕೃತ್ಯ, ಇದರಿಂದಲೇ ಬ್ರಿಟಿಷ ಜನಗಳ ಕೊಲೆಯು ಸಂಖ್ಯೆಯು ಹೆಚ್ಚದೆ ಪಂಜಾಬದಲ್ಲಿ ಶಾಂತಿಯುಂಟಾಯಿತು ಎಂದು ಬಹುಮತದಿಂದ ನಿಶ್ಚಯಿಸಿದರು. ಇಷ್ಟೇ ಅಲ್ಲ, ಡಾಯರನ ಸಹಾಯಾರ್ಥವಾಗಿ ಈಗ ಒಂದು ಫಂಡು ಏರ್ಪಡುತ್ತಿದೆ. ಹಿಂದುಸ್ಥಾನದಲ್ಲಿ ಬಿಳಿಯರೊಳಗೆ ಹಲವರು ಸಹ ಈ ಡಾಯರನ ಕೃತ್ಯವು ಬ್ರಿಟಿಷ ಯಶಸ್ಸಿಗೆ ಲಾಂಛನಪ್ರಾಯವಾಗಿದೆ ಎಂದರೂ ಹಿಂದುಸ್ಥಾನದಲ್ಲಿ ಬ್ರಿಟಿಷರ ಎಸೋಸಿಯೇಶನು ಈ ಕುರಿತು ತಮ್ಮ ಅಭಿಪ್ರಾಯವನ್ನು ಬ್ರಿಟಿಷ ಸರಕಾರದವರಿಗೆ ತಿಳಿಸುವಾಗ ಡಾಯರರು ಅನ್ಯಾಯಹೊಂದಿದ ಧೀರರು, ಡಾಯರನನ್ನು ಕೆಲಸದಿಂದ ನಿವೃತ್ತಿ ಮಾಡಿಸಿದ್ದು ಸರಿಯಲ್ಲ, ಡಾಯರನ ಸಾಹಸದಿಂದಲೇ ದಂಗೆಯು ಶಾಂತಿಯಾಯಿತು, ಬ್ರಿಟಿಷ ಮಂತ್ರಿಕೂಟದವರ ಈ ಸಮ್ಮಂಧದ ಧೋರಣವು ಅನೇಕಾನೇಕ ಬ್ರಿಟಿಷ ನವುಕರರಿಗೆ ತಮ್ಮ ಕೆಲಸದಲ್ಲಿ ಜಿಗುಪ್ಸೆ ಹುಟ್ಟಿಸಿದೆ ಎಂದು ತಿಳಿಸಿದ್ದಾರೆ. ಡಾಯರರಿಗೆ ಕೆಲಸಕೊಡಿಸಿದ್ದ ಸರ್ ಮೈಕೇಲ್ ಓಡಿಯರ ಸಾಹೇಬರು ಪಂಜಾಬ ಗಲಾಟೆಗೆ ಬೇರೆ [illegible] ಅವನ್ನು ಹುಲುಸಾಗಿ ಬೆಳಸಿದ್ದು ಸಾಲದೆ 'ಈಗ ಅನೇಕಾನೇಕ ಇಂಡಿಯನ್ ಸಿವಿಲಿಯನರು ತಮ್ಮ ಹುದ್ದೆಗಳಿಗೆ ರಾಜಿನಾಮೆ ಕೊಡಲಿಕ್ಕೆ ಇದ್ದಾರೆ' ಎಂದು ತಾನು ತಿಳಿದಂತೆ ಬ್ರಿಟಿಷ ವರ್ತಮಾನಪತ್ರಿಕೆಗಳಿಗೆ ಬರೆಯುತಿದ್ದಾರೆ. ಇದನ್ನು ನಾವು ನಂಬುವುದಿಲ್ಲ. ಯಾಕೆಂದರೆ ಎಷ್ಟು ಏಟಾದರೂ ಹಿಂದುಸ್ಥಾನದಲ್ಲಿ ಬಿಳಿ ನವುಕರರಿಗೆ ಸಿಗುವ ಸಂಬಳದ ಯಾವ ಭಾಗದಲ್ಲಿಯೂ ಸಿಗುವುದಿಲ್ಲ. ಅದಲ್ಲದೆ ಈಗ ಅವರ ಸಂಬಳ, ರಜೆ, ಪೆನ್ಶನ್ ಮುಂತಾದ್ದನ್ನು ಹೆಚ್ಚಿಸಿ ಅಧಿಕ ಸೌಕರ್ಯ ಸವಲತ್ತುಗಳನ್ನು ಅವರಿಗೆ ಕೊಟ್ಟಿರುವಾಗ ಓಡೀಯರ ಮಾತಿನಂತೆ ಅವರು ರಾಜಿನಾಮೆ ಕೊಡಲಿಕ್ಕಿದ್ದಾರೆ ಎಂದು ಹೇಳುವ ಮಾತು ವಿಶೇಷ ವಿಶ್ವಸನೀಯವಲ್ಲ. ಹೀಗಿದ್ದರೂ ಮನೋದಾರ್ಢ್ಯ ವಿಶೇಷವಿರುವ ಬ್ರಿಟಿಷರು ತಮ್ಮ ಗೌರವದ ಕಡೆಗೆ ಮನಸ್ಸಿಟ್ಟು ರಾಜಿನಾಮೆ ಕೊಟ್ಟರೆ ಹಿಂದುಸ್ಥಾನವು ಎಷ್ಟರ ಮಟ್ಟಿಗೆ ತಲೆ ಕೆಳಗಾಗುವುದು ಎಂದು ನೋಡಬೇಕಷ್ಟೆ ಇದೆ.

ಒಳದೇಶ ವರ್ತಮಾನ.

ಹೊರನಾಡು — ಕಲಕತ್ತೆಯ [illegible] ಗಲಾಟೆಯಿಲ್ಲದೆ ನಡೆಯಿತು ಎಂದು ಹಲವು ಪ್ರಮುಖ ನಗರಗಳಿಂದ ವರ್ತಮಾನ ಪತ್ರಿಕೆಗಳಿಗೆ ತಂತಿ ವರ್ತಮಾನವಿದೆ.

ನಂದಿದುರ್ಗದ ಸಹಕಾರ ಸಂಘ — ಇಲ್ಲಿ (ಮೈಸೂರ) ಒಬ್ಬ ಗುಮಾಸ್ತೆಯು ಒಳಸಂಚಿನಿಂದ ಸುಮಾರು ೨೪,೦೦೦ ರೂಪಾಯಿ ಮಾಯವಾಯಿತು. ಈಗ ಈ ಸಂಘವನ್ನು ಮುಚ್ಚಿ ಮೆಂಬರುಗಳಿಗೆ ಪಾಲುಬಂದ ಪಾಲವನ್ನು ಹಂಚಿಕೊಡಬೇಕೆಂದು ಅದರ ಮಹಾ ಸಭೆಯಲ್ಲಿ ನಿರ್ಣಯವಾಯಿತು. ರೂಪಾಯಿಗೆ ೧೫ ಆಣೆಗಿಂತ ಸ್ವಲ್ಪ ಹೆಚ್ಚಿಗೆ ಸಿಕ್ಕೀತು ಎಂದು ಒಡೆಯರು ಅಭಿಪ್ರಾಯ ಪಡುತ್ತಾರೆ.

ಇಂಟರಮೀಡಿಯೆಟ ಮತ್ತು ಬಿ. ಎ. ಪರೀಕ್ಷೆ — ಮದ್ರಾಸು ಯೂನಿವರ್ಸಿಟಿಯವರು ಹಂಗಾಮಿಯಾಗಿ ಈ ವರ್ಷ ಈ ಎರಡು ಪರೀಕ್ಷೆಗಳನ್ನು ಇದೇ ಒಕ್ಟೋಬರ ತಿಂಗಳಲ್ಲಿ ಜರಗಿಸಲಿಕ್ಕಿದ್ದಾರೆ. ಕಳೆದ ಪರೀಕ್ಷೆಯಲ್ಲಿ ತುಂಬಾ ವಿದ್ಯಾರ್ಥಿಗಳ ಫೇಲಾದುದೇ ಈ ಹಂಗಾಮಿ ಏರ್ಪಾಡಿಗೆ ಕಾರಣವಾಯಿತು. ಈ ರೀತಿಯಾಗಿ ಈ ಪರೀಕ್ಷೆಗಳು ಮುಂದಿನ ವರ್ಷಕ್ಕೆ ಎರಡಾವರ್ತಿ ಆಗುವವೆಂಬಂತೆ ಪ್ರಸ್ತಾಪವಿದೆ.

ಮದ್ರಾಸು ಬೇಂಕು — ಇದೇ ಕಳೆದ ಜೂನು ೩೦ಕ್ಕೆ ಅಂತ್ಯವಾಗುವ ವರ್ಷಾರ್ಧದಲ್ಲಿ ಮದ್ರಾಸ ಬೇಂಕಿನವರಿಗೆ ೧೩|| ಲಕ್ಷ ರೂಪಾಯಿ ಲಾಭ [illegible] ಹಿಂದಿನ ಶಿಲಕು ಕೂಡಿ [illegible] ಸಾವಿರ ರೂಪಾಯಿ [illegible] ಸೇಕಡಾ ೧೨ರಂತೆ ಪಾಲುದಾರರಿಗೆ [illegible] ಸೇಕಡಾ ೪ರಂತೆ ಬೋನಸ, ೪ ಲಕ್ಷ ರೂಪಾಯಿ ರಿಸರ್ವ ಫಂಡಿಗೆ, [illegible] ಸಾವಿರ ರೂಪಾಯಿ ಮುಂದಿನ ವರ್ಷಕ್ಕೋಸ್ಕರ ಶಿಲಕಾಗಿ ಉಳಿಸಲಾಯಿತು. [illegible] ಈ ವರೆಗೆ ಇಷ್ಟು ಹೆಚ್ಚಿನ ಮುನಾಫೆ ಸಿಕ್ಕಿದ್ದಿಲ್ಲ.

ಸರಕಾರಿ ನವುಕರರಿಗೆ ಎಲೋವೆನ್ಸ್ — ರೂಪಾಯಿ ೨೦೦ಕ್ಕೆ ಮೀರದ ಸಂಬಳವುಳ್ಳವರಿಗೆ ಸೇಕಡಾ [illegible]ರಂತೆ ಹೆಚ್ಚಿಸಿಕೊಟ್ಟ ಎಲೋವೆನ್ಸ್ ಹಾಗೆಯೇ ಇರುವುದು. ೨೦೦ರಿಂದ [illegible] ವರೆಗಿನ ಸಂಬಳದವರಿಗೆ ಸದ್ಯ ತಪ್ಪಿದ್ದಿಲ್ಲ. ಆದರೆ [illegible] ವರೆಗೆ ಸಂಬಳ ಇದ್ದವರಿಗೆ ಸೇಕಡಾ [illegible]ರಷ್ಟು ಎಲೋವೆನ್ಸ್, [illegible] ಸಂಬಳದವರಿಗೆ ಸೇಕಡಾ [illegible]ರಷ್ಟು, ಆದರೆ ಕನಿಷ್ಠಪಕ್ಷಕ್ಕೆ [illegible] ರೂಪಾಯಿ ಎಲೋವೆನ್ಸ್ ಸಿಗಬೇಕಾಗುವುದು. [illegible]ಕ್ಕೆ ಮೀರಿದ ಸಂಬಳದವರಿಗೆ ಸೇಕಡಾ [illegible]ರಷ್ಟು ಎಲೋವೆನ್ಸ್, ಅಥವಾ ಕನಿಷ್ಠಪಕ್ಷಕ್ಕೆ [illegible] ರೂಪಾಯಿ ಎಲೋವೆನ್ಸ್ ರೂ. [illegible]ಕ್ಕೆ ಮೀರಿದ ನೋನಗಜೆಟೆಡ್ ಒಫಿಸರರಿಗೆ ಸೇಕಡಾ [illegible]ರಂತೆ ಎಲೋವೆನ್ಸ್ ಕನಿಷ್ಠಪಕ್ಷ ರೂ. ೪ ಸಿಗಬೇಕೆಂದು ಸರಕಾರದವರ ಹುಕುಂ ಬಂದಿದೆ.

ದಕ್ಷಿಣ ಕನ್ನಡ.

ಪುತ್ತೂರು. — ರೆವಿನ್ಯೂ ಡಿವಿಜನಲ್ ಆಫೀಸರು ಇದೇ ೧೩ನೆ ತಾರೀಕಿನಲ್ಲಿ ಬಾರ್ಕೂರಿಗೆ ಹೋಗಿ ೧೪, ೧೫ನೇ ತಾರೀಕುಗಳಲ್ಲಿ ಅಲ್ಲಿದ್ದು, ೧೬ನೆಗೆ ಬೆಳ್ತಂಗಡಿಗೂ ೧೭ಕ್ಕೆ ಮಂಗಳೂರಿಗೂ, ೧೮ಕ್ಕೆ ಮಂಜೇಶ್ವರಕ್ಕೂ ಹೋಗಿ ಅಲ್ಲಿಂದ ೧೯ಕ್ಕೆ ಪುತ್ತೂರಿಗೆ ವಾಪಾಸ ಬಂದು ೨೦ರಿಂದ ೨೮ರ ವರೆಗೆ ಪುತ್ತೂರಲ್ಲಿ ಇರುವರು.

ಪಾಣೆಮಂಗಳೂರು — ಇಸ್ಲಾಮ ಪ್ರಪಂಚಕ್ಕೆ ಮುಖ್ಯವಿನವಾದ ನಿನ್ನೆ ಇಲ್ಲಿ ಸಹಾ ಮುಸಲ್ಮಾನರು ಅಂಗಡಿಗಳನ್ನು ಮುಚ್ಚಿ ದೇವರೊಡನೆ ತುರ್ಕೀ ಖಿಲಾಫತ ವಿಷಯಕ್ಕಾಗಿ ಮಾ ಕೈಕೊಳ್ಳುವದಾದರಲ್ಲದೆ ಹಿಂತಾಳ ವ್ರತವನ್ನು ಸಮಾಧಾನದಿಂದ ಆಚರಿಸಿ ಹಾಗು ಖಿಲಾಫತಿಗೆ ಬ್ರಿಟಿಷರು ರಾಜಕೀಯದಲ್ಲಿ ಬದಲಾಯಿಸುವ ಹಾಗೆ ದೇವರೊಡನೆ ಸಹಾ ಮುಸಲ್ಮಾನರು ಬೇಡಿಕೊಳ್ಳುವದಾದರು.

ಕಾಸರಗೋಡು. — ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ಇಲ್ಲಿಯ 'ನೋನ್‌ಗಜೆಟೆಡ್' ಆಫೀಸರರ ಅಧಿವೇಶನವು ಇಲ್ಲಿಯ ಸಬ್ ಮೆಜಿಸ್ಟ್ರೇಟರಾದ ಮ|| ರಾ|| ಮಂಜೇಶ್ವರ ರಾಘವೇಂದ್ರರಾಯರವರ ಅಧ್ಯಕ್ಷತೆಯಲ್ಲಿ ೩೦ನೆ ತಾರೀಕು ಆದಿತ್ಯವಾರ ದಿನ ಸಾಯಂಕಾಲ [illegible] ಘಂಟೆಗೆ ಜರಗಿತು. ಈ ದಿನದ ಈ ಸಭೆಯಲ್ಲಿ — ನೋನ್‌ಗಜೆಟೆಡ್ ನೌಕರರ ಸಂಬಳವನ್ನು ಮುಂಬಾಯಿ ಸಂಸ್ಥಾನದಲ್ಲಿ ಏರಿಸಿದಂತೆ ಈ ಸಂಸ್ಥಾನದಲ್ಲಿಯೂ ಅದೇ ಪ್ರಮಾಣದ ಮೇಲೆ ಏರಿಸಬೇಕೆಂದು ಕೇಳಿಕೊಂಡಲ್ಲಿ ಮುಂಬಾಯಿ ಸಂಸ್ಥಾನದಲ್ಲಿ ವರ್ಷ ಖರ್ಚು ಕಳೆದು [illegible] ಲಕ್ಷ ರೂಪಾಯಿ ಉಳಿಯುವಂತಿದೆ, ಆದರೆ ಮದ್ರಾಸಿನಲ್ಲಿ ಬರೇ [illegible] ಲಕ್ಷ ರೂಪಾಯಿಗಳು ಮಾತ್ರ ಉಳಿಯುತ್ತವೆ ಎಂಬುದಾಗಿ ಸರಕಾರದವರು ಕೊಟ್ಟ ಉತ್ತರವು ಅಲ್ಲದೆ, ಸಾವಿರಗಟ್ಟಲೆಯಲ್ಲಿ ಸಂಬಳ ಸಿಗುವ ನೌಕರರಿಗೆ ಮಾತ್ರ, ಸಂಬಳವನ್ನು ಒಂದಕ್ಕೆ ಮೂರು ಇಮ್ಮಡಿಯಾಗಿ ಹೆಚ್ಚಿಸಿ, ಗರೀಬರಾದ ನೌಕರರಿಗೆ ಮಾತ್ರ ಈ ನಮೂನೆಯು ವಿಚಾರಕರವಾದ ಉತ್ತರವನ್ನಿತ್ತುದು ಎಷ್ಟುಮಾತ್ರಕ್ಕೂ ನ್ಯಾಯವಲ್ಲವೆಂದೂ, ಈಗ ಸರಕಾರದವರಿಗೆ ಇರುವ ಅನೇಕ ಅನಾವಶ್ಯಕ ಖರ್ಚುಗಳನ್ನು ತಕ್ಕಮಟ್ಟಿಗೆ ಕಡಿಮೆ ಮಾಡಿ, ಬಡನೌಕರರ ಗೋಳನ್ನು ನಿವಾರಣೆಮಾಡಬೇಕಾಗಿಯೂ ಸರಕಾರದವರನ್ನು ಕೇಳಿಕೊಳ್ಳುವಂತೆ ಠರಾವುಗಳನ್ನು ಪಾಸುಮಾಡಿ, ಆಮೇಲೆ ಈ ಎಸೋಸಿಯೇಶನಿನ ಅಸಿಸ್ಟಾಂಟ ಸೆಕ್ರೆಟರಿಗಳಾದ ಪಿ. ನಾರಾಯಣನಾಯಕರವರು ರಜೆಯ ಮೇಲೆ ಇರುತ್ತಿರುವುದರಿಂದ, ಇವರ ಬದಲಿಗೆ ತಾತ್ಕಾಲಿಕ ಅಸಿಸ್ಟಾಂಟ ಸೆಕ್ರೆಟರಿಗಳನ್ನಾಗಿ ಇಲ್ಲಿಯ ತಾಲೂಕು ಖಚೇರಿಯ ಹೆಡ್ ಕ್ಲಾರ್ಕರಾದ [illegible] ಶ್ರೀನಿವಾಸರಾವರನ್ನು ನೇಮಿಸಿ, ಇವರ ಬದಲಿಗೆ ಇಲ್ಲಿಯ ತಾಲೂಕು ಹೆಡ್ ಎಕೌಂಟಂಟ್ ಮ|| ರಾ|| ಎಸ್. ರಾಮಕೃಷ್ಣ ಕಾಮತರನ್ನು ಕಾರ್ಯನಿರ್ವಾಹಕ ಸಭೆಯ ಮೆಂಬರರನ್ನಾಗಿ ಮಾಡಿ, ಈ ದಿನ ಅಧ್ಯಕ್ಷಸ್ಥಾನವನ್ನು ವಹಿಸಿದ ಮ|| ರಾ|| ಎಮ್. ರಾಘವೇಂದ್ರರಾಯರವರು ಕೂಡಾ ರಜೆಯಮೇಲೆ ಹೋಗುತ್ತಾರಾದಕಾರಣ, ಇವರು ಈ ಸಮಾಜಕ್ಕಾಗಿ ಕೊಟ್ಟ ಅಪಾರವಾದ ಉತ್ತೇಜನಕ್ಕೂ ಪಟ್ಟ ಸಾಹಸಕ್ಕೂ ಇವರಿಗೆ ಧನ್ಯವಾದವನ್ನಿತ್ತು ಸಭೆಯು ಮುಕ್ತಾಯಹೊಂದಿತು. ಒಕ್ಕಟ್ಟಿನಲ್ಲಿ ಯಾವಾಗಲೂ ಬಲವಿದೆ.

ಲೋಕಲ್ ಮತ್ತು ಮುನ್ಸಿಪಲ್ ಕೊನ್ಫರೆನ್ಸ್.

ಈ ಕೊನ್ಫರೆನ್ಸು ಕಳೆದ ತಿಂಗಳ ೨೧ನೆ ತಾರೀಕಿಗೆ ಸರ್ ಪಿ. ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ ಮದ್ರಾಸಿನಲ್ಲಿ ಜರಗಿತು. ಇದರಲ್ಲಿ ಈ ಕೆಳಗಿನ ಇತ್ಯರ್ಥಗಳಾದವು —

ಲೋಕಲ್ ಫಂಡು ಮತ್ತು ಮ್ಯುನ್ಸಿಪಲ್ ಆಸ್ಪತ್ರೆಗಳ ಅಸಿಸ್ಟಾಂಟ ಸರ್ಜನರು ಈಗಿನಂತೆ ಸರಕಾರ ನವುಕರರಾಗಿದ್ದು, ಅವರನ್ನು ಆಯಾ ಸಂಸ್ಥೆಯ ಕೈಕೆಳಗೆ ಇಟ್ಟಾಗ, ವರ್ಗಾವರ್ಗಿ ಮಾಡುವ ಮುಂಚೆ ಆಯಾ ಸಂಸ್ಥೆಯವರ ಅನುಮತಿಯನ್ನು ಸರ್ಜನ ಜನರಲರು ಪಡೆಯಬೇಕು. ಈ ವರ್ಗಾವರ್ಗಿಯ ಸಂಬಂಧದ ಪ್ರಯಾಣ ಚಿಕ್ಕಿಯನ್ನು ಸರಕಾರದವರು ತೆರಬೇಕು. ಹೆಲ್ತ ಆಫೀಸರುಗಳ ಸೇವಕರಿಗೂ ಇದೇ ಕ್ರಮವನ್ನು ಅನುಸರಿಸಬೇಕು. ಸೆನಿಟರಿ ಇನ್ಸ್‌ಪೆಕ್ಟರುಗಳನ್ನು ಸರಕಾರ ಸಿಬಂದಿಯಾಗಿ ಮಾಡುವ ಅಗತ್ಯವಿಲ್ಲ. ಬೋರ್ಡಸೆಕೆಂಡರಿ ಶಾಲೆಗಳ ಹೆಡ್ ಮಾಸ್ತರುಗಳನ್ನು ಸರಕಾರ ಸಿಬಂದಿಯಲ್ಲಿ ಸೇರಿಸಿ ಅವರ ಸಂಬಳವನ್ನು ಬೋರ್ಡಿನಿಂದ ಅಥವಾ ಮ್ಯುನ್ಸಿಪಾಲಿಟಿಯಿಂದ ಮೆಡಿಕಲ್ ಇಲಾಖೆಯಂತೆ ತೆರುವ ಹಾಗೆ ಮಾಡಿ, ಅವರ ವರ್ಗಾವರ್ಗಿಯ ಖರ್ಚನ್ನು ಸರಕಾರವು ಸಹಿಸಿಕೊಳ್ಳಬೇಕು. ಸೆಕೆಂಡರಿ ಶಾಲೆಗಳ ಇತರ ಉಪಾಧ್ಯಾಯರನ್ನು ಸರಕಾರ ಸರ್ವಿಸಿಗೆ ಸೇರಿಸದಿದ್ದರೂ ಹೆಡ್‌ಮಾಸ್ತರಗಳನ್ನು ಇಂಥವರೊಳಗೇ ವಾಡಿಕೆಯಾಗಿ ಆರಿಸಬೇಕು.

ಡಿಸ್ಟ್ರಿಕ್ಟ ಬೋರ್ಡ ಎಂಜಿನಿಯರ್ ಮತ್ತು ಅಸಿಸ್ಟಾಂಟ ಎಂಜಿನಿಯರುಗಳನ್ನೂ ಮ್ಯುನ್ಸಿಪಲ್ ಎಂಜಿನಿಯರುಗಳನ್ನೂ ಒಂದೆ ಸರ್ವಿಸಿಗೆ ಮಾಡಿ ಆಯಾ ಸಂಸ್ಥೆಯ ಪ್ರಮಾಣಾನುಕೂಲಕ್ಕೆ ಸರಿಯಾದ ವರ್ಗದವರನ್ನು ಆಯಾ ಸಂಸ್ಥೆಗೆ ಒದಗಿಸಿಕೊಡಬೇಕು. ಇತರ ಎಂಜಿನಿಯರಿಂಗ್ ಸಿಬಂದಿಯನ್ನು ಆಯಾ ಸಂಸ್ಥೆಯ ನವುಕರರಾಗಿಯೇ ಇರಗೊಡಿಸುವುದು ಒಳ್ಳೇದು. ಸರಕಾರ ಸಿಬಂದಿಯಾಗಿ ಸೇರದ ನವುಕರರು ಬೋರ್ಡ ಅಥವಾ ಮ್ಯುನ್ಸಿಪಾಲಿಟಿಯ ಕೆಳಗೆ ಕೆಲಸ ಮಾಡುವಾಗ ಅವರ ಸಂಬಳ ಪೆನ್ಶನ್ ಮುಂತಾದವುಗಳನ್ನು ಕೊಡುವದಕ್ಕೆ ಸರಕಾರದಿಂದ ಸಾಕಷ್ಟು ದ್ರವ್ಯ ಸಹಾಯವು ಸಿಗಬೇಕು.

ಸಂಬಳದ ದರಗಳು.

ಎಂಜಿನಿಯರ ಸರ್ವೀಸು

ಸಬ್ ಓವರ್ಸಿಯರು	ರೂ.	೫೦ — ೪ — ೮೦
ಓವರ್ಸಿಯರು		೮೦ — ೫ — ೧೫೦
ಸುಪರ್‌ವೈಸರು		೧೫೦ — ೧೦ — ೨೫೦
ಅಸಿಸ್ಟಾಂಟ ಎಂಜಿನಿಯರು		೨೦೦ — ೨೦ — ೪೦೦
ಎಂಜಿನಿಯರು		೫೦೦ — ೫೦ — ೧೦೦೦

ಇದಲ್ಲದೆ ೧೨೦೦ ರೂ. ಸಂಬಳದ ಮೂರು ಹುದ್ದೆಗಳು ಈ ಸೈಕಿ ಅತಿ ಯೋಗ್ಯರಾದವರಿಗೆ ಸಿಗಬೇಕು.

ಆಫೀಸು ಸಿಬಂದಿ

೧ನೆ ಗುಮಾಸ್ತ	ರೂ.	೭೦ — ೫ — ೧೨೫
೨ನೆ ಗುಮಾಸ್ತ		೫೦ — ೪ — ೭೦
೩ನೆ ಗುಮಾಸ್ತ		೩೦ — ೨ — ೫೦

ಶಾಲಾ ಸಂಬಂಧದ ಸಿಬಂದಿ

ಹೆಡ್‌ಮಾಸ್ತರರು	ರೂ.	೨೦೦ — ೧೦ — ೩೦೦
ಎಲ್. ಟಿ. ಪಾಸಾದ ಅಸಿಸ್ಟಾಂಟ ಮಾಸ್ತರರುಗಳು		೧೦೦ — ೧೦ — ೧೫೦ ಮತ್ತು ೮೦ — ೫ — ೧೦೦
ಸೆನಿಟರಿ ಇನ್ಸ್‌ಪೆಕ್ಟರರುಗಳು		೫೦ — ೫ — ೧೦೦
ವೆಕ್ಸಿನೆಟರುಗಳು		೩೫ ಕನಿಷ್ಠ ಪಕ್ಷದ ಸಂಬಳ
ಹೂಲಗಿತ್ತಿಯರು		೨೫
ಕಂಪೌಂಡರುಗಳು		೪೫

ಮ್ಯುನ್ಸಿಪಾಲಿಟಿಗಳಲ್ಲಿ ರಸ್ತೆಗಳು ಯಾವವು ಹೇಗಿರಬೇಕು ಎಂಬ ನಗರ ರಚನೆಯ ಬಗ್ಗೆ ಸರ್ವೆ ಮಾಡಲಿಕ್ಕೆ ಅದನ್ನು ಬೇಗನೆ ಏರ್ಪಡಿಸಿ ಜನನಿಬಿಡವಾಗಿದ್ದುದನ್ನು ಕಡಿಮೆ ಮಾಡಿ ಪಟ್ಟದಲ್ಲಿ ಆರೋಗ್ಯ ಸಂರಕ್ಷಣೆ, ಶುದ್ಧ ವಾಯುವಿನ ಸಂಚಾರ, ಕೊಳೆನೀರು ಸರಿಯಾಗಿ ದೂರವಾಗಿ ಹೋಗುವದಕ್ಕೆ ಏರ್ಪಾಡು, ಶುದ್ಧನೀರಿನ ಪೂರವಠೆಯು ಸೌಕರ್ಯಗಳನ್ನು ಸಂಪಾದಿಸಲು ಯತ್ನಿಸಬೇಕು ಎಂದು ಮಂಡಿಸಿ ಇದೆ.

ಸಾರ್ವಜನಿಕ ಮಹಾಸಭೆ.

ಲೋಕಮಾನ್ಯ ಬಾಲಗಂಗಾಧರ ತಿಲಕರವರು ಸ್ವರ್ಗಸ್ಥರಾದ್ದರಿಂದ ನಮ್ಮ ಶೋಕವನ್ನು ತೋರ್ಪಡಿಸುವ ಕುರಿತು ತಾರೀಕು 8—8—1920ನೇ ಬರುವ ಆದಿತ್ಯವಾರ ಸಾಯಂಕಾಲ ಘಂಟೆ ೬ಕ್ಕೆ ದೇಶೀಯ ಬಾಲಿಕಾ ಪಾಠ ಶಾಲೆಯ ವಸಂತ ಮಂದಿರದಲ್ಲಿ (National Girls' School Hall) ಒಂದು ಮಹಾಸಭೆ ಜರಗುವುದು. ಎಲ್ಲರೂ ದಯವಿಟ್ಟು ಬರಬೇಕಾಗಿ ವಿನಂತಿ.

ಎಮ್. ಎಚ್. ಪುತ್ತೂರ ಸಾಹೇಬ.
(ಇಸ್ಲಾಮಿಯಾ ಕ್ಲಬ್)

ಅತ್ತಾವರ ಬಾಲಕೃಷ್ಣ ಶೆಟ್ಟಿ.
(ಡಿಸ್ಟ್ರಿಕ್ಟ ಎಸೋಸಿಯೇಶನ್)

ತಾ. [illegible] 8 19[illegible]
ಮಂಗಳೂರು

ಬೈಂದೂರ ಆನಂದ ರಾವ್.
(ಹೋಮ್‌ರೂಲ್ ಲೀಗ್)

[illegible]
ವರ್ತಮಾನಸಂಗ್ರಹಗಳು:—
ಯುದ್ಧದ ಉತ್ತರಕಾಂಡ ... ೫
ಒಳದೇಶ ವರ್ತಮಾನ ... ,,
ದಕ್ಷಿಣಕನ್ನಡ—ಪುತ್ತೂರು, ಪಾಣೆಮಂಗಳೂರು, ಕಾಸರಗೋಡು ,,
ಲೀಕೇಲ್ ಮತ್ತು ಮ್ಯುನಿಸಿಪಲ್ ಕೊನ್ಫರೆನ್ಸ್ ,,
ಮಹಾತ್ಮಗಾಂಧಿಯವರ ಉಪದೇಶಗಳು ೮
ಪ್ರಾಥಮಿಕ ಶಿಕ್ಷಣದ ಬಿಲ್ ,,
ಪತ್ರವ್ಯವಹಾರ—೧, ೨, ೩, ೪, ೯

ಸ್ವದೇಶಾಭಿಮಾನಿ.

ಶಕ ೧೮೪೨ ಆ. ಶ್ರಾ. ಬ ೬ ಶುಕ್ರವಾರ

ಮಹಾತ್ಮಾ ಟಿಳಕ

ರಾಷ್ಟ್ರೀಯಪಕ್ಷದ ಆತ್ಮ

ಘೃಷ್ಟಂ ಘೃಷ್ಟಂ ಪುನರಪಿ ಪುನಶ್ಚಂದನಂ ಚಾರುಗಂಧಂ
ಛಿನ್ನಂ ಛಿನ್ನಂ ಪುನರಪಿ ಪುನಸ್ಸ್ವಾದು ಚೈವೇಕ್ಷುಕಾಂಡಮ್ ।
ದಗ್ಧಂ ದಗ್ಧಂ ಪುನರಪಿ ಪುನಃ ಕಾಂಚನಂ ಕಾಂತವರ್ಣಂ
ನ ಪ್ರಾಣಾಂತೇ ಪ್ರಕೃತಿ ವಿಕೃತಿರ್ಜಾಯತೇ ಚೋತ್ತಮಾನಾಮ್ ॥೧॥
(ಭರ್ತೃಹರಿ)

ಮಹಾತ್ಮರಾದ ಬಾಲಗಂಗಾಧರ ಟಿಳಕರು ಕಳೆದ ಶನಿವಾರ ಮಧ್ಯರಾತ್ರಿ ಸಮಯದಲ್ಲಿ ಸ್ವರ್ಗಸ್ಥರಾದರು. ಮುಂಬಯಿಯ ಸಮೀಪದಲ್ಲಿರುವ ಕುಲಾಬಾಜಿಲ್ಲೆಯ ಜನರ ಆಗ್ರಹದ ಮೇರೆಗೆ ಟಿಳಕರು ತಮ್ಮ ಕೊನೆಯ ವರ್ಷದ ವರ್ಧಂತಿಗೆ ಹೋಗಿದ್ದರು. ಅಲ್ಲಿಂದ



ಹಿಂತಿರುಗಿ ಬರುವಾಗ ಅವರಿಗೆ ಜ್ವರವು ಪ್ರಾರಂಭವಾಯಿತು. ಅವರು ಮುಂಬಯಿಯೊಳಗಿನ ಸರದಾರಗೃಹದಲ್ಲಿ ಇಳಿದುಕೊಂಡರು. ಡೊಕ್ಟರ್ ದೇಶಮುಖ, ಬಡಕಂಕರ ಮುಂತಾದ ೧೦-೧೨ ಡೊಕ್ಟರುಗಳು ಹಗಲೂ ಇರುಳೂ ಔಷಧೋಪಚಾರವನ್ನು ನಡಿಸುತಲಿದ್ದರು. ಪರಂತು ಕೊನೆಗೆ ರೋಗವು ಪ್ರಬಲವಾಗಿ ಮಹಾತ್ಮರಾದ ಟಿಳಕರು ಇಹಲೋಕವನ್ನು ಬಿಟ್ಟರು.

ಟಿಳಕರು ಇದೇ ಪಶ್ಚಿಮ ಸಮುದ್ರದ ದಡದ ಮೇಲಿರುವ ರತ್ನಾಗಿರಿ ಜಿಲ್ಲೆಯಲ್ಲಿ ೧೮೫೬ನೆಯ ಜುಲೈ ತಾ ೨೩ರಲ್ಲಿ ಜನಿಸಿದರು. ಇವರ ತಂದೆಯವರು ಶಾಲಾಖಾತೆಯಲ್ಲಿ ಆಸಿಸ್ಟಂಟ್ ಇನ್ಸ್‌ಪೆಕ್ಟರರಾಗಿದ್ದರು. ಅವರು ತಮ್ಮ ಮಗನ ಶಿಕ್ಷಣದ ವಿಷಯದಲ್ಲಿ ಚಿಕ್ಕಂದಿನಿಂದಲೆ ಯೋಗ್ಯ ಜಾಗ್ರತೆಯನ್ನು ತೆಕ್ಕೊಳ್ಳುತಿದ್ದರು. ಆದ್ದರಿಂದ ಇವರ ಪ್ರಾಥಮಿಕ ಮತ್ತು ಹೈಸ್ಕೂಲಿನ ಶಿಕ್ಷಣವು ಹೆಚ್ಚಿನ ತೊಂದರೆ ಇಲ್ಲದೆ ಸಾಗಿತು. ಇವರ ೧೬ನೆ ವಯಸ್ಸಿನಲ್ಲಿ ತಂದೆಯವರು ಮೃತರಾದರು. ಇವರ ಕೊಲೆಜಿನ ಶಿಕ್ಷಣಕ್ಕೆ ಇದೊಂದು ತೊಂದರೆ ಸಂಭವಿಸಿದರೂ ಇವರು ಬಿ ಏ ಮತ್ತು ಎಲ್ ಎಲ್ ಬಿ ಪರೀಕ್ಷೆಗಳನ್ನು ಉತ್ತೀರ್ಣರಾದರು. ಬಳಿಕ ವಿಷ್ಣುಶಾಸ್ತ್ರಿ ಚಿಪಳೂಣಕರ ಮತ್ತು ಟಿಳಕ ಹಾಗು ಇತರ ಕೆಲವು ವಿದ್ವಾಂಸರು ಸೇರಿ "ನ್ಯೂ ಇಂಗ್ಲಿಷ್ ಸ್ಕೂಲ್" "ಫರ್ಗ್ಯುಸನ್ ಕೊಲೆಜ" ಈ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದರು. ಈ ಸಂಸ್ಥೆಗಳಲ್ಲಿ ಟಿಳಕರು ಕೆಲಸಮಾಡುತ್ತಿದ್ದರು. ಕೇಸರಿ ಮತ್ತು ಮರಾಠಾ ಎಂಬ ಎರಡು ಪತ್ರಿಕೆಗಳನ್ನು ಅದೇ ಶಾಸ್ತ್ರಿಗಳ ಹೊರಡಿಸಿದ್ದರು. ಅವುಗಳ ಸಂಪಾದಕತ್ವವು ಟಿಳಕರ ಕೈಗೆ ಬಂತು. ಈ ಮೇರೆಗೆ ದೇಶಸೇವೆಯ ಮುಖ್ಯ ಎರಡು ಸಾಧನಗಳಾದ—ಅಧ್ಯಾಪನ ಮತ್ತು ಪತ್ರಲೇಖನ ಇವುಗಳ ಶಿಕ್ಷಣವು ಟಿಳಕರಿಗೆ ಸರಿಯಾಗಿ ಪ್ರಾಪ್ತವಾಗಿ ಅವರು ದೇಶಭಕ್ತರಲ್ಲಿ ಪ್ರಸಿದ್ಧಿಯನ್ನು ಪಡೆಯಹತ್ತಿದರು. ಕೇಸರಿಪತ್ರದಲ್ಲಿ ಅವರು ರಾಜಕೀಯ ವಿಷಯಗಳನ್ನು ಹಿಂದೀದೇಶದ ಹಿತದೃಷ್ಟಿಯಿಂದ ಯಾವ ಪರದೆಯನ್ನೂ ಇಡದೆ ಚರ್ಚಿಸಹತ್ತಿದರು. ಸ್ವದೇಶ, ಸ್ವಧರ್ಮ ಸ್ವರಾಜ್ಯ ಇತ್ಯಾದಿ ಸ್ವಕೀಯ ವಿಷಯಗಳ ಮೇಲೆ ಆದರ ಭಕ್ತಿ ಮುಂತಾದ್ದು ಉಂಟುಮಾಡುವುದೇ ಕೇಸರಿಯ ಮೊದಲನೆಯ ಕರ್ತವ್ಯವಾಗಿತ್ತು. ಈ ಕರ್ತವ್ಯವನ್ನು ಅವರು ತಮ್ಮ [illegible] ಮಹಾರಾಷ್ಟ್ರದಲ್ಲಿ [illegible] ಗಣಪತಿಮಹೋತ್ಸವ ಮುಂತಾದವುಗಳನ್ನು ಪ್ರಾರಂಭಿಸಿದರು. ಟಿಳಕರು ತಮ್ಮ ದೇಶಸೇವೆಯ ಕಾರ್ಯಕ್ಷೇತ್ರವನ್ನು ಬೆಳೆಸುವುದಕ್ಕಾಗಿ ಮುಂಬಯಿ ಕೌನ್ಸಿಲಿನಲ್ಲಿ ಲೋಕನಿಯುಕ್ತ ಸಭಾಸದತ್ವಕ್ಕೆ ಉಮೇದುವಾರರಾಗಿ ನಿಂತರು. ಮತ್ತು ಅದರಲ್ಲಿ ಚುನಾಯಿಸಿ ಬಂದರು. ಈ ಮೇರೆಗೆ ಕೌನ್ಸಿಲಿನ ಹೊರಗೂ ಒಳಗೂ ಮಾತೃಭೂಮಿಯ ಸೇವೆಯನ್ನು ಅವರು ಮಾಡಹತ್ತಿದರು. ಪರಂತು ಅಧಿಕಾರಿ ವರ್ಗಕ್ಕೆ ಟಿಳಕರ ನಿರ್ದಾಕ್ಷಿಣ್ಯವಾದ ಚಳವಳವು ಸಹಿಸಲಾಗಲಿಲ್ಲ ಮತ್ತು ಇದರ ಪರಿಣಾಮವೇನಾಯಿತೆಂದರೆ ಅವರ ಮೇಲೆ ೧೮೯೭ರಲ್ಲಿ ರಾಜದ್ರೋಹದ ಖಟ್ಲೆಯಾಗಿ ಅವರಿಗೆ ೧॥ ವರ್ಷದ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು. ಟಿಳಕರು ಈ ಕಾರಾಗೃಹ ವಾಸದಿಂದ ಮುಕ್ತರಾಗಿ ಬಂದ ಬಳಿಕ ಪುನಃ ಲೋಕಸೇವೆಯ ವ್ರತವನ್ನು ಇನ್ನಷ್ಟು ಉತ್ಸಾಹದಿಂದ ಮತ್ತು ದೇಶಪ್ರೀತಿಯಿಂದ ಕೈಕೊಂಡರು. ಕಲಕತ್ತೆಯಲ್ಲಿ ವಂಗಭಂಗದ ಚಳವಳವು ಪ್ರಾರಂಭವಾಗಿತ್ತು. ಟಿಳಕರು ಆ ಚಳವಳದಲ್ಲಿ ಬಂಗಾಲಿಗಳಿಗೆ ತುಂಬಾ ಸಹಾಯ ಕೊಟ್ಟರು. ಸ್ವರಾಜ್ಯ, ಸ್ವದೇಶಿ, ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ಈ ನಾಲ್ಕು ವಿಷಯಗಳು ಇಡೀ ದೇಶದಲ್ಲಿ ಹಬ್ಬಬೇಕೆಂದು ಟಿಳಕರು ವಾದಿಸಹತ್ತಿದರು. ದೇಶ ತುಂಬಾ ಸ್ವರಾಜ್ಯ ಮತ್ತು ಸ್ವದೇಶಿಯ ಚಳವಳವಾಗಬೇಕೆಂದು ಟಿಳಕರು ತೀವ್ರವಾಗಿ ಪ್ರತಿಪಾದಿಸಿ ಆ ಮೇರೆಗೆ ಅವರೇ ಚಳವಳವನ್ನು ನಡಿಸಹತ್ತಿದರು. ರಾಷ್ಟ್ರೀಯ ಸಭೆಯಲ್ಲಿ ಈ ಠರಾವುಗಳು ಬರಬೇಕೆಂದು ಟಿಳಕರು ಮತ್ತು ಅವರ ಪಕ್ಷದವರು ಪ್ರತಿಪಾದಿಸತೊಡಗಿದರು. ಆದರೆ ಕೆಲವರಿಗೆ ಇದು ಮಾನ್ಯವಾಗಲಿಲ್ಲ. ಇವರಿವರೊಳಗೆ ಚರ್ಚೆಬಿದ್ದು ಕೊನೆಗೆ ರಾಷ್ಟ್ರೀಯ ಸಭೆಯು ಸುರತಿನಲ್ಲಿ ವಿಭಕ್ತವಾಗಿ ಹೋಯಿತು. ರಾಷ್ಟ್ರೀಯರು ಅದರಿಂದ ಹೊರಗೆ ಬಂದರು. ಇರಲಿ, ಟಿಳಕರ ಸ್ವದೇಶಿ ಮತ್ತು ಬಹಿಷ್ಕಾರ ಹಾಗು ಸ್ವರಾಜ್ಯದ ಚಳವಳವು ದಿನೇದಿನೇ ಬೆಳೆಯುತ್ತಹೋದದ್ದು ಅಧಿಕಾರಿವರ್ಗಕ್ಕೆ ಪುನಃ ಚುಚ್ಚಹತ್ತಿತು. ಮತ್ತು ಇದೇ ಸಮಯದಲ್ಲಿ ಬಂಗಾಲದಲ್ಲಿ ಬೊಂಬಿನ ಗಲಾಟೆಯು ಎದ್ದಿತು. ಆ ವಿಷಯವಾಗಿ ಕೇಸರಿ ಪತ್ರದಲ್ಲಿ ಟಿಳಕರು ಎರಡು ಮೂರು ಲೇಖಗಳನ್ನು ಬರೆದಿದ್ದರು. ಈ ಲೇಖಗಳು ರಾಜದ್ರೋಹಕರವಾಗಿವೆ ಎಂದು ಹೇಳಿ ೧೯೦೮ರಲ್ಲಿ ಮುಂಬಯಿ ಸರಕಾರವು ಅವರಿಗೆ ೬ ವರ್ಷದ ಶಿಕ್ಷೆಯನ್ನು ವಿಧಿಸಿ ಬ್ರಹ್ಮದೇಶಕ್ಕೆ ಕಳುಹಿಸಿತು. ಈ ದೀರ್ಘ ಅವಧಿಯಲ್ಲಿ ಹಿಂದೂಸ್ಥಾನದೊಳಗಿನ ರಾಷ್ಟ್ರೀಯ ಪಕ್ಷವು ತಟಸ್ಥವಾಗಿ ನಿಂತಿತು. ಟಿಳಕರು ಬ್ರಹ್ಮದೇಶದಿಂದ ಬಂದ ಮೇಲೆ ರಾಷ್ಟ್ರೀಯ ಪಕ್ಷವು ಪುನಃ ಟಿಳಕರನ್ನು ಹಿಂಬಾಲಿಸಹತ್ತಿತು. ಅವರು ತಮ್ಮ ಆ ಪಕ್ಷವನ್ನು ತೆಕೆಕ್ಕೊಂಡು ಪುನಃ ರಾಷ್ಟ್ರೀಯ ಸಭೆಯಲ್ಲಿ ಸೇರಿದರು. ಆದರೆ ಅದಕ್ಕೆ ನಿಜವಾದ ಒಂದು [illegible] ಬಂದಂತಾಯಿತು. ಅಷ್ಟರಲ್ಲಿ ಮಹಾಯುದ್ಧವು ಪ್ರಾರಂಭವಾಯಿತು. ಆಗ ಟಿಳಕರು ಬ್ರಿ. ಸಾಮ್ರಾಜ್ಯಕ್ಕೆ ಹಿಂದೂಸ್ಥಾನವು ಸಹಾಯ ಮಾಡಬೇಕೆಂದು ಯೋಗ್ಯ ಆಲೋಚನೆಯನ್ನು ಕೊಟ್ಟರು. ಆ ಮೇರೆಗೆ ಹಿಂದೀ ದೇಶವು ಸರಕಾರಕ್ಕೆ ಮನುಷ್ಯ ದ್ರವ್ಯಬಲ ಇತ್ಯಾದಿ ರೂಪದಿಂದ ಮದತುಮಾಡಿತು. ಜನತೆಯಲ್ಲಿ ಕರ್ತವ್ಯ ಜಾಗ್ರತಿಯನ್ನು ಹುಟ್ಟಿಸಲು ಇದೇ ಸಮಯವೆಂದು ತಿಳಿದು ಟಿಳಕರು ದೇಶದಲ್ಲಿ ಪುನಃ ಚಳವಳವನ್ನು ನಡಿಸಿದರು. ಆಗ ಬ್ರಿಟಿಷ್ ಪಾರ್ಲಿಮೆಂಟು ಹಿಂದೂಸ್ಥಾನಕ್ಕೆ ಸ್ವರಾಜ್ಯದ ದೊಡ್ಡ ಅಂಶವನ್ನು ಕೊಡಲು ಅಭಿವಚನವನ್ನು ಪ್ರಕಟಿಸಿ ಸುಧಾರಣೆಗಳ ಕಾನೂನನ್ನು ಪಾಸುಮಾಡಿತು. ಈ ಮಧ್ಯದಲ್ಲಿ ಪುನಃ ಇನ್ನೊಮ್ಮೆ ಅಧಿಕಾರಿಗಳಿಗೆ ಟಿಳಕರು ಕಡಿತವುಂಟಾದಂತೆ ಉದ್ರೇಕವಾಗಿ ಟಿಳಕರ ಒಂದೆರಡು ಉಪನ್ಯಾಸಗಳ ಮೇಲೆ ರಾಜದ್ರೋಹದ ಆರೋಪಣೆಯನ್ನು ಇಟ್ಟು ಮುಂಬಯಿ ಸರಕಾರವು ೪೦ ೦೦೦ ರೂಪಾಯಿಯ ಜಾಮೀನಿನ ಹೊರೆಯನ್ನು ಅವರ ಮೇಲೆ ಇಟ್ಟಿತು. ಆದರೆ ಹೈಕೋರ್ಟಿನಲ್ಲಿ ಅವರು ದೋಷಮುಕ್ತರಾದರು. ಅನಂತರ ಅವರು ಚಿರೋಲ ದೊರೆಯ ಮೇಲೆ ದಾವೆಯನ್ನು ನಡಿಸಲು ಮತ್ತು ಹಿಂದೂಸ್ಥಾನದ ಪರಿಸ್ಥಿತಿಯನ್ನು ಬ್ರಿಟಿಷ್ ಜನತೆಯ ಮುಂದಿಡಲು ಸ್ವತಃ ವಿಲಾಯತಿಗೆ ಹೋದರು. ಅಲ್ಲಿ ದಾವೆಯು ಅವರಿಗೆ ಅವಗುಣವಾಗಿ ಚಿರೋಲ ದೊರೆಗೆ ಖರ್ಚುಸಮೇತ ೩ ಲಕ್ಷ ರೂಪಾಯಿ ಟಿಳಕರು ಕೊಡಬೇಕೆಂದು ಲಂಡನ್ ಕೋರ್ಟಿನ ನಿರ್ಣಯವಾಯಿತು. ತಮ್ಮ ಪ್ರಯಾಣದೊಳಗಿನ ಒಂದು ಉದ್ದೇಶದ ವಿಲವಾರಿಯು ಈ ಮೇರೆಗೆ ಆದ ಬಳಿಕ ಇಲ್ಲಿಯ ಪರಿಸ್ಥಿತಿಯನ್ನು ಬ್ರಿಟಿಷ ಜನತೆಯ ಮುಂದಿಟ್ಟು ಸ್ವರಾಜ್ಯವನ್ನು ಕೇಳುವ ಇನ್ನೊಂದು ಅವರ ಯಾವ ಉದ್ದೇಶವಿತ್ತೊ ಅದನ್ನು ಅವರು ಸರಿಯಾಗಿ ನೆರವೇರಿಸಿ ಸ್ವದೇಶಕ್ಕೆ ಬಂದರು. ಇಲ್ಲಿ ಬಂದಮೇಲೆ ಪುನಃ ಅವರ ಚಳವಳವು ಪ್ರಾರಂಭವಾಯಿತು. ಹೊಸ ಕೌನ್ಸಿಲುಗಳ ಇಲೆಕ್ಷನಿನಲ್ಲಿ ರಾಷ್ಟ್ರೀಯರು ಯಾವ [illegible] ಕೊಳ್ಳಬೇಕೆಂಬುದನ್ನು ತಮ್ಮ [illegible] ಉದ್ದೇಶ ಪತ್ರಕದಲ್ಲಿ ಅವರು ಪ್ರಕಟಪಡಿಸಿದರು. ಈ ಉದ್ದೇಶವನ್ನು ಇಟ್ಟುಕೊಂಡು ಮುಂಬಯಿ ಪ್ರಾಂತದ ಮತ್ತು ಇತರ ಕಡೆಗಳಲ್ಲಿಯೂ ರಾಷ್ಟ್ರೀಯರು ಬರುವ ಕೌನ್ಸಿಲುಗಳಿಗೆ ಉಮೇದುವಾರರಾಗಿ ನಿಂತಿದ್ದಾರೆ. ಇಂಥ ಮಹತ್ವದ ಸಮಯದಲ್ಲಿ ನಿಷ್ಠುರವಾದ ಕಾಲವು ಅವರನ್ನು ನಮ್ಮ ಮಧ್ಯದಿಂದ ಎಳಕೊಂಡುಹೋಯಿತು.

ಟಿಳಕರ ದೇಶಸೇವೆಯಂತೆಯೆ ವಿದ್ವತ್ತೆಯು ಕೂಡ ಮಹತ್ವದ್ದಾಗಿತ್ತು. ಅವರು ಬರೆದ "ಓರಾಯನ್", "ಆರ್ಯರ ವಸತಿಸ್ಥಾನ" "ಭಗವದ್ಗೀತಾರಹಸ್ಯ" ಈ ಮೂರು ಗ್ರಂಥಗಳು ಅವರ ಅಲೌಕಿಕ ವಿದ್ವತ್ತೆಯ, ಅಸಾಮಾನ್ಯ ಬುದ್ಧಿಮತ್ತೆಯ ಹಾಗು ವಿಚಕ್ಷಣವಾದ ಶೋಧಕ ಬುದ್ಧಿಯ ಉತ್ತಮವಾದ ಸಾಕ್ಷಿಯನ್ನು ಕೊಡುತ್ತವೆ. ದೃಕ್ ಪ್ರತೀತಿಗೆ ಸರಿಯಾಗಿ ಬರುವಂತೆ ಪಂಚಾಂಗಗಳನ್ನು ತಯಾರಿಸಬೇಕೆಂದು, ಹಾಗು ಪ್ರಾಚೀನರ ಮತ್ತು ಅಧುನಿಕರ ಏಕವಾಕ್ಯತೆಯನ್ನು [illegible]ಬೇಕೆಂದು ಅವರು ಯಾವ ಪ್ರಯತ್ನವನ್ನು ಕೈಕೊಂಡಿದ್ದಾರೊ ಹಾಗು ಯಾವ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೊ ಅದರ ಮಹತ್ವವು ಜ್ಯೋತಿಷಜ್ಞರಿಗೇ ಅಲ್ಲ, ಇತರರಿಗೂ ತಿಳಿಯುವ ಹಾಗಿದೆ.

ಇರಲಿ, ಮಹಾತ್ಮರಾದ ಟಿಳಕರ ಚರಿತ್ರವನ್ನು ಅತಿ ಸಂಕ್ಷೇಪವಾಗಿ ಬರೆದರೂ ಇನ್ನೂ ೧೦ ಕೋಲಮುಗಳನ್ನು ಬರೆಯಬಹುದು. ಟಿಳಕರ ಚರಿತ್ರವನ್ನು ಬರೆಯುವುದೆಂದರೆ ಹಿಂದುಸ್ಥಾನದ ಇತ್ತಲಾಗಿನ ೪೦ ವರ್ಷಗಳ ರಾಜಕೀಯ ಇತಿಹಾಸವನ್ನು ಬರೆಯುವುದೇ ಸರಿ. ಸುಸುಪ್ತಾವಸ್ಥೆಯಲ್ಲಿ ಬಿದ್ದ ಮಹಾರಾಷ್ಟ್ರವನ್ನು ಲೇಖನ, ಭಾಷಣ, ಚಳವಳಿ ಮುಂತಾದ ಸಾಧನಗಳಿಂದ ಎಚ್ಚರಿಸಿ, ಆ ಮೂಲಕ ಹಿಂದುಸ್ಥಾನದ ಇತರ ಭಾಗಗಳಲ್ಲಿ 'ಕರ್ತವ್ಯ ಜಾಗೃತಿಯನ್ನು ಉಂಟುಮಾಡಿದವರಲ್ಲಿ ಟಿಳಕರು ಅಗ್ರಗಣ್ಯರಾಗಿರುವರು. ಟಿಳಕರು ಕಾರ್ಯಕ್ಷೇತ್ರದಲ್ಲಿ ಇಳಿಯುವುದಕ್ಕಿಂತ ಮೊದಲು ದೇಶದ ಪರಿಸ್ಥಿತಿಯು ಹೇಗಿತ್ತಂದರೆ, ಇಂಗ್ಲಿಷ್ ಶಿಕ್ಷಣವನ್ನು ಹೊಂದಿದ ಸುಶಿಕ್ಷಿತರ ದೃಷ್ಟಿಯು ಪಾಶ್ಚಾತ್ಯ ಸಂಸ್ಕೃತಿಯ ಪ್ರಭೆಯಿಂದ ಅಂಧವಾಗಿ ಹೋಗಿತ್ತು. ಸ್ವದೇಶ, ಸ್ವಧರ್ಮ, ಸ್ವರಾಜ್ಯ ಇವೆಲ್ಲ ನಿಸ್ಸಾರ, ನಿಷ್ಪ್ರಯೋಜನವೆಂದು ಅವರ ತಿಳಿವಳಿಕೆಯುಂಟಾಗಿತ್ತು. ಶಿಕ್ಷಣವಿಲ್ಲದ ಸಾಮಾನ್ಯ ಜನ ಸಮಾಜವಂತೂ ಕೇವಲ ಅಜ್ಞಾನದಲ್ಲಿ ನಿಮಗ್ನವಾಗಿತ್ತು. ಇಂಥ ಶೋಚನೀಯ ಪರಿಸ್ಥಿತಿಯನ್ನು ಕಂಡು ಟಿಳಕರು ಅಜ್ಞ ಸಮಾಜಕ್ಕೆ ರಾಜಕೀಯ ವಿಷಯದ ಶಿಕ್ಷಣವನ್ನು ಕೊಟ್ಟು ಪ್ರಬುದ್ಧರನ್ನಾಗಿ ಮಾಡತೊಡಗಿದರು. ಮತ್ತು ಅದೇ ಸಮಯದಲ್ಲಿ ಸುಶಿಕ್ಷಿತರ ತಲೆಯೊಳಗಿನ ದುರಾಗ್ರಹದ ಭ್ರಾಂತಿಯನ್ನು ತೀವ್ರ ಟೀಕೆಯಿಂದ ಹೋಗಲಾಡಿಸಹತ್ತಿದರು. ಈ ಮೇರೆಗೆ ಎರಡೂ ಕಡೆಯ ಜನರನ್ನು ಜೋಡಿಸಲು ಉಪಕ್ರಮಿಸಿ ಅವರು ಸ್ವದೇಶೋದ್ಧಾರದ ಕಾರ್ಯವನ್ನು ಸಾಧಿಸಿದರು. ಟಿಳಕರ ಈ ಕರ್ತವ್ಯವು ಸರಕಾರಕ್ಕೆ—ವಿಶೇಷತಃ ಅಧಿಕಾರಿ ವರ್ಗಕ್ಕೆ ಅಪ್ರಿಯವಾಗಿತ್ತು. ಹೀಗೆ ಆದ್ದರಿಂದಲೆ ಅವರ ಮೇಲೆ ಒಂದಲ್ಲ ಎರಡಲ್ಲ, ನಾಲ್ಕೈದು ದುರ್ಧರ ಪ್ರಸಂಗಗಳು ಒದಗಿದವು. ಟಿಳಕರ ಮೇಲೆ ಎಷ್ಟೆಷ್ಟು ಕಷ್ಟಪ್ರಸಂಗಗಳು ಒದಗುತ್ತಿದ್ದವೊ ಅಷ್ಟಷ್ಟು ಅವರ ಅಂತಃಕರಣವು ದೇಶಭಕ್ತಿಯಿಂದ ಉಜ್ವಲಿತವಾಗುತಿತ್ತು. ಆಪತ್ತುಗಳು ಬಂದ ಹಾಗೆ ಅವರ ಉತ್ಸಾಹವು, ಕರ್ತವ್ಯ ತತ್ಪರತೆಯು ಹೆಚ್ಚಾಗುತಿದ್ದವು. ಟಿಳಕರ ಇಡೀ ಜನ್ಮವು ಒಂದೆಕಲ್ಲಿನಂತಿರುವ ನೋಕರಶಾಹಿಯೊಡನೆ ಹೋರಾಡುವುದರಲ್ಲಿ ಖರ್ಚಾಯಿತು. ಈ ಹೋರಾಟದಲ್ಲಿ ಟಿಳಕರಿಗೆ ಅಸಹ್ಯವಾದ ಮತ್ತು ಭಯಂಕರವಾದ ಸಂಕಟಗಳನ್ನು ಸಹಿಸಬೇಕಾಗಿ ಬಂದರೂ ಅವರು ಕೊನೆ ತನಕ ತಮ್ಮ ದೃಢ ಸಂಕಲ್ಪ ಮತ್ತು ಅಚಲ ವ್ರತವನ್ನು ತ್ಯಜಿಸಲಿಲ್ಲ. ಮಾತ್ರವಲ್ಲ, ಮೇಲಿನ ಶ್ಲೋಕದಲ್ಲಿ ವಿವರಿಸಿದಂತೆ ಅವರ ಸತ್ವೋತ್ಕರ್ಷವು ಆಧಿಕ್ಯವನ್ನೇ ಹೊಂದಹತ್ತಿತು. ಇದೀಗ ಮಹಾಪುರುಷರ—ವಿಭೂತಿಗಳ ಲಕ್ಷಣವು. ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಕ್ಕೊಳ್ಳದೆ, ಆ ಮೂಲಕ ಬರುವ ಭಯಂಕರವಾದ ಆಪತ್ತುಗಳನ್ನು ಸ್ವಾರ್ಥತ್ಯಾಗಪೂರ್ವಕ ಸಹಿಸುವುದೇ ಮಹಾ ಪುರುಷಲಕ್ಷಣವು. ಇಂಥ ಲಕ್ಷಣವು ಈ ಮಹಾತ್ಮರಲ್ಲಿ ಸಂಪೂರ್ಣವಾಗಿ ನೆಲೆಗೊಂಡಿತ್ತು. ಟಿಳಕರು ಇದುವರೆಗೆ ದೇಶದ ಸಲುವಾಗಿ ಸಹಿಸಿದ ಕಷ್ಟ, ವಿಪತ್ತು ಮತ್ತು ದುಃಖ ಇವುಗಳನ್ನು ಆಲೋಚಿಸಿದರೆ ಐರ್ಲಂಡಿನ ದೇಶಭಕ್ತನಾದ ಪಾರ್ನೆಲನ ಸಾಮ್ಯವನ್ನು ಅವರಿಗೆ ಕೊಡಬಹುದಾಗಿದೆ. ಸಾರಾಂಶ, ಒಂದೇ ಮಾತಿನಿಂದ ಟಿಳಕರು ರಾಷ್ಟ್ರೀಯರಾಗಿ ಜನಿಸಿದರು. ಮತ್ತು ರಾಷ್ಟ್ರೀಯರಾಗಿಯೆ ದೇಹವನ್ನಿಟ್ಟರು.

ಟಿಳಕರು ದೇಶಕ್ಕೋಸ್ಕರ ಸ್ವಾರ್ಥತ್ಯಾಗ ಮಾಡಿ ಜನತೆಯನ್ನು ಮೆಚ್ಚಿಸಿದಂತೆ ಜನತೆಯು ಕೂಡ ಅವರನ್ನು ಬಿಟ್ಟು ಹಾಕಲಿಲ್ಲ. ಟಿಳಕರೆಂದರೆ ರಾಷ್ಟ್ರೀಯಪಕ್ಷದ ಪಂಚಪ್ರಾಣ, ರಾಷ್ಟ್ರೀಯಪಕ್ಷದ ಆತ್ಮವೆಂಬುದಾಗಿಯೆ ಜನತೆಯು ತಿಳಕೊಳ್ಳುತ್ತಿತ್ತು. ಅವರು ಹಿಂದುಸ್ಥಾನದ ಯಾವ ಭಾಗದಲ್ಲಿ ಸಂಚರಿಸಲಿ, ಅವರ ಹಿಂದೆ ಜನಸ್ತೋಮವು ಇರುವೆಗಳ ಸಾಲಿನಂತೆ ಯಾವಾಗಲೂ ತುಂಬಿಕೊಂಡೇ ಇರುತ್ತಿತ್ತು. ಅವರು ಮಹಾ

ವಿಭೂತಿಯೆಂದು ಸಾಮಾನ್ಯ ಜನರ ತಿಳುವಳಿಕೆ. ಅವರ ೬೦ನೆ ವರ್ಷದ ವರ್ಧಂತಿಗೆ ಹಾಗು ಮೊನ್ನೆ ವಿಲಾಯತಿಯಿಂದ ಬಂದ ಬಳಿಕ ಪರ್ಸ್ ಫಂಡನ್ನು ಜನತೆಯು ಅವರಿಗೆ ಸಮರ್ಪಿಸಿತು ಸ್ವಾಂತಃ ಅವರು ಅವಿರತವಾಗಿ ದೇಶಸೇವೆಯನ್ನು ಮಾಡಿದ್ದರಿಂದ ಹಿಂದಿ ಜನತೆಯು ಅವರನ್ನು ತನ್ನ ಯಥಾರ್ಥನಾಯಕನನ್ನಾಗಿ ಅಂಗೀಕರಿಸಿತು. ಇದೇ ಲೋಕಮಾನ್ಯತೆಯು

ಇಂಥ ಮಹಾತ್ಮರೂ, ಲೋಕಮಾನ್ಯರೂ ಮತ್ತು ರಾಷ್ಟ್ರೀಯಪಕ್ಷದ ಆತ್ಮಸ್ವರೂಪರೂ ಆದ ಟಿಳಕರು ಈಗಿನ ಮಹತ್ವದ ಸಮಯದಲ್ಲಿ ಅವರಿಗೆ ಅತ್ಯಂತ ಪ್ರಿಯವಾದ ಹಿಂದುಸ್ಥಾನವನ್ನು ಬಿಟ್ಟು ಹೋದರು ಅವರ ದೀರ್ಘಪರಿಶ್ರಮಕ್ಕೆ ಎಲ್ಲಿಯೊ ಕೊಂಚ ಫಲವು ಬರುವಹಾಗಿತ್ತು ಇನ್ನೂ ಹಲವು ಸಮಯ ಅವರು ಇರುತಿದ್ದುದಾದರೆ ದೇಶದ ರಾಜಕಾರಣವು ಇನ್ನಷ್ಟು ಬಲಿಷ್ಠವಾಗುತಿತ್ತು ಆದರೂ ಅವರ ಆತ್ಮವು ತನ್ನ ಇಚ್ಛಾಶಕ್ತಿಯ ಬಲದಿಂದ ಹಿಂದುಸ್ಥಾನದ ಸ್ವರಾಜ್ಯಕಾರ್ಯವನ್ನು ಪ್ರವೇಶಿಸುವಾಗ ಹಿಂದಿ ಜನತೆಯು ಐಕಮತ್ಯದಿಂದ ಅದನ್ನು ಸಾಧ್ಯಗೊಳಿಸೀತೆಂದು ನಾವು ನಂಬಿದ್ದೇವೆ. ಅವಸಾನ ಕಾಲದಲ್ಲಿ ಅವರ ಬಾಯಿಯಿಂದ ಬಂದ ಗೀತಾವಚನವನ್ನು ಕೊಟ್ಟು ಈ ನಿಧನಲೇಖವನ್ನು ಮುಗಿಸುತ್ತೇವೆ

"ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥"

ಸ್ಫುಟ ವಿಚಾರಗಳು.

೧ ಲೋಕಮಾನ್ಯ ಟಿಳಕರು ಮುಂಬಯಿಯಲ್ಲಿ ಸರದಾರ ಗೃಹದಲ್ಲಿ ಕಳೆದ ಶನಿವಾರ ರಾತ್ರೆ ಘಂಟೆ ೧೨—೪೦ ಸಮಯಕ್ಕೆ ಸ್ವರ್ಗಸ್ಥರಾದರು ಅವರ ಪ್ರೇತಯಾತ್ರೆಯು ಮರುದಿನ ೧ ಘಂಟೆಗೆ ಪ್ರಾರಂಭವಾಯಿತು ಚೌಪಾಟಿ ಎಂಬ ಕಡೆಯಲ್ಲಿ ಅವರ ದಹನವಿಧಿಯು ಸಾಂಗಗೊಂಡಿತು ಅವರು ಕಾಯಿಲೆಯಲ್ಲಿ ಇದ್ದಾಗ ಸರ್ ಚಂದಾವರಕರ, ಪ್ರಿನ್ಸಿಪಾಲ ಪರಾಂಜಪೆ, ಎನ್ನಿಬಿಸೆಂಟ್ ಮೊದಲಾದ ಅನ್ಯ ಪಕ್ಷದ ಜನರು ಕೂಡ ದೂರದಿಂದ ಅವರ ದರ್ಶನಕ್ಕೆ ಬಂದದಲ್ಲದೆ ಕಲಕತ್ತಾ, ನಾಗಪೂರ, ಮದ್ರಾಸ ಮುಂತಾದ ಕಡೆಗಳಿಂದ ವಿ ಪಿ ಮಾಧವರಾವ, ಸರಲಾದೇವಿ, ಖಾಪರ್ಡೆ ಮೊದಲಾದ ಅವರ ಸ್ನೇಹಿತರು ಕೂಡ ಬಂದಿದ್ದರು. ಡಾ ಭಾಂಡಾರಕರರಿಂದ ಅವರ ಸಹಾನುಭೂತಿಪರವಾದ ಸಂದೇಶವು ಬಂದಿತ್ತು ಅವರ ಪ್ರೇತಯಾತ್ರೆಗಂತೂ ಗಾಂಧಿ ಖಾಪರ್ಡೆ, ಕರಂದೀಕರ ಶೌಕತ ಅಲ್ಲಿ ಮೊದಲಾದ ಮುಖಂಡರಲ್ಲದೆ ಬೇರೆ ಅನೇಕ ಜನಸಮೂಹವು ಸೇರಿತ್ತು ಸ್ತ್ರೀಯರು, ಬಾಲಕರು, ಬ್ರಾಹ್ಮಣರು, ಬ್ರಾಹ್ಮಣೇತರರು, ಕೋಟ್ಯಧೀಶರು, ಕೂಲಿಗಳು ಮೊದಲಾದ ಎಲ್ಲ ತರಗತಿಯ ಲೋಕಸಮಾಜವು ಶುದ್ಧಭಾವದಿಂದ, ಅತಿ ಶೋಕದಿಂದ ಅವರ ಸ್ಮಶಾನ ಯಾತ್ರೆಗೆ ಹೋಗಿತ್ತು ಇಷ್ಟು ದೊಡ್ಡ ದುಃಖಿತ ಸಮಾಜವು ಮುಂಬಯಿಯಲ್ಲಿ ಮೊದಲು ಎಂದೂ ಕಂಡಿರಲಿಲ್ಲ ದಹನವಿಧಿಯ ಸ್ಥಳದಲ್ಲಿ ಲಾಲಾ ಲಜಪತರಾಯರು ಭಾಷಣಕೊಟ್ಟರು. ಇಡೀ ಮಹಾರಾಷ್ಟ್ರದಲ್ಲಿ ತಮ್ಮ ತಮ್ಮ ಕುಟುಂಬದ ಒಬ್ಬ ಯಜಮಾನನದೆ ವಿಯೋಗವುಂಟಾದ ರೀತಿಯ ಭಾವನೆಯು ತುಂಬಿಕೊಂಡಿದೆ ಬರೆ ಮಹಾರಾಷ್ಟ್ರದ್ದೆ ಅಲ್ಲ, ಇಡೀ ಹಿಂದೀ ರಾಷ್ಟ್ರವು ಇದೇ ಭಾವನೆಯಲ್ಲಿ ಮುಳುಗಿದೆ ಎಂದು ಹೇಳಬಹುದು ಕಲಕತ್ತಾ, ಅಲ್ಲಹಾಬಾದ, ದಿಲ್ಲಿ, ಲಖನೌ, ನಾಗಪೂರ, ಮದ್ರಾಸ ಮುಂತಾದ ಎಲ್ಲ ಪ್ರಮುಖ ಪ್ರಮುಖ ಪಟ್ಟಣಗಳಲ್ಲಿ ಹಾಗು ಹಳ್ಳಿಹಳ್ಳಿಗಳಲ್ಲಿ ಈ ಲೋಕನಾಯಕನ ಮರಣದಿಂದ ಜನತೆಯು ದುಃಖದಲ್ಲಿ ಮುಳುಗಿದೆ ಅಂಗಡಿಗಳು ಪೇಟೆಯು ಹಾಗು ಶಾಲಾ ಕೊಲಜುಗಳು ಎಲ್ಲ ಕಡೆಯಲ್ಲಿ ಮುಚ್ಚಲ್ಪಟ್ಟವು ಹಿಂದುಸ್ಥಾನವು ಸೂತಕದಲ್ಲಿ ಇದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು ಬರುವ ಸೋಮವಾರ ಎಂದರೆ ಅವರ ಮರಣದ ಹತ್ತನೆಯ ದಿನ ಎಲ್ಲ ಕಡೆಗಳಲ್ಲಿ ದುಃಖ ಪ್ರದರ್ಶಕಸಭೆಗಳು ಕೂಡತಕ್ಕವಿವೆ ನಮ್ಮ ಮಂಗಳೂರಿನಲ್ಲಿಯೂ ಅವರಮರಣದ ವಾರ್ತೆಯು ಹಬ್ಬಿದ ದಿವಸ ರಾಷ್ಟ್ರೀಯ ಬಾಲಿಕಾ ಪಾಠಶಾಲೆ, ಕೆನರಾ ಹೈಸ್ಕೂಲು, ಗಣಪತಿ ಸೆಕೆಂಡರಿ ಸ್ಕೂಲು ಮೊದಲಾದ ಜನಪ್ರಿಯ ಶಾಲೆಗಳು ಮುಚ್ಚಲ್ಪಟ್ಟವು ಈಗ ಪುರವಾಸಿಗಳ ಸಭೆಗೂಡಿ ಮೃತ ದೇಶಭಕ್ತರ ವಿಷಯವಾಗಿ ದುಃಖ ಪ್ರದರ್ಶನವು ಮಾಡಲ್ಪಡುವದಿದೆ ಅಂದು ಅಂಗಡಿಗಳು, ಬಂಡಸಾಲೆಗಳು ಕೂಡೆ ಮುಚ್ಚಲ್ಪಡ್ಬಾವೆಂದು ನಂಬಿದ್ದೇವೆ ಇದೇ ರೀತಿಯಿಂದ ಈ ಜಿಲ್ಲೆಯ ಹಳ್ಳಿಗಳಲ್ಲೂ ದುಃಖ ಪ್ರದರ್ಶನವನ್ನು ಅಲ್ಲಲ್ಲಿಯ ಮುಖ್ಯಸ್ಥರು ಸಭೆಗೂಡಿಸಿ ಮಾಡಿಯಾರು ಎಂದು ಭರವಸೆ ಪಡುತ್ತೇವೆ.

೨ ಲೋಕಮಾನ್ಯ ಟಿಳಕರ ನಿಧನದ ಮರುದಿನ ಎಂದರೆ ಪ್ರೇತಯಾತ್ರೆಯ ದಿನ ಮುಂಬಯಿಯಲ್ಲಿ ಹರತಾಳವು ಅನಾಯಾಸದಿಂದಲೆ ಕಾರ್ಯರೂಪದಲ್ಲಿ ಬಂತು ಮರುದಿನ ಮಹಾತ್ಮಾ ಗಾಂಧಿಗಳು ವೈಸರಾಯ ಪ್ರಭುಗಳಿಗೆ ಒಂದು ಪತ್ರ ಬರೆದು ತಮ್ಮ ಪದಕಗಳನ್ನು (medals) ಹಿಂದಕ್ಕೆ ಕಳುಹಿಸಿ ಕೊಟ್ಟಿದ್ದಾರೆ ಗಾಂಧಿಗಳಿಗೆ ಈ ಪದಕಗಳು (ಕೈಸರ್-ಇ-ಹಿಂದ ಸುವರ್ಣಪದಕ, ಝುಲುವೊರ್ ಪದಕ, ಬೋರ್ ವೋರ್ ಪದಕ ಇವು) ದಕ್ಷಿಣ ಆಫ್ರಿಕಾದಲ್ಲಿ ಹಾಗು ಬೊರ್‌ವೊರಿನ ಸಮಯದಲ್ಲಿ ದೊರಕಿದ್ದವು ಅವುಗಳನ್ನು ಅಸಹಕಾರಿತ್ವದ ಗುರುತು ಎಂಬಂತೆ ಅವರು ಸರಕಾರಕ್ಕೆ ಹಿಂತಿರುಗಿ ಕಳುಹಿಸಿ ಕೊಟ್ಟಿದ್ದಾರೆ ಖಿಲಾಫತ್ತಿನ ಶಲ್ಯವು ದೇಶಬಂಧುಗಳಾದ ಮುಸಲ್ಮಾನರಿಗೆ ಕುಕ್ಕುತ್ತಿರುವಾಗ ಮತ್ತು ಪಂಜಾಬದ ಅನ್ಯಾಯಕ್ಕೆ ಸರಕಾರವು ಅಧಿಕಾರಿಗಳಿಗೆ ತಕ್ಕ ಪ್ರಾಯಶ್ಚಿತ್ತವನ್ನು ವಿಧಿಸಲಿಲ್ಲವಾದ್ದರಿಂದ ಪಂಜಾಬಿಗಳೂ ಅವರ ದೇಶಬಾಂಧವರೂ ಈ ಅಪಮಾನದಲ್ಲಿ ಮುಳುಗಿರುವಾಗ ಬಹುಮಾನದ ಸರಕಾರಿ ಪದವಿಗಳನ್ನು ತೊಟ್ಟುಕೊಳ್ಳುವುದು ಯೋಗ್ಯವಲ್ಲ, ಆದ್ದರಿಂದ ಅವು ಹಿಂದಕ್ಕೆ ಕಳುಹಿಸಲ್ಪಡುತ್ತವೆ ಎಂದು ಮಹಾತ್ಮಾ ಗಾಂಧಿಗಳು ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ ಮತ್ತು ಕೊನೆಗೆ ಇನ್ನಾದರೂ ಸರಕಾರವು ಪ್ರಜೆಗಳ ಆಕಾಂಕ್ಷೆಗಳನ್ನು ಪೂರಯಿಸೀತೆಂಬ ಆಶೆಯನ್ನು ಪುನಃ ಪ್ರದರ್ಶಿಸಿದ್ದಾರೆ ಮಹಾತ್ಮಾ ಗಾಂಧಿಗಳಂತೆಯೆ ಮಿಸೆಸ್ ಸರಳಾದೇವಿಯವರು ಕೂಡ ತಮ್ಮ ಪದಕವನ್ನು ಕಳುಹಿಸಿಕೊಟ್ಟಿದ್ದಾರೆ ಅಲ್ಲದೆ ಎಸ್ ಡಿ ಕಾನ್‌ಜಿ ಮೊದಲಾದ ಮುಹಮ್ಮದೀಯ ಗೃಹಸ್ಥರು ಕೌನ್ಸಿಲಿನ ಪ್ರತಿನಿಧಿಸ್ಥಾನಗಳಿಗೆ ರಾಜೆಯನ್ನು ಕೊಡಹತ್ತಿದ್ದಾರೆ ಈ ಮೇರೆಗೆ ಅಗೋಸ್ತ ತಾ. ೧ರಿಂದ ಅಸಹಕಾರಿತ್ವದ ಚಳವಳವು ಪ್ರಾರಂಭವಾಗಿದೆ

ತಿಲಕ ಪಂಚಕ

ಭಾ। ಪ ಬಾಲಗಂಗಾಧರ ತಿಲಕನೇ! ।
ಲಾಲ ಪಾಲರ ಪೇಳಿನವನೇ! ।
ಸ್ಥೂಲ ದೇಹವ ಬಿಟ್ಟು ಸೂಕ್ಷ್ಮದೊಳೊಂದಿ ನಿಂದವನೇ
ಬೋಲತಾಂಗಿಯ ಹಿರಿಯ ಮಗನೇ! ।
ಕಾಲವನ್ನುಲ್ಲಂಘಿಸದೆ ತ್ರಿಪ ।
ಕಾಲಯಕೆ ಸ್ವಾತಂತ್ರ್ಯವನು ಬೋಧಿಸಲು ಹೋಗಿರುವೈ ।೧।
ಬೋಧಿಸಿದೆ ನೀ ಸ್ವಾರ್ಥವನು ನೀ
ಸೇದಿಸಿದೆ ಸ್ವಾರ್ಥವನು ನಮ್ಮ
ಹೋದ ವೈಭವವನ್ನು ತಹ ವ್ಯಾಪಾರವನು ಗೈದೇ ।
ಆದರದಿ ಹುಟ್ಟೂರ ಸೇವೆಯ ।
ಸಾಧಿಸಿದೆ ಅದರಂತೆ ನೀನೇ ।
ಆದೆ ಬ್ರಹ್ಮ ಕ್ಷತ್ರ ವೈಶ್ಯ ಶೂದ್ರವರ್ಣದೊಳು ॥ ೨ ॥
ಮಾತೃ ಭೂಮಿಯ ಸೇವೆಗಾಗಿಯೆ ।
ಸೂತ್ರಧಾರಕನಾದೇ ರಾಷ್ಟ್ರಕೆ
ವೃತ್ರಪದಕೆ ದಧೀಚಿ ದೇಹವನಿತ್ತವೊಲು ನೀನೂ
ತೆತ್ತೆ ಸರ್ವಸ್ವವನು ದೇಹವ ।
ನಿತ್ತೆ ನಿನಗೆಣೆ ಯಾರ ನಿಜ ಸುಜ ।
ರಿಕ್ತ! ನಿನ್ನನು ಜನಿಸಿ ನಿನ್ನಂತಾಗಲಿಲ್ಲವರೂ । ೩ ।
ಹಾಹಾ ಸೆಂದೀ ತೆರದ ಬಾಷಣ ।
ಹಿರಿವ ನಿಮ್ಮಾರವರ ಮನವನು ।
ತಿಂಗೂಳಿಸುವುದ ಸಾಧ್ಯವದರಿಂದೀಗ ದೇಹವನೂ
ತೊರೆದು ಸರ್ವ ಮಾನಸಾಬ್ಜಾಂ ।
ತರದೊಳಗೆ ವಾಸಿಸುತಲಿಲ್ಲರ ।
ಭರತಭೂಮಿಯ ಕಡೆಗೇಳವ ಯತ್ನವನು ಮಾಡಿಹನೂ । ೪ ।
ಅಂಜದಿರಿ ಪಂ ಧಾಷತೇಷುರು
ಕಂಜ ಸಖನಸ್ತ ಮಿಸೆ ಪುನರಪಿ
ಸಂಜನಿಸನೇ? ಲೋಕಮಾನ್ಯಗೆ ಮರಣವೆಲ್ಲಹ ಮೂ? ।
ಅಂಜುಬುರುಕರ ಬೇಡ ನೋಡಿರಿ ।
ಮುಂಬೋದ ತೆರದಿಂದ ಶೋಕದೀ ।
ರಂಜಿಸಲು ಬೇರೊಂದು ರೂಪದಿ ಒಹನು ದಿಟವಾಗೀ । ೫ ।

ಶಂಕರಭಟ್ಟ ಮುಳಿಯ.

ಮಂಗಳೂರು.

ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ ಹರತಾಲವು ಮಂಗಳೂರ ಪಟ್ಟಣದಲ್ಲೂ ಯೋಗ್ಯವಾಗಿ ಆಚರಿಸಲ್ಪಟ್ಟಿತು ಅಂದು ಪಟ್ಟಣದ ಅನೇಕ ಅಂಗಡಿಗಳು ಮುಚ್ಚಲ್ಪಟ್ಟಿದ್ದವು ಸಾಯಂಕಾಲ ೬ ಗಂಟೆಗೆ ಇಸ್ಲಾಮಿಯಾ ಕ್ಲಬ್ಬಿನಲ್ಲಿ ಮ। ರಾ ವಕೀಲ ಯಮ್ ಮಾಧವರಾಯರ ಅಧ್ಯಕ್ಷತೆಯಲ್ಲಿ ಪುರಜನರ ಸಭೆಯೊಂದು ನೆರೆಯಿತು ಸಭೆಯಲ್ಲಿ ಪ್ರಥಮತ ಮಿ. ಮಹಮ್ಮದ್ ಪುತ್ತೂರ ಸಾಹೇಬರು ಸೆಂಟ್ರಲ್ ಖಿಲಾಫತ್ ಕಮ್ಮಿಟಿಯ ನಿರೂಪವನ್ನು ಓದಿ ಪ್ರಾಸ್ತಾವಿಕ ಭಾಷಣವನ್ನು ಮಾಡಿದ ತರುವಾಯ ಖಿಲಾಫತ್ ಪ್ರಶ್ನೆಯನ್ನು ಕುರಿತು ರಾಜೇಶ್ರೀಗಳಾದ ಕೃಪಾಶಂಕರ ಜಿನಾಭಾಯಿಯವರು ಹಿಂದೀ ಭಾಷೆಯಲ್ಲೂ, ರಾ। ಕರೋಡಿ ಸುಬ್ಬರಾಯರು ಕರ್ನಾಟಕದಲ್ಲೂ, ಮಿ। ಆರ್ ಯಂ ರೈಯಿಯವರು ಇಂಗ್ಲಿಷಿನಲ್ಲೂ ಅರ್ಥಗರ್ಭಿತವಾದ ಗಂಭೀರ ಭಾಷಣಗಳನ್ನು ಮಾಡಿದರು ತರುವಾಯ ಸಭೆಯು ಸರ್ವಾನುಮತದಿಂದ ವೈಸರಾಯರಿಗೆ ತಂತಿ ಮೂಲಕ ಕಳುಹಿಸತಕ್ಕ ಕೆಳಗಿನ ಠರಾವುಗಳು ಪಾಸಾದವು

"ಬ್ರಿಟಿಷ ಪ್ರಧಾನ ಮಂತ್ರಿಗಳು ತುರ್ಕಿಯ ಹಾಗು ಖಿಲಾಫತ್ತಿನ ಯಶಸ್ಸನ್ನೂ ಗೌರವವನ್ನೂ ಪೂರ್ಣವಾಗಿ ಕಾಪಾಡಲಾಗುವುದೆಂದು ಭರವಸೆ ಕೊಟ್ಟ ಮಾತುಗಳ ಸ್ಪಷ್ಟತೆಯು ತುರ್ಕಿಗೆ ಈಗ ಕೊಟ್ಟ ಶರ್ತಗಳಲ್ಲಿ ಸಂಪೂರ್ಣವಾಗಿ ಕಾಣುವುದಿಲ್ಲವಾದ್ದರಿಂದ ಈ ಶರ್ತಗಳಲ್ಲಿ ಸಕಲ ಮುಸಲ್ಮಾನರಿಗೂ ಒಪ್ಪುವಂಥ ಹಿತಕರವಾದ ಪರಿವರ್ತನೆಗಳನ್ನು ಮಾಡಬೇಕಾಗಿ ಅರಿಕೆ ಪೇಶಾವರದಿಂದ ಜಮ್ರುಡ್ ಸ್ಟೇಶನಿಗೆ ರೈಲ್ವೆ ಗಾಡಿಯನ್ನು ಹತ್ತಿ ಹೋಗುತ್ತಿರುವ ನಿರಪರಾಧಿಗಳಾದ ಮಹಮ್ಮದೀಯ ಗಂಡಸರ ಮೇಲೂ ಅವರ ಹೆಂಗಸರ ಮೇಲೂ ಜುಲುಂ ನಡಿಸಿದ—ಇದರಲ್ಲಿ ದೇಶೀಯರ ಪ್ರಾಣವೂ ಕೂಡ ನಷ್ಟವಾದ—ಈ ದುಃಖಕರ ಪ್ರಕರಣದ ಚೌಕಸಿಯನ್ನು ಸರಕಾರವು ಬೇಗನೆ ನಡಿಸೀತೆಂದು ಭರವಸೆ ಇದೆ" ಮೇಲಿನ ಅಘಾತದ ಕುರಿತು ಇಟ್ಟೂ ಹಣವನ್ನು ಕೂಡಿಸುವ ಏರ್ಪಾಡುಗಳಾಗುತ್ತಿವೆ ಅಸಹಕಾರಿತೆಯ ದೀಕ್ಷೆಯನ್ನು ಹೇಗೆ ನಿರ್ವಹಿಸತಕ್ಕದ್ದು ಎಂಬುದು ಕಲ್ಕತ್ತೆಯಲ್ಲಿ ಸದ್ಯದಲ್ಲಿ ಕೂಡಲಿಕ್ಕಿರುವ ರಾಷ್ಟ್ರೀಯ ಸಭೆಯ ಜಾದಾ ಅಧಿವೇಶನವು ನಿರ್ಣಯಿಸುವ ವರೇಗೆ ಬಾಕಿ ಇಡಲಾಗುವುದು ೧ ಈ ಜಿಲ್ಲಾ ಖಿಲಾಫತ್ ಕಮ್ಮಿಟಿಯ ಅಧ್ಯಕ್ಷಸ್ಥಾನವನ್ನು ನಾಮದಾರ ಖಾನ್ ಸಾಹೇಬ ಹಾಜಿ ಅಬ್ದುಲ್ಲ ಹಾಜಿ ಖಾಸಿಂ ಸಾಹೇಬರು ವಹಿಸಿಕೊಳ್ಳುವರಾಗಿಯೂ, ಮಿ ಮಹಮ್ಮದ್ ಪುತ್ತೂರ ಸಾಹೇಬ ಮತ್ತು ಮ ರಾ। ಕಾರ್ನಾಡ ಸದಾಶಿವರಾಯರು ಕಾರ್ಯದರ್ಶಿಗಳಾಗಿರುವರಾಗಿಯೂ, ಈ ವರೆಗೆ ಹದಿನಾಲ್ಕು ಮೆಂಬರು ಸೇರಿರುವಂತೆಯೂ ತಿಳಿಯುತ್ತೇವೆ.

ಪ್ರಮುಖ ದೇಶಭಕ್ತರಾದ ಮಹಾತ್ಮಾಗಾಂಧಿ ಮೌ। ಶೌಕತ್‌ಅಲ್ಲಿ ಮಿ ಯಾಕೂಬ್ ಹುಸೇನ್ ಮತ್ತು ಮದ್ರಾಸ ನ್ಯಾಯವಿಧಾಯಕ ಸಭೆಯ ಲೋಕನಿಯುಕ್ತ ಮೆಂಬರರಾದ ರಾ। ಸಿ ರಾಜಗೋಪಾಲಾಚಾರ್ಯರು ಈ ತಿಂಗಳ ಅಂತ್ಯದೊಳಗಾಗಿಯೇ ನಮ್ಮ ಜಿಲ್ಲೆಯನ್ನು ಸಂದರ್ಶಿಸಲಿಕ್ಕಿರುವರು

ಎಂದು ತಿಂಗಳ ಹೆಚ್ಚಿಗೆಯಾದ ಸಜೆಯನ್ನು ವಿಧಿಸಲ್ಪಟ್ಟ ಈ ಜಿಲ್ಲೆಯ ಕೈದಿಗಳು ಕನ್ನಾನೂರು ಸೆಂಟ್ರಲ್ ಜೈಲಿಗೆ ಕಳುಹಿಸಲ್ಪಡುತ್ತಿದ್ದರು ಮುಂದಕ್ಕೆ ಮೂರು ತಿಂಗಳ ವರೇಗಿನ ಶಿಕ್ಷೆಯನ್ನು ವಿಧಿಸಲ್ಪಟ್ಟ ಅಪರಾಧಿಗಳು ಮಂಗಳೂರ ಸಬ್ ಜೈಲಿನಲ್ಲೇ ಈ ಸಜೆಯನ್ನು ಅನುಭವಿಸಬೇಕಾಗಿ ಸರಕಾರದ ಹುಕುಂ ಹೊರಟಿರುವುದಾಗಿ ತಿಳಿಯುತ್ತದೆ

ನಾಮದಾರ ಖಾನ್ ಸಾಹೇಬ ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬರು ಉಡುಪಿಯ ತಾಲೂಕುಬೋರ್ಡ ಪ್ರೆಸಿಡೆಂಟರಾಗಿಯೂ ಮ ರಾ ಕ ಸದಾಶಿವ ಶೆಟ್ಟರು ಕಾರ್ಕಳ ತಾಲೂಕುಬೋರ್ಡ ಪ್ರೆಸಿಡೆಂಟರಾಗಿಯೂ ಮ ರಾ ಹಲಸನಾಡ ಮಾಧವಯ್ಯನವರು ಕುಂದಾಪುರ ತಾಲೂಕುಬೋರ್ಡ ಪ್ರೆಸಿಡೆಂಟರಾಗಿಯೂ ನೇಮಕವಾಗಿದೆ

ಮದರಾಸ ಬ್ಯಾಂಕ ಮುಂತಾದ ಎಲ್ಲಾ ದ್ರವ್ಯನಿಧಿಗಳಲ್ಲಿ ಹಾಕುವ ಠೇವಣಿ ಬಡ್ಡಿಯು ಹೆಚ್ಚಿಸಲಾಗಿದೆ ಕೋ ಆಪರೇಟಿವ್ ಸಂಸ್ಥೆಗಳೂ ಕೂಡ ಹಣದ ಮೇಲಿನ ಬಡ್ಡಿಯನ್ನು ಹೆಚ್ಚಿಸಿದ ವಿನಹ ತಮ್ಮ ಕಾರ್ಯಗಳನ್ನು ಸುಲಭವಾಗಿ ನಿರ್ವಹಿಸಲಿಕ್ಕಿಲ್ಲವು ಹೀಗಿರುವುದರಿಂದ ದ್ರವ್ಯಸಂಗ್ರಹವನ್ನು ಹೆಚ್ಚಿಸಲು ಮುಂದಕ್ಕೆ ಸೆಂಟ್ರಲ್ ಬ್ಯಾಂಕುಗಳು ತಾವು ಪಡೆಯುವ ಕಾಯಂ ಠೇವಣಾತಿಗಳಿಗೆ ಸೇಕಡಾ ೬ ರಿಂದ ೭½ ವರೆಗಿನ ಬಡ್ಡಿಯನ್ನು ಕೊಡತಕ್ಕದ್ದು ಈ ಸೆಂಟ್ರಲ್ ಬ್ಯಾಂಕುಗಳು ತಮ್ಮನ್ನು ಆಧರಿಸಿರುವ ಸಂಘಗಳಿಗೆ ಸೇಕಡಾ ೯॥ರ ದರದಲ್ಲಿ ಹಣವನ್ನು ಒದಗಿಸಿ ಕೊಡತಕ್ಕದ್ದು ಮತ್ತು ಈ ಸಂಘಗಳು ತಮ್ಮ ಮೆಂಬರರಿಗೆ ಒದಗಿಸುವ ಸಾಲಗಳ ಮೇಲೆ ಸೇಕಡಾ ೧೦—೧೪—೦ ರ ಬಡ್ಡಿಯನ್ನು ಪಡೆಯುವ ಏರ್ಪಾಡುಗಳನ್ನು ಸದ್ಯದಲ್ಲಿ ಮಾಡತಕ್ಕದೆಂದು ಸಹಕಾರಿ ಸಂಘಗಳ ರಿಜಿಸ್ಟ್ರಾರ ಸರ್ಕೂಲಾರು ಹೊರಟಿದೆ

ಕಳೆದವಾರ ಪ್ರಕಟಿಸಿದಂತೆ ಮಂಜೇಶ್ವರ ಮದನಂತೇಶ್ವರ ದೇವಸ್ಥಾನದ ಬಗ್ಗೆ ತಯಾರಾದ ಸ್ಕೀಮಿನ ಕುರಿತು ಆಲೋಚಿಸಲು ಕೂಡಿದ ಗೌಡಸಾರಸ್ವತ ವೈದಿಕರ ಸಭೆಯಲ್ಲಿ ಕೆಳಗಿನ ಠರಾವುಗಳು ಮಂಜೂರಾದವು 'ಈ ಸ್ಕೀಮಿನಲ್ಲಿ ಗೃಹಸ್ಥರಿಗಿರುವ ಓಟಿನ ಹಕ್ಕಿನಂತೆ ವೈದಿಕರಿಗೂ ಓಟು ಕೊಡುವ ಹಕ್ಕಿರತಕ್ಕದ್ದು' ಟ್ರಸ್ಟಿಯ ಕೌನ್ಸಿಲಿನಲ್ಲಿ ಧರ್ಮಕಾರ್ಯಗಳನ್ನು ತಿಳಿದ ಒಬ್ಬ ವೈದಿಕನಾದರೂ ಸಭಾಸದನಾಗಿರತಕ್ಕದ್ದು ಇವೇ ಮುಖ್ಯವಾದವುಗಳು

ನ್ಯಾಯವಿಧಾಯಕ ಸಭೆಯ ಮೆಂಬರಿಕೆಯ ಸ್ಥಾನಕ್ಕೆ ಕ್ರೈಸ್ತರ ಪರವಾಗಿ ಇಲ್ಲಿಯ ಗವರ್ನಮೆಂಟ್ ವಕೀಲ ಮಿ. ಎ ಜಿ. ಲೋಬೋರವರೂ ಒಬ್ಬ ಉಮೇದ್ವಾರರಾಗಿದ್ದಾರೆ

ಮಹಾತ್ಮಗಾಂಧಿಯವರ ಉಪದೇಶಗಳು.

(ಬರೆದು ಬಂದದ್ದು — ಒಬ್ಬ ದಾತೃದಾರರಿಂದ).

ಬುದ್ಧ ಭಗವಾನ ಹೃದಯದಲ್ಲಿ ಎಲ್ಲ ಪ್ರಾಣಿಗಳ ಮೇಲೆ ಯಾವ ಪ್ರೀತಿಯು ತುಂಬಿದ್ದಿತು ಆ ಪ್ರೀತಿಯು ತನ್ನಲ್ಲಿರುವುದರಿಂದ, ಮಹಾತ್ಮರೆಂದು ಹೆಸರು ಪಡೆದ ಗಾಂಧಿಯವರ ಉಪದೇಶಗಳಲ್ಲಿ ಕೆಲವನ್ನು ಹೇಳುತ್ತೇನೆ. ಸತ್ಯಾಗ್ರಹ ಸ್ವದೇಶಿ ಮತ್ತು ದೇಶಭಾಷೆಗಳ ಅಭಿವೃದ್ಧಿ ಎಂಬ ಈ ಮೂರು ಅತ್ಯಂತ ಮುಖ್ಯವಾದುವು

ಮನೋವಾಕ್ಕಾಯಗಳಿಂದ ಸತ್ಯವ್ರತವನ್ನಾಚರಿಸುವುದೇ ಸತ್ಯಾಗ್ರಹ ಅಸತ್ಯವನ್ನು ಅನ್ಯಾಯವನ್ನು ಮನಸ್ಸಿನಲ್ಲಿ ಯೋಚಿಸಬಾರದು ಹೇಳಬಾರದು ಮಾತುಗಳನ್ನು ಎಂದಿಗೂ ಹೇಳಬಾರದು ಹೇಳಬೇಕಾದುದನ್ನು ಯಾರ ಹೆದರಿಕೆಯೂ ಇಲ್ಲದೆ ಹೇಳಲೇ ಬೇಕು ಅಂತೆಯೇ ಮಾಡಬೇಕಾದ ಕೆಲಸವನ್ನು ಎಷ್ಟು ಕಷ್ಟಗಳು ಬಂದಾಗ್ಯೂ ಮಾಡಿಯೇ ತೀರಿಸಬೇಕು. ಧರ್ಮಮಾರ್ಗದಲ್ಲಿ ನಡೆಯುವವರಿಗೆ ಕಷ್ಟಗಳು ಬಂದೇ ಬರುವುವು ಸತ್ಯಾಗ್ರಹಿಯು ಎಷ್ಟು ಕಷ್ಟಗಳು ಬಂದರೂ ಸಹಿಸಿಕೊಳ್ಳಲು ಸಿದ್ಧನಾಗಿರಬೇಕು ಯಾರು ಕಷ್ಟವನ್ನು ತಂದೊಡ್ಡುವನೋ ಅವನನ್ನು ದ್ವೇಷಿಸಬಾರದು ಎಲ್ಲರನ್ನು ಪ್ರೀತಿಸುವುದೇ ಅವನ ಧರ್ಮ ಮಗನು ತಂದೆಯನ್ನು ಕಷ್ಟಪಡಿಸಿದರೆ ತಂದೆಯು ಏನು ಮಾಡುವನು? ಮಗನನ್ನು ದ್ವೇಷಿಸಬಲ್ಲನೇ? ತಂದೆಯು ಆ ಕಷ್ಟವನ್ನು ಸಹಿಸಿಕೊಳ್ಳುವುದನ್ನು ನೋಡಿ ಮಗನ ಬುದ್ಧಿಯು ತನ್ನಿಂದತಾನೆ ಬದಲಾಗುವುದು ನಾವು ಯಾರನ್ನು ಪ್ರೀತಿಸುತ್ತೇವೆಯೋ ಅವರು ನಮಗೆ ದುಃಖವನ್ನಿತ್ತರೆ, ಅದಕ್ಕೆ ಬದಲಾಗಿ ನಾವು ಅವರನ್ನು ದ್ವೇಷಿಸಲು ಸಾಧ್ಯವಿಲ್ಲ ಆ ದುಃಖವನ್ನು ಸಹಿಸುತ್ತೇವೆಯೇ ವಿನಾ ಅದಕ್ಕಾಗಿ ಪ್ರತೀಕಾರವನ್ನು ಕೈಕೊಳ್ಳುವುದಿಲ್ಲ ಯಾರ ಹೃದಯದಲ್ಲಿ ಸ್ವಲ್ಪವಾದರೂ ಪ್ರೀತಿಯು ಇದೆಯೋ ಅವನಿಗೆ ಇದು ತಿಳಿಯದೆ ಇಲ್ಲ ಸಹನಾಶಕ್ತಿಯೇ ಸತ್ಯಾಗ್ರಹಿಯ ಮುಖ್ಯವಾದ ಗುಣ ಪ್ರಹ್ಲಾದನು ತಂದೆಯು ಕೊಟ್ಟ ಎಷ್ಟೊಂದು ಕಷ್ಟಗಳನ್ನು ಸಹಿಸಲಿಲ್ಲ ಅವನು ಸತ್ಯಾಗ್ರಹಿಯು ಅಹಿಂಸೆಯೇ ಸತ್ಯಾಗ್ರಹಿಯ ಪರಮ ಧರ್ಮ ಇತರರನ್ನು ಹಿಂಸಿಸುವುದಕ್ಕಿಂತ ಎಷ್ಟು ಕಷ್ಟಗಳನ್ನಾದರೂ ತಾನೇ ಸಹಿಸುವನು ಸತ್ಯವನ್ನು ಬಿಡದೆ ಅನ್ಯರನ್ನು ಹಿಂಸಿಸದೆ ಎಲ್ಲರನ್ನು ಪ್ರೀತಿಸುತ್ತ ಎಷ್ಟು ಕಷ್ಟಗಳನ್ನಾದರೂ ಸಹಿಸಲು ಸಿದ್ಧನಾಗಿರುವನಾವನೋ ಅವನು ಸತ್ಯಾಗ್ರಹಿಯು ದೇಶ ಸೇವೆಯನ್ನು ಕೈಕೊಳ್ಳುವ ಮಹನೀಯರು ಮಾತ್ರ ಸತ್ಯಾಗ್ರಹವನ್ನು ಅಭ್ಯಸಿಸುವುದಲ್ಲ ಪ್ರತಿ ಒಬ್ಬನೂ ಸತ್ಯಾಗ್ರಹಿಯಾಗಲೆತ್ನಿಸಬೇಕು

ಸ್ವದೇಶಿ ಎಂಬುದು ಇನ್ನೊಂದು ವ್ರತ ಸತ್ಯಾಗ್ರಹಿಯು ಇದನ್ನು ಆಚರಿಸಬೇಕು ಇತರ ದೇಶಗಳಿಗೇನಾದರೂ ಚಿಂತೆಯಿಲ್ಲ, ತನ್ನ ದೇಶವು ಉದ್ಧಾರವಾದರೆ ಸರಿ ಎಂಬುವ ಸ್ವಾರ್ಥಬುದ್ಧಿಯ ದೇಶವಾತ್ಸಲ್ಯವು ಸ್ವದೇಶಿಯಲ್ಲ ಇಂತಹ ದೇಶವಾತ್ಸಲ್ಯವನ್ನೇ ಇರಿಂದ್ರನಾಥ ಠಾಕೂರರವರ ಖಂಡಿಸುತ್ತಿರುವರು ಸ್ವದೇಶಿಯು ಸ್ವಾರ್ಥಬುದ್ಧಿಯ ದಂತೊಂದಲ್ಲಿ ತನ್ನ ಹತ್ತಿರದಲ್ಲಿರುವವರಿಗೆ ಸಲ್ಲಬೇಕಾದ ಕರ್ತವ್ಯವನ್ನು ಸಲ್ಲಿಸಿದವನಿಗೆ ಮಾತ್ರ ಇತರರನ್ನು ಸೇವಿಸುವ ಯೋಗ್ಯತೆಯು ಪ್ರಾಪ್ತವಾಗುವುದೆಂಬ ತತ್ವವನ್ನು ಸಾರುವುದು ಒಂದೇ ಬಾರಿಗೆ ನಾವು ಇಡೀ ಮಾನವ ಕುಲವನ್ನು ಪ್ರೀತಿಸಲಾರೆವು ಮೊದಲಿಗೆ ತನ್ನ ಕುಟುಂಬಿಗಳನ್ನು, ತನ್ನ ಊರಿನವರನ್ನು, ತನ್ನ ದೇಶವನ್ನು ಮತ್ತು ಇಡೀ ಮಾನವ ಕುಲವನ್ನು ಹೀಗೆ ಪ್ರೀತಿಯು ಸ್ವಲ್ಪಸ್ವಲ್ಪವಾಗಿ ವೃದ್ಧಿಯನ್ನು ಹೊಂದುವುದು ಅಲ್ಲದೆ ನಮ್ಮ ಹತ್ತಿರದಲ್ಲಿರುವವರಿಂದ ನಾವು ಎಷ್ಟೋ ಉಪಕಾರಗಳನ್ನು ಪಡೆದಿರುತ್ತೇವೆ ಆ ಋಣವನ್ನು ನಾವು ಸಲ್ಲಿಸದಿದ್ದರೆ ಕರ್ತವ್ಯಭ್ರಷ್ಟರಾಗುವೆವು ಇಡೀ ಜನಾಂಗವೇ ಒಂದೆಂಬುವ ಉತ್ಕೃಷ್ಟ ಭಾವದ ದೇಶವಾತ್ಸಲ್ಯವೆ ಸ್ವದೇಶಿ ವ್ರತದ ಮೂಲಮಂತ್ರ ಒಬ್ಬನು ಇನ್ನೊಬ್ಬನೊಡನೆ ವರ್ತಿಸುವಾಗ ಹೇಗೆ ಸ್ವಾರ್ಥವನ್ನು ತೋರಲಾಗದೋ ಹಾಗೆಯೇ ಒಂದು ಜನಾಂಗವು ಇನ್ನೊಂದು ಜನಾಂಗದೊಡನೆ ಸ್ವಾರ್ಥಬುದ್ಧಿಯನ್ನು ತೋರಲಾಗದು ಹುಟ್ಟಿ ಬೆಳೆದ ಕರ್ಮಭೂಮಿಗೆ ಸಲ್ಲಬೇಕಾದ ಕರ್ತವ್ಯವನ್ನು ಕೈಕೊಳ್ಳುವುದೇ ಸ್ವದೇಶಿ — ಇಡೀ ಮಾನವ ಕುಲವನ್ನು ಪ್ರೀತಿಸಲೆಳಸುವವರಿಗೆ ಇದೊಂದು ಮೆಟ್ಟಿಲು ನಮ್ಮ ಜೀವನಕ್ಕೆ ಬೇಕಾದ ವಸ್ತುಗಳನ್ನು ನಾವು ಯಾರನ್ನು ಪ್ರೀತಿಸುತ್ತೇವೆಯೋ ಅವರಿಂದಲೇ ಪಡೆಯುವುದು ಯೋಗ್ಯವಾದುದು ಮಗುವು ತನಗೆ ಬೇಕಾದುದನ್ನು ತಾಯಿಯೊಡನೆ ಬೇಡುವುದಲ್ಲದೆ ಇತರರೊಡನೆ ಬೇಡುವುದಿಲ್ಲ ತಾಯಿಯು ಕೊಟ್ಟುದರಲ್ಲಿಯೇ ಅದು ತೃಪ್ತಿಯನ್ನು ಪಡೆಯುವುದು ಭಾರತ ಜನನಿಯು ಕೊಡುವ ಅನ್ನವಸ್ತ್ರಾದಿಗಳಿಂದ ನಾವು ತೃಪ್ತರಾಗಬೇಕು ನಾವು ಪ್ರೀತಿಸುವವರು ಕೊಟ್ಟ ವಸ್ತುಗಳಲ್ಲಿರುವ ರುಚಿಯು ಬೇರೊಬ್ಬರು ಕೊಟ್ಟ ವಸ್ತುಗಳಲ್ಲಿದ್ದೀತೆ? ನಮ್ಮೊಡನೆ ಹುಟ್ಟಿ ಬೆಳೆದ ಸಾವಿರಾರು ಮಂದಿ ನಮ್ಮ ಸಹೋದರ ಸಹೋದರಿಯರು ಉಪವಾಸ ಬೀಳುತ್ತಿರುವಾಗ ಇತರರಿಗೆ ನಾವು ಗಳಿಸಿದ ದ್ರವ್ಯವನ್ನೆಲ್ಲ ಕೊಟ್ಟು ಬಟ್ಟೆ ಮೊದಲಾದುವನ್ನು ಕೊಂಡುಕೊಂಡು ನಾವು ಜೀವಿಸಲೇಕೆ? ನಮ್ಮ ದೇಶದಲ್ಲಿ ತಯಾರಿಸಿದ ವಸ್ತುಗಳನ್ನು ಮಾತ್ರ ಉಪಯೋಗಿಸಿಕೊಳ್ಳುವೆವೆಂಬ ಪ್ರತಿಜ್ಞೆಯನ್ನಿಟ್ಟುಕೊಳ್ಳುವುದು ಸ್ವದೇಶಿ ವ್ರತವನ್ನಾಚರಿಸುವವರ ಒಂದು ಕರ್ತವ್ಯ

ಹೇಗೆ ನಮ್ಮ ದೇಶದಲ್ಲಿ ಬೆಳೆದ ವಸ್ತುಗಳನ್ನು ನಾವು ಆದರಿಸಬೇಕೋ ಹಾಗೆಯೇ ನಮ್ಮ ಭಾಷೆಗಳನ್ನೂ ನಾವು ಗೌರವಿಸಬೇಕು ಅನ್ಯರಿಂದ ಆಂಗ್ಲೇಯರ ಭಾಷೆಗೋಸುಗ ನಮ್ಮ ಮಾತೃಭಾಷೆಗಳನ್ನು ತಿರಸ್ಕರಿಸುವುದು ಎಂದೆಂದಿಗೂ ಯೋಗ್ಯವಲ್ಲ ಈಗ ಶಾಲೆಗಳಲ್ಲೆಲ್ಲ ಆಂಗ್ಲಭಾಷೆಯಲ್ಲಿಯೇ ವಿದ್ಯಾಭ್ಯಾಸವು ನಡೆಯುತ್ತಿರುವುದು ಇದರಿಂದ ವಿದ್ಯೆಯನ್ನು ಪಡೆದವರಿಗೂ ಇತರರಿಗೂ ಸಂಬಂಧವಿಲ್ಲದಂತಾಗಿದೆ ವಿದ್ಯಾವಂತರು ದೇಶೀಯ ಭಾಷೆಗಳನ್ನು ಗೌರವಿಸಬೇಕು ಆಗ ವಿದ್ಯೆ ಇಲ್ಲದಿದ್ದವರಿಗೆ ಅವರು ವಿದ್ಯೆಯನ್ನು ಕೊಡಲು ಸಮರ್ಥರಾಗುವರು ಆಂಗ್ಲಭಾಷೆಯಲ್ಲಿ ಹೆಚ್ಚಿನ ವಿದ್ಯೆಯನ್ನು ಪಡೆಯುವುದೂ ಸಾಧ್ಯವಿಲ್ಲ ಭಾಷೆಯನ್ನು ಕಲಿಯಲು ನಮ್ಮ ಎಷ್ಟೋ ಸಮಯ ಬೇಕಾಗುವುದು ನಮ್ಮ ಪೂರ್ವಿಕರ ವಿದ್ಯೆಯನ್ನು ಬಿಟ್ಟು ಆಂಗ್ಲೇಯ ವಿದ್ಯೆಯನ್ನು ಪಡೆದುದರಿಂದ ಹೆಚ್ಚಿನ ಸಾರ್ಥಕವೂ ಆಗುವಂತಿಲ್ಲ ಆಂಗ್ಲ ವಿದ್ಯೆಯು ಬೇಡವೆಂದಲ್ಲ ನಮ್ಮದನ್ನು ನಾವು ಮೊದಲಾಗಿ ಕಲಿಯಬೇಕು ನಮ್ಮ ದೇಶದಲ್ಲಿ ಅನೇಕ ಭಾಷೆಯನ್ನಾಡುವ ಜನರಿರುವರು ಎಲ್ಲರಿಗೂ ತಿಳಿಯುವ ಒಂದು ಸಾಮಾನ್ಯ ಭಾಷೆಯು ಅಗತ್ಯವಿದೆ ಆಂಗ್ಲ ಭಾಷೆಯು ಸಾಮಾನ್ಯ ಭಾಷೆಯಾಗಲು ಸಾಧ್ಯವಿಲ್ಲ ದೇಶದಲ್ಲಿ ಅನೇಕರಿಗೆ ತಿಳಿದಿರುವ ಹಿಂದೀ ಭಾಷೆಯೇ ಇದಕ್ಕೆ ಯೋಗ್ಯವಾದುದು ಈ ಭಾಷೆಯನ್ನು ಪ್ರತಿ ಒಬ್ಬನು ಕಲಿಯಲೇ ಬೇಕು.

ಮಹಾತ್ಮ ಗಾಂಧಿಯವರ ಉಪದೇಶಗಳು ಇವು. ಇವುಗಳ ಬಂದೇ ಬಾರಿಗೆ ಎಲ್ಲವನ್ನೂ ಆಚರಿಸುವುದು ಸಾಧ್ಯವಿಲ್ಲ. ಆದರೂ ಸತ್ಯಾಗ್ರಹ — ಸ್ವದೇಶಿ — ದೇಶಭಾಷಾಭಿವೃದ್ಧಿಯೆಂಬ ಮೂರು ತತ್ವಗಳನ್ನಾದರೂ ನೆನೆಸಿನಲ್ಲಿಡಬೇಕು.

ಪ್ರಾಥಮಿಕ ಶಿಕ್ಷಣದ ಬಿಲ್ಲ್.

ಈದರ ಮುಖ್ಯ ಸಾರಾಂಶವನ್ನು ಹಿಂದಿನ ಸಂಚಿಕೆಗಳಲ್ಲಿ ಪ್ರಕಟಿಸಿದ್ದೇವೆ. ಈ ಮಸೂದೆಯು ಮದ್ರಾಸು ನ್ಯಾಯವಿಧಾಯಕ ಸಭೆಯ ಸಬ್ ಕಮಿಟಿಯವರಿಂದ ಅಲ್ಪ ಸ್ವಲ್ಪ ಬದಲಾವಣೆ ಹೊಂದಿ ಸರಕಾರದವರ ಬಳಿಸೇರಿದೆ ಮುಂದಿನ ಅಧಿವೇಶನಗಳಲ್ಲಿ ಅದು ಚರ್ಚೆಗೆ ಬರಲಿಕ್ಕಿರುವುದು ಈ ಸಬ್ ಕಮಿಟಿಯಲ್ಲಿದ್ದ (ನಾನ್ ಅಫಿಷಿಯಲ್) ಬಿನ ಸರಕಾರಿ ಮೆಂಬರರಲ್ಲಿ ಕೆಲವರು ಈ ಮಸೂದೆಯ ರಚನೆಯಲ್ಲಿ ತಮಗೆ ಕಂಡು ಬಂದ ಕೆಲವು ಆಕ್ಷೇಪಗಳನ್ನು ಈ ಮಸೂದೆಯೊಂದಿಗೆ ಸರಕಾರಕ್ಕೆ ಬರೆದು ತಿಳಿಸಿದ್ದಾರೆ ಈ ಎಡ್ಯುಕೇಶನಲ್ ಕೌನ್ಸಿಲುಗಳು ಬೇರೆ ನಿರ್ಮಾಣ ಮಾಡುವುದು ಅಗತ್ಯವಿಲ್ಲ ಈಗಿನ ಡಿಸ್ಟ್ರಿಕ್ಟ್ ಬೋರ್ಡುಗಳಿಗೆನೆ ಈ ಅಧಿಕಾರವನ್ನು ಕೊಡಬಹುದಿತ್ತು ಎಂಬದು ಇವರ ಮುಖ್ಯ ಸೂಚನೆ ಡಿಸ್ಟ್ರಿಕ್ಟ್ ಬೋರ್ಡುಗಳು ಬೇರೆ ಹಲವು ಜವಾಬ್ದಾರಿಗಳನ್ನು ವಹಿಸಿರುವಾಗ ಈ ವಿದ್ಯಾಪ್ರಚಾರದ ಜವಾಬ್ದಾರಿಯನ್ನು ಹೊರಲಾರವೇ ಎಂದು ಈ ಮೆಂಬರರು ಕೇಳುತ್ತಾರೆ ಡಿಸ್ಟ್ರಿಕ್ಟ್ ಬೋರ್ಡುಗಳ ಮೀಟಿಂಗುಗಳಲ್ಲಿ ವಿಶೇಷ ಚರ್ಚೆಗೆ ಬರುವ ವಿಷಯಗಳು ಎಂಜಿನಿಯರ್ ಇಲಾಖೆಯ ಅಂದಾಜುಪಟ್ಟಿಗಳು ತಮ್ಮ ಕೈಕೆಳಗಿನ ತಜ್ಞರ ಸಹಾಯದಿಂದ ತಯಾರಿಸಿದ್ದಲ್ಲದೆ ಇವುಗಳಿಗೆ ಸಂಬಂಧಪಟ್ಟ ಶೆಡ್ಯೂಲುಗಳ ವಿಮರ್ಶೆ, ದೊಡ್ಡ ಮೊಬಲಗಿನ ಅಂದಾಜು ಪಟ್ಟಿಗಳ ವಿವರಣೆಯು ಸರಕಾರದ ಬೇರೆ ಜವಾಬ್ದಾರ ದೊಡ್ಡ ನೌಕರರಿಂದ ಸಾಗುತ್ತದೆ ಅಂಥ ಪಟ್ಟಿಗಳನ್ನು 'ಪಾಸ್' ಮಾಡುವಾಗ ಮೆಂಬರರು ಕಣ್ ತೂಗಿದರೂ ಒಂದೇ, ತೂಗದಿದ್ದರೂ ಒಂದೇ ಆರೋಗ್ಯ ಸಂಬಂಧವಾದ ವಿಚಾರವೂ ಹೀಗೆಯೇ ಇದೆ ಬರಿ ಮೊಬಲಗನ್ನು ಸಂಕ್ಷನ್ ಮಾಡುವ ಅಧಿಕಾರವನ್ನು ಮೆಂಬರರ ವಹಿಸುತ್ತಾರಲ್ಲದೆ ಅದರ ವಿಲೇವಾರಿ ವಹಿವಾಟುಗಳಲ್ಲಿ ಪ್ರವೇಶವಾಗುವುದಿಲ್ಲ ಇನ್ನು ಕೆಲವು ಕಡೆಗಳಲ್ಲಿ ಸೆಕೆಂಡರಿ ಶಾಲೆಗಳು ಈ ಬೋರ್ಡುಗಳ ಕೈಯಲ್ಲಿವೆ ಇವುಗಳ ಸಂಖ್ಯೆ ಕಡಿಮೆಯಾಗಿದ್ದು ಕೆಲವೆಡೆಯಲ್ಲಿ ಈ ಶಾಲೆಗಳು ಫೈನಾನ್ಸಿನ ಅಭಾವದಿಂದ ನಿರ್ಜೀವಾವಸ್ಥೆಯಲ್ಲಿ ಇವೆ ಏನೋ ಏನೋ ಕೆಲಸವು ಸಾಗುತ್ತಿದೆ ಇವರ ಅಂದಾಜು ಪಟ್ಟಿಲಿಕ್ಕೆ ಮೆಂಬರರಲ್ಲಿ ಅನೇಕರ ಪ್ರೋತ್ಸಾಹ ಇದೆ ಕೆಲವು ಸಂದರ್ಭಗಳಲ್ಲಿ ಗೊತ್ತಿದ್ದರೂ ಕಡಿಮೆ ಮೊಬಲಗಿನ ಪತ್ರ ಸ್ಕೂಲ್ ಫೈನಲ್ ಪಾಸ್ ಆದವರಿಗೆ ಹೆಚ್ಚು ಸಂಬಳ ಕೊಡಬೇಕಾಗುವುದು ಸುಮ್ಮಗಾಗುತ್ತಾರೆ ಆದರೆ ಅಲ್ಲಿ ಫೈಲಾಗುವುದಕ್ಕೆ ಇಂಥ ಶಾಲೆಗಳ ಕೆಲವಷ್ಟಕ್ಕೆ ಕಾರಣಗಳಾಗಿವೆ ಎಂಬುದು ಅವರ ಸ್ಮರಣೆಗೆ ಬರುವುದಿಲ್ಲ ಸ್ಕೂಲ್ ಫೈನಲಿನ ಧ್ಯೇಯಕ್ಕೆ ಸರಿಯಾದ ಶಿಕ್ಷಣವನ್ನು ಕೆಳಗಿನ ಕ್ಲಾಸುಗಳಲ್ಲಿಯೇ ಕೊಟ್ಟುಕೊಂಡು ಬರಬೇಕೆಂಬ ಭಾವನೆಯು ಇವರಲ್ಲಿ ಮೂಡುವುದೂ ಇಲ್ಲ ಅಂತೂ ಕೆಲಸದ ಅವ್ಯವಸ್ಥೆಯ ಸಿವಿಲ್ ಸರ್ವೆಂಟರಾಗಲಿ ಸಾಹಿತ್ಯಸೇವೆಗಾಗಲಿ ಅಭಾವದಿಂದಾಗಲಿ ಶಿಕ್ಷಣದ ಸ್ಥಿತಿಯು ಬದಲಾಯಿಸದೆ, ಸಾಧಾರಣಗೆ ಬಾರದ ತುಟ್ಟಿಯಲ್ಲಿರುವಾಗ ಒಂದೇ ಒಂದಾಗಿ ಸ್ಕೂಲ್ ಫೈನಲ್ ಇಂಟರ್ಮಿಡಿಯೆಟ್ ಪರೀಕ್ಷೆಗಳ ಮಾನವನ್ನು ದೊಡ್ಡದಾಗಿ ಮಾಡಿದರೆ ಕೊಂಡಲಿ' ಬರುವ ಸಂದರ್ಭಗಳು ಹೆಚ್ಚು ಎಂಬ ವಿಷಯವು ಜನಸಾಮಾನ್ಯಕ್ಕೆ ಗೊತ್ತಾಗುವುದು ಇಲ್ಲ ಹೀಗಿರುವಾಗ ಇಂಥ ಬೋರ್ಡುಗಳ ಕೈಯಲ್ಲಿ ಹಳ್ಳಿ ಶಾಲೆಗಳ ವಿದ್ಯಾಭ್ಯಾಸವನ್ನು ವಹಿಸಿಕೊಡುವುದು ಎಷ್ಟರಮಟ್ಟಿಗೆ ಪ್ರಯೋಜನಕಾರಿಯಾದೀತು ಇಂಥ ಬೋರ್ಡುಗಳ ಅಂಶವಾಗಿರುವ ತಾಲೂಕು ಬೋರ್ಡುಗಳು ಈ ಭಾರವನ್ನು ವಹಿಸಿವೆ ಮುನ್ಸಿಪಾಲಿಟಿಗಳೂ ಈ ಪ್ರಾಥಮಿಕ ಶಿಕ್ಷಣದ ಭಾರವನ್ನು ವಹಿಸಿವೆ ಅವು ಎಷ್ಟರಮಟ್ಟಿಗೆ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಡೆಸುತ್ತಿವೆ ಎಂಬವನ್ನು ಆ ಶಾಲೆಗಳಿಗೆ ಪ್ರವೇಶ ಮಾಡಿ ನೋಡಬೇಕೇ ಹೊರತು ಬರೇ ಲೇಖನಿಯಿಂದ ವರ್ಣಿಸಿ ಪ್ರಯೋಜನವಿಲ್ಲ ಒಮ್ಮೆ ನೋಡಿದಾಗ ಇಷ್ಟೆಲ್ಲ ಹಣವು ಚೆಲ್ಲಿಸಿನ ಫಲಿತಾಂಶವನ್ನು ಕೊಡದೆ ವಿಪರ್ಯಯವಾಗುತ್ತದಲ್ಲ ಎಂದು ಬುದ್ಧಿ ಮರುಗುತ್ತದೆ ತಾಲೂಕು ಬೋರ್ಡ ಪ್ರಸಿಡೆಂಟರಿಗೂ ವಿದ್ಯಾ ಇಲಾಖೆಯ ಅಧಿಕಾರಿಗೂ ಮನಸ್ತಾಪಗಳು ಒಂದು ಕಡೆ, ಗುಮಾಸ್ತೆಯರ ಒಳಸಂಚು, ಇನ್ನೊಂದು ಕಡೆ ಬಡ ಉಪಾಧ್ಯಾಯರ ವರ್ಗಾವರ್ಗಿ, ಮತ್ತೊಂದು ಕಡೆ, ಇವರ ಅವ್ಯವಸ್ಥೆ ಇಲ್ಲದೇ ಇಂಗ ಒಟ್ಟು ಸೇರಿದರೂ ಹಣವು ಬಹಳ ಪಟ್ಟಿಗೆ ದುರ್ವ್ಯಯವಾಗುತ್ತದೆ ಈ ರೀತಿ ಅನೇಕಾನೇಕ ಮೆಂಬರರ ದೃಷ್ಟಿ ಬೀಳುವುದೂ ಇಲ್ಲ ತಮಗೆ ಓಟಿಂದಾಗಿಗೆ ಕೆಲಸ ಸಿಗುವಂತೆ ಯತ್ನಿಸುವ ಕಾಲದಲ್ಲಿ ಅಲ್ಲದೆ ಇತರ ಸಂದರ್ಭಗಳಲ್ಲಿ ಮೆಂಬರರು ಸರಿಯಾಗಿ ಇಲ್ಲ ಇಂಥ ಮೆಂಬರರ ಮೇಲೆ ಆಧರಿಸಿ ಸರಕಾರವು ಹೊಸ ಕಂದಾಯಗಳನ್ನು ಹಾಕುವುದಾಗಲಿ ಹೊಸ ಶಾಲೆಗಳನ್ನು ಏರ್ಪಡಿಸುವುದಾಗಲಿ ಎಂದೆಂದಿಗೂ ಸಲ್ಲದು ಸರಕಾರದ ಹಣ ಸಂಕ್ಷನ್ ಆಗಿ ಬಂದರೂ ವರ್ಷ ದಾಟಿದರೂ ಶಾಲೆ ತೆರೆಯಲಾರದ ಮ್ಯುನಿಸಿಪಾಲಿಟಿಗಳು ಈಗಲೂ ಇವೆ ಹೀಗಿರುವುದರಿಂದ ಇನ್ನೂ ಹೆಚ್ಚಿನ ಜವಾಬ್ದಾರಿಗಳನ್ನು ವಹಿಸಿಕೊಳ್ಳಲಿಕ್ಕೆ ಇವು ಸಂದರ್ಭಗಳಲ್ಲಿ ಜಿಲ್ಲೆಯಲ್ಲಿ ಚೆನ್ನಾಗಿ ವಿಚಾರಿಸಿ ವಿದ್ಯಾಸಂಬಂಧವಾದ ಜ್ಞಾನವುಳ್ಳವರನ್ನು ಮೆಂಬರರಾಗಿ ಆರಿಸಿದ ಪ್ರತ್ಯೇಕ ಒಂದು ಕೌನ್ಸಿಲನ್ನು ಸ್ಥಾಪಿಸುವುದಕ್ಕೆ ಸರಕಾರದವರು ಯತ್ನಿಸಿದ್ದರಲ್ಲಿ ಬಾಧಕವೇನು? ಕೃಷಿಜ್ಞಾನದ ಸುಧಾರಣೆಯನ್ನು ಗೊತ್ತು ಮಾಡಿಕೊಳ್ಳುವುದಕ್ಕೂ, ಹಸ್ತಕೌಶಲದ ಸಹಕಾರದ ತತ್ವಗಳನ್ನು ಒಪ್ಪಿ ನಡೆಸುವುದಕ್ಕೂ, ಹಳ್ಳಿಯ ಕೈಗಾರಿಕೆಯವರ ತನ್ನ ವೃತ್ತಿಯಲ್ಲಿ ನೂತನ ಕ್ರಮಗಳನ್ನು ಏರ್ಪಡಿಸಲಿಕ್ಕೂ ಹಳ್ಳಿಯ ಪೋಲೀಸು ತನ್ನ ಕರ್ತವ್ಯ ಜವಾಬ್ದಾರಿಗಳನ್ನು ಅರಿತುಕೊಳ್ಳಲಿಕ್ಕೂ ಶಿಕ್ಷಣಪ್ರಚಾರ ಅವಶ್ಯವಾಗಿದೆ ಹೀಗಿರುವುದರಿಂದ ಈ ಶಿಕ್ಷಣವನ್ನು ಸರ್ವ ಗ್ರಾಮಗಳಲ್ಲಿಯೂ ಹರಡಬೇಕಾದವರ ಜಿಲ್ಲೆಯ ಶಿಕ್ಷಕರಲ್ಲಿ ಕೆಲವರೇ ಆರಿಸಿ ಕೂಡಿದ ಒಂದು ಪ್ರತ್ಯೇಕ ಸಭೆಯು ಇರುವುದು ಅತ್ಯವಶ್ಯಕ

ಇನ್ನೊಂದು ವಿಚಾರವಿದೆ ಈಗ ಬೋರ್ಡ ಶಾಲೆಗಳ ಹೊರತಾಗಿ ಖಾಸಗಿ ಶಾಲೆಗಳು ಇವೆ ಇವುಗಳಲ್ಲಿ ಉಪಾಧ್ಯಾಯರ ಮನೆದಾರರಾಗಿ ರುವ ಶಾಲೆಗಳ ಕ್ರಮೇಣ ಈ ಕೌನ್ಸಿಲಿನ ಪ್ರಯತ್ನದಿಂದ ಬೋರ್ಡ ಶಾಲೆಗಳಾಗಿ ಪರಿಣಮಿಸ ಬಹುದಾದರೂ ಮಿಶ್ಯನ್, ಕೆಥೊಲಿಕ, ಮಹಮ್ಮದಿ ಮತ್ತು ಪಂಚಮ ಶಾಲೆಗಳು ಬೇರೆ ಬೇರೆ ಮೆನೆಜಮೆಂಟುಗಳ ಕೆಳಗಿದ್ದು ಸಾಕಷ್ಟು ದ್ರವ್ಯದ ಆಶ್ರಯ ಸಿಗದೆ ನರಳುತ್ತಿವೆ ಇವುಗಳ ಕಡೆಗೆ ಬೋರ್ಡ ಮೆಂಬರರು ಕೃಪಾ ದೃಷ್ಟಿಯಿಂದ ನೋಡಿಯಾರು ಎಂದು ನಾವು ತಿಳಿಯಲಿಕ್ಕೆ ಇದಲು ಸಾಧ್ಯವಿಲ್ಲ ಈ ಶಾಲೆಗಳು ಮತಪ್ರಚಾರ ಅಥವಾ ಒಂದೇ ಜಾತಿಯ ಏಳ್ಗೆಯನ್ನು ಕುರಿತು ಸ್ಥಾಪಿತವಾದುವುಗಳೇ ಆಗಿದ್ದರೂ, ಈ ವರೆಗೆ ಅವು ಸ್ವಂತ ಹಣ ಖರ್ಚು ಮಾಡಿಕೊಂಡು, ಬೋರ್ಡ, ಸರಕಾರ ಇವರಿಂದ ಕೊಡುವ ಸಹಾಯವನ್ನು ಸ್ವೀಕರಿಸುತ್ತ ಅವುಗಳನ್ನು ಸರಕಾರದ ನಿಯಮಗಳ ಮೇರೆಗೆ ಇವು ನಡೆಸಿದವು. ಇಂಥ ಕೆಲವು ಶಾಲೆಗಳ ಮುಖಾಂತರ ಡಿಸ್ಟ್ರಿಕ್ಟ್ ಬೋರ್ಡು ಅಥವಾ ಒಂದು ಮ್ಯುನಿಸಿಪಾಲಿಟಿಯು ಶಿಕ್ಷಣಪ್ರಚಾರ ದೃಷ್ಟಿಯಲ್ಲಿ ವರ್ತಿಸಲಾರವು ಎಂದು ಈಗಿನ ಸ್ಥಿತಿಯಲ್ಲಿ ಸಂಪೂರ್ಣ ಸಂಶಯವುಳ್ಳ ಒಂದು ವೇಳೆ ಈ ಶಾಲೆಗಳ ಕಡೆಯಿಂದ ಯಾವ ಮೆಂಬರರಾಗಿ, ಆರಿಸಲ್ಪಡದೆಂದು, ಸಬ್ ಕಮಿಟಿಯವರು ಸೂಚಿಸಿದ ಆ ಸಭೆಗಳ ಬಹುಮತವು ಅವರ ಕಡೆಗೆನೆ ಇದ್ದೀತು ಎಂಬುದನ್ನು ಇನ್ನು ವಿಚಾರಿಸಬೇಕಾಗಿದೆ (ಮಂಗಳೂರು ತಾಲೂಕಿನ ಕೊಡುಪಿ ಎಲಿಮೆಂಟರಿ ಶಾಲೆಯ ಚರಿತ್ರೆಯನ್ನು ಈ ಸಂದರ್ಭದಲ್ಲಿ ಕೊಡಲು ಅದರ ವಿಚಾರವು ಸರಕಾರದ ಅಧಿಕಾರದಲ್ಲಿ ಬಾಕಿ ಇರುವುದರಿಂದ ನಾವು ಮುಂದರಿಸಲಿಲ್ಲ — ಪತ್ರಿಕರ್ತ) ಹೀಗಾದ್ದರಿಂದ ಖಾಸಗಿ ಶಾಲೆಗಳ ಸಾಕಷ್ಟು ಬಲವಾದ ಪ್ರತಿನಿಧಿಗಳೂ ಬೋರ್ಡು ಮತ್ತು ಮುನಿಸಿಪಾಲಿಟಿಗಳ ಪ್ರತಿನಿಧಿಗಳೂ ಇರುವ ಒಂದು ಪ್ರತ್ಯೇಕ ಸಭೆಯೇ ಏರ್ಪಡಬೇಕಾದ್ದು ನ್ಯಾಯವಾಗಿದೆ

ಇಷ್ಟೆ ಅಲ್ಲ ಈಗ ಇರುವ ಡಿಸ್ಟ್ರಿಕ್ಟ್ ಬೋರ್ಡಿಗೆ ಮುನಿಸಿಪಾಲಿಟಿಯ ಮೇಲೆ ಅಧಿಕಾರವೆಲ್ಲಿಯದು? ಹಾಗಿರುವಾಗ ಮುನ್ಸಿಪಾಲಿಟಿಯು ದಾರಿ ತಪ್ಪಿ ನಡೆದರೆ ಸ್ಥಳೀಯ ಕಮಿಟಿಯೊಂದು ಅದರ ಕಾರ್ಯಕ್ರಮವನ್ನು ವಿಮರ್ಶಿಸುವುದು ಚೆಲೋದೋ ಅಥವಾ ಈಗಿನಂತೆ ಗವರ್ನರ ಕಡೆ ಬೆಯರ್ಮನರು ಇನ್ನೊಂದು ಕಡೆ ಇಲಾಖೆಯವರು ಚರ್ಚೆ ಎತ್ತಿ ಅದರ ಇತ್ಯರ್ಥವನ್ನು ಮದ್ರಾಸಿನಲ್ಲಿರುವ ಮಂತ್ರಿಯಾಗಲಿ ಕಾರ್ಯಕಾರಿ ಕೌನ್ಸಿಲಿನ ಇತರ ಮೆಂಬರನಾಗಲಿ ಮಾಡುವುದು ಒಳ್ಳೇದು? ಈಗೀಗ ಸ್ಥಳೀಯ ಜನರಿಗೂ ಅವರ ಪ್ರತಿನಿಧಿಗಳಿಗೂ ಅಧಿಕಾರವನ್ನು ವಹಿಸಿ ಕೊಡಬೇಕೆಂದು ನಾವು ಹೇಳಿಕೊಳ್ಳುತ್ತೇವೆ ಅದರಂತೆ ಒಂದೊಂದು ಕಲೆಯವರ್ಗನ ಅಥವಾ ತಾಲೂಕು ಯಾ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಸ್ವೇಚ್ಛಾವರ್ತನಕ್ಕೆ ಸರಕಾರದವರು ಅಂಕುಶ ಪ್ರಯೋಗ ಮಾಡದೆ ಅನಾಥವಾದ ಭೀತಿಯಿಂದ ನಿರೀಕ್ಷಿತರಾಗುತ್ತಾರೆ. ಆಗ ಪ್ರಜಾಜನಗಳ ಹೊರಗಿನಿಂದ ಉಪ್ಪಟಿಸನದಿಂದ ವರ್ತಿಸದಿಕ್ಕಿರುವವರ ಮೇಲೆ ಸ್ಥಳೀಯ ಅಂಕುಶ ವಿರುವುದೇ ಯೋಗ್ಯವಲ್ಲವೇ?

ಕಲೆಕ್ಟರರು ಕೆಲವು ಕಾಲದವರೆಗೆ ಅದರೂ ಈ ಹೊಸ ಕೌನ್ಸಿಲಿಗೆ ಪ್ರೆಸಿಡೆಂಟರಾಗಿರುವುದು ಒಳ್ಳೇದೆಂದು ಮಸೂದೆಯಲ್ಲಿ ಇದ್ದುದಕ್ಕೆ ಸಬ್ ಕಮಿಟಿಯ ಮೆಂಬರರು ಕೆಲವು ಆಕ್ಷೇಪಿಸಿದ್ದಾರೆ ಕಲೆಕ್ಟರರಿಗೆ ಕೈ ತುಂಬಾ ಇತರ ಕೆಲಸವಿರುವಾಗ ಈ ಶಿಕ್ಷಣ ಪ್ರಚಾರದ ಕೆಲಸವು ಹೇಗೆ ಸಹಾಯವಾದೀತೆಂದು ಈ ಮೆಂಬರರ ಆಕ್ಷೇಪಣೆ ಇದಲ್ಲದೆ ತಾಲೂಕು ಮತ್ತು ಡಿಸ್ಟ್ರಿಕ್ಟ್ ಬೋರ್ಡ ಪ್ರೆಸಿಡೆಂಟರಾಗುವವರು ಇಂಥ ಕೌನ್ಸಿಲಿಗೆ ಪ್ರೆಸಿಡೆಂಟರಾಗಲು ಸಿಕ್ಕಲಾರರೇ ಎಂದು ಈ ಮೆಂಬರರು ಹೇಳುತ್ತಾರೆ ಈ ಮಾತುಗಳು ನ್ಯಾಯವಾದವು ಎಂದು ಒಪ್ಪಿದರೂ ಹೊಸ ಒಂದು ಇಲಾಖೆಯನ್ನು ಏರ್ಪಡಿಸುವಾಗ ಅದು ವ್ಯವಸ್ಥೆಗೆ ಬರುವವರೆಗೆ ಕಲೆಕ್ಟರರ ಪದವಿಯವರೇ ಪ್ರೆಸಿಡೆಂಟರಾದ್ದರೆ ಎಂಬುದು ಅದರ ಗೌರವವನ್ನು ಏರಿಸುತ್ತದೆ ಇಷ್ಟೆ ಅಲ್ಲ, ವೈಸಪ್ರೆಸಿಡೆಂಟರು ಈ ಕೆಲಸದಲ್ಲಿ ಬಹಳ ಮಟ್ಟಿಗೆ ಸಹಾಯಕರಾಗಿರಲು ಎಡೆ ಇದೆ ವೈಸಪ್ರೆಸಿಡೆಂಟರಿಗೆ ಈ ಅಧಿಕಾರವನ್ನು ಕಲೆಕ್ಟರರು ಬಹಳಮಟ್ಟಿಗಾದರೂ ವಹಿಸಿಕೊಡಲಿಕ್ಕಿಲ್ಲವೆಂದು ಹೇಳುವುದಾದರೆ ನಾವು ಅವರಿಗೆ ಯಾಕೆ ಮೊರೆಬೇಕು? ನಮ್ಮ ಸ್ವಂತ ಅಧಿಕಾರದಲ್ಲಿರುವ ತಾಲೂಕು ಬೋರ್ಡು ಮ್ಯುನ್ಸಿಪಾಲಿಟಿಗಳಲ್ಲಿ ನಾವು ಎಷ್ಟರ ಮಟ್ಟಿಗೆ ನಮ್ಮ ಅಧಿಕಾರವನ್ನು ವಹಿಸಿಕೊಡಲಿಕ್ಕಿದ್ದೇವೆ ಎಂದು ಮೊದಲು ನೋಡಬೇಕು ಪ್ರೆಸಿಡೆಂಟರ ಬಗ್ಗೆ ಕೆಲವು ಕಾಗದಗಳಿಗೆ ಬಿಲಗಳಿಗೆ ಸಹಿ ಕೊಡುವುದು ವಿನಾ ತಮ್ಮ ಕೈಕೆಳಗಿನ ಇಲಾಖೆಗಳಲ್ಲಿ ಯಾವುದೊಂದನ್ನಾದರೂ ಪೂರ್ತಿ ಯಾರಿಗೆ ವೈಸ್ ಪ್ರೆಸಿಡೆಂಟರಿಗೆ ವಹಿಸಿಕೊಟ್ಟ ಮಹಾನುಭಾವರು ಎಷ್ಟು ಮಂದಿ? ನಮಗೆ ಬೇರೆಯವರಿಂದ ಹೆಚ್ಚಿನ ಅಧಿಕಾರವನ್ನು ಪಡೆಯಬೇಕೆಂದು ಕೇಳುವಾಗ ಹಾಗೆಯೇ ನಮ್ಮ ಕೈಕೆಳಗಿನವರಿಗೆ ನಾವು ಅಧಿಕಾರವನ್ನು ವಹಿಸಿಕೊಡುವುದೆಂದರೆ ಬಲು ವ್ಯಥೆಯಾಗುತ್ತದೆ ಇದು ಮನುಷ್ಯ ಸ್ವಭಾವ ಹೀಗಿದ್ದುದರಿಂದ ನಾವು ಬೇರೆಯವರನ್ನು ದೂರಿ ಪ್ರಯೋಜನವಿಲ್ಲ

ಈ ಆಕ್ಷೇಪಗಳನ್ನು ನಾವು ಮಹತ್ವದ್ದೆಂದು ಎಣಿಸುವುದಿಲ್ಲ ಅಂತು ಬಿಲ್ಲ್ ಬೇಗನೆ ಜಾರಿಗೆ ಬಂದು ಯೋಗ್ಯವ್ಯವಸ್ಥೆಯ ಕಾರ್ಯಾರಂಭವನ್ನು ನಾವು ಹಾರೈಸುತ್ತೇವೆ

ದೀರ್ಘಜೀವಿ.

ಕಲಿಯುಗದಲ್ಲಿ ಮಾನವನ ಆಯುಃಪ್ರಮಾಣವು ೧೨೦ ವರ್ಷಗಳಿಗಿಂತ ಹೆಚ್ಚಾಗಿರುವುದಿಲ್ಲವೆಂದು ಶಾಸ್ತ್ರಗಳಲ್ಲಿ ಬರೆದಿದೆ, ಆದರೆ ಅಮೇರಿಕದಲ್ಲಿ ೨೨೦ ವಯಸ್ಸಿನ ವ್ಯಕ್ತಿಯು ಬದುಕಿರುವನೆಂದು ಕೇಳುತ್ತೇವೆ ಈತನ ಹೆಸರು ಟಮಾಸ್ ಮೊರಸ್ ೧೬೯೫ನೇ ವರ್ಷದಲ್ಲಿ ಇಂಗ್ಲೆಂಡಿನ ರಾಜನಾದ ೩ನೇ ಜಾರ್ಜನ ಆಳ್ವಿಕೆಯಲ್ಲಿ ಇವನು ವೇಲ್ಸ್‌ದೇಶದಲ್ಲಿ ಹುಟ್ಟಿದಂಥವನಂತೆ, ಇವನು ಒಬ್ಬ ವ್ಯವಸಾಯಗಾರನ ಮಗ ಇವನ ೩ನೆಯ ವಯಸ್ಸಿನಲ್ಲಿ ಇವನ ತಂದೆ ತೀರಿಕೊಂಡನು. ಇವನು ೧೧ನೇ ವಯಸ್ಸಿನಲ್ಲಿ ಅಮೇರಿಕಕ್ಕೆ ಜೀವನಾರ್ಥವಾಗಿ ಹೋಗಿ ನಿಂತನು ಈಗಲೂ ಇವನು ಕೋಲೂರಿಕೊಂಡು ಚೆನ್ನಾಗಿ ನಡೆಯಬಲ್ಲನಂತೆ ಕನ್ನಡಕ ಹಾಕಿಕೊಂಡು ಚೆನ್ನಾಗಿ ನೋಡಬಲ್ಲನಂತೆ! ಈತನಿಗೆ ೧೦೦ ವರ್ಷಗಳಾಗುವವರೆಗೆ ಇವನು ಕನ್ನಡಕವನ್ನು ಉಪಯೋಗಿಸಿದ್ದು ಅದಕ್ಕೆ ಮೊದಲು ಅದರ ಸಹಾಯವಿಲ್ಲದೆಯೇ ಓದುಬರಹವನ್ನು ಮಾಡುತಿದ್ದನಂತೆ ಈತನ ಶ್ರವಣಶಕ್ತಿಯು ಈಗಲೂ ಚೆನ್ನಾಗಿದೆ ಪ್ರಕೃತದಲ್ಲಿ ಇವನಿಗಿಂತ ಹಿರಿಯರು ಈ ಪ್ರಪಂಚದಲ್ಲಿ ಯಾರೂ ಇಲ್ಲವೆಂದೇ ಹೇಳಬಹುದು

(ರ. ಸ.)

ಸ್ವೀಕಾರ.

ಕಲ್ಕತ್ತೆಯಲ್ಲಿ ಪ್ರಕಟವಾಗುವ ಮುಪ್ಪೆ ತಿಂಗಳ 'ಇಂಡಿಯನ್ ಸಾಯಂಟಿಫಿಕ್ ಎಗ್ರಿಕಲ್ಚರಿಸ್ಟ್' ಎಂಬ ಮಾಸಿಕಪತ್ರಿಕೆಯ ಪ್ರತಿಯೊಂದನ್ನು ಆತ್ಮಾದರದಿಂದ ಸ್ವೀಕರಿಸಿರುವೆವು

ತಿದ್ದುಪಡಿ: — ಕಳೆದ ಸಂಚಿಕೆಯ ಗ್ರಾಮೋದ್ಯೋಗಸ್ಥರ ಸಬ್ ಕಮಿಟಿಯಲ್ಲಿ ಕೆ ಅನಂತಯ್ಯ ಶೆಟ್ಟಿ ಎಂತ ಅಲ್ಲ, (ಎಸ್. ಅಂತ್ಯಯ್ಯ ಶೆಟ್ಟಿ ಕಂಡ್ಲೂರು ಪಟೇಲ, ಎಂತ ಓದಬೇಕು.

[illegible]

[illegible]

ಪವನು ಒಂದಕ್ಕೆ [illegible] ಗಳಿಂತ ಬೆಲೆ [illegible] ಸರ್ಕಾರದ [illegible] ಬಂತು. [illegible] ಜನಗಳಲ್ಲಿ ಬಂದು ತಮ್ಮ [illegible] ಯುಂಟಾಯಿತು. ಬ್ರಿಟಿಷ ಸರಕಾರದವರು ಪವನುಗಳನ್ನು ಕೊಂಡು ಕೊಂಡು ಅವನ್ನು ಇಂಗ್ಲೆಂಡಿಗೆ ಕಳುಹಿಸುವುದರಲ್ಲಿ ಇದ್ದರೆ ಎಂಬ [illegible] ಅನೇಕರು ಪವನುಗಳನ್ನು ಮುರಿದು ತಂದೇ ಇಲ್ಲ. ಸರಕಾರದವರು ಬಹಿರಂಗವಾಗಿ ಒಂದು ಮಿಲಿಯ ಚಿನ್ನವನ್ನು ಪವನಿನ ಹಕ್ಕಿಗೆ ರೂ. ೧೫ರಿಂದ ೧೬ರ ವರೆಗಿನ ಬೆಲೆಗೆ ಮಾರುತ್ತಿರುವಾಗ ಹೀಗೆ [illegible] ಗಳಿಸಿ ಕೊಂಡು ಕೊಳ್ಳುವುದು ಜನಗಳಿಗೆ ವಿಚಿತ್ರವಾಗಿ ಕಂಡರೂ ಅನ್ಯದೇಶಗಳಲ್ಲಿ ಪವನುಗಳ ಅನ್ನಕ್ಕೆ ರೂ. ೧೫ರಕ್ಕಿಂತ ಬೆಲೆ ಕಡಿದು ಇದ್ದು, ಇನ್ನು ಈ ದೇಶಕ್ಕೆ ಬರುವುದಕ್ಕೆ ನಿರ್ಬಂಧವನ್ನು ತೆಗೆದು ಹಾಕಿದಾಗ, ಪವನಿನ ಬೆಲೆ ಸ್ವಲ್ಪವೇ ಕಡಿಮೆಯಾಗಿ, ಇಲ್ಲಿಯ ಜನಗಳು ವಿನಾಕಾರಣವಾಗಿ ನಷ್ಟ ಹೊಂದಿಯಾರು ಎಂಬುದರಿಂದಲೇ ಸರಕಾರದವರು ಮೇಲಿನ ಪ್ರಕಟನೆಯನ್ನು ಕೊಟ್ಟರು. ಹೀಗಿದ್ದರೂ ಪವನಿನ ಬೆಲೆ ಏರಿದೆ. ಇದಕ್ಕೆ ಒಂದೆರಡು ಕಾರಣಗಳಿವೆ. ಅಮೇರಿಕಕ್ಕೆ ಸರಕಾರದವರು ಪವನನ್ನು ರಫ್ತು ಮಾಡಲಿಕ್ಕಿದ್ದಾರೆ ಎಂಬ ಕಲ್ಪನೆಯೊಂದು ಬಂದು, ಮುಂದೆ ತಯಾರಾಗುವ ಪವನುಗಳು ಈಗಿನಕ್ಕಿಂತ ಹಲ್ಕಾ ಆಗಲಿಕ್ಕಿವೆ ಎಂಬ [illegible] ಒಂದು, ಇವೇ ಈ ಮುಖ್ಯ ಕಾರಣಗಳು. ಇಂಡಿಯಾ ಸೆಕ್ರೆಟರಿಗಳ ಚಿಟ್ಟಿ ಮೇಲಿಗೆ ರೂಪಾಯಿ ಎಂಬುದು ಪವನಿನ $\frac{1}{10}$ನೆ ಅಂಶವೆಂದು ಠರಾಯಿಸಲ್ಪಡುವುದರಿಂದ ಪವನಿನ ಬೆಲೆಯು ಇನ್ನು ಖಂಡಿತವಾಗಿಯೂ ರೂ. ೧೫ಕ್ಕಿಂತ ಕಡಿಮೆಯಾಗುವುದು. ಇದಲ್ಲದೆ ೧೦ ರೂಪಾಯಿ ಮುಖಾನಿಗೆ ಕಂಡುಕೊಟ್ಟರೆ ಸರಕಾರದವರು ೧ ಪವನು ಕೊಟ್ಟೇವೆಂದು ವಹಿಸಿಕೊಳ್ಳುವುದೂ ಇಲ್ಲ. ಆದರೆ ಸರಕಾರದವರು ಕರೆನ್ಸಿ ಕಮಿಟಿಯವರ ಸೂಚನೆಗೆ ಅನುಗುಣವಾಗಿ ಒಂದು ಪವನು ೧೦ ರೂಪಾಯಿಗೆ ಸಮ ಎಂದು ನಿರ್ಧರಿಸುವ ಕಾನೂನನ್ನು ಬೇಗನೆ ಜಾರಿಗೆ ತರಲಿಕ್ಕಿರುವರು ಎಂದು ಪತ್ರಿಕೆ [illegible] ದವರು ತಿಳಿಸುತ್ತಾರೆ.

ಪತ್ರವ್ಯವಹಾರ.

ಸ್ವಾಮಿ,

ಮಾವುತಿಲು ಪ್ರಕಾರ ಇಲ್ಲಿಯ ಹೊಸ ಮಾರಿಗುಡಿಯಲ್ಲಿ ನಡೆಯುತಕ್ಕ ಆಟಿ ಮಾರಿಪೂಜೆಯು ಕಳೆದ ಜುಲಾಯಿ ಈ ತಾ ೨೭ನೆ ತಾರೀಖಿನಲ್ಲಿ ಜರಗಿತು. ಸದರಿ ಮಾರಿಪೂಜೆಯು ಕೋರ್ಟಿನವರು ನೇಮಿಸಲ್ಪಟ್ಟ ರಿಸಿವರರ ಆಡಳಿತೆಯಲ್ಲಿ ಆದಂತಾಯಿತು. ಖಾಸಗಿ ಮೊಕ್ತೇಸರರ ಕಾಲದಲ್ಲಿ ಆಗುತಿದ್ದ ವ್ಯವಸ್ಥೆಗಳೆಲ್ಲಾ ಭಕ್ತರಲ್ಲಿ ಹೆಚ್ಚಿನವರಿಗೆ ಮುಖ್ಯವಾಗಿ ಗೊತ್ತಿಗದೆ ಇದ್ದ ಪಕ್ಷದಲ್ಲಿ ರಿಸಿವರರು ತಾನು ಮಾಡಬೇಕೆಂತಿದ್ದ ಎಲ್ಲಾ ವ್ಯವಸ್ಥೆಗಳನ್ನು ಮುಂದಾಗಿ ಬಹಿರಂಗಮಾಡುತಿದ್ದದರಿಂದ ಆಕ್ಷೇಪಕ್ಕೆ ಕಾರಣವಾದ ಸಂಗತಿಗಳನ್ನೆಲ್ಲಾ ಅವರಿಗೆ ತಿಳಿಸುವರೆ ಅನುಕೂಲವಾಯಿತು. ಇದರಿಂದ ತಮ್ಮ ತಮ್ಮ ಹಟಸಾಧನೆಗಳನ್ನು ಉಳಿಸಬೇಕೆಂತಿದ್ದ ಜನರಿಗೆ ಹೆಚ್ಚಿನ ಆಸ್ಪದ ಸಿಕ್ಕ ರಿಸಿವರರಿಗೆ ಹೆಚ್ಚಿನ ಕಷ್ಟಗಳು ಒದಗಿದಾಗ್ಯೂ ಮಾರಿಪೂಜೆಯು ಸ್ಥಳದ ಮಹಾತ್ಮ್ಯೆಯೂ ಕೀರ್ತಿಯೂ ತಾಯಾಗಿ ಜರಗಿತೆಂಬುದರಲ್ಲಿ ಭಕ್ತರಿಗೆ ಸಂತೋಷ. ನಾದುರಸ್ತಿಯಲ್ಲಿದ್ದ ಬೆಳ್ಳಿ ಮಂಟಪ ಪಾತ್ರೆಗಳನ್ನೂ ಚಿನ್ನಾಭರಣಗಳನ್ನೂ ದುರುಸ್ತಿ ಮಾಡಿಸಿಯದೆ. ಆದರೆ ಊರಿನವರು ರಿಸಿವರರಿಗೆ ನಾನಾ ತರದ ತೊಂದರೆಗಳುಂಟುಮಾಡಿದ ಅಡಚಣೆಗಳಿಂದ ಪೂಜೆಯು ಸಕಾಲದಲ್ಲಿ ಪ್ರಾರಂಭವಾಗುವುದರ ಬದಲಿಗೆ ಸುಮಾರು ೩ ತಾಸು ತಡವಾಗಿ ಪ್ರಾರಂಭವಾಗಬೇಕಾಯಿತು. ಇದು ಸಂಗತ್ಯನುಸಾರ ಬಂದು ರಿಸಿವರರ ಕ್ರಿಕೆಟ್ಟು ಹೋದ್ದರಿಂದ ಈ ಗುಡಿಗೆ ಬಂದಿದ್ದ ಭಕ್ತರಲ್ಲಿ ಕೆಲವರು ನೆರೆಯಲ್ಲಿರುವ ಗುಡಿಗೆ ಹೋಗಬೇಕಾಯಿತು. ಮಾರಿಪೂಜೆಯು ಸಮಯ ಮೊಗೇರ ಜಾತಿಯವರ ಹರಕೆಗಳನ್ನು ಪ್ರತ್ಯೇಕ ಅವಕಾಯಿಸಲಿಕ್ಕೆ ಅಲ್ಲಲ್ಲಿ ಬೇರೆಬೇರೆ ದಟ್ಟಿಗಳಂತೆ ಜಾತಿವಾರು ಪ್ರಕಾರ ಕಾಣಿಕೆ ಜಮಾಯಿಸಲಿಕ್ಕೆ ಪ್ರತ್ಯಪ್ರತ್ಯೇಕ ಡಬ್ಬಿಗಳನ್ನು ಏರ್ಪಡಿಸಿದ್ದು ನಮ್ಮ ತಿಳುವಳಿಕೆ ಮಟ್ಟಿಗೆ ನೂತನವಾದ ಸಂಗತಿ ಮಾತ್ರವಲ್ಲ ಇತರ ಜಾತಿಯವರಲ್ಲಿ ಹೆಚ್ಚಿನ ಕ್ರೋಧವನ್ನು ಉಂಟುಮಾಡಿಯದೆ. ಬಹಳ ಕಾಲದಿಂದ ಮಾರಿಗುಡಿಯಲ್ಲಿ ಅಕ್ಕನುಭೋಗ ಕೆಲಸ ನೋಡುತಿದ್ದ ಶಾಸ್ತ್ರಿಭಾಗವತರು, ಮಾರಿಪೂಜೆಯ ಸಮಯ ಗೈರಹಾಜರಾಗಿದ್ದರು. ಅವರು ಮಾಡುತಿದ್ದ ಕೆಲಸವು ಅತೀ ಮುಖ್ಯದಾಗಿದ್ದು, ಅದನ್ನು ತರ್ಭೇತಿಯಾಯಿ ಪಕ್ಕನೆ ನಡಿಸುವರೆ ಸರ್ವಸಾಧಾರಣ ಜನರಿಗೆ ಅಸಾಧ್ಯ. ಈ ಕೆಲಸಕ್ಕೆ ಹೆಚ್ಚಿನ ವಹಿಟಿ ಸಂಬಂಧ ಪಾತ್ರಾಲಕ್ಷ ವಗೈರೆ ಬೇಕು. ಸದರಿ ಭಾಗವತರು ಮಾರಿಪೂಜೆಯ ಸಮಯ ಅವರ ಕೆಲಸವನ್ನು ಎಂದಿನಂತೆ ಮಾಡುತಿದ್ದಲ್ಲಿ ಪೂಜೆಯು ಮತ್ತಷ್ಟು ಚೆನ್ನಾಗಿ ನಡೆದು ಕಾಣಿಕೆ ಕೂಡಾ ಹೆಚ್ಚು ಬರುವ ಸಂಭವವಿತ್ತು.

(೨) ಮೇಲಿನ ಸಂಗತಿಗಳೆಲ್ಲಾ ನಡೆದುಹೋದ ವಿಷಯಗಳು. ಅವುಗಳಲ್ಲಿ ಎಷ್ಟು ನ್ಯೂನಾರಿಕೆಗಳಿದ್ದಾಗ್ಯೂ ಅವುಗಳಿಗೆ ಸಮ್ಮಂಧಪಟ್ಟವರೇ ಹೊಣೆ. ಆದರೆ ರಿಸಿವರರು ಮನಃಪೂರ್ವಕವಾಗಿ ಭಕ್ತಿಯಿಂದ ಅವರ ಕೆಲಸವನ್ನು ಮಾಡುವುದಾದರೆ ಅವರ ಕಾಲದಲ್ಲಿ ಜನಾ ಆಗುವ ದವೇಜನ್ನು ಕಾಯಂ ಆಗುವ ಪ್ರಯೋಜನಕ್ಕೆ ವಿನಿಯೋಗಿಸಿದ್ದಲ್ಲಿ ಭಂಡಾರಕ್ಕೆ ಆದಾಯವಿರುವುದಲ್ಲದೆ ಅನ್ಯಂಗೂ ಕೀರ್ತಿಗೆ ಕಾರಣ. ಮುಖ್ಯ ಮಾರಿಗುಡಿ ಒಳಗೆ ನೆಲಕ್ಕೆ ಇಟ್ಟಿಗೆ ಹಾಕಿಸಿ ಗೋಡೆ ಸುತ್ತಲೂ ಭಕ್ತರಿಗೆ ಕೂತುಕೊಳ್ಳಲಿಕ್ಕೆ ಅನುಕೂಲವಾಗುವಂತೆ ಒಂದು ಜಗಲಿಯನ್ನು ಹಾಕಿಸುವುದಲ್ಲದೆ ಈಗ ನಾದುರಸ್ತಿಯಲ್ಲಿರುವ ಸಣ್ಣ ಗೋಪುರವನ್ನು ಜೀರ್ಣೋದ್ಧಾರ ಮಾಡಿ ಸಾವಿರಾರು ಸಂಖ್ಯೆಗಳಲ್ಲಿ ಬರುತ್ತಿರುವ ಜನರಿಗೆ ವಿಶ್ರಾಂತಿ ತಗೆದುಕೊಳ್ಳುವರೆ ಅನುಕೂಲವಾಗುವಂತೆ ಒಂದೆರಡು ಹೊಸ ಕಟ್ಟಡಗಳನ್ನು ಕಟ್ಟಿಸಿದ್ದಲ್ಲಿ ಮಾರಿಗುಡಿ ಮತ್ತು ಸದ್ವ್ಯಯವಾದಂತಾಗುವುದು. ಇದು ನಮ್ಮ ಸೂಚನೆ. ಅದನ್ನು ಅಂಗೀಕರಿಸುವುದು ಅಧಿಕಾರ ಉಳ್ಳವರ ಮರ್ಜಿ.

ಕಾಪು, ತಾ. 5—8—1920.

ಮಂಜೇಶ್ವರ ಸರ್ಕಾಲಿನ ವೋಟರರಿಗೆ.

ಬಾಸೆಲ್ ಮಿಶನ್ ಕಾರ್ಯಾಲಯದ ಪ್ರಕಾರ ಮುಂಬರಿಕೆಗೆ ಮಂಜೇಶ್ವರ ಸರ್ಕಾಲಿನ ಉಮೇದ್ವಾರರ ಪೈಕಿ ಕೆಲವರು ಕಾಗದಗಳನ್ನು, ಕೆಲವರು ಮುದ್ರಿಸಿದ ಫಾರಂಗಳನ್ನು ವೋಟರರಿಗೆ ಕಳುಹಿಸಿ ತಮ್ಮ ತಮ್ಮ ಉಮೇದ್ವಾರಿಕೆಯನ್ನು ಆಧರಿಸುವಂತೆ ಪ್ರಯತ್ನಿಸುತ್ತಾಗ ಕೆಲವರು ದೊಡ್ಡ ದೊಡ್ಡ ಕಂಟ್ರಿಬ್ಯೂಷನ್ ಶೀಟುಗಳ ಸಮೇತ ಬಂದು ಕಾಗದಗಳಿಗೆ ದಸ್ಕತು ಪಡೆದಿರುತ್ತಾರೆ ನಾವು ತಿಳಿದಮಟ್ಟಿಗೆ ಈಗಿನ ದಸ್ಕತುಗಳು ನಿಷ್ಪ್ರಯೋಜಕವಾದವುಗಳೆಂದೂ ಅದೇ ತಿಂಗಳ ತಾ. ೧೬ಕ್ಕೆ ಮಾಡುವ ದಸ್ಕತುಗಳೇ ಪ್ರಯೋಜನಕ್ಕಿರುವವುಗಳೆಂದೂ ನಂಬುತ್ತೇವೆ. ಹೀಗೆ ದಸ್ಕತುಗಳನ್ನು ಮುಂದಾಗಿ ಪಡೆದರಿಂದ ಈ ಉಮೇದ್ವಾರರಿಗೆ ವೋಟರರಲ್ಲಿ ನಂಬಿಕೆಯು ಇಲ್ಲದಿರುವುದೇ ಮುಖ್ಯ ಕಾರಣವೆಂತ ನೆನಸಬೇಕಾಗಿಯದೆ. ಬಾಯಿಯಿಂದ ಕೊಟ್ಟ ಮಾತಿಗಿಂತ ಕಾಗದದಲ್ಲಿ ಹಾಕಿದ ದಸ್ಕತುಗಳು ಹೆಚ್ಚು ಬೆಲೆಯುಳ್ಳವುಗಳೇ? ವೋಟರರೇ ಆಲೋಚಿಸಿರಿ! ನಿಮ್ಮ ಮಾತುಗಳಲ್ಲಿ ನಂಬಿಕೆ ಇಲ್ಲದೆ ಈ ಇದರ ನಿಮ್ಮ ದಸ್ಕತುಗಳನ್ನು ಪಡೆದ ಉಮೇದ್ವಾರರು ನಿಮ್ಮನ್ನು ಆಧರಿಸಿ ನಿಮಗೆ ಅಗತ್ಯವಿರುವ ಸವಲತ್ತುಗಳನ್ನು ತಾಲೂಕು ಬೋರ್ಡಿನಿಂದ ಸಂಪಾದಿಸುವರೇ? ಈಗಲೇ ನಿಮ್ಮ ಮೇಲೆ ನಂಬಿಕೆ ಇಲ್ಲದವರು ಮುಂದಕ್ಕೆ ಮೆಂಬರರಾದ ಮೇಲೆ ನಿಮ್ಮನ್ನು ಗುರುತಿಸುವರೇ? ಇದನ್ನೆಲ್ಲಾ ಆಲೋಚಿಸಿ ನಿಮ್ಮ ವೋಟುಗಳನ್ನು ಯಾವ ಸತ್ಪಾತ್ರಕ್ಕೆ ಕೊಡಬೇಕೆಂಬವನ್ನು ನಿಶ್ಚಯಿಸಿರಿ. ನೀವು ಈಗ ಕೊಟ್ಟ ದಸ್ಕತುಗಳು ಚುನಾವಣೆಗೆ ಏನೂ ಪ್ರಯೋಜನಕ್ಕಿರುವವುಗಳಲ್ಲ. ಇದೆ ಬರುವ ತಾ. ೧೬ಕ್ಕೆ ನೀವು ಅನ್ಯ ಯೋಗ್ಯರಿಗೆ ವೋಟು ಕೊಡುವುದರಿಂದ ಈಗಿನ ದಸ್ಕತುಗಳ ಸಮ್ಮಂಧ ನಿಮಗೆ ಮುಂದೆ ಯಾವ ವಿಧದ ತೊಂದರೆಗಳೂ ಬರಲಾರವು ಮಾತ್ರವಲ್ಲ ದಸ್ಕತುಗಳನ್ನು ಪಡೆದ ಉಮೇದ್ವಾರರು ನಿಮ್ಮ ಮೇಲೆ ಸಿವಿಲ್ ವ ಕ್ರಿಮಿನಲ್ ವ್ಯವಹಾರ ನಡಿಸುವರೆ ಏನೂ ಹಕ್ಕುಳ್ಳವರಾಗುವುದಿಲ್ಲ. ದಸ್ಕತುಗಳನ್ನು ಕೊಟ್ಟ ಕೆಲವು ವೋಟರರು ಇದರ ಗುಟ್ಟನ್ನು ಅರಿಯದಿರುವದರಿಂದ ಇದನ್ನು ಪ್ರಕಟಿಸಲು ಉದ್ಯುಕ್ತನಾಗಬೇಕಾಯಿತು.

ವರ್ಗದಾರ.

ಮಂಜೇಶ್ವರ ಸರ್ಕಾಲಿನ ವೋಟರರಿಗೊಂದು ಮಾತು.

ಮ|| ರಾ|| ರಾ|| ಕೆ. ಸುಂದರರಾಯರು ಕೊಡ್ಯವೆ, ಪದ್ಮನಾಭ ಶರ್ಮರಾಯರು ಕೂಡಾ ೧೩ ಮಂದಿ ಮಾನ್ಯಗಹಸ್ಥರೂ, ತಾ. ೩೦-೭-೨೦ನೇ ಸ್ವದೇಶಾಭಿಮಾನಿಯಲ್ಲಿ "ವರ್ಗದಾರ" ಎಂಬವನೂ ಮ|| ರಾ|| ರಾ|| ಮಂಜೇಶ್ವರ ಸಾವಕಾರ ವೈಕುಂಠ ಭಕ್ತರನ್ನು ಹೊಸತಾಗಿ ಏರ್ಪಡಿಸುವ ಕಾಸರಗೋಡ ತಾಲೂಕು ಬೋರ್ಡಿಗೆ ಮಂಜೇಶ್ವರ ಸರ್ಕಾಲಿನಿಂದ ಒಬ್ಬ ಮೆಂಬರನಾಗಿ ಆರಿಸಲಿಕ್ಕೆ ಆ ಸರ್ಕಾಲಿನ ವೋಟರರಿಗೆ ಕೊಟ್ಟ ಸೂಚನೆ ನೋಡಿದೆವು. ಸದ್ಗುಣಗಳಲ್ಲಿ ಆ ಎರಡೂ ಲೇಖನಗಳ ಬಗ್ಗೆ ಇರುವ ಸಹಕಾರತ್ವವನ್ನು ಇದರಿಂದ ವ್ಯಕ್ತಪಡಿಸುತ್ತೇವೆ, ವ ಆ ಸರ್ಕಾಲಿನ ವೋಟರರು ಮುಂದಾಗಿ ತಮ್ಮ ವೋಟುಗಳನ್ನು ಆ ಭಕ್ತರಿಗೆ ಕೊಟ್ಟು ಅವರನ್ನು ಮೆಂಬರರಾಗಿ ಆರಿಸುವರಾಗಿ ನಂಬುತ್ತೇವೆ.

ಎಂಬತ್ರಾಣಿ ರಾಮಯ್ಯ ಆಳ್ವ,
ಕಂಜಾಣ್ಣಾಳ್ವ, ಹೇರೂರು ಗುತ್ತು,
ಮಂಜಣ್ಣ ಸೆಟ್ಟಿ, ಇಜ್ಜಂಪಾಡಿ.

ಮಂಗಳೂರು ಕೆಥೊಲಿಕ ಕೊ ಒಪರೆಟಿವ್ ಕ್ರೆಡಿಟ ಸೊಸೈಟಿ.

ಪ್ರಕಟನೆ.

ಈ ಸಂಘದಲ್ಲಿ ಠೇವಣಾತಿ ಇಟ್ಟವರ ಒಂದು ಪಾಸು ಬುಕ್ಕಿನ ಖತಾಯತಿಗಳು ಸಂಘದ ವರ್ಗದ ಪುಸ್ತಕಗಳಿಗೆ ತಾಳೆ ಬೀಳಲಿಲ್ಲವೆಂದು ಈಚೆಗೆ ಕಂಡುಬಂದದರಿಂದ ಈ ಸಂಘದಲ್ಲಿ ಠೇವಣಾತಿ ಇಟ್ಟವರೆಲ್ಲರೂ ತಮ್ಮ ಪಾಸ್‌ಬುಕ್ಕುಗಳನ್ನು ಈ ತಾರೀಕಿನಿಂದ ಒಂದು ವಾರದೊಳಗೆ ಈ ಆಫೀಸಿನ ಸೆಕ್ರೆಟರಿಗೆ ಮುಂದೆ ಹಾಜರುಪಡಿಸಿ ತಮ್ಮ ಠೇವಣಾತಿಗಳ ಖತಾಯಿತಿಗಳು ಸರಿಯಾಗಿವೆಯೋ ಎಂದು ನೋಡಲು ಅನುಕೂಲಿಸುವಂತೆ ಮಾಡಬೇಕಾಗಿ ಎಲ್ಲಾ ಠೇವಣಾತಿದಾರರಿಗೆ ತಿಳಿಸಿಯದೆ.

(ಹುಕುಂ ಮೇರೆಗೆ)

ಕೆಥೊಲಿಕ ಕೊ ಒಪರೆಟಿವ ಕ್ರೆಡಿಟ ಸೊಸೈಟಿ ಆಫೀಸು,
ಮಂಗಳೂರು.
ತಾರೀಕು 2—8—20.

ವಿ. ಇ. ಎ. ಕಾಸ್ತೆಲಿನೊ,
ಸೆಕ್ರೆಟರಿ.

ನೋಟೀಸು.

ದಕ್ಷಿಣ ಕನ್ನಡಾ ಸಬೋರ್ಡಿನೇಟ್ ಕೋರ್ಟಿನಲ್ಲಿ.

ಕ್ರಮ ನಂಬ್ರ $\frac{26}{1915}$

ಶೆರ್ಡಪ್ಪ ಕಮ್ತಿ ಕೂಡಾ — ವಾದಿರು.

ಮತ್ತು

ಶ್ರೀನಿವಾಸ ಶ್ಯಾನಭಾಗ ಕೂಡಾ — ಪ್ರತಿವಾದಿರು.

ಮೂಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಮುಂದಿನ ಆಡಳಿತೆ ಕುರಿತು ವಾದಿರು ಹಾಜರು ಪಡಿಸಿದ ಸ್ಕೀಮಿನ ಕ್ರಮಗಳನ್ನು ತಿದ್ದುಪಡಿಸುವರೆ ಮೂಲ್ಕಿ ವ ಹತ್ತರದ ಗ್ರಾಮಗಳ ಗೌಡ, ಸಾರಸ್ವತ ಬ್ರಾಹ್ಮಣ ವೃಂದದವರಲ್ಲಿ ಯಾರೊಬ್ಬರಾದರೂ ತಮ್ಮ ಸೂಚನೆಗಳನ್ನು ತಾ. 11—8—1920ಕ್ಕೆ ಸದ್ರಿ ಕೋರ್ಟಿಗೆ ಮನವಿ ಮಾಡಿಕೊಳ್ಳಬಹುದು.

ತಾ. 23—7—1920 **A. Varada Rau,**
Vakil for plffs.

ದಕ್ಷಿಣ ಕನ್ನಡಾ ಜಿಲ್ಲಾ ಗ್ರಾಮ ಉದ್ಯೋಗಸ್ಥರ ಸಂಘದ ಕಡೆಯಿಂದ.

ದಕ್ಷಿಣ ಕನ್ನಡಾ ಜಿಲ್ಲೆಯ ಎಲ್ಲಾ ಗ್ರಾಮ ಉದ್ಯೋಗಸ್ಥರಿಗೆ ತಿಳಿಯಪಡಿಸುವುದೇನಂದರೆ:—

ಮೇಲಿನ ಸಂಘದ ವ ಇದರ ಶಾಖೆಗಳಾಗಿರುವ ನಮ್ಮ ಜಿಲ್ಲೆಯ ಎಲ್ಲಾ ತಾಲೂಕುಗಳ ಸಂಘಗಳ ಕಡೆಯಿಂದ ಮಹಾಸಭೆಗಳಲ್ಲಿ ಪಾಸಾದ ಠರಾವುಗಳು ಯಾ ಇತರ ನೋಟೀಸುಗಳು, ಕ್ರಮಗಳು, ವಂತಿಗೆ ಪಟ್ಟಿಗಳು ವಗೈರೆ ಎಲ್ಲಾ ಸಂಗತಿಗಳ ಕುರಿತು ಪ್ರತೀ ಒಬ್ಬ ಗ್ರಾಮ ಉದ್ಯೋಗಸ್ಥರಿಗೆ ಪ್ರತ್ಯಪ್ರತ್ಯೇಕ ಕಳುಹಿಸುವರೆ ಸಾಧ್ಯವಿಲ್ಲವಾದ್ದರಿಂದ ಅವುಗಳನ್ನು ಕ್ರಮಪ್ರಕಾರ "ಸ್ವದೇಶಾಭಿಮಾನಿ" ವ "ಕಂಠೀರವ" ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ ಪ್ರತೀ ಒಬ್ಬ ಗ್ರಾಮ ಉದ್ಯೋಗಸ್ಥರು ಗ್ರಾಮಕ್ಕೆ ಸದರಿ ಪತ್ರಿಕೆಗಳ ಪೈಕಿ ಒಂದು ಪ್ರತಿ ಪ್ರಕಾರವಾದರೂ ತರಿಸಿ ಆಗಾಗ್ಗೆ ಓದಿನೋಡಿ ಪ್ರಯೋಜನ ಹೊಂದಬೇಕಾಗಿ ಅಪೇಕ್ಷಿಸುತ್ತೇನೆ.

B. Venktraya Prabhu,
SECRETARY.
The South Canara District,
5—8—'20 *Village Officers' Association.*

ನೋಟೀಸು.

ದಕ್ಷಿಣ ಕನ್ನಡಾ ಜಿಲ್ಲಾ ಸಬೋರ್ಡಿನೇಟ ಜಡ್ಜರ ಕೋರ್ಟಿನಲ್ಲಿ. ಕ್ರಮ ನಂಬ್ರ $\frac{46}{20}$

ಬಿ. ನಾರಾಯಣಾಚಾರ್ಯ — ವಾದಿ

ಮತ್ತು

೧. ರಘುಭೂಷಣ ತೀರ್ಥಸ್ವಾಮಿರು
ಉಡ್ಪಿ—ಮದ್ರಾಸ ಟಪ್ಪಾಲು ಮಧ್ಯಾಹ್ನ ೨ ಗಂಟೆಗೆ ಬಂದಿತ್ತಾದರೂ ತಿಲಕರ ಮರಣದ ವಾರ್ತೆಯು ವೃತ್ತಪತ್ರಗಳು [illegible] ಜನರಿಗೆ ಸಿಗಲಿಕ್ಕೆ ಸಾವಕಾಶವಾದ ಕಾರಣ ೬ ಗಂಟೆ ನಂತರ ಕೆಲ ಜನರು ಮಾತ್ರ ತಮ್ಮ ಅಂಗಡಿಗಳನ್ನು ಮುಚ್ಚಿದರು. ಆದರೆ ಮರುದಿವಸ ಬೆಳಗ್ಗೆ ಸರ್ವರೂ ಅಂಗಡಿಬಾಗಿಲು ತೆರೆಯಲೇ ಇಲ್ಲ. ಅರಿಯದೆ ತೆಗೆದವರು ಒಡನೆ ಮುಚ್ಚಿದರು. ಕ್ರಿಶ್ಚನ್ ಹೈಸ್ಕೂಲೂ ಇತರ ಶಾಲೆಗಳ ಕೋಪರೇಟಿವ್ ಸೊಸೈಟಿಗಳ ಬಂದಿಡಲ್ಪಟ್ಟವು. ಊರಲ್ಲಿ ಸರ್ವತ್ರ ಟಿಳಕರ ಗುಣಾತಿಶಯಗಳನ್ನು ಕೊಂಡಾಡಿ ಕ್ಲಬ್ಬಿನಲ್ಲಿ ಸಭೆಸೇರತೊಡಗಿತು. ಅನಂತರ ಜುಬಿಲಿ ಯೂನಿಯನ್ನಿನ ಕ್ಲಬ್ಬಿನಲ್ಲಿ ಸಭೆ ಸೇರತೊಡಗಿತು. ಜನ ಸಮುದಾಯವು ಹೆಚ್ಚಾದ್ದರಿಂದ ತೋಟಗಳ ವಿಸ್ತೃತವಾದ ಅಂಗಳದಲ್ಲಿ (open air meeting) ಸಭೆಯು ಸೇರಿತು. ಖಾನ ಬಹದ್ದೂರ ಹಾಜಿ ಅಬ್ದುಲ್ಲಾ ಸಾಹೇಬರು ಅಗ್ರಾಸನವನ್ನು ವಹಿಸಿಕೊಂಡರು. ಪ್ರಥಮತಃ ಸರ್ವರೂ ಎದ್ದುನಿಂತ ಮೇಲೆ ಬಾಲಕ ಮಂಡಲಿ ಸಸ್ವರದಲ್ಲಿ ವಂದೇ ಮಾತರಂ ರಾಷ್ಟ್ರಗೀತವನ್ನು ಹಾಡಿದ ಮೇಲೆ [illegible] ಕವಿ ಶ್ರೀ ಕುಂಬಳೆ ನರಸಿಂಹ ನಾಯಕರು [illegible] ಮಂಗಳೂರಿಗೆ ಹೋಗುತ್ತ ಮಧ್ಯದಲ್ಲಿ ಉಡಪಿ—ಮಂಗಳೂರು ಮೊಟರ ಟಿಕೇಟು ಸಿಗದಿರಲು ಉಡಪಿಯಲ್ಲಿಯೆ ಉಳಕೊಳ್ಳಬೇಕಾಯಿತು. ಅವರೆ ಅದೇ ದಿವಸ ಮಹಾತ್ಮ ಟಿಳಕರ ಮೃತ್ಯು ವಾರ್ತೆಯನ್ನು ಕೇಳಿ ದುಃಖಿತರಾಗಿ ಸಭೆಯಲ್ಲಿ ಹಾಡುವರೇ ರಚಿಸಿದ ಒಂದು ಪದ್ಯವನ್ನು ಸಭೆಯ ಮುಂದೆ ಹಾಡಿ ನೆರೆದ ಸಮಸ್ತ ಆಬಾಲವೃದ್ಧರನ್ನು ದುಃಖಸಾಗರದಲ್ಲಿ ಮುಳುಗಿಸಿದರು. ಅನಂತರ ಸಂಸ್ಕೃತ ಪಂಡಿತ [illegible] ನಾರಾಯಣರು ಆಗ ಸ್ವತಃ ರಚಿಸಿದ ಸಂಸ್ಕೃತ ಟಿಳಕಗೀತವನ್ನು ಹಾಡಿದನಂತರ ಶ್ರೀಯುತ ವಕೀಲ ಮಟ್ಟಿ ರಾಮಕೃಷ್ಣರಾಯರು ಲೋಕಮಾನ್ಯ ಟಿಳಕ ಮಹಾತ್ಮರ ಗುಣಾನುವಾದಗಳನ್ನು ವಿವರಿಸಿ ಹೇಳಿದರು. ಮಹಾಜನರ ಪರವಾಗಿ [illegible] ಟಿಳಕರ ಕುಟುಂಬದವರಿಗೆ ತಂತಿ ಮೂಲಕ ತಿಳಿಸುವಂತೆ ಒಂದು ಠರಾವನ್ನು ಸಭೆಯ ಮುಂದಿಟ್ಟರು. ಇದಕ್ಕೆ ಮ॥ ರಾ॥ ವಕೀಲ [illegible] ಪಾಂಡುರಂಗ ನಾಯಕರೂ [illegible] ಸಾಹೇಬರೂ [illegible] ಲಾಲರವರು ವಕೀಲ ರಾ॥ ಕುಬೇರ ಪಾಂಡುರಂಗಾಚಾರ್ಯರೂ ಸಮಯೋಚಿತ ಭಾಷಣ ಮಾಡಿ ಅನುಮೋದನೆ ಕೊಟ್ಟು ಪುಷ್ಟೀಕರಿಸಿದ ಮೇಲೆ ಸರ್ವರೂ ಎದ್ದುನಿಂತು ಮೌನಸ್ಥರಾಗಿ ಠರಾವನ್ನು ಮಂಜೂರ ಮಾಡಿದರು. ಇದಾದ ಮೇಲೆ ಲೋಕಮಾನ್ಯರ ಸ್ಮಾರಕವನ್ನು ಮಾಡಲು ಒಂದು ಮಂಡಲ ನಿರ್ಮಾಣಕ್ಕಾಗಿ ೯ ಜನ ಮೆಂಬರರನ್ನು ಸಭೆಯಲ್ಲಿಯೇ ಚುನಾಯಿಸಿದರು. ತಾ॥ ೯ನೇ ದಿನವು ಪುನಃ ಸಭೆ ಸೇರಬೇಕಾಗಿ ನಿರ್ಣಯವಾಗಿ ಸಭೆಯು ಮುಕ್ತಾಯವಾಯಿತು.

ತಾ॥ ೯ನೇ ಸೋಮವಾರ ೪ ಗಂಟೆ ಸಮಯಕ್ಕೆ ಮಹಾಜನರ ಸಮೂಹ ಕ್ಲಬ್ಬಿನಲ್ಲಿ ಸೇರಿತು. ಶ್ರೀ ಪೆಜಾವರ ಮಠದವರು ತಮ್ಮ ಆನೆಯನ್ನು ಅಲಂಕರಿಸಿ ರವಾನಿಸಿದ್ದರು. ಅದರ ಮೇಲೆ ಛತ್ರದಿಂದ ಟಿಳಕರ ಪಠವನ್ನು ಪುಷ್ಪಾದಿಗಳಿಂದ ಅಲಂಕರಿಸಿಟ್ಟು ಪತಾಕೆಗಳು ಮಕರ ತೋರಣ ಸಮೇತ ರಸ್ತೆಯ ಉಭಯ ಪಾರ್ಶ್ವಗಳಿಂದಲೂ ಬಾಲಕರು, ಯುವಕರು, ವೃದ್ಧರು, ಪದವೀಧರರೂ ತಲೆಗೆ ರುಮಾಲು ಟೋಪಿ ವಗೈರ ಏನೂ ಇಡದೆ ಮೌನವಾಗಿ ನಿಂತು ಎದುರಿನಲ್ಲಿ ಶೃಂಗರಿಸಿದ ಆನೆ, ಮಧ್ಯದಲ್ಲಿ ಭಜನೆ ತಂಡಗಳ ಪುನಃ ಮಹಾಜನಸಮುದಾಯ ಈ ರೀತಿಯಾಗಿ ವಿಜೃಂಭಣೆಯಿಂದ ನಗರದ ಮುಖ್ಯವಾದ ರಸ್ತೆಗಳಿಂದ ಮೆರವಣಿಗೆ (procession) ಯು ಹೊರಟು ಮುಂದುವರಿದು ಬಂದು ಶ್ರೀ ಮದನಂತೇಶ್ವರ, ಶ್ರೀ ಕೃಷ್ಣ ಶ್ರೀ ಚಂದ್ರಮೌಳೀಶ್ವರ ದೇವಸ್ಥಾನಗಳ ಎದುರಿನಲ್ಲಿ ಭಜನೆಯು ನಡೆದ ಅನಂತರ ಶ್ರೀ ಸೋದೆಮಠದ ಎದುರು ರಥಬೀದಿಯಲ್ಲಿ ಜನಸಮುದಾಯವನ್ನು ಅರ್ಧ ಚಂದ್ರಾಕಾರವಾಗಿ ನಿಲ್ಲಿಸಿ ಮಧ್ಯದಲ್ಲಿ ಉಚ್ಚಾಸನದಲ್ಲಿ ನಿಂತು ಕೃಷ್ಣಸೂಕ್ತಿಯ ಲೇಖಕರಾದ ಶ್ರೀಯುತ ಕರೋಡಿ ಸುಬ್ಬರಾಯರೂ ಶ್ರೀಯುತ ವಕೀಲ ವಿಠ್ಠಲ ಕಾಮತರೂ ಟಿಳಕ ಮಹಾತ್ಮರ ಜೀವನ ಚರಿತ್ರವನ್ನೂ ಅವರು ನಮಗಾಗಿ ಅನುಭವಿಸಿದ ಕಾರಾಗೃಹವಾಸದ ಸಂಕಷ್ಟಗಳನ್ನೂ ವಿವರಿಸಿ ಹೇಳಿ ಒಂದು ಸ್ಥಾನದ ಯಾವತ್ತೂ ಊರುಗಳಲ್ಲಿ ಒಂದೆ ದಿವಸ ಏಕಸಮಯದಲ್ಲಿ ಕೋಟಿಸಂಖ್ಯೆಯಿಂದ ಟಿಳಕರಿಗಾಗಿ ದುಃಖವನ್ನು ಆಚರಿಸುವ ಈ ದಿನವು ಭರತಖಂಡದ ಇತಿಹಾಸದಲ್ಲಿ ಎಷ್ಟು ಚಿರಸ್ಮರಣೀಯವಾಗಿರುವುದಾಗಿ ವಿವರಿಸಿದರು. ನಂತರ ಶ್ರೀ ಮದನಂತೇಶ್ವರ ದೇವಸ್ಥಾನದಲ್ಲಿ ಟಿಳಕ ಪ್ರೀತ್ಯರ್ಥ ಹೂವಿನ ಪೂಜೆಯು ನಡೆಯಿತು. ಮೆರವಣಿಗೆಯು ಮುಂದುವರಿದು ಬಂದು ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನವನ್ನು ಸಂದರ್ಶಿಸಿ ಅಲ್ಲಿಂದ ಕ್ಲಬ್ಬಿಗೆ ಬಂದು ರಾಷ್ಟ್ರಗೀತ ಹಾಡಿ ಮೆರವಣಿಗೆಯು ಅಂತ್ಯವಾಯಿತು.

[illegible]

ಮಂಗಳೂರು:—

ವರ್ತಮಾನಸಂಗ್ರಹಗಳು:—

ಯುದ್ಧದ ಉತ್ತರಕಾಂಡ ೫
ಚಿಳದೇಶ ವರ್ತಮಾನ . . . . ,,
ಲೋಕಮಾನ್ಯರ ನಿರ್ಯಾಣದ ದುಃಖದಲ್ಲಿ ಮುಳುಗಿದ ಮಂಗಳೂರು ,,
ದಕ್ಷಿಣ ಕನ್ನಡ—ಉಡುಪಿ, ಮುಂಡಾಜೆ, ಉಳ್ಳ, ಪಡೂರು, ೫-೮
ತಿಲಕ್ಸ್ವಾನೀನ ಕೃತಾರ್ಥ . . . . ,,
ಪತ್ರವ್ಯವಹಾರ—೧, ೨, ... ,,
ಗ್ರಾಮ ಉದ್ಯೋಗಸ್ಥರ ಮೀಟಿಂಗು ೯

ಸ್ವದೇಶಾಭಿಮಾನಿ.

ಶಕ ೧೮೪೨ ಆ. ಶ್ರಾ. ಬ॥ ೧೪ ಶುಕ್ರವಾರ.

ಲೋಕಸತ್ತೆಗೆ ಮರಣವಿಲ್ಲ.

ಲೋಕಮಾನ್ಯ ಟಿಳಕರು ಸ್ವರ್ಗಸ್ಥರಾದರು. ಅವರ ನಿಧನದ ವಾರ್ತೆಯಿಂದ ವ್ಯಸನಪಟ್ಟು ಎಲ್ಲೆಲ್ಲಿಯೂ ತಂತಮ್ಮ ಶೋಕವನ್ನು ವ್ಯಕ್ತಗೊಳಿಸುತಿದ್ದಾರೆ. ಟಿಳಕರು ಲೋಕಮಾನ್ಯರೂ ಮಹಾನುಭಾವರೂ, ಮಹಾತ್ಮರೂ ಆಗಿದ್ದರು ಎಂಬುದನ್ನು ಈಗ ಯಾರಿಗೂ ಹೇಳಬೇಕಾದ ಅಗತ್ಯವಿಲ್ಲ. ಅವರು ಸ್ವದೇಶದ ಉದ್ಧಾರದ ಸಲುವಾಗಿ ಆತ್ಮತ್ಯಾಗವನ್ನು ಮಾಡಿದ್ದಾರೆಂಬುದು ಅವರ ಶತ್ರುಮಿತ್ರವರ್ಗದವರು ಈಗ ಸರಿಯಾಗಿ ಒಪ್ಪಿಕೊಳ್ಳುತ್ತಾರೆ. ಅವರು ಧರಿಸಿದ ಕಠಿಣ ವ್ರತದ ವಿಷಯವಾಗಿ ಮಹಾತ್ಮಾಗಾಂಧಿಗಳ ಮಾತಿನಿಂದ ಹೇಳುವುದಾದರೆ, ಸ್ವಾತಂತ್ರ್ಯ ಯುದ್ಧದಲ್ಲಿ (in the battle for freedom) ಅವರು ಯಾರನ್ನೂ ಮೊರೆ ಇಡಲಿಲ್ಲ, ಇಲ್ಲವೆ ಅನ್ಯರಿಗೆ ಅವಕಾಶವಿಡಲಿಲ್ಲ' ಇಂಥ ಮಹಾಪುರುಷರು ಗತಿಸಿದರು. ಟಿಳಕರು ಮಹಾತ್ಮರಾಗಿದ್ದರೂ ಮಾನವ ಶರೀರವನ್ನು ಆಶ್ರಯಿಸಿದ್ದರು. ಮಣ್ಣಿನ ಆ ಮಡಿಕೆಯು ಎಂದಾದರೂ ಒಂದು ದಿವಸ ಒಡೆದು ಹೋಗಲೇಬೇಕಿತ್ತು ಹಾಗೆಯೆ ಒಡೆದು ಹೋಯಿತು. ಈ ಲೋಕದಲ್ಲಿ ಬೇರೆ ಎಷ್ಟು ಸಾಮ್ರಾಜ್ಯಗಳಿದ್ದರೂ ಮೃತ್ಯುವಿನ ಸಾಮ್ರಾಜ್ಯವು ಅಕುಂಠಿತವಾಗಿ, ಅನಾದಿಕಾಲದಿಂದ ನಡಕೊಂಡಿದೆ ಮತ್ತು ಅದು ಎಂದು ಕೊನೆಗೊಂಡೀತೆಂಬುದು ಯಾರಿಂದಲೂ ಹೇಳಲು ಸಾಧ್ಯವಿಲ್ಲ. ಮೃತ್ಯುವಿನ ಅಧಿಕಾರವು ಈ ಲೋಕದಲ್ಲಿ ನಡೆಯುತಿದ್ದ ಕಾರಣ ಇದಕ್ಕೆ "ಮೃತ್ಯುಲೋಕ"ವೆಂದು ಹೆಸರು ಬಂದಿದೆ. ಅರ್ಥಾತ್ ಟಿಳಕರ ಭೌತಿಕ ಶರೀರವು ಅದರ ಕರಾಳವಾದ ಬಾಯಿಯಲ್ಲಿ ಅತ್ತಗಿ ಹೋದುದಾದರೆ ಅದರಲ್ಲಿ ಆಶ್ಚರ್ಯವಿಲ್ಲ. ಭೌತಿಕ ವ್ಯಕ್ತಿಗೆ ಮಣ್ಣಿನ ಗಡಿಗೆಗೆ ಇದ್ದಂತೆ ಒಂದು ದಿನ ಅವಸಾನವುಂಟು. ಈ ದೃಷ್ಟಿಯಿಂದ ವಿಚಾರಮಾಡುವಾಗ ಟಿಳಕರ ವ್ಯಕ್ತಿಯು ನಷ್ಟವಾದದ್ದು ಸ್ವಾಭಾವಿಕವೆಂದೇ ಹೇಳೋಣ. ಮತ್ತು ಸ್ವತಃ ಟಿಳಕರಾದರೂ ಇಂಥ ತಪ್ಪು ಗ್ರಹಿಕೆಯನ್ನು ಎಂದೂ ಮಾಡಿಕೊಂಡಿರಲಿಲ್ಲ. ಅವರು ಅನೇಕ ಕಡೆಗಳಲ್ಲಿ ಉಪನ್ಯಾಸ ಕೊಡುವಾಗ "ನಾಳೆಯ ಕೆಲಸವನ್ನು ಈ ಹೊತ್ತೇ ಮಾಡಿರಿ, ಬಾಕಿ ಇಡಬೇಡಿರಿ" ಎಂದು ಹೇಳುತಿದ್ದ ಮಾತಿನ ಮರ್ಮವೇನೆಂಬುದು ಈಗಲಾದರೂ ವಾಚಕರಿಗೆ ತಿಳಿದುಬಂದೀತು. ಸ್ವಕರ್ತವ್ಯವನ್ನು ಮಾಡಿದವನು ಮೃತ್ಯುವಿನ ಆಮಂತ್ರಣವನ್ನು ಉತ್ಸುಕತೆಯಿಂದಲೆ ಅಂಗೀಕರಿಸುತ್ತಾನೆ. ಅವನಿಗೆ ಅದರ ಭಯವೆ ಇರದು. ಅವನು ಈ ಶರೀರವು ಅನಿತ್ಯವೆಂದು ಸರಿಯಾಗಿ ತಿಳಿದಿರುತ್ತಾನೆ. ಈ ವಿಧವಾಗಿ ಶರೀರದ ಮತ್ತು ಆತ್ಮನ ತಾತ್ವಿಕಸ್ವರೂಪವನ್ನು ತಿಳಿದವರಲ್ಲಿ ಲೋಕಮಾನ್ಯರು ಅಗ್ರಗಣ್ಯರಾದ ಕಾರಣ ಅವರು ತನ್ನ ವ್ಯಕ್ತಿಯು ಶಾಶ್ವತವೆಂದು ಎಂದೂ ಎಣಿಸಿರಲಿಲ್ಲ. ಅಂತು ಆ ಗಡಿಗೆಯು ಮೊನ್ನೆ ಒಡೆದುಹೋಯಿತು.

ವ್ಯಕ್ತಿಯು ಸ್ಥಿರವಲ್ಲವೆಂಬ ಸಂಗತಿಯು ಎಷ್ಟರಮಟ್ಟಿಗೆ ಸತ್ಯವೋ, ತತ್ವಗಳು ಆಪ್ರಪಂಚಸ್ಥಾಯಿಗಳೆಂಬುದು ಅಷ್ಟೆ [illegible] ಗೆ ಆಯುಷ್ಯ[illegible] ದರೆ, ವ್ಯಕ್ತಿಗಳು ಹೇಗೂ ಹಾಗೆ ತತ್ವಗಳು ಅಥವಾ ಸಂಸ್ಥೆಗಳು ನೀರುಗುಳ್ಳೆಗಳಂತೆ ಕ್ಷಣಿಕವಾಗುತ್ತಿದ್ದವಾದರೆ, ಈ ಲೋಕವು ಸರಿಯಾಗಿ ನಡೆಯುತಿದ್ದಿಲ್ಲ. ಇವೆರಡರ ಜೀವಿತಕಾಲದ ಪ್ರಮಾಣವು ಭಿನ್ನಭಿನ್ನವಾಗಿದೆ. ವ್ಯಕ್ತಿಗಳು ಚಿರಜೀವಿಗಳಲ್ಲವಾದರೂ ಸಂಸ್ಥೆಗಳು ಮತ್ತು ಆ ಸಂಸ್ಥೆಗಳ ಮುಖ್ಯ ಜೀವನವಾದ ತತ್ವಗಳು ಚಿರಜೀವಿಗಳಾಗಿವೆ. ಹೀಗಿರುವುದರಿಂದಲೆ ಲೋಕಯಾತ್ರೆಯು ನಡಕೊಂಡಿದೆ ಎಂಬುದನ್ನು ಹೇಳಲಿಕ್ಕೆ ದೊಡ್ಡ ತತ್ವಜ್ಞನಾಗಲಿ, ಯೋಗಿಯಾಗಲಿ ಬೇಕೆಂದಿಲ್ಲ. ಕೊಂಚ ಆಲೋಚಿಸಿದರೆ ಈ ಮಾತು ಯಾರಿಗೂ ಸುಬೋಧವಾಗುವ ಹಾಗಿದೆ. ಪರಿಶ್ರಮದಿಂದ ಸಂಶೋಧಿಸಿ ಲೋಕವ್ಯವಹಾರಕ್ಕೆ ಹಚ್ಚಿದ ತತ್ವಗಳು ಆ ವ್ಯಕ್ತಿಗಳಂತೆ ಕ್ಷಣಿಕವಲ್ಲ. ಅವು ಮುಂದಿನವರ ಸಂಸಾರಯಾತ್ರೆಗೆ ಮಾರ್ಗದರ್ಶಕವಾಗುತ್ತವೆ. ಅಲ್ಲಿಂದ ಅವು ಮುಂದರಿಸುತ್ತವೆ. ಈ ಮೇರೆಗೆ ಅವುಗಳ ಅವಿಭಿನ್ನಪ್ರವಾಹವು ನಡಕೊಂಡಿರುವುದರಿಂದ ಈ ಲೋಕವು ಸದುತ್ವದ ತಕ್ಕಡಿಯನ್ನು ಅವಲಂಬಿಸಿಕೊಂಡಿದೆ. ಇರಲಿ, ಸಾರಾಂಶ, ತತ್ವಗಳಿಗೆ ಮರಣವಿಲ್ಲ, ಮತ್ತು ಇದೇ ಕಾರಣದಿಂದ ಲೋಕಮಾನ್ಯರ ವ್ಯಕ್ತಿಯು ನಷ್ಟವಾದರೂ ಅವರು ಇಲ್ಲಿ ಯಾವ ತತ್ವವನ್ನು ಪ್ರಸ್ಥಾಪಿಸಿಹೋದರೊ ಆ ತತ್ವಕ್ಕೆ—ಲೋಕಸತ್ತೆಯ ಆ ತತ್ವಕ್ಕೆ ಮರಣವಿಲ್ಲ. ಟಿಳಕರು ಲೋಕಸತ್ತಾವಾದಿಗಳಾಗಿದ್ದರು. ರಾಷ್ಟ್ರಧರ್ಮವೆ ಟಿಳಕರ ಧರ್ಮವು. ಮಹಾತ್ಮಾಗಾಂಧಿಗಳು ಬರೆಯುತ್ತಾರೇನೆಂದರೆ, "He knew no religion but love of his country. He was a born democrat" (ರಾಷ್ಟ್ರ ಭಕ್ತಿಯೇ ಅವರ ಧರ್ಮ. ಅವರು ನಿಜವಾದ ಲೋಕಸತ್ತಾವಾದಿಗಳು). ಗಾಂಧಿಗಳು ಹೇಳುವಂತೆ ಟಿಳಕರು ಲೋಕಸತ್ತಾವಾದದ ಯಾವ ತತ್ವವನ್ನು ಪ್ರಸ್ಥಾಪಿಸುವುದರಲ್ಲಿ ದೀರ್ಘ ಪರಿಶ್ರಮವನ್ನೂ, ಅನೇಕ ಯಾತನೆಗಳನ್ನೂ ಸಹಿಸಿದರೊ ಅಂಥ ತತ್ವದಲ್ಲಿ ನಿಜವಾಗಿ ಯಾವ ಇಂದ್ರಜಾಲವು ಇದೆ ಎಂಬುದನ್ನು ನೋಡಹೋದರೆ ಅವರ ಪರಿಶ್ರಮದ ಮತ್ತು ಆ ತತ್ವದ ಮಹತ್ವವು ವಾಚಕರಿಗೆ ತಿಳಿಯದೆ ಇರದು. ಪಾಶ್ಚಾತ್ಯದೇಶಗಳಲ್ಲಿ ಲೋಕಸತ್ತೆಯು ಈಗ ಸಾಮಾನ್ಯವಾಗಿ ಎಲ್ಲ ಕಡೆಯಲ್ಲಿ ಪ್ರಸ್ಥಾಪಿತವಾಗಿದೆ. ಅಮೇರಿಕೆಯಂತು ಲೋಕಸತ್ತೆಯ ಆದ್ಯಪ್ರವರ್ತಕವೆನ್ನಬಹುದು. ಫ್ರಾನ್ಸಿನಲ್ಲಿ ನಿಜವಾಗಿ ನೋಡಿದರೆ ಪೂರ್ವದಿಂದಲೆ ಪ್ರಜಾಸತ್ತೆಯ ರಾಜ್ಯಭಾರವು ಪ್ರಾರಂಭವಾಗಿದ್ದರೂ ಭಂಡವಾಳಗಾರ ಪ್ರಾಬಲ್ಯವು ಅಲ್ಲಿ ಮತ್ತು ಇಂಗ್ಲಂಡಿನಲ್ಲಿ ಕೂಡ ಈಗ ನೆಲೆಗೊಂಡಿದ್ದರಿಂದ ಲೋಕಸತ್ತೆಯ ಶುದ್ಧಸ್ವರೂಪವು ಅಮೇರಿಕೆಯಲ್ಲೆ ದೃಗ್ಗೋಚರಕ್ಕೆ ಬರುವುದು. 'ಆತ್ಮನಿರ್ಣಯ' 'ಸ್ವಯಂನಿರ್ಣಯ' ಮುಂತಾದ ಶಬ್ದಗಳಿಂದ ಈ ಲೋಕಸತ್ತೆಯೆ ಇಲ್ಲಿ ದುಮುದುಮಿಸುತ್ತಿದೆ. ಇಂಥ ಲೋಕಸತ್ತೆಯೆ ಹಿಂದುಸ್ಥಾನಕ್ಕೆ ಬೇಕು ಎಂಬುವನ್ನು ನಿರ್ಭೀತಿಯಿಂದ ಮೊದಲಾಗಿ ಪ್ರತಿಪಾದಿಸಿದವರು ಟಿಳಕರೇ. ಇಲ್ಲಿಯ ಭೂಮಿಯ ಮೇಲೆ ಈ ಕಲ್ಪನೆಯ ಬೀಜವನ್ನು ಪ್ರಥಮತಃ ಬಿತ್ತಿದವರು ಅವರೆ. ಆ ಬೀಜವು ಅಂಕುರಿಸಿ, ಬಲಿತು ಪುಷ್ಪವಾಗುವಂತೆ ನೀರು, ಗೊಬ್ಬರ ಮುಂತಾದ್ದನ್ನು ಹಾಕಿದವರೂ ಅವರೇ. ಅವರ ದೀರ್ಘಪರಿಶ್ರಮದಿಂದ ಆ ಕಲ್ಪನೆಯ ವೃಕ್ಷವು ಈಗ ಈ ಭೂಮಿಯಲ್ಲಿ ರೂಢಮೂಲವಾಗಿದೆ. ಇದನ್ನು ಉನ್ಮೂಲಿಸಲು ಈಗ ಯಾರಿಂದಲೂ ಸಾಧ್ಯವಿಲ್ಲ. ಲೋಕಸತ್ತೆಯ ಈ ತತ್ವವು ಈ ದೇಶದಲ್ಲಿ ಈಗ ಅಮರವಾಗಿದೆ ಎಂದು ಹೇಳಬಹುದು. ಲೋಕಸತ್ತಾವಾದದಂತೆ ರಾಜಸತ್ತಾವಾದವಾದರೂ ಒಂದು ತತ್ವವೆಂಬುದು ನಿಜ. ಆದರೆ ರಾಜಸತ್ತಾವಾದಕ್ಕೆ ಈಗಿನ ಯುಗದಲ್ಲಿ ಆಯುಷ್ಯವಿಲ್ಲ. ಶಾಸನದ ಶಾಸ್ತ್ರವು ಪಕ್ವವಾಗುತ್ತ ಬಂದು ಈಗ ಅದು ಲೋಕಸತ್ತೆಯಲ್ಲಿ ಪರಿಣತ ಸ್ವರೂಪವನ್ನು ಹೊಂದಿದೆ. ಒಂದು ತತ್ವವು ನೆಲೆಗೊಳ್ಳಬೇಕಾದರೆ ಅದರಲ್ಲಿ ಸಮತೆಯು ಬೇಕು. ಕೆಲವರು ಹಲವರನ್ನು ಆಳುವುದು ವಿಷಮವು. ಮತ್ತು ವಿಷಮತೆಗೂ ವಿಷಕ್ಕೂ ಬಹಳ ಹತ್ತಿರದ ಸಂಬಂಧವಿದೆ. ಮತ್ತು ಇದೇ ಕಾರಣದಿಂದ ಈ ಮಹಾಯುದ್ಧದ ಒಂದು ನೆವವು ಮುಂದೆ ಬಂದು ಆ ಮೂಲಕ ಅನೇಕ ರಾಜಮುಕುಟಗಳು ಕೆಳಗೆ ಬಿದ್ದವು. ಆದ್ದರಿಂದ ಕೆಲವರು ಹಲವರನ್ನು ಆಳುವುದು ಯುಕ್ತವಲ್ಲ; ಅದು ಅಲ್ಪಾಯುಷಿ. ಎಲ್ಲರು ಎಲ್ಲರನ್ನು ಆಳಿಕೊಳ್ಳಬೇಕು. ಅವರವರು ತಂತಮ್ಮನ್ನು ಆಳಿಕೊಳ್ಳಬೇಕು. ಇದರಲ್ಲಿ ಸಮತೆ ಇದೆ. ಮತ್ತು ಸಮತೆಯೆ ಅಮೃತವು. ಈ ಲೋಕಸತ್ತೆ [illegible] ಭಂಗವಾಗಲಿಕ್ಕಿಲ್ಲ.

[illegible] ಈ ಲೋಕಸತ್ತೆಯ ತತ್ವವು [illegible] ಕಾರಣದಿಂದ ಅಮರವಾಗಿದೆ. ಅವರು ಉಚ್ಛೃಂಖಲವಾದ ಲೋಕಸತ್ತೆಯನ್ನು ಅಪೇಕ್ಷಿಸಿರಲಿಲ್ಲ. ನಿರಂಕುಶವಾದ ಲೋಕಸತ್ತೆಗೆ ಅವರು ಪ್ರಯತ್ನಪಟ್ಟಿರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯದೊಳಗೆ ನಿಂತುಕೊಂಡು ಹಿಂದುಸ್ಥಾನವು [illegible] ವ್ಯವಹಾರದ ಮಟ್ಟಿಗೆ ಸ್ವತಂತ್ರವಾಗಬೇಕು ಎಂದು ಅವರು ಸಾರಿಸಾರಿ ಹೇಳುತಿದ್ದರು. ಇಂಗ್ಲಂಡಿನ ಸಂಬಂಧವನ್ನು ಕಡಿದುಹಾಕಬೇಕು ಎಂದು ಅವರು ಉಪದೇಶಿಸಿರಲಿಲ್ಲ, ಪ್ರಯತ್ನಿಸಿರಲಿಲ್ಲ. ಇಂಗ್ಲಂಡದೇಶದ ಆಧಿಭೌತಿಕ ಸುಧಾರಣೆಗಳು ಹಿಂದುಸ್ಥಾನಕ್ಕೆ ಅವಶ್ಯವಾಗಿಬೇಕು ಎಂದು ಅವರ ಮತವಿತ್ತು. ಈ ಕಾರಣದಿಂದಲೂ ಅವರ ಲೋಕಸತ್ತಾವಾದವು ಅಮರವಾಗಿದೆ. ಅಧಿಕಾರಿವರ್ಗದ ಏಕತಂತ್ರರಾಜ್ಯವು ಬೇಡ, ಮತ್ತು ಇನ್ನೊಂದು ಕಡೆಯಲ್ಲಿ ಉಚ್ಛೃಂಖಲವಾದ ಕೇವಲ ಸ್ವಾತಂತ್ರ್ಯವೂ ಬೇಡ ಎಂದು ಹೇಳಿ ಆಯಾ ಪದ್ಧತಿಗಳಲ್ಲಿರುವ ದೋಷಗಳನ್ನು ಬಿಟ್ಟು ನೋಡಿ ಉತ್ತಮವಾದ ಲೋಕಸತ್ತೆಯು ಪರಸ್ಪರ ವಿರುದ್ಧವಾದ ಮೇಲಿನ ಎರಡೂ ತತ್ವಗಳ ಮಧ್ಯದಲ್ಲಿ ಜನ್ಮವನ್ನು ಎತ್ತುತ್ತದೆ. ಮತ್ತು ಈ ಲೋಕಸತ್ತೆಗೆನೆ ಮರಣವಿಲ್ಲ. ಇಂಥ ಅಮರವಾದ ತತ್ವವನ್ನು ಹಿಂದುಸ್ಥಾನದ ಜನತೆಯ ಕೈಗೆ ಕೊಟ್ಟು ಮಹಾತ್ಮರಾದ ಟಿಳಕರು ನಶ್ವರವಾದ ನರದೇಹವನ್ನು ಬಿಟ್ಟುಹೋದರು. ಅವರು ತಮ್ಮ ಈ ಕರ್ತವ್ಯವನ್ನು ಇಷ್ಟು ಉತ್ತಮರೀತಿಯಿಂದ ಸಾಧಿಸಿ ಹೋದ ಮೇಲೆ ಬಾಕಿ ಉಳಿದ ಕಾರ್ಯವನ್ನು ನಾವು ಜನಗಳು ಸಾಧಿಸಬೇಕಾದ್ದು. ಅದನ್ನು ನಾವು ಸಾಧಿಸದೆ ಇದ್ದರೆ, ಅವರ ಮರಣದ ವಿಷಯವಾಗಿ ಕಣ್ಣೀರು ಸುರಿಸಿದ್ದು, ಶೋಕದಿಂದ ಪ್ರಲಾಪಿಸಿದ್ದು, ದುಃಖದಿಂದ ಮರುಗಿದ್ದು ಇದೆಲ್ಲ ವ್ಯರ್ಥವಾದೀತು.

ಸ್ಫುಟವಿಚಾರಗಳು.

೧. ಲೋಕಮಾನ್ಯ ಟಿಳಕರ ಅಸ್ಥಿಗಳನ್ನು ಅವರ ಮಕ್ಕಳು ಪೂನೆಗೆ ಕೊಂಡುಹೋದರು. ರೈಲ ಸ್ಟೇಶನಿನಿಂದ ಮೆರವಣಿಗೆಯು ಹೊರಟಿತ್ತು. ಮೆರವಣಿಗೆಯಲ್ಲಿ ೫೦ ಸಾವಿರಕ್ಕೆ ಕಡಿಮೆ ಇಲ್ಲದಷ್ಟು ಜನರು ಸೇರಿದ್ದರು. ಮೆರವಣಿಗೆಯ ಸಂಗಡ ಇದ್ದ ಪೋಲಿಸ್ ಸುಪರಿಂಟೆಂಡೆಂಟ್ ದೊರೆಗಳು ಟಿಳಕರ ಬಹುಮಾನಾರ್ಥವಾಗಿ ತಮ್ಮ ಟೋಪಿಯನ್ನು ತೆಗೆದುಕೊಂಡ ಹೋಗುತ್ತಿದ್ದರು; ಮಾತ್ರವಲ್ಲ, ದಾರಿಯ ಮೇಲೆ ಹೋಗಿ ಬರುತ್ತಿದ್ದ ಇತರ ಯುರೋಪಿಯನರು ಕೂಡ ತಂತಮ್ಮ ಶಿರೋವೇಷ್ಟಗಳನ್ನು ತೆಗೆದು ತಲೆಬಗ್ಗಿಸಿ ಹೋಗುತಿದ್ದರು. ಮೊನ್ನೆ ಆದಿತ್ಯವಾರ ದಿವಸ ಆ ಅಸ್ಥಿಗಳನ್ನು ಅವರ ಮಕ್ಕಳು ಗಂಗೆಗೆ ಹಾಕಲು ಪ್ರಯಾಗಕ್ಷೇತ್ರಕ್ಕೆ ಕೊಂಡುಹೋದಾಗ ಹಿಂದು, ಮುಸಲ್ಮಾನ ಪ್ರಮುಖ ಮುಖಂಡರು ಹಾಜರಿದ್ದು ಆ ಸಮರ್ಪಣ ವಿಧಿಯು ಆಚರಿಸಲ್ಪಟ್ಟಿತು. ಅವರ ಮರಣದ ದುಃಖವನ್ನು ಇಡೀ ಹಿಂದುಸ್ಥಾನವು ಕಳೆದ ಸಂಚಿಕೆಯಲ್ಲಿ ಸೂಚಿಸಿದ ಮೇರೆಗೆ ಆಚರಿಸಿತು. ಟಿಳಕರ ನಿಧನದ ಈ ರಾಷ್ಟ್ರೀಯ ಹಾನಿಗೆ ಹಿಂದೂಸ್ಥಾನ ವಾಸಿಗಳೇ ಅಲ್ಲ, ಹಿಂದುಸ್ಥಾನವನ್ನು ಬಿಟ್ಟು ಇಂಗ್ಲಂಡು, ಅಮೇರಿಕಾ, ಆಫ್ರಿಕಾ ಮೊದಲಾದ ದೂರದೂರದ ಖಂಡಗಳಲ್ಲಿ ಹೋಗಿ ವಾಸಿಸಿಕೊಂಡಿದ್ದ ಹಿಂದಿಗಳು, ರಾಷ್ಟ್ರೀಯ ಅಪಘಾತದ ಬಗ್ಗೆ ಮರುಗುತ್ತಿದ್ದಾರೆ. ಇದೇ ಮೇರೆಗೆ ಜನರ ಕೇವಲ ಖಾಸಗಿ ಸಂಸ್ಥೆಗಳೆ ಅಲ್ಲ, ಮುನ್ಸಿಪಾಲಿಟಿ, ಲೋಕಲ್ ಬೋರ್ಡುಗಳಂಥ ಸಂಸ್ಥೆಗಳಲ್ಲಿ ದುಃಖಪ್ರದರ್ಶನವು ಮಾಡಲ್ಪಡುತ್ತಿದೆ. ಪರಂತು, ದುಃಖದ ಮಾತೇನಂದರೆ, ಮುಂಬಯಿ ಸರಕಾರವು ಟಿಳಕರ ಮೇಲಿನ ತನ್ನ ಪೂರ್ವವೈರವನ್ನು ಇನ್ನೂ ಬಿಟ್ಟಿಲ್ಲ! ಅವರು ಮೊದಲೊಮ್ಮೆ ಅಲ್ಲಿಯ ಲೆಜಿಸ್ಲೆಟಿವ್ ಕೌನ್ಸಿಲಿನ ಸಭಾಸದರಾಗಿದ್ದರು. ಆದ್ದರಿಂದ ಅವರ ನಿಧನದ ಬಗ್ಗೆ ಕೌನ್ಸಿಲಿನಲ್ಲಿ ದುಃಖಪ್ರದರ್ಶನದ ಠರಾವನ್ನು ತರಬೇಕೆಂದು ೧೭ ಮಂದಿ ಕೌನ್ಸಿಲ್ ಸಭಾಸದರು ಗವರ್ನರರಿಗೆ ಅರ್ಜಿ ಕಳುಹಿಸಿದರು. ಆದರೆ, ಕೌನ್ಸಿಲಿನಲ್ಲಿ ಒಂದು ಠರಾವನ್ನು ತರುವುದಕ್ಕೆ ೧೫ ದಿವಸಗಳಿಗಿಂತ ಮುಂಚೆ ನೋಟೀಸು ಕೊಡಬೇಕೆಂದಿರುವ ನಿಯಮದ ಆಧಾರವನ್ನು ಹೇಳಿ ಗವರ್ನರರು ಆ ಅರ್ಜಿಯನ್ನು ತೆಗೆದು ಹಾಕಿದರು. ಟಿಳಕರಲ್ಲಿ ಅನಾಸಕ್ತಿ ಬರಲು ದುರಾಗ್ರಹಿ ಅಧಿಕಾರಿಗಳ

[illegible]

[illegible] ... ವನ್ನು ... ಆ ನಡತೆಯ ... ಮುಂದಿನ ... ಆ ... ಮಾಡಬೇಕಾದ ... ಎಂದು ಸರಕಾರವೇ ಎಂದು ... ತಕ್ಕದ್ದು!

೨. ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ತಂಜಾವೂರಿನಲ್ಲಿ ಭಾಷಣ ಮಾಡುವಾಗ ರಾಷ್ಟ್ರೀಯರ ಮೇಲೆ ಒಂದು ... ವಾದ ಆರೋಪಣೆಯನ್ನು ಇಟ್ಟರು. "ರಾಷ್ಟ್ರೀಯರು ದೇಶದ ರಾಜಕೀಯ ಬಂಧನವನ್ನು ಬಿಡಿಸಿಕೊಳ್ಳಲು ದ್ರೋಹದಂಥ ಉಪಾಯವು ಅವಶ್ಯಕವೆಂದು ಹೇಳುತ್ತಾರೆ" ಇದು ಶಾಸ್ತ್ರಿಗಳ ಆರೋಪಣೆಯು. ಸರಕಾರದ ದೃಷ್ಟಿಗೆ ಮೊದಲೇ ಅಪ್ರಿಯನಾಗಿರುವ ರಾಷ್ಟ್ರೀಯ ಪಕ್ಷದವರ ಮೇಲೆ ಶಾಸ್ತ್ರಿಗಳಂಥ ಜವಾಬದಾರ ಮತ್ತು ಮಾನ್ಯಗೃಹಸ್ಥರು ಇಂಥ ಆರೋಪಣೆಗಳನ್ನಿಡುವುದು ನಿಜವಾಗಿ ನಿಂದ್ಯವಾಗಿದೆ. ಆದ್ದರಿಂದಲೆ ನಾಲ್ಕು ಕಡೆಯಿಂದ ಈ ಭಾಷಣದ ನಿಷೇಧವು ಪ್ರಾರಂಭವಾದ ಬಳಿಕ ನಾಮದಾರ ಶಾಸ್ತ್ರಿಗಳು ಸರಳತನದಿಂದಲೂ, ಸತ್ಯ ಪ್ರೀತಿಯಿಂದಲೂ ತಮ್ಮ ಈ ನಿಂದ್ಯ ವಿಧಾನವನ್ನು ಈಗ ಹಿಂದಕ್ಕೆ ತೆಕ್ಕೊಂಡಿದ್ದಾರೆ. ಇದು ಸಮಾಧಾನದ ಮಾತಾಗಿದೆ. ತಾನು ಸುರಕ್ಷಿತನಾಗಿದ್ದೇನೆಂಬ ಒಂದೇ ಆಲೋಚನೆಯಿಂದ ಅನ್ಯರ ಮೇಲೆ ವಿನಾ ಕಾರಣ ಅಪವಾದಗಳನ್ನು ಹೊರಿಸುವುದು ನ್ಯಾಯವಲ್ಲ, ಮತ್ತು ಪ್ರಶಸ್ತವೂ ಅಲ್ಲ. ಆದರೂ ನಾಮದಾರ ಶ್ರೀನಿವಾಸ ಶಾಸ್ತ್ರಿಗಳವರ ಸದಸದ್ವಿವೇಕ ಬುದ್ಧಿಯು ಕೊನೆಗೆ ಎಚ್ಚತ್ತು ಈ ಭಯಂಕರ ಆರೋಪಣೆಯು ಹಿಂದಕ್ಕೆ ತೆಕ್ಕೊಳ್ಳುವಂತೆ ಮಾಡಿತು. ಇದು ಒಳ್ಳೇದೆ ಸರಿ.

೩. ಡಾ. ರವೀಂದ್ರನಾಥ ಟಾಗೋರರವರು ವಿಲಾಯತಿಗೆ ಪ್ರಯಾಣ ಬೆಳಸಿದ್ದಾರಷ್ಟೆ. ಅಲ್ಲಿ ಇತ್ತಲಾಗೆ ಹಿಂದೀ ವಿದ್ಯಾರ್ಥಿಗಳ ಒಂದು ಸಭೆಯಲ್ಲಿ ಅವರಿಗೆ ಭಾಷಣಕೊಡುವ ಒಂದು ಸಂದರ್ಭವು ಒದಗಿತು. ಈ ಸಂದರ್ಭದಲ್ಲಿ ಡಾ. ಟಾಗೋರರವರು ಹಿಂದುಸ್ಥಾನದೊಳಗಿನ ಶಿಕ್ಷಣದ ಸದ್ಯಃ ಸ್ಥಿತಿಯನ್ನು ವಿವರಿಸಿ ಹೇಳುವಾಗ ಬಹು ಮನನೀಯವಾದ ವಿಚಾರಗಳನ್ನು ಆಡಿತೋರಿಸಿದರು. ದೇಶೀಯ ಕಲಾಕೌಶಲ ಮತ್ತು ತತ್ವಜ್ಞಾನಗಳ ಸಂಸ್ಕೃತಿಗೆ ಹಿಂದುಸ್ಥಾನವು ಕೇಂದ್ರವಾಗಬೇಕೆಂದು ಅವರ ಮಾತಿನ ಮುಖ್ಯ ತಾತ್ಪರ್ಯವಾಗಿತ್ತು. ಹಿಂದುಸ್ಥಾನದಲ್ಲಿ ಈಗಿರುವ ವಿಶ್ವವಿದ್ಯಾಲಯಗಳು ಪಾಶ್ಚಾತ್ಯ ಧೋರಣದ ಮೇಲೆ ನಡೆಯುತ್ತಿವೆ. ಆ ಕಾರಣದಿಂದ ಈ ಶಿಕ್ಷಣವು ಹಿಂದಿ ದೇಶಕ್ಕೆ ಪ್ರಯೋಜನಕಾರಿಯಾಗಿರುವುದಿಲ್ಲ. ಪಾಶ್ಚಾತ್ಯ ಸುಧಾರಣೆಯ ತತ್ವದ ಮೇಲೆ ಅವಲಂಬಿಸಿರುವ ಈ ಶಿಕ್ಷಣವು ಕೇವಲ ಏಕದೇಶೀಯವಾಗಿರುತ್ತದೆ. ಅಂಥದನ್ನು ಹಿಂದುಸ್ಥಾನದ ಮೇಲೆ ಹೊರಿಸುವುದು ಯುಕ್ತವಲ್ಲ. ಕೇವಲ ಭೌತಿಕ ಸುಧಾರಣೆಯ ಪಂಚಾಂಗದ ಮೇಲೆ ನಿಲ್ಲಿಸಿದ ಶಿಕ್ಷಣವು ಹಿಂದುಸ್ಥಾನಕ್ಕೆ ತಕ್ಕದ್ದಲ್ಲ. ಅದರ ವಿಷಯವಾಗಿ ದ್ರವ್ಯವನ್ನು ಖರ್ಚುಮಾಡುವುದು ದ್ರವ್ಯದ ದುರುಪಯೋಗವೆ ಸರಿ ಎಂದು ಹೇಳಿ ಟಾಗೋರರು ಈಗಿನ ಶಿಕ್ಷಣಕ್ಕೆ ರಥದ ರೂಪಕವನ್ನು ಕೊಟ್ಟು ಹೇಳುತ್ತಾರೇನಂದರೆ:—ಹಿಂದಿಗಳು ಈ ರಥದ ಮೇಲೆ ಕುಳಿತುಕೊಳ್ಳುವುದನ್ನು ಬಿಟ್ಟು ತಮ್ಮ ಹಿಂದೆ ಅದನ್ನು ಎಳೆಯಹತ್ತಿದರು. ಶಿಕ್ಷಣವು ಪುರಾಣಕಾಲದ್ದಿರಬಾರದು; ಆಧುನಿಕ ಕಾಲದ್ದಿರಬೇಕು ಎಂದು ಅವರು ಆತುರಪಟ್ಟರಲ್ಲದೆ ಈ ಶಿಕ್ಷಣವು ಭವಿಷ್ಯತ್ಕಾಲಕ್ಕೆ ಉಪಯುಕ್ತವಾಗಬೇಕೆಂದು ಅವರು ಎಣಿಸಲಿಲ್ಲ." ಟಾಗೋರರ ಈ ವಿಚಾರಗಳು ಈ ದೇಶದ ಶಿಕ್ಷಣಾಭಿಮಾನಿಗಳಿಗೆ ಮನನೀಯವಾಗಿವೆ.

೪. ಮೊಂಟೆಗ್ಯೂ ದೊರೆಗಳ ಹಿಂದೆ ತಾಗಿದ ಡಾಯರ ಪ್ರಕರಣದ ಶುಕ್ಲ ಕಾಷ್ಠವು ಅವರನ್ನು ಇನ್ನೂ ಬಿಡುವುದಿಲ್ಲವೆಂದು ತೋರುತ್ತದೆ. "ಮೊಂಟೆಗ್ಯೂ ದೊರೆಗಳು ಅಮೃತಸರದ ಪ್ರಕರಣವನ್ನು ಪಾರ್ಲಿಮೆಂಟಿಗೆ ಇನ್ನೂ ಸರಿಯಾಗಿ ತಿಳಿಸಿಕೊಡುವುದಿಲ್ಲ; ಗಾಂಧಿಗಳು ಹಿಂದೂಸ್ಥಾನದಲ್ಲಿ ರಾಜದ್ರೋಹಕರವಾದ ಚಳವಳವನ್ನು ಎಬ್ಬಿಸುತ್ತಿದ್ದಾಗ ಮಿ. ಮೊಂಟೆಗ್ಯೂಗಳು ತಟಸ್ಥರಾಗಿದ್ದಾರೆ. ಈ ಎರಡೂ ವಿಷಯಗಳಲ್ಲಿ ಮೊಂಟೆಗ್ಯೂಗಳು ಯಾವ ವರ್ತನವನ್ನು ಮಾಡುತಿದ್ದಾರೊ ಅದನ್ನು ಅವರು ಯಾವ ವಿಧದಿಂದ ಸಮರ್ಥಿಸುತ್ತಾರೆ? ಎಂದು ಗ್ವಾಯ್ನ್ಸಗಳು ಕೊಮನ್ಸ ಸಭೆಯಲ್ಲಿ ಕೇಳಿದ ಪ್ರಶ್ನೆಗೆ ಮುಖ್ಯ ಮಂತ್ರಿಗಳಾದ ಮಿ. ಲೋಯ್ಡ ಜೋರ್ಜರು ಮೊಂಟೆಗ್ಯೂಗಳ ವರ್ತನಕ್ಕೆ ಕೆಬಿನೆಟಿನ ಬೆಂಬಲವಿದೆ, ಅವರೊಬ್ಬರೆ ಇದಕ್ಕೆ ಪಾತ್ರರಲ್ಲ; ಕೆಬಿನೆಟಿನ ಅನುಮತಿಯು ಮೊಂಟೆಗ್ಯೂಗಳಿಗೆ ಇಲ್ಲದಿದ್ದರೆ ಅವರು ಇಷ್ಟರೊಳಗೆ ಭಾರತ ಮಂತ್ರಿಪದವನ್ನು ವಿಸರ್ಜಿಸಬೇಕಿತ್ತು. ಆದ್ದರಿಂದ ಈ ಕಾರ್ಯದ ಜವಾಬ್ದಾರಿಕೆಗೆ ಮೊಂಟೆಗ್ಯೂ ದೊರೆ ಯೊಬ್ಬರ ಮೇಲೆ ಯಾವ ತಪ್ಪನ್ನು ಹೊರಿಸಲು ಹೋಗಿದ್ದಾರೊ ಅದಕ್ಕೆ ಅವರೊಬ್ಬರೇ ಪಾತ್ರರಲ್ಲ; ನಾವೆಲ್ಲರೂ ಪಾಲುಗಾರರೆ" ಎಂದು ವಿನೋದದ ಧಾಟಿಯಿಂದ ಪ್ರಶ್ನಿಕ ಸಭಾಸದರ ಬಾಯಿ ಕಟ್ಟಿದರು! ಅಂತು ಡಾಯರನ ಶುಕ್ಲ ಕಾಷ್ಠವು ಬೆನ್ನು ಹಿಡಕೊಂಡೆ ಇದೆ! ಆದರೂ ಸರಕಾರವು ಮೊಂಟೆಗ್ಯೂ ದೊರೆಗಳನ್ನ ಇಲ್ಲಿ ವೈಸರಾಯರನ್ನಾಗಿ ಕಳುಹಿಸುವರೆಂದು ಹೇಳುತ್ತಾರೆ. ಇದು ಡಾಯರನ ಕಡೆಯವರಿಗೆ ಮೂಗಿಗೆ ಮೆಣಸು ಇಲ್ಲವೆ ಇನ್ನೇನಾದರೂ ಹಚ್ಚಿದಂತೆ ಆದೀತೋ, ಏನೋ?

೫. ಡಾಯರನು ಅಮೃತಸರದಲ್ಲಿ ಮಾಡಿದ ಅಮಾನುಷ ದುಷ್ಕೃತ್ಯಗಳಿಗಾಗಿ ಸರಕಾರವು ಅವನನ್ನು ಕೆಲಸದಿಂದ ತೆಗೆದು ಹಾಕಿದಕ್ಕೆ ಇಲ್ಲಿಯ ಮತ್ತು ವಿಲಾಯತಿಯಲ್ಲಿಯ ಕೆಲವು ಅವಿವೇಕಿಗಳಾದ ಎಂಗ್ಲೊ ಇಂಡಿಯನರ ಪಿತ್ತವು ತಲೆಗೆ ಏರಿ ಅವರು ಆ ಭರದಲ್ಲಿ 'ಡಾಯರಫಂಡ'ನ್ನು ಪ್ರಾರಂಭಿಸಿದ್ದಾರೆಂಬುದು ಸ್ವದೇಶಾಭಿಮಾನಿಯ ವಾಚಕರಿಗೆ ಗೊತ್ತೇ ಇದೆಯಷ್ಟೆ. ಈ ಫಂಡಿಗೆ ಸರಕಾರಿ ಉದ್ಯೋಗಸ್ಥರು ಚಂದಾ ಕೊಡ ಕೂಡದೆಂದು ಮದ್ರಾಸ ಗವರ್ನರರು ಸ್ಪಷ್ಟವಾದ ಹುಕುಮನ್ನು ಹೊರಡಿಸಿದ್ದಾರೆ. ಡಾಯರನು ಹಿಂದುಸ್ಥಾನದ ಕಮೆಂಡರ್ ಇನ್‌ಚೀಫ್, ಹಿಂದುಸ್ಥಾನ ಸರಕಾರ, ಭಾರತಮಂತ್ರಿ, ಆರ್ಮಿ ಕೌನ್ಸಿಲ್, ಬ್ರಿಟಿಶ ಕೆಬಿನೆಟ್ ಈ ಪ್ರಕಾರ ಪಂಚಾಯತನದಿಂದ ದೋಷಿಯಾಗಿದ್ದಾನೆ. ಅಂಥವನ ಬಹುಮಾನಕ್ಕಾಗಿ ಹೊರಡಿಸಿದ ಫಂಡಿಗೆ ಸರಕಾರಿ ಅಧಿಕಾರಿಗಳು ಕೊಡಬಾರದೆಂಬುದು ತನ್ನಷ್ಟಕ್ಕೆ ವ್ಯಕ್ತವಾಗತಕ್ಕ ಸಂಗತಿಯು. ಆದರೂ ಎಲ್ಲರಿಗೆ ಸ್ಪಷ್ಟವಾಗಿ ತಿಳಿಯುವಂತೆ ಮದ್ರಾಸ ಸರಕಾರವು ತನ್ನ ಅಧಿಕಾರಿಗಳಿಗೆ ಈ ಮೇರೆಗೆ ಆಜ್ಞೆಯನ್ನು ಕೊಟ್ಟಿದೆ. ಇದರಲ್ಲಿ ಯಾವ ದೋಷವೂ ಇಲ್ಲ. ಕೆಲವು ಎಂಗ್ಲೊ ಇಂಡಿಯನ್ ಪತ್ರಿಕಾಕರ್ತರಿಗೆ ಇದರಿಂದ ಹೊಟ್ಟೆ ನೋವು ಬಂದಂತಾಗಿದ್ದರೂ ಅದರ ಕಡೆಗೆ ಯಾರೂ ನೋಡಕೂಡದು. ಅವರು ತಮ್ಮ ಹೊಟ್ಟೆನೋವಿಗೆ ಮದ್ದು ಅರೆದು ಕುಡಿಯಲಿ!

ಮಂಗಳೂರು.

ಲೋಕಮಾನ್ಯ ಟಿಳಕರ ನಿರ್ಯಾಣವನ್ನು ಕುರಿತು ಮಂಗಳೂರಲ್ಲಿ ಕೂಡಿದ ಸಭೆಗಳ ವೃತ್ತಾಂತವು ಇನ್ನೊಂದು ಕಡೆಯಲ್ಲಿ ಪ್ರಕಟಿಸಿದ್ದೇವೆ.

ಸ್ವಲ್ಪದಲ್ಲೇ ಪೆನ್‌ಶನ್ ಹೊಂದಲಿಕ್ಕಿರುವ Vನೇ ಗ್ರೇಡ್ ತಹಸಿಲ್‌ದಾರರಾದ ಮ| ರಾ| ಪಿ. ಎನ್. ಕೃಷ್ಣರಾಯರಿಗೆ ಅವರು ಅಪೇಕ್ಷಿಸಿದ ಒಂದು ತಿಂಗಳಿಂದ ಪ್ರಿವಿಲೆಜ್ ರಜೆಯು ಸಂಕ್ಶನ್ ಆಗಿದೆ. ಇವರ ಹುದ್ದೆಯಲ್ಲಿ ಬಂಟವಾಳ ಡಿಪ್ಯುಟಿ ತಹಸಿಲದಾರರಾದ ಮಿ. ಸುಲ್ತಾನ ಮೊಹಿದಿನ್ ಸಾಹೇಬರ ನೇಮಕವಾಗಿ, ರಜೆಯ ಮೇಲಿದ್ದ ಕಲೆಕ್ಟರ ಆಫೀಸಿನ ಕರೆಸ್ಪೊಂಡೆನ್ಸ್ ಕ್ಲಾರ್ಕ ಮ| ರಾ| ಯಂ. ಕೃಷ್ಣಪ್ಪನವರು ಬಂಟವಾಳ ಡಿಪ್ಯುಟಿ ತಹಸಿಲದಾರರಾಗಿ ಕೆಲಸಕ್ಕೆ ಹಾಜರಾಗಬೇಕಾಗಿ ಹುಕುಂ ಹೊರಟಿದೆ. ಉಡುಪಿ ತಹಸಿಲ್‌ದಾರರಾದ ಮ| ರಾ| ರಾಮನ್ ನಾಯರರು ಒಂದು ತಿಂಗಳ ಪ್ರಿವಿಲೆಜ್ ರಜೆ ಹೊಂದಿರುವುದರಿಂದ ಪುತ್ತೂರಿನ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾದ ಮ| ರಾ| ರಗಡೆ ಶಿವರಾಯರು ಉಡುಪಿ ತಹಸಿಲ್‌ದಾರರಾಗಿಯೂ, ಕುಂದಾಪುರ ತಾಲೂಕು ಹೆಡ್ ಅಕೌಂಟೆಂಟ ಮ| ರಾ| ಮುಲ್ಕಿ ಸುಬ್ಬರಾಯರು ಪುತ್ತೂರು ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾಗಿಯೂ ವರ್ಗವಾಗಿದೆ.

ಈ ತಿಂಗಳ ಸೆಶನು ತಾ. ೩ರಿಂದ ಪ್ರಾರಂಭವಾಗಿ ಕಾಸರಗೋಡು ಸ್ಟೇಶನರಿ ಸಬ್‌ಮೆಜಿಸ್ಟ್ರೇಟರಿಂದ ಕಮ್ಮಿಟ್ ಮಾಡಲ್ಪಟ್ಟ ಎರಡು ಮೊಕದ್ದಮೆಗಳ ತೀರ್ಪು ಕೊಡಲಾಯಿತು. ಪೆನ್‌ಶನ್ ಹೊಂದಿದ ಡಿಪ್ಯುಟಿ ಟೆಲಿಗ್ರಾಫ್ ಸುಪರಿಂಟೆಂಡೆಂಟರಾದ ಮ| ರಾ| ಕೆ. ಶಿವರಾಯರಲ್ಲಿಂದ ಮೊಹಿದಿನ್‌ಕುಟ್ಟಿ ಎಂಬ ಮಾಪಿಳ್ಳೆಯು ತಾಮ್ರದ ಪಾತ್ರೆಯನ್ನು ಅಪಹರಿಸಿಕೊಂಡು ಹೋದನೆಂಬ ಸಂಗತಿಯು ಪ್ರಥಮದ ಮೊಕದ್ದಮೆಯಲ್ಲಿ ವಿಚಾರಣೆಯಾಗಿ ತೀರ್ಪಿನಲ್ಲಿ ಅಪರಾಧಿತನು ಬಿಡುಗಡೆ ಹೊಂದಿದನು.

ನಂತರ ವಿಚಾರಣೆಯಾದ ಖಟ್ಲೆಯಲ್ಲಿ ಸದರಿ ಮೊಹಿದಿನ ಕುಟ್ಟಿ ಮತ್ತು ಅಡಕತ್ತಬೈಲು ಅಬ್ದುಲಕಾದರಿ ಎಂಬ ಇಬ್ಬರು ಮಾಪಿಳ್ಳೆಯರು ಒಟ್ಟುಗೂಡಿ ಕಳೆದ ವರುಷದ ಒಗಸ್ಟ ತಿಂಗಳ ತಾ. ೧೧ರಲ್ಲಿ ಕಾಸರಗೋಡು ಬೋರ್ಡು ಶಾಲೆಯ ಉಪಾಧ್ಯಾಯರಾದ ಮ| ರಾ| ದಿನಕರ ರಾಯರ ಮನೆಯಿಂದ ರೂ. ೫೦೦ ಬೆಲೆ ಬಾಳುವ ವಸ್ತ್ರವನ್ನು ಅಪಹರಿಸಿದರೆಂಬ ತಪ್ಪಿಗೆ ಗುರಿಮಾಡಲ್ಪಟ್ಟಿದ್ದರು. ತನಿಖೆಯಲ್ಲಿ ಇಬ್ಬರು ಮಾಪಿಳ್ಳೆಯರ ಮೇಲೂ ತಪ್ಪು ಸಾಬೀತಾಗಿ ಮೊದಲನೇಯವನಿಗೆ ೫ ವರುಷದ, ಎರಡನೆಯವನಿಗೆ ಎರಡು ವರುಷದ ಸಜೆ ವಿಧಿಸಲಾಯಿತು.

ಮಹಾತ್ಮಾ ಗಾಂಧಿಯವರು ಮೌ| ಶೌಕತ ಅಲ್ಲಿ ಮೌ| ಯಾಕುಬ ಹುಸೇನರೊಂದಿಗೆ ಈ ತಿಂಗಳ ತಾರೀಕು ೧೯ ರಲ್ಲಿ ಮಂಗಳೂರಿಗೆ ತಲುಪುವರಾಗಿ ಮ| ರಾ| ಕಾರ್ನಾಡ ಸದಾಶಿವರಾಯರಿಂದ ಈಗಲೇ ತಂತಿ ವಾರ್ತೆಯು ಮುಟ್ಟಿದೆ.

೧. ಈ ಜಿಲ್ಲೆಯಲ್ಲಿ ಸ್ಥಾಪಿತವಾದ ಕೃಷಿ ಸಂಘ (ಎಗ್ರಿಕಲ್ಚರಲ್ ಎಸೋಸಿಯೇಶನ್)ವು ಕೈಗಾರಿಕೆಯ ಉದ್ಧರಣೆಯ ಉದ್ದೇಶದಿಂದ ಜಿಲ್ಲೆಯ ಅಭಿವೃದ್ಧಿಯ ಸಂಘ (ಡಿಸ್ಟ್ರಿಕ್ಟ ಎಡ್ವಾನ್ಸ್‌ಮೆಂಟ ಎಸೋಸಿಯಶನ್) ಎಂದು ಕಳೆದ ವರುಷ ನಾಮಾಂತರವನ್ನು ಹೊಂದಿತು. ಈ ಸಂಘವು ಕಳೆದ ೧೯೧೯ರಲ್ಲಿ ಜರುಗಿಸಿದ ನಮೂನೆಯ ವಸ್ತು ಪ್ರದರ್ಶನವನ್ನು ಬರುವ. ದಶಂಬರ ತಿಂಗಳ ತಾ. ೨೨, ೨೮ ಮತ್ತು ೩೦ರಲ್ಲಿ ನಡಿಸಲಿಕ್ಕಿದೆ. ಕೈ ಕಸಬಿನ ಕೈಗಾರಿಕೆಗಳನ್ನು ಉದ್ಧರಿಸಬೇಕೆಂಬುದು ಇದರ ಮುಖ್ಯ ಉದ್ದೇಶ. ವ್ಯವಸಾಯ ಹಾಗು ಕೈಗಾರಿಕೆಯ ವಿಷಯಗಳಲ್ಲಿ ಪಾರಂಗತರಾದ ತಜ್ಞರ ಸಹಾಯವನ್ನು ಜನ ಸಾಮಾನ್ಯರಿಗೆ ಒದಗಿಸಿ ಕೊಡಲು ಇದು ಇಚ್ಛಿಸುತ್ತದೆ. ಈ ಸರ್ತಿಯ ಪ್ರದರ್ಶನದ ಯಶಸ್ಸನ್ನು ಹೆಚ್ಚಿಸಲು ಪ್ರದರ್ಶನಕ್ಕಾಗಿ ವಸೂಲಾಗುವ ಎಲ್ಲಾ ಫೀಸುಗಳ ದರವು ಕಡಿಮೆ ಮಾಡಲಾಗುವುದೆಂದೂ, ಸಕಲರೂ ಈ ಪ್ರದರ್ಶನಕ್ಕೆ ಸಾಮಾನುಗಳನ್ನೂ ಕಳುಹಿಸ ಬೇಕಾಗಿಯೂ, ಹೆಚ್ಚಿನ ಮಾಹಿತಿಗಳ ಬಗ್ಗೆ ತಮಗೆ ಬರಕೊಳ್ಳ ಬಹುದಾಗಿಯೂ ಈ ಸಂಘದ ಸೆಕ್ರೆಟರಿಗಳು ತಿಳಿಸುತ್ತಾರೆ.

ಸುಬ್ರಮಣ್ಯದಲ್ಲಿ ನಡಿಯುವ ಕುಳಗುಂದ ಜಾನುವಾರು ಸಂತೆಗೆ ಮಾರಲು ತರುವ ಪ್ರತಿ ಒಂದು ಜಾನುವಾರಿಗೆ ೨ ಆಣೆಯಂತೆ ವಸೂಲು ಮಾಡುವ ಫೀಸು ಈ ವರುಷ ಕಳಚಿಹಾಕಿದೆ.

ಈ ತಿಂಗಳ ಮದ್ರಾಸ ನ್ಯಾಯವಿಧಾಯಕ ಸಭೆಯ ಅಧಿವೇಶನವು ತಾ. ೧೭ಕ್ಕೆ ಕೂಡಲಿಕ್ಕಿದೆ.

ಮ| ರಾ| ಮುಲ್ಕಿ ಕೊಳಚಿಕಂಬಳ ಬಸಪ್ಪನವರು ಮಂಗಳೂರ ತಾಲೂಕು ಬೋರ್ಡ ಮೆಂಬರರಾಗಿ ನೇಮಕವಾದದ್ದು ಸರಕಾರದಿಂದ ಮಂಜೂರಾಗಿ ಬಂದಿದೆ.

ಮಂಗಳೂರ ಎಗ್ರಿಕಲ್ಚರಲ್ ಡಿಮೊನ್‌ಸ್ಟ್ರೇಟರರಾದ ಮ| ರಾ| ಕೊಡಿಯಾಲ ತಿಮ್ಮಪ್ಪ ಆಳ್ವರಿಗೆ ವೆಲ್ಲೂರಿನಲ್ಲಿ ಅಸಿಸ್ಟಾಂಟ ಎಗ್ರಿಕಲ್ಚರಲ್ ಡೈರೆಕ್ಟರರಾಗಿ ವರ್ಗವಾಗಿದೆ.

ಮಂಗಳೂರ ಕೆಥೊಲಿಕ್ ಕೋಒಪರೇಟಿವ್ ಸೊಸೈಟಿಯ ವರುಷಾವಧಿ ಕೂಡತಕ್ಕ ಮಹಾಸಭೆಯು ಈ ತಿಂಗಳ ತಾ. ೨೨ನೇ ಆದಿತ್ಯವಾರ ಬೆಳಗ್ಗೆ ೧೧ಗಂಟೆಗೆ ಸದರಿ ಸೊಸೈಟಿಯ ಆಫೀಸಿನಲ್ಲಿ ಕೂಡುವುದು.

ಡಿಸ್ಟ್ರಿಕ್ಟ ಹೆಲ್ತ ಎಂಡ್ ವೆಲ್ಲಫೆರ್ ಎಸೋಸಿಯೇಶನ್ (ಜಿಲ್ಲಾ ಆರೋಗ್ಯ ಮತ್ತು ಕೌಶಲ ಸಂಘ) ಎಂಬ ಸಂಸ್ಥೆಯನ್ನು ಸ್ಥಾಪಿಸಲು ಜಿಲ್ಲಾ ಕಲೆಕ್ಟರರು ಒಂದು ಸಭೆಯನ್ನು ಆಮಂತ್ರಿಸಿದ್ದಾರೆ. ಇದು ಈ ತಿಂಗಳ ತಾ. ೩೦ನೇ ಸೋಮವಾರ ಕಲೆಕ್ಟರರ ಆಫೀಸಿನಲ್ಲಿ ನೆರೆಯತಕ್ಕದಿದೆ.

ಮಂಗಳೂರಿನ ಪೋಸ್ಟ ಆಫೀಸಿನ ಕ್ಲಾರ್ಕರಾದ ಸುಮಾರು ೨೮ವರುಷ ಪ್ರಾಯದ ರಾ| ಗಣಪತಿಶಾನುಭಾಗ ಎಂಬ ತರುಣನಿಗೂ ಇವರ ಬಸುರಿಯಾದ ಸಹಧರ್ಮಿಣಿಗೂ ಸಂಸಾರದ ಯಾತ್ರೆಯ ಕಡೆಗೆ ತಾರುಣ್ಯದಲ್ಲೇ ತಾತ್ಸಾರ ಉಂಟಾಗಿ ಕಳೆದ ಸೋಮವಾರ ವಿಷಪ್ರಾಶನ ಮಾಡಿ ಪ್ರಾಣತ್ಯಾಗ ಮಾಡಿಕೊಂಡರು.

ಮಂಗಳೂರ ಪಟ್ಟಣದಲ್ಲಿ ಕಳೆದ ಜುಲೈ ತಿಂಗಳಲ್ಲಿ ಒಟ್ಟು ೧೫೮ ಜನನಗಳೂ ೧೦೭ ಮರಣಗಳೂ ಇದ್ದವು.

ಜಾನುವಾರುಗಳ ಉತ್ಪತ್ತಿಯೂ ಅವುಗಳ ಸ್ಥಿತಿಯೂ ದಿನೇ ದಿನೇ ಕುಂದುತ್ತಿರುವುದರಿಂದ ಈಗ ಪಟ್ಟಣದಲ್ಲಿ ಹಾಲು ಸಿಗುವುದು ಕಷ್ಟವಾಗಿದೆ. ಆದ್ದರಿಂದ ಮಂಗಳೂರ ಪಟ್ಟಣದಲ್ಲಿ ಯಾ ಅದರ ಸಮೀಪದಲ್ಲಿ ಒಂದು ಹೈನಸಾಲೆಯನ್ನೂ, ಗೋಶಾಲೆಗಳ ಸಾಲೆಯನ್ನೂ, ನಿರ್ಮಿಸಿ ಜಾನುವಾರುಗಳ ಸ್ಥಿತಿಯನ್ನು ಹೇಗೆ ಉದ್ಧರಿಸ ಬಹುದೆಂಬುದನ್ನು ಕುರಿತು ಉತ್ತಮ ಉಪನ್ಯಾಸ ಬರೆದವರಿಗೆ ಜಿಲ್ಲೆಯ ಕೃಷಿ ಮತ್ತು ಕೈಗಾರಿಕೆಯ ಸಂಘದವರು ರೂ. ೫೦೦ ಬಹುಮಾನವನ್ನು ಕೊಡಲಿಕ್ಕಿರುವರು. ಈ ಕುರಿತು ಬರೆಯುವ ಉಪನ್ಯಾಸವು ೨೦ ಪುಟಕ್ಕೆ ಮೀರ ಬಾರದು; ಅದನ್ನು ಮೇಲಿನ ಸಂಘದ ಕಾರ್ಯದರ್ಶಿಗಳ ಬಳಿಗೆ ನವಂಬರ ತಾ. ೧೫ರ ಒಳಗೆ ತಲ್ಪಿಸಬಹುದು. ಈ ಬಹುಮಾನಕ್ಕೋಸ್ಕರ ರಾ| ದೇವಪ್ಪ ಪೂಂಜರವರು ರೂ. ೫೦ನ್ನು ದಾನವಾಗಿ ಕೊಡುವರು.

ವೆಕ್ಸಿನೇಶನ್ ಡಿಪಾರ್ಟಮೆಂಟಿನಲ್ಲಿ ಮಾಹೆಯಾನ 20 ರಿಂದ 30ರ ವರೇಗೆ ತಲಬು ಮತ್ತು ಕಾಯಂ ಬತ್ತೆ ರೂ. 10 ಈಗ ಸಿಗಲಿಕ್ಕಿರುವುದು. ಬೇಗನೇ ಈ ಸಂಬಳದ ದರವು ಹೆಚ್ಚುವ ಸಂಭವವಿದೆ. ಆದ್ದರಿಂದ ಸ್ಕೂಲ್‌ಫೈನಲ್ ಪಾಸಾದವರು ಈ ಕೆಲಸಗಳಿಗೆ ಅರ್ಜಿ ಮಾಡಬಹುದಾಗಿ ಕಾರ್ಕಳ ತಾಲೂಕು ಬೋರ್ಡು ಪ್ರೆಸಿಡೆಂಟ ಮ| ರಾ| ರಾ| ಕೈ. ಸದಾಶಿವ ಭಟ್ಟರು ಒಂದು ಪ್ರಕಟನೆಯನ್ನು ಕೊಟ್ಟಿರುವರು.

ಪುತ್ತೂರು ತಾಲ್ಲೂಕು ಬೋರ್ಡಿಗೆ ಬೇಕಲ ಇಲೆಕ್ಟೊರಲ್ ಸರ್ಕಲಿನಿಂದ ಮೆಂಬರರಾಗಿ ಮ| ರಾ| ಬೇಕಲ ರಾಮಚಂದ್ರ ಶಾನುಭಾಗರನ್ನು ಚುನಾಯಿಸಿದ್ದೂ, ಮತ್ತು ಮ| ರಾ| ಬೋಳ ಮಾದವರಾಯರನ್ನು ಡಿಸ್ಟ್ರಿಕ್ಟ ಬೋರ್ಡ ಮೆಂಬರರಾಗಿ ಚುನಾಯಿಸಿದ್ದೂ ಮಂಜೂರಾಗಿ ಬಂದಿರುತ್ತದೆ.

[illegible] ಸಾವಿರ ... ಸಂಘದವರು [illegible] ... ಸಭೆಯು ... ಉದ್ದೇಶವನ್ನು ... [illegible] ... ರಾ| ನರಸಿಂಹ ಕೃಷ್ಣ ... [illegible]

... ಜೀವನಚರಿತ್ರೆಯನ್ನು ಓದಿದರು. ... ರಾ| ನಾರಾಯಣ ಪದ್ಮನಾಭ ಪಾಟೀಲರವರು ದುಃಖದ ... ವಾಕ್ಯವನ್ನು ಗ್ರಹಿಸಿದ ಮಹಾತ್ಮರ ಕುಟುಂಬದವರಿಗೆ ... ಈ ಸಭೆಯವರಾಗಿ ಕಳುಹಿಸಬೇಕಾಗಿ ತಂದ ಠರಾವು ... ದಿಂದ ಪಾಸಾಯಿತು. ಕಡೆಗೆ ಎಲ್ಲರೂ ನಿಂತುಕೊಂಡು ಲೋಕ ... ಆತ್ಮಕ್ಕೆ ಶಾಂತಿ ದೊರಕಲೆಂದು ಶ್ರೀ ಭಗವಂತನನ್ನು ಸ್ತುತಿಸಿ ... ಸಭೆಯು ಬರಖಾಸ್ತ ಆಯಿತು.

ಈ ದಿನ ಬೆಳಿಗ್ಗೆ ಈ ಊರಿನ ಕೆಲವು ಸದ್ಗೃಹಸ್ಥರ ಸಹಾಯದಿಂದ ... ದಿಂದ ೧೨ ಘಂಟೆ ವರೆಗೆ ಬಡಬಗ್ಗರು ಸುಮಾರು ೩೦೦ ಜನರಿಗೆ ೬ ಮುಡಿ ಅಕ್ಕಿ ಹಂಚಲಾಯಿತು.

ಸುಳ್ಯ:— ಇಲ್ಲಿ ಜಮಾಬಂದಿ ಸಮಯ ನಡದ ದರಬಾರಿನಲ್ಲಿ ಸರಕಾರಿಗೆ ಸೇರಿದ್ದ ಸಾಗುವಳಿಗೆ ಯೋಗ್ಯವಾದ ಸ್ಥಳವನ್ನು ಸಾಗುವಳಿ ಉಪಯೋಗದ ಬಗ್ಗೆ ಬಿಟ್ಟುಕೊಡಬೇಕಾಗಿ ಅರಿಕೆ ಮಾಡಿಕೊಂಡದಕ್ಕೆ ಅಂಥಾ ಸ್ಥಳಗಳನ್ನು ಅರ್ಜಿ ಬರಕೊಂಡರೆ ಬಿಡಬಹುದಾಗಿ ಹುಕುಂ ಆಗಿತ್ತು. ಆದರೆ ಅಂಥಾ ಸ್ಥಳಗಳ ಬಗ್ಗೆ ಕೇವಲ ಬಡವರು ಕಳದ ಫೇಬ್ರುವರಿ ಮತ್ತು ಮಾರ್ಚಿ ತಿಂಗಳಲ್ಲಿ ಅರ್ಜಿ ಬರಕೊಂಡಿದ್ದಾಗ್ಯು ಈ ವರೇಗೆ ಯಾವುದೊಂದು ತರದ ಹುಕುಂ ಅರ್ಜಿದಾರರಿಗೆ ಸಾದರಾಗದೆ ಇದ್ದದ್ದು ಬಡ ಜನರ ದುರಾದೃಷ್ಟವೇ ಸರಿ. ಈ ಬರಗಾಲ ಸಮಯ ದಯಾಳು ಜಿಲ್ಲಾ ಕಲ್ಲೆಕ್ಟರ ದೊರೆಗಳವರಾದರೂ ನಿಗಾಕೊಟ್ಟು ಕೂಲಂಕಷ ತನಿಖೆ ನಡಿಸುತಿದ್ದರೆ ಬಡ ಜನರ ಬಂಗಾಲವು ಕಶ್ಚ ಮಟ್ಟಿಗಾದರೂ ಶಾಂತವಾಗಿ ಹೋಗುತಿತ್ತು.

ಇದೇ ಸಮಯ ಸುಳ್ಯ ಡಿವಿಜನಿನ ಪ್ರತಿ ಗ್ರಾಮದಲ್ಲಿ ಶಾಲೆಗೆ ಯೋಗ್ಯವಾದ ಸ್ಥಳಗಳನ್ನು ಮುಂದಾಗ ಸರ್ವೆ ಮಾಡಿಸಿ ಶಾಲೆ ಬಗ್ಗೆ ಇಟ್ಟುಕೊಳ್ಳಬೇಕೆಂಬದಾಗಿ ಅರಿಕೆಮಾಡಿಕೊಂಡದ್ದಕ್ಕೆ ಆ ರೀತಿ ಪರ್ಮಾಸುವದಾಗಿ ಹುಕುಂ ಆದಾಗ್ಯೂ ಈ ವರೇಗೆ ಯೋಗ್ಯವಾದ ಸ್ಥಳಗಳನ್ನು ಆರಿಸಿ ಸರ್ವೆ ಮಾಡಿಸದೆ ಇಟ್ಟದ್ದು ಇಲ್ಲಿಯ ಬಡ ಬೇಕವಾರ್ಡ ಗೌಡುಗಳ ಜಾತಿಯ ವಿದ್ಯಾರ್ಥಿಗಳ ದುರದೃಷ್ಟವೇ ಸರಿ.

(ನಗರ ತಾಲೂಕು) ಎಡೂರು:— ಇಲ್ಲಿಯ ಏ ಇ ಸ್ಕೂಲು ೧೯೧೬ನೆ ಇಸವಿಯಲ್ಲಿ ತುಂಬಾ ಹೀನಸ್ಥಿತಿಯಲ್ಲಿ ಇದ್ದಿತು ಸ್ಕೂಲಿನಲ್ಲಿ ೪, ೫ ಬಾಲಕರು ಮಾತ್ರ ಬರುತ್ತಿದ್ದರು ೧೯೧೬ನೆ ಇಸವಿಯಲ್ಲಿ ಗುಣಶಾಲಿಗಳಾದ ಮ ರಾ ರಾ ಮಾಸ್ಟರ್ ಬಿ ಗೋಪಾಲ ಉಪಾಧ್ಯಾಯರು ಇಲ್ಲಿಗೆ ವರ್ಗವಾಗಿ ಬಂದ ಮೇಲೆ ಇವರು ಗ್ರಾಮಸ್ಥರಿಗೆ ಜಾಸ್ತಿ ಪ್ರೋತ್ಸಾಹ ಕೊಟ್ಟು ಗ್ರಾಮಸ್ಥರಿಗೆ ವಿಶ್ವಾಸವಂತರಾಗಿ ದಿನ ದಿನ ಸ್ಕೂಲನ್ನು ಅಭಿವೃದ್ಧಿಪಡಿಸುತ್ತಾ ಬಾಲಕರಲ್ಲಿ ವಿಶ್ವಾಸದಿಂದ ಬೋಧನೆ ಮಾಡುತ್ತಾ ಈಗ ಹಾಲೀ ಸ್ಕೂಲಿನಲ್ಲಿ ೪೮ ಬಾಲಕಬಾಲಿಕೆಯರು ಓದುತ್ತಾರೆ. ಈ ಸ್ಕೂಲಿಗೆ ಸುಮಾರು ೭ ೮ ಮೈಲುಗಳಿಂದ ಬಾಲಕರು ಬುತ್ತಿಯನ್ನು ಕಟ್ಟಿಕೊಂಡು ಬಂದು ಪಾಠಕೇಳಿಕೊಳ್ಳುತ್ತಾರೆ ಸದರಿ ಮಾಸ್ಟರ ಪ್ರೋತ್ಸಾಹದಿಂದ ಈಗ ಹೊಸದಾಗಿ ಸ್ಕೂಲು ಮನೆಯನ್ನು ಸಹಾ ಗ್ರಾಮಸ್ಥರು ಕಟ್ಟಿಸುತ್ತಾರೆ ಈ ಸ್ಕೂಲಿಗೆ ದಯಾಳುಗಳಾದ ಸರಕಾರದವರು ಇನ್ನೊಬ್ಬ ಮಾಸ್ಟರನ್ನೂ ಒಬ್ಬ ಸ್ಕೂಲು ಜವಾನನನ್ನೂ ಬಾಲಕರಿಗೆ ಕುಳಿಯುವುದಕ್ಕೆ ಒಂದು ಸ್ಟೂಡೆಂಟ್ಸು ರೂಮನ್ನೂ ಇಲ್ಲಿಗೆ ಕೊಟ್ಟು ಹಾಲೀ ಈಗ ಇರುವ ಮಾಸ್ಟರ್ ಬಿ ಗೋಪಾಲ ಉಪಾಧ್ಯಾಯರನ್ನು ಇಲ್ಲಿಗೆ ಕಾಯಂ ಪಡಿಸುವಲ್ಲಿ ಈ ಸ್ಕೂಲು ಇನ್ನೂ ಅಭಿವೃದ್ಧಿ ಬರಬಹುದಾಗಿ ಅಪೇಕ್ಷಿಸುತ್ತೇವೆ.

ತಿಲಕಾ! ನೀನೆ ಕೃತಾರ್ಥ!!

ನಿನ್ನ ಕೆಲಸವೆಲ್ಲ ಮುಗಿಯಿತು, ಸರಿ, ನೀನು ಹೊರಟೆ!! ಯಾವ ಕರ್ತವ್ಯವನ್ನು ಮಾಡಲು ನೀನು ನಮ್ಮೊಳಗೆ ಬಂದಿದ್ದಿಯೋ ಆ ಕರ್ತವ್ಯವನ್ನು ನೀನು ಸಾಧಿಸಿಯಾಯಿತು, ಕೂಡಲೆ ಇಲ್ಲಿಂದ ಪ್ರಯಾಣ ಬೆಳೆಸಿದಿ. ನಾವು ಮಾತ್ರ ನೀನು ಇನ್ನು ಕೆಲವು ಸಮಯ ನಮ್ಮಲ್ಲಿ ಇರಬೇಕಿತ್ತು ಎಂದು ಆಶಿಸಿಕೊಂಡಿದ್ದೆವು. ಆದರೆ ಕರ್ತವ್ಯದಕ್ಷನಾದ ನೀನು ಇಲ್ಲಿಯ ಕಾರ್ಯವು ಮುಗಿದಮೇಲೆ ಯಾಕೆ ಕುಳಿತುಕೊಳ್ಳುವಿ! ತನ್ನ ಉಜ್ವಲ ತೇಜಸ್ಸಿನಿಂದ ಇಡೀ ಲೋಕವನ್ನು ಎಚ್ಚರಿಸಿ ಅದಕ್ಕೆ ಕರ್ತವ್ಯ ಮಾರ್ಗವನ್ನು ತೋರಿಸಿ ಕೊಡುವ ಸೂರ್ಯನು, ತನ್ನ ಕಾರ್ಯವು ಮುಗಿದ ಮೇಲೆ ನಿಲ್ಲುವನೇ? ಇಲ್ಲ ಎಂದಮೇಲೆ, ನೀನಾದರೂ ಯಾಕೆ ನಿಲ್ಲಬೇಕು? ಈಗ ನಾವು ಆಸೆಪಡಬಹುದು ಮತ್ತು ಆಸೆಪಡುತ್ತೇವೆ ಎನ್ನೋಣ. ಹಿಂದೀ ದೇಶದ ಉದ್ಧಾರಕ್ಕಾಗಿ ಅವತರಿಸಿದ ನೀನು ಇನ್ನೂ ಕೆಲವು ಸಮಯವಿದ್ದುದಾದರೆ ನಮಗೆ ಒಳ್ಳೆಯದಾಗುತ್ತಿತ್ತಲ್ಲವೆ? ದೇಶಕ್ಕೆ ಒಳ್ಳೆಯದಾಗುತ್ತಿತ್ತಲ್ಲವೇ ಎಂದು ನಾವು ಆಶಿಸಬಹುದು. ಮೊಲೆಯುಣಿಸುವ ಜನನಿಯು ತನ್ನ ಚಿಕ್ಕ ಶಿಶುವನ್ನು ಬಿಟ್ಟು ಹೊರಟು ಹೋಗುವುದಾದರೆ ಆ ಅನುಕಂಪನೀಯವಾದ ಮರಿಯನ್ನು— ಆ ಅನಾಥವಾದ ಶಿಶುವನ್ನು ಮೊಲೆ ಉಣಿಸುವವರಾರು! ಕಾಡಿನಲ್ಲಿರುವ ಆ ಅನಾಥ ಶಿಶುವು ಹಸಿವೆಯಾದಾಗ ಎಲ್ಲಿಗೆ ಹೋಗಬೇಕಾಯಿತು? ಕಾಡಿನಲ್ಲಿ ಹಸಿವೆಯಿಂದ ಕೂಗುವ ಆ ಮರಿಯು ಎಲ್ಲಿಗೆ ಹೋಗಲಿ, ಕರಡಿ ಇದ್ದಲ್ಲಿಗೆ ಹೋಗಲಿ? ಹುಲಿ ಇದ್ದಲ್ಲಿಗೆ ಹೋಗಲಿ? ಎಲ್ಲಿಗೆ ಹೋಗಲಿ! ಆ ಹಸಿದ ಬಾಲಕಕ್ಕೆ ಸರ್ವಾಧಾರವಾದ ತಾಯಿಯು ಬಿಟ್ಟುಹೋದರೆ ಅದಕ್ಕೆ ಯಾವ ಗತಿಯೊ ಅದೇ ನಮ್ಮದಾಯಿತಲ್ಲವೇ? ತನ್ನ ಕಾಲಿನ ಮೇಲೆ ತಾನು ನಿಂತು, ತಿಂದು, ಹೊಟ್ಟೆತುಂಬಿಕೊಳ್ಳುವ ಪಾತ್ರತೆಯು ಬರುವದಕ್ಕಿಂತ ಮುಂಚೆ ತಾಯಿಯು ಹೊರಟುಹೋದರೆ— ಅಶಿಕ್ಷಿತ ಓಡಿಯಾಡುವಂತೆ ಕಾಲುಗಳಲ್ಲಿ ಬಲವುಂಟಾಗುವುದಕ್ಕಿಂತ ಮುಂಚೆ ಪಕ್ಕುಕ್ಕಬರುವಂತ ಮುಂಚೆ ತಾಯಿಯು ಹೋದುದಾದರೆ, ಇಲ್ಲವೆ [illegible] ... ನೇನು ಸ್ಥಳ ... ಕಾಯಿ! ಕಾಯಿ!" ಎಂದು ಕೂಗುತ್ತಾ ... ಅದಕ್ಕೆ ಸಹಾಯವನ್ನು ಯಾರು ಕೊಟ್ಟಾರು? ಇದೇ ರೀತಿಯಿಂದ ... ದಲ್ಲಿ ತನ್ನ ಬಾಯಿಗಳನ್ನು ಕರೆಯುವಾಗ ... ಕೊಟ್ಟಾರು? ನೀನು ಹೊರಟುಹೋದಿ, ಇನ್ನು ಯಾರು ಓಗೊಟ್ಟಾರು? ರಾಷ್ಟ್ರೀಯಪಕ್ಷವನ್ನು ಹುಟ್ಟಿಸಿದಿ, ಸಂರಕ್ಷಿಸಿದಿ, ಬೆಳಸಿದಿ, ಈ ಮಗುವು ಕೊಂಚ ಮಟ್ಟಿಗೆ ಅಂಬೆಗಾಲು ಇಡುವಷ್ಟರೊಳಗೆ ನೀನು ಹೋದ, ಮುಂದೆ ಇದರ ಗತಿ ಏನು?

ತಾಯಿ ಇಲ್ಲದ ಮಗುವು "ಅನಾಥೋದೇವರಕ್ಷಕಃ" ಎಂಬ ಮಾತಿನಂತೆ ಹೇಗಾದರೂ ಬದುಕಿ ಸಂಸಾರದ ಮಾರ್ಗವನ್ನು ಆಕ್ರಮಿಸುವದು. "ಕಾಯಿ! ಕಾಯಿ!" ಎಂದು ಕರೆದಾಗ ಓಗೊಡಲಿ ಬೇಕೆಂದಿಲ್ಲ. ಶಿಶುವಿನ ಮನಸ್ಸು ಬಹು ಕೋಮಲ, ಅನುಭವದ ಯಾವ ಮುದ್ರೆಗಳೂ ಆ ಮನಸ್ಸಿನ ಮೇಲೆ ಎದ್ದಿರುವುದಿಲ್ಲ. ಅದಕ್ಕೆ ಥಕ್ಕನೆ ಮರೆತುಹೋಗುತ್ತದೆ. ಅಳಲು ತೆರೆದ ಬಾಯಿಯಿಂದ ಮಗುವು ಎಷ್ಟೊ ಸಾರಿ ನಗುವುದೂ ಉಂಟು! ಇಂಥ ಅಜ್ಞಾನದ ಮಾತ್ರ ವಿಸ್ಮೃತಿಯ ವರವನ್ನು ಪಡಕೊಂಡ ಮಗುವಿಗೆ ಒಂದು ವೇಳೆ ನೋಡುವವರು ಯಾರೂ ಇಲ್ಲದಾದರೂ ಅದೊಂದು ದುಃಖದ ಮಾತಲ್ಲ. ಪರಂತು ತಾಯಿಯು ಕರೆದಾಗ ಮಗುವು ಓಗೊಡುವದಿಲ್ಲವಾದರೆ— ಓಗೊಡುವ ಸ್ಥಿತಿಯಲ್ಲಿ ಮಗುವು ಇಲ್ಲವಾದರೆ— ಈ ಲೋಕವನ್ನು ಬಿಟ್ಟು ಹೋಗಿದ್ದುದಾದರೆ— ಆ ತಾಯಿಯ ದುಃಖಕ್ಕೆ ಪಾರವುಂಟೆ? ಕಣ್ಣಲು ಹಾಲಿನಿಂದ ತುಂಬಿಹೋಗಿ ಆ ಭಾರವನ್ನು ತಡೆಯಲಾರದೆ— ಆ ಶಿಶುಪ್ರೇಮವನ್ನು ತಡೆಯಲಾರದೆ— ಹರಿಣಿಯು "ಮಗು! ಮಗು!" ಎಂದು ಕೂಗಿಕೊಂಡು ಹೋಗುವಾಗ ಅವಳ ಕಿವಿಗಳಲ್ಲಿ ಮಗುವಿನ ಮಾತು ಬೀಳದೆ ಇದ್ದರೆ ಆ ಹರಿಣಿಗೆ ಎಷ್ಟು ಉದ್ವೇಗವಾಗಬೇಕಾಯಿತು! ತಾಯಿಯ ಕರೆಗೆ ಆಗ ಯಾರು ಓಗೊಡುವರು? ನಿಜವಾಗಿ ಮೇಲಿನದಕ್ಕಿಂತ ಈ ಎರಡನೆಯ ನೋಟವು ಬಹು ಅನುಕಂಪನೀಯವಾಗಿದೆ! ಹೃದಯ ದ್ರಾವಕವಾಗಿದೆ! ತಾಯಿ ಮಗುವಿನಂತೆ ಅಜ್ಞಾನಿಯಲ್ಲ. ಅವಳಲ್ಲಿ ವಿಸ್ಮೃತಿ ಇಲ್ಲ. "ನನ್ನ ಕರೆಗೆ ಯಾಕೆ ಉತ್ತರವಿಲ್ಲ, ಮೊದಲು ಯಾವಾಗಲೂ ಉತ್ತರ ಕೊಡುತ್ತಿರುವ ನನ್ನ ಮಗುವೆಲ್ಲಿ? ನಾನೆಲ್ಲಿ ಹುಡುಕಲಿ?" ಎಂದು ತಾಯಿಯು ದೀನಳಾಗಿ ಕೂಗುವಳು. ಇದೆ ಅವಸ್ಥೆಯು ನಮ್ಮಲ್ಲಿಯವರದಾಗಿದೆ. ಹಿಂದೀ ದೇಶವು ತನ್ನ ಪುತ್ರನನ್ನು ಕರೆಯುಹತ್ತಿದರೆ, ಇನ್ನು ಓಗೊಡುವವರಾರು? ಕರ್ತವ್ಯದ ಆಮಂತ್ರಣವನ್ನು ಕೊಡಹತ್ತಿದರೆ ಇನ್ನು ಅದನ್ನು ಸ್ವೀಕರಿಸುವವರಾರು? ವಿಪತ್ತುಗಳು, ಕಷ್ಟಗಳು ಆಸೆಬಂದ ಆಹ್ವಾನವನ್ನು ಮಾಡಹತ್ತಿದರೆ ಇನ್ನು ಅದನ್ನು ಸ್ವೀಕರಿಸುವವರಾರು? ಈ ನಿನ್ನ ತಾಯಿಂದಿರ ಆಮಂತ್ರಣೆಯನ್ನು ಇದುವರೆಗೆ ಅನೇಕಾವೃತ್ತಿ ಅಂಗೀಕರಿಸಿ ಅವರಲ್ಲಿ ಒಂದು ತರದ ಚಟವನ್ನು ಹುಟ್ಟಿಸಿದ್ದಿ. ಆ ಅಭ್ಯಾಸದ ಮೂಲದಿಂದ— ಆ ಚಟದ ಮೇಲಿಂದ ಅವರು ನಿನ್ನನ್ನು ಆಮಂತ್ರಿಸ ಹತ್ತಿ ನಿನ್ನಿಂದ ಉತ್ತರವಿಲ್ಲದಿಂದಾದರೆ ಭಾರತಭೂಮಿ, ಕರ್ತವ್ಯತರತಿ ಮತ್ತು ಆಪತ್ತು ಈ ನಿನ್ನ ತಾಯಂದಿರು ನಿರಾಶರಾಗಿ ಯಾವ ದೀರ್ಘನಿಶ್ವಾಸವನ್ನು ಹೊರಡಿಸಿಯಾರೊ ಅದು— ಅವರ ನಿರಾಶೆಯು ಆ ಹೃದಯದ್ರಾವಕ ಪ್ರಸಂಗವು ಯಾರಿಂದ ನೋಡಲು ಸಾಧ್ಯವಿದೆ!! ಈ ದೇಶ, ಆ ಕರ್ತವ್ಯಪರತೆ, ಮತ್ತು ಆ ಆಪತ್ತುಗಳು ಈ ಹೊತ್ತು ನಿರಾಧಾರವಾದವು.

ಆದಕ್ಕಾಗಿ ನೀನು ಕೆಲವು ಸಮಯ ಇರಬೇಕಿತ್ತು ಎಂದು ನಮಗೆ ತೋರಿಕೊಂಡಿತ್ತು. ಮತ್ತು ಕರ್ತವ್ಯವು ಮುಗಿದ ಮೇಲೆ ನೀನು ಯಾಕೆ ಕೂಡ್ರುವಿ! ಗೊನೆಹಾಕಿದ ಮೇಲೆ ಬಾಳೆಯು ಇನ್ನು ಬಾಳುವದಿಲ್ಲ; ಬಹು ಸಂಭ್ರಮದಿಂದ ತಂಬಲಕೊಂಡು ತನ್ನ ನೀರನ್ನು ಸುರಿಸಿದ ಮೇಲೆ ಮೇಘವು ಇನ್ನು ನಿಲ್ಲುವುದಿಲ್ಲ. ಅಂಧಕಾರವನ್ನು ನಾಶಿಸಿದ ಮೇಲೆ ಸೂರ್ಯನು ಇನ್ನು ಪ್ರಕಾಶಿಸುವುದಿಲ್ಲ. ಎಂದ ಮೇಲೆ ನೀನು ಮಾತ್ರ ಯಾಕೆ ನಿಲ್ಲಬೇಕು? ನೀನು ಜನತೆಯ ಅಜ್ಞಾನನಿದ್ರೆಯನ್ನು ಹೋಗಲಾಡಿಸಿದಿ, ಕರ್ತವ್ಯಮಾರ್ಗವನ್ನು ಬೋಧಿಸಿದಿ ಸ್ವಾರ್ಥತ್ಯಾಗದ ಮೂರ್ತಿಮತ್ತಾದ ಮತ್ತು ಪ್ರತ್ಯಕ್ಷವಾದ ಪಾಠವನ್ನು ಕಲಿಸಿದಿ. ಧ್ಯೇಯರೂಪದಲ್ಲಿ ಇದ್ದ ಸ್ವಾರಾಜ್ಯದ ಉಚ್ಚತಮವಾದ ಮಾರ್ಗವನ್ನು ತಯಾರಿಸಿದಿ, ಆ ಧ್ಯೇಯವನ್ನು ಕೈಗೂಡಿಸಲು ಹೊಂಬಾಗ ಭಯಂಕರವಾದ ಆಪತ್ತಿನ ತೆರೆಗಳು ನಿನ್ನನ್ನು ಆಳವಾದ ಸಮುದ್ರದಲ್ಲಿ ಮುಳುಗಿಸಲು ಯತ್ನಿಸಿದರೂ ನೀನು ನಿನ್ನ ಸತ್ವಗುಣದ ಮತ್ತು ಸಮತ್ವಯೋಗದ ಪ್ರಭಾವದಿಂದ ಕರ್ತವ್ಯದ ಉಚ್ಚಶಿಖರದ ಮೇಲೆ ಹಾಗು ಕರ್ಮಯೋಗದ ಕ್ಷಿತಿಜದ ಮೇಲೆ ಉದಯಿಸಿದಿ! ಈ ಮೇರೆಗೆ ಕೃತಕಾರ್ಯನಾದ ನೀನು ವಿಶ್ರಾಂತಿಯನ್ನು ಅನುಭವಿಸಲು ತೆರಳಿದ್ದು ಸಹಜವೆ! ಸೂರ್ಯನು ಅಸ್ತಮಿಸಿದರೆ ಪುನಃ ಕಗ್ಗತ್ತಲೆ ಬರುವುದು ನಿನ್ನನ್ನು ಕುರಿತು ಹೇಳುವುದಾದರೆ ಸೂರ್ಯನ ಈ ಸಾದೃಶ್ಯವು ಒಪ್ಪುವುದಿಲ್ಲ. ನಿನ್ನ ಹಿಂದೆ ಇಲ್ಲಿ ಕತ್ತಲೆ ಇಲ್ಲ, ನಿನ್ನ ಹಿಂದೆ ಇಲ್ಲಿ ಅಜ್ಞಾನವಿಲ್ಲ; ನಿನ್ನ ಹಿಂದೆ ಇಲ್ಲಿ ನಿದ್ರೆ ಇಲ್ಲ. ನಿನ್ನ ಆತ್ಮಜ್ಯೋತಿಯ ಸಹಸ್ರರಶ್ಮಿಯು ಹಿಂದುಸ್ಥಾನದ ಕ್ಷಿತಿಜದ ಮೇಲೆ ಯಾವಾಗಲೂ ಜ್ವಲಿಸುತ್ತಿದ್ದಾನೆ!

ಅನುಯಾಯಿ

ರಾ ರಾ| ಕೆ ಹನುಮಂತರಾವ, ಸೆಕ್ರೆಟರಿ "ಜನರಸ್ ಕ್ಲಬ್" ಹಳ ಅಗ್ರಹಾರ, ಮೈಸೂರು— ಇವರು ತಿಳಿಸುತ್ತಾರೆ—

— ವಿದ್ಯಾರ್ಥಿಗಳಿಗೆ ಸಹಾಯಮಾಡುವ ಮಹತ್ತು ಉದ್ದೇಶದಿಂದ "ಜನರಸ್ ಕ್ಲಬ್" ಸಂಘವು ಸ್ಥಾಪಿಸಲ್ಪಟ್ಟು ಅನೇಕ ಮಹನೀಯರಿಂದ ಸಹಾಯವನ್ನೂ ಪಡೆದಿರುವುದು. ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಪುಸ್ತಕ, ಊಟ ಮೊದಲಾದವುಗಳಿಗಾಗಿ ತಿಂಗಳಿಗೆ ೩ ರೂ ಯಿಂದ ೮ ರೂ ವರೆಗಾದರೂ ದೊರೆಯುವಂತೆ ಮಾಡಲಾಗುತ್ತೆ. ಯಾವ ಮತದವರಾದರೂ ದರಖಾಸ್ತು ಮಾಡಿಕೊಳ್ಳಬಹುದು. ಪ್ರತಿ ಉಮೇದುವಾರರೂ ದರಖಾಸ್ತಿನೊಡನೆ ೯ ಆ ಫೀಜ್ ರವಾನಿಸಿ, ಹೆಡ್ ಮಾಸ್ಟರ ಶಿಫಾರಸನ್ನೂ ಕಳುಹಿಸಿಕೊಡಬೇಕು. ಈ ತಿಂಗಳ ೨೫ರ ವರೆಗೆ ಅರ್ಜಿ ಕೇಷನ್ ಅಂಗೀಕರಿಸಲಾಗುತ್ತೆ. ಸಹಾಯಪಡೆದ ಉಮೇದುವಾರರ ಹೆಸರನ್ನು ಪ್ರಕಟಿಸುತ್ತೆ.

[illegible] ... ಬಹು ಕಮ್ಮಿ ... ಯಲ್ಲಿ ಹೋದರೆ ... ಇರುವ ... ಮಾಡಬಹುದೇ? ಇಲ್ಲ, ... ಬೇರೆ ಊರುಗಳಲ್ಲಿ ಇರುವಂತೆ ... ವರವೂ ಬಹು ಕಡಿಮೆ. ... ಒಳಗೇನೆ ಕಟ್ಟಿಕೊಂಡು "ಹೊರಗೆ ... ಹೋಗಲಿಯಪ್ಪಾ" ಎಂದು ಹೇಳುವ ... ಬಂದಿದೆ ಎಂದು ... ಮ್ಯುನಿಸಿಪಾಲಿಟಿ ಪ್ರೆಸಿಡೆಂಟರವರೋ ... ಬಹು ಶ್ರಮಪಡದೆ ಹೊಳ್ಳುವಂತೆ ... ಅವರೂ ... ಹೆಚ್ಚಾಗಿ ಹೋಗುತ್ತಾರೋ ಇಲ್ಲವೋ ... ಅಧಾರಕ್ಕೆ ಒಂದು ಕೈಯಲ್ಲಿ ಕೋಲು ಇದೆ. ... ಓವರಿಯರು ಇದ್ದರೆ ಅವುದರಿಂದ ... ಬಹು ಕಡಿಮೆ. ಒಂದು ವೇಳೆ ಬಿದ್ದರೇನು! ... ಇಲ್ಲವಲ್ಲಾ.

ಮಡಿಕೇರಿ.
ತಾ 8—8—1920 } ಇತಿ ಕೊಡಗ.

ಸುಳ್ಯ ಸರ್ಕಲಿನ ವೋಟರರಿಗೆ ವಿನಂತಿ.

ಇದೇ ತಿಂಗಳ ೧೮ನೇ ತಾರೀಕಿನ ೧೧ ಘಂಟೆಯಿಂದ ೩ ಘಂಟೆ ೫ರ ವರೇಗೆ ತಾಲೂಕುಬೋರ್ಡು ಮೆಂಬರರ ಈ ಸಂಭಗಳ ಬಗ್ಗೆ ಬರಕೊಂಡ ಶಿಫಾರಸು ಪತ್ರಗಳ ಜನರನ್ನು ಚುನಾಯಿಸುವುದರಿಂದ ಇದಕ್ಕೆ ಇವರ ಗುಣಾವಗುಣಗಳನ್ನು ವೋಟರರು ಸೂಕ್ಷ್ಮವಾಗಿ ತಿಳಿಯಬೇಕಾದುದು ಅದರ ಮುಖ್ಯ ಕರ್ತವ್ಯ. ವಿದ್ಯೆಯಲ್ಲಿಯೂ ಸುಧಾರಣೆಯಲ್ಲಿಯೂ ಹಿಂದುಳಿದಿರುವ ನಮ್ಮ ಈ ಸರ್ಕಲಿನ ಗೌಡಜಾತಿಯವರ ಮುಂದಿನ ಸರ್ವ ಏಳಿಗೆಗೂ ಅವರೇ ಕಾರಣರಾಗುವರು. ನಮ್ಮ ಉನ್ನತಿಗೆ ಬೇಕಾಗಿರುವ ಅನೇಕ ಕಾರ್ಯಗಳನ್ನು ತಾಲೂಕುಬೋರ್ಡ ಮುಂದೆ ತಂದು ಪಾಸು ಮಾಡಬೇಕಾಗಿರುವುದು. ಅದು ಆ ಮೆಂಬರರಿಂದ ಅಸಾಧ್ಯವಾದರೆ ನಮಗೆ ಸಿಕ್ಕಿದ ಈ ಅವಕಾಶವು ವ್ಯರ್ಥವಾಗುವುದು. ಆದ್ದರಿಂದ ವಾಚಕ ಮಹನೀಯರಾದರೂ ಈ ಕಡೆಗೆ ಮನಸ್ಸು ಕೊಟ್ಟು ಎಲ್ಲಾ ವೋಟರುಗಳನ್ನು ಮೇಲೆ ನಮೂದಿಸಿದ ತಾರೀಕಿಗೆ ಸುಳ್ಯಕ್ಕೆ ಬರುವಂತೆಯೂ ಈ ಶಿಫಾರಸು ಪತ್ರ ಬರಕೊಂಡವರ ಪೈಕಿ ಯೋಗ್ಯರಾದವರನ್ನು ಚುನಾಯಿಸುವಂತೆ ತಿಳಿಸಿ ಮನೂ ತಿಳಿಯದ ವೋಟರರಿಗೆ ಉಪದೇಶ ಕೊಡುತ್ತಿದ್ದರೆ ತುಂಬಾ ಉಪಕಾರವಾಗುತ್ತಿತ್ತು.

ಸುಳ್ಯ ಗ್ರಾಮವಾಸಿ.

ಪ್ರಿಯ ಪತ್ರಿಕರ್ತರೇ,

ದಕ್ಷಿಣ ಕನ್ನಡ ಜಿಲ್ಲೆಯ ಸದ್ಗೃಹಸ್ಥರ ಪೈಕಿ ಇಲ್ಲಿಯ 'ಸರ್ ಪ್ರತಾಪಸಿಂಗ್' ಲೊಟರಿಯ ಇನಾಮುಗಳನ್ನು ಪಡೆದಿರುವವರ ಹೆಸರುಗಳನ್ನು ಈ ಕೆಳಗೆ ಬರೆದಂತೆ, ತಮ್ಮ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದರೆ ತಮ್ಮ ಉಪಕಾರವನ್ನು ಮನ್ನಿಸುವೆವು.

ಟಿಕೆಟಿನ ನಂಬರು		ಹೆಸರು.		ಇನಾಮು
೧೫,೪೧೦	ಮ| ರಾ|	ಎಮ್, ಅನಂತಕೃಷ್ಣರಾವ್ ಅವರ್ಗಳ್ ಮಂಜೇಶ್ವರ;		ರೂ. ೩೦೦
೬೫೩೬	,,	ಎಸ್. ಎಲ್ ಮಥಾಯಸ್ ಅವರ್ಗಳ್ ಕಾರ್ಕಳ	,,	೧೫೦
೬೬೭೪	,,	ಕೆ. ಎನ್ ಭಟ್ಟ ಅವರ್ಗಳ್ ಕಾರ್ಕಳ.	,,	೩೦
೭೬೩೦	,,	ಕೆ ಎಸ್. ಭಟ್ಟ, ಬಿ. ಎ., ಬಿ. ಎಲ್, ಕಾರ್ಕಳ	,,	೩೦
೭೭೦೧	,,	ಎಮ್ ಪಿ. ಸಾಲ್ಡಾನಾ ಅವರ್ಗಳ್ ಕಾರ್ಕಳ	,,	೩೦
೧೫,೪೩೬	,,	ಶ್ರೀಮತಿ ಸೀತಾಲಕ್ಷ್ಮಿ ಹೊಸದುರ್ಗ	,,	೩೦
೬೬೧೦	,,	ಕೋನ್ನಿ ವಿಟ್ಠಲರಾವ್ ಅವರ್ಗಳ್, ಉಡುಪಿ	,,	೧೦
೬೬೩೬	,,	ಎಚ್ ರಾಮಯ್ಯ ಶೆಟ್ಟಿ, ಕಲ್ಯಾಣಪುರ	,,	೧೦
೬೬೬೮	,,	ಬೋರ್ಡ್ ಮಿಡ್ಲ್ ಸ್ಕೂಲ್, ಬೈಂದೂರು	,,	೧೦
೭೭೩೭	,,	ರಾಮ ಉಪಾಧ್ಯಾಯ ಅವರ್ಗಳ್, ಕೋಡಿ (ಉಡುಪಿ)	,,	೧೦
೯೮೩೪	,,	ಎಮ್. ನರಸಿಂಗರಾವ್, ಕಾರ್ಕಳ	,,	೧೦
೧೫,೪೪೫	,,	ಕೆ ಶ್ರೀನಿವಾಸ ಅಯ್ಯರ್ ಅವರ್ಗಳ್, ಹೊಸದುರ್ಗ	,,	೧೦
೬೬೧೮	,,	ಜನರಲ್ ಖಾನ್ ಬಹದ್ದೂರ್ ಹಾಜಿ ಕಾಸಿಮ್ ಅಬ್ದುಲ್ಲಾ ಸಾಹೇಬರವರು, ಉಡುಪಿ	,,	[illegible]
೬೬೯೬	,,	ಶ್ರೀಮತಿ ಅರಿಕಾಬಾಯಿ, ಕಾರ್ಕಳ	,,	[illegible]
೬೭೪೩	,,	ಫಳಮಾರ ಅನಂತಯ್ಯ ಅವರ್ಗಳ್, ಫಳಮಾರ	,,	[illegible]
೭೭೦೫	,,	ಸಂಜೀವ ಅಂದಪ್ಪ ಶೆಟ್ಟಿ, ಬೆಳ್ತಂಗಡಿ	,,	[illegible]
೭೭೪೩	,,	ಎಚ್. ದಾಮೋದರರಾವ್ ಅವರ್ಗಳ್, ಸುರತ್ಕಲ್	,,	[illegible]
೭೭೮೬	,,	ಕೃಷ್ಣ ಸೆಟ್ಟಿ ಅವರ್ಗಳ್, ಸಂತೆಕಟ್ಟೆ	,,	[illegible]
೧೧,೯೯೯	,,	ಕೆ. ಎನ್. ಭಟ್ಟ ಅವರ್ಗಳ್, ಕಾರ್ಕಳ	,,	[illegible]

ತಮ್ಮ ಹಿತಾಭಿಲಾಷಿ,

ಕೆ. ಎನ್. ಭಟ್ಟ,
ಮೆನೇಜರ್, ಸರ್ ಪ್ರತಾಪಸಿಂಗ್.

ಮಂಗಳೂರಲ್ಲಿ ತಾ. 24—7—1920ರಲ್ಲಿ ಸೇರಿದ ದಕ್ಷಿಣ ಕನ್ನಡಾ ಜಿಲ್ಲಾ ಗ್ರಾಮಉದ್ಯೋಗಸ್ಥರ ಪರಿಷತ್ತಿನಲ್ಲಿ ಉಪ್ಪಿನಂಗಡಿ ತಾಲೂಕಿನ ಗ್ರಾಮಉದ್ಯೋಗಸ್ಥರ ಒಕ್ಕೂಟದ ಕಡೆಯಿಂದ ಮಾಡಿದ ಭಾಷಣದ ಮುಖ್ಯಾಂಶಗಳು.

ಪಟೇಲ್ರ ವ ಶ್ಯಾನಭಾಗ—ಉಭಯತರಗೂ ಲಗಾವು ಆಗುವ ಸರ್ವಸಾಧಾರಣವಾದ ಸಂಗತಿಗಳು.

೧. ಗ್ರಾಮಉದ್ಯೋಗಸ್ಥರು ಈಗ ನಮ್ಮ ಪಾಯವು (Foundation) [illegible] ಮೇಲಧಿಕಾರಿಗಳ ಆಜ್ಞೆಗಳನ್ನು ಮತ್ತು ಅವರ ಕಡೆ ನಡಸುವ ಪತ್ರವ್ಯವಹಾರ (Correspondence)ಗಳಲ್ಲಿ ಹೀನಕರವಾದ ಶಬ್ದಗಳನ್ನು ಉಪಯೋಗಿಸುವದಲ್ಲದೇ ಬಹು ನಡವಳಿಗಳಲ್ಲಿಯೂ ತುಚ್ಛಕರವಾಗಿ ನಡಿಸುತ್ತಾರೆ. [illegible] ನಮ್ಮ ಕೆಲಸಗಳಲ್ಲಿ ಆಗಾಗ್ಯೆ ನಮಗೆ ತೋಚುವ ತೊಂದರೆಗಳು [illegible] ಈಡೀ ಜಿಲ್ಲೆಯ ಗ್ರಾಮಉದ್ಯೋಗಸ್ಥರು [illegible] ವರ್ಷದಲ್ಲಿ ಒಂದಾವರ್ತಿಯಾದರೂ [illegible] (Village officers' District Association) ಎಂತ ಸ್ಥಾಪಿಸುವುದು, ವ ಪ್ರತಿಒಂದು ತಾಲೂಕಿನಲ್ಲಿ ಅದರ ಉಪಶಾಖೆಯನ್ನು ಸ್ಥಾಪಿಸುವುದು ಅಗತ್ಯವೆಂತಲೂ ಪ್ರತಿ ತಾಲೂಕಿಗೆ ಒಬ್ಬ ಅಧ್ಯಕ್ಷ ವ ಒಬ್ಬ ಕಾರ್ಯದರ್ಶಿಯನ್ನ ಸಹಾ ಆಯಾಯ ತಾಲೂಕಿನವರು ಆರಿಸಬೇಕೆಂತಲೂ ಇಡೀ ಜಿಲ್ಲೆಯ ಬಗ್ಗೆ ಒಬ್ಬ ಅಧ್ಯಕ್ಷ ವ ಒಬ್ಬ ಕಾರ್ಯದರ್ಶಿಯನ್ನ ಎಲ್ಲಾ ತಾಲೂಕುಗಳ ಅಧ್ಯಕ್ಷರು ವ ಕಾರ್ಯದರ್ಶಿಗಳು ಕೂಡಿ ಆರಿಸಬೇಕೆಂತಲೂ ಎಣಿಸುತ್ತೇವೆ. ಸರ್ವ ಪ್ರಕಾರ ಒಂದೊಂದು ತಾಲೂಕಿನಲ್ಲಿ ಒಂದೊಂದು ವರ್ಷ ಪರಿಷತ್ತು ಕೂಡಬೇಕು. ಮರುದಿನ ವರ್ಷದ ಪರಿಷತ್ತಿನಲ್ಲಿ ಮರು ವರ್ಷದ ಪರಿಷತ್ತು ಯಾವ ತಾಲೂಕಿನಲ್ಲಿ ಕೂಡುವುದೆಂತ ನಿರ್ಣಯಿಸಬೇಕು. ಹಾಗೆ ಪರಿಷತ್ತು ಕೂಡುವ ಸಮಯವು ಪ್ರತಿ ವರ್ಷ ದೀಸೆಂಬರ್ ತಿಂಗಳ ಕ್ರಿಸ್ತಮಸ್ ರಜೆಯಲ್ಲಿ ಕೂಡುವುದು ಉತ್ತಮ. ಈ ಬಗ್ಗೆ ನಿರ್ಣಯಿಸುವ ತಾರೀಕನ್ನು ೩ ತಿಂಗಳು ಮುಂಚೆ ಸ್ವದೇಶಾಭಿಮಾನಿ ವ ಕಂಠೀರವ ವರ್ತಮಾನ ಪತ್ರಗಳಲ್ಲಿ ಪ್ರಕಟಿಸುವುದಲ್ಲದೇ ಆಯಾಯ ತಾಲೂಕುಗಳ ಕಾರ್ಯದರ್ಶಿಗಳಿಗೆ ನೋಟೀಸು ಕೊಟ್ಟು ತಿಳಿಸಲೂ ಬೇಕು. ಪರಿಷತ್ತು ಕೂಡುವ ತಾಲೂಕಿನ ಎಲ್ಲಾ ಗ್ರಾಮ ಉದ್ಯೋಗಸ್ಥರು ಅಂಥಾ ಪರಿಷತ್ತಿಗೆ ಅಗತ್ಯವಾಗಿ ಕೂಡಬೇಕು. ಬೇರೆ ಪ್ರತಿ ಒಂದು ತಾಲೂಕಿನವರು ಮುಂದಾಗಿ ಸಭೆ ಕೂಡಿ ಪರಿಷತ್ತು ಕೂಡುವಲ್ಲಿಗೆ ಹೋಗುವ ಬಗ್ಗೆ 10ಜನ ಪ್ರತಿನಿಧಿಗಳನ್ನು (Delegates) ಆರಿಸಿ ಕಳುಹಿಸುವ ಏರ್ಪಾಡು ಮಾಡಬೇಕು. ಪೈಕಿ ಪಟೇಲರು 5 ಜನ ವ ಶ್ಯಾನಭಾಗರು 5 ಜನ ಸಹಾ ಆಗಿರಬೇಕು. ಪ್ರತಿ ತಾಲೂಕಿನಿಂದಲೂ ಒಂದು ಭಾಷಣವನ್ನು ತಯಾರಿಸಿ ಪರಿಷತ್ತು ಕೂಡುವಲ್ಲಿ ಓದುವ ಬಗ್ಗೆ ಕಳುಹಿಸಬೇಕು. ಅಂಥಾ ಸಂಘಕ್ಕೆ ಸಂಬಂಧವಾದ ಕೆಲಸಗಳು ಸರಿಯಾಗಿ ನಡಿಸಿ ಬರುವ ಖರ್ಚಿನ ಬಗ್ಗೆ ಪ್ರತಿ ಒಬ್ಬ ಗ್ರಾಮಉದ್ಯೋಗಸ್ಥನು ವರ್ಷ 1ರ ರೂ. 1—0—0ರಂತೆ ವಂತಿಗೆ ಕೊಡಬೇಕು. ಆಯಾಯ ತಾಲೂಕಿನ ವಸೂಲಿ ಆಯಾಯ ತಾಲೂಕಿನ ಕಾರ್ಯದರ್ಶಿಯ ಕೂಡೆ ಕೊಟ್ಟು ರಶೀದಿ ಪಡಿಯಬೇಕು. ಅಂಥಾ ವಸೂಲಿಯನ್ನು ಆಯಾಯ ತಾಲೂಕಿನ ಯಾವುದಾದರೂ ಒಂದು ಪರಸ್ಪರ ಸಹಾಯಕ ಸಂಘದಲ್ಲಿಡಬೇಕು. ಸಭೆಯವರು ನಿರ್ಣಯಿಸುವ ಪ್ರಕಾರದ ಖರ್ಚುಗಳನ್ನ ಅಂಥಾ ವಸೂಲಿ ಹಣದಿಂದ ಮಾಡಿ ಬರಬೇಕು. ಅದಕ್ಕೆಲ್ಲಾ ಪ್ರತಿ ತಾಲೂಕಿನಲ್ಲಿ ಸರಿಯಾದ ಜಮಾಖರ್ಚು ಲೆಕ್ಕ ಇಡಬೇಕು ಎಂತ ಸಹಾ ನಿರ್ಣಯಿಸುವುದು ಅಗತ್ಯವೆಂತ ನಾವು ಎಣಿಸುತ್ತೇವೆ. ಈ ರೀತಿ ಮಾಡುವುದರಿಂದ ಪ್ರತಿ ಒಂದು ತಾಲೂಕಿನ ಗ್ರಾಮಉದ್ಯೋಗಸ್ಥರ ಸ್ಥಿತಿಗತಿಗಳು ಇಡೀ ಜಿಲ್ಲೆಯವರು ತಿಳಿವಳಿಕೆಗೆ ಬರಲಿಕ್ಕೂ ಅದಕ್ಕೆ ತಕ್ಕುದಾದ ನಿವೃತ್ತಿ ಮಾರ್ಗವನ್ನ ಸಮುದಾಯವಾಗಿ ಯೋಚಿಸಲಿಕ್ಕೂ ತುಂಬಾ ಅನುಕೂಲವಾದೆ. ಇಡೀ ಜಿಲ್ಲೆಯ ವರ್ತಮಾನ ಪ್ರತಿ ಒಬ್ಬನೂ ತಿಳಿಯುವ ಅಗತ್ಯವಾದ್ದರಿಂದ ಪ್ರತಿ ಒಬ್ಬ ಪಟೇಲ ವ ಶ್ಯಾನುಭಾಗರು ಸ್ವದೇಶಾಭಿಮಾನಿ ವ ಕಂಠೀರವ ಪತ್ರಗಳನ್ನ ತರಿಸಿಕೊಳ್ಳುವುದು ಉಚಿತ.

೨. ಪರಿಷತ್ತುಗಳಲ್ಲಿ ಮಾಡುವ ನಿರ್ಣಯಗಳ ನಕಲುಗಳ್ನ ಮೇಲ್ ಆಫೀಸರರ ತಿಳುವಳಿಕೆ ಬಗ್ಗೆ ಕಳುಹಿಸುತ್ತಾ ಉಸ್ತವೆ. ಪರಂತು ಇದರಿಂದ ನಾವು ಹೇಳುವ ಸಂಗತಿಗಳೇನಂತ ಪೂರ್ತಿ ಮೇಲ್ ಆಫೀಸರರ ತಿಳುವಳಿಕೆಗೆ ಬರುವುದಿಲ್ಲಾ. ಅಧ್ಯಕ್ಷರ ಭಾಷಣದ ವ ನಿರ್ಣಯದ ಪ್ರಾಬ್ಬು ಕೂಡಾ ಇಂಗ್ಲಿಷ ತರ್ಜುಮೆ ಮಾಡಿ ಆಯಾಯ ಮೇಲ್ ಆಫೀಸರರಿಗೆ ಕಳುಹಿಸುವುದು ಉತ್ತಮ.

೩. ತಾಲೂಕು ತಹಸೀಲದಾರರು ವ ಡಿಪ್ಯುಟಿ ತಹಸೀಲದಾರರು ಗ್ರಾಮಉದ್ಯೋಗಸ್ಥರ ಅತಿ ಸಮೀಪದ ಮೇಲಾಫೀಸರರಾಗಿದ್ದು ಆಗಾಗ್ಗೆ ಅವರು ನಮ್ಮ ಗ್ರಾಮಗಳಿಗೆ ಬರುವ ನಿಮಿತ್ತ ಅಂಥಾ ಸಮಯಗಳಲ್ಲಿ ಒದಗುವ ಯಾವದೂ ಒಂದು ಖಾಸಗಿ ಸಂಗತಿಯಿಂದಲೂ ಅವರು ನಮ್ಮ ಮೇಲೆ ವಿಮುಖರಾಗುವ ಸಂದರ್ಭಗಳು ಇರುವ ಸಂಗತಿಯಲ್ಲಿ ಸರಕಾರಿ ಕೆಲಸದ ಯಾವುದಾದರೂ ಒಂದು ನೆವನ ಹಿಡಿದು ಜುಲ್ಮಾನೆ ಹಾಕುವುದು ಯಾ ಬ್ಲಾಕ್ ಮಾರ್ಕ ಕೊಡುವಂಥಾದ್ದು ಇರಬಹುದು. ಇದರಿಂದ ಗ್ರಾಮ ಉದ್ಯೋಗಸ್ಥರಿಗೆ ವಿಧಿಸುವ ಜುಲ್ಮಾನೆ ಮುಖ್ಯಾಂಶಗಳು ಹೆಚ್ಚು ಆಗುತ್ತವೆ. ಹಿಂದಿನ ೧೦ ವರ್ಷಗಳ ಗ್ರಾಮ ಉದ್ಯೋಗಸ್ಥರ ಜುಲ್ಮಾನೆ ಸ್ಟೇಟ್ಮೆಂಟುಗಳನ್ನು ತರಿಸಿ ಗವರ್ನಮೆಂಟಿನವರು ಪರಾಂಬರಿಸಿದ್ದರೆ ಈ ಸಂಗತಿ ಸಮಾಧಾನವಾಗಬಹುದು. ಅದಲ್ಲದೆ ತಹಸೀಲದಾರರು ವ ಡಿಪ್ಯುಟಿ ತಹಸೀಲದಾರರು ಡಿವಿಜನಲ್ ಆಫೀಸರರ ಹುಕುಂ ಪಡೆಯದೆ ಜುಲ್ಮಾನೆ ಮಾಡಲಿಕ್ಕೂ ಬ್ಲಾಕ್ ಮಾರ್ಕ ಕೊಡಲಿಕ್ಕೂ ಕೂಡದೆಂತ ಗವರ್ನಮೆಂಟಿನವರು ನಿರ್ಣಯಿಸುವುದು ಅಗತ್ಯವೆಂತ ಹೇಳಿ ಕೊಳ್ಳಲಾಗುತ್ತದೆ.

೪. ತಾಲೂಕಿನಿಂದ ಗ್ರಾಮ ಉದ್ಯೋಗಸ್ಥರಿಗೆ ಕೊಡುವ ಹುಕ್ಕುಕ ಮಾ ಎಲ್ಲಾ ಹುಕುಂಗಳಲ್ಲಿಯೂ "ಕಠಿಣವಾಗಿ ಶಿಕ್ಷಿಸಲಾದೀತು" ಎಂಬ ಶಬ್ದ ಇದ್ದೇ ಇರುತ್ತದೆ. [illegible] ನೇಮಕವಾಗಿ ಬರುವ ತಾಲೂಕು ಆಫೀಸರರು ಇಂಗ್ಲಿಷ ಬಲ್ಲವರಾಗಿದ್ದು ಈಗಿನ ಪದ್ಧತಿ ಪ್ರಕಾರ ಕನ್ನಡ ಭಾಷಾಜ್ಞಾನವೇ ಕಮ್ಮಿ ಇರುವವರಾದ್ದರಿಂದ ಹಳೇ ಕ್ಲಾರ್ಕರು ಬರೆಯುವ ಹಾಕೀದುಗಳಲ್ಲಿರುವ ಅಂಥಾ ವಾಕ್ಯಗಳನ್ನ ಕಂಡು ಹಾಗೆ ಬರೆಯುವದೇ ಒಂದು ಪದ್ಧತಿ ಎಂತ ತಿಳಿದು ಅದೇ ರೀತಿ ಬರೆಯುವ ವಾಡಿಕೆ ಹುಟ್ಟಿತ್ತಾ ಬಂದಿರಬಹುದು. ಇದರಿಂದ ನಮ್ಮ ಭಾವನೆಗೆ ಸ್ವಲ್ಪ ಕೋರಿಕೆ ಎಂತ ಮನಸ್ಸಿನಲ್ಲಿ [illegible] ಕಾರಣ ಕ್ಲಾರ್ಕರು ಕನ್ನಡ ಭಾಷೆಯಂಬದರಿಂದ ಹಾಗಾಗಿರಬಹುದೆಂತ ಏನೋ ಇನ್ನಾದರೂ ಈ ವಾಡಿಕೆ ನಿಲ್ಲಿಸುವದು ಉತ್ತಮ.

೫. ಕೆಲವು ವರ್ಷಗಳ ಹಿಂದೆ ರೆವಿನ್ಯೂ ಇನ್ಸಪೆಕ್ಟರರು ಪಟೇಲರಿಗೆ ಯಾ ಶ್ಯಾನುಭಾಗರಿಗೆ ಬರೆಯುವಾಗ್ಗೆ ಹುಕುಂ ಯಾ ತಾಕೀದು ಎಂತ ಬರೆಯುತ್ತಿದ್ದಿಲ್ಲ. ಈಗ ಹುಕುಂ ಎಂತ ಬರೆಯುವ ವಾಡಿಕೆ ಜಾರಿಗೆ ಬಂದದೆ. ಪಟೇಲರ ಯಾ ಶ್ಯಾನುಭಾಗರ ಕೆಲಸಗಳನ್ನ ಅವರು ಮೇಲು ತನಿಖೆ ಮಾಡುವವರು ಖರೆ. ಅವರಂತೆ ಡಿಪ್ಯುಟಿ ತಹಸೀಲದಾರರ ರಿಪೋರ್ಟುಗಳು ತಾಲೂಕು ತಹಸೀಲದಾರರ ಪರಿಮುಖವಾಗಿ ಹೋಗುತ್ತವೆ. ಆ ಸಂಗತಿಯಿಂದ ತಾಲೂಕು ತಹಸೀಲದಾರ ವ ಡಿಪ್ಯುಟಿ ತಹಸೀಲದಾರ ಇವರೊಳಗೆ ನಡಿಯುವ ಕರೆಸ್ಪಾಂಡೆನ್ಸಗಳಲ್ಲಿ ಸುಪೀರಿಯರ್ ವ ಸಬೋರ್ಡಿನೆಟು ಎಂಬ ರೀತಿಯಲ್ಲಿ ನಡಿಯುವುದಿಲ್ಲಾ. ಮಿಕ್ಕ ನಡವಳಿಗಳಲ್ಲಿಯೂ ಸರಿ ಆಫೀಸರರಂತೆ ನಟಿಸುತ್ತಾರೆ. ಅವರೊಳಗೆ ಎಷ್ಟು ಅಧ್ಯಂತರವೂ ರೆವಿನ್ಯೂ ಇನ್ಸಪೆಕ್ಟರ ವ ನಮ್ಮೊಳಗೆ ಅಷ್ಟೇ ಅಧ್ಯಂತರವಾದ್ದರಿಂದ ಇನ್ನು ಮುಂದೆ ಅವರು ಹುಕುಂ ಯಾ ತಾಕೀದು ಎಂತ ಬರೆಯುವ ಹೊಸ ಪದ್ಧತಿ ನಿಲ್ಲಿ ಸಿದರೆ ಆಗಬಹುದು.

೬. ಯಾವದಾದರೂ ಒಂದು ಸಂಗತಿ ಚರ್ಚೆಗೆ ಬಂದಾಗ ಗ್ರಾಮ ಉದ್ಯೋಗಸ್ಥರಿಗೆ ಮಿರಾಸಿಯ ಹಕ್ಕು ಉಂಟು ಎಂತ ಹೇಳುತ್ತಾರೆ. ಇದರ ಉಪಯೋಗ ಯಾರಿಗೆ ಎಷ್ಟರ ಮಟ್ಟಿಗೆ ಉಂಟು ಎಂಬದು ತಾ. ೨೯—೩—'೨೦ರಲ್ಲಿ ಪುತ್ತೂರಲ್ಲಿ ಕೂಡಿದ ಪರಿಷತ್ತಿನ ಭಾಷಣದಲ್ಲಿ ವಿವರಿಸಿರುವುದರಿಂದ ಈಗ ಪುನಃ ವಿವರಿಸುವುದಿಲ್ಲಾ. ಆ ಮಿರಾಸಿಯ ಹಕ್ಕು ಇಟ್ಟು ಪ್ರಯೋಜನ ನಮಗೂ ಸ್ವಲ್ಪ ಮಟ್ಟಿಗೆ ಉಂಟೆಂತ ಎಣಿಸುವದಾದರೆ ಒಬ್ಬ ಪಟೇಲ ಯಾ ಶ್ಯಾನಭಾಗ ರಜೆ ಪಡಿಯುವಾಗ್ಗೆ ಅವರು ಒದಗಿಸಿಕೊಡುವ (ಯೋಗ್ಯತೆ ಉಳ್ಳ)ವನಿಗೇ ಬದಲಿ ನೇಮಕ ಮಾಡಬೇಕು. ಮತ್ತು ಅಂಥಾ ಉದ್ಯೋಗ ಖಾಲಿಗೆ ಬಂದಾಗ್ಗೆ ಅವರ ಕುಟುಂಬದವರು ತೋರಿಸುವ ಯೋಗ್ಯತೆ ಉಳ್ಳವನಿಗೇ ಡಿಪ್ಯುಟಿಯಾಗಿ ನೇಮಿಸಬೇಕು. ಹಾಗೆ ಡಿಪ್ಯುಟಿಯಾಗಿ ನೇಮಕಪಟ್ಟವನು ಯಾವುದಾದರೂ ಕಾರಣದಿಂದ ಖಾಲಿಗೆ ಬಂದರೆ ಮತ್ತೊಬ್ಬನನ್ನು ಡಿಪ್ಯುಟಿಯಾಗಿ ನೇಮಿಸುವಾಗ್ಗೆ ಮಿರಾಸಿಯ ಹಕ್ಕುಳ್ಳವರಿಗೆ ನೋಟೀಸು ಕೊಟ್ಟು ಅವರು ತೋರಿಸಿ ಕೊಡುವವನನ್ನೇ ನೇಮಿಸಬೇಕು. ಹಾಗೆ ಮಾಡುವದರಿಂದ ಮಿರಾಸಿಯ ಹಕ್ಕುಳ್ಳವರ ಕಡೆಗೆ ಲಕ್ಷ್ಯಕೊಟ್ಟಂತಾದೀತು. ಈಗ ಆ ರೀತಿ ಮಾಡದೆ ಮೇಲಾಫೀಸರರು ತಮಗೆ ಖುಶಿ ಕಂಡವರನ್ನೇ ನೇಮಕ್ಕೆ ಮಾಡಿ ಬಿಡುತ್ತಾರೆ. ಮಿರಾಸಿಯ ಹಕ್ಕಂಟೆಂತ ಹೇಳುವುದು ಸಹಜವಾಗಿದ್ದರೆ ಅವರು ಹೇಳುವವರನ್ನೇ ನೇಮಕ್ಕೆ ಮಾಡಬೇಕು. ಹಾಗಲ್ಲದಿದ್ದರೆ ಆ ಮಿರಾಸಿಯ ಹಕ್ಕನ್ನ ಪೂರಾ ತೆಗೆದು ಇತರ ಪೆನ್ಷನಬಲ್ ಸರ್ವಿಸಿನ ನೌಕರರ ಹಕ್ಕು ಸೌಕರ್ಯಗಳು ನಮಗೂ ಸಿಕ್ಕುವ ಹಾಗೆ ಮಾಡುವುದು ಉತ್ತಮ.

೭. ಉಗ್ರಾಣಿಯರಿಗೆ ೫ ರೂಪಾಯಿ ಪಗಾರು ಇರುವಾಗ್ಗೆ ಬದಲಿಗೆ ಜನ ಸಿಕ್ಕುತಿದ್ದಿಲ್ಲಾ. ಅಂಥಾ ಸಮಯದಲ್ಲಿ ನಾವು ಬಹಳ ಪ್ರಯಾಸ ಪಡುತಿದ್ದೆವು. ಅವರಿಗೆ ೧೦ ರೂಪಾಯಿ ಸಿಕ್ಕುವ ಹಾಗೆ ಆದಂದಿನಿಂದ ಈಗ ಬದಲಿಗೆ ಸ್ವಲ್ಪ ಜನ ಸಿಕ್ಕುತ್ತಾರೆ. ಪರಂತು ತಾಲೂಕು ಹೆಡ್ ಕ್ವಾರ್ಟರಿಗೆ ಸಮೀಪ ಇರುವ ಗ್ರಾಮಗಳ ಪಟೇಲ ಯಾ ಶ್ಯಾನಭಾಗರ ಉಗ್ರಾಣಿಗಳು ರಜೆ ಪಡದರೆ ಯಾವುದಾದರೂ ಕಾರಣದಿಂದ ಅವರ ಹುದ್ದೆ ಖಾಲಿ ಯಾದರೆ ಪಟೇಲ ಯಾ ಶ್ಯಾನಭಾಗರು ಒಬ್ಬನನ್ನ ಬದಲಿಗೆ ಇಟ್ಟುಕೊಂಡು ರಿಪೋರ್ಟು ಮಾಡಿದರೆ ಅಂಥಾ ಬದಲಿಯನ್ನು ಮಂಜೂರು ಮಾಡದೆ ಆಫೀಸರರು ಯಾ ತಾಲೂಕು ಕ್ಲಾರ್ಕರ ಶಿಫಾರಸಿನ ಮತ್ತೊಬ್ಬ ಮನುಷ್ಯನನ್ನ ನೇಮಿಸುತ್ತಾರೆ. ಹಾಗೆ ನೇಮಕಪಟ್ಟು ಬಂದವನು ಮೇಲಾಫೀಸರಿನಿಂದ ನೇಮಕಪಟ್ಟು ಬಂದವನೆಂಬ ಕಾರಣದಿಂದ ನಮ್ಮ ಕೂಡೆ ವಿಧೇಯನಾಗಿ ನಡಿಯದೆ ಅವಿಧೇಯತ್ವ ತೋರಿಸುತ್ತಾನೆ. ಆ ಕುರಿತು ರಿಪೋರ್ಟು ಮಾಡಬಹುದೆಂದರೆ ತಾವು ಮೊದಲು ಮಾಡಿ ಕಳುಹಿಸಿದವನೆಂಬದರಿಂದಲೇ ಹಾಗೆ ರಿಪೋರ್ಟು ಮಾಡಿರಬೇಕೆಂತ ಮೇಲಾಫೀಸರರು ಇದು ಕೊಡದೇ ಎಂಬ ಹೆದರಿಕೆಯಿಂದ ಸುಮ್ಮನಿದ್ದು ಅಂತರ್ಯದಲ್ಲಿ ದುಃಖಪಡಬೇಕಾಗುತ್ತದೆ. ತಾಲೂಕು ತಹಸೀಲದಾರರಿಗೆ ಅವರ ಪ್ಯೂನರನ್ನು ಅವರೇ ನೇಮಕ್ಕೆ ಮಾಡುವ ಅಧಿಕಾರ ಇರುವಾಗ್ಗೆ ಉಗ್ರಾಣಿಯ ಬದಲಿ ನೇಮಕದಲ್ಲಿಯೂ ಅವರು ಕೈ ಹಾಕಿ ನಮ್ಮ ಶಿಫಾರಸನ್ನು ತಳ್ಳಿ ಮಾಡುವುದು ನ್ಯಾಯವೋ? ಇದನ್ನು ಮೇಲಾಫೀಸರರು ಸ್ವಲ್ಪ ಆಲೋಚಿಸುವುದು ಉಚಿತವೆಂತ ಕಾಣುತ್ತದೆ.

೮. ಪಟೇಲ ವ ಶ್ಯಾನಭಾಗರ ವಿಷಯದಲ್ಲಿ ಬರುವ ದೂರುಗಳ ಸಂಗತಿಯಲ್ಲಿಯೂ ಅವರ ನೌಕರಿಗಳ ಸಂಗತಿಯಲ್ಲಿಯೂ ರೆವಿನ್ಯೂ ಇನ್ಸಪೆಕ್ಟರಿಂದ ತನಿಖೆ ಮಾಡಿಸಲಾಗುತ್ತದೆ. ಇದರಿಂದ ಸಮಯಾನುಸಾರ ಒಂದೊಂದು ಸಂಗತಿಯಲ್ಲಿ ಅನ್ಯಾಯವಾಗಲಿಕ್ಕೂ ಆಸ್ಪದ ಉಂಟು. ಇನ್ನು ಮುಂದೆ ಅಂಥಾ ತನಿಖೆಗಳು ತಹಸೀಲದಾರ ಯಾ ಡಿಪ್ಯುಟಿ ತಹಸೀಲದಾರರಿಂದಲೇ ಖಾಸಾ ಜರೂರಿಯಿಂದ ಮಾಡಿಸುವುದು ಉಚಿತವಲ್ಲವೋ?

೯. ಈಗ ಕೆಲವು ವರ್ಷಗಳಿಂದ ಗ್ರಾಮ ಉದ್ಯೋಗಸ್ಥರಿಗೆ ಕಳುಹಿಸುವ ಟಪ್ಪಾಲು ಸರ್ವಿಸ್ ಚೀಟುಗಳು ಹಚ್ಚಿ ಕಳುಹಿಸದ ಗ್ರಾಮ ಟಪ್ಪಾಲು ಎಂತ ಒಂದು ಹೊಸ ಕ್ರಮ ಜಾರಿಗೆ ತಂದು ಉಗ್ರಾಣಿಯರಿಂದ ಟಪ್ಪಾಲು ಹೊರಿಸುತ್ತಾರೆ. ಇದರಿಂದ ಗ್ರಾಮಗಳಲ್ಲಿ ನಡಿಯಬೇಕಾದ ಸರಕಾರಿ ಕೆಲಸಗಳಿಗೆ ತೊಂದರೆ ಆಗುವುದಲ್ಲದೆ ಸರ್ಕಾರಿನ ಭತ್ತೆ ಸಿಗದಿರುವ ಬಡ ಉಗ್ರಾಣಿಯರು ಬಹಳ ಕಷ್ಟಕ್ಕೆ ಒಳಪಡಲೂ ಬೇಕಾಗುತ್ತದೆ. ಈಗ ಪ್ರತಿ ಗ್ರಾಮದಲ್ಲಿ ಪೋಸ್ಟ ಆಫೀಸು ಇಲ್ಲದಿದ್ದರೂ ಪಕ್ಕಗಳಲ್ಲಿ ಅಲ್ಲಲ್ಲಿ ಪೋಸ್ಟು ಆಫೀಸುಗಳು ಇರುತ್ತಾ ಗ್ರಾಮ ಉದ್ಯೋಗಸ್ಥರ ಟಪ್ಪಾಲು ಪೋಸ್ಟ ಆಫೀಸ ಮುಖಾಂತರ ಕಳುಹಿಸಿ ಅಂಥಾ ಸಮೀಪದ ಪೋಸ್ಟಾಫೀಸಿನಿಂದ ತರಿಸಿಕೊಳ್ಳುವಂತೆಯೂ ಆಫೀಸರರ ಟಪ್ಪಾಲುಗಳು ಸಹಾ ಪೋಸ್ಟಾಫೀಸು ಇರುವಲ್ಲಿ ಟಪ್ಪಾಲು ಮೂಲಕವೇ ಕಳುಹಿಸುವಂತೆಯೂ, ಪೋಸ್ಟಾಫೀಸುಗಳು ಇಲ್ಲದಿದ್ದಲ್ಲಿ ತಾಲೂಕು ಪ್ಯೂನರಿಂದ ಟಪ್ಪಾಲು ಕಳುಹಿಸುವಂತೆಯೂ ಏರ್ಪಾಡು ಮಾಡಿ ಉಗ್ರಾಣಿಯರಿಂದ ಟಪ್ಪಾಲು ಹೊರಿಸುವ ಕ್ರಮ ನಿಲ್ಲಿಸುವುದು, ಮತ್ತು ಗ್ರಾಮ ಉದ್ಯೋಗಸ್ಥರು ಕಳುಹಿಸುವ ರಿಪೋರ್ಟುಗಳು, ಲೆಕ್ಕಗಳು ಇತ್ಯಾದಿ ಮುಂಚಿನಂತೆ ಸರ್ವಿಸ್ ಸ್ಟಾಂಪ ಹಚ್ಚಿ ಕಳುಹಿಸುವ ಹಾಗೆ ಅನುಕೂಲವಾಗುವುದು ಅಗತ್ಯವೆಂತ ಎಣಿಸುತ್ತೇವೆ.

(ಮುಂದರಿಸಲಾಗುವುದು.)

ನೋಟೀಸು.

ದಕ್ಷಿಣ ಕನ್ನಡಾ ಜಿಲ್ಲಾ ಸಬೋರ್ಡಿನೇಟು ಜಡ್ಜರ ಕೋರ್ಟಿನಸಲ್ಲಿ. ಕ್ರಮ ನಂಬ್ರ $\frac{46}{20}$

ಡಿ. ನಾರಾಯಣಾಚಾರ್ಯ—ವಾದಿ

ಮತ್ತು

೧. ರಘುಭೂಷಣ ತೀರ್ಥಸ್ವಾಮಿರು	ಪ್ರತಿವಾದಿರು
೨. ಬಡ್ಕಿಲ್ಲಾಯ ನಾರಾಯಣರಾವ	
೩. ಬಡ್ಕಿಲ್ಲಾಯ ಅನಂತ ಕೃಷ್ಣರಾವ	
೪. ಬಡ್ಕಿಲ್ಲಾಯ ಗುಂಡುರಾವ	

ಮೈಸೂರು ಸಂಸ್ಥಾನದ ಶಿವಮೊಗ್ಗಾ ಜಿಲ್ಲಾ ತೀರ್ಥಹಳ್ಳಿಯಲ್ಲಿ ಇರುವ ಭೀಮನಕಟ್ಟೆ ಯಾನೆ ಭೀಮಸೇತೂ ಮುನಿವೃಂದ ಮಠದ ಶಿಷ್ಯವರ್ಗದ ಕಡೆಯಿಂದ ಮೇಲ್ಕಂಡ ವಾದಿ ಡಿ. ನಾರಾಯಣಾಚಾರ್ಯರು ಈ ದಾವೆಯನ್ನು ತಂದಿರುತ್ತಾರೆ. ೨, ೩, ೪ನೇ ಪ್ರತಿವಾದಿರ ಪೂರ್ವಾಧಿಕಾರಿಗಳಿಗೆ ಸದ್ರಿ ಮಠಾಧಿಪತಿಗಳಾದ ೧ನೇ ಪ್ರತಿವಾದಿರು ತಾ. ೧೭-೬-೧೯೧೭ರಲ್ಲು ರೂಪಾಯಿ ೫೦೦೦ಕ್ಕೆ ಮಠದ ಬಾಬ್ತು ಸ್ಥಿರಾಸ್ತಿಗಳನ್ನು ಅಡವು ಮಾಡಿ ಬರಕೊಟ್ಟ ದಸ್ತೈವೇಜಿನ ಆಧಾರದ ಮೇಲೆ ಮೇಲ್ಕಂಡ ಕೋರ್ಟಿನ ಕ್ರಮನಂಬ್ರ $\frac{16}{1918}$ರಲ್ಲು ಸದ್ರಿ ಆಸ್ತಿಗಳ ಮಾರಾಟಕ್ಕೆ ಕೂಡಾ ೨, ೩ನೇ ಪ್ರತಿವಾದಿರು ಪಡಕೊಂಡ ಡಿಕ್ರಿ ಅಮಲ್ಜಾರಿಯಲ್ಲಿ ಸದ್ರಿ ಆಸ್ತಿಗಳು ಬಹಿರಂಗವಾದ ಕೋರ್ಟ ಹರಾಜಿಗೆ ಇಟ್ಟಿರುವ ಸಂದರ್ಭದಲ್ಲಿ ಮಠದ ಮೇಲಣ ಅಭಿಮಾನದಿಂದ ಮಠದ ಶಿಷ್ಯವರ್ಗದ ಕಡೆಯಿಂದ ಮಠಾಧಿಪತಿಗಳು ಮಠದ ಸ್ಥಿರ ಸೊತ್ತುಗಳ ಬರೇ ಟ್ರಸ್ಟಿಗಳಾದ ಕಾರಣ ಸದ್ರಿ ಸೊತ್ತುಗಳು ಮಠದ ಸ್ವಾಧೀನದಿಂದ ಸಂಪೂರ್ಣ ತಪ್ಪಿಹೋಗದಂತೆ ಸ್ತೋತ್ರವೂ ಸದ್ರಿ ಮಠಾಧಿಪತಿಗಳ ಕರ್ತವ್ಯವಾದ್ದರಿಂದಲೂ ಮೇಲ್ಕಂಡ ಅಡವು ದಸ್ತೈವೇಜು ಮಠದ ಅತ್ಯಗತ್ಯ ಗರ್ಜಿಗೆ ಅಪ್ಪಲ್ಲವಾದ್ದರಿಂದಲೂ ಮೇಲ್ಕಂಡ ಡಿಕ್ರಿಯು ಮಠದ ಸ್ಥಿರಸೊತ್ತುಗಳ ಮಟ್ಟಿಗೆ ಅಸಿಂಧುವೆಂದಾಗಿ ವಾಗ್ರೂಪ ಡಿಕ್ರಿಯನ್ನು ವ ಹರಾಜು ಆಗದಂತೆ ೨, ೩, ೪ನೇ ಪ್ರತಿವಾದಿರ ಮೇಲೆ ಶಾಶ್ವತವಾದ ಇಂಜಂಕ್ಷನ್ ಕೂಡಾ ಅಪೇಕ್ಷಿಸಿ ತಂದ ಈ ದಾವೆಯಲ್ಲಿ ಕಕ್ಷಿಯಾಗಿ ಸೇರುವರೆ ಇಚ್ಛಿಸುವ ಸದ್ರಿ ಮಠದ ಶಿಷ್ಯವರ್ಗದ ಪೈಕಿ ಯಾರಾದರೂ ಮೇಲ್ಕಂಡ ಕೋರ್ಟಿಗೆ ಶೀಘ್ರ ಮನವಿಮಾಡಿಕೊಂಡು ಕಕ್ಷಿಸ್ಥಾನದಲ್ಲಿ ಸೇರಬಹುದೆಂದಾಗಿ ಈ ಮೂಲಕ ತಿಳಿಸೋಣಾಗುತ್ತದೆ.

ಮಂಗಳೂರು,
ತಾ. ೪—೮—೧೯೨೦. } **G. Krishna Rao.**

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಪ ಕೋರ್ಟಿನಲ್ಲಿ.

O. P. $\frac{41}{1920}$

1. ಪರಮೇಶ್ವರ ಸೋಮಯಾಜಿ ಸುಬ್ರಾಯ ಸೋಮಯಾಜಿಯ ಮಗ.	ಉಡುಪಿ ತಾಲೂಕು ಶಂಕರಪುರದಲ್ಲಿರುವವರು	ಅರ್ಜಿದಾರರು
2. ಶಂಕರ ಸೋಮಯಾಜಿ 1ನೇ ಅರ್ಜಿದಾರಿನ ಮಗ.		

ಮೈನರ್ ಕುಪ್ಪಯ್ಯ, ಮಹಾಬಲ ಸೋಮಯಾಜಿಯ ಮಗ. ಗಾರ್ಡಿಯನಳು, ತಾಯಿ ಸರಸ್ವತಿ ಅಮ್ಮ, ಕಾರ್ಕಡ ಗ್ರಾಮದಲ್ಲಿ ಶ್ರೀನಿವಾಸ ದಕ್ಷತ್ರಿಯ ಮನೆಯಲ್ಲಿರುತ್ತಾಳೆ. ... ... } ಕ್ಷಿ

ಇತ್ತಲಾಗೆ ಮೃತಪಟ್ಟ ಸದರಿ ಮಹಾಬಲ ಸೋಮಯಾಜಿಗೆ ಹೊರಗಿನಿಂದ ಬರತಕ್ಕ ಸಾಲಗಳ ವಸೂಲಿಯ ಕುರಿತು ತಮಗೆ ವಾರಿಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲುಮಾಡಿದ ಸದರೀ ಅರ್ಜಿಯನ್ನು ಮೇಲ್ಕಂಡ ಕೋರ್ಟಿನಲ್ಲಿ ತಾ. 20—8—'20ಕ್ಕೆ ತನಿಕೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಇದ್ದವರು ತಮ್ಮ ಆಕ್ಷೇಪಣೆಯನ್ನು ಸದರೀ ಕೋರ್ಟಿನಲ್ಲಿ ತನಿಕೆ ದಿವಸ ಯಾ ಅದಕ್ಕಿಂತ ಮುಂಚಿತವಾಗಿ ಜ್ಯಾಹೀರುಮಾಡತಕ್ಕದ್ದೆಂದು ಈ ಮೂಲಕ ತಿಳಿಸೋಣಾಗುತ್ತದೆ.

ಕುಂದಾಪುರ,
6—8—'20

M. M. Urale.
Vakil for Petitioners.

[illegible] Bank Limited, [illegible]

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs 300,000-0-0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 138772-0-2	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 138,772—0—2

THE BANK RECEIVES FIXED, CURRENT ACCOUNT, & SAVINGS BANK DEPOSITS

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು

Canara Bank Ltd.,
Mangalore, 10th May 1920

K. Venkat Rao,
Secretary

ಮೈಸೂರು ಊದುಬತ್ತಿಗಳು.

ಶ್ರೀ

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ 12, 5 3 2 8 0, 1 0 0

ಅರಗಜ ಮತ್ತು ಬಿಲ್ಲೆಗಳು. ತೊಲ 1ಕ್ಕೆ ರೂ. 3, 2, 1

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ ಟಿನ್ 1ಕ್ಕೆ 8 ಆಣೆ

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು ಶೀಸೆ 1ಕ್ಕೆ 6 ಆಣೆ

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ

ಲೆವೆಂಡರ್. ಶೀಸೆ 1ಕ್ಕೆ 1—4—0

ವರ್ಷನೆಯಾಗಿ ನಮ್ಮ ಸಾಮಾನುಗಳನ್ನು ಕರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಕಳುಹಿಸಲ್ಪಡುತ್ತೆ ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ನಿಕರಿಗೆ ಸಿದ್ಧವಾಗಿರುತ್ತವೆ

ಟಿ ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್"

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರಿಂದ ವಾತ, ಕಸ ಜಗತ, ಉಳುಕು ಘಾಯ, ತಲೆನೋವು, ಸೊಂಟನೋವು ಬೆನ್ನುನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಕ್ಷಿಪ್ರದಲ್ಲಿ ಸಂಪೂರ್ಣವಾಗಿ ಗುಣ ಹೊಂದುವವು. ಬಾಟ್ಲಿ ೧ರ ಕಿಮ್ಮತು ೦—೭—೦ ಒಂದು ಡಜನು ಬಾಟ್ಲಿಗಳಿಗೆ ರೂ ೪—೧೨—೦

"ಗಜಕರ್ಣದ ಮುಲಾಮು"

ಗಜಕರ್ಣ, ಊಸಬು, ಬಜ್ಜಿ, ದದ್ರು, ಹುಳಕಡ್ಡಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಾಗಿಸುವದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು ಬಾಟ್ಲಿ ೧ಕ್ಕೆ ೦—೬—೦, ಒಂದು ಡಜನಿಗೆ ರೂ ೩—೮ ೦

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಮೆಡಲು ದೊರೆತಿರುವವು ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ಮುಖೇನ

ಡಿ. ಮ್ಯಾನೇಜರ್ — ಶ್ರೀ ದೇವಿಪ್ರಸಾದ ಕಂಪೆನಿ,
ಪೋಸ್ಟು ಬಾಕರ್ಗಾರು, ಜಿ. ಕಟಕ.

"ಟಿಶ್ಯುರೆಮಿಡಿಸ್"

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು

1 ಕಲ್ಕೇರಿಯ ಪ್ಲೊರ್	7 ಕಾಲಿ ಸಲ್ಫ್
2 ಕಲ್ಕೇರಿಯ ಫೊಸ್	8 ಮಗ್ನೆಸಿಯ ಫೊಸ್
3 ಕಲ್ಕೇರಿಯ ಸಲ್ಫ್	9 ನಾಟ್ರಮ್ ಮ್ಯೂರ್
4 ಫೆರಮ್ ಫೊಸ್	10 ನಾಟ್ರಮ್ ಫೊಸ್
5 ಕಾಲಿ ಮ್ಯೂರ್	11 ನಾಟ್ರಮ್ ಸಲ್ಫ್
6 ಕಾಲಿ ಫೊಸ್	12 ಸಿಲಿಸಿಯಾ

ಕ್ರಯ

			ರೂ ಆ ಪೈ
ಎರಡ ಡ್ರಾಮಿನ ಸೈಜ್	D	ಶೀಸೆ ಒಂದಕ್ಕೆ	3 6
ನಾಲ್ಕು „	C		1 6 0
ಒಂದ ಔನ್ಸಿನ	A	„	1 1 6
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕಪೆಟ್ಟಿಗೆಗೆ			3—0—0
ಹನ್ನೆರಡು ಲವಣಗಳ ಒಂದ ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನ ವೈದ್ಯ ಶಾಸ್ತ್ರ ಪುಸ್ತಕ ಸಮೇತ			10— —0

ಜೀವರಸಾಯನ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನ ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾಲೆಗಳಲ್ಲಿ ಉಪಯೋಗಿಸುವ ಕ್ರಮ ವನ್ನು ಸೂಚಿಸುತ್ತದೆ ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ ಕ್ರಯ 12 ಆಣೆ ಮಾತ್ರ ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು

ಎ ಫೆರ್ನಾಂಡಿಸ್,
ಎಲಿಕ್ಟ್ರೊ ಹೋಮಿಯೊಪೆತಿ ಡಿಸ್ಪೆನ್ಸರಿ, ಮಂಗ್ಳೂರು

ವೈದ್ಯ ವಿದ್ಯ

[illegible]

ವೈದ್ಯ ವಿದ್ಯ

ಎಂಬ ಪುಸ್ತಕವನ್ನು ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡದೇ ವಿಳಾಸವನ್ನು ತಿಳಿಸಿದ ಮಾತ್ರಕ್ಕೆ ಕಳುಹುವೆವು

ವೈದ್ಯ ವಿದ್ಯ.

ವಿಳಾಸ — ರಾಜವೈದ್ಯ ನಾರಾಯಣಜಿ ಕೇಶವಜಿ,
27. ಜೈನ ಬಜಾರು ರೋಡು, ಮದ್ರಾಸು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನ್ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ ಈ "ಸಾಲಾಮಿಸ್ರಿ ಮುರಬ್ಬಾ" ದಿನ ಸೇವನೆ ಯಿಂದ — ಶೀಘ್ರವೂ ಶರೀರದಿಂತ

ಇದ್ದರೂ ಸ್ತ್ರೀಸ್ನೇಹದ್ದರಿಂದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ ಕೈಕಾಲು ಮತ್ತು ಸೊಂಟದಲ್ಲಿ ಸೆಳೆತದ ಬಾಧೆ ಇದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಾಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿ ಡುವುದು ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಕೇವುರಿಸುವುದು, ಸೊಂಟ ನೋವು ಸ್ವಲ್ಪಮಾತ್ರವೂ ಇರಲಾರದು ಈ ಸಾಲಾಮಿಸ್ರೀ ಎಂಬುದು ಕಾಬೂಲ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಪಡೆಯಬಹುದು.

ಒಂದು ಡಬ್ಬಾ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ, ೩-೪ ಡಬ್ಬಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಗುಣ ಕೊಡುತ್ತೆ. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು.

ಕ್ರಯ ಒಂದು ಡಬ್ಬಿಗೆ ರೂಪಾಯಿ 2

ಈಗ ಭಾಂಗಿಯ ಚಾರ್ಜು ಹೆಚ್ಚಿರುವುದರಿಂದ ಕೆಲವು ದಿನಗಳ ಮಟ್ಟಿಗೆ ಟಪ್ಪಾಲ ಖರ್ಚ 1 ಡಬ್ಬಿಗೆ 8 ಆಣೆ 2 ಯಾ 3 ಡಬ್ಬಿಗಳಿಗೆ 12 ಆಣೆ

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೊ, ಬೆಂಗಳೂರು ಸಿಟಿ

ಆರ್. ಮಾರ್ಟಿನ್ನರ ಲಪ್ಪಾ ಎಣ್ಣೆ.

ಇದರ ವಾಸನೆಯು (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನವರೆಗೂ ಇರುತ್ತದೆ ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ, ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ ಗಡ್ಡ ಮತ್ತು ಮೀಸೆಗಳೆ ಸಹ ಬೆಳೆಯುತ್ತವೆ ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳುತ್ತಾರೆ

ಕ್ರಯ ಬಾಟ್ಲಿ ೧ಕ್ಕೆ ರೂಪಾಯಿ ೧—೪—೦

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಲಿ ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತ

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧—೪—೦,

ಆರ್ ಮಾರ್ಟಿನ್ನರ ಗ್ಲಿಟೋಡಯಿನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸದಾಗಿದ್ದರೂ ಸರಿ, ಬಿಳುವು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವೆರ್ತಿ ಸೇವಿಸಿದ ಮಾತ್ರಕ್ಕೇ ಸುರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಳುವಾಗಿ ನಿರ್ಮಲವಾಗುವುದಲ್ಲದೆ ರೋಗದ ಬಳ್ಳಿನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಕ್ರ. ಸೀಸೆ ಒಂದಕ್ಕೆ ರೂ. ೨—೦—೦.

ವಿಳಾಸ.— ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂ ಡಿ. ಫ್ರೆಯರ್ ರೋಡ್,
ರೈಟ್ ಎಂಡ್ ಕೋ ಹತ್ತಿರ, ಫೋರ್ಟ್, ಮುಂಬಯಿ.

R D Kately & Co.
No D Frere Road,
Near Wright & Co, Fort Bombay.

The Canara Banking Corporation, Udipi, (Limited).

ದಿ ಕೆನರಾ ಬೇಂಕಿಂಗ್ ಕಾರ್ಪೊರೇಶನ್, ಉಡುಪಿ, ಲಿಮಿಟೆಡ್.

Authorised capital	3,20,000—0—0
Issued and subscribed capital	50,000—0—0
Paid up capital	40,006—1—11
Deposits	67,746—1—7
Reserve and other Funds as on 31-3-20	8,258—9—6

Fixed deposits received for 3, 6, 9, 12, 24 months at 7% at the discretion of the Managing Committee. In the case of alldeposits interest will be paid quarterly.

Cumulative deposits are received repayable in 45 months at Rs. 50/—per each rupee deposited per month.

Current a/c deposits opened free of charge and interest will be paid @ 3½% per annum on the lowest balance between the 4th and the last day of each month.

Loans granted on proper securities and pledges.

A dividend of 8% has been declared for the year ending 31—3—1919.

Payments to the Corporation may be made to the credit of the Corporation at the Bank of Madras, and Canara Bank Mangalore.

UDIPI,
17th. July 1920.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,20,000—0—0
ಚಂದಾಕಾಸಲಿಕ್ಕೆ ಅರ್ಪಿಸಿದ ವ	
ಚಂದಾ ಎತ್ತಿದ ಮೂಲಧನ	50,000—0—0
ಮೌಲ್ಯ ತೆತ್ತ ಮೂಲಧನ	„ 40,006—1—11
ಠೇವಣಾತಿಗಳು...	„ 67,746—1—7
ಕ್ಷೇಮನಿಧಿ ಮತ್ತು ಇತರ ಫಂಡುಗಳು ...	„ 8,258—9—6

ಕಾಯಂ ಠೇವಣಾತಿಗಳು ತಿಂಗಳು 3, 6, 9, 12, 24ರ ಅವಧಿಗಳಿಗೆ ಆಡಳಿತೆ ಸಭೆಯವರ ಮುನಾಸಬು ಪ್ರಕಾರ ಸಾಲಿಯಾನ್ ಶೇಕಡಾ 7% ದರದಲಿ ಬಡ್ಡಿ ಕೊಡೋಣಾಗುವದು ಎಲ್ಲಾ ಠೇವಣಾತಿಗಳ ಮೇಲಣ ಬಡ್ಡಿ 3 ತಿಂಗಳಿಗೊಮ್ಮೆ ಕೊಡೋಣಾಗುವದು.

ಪ್ರತಿ ತಿಂಗಳಿಗೆ ರೂ. 1ರ. ಪ್ರಕಾರ 45 ತಿಂಗಳುಗಳವರೇಗೆ ವಸೂಲು ಕೊಡುವ ಸಂಚಯದ ಠೇವಣಾತಿಗಳಿಗೆ 45 ತಿಂಗಳ ಅಂತ್ಯದಲ್ಲಿ ಪ್ರತಿ ತಿಂಗಳಲ್ಲಿ ವಸೂಲು ಕೊಟ್ಟ ರೂ. 1ಕ್ಕೆ ರೂ. 50/ರಂತೆ ವಾಪಸು ಕೊಡೋಣಾಗುವದು.

ಚಾಲ್ತಿ ಠೇವಣಾತಿಗಳು ಸಂಘದ ಪರವಾಗಿ ಏನೂ ಖರ್ಚು ಇಲ್ಲದೆ ತೆಗೆದುಕೊಳ್ಳೋಣಾಗುವವು. ಪ್ರತಿ ತಿಂಗಳ 4ನೇ ತಾರೀಕಿನಿಂದ ಆಖೈರು ತಾರೀಕುವರೆಗೆ ಯಾವದಾದರೊಂದು ದಿನ ಇರುವ ಅತಿ ಕಡಿಮೆ ಠೇವಣಾತಿ ಮೊಬಲಗಿನ ಮೇಲೆ ಸಾಲಿಯಾನ್ ಶೇಕಡಾ 3½ ದರದಲ್ಲಿ ಬಡ್ಡಿ ಕೊಡೋಣಾಗುವದು.

ಯೋಗ್ಯ ಜವಾಬ್ದಾರಿಯ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಪಾಲುದಾರರಿಗೆ 31—3—19ನೆ ವರ್ಷಕ್ಕೆ ಶೇಕಡಾ 8% ದರದ ಬಡ್ಡಿ ಕೊಡೋಣಾಗಿಯದೆ.

ಸಂಘಕ್ಕೆ ಕೊಡೋಣಾಗುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸು ಬೇಂಕಿನಲ್ಲಿ ಮತ್ತು ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಡಬಹುದು.

Naimpalli Ananda Rao,
Secretary.

BANK OF MADRAS.

ಮದ್ರಾಸ್ ಬ್ಯಾಂಕ್.

ಹೆಡ್ ಆಫೀಸ್ ಮದ್ರಾಸ್.

ಮೂಲಧನ	ರೂ. 75,00,000.
ಕ್ಷೇಮನಿಧಿ	45,00,000.

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತುಗಳಲ್ಲಿ ಪಡೆಯಲಾದಾವು.

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ. 5,000ಕ್ಕೆ ಮಿಗೆದ ಮೊಬಲಗನ್ನು ಠೇವಣಾತಿಯಾಗಿಡಬಹುದು.

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ. 10,000ಕ್ಕೆ ಮೀರದ ಮೊಬಲಗಿನ ವರೇಗೆ ಬಡ್ಡಿ ಎಣಿಸಲಾಗುವುದು.

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿನಿಂದ ಪಡೆಯಬಹುದು.

ಸಿ. ಎಲ್. ಗೊರ್ಡನ್,
ಏಜಂಟ್, ಮದ್ರಾಸ್ ಬ್ಯಾಂಕ್, ಮಂಗಳೂರು.

ಭೃಂಗರಾಜ ತೈಲ.

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ. ನರೆತ ಕೂದಲು ಕಪ್ಪಾಗುತ್ತದೆ. ಕೇಶದಾವುಗಳು ವೃದ್ಧಿಹೊಂದುತ್ತವೆ. ಕಂಠದ ಮೇಲೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ. ಪಿತ್ತನಾಶ ಮಾಡುತ್ತದೆ. ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ. 0—12—0.

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದನ್ನು ತಲೆಗೆ ಹಚ್ಚಿಕೊಂಡರೆ ಪರಿಹಾರವಾಗುತ್ತದೆ. ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ. ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ. 1.

ಜ್ವರಾಂತಕ ಮಾತ್ರೆ—ಈ ಮಾತ್ರೆಯನ್ನು ಉಪಯೋಗಿಸಿದರೆ ಎಲ್ಲಾ ಜ್ವರಗಳ ಪರಿಹಾರವಾಗುತ್ತದೆ. ಉಪಯೋಗಿಸುವ ಕ್ರಮ, ಮತ್ತು ಗುಣ ಕರಿಪತ್ರದಲ್ಲಿ ಪ್ರಮಾಣಿಕ ಹಾಕುತ್ತದೆ. 20 ಮಾತ್ರೆಗಳುಳ್ಳ ಸೀಸೆ ಒಂದರ ರೂ. 1.

ಪಂಚಸಾರ ಲೇಹ—ಅಜೀರ್ಣ, ಪಿತ್ತ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತದೆ. ಮತ್ತು ಇಂದ್ರಿಯವನ್ನು ಬಲಪಡಿಸಿ ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಸೇರಿಗೆ ರೂ. 1—4—0.

ಮೇಲೆ ಬರೆದ ಔಷಧಿಗಳು ಸರ್ವ ವೈದ್ಯರಿಗೂ ಶಿರೋಮಣಿಯಾದ ಶ್ರೀ ಆಯುರ್ವೇದಾಚಾರ್ಯರಾದ ಶ್ರೀ ಪೂಜ್ಯವಾದ ಋಷಿ ಪ್ರಣೀತ ವೈದ್ಯಗ್ರಂಥ ಆಧಾರದಿಂದ ಅವರ ಪೂರ್ಣ ಅನುಭವಯುಗಳಾದ ನಮ್ಮಿಂದ ತಯಾರಿಸಲ್ಪಟ್ಟಿರುತ್ತವೆ. ಅರ್ಪಣಾಪತ್ರ ನಮಗೆ ಎಷ್ಟು ಸಕ್ಕಬಾಗಿ ತೋರುತ್ತದೋ ಅಷ್ಟೇ ಭರವಸೆಯಿಂದ ಈ ಔಷಧಗಳು ರೋಗಪರಿಹಾರಕವಾಗಿರುತ್ತವೆ.

ಸೂಚನೆ—ಅಪೇಕ್ಷಿಸುವವರು ಟಪಾಲಿನಲ್ಲಿ ಬರಿಯುಕೊಳ್ಳುವುದು. ಉಚಿತವಾಗಿ ಕಳುಹಿಸಲಾಗುವುದು.

ಆಯುರ್ವೇದಿಕ್ ಮತ್ತು ಹೋಮಿಯೋಪತಿಕ್
ವಿಳಾಸ:—

ಧರ್ಮ ವೈದ್ಯಶಾಲಾ,
ಧರ್ಮಸ್ಥಳ ದಕ್ಷಿಣ, ಕನ್ನಡ.

ಸದ್ಬೋಧಕ ಗ್ರಂಥಮಾಲೆ.
(ತ್ರೈಮಾಸಿಕ ಪುಸ್ತಕ).

ಗತ ಏಪ್ರಿಲ್ ತಿಂಗಳಿಂದ ಆರಂಭ. ವಾರ್ಷಿಕ ಚಂದಾ ಅಂಚೆ ಸಹಿತ ರೂ. 1 ಮಾತ್ರ.

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ; ಉಲ್ಲೇಖನ, ವಿನೋದವಿಲಾಸ, ಸ್ಥಳೀಯವಾರ್ತೆ; ವಿಮರ್ಶೆ ಮತ್ತು ಸ್ವೀಕಾರ ಇತ್ಯಾದಿ ಲೇಖನವೂ ಪ್ರಕಟವಾಗುವವು. ಸಮಸ್ತ ಕನ್ನಡಿಗರಿಗೂ ಸಂಗ್ರಹಿಸಿಕೊಳ್ಳಲು ತಕ್ಕುದಾಗಿರಬೇಕೆಂದೇ ವಾರ್ಷಿಕ ಚಂದಾ ಅಂಚೆವೆಚ್ಚ ಕೂಡಿಸಿ ಒಂದೇ ರೂಪಾಯಿ ಇಟ್ಟಿರುವೆವು. ಈಗಲೇ ತಮ್ಮ ಹೆಸರನ್ನು ತಿಳಿಸಿ, ವರ್ಗದಾರರಾಗಿ ಸೇರುವುದರ ಮೂಲಕ ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ.

ವಿಳಾಸ:— ಎಸ್. ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ,
"ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ).

ಅಥವಾ— S. R. Hebbar & Bros.,
General Merchants, SURATKAL, S. K.

ಇನ್‌ಫ್ಲುಯೇನ್ಜಾ ಜ್ವರಕ್ಕೆ

ಎಮ್ಕೊ.

ಖಾತ್ರಿ ಚಿಕಿತ್ಸೆ!

ಇನ್‌ಫ್ಲುಯೆನ್ಜಾ, ನಿಮೋನಿಯಾ, ಮಲೇರಿಯಾ, ಸಾಧಾರಣ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ವಿಶಮ ಜ್ವರ, ಕೆಮ್ಮು, ಶೀತ, ಮೊದಲಾದ ಬಾಧ್ಯಗಳಿಗೆ ಖಾತ್ರಿ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ ನಾವು ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಖಾತ್ರಿ ಔಷಧಿಯನ್ನು ಈಗಲೇ ಪ್ರಚಾರಕ್ಕೆ ತಂದಿರುತ್ತೇವೆ. ಮೇಲಿನ ಬಾಧ್ಯಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬದಕ್ಕೆ ಕಳೆದ ಕೆಲವು ವರ್ಷಗಳಿಂದ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ.

ಎಮ್ಕೊ. ಇದು ಎಲ್ಲಾ ರೋಗಾಣುಗಳನ್ನು ಕೊಂದು ಅದರ ವಿಷವನ್ನು ನಾಶಪಡಿಸಿ, ಇನ್‌ಫ್ಲುಯೇನ್ಜಾ, ನಿಮೋನಿಯಾ ಮತ್ತು ಅದರಂತಿನ ಇತರ ಸೋಂಕು ರೋಗಗಳು ತಟ್ಟದಂತೆ ತಡೆಗಟ್ಟಿ ಅವು ಉಲ್ಬಣವಾಗದಂತೆ ಮಾಡುತ್ತದೆ.

ಎಮ್ಕೊ. ಇದು ಇನ್‌ಫ್ಲುಯೇನ್ಜಾ ಮೊದಲಾದ ಎಲ್ಲಾ ಘೋರ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ.

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಿಗಳ ಕೂಟದಿಂದ ಅತಿ ಜಾಗರೂಕತೆಯಿಂದ ತಯಾರಿಸಿರುತ್ತದಾದದರಿಂದ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನ್ನು ಕೊಡಬಹುದು. ಹೆಂಗಸರೂ, ಮಕ್ಕಳೂ ಭಯಭೀತಿ ಇಲ್ಲದೆ ಸೇವಿಸಬಹುದು.

ಎಮ್ಕೊ. ಕುಟಿಗೆ ಇದು ಕಾಲೆರಾ ರೋಗಿಗಳನ್ನು ಗುಣಪಡಿಸಿರುತ್ತದೆ.

ಕ್ರಯ ಸೀಸೆಗೆ ರೂ. ೦—೧೨—೦ ಮಾತ್ರ. ವಿ. ಪಿ. ಬೇರೆ.

ಪ್ರಾಮುಖ್ಯ ಏಜಂಟರು:— ದಿ ಇಕ್ಲಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

ರಾಜವೈದ್ಯರ,

ಮದನಮಂಜರಿ ಮಾತ್ರೆ

ಗಳನ್ನು ಸೇವಿಸುವದರಿಂದ ದೇಹಶಕ್ತಿಯನ್ನು ಕೊಡುವದು. ಹಸ್ತಪ್ರಯೋಗಾದಿಗಳಿಂದ ಹೋಗಲಾಡಿಸಿಕೊಂಡ ಶಕ್ತಿಯನ್ನು ಪುನಃ ಕೊಟ್ಟು ಪ್ರಾಯಸಮರ್ಥರನ್ನಾಗಿ ಮಾಡುವದು. ಈ ಮಾತ್ರೆಗಳಿಗೆ ಬೆಳ್ಳಿ ಭಂಗಾರದ ಭಸ್ಮಗಳು ಎಷ್ಟು ಮಾತ್ರವೂ ಸಮಾನವಾಗಲಾರದು.

ಕ್ರಯ ಡಬ್ಬಿ 1ಕ್ಕೆ ರೂ. 1—0—0.

ವಿಳಾಸ:—

ಮದನಮಂಜರ ಫಾರ್ಮಸಿ,
27. ಚೈನ ಬಜಾರು ರೋಡ್ ಮದ್ರಾಸು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಕಾಲದ ವರೆಗೆ ಗಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸ್ವಚ್ಛವಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಅಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವದಿ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಪುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಕಸಬೂರುಗಳಲ್ಲಿ ಅಂಗಡಿಗಳಲ್ಲಿ ಯುಕ್ತವದು ಕೇಳಿ ...

ಹೋಲ್ ಸೇಲ್:— ...

Lose not Hope! Waste not time!!

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ ದ. ಕನ್ನಡಾ.

ನಮ್ಮ ಡಿಸ್ಪೆನ್ಸರಿಯಲ್ಲಿ ಎಲ್ಲಾ ರೋಗಗಳಿಗೆ ಬೇಕಾಗುವ ಸಿದ್ಧೌಷಧಗಳು ಭಾರಿ ಪ್ರಯೋಗಗಳು ಸಿಕ್ಕುತ್ತವೆ. ತರಿಸಿ, ಸ್ನೇಹಿತರಲ್ಲಿ ಪ್ರಚಾರಗೊಳಿಸಿರಿ.

1\. ಶತಮೂಲಿಕಾ—ಇದು ನೂರಾರು ಬಗೆಯ ವನೌಷಧಗಳ ಸತ್ವ. ಇದು ನಿರ್ಬಲರನ್ನು ಸಜೀವ ಮಾಡುತ್ತದೆ. 24 ಔನ್ಸ ಬಾಟ್ಲಿಗೆ ರೂ. 3—0—0.

2\. ಗರ್ಭಪುಷ್ಟಿಕರಣ—ಇದು ಗರ್ಭಿಣಿಸ್ತ್ರೀಯರ ಸುಖಪ್ರಸೂತಾಮೃತವು. ಬಾಟ್ಲಿ 1ಕ್ಕೆ ರೂ. 2—0—0.

3\. ಸ್ಥಿರಜೀವನಾಮೃತ—ಸರ್ವರೋಗ ನಿವಾರಿಸಿ ಶತಮಾನ ಆಯುಷ್ಯ ಕೊಡುತ್ತದೆ. ಸೇರು 1ಕ್ಕೆ ರೂ. 5—0—0.

ಇದಲ್ಲದೆ ನಮ್ಮಲ್ಲಿ ಸರ್ವರೋಗಕ್ಕೆ ಬೇಕಾಗುವ ಔಷಧಗಳ ಸ್ಟೋಕು ತುಂಬಾ ಇರುತ್ತದೆ. ನಮ್ಮ ಕೆಟಲಾಗನ್ನು ಈಗಲೇ ತರಿಸಿ.

M. V. Shanker,
Ugrankar,
Manager.

ಇಂಡಿಯನ್ ಮೋಟರ್ ಸರ್ವಿಸ್.

(ಎ. ಸಿ. ಅಂದ್ರಾದೆ, ಪ್ರೊಪ್ರೈಟರ್)

ಇವರ ಮೋಟರ್ ಬಸ್ಸ್‌ಗಳು ಮಂಗಳೂರಿನಿಂದ ಬಂಟ್ವಾಳಕ್ಕೂ ಪುತ್ತೂರಿಗೂ ವ ಅಲ್ಲಿಂದ ವಾಪಸು ಮಂಗಳೂರಿಗೂ ಸಹ ಜುಲಾಯಿ ತಾ. 12ರಿಂದ ಚಲಾವಣೆ ಆಗುವವು.

ಬೇರೆ ಯಾವ ಮಾಹಿತಿ ಬೇಕಾಗಿದ್ದರೆ ನಮ್ಮ ಹಂಪನಕಟ್ಟೆ ಆಫೀಸಿನಲ್ಲಿ ವ ಇತರ ಆಫೀಸುಗಳಲ್ಲಿ ವಿಚಾರಿಸಿದಲ್ಲಿ ತಿಳಿಯಬರುವುದು.

ಹಂಪನಕಟ್ಟೆ, ಮಂಗಳೂರು, ಮಾಧವ ಬಿಲ್ಡಿಂಗ್ಸ್ ಸಮೀಪ. } ಎ. ಸಿ. ಅಂದ್ರಾದೆ,
ಪ್ರೊಪ್ರೈಟರ್.

[illegible] Waaning Tilly [illegible]

ಜೆನ್ ಏನ್ ಹಾರ್ಲೆಮ್ ಆಯ್ಲ್

(HAARLEM OIL).

ತ್ವರ್ಯದಲ್ಲಿ ನಿಮ್ಮ ಆರ್ಡರುಗಳನ್ನು ಬರಮಾಡಿಸಿಕೊಳ್ಳಿರಿ

ಹಾರ್ಲೆಮ್ ಆಯ್‌ಲ್ ಎಂದೆನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 300 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭಾವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney,) ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ ಮೂರೇ ದಿನದ ಚಿಕಿತ್ಸನೆಯಿಂದ ಇನ್‌ಪ್ಲುಯೆಂಜಾ ಮೊದಲಾದ ಎಂಥಾ ಕಠಿಣ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯು ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೆ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ. ಕ್ರಯ ಸೀಸೆ 1ಕ್ಕೆ ಆಣೆ ೮ ವಿ ಪಿ ಬೇರೆ

ಸಿಫಾರಸು ಪತ್ರ

ಕೆಲವು ವರ್ಷಗಳ ಹಿಂದೆ ಮಂಗಳೂರಲ್ಲಿದ್ದ ಜರ್ಮನ್ ಮಿಶ್ಯನೆರಿ ಲೇಡಿ ಮಿಸೆಸ್ ಹೆರ್ಮನ್ ಬ್ರೇಕ್ಲ್ ಎಂಬ ಇದೇ ಕಳೆದ ಮಾರ್ಚಿ ತಾ 10ರಲ್ಲು ಸ್ಟುಟ್‌ಗಾರ್ಟ್ ಪಟ್ಟಣದಿಂದ ವಾನಿಂಗ್‌ಟಿಲ್ಲಿ ಕಂಪೆನಿಯವರಿಗೆ ಈ ರೀತಿ ಬರೆದಿದ್ದಾರೆ —ದಯವಾಡಿ ನಿಮ್ಮ ಕಂಪೆನಿಯ 25 ಶೀಸೆ ಜೆನ್‌ಏನ್ ಹಾರ್ಲೆಮ್ ಆಯ್ಲಲ್ ಕಳುಹಿಸಿ ಕೊಡಿರಿ ಇದು ಉತ್ಕೃಷ್ಟವಾದ ಮಾತ್ರೆ ಔಷಧಿ ಎಂಬುದು ನನ್ನ ಅನುಭವ ಸಿದ್ಧಾಂತ. ನಾನು 1910ನೇ ಇಸವಿಯಲ್ಲಿ ಮಂಗಳೂರಿಗೆ ಹೋಗುವಾಗ ನಿಮ್ಮ ಹಾರ್ಲೆಮ್ ಆಯಿಲಿನ 12 ಶೀಸೆಗಳನ್ನು ಕೊಂಡು ಹೋಗಿದ್ದೆನು ಇದು ದೇಶೀಯರೊಳಗೆ ಪ್ರಯೋಗಿಸಿದ್ದಲ್ಲಿ ಅತಿ ಸಾಫಲ್ಯವಾಗಿ ಪರಿಣಮಿಸಿತು ದೇಶೀಯರೊಳಗೆ ಪ್ರಬಲಿಸಿರುವ ಜ್ವರಕ್ಕೆ ಇದು ಅತಿ ಗುಣಕಾರಿಯಾಗಿದೆ ನಂತರ ಕೆಲವು ಕುಟುಂಬಗಳು ಇದನ್ನು ಕುಟುಂಬ ಸಂರಕ್ಷಣೀಯಾಗಿ ಮನೆಮನೆಯಲ್ಲಿ ಇಟ್ಟುಕೊಳ್ಳಲು ತೊಡಗಿದರು ತನ್ಮಧ್ಯೆ ಯುದ್ಧ ತೊಡಗಿದ್ದರಿಂದ ಹಿಂದೂಸ್ಥಾನವಲ್ಲಿ ಇದರ ವ್ಯಾಪಾರವು ಹ್ಯಾಗಿದೆಂತ ನನಗೆ ಗೂತ್ತಿಲ್ಲ

ವಿಳಾಸ — ಹಿಂದೂಸ್ಥಾನದ ಸೋಲ್ ಏಜಂಟರು—

ದಿ. ಎಕ್ಸೆಲ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

☞ ವಿಶೇಷ ಸೂಚನೆ —ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲಿನ ಸೀಸೆಗಳ ಮೇಲೆ Waaning Tilly Bros ಎಂಬ ದಸ್ಕತ ಇರುವ ಪತ್ರವು ಸುತ್ತಿದೆ ಇದೇ ನಿಜವಾದ ಹಾರ್ಲೆಮ್ ಆಯಿಲ್ ಎಂತ ತಿಳಿಯತಕ್ಕದ್ದು ☜

ಆಯುರ್ವೇದ ಶಾಸ್ತ್ರಾನುಸಾರ

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. ಶತಮೂಲಿಕೆಯ ಸತ್ವವು ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ ನಿಂತು ನಿಂತು ಬರುವ ಜ್ವರ, ಬಹುಕಾಲದ ಕಫ, ರಕ್ತವಾಂತಿಯಾಗುವಿಕೆ, ಹೃದಯದ ದುರ್ಬಲತೆ ಲಿಹ್ವರ (ಕಾಳಿಜೆ), ಮೂತ್ರಕೋಶದ ವ್ಯಾಧಿಗಳು ವ ಎಲ್ಲ ತರದ ದುರ್ಬಲತೆಯು ನಾಶಹೊಂದಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು ಇನ್‌ಫ್ಲುಯೆಂಜಾ ಜ್ವರಕ್ಕೂ, ಅಶಕ್ತ ಜನರಿಗೂ, ಬತ್ತಿಬರುವ ಸಣ್ಣ ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣ ಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣ ಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುತ್ತಾರು ೧೬ ಔನ್ಸಿನ ಬಾಟ್ಲಿ ೧ಕ್ಕೆ ರೂ ೨—೧೨—೦ ಟಿ. ಖ. ವಗೈರೆ ಬೇರೆ

2. ವಿಜಯಸಂಜೀವಿನಿತೈಲ ಕಾಲಕಷ್ಟ ಬಹಿಷ್ಠೆಯಾಗುವುದು, ಬಹಿಷ್ಠೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಬಂಧ ವ್ಯಾಧಿಗಳಿಗೆ ದಿವ್ಯ ಔಷಧ ಸ್ತ್ರೀಯರ ರೋಗಗಳಿಗೂ ಇದು ಮುಖ್ಯ ಔಷಧವಾಗಿರುವುದಲ್ಲದೆ, ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ ಕ್ರಯ ಸೀಸೆ ೧ಕ್ಕೆ ರೂ. ೨.

3. ಕೊಲೇರಾ ಗುಳಿಗೆಗಳು ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕುದಾಗಿದೆ ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ. ೪೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ ೧—೦—೦

4 ವಾತಾಂತಕ ದೀರ್ಘ ಕಾಲದ ಮತ್ತು ಯಾವ ತರದ ವಾತ ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು ಕ್ರಯ ಬಾಟ್ಲಿ ೧ಕ್ಕೆ ರೂ. ೧-೮-೦

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ ಜಮೀನ್ದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ ಪತ್ರವ್ಯವಹಾರವು ಇಂಗ್ಲಿಷದಲ್ಲಿರಬೇಕು ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ. ವಿಳಾಸ —

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್,
ಕೋಥನೂರು, (ಮಲೆಬಾರ್)..

The Indian [illegible] Specific.

[illegible] ಔಷಧ.

[illegible]

[illegible] 1—4—0 [illegible] 12 [illegible]

STANY BROTHERS, MANGALORE.

ಸೊಗಸಾದ ಕಾಫಿಹುಡಿ

I ಕ್ಲಾಸ್	0—10—0	[illegible]
II ಕ್ಲಾಸ್	0— 8—0	
III ಕ್ಲಾಸ್	0— 6—0	

ಹೊಟೇಲುಗಳಿಗೂ ಕ್ಲಬ್‌ಗಳಿಗೂ ಧಾರಾಳವಾಗಿ ವ್ಯಾಪಾರಸ್ಥರಿಗೂ [illegible] ಕಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE

ಅಮೃತಕಲ್ಪ ವೈದ್ಯಶಾಲಾ,

ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು ಕಣ್ಣು ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುಣ ಉಳ್ಳವಾದ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ವಾರುವರೆ ತಯಾರ ಔಷಧಗಳ ಗುಣ ಒಮ್ಮೆಯೇ ಉಪಯೋಗಿಸಿದ್ದಲ್ಲಿ ತಿಳಿದು ಬರುವುದು

ವೈದ್ಯಶಾಲೆಯ ಮ್ಯಾನೆಜರೂ ಮುನೇಜರರೂ ಆದ ದಾಮೋದರ ನಂಬೀಶನರು ಆದಿತ್ಯವಾರ ಹೊರತು ಮಿಕ್ಕ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದೇ ಪರಿಶೋಧಿಸಿ, ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವದೆ ಸಿದ್ಧರಾಗಿರುವರು ಇದರ ಬ್ರಾಂಚು ಮಂಗಳೂರು ರಥಬೀದಿಯಲ್ಲಿ ಕೆಲಸಮಾಡುವುದರಿಂದ ಸದರಿ ಎಲ್ಲಾ ಔಷಧಗಳು ಸದರಿ ಬ್ರಾಂಚಿನಲ್ಲಿ ಕೂಡಾ ಬೇಕಾದಷ್ಟು ಸಿಕ್ಕುವವು ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದ ವಿ ಪಿ ಮೂಲಕ ಕಳುಹಿಸಲಾಗುವುದು

೧ ಅಮೃತಾರಿಷ್ಟ—ಇದು ಎಲ್ಲಾ ತರದ ವಿಷಮಜ್ವರ (ಇನ್‌ಫ್ಲುಯೆಂಜಾ) ಒಳಗಾದ ಜ್ವರಾದಿಗಳ ಮೇಲೆ ರಾಮಬಾಣದಂತಿರುವುದು ರಕ್ತ ಶುದ್ಧಿಗೆ ಸಿದ್ಧೌಷಧ ೧೨ ಔನ್ಸಿನ ಬಾಟ್ಲಿ ೧೦ ಕ್ರಯ ರೂ ೧-೧೦-೦

೨ ವೀರ್ಯಪ್ರಸಾದ ವಟಿ—ಇದು ಸ್ವಪ್ನಸ್ಖಲನದಿಂದ ನರಳುತ್ತಿರುವ ಮನುಷ್ಯರಿಗೆ ಅಮೃತದಂತಿರುವುದು ೩೪ ಮಾತ್ರೆ ಇರುವ ಸೀಸೆ ೧ಕ್ಕೆ ಕ್ರಯ ರೂ ೧

೩ ನವನೀತಮಧುಸ್ನುಹಿ—ಇದು ಫಿರಂಗವ್ಯಾಧಿ (ಅಥವಾ ಸಿಫಿಲಿಸ್) ಮೇಹ ಸಂಬಂಧ ರೋಗಗಳನ್ನು ಒಳ್ಳೇ ರೀತಿಯಿಂದ ಗುಣಪಡಿಸುತ್ತದೆ ೩೪ ತೊಲೆ ಇರುವ ಡಬ್ಬಿ ೧ಕ್ಕೆ ಕ್ರಯ ರೂ ೪

೪ ವಿಷೂಚಿಕಾ ಸಂಹಾರಿ—ಎಂಬ ವಾಂತಿಭೇದಿ ಮಾತ್ರೆ ಈ ಮಾತ್ರೆಯ ಸೇವನೆಯಿಂದ ಎಂಥಾ ಕಠಿಣ ತರವಾದ ವಾಂತಿಭೇದಿಯೂ ನಿಂತು ಹೋಗುವುದು ೩೪ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ರೂ ೧—೦—೦

೫ ನಯನದ್ಯುತಿ—ತಿಮಿರ, ಉರಿಗಣ್ಣು, ಪರ ವಳಿಯಲ್ಲಿ ವೃದ್ಧಿಯಾದ ಕಣ್ಣಿನ ಎಲ್ಲಾ ರೋಗಗಳನ್ನು ಗುಣಪಡಿಸುವ ಸಿದ್ಧೌಷಧವು ಅರ್ಧ ಔನ್ಸಿನ ಸೀಸೆ ಕ್ರಯ ೧೦ ರೂ ೧—೦—೦

೬ ನಯನಾಮೃತ—ಕಣ್ಣು ತುರಿಸುವಿಕೆ, ದೃಷ್ಟಿಮಾಂದ್ಯ, ಇರುಳು ಗಣ್ಣು, ಕೀವು ಬರುವುದು ತಿಮಿರ ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನು ಬಹು ಶೀಘ್ರತೆಯಾಗಿ ಗುಣಪಡಿಸುವುದು ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ ೧—೦—೦

ವೈದ್ಯರ್ ಎ. ಕೆ. ದಾಮೋದರ ನಂಬೀಶನ್
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡ

ಕೋವಿಲನ್ ಚರಿತ್ರೆ.

ಹೊಸ ನಾಟಕ! ಹೊಸ ನಾಟಕ!

ಈ ಪುಸ್ತಕವು ಅಪೂರ್ವವಾದ ಹೊಸ ಹೊಸ ವರ್ಣಮಟ್ಟುಗಳಿಂದ ಕೂಡಿರುವುದು. ಈಗಲೇ ಪ್ರಿಂಟಾಗಿ ಮಾರಾಟಕ್ಕೆ ಸಿದ್ಧವಾಗಿರುವುದು. ಕ್ರಯ ಪ್ರತಿ 1ಕ್ಕೆ ಆಣೆ 0—6—0

ವಿಳಾಸ— D. Srinivasan Pothi,
Photographer,
Archæological Office,
TRIVANDRUM

ಅಥವಾ [illegible]
ಶಾರದಾ ಛಾಪಖಾನೆ, ಮಂಗಳೂರು.
ಇವರಲ್ಲಿಯೂ ದೊರೆಯುವುದು

Printed & Published by V S [illegible]amath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಘೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ! । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೪ — ಮಂಗಳೂರು, ತಾರೀಖು ೨೦ನೇ ಆಗೋಸ್ತು ಶುಕ್ರವಾರ ೧೯೨೦. — ಸಂಚಿಕೆ ೩೪

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15—16% ಅಂದರೆ ಮೀನುಗೊಬ್ಬರದಲ್ಲಿನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗೆ 100—200 ರಾತ್ತಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಕೊಳ್ಳುವದಕ್ಕೆ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳ ಬಹುದು.

"ಕೃಷಿ ಸುಧಾರಕ" ಎಂಬ ಸಚಿತ್ರ ಪಹಿಯನ್ನು ಕನ್ನಡ ಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Director, Chilean Nitrate Committee,
(INDIAN DELEGATION),
1, Royal Exchange Place, CALCUTTA.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 6—12—0

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ಹೋಗುವುದು. ಕ್ರಯ ಡಬ್ಬಿ ಒಂದರ ರೂ. 0—6—0.

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧ ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮ. ಡಬ್ಬಿಯ ಆಣೆ 2.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು. — 109 ಫ್ರೇಯರ್ ರೋಡ್, ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪ್ರತಿಯೊಬ್ಬ ಕುಟುಂಬಿಕನೂ ಹತ್ತಿರವೇ ಇಟ್ಟುಕೊಳ್ಳಬೇಕಾದ

ಸರಸ್ವತಿ ವಿಲಾಸದವರ ಸುದರ್ಶನ ತೈಲ.

ಮುರ್ಧಣ, ಕಣ್ಣು ಕುರು, ಕರ್ಣಶೂಲೆ, ಅಸಾಧ್ಯವಾದ ಕುರು, ಪೈಲ್ಸ್ ಯಾನೆ ಬಾವು, ಕಠಿಣವಾದ ಗಜಕರ್ಣ, ತುರಿಕಜ್ಜಿ, ಮುಂತಾದ್ದನ್ನು ನಿಸ್ಸಂದೇಹವಾಗಿ ನಿರ್ಮೂಲ ಮಾಡುವ ದಿವ್ಯೌಷಧ.—ಅನುಪಾನ ಪಟ್ಟಿ ಸಮೇತ ಬಾಟ್ಲಿ 1ರ ಕ್ರಯ 0—4—0. ವಿ. ಪಿ. ಬೇರೆ.

ಸರಸ್ವತಿ ವಿಲಾಸದವರ ರಿಂಗ್ವರ್ಮ ಮುಲಾಂ.

ಗಜಕರ್ಣ—ಸೊಂಟಕಜ್ಜಿ, ಕೂದಲು ನಾಶಮಾಡುವ ಹುಳುಗಳ ಮೇಲೆ ರಾಮಬಾಣ ಬಾಟ್ಲಿ 1ರ ಕ್ರಯ 0—5—0. ವಿ. ಪಿ. ಬೇರೆ.

ನಮ್ಮ ವಿಳಾಸ:—

ಯಮ್. ಸುಬ್ರಾಯಗಿರಿಭಟ್ಟ ಎಂಡ್ ಸನ್ಸ್,
ಸರಸ್ವತಿ ವಿಲಾಸ ರಥಬೀದಿ, ಮಂಗಳೂರು.

ವಾತಶಮನಾಯು

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ನಾರುಬೇರುಗಳಿಂದನಾವು ಅನೇಕ ಉತ್ಕೃಷ್ಟ ಔಷಧಗಳನ್ನು ನಿಷ್ಪಾದಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳೂ" ಬರುತ್ತಿವೆ. ಈ ಭಾಗದಲ್ಲಿ, ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ "ವಾತಶಮನಾಯು" ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂದು, ಅವಯವ, ಅಂಗಕೋಶ ಮೊದಲಾದುವು ಕೆಂಪಾಗಿ ನೋವುಂಟಾಗುವುದು; ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಮೂತ್ರದಲ್ಲಿ ದೋಷವಿರುವುದು; ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲೀ ನಿಮ್ಮ ಸ್ನೇಹಿತರಲ್ಲಿಯಾಗಲೀ ಕಾಣಿಸಿಕೊಂಡರೆ, ಕೂಡಲೇ ನಮ್ಮ "ಶಮನಾಯು" ತರಿಸಿಕೊಳ್ಳಲು ಪ್ರಾರಂಭಿಸಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕೊಲೆರಾ, ಕಾಮಾಲೆ, ಉಬ್ಬಸ, ಕೆಮ್ಮು, ಜ್ವರ, ತಲೆನೋವು, ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಆಮಶಂಕೆ, ಮೊದಲಾದವೆಲ್ಲಕ್ಕೂ ದಿವ್ಯೌಷಧಗಳಿವೆ. "ಕ್ಯಾಟಲಾಗ್"ನ್ನು ನೋಡಿ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ,
ಕಲ್ಲಿಕೋಟೆ ಮಲಬಾರ.

Come! See! & Try!

P. Narayana Vaijappa Bhandary & Co.,

Cloth Merchants,
Car Street, MANGALORE.

ಮದುವೆ ಉಪನಯನಗಳ, ಹಬ್ಬ ಉತ್ಸವಗಳ ಕಾಲದಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗೀ ವಸ್ತ್ರಗಳು, ಧೋತಿಗಳು, ಟೊಪ್ಪಿಗಳು ಇತ್ಯಾದಿ ಉಡುಪುತೊಡುಪುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

ಸಖಾರಖಂ ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು. ನಗದಿ ಗಿರಾಕಿಗಳಿಗೆ ಡಿಸ್ಕೌಂಟು ಕೊಡೋಣಾಗುತ್ತದೆ!

ಪ. ನಾರಾಯಣ ವೈಜಪ್ಪಭಂಡಾರಿ ಮತ್ತು ಕಂಪೆನಿ,
ರಥಬೀದಿ, ಮಂಗಳೂರು.

ಈಗಲೇ ಅಚ್ಚಾಗಿ ಮಾರಾಟಕ್ಕೆ ಸಿದ್ಧವಾಗಿರುವ

ಅತ್ಯುಪಯುಕ್ತವಾದ ಪುಸ್ತಕಗಳು.

ಸೇತುಭಂಗ. ಕರ್ನಾಟಕ ಚರಿತ್ರೆಯೊಳಗಿನ ವಿಜಯನಗರದ ಒಂದು ಮುಖ್ಯ ಪ್ರಸಂಗವನ್ನು ಕರ್ನಾಟಕ ಭಾಷೆಯಲ್ಲಿ ಗದ್ಯರೂಪವಾಗಿ ಬರೆದ ನಾಟಕ. VI Form ಬೆಲೆ: 0—12—0

ಕರ್ಣಚರಿತೆ. ಕನ್ನಡ ಭಾರತದಿಂದ ಸಂಗ್ರಹಿಸಿ ಬರೆದ ಪದ್ಯಗಳು. IV & V Forms. ಬೆಲೆ: 0—6—0.

ಮಹಾರಾಷ್ಟ್ರ. ಮಹಾರಾಷ್ಟ್ರ ವೀರರ ಚರಿತ್ರೆ (ಅಚ್ಚಿನಲ್ಲಿದೆ) IV & V Forms. ಬೆಲೆ: 0—8—0.

ಅಜ್ಜಿಕಥೆಗಳು. 9 ಪುಸ್ತಕಗಳ ಸೆಟ್ಟು 1ಕ್ಕೆ ,, 0—7—9.

ಒಂದನೆ ಹೊಸ ಕನ್ನಡ ಪುಸ್ತಕ. ಭಾಗ ೧ ,, 0—2—6.
" " " " ಭಾಗ ೨ ,, 0—2—6.

ವಿಳಾಸ:—

ಮ್ಯಾನೇಜರ್,
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ಟಿಶ್ಯೂರೆಮಿಡಿಸ್

ಎಂಬ

12 ಜೀವರಸಾಯನಿ ಔಷಧಗಳು

ಮತ್ತು

ಹೊಮ್ಯೋಪಥಿಕ್ ಔಷಧಗಳು.

ನಮ್ಮ ಗಿರಾಕಿಗಳ ಅನುಕೂಲತೆ ಬಗ್ಗೆ ವಾರದ ಎಲ್ಲಾ ದಿವಸಗಳಲ್ಲಿ ಬೆಳಿಗ್ಗೆ 7½ ಘಂಟೆಯಿಂದ ರಾತ್ರಿ 9 ಘಂಟೆ ತನಕ ಸುಲಭವಾದ ದರದಲ್ಲಿ ದೊರೆಯುತ್ತವೆ.

ಟಿಶ್ಯೂ ರೆಮಿಡಿಸ್ 2 ಡ್ರಾಮಿನ ಸೀಸೆ 1ಕ್ಕೆ 0-3-6
,, 4 ,, ,, ,, 0-6-0
,, 1 ಔನ್ಸಿನ ,, ,, 0-12-0
ಹೊಮಿಯೋಪಥಿಕ್ 2 ಡ್ರಾಮಿನ ,, ,, 0-3-6

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
(ಶಾರದಾ ಛಾಪಖಾನೆ)
ರಥಬೀದಿ, ಮಂಗಳೂರು.

THE WORLD RENOWNED
HAARLEM OIL.
(Genuine Dutch Produce)

Domestic remedy of extraordinary merits that has stood the test of centuries. A Panacea against all human ailments.

ಲೋಕಪ್ರಸಿದ್ಧವಾದ ಹಾರ್ಲೆಮ್ ತೈಲ.

SUPPLY EXPECTED SHORTLY

Register your orders immediately against disappointment.

CAPABLE AGENCY WANTED.

Prices & particulars from—

The Bombay Stores,
Humpankatta, MANGALORE.

ಮಧುರೆ ಚುನ್ನಡಿ ಅಂಚಿನ ಸೀರೆಗೆ ರೂ. 4-8-0

1 ಸೀರೆಗೆ ಒಂದು ರವಿಕೆಗೆ ಬಟ್ಟೆ.

ಇದು ಕಾಮಕಾಜಕ್ಕೆ ಧರಿಸುವುದಕ್ಕೂ, ಹಬ್ಬಕ್ಕೆ ಉಡುವುದಕ್ಕೂ ಅನುಕೂಲವಾಗಿದೆ. ಬಣ್ಣ ಹೋಗದು. ಸೀರೆಯ ಉದ್ದ 18 ಮೊಳ. ಸುಂದರವಾದ ಸೆರಗು. ಒಂದನ್ನು ತರಿಸಿ ಪರೀಕ್ಷಿಸಿ. ನಾಲ್ಕು ಸೀರೆಗಳನ್ನು ತರಿಸಿಕೊಳ್ಳುವವರಿಗೆ ಪೋಸ್ಟೇಜ ಮತ್ತು ಪ್ಯಾಕಿಂಗ್ ಚಾರ್ಜು ಇಲ್ಲ. ಕ್ರಯ ರೂ. 4–8–0.

ಸಿ. ಸಿ. ಲಿಂಗಂ ಅಂಡ್ ಕೊ,
ನಂ. 8. ಕುಮಾರಪ್ಪಾ ಮುದ್ದಲಿ ಸ್ಟ್ರೀಟ್,
ಎಂ. ಟಿ. ಮದ್ರಾಸ್.

"ಕಾಮಶಾಸ್ತ್ರ"

ಉತ್ತಮವಾದ ಈ ಪುಸ್ತಕವು ಅನುಕೂಲವಾಗಿ ತಮ್ಮ ದೇಹದ ವಿಷಯಕ್ಕೆ ಮತ್ತು ಆರೋಗ್ಯ ಅನುಕೂಲಕ್ಕೆ ತಕ್ಷಣ ಬರೆಯುವಲ್ಲಿ ಅಂಚೆಯ ಹಾಸಲು ಸಹಾ ನಿರೀಕ್ಷಿಸದೇ ಕಳುಹಿಸುವೆವು.

ಮತ್ತು

ಪ್ರಸಿದ್ಧವಾದ ಆತಂಕನಿಗ್ರಹ ಗುಳಿಗೆಗಳನ್ನು

ಯಾವಾಗಲೂ ತಮ್ಮ ಪ್ರಿಯಮಿತ್ರರ ಹಾಗೆ ಭಾವಿಸಿ ಉಪಯೋಗಿಸುವಲ್ಲಿ ನಿರಾಧಾರವಾದ ಆಲೋಚನೆಗಳನ್ನು ಹೋಗಲಾಡಿಸಿ ಅಮೃತದ ಹಾಗೆ ದೇಹಧಾರ್ಢ್ಯವನ್ನುಂಟು ಮಾಡುತ್ತಾ ಇರುವುದು. ಕ್ರಯ ರೂ. 1. ಹೆಚ್ಚರಿಗೆಯಿಂದ ಮರೆಯಬಾರದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 167, ಬ್ರಾಡ್ವೇ, ಮದರಾಸು.

Local Agents: **Raphael & Co.,**
Brito Buildings,
Hampankatta, MANGALORE.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ವೈದ್ಯಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

NETRANAND SAREES
Cheap and Fashionable

Sarees in all brilliant colours with lustrous borders.

Liberal Commission for wholesale Orders.

ಚಲೋ ಬಣ್ಣದ ಶೀರೆಗಳು! ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಥಳಥಳಿಸುವ "ನೇತ್ರಾನಂದ"ಕರವಾದ ಶೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ.

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಕೊಡುವೆವು.

ನೂಲಿನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಮ್ಮಿಕ್ರಯದಲ್ಲಿ ದೊರಕುವವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶ್ರೀ ಶೀತಾರಾಮವಿಠ್ಠಲ ಕಂಪೆನಿ,
ಮಿಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟೆ ಮಂಗಳೂರು.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹಾಲ್

ಬಹು ನೂತನ ಅಲೋಪತಿ ಮತ್ತು ಹೋಮಿಯೊಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!

ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್ ಪೆನ್ ಗಳೂ, ಥರಮಾಮಿಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಪೊಸೆಂಟೇಶನ್ ಚೀಲಗಳೂ, ಐಸ್ ಬ್ಯಾಗ್ ಮುಂತಾದ ಸರ್ವ ವಿಧವಾದ ಚಿಕಿತ್ಸಕ ಸಾಮಗ್ರಿಗಳೂ ಸ್ಪಿರಿಟ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ, ನೀಲಗಿರಿ ಎಣ್ಣೆ ಎಂಬ ಯೂಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು.

ಹೋಮಿಯೊಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಿಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೋಮಿಯೊಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆಮಾಡಿ, ಧರ್ಮಾರ್ಥವಾಗಿ ಕೊಡುವೆವು.

☞ ಔಷಧಗಳನ್ನು ಶಾಸ್ತ್ರೋಕ್ತಿಯಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವಶಾಲಿಗಳಿರುವರು.

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ! ನಗದಿ ವ್ಯಾಪಾರ! ರೋಗಗಳು ಗುಣವಾಗುವುದು ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

ನೇಟಿವ್ ಡೊಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು.

1. ಮಹಾಮದನ ಕಾಮೇಶ್ವರಿ ಲೇಹ:—ಬಹಳ ಶ್ರಮಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಫಳಿತದಿಂದ ಅಶಕ್ತ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು.

2. ಮಹಾಜ್ವರಾಂಕುಶ (ಖಾತ್ರಿ ಗುಣ):—ಇನ್ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲು 1ಕ್ಕೆ ಆಣೆ 8.

3. ಬಾಲಗ್ರಹಗುಟಿಕೆ:—ಕೂಸು ಮಕ್ಕಳ ಅಪಸ್ಮಾರಕ್ಕೆ ರಾಮಬಾಣ. ಡಜನಿಗೆ ಆಣೆ 10.

4. ಕೋಲೆರಾ ಯಾನೆ ವಾಂತಿಬೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಬೇದಿ ಕೂಡಲೆ ಗುಣ. ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ. ಬಾಟ್ಲಿ 1ಕ್ಕೆ ಆಣೆ 8.

5. ಶ್ವಾಸಕುಠಾರ ಗುಟಿಕೆ:—ಇದು ಶ್ವಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬಸ, ಕೆಮ್ಮು, ಇವು ಗುಣ ಡಜನಿಗೆ ಆಣೆ 10.

6. ಮೇಹಕುಠಾರ:—ಮೂತ್ರಕೃಚ್ಛ್ರ, ಅಶ್ಮರಿ, ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು; ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ. 16 ದಿವಸದ ಔಷಧಿ. ಕ್ರಯ ರೂ. 2.

7. ಇಚಾ ಭೇದಿ:—ಆಯಾಸವನ್ನು ಉಂಟುಮಾಡದ ಸುಖ ವಿರೋಚಕ. ಬಾಟ್ಲಿ 1ಕ್ಕೆ ಆಣೆ 12.

8. ಭೃಂಗರಾಜತೈಲ:—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ನುಣುಪಾಗಿಯೂ ಮಾಡುವುದು. ಬಾಟ್ಲಿ 1ಕ್ಕೆ ಆಣೆ 12.

9. ದಂತಮಂಜನ:—(ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತಬರುವುದು, ಮುಂತಾದ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2.

ವಿಳಾಸ:— **ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,**
ನೇಟಿವ್ ಡಾಕ್ಟರ್ಸ್, ಮಂಗಳೂರು ದ. ಕ.

"ವೈದ್ಯಾಮೃತ ಮಂದಿರಂ"

ಎಂಬ

ನಮ್ಮ ಆಯುರ್ವೇದ ವೈದ್ಯಶಾಲೆಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ಎಲ್ಲಾ ತೈಲಗಳೂ, ಆಸವಾರಿಷ್ಟಗಳೂ, ಕಷಾಯಗಳೂ, ದ್ರವದ್ರಾವಕಗಳೂ, ಭಸ್ಮಗಳೂ, ಚೂರ್ಣಗಳೂ, ಮಾತ್ರೆಗಳು ಇತ್ಯಾದಿ ಔಷಧಿಗಳೂ ಮತ್ತು ಕಾಶ್ಮೀರ, ನೇಪಾಲ ದೇಶಗಳಿಂದ ತರಿಸಿದ ಕಸ್ತೂರಿ, ಪಚ್ಚಕರ್ಪೂರ, ಕುಂಕುಮಕೇಸರ ಮುಂತಾದವುಗಳೂ ಸುಲಭವಾದ ಕ್ರಯಕ್ಕೆ ದೊರಕುತ್ತವೆ. ಪರಸ್ಥಳದವರು ರೋಗದ ಪ್ರಕೃತಿಯನ್ನು ವಿಶದವಾಗಿ ಬರೆದು ತಿಳಿಸಿದರೆ ಅಗತ್ಯವಿರುವ ಔಷಧಿಗಳನು ಅನುಪಾನಪತ್ರಿಕೆ ಸಮೇತ ವಿ. ಪಿ. ಮೂಲಕ ಕಳುಹಿಸುವೆವು.

ವಿಳಾಸ:— **ಕೆ. ಕೆ. ನಾಯರ್**
ಎಂಡ್ ಬ್ರದರ್ಸ್,
ವೈದ್ಯಾಮೃತ ಮಂದಿರಂ,
ನೀಲೇಶ್ವರ, ದ. ಕನ್ನಡ.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟು ಜಡ್ಜರ ಕೋರ್ಟಿನಲ್ಲಿ.

O. P. $\frac{90}{20}$

ಮುತ್ತಾಬಾಯಿ ಕೂಡಾ—ಅರ್ಜಿದಾರರು.

ಮೃತಪಟ್ಟ ಬೆಳ್ತಂಗಡಿ ಗಣೇಶರಾಯರು ಬರಿಯಂಟಲು ಗವರ್ನಮೆಂಟು ಲ್ಯಾಫ಼ು ಎಶ್ಯುರೆನ್ಸು ಕಂಪೆನಿಯಲ್ಲಿ ಮಾಡಿದ ಇನ್ಶೂರಿನ ರೂಪಾಯಿ ೧೦೬೦—೦—೦ನ್ನು ವಸೂಲು ಮಾಡುವರೆ ೧೮೯೦ನೇ ಇಸ್ವಿ VIIನೇ ಆಕ್ಟಿನ ಪ್ರಕಾರ ವಾರಿಶಿ ಸರ್ಟಿಫಿಕೇಟು ಒಂದನೇ ಅರ್ಜಿದಾರಳ ಹೆಸರಿಗೆ ಕೊಡುವರೆ ಮಾಡಿದ ಅರ್ಜಿಯು ೧೯—೯—೨೦ಕ್ಕೆ ತನ್ಖಿಗೆ ಇಟ್ಟಿರುತ್ತಾರೆ. ಆಕ್ಷೇಪ ಇದ್ದವರು ಆ ತಾರೀಕಿಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು 18—8—20 | **B. NARSING RAO.** *Vakil for Petrs.*

ಪುಸ್ತಕಗಳು.

ವಿಷವೃಕ್ಷ ೧—೫—೦, ಸುಭದ್ರೆ ೦—೬—೦, ರಾಮಾಯಣ ಸಂಗ್ರಹ ಬಾಲಕಾಂಡ ೦—೬—೬, ತಿಕ್ಕಮ ಕುಬ್ಜ ೦—೧೦—೦, ಚಿಕ್ಕ ಉಪಾಧ್ಯಾಯರ ಪುಸ್ತಕ ೩—೦—೦, ಬರ್ನಾಲೆ ೦—೧೨—೨, ಸಚಿತ್ರ ಆಂಗ್ಲ ಭಾಷಾ ಪ್ರಕಾಶಕಾ ಮೂರು ಭಾಗಗಳುಳ್ಳದ್ದು ೨—೮—೦.

ತೆಲಗು ಅಕ್ಷರದ ಸಂಗೀತ ಪುಸ್ತಕಗಳು.

ಸಂಗೀತ ಪ್ರದರ್ಶಿನಿ ೩—೩—೦, ಗಾಂಧರ್ವ ಕಲ್ಪವಲ್ಲಿ ೩—೦—೦, ಸಂಗೀತ ಸ್ವಯಂಬೋಧಿನಿ ಪ್ರಥಮ ಭಾಗ ೨—೨—೦, ಎರಡನೇ ಭಾಗ ೨—೩—೦, ಸಂಗೀತ ಸ್ವರ ಪ್ರಸ್ತಾರಸಾಗರ ೫—೮—೦. ಅಟ್ಲಾಸ್ಸು ಅವಶ್ಯಕ.

ವಿಳಾಸ:—

ಎಚ್. ಎಸ್. ರಾವ್, ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

[illegible] (Gonorrhoea) [illegible]

[illegible] ಮೇಹ [illegible] ಔಷಧವು. [illegible] ಮೇಹರೋಗಗಳಾದರೂ [illegible] ಗುಣ ಹೊಂದುವವು.

[illegible] 2 ಔನ್ಸಿಗೆ [illegible] 5 ಬಿಂದು [illegible] ಒಂದು [illegible] ನೀರಿನಲ್ಲಿ ಹಾಕಿ [illegible] ಕ್ರಯ:— ರೂ. 1—0—0.

[illegible]

[illegible] ಎ. ಫೆರ್ನಾಂಡಿಸ್,
[illegible] ಹೋಮಿಯೋಪತಿ ಡಿಸ್ಪೆನ್ಸರಿ,
ಮಂಗಳೂರು.

[illegible] 1920ನೇ ವರ್ಷದ ಪರೀಕ್ಷೆಗಳಿಗೆ ನೇಮಿಸಲ್ಪಟ್ಟಿರುವ

ಕನ್ನಡ ಪಾಠಪುಸ್ತಕಗಳು

	ರೂ.	ಆ.	ಪೈ.		ರೂ.	ಆ.	ಪೈ.
[illegible] ಸಂಗ್ರಹ— ಬಾಲಕಾಂಡ.	0	6	0	ಚಂದ್ರಹಾಸ	0	2	0
ಸುಭದ್ರೆ	0	6	0	ಗುಣನಿರೂಪಣೆ	0	6	0
[illegible]	0	12	0	[illegible] ಭಾಗ I	0	4	0
[illegible] ಭಾಗ I	0	8	0	,, ,, II	0	3	0
[illegible] ಚರಿತ್ರೆ	1	1	0	,, ,, III	0	4	6
[illegible] ಚರಿತ್ರೆ	1	0	0	ಹೊಸ ಪುಸ್ತಕಗಳು			
[illegible]				ವಿಷವಲ್ಲರಿ	0	6	0
ಚರಿತ್ರೆ I	0	8	6	ಸುಶೀಲ	0	1	6
[illegible]	0	6	0	ಚಂದ್ರಮತಿ	0	8	0
ಸಾವಿತ್ರೀ ಚರಿತ್ರೆ	0	2	3	ಸಂತಾಪಕ	0	6	0
ರಮಾನಂದ	0	10	0	[illegible]	2	0	0
ಸುವ್ರತ	0	13	0	ನಿರ್ಮಲೆ	0	12	6
ಪ್ರಬಂಧಮಂಜರಿ	0	14	0	ಪದತ್ರಯ (ಬಾಲವ್ಯಾಕರಣ)	0	3	6
ಪದಾರ್ಥವಿಜ್ಞಾನ [illegible]	0	14	0	ಹಿಂದೂ ವ್ರತವಿವೇಕ.	0	10	0
[illegible]	1	0	0	ಪದ್ಮಿನಿ	0	12	6
ಪ್ರಹ್ಲಾದ	0	2	0	ದಾಕ್ಷಾಯಣಿ	0	8	0
ಧ್ರುವ	0	2	0	[illegible]	0	12	0

ಇತ್ಯಾದಿ [illegible] ಪುಸ್ತಕಗಳೂ ನಮ್ಮಲ್ಲಿ [illegible] ಬೆಲೆಗೆ ದೊರೆಯುತ್ತವೆ.

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.

ಪ್ರಖ್ಯಾತಿ ಪಟ್ಟ

ಮಂಗಳೂರು ನಶ್ಯದ ಹುಡಿ.

ಸೊಗಸಾದ ಹೊಗೆಸೊಪ್ಪನ್ನು ಉಪಯೋಗಿಸಿ ಒಳ್ಳೇ ಅನುಭವಸ್ಥರಿಂದ ತಯಾರಿಸಲ್ಪಡುತ್ತದೆ. ಈ ನಶ್ಯವು ಒಂದೆರಡು ತಿಂಗಳವರೆಗಾದರೂ ಕೆಡುವುದಿಲ್ಲ.

ರಾತ್ತಲ್ 1ರ ಕ್ರಯ 3—4—0, ಹೆಚ್ಚಿಗೆ ಕೊಳ್ಳುವವರಿಗೆ ರೂ. 3 [illegible] ಇದು ಕಂಠದ ಮೇಲಿನ ಯಾವತ್ತೂ ರೋಗಗಳನ್ನೂ ಗುಣಪಡಿಸುತ್ತದೆ. ಕೋಲಿ 1ರ ಕ್ರಯ 0-6-0. ವಿ. ಪಿ. ಖರ್ಚು ಪ್ರತ್ಯೇಕ. ಸ್ಯಾಂಪಲನ್ನು ಅಪೇಕ್ಷಿಸುವವರು 2 ಆಣೆ ಸ್ಟ್ಯಾಂಪನ್ನು ಕಳುಹಿಸುವದು. [illegible] ಯೋಗ್ಯವಾದ ಕಮ್ಮಿಶನ್ ದೊರಕುವುದು.

ನಮ್ಮ ವಿಳಾಸ:—

ಪಿಮ್. ಪದ್ಮನಾಭ ಭಂಡಾರಿ ಎಂಡ್ ಕೊ.,
ರಥಬೀದಿ, ಮಂಗಳೂರು.

ಮುಫತ್ತು!! ಇಂಥಾದ್ದು ಬೇಕು.

ಗುಲ್‌ಜೋಬಿ

ಸರಕಾರದಲ್ಲಿ ರಿಜಿಸ್ಟರು ಮಾಡಲ್ಪಟ್ಟ ನಂ. 253.

ಒಂದಾಣೆ ಸ್ಟ್ಯಾಂಪಿನೊಳಗೆ ರುಜುವಾತು ಶಿಕ್ಷೆಯುಳ್ಳ ರಶೀದು— ಈ 32 ಮಾತ್ರೆಗಳುಳ್ಳ ಬಾಟ್ಲಿಗಳನ್ನು ಖರೀದಿಸುವವರಿಗೆ ಕೊಡಲ್ಪಡುತ್ತದೆ. ಈ ಮಾತ್ರೆಗಳನ್ನು ಸೇವಿಸಿ.. ಗುಣಹೊಂದದಿದ್ದರೆ ಮನಸಾಕ್ಷಿಯಾಗಿ ಆ ರಶೀದಿಯೊಳಗೆ ದಸ್ಕತುಮಾಡಿ ಒಂದು ತಿಂಗಳೊಳಗಾಗಿ ವಾಪಸು ಕೊಟ್ಟರೆ ಬಾಟ್ಲಿಯ ಕ್ರಯವನ್ನು ವಾಪಸು ಮಾಡುತ್ತೇವೆಂಬ ಪ್ರತಿಜ್ಞೆಯನ್ನು ನಾವು ದೃಢವಾಗಿ ಮಾಡುತ್ತೇವೆ.

ಗುಲ್‌ಷನ್ ಜೋಬಿ.

ಶಕ್ತಿವರ್ಧಕ! ಧಾತುಪುಷ್ಟಿಕ!! ರೋಗನಿವಾರಕ!!!

ಈ ಮಾತ್ರೆಗಳು ಸೇವಿಸಿದ ಪ್ರಥಮ ದಿವಸದಲ್ಲಿಯೇ ಆಶ್ಚರ್ಯಕರವಾದ ಗುಣಗಳನ್ನು ತೋರಿಸುವವು. [illegible] ಮತ್ತು ಕಾಂತಿಯನ್ನು ಕೊಟ್ಟು ಶರೀರಕ್ಕೆ ಧಾತುಪುಷ್ಟಿ ಸುಖನಿದ್ರೆಗಳನ್ನು ಕೊಡುತ್ತವೆ. [illegible], ವಾಯುರೋಗ, ಕ್ಷಯ, [illegible], ಕಾಸ, ಉದರಶೂಲೆ, ಅಜೀರ್ಣ, ಮೂತ್ರರೋಗ, ಮಲಬದ್ಧತೆ, ಜ್ವರಗಳು, ಮೂಲವ್ಯಾಧಿ [illegible] ರಕ್ತಶುದ್ಧಿಯೂ ವೃದ್ಧಿಯೂ [illegible] ವ್ಯಾಧಿಗಳನ್ನೂ ನಿವಾರಣೆಮಾಡುತ್ತವೆ.

ಬಾಟ್ಲಿ 1ಕ್ಕೆ ರೂ. 1, 3ಕ್ಕೆ ರೂ. 2—10—0. ಟ. ಪ. ಬೇರೆ. [illegible] ಏಜಂಟರುಗಳು ಬೇಕು. ಎಲ್ಲ ಸ್ಥಳಗಳಲ್ಲಿ ಸಿಕ್ಕುವದು.

ವಿಳಾಸ:— ಡಿ. ಗುಲ್‌ಷನ್ ಜೋಬನ್ ಕಂಪೆನಿ, ಬೊಂಬಾಯಿ 3.

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ [illegible]ನೇ ಇಸವಿಯ [illegible]ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟಿದೆ.

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವಂತೆಯಾಗಿ ತಾ. [illegible]ನೇ ಇಸವಿಯಿಂದ ತಾ. [illegible]ನೇ ಇಸವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ [illegible]ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಇನ್ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಆದೆ [illegible] ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಆದರು ಬೇಕಾಗುವದಿಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್ಫ್ಲುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಶಿವಿಶೂಲೆ, ಮೂಗಿನೊಳಗಿನ ಪಿನಸಿ, ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಆಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಪಕ್ಕಶೂಲಿ, ಅರದಲೆಶೂಲಿ, ನಡಶೂಲಿ, ನಾಭಿಶೂಲಿ, ರೇಚಬೇಡು, ಗುದ್ದಮ್ಮನ ಬೇನೆ, ಹುರುಕು, ಕಜ್ಜಿ, ಗಜಗರ್ಣ, ತದ್ದು, ಇಸಬು, ಘಾಯವ್ರಣ, ಸಾರುಹುಣ್ಣು, ಸ್ತ್ರೀಯರ ಮುಟ್ಟಿನ ಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಕೋಡಗೆಮ್ಮು, ಅರವಿ, ಮುಟ್ಟುದೋಷ, ಹೊಟ್ಟೆ ದೊಡ್ಡ ದಾಗುವಿಕೆ, ಮೈ ಹೊರಬೀಳೋಣ, ಮತ್ತು ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದ ಇದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದುಕಾಲುತೊಲೆ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಕ್ಕೆ 5 ಆಣೆ. ತೊಕದ ಬಾಟ್ಲಿ ಒಂದಕ್ಕೆ 8 ಆಣೆ. ವಿ. ಪಿ. ಖರ್ಚು ಬೇರೆ ಕೊಡುವದು. ಮೂರು ಡಜನ್ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳಷ್ಟು ಕಮಿಷನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. [illegible]ರಿಂದ [illegible] ಬಾಟಲಿಗಳ ವರೆಗೆ ತೆಗೆದುಕೊಂಡರೆ ಕಮಿಷನ್ ಇರುವದಿಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲುತೊಲೆಯ 3 ಬಾಟಲಿಗಳು ಒಂದ ಸಾರಿ ತಕ್ಕೊಂಡರೆ ಒಂದು ಬಾಟಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಹೋಟ ಹೊರಟರೆ ತಂತಿ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಬೇಕಾದಲ್ಲಿ ಪೋಸ್ಟ ತಿಕೇಟು ಬಿನಾ ಇವರ ಹೊರತು ಮೊದೆಯಲಿಕ್ಕಿಲ್ಲ. ಅನುಪಾನ ಪತ್ರಗಳು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟ್ಲಿಯು ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾಧಕ ಅರ್ಕುಶಫಾ,
33 ಹೆಡ್ ಆಫೀಸ್ ಶಹಾಪೂರ, (ಬೆಳಗಾಂವ).

Mr. ALEX ALVAREZ Dentist.

OF MANDALAY, UPPER BURMA.

Will attend patients here for the following in Particular:—

Charges Moderate.

1. Painless extraction of teeth. 2. Making of false teeth. 3. Filling the teeth with silver, gold, porceline. 4. Gold bridge and Crowns. 5. Porceline Crowns. 6. Cleaning the teeth. 7. Pyorrhoea treatment.

Can be consulted at:—

The Electro Homoeopthic Dispensry,
Hampankatta, MANGALORE.

ಮಿ. ಆಲೆಕ್ಸ್ ಆಲ್ವಾರಿಸ್ ದಂತವೈದ್ಯ.

ಇವರು ಹಲ್ಲು ಬೇನೆಯಿಂದ ನರಳುತ್ತಿರುವವರ ಹಲ್ಲುಗಳನ್ನು ಸ್ವಲ್ಪವೂ ನೋಯದಂತೆ ಬುಡಸಹಿತ ಕಿತ್ತು ತೆಗೆಯೋಣ, ಕೃತ್ರಿಮ ಹಲ್ಲುಗಳನ್ನು ಮಾಡಿ ಇಡೋಣ, ಹಲ್ಲುಗಳಲ್ಲಿ ಉಂಟಾದ ರಂಧ್ರಗಳನ್ನು ಬೆಳ್ಳಿ, ಬಂಗಾರ, ಪಿಂಗಾಣಿ ಇವುಗಳಿಂದ ಮುಚ್ಚೋಣ. ಬಂಗಾರದ ಕೃತ್ರಿಮ ದಂತಮಾಲೆಯನ್ನು ಬುಡ ಸಹಿತ ಇರಿಸೋಣ, ಪಿಂಗಾಣಿ ಹಲ್ಲುಮಾಲೆಯನ್ನು ಇಡೋಣ ಮತ್ತು ಹಲ್ಲುಗಳನ್ನು ಶುಚಿಮಾಡೋಣ ಮುಂತಾದ ದಂತಚಿಕಿತ್ಸೆಯನ್ನು ಕಲಿದಾತಿ ಚಿಕಿತ್ಸೆಯನ್ನೂ ಮಾಡುವರು. ಇವರು ಹಂಪನಕಟ್ಟೆಯಲ್ಲಿರುವ ಮಿ| ಎ. ಫೆರ್ನಾಂಡಿಸ್, ಇಲೆಕ್ಟ್ರೊ ಹೋಮಿಯೋಪಥಿಕ್ ಡಿಸ್ಪೆನ್ಸರಿಯಲ್ಲಿ ಮೊಕ್ಕಾಂ ಮಾಡಿರುತ್ತಾರೆ.

[illegible] ಸಹಕಾರ ಸಂಘಕ್ಕೆ [illegible] ಯುಕ್ತವಾದ,

ಕರಾರು ಫೋರ್ಮುಗಳು		100ಕ್ಕೆ	1—0—0
ರಶೀದಿ	,,	200ಕ್ಕೆ	1—0—0
ರಿಜಿಸ್ಟ್ರಿ ನೋಟಿಸು		100ಕ್ಕೆ	1—8—0
ಲೇವಡಾತಿ ಅರ್ಜಿ		100ಕ್ಕೆ	0—12—0

ಇವುಗಳಲ್ಲದೆ ಲೆಕ್ಕಪತ್ರಗಳನ್ನಿಡಲಿಕ್ಕೆ ಬೇಕಾಗಿರುವ ಪುಸ್ತಕಗಳು, ರಿಜಿಸ್ಟ್ರಿಗಳು ವಗೈರೆ ಇತರ ಲಿಖಾವಟದ ಸಾಹಿತ್ಯಗಳು ತಯಾರಿರುತ್ತವೆ.

ವಿಳಾಸ:—

ಮ್ಯಾನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ಮಲೆಜ್ವರ.

ಮಲೆಜ್ವರಹಾರಿ.

ಮಲೆಜ್ವರ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಪರಿಹಾರ. ಬೆಲೆ ಆ. ೧೨.

ವಿಷಮಯವಾದ ಪದಾರ್ಥಗಳು ಒಂದು ರೋಗನಿವಾರಣೆಗೆ ಸಹಕಾರಿಯಾದರೂ ಇನ್ನೊಂದು ರೋಗಕ್ಕೆ ಎಡೆಕೊಡುತ್ತವೆ. ಅಂಥ ವಿಷಮಯವಾದ ಪದಾರ್ಥಗಳು ಇದರಲ್ಲಿ ಲವಮಾತ್ರವೂ ಇಲ್ಲ.

ಹಿಂದುಸ್ಥಾನ, ಬರ್ಮಾ, ಸಿಂಹಳ ಮುಂತಾದ ಪ್ರದೇಶಗಳ ಬೇರೆ ಬೇರೆ ಕೋನೆಗಳಿಂದಲೂ ಕಳೆದ ೨೦ ವರ್ಷಗಳಲ್ಲಿ ಅಸಂಖ್ಯಾತವಾದ ಶಿಫಾರಸು ಪತ್ರಗಳು ನಮಗೆಬಂದಿವೆ.

ಪುನೆಯ ಕೃಷಿಕೋಲೆಜಿನ ಅಧ್ಯಾಪಕರಾದ ಡಾ। ಮೆನ್‌ಸಾಹೇಬರು ಈ ರೀತಿಯಾಗಿ ಬರೆದಿರುತ್ತಾರೆ:—,,ಬೇರೆ ಬೇರೆ ವಿಧದ ಜ್ವರಗಳ ಸಂದರ್ಭದಲ್ಲಿ ನಾವು ಈ ಔಷಧವನ್ನು ಪ್ರಯೋಗಿಸಿದಾಗ ಅದರಿಂದ ಕ್ಷಿಪ್ರದಲ್ಲಿ ಗುಣಾಂಶಸಿಕ್ಕಿತು.''.

ನಮ್ಮ ಏಜಂಟರು ಈ ಮೊದಲೆ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು. ಕಮ್ಮಿಶನ್ ಮುಂತಾದ ಶರ್ತಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು.

ಕರ್ಣಾಟಕ ಬ್ರದರ್ಸ್,
56 ಗಿರಗಾಂವ್, ಮುಂಬಯಿ.

Agent:—

The Woollen Mart, *Mangalore.*

ಲೂಯಿಸರ ಎಲಿಕ್ಸಿರ್ ಫೊರ್ ಹೆಲ್ತ್.

ಎಂಬುವ ಪಾನಕವು ಚಾ ಮತ್ತು ಕಾಫಿಗಳಿಗಿಂತ ಅತ್ಯಂತ ಹಿತಕರವಾದ ಪಾನವಾಗಿದ್ದು ಬಹುಮೂತ್ರಪೀಡೆ ಬಾರದಂತೆ ಆರೋಗ್ಯ ಕಾಪಾಡುತ್ತದೆ. ಬಾಯಾರಿಕೆ ತಗ್ಗಿಸುತ್ತದೆ. ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು. ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ.

8 ಔನ್ಸಿನ ಸೀಸೆಗೆ ಕ್ರಯ ರೂ. 1—4—0 ಮಾತ್ರ.

ಡಾಯಬೆಟೋನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ. ಪೂರ್ಣ ಗುಣವಾಗುತ್ತದೆ, ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸೆಗೆ ರೂ. 2 ಮಾತ್ರ. ಪೆಲಂಚೆಹಾಸಲು ವಗೈರೆ ಇದರಲ್ಲಿ ಸೇರಿಲ್ಲ. ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವುವು.

P. M. Kamath & Co.
Chemists & General Merchants,
New Court Road, MANGALORE.

ಅಥವಾ ಕುಂದಾಪುರದಲ್ಲಿ ಈ ಔಷಧವನು ತಯಾರಿಸುವ ಮಿ| ಕೆ. ಆರ್. ಲೂವಿಸರನ್ನು ವಿಚಾರಿಸಿದರೆ ಈ ಔಷಧವನ್ನು ಹೊಂದಬಹುದು.

ಇವರಿಂದ ಸ್ವಾಧೀನವಾಗಿ ನಡೆಸಲ್ಪಡುತ್ತದೆ.

ಪ್ಲೇಗ್, ಕೋಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ.

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು. ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೆಟ್ಟಿಗೆ ರೂ. 2—2—0 | ಕೋಲೇರಾ ಔಷಧದ ದೊಡ್ಡ ಸೆಟ್ಟಿಗೆ ರೂ. 1—2—0
„ ಸಣ್ಣ „ „ 1—6—0 | „ ಸಣ್ಣ „ „ 0—12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸೆಟ್ಟಿಗೆ ರೂ. 1—12—0.

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ.

ವಿಳಾಸ — ಮೆನೇಜರ್, ಆಯುರ್ವೇದಾಶ್ರಮ,

ತಂತಿ ವಿಳಾಸ — 55 ಆಚಾರಪ್ಪನ ಬೀದಿ,
ಪಂಡಿತ್, ಮದರಾಸ್. ಜೋರ್ಜ್‌ಟೌನ್, ಮದರಾಸ್.

ಸಾಳ್ವದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದು ಮರೆಯುಡುವುದು ನಿಜವಾಗಿಯೂ ತಪ್ಪುವುದು

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಿಳಿ ಸೆರಗು, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಮ್ಮಕ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಆಮಲಾವ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ) — ಲಕ್ಷಾವಧಿ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗ ತ್ತವೆ ಸೀಸೆಗೆ ರೂ 1 ರಿಕ್ಕೆ ಒಂದು ಇನಾಮು.

ಶ್ರೀನಿವಾಸತೈಲ — ಪ್ಲೇಗಿನ ಗಡ್ಡೆ ಕರಗುತ್ತದೆ ಕೀಲುಗಳ ನೋವು ಸೆಳೆತ ಹೋಗುತ್ತದೆ ಸೀಸೆಗೆ 8 ಆಣೆ ರಿಕೆ ಒಂದು ಇನಾಮು

ವೈಶ್ವಾನರಾಸವ — ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ ಸೀಸೆಗೆ ರೂ 1 ರಿಕ್ಕೆ ಒಂದು ಇನಾಮು

ಬಾಲಸುಧೋದಯ — ಮಕ್ಕಳಿಗೆ ಬಲಕಾರಿ ಹಸಿವಾಗಿರುತ್ತದೆ ಮಂದ, ಮಲಬದ್ಧ ಅಜೀರ್ಣದ ಭೇದಿ ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹುಳುವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳುಳ್ಳವರಾಗುತ್ತಾರೆ ಪುಷ್ಟಿಯು ಚಟುವಟಿಕೆ ಸೀಸೆಗೆ ಆಣೆ 12 ರಿಕ್ಕೆ ಒಂದು ಇನಾಮು ಈ ನಾಲ್ಕಕ್ಕೂ ಟಪಾಲ ಖರ್ಚು ಬೇರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಒಂದು ಕುಪ್ಪಿಯ ಕ್ರಯ ೧೨ ಆಣೆ. ಮಂಗಳೂರು ಏಜಂಟ್,
ಕೇ. ಟೀ. ಡೋಂಗರೆ ಕಂಪೆನಿ, ದಿ. ಉಲನ್‌ಮಾರ್ಟ್, ಮಂಗಳೂರು
ಗಿರಗಾಂ ಮುಂಬಯಿ.

21	[illegible]	[illegible]	[illegible]	[illegible]	[illegible]	[illegible]	[illegible]
22	[illegible]	[illegible]	[illegible]	[illegible]	[illegible]	[illegible]	[illegible]
23	[illegible]	[illegible]	[illegible]	[illegible]	[illegible]	[illegible]	[illegible]
24	[illegible]	[illegible]	[illegible]	[illegible]	[illegible]	[illegible]	[illegible]
25	[illegible]	[illegible]	[illegible]	[illegible]	[illegible]	[illegible]	[illegible]
26	ಗುರು	[illegible]	[illegible]	[illegible]	[illegible]	[illegible]	[illegible]
27	ಶುಕ್ರ	[illegible]	[illegible]	[illegible]	[illegible]	[illegible]	[illegible]

ಮಂಗಳೂರಿನ ವಾಯುಸ್ಥಿತಿ.

(ಆಗಸ್ಟ್ ತಿಂಗಳು ಖುರಾಯು)

Date, ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಿನದು	Minimum ಕಡಿಮೆ	ಬಿದ್ದ ಮಳೆ	ಎಪ್ರಿಲ್ ...
13	87—0	72—8	0—66	...
14	86—3	72—5	0—73	...
15	85—0	71—6	0—93	...
16	80—2	72—1	0—80	...
17	80—0	72—9	0—27	...
18	82—4	74—2	0—03	—
19	83—4	73—0	0—59	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ.
ಮಸ್ಸಿ ಅಕ್ಕಿಮುಡಿ ಗಳ್ಳೆ ...	7—14	8—12
ಗುಡ್ಡು „ „ ...	7—4	7—8
ರಾಶಿ ಮುಡಿ ಗಳ್ಳೆ ...	7—0	7—6
ಅವ್ವಲ್ ಬೆಳ್ತಿಗೆ „ ...	9—4	9—8
ಗುಡ್ಡು ಬೆಳ್ತಿಗೆ „ ...	8—4	8—12
ರಂಗೂನ ಬೆಳ್ತಿಗೆ ಗೋಣಿ ಗಳ್ಳೆ ...	15—8	16—0
ಗೋದಿ ಗೋಣಿ ಗಳ್ಳೆ ...	25—0	26—8
ಹುರುಳಿ ಗೋಣಿ ಗಳ್ಳೆ ...	13—8	13—12
ಕಡಲೆ ಗೋಣಿ ಗಳ್ಳೆ ...	16—0	18—0
ಕೊಗರಿ ಗೋಣಿ ಗಳ್ಳೆ ...	—	20—0
ತೊಗರಿಬೇಳೆ ಗೋಣಿ ಗಳ್ಳೆ ...	28—0	34—0
ಉದ್ದು ಗೋಣಿ ಗಳ್ಳೆ ...	18—8	19—0
ಹೆಸರು ಗೋಣಿ ಗಳ್ಳೆ ...	18—0	18—8
ಊರು ಬೆಲ್ಲ ಖಂಡಿ ಗಳ್ಳೆ ...	105—0	110—0
ಉಪ್ಪು ಗೋಣಿ ಗಳ್ಳೆ ...	4—12	5—6
ಕೊಬ್ಬರಿ ಖಂಡಿ ಗಳ್ಳೆ ...	115—0	125—0
ಕೊಬ್ಬರಿ ಹಿಂಡಿ ಖಂಡಿ ಗಳ್ಳೆ ...	38—8	39—0
ಎಳ್ಳಿಂಡಿ ಖಂಡಿ ಗಳ್ಳೆ ...	47—8	50—0
ಕೊಬ್ಬರಿ ಎಣ್ಣೆ ಮುಡಿ ಗಳ್ಳೆ ...	9—12	10—8
ಎಳ್ಳೆಣ್ಣೆ ಮುಡಿ ಗಳ್ಳೆ ...	11—0	11—4
ಹಮುಚೆಎಣ್ಣೆ ಪೆಟ್ಟಿಗೆ ಗಳ್ಳೆ ...	9—6	9—9
ಮೋರಿಸ ಸಕ್ಕರೆ ಮುಡಿ ಗಳ್ಳೆ ...	14—0	14—8
ಊರ ಮೆಣಸಿನ ಕಾಯಿ ಮುಡಿ ಗಳ್ಳೆ ...	8—8	9—8
ಸಾಸಿವೆ ಮುಡಿ ಗಳ್ಳೆ ...	10—0	10—8
ಕೊತ್ತಂಬರಿ ಮುಡಿ ಗಳ್ಳೆ ...	5—12	6—0
ಕಾಫಿ ಖಂಡಿ ಗಳ್ಳೆ ...	245—0	255—0
ಹೊಗೆಸೊಪ್ಪು ಅಡಿಕೆ ಖಂಡಿ ಗಳ್ಳೆ ...	105—0	110—0
ಹಳೆ ಹೊಗೆಸೊಪ್ಪು ...	95—0	100—0
ಕಾಳುಮೆಣಸು ಖಂಡಿ ಗಳ್ಳೆ ...	150—0	160—0
ಯಾಲಕ್ಕಿ ಮುಡಿ ಗಳ್ಳೆ ...	25—0	30—0
ಗೇರುಬೀಜ ಮುಡಿ ಗಳ್ಳೆ ...	3—11	3—13
ಶುಂಠಿ ಖಂಡಿ ಗಳ್ಳೆ ...	100—0	120—0
[illegible] ...	24—4	[illegible]
[illegible] ...	32—0	[illegible]
[illegible] ...	31—8	[illegible]
[illegible] ...	24—0	[illegible]

ಯುದ್ಧದ ಉತ್ತರಕಾಂಡ.

[illegible] ಸಂಧಿ [illegible] ... ಅವರು ತಾನು ನೋಡಬೇಕೋಗುವ ... ಒಪ್ಪಂದಕ್ಕೆ ಅವರು ಸಮ್ಮತಿಸುವುದೂ ಇಲ್ಲ. ... ಅಧಿಕಾರಿಗಳ ಶಾಸನಕ್ಕೆ ಒಳಗಾಗುವುದೂ ಇಲ್ಲ. ... ಅರ್ಮೀನಿಯವು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

[illegible] ಅಮೀರ ಫೈಸಲರು ಶಕ್ತರಾಗಿ ತಮ್ಮ ಅಜ ... ಲೀಗ್ ಆಫ್ ನೇಶನ್ಸ ಮುಂದಿಡಬೇಕೆಂದು ಹೊರಟಿದ್ದಾರೆಂದು ತಿಳಿ ವರ್ತಮಾನಗಳು ಇವೆ. ಇದು ಹೇಗಾದರೂ ಆಗಬಹುದಾದರೂ ತುರ್ಕಿಯ ರಾಜಧಾನಿಗೆ ಕೊಟ್ಟ ಮೃದು ವಚನಗಳು ಸಹ ಫೈಸಲರ ಸರಿಗೆ ... ಅಲ್ಲದೆ ಹೆಜ್ಜಾಜದಲ್ಲಿ ಅರಸನ ... ಹುಸೇನರು (ಫೈಸಲರ ತಂದೆ) ಯುರೋಪಿನ ರಾಜ್ಯಗಳ ... ವರ್ತನವನ್ನು ನೋಡಿ ಅವುಗಳ ಮೇಲೆ ವೈಮನಸ್ಯವುಳ್ಳವರಾಗಿದ್ದಾರೆ. ಮೆಸೊಪೊಟೇಮಿಯದಲ್ಲಿಯೂ ಹಿಂದಿನ ತುರ್ಕಿಯ ಇತರ ಭಾಗಗಳಲ್ಲಿಯೂ ಸ್ವಾತಂತ್ರ್ಯ ಎಂಬ ಶಬ್ದಕ್ಕೆ ತುರ್ಕಿಯ ಅಧಿಕಾರದಿಂದ ವಿಮೋಚನೆ ಎಂಬ ಅರ್ಥವನ್ನು ಅಲ್ಲಿಯವರು ಇಟ್ಟುಕೊಂಡಿಲ್ಲ. ವಿಲಾಯಿತಿಯ ಯಾವ ನಾಗರೀಕ ರಾಜ್ಯದ ಸಂಸರ್ಗವೂ ತಮಗೆ ಬೇಡವಿತ್ತು ಎಂಬ ಅರ್ಥವನ್ನು ಅವರು ಕಲ್ಪಿಸಿಕೊಂಡು ಅದಕ್ಕೆ ವಿರೋಧವಾಗುವ ಮೋಂಡಾಟಗಳನ್ನು ಅವರು ಎದುರಿಸಲು ಯತ್ನಿಸುತ್ತಿದ್ದಾರೆ.

ಇನ್ನೊಂದು ಕಡೆ ಪೋಲೆಂಡವು ಸೋತು ಹೋಗುವುದರಲ್ಲಿದೆ ಎಂದು ತಿಳಿದು ಮಿತ್ರಪಕ್ಷದವರು ರುಶ್ಯದ ಈಗಿನ ಬೊಲಶೆವಿಕ ಪ್ರತಿನಿಧಿಗಳೊಡನೆ ಪೋಲೆಂಡಕ್ಕೂ ರುಶ್ಯಕ್ಕೂ ರಾಜಿಯಾಗಬೇಕು, ಇದರ ಶರ್ತಗಳನ್ನು ಲಂಡನ್ನಿನಲ್ಲಿ ಬಂದು ಚರ್ಚಿಸಬೇಕು ಎಂದು ಆಗ್ರಹ ಮಾಡಿದರು. ತಮ್ಮ ಈ ಚರ್ಚೆಯಲ್ಲಿ ಇತರ ಯುರೋಪದ ರಾಜ್ಯಗಳು ಬಾಯಿಹಾಕುವ ಅಗತ್ಯವಿಲ್ಲ, ಪೋಲೆಂಡದವರು ಸಂಧಿ ಪ್ರಸ್ತಾಪವನ್ನು ತಾವಾಗಿ ಎತ್ತಿದರೆ ಪೋಲೆಂಡದ ಸ್ವಾತಂತ್ರ್ಯ ಶಾಂತಿಯನ್ನು ಪೂರೈಸುವ ವಿಧದ ಕರಾರನ್ನು ಠರಾಯಿಸಲು ತಮಗೆ ಆಕ್ಷೇಪವಿಲ್ಲ ಎಂದು ಬೊಲಶೆವಿಕರು ತಿಳಿಸಿದರು. ಈ ಮಾತುಗಳಲ್ಲಿ ಯುರೋಪಿನ ಇತರ ರಾಜ್ಯಗಳ ಕಡೆಗೆ ತೋರಿಸಿದ ತಾತ್ಸಾರ ದೃಷ್ಟಿಯನ್ನೂ ಲಕ್ಷಿಸದೆ ಪೋಲೆಂಡದವರಿಗೆ ರಾಜಿ ಮಾಡಿರೆಂದು ಮಿತ್ರಪಕ್ಷದವರು ತಿಳಿಸಿದರು. ಆದರೆ ವಿಚಿತ್ರವೇನೆಂದರೆ:—ಬೊಲಶೆವಿಕರು ನಿರ್ಣಯಿಸಿದ ತಾರೀಕಿಗೆ ಪೋಲೆಂಡದವರ ಪ್ರತಿನಿಧಿಗಳು ಮಿನ್ಸ್ಕ್ ಎಂಬಲ್ಲಿಗೆ ಬರಲಿಲ್ಲವೆಂದು ಬೊಲಶೆವಿಕರು ದೂರುತ್ತಾರೆ. ತಮ್ಮ ಅಭಿಪ್ರಾಯವನ್ನು ತಿಳಿಸುವ ತಂತಿ ವರ್ತಮಾನಗಳನ್ನು ದಾರಿಯಲ್ಲಿ ಕುಹಕದಿಂದ ಅಡ್ಡಗಟ್ಟಿದಂಥವ ಬೊಲಶೆವಿಕರೊಡನೆ ತಮ್ಮ ಮನೋಗತವನ್ನು ತಿಳಿಸಲಿಕ್ಕೂ ಅದರ ಅಭಿಮತವನ್ನು ತಿಳಿಯಲಿಕ್ಕೂ ಸಾಧ್ಯವಾಗಲಿಲ್ಲ ಎಂದು ಪೋಲೆಂಡದವರು ಹೇಳುತ್ತಾರೆ. ಇದರಲ್ಲಿ ಇನ್ನೊಂದು ವಿಶೇಷವಿದೆ, ಮಿನ್ಸ್ಕ್ ಎಂಬಲ್ಲಿ ಪೋಲೆಂಡದ ಪ್ರತಿನಿಧಿಗಳು ಬರಬೇಕು ಎನ್ನುವಾಗ ಖಂಡಿತವಾಗಿ ಮಿತ್ರಪಕ್ಷದ ಪ್ರತಿನಿಧಿಗಳು ಈ ಸಂಧಿ ಚರ್ಚೆಗೆ ಆಮಂತ್ರಿಸಲ್ಪಡಲಿಲ್ಲ ಎಂದು ಅರ್ಥವಾಗುತ್ತದೆ. ತಮ್ಮ ಚರ್ಚೆಗೆ ಮಿತ್ರಪಕ್ಷದ ಮಧ್ಯಸ್ಥಿಕೆ ಬೇಡ ಎಂದು ಹೇಳಿದರೆ ಅವರ ಮೇಲೆ ತಮಗೆ ವಿಶ್ವಾಸವಿಲ್ಲ ಎಂಬುದನ್ನು ಬೊಲಶೆವಿಕರು ಬೇರೆ ಹೇಳಬೇಕಾಗಿಲ್ಲ. ತಾವು ಪೋಲೆಂಡಕ್ಕೆ ಅನುಕೂಲವಾಗುವ ಶರ್ತಗಳನ್ನು ಕೊಟ್ಟರೆ ಪೋಲೆಂಡವು ತಮ್ಮ ಉಪಕಾರಸ್ಮರಣೆಯನ್ನು ಪಡೆಯಬೇಕಾಗುತ್ತದೆ, ಮಿತ್ರಪಕ್ಷದ ರಾಜ್ಯಗಳಿಗೆ ಆಭಾರಿಯಾಗಬೇಕಾಗಿಲ್ಲ ಎಂದು ಬೊಲಶೆವಿಕರ ಅಭಿಪ್ರಾಯವಿದೆ ಎಂಬಂತೆ ತೋರುತ್ತದೆ.

ಇಷ್ಟರಲ್ಲಿ ಫ್ರೆಂಚರು ಕೈ ದಾಟುತ್ತಿದ್ದಾರೆ. ಜನರಲ್ ರೆಂಗಲ್ ಎಂಬವರು ದಕ್ಷಿಣ ರುಶ್ಯದಲ್ಲಿ ಬೊಲಶೆವಿಕರನ್ನು ಎದುರಿಸಿ ಕ್ರಿಮಿಯಾ ಪರ್ಯಾಯ ದ್ವೀಪದಲ್ಲಿ ಸೈನ್ಯ ಕಟ್ಟಿದ್ದರು. ಅವರನ್ನು ಮಿತ್ರಪಕ್ಷದವರು ತಮಗೆ ಒಪ್ಪಿಸಿಕೊಡಬೇಕು, ಅವರಿಗೆ ಸಹಾಯ ಮಾಡಬಾರದು ಎಂದು ಬೊಲಶೆವಿಕರು ಮಿತ್ರಪಕ್ಷದವರಿಗೆ ತಿಳಿಸಿದ್ದರು. ಹೀಗಿರುತ್ತಾ ಬ್ರಿಟಿಷ ರೊಡನೆ ಆಲೋಚನೆ ಮಾಡದೆ ಫ್ರೆಂಚರು ರೆಂಗಲರಿಗೆ ಸಹಾಯ ಮಾಡಬೇಕೆಂದೂ, ಪೋಲೆಂಡಕ್ಕೆ ಫ್ರಾನ್ಸದಿಂದ ಯೋಗ್ಯ ಸಾಯ ಕಸೈನ್ಯವನ್ನು ಕಳುಹಿಸಬೇಕೆಂದೂ ನಿರ್ಧರಿಸಿದ್ದಾಗಿ ತಂತಿ ವರ್ತಮಾನಗಳು ಇವೆ. ಫ್ರೆಂಚರ ಈ ಆಶ್ಚರ್ಯಕರವಾದ ವರ್ತನಕ್ಕೆ ಬ್ರಿಟಿಷ ಮಂತ್ರಿವರ್ಗದವರು ಬೆಚ್ಚಿಬಿದ್ದಿದ್ದಾರೆ. ಪ್ರತಿಯೊಂದು ಸಂಗತಿಯಲ್ಲಿಯೂ ಬ್ರಿಟಿಷರು ಫ್ರೆಂಚರ ಮನಸ್ಸೊಂದದಂತೆ ಗಾಡಿ ... ಮೇಲೆ ನಡೆಯುತ್ತಿರುವಾಗ ಅವರೊಡನೆ ಸಮಾಲೋಚಿಸದೆ ಫ್ರೆಂಚರು ನಡೆದುಕೊಂಡದ್ದರಿಂದ ಇವರ ಮೈತ್ರಿಗೆ ಭಂಗ ಬಂದೀತೇ ಎಂಬ ಸಂದೇಹ ತೋರುತ್ತದೆ. ಮೈತ್ರಿಯನ್ನು ಕಾಪಾಡಬೇಕೆಂದಿದ್ದರೆ ಫ್ರೆಂಚರ ತಾಳಕ್ಕೆ ಬ್ರಿಟಿಷರು ಮದ್ದಳೆ ಬಾರಿಸಬೇಕಾಗುತ್ತದೆ. ಅಂದರೆ ಬೊಲಶೆವಿಕರೊಡನೆ ಯುದ್ಧಕ್ಕೆ ಸೊಂಟ ಕಟ್ಟಬೇಕಾಗುತ್ತದೆ. ಇದು ಬ್ರಿಟಿಷರಲ್ಲಿ ಅನೇಕರಿಗೆ ಸಮ್ಮತವಿಲ್ಲವೆಂದು ಹಿಂದೆಯೇ ತಿಳಿಸಿದ್ದೇವೆ. ಈಗ ಬೊಲಶೆವಿಕರು ಫ್ರೆಂಚರ ಈ ಬಗೆಯನ್ನು ಎತ್ತಿಕೊಂಡು ಹೋಗಿ ಬ್ರಿಟಿಷ ಮಂತ್ರಿಮಂಡಲವೂ ಬ್ರಿಟಿಷ ಸಾಮ್ರಾಜ್ಯವನ್ನು ಇನ್ನೊಂದು ಮಹಾಯುದ್ಧಕ್ಕೆ ಇಳಿಸುತ್ತದೋ ಎಂದು ನೋಡಬೇಕಾಗಿದೆ. ಇಷ್ಟು ಸಂದೇಹವು ಬರಲು ಕಾರಣವೇನೆಂದರೆ,—ಬ್ರಿಟನ್ನು ಮಿತ್ರಪಕ್ಷದ ಇತರ ರಾಜ್ಯಗಳಿಗೆ ಪ್ರತಿಯೊಂದು ಸಂಗತಿಯಲ್ಲಿಯೂ ಸಮಾಧಾನಪಡಿಸಲು ಹೋಗಿ ಅವರ ದುರುಳತನಕ್ಕೆ ಒಳಪಟ್ಟಂತಾಗಿದೆ, ಅವರ ಸ್ಪರ್ಧೆಗೆ ಪಾತ್ರವಾಗಿಲ್ಲ. ಈ ಸಂದರ್ಭದಲ್ಲಿಯೂ ರುಶ್ಯದ ರಾಜ್ಯಕ್ಕೆ ಹಿಂದೆ ಸಾಲಕೊಟ್ಟ ಫ್ರೆಂಚ ಜನರ ಒತ್ತಾಯದಿಂದ ಫ್ರೆಂಚ ಸರಕಾರವು ಈ ರೀತಿಯಾಗಿ ಪೋಲೆಂಡಕ್ಕೂ ಜನರಲ್ ರೆಂಗಲರಿಗೂ ಸಹಾಯ ಮಾಡಲು ಮುಂದರಿಸಿದೆ ಎಂದು ತೋರುತ್ತದೆ. ಅದೇ ರೀತಿಯಲ್ಲಿ ಬ್ರಿಟಿಷರ ಸಾಲವನ್ನು ರುಶ್ಯದವರು ಮುಳುಗಿಸಿದ್ದಾರೆ. ಹಾಗಿದ್ದರೂ ಶಾಂತಿಯನ್ನು ಬಯಸಿ ಬ್ರಿಟಿಷರು ಬೊಲಶೆವಿಕರೊಡನೆ ಸ್ನೇಹ ಬೆಳೆಸಲಿಕ್ಕೆ ಯತ್ನಿಸುತ್ತಿದ್ದಾಗ ಪೋಲೆಂಡದ ಉದ್ಧಟತನಕ್ಕೆ ಬೆಂಬಲವಾಗಿ ಇನ್ನೊಂದು ಯುದ್ಧದಲ್ಲಿ ಕೈಹಾಕುವದು ಅಸಾಧ್ಯವಾದ ಕೆಲಸ. ಸೋತು ಬಸವಳಿದ ಬ್ರಿಟಿಷ ಜನಾಂಗವಾದರೂ ಈ ಪ್ರಯತ್ನಕ್ಕೆ ಈಗ ಕೈಗಟ್ಟಲಾರದು ಎಂದು ನಮ್ಮ ಅಭಿಪ್ರಾಯ.

ಅನೇಕರ ಹುತಾತ್ಮರ ಮರ್ಮಗಳ ಮುಕ್ತಿಗೆ ಕ್ರಮವು ತಮ್ಮ ವರ್ತನೆಯ ಕೆಲವು ಕಾರಣಗಳನ್ನು ಸಮರಾಯುದ್ಧದಿಂದ ಮುಕ್ತಿ ... ಒದಗಬಾರದೆಂದು ಮಿ ಲಾಯ್ಡ ಜೋರ್ಜರು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಬ್ರಿಟಿಷ ಮಜೂರರ ಒಟ್ಟುತನದ ವರ್ತನವು ವಿಶೇಷವಾಗಿದೆ. ಬ್ರಿಟಿಷ ಮಂತ್ರಿಮಂಡಲದವರು ಒರಗೆ ಕೂಗಿದ ಶಕ್ತಿಯನ್ನು ಪುನಃ ಪೋಲೆಂಡದ ಪರವಾಗಿ ಎತ್ತಿದರೆ ತಾವು ಮುಷ್ಕರ ಹೂಡುವೆವೆಂದು ಅವರು ಬಾಯ್ಬಿಟ್ಟು ತಿಳಿಸಿದರು. ಈ ಪ್ರಸ್ತಾವವು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದಾಗ ಈ ರೀತಿ ಮಜೂರ ವರ್ಗದವರು ಆಡುವುದರಿಂದ ಇಲ್ಲಿಯ ಜನರೊಳಗೆ ಒಡಕು ಬಂದಿದೆ ಎಂಬ ತಪ್ಪು ತಿಳುವಳಿಕೆಯು ತಮ್ಮ ವಿರೋಧಿಗಳಿಗೆ ಹುಟ್ಟಿ ಲೋಕಶಾಂತಿಗೆ ಭಂಗವುಂಟಾದೀತೆಂದು ಮಿ ಲಾಯ್ಡ ಜೋರ್ಜರು ಎಚ್ಚರಿಸಿದರು.

ವಿದೇಶ ವರ್ತಮಾನ.

ವಿಶ್ವಾವಮಾಯ್ನರ್—ಇದರಲ್ಲಿ ಬ್ರಿಟನ್ ಫ್ರಾನ್ಸ್ ಮತ್ತು ಇಟಲಿ ಸರಕಾರಗಳು ಯಾವ ಗಡಿಗಳೊಳಗೆ ತಮ್ಮ ಅಧಿಕಾರಗಳನ್ನು ನಡೆಸಬಹುದು ಎಂಬವನ್ನು ಕುರಿತು ಈ ಮೂರು ರಾಜ್ಯಗಳೂ ಒಪ್ಪಂದ ಮಾಡಿಕೊಂಡಿವೆ. ತುರ್ಕಿಯ ಸೌಕರ್ಯಗಳನ್ನು ಹೆಚ್ಚಿಸುವುದು, ಅಲ್ಲಿಯ ಆಡಳಿತೆಯಲ್ಲಿ ವ್ಯವಸ್ಥೆ ಮಾಡುವುದು, ಎನಟೋಲಿಯನ್ ರೈಲ್ವೆಯಲ್ಲೂ ತುರ್ಕಿಯೊಡನೆ ಒಪ್ಪಂದದಲ್ಲಿ ನಮೂದಿಸಿದ ಬಾಗ್ದಾದ ರೈಲ್ವೆಯ ಅಂಶದಲ್ಲೂ ಕೆಲಸ ಸಾಗಿಸುವುದು, ತುರ್ಕಿಯಲ್ಲಿ ನೇಮಕವಾಗುವ ಇಂಟರ್‌ನೆಶನಲ್ (ಹಲವು ರಾಜ್ಯಗಳ ಸಮ್ಮೇಲನದಿಂದ ಕೂಡಿದ) ಸಭೆಗಳಲ್ಲಿ ಈ ಮೂರು ರಾಜ್ಯಗಳು ಸಮಾನ ಸಂಖ್ಯೆ ಪ್ರತಿನಿಧಿಗಳನ್ನು ಕಳುಹಿಸುವುದು ಮುಂತಾದ ಪ್ರಶ್ನೆಗಳು ಈ ಒಪ್ಪಂದದಲ್ಲಿರುವ ಶರ್ತಗಳು.

ಬ್ರಿಟಿಷ 'ಲೇಬರ್ ಪಾರ್ಟಿ'—ಈ ಮಜೂರ ಜನರ ಮತ್ತು ಟ್ರೇಡ್ ಯೂನಿಯನ್ ಕೊಂಗ್ರೆಸಿನ ಒಂದು ವಿಶೇಷ ಅಧಿವೇಶನವು ಜರಗಿ ರುಶ್ಯದ ಮೇಲೆ ಭೂಸೈನ್ಯ ಅಥವಾ ನೌಕಾಸೈನ್ಯವನ್ನು ಕಳುಹಿಸುವುದನ್ನು ವಿರೋಧಿಸಿ, ಅಗತ್ಯವಿದ್ದರೆ ಎಲ್ಲ ಕಾಮಗಾರರು ತಮ್ಮ ಕೆಲಸವನ್ನು ನಿಲ್ಲಿಸಬೇಕೆಂಬ ಠರಾವು ಮಂಜೂರಾಯಿತು.

ನಾವಿಕರ ಕೂಟ—ಬ್ರುಸ್ಸೆಲ್ಸದಲ್ಲಿ ಜರಗಿದ ಇಂಟರ್‌ನೆಶನಲ್ ಸೀಮೆನ್ಸ್ ಕೊನ್ಫರೆನ್ಸದಲ್ಲಿ ಆದ ಠರಾವಿನಲ್ಲಿ ಇನ್ನು ಮುಂದೆ ಯುದ್ಧಗಳು ಉಂಟಾಗುವುದನ್ನು ತಡೆಹಾಕುವುದಕ್ಕೆ ನಾವಿಕರು ಸೈನ್ಯಸರಂಜಾಮನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸಾಗಿಸುವುದಕ್ಕೆ ನಿರಾಕರಿಸಬೇಕೆಂದು ನಿರ್ಣಯವಾಯಿತು. ಇದು ಈಗಿನ ಪೋಲೆಂಡ ಮತ್ತು ರುಶ್ಯದ ಯುದ್ಧ ಸಂದರ್ಭಕ್ಕೂ ಅನ್ವಯವಾಗುವುದಂತೆ.

ಗ್ರೀಸ್‌ದ ಮುಖ್ಯ ಮಂತ್ರಿ—ಮಿ ವೆನಿಜೆಲೋಸರನ್ನು ದುಷ್ಟನು ಯಾರೋ ಪಿಸ್ತೂಲಿನಿಂದ ಸುಟ್ಟರು, ಆದರೆ ಜೀವಹಾನಿಯಾಗಲಿಲ್ಲ. ಅವರು ಬೇಗನೆ ಪೂರ್ವಸ್ಥಿತಿಯನ್ನು ಹೊಂದುವರೆಂದು ತಿಳಿಯುತ್ತೇವೆ.

ಫ್ರಾನ್ಸಿನಲ್ಲಿ ಖಿಲಾಫತ ಡೆಲಿಗೇಶನ್—ಇಂಡಿಯನ್ ಖಿಲಾಫತ್ ಡೆಲಿಗೇಶನದವರು ಫ್ರಾನ್ಸಿಗೆ ಹೋಗಿ ಅಲ್ಲಿಯ ಮುಖ್ಯ ಮಂತ್ರಿ ಮಿ ಮಿಲ್ಲರೆಂಡರ ಭೆಟಿ ಮಾಡಿದ್ದಲ್ಲಿ ತುರ್ಕಿಯ ಸಂಧಿಯನ್ನು ಕುರಿತ ಫ್ರೆಂಚರ ನಿರ್ಧಾರಗಳನ್ನು ತಿಳಿದುಕೊಂಡದ್ದಲ್ಲದೆ ಕೊನಸ್ಟೆಂಟಿನೋಪಲದಿಂದ ತುರ್ಕಿಯ ಪ್ರತಿನಿಧಿಗಳೆನ್ನಿಸಿಕೊಂಡು ಬಂದ ಕೆಲವು ಗೃಹಸ್ಥರು ಅವರಿಗೆ ಸಹಿಕೊಟ್ಟ ಮಾತ್ರದಿಂದಲೆ ಈ ಚರ್ಚೆ ಮುಗಿದಂತೆ ಒಂದು ಸ್ಥಾನದ ಜನರು ತಿಳಿಯುವುದಿಲ್ಲವೆಂದು ಈ ಡೆಲಿಗೇಶನದವರು ಮಿ ಮಿಲ್ಲರೆಂಡರಿಗೆ ವ್ಯಕ್ತಗೊಳಿಸಿದರಂತೆ.

ರುಶ್ಯ ಪೋಲೆಂಡದ ಯುದ್ಧ—ಫ್ರೆಂಚರು ಪೋಲೆಂಡದವರಿಗೆ ಯುದ್ಧದಲ್ಲಿ ಆಲೋಚನೆ ಹೇಳುವದಕ್ಕಾಗಿ ಜನರಲ್ ವೆಗೆಂಡ್ ಎಂಬವರನ್ನು ಕಳುಹಿಸಿಕೊಟ್ಟಿರುವರು. ಬೊಲಶೆವಿಕರು ಪೋಲೆಂಡ ರಾಜಧಾನಿಯಾದ ವಾರ್ಸಾ ಪಟ್ಟಣಕ್ಕೆ ಬರೆ ೩೦ ಮೈಲು ದೂರದಲ್ಲಿದ್ದಾರೆ. ಇತ್ತ ಬ್ರಿಟನದವರು ಈಗ ಒಂದೇ ಬಗೆಗೆ ಈ ಯುದ್ಧದ ಪರಿಸಮಾಪ್ತಿ ಮಾಡಬೇಕೆಂಬ ಸಾಹಸವನ್ನು ಮಾಡುತ್ತಿದ್ದಾರೆ.

ಬೊಲಶೆವಿಕರೂ ಪೋರ್ಶಿಸ್ಥಾನವೂ—ಉತ್ತರ ಪರ್ಶಿಯದಲ್ಲಿ ರೆಸ್ಟ್ ಪ್ರಾಂತದಲ್ಲಿ ಕೊಳ್ಳೆ ಹೊಡೆಯುತ್ತ ೧೮ರಿಂದ ೪೫ ವರ್ಷ ಪ್ರಾಯದೊಳಗಿನ ಪರ್ಶಿಯದವರನ್ನು ಸೈನ್ಯದಲ್ಲಿ ಒತ್ತಾಯದಿಂದ ದಾಖಲು ಮಾಡುತ್ತಾರೆ. ಜಿಲಾನ್ ಪ್ರಾಂತದಲ್ಲಿರುವ ಅಕ್ಕಿಯ ಕೋಠಿಗಳನ್ನು ಹಿಡಿದು ರುಶ್ಯಕ್ಕೂ ಬಾಕೂ ಪ್ರದೇಶಕ್ಕೂ ಕಳುಹಿಸುತ್ತಿದ್ದು ಅದಕ್ಕೆ ಬದಲಾಗಿ ಯುದ್ಧ ಸಾಮಗ್ರಿಗಳನ್ನು ಪರ್ಶಿಯಕ್ಕೆ ಕಳುಹಿಸುತ್ತಾರೆಂದೂ ಪರ್ಶಿಯದ ನೆಶನಲ್ ಸೈನ್ಯದಲ್ಲಿ ಸೇರುವುದಕ್ಕೆ ಜನಗಳಿಗೆ ಬಲವಂತ ಪಡಿಸುವ ನಿಮಿತ್ತ ಆಹಾರಸಾಮಗ್ರಿಗಳನ್ನೆಲ್ಲ ಹಿಡಿಯುತ್ತಿದ್ದಾರೆಂದೂ ತಿಳಿದುಬರುತ್ತದೆ.

ಮೆಸೊಪೊಟಮಿಯ—ಬಾಗ್ದಾದದಿಂದ ಪರ್ಶಿಯಕ್ಕೆ ಹೋಗುವ ರೈಲ್ವೆಯನ್ನು ಅಲ್ಲಿಯ ಕೆಲವು ಬಡದವರು ಕಡಿದುಬಿಟ್ಟಿದ್ದಾರೆ. ಇದನ್ನು ಸರಿಮಾಡಲಿಕ್ಕೆ ಬಾಗ್ದಾದದಿಂದ ಸೈನ್ಯವು ಹೋಗಿ ರೈಲು ಚಲಾವಣೆಯನ್ನು ಪುನಃ ನೆಟ್ಟಗೆ ಮಾಡಿತಂತೆ.

ಅಮೀರ ಫೈಜಲ್—ಇವರು ಸದ್ಯದಲ್ಲಿಯೇ ಸ್ವಿಜರಲೆಂಡದಲ್ಲಿ ಮಿ ಲೊಯ್ಡ ಜೋರ್ಜರನ್ನು ಕಾಣಲಿಕ್ಕಿದ್ದಾರೆ. ಅಮೀರ ಫೈಜಲರಿಗೆ ಇಡೀ ಮೆಸೊಪೊಟಮಿಯವನ್ನು ವಹಿಸಿಕೊಡುವುದೆಂತಲೂ ಅಮೀರ ಅಬ್ದುಲ್ಲರಿಗೆ ತಮ್ಮ ಅಧಿಕಾರಕ್ಕೆ ರಾಜ್ಯಮಾಡುಕೊಡುವಂತೆ ಸಮಾಧಾನಿಸುವುದೆಂತಲೂ ಈ ಏರ್ಪಾಡಿಗೆ ಫ್ರಾನ್ಸ್ ಆಕ್ಷೇಪಿಸುವುದಿಲ್ಲವೆಂತಲೂ ಒಂದು ವದಂತಿ ಇದೆ.

ಸ್ವದೇಶ ವರ್ತಮಾನ.

ನದಿಗಳಿಗೆ ಸೇತುವೆಗಳು—ಡಿಸ್ಟ್ರಿಕ್ಟ ಬೋರ್ಡುಗಳ ಕೈಕೆಳಗಿರುವ ಕೆಲವು ಹೆದ್ದಾರಿಗಳನ್ನು ಸರಿಪಡಿಸುವ ವರ್ಷಾವಧಿ ಖರ್ಚನ್ನು ಸರಕಾರದವರು ವಹಿಸಿದ್ದಾರೆ. ಅಂಥ ಹೆದ್ದಾರಿಗಳಲ್ಲಿ ಅಡ್ಡ ಹಾಯುವ ಹೊಳೆಗಳಿಗೆ ಸೇತುವೆ ಸಂಕಗಳನ್ನು ಹಣ ಒದಗಿದ ಹಾಗೆ ಹಾಕಿಸಬೇಕಾಗಿ ಸರಕಾರದವರು ನಿರ್ಣಯಿಸಿರುವುದರಿಂದ ಎಲ್ಲಾ ಡಿಸ್ಟ್ರಿಕ್ಟ ಬೋರ್ಡುಗಳು ಈ ಹೆದ್ದಾರಿಗಳಲ್ಲಿ ಎಲ್ಲೆಲ್ಲಿ ಸಂಕಗಳು ಅಗತ್ಯ ಇವೆ ಎಂಬವನ್ನು ನೋಡಿ ಅನುಕೂಲವಾದ ಸ್ಥಳಗಳನ್ನು ಸಹ ಆರಿಸಬೇಕೆಂದು ಸರಕಾರದ ಹುಕುಂ ಹೊರಟಿದೆ.

ಪೆನ್ಶನುಗಳ ನಿಬಂಧನೆಗಳು—೧೯೧೯ನೆ ನವಂಬರ ೧೫ನೆ ತಾರೀಕಿಗೆ ಪ್ರಕಟವಾದ ಹೊಸ ನಿಬಂಧನೆಗಳ ನಂಬ್ರ ೧೧(ಳ)ನೇ ಉಪನಿಬಂಧನೆಯಲ್ಲಿ (ಒಬ್ಬ ಸಾಹೇಬಿ ನವ್ಕರನ ೨೫ ವರ್ಷಗಳ ಸರ್ವೀಸು ಮುಗಿದೊಡನೆ ಆತನನ್ನು ಪೆನ್ಶನಿಗೆ ಕಳುಹಿಸುವ ಪೂರ್ಣ ಸ್ವಾತಂತ್ರ್ಯವನ್ನು ಸರಕಾರದವರು ಇಟ್ಟುಕೊಂಡಿದ್ದಾರೆ. ಇಂಥ ಸಂದರ್ಭಗಳಲ್ಲಿ ಆತನಿಗೆ ವಾಸ್ತವವಾಗಿ ಸಿಗಬೇಕಾದ ಪೆನ್ಶನಿಗಿಂತ ಹೆಚ್ಚಿಗೆ ಅಂಶವನ್ನು ಕೂಡಿಸಿ ಕೊಡಲು ಸರಕಾರದವರು ಬದ್ಧರಲ್ಲ, ಹೀಗೆ ಪೆನ್ಶನ ಕೊಡಿಸುವುದಕ್ಕೆ ಅವನಿಗೆ ೫೫ ವರ್ಷ ಪ್ರಾಯ ದಾಟಬೇಕೆಂದೂ ಇಲ್ಲ. ಆದರೆ ಯಾವಾತನು ಜನತೆಯ ದೃಷ್ಟಿಯಿಂದ ಇನ್ನೂ ಸರ್ವೀಸಿನಲ್ಲಿ ಇರುವುದು ಯೋಗ್ಯವಲ್ಲವೆಂದು ಕಂಡ ಸಂದರ್ಭದಲ್ಲಿ ಈ ಕ್ರಮವನ್ನು ಜಾರಿಗೆ ತರಲಾಗುವುದೆಂತಲೂ ಇತರರ ವಿಷಯದಲ್ಲಿ ೨೫ ವರ್ಷ ಸರ್ವೀಸು ದಾಟಿದರೂ ೫೫ ವರ್ಷ ಪ್ರಾಯ ದಾಟುವ ವರೆಗೆ ಕೆಲಸದಲ್ಲಿ ಇರಗೊಡಿಸದೆ ಇರುವುದಿಲ್ಲವೆಂದೂ ಇಂಡಿಯಾ ಸರಕಾರದ ಪ್ರಕಟನೆ ಇದೆ.

ಡಾ। ತೇಜ ಬಹದ್ದೂರ ಸಪ್ರೂ—ಮತ್ತು ಕಾರ್ಯಕಾರಿ [illegible] ಈಗ ಇದ್ದವರು ದೇಶೀಯ ಮೆಂಬರು ಆದ್ದರಿಂದ, ಮೊದಲು ಮೆಂಬರ ಕೆಲಸ ಹೆಚ್ಚು ದಿನ ನಡೆಯಿತು, ಎಂಬ ವರದಿ ಇತ್ತು. ಈಗ ಮೆಂಬರಾಗಿದ್ದ ಸರ್ ಶಂಕರನ್ ನಾಯರ ಕೆಲಸದ ಅವಧಿಯು ಇದೇ ಡಿಸೆಂಬರದಲ್ಲಿ ಮುಗಿಯುತ್ತದೆಂದು ಅವರ ಸ್ಥಾನದಲ್ಲಿ ಡಾಕ್ಟರ ತೇಜ ಬಹದ್ದೂರ ಸಪ್ರೂ ಎಂಬ ಮಹನೀಯರನ್ನು ಬಾದಶಹರು ನೇಮಿಸಿರುವುದಾಗಿ ಪ್ರಕಟವಾಗಿದೆ. ಇವರು ಹೆಸರು ವಾಸಿಯಾದ ವಕೀಲರೂ ರಾಷ್ಟ್ರೀಯ ಸಭೆಯಲ್ಲಿ ಬಹಳ ಕಾಲದಿಂದ ಮುಖಂಡ ಮೆಂಬರೂ ವರಿಷ್ಠ ನ್ಯಾಯವಿಧಾಯಕ ಸಭೆಯ ಮೆಂಬರರೂ ಆಗಿರುವರು.

ಮುಂಬಯಿ ಕಾಮಗಾರ ಹಿತವರ್ಧಕ ಸಭೆ—ಮುಂಬಯಿಯ ಗಿರಣಿಗಳಲ್ಲಿ ಗೇಯುವ ಮಜೂರರು ಈ ಸಂಘವು ಮಜೂರರಿಂದ ದಿನಕ್ಕೆ ೯ ತಾಸು ಅಥವಾ ವಾರಕ್ಕೆ ೫೪ ತಾಸುಗಳಿಗಿಂತ ಹೆಚ್ಚಿನ ಕೆಲಸ ಮಾಡಿಸಬಾರದು, ಅರ್ಧ ಹೊತ್ತು ಕೆಲಸ ಮಾಡುವ ಹುಡುಗರು ೧೪ ವರ್ಷ ಪ್ರಾಯಕ್ಕೆ ಕಡಿಮೆಯವರಾಗಬಾರದು, ಅಂಥವರಿಗೆ ದಿನಕ್ಕೆ ೪½ ತಾಸುಗಳಿಗಿಂತ ಹೆಚ್ಚು ಸಮಯ ಕೆಲಸ ಕೊಡಬಾರದು, ೧೪ರಿಂದ ೧೬ ವರ್ಷಗಳೊಳಗಿನ ಹುಡುಗರಿಂದ ದಿನಕ್ಕೆ ೬ ತಾಸುಗಳಿಗೆ ಮಿಕ್ಕಿ ಗೇಯಿಸಬಾರದು, ಇಂಥವರಿಗೆ ವಿದ್ಯಾಭ್ಯಾಸಕ್ಕೆ ಅನುಕೂಲತೆಗಳನ್ನು ಒದಗಿಸಬೇಕು, ಗರ್ಭಿಣಿಯರನ್ನೂ ಬಾಣಂತಿಯರನ್ನೂ ಇಂತಿಷ್ಟು ಕಾಲದ ವರೆಗೆ ಗಿರಣಿಗಳಲ್ಲಿ ಕೆಲಸಕ್ಕೆ ಹಚ್ಚಬಾರದೆಂಬದಾಗಿ ವಿಲಾಯತಿಯಲ್ಲಿ ಜಾರಿಯಲ್ಲಿದ್ದ ಕಾಯಿದೆಯನ್ನು ಹಿಂದುಸ್ಥಾನದಲ್ಲಿಯೂ ಜಾರಿಗೆ ತರಬೇಕು, ಸ್ತ್ರೀಯರಿಗೆ ದಿನಕ್ಕೆ ೭ ತಾಸುಗಳಿಗಿಂತ ಹೆಚ್ಚಿನ ಸಮಯ ಕೆಲಸ ಕೊಡಿಸಬಾರದು ಎಂದು ಮುಂತಾಗಿ ನಿರ್ಬಂಧ ಹಾಕಬೇಕೆಂದು ಮುಂಬಯಿ ಪ್ರಾಂತಿಕ ಸರಕಾರದವರಿಗೆ ಕೇಳಿಕೊಂಡಿದ್ದಾರೆ.

ಹಿಜರತ್—ಹಿಜರತ್ ಯಾತ್ರಿಕರ ಸ್ತೋಮವು ಹೆಚ್ಚುತ್ತಾ ಬಂದಿದೆ, ವಿಶೇಷವಾಗಿ ವಾಯವ್ಯ ಗಡಿಪ್ರಾಂತದಿಂದ ಈ ಜನಗಳು ಅಫಘಾನಿಸ್ಥಾನಕ್ಕೆ ಹೋಗುತ್ತಿದ್ದಾರೆ, ಸಿಂಧ, ಪಂಜಾಬ ಮತ್ತು ವಾಯವ್ಯ ಗಡಿ ಪ್ರಾಂತದಿಂದ ಹೊರಟ ಜನರೇ ಹೆಚ್ಚು. ಬ್ರಿಟಿಷ ಸೈನ್ಯವು ಮುಸಲ್ಮಾನರ ಪರಿಶುದ್ಧ ಸ್ಥಳಗಳನ್ನು ಹಿಡಿದು ಅಪವಿತ್ರವಾಗಿ ಮಾಡುತ್ತಿದ್ದಾರೆಂಬ ಸುಳ್ಳು ಸುದ್ದಿಯೇ ಈ ರೀತಿ ಜನಗಳು ತಂಡತಂಡವಾಗಿ ಹೊರಡುವುದಕ್ಕೆ ಮೂಲ ಕಾರಣ. ಅನೇಕ ಮುಸಲ್ಮಾನರು ತಮ್ಮ ಆಸ್ತಿಪಾಸ್ತಿಗಳನ್ನು ಕಂಡಾಬಟ್ಟೆ ಕಡಿಮೆ ಬೆಲೆಗೆ ಮಾರಿ ಹೊರಟಿದ್ದಾರೆ, ಕುಹಕಿಗಳಾದ ಜನರು ಸುಳ್ಳು ವರ್ತಮಾನಗಳನ್ನು ಹುಟ್ಟಿಸಿ ಮುಸಲ್ಮಾನರಿಂದ ಆಸ್ತಿಪಾಸ್ತಿಗಳನ್ನೂ ಬಹಳ ಕಡಿಮೆ ಬೆಲೆಗೆ ಕೊಂಡುಕೊಳ್ಳುವುದರಲ್ಲಿದ್ದಾರೆಂದು ಗೊತ್ತಾಗಿ ವಾಯವ್ಯ ಗಡಿ ಪ್ರಾಂತದ ಚೀಫ್ ಕಮಿಶನರ್ ಸಾಹೇಬರು ಸ್ಪೆಶಲ್ ಆಫೀಸರರುಗಳನ್ನು ನೇಮಿಸಿ ಈ ರೀತಿ ಜನಗಳು ಮೋಸಹೋಗದಂತೆ ಯತ್ನಿಸುತ್ತಿದ್ದಾರೆ. ಸರಕಾರದವರು ಈ ರೀತಿ ಹಿಂದುಸ್ಥಾನವನ್ನು ಬಿಟ್ಟು ಹೋಗುವವರನ್ನು ತಡೆಯಲು ಬಲಾತ್ಕಾರ ಮಾಡುವುದಿಲ್ಲ. ಇಲ್ಲಿಂದ ಹೋದ ಕೆಲವರಿಗೆ ಸ್ಥಳವನ್ನು ಕೊಡಲಿಕ್ಕಾಗಿ ಅಫಘಾನಿಸ್ಥಾನ ಸರಕಾರದವರು ಖೋಸ್ತ ಪ್ರಾಂತದ ಜನಗಳ ಆಸ್ತಿಗಳನ್ನು ತಪ್ಪಿಸಿದ್ದರಿಂದ ಅವರಲ್ಲಿ ಅನೇಕರು ಹಿಂದುಸ್ಥಾನಕ್ಕೆ ಬಂದು ವಾಸಮಾಡಲು ಬ್ರಿಟಿಷ ಸರಕಾರದ ಅಪ್ಪಣೆ ಕೇಳುತ್ತಿದ್ದಾರೆ ಎಂದು ಮುಂತಾಗಿ ಇಂಡಿಯಾ ಸರಕಾರದ ಜಾಹೀರನಾಮೆ ಇದೆ.

ಮುಂಬಯಿಯ ಬಡ ಭಿಕ್ಷುಗಳು:—ಇವರಲ್ಲಿ ಅನೇಕರು ಹೊಟ್ಟೆಗಿಲ್ಲದೆ ರಸ್ತೆಗಳಲ್ಲಿ ಬಿದ್ದು ಪ್ರಾಣಬಿಡುತ್ತಿದ್ದಾರೆ ಎಂದು ಗೊತ್ತಾಗಿ ಮುಂಬಯಿ ಇಂಪ್ರುವಮೆಂಟ ಟ್ರಸ್ಟಿನ ಮೀಟಿಂಗಿನಲ್ಲಿ ಆ ಕುರಿತು ಪ್ರಸ್ತಾಪ ಬಂದು, ಮುಂಬಯಿಯ ಧರ್ಮಶಾಲೆಗಳಲ್ಲಿ ಈ ಬಗೆಯ ಬಡ ಭಿಕ್ಷುಗಳು ತುಂಬಿದ್ದುದಲ್ಲದೆ ಇನ್ನೂ ಅನೇಕಾನೇಕರಿಗೆ ಇರಲು ವಾಸಸ್ಥಳವೇ ಇಲ್ಲದ್ದರಿಂದ ದಾದರ್ ಎಂಬಲ್ಲಿ ನಿವೇಶನದ ತಂಗಾವಿ ಮನೆಗಳನ್ನು ಅಥವಾ ಗುಡಿಸಲುಗಳನ್ನು ಮಾಡಿಸಿಕೊಡುವುದಕ್ಕಾಗಿ ೭ರಿಂದ ೮ ಲಕ್ಷ ರೂಪಾಯಿ ವರೆಗಿನ ದ್ರವ್ಯಸಹಾಯವನ್ನು ಮುಂಬಯಿಯ ಧನಿಕರಿಂದ ಎತ್ತಲೂ ನಿಶ್ಚಯಿಸಿದೆ. ಈಗಲೆ ಈ ಬಡ ಭಿಕ್ಷುಗಳಿಗೆ ಬೇರೆ ರೀತಿಯಿಂದ ಸಹಾಯ ಮಾಡುವುದಕ್ಕಾಗಿ ರೂ. ೫೦,೦೦೦ ವಂತಿಗೆಯಾಯಿತು.

ಲೋರ್ಡಸಿಂಹರಿಗೆ ಗವರ್ನರ ಪದವಿ:—ಬಿಹಾರ ಮತ್ತು ಒರಿಸ್ಸಾ ಪ್ರಾಂತಕ್ಕೆ ಲೋರ್ಡಸಿಂಹರನ್ನು ಗವರ್ನರಾಗಿ ನೇಮಕ ಮಾಡುವರು. ಇವರು ನಮ್ಮ ಬಾದಶಹರ ಭೇಟಿಯನ್ನು ಪಡೆದು ಇನ್ನು ಕೆಲವು ದಿವಸಗಳಲ್ಲಿಯೆ ಹಿಂದುಸ್ಥಾನಕ್ಕೆ ಬರಲಿಕ್ಕಿರುವರು.

ಮಹಾಜಿರೀನರೂ ಅಮೀರರೂ—ಇನ್ನು ಹಿಜ್ರತದ ವ್ರತವನ್ನು ಹಿಡಿದು ಹಿಂದೂಸ್ಥಾನವನ್ನು ಬಿಟ್ಟು ಅಫಘಾನಿಸ್ಥಾನಕ್ಕೆ ಪ್ರವೇಶ ಮಾಡುವ ಮುಸಲ್ಮಾನರು ಮನೆಬಿಟ್ಟು ಹೊರಡುವುದನ್ನು ತತ್ಕಾಲ ಮನ್ನಾ ಇಡಲಿ ಎಂದು ಅಫಘಾನಿಸ್ಥಾನದ ಅಮೀರನಾಹೇಬರ ಫರ್ಮಾನ ಬಂದಿದೆ ಎಂದು ಹಿಜ್ರತ ಕಮಿಟಿಯ ಸೆಕ್ರೆಟರಿಗಳಾದ ಮಿ ಜಾನ ಮಹಮ್ಮದರು ತಂತಿ ಮೂಲಕ ತಿಳಿಸುತ್ತಾರೆ.

ಸೆಂಟ್ರಲ್ ಖಿಲಾಫತ ಕಮಿಟಿ—ಇದಕ್ಕೆ ಮಿ ಯಾಕೂಬ ಹಸ್ಸನ ಸಾಹೇಬರನ್ನು ಸೆಕ್ರೆಟರಿಗಳಾಗಿ ನೇಮಿಸಿದ ಎಂತಲೂ ಕಲ್ಕತ್ತೆಯಲ್ಲಿ ಕೊಂಗ್ರೆಸಿನ ಅಧಿವೇಶನದ ಕಾಲದಲ್ಲಿಯೇ ಈ ಖಿಲಾಫತದ ವಿಶೇಷ ಒಂದು ಅಧಿವೇಶನವು ಜರಗುವದೆಂತಲೂ ಸೆಂಟ್ರಲ್ ಕಮಿಟಿಯವರು ಹಿಜ್ರತದ ವಿಷಯವಾಗಿ ಮೇಲ್ವಿಚಾರವನ್ನು ಕೈಕೊಳ್ಳಬೇಕೆಂತಲೂ ಠರಾವಾಯಿತು ಎಂದು ತಿಳಿದುಬರುತ್ತದೆ.

ಜೇಮ್‌ಶೇದ್ ಪುರದಲ್ಲಿ ನೆರೆಯ ಹಾವಳಿ—ಟಾಟಾ ಕಂಪೆನಿಯ ಕಬ್ಬಿಣದ ಗಣಿಗಳಲ್ಲಿ ನೆರೆಯು ನೀರು ತುಂಬಿ ಸುವರ್ಣರೇಖಾನದಿಯು ಇಕ್ಕೆಡೆಗಳಲ್ಲಿ ಹಲವು ಗ್ರಾಮಗಳು ಹಾಳಾಗಿದ್ದವೆಂತಲೂ ಜಾನಪೂರ ಎಂಬಲ್ಲಿ ಕಂಪೆನಿಯ ಆಫೀಸು ಮತ್ತು ಧಾನ್ಯಗಳ ಕೋಠಿ ವಿನಾ ಇತರ ಸ್ಥಳವೆಲ್ಲ ನೀರಿನಲ್ಲಿ ಮುಳುಗಿತ್ತು ಎಂತಲೂ ತಿಳಿದುಬರುತ್ತದೆ. ಸಿಂಗ್‌ಭೂಮಿಯ ಡೆಪ್ಯುಟಿ ಕಮಿಶನರು ಆ ಸ್ಥಳಕ್ಕೆ ಹೋಗಿ ಜನಗಳಿಗೆ ಸಹಾಯ ಮಾಡುವುದಕ್ಕೆ ಯತ್ನಿಸುತ್ತಿದ್ದಾರಂತೆ. ಈಗ ನೆರೆಯು ಇಳಿದಿದೆ ಎಂದು ತಿಳಿಯುತ್ತೇವೆ.

ಪ್ರಿನ್ಸ್ ಒಫ್ ವೇಲ್ಸರ ಆಗಮನ—ಈ ವರ್ಷ ಹಿಂದೂಸ್ಥಾನಕ್ಕೆ ಪ್ರಿನ್ಸ್ ಒಫ್ ವೇಲ್ಸರು ಪ್ರವಾಸ ಮಾಡಬೇಕೆಂದಿರುವ ಆಲೋಚನೆಯು ಅವರ ಆರೋಗ್ಯದ ಸಂಬಂಧ ಮನ್ನಾ ಇಡಬೇಕಾಯಿತು, ಆದರೆ ಹಿಂದಿ ಪ್ರಜೆಗಳು ತೀರಾ ನಿರಾಶೆಯಾಗದಂತೆ ಪ್ರಿನ್ಸ್ ಒಫ್ ವೇಲ್ಸರ ಬದಲಾಗಿ ಬಾದಶಹರ ಚಿಕ್ಕಪ್ಪನಾದ ಶ್ರೀಮಂತ ಡ್ಯೂಕ ಒಫ್ ಕೊನ್ನೋಟರು ಇಲ್ಲಿಗೆ ಬಂದು ಹೊಸ ಕೌನ್ಸಿಲುಗಳ ಉದ್ಘಾಟನವನ್ನು ಮಾಡುವರಾಗಿ ಬಾದಶಹರ ಜಾಹೀರನಾಮೆ ಪ್ರಕಟವಾಗಿದೆ.

ವರ್ತಮಾನಸಂಗ್ರಹಗಳು:—
ಮಂಗಳೂರಿಗೆ ಮಹಾತ್ಮಾಗಾಂಧಿ ಮೊದಲಾದ ದೇಶಭಕ್ತರ ಆಗಮನ ,,
ದಕ್ಷಿಣ ಕನ್ನಡ—ಅರಂತೋಡು, ಸಂಪಾಜೆ
ಗ್ರಾಮ ಸಭೆ
ಬೇರೆಬೇರೆ ವಿಷಯದಿಂದ ಸೂಚನೆಗಳು. ,,

ಸ್ವದೇಶಾಭಿಮಾನಿ.

ಶಕ ೧೮೪೨ ನೆ. ಶ್ರಾ. ಶು ೬ ಶುಕ್ರವಾರ.

ಮಹಾತ್ಮಾಗಾಂಧಿಗಳ ಸಂದೇಶ.

ನಮ್ಮ ದಕ್ಷಿಣ ಕನ್ನಡದ, ವಿಶೇಷತಃ ಮಂಗಳೂರಿನ ನವ ಜೀವನದ ಚರಿತ್ರೆಯಲ್ಲಿ ನಿನ್ನೆಯ ದಿವಸವು ಮಹಾತ್ಮಾಗಾಂಧಿಗಳ ಆಗಮನದಿಂದ ಚಿರಸ್ಮರಣೀಯವಾಗಿತ್ತು. ಮಹಾತ್ಮರು ಈ ಪಟ್ಟಣಕ್ಕೆ ಸಂದರ್ಶನವನ್ನು ಕೊಡುವ ವಿಷಯವು ನಿಶ್ಚಯವಾಗಿ ೮-೧೦ ದಿವಸಗಳಿಗಿಂತ ಹೆಚ್ಚಿನ ಅವಧಿಯು ಆಗಿದ್ದಿಲ್ಲ. ಈ ಚಿಕ್ಕ ಅವಧಿಯಲ್ಲಿ—ಅದರಲ್ಲೂ ಪುನಃ ಮಳೆಗಾಲದಂಥ ಈ ಸಮಯದಲ್ಲಿ ಮಹಾತ್ಮರ ಸಂದರ್ಶನದ ಗೋಸ್ಕರ ಈ ಜಿಲ್ಲೆಯ ಮತ್ತು ಭಟಕಳ ಮುಂತಾದ ಹೊರಗಿನ ಊರಿನಿಂದ ಕೂಡಾ ಜನಸಮುದಾಯವು ಬಂದಿತ್ತು. ಗಾಂಧಿಗಳ ಸ್ವಾಗತ ಮತ್ತು ಸಂದರ್ಶನದಗೋಸ್ಕರ ರೈಲು ಸ್ಟೇಶನಿನಲ್ಲಾಗಲಿ ಅವರ ಉಪನ್ಯಾಸದ ಸಮಯದಲ್ಲಿ ಮೈದಾನಿನ ಮೇಲಾಗಲಿ ಕೂಡಿದ ಜನಸಮುದಾಯವು ವಿಲಕ್ಷಣವಾಗಿತ್ತು. ವಸಂತಋತುವಿನಲ್ಲಿ ವನಗಳು ಅರಳಿಹೋಗುವಂತೆ ನಿನ್ನೆ ದಿನ ಈ ಪಟ್ಟಣದೊಳಗಿನ ಭಾಗವು ಜನಸಮುದಾಯದಿಂದ ಅರಳಿರುವಂತೆ ಕಾಣುತ್ತಿತ್ತು. ಅತಿಶಯೋಕ್ತಿ ಇಲ್ಲದೆ ಇನ್ನೂ ಅನುರೂಪವಾದ ಉಪಮೆಯನ್ನು ಕೊಡುವದಿದ್ದರೆ ಈ ವರ್ಷಾಋತುವಿನಲ್ಲಿ ಎಲ್ಲಿ ನೋಡಿದರೂ ನೀರಿನ ಪ್ರವಾಹವು ಹರಿದುಕೊಂಡಿರುವಂತೆ ನಿನ್ನೆ ಜನಸ್ತೋಮವು ಹರಿದುಕೊಂಡಿತ್ತು. ಗಾಂಧಿಗಳಿಗೆ ಈ ಬಡಪಟ್ಟಣದಲ್ಲಿ ಕೊಟ್ಟ ಸ್ವಾಗತವಾದರೂ ಬಹಳ ಅಪೂರ್ವವಿತ್ತೆಂದು ಹೇಳಿದರೆ ಸ್ವಕೀಯ ಶ್ಲಾಘನೆಯ ದೋಷವು ಬರಲಿಕ್ಕಿಲ್ಲವೆಂದು ನಂಬಿದ್ದೇವೆ.

ಮಹಾತ್ಮಾ ಗಾಂಧಿಗಳಿಗೆ ಈ ಪಟ್ಟಣದಲ್ಲಿ ಸ್ವಾಗತದ ಪೂರ್ವಸಿದ್ಧತೆಗೆ ಹೆಚ್ಚಿನ ಅವಕಾಶವೂ ಇಲ್ಲದೆ, ಯಾರ ಪ್ರೇರಣೆಯೂ ಇಲ್ಲದೆ ಮೇಲಾಗಿ ಮಳೆಯ ದಿವಸಗಳಲ್ಲಿ ಇಷ್ಟು ಅಪೂರ್ವವಾದ ಸ್ವಾಗತವಾಯಿತು ಇದರ ಕಾರಣವೇನೆಂಬುದನ್ನು ಈ ಹೊತ್ತು ಯಾರಿಗೂ ಹೇಳಬೇಕಾದ ಆಗತ್ಯವಿಲ್ಲ. ಹಿಂದೀ ದೇಶದ ದುಃಖಗಳನ್ನು ಪರಿಹರಿಸಲು ಅನ್ಯದೇಶದಲ್ಲೂ, ಈ ದೇಶದಲ್ಲೂ ಅನೇಕ ಯಾತನೆಗಳನ್ನು ಸಹಿಸಿದ ಮತ್ತು ಸಹಿಸುತ್ತಿದ್ದ ಮಹಾತ್ಮರಂಥವರಿಗೆ ಜನರು ಸ್ವಯಂ ಪ್ರೇರಣೆಯಿಂದ ಇಂಥ ಅಪೂರ್ವ ಸ್ವಾಗತವನ್ನು ಕೊಡದಿದ್ದರೆ ಇನ್ನು ಯಾರಿಗೆ ಕೊಡುವಂಥಾದ್ದು? ಮಹಾತ್ಮ ಮತ್ತು ಮೌಲನಾ ಶೌಕತಾಲಿ ಇವರಿಬ್ಬರು ಮಂಗಳೂರಿನ ನಾಗರಿಕರ ಈ ನವ್ರ ಸ್ವಾಗತವನ್ನು ಎಷ್ಟು ಪ್ರೇಮ ಪೂರ್ವಕವಾಗಿ ಸ್ವೀಕರಿಸಿದರು ಇತ್ಯಾದಿ ಸಂಗತಿಗಳನ್ನು ನಾವು ಬೇರೊಂದು ಕಡೆಯಲ್ಲಿ ಪ್ರಕಟಿಸಿದ್ದೇವೆ. ಗಾಂಧಿಗಳು ಮಾಡಿದ ಜಾಹೀರ ಭಾಷಣದಲ್ಲಿ ಈ ಜಿಲ್ಲೆಗೆ, ಮದ್ರಾಸ ಮುಂತಾದ ಕಡೆಗಳಲ್ಲಿಯಂತೆ ಅಸಹಕಾರಿತೆಯ ಸಂದೇಶವನ್ನು ಕೊಟ್ಟಿರುವರು. ಖಿಲಾಫತ್ತು ಮತ್ತು ಪಂಜಾಬ ಪ್ರಕರಣ ಇವೆರಡು ನಮ್ಮ ಜನಾಂಗಗಳಿಗೆ ಇತ್ತಲಾಗೆ ಉಂಟಾದ [illegible] ಯಾರೂ ಹೆದರಬೇಕಾದ್ದಿಲ್ಲ. ಅದು ಬರೆ ಆತ್ಮಿಕ ಬಲ. ಅದರಲ್ಲಿ ಯಾವ ಅತ್ಯಾಚಾರವೂ ಇಲ್ಲ. ಅಸಹಕಾರಿತೆಯಲ್ಲಿ ಆಚರಿಸತಕ್ಕ ಕೆಲವು ಭಾಗಗಳಿಂದ ಒಂದು ವೇಳೆ ಕೆಲವು ಮಟ್ಟಿನ ಅವ್ಯವಸ್ಥೆಯಾಗುವ ಸಂಭವವಿದ್ದರೂ ಅಂಥ ತತ್ವಗಳನ್ನು ಈಗ ಆಚಾರದಲ್ಲಿ ತರಬೇಕೆಂದು ಖಿಲಾಫತ್ ಕಮಿಟಿಯಾಗಲಿ ಇಲ್ಲವೆ ಸ್ವತಃ ಗಾಂಧಿಗಳಾಗಲಿ ಹೇಳುವುದಿಲ್ಲ, ಉಪದೇಶಿಸುವುದಿಲ್ಲ ಇಲ್ಲವೆ ನೆನಸುವುದೂ ಇಲ್ಲ. ಅಸಹಕಾರಿತೆಯಲ್ಲಿ ಮುಖ್ಯವಾಗಿ ನಾಲ್ಕು ಸಂಗತಿಗಳನ್ನು ಈಗ ಆಚರಣೆಯಲ್ಲಿ ತರಲು ನಿಶ್ಚಯಿಸೋಣಾಗಿದೆ. ಸರಕಾರದ ಕಡೆಯಿಂದ ದೊರೆತಿದ ಬಹುಮಾನದ ಪದವಿಗಳನ್ನು ಮತ್ತು ಪದಕ ಮುಂತಾದವುಗಳನ್ನು ಸರಕಾರಕ್ಕೆ ಹಿಂತಿರುಗಿ ಕಳುಹಿಸಿ ಕೊಡಬೇಕು. ನಮ್ಮ ಜನಾಂಗದ ಮನೋವೃತ್ತಿ, ಹುಣ್ಣು, ಆಕಾಂಕ್ಷೆ ಮುಂತಾದವುಗಳನ್ನು ಅರಿಯದ ಸರಕಾರದ ಕಡೆಯಿಂದ ಇಂಥ ಪದವಿಗಳನ್ನು ಸ್ವೀಕರಿಸಿ ಆ ಮೂಲಕ ತಮ್ಮನ್ನು ಬಹುಮಾನಿತರನ್ನಾಗಿ ತಿಳಿದುಕೊಳ್ಳುವುದು ಈಗಿನ ಕಾಲದಲ್ಲಿ ಕೇವಲ ಲಾಂಛನಾಸ್ಪದವಾಗಿದೆ. ಆದ್ದರಿಂದ ಸರಕಾರಿ ಬಹುಮಾನದ ಪದವಿಗಳನ್ನು ತ್ಯಜಿಸಬೇಕು. ಬರುವ ಕೌನ್ಸಿಲುಗಳಿಗೆ ಉಮೇದುವಾರರಾಗಿ ಯಾರೂ ನಿಲ್ಲಬಾರದು. ಸರಕಾರವು ಜನತೆಯ ವಿಜ್ಞಾಪನೆಗೂ, ನಿಸರ್ಗಸಿದ್ಧವಾದ ಹಕ್ಕುಗಳಿಗೂ ದುರ್ಲಕ್ಷ್ಯ ಮಾಡುವ ದೀಕ್ಷೆಯನ್ನು ಹಿಡಕೊಂಡಿರುವಾಗ ಕೌನ್ಸಿಲುಗಳಲ್ಲಿ ನಮ್ಮ ಪ್ರತಿನಿಧಿಗಳು ಹೋಗಿ ಅದರೊಡನೆ ಸಹಕಾರಿತೆಯನ್ನು ಮಾಡುವುದು ಉಚಿತವೆ? ನಮ್ಮ ಜನತೆಯ ಪ್ರತಿನಿಧಿಗಳಿಲ್ಲದೆ ಸರಕಾರವೆ ತನ್ನ ಏಕಪಕ್ಷದಿಂದ ಸುಧಾರಣಾ ಕಾನೂನನ್ನು ಯಶಸ್ವಿಯನ್ನಾಗಿ ಮಾಡಲಿ. ಅಲ್ಲಿ ಆಗುವ ಪುಣ್ಯಪಾಪಗಳಿಗೆ ನಾವು ಯಾಕೆ ಹೊಣೆಗಾರರಾಗಬೇಕು? ಯಾವ ಸರಕಾರಕ್ಕೆ ಜನತೆಯ ಆಕಾಂಕ್ಷೆಗಳ ಗುರುತು ಆಗುವದಿಲ್ಲವೊ ಅಂಥ ಸರಕಾರಕ್ಕೆ ಕೌನ್ಸಿಲುಗಳಲ್ಲಿ ಸಹಾಯ್ಯವನ್ನು ಕೊಡುವುದು ಪ್ರತಿ ಒಂದು ವ್ಯಕ್ತಿಯ ದೃಷ್ಟಿಯಿಂದಾಗಲಿ ಅಥವಾ ರಾಷ್ಟ್ರೀಯ ದೃಷ್ಟಿಯಿಂದಾಗಲಿ ಶ್ರೇಯಸ್ಕರವಲ್ಲ, ಇಲ್ಲವೆ ರಾಷ್ಟ್ರೀಯ ಶೀಲಕ್ಕೂ ಒಪ್ಪುವ ಸಂಗತಿಯಲ್ಲ. ಕೌನ್ಸಿಲಿನ ಬಹಿಷ್ಕಾರವು ಎಷ್ಟರ ಮಟ್ಟಿಗೆ ಮಹತ್ವದ್ದೂ ಅವಶ್ಯಕವೂ ಆಗಿದೆಯೊ, ಸರಕಾರಿ ಮತ್ತು ಸರಕಾರಿ ಗ್ರೇಂಟ್ ಪಡಕೊಳ್ಳುವ ಶಾಲೆಗಳಿಂದ ಹುಡುಗರನ್ನು ತೆಗೆಯುವುದು ಅಷ್ಟೆ ಮಹತ್ವದ್ದಾಗಿದೆ. ಜನರು ತಮ್ಮ ಹುಡುಗರ ಶಿಕ್ಷಣವನ್ನು ತಾವೆ ತಮ್ಮ ಶಾಲೆಗಳಲ್ಲಿ ಕೊಡುವ ಉಪಕ್ರಮವನ್ನು ಮಾಡಬೇಕು. ವಕೀಲರು ಕೋರ್ಟುಗಳಲ್ಲಿ ಹೋಗಿ ವ್ಯವಹರಿಸುವುದನ್ನು ನಿಲ್ಲಿಸಬೇಕು. ಈ ಮೇರೆಗೆ ರಿಕ್ತರಾದ ವಕೀಲರು ಹೊಸ ನ್ಯಾಯ ಕೋರ್ಟುಗಳನ್ನು ಸ್ಥಾಪಿಸಿಕೊಂಡು ಜನರ ನ್ಯಾಯವಿಚಾರಣೆಗಳನ್ನು ಮಾಡಬೇಕು. ಮಹಾತ್ಮಾಗಾಂಧಿಗಳು ತಮ ಸಂದೇಶದಲ್ಲಿ ಈ ಪ್ರಕಾರ ನಾಲ್ಕು ತತ್ವಗಳನ್ನು ನಮ್ಮ ನಾಗರಿಕರ ಮುಂದೆ ಇಟ್ಟಿರುವರು. ಅವರ ಈ ನಾಲ್ಕು ತತ್ವಗಳೆಂದರೆ, ಶಾಸ್ತ್ರಸಾಂಪ್ರದಾಯಿಕ ಧಾಟಿಯಿಂದ ಹೇಳುವುದಾದರೆ ಅಸಹಕಾರಿತೆಯ ಚತುಃ ಸೂತ್ರಿಯೆ ಸರಿ. ಈ ನಾಲ್ಕು ತತ್ವಗಳನ್ನು ಶಾಂತ ರೀತಿಯಿಂದ ಆಚರಿಸಲು ಹೊರಟರೆ ಯಾವ ಅತ್ಯಾಚಾರಕ್ಕೂ, ಯಾವ ಗಲಾಟೆಗೂ, ಯಾವ ಅಸ್ವಾಸ್ಥ್ಯಕ್ಕೂ ಎಡೆ ಇಲ್ಲವೆಂದು ಮಹಾತ್ಮಾಜಿಯವರು ಸ್ಪಷ್ಟವಾಗಿ ಅಪ್ಪಣೆಕೊಡಿಸಿದ್ದಾರೆ. ನಮ್ಮ ಜಿಲ್ಲೆಯ ಮತದಾರರಿಗೆ ಅವರು ವಿಶೇಷವಾಗಿ ಎಚ್ಚರಕೊಟ್ಟ ವಿಷಯವು ಜಿಲ್ಲೆಯ ಜನಗಳು ಮನನಮಾಡಬೇಕಾಗಿದೆ. ಬರುವ ಕೌನ್ಸಿಲುಗಳಿಗೆ ಶಾಂತಪಕ್ಷದವನಾಗಲಿ, ಉಗ್ರಪಕ್ಷದವನಾಗಲಿ, ಮುಸಲ್ಮಾನನಾಗಲಿ ಬ್ರಾಹ್ಮಣೇತರನಾಗಲಿ ಉಮೇದುವಾರನಾಗಿ ನಿಂತಿದ್ದರೆ ಅವನಿಗೆ ಮತದಾರರು ಸರ್ವಥಾ ಮತಕೊಡಬಾರದು. ಮಹಾತ್ಮಾಜಿಯವರ ಈ ಉಪದೇಶವನ್ನು, ಅವರ ಸ್ವಂತ ಭಾವನೆಯು ಎಲ್ಲರಿಗೆ ತಿಳಿಯುವಂತೆ ನಾವು ನಮ್ಮ ವಾಚಕರ ಮುಂದೆ ಇಟ್ಟಿದ್ದೇವೆ.

ಅಸಹಕಾರಿತೆಯ ತತ್ವವು ತಾತ್ವಿಕದೃಷ್ಟಿಯಿಂದ ನಿರಾಕ್ಷೇಪಕರವಾದ್ದು, ಸನದುಶೀರಾದ್ದು. ಇಡಿ ದೇಶವು ಇದನ್ನು ಸರಿಯಾಗಿ ಆಚರಿಸಿದ್ದಾದರೆ ಅದು ಕಾರ್ಯಕಾರಿಯಾದ್ದೆಂಬುದಕ್ಕೆ ಸಂದೇಹವಿಲ್ಲ. ಪರಂತು ಈ ವ್ರತವನ್ನು ಕೈಕೊಳ್ಳುವ ದೀಕ್ಷಿತರು ೬ ಎಷ್ಟು ಜನರು ಸಿಕ್ಕಾರು ಎಂಬುದನ್ನು ವ್ಯಾವಹಾರಿಕ ದೃಷ್ಟಿಯಿಂದ ವಿಚಾರಮಾಡಿಯೆ ಅದನ್ನು ಮುಂದರಿಸುವುದು ಪ್ರಶಸ್ತವಾಗಿದೆ. ತತ್ವದೃಷ್ಟಿಗೂ, [illegible] ಆಂಗಳ ವಿಷಯವಾಗಿ [illegible] ಮಹಾತ್ಮಾಗಾಂಧಿಗಳು [illegible] ಸಂದೇಶವನ್ನು ಎಲ್ಲ ಜನರೂ ಶಾಂತಮನಸ್ಸಿನಿಂದ ಮತ್ತು ದೂರದೃಷ್ಟಿಯಿಂದ ಹಾಗು ಸ್ವದೇಶದ ಪ್ರಗತಿಯ ಯೋಗವನ್ನು ಬೇಗನೆ ಸಾಧಿಸುವ ಸುಬುದ್ಧಿಯಿಂದ ಆಲೋಚಿಸುವದು ಅವಶ್ಯಕವಾಗಿದೆ.

ಸ್ಫುಟವಿಚಾರಗಳು.

೧. ಖಿಲಾಫತು, ಪಂಜಾಬ ಪ್ರಕರಣ ಮತ್ತು ಅಸಹಕಾರಿತೆ ಈ ಮಹತ್ವದ ಪ್ರಶ್ನೆಗಳ ಕಡೆಗೆ ಹಿಂದಿಗಳು ಯಾವ ದೃಷ್ಟಿಯಿಂದ ನೋಡುತಿದ್ದಾರೆ ಎಂಬುದು ಮಹಾತ್ಮಾಗಾಂಧಿಗಳ ಮೇಲಿನ ವಿಚಾರಸರಣಿಯಿಂದ ತಿಳಿದು ಬರುವಂತಿದೆ. ಆದರೆ ಎಂಗ್ಲೊ ಇಂಡಿಯನರು ವಿಶೇಷತಃ ಅಧಿಕಾರಿವರ್ಗದವರು ಈ ಪ್ರಶ್ನೆಗಳಕಡೆಗೆ ನೋಡುವಾಗ ಯಾವ ದುರ್ಬೀನನ್ನು ಉಪಯೋಗಿಸುತ್ತಾರೆ ಎಂಬುದನ್ನು ತಿಳಕೊಳ್ಳುವುದಿದ್ದರೆ ವಾಚಕರು ರಂಗೂನಿನ ಕ್ಷೇತ್ರಪತಿಗಳಾದ ಸರ್. ಕ್ರೆಡೂಕ್ ದೊರೆಗಳ ಆಲೋಚನೆಗಳನ್ನು ಕೇಳಬಹುದು! ವಾಸ್ತವವಾಗಿ ನೋಡಿದರೆ ಕ್ರೆಡೂಕ್ ದೊರೆಗಳು ಹಿಂದಿ ರಾಜಕಾರಣದಲ್ಲಿ ಪ್ರವೇಶಿಸಬೇಕಾದ ಆಗತ್ಯವಿದ್ದಿಲ್ಲ, ರಂಗೂನ ಪ್ರಾಂತ್ಯವು ಹಿಂದುಸ್ಥಾನದಿಂದ ಪ್ರತ್ಯೇಕವಿದ್ದು ಸರಕಾರವೆ ಅದಕ್ಕೆ ಪ್ರತ್ಯೇಕವಾದ ಸುಧಾರಣೆಗಳನ್ನು ಕೊಟ್ಟದ್ದೆ ಎಂದ ಮೇಲೆ ಹಿಂದೂಸ್ಥಾನದ ರಾಜಕಾರಣವನ್ನು ಅಲ್ಲಿಯ ಅಧಿಪತಿಗಳು ಚರ್ಚಿಸುವುದು ವಿಸಂಗತವಲ್ಲವೆ? ನಮ್ಮ ದೃಷ್ಟಿಯಿಂದ ಹೇಳುವದಾದರೆ. ರಂಗೂನು ಹಿಂದುಸ್ಥಾನದ ಕಾರಭಾರದಲ್ಲಿ ಒಳಪಡುವುದು ಉತ್ತಮವೆ. ಇರಲಿ. ಸರ್. ಕ್ರೆಡೂಕ್ ದೊರೆಗಳು ಖಿಲಾಫತು, ಪಂಜಾಬ ಪ್ರಕರಣ ಮತ್ತು ಅಸಹಕಾರಿತೆ ಈ ಹಿಂದೀ ಪ್ರಶ್ನೆಗಳನ್ನು ರಂಗೂನಿನ ಕೌನ್ಸಿಲಿನಲ್ಲಿ ಪ್ರಸ್ತಾಪಿಸುವುದು ಸ್ಥಲೋಚಿತವಲ್ಲವಾದರೂ ಸಮಯೋಚಿತವಾಗಿದೆ. ರಂಗೂನಿನಲ್ಲಿ ಸಾಧಾರಣವಾಗಿ ೮ ಲಕ್ಷ ಹಿಂದಿಗಳಿದ್ದು ಅವರಲ್ಲಿ ೪ ಲಕ್ಷ ಮುಸಲ್ಮಾನರಿದ್ದಾರೆ, ಇತ್ಯಾದಿ ಕಾರಣಗಳನ್ನು ಇಟ್ಟುಕೊಂಡು ಈ ಪ್ರಶ್ನೆಗಳ ವಿಷಯವಾಗಿ ಅಧಿಕಾರಿಗಳ ದೃಷ್ಟಿಯನ್ನು ಜಗತ್ತಿನ ಮುಂದಿಟ್ಟರು. ಹಿಂದುಸ್ಥಾನದ ಅಧಿಕಾರಿಗಳು ಈ ಪ್ರಶ್ನೆಗಳ ವಿಷಯವಾಗಿ ಕಾರ್ಯತಃ ಮುಂದರಿಸುತ್ತಿದ್ದರೂ ಮೌನವನ್ನು ಪ್ರಾಯಶಃ ತಾಳಿದ್ದಾರೆ. ಮೌನವನ್ನು ತಾಳಿದವನ ಅಂತರಂಗವನ್ನು ಪರೀಕ್ಷಿಸುವುದು ಕಷ್ಟವಾಗುತ್ತದೆ. ಇಂಥ ಸಮಯದಲ್ಲಿ ಕ್ರೆಡೂಕ್ ದೊರೆಗಳು ತಮ್ಮ ಬಾಯಿ ತೆರೆದು ಅಧಿಕಾರಿವರ್ಗದ ಅಂತರಂಗವನ್ನೆ ಬಿಚ್ಚಿ ತೋರಿಸಿದ್ದಾರೆ. ಇದು ಸಮಾಧಾನದ ಮಾತಾಗಿದೆ.

೨. ಆದರೆ ಸರ್ ಕ್ರೆಡೂಕ್ ದೊರೆಗಳ ವಿಚಾರಸರಣಿಯು ಮಾತ್ರ ಸಮಾಧಾನಕರವಲ್ಲವೆಂದು ಹೇಳಬೇಕಾಗುತ್ತದೆ. ಖಿಲಾಫತಿನ ವಿಷಯದಲ್ಲಿ ಬ್ರಿಟಿಷ ಸರಕಾರದ ಉಪಾಯವು ನಡಿಯುವಹಾಗಿಲ್ಲ ಎಂದು ಹೇಳಿ ದೊರೆಗಳು ಕೆಲವು ಸವಾಲುಗಳನ್ನು ಹಾಕುತ್ತಾರೆ. "ಹಿಂದಿ ಮುಸಲ್ಮಾನರ ಮತದಂತೆ ತುರ್ಕಿಯ ವ್ಯವಸ್ಥೆಯನ್ನು ಮಾಡಬೇಕೆಂದು ಹಟಹಿಡಿದು ಇನ್ನೂ ಮುಂದರಿಸಹತ್ತಿದರೆ ಯುದ್ಧವನ್ನೆ ನಡಿಸಬೇಕಾಗುತ್ತದೆ. ಆ ಯುದ್ಧವನ್ನು ನಡಿಸುವವರು ಯಾರು? ಅದರ ಖರ್ಚನ್ನು ಸಹಿಸುವವರು ಯಾರು? ಜನಸಹಾಯವನ್ನು ಕೊಡುವವರು ಯಾರು? ಹಿಂದೂಸ್ಥಾನದ ಮುಸಲ್ಮಾನರೂ, ಅಥವಾ ಅವರ ಸಹಾನುಭೂತಿಪರರಾದ ಹಿಂದುಗಳೊ? ತುರ್ಕಿಯ ಮೇಲೆ ಇಲ್ಲಿಯ ಮುಸಲ್ಮಾನರು ಇಷ್ಟು ಪ್ರೇಮ, ಅಂತಃಕರಣ ಮತ್ತು ಸಹಾನುಭೂತಿಯನ್ನು ತೋರಿಸುತಿದ್ದಾರೆ ಪರಂತು ತುರ್ಕಿಯು ಹಿಂದೂಸ್ಥಾನದ ವಿಷಯವಾಗಿ—ಹಿಂದುಸ್ಥಾನದೊಳಗಿನ ಮುಸಲ್ಮಾನರ ವಿಷಯವಾಗಿ ಈ ಮೊದಲು ಎಷ್ಟು ಸಾರಿ ಪ್ರೇಮವನ್ನು ತೋರಿಸಿದೆ? ಬರಗಾಲವಿದ್ದಾಗ ತುರ್ಕಿಯಿಂದ ಎಷ್ಟು ಸಾರಿ ಹಿಂದುಸ್ಥಾನಕ್ಕೆ ಸಹಾಯವಾಗಿದೆ? ಒಂದೆ? ಇಲ್ಲ! ಹೀಗಾದ ಮೇಲೆ ಹಿಂದಿ ಮುಸಲ್ಮಾನರೂ, ಅವರ ಬಂಧುಗಳಾದ ಹಿಂದುಗಳೂ ಈ ಅವ್ಯಾಪಾರೇಷು ವ್ಯಾಪಾರವನ್ನು ಮಾಡುವುದು ಯಾಕೆ? ಎಲ್ಲಿ ತುರ್ಕಿ ಮತ್ತು ಎಲ್ಲಿ ಹಿಂದುಸ್ಥಾನ? ಯಾವದಕ್ಕೆ ಯಾವ ಸಂಬಂಧ? ತುರ್ಕಿಯು ತನ್ನ ಕಾಲ್ಮೆ

ವನ್ನು [illegible] ಈ ಯುದ್ಧದಲ್ಲಿ ಬಿದ್ದದ್ದು ಯಾಕೆ? ಎಂಬ ಮುಂತಾದ ರೂಪದಿಂದ ರಂಗೂನ್ ಕ್ಷೇತ್ರಪತಿಗಳಾದ ಸರ್ ಕ್ರಿಡೋಕ್ ದೊರೆಗಳು ತಮ್ಮ ಕೌನ್ಸಿಲಿನಲ್ಲಿ ಸವಾಲುಗಳ ಮೇಲೆ ಸವಾಲುಗಳನ್ನು ಕೇಳಿದ್ದಾರೆ.

ಕ್ರಿಡೋಕ್ ದೊರೆಗಳು ಈ ಸವಾಲುಗಳನ್ನು ತಮ್ಮ ಕೌನ್ಸಿಲಿನಲ್ಲಿ ಕೇಳಿದ್ದರಿಂದ ಮಾತ್ರ ಅವರಿಗೆ ಅಲ್ಲಿ ಯಾರೂ ಉತ್ತರಗಳನ್ನು ಕೊಟ್ಟಿಲ್ಲ. ಅದರ ಹೊರಗೆ ದೊರೆಗಳು ಈ ಸವಾಲುಗಳನ್ನು ಕೇಳುತ್ತಿದ್ದರೆ ಅವರಿಗೆ ಸಮರ್ಪಕವಾದ ಉತ್ತರಗಳು ಲಭಿಸುತ್ತಿದ್ದವೆಂಬುದಕ್ಕೆ ಸಂಶಯವಿಲ್ಲ. ಬ್ರಿಟಿಷ್ ರಾಷ್ಟ್ರವು ಕಳೆದ ಮಹಾ ಯುದ್ಧದಲ್ಲಿ ಯಾಕೆ ಇಳಿಯಿತು? ಬೆಲ್‌ಜಿಯಮಿನ ಸ್ವಾತಂತ್ರ್ಯ ರಕ್ಷಣೆಗಾಗಿ ಅಲ್ಲವೆ? ಆ ಬೆಲ್‌ಜಿಯಮಿಗೂ ಹಿಂದುಸ್ಥಾನಕ್ಕೂ ಯಾವ ಸಂಬಂಧವಿದೆ? ಬೆಲ್‌ಜಿಯಮು ಹಿಂದುಸ್ಥಾನಕ್ಕೆ ಮೊದಲು ಯಾವ ಸಹಾಯವನ್ನು ಮಾಡಿತ್ತು? ಬೆಲ್‌ಜಿಯಮಿನಂಥ ಚಿಕ್ಕ ರಾಷ್ಟ್ರದ ಸ್ವಾತಂತ್ರ್ಯ ರಕ್ಷಣೆಗಾಗಿ ಹಿಂದುಸ್ಥಾನವು ತನ್ನ ದ್ರವ್ಯ, ತನ್ನ ಜನರು ತನ್ನ ಸಾಹಿತ್ಯ ಇವುಗಳನ್ನೆಲ್ಲ ಯಾಕೆ ಖರ್ಚುಮಾಡಬೇಕಿತ್ತು? ಎಲ್ಲಿ ಬೆಲ್‌ಜಿಯಮ್ ಮತ್ತು ಎಲ್ಲಿ ಹಿಂದೂ ದೇಶ? ಈ ದೃಷ್ಟಿಯಿಂದ ವಿಚಾರ ಮಾಡಿದರೆ ಕ್ರಿಡೋಕ್ ದೊರೆಗಳ ಮಾತು ಅವರ ಸೆರಗಿನಲ್ಲಿ ಬೀಳುತ್ತದೆ. ಆದರೂ ಇದನ್ನು ಈ ದೃಷ್ಟಿಯಿಂದ ವಿಚಾರ ಮಾಡತಕ್ಕದ್ದಲ್ಲ. ಬ್ರಿಟಿಷ್ ಮುತ್ಸದ್ದಿಗಳು ಮತ್ತು ಪ್ರೆಸಿಡೆಂಟ್ ವಿಲಸನ ಸಾಹೇಬರು ಈ ಪ್ರಶ್ನೆಗಳನ್ನು ವಿಮರ್ಶಿಸಲು ಬೇರೊಂದು ಬೆಳಕನ್ನು ಕೊಟ್ಟಿರುವರು. ಸೈನ್ಯದ ಶಕ್ತಿಯಿಂದ ಮತ್ತು ಯಾಂತ್ರಿಕ ಸಾಮರ್ಥ್ಯದಿಂದ ಚಿಕ್ಕ ಚಿಕ್ಕ ಜನಾಂಗಗಳ ಸ್ವಾತಂತ್ರ್ಯವನ್ನು ಅಪಹರಿಸುವುದು ಜಗತ್ತಿನ ಸಾಮಾನ್ಯ ಶ್ರೇಯೋವೃದ್ಧಿಗೆ, ಮಾನವ ಸಂಸ್ಕೃತಿಯ ಅಭಿವೃದ್ಧಿಗೆ, ಬಾಧಕವಾಗುತ್ತದೆ; ಆದ್ದರಿಂದ ಅದನ್ನು ಕಾಪಾಡುವುದು, ಸ್ವರಾಜ್ಯವಿಲ್ಲದ ಜನಾಂಗಗಳಿಗೆ ಸ್ವರಾಜ್ಯವನ್ನು ಕೊಡುವುದು ರಾಜಕೀಯ ದೃಷ್ಟಿಯಿಂದ ಇಹಲೋಕದ ಪವಿತ್ರ ಕರ್ತವ್ಯವು, ಮತ್ತು ಈ ಕರ್ತವ್ಯವನ್ನೆ ಮುಂದೆ ಇಟ್ಟುಕೊಂಡು ಇಂಗ್ಲೆಂಡು ಈ ಮಹಾ ಯುದ್ಧದಲ್ಲಿ ತೊಡಗಿದ್ದು, ಈ ಪವಿತ್ರ ಭಾವನೆಯ ಚಂದ್ರಬಿಂಬವನ್ನು ತೋರಿಸಿಯೆ ಹಿಂದುಸ್ಥಾನ ಸರಕಾರವು ಹಿಂದಿ ಮುಸಲ್ಮಾನರನ್ನು ತನ್ನ ಮತ್ತು ಸಾಮ್ರಾಜ್ಯ ಸರಕಾರದ ಮದತಿಗಾಗಿ ಕರೆದದ್ದು ಮಾತ್ರವಲ್ಲ. ಈ ಸ್ವಯಂ ನಿರ್ಣಯದ ದೈಬಲನ್ನು ಜಪಿಸಿಕೊಂಡೇ ಪ್ರೆಸಿಡೆಂಟ್ ವಿಲ್ಸನರು ಇಂಗ್ಲೆಂಡಿನ ಮದತಿಗೆ ಓಡಿ ಬಂದದ್ದು. ಸ್ವಯಂ ನಿರ್ಣಯದ ಬೆಳಕಿನ ಸಹಾಯದಿಂದ ನೋಡಹೋದರೆ ಮೇಲಿನ ಎಲ್ಲ ಪ್ರಶ್ನೆಗಳ ಯಥಾರ್ಥ ಸ್ವರೂಪವು ಸ್ಪಷ್ಟವಾಗಿ ದೃಗ್ಗೋಚರವಾಗುತ್ತದೆ. ಸ್ವಯಂ ನಿರ್ಣಯದ ಸೂರ್ಯ ಪ್ರಕಾಶವನ್ನು ಯುದ್ಧದ ಪ್ರಾರಂಭದಲ್ಲಿ ಬ್ರಿಟಿಷ ಮುತ್ಸದ್ದಿಗಳು ಮತ್ತು ವಿಲ್‌ಸನ್ ದೊರೆಗಳು ಬೆಳಗಿಸಿರುವಾಗ ಈಗ ಕ್ರೆಡೋಕ್ ದೊರೆಗಳು ತಮ್ಮ ಸಂಕುಚಿತ ಮತದ ಕಂದೀಲನ್ನು ಜಗತ್ತಿನ ಮುಂದೆ ಹಿಡಿದರೆ ಪಾಪ! ಅದೆಲ್ಲಿ ಬೆಳಗುವುದು?

೨೪ ಖಿಲಾಫತಿನ ಪ್ರಶ್ನೆಯ ಕಡೆಗೆ ಈ ದೃಷ್ಟಿಯಿಂದ ನೋಡುವ ಸರ್ ಕ್ರೆಡೋಕ್ ದೊರೆಗಳು ಪಂಜಾಬ ಗಲಾಟೆ ಮತ್ತು ಅಸಹಕಾರಿತೆ ಇವುಗಳ ಕಡೆಗೆ ಯಾವ ದೃಷ್ಟಿಯಿಂದ ನೋಡ್ಯಾರೆಂಬುದನ್ನು ಪುನಃ ಹೇಳಬೇಕಾದ್ದುಂಟೆ? ಆದದ್ದು ಆಗಿ ಹೋಯಿತು, ಅದನ್ನು ಮರೆತುಬಿಡುವುದೆ ಬಹಳ ಒಳ್ಳೇದು, ಇತ್ಯಾದಿ ಸದುಪದೇಶವನ್ನು ಕ್ರೆಡೋಕರು ಪಂಜಾಬ ಪ್ರಕರಣದ ಮಟ್ಟಿಗೆ ಕೊಡಹತ್ತಿದ್ದಾರೆ! ಅಧಿಕಾರಿಗಳ ಬಿಪಚಾರಿಕವಾದ ಸದುಪದೇಶದ ಈ ಗಿಲಾವಿನಿಂದ ಸಮಾಧಾನಪಡುವ ದಿವಸಗಳು ಈಗ ಆಗಿ ಹೋದವು. ಪಂಜಾಬ ಪ್ರಕರಣವನ್ನು ಕುರಿತು ಈ ರೀತಿಯಿಂದ ಸುಣ್ಣದ ಗಿಲಾವನ್ನು ಎಳೆಯುವವರಿಗೆ ಮ ಗಾಂಧಿಗಳ ಅಸಹಕಾರಿತ್ವವು ಎಷ್ಟರಮಟ್ಟಿಗೆ ಪ್ರಿಯವಾದೀತೆಂದು ಹೇಳಬೇಕೆ? ಬರೆ ಹಿಂದಿಗಳೇ ಇದ್ದರೆ ಹಿಂದುಸ್ಥಾನದ ಲೋಕಯಾತ್ರೆ ನಡೆಯಲಿಕ್ಕಿಲ್ಲ. ಹಾಗೂ ಬರೆ ಇಂಗ್ಲಿಷರಿಂದಲೂ ಆಗಲಿಕ್ಕಿಲ್ಲ. ಮುಂದಿನ ಅಭ್ಯುದಯಕ್ಕೆ ಇಂಗ್ಲಿಷರೂ ಹಿಂದುಗಳೂ ಒಟ್ಟಿಗೆ ಸೇರುವುದು ಅವಶ್ಯಕವಾಗಿದೆ. ಇವರಲ್ಲಿ ಪರಸ್ಪರ ಸಹಕಾರಿತೆಯು ಅವಶ್ಯಕವಾಗಿದೆ. ಇವರಲ್ಲಿ ಅನ್ಯೋನ್ಯ ಸಹಾಯವು ಅವಶ್ಯಕವಾಗಿದೆ. ಅಹಹಾ! ನಿಜವಾಗಿ ಕ್ರೆಡೋಕ್ ದೊರೆಗಳ ಉಪದೇಶವು, ವಿಜ್ಞಾಪನೆಯು ಮುತ್ಸದಿತನವು ಎಷ್ಟು ಗಂಭೀರ ಮತ್ತು ಉತ್ತಮವಾಗಿವೆ! ಪರಂತು ಸಹಕಾರಿತ್ವದ ಈ ಉಪದೇಶಕ್ಕೆ ಬರೆ ಹಿಂದಿಗಳೇ ವಿಷಯವೋ ಅಥವಾ ಸರ್ ಒಡ್ವಾಯರರಂಥ ಮತ್ತು ಡಾಯರರನ್ನಂಥ ಅಧಿಕಾರಿಗಳೂ ಕೂಡ ವಿಷಯವೋ ಇದನ್ನು ಕ್ರೆಡೋಕರೆ ಬಾಹ್ಯರೂಪದಿಂದ ಸ್ಪಷ್ಟವಾಗಿ ಹೇಳಿದ್ದರೆ ಬಹಳ ಒಳ್ಳೇಯದಾಗುತಿತ್ತು! ಸರ್. ಒಡ್ವಾಯರರು ಮತ್ತು ಫೋಃ ಹಾಕಿದೊಡನೆ ಓಡಿ ಬರುವ ಡಾಯರರಂಥವರು ಯಾವ ಸಹಕಾರಿತೆಯನ್ನು ಮಾಡಿದ್ದಾರೆ, ಮತ್ತು ಇನ್ನುಮುಂದೆ ಮಾಡಲಿಕ್ಕಿದ್ದಾರೆ? ತಾತ್ಪರ್ಯ "ಪರೋಪದೇಶೇ ಪಾಂಡಿತ್ಯಂ ಸರ್ವೇಷಾಂ ಸುಕರಂ ನೃಣಾಮ್"! ಈ ಮಾತೇ ಹೌದು.

೫ ಪಂಜಾಬ ಪ್ರಕರಣದ ವಿಷಯವಾಗಿ ದಿನೇ ದಿನೇ ಎಷ್ಟು ಹೊಲಸು ಹೊರಗೆ ಬರುತ್ತದೆ ಎಂದರೆ, ಸಭ್ಯರಾದವರಿಗೆ ಅದರ ಸುದ್ದಿಯನ್ನು ಕೇಳಿದೊಡನೆ ವಾಂತಿಯಾದೀತು! ಶ್ರೀಮತೀ ಸರೋಜಿನೀ ನಾಯ್ಡು ಇವರು ವಿಲಾಯತಿಯಲ್ಲಿ ಒಂದು ಉಪನ್ಯಾಸದಲ್ಲಿ ಸೋಲ್ಜರರು ಪಂಜಾಬಿನಲ್ಲಿ ಸ್ತ್ರೀಯರ ವಿರುದ್ಧ ನಡಿಸಿದ ಅನಸ್ವಿತ ಮತ್ತು ಅಸಭ್ಯ ಪ್ರಕಾರಗಳನ್ನು ಉಲ್ಲೇಖಿಸಿದರು. ಮಿ ಮೊಂಟೆಗ್ಯುಗಳು ಈ ಉಲ್ಲೇಖದ ಸ್ಪಷ್ಟೀಕರಣವನ್ನು ಕೇಳಿದ್ದ ಮೇರೆಗೆ ಮಿಸೆಸ್ ನಾಯ್ಡು ಇವರು ಸ್ಪಷ್ಟವಾಗಿ ತನ್ನ ಆಧಾರವನ್ನು ತೋರಿಸಿಕೊಟ್ಟಿದ್ದಾರೆ. ಈ ವಿದುಷಿಯರು ಮ ಗಾಂಧಿಗಳಿಗೆ ಒಂದು ಪತ್ರ ಬರೆದು ಆ ಪತ್ರದಲ್ಲಿ ಅವರು ಹೇಳುತ್ತಾರೇನೆಂದರೆ, ಬ್ರಿಟಿಷ್ ನ್ಯಾಯದೇವತೆಯನ್ನು ನಂಬುವ ದಿವಸಗಳು ಗತಿಸಿ ಹೋದವು. ಹಾಗು ಮಿ ಮೊಂಟೆಗ್ಯುಗಳೆಂದರೆ 'ಮುರಿದ ಕೊಂಬೆ'ಯಾಗಿದ್ದಾರೆ, ಅವರನ್ನು ನಂಬಿ ಯಾರಾದರೂ ಕುಳಿತರೆ ಕುಳಿತವರು ಕೆಳಗೆ ಬೀಳುವುದೆ ಸರಿ! ಶ್ರೀಮತಿ ನಾಯುಡುರವರ ಮಾತಿಗೆ ಬೇರೆ ಟೀಕೆ ಅವಶ್ಯವಿಲ್ಲ.

೬ ಮಿ ಮೊಂಟೆಗ್ಯುಗಳನ್ನು ನಂಬಬಾರದು ಅವರು broken reed' ನಂತಿದ್ದಾರೆ ಎಂದು ಸರೋಜಿನಿ ನಾಯಡು ಇವರು ಸ್ಪಷ್ಟವಾಗಿ ಹೇಳುತ್ತಿದ್ದಾಗ ಅತ್ತ ಅದೇ ಮೊಂಟಗ್ಯು ದೊರೆಗಳನ್ನು ನಮ್ಮ ಕವೀಶ್ವರರಾದ ರವೀಂದ್ರನಾಥ ಟಾಗೋರರವರು ವೈಸರಾಯರನ್ನಾಗಿ ಮಾಡಬೇಕೆಂದು ಅರ್ಜಿಮೂಲಕ ವಿಜ್ಞಾಪನೆ ಮಾಡಿಕೊಳ್ಳುತಿದ್ದಾರೆ. ಮೊಂಟೆಗ್ಯುಗಳನ್ನೆ ಅಪೇಕ್ಷಿಸದರ ಮೇಲಿಂದ ಅವರು ಹಿಂದುಸ್ಥಾನವನ್ನು ಉದ್ಧರಿಸಲು ಅವತರಿಸಿದವರು ಎಂದು ಡೊ ಟಾಗೋರರಾದರೂ ತಿಳಕೊಳ್ಳುವುದಿಲ್ಲ ಎಂದು ನಾವು ನೆನಸುತ್ತೇವೆ. ಪರಂತು ಬೇರೆ ಯಾರಾದರೂ ಒಬ್ಬ ದೊಡ್ಡ ಸೈನ್ಯಪತಿಯು ಈ ಸಂಸ್ಥಾನಕ್ಕೆ ಬರುವುದಕ್ಕಿಂತ ಈ ಪಂಡಿತರು ವಾಸಿ ಎಂದು ಟಾಗೋರರು ಅಥವಾ ಬೇರೆ ಹಿಂದಿಗಳು ನೆನಸಿದರೆ ಅದು ಅಸ್ವಾಭಾವಿಕವಲ್ಲ. ಮಿ ಮೊಂಟೆಗ್ಯುಗಳು ವೈಸರಾಯರಾಗಿ ಬರುವ ಸಂಭವನೀಯವೋ ಹ್ಯಾಗೊ ಇದನ್ನು ಈ ಹೊತ್ತೆ ನಿರ್ಧರಿಸುವುದು ಸಾಧ್ಯವಿಲ್ಲ.

೭ ಮೊಂಟಗ್ಯುಗಳ ವೈಸರಾಯ ಸ್ಥಾನದ ನೇಮಕವು ಈ ಮೇರೆಗೆ ಸಂದಿಗ್ಧವಾಗಿದ್ದರೂ ಲೊರ್ಡ ಸಿಂಹರ ಮತ್ತು ಇತರ ಗವರ್ನರುಗಳ ನೇಮಕವು ಸರಕಾರಿ ಮುಖಾಂತರ ಪ್ರಕಟವಾಗಿದೆ. ಲೊರ್ಡ ಸಿಂಹರು ಅಂಡರ್ ಸೆಕ್ರೆಟರಿಗಳಾದಾಗ ನಾವು ಈ ಬರವಣಿಯನ್ನು ಪ್ರಕಟಿಸಿದ್ದೆವು. ಲೊ ಸಿಂಹರು ಈ ಸ್ಥಾನಕ್ಕೇ ಅಲ್ಲ ಗವರ್ನರಿಯಂಥ ವೈಸರಾಯತನದಂಥ ಮಹಾಸ್ಥಾನಕ್ಕೂ ಕೂಡ ಸರ್ವಥಾ ಪಾತ್ರರಾಗಿದ್ದಾರೆ. ಹಿಂದಿ ಜನರಿಗೆ ಬ್ರಿಟಿಷ್ ರಾಜ್ಯದಲ್ಲಿ ಸಿಕ್ಕಿದ ಇದೇ ಮೊದಲನೆ ಬಹುಮಾನವು. ಲೊ ಸಿಂಹರು ಉತ್ತರೋತ್ತರ ಹೆಚ್ಚಿನ ಜವಾಬದಾರಿಯ ಮತ್ತು ಲೋಕಹಿತದ ಸ್ಥಾನಗಳನ್ನು ಹೊಂದಿ ಸ್ವದೇಶ ಸೇವೆಯನ್ನು ಸಾಧಿಸಲಿ ಎಂದು ಪ್ರಾರ್ಥಿಸುವೆವು. ಮತ್ತು ಈ ಸ್ಥಾನವು ಸಿಕ್ಕಿದ ಬಗ್ಗೆ ನಾವು ಅವರನ್ನು ಅಭಿನಂದಿಸುವೆವು.

೮ ಧಾರವಾಡದ ಕಲೆಕ್ಟರರು ಅಲ್ಲಿಯ ಮುನ್ಸಿಪಾಲಿಟಿಗೆ ಕೆಲವು ದಿವಸಗಳ ಹಿಂದೆ ಒಂದು ಪತ್ರವನ್ನು ಬರೆದಿದ್ದರು. ಲೋಕಮಾನ್ಯ ಟಿಳಕರ ನಿಧನದ ಬಗ್ಗೆ ಸಾಲೆಗಳಿಗೆ ರಜೆ ಕೊಟ್ಟದ್ದು ಕೇವಲ ತಪ್ಪು. ಟಿಳಕರೆಂದರೆ ಪಶ್ಚಾತ್ತಾಪ ಪಡದ ದುಷ್ಕೀರ್ತಿವಂತರಾದ ಅಪರಾಧಿಗಳು. ಇಂಥವರ ಬಗ್ಗೆ ರಜೆ ಕೊಟ್ಟದ್ದು ತಪ್ಪು. ಈ ತಪ್ಪಿಗ ಯೋಗ್ಯ ಕಾರಣಗಳನ್ನು ಕೊಟ್ಟು ಮುನ್ಸಿಪಾಲಿಟಿಯು ವಿಮೋಚನೆ ಮಾಡಿಕೊಳ್ಳದಿದ್ದರೆ ಅದನ್ನು ಯಾಕೆ ಸಸ್ಪೆಂಡ ಮಾಡಕೂಡದು ಎಂದು ಪತ್ರದಲ್ಲಿ ಸೂಚಿಸಿತ್ತು. ಆದರೆ ಧಾರವಾಡದ ಈ ಕಲೆಕ್ಟರರ ದುರ್ದೈವವೇನಂದರೆ ಮುಂಬಯಿ ಸರಕಾರವು ಈ ದೊರೆಗಳ ಕಿವಿ ಹಿಂಡಿ ಅವರಿಂದ ಈ ಅವ್ಯಾಪಾರೇಷು ವ್ಯಾಪಾರ— ಬೇಡ ಕೆಲಸ—ಮಾಡಿದ ಬಗ್ಗೆ ಕ್ಷಮಾಪಣೆಯನ್ನು ಕೇಳಿಸಿದೆ. ಕಲೆಕ್ಟರ ದೊರೆಗಳು ಈಗ ಸಂಪೂರ್ಣವಾದ ಪಶ್ಚಾತ್ತಾಪವನ್ನು ವ್ಯಕ್ತಗೊಳಿಸಿದ್ದಾರೆ. ಈ ಅಪಕೀರ್ತಿಯು ಧಾರವಾಡದ ಸಂಭಾವಿತರಾದ ಕಲೆಕ್ಟರರಿಗ ಗೀತೆಯಲ್ಲಿ ಹೇಳಿದ್ದಂತೆ ಮರಣಾತಿರಿಕ್ತವಾಗದೆ ಇರಲಿಕ್ಕಿಲ್ಲ.

ಮಂಗಳೂರು.

ಮಹಾತ್ಮಾ ಗಾಂಧಿಯವರು ಮತ್ತು ಮೌಲನಾ ಶೌಕತಾಲಿಯವರು ತಮ್ಮೊಡನೆ ಬಂದ ಕೆಲವು ಅನುಯಾಯಿಗಳೊಡನೆ ಇಲ್ಲಿಂದ ಸೇಲಮಿಗೆ ಈ ದಿನ ಬೆಳಗ್ಗಿನ ಮೈಲು ಗಾಡಿಯಲ್ಲಿ ಹೊರಟು ಹೋದರು. ಆಮಂತ್ರಣ ಕಮ್ಮಿಟಿಯ ಹಲವು ಗೃಹಸ್ಥರೂ ಅನೇಕ ವಿದ್ಯಾರ್ಥಿಗಳೂ ಇವರನ್ನು ಬೀಳ್ಕೊಡಲು ರೈಲ್ವೆ ಸ್ಟೇಶನಿಗ ಬಂದಿದ್ದರು.

ಆಮಂತ್ರಣಸಭೆಯಿಂದ ಸಂಗ್ರಹಿಸಲ್ಪಟ್ಟ ವಂತಿಗೆಯಿಂದ ಕಲ್ಲಿಕೋಟೆಯಿಂದ ಇಲ್ಲಿಗೂ ಇಲ್ಲಿಂದ ಸೇಲಮಿಗೂ ಈ ಮಹಾಪುರುಷರಿಗೆ ತಗಲುವ ಪ್ರಯಾಣದ ಖರ್ಚ ಕೊಡೋಣಾದದ್ದಲ್ಲದೆ ಇನ್ನು ಉಳಿಯುವ ಸಿಲುಕು ಹಣದಿಂದ ಒಡವರಿಗೆ ಭಿಕ್ಷೆಯು ಹಂಚಲಾಗುವುದೆಂದು ತಿಳಿಯುತ್ತೇವೆ. ಆದರೆ ಈ ರೀತಿ ಭಿಕ್ಷೆ ಹಂಚುವುದಕ್ಕಿಂತ ವಿಶೇಷ ದ್ರವ್ಯಸಹಾಯದ ಅಗತ್ಯವುಳ್ಳ ಸೆಂಟ್ರಲ್ ಖಿಲಾಫತ್ ಕಮ್ಮಿಟಿಗೆ ಸಿಲುಕಿನ ಹಣವನ್ನು ಕಳುಹಿಸಿಕೊಡುವುದು ವಿಹಿತವೆಂದು ಕೆಲವರ ಸೂಚನೆಗಳಿವೆ.

ಮಹಾತ್ಮಾ ಗಾಂಧಿ ಶೌಕತಾಲಿ ಮೊದಲಾದವರು ಇಲ್ಲಿಗೆ ತಲ್ಪುವ ಒಂದೆರಡು ದಿವಸಗಳ ಮೊದಲು ಇವರು ಕಲ್ಲಿಕೋಟೆಗೆ ಬರುವುದಿಲ್ಲವೆಂತಲೂ ಆದ್ದರಿಂದ ಮಂಗಳೂರಿಗೆ ಬರುವ ಸಂಭವ ಇಲ್ಲವೆಂತಲೂ—ಒಂದು ಸುಳ್ಳುವರ್ತಮಾನದಿಂದ ಹುಟ್ಟಿದ ಸಂಶಯದ ಹೊರತಾಗಿ ಇತರ ಯಾವ ಅಭ್ಯಂತರಗಳಾದರೂ ಇವರ ಆಗಮನಕ್ಕೆ ಇರಲಿಲ್ಲ. ಗೋಳಿಕಟ್ಟೆ ಮೊದಲಾದ ಪಟ್ಟಣದಿಂದ ಮೆರವಣಿಗೆಯು ಹಾದುಹೋಗುವ ಸಂದರ್ಭದಲ್ಲಿ ಏನಾದರೂ ಗಲಾಟೆ ಇತ್ಯಾದಿಗಳು ಉಂಟಾದ ಪಕ್ಷದಲ್ಲಿ ತಾವು ಜವಾಬ್ದಾರರಾಗಿದ್ದೇವೆಂತ ಇಲ್ಲಿಯ ಮ|| ರಾ|| ರಾ|| ನೆಲ್ಲಿಕಾಯಿ ವೆಂಕಟರಾವ್ ಮ|| ರಾ|| ರಾ|| ನರಸಿಂಹ ಮರ್ತು ಬೆಂಡಾರಿ, ಮ|| ರಾ|| ರಾ|| ಹೈಕೋರ್ಟ ವಕೀಲ ಅಮ್ಮೆಂಬಳ ಶ್ರೀನಿವಾಸ ಪೈ, ಮ|| ರಾ|| ರಾ|| ಪುತ್ತೂರು ಮಹಮ್ಮದ ಸಾಹೇಬ, ಮೊದಲಾದ ಆರು ಮಂದಿ ಗೃಹಸ್ಥರು ಇಲ್ಲಿಯ ಅಧಿಕಾರಿಗಳ ಅಪೇಕ್ಷೆ ಮೇರೆಗೆ ಜಾಮೀನು ಪತ್ರಗಳನ್ನು ಬರಕೊಟ್ಟ ನಂತರ ನಿನ್ನೆಯ ಗಾಂಧಿಗಳ ಮೆರವಣಿಗೆಗೆ ಲೈಸೆನ್ಸು ಸಿಕ್ಕಿತೆಂಬದಾಗಿ ತಿಳಿಯುತ್ತೇವೆ.

ಮೆರವಣಿಗೆಯ ನೋಟೀಸುಗಳಲ್ಲಿ ಸೂಚಿಸಿದ ಮಾರ್ಗಗಳಲ್ಲಿ ಬಾರದೆ ಹಂಪನಕಟ್ಟೆಯಿಂದ ಗಣಪತಿ ದೇವಸ್ಥಾನದ ರಸ್ತೆಯ ಮಾರ್ಗವಾಗಿ ರಥಬೀದಿಯಿಂದ ಗೋಳಿಕಟ್ಟೆ ಬಜಾರಿಗಾಗಿ ಹೋಗಿತ್ತು. ಇಲ್ಲಿಯ ವಿದ್ಯಾರ್ಥಿ ಬ್ರಾತೃಸಂಘದ ವಿದ್ಯಾರ್ಥಿಗಳೂ ಇತರೆ ಮಹಮ್ಮದೀಯ ಸ್ವಯಂಸೇವಕರೂ ಎಳೆಂಟು ಸಾವಿರ ಜನಸಮುದಾಯದೊಡನೆ ಮೆರವಣಿಗೆಯು ಹಾದುಹೋಗುವಾಗಲೂ ನಂತರ ಮೈದಾನಿನಲ್ಲಿ ಈ ಜನಸ್ತೋಮವು ಭಾಷಣಗಳ ಬಗ್ಗೆ ಒಟ್ಟು ಕೂಡಿದಾಗ್ಯೂ ಶಾಂತತೆಯನ್ನು ಇಲ್ಲಿಯ ಪೋಲೀಸು ಜವಾನರ ಮತ್ತು ಇನ್ಸಪೆಕ್ಟರುಗಳೊಡನೆ ಬಹಳ ಅಂದವಾಗಿ ಇರಗೊಡಿಸಿದರು.

ಮಹಾತ್ಮಾ ಗಾಂಧಿ ಮೌಲನಾ ಶೌಕತಾಲಿಯವರೊಡನೆ ರೈಲ್ವೆಭಂಡಿಯು ನಮ್ಮ ಜಿಲ್ಲೆಯ ಸರಹದ್ದನ್ನು ಸೇರಿ ಇಲ್ಲಿಗೆ ಬಂದು ತಲ್ಪುವ ತನಕ ಅಂತಾ ಸ್ಟೇಶನ ಗಳಲ್ಲಿ ಜನಸ್ತೋಮವು ಬಂದು ಮಹಾತ್ಮರುಗಳನ್ನು ಬಹುಮಾನಿಸಿದ ವೃತ್ತಾಂತವು ಬಹಳವಾಗಿರುವುದು. ಗ್ರಾಮಪಟೇಲರ ಮೊದಲಾದವರು ಬಂದು ಬಹುಮಾನಗಳನ್ನು ಅರ್ಪಿಸಿದ್ದಲ್ಲದೆ ಕೆಲವು ಸ್ಟೇಶನುಗಳಲ್ಲಿ "ಮಹಾತ್ಮಾ ಗಾಂಧಿಕಿ ಜೈ" ಎಂಬ ಜಯಘೋಷದ ಬದಲಿಗೆ ಸ್ಟೇಶನುಗಳಲ್ಲಿದ್ದ ಪೋಲೀಸು ಜವಾನರುಗಳಿಗೆ ಮುಂಚೆತಪ್ಪ ಈ ಜಯಘೋಷದ ಪ್ರತಿಧ್ವನಿಯು ಈ ಜವಾನರ ಕಂಠಗಳಿಂದಲೂ ಕೇಳಿತು. ಕಾಸರಗೋಡಿನ ಮಹಾಜನರು ತಮ್ಮ ಸ್ಟೇಶನನಲ್ಲಿ ಮಹಾತ್ಮಾ ಗಾಂಧಿಯವರಿಗೂ ಶೌಕತಾಲಿಯವರಿಗೂ ಮಾನಪತ್ರವನ್ನು ಅರ್ಪಿಸಿದರು. ಈ ಆಗಮನದ ಹೆಚ್ಚಿನ ವಿವರವನ್ನು ಇನ್ನೊಂದು ಕಡೆಯಲ್ಲಿ ಮುದ್ರಿಸಿರುತ್ತೇವೆ.

ನಿನ್ನೆ ರಾತ್ರೆ ವರ್ತಕವಿಲಾಸದಲ್ಲಿ ಕೂಡಿದ ಖಾಸಗಿ ಸಭೆಗೆ ಮ ಜ್ಯುಪಟ್ ಜಾಯಿಂಟ್ ನ[illegible] ಮ|| ರಾ|| ವಿ ಮಹಾಬಲ ಹೆಗ್ಗಡೆಯವರೂ ಇನ್ನೂ ಹಲವು ವಕೀಲರೂ ಸಾಹುಕಾರರೂ ಉಡುಪಿ ಕಾರ್ಕಳ ಮುಲ್ಕಿ ಕುಂದಾಪುರಗಳಿಂದ ಬಂದ ಪ್ರತಿನಿಧಿಗಳೂ ಬಂದಿದ್ದರು. ಈ ಸಭೆಯ ವೃತ್ತಾಂತವು ಪ್ರಾರಂಭವಾಗುವ ವೇಳೆ 'ಲ್ಲಾ ಪೋಲಿಸ್ ಸುಪರಿಂಟೆಂಡೆಂಟ್ ಜಿಲ್ಲಾ ಕಲೆಕ್ಟರ ದೊರೆ ಈ ಸಭೆಗೆ ಬರ ಬಹುದೊ ಏನೆಂಬ ಸಂಗತಿಯನ್ನು ವಿಚಾರಿಸಲು ಯಾರನ್ನೊ ಕಳುಹಿಸಿದ್ದರೆಂತಲೂ ಮಹಾತ್ಮಾಜಿಯವರು ಇವರು ಬರಲು ಯಾವ ಆಕ್ಷೇಪವೂ ಇಲ್ಲವೆಂತ ಹೇಳಿದ್ದರಿಂದ ಈ ಅಧಿಕಾರಿಗಳು ಈ ಸಭೆಗೆ ಬರುತ್ತಾರೆಂತಲೂ ಬಂದು ವರ್ತಮಾನವು ಸಭೆಕೂಡಿದೊಡನೆ ಹಬ್ಬಿತ್ತು. ಆದರೆ ಈ ವರ್ತಮಾನಕ್ಕನುಸಾರವಾಗಿ ಈ ಅಧಿಕಾರಿಗಳ್ಯಾರೂ ಸಭೆಗೆ ಬಂದದ್ದಿಲ್ಲ. ಸಭೆಯು ರಾತ್ರೆ 10 1/2 ರ ವರೆಗೆ ಇತ್ತು. ಅನಂತರ ಇಲ್ಲಿಯ ಖಿಲಾಫತ್ ಫಂಡಿನ ಸಮಾಗಮವು ಅಪೇಕ್ಷಿಸೋಣಾದ್ದರಿಂದ ಮಿಕ್ಕ ಸಭಿಕರೆಲ್ಲರೂ ಮೌಲಾನಾ ಶೌಕತಾಲಿ ಮತ್ತು ಮಹಾತ್ಮಾಜಿಯವರ ಅಪ್ಪಣೆಯನ್ನು ಪಡಕೊಂಡು ತೆರಳಿದರು. ಈ ಸಂಸ್ಥಾನದ ಮಿಕ್ಕ ಕೆಲವು ಪ್ರಾಂತಗಳಲ್ಲಿ ಖಿಲಾಫತ್ ಕಮಿಟಿಯವರು ದ್ರವ್ಯಸಹಾಯವನ್ನು ಕೊಟ್ಟಂತೆ ಇಲ್ಲಿಯವರು ಕೊಡಲಿಲ್ಲವಾಗಿ ತಿಳಿಯುತ್ತೇವೆ.

ಬರುವ ಆದಿತ್ಯವಾರ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಸಭಾ ಮಂದಿರದಲ್ಲಿ ಲಾಹೋರಿನ ಪಂಡಿತ ಅಮರನಾಥರು ವೈದಿಕ ಧರ್ಮ"ವೆಂಬುದನ್ನು ಕುರಿತು ಭಾಷಣ ಮಾಡುವರು.

ಮಂಗಳೂರ ಜೊಯಿಂಟ್ ಸಬ ರಿಜಿಸ್ಟ್ರಾರರಾದ ಮ|| ರಾ|| ನಂದಳಿಕೆ ದೇವರಾಯರಿಗೆ ಪಾಲಘಾಟ ಡಿಸ್ಟ್ರಿಕ್ಟಿನ ರಿಜಿಸ್ಟ್ರಾರರಾಗಿ ವರ್ಗವಾಗಿದೆ.

ರಾವ್ ಬಹದ್ದೂರ ಡಾಕ್ಟರ ವರ್ಗಿಸರವರು ಡಿಸ್ಟ್ರಿಕ್ಟ ಬೋರ್ಡ ಮೆಂಬರರಾಗಿ ನೇಮಕವಾದ ಮತ್ತು ರಾ ಕಣ್ಣಾನೂರ ಮಂಜುನಾಥ ಕಮ್ತಿರು ಹೊಸದುರ್ಗ ಇಲೆಕ್ಟೋರಲ್ ಸರ್ಕಲಿನಿಂದ ಪುತ್ತೂರು ತಾಲೂಕುಬೋರ್ಡು ಮೆಂಬರರಾಗಿ ಆದ ಚುನಾವಣೆಯು ಮಂಜೂರಾಗಿ ಬಂದಿದೆ

[illegible] ಜಿಲ್ಲೆಯ [illegible]

ಗಾಂಧಿ ಮತ್ತು ಮೌಲಾನಾ ಶೌಕತಾಲಿ ಇವರ ಆಗಮನ

(ನಮ್ಮ ವರದಿಗಾರರಿಂದ)

ಭರತಖಂಡವು ಅನಾದಿಯಿಂದಲೂ ಧರ್ಮಭೂಮಿಯಾಗಿದೆ [illegible] ಧರ್ಮದ ಮೂಲಧಾರ ಧರ್ಮ ಮತ್ತು ಸತ್ಯವನ್ನು ಸ್ಥಾಪಿಸಲು ಈ ಪುಣ್ಯಭೂಮಿಯಲ್ಲಿ ಅನೇಕ ಅವತಾರಗಳೂ, ಭಕ್ತರೂ, ಋಷಿಗಳೂ ಆಗುತ್ತಿರುವರು. ಪೂರ್ವಕಾಲದಲ್ಲಿ ಇಹಲೋಕದ ಸುಖವನ್ನು ತೊರೆದು ಕಲ್ಲುಲಿಗಳನ್ನು ಧಾರಣಮಾಡಿ, ಯೋಗಾಭ್ಯಾಸದಿಂದ ಮಹತ್ತಾದ ಜ್ಞಾನವನ್ನು ಸಂಪಾದಿಸಿಕೊಂಡ ಋಷಿಗಳು ದೇಶದ ದಿಕ್ಕುದಿಕ್ಕುಗಳಲ್ಲಿ ಸಂಚರಿಸಿ, ಧರ್ಮದ ಮತ್ತು ಸತ್ಯದ ಪ್ರಭೆಯನ್ನು ಜನರಲ್ಲಿ ಬೀರಿ, ಕರ್ತವ್ಯ ಜಾಗ್ರತೆಯನ್ನು ಉಂಟುಮಾಡುತ್ತಿದ್ದರು. ಇಂಥಾ ಮಹಾತ್ಮರು ಒಂದು ಕಡೆಯಲ್ಲಿ ಆಗಮಿಸುವರೆಂದರೆ ಇವರ ಭೇಟಿಯನ್ನೂ ಉಪದೇಶಗಳನ್ನೂ ಪಡೆಯಲು ದಿಕ್ಕುದಿಕ್ಕುಗಳಿಂದ ಕೋಟ್ಯಾಧಿಪತಿಗಳೂ, ಲಕ್ಷಾಧಿಪತಿಗಳೂ, ಭಿಕ್ಷುಕರೂ ಕಿಕ್ಕಿರಿದು ಬರುತ್ತಿದ್ದರು.

ಸಂಚುಗಾರರಾದ ಅಧಿಕಾರಿಗಳ ಉದ್ಧಟತನದಿಂದ ಆದ ಹಿಂದೀ ಜನಾಂಗದ ಮಾನಹಾನಿ ಮತ್ತು ಟರ್ಕಿ ಸಂಧಾನದಿಂದ ಮುಸಲ್ಮಾನ ಧರ್ಮಕ್ಕೆ ತಟ್ಟಿದ ಗಂಡಾಂತರ ಇವೆರಡರ ನಿವಾರಣ ಸಾಧನೆಯ ಮೂಲಮಂತ್ರವನ್ನು ಬೋಧಿಸಲು ಬಂದ ಈ ಮಹಾ ಜ್ಞಾನಿಗಳ ಭೇಟಿಯನ್ನು ಪಡೆಯುವುದಕ್ಕೆ ಈ ಜಿಲ್ಲೆಯ ಎಲ್ಲಾ ಪ್ರಾಂತಗಳಿಂದಲೂ ಜನರು ರಾಶಿ ರಾಶಿಯಾಗಿ ಬಂದಿದ್ದರು. ಮೋಟಾರು ಬಸ್ಸುಗಳಲ್ಲಿ ಸ್ಥಳವು ಸಿಗಲಾರದೆ ಪುತ್ತೂರು ಉಡ್ಪಿ ಮೊದಲಾದ ದೂರವಾದ ಪ್ರಾಂತ್ಯಗಳಿಂದ ಅನೇಕರು ನಡೆದುಕೊಂಡು ಬಂದಿದ್ದರು.

ನಿನ್ನೆ ಮಧ್ಯಾಹ್ನ ಸುಮಾರು ಒಂದೂ ಗಂಟೆಯಿಂದ ರೈಲ್ವೆ ಸ್ಟೇಶನಿನ ಹೊರಪ್ರಾಂತ್ಯಗಳಲ್ಲಿ ಜನರು ಒಟ್ಟು ಕೂಡುತ್ತ ರೈಲ್ವೆ ಬಂಡಿಯು ಸ್ಟೇಶನಿಗೆ ಬರುವಷ್ಟರಲ್ಲಿ ಸುಮಾರು ಆರೇಳು ಸಾವಿರಕ್ಕೆ ಮಿಕ್ಕಿದ ಜನಸ್ತೋಮವು ಸ್ಟೇಶನಿನ ಹೊರಗೆ ಒಟ್ಟು ಸೇರಿತ್ತು. ರೈಲ್ವೆ ಸ್ಟೇಶನಿನಲ್ಲಿ ಜಿಲ್ಲಾ ಸುಪರಿಂಟೆಂಡೆಂಟ್ ದೊರೆಗಳೂ ಹಲವು ಪೋಲೀಸು ಇನ್ಸ್‌ಪೆಕ್ಟರರೂ ಹಾಜರಿದ್ದರು. ಜಾಗೆಯ ಇಕ್ಕಟ್ಟು ವಿಪರೀತವಾಗಿ ಹೋಗಬಹುದೆಂಬ ಅಂಜಿಕೆಯಿಂದ ಸ್ವಯಂ ಸೇವಕರು ಜನಸ್ತೋಮವನ್ನು ಸ್ಟೇಶನು ಸೇರಲು ಬಿಡಲಿಲ್ಲ. ಪ್ಲೆಟ್‌ಫೋರ್ಮಿನಲ್ಲಿ ಆಮಂತ್ರಣ ಸಭೆಯ ಅಧ್ಯಕ್ಷರಾದ ಬಹು ಮಾನನೀಯ ಖಾನ್ ಬಹದ್ದೂರ್ ಹಾಜಿ [illegible] ಹಾಜಿ ಅಬ್ದುಲ್ಲಾ ಸಾಹೇಬರವರು ಕಾರ್ಯದರ್ಶಿಗಳಾದ ಮ. ರಾ. ಎಸ್ ಎಸ್ [illegible] ಮತ್ತು ಮಹಮ್ಮದ್ [illegible] ಸಾಹೇಬರು ಆ ಆಮಂತ್ರಣ ಸಭೆಯ ಇತರ ಗೃಹಸ್ಥರೂ ವಕೀಲರೂ ಸಾಹುಕಾರರೂ ಮೊದಲಾದವರೂ ಉಡ್ಪಿ, ಬಂಟವಾಳ, ಮೂಲ್ಕಿ, ಪುತ್ತೂರು, ಕಾರ್ಕಳ, ಕುಂದಾಪುರ ಮೊದಲಾದ ಕಡೆಯ ಪ್ರತಿನಿಧಿಗಳೂ ಇದ್ದರು. ರೈಲ್ವೆ ಬಂಡಿಯು ದೂರದಿಂದ ಜನರ ಕಣ್ಣಿಗೆ ಕಾಣಿಸುತ್ತಲೆ, ವಂದೇಮಾತರಂ, ಮಹಾತ್ಮಾ ಗಾಂಧೀಕಿ ಜೈ, ಮೌಲಾನಾ ಶೌಕತಾಲೀಕಿ ಜೈ, ಅಲ್ಲಾಹು ಅಕ್ಬರ್ ಮೊದಲಾದ ಜಯಘೋಷಗಳಿಂದ ಕೈತಟ್ಟಿದರು. ಅತಿಥಿಗಳು ರೈಲ್ವೆಬಂಡಿಯಿಂದ ಇಳಿಯುತ್ತಲೇ ಖಾನ್ ಬಹದ್ದೂರ್ ಅಬ್ದುಲ್ಲಾ ಸಾಹೇಬರವರು ಇವರಿಗೆ ಹೂಮಾಲೆಗಳನ್ನು ಹಾಕಿ ಅಲಂಕರಿಸಿದರು. ನಂತರ ರೈಲ್ವೆಸ್ಟೇಶನಿನಿಂದ ಮೆರವಣಿಗೆಯು ಹಂಪನಕಟ್ಟೆಯ ಮಾರ್ಗವಾಗಿ ಗಣಪತಿ ದೇವಸ್ಥಾನದ ರಸ್ತೆ, ರಥಬೀದಿ, ಡೊಂಗರಕೇರಿ, ಕಾರ್‌ಸ್ಟ್ರೀಟ್, ಬಜಾರ ಮಾರ್ಗವಾಗಿ ವರ್ತಕರಿಂದ ರಸ್ತೆ, ಹೂವಿನ ಮಾರ್ಗಗಳಲ್ಲಿ [illegible] ದೇವಾಲಯಗಳಿಂದಲೂ ಸುಸಜ್ಜಿತವಾಗಿ ಕಮಾನುಗಳಿಂದಲೂ ಬಾವುಟಗಳಿಂದಲೂ ಅಲಂಕರಿಸಲ್ಪಟ್ಟಿತ್ತು. [illegible] ವಾದ್ಯಗಳು [illegible] ಇಲ್ಲದೆ ಇದ್ದರೂ ಹಿಂದೂ ಹಾಗೂ ಮುಸಲ್ಮಾನ ಸ್ತ್ರೀಯರೂ ರಾಜಬೀದಿಗಳಲ್ಲಿ ಮೆರವಣಿಗೆಯು ಹಾದು ಹೋಗುವ ಮನೆ ಅಂಗಡಿಗಳ ಬಾಗಿಲು ಉಪ್ಪರಿಗೆಗಳಲ್ಲಿ ಸೇರಿ ದೇಶಭಕ್ತರ ಸಮಾಗಮನವನ್ನು ನಿರೀಕ್ಷಿಸುತ್ತಿದ್ದರು. ಮಹಮ್ಮದೀಯರ ಪವಿತ್ರ ಕ್ಷೇತ್ರ [illegible] ಹಿಂದುಗಳ ನಾಲ್ಕು ಕೋಟಿಗಳ [illegible] ಇಂಥಾ ಮೆರವಣಿಗೆಯು ಈ ಊರಿನಲ್ಲಿ ನಡೆದದ್ದು ಇಲ್ಲ. ಮೆರವಣಿಗೆಯ ಉದ್ದಕ್ಕೂ ಸೇರಿದ ಜನಸ್ತೋಮವು [illegible] ದೊರೆಗಳ ಸಂದರ್ಶನಕಾಲದಲ್ಲಾಗಲಿ ಅಥವಾ ಇತರ ಯಾವ ಉತ್ಸವದಲ್ಲಾಗಲಿ ಕೂಡಿದ್ದಿಲ್ಲವೆಂದು ವೃದ್ಧರು ಹೇಳುತ್ತಿದ್ದರು. ಇದನ್ನು ಹಿಂದೂ ಮುಸಲ್ಮಾನರ ಐಕ್ಯದ ಅದ್ಭುತ ಉದಾಹರಣೆಯೆಂದು ಹಲವರು ಅನ್ನುತ್ತಿದ್ದರು. ಹಾದಿಯಲ್ಲಿ ಮೆರವಣಿಗೆಯು ಅಲ್ಲಲ್ಲಿ ನಿಲ್ಲುತ್ತಾ ದೇಶಭಕ್ತರುಗಳಿಗೆ ಅನೇಕ ಕಡೆಗಳಲ್ಲಿಯ ಗೃಹಸ್ಥರಿಂದಲೂ ವ್ಯಾಪಾರಸ್ಥರಿಂದಲೂ, ಶಾಲೆಗಳಿಂದಲೂ, ಮಠದೇವಸ್ಥಾನಗಳ ಕಡೆಯಿಂದಲೂ, ಮಸೀದಿಗಳ ಸಂಸ್ಥೆಗಳಿಂದಲೂ ಪುಷ್ಪಹಾರಗಳನ್ನು ಸಮರ್ಪಿಸಲಾಯಿತು. ಮನೆಯ ಮೇಲಿಂದ [illegible] ಅಲ್ಲಲ್ಲಿ ಜನರಿಂದ ಪುಷ್ಪವೃಷ್ಟಿಯೂ ಆಗುತ್ತಿತ್ತು.

ಅತಿಥಿಗಳಿದ್ದ ಮೋಟಾರು ಬಂಡಿಯು ವರ್ತಕರ ವಿರಾಮಸ್ಥಳವನ್ನು ಸೇರುತ್ತಲೆ ಮೆರವಣಿಗೆಯು ಅಲ್ಲಿಗೆ ಮುಗಿಯಿತು. ಸುಮಾರು ೬ ಗಂಟೆಗೆ ಸರಿಯಾಗಿ ಮೌಲಾನಾ ಶೌಕತಾಲಿ ಮಹಾತ್ಮ ಗಾಂಧಿ ಮೊದಲಾದವರು ಭಾಷಣಗಳ ಬಗ್ಗೆ ಏರ್ಪಡಿಸಿದ್ದ ಜನರ ಸಭೆ ಸೇರಿದ್ದಲ್ಲಿ ವರ್ತಕರಿಂದ [illegible] ಬಂದರು. ವೇದಿಕೆಯಲ್ಲಿ ಕಟ್ಟಿದ ಸಭಾಧ್ಯಕ್ಷಸ್ಥಾನವನ್ನು ಖಾನ್ ಬಹದ್ದೂರ್ ಅಬ್ದುಲ್ಲಾ ಸಾಹೇಬರವರು ವಹಿಸಿಕೊಂಡು ಮಹಾತ್ಮಜಿ ಮತ್ತು ಶೌಕತಾಲಿಯವರನ್ನು ಪರಿಚಯಿಸಿಕೊಂಡನಂತರ ಗಾಂಧಿಯವರು ತಮ್ಮ ಭಾಷಣದ ಪ್ರಾರಂಭದಲ್ಲಿ ಮೊದಲು ಸ್ವಾಗತ ಉಪಚಾರಗಳನ್ನು ಮಾಡಿದ ಮಂಗಳೂರು ನಿವಾಸಿಗಳನ್ನು ವಂದಿಸಿ, ದೇಹಬಾಧೆಯಿಂದ ತಮಗೆ ನಿಂತುಕೊಂಡು ಮಾತಾಡಲು ಅಸಾಧ್ಯವಾಗಿರುವುದರಿಂದ ಕುಳಿತುಕೊಂಡೇ ಮಾತಾಡಬೇಕಾಗಿ ಬಂದಿರುವುದನ್ನು ಕ್ಷಮಿಸಬೇಕು. ತಮ್ಮ ವಿಚಾರವನ್ನು ಸೂಚಿಸಿದರು. ಮತ್ತು ಭರತಖಂಡವು ಈಗ ಅನೇಕ ಸಂಕಷ್ಟದಲ್ಲಿರುವ ಪ್ರಕರಣಕ್ಕೆ ಕಾರಣ ಖಿಲಾಫತ್ ಪ್ರಶ್ನೆ ಮತ್ತು ಪಂಜಾಬಿನ ಅನರ್ಥ. ಈ ಎರಡು ಮುಖ್ಯ ವಿಷಯಗಳು ಮಾತ್ರ ಜನರ ಮನಸ್ಸಿನಲ್ಲಿ ಬಂಧಿತವಾದವೆಂದು ಸೂಚಿಸಿ, ಸದರಿ ವಿಷಯಗಳ ಭಾಷಣ ಆಡಿದ ಸಲುವಾಗಿ ನಿಶ್ಚಿತರ ಸರಳವಾದ ಇಂಗ್ಲಿಷ ಭಾಷೆಯಲ್ಲಿ ಇವರ ಭಾಷಣವಾಯಿತು.

[illegible] ಇದರಲ್ಲಿ ಹಿಂದೂ [illegible] ಸತ್ಯಾಗ್ರಹಗಳ [illegible] ಎಂಬುದೇ ಮುಖ್ಯ ಸಾಧನೆ. ಯಾವ ತರದ ಅತ್ಯಾಚಾರಕ್ಕೂ ಸಿಕ್ಕದ ಆತ್ಮೀಯ ಬಲದಿಂದಲೇ ಇದನ್ನು ಸಾಧಿಸತಕ್ಕದ್ದು. ಇದರಲ್ಲಿ ಭಗವಂತನ ಪೂರ್ಣ ಸಹಾನುಭೂತಿ ಇದೆ. ಅಸಹಕಾರಿತ್ವ ತತ್ವದ ಕುರಿತು ಹಲವರ ಮತಭೇದಗಳಿದ್ದರೂ, ಅದರಿಂದ ಅತ್ಯಾಚಾರವಾಗಲೊಲ್ಲದೆಂದು ಖಂಡಿತ ಹೇಳ್ವರೆ [illegible] ಭಗವಂತನ [illegible] ಅತ್ಯಾಚಾರವು ಉಪಯೋಗಿಸದಂತೆ ಮಾಡಲಿ. ಸಕಲರೂ ಇದನ್ನು ಕೈಕೊಳ್ಳಲು ಒಂದೇ ಸವನೆ ಆಗಲೊಲ್ಲದಾದರೆ ಹಲವರಾದರೂ ಇದನ್ನು ಸಾಧಿಸಿದರೆ ಅವರಿಂದ ಅವರಿಗೆ ಕೀರ್ತಿಯೂ, ದೇಶಕ್ಕೆ ಸುಖಪ್ರಾಪ್ತಿಯೂ ಖಂಡಿತವಾಗಿ ಆಗ ಬಹುದು ಎಂಬುದನ್ನು ಸೂಚಿಸಿ ಅಸಹಕಾರಿತ್ವದ ಸಾಧನೆಯ ನಾಲ್ಕು ಮಾರ್ಗಗಳನ್ನು ಸೂಚಿಸಿದರು.

ಸರಕಾರದಿಂದ ಬಿರುದಾವಳಿಯ ಹೆಸರುಗಳನ್ನು ಪಡೆದ ಗೃಹಸ್ಥರು ಇವನ್ನು ಸರಕಾರಕ್ಕೆ ಹಿಂದಕ್ಕೆ ಕೊಡತಕ್ಕದ್ದು. ದೇಶವೆಲ್ಲ ಸಂಕಷ್ಟದಲ್ಲಿ ಮುಳುಗಿದ್ದಾಗ ಈ ಬಿರುದುಗಳಿಂದ ಏನ ಪ್ರಯೋಜನ?

ನ್ಯಾಯವಿಧಾಯಕ ಸಭೆಗಳಿಗೆ ಉಮೇದ್ವಾರರಾಗಿ ಎದುರು ಬರಬಾರದು. ಒಂದು ವೇಳೆ ಇವರಿಂದ ಶಾಂತತಪ್ಪಿದವರಿಗೆ ಕೌನ್ಸಿಲುಗಳಿಗೆ ಬರಲು ಎಡೆ ದೊರಕೀತು ಎಂಬ ಶಂಕೆ ಇರುವುದಾದರೆ ಪ್ರೋಟರೇ ಐಕ್ಯರಾಗಿ ಓಟುಗಳನ್ನು ಕೊಡುವುದನ್ನು ನಿಲ್ಲಿಸಿಬಿಟ್ಟರೆ ಈ ಭಾವನೆಗೆ ಆಸ್ಪದವಿಲ್ಲ.

ಸರಕಾರಿ ಮತ್ತು ಸರಕಾರಿ ಸಹಾಯವನ್ನು ಪಡೆಯುವ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವುದನ್ನು ಹೆತ್ತವರು ಬಹಿಷ್ಕರಿಸಬೇಕು.

ವಕೀಲ ವೃತ್ತಿಯಲ್ಲಿದ್ದವರು ಕೋರ್ಟುಗಳಿಗೆ ಹೋಗಿ ವ್ಯವಹರಿಸುವುದನ್ನು ನಿಲ್ಲಿಸತಕ್ಕದ್ದು.

ಅಲ್ಲದೇ ತಮ್ಮ ಸ್ವಾರ್ಥತ್ಯಾಗವನ್ನು ಸೂಚಿಸಲು ಸ್ತ್ರೀಯರೂ ಪುರುಷರೂ ಕಾಲವಿಳಂಬ ಮಾಡದೆ ಒಮ್ಮೆಯೇ ಸ್ವದೇಶಿ ವ್ರತವನ್ನು ಆಚರಿಸತಕ್ಕದ್ದು ಎಂಬುವನ್ನು ಸೂಚಿಸಿದರು. ಈಗ ಸಂದ್ಯಾಕಾಲವು ಪ್ರಾಪ್ತವಾದ್ದರಿಂದ ಮಹಮ್ಮದೀಯರ ನಮಾಜ್ ಪ್ರಾರ್ಥನೆಯ [illegible]

ಬಳಿಕ ಶೌಕತಾಲಿಯವರು ಗದ್ದದ ಸ್ವರದಿಂದ ತಮ್ಮ [illegible] ನ್ನು ಸೂಚಿಸುವ ಭಾಷಣವನ್ನಾಡಲು ಪ್ರಾರಂಭಿಸಿದರು. ಇವರ ಮುಖ್ಯ ಅಂಶವೇನಂದರೆ —

ಮಹಮ್ಮದೀಯರ ಧರ್ಮರಕ್ಷಣೆಯನ್ನು ಸಾಧಿಸಬೇಕೆಂದ ಸಾವಿ ಸರಕಾರವನ್ನು ಯುದ್ಧದಲ್ಲಿ ಸಹಾಯ ಮಾಡಲು ಇಂದಿಗೂ ಸ್ವಾತಂತ್ರ್ಯದಿಂದ ಕೇಳಬೇಕಿತ್ತು. ಹೀಗೆ ಕೇಳುತ್ತಿದ್ದರೆ ಇಂದಿನ ತೊಂದರೆಗಳಿಗೆ ಯಾವ ಕಾರಣವೂ ಇರುತ್ತಿರಲಿಲ್ಲ. ಆದರೆ ಅಂತಹ ಕಾರ್ಯಕ್ಕೆ ಬೆಂಬಲವಿಲ್ಲದೆ [illegible] ಮುಂದಿನ ಪ್ರಯತ್ನಗಳನ್ನು ನಡೆಸಿದ ಖಿಲಾಫತ್ ಪ್ರಶ್ನೆಯನ್ನು ಯೋಗ್ಯರೀತಿಯಲ್ಲಿ ನಿರ್ವಹಿಸಲು ಸ್ವಧರ್ಮ ಸ್ವದೇಶಭಿಮಾನ ಪ್ರಭುಗಳಿಗೆ ಬಿನ್ನವಿಸಿಕೊಂಡರೂ [illegible] ರಾಜಕೀಯ ಪಂಡಿತರ ಮುಂದಿಡಲು ತನ್ನ ಸಹಾಯ [illegible] ಕಳುಹಿಸಲ್ಪಟ್ಟರು. ರಾಜಕೀಯ ಪಂಡಿತರ [illegible] ಇಟಲಿಯವರೂ ಸಹಾನುಭೂತಿಯಿಂದ [illegible] ಬ್ರಿಟಿಷ [illegible] ಅದು ಅಲ್ಲಾ ಸಿದ್ಧಿಯಾಗಲಿಲ್ಲ. ಈಗ ನಿನ್ನ ಸಹಾಯದ [illegible] ಅಲ್ಲಿಯ ಈ ವಿಚಾರವನ್ನು ಸಾಧಿಸಲು ಅಮೇರಿಕಕ್ಕೆ ಹೋಗಿದ್ದರೆ [illegible] ಇದರಿಂದ ಈ ಕುರಿತು ನಾವು ಪೂರ್ಣ ಪ್ರಯತ್ನಗಳನ್ನು ಹೆಚ್ಚಿನ ಅಲೋಚನೆಯನ್ನು ಮಾಡಿದ್ದೇವೆ ಎಲ್ಲಾ ನಿರೀಕ್ಷೆಗಳೂ ಕೆಡಿಸಿ ಧರ್ಮಬೋಧನೆಯು ಮುಖ್ಯ ಆಧಾರವಾದ ಮುಸಲ್ಮಾನರಲ್ಲಿ ಜಹಾದ್ ಹಿಜರತ್ ಎಂಬ ಎರಡು ಮಾರ್ಗಗಳು ಕಾಣುತ್ತವೆ. [illegible] ವಿರೋಧಿಗಳನ್ನು [illegible] ಅಥವಾ [illegible] ವಿರೋಧವಾದ [illegible] ಅತ್ಯಾಚಾರ ಹೊಂದುವುದು ಎರಡನೆಯದು. ಆದರೆ ಹೀಗೆ ಅಸಂಖ್ಯ [illegible] ಲ್ಲದ [illegible] ಹೊಂದುವ ನಿಶ್ಚಯ [illegible] ಈ ದಿಕ್ಕಿನಿಂದ ಸ್ವಾತಂತ್ರ್ಯವನ್ನು [illegible] ಮಹಾತ್ಮಾ ಗಾಂಧಿಗಳು ಎಲ್ಲರಿಗೂ ಎರಡು ಅಸಹಕಾರಿತ್ವವನ್ನು ಬೋಧಿಸಿದ್ದಾರೆ. ಅಂತೆಯೇ ಕೆಲವು ಜನರಸ್ತ [illegible] ಈ ಅಸಹಕಾರಿತ್ವ ವ್ರತವನ್ನು ನನ್ನ [illegible] ಪ್ರಾರಂಭಿಸಿದ್ದೇನೆ. ಈಗ ನಾವು ಸ್ವಾತಂತ್ರ್ಯಗಳಾಗಿದ್ದೇವೆ. ಯಾವತರದ [illegible] ಹೇಸಲೂ ಕೈ ಎತ್ತ [illegible] ಹೊಣೆಯ [illegible] ನಂತರ, ಇಂದಿನ ಮುಸಲ್ಮಾನರಲ್ಲಿ [illegible] ಇದರಿಂದ ಹಿಂದೂಗಳಿಗೆ ಭಾಧೆ [illegible] ಸ್ವರೂಪ [illegible] ಮುಸಲ್ಮಾನರ ಧರ್ಮರಕ್ಷಣೆ [illegible] ಗಳು ಭಂಗವಾಗದಂತೆ ಸಾಧಿಸಲು ಹಾದಿಯಾಗುವುದೆಂದೂ ಕಂಡು ನಂತರ ಮಹಾತ್ಮಾ ಗಾಂಧಿಗಳು ಮುಸಲ್ಮಾನರ ಪಕ್ಷದಲ್ಲಿ ಸಮಭಾಗಿಗಳಾದುದುದಕ್ಕೆ ಮುಸಲ್ಮಾನರೆಲ್ಲರೂ ಇವರ ಬಗ್ಗೆಯ ನನ್ನ ನಿವೇದನೆ [illegible] ಭಿನ್ನವಿಸಿಕೊಂಡರು. ಕೊನೆಗೆ ಮಹಮ್ಮದೀಯರೆಲ್ಲರೂ ಧರ್ಮರಕ್ಷಣೆಗಾಗಿ ಅಸಹಕಾರಿತ್ವವನ್ನು ಅಗತ್ಯವಾಗಿ ಅವಲಂಬಿಸಬೇಕಾಗಿಯೂ, ಇದರಿಂದ ಗುರು ಮಹಮ್ಮದರಿಗೂ ಕೂಡ ಸಂತೋಷವಾಗುವುದಾಗಿ ಸೂಚಿಸಿ, ತಮ್ಮ ಭಾಷಣವನ್ನು ಸಮಾಪ್ತಿಗೊಳಿಸಿದರು. ನಂತರ ತಂಜಾವೂರಿನ ಒಬ್ಬ ಮಹಮ್ಮದೀಯ ಗೃಹಸ್ಥರು ಹಿಂದುಸ್ಥಾನಿ ಭಾಷೆಯಲ್ಲಿ ಭಾಷಣ ಮಾಡಿದಾಗ ಕಡೆಗೆ ಮ. ರಾ. ವಕೀಲ ಗಂಗೊಳ್ಳಿ ಕೃಷ್ಣರಾಯರಿಂದ ಪುರಜನರ ಪರವಾಗಿ ಈ ದೇಶಭಕ್ತರಿಗೆ ಧನ್ಯವಾದಗಳನ್ನು ಅರ್ಪಿಸಿದ ಬಳಿಕ ಸಭೆಯು ಮುಕ್ತಾಯಗೊಂಡಿತು. ಈ ಸಭೆಯ ನಂತರ ವರ್ತಕರವಿರಾಮಸದಲ್ಲಿ ಖಾಸಗಿ ಭೇಟಿಗಳು ನಡೆದುವು.

ಇಂದಿನ ಪ್ರಾತಃಕಾಲದ ರೈಲ್ವೆಬಂಡಿಯಲ್ಲಿ ಗಾಂಧಿಗಳು ಶೌಕತಾಲಿ ತನ್ನ ಇದ್ದರು ವ ಗಂದಿರು ಮತ್ತು ಇತರ ಅನುಯಾಯಿಗಳೊಡನೆ ಕಲಿಕೋಟೆಗೆ ಪ್ರಯಾಣಬೆಳೆಸಿದರು. ಇವರು ಹೊರಟಾಗ ಜನರ ಇನಿದ್ದಂದ ಮ. ರಾ. ಪುರುಷೋತ್ತಮರು ಶೆಟ್ಟಿ ಅತಿಥಿಗಳಾಗಿ ವರ್ತಕರವಿರಾಮದಲ್ಲಿ ಉಳಕೊಂಡಿದ್ದರು.

[illegible] ಕಾಲುವೆ

[illegible] ತೋಟಗಾರಿಕೆ ಪದ್ಧತಿಯಲ್ಲಿ [illegible] ಆಗಾಗ. ಸರಕಾರದವರಿಗೆ [illegible] ಅಲ್ಲಲ್ಲಿ ಜನರು ತಮ್ಮ ಮನೋರಥವನ್ನು [illegible] ಯಾವ ಸುಧಾರಣೆಗಳಿಗೆ [illegible] ದಲ್ಲಿ ಸಲ್ಲಿಸಿದ ಬೇಡಿಕೆ [illegible] ಮೊಂಬರೂ [illegible] ಗೃಹಸ್ಥರೂ, ಮದ್ರಾಸಿನ [illegible] ಕೊಳ್ಳ ಸಾಹೇಬರ ಸಮಾಗಮವಾಗಿದರು. [illegible] ಹೇಳಿದ ಮಾತುಗಳ ಸಾರಾಂಶವನ್ನು ಈ ಕೆಳಗೆ ಕೊಟ್ಟಿರುವವು:

ನಿಜಸ್ಥಿತಿಯನ್ನು ಆಗಿಂದಾಗ ಜನರು ಮುಂದಿಡಲಿ, ಇಲ್ಲದೇ ಬಂಗ್ಲಿ ಕಾಲುವೆಯ ಮೇಲೆ ಆಸಕ್ತಿಯು ಮತ್ತು ನಿರಾಸಕ್ತಿಯ ಅಲೋಚನೆಯು ಕಾರಣವಾಯಿತ್ತೆಂದು ಹೇಳಿ, ಡಿ. ಕೊಳ್ಳರು ಮೊದಲು ಬಂಗ್ಲಿ ಕಾಲುವೆಯ ಆಡಳಿತೆಯಲ್ಲಿರುವ ಸರಕಾರಿ ಕಾಲುವೆಗಳ ವಿಸ್ತಾರವನ್ನು ವರ್ಣಿಸಿದರು. ಮದ್ರಾಸು ಸಂಸ್ಥಾನದಲ್ಲಿ ಒಟ್ಟಿಗೆ ೧೮೦೦೦ಕ್ಕೆ ಮೇಲ್ಪಟ್ಟು ೧೯೦೦೦ಕ್ಕೆ ಕಡಿಮೆಯಾದ ಚದರ ಮೈಲು ವಿಸ್ತಾರದ ಸರಕಾರಿ ಕಾಲುವೆಗಳ ಸ್ಥಿತಿ ಗ್ರಾಮಪಂಚಾಯತುಗಳ ಆಡಳಿತೆಯಲ್ಲಿ ೧೪೦೦ ಚದರ ಮೈಲು ವಿಸ್ತಾರವುಳ್ಳ ಇವೆ. ಇವುಗಳು ಗೋಚರವಾಗಿ ಮಾತ್ರ ಅನುಕೂಲವಾದವುಗಳು. ೪೪೦ ಚದರ ಮೈಲು ಈಗ ಕೃಷಿಗೋಸ್ಕರ ಜನಕೆಗೆ ಒಪ್ಪಿಸಿಕೊಡುವಂತೆ ಕಲಮು ನಡೆದಿದೆ. ೧೩೦೦೦ ಚದರ ಮೈಲು ವಿಸ್ತಾರದ ಕಾಡುಗಳು ಬೆಟ್ಟದ ತಪ್ಪಲಿನಲ್ಲಿವೆ. ಇವುಗಳಲ್ಲಿ ಬಿಟ್ಟರೆ ಬರೆ ೩೦೦೦ ಅಥವಾ ೪೦೦೦ ಚದರ ಮೈಲು ವಿಸ್ತೀರ್ಣವನ್ನು ಮಾತ್ರ ಗ್ರಾಮಗಳಿಗೆ ಸಮೀಪವಾಗಿದ್ದು ಹಳ್ಳಿಗರ ಪ್ರಯೋಜನಕ್ಕೆ ಸಿಗಬಹುದು. ಗುಡಿಗುಡಿಸಲುಗಳಿಗೆ ಬೇಕಾದ ಚಿಲ್ಲರ ಮರಮುಟ್ಟು, ಕಟ್ಟಿಗೆ, ಬಿದಿರು ಕಡ್ಡಿ, ಸೊಪ್ಪುಗೊಬ್ಬರ ಮತ್ತು ಜಾನುವಾರ ಮೇವು ಇಷ್ಟು ಸೌಕರ್ಯಗಳು ಇದರಿಂದ ಸಿಗಬೇಕಾಗಿದೆ. ಈಗ ಜನಗಳ ಆಕ್ಷೇಪವಿದ್ದರೆ ಇವು ಸ್ಥಳದ ಆಡಳಿತೆಯ ವಿಷಯವಾಗಿ ಮಾತ್ರ ಇರಬೇಕು ಎಂದು ಮಿ ಕೊಳ್ಳರ ಹೇಳಿಕೆ.

ಮೂವತ್ತು ಯಾ ನಾಲ್ವತ್ತು ವರ್ಷಗಳ ಹಿಂದೆ ಈ ಕಾಡುಗಳನ್ನು ಸರಕಾರದ ಇಲಾಖೆಯ ಕೈಕೆಳಗೆ ಇಡುವಾಗ ಪ್ರಾರಂಭದಲ್ಲಿ ಮತ್ತು ಇತರ ಸರಕಾರಿ ಭೂಮಿ ಸ್ಥಳಗಳಿಂದ ಜನಗಳ ಅನುಕೂಲತೆಗಳನ್ನು ಯಥೇಷ್ಟವಾಗಿ ಪೂರೈಸಬಹುದೆಂದು ಸರಕಾರದ ಅಭಿಪ್ರಾಯವಿತ್ತು. ಆದರೆ ಈಗ ೨೦ ಯಾ ೩೦ ವರ್ಷಗಳೊಳಗೆ ಅಂಥಾ ಸ್ಥಳದಲ್ಲಿ ಬೆಳೆದ ಕಾಡನ್ನು ತೀರಾ ಜನಗಳು ಧ್ವಂಸ ಮಾಡಿದ್ದಾರೆ ಎಂದು ಸರಕಾರದವರು ತಿಳಿದಿರಲಿಲ್ಲ. ಪ್ರಸ್ತುತಸ್ಥಿತಿಯಲ್ಲಿ ಆ ಸ್ಥಳವು ಬರಿದಾದ್ದರಿಂದ ಜನಗಳ ರಿಜರ್ವ ಕಾಡುಗಳ ಸಹಾಯ ನಿರೀಕ್ಷಿಸಬೇಕಾಗಿ ಬಂದಿದೆ. ಈ ಕಾರಣದಿಂದ ಮೊದಲೇ ಸಾಕಾಗಿದ್ದ ಈ ಸರಕಾರಿ ಕಾಡುಗಳ ಮೇಲೆ ಹೆಚ್ಚಿನ ಜವಾಬ್ದಾರಿಗಳು ಬಂದಿವೆ ಎಂದು ನಾಮದಾರ ಕೊಳ್ಳರು ವಿವರಿಸಿದರು.

ನಾಮದಾರ ಕೊಳ್ಳರ ಅಂದಾಜು ಮೇರೆಗೆ ಸರಕಾರಿ ರಿಜರ್ವ ಕಾಡುಗಳಲ್ಲಿ ಬಹಳ ವರ್ಷಕ್ಕೆ ಅರ್ಧ ಟನ್ನಿಗಿಂತ ಹೆಚ್ಚಿನ ಬೆಳವಣಿಗೆಯು ಸೊಪ್ಪು ಕಟ್ಟಿಗೆ ಕೂಡಾ ಒಂದು ಎಕ್ರೆಯಲ್ಲಿ ಆಗುವುದಿಲ್ಲ; ಅಂದರೆ ಒಂದು ಎಕ್ರೆ [illegible] ಕಾಡನ್ನು ಕಡಿದಾಗ ೧೦ ಟನ್ ಕಟ್ಟಿಗೆ ಸೊಪ್ಪು ಸಿಕ್ಕರೆ ಸಿಗುವುದಾದರೆ ಆ ೧೦ ಟನ್ ಪುನಃ ಬೆಳೆಯಲಿಕ್ಕೆ ೨೦ ವರ್ಷಗಳ ಕಾಲ ಹಿಡಿಯುತ್ತದೆ.

ಈ ರೀತಿ ನಿಧಾನವಾದ ಬೆಳವಣಿಗೆಯನ್ನು ಇನ್ನೂ ಹೆಚ್ಚಿಸಲಿಕ್ಕೆ ಮಾಡಿದ ಪ್ರಯತ್ನಗಳು ಮಣ್ಣಿನ ಗುಣದಿಂದ ನಿಷ್ಫಲವಾಗಿವೆ. ಎಂತಲೂ ೩೦ ವರ್ಷಗಳ ಕೆಳಗೆ ಈ ಕಾಡುಗಳ ಸಂರಕ್ಷಣೆಯ ಭಾರವನ್ನು ಸರಕಾರದವರು ವಹಿಸಿಕೊಳ್ಳುವಾಗಲೆ ಅವು ಬಹಳ ಹೀನ ಸ್ಥಿತಿಯಲ್ಲಿದ್ದು ಅನಂತರ ಅವುಗಳಿಂದ ಜನಗಳು ಕೇಳುವ ಸೌಕರ್ಯಗಳ ಸಮುದಾಯವು ಹೆಚ್ಚುತ್ತ ಬಂದು ಅವು ಕುಗ್ಗಿಕೊಂಡಿವೆ ಎಂತಲೂ ಮಣ್ಣಿನ ಗುಣ ನಿಸ್ಸಾರತರವಾಗಿದ್ದ ಕಾರಣ ಬಹಳ ಪ್ರಯತ್ನ ಪಟ್ಟರೆ ಒಂದು ಎಕ್ರೆಯಲ್ಲಿ ೧ ಟನ್ನಿನಷ್ಟು ಸೊಪ್ಪು ಬೆಳೆಯನ್ನು ಒದಗಿಸಿಕೊಳ್ಳುವುದಕ್ಕೆ ಮಾತ್ರ ಸಾಧ್ಯವಾದೀತೆಂತಲೂ ಮಿ ಕೊಳ್ಳರು ಸ್ಪಷ್ಟವಾಗಿ ಹೇಳಿದರು.

ಪಶ್ಚಿಮ ಕರಾವಳಿಯಲ್ಲಿ ವರ್ಷಕ್ಕೆ ೧೫೦ ಇಂಚಿನಷ್ಟು ಮಳೆ ಬೀಳುವಲ್ಲಿ ಸಹ ವರ್ಷಕ್ಕೆ ೨ ಟನ್ನಿಗೆ ಮಿಕ್ಕ ದರ ಎಕ್ರೆಯ ಬೆಳವಣಿಗೆಯು ಇರ ಪುದಿಲ್ಲ. ಇಲ್ಲಿ ಕೆಲವು ಮರಗಟ್ಟು ೧೫೦ ಫೀಟು ಎತ್ತರಕ್ಕೆ ಬೆಳೆಯುವುದಿದ್ದರೂ ಒಟ್ಟಾರೆ ಬೆಳವಣಿಗೆಯು ವಿಶೇಷವಾಗಿಲ್ಲ. ಹಾಗಿರುವಾಗ ಪೂರ್ವ ಕರಾವಳಿಯಲ್ಲಿ ಮತ್ತೂ ನಿಸ್ಸಾರವಾಗಿ ಮಳೆಯೂ ಕಡಿಮೆ ಇದ್ದಾಗ ಗಿಡಗಳು ಹುಲುಸಾಗಿ ಬೆಳೆಯದಿರುವುದು ಆಶ್ಚರ್ಯವಲ್ಲ ವೆಂದು ಮಿ ಕೊಳ್ಳರ ಅಭಿಪ್ರಾಯ.

ಸರಕಾರಿ ಕಾಡುಗಳಲ್ಲಿ ಗೋಚರವಾಗಿನ ಎಡೆ ಕೊಡುವ ವಿಷಯವಾಗಿ ಅವರ ತುಂಬಾ ಆಕ್ಷೇಪವಿದೆ. ಈ ತಗಾದೆಯು ಈ ದೇಶದಲ್ಲಿ ಅಲ್ಲದೆ ಕಾಡುಗಳನ್ನು ಬೆಳಸುವ ಅನ್ಯ ದೇಶಗಳಲ್ಲಿ ಎಲ್ಲೆಯೂ ಇಲ್ಲವಂತೆ. ಜಾನುವಾರುಗಳ ಮೇವಿನಲ್ಲಿ ಮತ್ತು ಮರಮಟ್ಟು ಚೆನ್ನಾಗಿ ಬೆಳೆಯುವುದಿಲ್ಲವೆಂದು ಇತರ ದೇಶದವರು ತಿಳಕೊಳ್ಳುವರಂತೆ. ಮದ್ರಾಸು ಸಂಸ್ಥಾನದ ಒಂದು ಜಿಲ್ಲೆಯ ಜಾನುವಾರುಗಳಿಗೆ ಈ ಕಾಡುಗಳು ಆಧಾರವಾಗಿ ಬೇಸಗೆಯಲ್ಲಿ ಕೊಡುತ್ತಿವೆ. ಈ ಜಾನುವಾರುಗಳು ಬೆಳೆದು ಹಸಿ ಎಲ್ಲವನ್ನು ತಿನ್ನುವುದಕ್ಕೆ ಹಾಳು, ಎಳೆ ಚಿಗುರುಕೊನೆಗಳನ್ನು ಮುರಿದು ನಾಶಮಾಡುವುದರಿಂದ ಕಾಡುಗಳು ಬೆಳೆಯುವುದಿಲ್ಲವಂತೆ. ಈ ಜಾನುವಾರುಗಳ ಮೇವಿನ ಸಲುವಾಗಿ ಬೆಳೆದ ಮಿಡಿಗಳನ್ನು ಕಡಿಯುವರು. ಹುಲ್ಲು ಒಣಗಿ ಹೋಗಿ ಅವಕ್ಕೆ ಬೆಂಕಿ ಹಾಕಿ ಮುಂದಿನ ವರ್ಷಕ್ಕೆ ಒಳ್ಳೆ ಹುಲ್ಲು ಪಡೆಯುವ ಯತ್ನಿಸುವರು. ಇದರಿಂದಲೂ ಗಿಡಗಳು ಕೆಡುವವು. ಕನ್ನಡದ ಕೆಲವು ಜಿಲ್ಲೆಗಳಲ್ಲಿ ಕಾಡುಗಳ ಬೆಳವಣಿಗೆಗೆ ಹಾನಿ ತಂದಿದೆ ಎಂದೂ ಎಂಥ ಕಾಡುಗಳಲ್ಲಿ ಪ್ರಯೋಜನಕ್ಕೆ ಬರುವ ತರದ ಮರಮುಟ್ಟು ಬೆಳೆಯುವುದೇ ಇಲ್ಲವೆಂದು ನಾಮದಾರ ಕೊಳ್ಳರು ಹೇಳುತ್ತಾರೆ.

(ಇನ್ನೂ ಇದೆ)

[illegible]

ಸಭೆ ... ಇದರ ಹಾವಳಿಯು ... ತಿಳಿಸು ವರು.

ಗ್ರಾಮ ಸಭೆ.

... ಕುಟುಂಬದಲ್ಲಿ ಮರಣವಪ್ಪಿದ ಆದೇ ... ಮರಣಗಳು ಇರುವದಲ್ಲದೆ ಹೆಚ್ಚಿನ ಕಷ್ಟಗಳು ಇರುವ ...

... ಹಿಂದೂಸ್ಥಾನದವರಾಗಿ ಹೆಚ್ಚಿನ ... ಎಂಬುದಕ್ಕೆ ಅನುಮಾನವೇ ಇಲ್ಲ

... ದಿನಹರಣ ಮಾಡಿ ... ತಾರೀಕು ... ಧರ್ಮ ... ಬರಬೇಕಾಗಿ ...

... 15—8—'20	ರಾಮಚಂದ್ರಯ್ಯ ಕೀಲಾರು ಎಸ್. ಪಿ ದುಗ್ಗಪ್ಪ Kepu alias Utheya ಪಟೇಲ ರಾಮಪ್ಪನ ರುಜು

ಪಟೇಲರ ವಿಷಯವಾದ ಸೂಚನೆಗಳು.

(ಕಳೆದ ಸಂಚಿಕೆಯಿಂದ ಮುಂದರಿಸಿದ್ದು)

... ಹಿಂದೆ ಆಗ, ... ಪ್ರಕಾರ ವರ್ಷಾವಧಿ ಸಂಬಳವು ... ಇದು ಯಾವದರ ಪ್ರಕಾರವೂ ... ನಂತರ ... ಸಂಬಳ ... ಸ್ವಭಾವದ್ದಾಗಿಯೂ ಇತ್ತು ... ತಾಲೂಕಿನಲ್ಲಿ ... ಕೆಲಸದ ... ಅಧಿಕಾರ, ... ಗೌರವ ... ನಡವಳಿಗಳಲ್ಲಿಯೂ ... ಮಾತ್ರವಲ್ಲ ಪಟೇಲರ ... ಕೆಲಸ ... ಪಟೇಲರಿಗೆ ಕೆಲಸ ... ಗೌರವಾರ್ಥವಾಗಿಯೇ ಕೆಲಸಮಾಡುವವರಾದದರಿಂದ ಪಟೇಲರಿಗೆ ಸಂಬಳ ... ಗೌರವಾರ್ಥವೆಂತಾದರೆ ... ವರ್ಷಾವಧಿಗೆ ... ವರ್ಷಾವಧಿಯಿಂದ

[illegible]

... ಇತರ ಒಪಿಸಿರೆ ಅಧೀನರಂತೆ ನಡೆಸಬೇಕು ... ಭಾವಿಸುವದಾದರೆ ... ಕಡಿಮೆಯಾಗದಷ್ಟು ... ಕೊಡಿಸಬೇಕಾದೀತು

ಗ್ರಾಮಕ್ಕೆ ಸರಕಾರ ನೌಕರರು ಸರ್ಕೀಟಿಗೆ ಬಂದರೆ ಅವರಿಗೆ ಅಗತ್ಯ ಇರುವ ದಿಸ್ತು ಸರಬರಾಯಿ ಜಿನಸುಗಳು ಒದಗಿಸಿಕೊಡುವ ಪೂರ್ಣ ಜವಾಬುದಾರಿ ಪಟೇಲರ ಮೇಲೆ ಹೊಂದಿ ಇರುಂಟು ಎಂಬ ಪದ್ಧತಿ ಈಗಲೂ ನಡೆಕೊಂಡುಬರುತ್ತದೆ ಇದರಿಂದ ಪಟೇಲರಿಗಿರುವ ಸಂಕಷ್ಟಗಳು ಇದ ರಲ್ಲಿ ವಿವರಿಸುವಂಥಾದ್ದು ಯುಕ್ತವಲ್ಲ ಈಗ ಪ್ರತಿ ಹಳ್ಳಿಗಳಲ್ಲಿಯೂ ಅಂಗಡಿಗಳು ಇರುತ್ತವೆ ಅವರಿಗೆ ಬೇಕಾಗುವ ಸಾಹಿತ್ಯಗಳನ್ನು ಅಂಗಡಿ ಗಳಿಂದ ಅವರೇ ತರಿಸಿಕೊಳ್ಳಬಹುದು ಅಂಗಡಿಗಳಿಲ್ಲದಿರುವ ಊರು ಗಳಿಗೆ ಹೋಗುವಾಗ್ಗೆ ಅಲ್ಲಿಗೆ ಬೇಕಾಗುವ ಸಾಹಿತ್ಯಗಳನ್ನು ಹೆಡ್ ಕ್ವಾರ್ಟರಿ ನಿಂದ ಹೊರಟುಬರುವಾಗ್ಗೆ ತರಲೂ ಬಹುದು ಫಕತ್ತು ಹಾಲು ವ ಕಟ್ಟಿಗೆ ಹಾಗೆ ತರಲಿಕ್ಕೆ ಸಾಧ್ಯವಿಲ್ಲದ್ದರಿಂದ ಅದು ಮಾತ್ರ ಉಗ್ರಾಣಿ ಮುಖಾಂತರ ತರಿಸಿಕೊಂಡ ಗ್ರಾಮ ಬಿಟ್ಟುಹೋಗುತ್ತಾ ಅದರ ಮೌಲ್ಯ ಕೊಟ್ಟುಹೋ ಗಲೂ ಬಹುದು ವಿನಾ ಸರಬರಾಯಿ ಒದಗಿಸಿಕೊಡುವ ಜವಾಬ್ದಾರಿ ಪಟೇ ಲರ ಮೇಲೆ ಇರಲೇ ಕೂಡದೆಂತ ನಾವು ಭಾವಿಸುತ್ತೇವೆ

ಪಟೇಲರು ಯಾವಾಗಲೂ ಸರಕಾರ ಹಣ ವಸೂಲುಮಾಡಿ ಅದನ ದಲ್ಲಿಟ್ಟುಕೊಳ್ಳುವವರಾದ್ದರಿಂದಲೂ ಹಾಗೆ ವಸೂಲುಮಾಡುವ ಹಣ ಭದ್ರತ ಯಿಂದ ತಾಲೂಕು ಖಜಾನೆಗೆ ಕಳ ಹಿಸುವ ಜವಾಬುದಾರಿ ಪಟೇಲರ ಮೇಲೆ ಇರುವುದರಿಂದ ಸಹಾ ಪ್ರತಿ ಒಬ್ಬ ಪಟೇಲಗೆ ಸರಕಾರದಿಂದ ಒಂದೊಂದು ಕೋವಿ ಒದಗಿಸಿಕೊಟ್ಟು ಅದನ್ನು ಇಟ್ಟುಕೊಳ್ಳುವ ಬಗೆ ಅಗತ್ಯವಾಗಿ ಲೈಸನ್ಸ ಕೊಡಲೇ ಬೇಕು ವ ಅಂಥಾ ಕೋವಿ ತಾಲೂಕಿಗೆ ಇಸಾಲು ಕೊಂಡುಹೋಗುತ್ತಾ ಕಳಿಯಾರಿ ಯಾನೆ ಉಗ್ರಾಣಿ ಉಪಯೋಗಿಸಿಕೊಳ್ಳುವ ಹಾಗೆ ಆಗಲೂ ಬೇಕು

Casuarina Plantation for sale.

Casuarina, cocoanut and other plantations on the seashore one compact block of 37 57 acres assessed at as 8 per acre comprised by Patta No 287 S Nos $\frac{99}{3}$ $\frac{138}{2\&1B}$ & 214 in West Tonse Village 5 miles North West of Udipi between Malpe and Hangarkatta Casuarina trees were planted between 1905 and 1906 with a decent tiled bungalow and 2 tenants houses in the centre A central place for fish guano factory and trade

Sale price plantation with land Rupees 20,000 casuarina trees only Rs 15,000 or approximate offer

For further particulars apply to —

A P Fernandes,
Hildalev lle Ur a Post
(S CANARA)

ಮಾರಾಟಕ್ಕಿದೆ.

ದಕ್ಷಿಣ ಕನ್ನಡಾ ಜಿಲ್ಲಾ ಉಡುಪಿ ತಾಲೂಕು ಪಡು ತೋನ್ಸೆ ಗ್ರಾಮದ ಹುಜ್ಜರ ಬೆಟ್ಟಿನಲ್ಲಿರುವ ಚಬುಕಿನ ಯಾನೆ ಗಾಳಿ ಮರದ ಕಾಡು ತೆಂಗಿನ ವಗೈರೆ ಫಲಮರಗಳ ತೋಟ ಬಂಗ್ಲೆ, ಒಕ್ಲುಮನೆಗಳು ವಗೈರೆ ಸವಾರಿದಿ ಪಟ್ಟಾ ನಂಬ್ರ 287, ಸರ್ವೆ ನಂಬ್ರ $\frac{99}{3}$ $\frac{138}{2\ 1B}$ 214 —ಎಕ್ರೆ 37 57 ತೀರ್ವೆ ಎಕ್ರೆಗೆ ಆಣೆ 8ರ ದರದಲ್ಲಿ ಕ್ರಯ—ಸ್ಥಳ ಸಮೇತ ಶುಮಾರು ಅಂದಾಜು ರೂ 20,000 ಚಬುಕಿನ ಮರಗಳಿಗೆ ಮಾತ್ರ ರೂ 15,000 ವಿಳಾಸ —

ಎ ಪಿ. ಫೆರ್ನಾಂಡಿಸ್,
ಉರ್ವ ಪೋಸ್ಟ್, ಮಂಗಳೂರು,
ದಕ್ಷಿಣ ಕನ್ನಡಾ ಜಿಲ್ಲಾ

NOTICE

In the Court of the District Judge of South Kanara

O. P $\frac{72}{1920}$

In the matter of the debts of Harekal Subraya Pai son of Harekal Vasudeva Pai.

Between

Harekal Ramakrishna Pai & Others . } *Petitioners*

Petition under the Succession Certificate Act 1889

The above Petition will come on for hearing in the above court on 15-9-1920

Mangalore } M Janardan Malya,
16—8—1920 } *Pleader for Petitioners*

ನೋಟೀಸು.

ದಕ್ಷಿಣ ಕನ್ನಡಾ ಜಿಲ್ಲಾ ಸಬೋರ್ಡಿನೇಟ ಜಡ್ಜರ ಕೋರ್ಟಿನಲ್ಲಿ ಕ್ರಮ ನಂಬ್ರ $\frac{46}{20}$

ಬಿ ನಾರಾಯಣಾಚಾರ್ಯ—ವಾದಿ

ಮತ್ತು

೧. ರಘುಭೂಷಣ ತೀರ್ಥಸ್ವಾಮಿರು
೨. ಬಡ್ಕಿಲ್ಲಾಯ ನಾರಾಯಣರಾವ
೩. ಬಡ್ಕಿಲ್ಲಾಯ ಅನಂತ ಕೃಷ್ಣರಾವ
೪. ಬಡ್ಕಿಲ್ಲಾಯ ಗುಂಡುರಾವ
} ಪ್ರತಿವಾದಿರು

ಮೈಸೂರು ಸಂಸ್ಥಾನದ ಶಿವಮೋಗಾ ಜಿಲ್ಲಾ ತೀರ್ಥ ಹಳ್ಳಿಯಲ್ಲಿ ಇರುವ ಭೀಮನಕಟ್ಟೆ ಯಾನೆ ಭೀಮಸೇತೂ ಮುನಿ ವೃಂದ ಮಠದ ಶಿಷ್ಯವರ್ಗದ ಕಡೆಯಿಂದ ಮೇಲ್ಕಂಡ ವಾದಿ ಬಿ ನಾರಾಯಣಾಚಾರ್ಯರು ಈ ದಾವೆಯನ್ನು ತಂದಿರು ತ್ತಾರೆ. ೨, ೩ ೪ನೇ ಪ್ರತಿವಾದಿರ ಪೂರ್ವಾಧಿಕಾರಿಗಳಿಗೆ ಸದ್ರಿ ಮಠಾಧಿಪತಿಗಳಾದ ೧ನೇ ಪ್ರತಿವಾದಿರು ತಾ ೧೭ ೭ ೯೭ ರಲ್ಲು ರೂಪಾಯಿ ೪೦೦೦ಕ್ಕೆ ಮಠದ ಬಾಬ್ತು ಸ್ಥಿರಾಸ್ತಿಗ ಳನ್ನು ಅಡವು ವಾಡಿ ಬರಕೊಟ್ಟ ದಸ್ತೇವೇಜಿನ ಆಧಾರದ ಮೇಲ ಮೇಲ್ಕಂಡ ಕೋರ್ಟು ಕ್ರಮನಂಬ್ರ $\frac{16}{1918}$ ರಲ್ಲು ಸದ್ರಿ ಆಸ್ತಿಗಳ ವಾರಾಟಕ್ಕೆ ಕಟ್ಟಡಾ ೨ ೩ನೇ ಪ್ರತಿವಾದಿರು ಪಡ ಕೊಂಡ ಡಿಕ್ರಿ ಅಮಲ್‌ಜಾರಿಯಲ್ಲಿ ಸದ್ರಿ ಆಸ್ತಿಗಳು ಬಹಿರಂಗ ವಾದ ಕೋರ್ಟು ಹರಾಜಿಗೆ ಇಟ್ಟಿರುವ ಸಂದರ್ಭದಲ್ಲಿ ಮಠದ ಮೇಲಾ ಉವಾನದಿಂದ ಮಠದ ಶಿಷ್ಯವರ್ಗದ ಕಡೆಯಿಂದ ಮಠಾಧಿಪತಿಗಳು ಮಠದ ಸ್ಥಿರ ಸೊತ್ತುಗಳ ಒಲ ಟ್ರಸ್ಟಿಗ ಳಾದ ಕಾರಣ ಸದ್ರಿ ಸೊತ್ತುಗಳು ಮಠದ ಸ್ವಾಧೀನದಿಂದ ಸಂಪೂರ್ಣ ತಪ್ಪಿಹೋಗದಂತ ನೋಡುವುದು ಸದ್ರಿ ಮಠಾಧಿ ಪತಿಗಳ ಕರ್ತವ್ಯವಾದ್ದರಿಂದಲೂ ಮೇಲ್ಕಂಡ ಅಡವು ದಸ್ತೇ ವೇಜು ಮಠದ ಅತ್ಯಗತ್ಯ ಗರ್ಜಿಗೆ ಅಲ್ಲವಾದ್ದರಿಂದಲೂ ಮೇಲ್ಕಂಡ ಡಿಕ್ರಿಯು ಮಠದ ಸ್ಥಿರಸೊತ್ತುಗಳ ಮಟ್ಟಿಗೆ ಅಸಿಂಧುವೆಂದಾಗಿ ವಾಸ್ತುಪ ಡಿಕ್ರಿಯನ್ನು ವ ಹರಾಜು ಆಗದಂತೆ ೨, ೩ ೪ನೇ ಪ್ರತಿವಾದಿರ ಮೇಲ ಶಾಶ್ವತವಾದ ಇಂಜಂಕ್ಷನ್ ಕೂಡಾ ಬೇಕ್ಕೆಂದು ತಂದ ಈ ದಾವೆಯಲ್ಲಿ ಕಕ್ಷಿ ಯಾಗಿ ಸೇರುವರೆ ಇಚ್ಛಿಸುವ ಸದ್ರಿ ಮಠದ ಶಿಷ್ಯವರ್ಗದ ಪೈಕಿ ಯಾರಾದರೂ ಮೇಲ್ಕಂಡ ಕೋರ್ಟಿಗೆ ಶೀಘ್ರ ಮನವಿಮಾಡಿ ಕೊಂಡು ಕಕ್ಷಿಸ್ಥಾನದಲ್ಲಿ ಸೇರಬಹುದೆಂದಾಗಿ ಈ ಮೂಲಕ ತಿಳಿಸೋಣಾಗುತ್ತದೆ

ಮಂಗಳೂರು } G Krishna Rao
ತಾ ೪—೮—೧೯೨೦ }

FOUNTAIN PENS.



ಫೌಂಟನ್ ಪೆನ್ನುಗಳು.

14 ಕೆರೆಟ್ ಚಿನ್ನದ ಮೊನೆಯುಳ್ಳ ಅತ್ಯುತ್ತಮವಾದ ವಿವಿಧ ತರದ ಫೌಂಟನ್ ಪೆನ್ನುಗಳು ಈಗ ತಾನೇ ಬಂದಿವೆ.

ಕಾಮತ್ ಸ್ಪೆಷ್ಟಿ ಪೆನ್ ಕ್ರಯ	ರೂ	9—8—0.
" ಫೌಂಟನ್ ಪೆನ್	"	9—0—0.

ಕೊಂಡುಕೊಳ್ಳುವವರಿಗೆ ಪ್ರತ್ಯೇಕ ದರಗಳು.

ಪಿ. ಎಸ್, ಕಾಮತ್ ಎಂಡ್ ಕೋ.
ಕೆಮಿಸ್ಟ್ಸ್, ಮಂಗಳೂರು

[illegible] ಮಹಾತ್ಮಾ ಗಾಂಧಿ ಮತ್ತು ಮೌಲಾನಾ ಶೌಕತಾಲಿ ಇವರ ಆಗಮನ.

(ಸ್ವಂತ ವಾರ್ತಾಹಾರರಿಂದ)

ಭಾರತಭೂಮಿಯು ಅನಾದಿಯಿಂದಲೂ ಧರ್ಮಭೂಮಿಯಾಗಿದೆ. [illegible] ಧರ್ಮದ ಮೂರ್ತಿಗಳಾದ [illegible] ಧರ್ಮ ಮತ್ತು ಸತ್ಯವನ್ನು ಸ್ಥಾಪಿಸಲು ಈ ಪುಣ್ಯಭೂಮಿಯಲ್ಲಿ ಅನೇಕ ಅವತಾರಗಳೂ, ಭಕ್ತರೂ, ಋಷಿಗಳೂ ಅವತರಿಸುವರು. ಪೂರ್ವಕಾಲದಲ್ಲಿ ಇಹಲೋಕದ ಸುಖವನ್ನು ತೊರೆದು [illegible] ಯೋಗಾಭ್ಯಾಸದಿಂದ ಮುಕ್ತರಾದ ಜ್ಞಾನವನ್ನು ಸಂಪಾದಿಸಿಕೊಂಡ ಋಷಿಗಳು ದೇಶದ ದಿಕ್ಕುದಿಕ್ಕುಗಳಲ್ಲಿ ಸಂಚರಿಸಿ ಧರ್ಮದ ಮತ್ತು ಸತ್ಯದ ಪ್ರಭೆಯನ್ನು ಜನರಲ್ಲಿ ಬೀರಿ, ಶಾಂತಿಯನ್ನು ಉಂಟುಮಾಡುತ್ತಿದ್ದರು. ಅಂಥಾ ಮಹಾತ್ಮರು ಒಂದು ಕಡೆಯಲ್ಲಿ ಆಗಮಿಸುವರೆಂದರೆ ಅವರ ಭೇಟಿಯನ್ನೂ ಉಪದೇಶಗಳನ್ನೂ ಪಡೆಯಲು ದಿಕ್ಕುದಿಕ್ಕುಗಳಿಂದ ಕೋಟ್ಯಾಧಿಪತಿಗಳೂ, ಲಕ್ಷಾಧಿಪತಿಗಳೂ, ಭಕ್ತರೂ ಕಿಕ್ಕಿರಿದು ಬರುತ್ತಿದ್ದರು.

ಪಂಜಾಬಿನಲ್ಲಿ ಅಧಿಕಾರಿಗಳ ಉದ್ಧಟತನದಿಂದ ಆದ ಹಿಂದೀ ಜನಾಂಗದ ಮಾನಹಾನಿ ಮತ್ತು ಟರ್ಕಿ ಸಂಧಾನದಿಂದ ಮುಸಲ್ಮಾನ ಧರ್ಮಕ್ಕೆ ತಟ್ಟಿದ ಗಂಡಾಂತರ ಇವೆರಡರ ನಿವಾರಣಾ ಸಾಧನೆಯ ಮೂಲಮಂತ್ರವನ್ನು ಬೋಧಿಸಲು ಬಂದ ಈ ಮಹಾ ಜ್ಞಾನಿಗಳ ಭೇಟಿಯನ್ನು ಪಡೆಯುವದಕ್ಕೆ ಈ ಜಿಲ್ಲೆಯ ಎಲ್ಲಾ ಪ್ರಾಂತಗಳಿಂದಲೂ ಜನರು ರಾಶಿ ರಾಶಿಯಾಗಿ ಬಂದಿದ್ದರು. ಮೋಟಾರು ಬಸ್ಸುಗಳಲ್ಲಿ ಸ್ಥಳವು ಸಿಗಲಾರದೆ ಪುತ್ತೂರು ಉಡುಪಿ ಮೊದಲಾದ ದೂರವಾದ ಪ್ರಾಂತ್ಯಗಳಿಂದ ಅನೇಕರು ನಡೆದುಕೊಂಡು ಬಂದಿದ್ದರು.

ನಿನ್ನೆ ಮಧ್ಯಾಹ್ನ ಸುಮಾರು ಒಂದೂ ಗಂಟೆಯಿಂದ ರೈಲ್ವೆ ಸ್ಟೇಶನಿನ ಹೊರಪ್ರಾಂತ್ಯಗಳಲ್ಲಿ ಜನರು ಒಟ್ಟು ಕೂಡುತ್ತ ರೈಲ್ವೆ ಬಂಡಿಯು ಸ್ಟೇಶನಿಗೆ ಬರುವಷ್ಟರಲ್ಲಿ ಸುಮಾರು ಆರೇಳು ಸಾವಿರಕ್ಕೆ ಮಿಕ್ಕಿದ ಜನಸ್ತೋಮವು ಸ್ಟೇಶನಿನ ಹೊರಗೆ ಒಟ್ಟು ಸೇರಿತ್ತು. ರೈಲ್ವೆ ಸ್ಟೇಶನಿನಲ್ಲಿ ಜಿಲ್ಲಾ ಸುಪರಿಂಟೆಂಡೆಂಟ ದೊರೆಗಳೂ ಹಲವು ಪೋಲೀಸು ಇನ್ಸಪೆಕ್ಟರರೂ ಜವಾನರೂ ಹಾಜರಿದ್ದರು. ಬಾಗಿಲು ಇಕ್ಕಟ್ಟು ವಿಶೇಷವಾಗಿ ಹೋಗಬಹುದೆಂಬ ಅಂಜಿಕೆಯಿಂದ ಸ್ವಯಂ ಸೇವಕರು ಜನಸ್ತೋಮವನ್ನು ಸ್ಟೇಶನು ಸೇರಲು ಬಿಡಲಿಲ್ಲ. ಪ್ಲೆಟ್‌ಫೋರ್ಮಿನಲ್ಲಿ ಆಮಂತ್ರಣದ ಸಭೆಯ ಅಧ್ಯಕ್ಷರಾದ ಬಹುಮಾನಪಟ್ಟ ಖಾನ್ ಬಹದ್ದೂರ್ ಹಾಜೀ ಅಬ್ದುಲ್ಲಾ ಸಾಹೇಬರವರೂ ಕಾರ್ಯದರ್ಶಿಗಳಾದ ಮ। ರಾ। ಎಮ್ ಎಸ್ ಮಾಧವರಾವ್ ಮತ್ತು ಮಹಮ್ಮದ್ ಫಕೀರು ಸಾಹೇಬರೂ ಆಮಂತ್ರಣ ಸಭೆಯ ಇತರ ಗೃಹಸ್ಥರೂ ವಕೀಲರೂ ಸಾಹುಕಾರರೂ ಮೊದಲಾದವರೂ ಉಡುಪಿ, ಬಂಟವಾಳ, ಮಲ್ಕಿ, ಪುತ್ತೂರು, ಕಾರ್ಕಳ, ಕುಂದಾಪುರ ಮೊದಲಾದ ಕಡೆಯ ಪ್ರತಿನಿಧಿಗಳೂ ಇದ್ದರು. ರೈಲ್ವೆ ಬಂಡಿಯು ತೋರಿದ ಕೂಡಲೆ ಜನರ ಕಣ್ಣಿಗೆ [illegible], ವಂದೇಮಾತರಂ, ಮಹಾತ್ಮಾ ಗಾಂಧೀಕಿ ಜೈ, ಮೌಲಾನಾ ಶೌಕತಾಲೀಕಿ ಜೈ, ಅಲ್ಲಾಹು ಅಕ್ಬರ್ ಮೊದಲಾದ ಜಯಘೋಷಗಳಿಂದ ಕೂಗಿದರು. ಅತಿಥಿಗಳು ರೈಲ್ವೆ ಬಂಡಿಯಿಂದ ಇಳಿಯುತ್ತಲೇ ಖಾನ್ ಬಹದ್ದೂರ್ ಅಬ್ದುಲ್ಲಾ ಸಾಹೇಬರವರು ಇವರಿಗೆ ಹೂವಿನ ಮಾಲೆಗಳನ್ನು ಹಾಕಿ ಅಲಂಕರಿಸಿದರು. ನಂತರ ರೈಲ್ವೆ ಸ್ಟೇಶನಿನಿಂದ ಮೆರವಣಿಗೆಯು ಹಂಪನಕಟ್ಟೆಯ ಮಾರ್ಗವಾಗಿ ಗಣಪತಿ ದೇವಸ್ಥಾನದ ರಸ್ತೆ, ರಥಬೀದಿ, [illegible] ಗೋರೆಕಟ್ಟೆ ಬಜಾರ ಮಾರ್ಗವಾಗಿ ವರ್ಕಶಾಲೆಗೆ ಹೊರಟಿತು. ಮೆರವಣಿಗೆಯು ಹಾದುಹೋಗುವ ಮಾರ್ಗಗಳೆಲ್ಲವೂ ತಳಿರು ತೋರಣಗಳಿಂದಲೂ ಸುಸ್ವಾಗತದ ಕಮಾನುಗಳಿಂದಲೂ ಬಾವುಟಗಳಿಂದಲೂ ಅಲಂಕರಿಸಲ್ಪಟ್ಟಿದ್ದವು. [illegible] ಹಿಂದೂ ಹಾಗೂ ಮುಸಲ್ಮಾನ ಸ್ತ್ರೀಯರೂ [illegible] ಮೆರವಣಿಗೆಯು ಹಾದುಹೋಗುವ ಮನೆ ಅಂಗಡಿಗಳ ಮೇಲೆ ಉಪ್ಪರಿಗೆಗಳಲ್ಲಿ ಸೇರಿ [illegible] ಆಗಮನವನ್ನು ನಿರೀಕ್ಷಿಸುತ್ತಿದ್ದರು. ಮೆರವಣಿಗೆ ಮುಂದೆ [illegible] ಬ್ಯಾಂಡ್‌ವಾದ್ಯ [illegible] ವಾಲಗ ಕೋಟೆಯ [illegible] ಇದ್ದವು. ಇಂಥಾ ಮೆರವಣಿಗೆ ಈ ಊರಲ್ಲಿ [illegible] ಗವರ್ನರ ದೊರೆಗಳ ಸಂದರ್ಭಗಳಲ್ಲಾಗಲಿ ಅಥವಾ ಇತರ ಯಾವ ಉತ್ಸವದ ಸಂದರ್ಭಗಳಲ್ಲಾಗಲಿ ಕೂಡಿದ್ದಿಲ್ಲವೆಂದು ಪ್ರಾಯಸ್ಥರು ಹೇಳುತ್ತಾರೆ. ಇದನ್ನು ಹಿಂದೂ ಮುಸಲ್ಮಾನರ ಐಕ್ಯದ ಉತ್ಸವವೆಂದು ಹೇಳಬಹುದೆಂದು ಹಲವರು ಅನ್ನುತ್ತಿದ್ದರು. ದಾರಿಯಲ್ಲಿ ಮೆರವಣಿಗೆಯು ಅಲ್ಲಲ್ಲಿ ನಿಲ್ಲುತ್ತ ದೇಶಭಕ್ತರುಗಳಿಗೆ ಆಯಾಯ ಕಡೆಗಳಲ್ಲಿಯ ಗೃಹಸ್ಥರಿಂದಲೂ ವ್ಯಾಪಾರಸ್ಥರಿಂದಲೂ ಶಾಲೆಗಳಿಂದಲೂ, ಮಠದೇವಸ್ಥಾನಗಳ ಕಡೆಯಿಂದಲೂ, [illegible] ಮೊದಲಾದ ಸಂಸ್ಥೆಗಳಿಂದಲೂ ಪುಷ್ಪಮಾಲೆಗಳನ್ನೂ ವಂದನೆಗಳನ್ನೂ ಸ್ವೀಕರಿಸುತ್ತ ಮುಂದರಿಯಿತು. ಅಲ್ಲಲ್ಲಿ ಜನರಿಂದ ಪುಷ್ಪವೃಷ್ಟಿಯೂ [illegible] ವೃಷ್ಟಿಯೂ ಆಗುತಿತ್ತು.

ಅತಿಥಿಗಳಿದ್ದ ಮೋಟಾರ ಬಂಡಿಯು ವರ್ಕಶಾಲೆಯ ವಿಲಾಸವನ್ನು ಸಮೀಪಿಸಿ ಮೆರವಣಿಗೆಯು ಅಲ್ಲಿಗೆ ಮುಗಿಯಿತು. ಸುಮಾರು ೬ ಗಂಟೆಗೆ [illegible] ಮೌಲಾನಾ ಶೌಕತಾಲಿ ಮಹಾತ್ಮ ಗಾಂಧಿ ಮೊದಲಾದವರು ಭಾಷಣಗಳ ಬಗ್ಗೆ ವ್ಯವಸ್ಥೆ [illegible] ಸಭೆ ಸೇರಿದ್ದಲ್ಲಿ ವರ್ಕಶಾಲೆಯಿಂದ ಬಂದರು. ವೇದಿಕೆಯಲ್ಲಿ ಕೂಡಿದ ಸಭೆಯ ಅಧ್ಯಕ್ಷಸ್ಥಾನವನ್ನು ಖಾನ್ ಬಹದ್ದೂರ ಅಬ್ದುಲ್ಲಾ ಸಾಹೇಬರವರು ವಹಿಸಿಕೊಂಡು ಮಹಾತ್ಮಜಿ ಮತ್ತು ಶೌಕತಾಲಿಯವರನ್ನು ವಿಜ್ಞಾಪಿಸಿಕೊಂಡನಂತರ ಗಾಂಧಿಯವರು ತಮ್ಮ ಭಾಷಣದ ಪ್ರಾರಂಭದಲ್ಲಿ ಮೊದಲು ಸ್ವಾಗತ ಉಪಚಾರಗಳನ್ನು ಮಾಡಿದ ಮಂಗಳೂರಿನವರನ್ನು ವಂದಿಸಿ, ದೇಹಶ್ರಮದಿಂದ ತನಗೆ ನಿಂತುಕೊಂಡು ಮಾತಾಡಲು ಅನಾನುಕೂಲವಾಗಿರುವುದರಿಂದ ಆಸೀನರಾಗಿಯೇ ಮಾತಾಡಬೇಕಾಗಿ ಬಂದಿರುವದನ್ನು ಕುರಿತು ತಮ್ಮ ವಿಷಾದವನ್ನು ಸೂಚಿಸಿದರು. ನಮ್ಮ ಭರತಖಂಡವು ಈಗ ಅನೇಕ ಸಂಕಷ್ಟದಲ್ಲಿದ್ದರೂ ಪ್ರಕೃತಕ್ಕೆ ನಾವು ಖಿಲಾಫತ್ ಪ್ರಶ್ನೆ ಮತ್ತು ಪಂಜಾಬದ ಅನರ್ಥ ಈ ಎರಡು ಮುಖ್ಯ ವಿಷಯಗಳನ್ನು ಮಾತ್ರ ಆರಿಸಿಕೊಂಡಿರುವದೆಂದು ಸೂಚಿಸಿ ನಂತರ ಈ ವಿಷಯಗಳ ಭಾಷಣದ ಕಡೆಗೆ ಗಮನವಿತ್ತರು. ಸರಳವಾದ ಇಂಗ್ಲಿಷ ಭಾಷೆಯಲ್ಲಿ ಇವರ ಭಾಷಣವಾಯಿತು.

[illegible] ಹಿಂದುಸ್ಥಾನದ ಮುಸಲ್ಮಾನರು ಬಂಧುಗಳಾಗಿ ಪ್ರಸಿದ್ಧವಾದ ಧರ್ಮಸಂಕಷ್ಟದ ನಿವಾರಣೆಯಲ್ಲಿ ನಾವು ಹಿಂದೂಗಳೂ ಸಹಾಯಕರಾಗಿರತಕ್ಕದ್ದು. ಈ ಸಂಕಷ್ಟ ನಿವಾರಣೆ ಬಗ್ಗೆ ಅಸಹಕಾರಿತ್ವ ಎಂಬುದೇ ಮುಖ್ಯ ಸಾಧನ. ಯಾವ ತರದ ಅತ್ಯಾಚಾರಕ್ಕೂ ಹೆದರದ ಆತ್ಮೀಯ ಬಲದಿಂದಲೇ ಇದನ್ನು ಸಾಧಿಸತಕ್ಕದ್ದು. ಇದರಲ್ಲಿ ಭಗವಂತನ ಪೂರ್ಣ ಸಹಾನುಭೂತಿ ಇದೆ. ಅಸಹಕಾರಿತ್ವ ತತ್ವದ [illegible] ಮತಭೇದಗಳಿದ್ದರೂ, ಆದರಿಂದ ಅತ್ಯಾಚಾರವಾಗಬಾರದೆಂದು [illegible] ಭಗವಂತನು ಯಾವ ತರದ ಅತ್ಯಾಚಾರವೂ ಉಪಯೋಗಿಸದಂತೆ ಮಾಡಲಿ. ಸಕಲರಿಗೂ ಇದನ್ನು ಕೈಕೊಳ್ಳಲು ಒಂದೇ ಸವನೆ ಆಗಲೊಲ್ಲದಾದರೆ ಹಲವಾರು ಪ್ರಸಂಗ ಇದನ್ನು ಸಾಧಿಸಿದರೆ ಆವರಿಂದ ಅವರಿಗೆ ಕೀರ್ತಿಯೂ, ದೇಶಕ್ಕೆ ಸುಖಪ್ರಾಪ್ತಿಯೂ ಖಂಡಿತವಾಗಿ ಆಗುವುದು ಎಂಬುದನ್ನು ಸೂಚಿಸಿ ಅಸಹಕಾರಿತ್ವದ ಸಾಧನೆಯ ನಾಲ್ಕು ಮಾರ್ಗಗಳನ್ನು ಸೂಚಿಸಿದರು.

ಸರಕಾರದಿಂದ ಬಿರುದಾವಳಿಯ ಹೆಸರುಗಳನ್ನು ಪಡೆದ ಗೃಹಸ್ಥರು ಅವನ್ನು ಸರಕಾರಕ್ಕೆ ಹಿಂದಕ್ಕೆ ಕೊಡತಕ್ಕದ್ದು. ದೇಶವೆಲ್ಲ ಸಂಕಷ್ಟದಲ್ಲಿ ಮುಳುಗಿದ್ದಾಗ ಈ ಬಿರುದುಗಳಿಂದ ಏನ ಪ್ರಯೋಜನ?

ನ್ಯಾಯವಿಧಾಯಕ ಸಭೆಗಳಿಗೆ ಉಮೇದ್ವಾರರಾಗಿ ಎದುರು ಬರಲಾಗದ. ಒಂದು ವೇಳೆ ಇವರಿಂದ ಶಾಂತಸಹ್ಯದವರಿಗೆ ಕೌನ್ಸಿಲುಗಳಿಗೆ ಬರಲು ಎಡೆ ದೊರಕೀತ ಎಂಬ ಶಂಕೆ ಇರುವುದಾದರೆ ವೋಟರೇ ಐಕ್ಯರಾಗಿ ಓಟುಗಳನ್ನೆ ಕೊಡುವುದನ್ನ ನಿಲ್ಲಿಸಿಬಿಟ್ಟರೆ ಅಭಾವನೆಗೆ ಆಸ್ಪದವಿಲ್ಲ.

ಸರಕಾರಿ ಮತ್ತು ಸರಕಾರಿ ಸಹಾಯವನ್ನು ಪಡೆಯುವ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವುದನ್ನು ಹೆತ್ತವರು ಬಹಿಷ್ಕರಿಸಬೇಕು.

ಸನ್ನಂತೆಯೇ ವಕೀಲ ವೃತ್ತಿಯಲ್ಲಿದ್ದವರು ಕೋರ್ಟುಗಳಿಗೆ ಹೋಗಿ ವ್ಯವಹರಿಸುವದನ್ನು ನಿಲ್ಲಿಸತಕ್ಕದ್ದು.

ಅಲ್ಲದೇ ತಮ್ಮ ಸ್ವಾರ್ಥತ್ಯಾಗವನ್ನು ಸೂಚಿಸಲು ಸ್ತ್ರೀಯರೂ ಪುರುಷರೂ ಕಾಲವಿಳಂಬ ಮಾಡದೆ ಒಪ್ಪಿಯೇ ಸ್ವದೇಶಿ ವ್ರತವನ್ನು ಆಚರಿಸತಕ್ಕದ್ದು ಎಂಬವನ್ನು ಸೂಚಿಸಿದರು. ಆಗ ಸಂಧ್ಯಾಕಾಲವು ಪ್ರಾಪ್ತವಾದ್ದರಿಂದ ಮಹಮ್ಮದಿಯರ ನಮಾಜ್ ಪ್ರಾರ್ಥನೆಯು ನಡೆಯಿತು.

ಬಳಿಕ ಶೌಕತಾಲಿಯವರು ಗದ್ಗದ ಸ್ವರದಿಂದ ತಮ್ಮ ಮನೋಗತವನ್ನು ಸೂಚಿಸುವ ಭಾಷಣಮಾಡಲು ಪ್ರಾರಂಭಿಸಿದರು. ಇದರ ಮುಖ್ಯಾಂಶವೇನಂದರೆ —

ಮಹಮ್ಮದಿಯರ ಧರ್ಮರಕ್ಷಣೆಯನ್ನು ಕಾಪಾಡಬೇಕೆಂದ ನಾವು ಸರಕಾರವನ್ನು ಯುದ್ಧದಲ್ಲಿ ಸಹಾಯ ಮಾಡಲು ಇಂದಾಗಲಿ ಸ್ಪಷ್ಟಾಕ್ಷರದಿಂದ ಕೇಳಬೇಕಿತ್ತು. ಹೀಗೆ ಕೇಳುತ್ತಿದ್ದರೆ ಇಂದಿನ ತೊಂದರೆಗಳಿಗೆ ಯಾವ ಕಾರಣವೂ ಇರುತ್ತಿರಲಿಲ್ಲ. ಆದರೆ ಯುದ್ಧದ ಕಾರ್ಯಕ್ಕೆ ಬೆಂಬಲವನ್ನಿತ್ತ ಯೋಚಿಸಿ ಮುಂದಿನ ಪ್ರಯತ್ನಗಳನ್ನು ಮಾಡಿದೆವು. ಖಿಲಾಫತ್ ಪ್ರಶ್ನೆಯನ್ನು ಯೋಗ್ಯರೀತಿಯಲ್ಲಿ ನಿರ್ವಹಿಸಲು ಪ್ರಥಮದಲ್ಲಿ ವೈಸರಾಯ ಪ್ರಭುಗಳಿಗೆ ಬಿನ್ನವಿಸಿಕೊಂಡೆವು. [illegible] ಈ ಪ್ರಶ್ನೆಯನ್ನು ಇಂಗ್ಲೆಂಡ ಪಾರ್ಲಿಮೆಂಟಿನ ಮುಂದಿಡಲು [illegible] ಕಳುಹಿಸಲ್ಪಟ್ಟರು. [illegible] ಸಹಾನ ಭೂತಿಪರರಾಗಿದ್ದರೂ [illegible] ಅದು ಅಲ್ಲಿ ಸಾಧ್ಯವಾಗಲಿಲ್ಲ. ಈಗ ನನ್ನ ಸಹೋದರರಾದ ಮಹಮ್ಮದಲಿಯವರು ಈ ವಿಚಾರವನ್ನು ಸಾರಲು ಯುರೋಪಿಗೆ ಹೋಗಿದ್ದಾರೆ. ಆದ್ದರಿಂದ ಈ ಕುರಿತು ನಾವು ಪೂರ್ಣ ಪ್ರಯತ್ನಗಳನ್ನೂ ಹೆಚ್ಚಿನ ಆಲೋಚನೆಯನ್ನೂ ಮಾಡಿದರೂ ಎಲ್ಲೂ ನೆಲೆಯಿಲ್ಲ. ಕೊನೆಗೆ ಧರ್ಮರಕ್ಷಣೆಗೆ ಮುಖ್ಯ ಆಧಾರವಾದ ಖುರಾನಿನಲ್ಲಿ ಹಿಜರತ್ ಮತ್ತು ಜಿಹಾದ್ ಎಂಬ ಎರಡು ಮಾರ್ಗಗಳು ಕಾಣುತ್ತವೆ. [illegible] ಧರ್ಮ ವಿರೋಧಿಗಳನ್ನು [illegible] ಮೊದಲನೆಯದು; ಅಥವಾ [illegible] ಧರ್ಮಕ್ಕೆ ವಿರೋಧವಾದ ಸಂಸ್ಥಾನವನ್ನು ಬಿಟ್ಟು ಹೋಗುವುದು ಎರಡನೆಯದು. ಆದರೆ ಹೀಗೆ [illegible] ಮಹಾತ್ಮಾ ಗಾಂಧಿಗಳು ಎಲ್ಲರಿಗೂ ಮುಂದಾಗಿ ಅಸಹಕಾರಿತ್ವವನ್ನು ಬೋಧಿಸಿದ್ದಾರೆ. ಅಂತೆಯೇ ಕಳೆದ ಒಗಸ್ಟ ತಾ ೧ನೇ ಈ ಅಸಹಕಾರಿತ್ವವನ್ನು ನನ್ನ ಗುರುಗಳೊಂದಿಗೆ ಪ್ರಾರಂಭಿಸಿದ್ದೇನೆ. ಈಗ ನಾವು ಸ್ವತಂತ್ರರಾಗಿದ್ದೇವೆ. [illegible] ಸ್ಪಷ್ಟವಾಗಿ ಹೇಳಿದರು. [illegible] ಗಳ ಭಂಗವಾಗದಂತೆ ಸಾಧಿಸಲು ಸಾಧ್ಯವಾಗುವುದೆಂದೂ [illegible] ಮಹಾತ್ಮಾ ಗಾಂಧಿಗಳು ಮುಸಲ್ಮಾನರ ಆಪತ್ತಿನಲ್ಲಿ [illegible] ಕೊಂಡರು. ಕೊನೆಗೆ [illegible] ಧರ್ಮರಕ್ಷಣೆಗಾಗಿ ಅಸಹಕಾರಿತ್ವವನ್ನು ಅಗತ್ಯವಾಗಿ ಅವಲಂಬಿಸಬೇಕಾಗಿಯೂ, ಇದರಿಂದ ಗುರು ಮಹಮ್ಮದನಿಗೂ ಕೂಡ ಸಂತೋಷವಾಗುವುದಾಗಿ ಸೂಚಿಸಿ, ತಮ್ಮ ಭಾಷಣವನ್ನು ಸಮಾಪ್ತಿಗೊಳಿಸಿದರು. ನಂತರ ತಂಜಾವೂರಿನ [illegible] ಮಹಮ್ಮದಿಯ ಗೃಹಸ್ಥರು ಹಿಂದೂಸ್ಥಾನಿ ಭಾಷೆಯಲ್ಲೂ ಭಾಷಣ ಮಾಡಿದರು. ಕಡೇಗೆ ಮ। ರಾ। [illegible] ಗಂಗೊಳ್ಳಿ ಕೃಷ್ಣರಾಯರಿಂದ ಪುರಜನರ ಪರವಾಗಿ ಈ ದೇಶಭಕ್ತರಿಗೆ ಧನ್ಯವಾದಗಳನ್ನು ಅರ್ಪಿಸಿದ ಬಳಿಕ ಸಭೆಯು ಮುಕ್ತಾಯಗೊಂಡಿತು. ಈ ಸಭೆಯ ನಂತರ ವರ್ಕಶಾಲೆಯಲ್ಲಿ ಖಾಸಗಿ ಭೇಟಿಗಳು ನಡೆದುವು. ಇಂದಿನ ಪ್ರಾತಃಕಾಲದ ಮೈಲ್ ಬಂಡಿಯಲ್ಲಿ ಗಾಂಧಿಗಳು ಶೌಕತಾಲಿ ತನ್ನ ಇಬ್ಬರು [illegible] ಮತ್ತು ಇತರ ಅನುಯಾಯಿಗಳೊಡನೆ ಸೇಲಮಿಗೆ ಪ್ರಯಾಣಬೆಳೆಸಿದರು. ಇವರು ಹೊರಟುವ ತನಕ ಇವರೆಲ್ಲರೂ ಮ। ರಾ। [illegible] ಅತಿಥಿಗಳಾಗಿ ವರ್ಕಶಾಲೆಯಲ್ಲಿ ಉಳಕೊಂಡಿದ್ದರು.

ಜಂಗ್ಲಿ [illegible]

[illegible] ನಡೆದ ಮಾತುಗಳ ಸಾರಾಂಶವನ್ನು ಈ ಕೆಳಗೆ ಕೊಟ್ಟಿರುವೆವು.

[illegible] ಆಗಿಂದಾಗ ಜನತೆಯು ಮುಂದಿರಿಸಿ [illegible] ಜಂಗ್ಲಿ ಇಲಾಖೆಯ ಮೇಲೆ ಅಸಹ್ಯತೆಯು ಮತ್ತು [illegible] ಕಾರಣವಾಯಿತೆಂದು ಹೇಳಿ, ಮಿ। ಕೊಕ್ಸರು ಮೊದಲು ಜಂಗ್ಲಿ ಇಲಾಖೆಯ ಅಧಿಕಾರದಲ್ಲಿರುವ ಸರಕಾರಿ ಕಾಡುಗಳ ವಿಸ್ತಾರವನ್ನು ವರ್ಣಿಸಿದರು. ಮದ್ರಾಸು ಸಂಸ್ಥಾನದಲ್ಲಿ ಒಟ್ಟಿಗೆ ೧೮೦೦೦ಕ್ಕೆ [illegible] ೧೯೦೦೦ಕ್ಕೆ ಕಡಿಮೆಯಾಗದ ಚದರ ಮೈಲು ವಿಸ್ತಾರದ ಸರಕಾರಿ ಕಾಡುಗಳ ಪೈಕಿ ಗ್ರಾಮಪಂಚಾಯತುಗಳ ಆಡಳಿತೆಯಲ್ಲಿ ೧೮೦೦ ಚದರ ಮೈಲು ವಿಸ್ತಾರವುಳ್ಳ ಇವೆ. ಇವುಗಳು ಗೋಚರವಾಗಿ ಮಾತ್ರ [illegible] ಕೊಂಡವುಗಳು. ೪೮೦ ಚದರ ಮೈಲು ಈಗ ಕೃಷಿಗೋಸ್ಕರ ಜನತೆಗೆ ಒಪ್ಪಿಸಿಕೊಡುವಂತೆ ಏರ್ಪಾಡು ನಡೆದಿದೆ. ೧೩೦೦೦ ಚದರ ಮೈಲು ವಿಸ್ತಾರದ ಕಾಡುಗಳು ಬೆಟ್ಟದ ತಪ್ಪಲುಗಳಲ್ಲಿವೆ. ಇವುಗಳನ್ನೆಲ್ಲ ಬಿಟ್ಟರೆ ಬರೇ ೩೦೦೦ ಅಥವಾ ೪೦೦೦ ಚದರ ಮೈಲು ವಿಸ್ತೀರ್ಣದಷ್ಟು ಮಾತ್ರ ಗ್ರಾಮಗಳಿಗೆ ಸಮೀಪವಾಗಿದ್ದು ಹಳ್ಳಿಗರ ಪ್ರಯೋಜನಕ್ಕೆ ಸಿಗಬಹುದು. ಗುಡಿಗುಡಿಸಲುಗಳಿಗೆ ಬೇಕಾದ ಚಿಲ್ಲರೆ ಮರಮಟ್ಟು, ಕಟ್ಟಿಗೆ, ಬೇಲಿಗಳು [illegible] ಸೊಪ್ಪುಗೊಬ್ಬರ ಮತ್ತು ದನ ಮೇಯ ಚರಾವು ಇಷ್ಟು ಸೌಕರ್ಯಗಳು ಇದರಿಂದ ಸಿಗಬೇಕಾಗಿದೆ. ಈಗ ಜನಗಳ ಅಪೇಕ್ಷೆಯಿದ್ದರೆ ಇಷ್ಟು ಸ್ಥಳದ ಆಡಳಿತೆಯ ವಿಷಯವಾಗಿ ಮಾತ್ರ ಇರಬೇಕ ಎಂದು ಮಿ। ಕೊಕ್ಸರ ಹೇಳಿಕೆ.

ಮೂವತ್ತು ಯಾ ನಾಲ್ವತ್ತು ವರ್ಷಗಳ ಹಿಂದೆ ಈ ಕಾಡುಗಳನ್ನು ಸರಕಾರದ ಇಲಾಖೆಯ ಕೈಕೆಳಗೆ ತರುವಾಗ ಪೂರಂಬೋಕು ಮತ್ತು ಇತರ ಸರಕಾರಿ ಭೂಮಿ ಸ್ಥಳಗಳಿಂದ ಜನಗಳ ಅನುಕೂಲತೆಗಳನ್ನು ಯಥೇಷ್ಟವಾಗಿ ಪೂರೈಸಬಹುದೆಂದು ಸರಕಾರದ ಅಭಿಪ್ರಾಯವಿತ್ತು. ಆದರೆ ಈಗ ೨೦ ಯಾ ೩೦ ವರ್ಷಗಳೊಳಗೆ ಅಂಥಾ ಸ್ಥಳದಲ್ಲಿ ಬೆಳೆದ ಕಾಡನ್ನು ತೀರಾ ಜನಗಳು ಧ್ವಂಸ ಮಾಡಿದ್ದಾರೆ ಎಂದು ಸರಕಾರದವರು ತಿಳಿದಿರಲಿಲ್ಲ. ಪ್ರಕೃತಸ್ಥಿತಿಯಲ್ಲಿ ಆ ಸ್ಥಳವು ಬರಿದಾದ್ದರಿಂದ ಜನಗಳ ರಿಜರ್ವ ಕಾಡುಗಳ ಸಹಾಯ ನಿರೀಕ್ಷಿಸಬೇಕಾಗಿ ಬಂದಿದೆ. ಈ ಕಾರಣದಿಂದ ಮೊದಲೇ ಸಾಕಾಗಿದ್ದ ಈ ಸರಕಾರಿ ಕಾಡುಗಳ ಮೇಲೆ ಹೆಚ್ಚಿನ ಜವಾಬ್ದಾರಿಗಳು ಬಂದಿತೆ ಎಂದು ನಾಮದಾರ ಕೊಕ್ಸರು ವಿವರಿಸಿದರು.

ನಾಮದಾರ ಕೊಕ್ಸರ ಅಂದಾಜು ಮೇರೆಗೆ ಸರಕಾರಿ ರಿಜರ್ವ ಕಾಡುಗಳಲ್ಲಿ ಬಹಳ ಮಟ್ಟಿಗೆ ವರ್ಷಕ್ಕೆ ಅರ್ಧ ಟನ್ನಿಗಿಂತ ಹೆಚ್ಚಿನ ಬೆಳವಣಿಗೆಯು ಸೊಪ್ಪು ಕಟ್ಟಿಗೆ ಕೂಡಾ ಒಂದು ಎಕ್ರೆಯಲ್ಲಿ ಆಗುವುದಿಲ್ಲ; ಅಂದರೆ ಒಂದು ಎಕ್ರೆ ಸ್ಥಳದ ಕಾಡನ್ನು ಕಡಿದಾಗ ೧೦ ಟನ್ ಕಟ್ಟಿಗೆ ಸೊಪ್ಪು ಸಿಗುವುದಾದರೆ ಆ ೧೦ ಟನ್ ಪುನಃ ಬೆಳೆಯಲಿಕ್ಕೆ ೨೦ ವರ್ಷಗಳ ಕಾಲ ಹಿಡಿಯುತ್ತದೆ.

ಈ ರೀತಿ ನಿಧಾನವಾದ ಬೆಳವಣಿಗೆಯನ್ನು ಇನ್ನೂ ಹೆಚ್ಚಿಸಲಿಕ್ಕೆ ಮಾಡಿದ ಪ್ರಯತ್ನಗಳು ಮಣ್ಣಿನ ಗುಣದಿಂದ ನಿಷ್ಫಲವಾಗಿವೆ. ಕಳೆದ ೩೦ ವರ್ಷಗಳ ಕೆಳಗೆ ಈ ಕಾಡುಗಳ ಸಂರಕ್ಷಣೆಯ ಭಾರವನ್ನು ಸರಕಾರದವರು ವಹಿಸಿಕೊಳ್ಳುವಾಗಲೇ ಅವು ಬಹಳ ಹೀನಸ್ಥಿತಿಯಲ್ಲಿದ್ದು ಅನಂತರ ಅವುಗಳಿಂದ ಜನಗಳು ಕೇಳುವ ಸೌಕರ್ಯಗಳ ಸಮುದಾಯವು ಹೆಚ್ಚುತ್ತ ಬಂದು ಅವು ಕುಗ್ಗಿಕೊಂಡಿವೆ ಎಂತಲೂ ಮಣ್ಣಿನ ಗುಣ ನಿಸ್ಸಾರತರವಾಗಿದ್ದ ಕಾರಣ ಬಹಳ ಪ್ರಯತ್ನಪಟ್ಟರೆ ಒಂದು ಎಕ್ರೆಯಲ್ಲಿ ೫ ಟನ್ನಿನಷ್ಟು ಸೊಪ್ಪು ಕಟ್ಟಿಗೆಯನ್ನು ಒದಗಿಸಿಕೊಳ್ಳುವುದಕ್ಕೆ ಮಾತ್ರ ಸಾಧ್ಯವಾದೀತೆಂತಲೂ ಮಿ। ಕೊಕ್ಸರು ಸ್ಪಷ್ಟವಾಗಿ ಹೇಳಿದರು.

ಪಶ್ಚಿಮ ಕರಾವಳಿಯಲ್ಲಿ ವರ್ಷಕ್ಕೆ ೧೫೦ ಇಂಚಿನಷ್ಟು ಮಳೆ ಬೀಳುವಲ್ಲಿ ಸಹ ವರ್ಷಕ್ಕೆ ೩ ಟನ್ನಿಗೆ ಮಿಕ್ಕ ಎಕ್ರೆಯ ಬೆಳವಣಿಗೆಯು ಇರುವುದಿಲ್ಲ. ಇಲ್ಲಿ ಕೆಲವು ಮರವಟ್ಟು ೧೫೦ ಫೀಟು ಎತ್ತರಕ್ಕೆ ಬೆಳೆಯುವುದಿದ್ದರೂ ಒಟ್ಟಾರೆ ಬೆಳವಣಿಗೆಯು ವಿಶೇಷವಾಗಿಲ್ಲ. ಹಾಗಿರುವಾಗ ಪೂರ್ವ ಕರಾವಳಿಯಲ್ಲಿ ಮಣ್ಣು ನಿಸ್ಸಾರವಾಗಿ ಮಳೆಯೂ ಕಡಿಮೆ ಇದ್ದಾಗ [illegible] ಗಳು ಹುಲುಸಾಗಿ ಬೆಳೆಯುವುದು ಅಶಕ್ಯವೆಂದು ಮಿ। ಕೊಕ್ಸರ ಅಭಿಪ್ರಾಯ.

ಸರಕಾರಿ ಕಾಡುಗಳಲ್ಲಿ ಗೋಚರವಾಗಿ ಎಡೆ ಕೊಡುವ ವಿಷಯವಾಗಿ ಅವರ ತುಂಬಾ ಆಕ್ಷೇಪವಿದೆ. ಈ ತಗಾದೆಯು ಈ ದೇಶದಲ್ಲಿ ಅಲ್ಲದೆ ಕಾಡುಗಳನ್ನು ಬೆಳೆಸುವ ಅನ್ಯ ದೇಶಗಳಲ್ಲಿ ಎಲ್ಲಿಯೂ ಇಲ್ಲವಂತೆ. ಜಾನುವಾರುಗಳ ಮೇವಿನಲ್ಲಿ ಮತ್ತೆ ಮರಮಟ್ಟು ಚೆನ್ನಾಗಿ ಬೆಳೆಯುವುದಿಲ್ಲವೆಂದು ಇತರ ದೇಶಗಳ ತಿಳುವಳಿಕೆಯಂತೆ. ಮದ್ರಾಸು ಸಂಸ್ಥಾನದಲ್ಲಿ ೩ ಮಿಲ್ಲಿಯ ಜಾನುವಾರುಗಳಿಗೆ ಈ ಕಾಡುಗಳು ಚರಾವಿನ ಆಶ್ರಯ ಕೊಡುತ್ತಿವೆ. ಈ ಜಾನುವಾರುಗಳು ಬೆಳೆದು ಬರುವ ಎಳೆಯ ಗಿಡಗಳನ್ನು ತುಳಿದು, ಎಳೆ ಚಿಗುರುಕೊನೆಗಳನ್ನು ಮೇದು ಗಿಡಗಳ ಬೆಳವಣಿಗೆಯನ್ನು ಕುಗ್ಗಿಸಿ ಬಿಡುವುದೊಂದೇ ಅಲ್ಲದೆ, ಈ ಜಾನುವಾರುಗಳ ಮೇವಿಗಾಗಿ ದೊಡ್ಡ ಮರಗಳ ಕೊಂಬೆಗಳನ್ನು ಕಡಿಯುವುದು, ಹುಲ್ಲು ಒಣಗಿದಾಗ ಅದಕ್ಕೆ ಬೆಂಕಿ ಹಾಕಿ ಮುಂದಿನ ವರ್ಷಕ್ಕೆ ಒಳ್ಳೆ ಹುಲ್ಲು ಪಡೆಯಲು ಯತ್ನಿಸುವುದು ಇವರಿಂದಲೂ [illegible] ಜಿಲ್ಲೆಗಳಲ್ಲಿ ಕಾಡುಗಳ ಬೆಳವಣಿಗೆಗೆ ಹಾನಿ ತಂದೊಡ್ಡಿರುವದರಿಂದ, ಇಂಥ ಕಾಡುಗಳಲ್ಲಿ ಪ್ರಯೋಜನಕ್ಕೆ ಬರುವ ತರದ ಮರಮಟ್ಟು ಬೆಳೆಯುವುದೇ ಇಲ್ಲವೆಂದು ನಾಮದಾರ ಕೊಕ್ಸರು ಹೇಳುತ್ತಾರೆ.

(ಶೇಷ).

[illegible]

ಗ್ರಾಮ ಸಭೆ.

[illegible]

ಮಂಗಳೂರು, ತಾ. 15—8—1920

ರಾಮಚಂದ್ರಯ್ಯ ಕೇಟಾರ.
ಎಸ್. ಪಿ ದುಗ್ಗಪ್ಪ.
Kepu alias Utheya
ಪಟೇಲ ರಾಮಪ್ಪನ ರುಜು.

ಪಟೇಲರ ವಿಷಯವಾದ ಸೂಚನೆಗಳು.

(ಕಳೆದ ಸಂಚಿಕೆಯಿಂದ ಮುಂದರಿಸಿದ್ದು.)

[illegible] ಹಿಂದೆ, ಆಗ, ಶ್ಯಗಳ ಪ್ರಕಾರ ವರ್ಷಾವಧಿ ಸಂಬಳವು ಇತ್ತು. ಅದು ಯಾವರೀತಿ ಪ್ರಕಾರವೂ ತಿಳಿಯದು. ನಂತರ ವರ್ಷಕ್ಕೆ ೧೨ ರೂಪಾಯಿಗೆ ಕಡಮೆ ಇಲ್ಲದ ಸಂಬಳ ನೇಮಕವಾಯಿತು [illegible] [illegible]

ಗ್ರಾಮಕ್ಕೆ ಸರಕಾರ ನೌಕರರು ಸರ್ಕೀಟಿಗೆ ಬಂದರೆ ಅವರಿಗೆ ಅಗತ್ಯ ಇರುವ ಖಿಸ್ತ ಸರಬರಾಯಿ ಜೀನಸುಗಳು ಒದಗಿಸಿಕೊಡುವ ಪೂರ್ಣ ಜವಾಬುದಾರಿ ಪಟೇಲರ ಮೇಲೆ ಹೊಂದಿ ಉಂಟು ಎಂಬ ಪದ್ಧತಿ ಈಗಲೂ ನಡೆಸಿಕೊಂಡು ಬರುತ್ತದೆ. ಇದರಿಂದ ಪಟೇಲರಿಗಿರುವ ಸಂಕಷ್ಟಗಳು [illegible] ವಿವರಿಸುವಂಥಾದ್ದು ಯುಕ್ತವಲ್ಲ. ಈಗ ಪ್ರತಿ ಹಳ್ಳಿಗಳಲ್ಲಿಯೂ ಅಂಗಡಿಗಳು ಇರುತ್ತವೆ. ಅವರಿಗೆ ಬೇಕಾಗುವ ಸಾಹಿತ್ಯಗಳನ್ನು ಅಂಗಡಿಗಳಿಂದ ಅವರೇ ತರಿಸಿಕೊಳ್ಳಬಹುದು. ಅಂಗಡಿಗಳಿಲ್ಲದಿರುವ ಊರುಗಳಿಗೆ ಹೋಗುವಾಗ್ಗೆ ಅಲ್ಲಿಗೆ ಬೇಕಾಗುವ ಸಾಹಿತ್ಯಗಳನ್ನು ಹೆಡ್ ಕ್ವಾರ್ಟರಿನಿಂದ ತೊಂಡು ಬರುವಾಗ್ಗೆ ತರಲೂ ಬಹುದು. ಫರ್‍ಮಾ ಹಾಲು ವ ಕಟ್ಟಿಗೆ ಹಾಗೆ ತರಲಿಕ್ಕೆ ಸಾಧ್ಯವಿಲ್ಲದ್ದರಿಂದ ಅದು ಮಾತ್ರ ಉಗ್ರಾಣ ಮುಖಾಂತರ ತರಿಸಿಕೊಂಡು ಗ್ರಾಮ ಬಿಟ್ಟುಹೋಗುತ್ತಾ ಅದರ ಹಣವು ಕೊಟ್ಟುಹೋಗಲೂ ಬಹುದು. ಬಿನಾ ಸರಬರಾಯಿ ಒದಗಿಸಿಕೊಡುವ ಜವಾಬ್ದಾರಿ ಪಟೇಲರ ಮೇಲೆ ಇರಲೇ ಕೂಡದೆಂತ ನಾವು ಭಾವಿಸುತ್ತೇವೆ.

ಪಟೇಲರು ಯಾವಾಗಲೂ ಸರಕಾರಿ ಹಣ ವಸೂಲ ಮಾಡಿ ಅವನ ದಲ್ಲಿಟ್ಟುಕೊಳ್ಳುವವರಾದ್ದರಿಂದಲೂ ಹಾಗೆ ವಸೂಲುಮಾಡುವ ಹಣ ಭದ್ರತೆಯಿಂದ ತಾಲೂಕು ಖಜಾನೆಗೆ ಕಳುಹಿಸುವ ಜವಾಬುದಾರಿ ಪಟೇಲರ ಮೇಲೆ ಇರುವುದರಿಂದ ಸಹಾ ಪ್ರತಿ ಒಬ್ಬ ಪಟೇಲಗೆ ಸರಕಾರದಿಂದ ಒಂದೊಂದು ಕೋಪಿ ಒದಗಿಸಿಕೊಟ್ಟು ಅದನ್ನು ಇಟ್ಟುಕೊಳ್ಳುವ ಬಗ್ಗೆ ಅಗತ್ಯವಾಗಿ ಕ್ಕಿಸನ್ನ ಕೊಡಲೇ ಬೇಕು. ವ ಅಂಥಾ ಕೋಪಿ ತಾಲೂಕಿಗೆ ಇನಾಲ ಕೊಂಡುಹೋಗುತ್ತಾ ತಳಿಯಾರ ಯಾನೆ ಉಗ್ರಾಣ ಉಪಯೋಗಿಸಿಕೊಳ್ಳುವ ಹಾಗೆ ಆಗಲೂ ಬೇಕು.

Casuarina Plantation for sale.

Casuarina, cocoanut and other plantations on the seashore one compact block of 37 57 acres assessed at as 8 per acre comprised by Patta No 287 S Nos $\frac{99}{3}$ $\frac{138}{2\&1B}$ & 214 in West Tonse Village, 5 miles North West of Udipi between Malpe and Hangarkatta Casuarina trees were planted between 1903 and 1906 with a decent tiled bungalow and 2 tenants houses in the centre A central place for fish guano factory and trade

Sale price plantation with land Rupees 20,000 casuarina trees only Rs 15,000 or approximate offer

For further particulars apply to —

A P Fernandes,
Hildaleville Urva Post
(S CANARA)

ಮಾರಾಟಕ್ಕಿದೆ.

ದಕ್ಷಿಣ ಕನ್ನಡಾ ಜಿಲ್ಲಾ ಉಡುಪಿ ತಾಲೂಕು ಪಡು ತೋನ್ಸೆ ಗ್ರಾಮದ ಗುಜ್ಜರ ಬೆಟ್ಟಿನಲ್ಲಿರುವ ಚಟುಕಿನ ಯಾನೆ ಗಾಳಿ ಮರದ ಕಾಡು, ತೆಂಗಿನ ವಗೈರೆ ಫಲಮರಗಳ ತೋಟ, ಬಂಗ್ಲೆ, ಒಕ್ಕಲುಮನೆಗಳು ವಗೈರೆ ಸರ್ವಾದಿ ಪಟ್ಟಾ ನಂಬ್ರ 287, ಸರ್ವೆ ನಂಬ್ರ $\frac{99}{3}$ $\frac{138}{2\,1B}$ 214 —ಎಕ್ರೆ 37 57 ತೀರ್ವೆ ಎಕ್ರೆಗೆ ಆಣೆ 8ರ ದರದಲ್ಲಿ ಕ್ರಯ—ಸ್ಥಳ ಸಮೇತ ಸುಮಾರು ಅಂದಾಜು ರೂ 2 ,000 ಚಟುಕಿನ ಮರಗಳಿಗ ಮಾತ್ರ ರೂ. 15,000 ವಿಳಾಸ —

ಎ. ಪಿ. ಫೆರ್ನಾಂಡಿಸ್,
ಉರ್ವಾ ಪೋಸ್ಟ್, ಮಂಗಳೂರು,
ದಕ್ಷಿಣ ಕನ್ನಡಾ ಜಿಲ್ಲಾ

NOTICE

In the Court of the District Judge of South Kanara.

O. P. $\frac{72}{1920}$

In the matter of the debts of Harekal Subraya Pai son of Harekal Vasudeva Pai.

Between

Harekal Ramakrishna Pai & Others... ... } *Petitioners.*

Petition under the Succession Certificate Act 1889.

The above Petition will come on for hearing in the above court on 15-9-1920.

Mangalore. } M Janardan Malya,
16—8—1920 } *Pleader for Petitioners*

ನೋಟೀಸು.

ದಕ್ಷಿಣ ಕನ್ನಡಾ ಜಿಲ್ಲಾ ಸಬೋರ್ಡಿನೇಟ ಜಡ್ಜರ ಕೋರ್ಟಿನಲ್ಲಿ. ಕ್ರಮ ನಂಬ್ರ $\frac{46}{20}$

ಬಿ ನಾರಾಯಣಾಚಾರ್ಯ—ವಾದಿ

ಮತ್ತು

೧ ರಘುಭೂಷಣ ತೀರ್ಥಸ್ವಾಮಿರು
೨ ಬಡ್ಕಿಲ್ಲಾಯ ನಾರಾಯಣರಾವ
೩ ಬಡ್ಕಿಲ್ಲಾಯ ಅನಂತ ಕೃಷ್ಣರಾವ
೪ ಬಡ್ಕಿಲ್ಲಾಯ ಗುಂಡುರಾವ
} ಪ್ರತಿವಾದಿರು

ಮೈಸೂರು ಸಂಸ್ಥಾನದ ಶಿವಮೊಗ್ಗಾ ಜಿಲ್ಲಾ ತೀರ್ಥಹಳ್ಳಿಯಲ್ಲಿ ಇರುವ ಭೀಮನಕಟ್ಟೆ ಯಾನೆ ಭೀಮಸೇತು ಮುನಿವೃಂದ ಮಠದ ಶಿಷ್ಯವರ್ಗದ ಕಡೆಯಿಂದ ಮೇಲ್ಕಂಡ ವಾದಿ ಬಿ ನಾರಾಯಣಾಚಾರ್ಯರು ಈ ದಾವೆಯನ್ನು ತಂದಿರುತ್ತಾರೆ. ೨, ೩, ೪ನೇ ಪ್ರತಿವಾದಿರ ಪೂರ್ವಾಧಿಕಾರಿಗಳಿಗೆ ಸದ್ರಿ ಮಠಾಧಿಪತಿಗಳಾದ ೧ನೇ ಪ್ರತಿವಾದಿರು ತಾ ೧೬.೬.೯೭ರಲ್ಲಿ ರೂಪಾಯಿ ೫೦೦೦ಕ್ಕೆ ಮಠದ ಬಾಬ್ತು ಸ್ಥಿರಾಸ್ತಿಗಳನ್ನು ಆಧಾರ ಮಾಡಿ ಬರಕೊಟ್ಟ ದಸ್ತೇವೇಜಿನ ಆಧಾರದ ಮೇಲೆ ಮೇಲ್ಕಂಡ ಕೋರ್ಟು ಕ್ರಮನಂಬ್ರ $\frac{16}{1918}$ ರಲ್ಲಿ ಸದ್ರಿ ಆಸ್ತಿಗಳ ಮಾರಾಟಕ್ಕೆ ಕೂಡಾ ೨, ೩ನೇ ಪ್ರತಿವಾದಿರು ಪಡಕೊಂಡ ಡಿಕ್ರಿ ಅಮಲ್‌ಜಾರಿಯಲ್ಲಿ ಸದ್ರಿ ಆಸ್ತಿಗಳು ಬಹಿರಂಗವಾದ ಕೋರ್ಟ ಹರಾಜಿಗೆ ಇಟ್ಟಿರುವ ಸಂದರ್ಭದಲ್ಲಿ ಮಠದ ಮೇಲಣ ಅಭಿಮಾನದಿಂದ ಮಠದ ಶಿಷ್ಯವರ್ಗದ ಕಡೆಯಿಂದ ಮಠಾಧಿಪತಿಗಳು ಮಠದ ಸ್ಥಿರ ಸೊತ್ತುಗಳ ಒಳೇ ಟ್ರಸ್ಟಿಗಳಾದ ಕಾರಣ ಸದ್ರಿ ಸೊತ್ತುಗಳು ಮಠದ ಸ್ವಾಧೀನದಿಂದ ಸಂಪೂರ್ಣ ತಪ್ಪಿಹೋಗದಂತೆ ನೋಡುವುದು ಸದ್ರಿ ಮಠಾಧಿಪತಿಗಳ ಕರ್ತವ್ಯವಾದ್ದರಿಂದಲೂ ಮೇಲ್ಕಂಡ ಆಧಾರ ದಸ್ತೇವೇಜು ಮಠದ ಅತ್ಯಗತ್ಯ ಖರ್ಚಿಗೆ ಅಲ್ಲವಾದ್ದರಿಂದಲೂ ಮೇಲ್ಕಂಡ ಡಿಕ್ರಿಯು ಮಠದ ಸ್ಥಿರಸೊತ್ತುಗಳ ಮಟ್ಟಿಗೆ ಅಸಿಂಧುವೆಂದಾಗಿ ವಾಗ್ರೂಪ ಡಿಕ್ರಿಯನ್ನು ವ ಹರಾಜು ಆಗದಂತೆ ೨, ೩, ೪ನೇ ಪ್ರತಿವಾದಿರ ಮೇಲೆ ಶಾಶ್ವತವಾದ ಇಂಜಂಕ್ಷನ್ ಕೂಡಾ ಅಪೇಕ್ಷಿಸಿ ತಂದ ಈ ದಾವೆಯಲ್ಲಿ ಕಕ್ಷಿಯಾಗಿ ಸೇರುವರೆ ಇಚ್ಛಿಸುವ ಸದ್ರಿ ಮಠದ ಶಿಷ್ಯವರ್ಗದ ಪೈಕಿ ಯಾರಾದರೂ ಮೇಲ್ಕಂಡ ಕೋರ್ಟಿಗೆ ಶೀಘ್ರ ಮನವಿಮಾಡಿ ಕೊಂಡು ಕಕ್ಷಿಸ್ಥಾನದಲ್ಲಿ ಸೇರಬಹುದೆಂದಾಗಿ ಈ ಮೂಲಕ ತಿಳಿಸೋಣಾಗುತ್ತದೆ

ಮಂಗಳೂರು } G Krishna Rao.
ತಾ ೪—೮—೧೯೨೦ }

FOUNTAIN PENS.

ಫೌಂಟನ್ ಪೆನ್ನುಗಳು.

14 ಕ್ಯಾರೆಟ್ ಚಿನ್ನದ ಮೊನೆಯುಳ್ಳ ಅತ್ಯುತ್ತಮವಾದ ವಿವಿಧ ತರದ ಫೌಂಟನ್ ಪೆನ್ನುಗಳು ಈಗ ತಾನೇ ಬಂದಿವೆ.

ಕಾಮತ್ ಸೇಫ್ಟಿ ಪೆನ್ ಕ್ರಯ ರೂ. 9—8—0.
„ ಫೌಂಟನ್ ಪೆನ್ „ 9—0—0.

ಠಪಾಲಿನಲ್ಲಿ ತರಿಸುವವರಿಗೆ ಪ್ರತ್ಯೇಕ ದರಗಳು.

ಪಿ. ಎಮ್. ಕಾಮತ್ ಎಂಡ್ ಕೊ.
ಕೆಮಿಸ್ಟ್ಸ್, ಮಂಗಳೂರು.

[illegible] ಬ್ಯಾಂಕ್ ಲಿಮಿಟೆಡ್, ಮಂಗಳೂರು.

[illegible]ISHED JULY 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

[illegible]ized and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
[illegible]serve and other sinking Funds ,, 138772—0—2	ಕ್ಷೇಮನಿಧಿ ಮತ್ತು ಇತರ ಫಂಡುಗಳು 138,772—0—2

[illegible] BANK RECEIVES FIXED, CURRENT ACCOUNT, & SAVINGS BANK DEPOSITS.

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.

ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರಕೊಳ್ಳುವದು.

Canara Bank Ltd.,
Mangalore, 10th May 1920.

K. Venkat Rao,
Secretary.

[illegible]

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟದ್ದು).

[illegible]

[illegible] ... ಯುತ್ತದೆ.

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಮುಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ. ಬೇಕಾದವರು [illegible] ಅವುಗಳ ಪ್ರತಿಯನ್ನು ತರಿಸಬಹುದು. [illegible] ಎಂದು [illegible] ತಿಳಿಯಬಹುದು.

ಒಂದು ಡಬ್ಬಾ ಮುರಬ್ಬಾವನ್ನು ೧೫ ದಿವಸಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ. [illegible] ಡಬ್ಬಿಗಳನ್ನು ಉಪಯೋಗಿಸುವುದರಿಂದ [illegible] ದವರೆಗೂ ಗುಣ ಕೊಡುತ್ತೆ. ಉಪಯೋಗಿಸುವ ಪ್ರಕಾರ [illegible]ಯಲ್ಲಿರುವದು.

ಕ್ರಯ: ಒಂದು ಡಬ್ಬಿಗೆ ರೂಪಾಯಿ 2.

[illegible] ಡಬ್ಬಿಗೆ 8 ಆಣೆ, 2 ಯಾ 3 ಡಬ್ಬಿಗಳಿಗೆ 12 ಆಣೆ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ದಿಲ್ಲೆಯನ್ನು ಹೋಲುವ ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ಲೆವೆಂಡರ್. ಶೀಸೆ 1ಕ್ಕೆ 1—4—0.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ದಿಕರಿಗೆ ಸಿದ್ಧವಾಗಿರುತ್ತವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.



"ಧನ್ವಂತರೀ ಬಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರಿಂದ ವಾತ, ಕಫ, ಜಗತ, ಉಳುಕು ಘಾಯ, ತಲೆನೋವು, ಸೊಂಟನೋವು, ಬೆನ್ನುನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಕ್ಷಿಪ್ರದಲ್ಲಿ ಸಂಪೂರ್ಣವಾಗಿ ಗುಣ ಹೊಂದುವವು. ಬಾಟ್ಲಿಗಿರ ಕಿಮ್ಮತು ೦—೭—೦; ಒಂದು ಡಜನು ಬಾಟ್ಲಿಗಳಿಗೆ ರೂ. ೪—೧೨—೦.

"ಗಜಕರ್ಣದ ಮುಲಾಮು"

ಗಜಕರ್ಣ, ಉಸಬು, ಖಜ್ಜಿ, ದದ್ರು, ಹುಳಕಡ್ಡಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಾಗಿಸುವದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು. ಬಾಟ್ಲಿ ೧ಕ್ಕೆ ೦—೪—೦; ಒಂದು ಡಜನಿಗೆ ರೂ. ೩—೮—೦.

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಮೆಡಲು ದೊರೆತಿರುವವು. ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗರಿಗೂ ಯೋಗ್ಯ ಕಮಿಶನ್ನು ಕೊಡಲಾಗುವದು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೂ ಪತ್ರವ್ಯವಹಾರ ಮುಖೇನ.

ದಿ. ಮ್ಯಾನೆಜರ್ — ಶ್ರೀ ದೇವಿಪ್ರಸಾದ ಕಂಪೆನಿ,
ಪೋಸ್ಟು ಬಾಕ್ಸ್, [illegible], ಪ. ಕಲ್ಕತ್ತ.

"ಟಿಶ್ಯುರೆಮಿಡಿಸ್"

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು.

1 ಕಲ್ಕೇರಿಯ ಫ್ಲೊರ್	7 ಕಾಲಿ ಸಲ್ಫ್
2 ಕಲ್ಕೇರಿಯ ಫೊಸ್	8 ಮಗ್ನೆಸಿಯ ಫೊಸ್
3 ಕಲ್ಕೇರಿಯ ಸಲ್ಫ್	9 ನಾಟ್ರುಮ್ ಮ್ಯುರ್
4 ಫೆರಮ್ ಫೊಸ್	10 ನಾಟ್ರುಮ್ ಫೊಸ್
5 ಕಾಲಿ ಮ್ಯುರ್	11 ನಾಟ್ರುಮ್ ಸಲ್ಫ್
6 ಕಾಲಿ ಫೊಸ್	12 ಸಿಲಿಸಿಯಾ

ಕ್ರಯ

		ರೂ. ಆ. ಪೈ.
ಎರಡು ಡ್ರಾಮಿನ ಸೆಟ್	D ಸೀಸೆ ಒಂದಕ್ಕೆ	0-3-6
ನಾಲ್ಕು ,,	C ,, ,, ,,	0-6-0
ಒಂದು ಔನ್ಸಿನ	A ,, ,, ,,	0-12-6
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕಪೆಟ್ಟಿಗೆಗೆ		3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನ ವೈದ್ಯ ಶಾಸ್ತ್ರ ಪುಸ್ತಕ ಸಮೇತ		10—0—0

ಜೀವರಸಾಯನ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು. ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾಂಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ. ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ. ಫೆರ್ನಾಂಡಿಸ್,
ಎಲಿಕ್ಸ್ ಹೋಮಿಯೋಪತಿ ಡಿಸ್ಪೆನ್ಸರಿ, ಮಂಗಳೂರು.

ಆರ್. ಮಾರ್ಟಿನ್ನರ

ಸಾರಸಾಪರಿಲ್ಲಾ

ಈ ಸಾರ್ಸಾಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರಹದ ಕಾಹಿಲೆ, ಉಬ್ಬುವುದು. ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯುಕ್ತಿಸಾರ, ಕೆಮ್ಮು, ಫರಂಗಿಹುಣ್ಣು, [illegible] ಮತ್ತು ಚರ್ಮದ ರೋಗಗಳು; ವಿಷಕಡಿತದಿಂದುಂಟಾದ ವ್ಯಾಧಿ, [illegible] ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಂದರೆ [illegible] ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿ ೧ಕ್ಕೆ ಕ್ರಯ ರೂ. [illegible]

ಆರ್ ಮಾರ್ಟಿನ್ನರ ಎಗ್ಯೂ ಮಿಕ್ಸ್‌ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಾಳಿಜ್ವರ, ಸನ್ನಿಪಾತ, [illegible] ವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರ [illegible] ನಾಶಮಾಡುತ್ತದೆ. [illegible] ಜ್ವರವನ್ನು [illegible] ನಾಶಮಾಡುವದಲ್ಲದೆ ಇದು ಸಿಹಿಯಾಗಿರುವುದರಿಂದ [illegible] ಅನೇಕ [illegible] ವೈದ್ಯರಿಂದ [illegible] ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಗುಣವಾಗಿದೆ. ಬಾಟ್ಲಿ ೧ಕ್ಕೆ ರೂ. ೦—೧೪—೦.

ಆರ್ ಮಾರ್ಟಿನ್ನರ ಮೂಲವ್ಯಾಧಿ ಮುಲಾಮು

ಮನುಷ್ಯರಿಗೆ ಮೂಲವ್ಯಾಧಿ [illegible] ಮರ್ಮಸ್ಥಾನದಲ್ಲಿ ಉರಿಯುವುದು [illegible] ಈ ಔಷಧದ ಒಂದೇ ಒಂದು ಡಬ್ಬಿಯ [illegible] ಯುವ ಮೂಲವ್ಯಾಧಿ, [illegible] ಮೂಲವ್ಯಾಧಿ [illegible] ಮೂಲವ್ಯಾಧಿಯಾದರೂ [illegible] ಔಷಧಗಳಿಂದ ತಯಾರಿಸಲ್ಪಟ್ಟು [illegible] ನೋವನ್ನು ಕೊಡದೆ [illegible] ರೂ. [illegible]

ವಿಳಾಸ:—ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೋ. ಹತ್ತರ, ಫೋರ್ಟ್, ಮುಂಬಯಿ.

R. D. Kately & Co.
No. D. Frere Road,
Near Wright & Co. Fort, Bombay.

The Canara Banking Corporation, Udipi, (Limited).

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್, ಉಡ್ಪಿ, ಲಿಮಿಟೆಡ್.

Authorised capital	3,20,000—0—0
Issued and subscribed capital	50,000—0—0
Paid up capital	40,006—1—11
Deposits	67,746—1—7
Reserve and other Funds as on 31-3-20	8,258—9—6

Fixed deposits received for 3, 6, 9 12, 24, months at 7% at the discretion of the Managing Committee. In the case of all deposits interest will be paid quarterly.

Cummulative deposits are received repayable in 45 months at Rs. 50/—per each rupee deposited monthly.

Current a/c deposits opened free of charge and interest will be paid @ 3½% per annum on the lowest balance between the 4th and the last day of each month.

Loans granted on proper securities and pledges.

A dividend of 8% has been declared for the year ending 31-3-1919

Payments to the Corporation may be made to the credit of the Corporation at the Bank of Madras, and Canara Bank Mangalore.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,20,000—0—0
ಚಂದಾಹಾಕಲಿಕ್ಕೆ ಅರ್ಪಿಸಿದ ವ	
ಚಂದಾ ಎತ್ತಿದ ಮೂಲಧನ	„ 50,000—0—0
ಮೌಲ್ಯ ಕೆತ್ತ ಮೂಲಧನ	„ 40,006—1—11
ಠೇವಣಾತಿಗಳು...	„ 67,746—1—7
ಕ್ಷೇಮನಿಧಿ ಮತ್ತು ಇತರ ಫಂಡುಗಳು ...	„ 8,258—9—6

ಕಾಯಂ ಠೇವಣಾತಿಗಳು ತಿಂಗಳು 3, 6, 9, 12, 24ರ ಅವಧಿಗಳಿಗೆ ಆಡಳಿತೆ ಸಭೆಯವರ ಮುನಾಸಬು ಪ್ರಕಾರ ಸಾಲಿಯಾನ್ ಶೇಕಡಾ 7% ದರದಲಿ ಬಡ್ಡಿ ಕೊಡೋಣಾಗುವದು ಎಲ್ಲಾ ಠೇವಣಾತಿಗಳ ಮೇಲಣ ಬಡ್ಡಿ 3 ತಿಂಗಳಿಗೊಮ್ಮೆ ಕೊಡೋಣಾಗುವದು.

ಪ್ರತಿ ತಿಂಗಳಿಗೆ ರೂ. 1ರ ಪ್ರಕಾರ 45 ತಿಂಗಳುಗಳವರೇಗೆ ವಸೂಲು ಕೊಡುವ ಸಂಚಯದ ಠೇವಣಾತಿಗಳಿಗೆ 45 ತಿಂಗಳ ಅಂತ್ಯದಲ್ಲಿ ಪ್ರತಿ ತಿಂಗಳಲ್ಲಿ ವಸೂಲು ಕೊಟ್ಟ ರೂ. 1ಕ್ಕೆ ರೂ. 50/ರಂತೆ ವಾಪಸು ಕೊಡೋಣಾಗುವದು.

ಚಾಲ್ತಿ ಠೇವಣಾತಿಗಳು ಸಂಘದ ಪರವಾಗಿ ಏನೂ ಖರ್ಚು ಇಲದೆ ಪಡಕೊಳ್ಳೋಣಾಗುವವು. ಪ್ರತಿ ತಿಂಗಳ ೪ನೇ ತಾರೀಕಿನಿಂದ ಆಖೈರು ತಾರೀಕುವರೆಗೆ ಯಾವದಾದರೊಂದು ದಿನ ಇರುವ ಅತಿ ಕಡಿಮೆ ಠೇವಣಾತಿ ಮೊಬಲಗಿನ ಮೇಲೆ ಸಾಲಿಯಾನ್ ಶೇಕಡಾ 3½ ದರದಲ್ಲಿ ಬಡ್ಡಿ ಕೊಡೋಣಾಗುವದು.

ಯೋಗ್ಯ ಜವಾಬ್ದಾರಿಯ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಪಾಲುವಾಲೀಕರಿಗೆ 31—3—19ನೆ ವರ್ಷಕ್ಕೆ ಶೇಕಡಾ 8% ದರದ ಬಟ್ಟ ಕೊಡೋಣಾಗಿಯದೆ.

ಸಂಘಕ್ಕೆ ಕೊಡೋಣಾಗುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸು ಬೇಂಕಿನಲ್ಲಿ ಮತ್ತು ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಡಬಹುದು.

UDIPI,
17th. July 1920.

Naimpalli Ananda Rao,
Secretary.

BANK OF MADRAS.
ಮದ್ರಾಸ್ ಬ್ಯಾಂಕ್.
ಹೆಡ್ ಆಫೀಸು ಮದ್ರಾಸ್.

ಮೂಲಧನ	ರೂ. 75,00,000.
ಕ್ಷೇಮನಿಧಿ	45,00,000.

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾದಾವು.

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ. 5,000ಕ್ಕೆ ಮಿಗದ ಮೊಬಲಗನ್ನು ಠೇವಣಾತಿಯಾಗಿಡಬಹುದು.

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ. 10,000ಕ್ಕೆ ಮೀರದ ಮೊಬಲಗಿನ ವರೇಗೆ ಬಡ್ಡಿ ಎಣಿಸಲಾಗುವುದು.

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿನಿಂದ ಪಡೆಯಬಹುದು.

ಸಿ. ಎಲ್. ಗೊರ್ಡನ್,
ಏಜಂಟ್, ಮದ್ರಾಸ್ ಬ್ಯಾಂಕ್, ಮಂಗಳೂರು.

ಭೃಂಗರಾಜ ತೈಲ.

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ. ನರೆತ ಕೂದಲು ಕಪ್ಪಾಗುತ್ತದೆ. ಕೇಶದಾಮಗಳು ವೃದ್ಧಿಹೊಂದುತ್ತವೆ. ಕಂಠವ, ಮೇಲೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ. ಪಿತ್ತನಾಶ ಮಾಡುತ್ತದೆ. ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ. 0—12—0.

ತ್ರಿಪಾಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದನ್ನು ತಲೆಗೆ ಹಚ್ಚಿಕೊಂಡರೆ ಪರಿಹಾರವಾಗುತ್ತದೆ. ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ. ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ. 1.

ಜ್ವರಾಂತಕ ಮಾತ್ರೆ—ಈ ಮಾತ್ರೆಯನ್ನು ಉಪಯೋಗಿಸಿದರೆ ಎಲ್ಲಾ ಜ್ವರಗಳ ಪರಿಹಾರವಾಗುತ್ತದೆ. ಉಪಯೋಗಿಸುವ ಕ್ರಮ, ಪತ್ಯ ಗಳು ತಿಳಿಸಿಕೊಂಡಲ್ಲಿ ಪ್ರಮಾಣಕ ಪಡಿಸುತ್ತದೆ. 20 ಮಾತ್ರೆಗಳುಳ್ಳ ಸೀಸೆ ಒಂದರ ರೂ. 1.

ಪಂಚಸಾರ ಲೇಹ—ಅಜೀರ್ಣ, ಪಿತ್ತ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತದೆ. ಮತ್ತು ಇಂದ್ರಿಯವನ್ನು ಬಲಪಡಿಸಿ ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಸೇರಿಗೆ ರೂ. 1—4—0.

ಮೇಲೆ ಬರೆದ ಔಷಧಿಗಳು ಸರ್ವ ವೈದ್ಯರಿಂದ ತಿಳುವಳಿಕೆಯುಳ್ಳ ಶ್ರೀ ಆಯುರ್ವೇದಾವಲಂಬಿಗಳಾದ ಶ್ರೀ ಪೂಜ್ಯರಾದ ಋಷಿ ಪ್ರಣೀತ ವೈದ್ಯಗ್ರಂಥ ಆಧಾರದಿಂದ ಆದರಿಸಿ ಪೂಜ್ಯರ ಅನುಯಾಯಿಗಳಾದ ನಮ್ಮಿಂದ ತಯಾರಿಸಲ್ಪಟ್ಟಿರುತ್ತವೆ. ಅರ್ಜಿ ಬರೆದರೆ ನಮಗೆ ಎಷ್ಟು ಸಹಾಯವಾಗಿ ತೋರುತ್ತದೋ ಅಷ್ಟೇ ಧರವಸೆಯಿಂದ ಈ ಔಷಧಗಳು ರೋಗ ಪರಿಹಾರಕವಾಗಿರುತ್ತವೆ.

ಸೂಚನೆ—ಅವಶ್ಯಪಡುವವರು ಕಟುವಾಗಿ ಬರೆದುಕೊಳ್ಳಬಹುದು, ಉಚಿತವಾಗಿ ಕಳುಹಿಸಲಾಗುವುದು.

ಆಯುರ್ವೇದಿಕ್ ಮತ್ತು ಹೊಮಿಯೊಪತಿಕ್
ವಿಳಾಸ:—
ಧರ್ಮ ವೈದ್ಯಶಾಲಾ,
ಧರ್ಮಸ್ಥಳ ದಕ್ಷಿಣ, ಕನ್ನಡ.

೧೯೨೦ನೇ ಜನವರಿಯಿಂದ ಆರಂಭ.	ಸದ್ಬೋಧಕ ಗ್ರಂಥಮಾಲೆ. (ತ್ರೈಮಾಸಿಕ ಪುಸ್ತಕ).	ವಾರ್ಷಿಕ ಚಂದಾ ಅಂಚೆ ಸಹಿತ ರೂ. 1 ಮಾತ್ರ.

೧ ಈ ತಿಂಗಳ ತಾ. ೨೦ರಿಂದ ಸಿಮ್ಲಾದಲ್ಲಿ ವರಿಷ್ಠ ಕೌನ್ಸಿಲಿನ ಅಧಿವೇಶನವು ಪ್ರಾರಂಭವಾಗಿದೆ. ಈ ಅಧಿವೇಶನವು ಮೋರ್ಲೆ ಮಿಂಟೋ ಕೌನ್ಸಿಲಿನ ಕೊನೆಯದಾಗಿದೆ. ಎಂದರೆ ಬರುವ ವರ್ಷದಿಂದ ಹೊಸ ಕಾನೂನಿನ ಪ್ರಕಾರ ಹೊಸ ಕೌನ್ಸಿಲು ಪ್ರಾರಂಭವಾಗುವುದುಂಟಷ್ಟೆ. ಈ ಅವಸಾನದ ಕೌನ್ಸಿಲನ್ನು ಪ್ರಾರಂಭಿಸುವಾಗ ವೈಸರಾಯರು ಒಂದು ಉದ್ದ ಭಾಷಣವನ್ನು ಮಾಡಿದರು. ವೈಸರಾಯರ ಈ ಭಾಷಣದಲ್ಲಿ ಹಿಂದುಸ್ಥಾನದೊಳಗಿನ ಈಗಿನ ಮಹತ್ವದ ಎಲ್ಲ ವಿಷಯಗಳ ಉಲ್ಲೇಖವಿತ್ತು. ಯುವರಾಜರ ಆಗಮನವು ಮುಂದರಿಸಿಟ್ಟ ಸಂಗತಿ, ಹೊಸ ಕೌನ್ಸಿಲುಗಳ ವಿಷಯ ಮುಂತಾದವುಗಳನ್ನು ಉಲ್ಲೇಖಿಸಿ ವೈಸರಾಯರು ಪಂಜಾಬ ಪ್ರಕರಣ ಮತ್ತು ಖಿಲಾಫತ್‌ಪ್ರಶ್ನೆ ಇವುಗಳನ್ನು ಪ್ರಸ್ತಾಪಿಸಿದರು. "ಹಂಟರ್ ಕಮಿಟಿಯ ರಿಪೋರ್ಟನ್ನು ಪರಿಶೀಲಿಸಿ ಹಿಂದಿ ಸರಕಾರವು ಯಾವ ಅಭಿಪ್ರಾಯವನ್ನು ಕೊಟ್ಟಿತೋ ಅದನ್ನೇ ಬ್ರಿಟಿಷ್ ಮಂತ್ರಿಮಂಡಲವು ಅಂಗೀಕರಿಸಿದೆ. ಇದರಿಂದ ಹಲವು ಪಕ್ಷಗಳಿಗೆ ಅತೃಪ್ತಿಯುಂಟಾಗಿ ಅವು ತಂತಮ್ಮ ದೃಷ್ಟಿಯಿಂದ ಅನುಕೂಲ ಪ್ರತಿಕೂಲವಾಗಿ ಟೀಕಿಸುತಿದ್ದಾವೆ. ಆದರೆ ಈಗ ಭವಿಷ್ಯತ್ಕಾಲದ ಮೇಲೆ ದೃಷ್ಟಿಯನ್ನಿಟ್ಟು ಹಿಂದಿನ ಈ ವಿಷಯಗಳನ್ನು ಎಲ್ಲರೂ ಮರೆತು ಬಿಡುವುದು ಯುಕ್ತವಾಗಿದೆ". ಎಂದು ವೈಸರಾಯರು ಹೇಳಿರುವರು. ಆದರೆ ವೈಸರಾಯರ ಈ ಮುತ್ಸದಿತನದ ಉಪದೇಶವು ನ್ಯಾಯ ಪ್ರಿಯರಿಗೆ ಒಪ್ಪಲಿಕ್ಕಿಲ್ಲವೆಂದು ತಿಳಿಯುತ್ತೇವೆ. ಯಾಕೆಂದರೆ, ಮನುವು ಹೇಳುವಂತೆ ಅದಂಡ್ಯರನ್ನು ದಂಡಿಸುವುದೂ, ದಂಡ್ಯರನ್ನು ಬಿಟ್ಟು ಬಿಡುವುದೂ ನ್ಯಾಯ ದೃಷ್ಟಿಯಿಂದ ತಪ್ಪೇ ಸರಿ. ಇಂಥ ತಪ್ಪನ್ನು ಮಾಡಿ ಪುನಃ ಅದನ್ನು ಮರೆತು ಬಿಡಿರಿ ಎಂದು ಹೇಳಹತ್ತಿದರೆ ಅದರಿಂದ ಯಾರಿಗೆ ಸಂತೋಷವಾದೀತು? ಖಿಲಾಫತ್ತಿನ ಪ್ರಶ್ನೆಯನ್ನು ಉದ್ದೇಶಿಸಿ ಮಾತಾಡುವಾಗ ವೈಸರಾಯರು, ಹಿಂದಿ ಮುಸಲ್ಮಾನರ ಅಂಬೋಣವನ್ನು ಮಿತ್ರಸಂಘದ ಪರಿಷತ್ತಿನ ಮುಂದೆ ಹಿಂದುಸ್ಥಾನ ಸರಕಾರವು ಸಾಧ್ಯವಿದ್ದ ಮಟ್ಟಿಗೆ ಸರ್ವ ಪ್ರಯತ್ನದಿಂದ ಇಟ್ಟಿತು. ಪರಂತು ಅದು ಯಶಸ್ವಿಯಾಗಲಿಲ್ಲವೆಂಬ ಸಂಗತಿಯನ್ನು ಹೇಳಿ ಅಸಹಕಾರಿತೆಯ ಚಳವಳವನ್ನು ಪ್ರಾರಂಭಿಸಿದ್ದಕ್ಕೆ ಅವರು ತಮ್ಮ ವಿಷಾದವನ್ನು ವ್ಯಕ್ತಗೊಳಿಸಿದರು. "ಈ ಚಳವಳದಿಂದ ಅವ್ಯವಸ್ಥೆ, ಗಲಾಟೆ ಮುಂತಾದ ಅಸ್ವಾಸ್ಥ್ಯವು ಉದ್ಭವಿಸೀತು." ಇಂಥ "ಅತಿ ಮೂರ್ಖತನದ ಉಪಾಯ"ವು ಶಾಂತಪಕ್ಷದವರ ಮತ್ತು ವಿವೇಕಿಗಳಾದ ಇತರ ಜನರ ಪ್ರಯತ್ನದಿಂದ ನಿಷೇಧಿಸಲ್ಪಟ್ಟೀತೆಂದು ಅವರು ತಮ್ಮ ಭರವಸೆಯನ್ನು ವ್ಯಕ್ತಗೊಳಿಸಿದರು. ಅಸಹಕಾರಿತೆಯ ವಿಷಯವಾಗಿ ವೈಸರಾಯರ ಈ ವಿಚಾರಗಳಿಗೆ ಬರುವ ಜಾದಾ ರಾಷ್ಟ್ರೀಯ ಸಭೆಯೆ ಉತ್ತರ ಕೊಡತಕ್ಕದ್ದಾದ ಕಾರಣ ನಾವು ಪ್ರತ್ಯೇಕವಾಗಿ ಬರೆಯಬೇಕಾದ ಅಗತ್ಯವಿಲ್ಲ.

[illegible] ಹೀಗೆ ಈ ವಿಷಯ [illegible] ಅಧ್ಯ[illegible] ಬಂದಿಗಳ [illegible] ಅಂಗಗಳ [illegible] ಇತ್ಯಾದಿ ಅನೇಕ [illegible] ಗಳಾಗಿದ್ದವು. ಅವುಗಳನ್ನೆಲ್ಲ [illegible] ಕೌನ್ಸಿಲಿನಲ್ಲಿ ವೈಸರಾಯರ [illegible] ಪ್ರತ್ಯುತ್ತರಗಳು ನಡೆದವು. [illegible] ನಾಮದಾರ ಖಾಪರ್ಡೆಯವರು ಕೇಳಿದ ಪ್ರಶ್ನೆ [illegible] ವಾಚಕರ ಮುಂದಿಡು [illegible] "ಮಧ್ಯ ಪ್ರಾಂತದೊಳಗಿನ ಸಾಗರ [illegible] ಪ್ರತಿ ದಿನ ೧೦೦೦ ದನಗಳನ್ನು ಕೊಲ್ಲು ತಿಕಲೂ ಮತ್ತು ಅಲ್ಲಿ ಚರ್ಮಗಳನ್ನು ಹದಮಾಡುವ ಮತ್ತು ವಿಕ್ರಯಿಸುವ ಒಂದು ಕಂಪೆನಿಯು ಸ್ಥಾನಿಕ ಸರ ಕಾರದ ಆಶ್ರಯದ ಮೇಲೆ ಆಗಲಿಕ್ಕೆ ಉಂಟೆಂತಲೂ ಜನವಾರ್ತೆ ಇದೆ. ಇದು ಯಥಾರ್ಥವೋ ಹೇಗೆ? ಮತ್ತು ಮೇಲಿನ ಎರಡೂ ಸಂಗತಿಗಳು ಹೌದಾದರೆ ಹಿಂದೂಸ್ಥಾನ ಸರಕಾರವು ಈ ವಧೆಯನ್ನು ನಿಲ್ಲಿಸಿ ಅಂಥ ಕಂಪೆನಿಗೆ ಆಶ್ರಯ ಕೊಡ ಬಾರದೆಂದು ಸ್ಥಾನಿಕ ಸರಕಾರಕ್ಕೆ ತಿಳಿಸಬೇಕು". ನಾಮದಾರ ಖಾಪರ್ಡೆಯವರ ಈ ಸವಾಲಿಗೂ ಸೂಚನೆಗೂ ಸರಕಾರದ ಪರವಾಗಿ ನಾಮದಾರ ಶರ್ಮರು ಉತ್ತರ ಕೊಟ್ಟರೇ ನೆಂದರೆ—"ಮಧ್ಯ ಪ್ರಾಂತದ ಕೌನ್ಸಿಲಿನಲ್ಲಿ ಅಲ್ಲಿಯ ಗೋವ ಧೆಯು ಮತ್ತು ಕಂಪೆನಿಯ ಮಾಹಿತಿಯನ್ನು ಕೇಳಬೇಕು ಅಲ್ಲಿಯ ಸ್ಥಾನಿಕ ಸರಕಾರದ ಆಡಳಿತೆಯಲ್ಲಿ ಹಿಂದಿ ಸರಕಾರವು ಕೈಹಾಕುವುದಿಲ್ಲ". ಈ ಮೇರೆಗೆ ಹಿಂದುಸ್ಥಾನ ಸರಕಾರವು ತನ್ನ ಜವಾಬದಾರಿಯನ್ನು ತಪ್ಪಿಸಲು ಯತ್ನಿಸಿದ್ದನ್ನು ನೋಡಿ ನಾಮದಾರ ಖಾಪರ್ಡೆಯವರು ಕೂಡಲೆ "ಈ ಪ್ರಶ್ನೆಯ ವಿಷಯ ವಾಗಿ ಹಿಂದುಸ್ಥಾನ ಸರಕಾರದ ಧೋರಣವೇನು" ಎಂಬ ಪ್ರಶ್ನೆಯನ್ನು ಕೇಳಿದರು. ನಾಮದಾರ ಶರ್ಮರು ಕೊಂಚ ತಡೆದು "ಈ ಪ್ರಶ್ನೆಯನ್ನು ಉತ್ತರಿಸುವುದಾದರೆ ಸಮಯವು ಬೇಕು" ಎಂದು ಹೇಳಿದರು! ಅಂತೂ ಗೋವಧೆಯ ವಿಷಯ ದಲ್ಲಿ ಹಿಂದೂಸ್ಥಾನ ಸರಕಾರದ ಅಂತರಂಗವು ಗುಪ್ತವಾಗಿಯೇ ಉಳಿಯಿತು.

೩ ಮದ್ರಾಸು ಶಹರಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಧನಿ ಕರಾದವರು ಓಳರೋಗಿಗಳ ವಾರ್ಡಿನಲ್ಲಿ ಇದ್ದು ಔಷಧೋಪ ಚಾರ ಹೊಂದುವ ಕ್ರಮವನ್ನು ಬರುವ ೧೯೨೧ನೆ ಎಪ್ರಿಲ್ ೧ನೇ ತಾರೀಕಿನಿಂದ ನಿಲ್ಲಿಸಲಾಗುವುದು ಎಂದು ಸರಕಾರಿ ಹುಕುಂ ಹೊರಟಿತ್ತು. ಈ ವರೆಗೆ ಬಡಜನರಿಗೆ ಮುಫತ್ತಾ ಗಿಯೂ ಧನಿಕರಿಗೆ ಅವರ ದ್ರವ್ಯಾನುಕೂಲಕ್ಕೆ ಸರಿಯಾದ ಫೀಸು ವಸೂಲುಮಾಡಿಯೂ ಈ ಆಸ್ಪತ್ರೆಗಳಲ್ಲಿ ದಾಖಲುಮಾಡು ತ್ತಿದ್ದ ಕ್ರಮವನ್ನು ನಿಲ್ಲಿಸಿಬಿಡುವುದು ಸರಿಯಲ್ಲ, ಈ ಆಸ್ಪತ್ರೆ ಗಳಲ್ಲಿರುವ ಅನುಭವಶಾಲಿಗಳಾದ ತಜ್ಞರಿದ್ದಾರೆ, ಅಂಥವರ ಚಿಕಿತ್ಸೆಯ ಲಾಭವು ಎಲ್ಲರಿಗೂ ಸಿಗುವುದು ನ್ಯಾಯಸಮ್ಮತ ವಾದ್ದು, ಜನಗಳ ಕಂದಾಯದಿಂದ ಖರ್ಚುಮುಟ್ಟಿಸುವ ಈ ಸಂಸ್ಥೆಗಳಲ್ಲಿ ಸರ್ವರಿಗೂ ಪ್ರವೇಶದ ಸಮಾನ ಹಕ್ಕು ಇರಬೇ ಕಾಗಿದೆ ಎಂದು ಮುಂತಾಗಿ ನಾಮದಾರ ಶಿವರಾಯರು ಮದ್ರಾಸು ನ್ಯಾಯವಿಧಾಯಕ ಸಭೆಯ ಕಳೆದ ಅಧಿವೇಶನ ದಲ್ಲಿ ಒಂದು ಠರಾವನ್ನು ತಂದಿಟ್ಟರು. ಈ ಠರಾವು ಬಹು ಮತದಿಂದ ಪಾಸಾಯಿತು ಈ ಚರ್ಚೆಯಲ್ಲಿ ಸರ್ಜನ ಜನ ರಲ ಸಾಹೇಬರ ವಾದವು ಬಹು ವಿಚಿತ್ರತರದ್ದಾಗಿದೆ ಮೆಂಬ ರಲ್ಲಿ ಅನೇಕರು ಈ ಸರಕಾರಿ ಹುಕುಮನ್ನು ಚೆನ್ನಾಗಿ ಓದಲೇ ಇಲ್ಲ, ಧನಿಕರನ್ನು ದಾಖಲುಮಾಡಲೇ ಬಾರದೆಂದಲ್ಲ ಅವ ರಿಗೆ ಬೇರೆ ಸ್ಥಳವನ್ನು ವಿಂಗಡಿಸಿ ಕೊಡುವುದನ್ನು ನಿಲ್ಲಿಸಬೇ ಕೆಂದು ಹುಕುಮಿನ ಅರ್ಥ, ದಾಖಲಾಗದೆ ಇದ್ದವರು ಆ ಕುರಿತು ಅಪ್ಪೀಲುಮಾಡಬಹುದೆಂದು ಹುಕುಮಿನಲ್ಲಿ ಎಡೆ ಇಟ್ಟದೆ, ಕಂದಾಯಕೊಡುವ ಪ್ರತಿಯೊಬ್ಬನು ನಿರ್ಣಯಿಸಿದ ಫೀಸು ಕೊಟ್ಟಲ್ಲಿ ಬೇರೆ ಸ್ಥಳ ಅಥವಾ ಕೋಣೆಯ ಅನುಕೂ ಲತೆ ಹೊಂದಲಿಕ್ಕೆ ಅರ್ಹನೆಂದು ವಾದಿಸುವುದು ಸಮ್ಮತವಾದಿ ಗಳ ತರ್ಕವಾಗುತ್ತದೆ ಎಂದು ಮುಂತಾಗಿ ಒಂದು ಬಗೆಯ ಆಡಂಬರದ ಮಾತುಗಳನ್ನು ಇವರು ಆಡಿದರೆಂದು ವರ್ತಮಾನ ಪತ್ರಿಕೆಗಳು ಹೇಳುತ್ತಿವೆ. ಹುಕುಂ ಸರಿಯಾಗಿ ಓದದೆ ಚರ್ಚಿಸಿದ ರೆಂದು ಸರ್ಜನ ಜನರಲ್ ಸಾಹೇಬರು ಆಕ್ಷೇಪಿಸಿದ ಮೆಂಬರು ಗಳಲ್ಲಿ ಲಂಡನದ ಮುದ್ರೆ ಒತ್ತಿದವರಲ್ಲಿ ಮದ್ರಾಸು ಯೂನಿವರ್ಸಿಟಿಯಿಂದ ಆರಿಸಲ್ಪಟ್ಟ ರೆವರೆಂಡ್ ಇ. ಎಮ್. ಮೆಕ್‌ಫೈಲ್ ಸಾಹೇಬರು ಒಬ್ಬರು ಇವರು ಮದ್ರಾಸಿನ ಹೆಸರುವಾಸಿಯಾದ ಕ್ರಿಶ್ಚನ್ ಕೊಲೇಜಿನ ಪ್ರಿನ್ಸಿಪಾಲರು, ಸ್ವಾಭಾವಿಕವಾಗಿ ಸೌಮ್ಯಸ್ವಭಾವದ ಮಿಶ್ನರಿಗಳು, ಹುಕುಂ ಓದದೆ ಸರಕಾರದ ಇತ್ಯರ್ಥವನ್ನು ನಿಂದಿಸ್ಯಾರು ಎಂದು ಭಾವಿಸುವುದು ಕಷ್ಟತರವಾಗಿದೆ. ಅದಂತಿರಲಿ! ಮುಕಬ್ರ್ಮಾನ ಸರ್ಜನ ಜನರಲರ ಸೂಚನೆ ಮೇರೆಗೆ ಆಸ್ಪತ್ರೆಯ ಅಧಿಕಾರಿಗಳ ಅಪ್ಪಣೆಯ ಮೇಲೆ ಅಪ್ಪೀಲು ಯಾರಬಳಿಗೆ ಮಾಡಬೇಕು? ಮತ್ತು ಆಸ್ಪತ್ರೆ ಯೊಳಗೆ ಸಾಕಷ್ಟು ಸ್ಥಳವಿಲ್ಲ ಅಥವಾ ಜನಸಹಾಯವಿಲ್ಲ ಎಂದು ಆಸ್ಪತ್ರೆ ಸರ್ಜನರು ಹೇಳುವುದಾದರೆ ಅದರ ಮೇಲೆ ಅಪ್ಪೀಲು ಫಲಕಾರಿಯಾದೀತೇ? ಅಪ್ಪೀಲು ತೀರ್ಮಾನವಾಗುವ ವರೆಗೆ ಪರಊರಿನಿಂದ ಬಂದ ಒಬ್ಬ ರೋಗಿಯ ಗತಿ ಏನಾದೀತು, ಫೀಸು ತೆತ್ತರೂ ಎಡೆಸಿಗಲಾರದು ಎಂದು ಹೇಳುವಾಗ ಖಾಸಗಿಯವರ ತಮ್ಮ ಚಿಕಿತ್ಸೆಯಿಂದುಪಕಾರವಾದರೆ ತಮಗೆ ಸಿಗುವ ಫೀಸು ಹೆಚ್ಚಾದೀತು ಎಂಬ ಕಾಂಕ್ಷೆಯು ಆಸ್ಪತ್ರೆಯ ಸರ್ಜನ ರಲ್ಲಿ ಹುಟ್ಟಿದರೆ ರೋಗಿಗೆ ಸೌಕರ್ಯ ಸಿಗುವ ಬಗೆ ಹೇಗೆ? ಇಂಥ ಸಭೆಯಲ್ಲಿ ಒಳಮರ್ಮವನ್ನು ಬಿಚ್ಚಿ ಹೇಳುವುದು ಸರಿಯಲ್ಲವೆಂಬದರಿಂದಲೇ ಅನೇಕ ಮೆಂಬರರು ಸರ್ವರಿಗೂ ಸಮಾನ ಹಕ್ಕು ಇರಬೇಕೆಂದು ಮಾತ್ರ ವಾದಿಸಿರಬಹುದು. ಮದ್ರಾಸಿನ ಆಸ್ಪತ್ರೆಗಳಲ್ಲಿ ತಜ್ಞರ ಕೈಯಿಂದ ಚಿಕಿತ್ಸೆಹೊಂದ ಬೇಕೆಂದು ತವಕದಿಂದ ಬೇರೆ ಬೇರೆ ಜಿಲ್ಲೆಗಳಿಂದ ಬರುವ ಸಾಮಾನ್ಯ ಜನರು 'ಬಂಗಲೆಗೆ ಬಂದರೆ ಕಾಣಬಹುದು' ಎಂಬ ಉತ್ತರ ಹೊಂದಿ ತಮ್ಮ ಕಿಂಚಿತ್ಸಾಧ ಹಣದ ಚೀಲಕ್ಕೆ ದೊಡ್ಡ ದೊಂದು ತೂತನ್ನು ಮಾಡಿಸಿಕೊಂಡರೆಂಬ ದೂರುಗಳು ಮೆಹ ರ್ಬಾರ್ನ ಸಾಹೇಬರ ಗೋಚರಕ್ಕೆ ಬರಲಿಲ್ಲವೆ? ತುಂಬಾ ಧನಿಕರಾದವರು ಈ ತಜ್ಞರನ್ನು ಮನೆಗೆ ಕರೆಸುವುದು ಸುಲಭ ವಾಗಿಯೇ ಇದೆ ಬಡವರಿಗಂತು ಧರ್ಮದ ಚಿಕಿತ್ಸೆಯು ಹಾಗೂ ಹೀಗು ಸಿಗುತ್ತದೆ ಈ ಎರಡು ವರ್ಗಕ್ಕೆ ಸೇರದವರೇ ವಿಶೇಷವಾಗಿ ಈ ಸರಕಾರಿ ಹುಕುಮಿನಿಂದ ಕಷ್ಟಕ್ಕೆ ಒಳಗಾಗ ಬೇಕಾಗುತ್ತದೆ ಮನೆಗ ಕರೆಸಿದರೆ ಸುರಿಯುವುದಕ್ಕೆ ಪವನುಗ ಳಿಲ್ಲ, ಆಸ್ಪತ್ರೆಯಲ್ಲಿ ನಿಯಮಿತ ದರಗಳನ್ನು ತೆತ್ತು ಆರೋಗ್ಯ ಹೊಂದಬಹುದೆಂದರೆ ಸ್ಥಳವಿಲ್ಲ! ಇಂದುಬಾ, ನಾಳೆಬಾ' ಎಂದು ತಜ್ಞರ ಒಡೆಯ ಅಪ್ಪಣೆಯಾದರೆ ಇಂಥ ಅನರ್ಥಗಳಿಗ ಎಡೆಸಿಗದಂತೆ ಫೀಸು ಕೊಡುವ ಯಾರಿಗೂ ತಿರಸ್ಕರಿಸಬಾರದು ಎಂದು ನಾಮ ದಾರ ಮೆಂಬರರ ವಾದ ಇದರಲ್ಲಿ ಸಮತಾವಾದಿಗಳ ಅಥವಾ ಸೋಸಿಯಲಿಸ್ಟರ ತತ್ವಗಳ ಲೇಪನವೇನೂ ಇಲ್ಲ ಈ ವಿಧದ ಹುಕು ಮುಗಳಿಂದ ಖಾಸಗಿ ಡಿಸ್ಪೆನ್ಸರಿಗಳಿಟ್ಟ ಡಾಕ್ಟರರ ಲಾಭಕ್ಕೆ ಅಡ್ಡಿ ಬರುತ್ತದೆಂದು ಸರಕಾರದವರಾದರೂ ಕಣ್ಣೀರು ಹಾಕಬೇಕಾ ದ್ದಿಲ್ಲ ಅಂಥ ಖಾಸಗಿ ಡಾಕ್ಟರರು ಅನುಭವಶಾಲಿಗಳಾದರೆ ಅವ ರಲ್ಲಿಗ ರೋಗಿಗಳು ಬಂದೇ ಬರುತ್ತಾರೆ ಆದರೆ ಅವರ ದ್ರವ್ಯಾನು ಕೂಲವು ಕಿಂಚಿತ್ಸಾಧ್ಯದಿಂದ ಆರೈಕೆ ನೋಡುವ ಅನುಕೂಲತೆ ಯನ್ನು ಅವರು ಕೊಡಲಾರರು ಎರೆ ರೋಗ ಪರೀಕ್ಷೆ ಮತ್ತು ಔಷಧ ಸೇವನೆ ಮಾತ್ರ ರೋಗ ನಿವಾರಣೆ ಬೇಗನೆ ಮಾಡುವುದಿಲ್ಲ, ಆರೋಗಣೆಯ ಸಹಾಯ ಬೇಕು ಅದರ ಅಭಾವದಿಂದ ಖಾಸಗಿ ಡಾಕ್ಟರರ ಕೈಕಟ್ಟಿ ಹೋಗುತ್ತ ದೆಂಬದರಿಂದಲೆ ಫೀಸು ತೆತ್ತದಾದರೂ ಆಸ್ಪತ್ರೆಯಲ್ಲಿ ಒಳರೋಗಿ ಗಳಾಗಿ ಹಲವರು ದಾಖಲಾಗುತ್ತಾರೆ ಮೆಹಬ್ರ್ಮಾನ್ ಸಾಹೇ ಬ ವಿಚಿತ್ರ ವಾಕ್ಸರಣಿಗೆ ಸರಕಾರವು ಮರುಳಾಗದೆ ಜನ ಗಳಿಗ ಇದ್ದ ಆರೋಗಣೆಯ ಪೂರೈಕೆಗಳನ್ನು ಇನ್ನಷ್ಟು ಹೆಚ್ಚಿ ಸುವುದು ಅಗತ್ಯ ಒಂದುವೇಳೆ ರೋಗಿಗಳು ಆರೋಗಣೆ ಖರ್ಚಿಗ ಮತ್ತು ದ್ರವ್ಯಾನುಕೂಲಕ್ಕೆ ಸರಿಯಾಗಿ ಏರಿಸಿನ ದರ ಗಳನ್ನು ಹೆಚ್ಚಿಸಿದರೂ ಜನಗಳು ಅವನ್ನು ಕೊಡಲು ಹಿಂಜರಿಯ ಲಾರರು

೪ ಬರುವ ಜಾವಾ ರಾಷ್ಟ್ರೀಯ ಸಭೆಯ ನಿಯೋಜಿತ ಅಧ್ಯಕ್ಷರಾದ ಲಾಲಾ ಲಜಪತರಾಯರು ಶಾಂತಪಕ್ಷದವರಿಗೆ ಒಂದು ವಿಜ್ಞಾಪನೆಯನ್ನು ಕಳುಹಿಸಿಕೊಟ್ಟಿದ್ದಾರೆ "ರಾಷ್ಟ್ರದ ಮುಂದೆ ಈಗ ಒಂದಿರುವ ಪ್ರಶ್ನೆಗಳು ಅತಿ ಮಹತ್ವದವುಗಳು ಆ ಪ್ರಶ್ನೆಗಳ ಬಗ್ಗೆ ಎಲ್ಲ ಪಕ್ಷದವರು ಏಕತ್ರ ಸೇರಿ ಶಾಂತ ಮನಸ್ಸಿನಿಂದ ರಾಷ್ಟ್ರಹಿತಕೋಸ್ಕರ ಒಂದು ನಿರ್ಣಯವನ್ನು ಕೈಕೊಳ್ಳುವುದು ಅವಶ್ಯಕವಾಗಿದೆ ರಾಷ್ಟ್ರೀಯ ಸಭೆಯ ಸೂತ್ರ ಗಳನ್ನು ೩೬ ವರ್ಷಗಳ ವರೆಗ ನಡಿಸಿಕೊಂಡಿದ್ದ ಶಾಂತ ಪಕ್ಷದವರು ಇಂಥ ನಾಜೂಕ ಪರಿಸ್ಥಿತಿಯಲ್ಲಿ ಹೊರಗ ನಿಂತು ಕೊಳ್ಳುವುದು ಸರ್ವಥಾ ಯೋಗ್ಯವಲ್ಲ ಅವರು ತಮ್ಮ ಮತಭೇದಗಳಿದ್ದರೂ ಅವುಗಳನ್ನು ಒದಿಗಿಟ್ಟು ಒಟ್ಟಿಗೆ ಬಂದು ಸೇರಬೇಕು ಹಾಗು ಓವರ ಅಂಬೋಣಗಳನ್ನು ರಾಷ್ಟ್ರೀಯರು ಆದರಪೂರ್ವಕ ಕಿವಿಗೊಟ್ಟು ಕೇಳಬೇಕು ಎಂದು ಲಾಲಾ ಜಿಯವರು ವಿಜ್ಞಾಪಿಸಿಕೊಂಡಿದ್ದಾರೆ' ಲಾಲಾಜಿಯವರ ಆ ವಿಜ್ಞಾಪನೆಗೆ ಶಾಂತಪಕ್ಷದ ಧುರೀಣರು ಎಷ್ಟರ ಮಟ್ಟಿಗೆ ಮಾನಕೊಟ್ಟಾರೆಂಬುದು ಸಂದೇಹವೆ ಸರಿ ಕಾರಣವೇನೆಂದರೆ, ಅಮೃತಸರದ ಅಧಿವೇಶನದ ಸಮಯದಲ್ಲಿ ಸ್ವಾಗತಮಂಡಲದ ಅಧ್ಯಕ್ಷರಾದ ಶ್ರದ್ಧಾನಂದ ಸ್ವಾಮಿಗಳೂ ಮತ್ತು ಅಧ್ಯಕ್ಷ ರಾದ ಮೋತಿಲಾಲ ನೆಹರು ಈ ಇಬ್ಬರು ಇದೇ ಅರ್ಥದ ವಿಜ್ಞಾ ಪನೆಯನ್ನು ಮಾಡಿಕೊಂಡಿದ್ದರು ಮುಂತು ಅಪವಾದಕ್ಕೆ ತಕ್ಕ ಒಬ್ಬಿಬ್ಬರು ಮಾತ್ರ ಒಂದೆರಡು ದಿವಸದ ಮಟ್ಟಿಗೆ ಸದರಿ ಅಧಿವೇಶನಕ್ಕೆ ಹೋದದ್ದಲ್ಲದೆ ಶಾಂತ ಪಕ್ಷದ ಇತರ ಮುಂದಾಳು ಗಳೂ ಅವರ ಅನುಯಾಯಿಗಳೂ ಹೋಗಿಲ್ಲ ಎಂದ ಮೇಲೆ ಬರುವ ಅಧಿವೇಶನಕ್ಕಾದರೂ ಅವರು ಬಂದಾರೆಂದು ನೆನೆಸಲು ಆಗುವುದಿಲ್ಲ ಈಗ ಅವರು ಈ ಅಧಿವೇಶನಕ್ಕೆ ಬಂದು ತಮ್ಮ ಸಂಪೂರ್ಣ ಸಹಕಾರಿತ್ವದಿಂದ ಮಹತ್ವದ ಪ್ರಶ್ನೆಗಳ ನಿರ್ಣಯ ವನ್ನು ತಂದುಕೊಡುವರಾದರೆ, ಇದೇ ದೇಶಕ್ಕೆ ತುಂಬಾ ಸಂತೋಷವೆ ಮತ್ತು ಅಂಥ ಸಂದರ್ಭದಲ್ಲಿ ನಮ್ಮ ಮೇಲಿನ ಭವಿಷ್ಯವು ಸುಳ್ಳಾಗುವುದಾದರೆ ನಮಗೂ ಕೂಡ ಬಹಳ ಆನಂದವಾದೀತು-

೫ ಅಸಹಕಾರಿತೆಯ ಚಳವಳವನ್ನು ಪ್ರಚಾರಗೊಳಿ ಸಲು ಮಹಾತ್ಮ ಗಾಂಧಿಗಳು ಈ ಪಟ್ಟಣಕ್ಕೆ ಬಂದ್ದದರ ಫಲ ವೆಂಬಂತೆ ಕೆನರಾ ಹೈಸ್ಕೂಲಿನ ಉಪಾಧ್ಯಾಯರಾದ ಮ| ರಾ| ಏ ಭೋಜರಾಯರು ತಮ್ಮ ಶಾಲಾ—ಉದ್ಯೋಗಕ್ಕೆ ರಾಜಿಕೊಟ್ಟಿದ್ದಾರೆ ಈ ಜಿಲ್ಲೆಯಲ್ಲಿ ತಮ್ಮ ಬಹುಮಾನದ ಉದ್ಯೋಗಗಳಿಗೆ ಪ್ರಥಮತಃ ರಾಜಿಕೊಟ್ಟು ಅಸಹಕಾರಿತ್ವದ ವ್ರತವನ್ನು ಯಾರು ಆಚರಿಸುತ್ತಾರೆಂದು ಜನಗಳು ಯೋಚಿ ಸುವಷ್ಟರೊಳಗೆ ಬೇರೆಯವರ ಪ್ರತೀಕ್ಷೆಯನ್ನು ಮಾಡದೆ ಮ| ರಾ| ಭೋಜರಾಯರು ಅಸಹಕಾರಿತೆಯ ತತ್ವದ ಶಂಕುಸ್ಥಾಪನೆ ಯನ್ನು ಮೊದಲಾಗಿ ಮಾಡಿದರೆನ್ನಬಹುದು. ಈ ಸಮಯ ದಲ್ಲಿ ನಮ್ಮ ರಾಷ್ಟ್ರಕ್ಕೆ ಯಥಾರ್ಥವಾದ ರಾಷ್ಟ್ರೀಯ ಶಿಕ್ಷಣವು ಅವಶ್ಯಕವಾಗಿದೆ. ಅಂಥ ಶಿಕ್ಷಣವನ್ನು ಭೋಜರಾಯರು ಇತರ ಸಮರ್ಥ ಶಿಕ್ಷಕರ ಸಮೇತರಾಗಿ ಈ ಪಟ್ಟಣದಲ್ಲಿ ಪ್ರಾರಂಭಿ ಸಿದ್ದೆ ಆದರೆ ಅವರ ಸ್ವಾರ್ಥತ್ಯಾಗವು ಇನ್ನಷ್ಟು ಭೂಷಣಾಸ್ಪದ ಮತ್ತು ಉಪಯುಕ್ತವಾದೀತೆಂಬುದಕ್ಕೆ ಸಂಶಯವಿಲ್ಲ.

ಮಂಗಳೂರು.

ಮುಂಬಯಿ ಸ್ಟೀಮ ನೆವಿಗೇಶನ್ ಕಂಪೆನಿಯ ಹಡಗು ಗಳ ಚಲಾವಣೆಯ ಲೈನು (ಹೊಸ ಮೋಹಸಮಿನ ಬಗ್ಗೆ) ಹವಾಮಾನವು ಅನುಕೂಲವಾಗಿದ್ದರೆ ಗೋವೆಯ ಲೈನ ಸಪ್ಟಂಬರ ತಾ ೯ಕ್ಕೆ, ಕರಾಚಿ ಲೈನ್ ತಾ ೧೪ಕ್ಕೆ, ಗಲ್ಫ ಆಫ್ ಕಚ್ಚ ಲೈನ್ ತಾ ೧೬ಕ್ಕೆ ಮತ್ತು ವೆಂಗುರ್ಲಾ ಮರ್ಮ ಗೋವಾ, ಕಾರವಾರ, ತದ್ರಿ, ಕುಮಟಾ, ಹೊನ್ನಾವರ, ಭಟ್ಕಳ ಕುಂದಾಪುರ, ಮಲ್ಪೆ ಮತ್ತು ಮಂಗಳೂರು ಈ ಬಂದರುಗಳಿಂದ ಕೂಡಿದ ಮಂಗಳೂರ ಲೈನು ತಾ ೨೦ಕ್ಕೆ ಚಲಾವಣೆಗೆ ಆರಂಭಿ ಸುವುದು ಲೈನು ತೆರೆಯೋಣಾದ ಬಳಿಕ ಕಂಪೆನಿಯ ಸ್ಟೀಮ ರುಗಳು ಗೋವೆಯಿಂದ ಪ್ರತಿದಿನ ಪ್ರಾತಃ ೧೦ಕ್ಕೆ ಕರಾಚಿಯಿಂದ ಪ್ರತಿ ಮಂಗಳವಾರ ಪ್ರಾತಃ ೧೧ ಘಂಕ್ಕೆ ಗಲ್ಫ ಆಫ್ ಕಚ್ಚಿನಿಂದ ಪ್ರತಿ ಗುರುವಾರ ಪ್ರಾತಃಕಾಲ ೧೦ ಘಂಕ್ಕೆ ಮತ್ತು ಪ್ರತಿ ಸೋಮವಾರ ಮಧ್ಯಾಹ್ನ ೧ ಘಂಕ್ಕೆ ಮಂಗಳೂರಿನಿಂದ ಬಿಡುವ ವಿಸ್ತಾರಡುಗಳಾಗುವುವು. ಹೊನ್ನಾವರ ಬಂದರು ಹವಾ ಮಾನವು ಅನುಕೂಲವಾಗಿದ್ದರೆ (ಹಡಗು ಚಲಾವಣೆ ಬಗ್ಗೆ) ಒಕ್ಟೋಬರ ತಾ ೧೦ರಿಂದ ತೆರೆಯೋಣಾಗುವುದು

ಇಲ್ಲಿಯ ಪ್ರಮುಖ ಸಾಹುಕಾರರಲ್ಲೊಬ್ಬರಾದ ಮೂಡ್ಲಗಿರಿ ಪಾಂಡುರಂಗ ಪೈಗಳವರು ವಿಷಮಜ್ವರದಿಂದ ಪೀಡಿತರಾಗಿ ಕಳೆದ ಮಂಗಳವಾರ ರಾತ್ರೆ ಬಂದುವರೆ ಗಂಟೆಗ ವಿಧಿವಶರಾದರೆಂಬುದನ್ನು ತಿಳಿಸಲು ಬಹಳ ವ್ಯಸನ ಪಡುತ್ತೇವೆ ಇವರು ಇತ್ತಲಾಗ ಸ್ವಜಾತಿಯ ಸಂಸ್ಥೆಗಳ ಮತ್ತು ಇತರ ಲೋಕೋಪಯುಕ್ತ ಸಂಸ್ಥೆಗಳ ಕಾರ್ಯಗಳಲ್ಲಿ ಕಾಲಿಟ್ಟವರು ಮಂಗಳೂರಲ್ಲಿ ಇತ್ತಲಾಗ ಸ್ಥಾಪಿತವಾದ ದೇಶೀಯ ವರ್ತಕ ಸಂಘದ ಕಾರ್ಯದರ್ಶಿಯಾಗಿಯೂ ಶಿಪ್ಪಿಂಗ್ ಮತ್ತು ಪೋರ್ಟರ್ಮ್ಯಾನ್ ಕಮಿಟಿಯ ಮೆಂಬರರಾಗಿಯೂ ಪ್ರತ್ತೂರಲ್ಲಿ ಸ್ಥಾಪಿತವಾದ ಏ ಕನರಾ ಎಂಟರ್‌ಪ್ರೈಜಿನ ಡಿರೆಕ್ಟರರಾ ಗಿಯೂ ಇದ್ದರು ಇವರಿಗೆ ಬರೇ 27 ವರುಷಗಳು ಕೂಡ ತುಂಬಿರಲಿಲ್ಲ ವ್ಯಥಿತ ಇವರ ಕುಟುಂಬದೊಡನೆ ನಮ್ಮ ಸಹಸಂತಾಪವನ್ನು ಈ ಮೂಲಕ ಸೂಚಿಸಿರುತ್ತೇವೆ

ಬರುವ ಆದಿತ್ಯವಾರ ಸಾಯಂಕಾಲ ೪ ಗಂಟೆಗ ಇಲ್ಲಿಯ ಆರ್ಯ ಸಮಾಜದ ಪರವಾಗಿ ಲಾಹೋರಿನ ಶ್ರೀ ಯುತ ಪಂಡಿತ ಅಮರನಾಥರು ರಾಷ್ಟ್ರೀಯ ಬಾಲಿಕಾ ಪಾಠಶಾಲೆ ಯಲ್ಲಿ The Martyrs of Vedic Dharma "ವೇದಿಕ ಧರ್ಮದ ಹತಸಾಕ್ಷಿಗಳು" ಎಂಬುದನ್ನು ಕುರಿತು ವ್ಯಾಖ್ಯಾನ ಮಾಡುವರು

ಕಲ್ಕತ್ತೆಯಲ್ಲಿ ನೆರವೇರುವ ವಿಶೇಷ ಜಾವಾ ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಮಂಗಳೂರಿನಿಂದ ಮ. ರಾ ಗಳಾದ ಯಂ ಎನ್ ಕಿಣಿ, ಯಂ ಶ್ರೀಪದ ಕಿಣಿ ಕಾರ್ನಾಡ ಸದಾಶಿವರಾವ, ಒರಿಲ್ಡೈಲು ಘೋ ರಾವ ಮತ್ತು ಮೆ ಮಹ ಮದ್ ಪೃತ್ತೂರು ಸಾಹೇಬರು ಹೋಗಲಿಕ್ಕಿದ್ದಾರೆ.

ಬೆಟ್ಟ ಬಾಗಾಯಿತು ಕೃಷಿಕರ ಸಂಘದ ಮೆನೆಜಿಂಗ್ ಡಿರೆಕ್ಟರರಾದ ಮ| ರಾ| ಚಕ್ರಕೋಡಿ ಶಾಮ ಶಾಸ್ತ್ರಿ ಮತ್ತಿತರು ಸದರಿ ಸಂಘದ ಹಣವನ್ನು ದುರ್ವಿನಿಯೋಗ ಪಡಿಸಿದರೆಂಬ ದಾವೆಯು ನಡೆಯುತ್ತಿತ್ತಷ್ಟೆ ಮಂಗಳೂರು ಡಿಸ್ಟ್ರಿಕ್ಟ ಮೆಜಿ ಸ್ಟ್ರೇಟರ ಕೋರ್ಟಿನಲ್ಲಿ ಇದರ ತನಿಖೆಯಾಗಿ ನಿನ್ನೆ ದಿನ ತೀರ್ಪು ಹೊರಬಿದ್ದಿದೆ ಸಂಘದಿಂದ ಸಲ್ಲುವ ಬಾಡಿಗೆ ಬಾಬತು ರೂ ೭೦೦ನ್ನು ವಂಚಿಸಿದ್ದು ಮೊದಲನೆ ತಪ್ಪು ಈ ತಪ್ಪು ಶಾಸ್ತ್ರಿಗಳ ಮೇಲೆ ಸಾಬೀತಾಗಿ ರೂ. ೨೦೦ ಜುರುಮಾನೆ ಮತ್ತು ೪ ತಿಂಗಳ ಸಜೆ ವಿಧಿಸಲಾಗಿದೆ ಜುರುಮಾನೆಯನ್ನು ತೆರಲಿಕ್ಕೆ ತಪ್ಪಿದರೆ ಆರು ತಿಂಗಳ ಕಠಿಣ ಶಿಕ್ಷೆಯನ್ನು ಅನುಭವಿಸ ಬೇಕಾಗಿದೆ ಸಂಘದ ಬಾಬತು ರೂ ೩೦೦೦ವನ್ನು ದುರ್ವಿನಿ ಯೋಗಪಡಿಸಿದ್ದರೆಂಬಿತ್ಯಾದಿ ಎರಡನೇ ಆರೋಪಣೆ. ಈ ತಪ್ಪಿಗೆ ಸದರಿ ಶಾಸ್ತ್ರಿಗಳೂ ಮ| ರಾ| ಪಂಜಿಗುಡ್ಡ ಮರಿಯಪ್ಪ ಭಟ್ಟರೂ, ಮ ರಾ| ತಲಕಳ ಮಹಾಬಲ ಭಟ್ಟರೂ ಗುರಿಮಾಡ ಲ್ಪಟ್ಟಿದ್ದರು ಆದರೆ ಪ್ರಥಮ ವಿಚಾರಣೆಯಲ್ಲಿಯೇ ಕಡೆಯ ಎರಡು ಆರೋಪಿಗಳು ಬಿಡುಗಡೆ ಹೊಂದಿದರು, ಶಾಸ್ತ್ರಿಗಳನ್ನು ಸೆಷ್ಯನ ಕೋರ್ಟಿಗೆ ವಿಚಾರಣೆ ಬಗ್ಗೆ ಕಮ್ಮಿಟ್ ಮಾಡಲಾಗಿದೆ.

[illegible] ಮತ್ತು [illegible] ಕ್ರಮಗಳನ್ನು [illegible] ಅವರ [illegible] ಮತ್ತು ಅವನ್ನು [illegible] ಎಂದು [illegible].

[illegible] ಈ ವರ್ಷ [illegible] (ಪೋಲ್ ತರಗತಿಯ ಪರೀಕ್ಷೆ) ಕಲಿಯಲಿಕ್ಕೆ ಬಂದ [illegible] ಅರ್ಜಿಗಳನ್ನು ೨೦ ಮಂದಿಗೆ ದಾಖಲು ಮಾಡಲಿಕ್ಕೆ ಎಡೆ ಇದ್ದು [illegible] ದಾಖಲು ಮಾಡಲಾಯಿತು ಎಂತಲೂ ಸರ್ಟಿಫಿಕೇಟ್ [illegible] (ಕೆಳ ತರಗತಿಯ ಪರೀಕ್ಷೆ) ೨೫೩ ಅರ್ಜಿಗಳು ಬಂದಲ್ಲಿ [illegible] ದಾಖಲು ಮಾಡಲಿಕ್ಕೆ ಎಡೆ ಇದ್ದರೂ ೨೬ ಮಂದಿಯನ್ನು [illegible] ಮಾಡಲಾಯಿತು ಎಂತಲೂ ಇವರಿಗೆ ಸಿಗತಕ್ಕ ಹುದ್ದೆಗಳ ಸಂಖ್ಯೆ [illegible] ಹೆಚ್ಚು ಮಂದಿ ಉಮೇದ್ವಾರರನ್ನು ಬೇರೆ [illegible] ಕಾರಣದಿಂದ ತಿರಸ್ಕರಿಸಬೇಕೆಂತಲೂ ಜಾತಿ ಮತ್ತು ವಾರಂಪ [illegible] ವೃತ್ತಿ ಇವುಗಳನ್ನು ಇತರ ಸಂಗತಿಗಳೊಂದಿಗೆ ಆಲೋಚನೆಗೆ ತೆಗೆದುಕೊಂಡಿದೆ ಎಂತಲೂ ಅರ್ಜಿಗಳನ್ನು ಬರಮಾಡಲಿಕ್ಕೆ ಕೊಟ್ಟ ೨ [illegible] ಸ್ಪಷ್ಟ ಒಂದರಲ್ಲಿ ಜಾತಿ ಭೇದದ ಪ್ರಸ್ತಾಪವಿದ್ದಿಲ್ಲವೆಂದೂ [illegible] ಬ್ರಾಹ್ಮಣೇತರರೇ ಅರ್ಜಿ ಮಾಡಬೇಕೆಂದೂ ಇತ್ತೆಂತಲೂ [illegible] ಕೆಲಸಗಳಿಗೆ ೧೧ ಅಬ್ರಾಹ್ಮಣರೂ ೭ ಬ್ರಾಹ್ಮಣರೂ ಹೊಸಾ [illegible] ಸರಕಾರದ ಉತ್ತರ ಬಂತು.

[illegible] ಕಲೆಕ್ಟರ್ ಶ್ರೀನಿವಾಸರಿಗೆ ಆ ಹುದ್ದೆ ಖಾಯಂ ಆದ ಒಡ [illegible] ೩೦೦ ರೂಪಾಯಿ ಸಿಕ್ಕ ಬಳಿಕ ಎರಡನೆ ವರ್ಷದಲ್ಲಿ ೬೦೦ ರೂಪಾಯಿ [illegible] ವರ್ಷದಲ್ಲಿ [illegible] ರೂಪಾಯಿ ಆಗಬೇಕೆಂಬ ಹುಕುಂ ಹೊರಟಿದೆ. ಮುನಸೀಫ್ ಮತ್ತು ಸಬ್ ಜಡ್ಜರ ಸಂಬಳದ ಏಲಿವಾರಿಗಳ ಬಗ್ಗೆ ಇಂಡಿಯಾ ಸರಕಾರದೊಡನೆ ಪತ್ರವ್ಯವಹಾರ ನಡೆಯುತ್ತದೆ ಎಂತ ಸರಕಾರ [illegible] ಉತ್ತರ ಸಿಕ್ಕಿತು.

[illegible] ನ್ಯಾಯವಿಧಾಯಕ ಸಭೆಗೆ ಮತ್ತು ಲೋಕಲ್ ಬೋರ್ಡು [illegible] ಸರಕಾರಿ ಪೆನ್ಶನರುಗಳು ಮೆಂಬರರಾಗಲಿಕ್ಕೆ ಉಮೇದ್ವಾರರಾಗಲು ಅಕ್ಷೇಪಗಳೇ ಇಲ್ಲವೆಂದು ಗೊತ್ತಾಯಿತು.

ಸರಕಾರದಿಂದ ಬರಬೇಕಾದ ಹಣ ಪಡಕೊಳ್ಳುವಾಗಲೂ ಸರ ಕಾರದ ಖಜಾನೆ ಅಥವಾ ಬೇಂಕುಗಳಲ್ಲಿ ನೋಟು ವಸೂಲಾಗುವಾಗಲೂ ೧೦ ರೂಪಾಯಿಗೆ ಒಂದು ಪವನು ಕೊಡಲಿಕ್ಕೆ ಸರಕಾರದವರು ಬದ್ಧರಲ್ಲವೆಂದು ಗೊತ್ತಾಯಿತು. ಅಸಿಸ್ಟಾಂಟ್ ಸರ್ಜನರುಗಳಿಗೆ ಸಂಬಳದ ದರಗಳನ್ನು ಹೆಚ್ಚಿಸುವ ವಿಷಯದಲ್ಲಿ ಇನ್ನೂ ಇತ್ಯರ್ಥವಾಗಿಲ್ಲವಂತೆ. [illegible] ಜಿಲ್ಲೆಗಳಲ್ಲಿ ವಾಡಿಕೆಯ ಮಳೆಗಿಂತಲೂ ಈ ವರ್ಷ ಮಳೆ ಕಡಿಮೆ ಎಂಬ ಸಂಗತಿಯು ಸರಕಾರದ ಗೋಚರಕ್ಕೆ ಬಂದಿದೆ. ಈ ಸಂಗತಿಯಲ್ಲಿ ಸರಕಾರದವರು ವಿಚಾರಪರರಾಗಿದ್ದಾರೆ. ಆದರೆ ಫೆಮಿನ್ ಕೋಡ್ ಜಾರಿಗೆ ತರುವ ಪ್ರಕರಣಗಳು ಕಂಡು ಬರಲಿಲ್ಲವೆಂದು ಸರಕಾರದವರು ತಿಳಿಸಿದರು.

ಮುಂದಿನ ಹತ್ತು ವರ್ಷಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಎಷ್ಟು ಖರ್ಚಾಗಬಹುದು, ಆ ಸ್ಥಿತಿ ಸರಕಾರದಿಂದ ಎಷ್ಟು ಎಂಬುದರ ಅಜಮಾಯಿಷ ಮಾಡಲಿಲ್ಲ. ಅದೇ ರೀತಿಯಲ್ಲಿ ಸೆಕೆಂಡರಿ, ಟೆಕ್ನಿಕಲ್, ಯೂನಿವರ್ಸಿಟಿ ವಿದ್ಯಾಭ್ಯಾಸಕ್ಕೂ ಖರ್ಚಿನ ಅಜಮಾಯಿಷ ಮಾಡಲಿಲ್ಲವೆಂದು ಈಗಿನ ಸ್ಥಿತಿಯಲ್ಲಿ ಅಂಥಾ ಅಂದಾಜು ಕಟ್ಟುವುದು ಸಾಧ್ಯವಲ್ಲವೆಂತಲೂ ಉತ್ತರ ಹೊರಟಿತು.

ನಾಮಧಾರ ರಾವ್ ಬಹದ್ದೂರ ಎಸ್. ಸುಬ್ಬರಾಯರು ಕೇಳಿದ ಪ್ರಶ್ನೆಗಳಲ್ಲಿ ಮಂಗಳೂರಿನ ಡಿಪ್ರೆಸಡ್ ಕ್ಲಾಸಸ್ ಮಿಶ್ಯನ್‌ನವರು ಮಂಗಳೂರಿಗೆ ಮಾನ್ಯ ಗವರ್ನರ್ ಸಾಹೇಬರ ಸವಾರಿ ಚಿತ್ತೈಸಿದಾಗ ಮಾಡಿದ ಮನವಿಯಲ್ಲಿ ಸೂಚಿಸಿದ ಏಲಿವಾರಿಯನ್ನು ಮಿ| ಪೆಡ್ಲಿಸನ್ (ಪಂಚಮರ ಮತ್ತು ಇತರ ದೀನ ಜನರ ಸುಧಾರಣೆ ವಿಷಯದಿಗೆ ನೇಮಕಪಟ್ಟ ಅಫೀಸರು) ಜಾರಿಗೆ ತಂದಿದ್ದಾರೊ ಅಥವಾ ಈ ಡಿಪ್ರೆಸಡ್ ಕ್ಲಾಸ ಮಿಶ್ಯನಿನಲ್ಲಿ ಸೆಕೆಂಡರಿ ದರ್ಜೆಯ ವಿದ್ಯಾಭ್ಯಾಸವನ್ನು ಕೊಡಿಸಲಿಕ್ಕಾಗಲಿ, ಈ ನಿರಾಶ್ರಿತರಿಗೆ ಮನೆಗಳನ್ನು ಕಟ್ಟಿಸಿಕೊಡುವುದಾಗಲಿ, ಸದರಿ ಮಿ| ಪೆಡ್ಲಿಸನರು ಸ್ವತ ಬೇರೆ ಏನಾದರೂ ಕಜವೀಜನ್ನು ಮಾಡಿರುವರೊ ಎಂದು ಕೇಳಿದ್ದಕ್ಕೆ ಅಂಥಾ ಮನವಿಯನ್ನು ಗವರ್ನರ್ ಸಾಹೇಬರ ಮುಂದಿಟ್ಟದ್ದೂ ಇಲ್ಲ, ಮಿಶ್ಯನಿನವರು ಸಹಾಯ ಅಪೇಕ್ಷಿಸಿದ್ದಾರೆಂದು ತೋರ್ಪಡಿಸುವ ಅರ್ಜಿ ಸರಕಾರದ ಕೈ ಸೇರಿದ್ದೂ ಇಲ್ಲವೆಂದು ಉತ್ತರ ಬಂತು.

ಬೇರೆ ಬೇರೆ ಸರಕಾರಿ ಆಫೀಸುಗಳಲ್ಲಿ ಸಿಬ್ಬಂದಿಯನ್ನು ಕಡಿಮೆ ಮಾಡುವ ವಿಷಯದಲ್ಲಿ ಸ್ಪೆಶಲ್ ಆಫೀಸರರು ಬರೆದ ರಿಪೋರ್ಟನ್ನು ಸರಕಾರದವರು ಪ್ರಕಟಿಸಲಿಕ್ಕಿದ್ದಾರೊ ಎಂದು ಕೇಳಿದ್ದಕ್ಕೆ ಈ ಸ್ಪೆಶಲ್ ಆಫೀಸರರು ಎಲ್ಲಾ ಇಲಾಖೆಗಳ ಬಗ್ಗೆ ಒಂದು ಜನರಲ್ ರಿಪೋರ್ಟನ್ನು ತಯಾರಿಸುವುದಿಲ್ಲ; ಒಂದೊಂದೇ ಇಲಾಖೆಯಲ್ಲಿ ಬೇರೆ ಬೇರೆಯಾಗಿ ಕಂಡು ಬಂದ ಸೂಚನೆಗಳನ್ನು ಸರಕಾರಕ್ಕೆ ತಿಳಿಸುತ್ತಲೆ ಇದ್ದಾರೆ; ಅವುಗಳ ವಿಚಾರ ನಡಿಸಿ ಸರಕಾರದವರು ಹುಕುಂ ಹೊರಡಿಸುತ್ತಲಿದ್ದಾರೆ; ಈ ಸೂಚನೆಗಳನ್ನು ಪ್ರಕಟಿಸಲು ಸಾಧ್ಯವಿಲ್ಲವೆಂದು ಹೇಳಿರುವರು.

ಪ್ರಾಂತಿಕ ಸರಕಾರ ಮತ್ತು ಲೋಕಲ್‌ಬೋರ್ಡು ಅಥವಾ ಮ್ಯುನಿಸಿಪಾಲಿಟಿಗಳೊಳಗೆ ಇರುವ ದ್ರವ್ಯಸಹಾಯದ ಸಂಬಂಧವನ್ನು ನಿರ್ಣಯಿಸುವುದಕ್ಕೆ ಒಂದು ಕಮ್ಮಿಟಿಯನ್ನು ಸರಕಾರದವರು ನೇಮಿಸುವ ಆಲೋಚನೆಯಲ್ಲಿದ್ದಾರಂತೆ.

[illegible] ಉತ್ತರಗಳು ಸಿಕ್ಕಿದನಂತರ ಮನೆಬಾಡಿಗೆಯನ್ನು ಕಂಡಾ [illegible] ಏರಿಸಬಂತೆ ಮ್ಯಾಲಿಕರ ಮೇಲೆ ನಿರ್ಬಂಧಹಾಕುವುದಕ್ಕೆ ತಯಾರಿಸಿದ [illegible] ನಾಮಧಾರ ಟಿ. ಅರುವೈನಾಥಂ ಪಿಳ್ಳೆಯವರು [illegible] ಮುಂದರಿಸಿದರು. ಬಹುಮತದ ಇದಕ್ಕೆ ವಿರೋಧವಿದ್ದದರಿಂದ [illegible] ಬಿದ್ದು ಹೋಯಿತು.

[illegible] ನಾಮಧಾರ ಮಿ| ಕಟ್ಟಿಹೆಲ್ಡ್ ಸಾಹೇಬರು ಅನಾರೋಗ್ಯದ ಸಂಬಂಧ [illegible] ಮತ್ತು ಎಲಿಮೆಂಟರಿ ಎಜ್ಯುಕೇಶನ ಬಿಲ್ಲಿನ

[illegible] ಸಭೆಗಳು [illegible] ಮಂಗಳೂರು [illegible] ಕಾನ್ಸುಲ್ದಾರ [illegible] ರಾವ್ ಸಾಹೇಬರು, ಜಿ. ಸುಬ್ಬರಾವ್, ಮಾಧವರಾವ್, [illegible] ರಾಮರಾವ್, ಎ. ಎಸ್. ರಾಮಯ್ಯ, ಕೆ. ಶ್ರೀನಿವಾಸಯ್ಯಂಗಾರ, ಸಿ. ವಿ. [illegible] ಅವರು ನೇಮಕರಾಗಿರುವರು.

ಆ ವೇಳೆ ಕೆಲವು ಠರಾವುಗಳು ಸಭೆಯ ಮುಂದೆ [illegible] ಬಂದವು. [illegible] ಎಕ್ಸಿಕ್ಯೂಟಿವ್ [illegible] ಡಿಪ್ಯುಟಿ ಕಲೆಕ್ಟರ್ ಮುಂತಾದ ಹುದ್ದೆಗಳವರಂತೆ ಸಂಬಳದ ದರಗಳು ಸಿಗಬೇಕೆಂದು ತಂದ ಠರಾವು ವಿದ್ಯಾ ಇಲಾಖೆಯವರ ಕೆಲಸದ ಅವಾಂತ್ರಿ ಮತ್ತು ಈ ಸಬ್ ಜಡ್ಜ, ಡಿಪ್ಯುಟಿ ಕಲೆಕ್ಟರ, ಇವರ ಜವಾಬ್ದಾರಿಗಳು ಒಂದೇಯಲ್ಲ, ವಿದ್ಯಾ ಇಲಾಖೆಯವರಿಗೆ ರಜಾ ದಿನಗಳು ಹೆಚ್ಚಿಗೆ ಸಿಗುತ್ತಿವೆ ಎಂಬ ಪ್ರತ್ಯುತ್ತರವು ಸರಕಾರದಿಂದ ಹೊರಟಮೇಲೆ ಬಹುಮತದಿಂದ ಬಿದ್ದುಹೋಯಿತು.

ಮದ್ರಾಸು ಶಹರಿನ ಸರಕಾರಿ ಆಸ್ಪತ್ರೆಗಳಲ್ಲಿ ಧನಿಕರಿಗೆ ಔಷಧ ಸಿಗಕೂಡದಾಗಿ ಮಾಡಿದ ಹುಕುಂ ೧೯೨೦ನೆ ಎಪ್ರಿಲ್ ತಿಂಗಳಿಂದ ಜಾರಿಗೆ ಬರುವುದಾಗಿದ್ದರೂ ಅದನ್ನು ಸರಕಾರದವರು ರದ್ದು ಪಡಿಸಬೇಕೆಂದು ಒಂದು ಠರಾವು ಬಂದಿತ್ತು. ಈಗ ಬಡಜನರಿಗೆ ಮಾಫಿಯಿಂದಲೂ ದ್ರವ್ಯಾನುಕೂಲ ವಿದ್ದವರಿಗೆ ಅವರ ಸ್ಥಿತಿಗೆ ಸರಿಯಾಗಿ ಫೀಸು ವಸೂಲುಮಾಡಿಯೂ ಚಿಕಿತ್ಸೆ ನಡೆಯುತ್ತಿದೆ. ಇದನ್ನು ಸರಕಾರದವರು ಮನ್ನಾ ಮಾಡುವುದರಿಂದ ಧನಿಕ ಭವಶಾಲಿಯಾದ ಡಾಕ್ಟರರ ವೈದ್ಯಸಹಾಯವು ತಪ್ಪಿಹೋದಂತಾಗುತ್ತದೆ ಎಂದು ಮೆಂಬರರ ವಾದವಿತ್ತು. ಈ ಠರಾವು ಬಹುಮತದಿಂದ ಮಂಜೂರಾಯಿತು.

ಆಂಧ್ರ ಪ್ರಾಂತವನ್ನು ಕ್ರಮೇಣ ಬೇರೆ ವಿಂಗಡಿಸಲಾಗುವಂತೆಯೂ ತೆಲುಗುಭಾಷೆಯನ್ನಾಡುವ ಜಿಲ್ಲೆಗಳೆಲ್ಲ ಇವರೊಳಗೆ ಸೇರುವಂತೆಯೂ ಈ ಪ್ರಾಂತದಲ್ಲಿ ಬೇರೆಬೇರೆ ಇಲಾಖೆಗಳ ಮುಖ್ಯ ಆಫೀಸುಗಳನ್ನು ಇರಗೊಡಿಸಲು ಯತ್ನಿಸಬೇಕೆಂದು ಒಂದು ಠರಾವು ಬಂದಿತ್ತು. ಭಾಷೆಯ ಅನುಸಾರವಾಗಿ ಪ್ರಾಂತಗಳ ವಿಭಜನೆಯು ಆಗಬೇಕೆಂದು ಅನೇಕ ಮೆಂಬರರು ಒಪ್ಪಿದರಿಂದ ಠರಾವು ಮಂಜೂರಾಯಿತು.

ಮದ್ರಾಸು ಸಂಸ್ಥಾನದ ಪೇಟೆ [illegible] ಬಂದರುಗಳನ್ನೂ ದುರುಸ್ತಿ ಮಾಡುವ ವಿಷಯವನ್ನು ಪರ್ಯಾಲೋಚಿಸಿ ರಿಪೋರ್ಟು ಮಾಡುವುದಕ್ಕೆ ಒಂದು ಕಮ್ಮಿಟಿಯನ್ನು ಏರ್ಪಡಿಸಬೇಕೆಂದು ಒಂದು ಠರಾವು ಇತ್ತು. ಬಂದರುಗಳನ್ನು ಹೇಗೆ ದುರುಸ್ತಿಪಡಿಸಬೇಕೆಂದು ವಿಚಾರನಡಿಸುವುದಕ್ಕೆ ಒಬ್ಬ ಇಂಜಿನಿಯರನ್ನು ನೇಮಿಸಿರುವುದಾಗಿಯೂ ಪೇಟೆಗಳ ವಿಚಾರವನ್ನು ಡಿಸ್ಟ್ರಿಕ್ಟ್‌ಬೋರ್ಡುಗಳಿಗೆ ಬಿಟ್ಟುಕೊಟ್ಟು ಅವುಗಳ ಬಗ್ಗೆ ದ್ರವ್ಯಸಹಾಯ ಮಾಡುವುದಾಗಿಯೂ ತಿಳಿಸಿದ್ದರಿಂದ ಠರಾವನ್ನು ಹಿಂತೆಗೆಯಲಾಯಿತು.

ರೆವಿನ್ಯೂ ಕಾಡುಗಳಲ್ಲಿ ಗೋಚರಾವಿನ ಪರ್ಮಿಟುಗಳನ್ನು ಕೊಡುವಾಗ ಯಾವುದಾದರೊಂದು ಬ್ಲೋಕಿನ ಬಗ್ಗೆ ಕೊಟ್ಟಾಗ ಅದನ್ನು ದಾಟಿ ಹೋದ ನಿಮಿತ್ತದಿಂದ ಜಾನುವಾರುಗಳನ್ನು ದೊಡ್ಡಿಗೆ ಕಟ್ಟುವ ಅಥವಾ ಮ್ಹಾಲಿಕರಿಗೆ ಬೇರೆ ರೀತಿಯಲ್ಲಿ ಜುಲುಮಾನೆ ಹಾಕುವ ಸಾಂಪ್ರದಾಯ ಬಂದಿದೆ, ಆದ್ದರಿಂದ ಪರ್ಮಿಟಿನಲ್ಲಿ ಎಲ್ಲಾ ಬ್ಲೋಕುಗಳ ಹೆಸರು ಕಾಣಿಸಬೇಕೆಂದು ತಂದ ಠರಾವಿನ ವಿಷಯದಲ್ಲಿ ಯಾವರೀತಿಯಲ್ಲಿ ಈಗಿನ ಅಡಚಣೆಗಳನ್ನು ಪರಿಹರಿಸಬೇಕೆಂದು ತಾನ ವಿಚಾರನಡಿಸಲಿಕ್ಕಿದ್ದೇನೆಂದು ಚೀಫ್ ಕನ್ಸರ್ವೇಟರು ಹೇಳಿದ್ದರಿಂದ ಠರಾವನ್ನು ಹಿಂತೆಗೆಯಲಾಯಿತು.

ಆಯುರ್ವೇದಿಕ್ ಕಾನ್ಫರೆನ್ಸ್.

ಮಂಗಳೂರು.

ಇದೇ ತಿಂಗಳ ತಾರೀಕು ೨೩ನೇ ಸಾಯಂಕಾಲಕ್ಕೆ ಸವ್ಹ ಜಿಲ್ಲಾ ಸರ್ಜನರಿಂದಲೂ ತಾಲೂಕು ತಹಸೀಲ್ದಾರರಿಂದಲೂ ಆಮಂತ್ರಿಸಲ್ಪಟ್ಟ ಮಂಗಳೂರು ಪಟ್ಟಣದ ಆಯುರ್ವೇದೀಯ ವೈದ್ಯರುಗಳ ಒಂದು ಸಭೆಯು, ಮರು ದಿನ ಮಧ್ಯಾಹ್ನ ೧೧ ಗಂಟೆಗೆ ವೆನ್‌ಲೋಕ್ ಆಸ್ಪತ್ರೆಯಲ್ಲಿ ಡಾಕ್ಟರ್ ಕೋಯಮ್ಸ್ ಯಲ್. ಯಮ್. ಮತ್ತು ಪಿ. ಎಸ್. ಅವರ್ಗಳ ಸಮ್ಮುಖದಲ್ಲಿ ನೆರವೇರಿತು. ಇವರು ತಾನು ಮಂಗಳೂರಿಗೆ ಬಂದ ಕಾರ್ಯಗೌರವವನ್ನು ಬಹಳ ವಿನಯ ರೀತಿಯಿಂದ ವೈದ್ಯ ಮಹಾಶಯರುಗಳಿಗೆ ತಿಳಿಸಿದರು. ಇವರ ಭಾಷಣದ ತಾತ್ಪರ್ಯವೇನೆಂದರೆ—

"ವೈದ್ಯಮಹಾಶಯರೇ, ಸುಮಾರು ೨ ವರ್ಷದ ಹಿಂದೆ ಮದ್ರಾಸಿನಲ್ಲಿ ನಡದ ನ್ಯಾಯವಿಧಾಯಕ ಸಭೆಯಲ್ಲಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ವೈದ್ಯಶಾಸ್ತ್ರ ವಿಷಯದ ಚರ್ಚೆಯು ಬಹಳ ತೀಕ್ಷ್ಣದಿಂದ ನಡೆದದ್ದು ತಮ್ಮಗಳಿಗೆ ತಿಳಿದಿರಬಹುದು. ಒನರೇಬಲ್ ಮೆಂಬರರಾದ ಸರ್ ಅಲೆಕ್ಸಾಂಡರ್ ಕಾರ್ಡ್ಯೂ ಪ್ರಭುಗಳು 'ಈ ಆಯುರ್ವೇದ ಚಿಕಿತ್ಸೆಯು ನಿಸ್ಸಾರವಾಗಿದೆ, ಈ ಚಿಕಿತ್ಸೆಯ ಸಾಹಿತ್ಯರೂಪವಾದ ಚರಕಸುಶ್ರುತ ಮೊದಲಾದ ಗ್ರಂಥಗಳನ್ನು ಹೆಚ್ಚುಕಡಿಮೆ ೧|| ಸಾವಿರ ವರ್ಷಗಳ ಹಿಂದೆ ಉಲ್ಲೇಖಿಸಿದ್ದಾಗಿರುತ್ತದೆ. ಇದು ವ್ಯವಸ್ಥಾಪೂರ್ವಕವಾದ ಚಿಕಿತ್ಸಾ ಶಾಸ್ತ್ರವಲ್ಲ. ಇದರಲ್ಲಿ ಸಾರ್ವಜನಿಕ ದ್ರವ್ಯವನ್ನು ವಿನಿಯೋಗಿಸಲಿಕ್ಕೆ ತಕ್ಕದಾದ ಯಾವದೊಂದು ಮಹತ್ತ ವಿಷಯಗಳಿಲ್ಲ. ಅದೇ ರೀತಿ ಯುನಾನಿ ಚಿಕಿತ್ಸಾಶಾಸ್ತ್ರವು ಆಯುರ್ವೇದದ ಸರಿಸಾಟಿಯನ್ನೇ ಅವಲಂಬಿಸಿದ್ದಹಾಗಿರುತ್ತದೆ. ಕತ್ಸ್ರಯುಕ್ತ ನವುಂ ಸರಕಾರವು ಅದಕ್ಕೆ ಹಸ್ತಾವಲಂಬನವನ್ನು ತೋರಿಸ ಪ್ರಮಿ ಯುಕ್ತವಲ್ಲವೆಂಬದಾಗಿ ಪ್ರತಿಪಾದಿಸಿದರು.' ಇವಕ್ಕೆ ವಿರೋಧವಾಗಿ ಒನರೇಬಲ ಮೆಂಬರರುಗಳಾದ ಎ. ಎಸ್. ಕೃಷ್ಣರಾವ್ ಪ್ರಭುಗಳು "ಆಯುರ್ವೇದ ಚಿಕಿತ್ಸೆಯು ವಿದ್ಯಾರೂಪವಾಗಿಯೂ ವ್ಯವಸ್ಥಾಪೂರ್ವಕವಾಗಿಯೂ ಇದೆ, ಅದು ತನ್ನಮಟ್ಟಿಗೆ ಪೂರ್ಣವಾಗಿಯೇ ಇರುತ್ತದೆ, ನವ್ಯ ಮಾರಕತ್ವದಿಂದ ಆಯುರ್ವೇದ ವಿದ್ಯೆಯ ಗಂಧವನ್ನೂ ಕಾಣದ ಅಂಥವರು ಶಾಸ್ತ್ರವನ್ನು ಖಂಡನೆಮಾಡುವುದು ಅನುಚಿತ ಮತ್ತು ಅಯೋಗ್ಯವಾಗಿರುತ್ತದೆ, ಅಲ್ಲದೆ ಈ ದೇಶದಲ್ಲಿ ಹುಟ್ಟಿಬೆಳದ ಜನಾಂಗಗಳಿಗೆ ಇದೇ ವೇದದ [illegible] ಭೋಜನಗಳಿಗೆ ಹಿತಕರವಾಗಿನ ಮತ್ತು ಕೇವಲ ದರಿದ್ರರಿಗೆ ಪ್ರಚುರ ಧನದಿಂದ ಲಭ್ಯವಾಗುವ ಪಾಶ್ಚಾತ್ಯ ಚಿಕಿತ್ಸೆಯು ಹೊಸೆರುವುದಿಲ್ಲ, ದೇಶೀಯ

[illegible]

[illegible] ಸಮಯ [illegible] ಮಾಡಬೇಕೆಂದು [illegible].

[illegible] ಗಳಿಗೆ [illegible] (ಕ್ಲಾಸು) ಮಂತ್ರಿ [illegible] ಅಧಿಕಾರಿಯು [illegible] ನಾಥ, ಶಿವಪ್ಪ [illegible] ಆದ ಉಡ್ಡಿಕ್ಷ ಮತ್ತು [illegible] ಒಂದು ಗಂಟೆ [illegible] ಯನ್ನು ಅಂತ್ಯಗೊಳಿಸಿ, ಕೋವೆನ್ ಮಹಾಶಯರು [illegible] ಸಾಯಂಕಾಲ ೫ ಗಂಟೆಯ ಮೋಟರ್ [illegible] ಚಿತ್ತೈಸಿದರು.

[illegible] 26—8—20. [illegible]

ಸಹಕಾರ ಇಲಾಖೆಯ ಸರ್ಕ್ಯುಲರ್.

(ಬಡ್ಡಿ ಸಿಟಿ ದರೂ)

ಹೊಳೆಂಕೊಗಳು ಸ್ಥಾಪನೆಯಾದ್ದರಿಂದಲೂ ವ್ಯಾಪಾರ [illegible] ಸರಕುಗಳ ಬೆಲೆ ಏರಿ ಹಣ [illegible] ಅಗತ್ಯಬಿದ್ದದರಿಂದಲೂ [illegible] ಜಾಸ್ತಿಯಾದ್ದರಿಂದ ಬಡ್ಡಿಯ ದರವು ಸಂಸ್ಥಾನದಲ್ಲಿ ಹೆಚ್ಚಿ [illegible] ಸಹಕಾರ ಬೇಂಕುಗಳೂ ಠೇವಣಿಗಳನ್ನು ಆಕರ್ಷಿಸುವ ಬಗ್ಗೆ ಬಡ್ಡಿಯ ದರವನ್ನು ಏರಿಸಬೇಕಾಗಿ ಬಂದಿದೆ. ಸಹಕಾರ ಬೇಂಕುಗಳಿಗೆ ಅವರ ವಹಿವಾಟುಗಳಿಗೆ ಅಂದರೆ ಹಳ್ಳಿಸಂಘಗಳಿಗೆ ಸಹಾಯಮಾಡುವುದಕ್ಕೆ ಸಾಕಷ್ಟು ಹಣಸಿಗುವುದು ಅಗತ್ಯ. ಮದ್ರಾಸು ಪ್ರಾವಿನ್ಶಲ್ ಬೇಂಕು ತನ್ನಲ್ಲಿರುವ ಠೇವಣಿಗಳಿಗೆ ಸೇಕಡಾ [illegible] ದರವನ್ನು [illegible] ಬಂದದರಿಂದ ಅದು ಸೆಂಟ್ರಲ್ ಬೇಂಕುಗಳಿಗೆ ಸೇಕಡಾ [illegible] ದರದಲ್ಲಿ ಸಾಲಕೊಡಬೇಕಾಯಿತು. ಅದೇ ರೀತಿಯಲ್ಲಿ ಹಳ್ಳಿ ಸಂಘಗಳ ಮೇಲೆ ಬಡ್ಡಿಯ ದರವನ್ನು ಸೆಂಟ್ರಲ್ ಬೇಂಕುಗಳು ಹೆಚ್ಚಿಸುವ ಅಗತ್ಯವಿದ್ದದರಿಂದ ಆ ದರವನ್ನು ಸೇಕಡಾ [illegible] ಏರಿಸಬೇಕೆಂತ ಮತ್ತು ಹಳ್ಳಿ ಸಂಘಗಳು ಮೆಂಬರರಿಗೆ ರೂ. ೯—೬—೦ ಬದಲಾಗಿ ರೂ. ೧೦—೧೫—[illegible] ಬಡ್ಡಿಯ ದರಗಳನ್ನು ಇರಿಸಬೇಕೆಂತ ರಿಜಿಸ್ಟ್ರಾರರು [illegible] ಮದ್ರಾಸು ಸರಕಾರದವರು ಸೆಂಕ್ಶನ್ ಮಾಡಿರುವರು. ಈ ದರವು [illegible] ಮೊದಲೇ ಕೊಟ್ಟ ಸಾಲಗಳಿಗೆ ಅನ್ವಯಿಸುವುದಿಲ್ಲವೆಂತಲೂ ಸಹಕಾರ ಇಲಾಖೆಯವರ ಸರ್ಕ್ಯುಲರ್ ಇದೆ.

ಪತ್ರವ್ಯವಹಾರ.

ಸ್ವಾಮಿ ಪತ್ರಾಧಿಪರೇ,

ಸ್ವದೇಶಾಭಿಮಾನಿಯಾದ ತಮ್ಮ ಅಮೂಲ್ಯ ಪತ್ರದಲ್ಲಿ ಸ್ವಾಭಿಮಾನಿಯಾದ ನನ್ನ ಕೆಲವು ಮಾತುಗಳಿಗೆ ಎಡೆಕೊಡುವಿರೆಂದು ನಂಬಿ ಬೇಡಿಕೊಳ್ಳುತ್ತೇನೆ. ಸುಮಾರು ಹನ್ನೆರಡು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಈ ನೀಲೇಶ್ವರ ಗ್ರಾಮವು ಕಳೆದ ಪಂಚವರ್ಷಗಳಿಂದ [illegible] ಪ್ರಾಥಮಿಕ ಶಾಲೆಗಳಿಂದ ಕೂಡಿರುವಲ್ಲಿ ಆ ಶಾಲೆಗಳಲ್ಲಿ ಒಂದಾದ ಬಾಲಿಕಾ ಪಾಠಶಾಲೆಯು ಅವಿವೇಕವೆಂಬ ಕಾರ್ಮುಗಿಲಿನಿಂದ ಮುಚ್ಚಲ್ಪಟ್ಟು ಅದರ ಜ್ಯೋತಿಯು ಕಳೆಗುಂದುತ್ತ ಬಂದು, ಕಾಣದೆಹೋಗುವ ಸಂದರ್ಭಕ್ಕೆ ಬಂದೊದಗಿದ್ದಲ್ಲಿ ಸ್ತ್ರೀವಿದ್ಯಾಭ್ಯಾಸದ ಲಾಭವನ್ನು ಮನವರಿತವರೂ ಪ್ರಜ್ಞರೂ, ಜನಪ್ರಿಯರೂ ಆಗಿರುವ ಮಹಾನುಭಾವರಾದ [illegible] ತಾಲೂಕುಬೋರ್ಡು ಪ್ರೆಸಿಡೆಂಟರವರು, ಅಸ್ತಮಯಕ್ಕೆ ಮುಟ್ಟಿ ಕಾಣದೆ ಹೋಗಲಿಕ್ಕಿರುವ ಸದರಿ ಬಾಲಿಕಾ ಪಾಠಶಾಲೆಯನ್ನು ಪುನಃ ಉತ್ಕೃಷ್ಟ ಸ್ಥಿತಿಗೆ ತರಬೇಕಾಗಿ ನಿಶ್ಚಯಿಸಿ, ಈ ಸಂಬಂಧ ಜನಪ್ರಿಯರೂ, ಮುಂಚೆ ಇದೇ ಶಾಲೆಯಲ್ಲಿಯೇ ಕೆಲವು ಕಾಲ ಹೆಡ್ ಮಿಸ್ಟ್ರೆಸ್ ಆಗಿದ್ದ ಪಿ. [illegible] ಫೆರ್ನಾಂಡೆಸ್ಸರನ್ನು ಕೊಡಲೇ ಅತ್ಯುತ್ತಮ [illegible] ಪಾಠಶಾಲೆಯಿಂದ ಇಲ್ಲಿಗೆ ವರ್ಗಾಯಿಸಿದರು. ಸದರಿಯವರು ಬಂದು, ಒಂದು ತಿಂಗಳು [illegible] ಮಕ್ಕಳ ಸಂಖ್ಯೆಯು [illegible] ಹೆಚ್ಚಿ, ಶಾಲೆಯು [illegible] ವೃದ್ಧಿಗೊಳ್ಳುತ್ತಿರಲು, ಸದರಿ ಶಾಲೆಯು ಈಗಿನ ಸ್ಥಿತಿಯನ್ನು [illegible] ವರ [illegible] ಮು| ರಾ| ರಾ| [illegible] ತಾಲೂಕುಬೋರ್ಡು ಪ್ರೆಸಿಡೆಂಟರವರ ಸವಾರಿ [illegible] ಚಿತ್ತೈಸಿ, ಸದರಿ ಶಾಲೆಯನ್ನು ಕೂಡಲೇ ಸಂದರ್ಶಿಸಿ, ಈಗಿನ ಸ್ಥಿತಿಯನ್ನು ಕಂಡು ಸಂತುಷ್ಟರಾಗಿ, ಈ ಶಾಲೆಯು ಈಗಿನ ಹೆಡ್ ಮಿಸ್ಟ್ರೆಸ್ ಕಾಲದಲ್ಲಿ ಎಲ್ಲಾ ವಿಧದಲ್ಲಿಯೂ ಅಭಿವೃದ್ಧಿಯಾಗುವದಾಗಿ ತಾನು ನಂಬುತ್ತೇನೆಂಬದಾಗಿ [illegible] ಬರೆದು [illegible] ರಿಗೆ ತಿಳಿವಳಿಕೆಯಾಗಿ [illegible]. ಸದರಿ ಈಗಿನ ಹೆಡ್ ಮಿಸ್ಟ್ರೆಸ್ [illegible] ಜನಪ್ರಿಯರೂ, ದಯಾಶೀಲರೂ, ಆಗಿರುವುದರಿಂದಲೂ, [illegible] ಗಳಿಂದ ಈ ಊರಲ್ಲಿಯೇ [illegible] ಅವರನ್ನು [illegible] ತಿಳಿಯುವುದರಿಂದ [illegible] ವರ್ಗಗಳವರಿಗೆ [illegible] ಮಹಾಶಯರಾದ [illegible].

ನೀಲೇಶ್ವರ,
[illegible] 17-8-'20. } [illegible]

ಇಂಗ್ಲಿಷ ಅರಣ್ಯ.

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

ಈ ಕಾಡುಗಳಲ್ಲಿ ಸೇಕಡಾ ೩೦ರಷ್ಟು ಅಲ್ಲದೆ ಉಳಿದವು ಬರೇ ಸೌದೆಗೋಸ್ಕರವಲ್ಲದೆ ಬೇರೆ ಉಪಯೋಗಕ್ಕೆ ಬಾರದವುಗಳೆಂದು ಮಿ। ಕೊಕ್ಸರು ಅಭಿಪ್ರಾಯಪಟ್ಟಿದ್ದಾರೆ. ಗೂಡಾ ಕಲ್ಲುಗಳು, ಎಳೆಕರುಗಳು ಅಥವಾ ಮುದಿ ಗೋವುಗಳು ಇಂಥವನ್ನು ತಿನ್ನಬಲ್ಲದಷ್ಟು ಹುಲ್ಲು ಕೊಡುವ ಈ ಕಾಡುಗಳಲ್ಲಿ ಮೇಯಿಸುವುದರಿಂದ ಕಾಡುಗಳನ್ನು ನಾಶಪಡಿಸುವುದರಿಂದೇ ಅಲ್ಲದೆ ಬೇರೆ ಉಪಕಾರವಿಲ್ಲವೆಂದು ಹೇಳುವುದಲ್ಲದೆ ಈ ರೀತಿಯಲ್ಲಿ ಕಾಡುಗಳಲ್ಲಿ ಮೇಯುವ ವಾಡಿಕೆಯಿಲ್ಲದೆ ಊರುಗಳಲ್ಲಿಯೇ ಒಳ್ಳೆ ಜಾತಿಯ ಜಾನುವಾರುಗಳು ಪ್ರಬಲವಾಗಿವೆ ಎಂದು ಮಿ। ಕೊಕ್ಸರು ಹೇಳಿದ್ದಾರೆ.

ಸೊಪ್ಪುಗೊಬ್ಬರದ ಬಗ್ಗೆ ಕಾಡಿನ ಸೊಪ್ಪುಕೊಡಬೇಕೆಂದು ಜನರ ತಗಾದೆ ಇದೆ. ಇದನ್ನು ಕುರಿತು ಹೇಳುವಾಗ ಒಂದು ಎಕ್ರೆ ಸಂಚು ಭೂಮಿಗೆ ೫ ಎಕ್ರೆ ವಿಸ್ತೀರ್ಣದ ಕಾಡಿನ ಸೊಪ್ಪು ಬೇಕಾಗುತ್ತಿದೆ, ಇಷ್ಟು ಸೊಪ್ಪು ೫ ವರ್ಷಗಳಿಗೊಮ್ಮೆ ಮಾತ್ರ ಸಿಕ್ಕೀತು. ಈ ರೀತಿಯಲ್ಲಿ ಲೆಕ್ಕಿಸಿ ನೋಡಿದರೆ ೫ ಮೈಲಿನ ಬದಿಯಲ್ಲಿರುವಂಥ ಸಂಚುಭೂಮಿಗೆ ಅಂದರೆ ಸುಮಾರು ೧೮೦ ಸಾವಿರ ಎಕ್ರೆ ವಿಸ್ತೀರ್ಣಕ್ಕೆ ೬೦೦ ಸಾವಿರ ಎಕ್ರೆಗೆ ಬಾಗುವಷ್ಟು ಸ್ಥಳದ ಸೊಪ್ಪು ಬೇಕಾದೀತು. ಅನ್ಯಾಯವಾಗ ಕಾಯವಾಗಿ ಇಷ್ಟು ವಿಸ್ತೀರ್ಣಕ್ಕೆ ಸೊಪ್ಪುಗೊಬ್ಬರ ಒದಗಿಸುವ ಬಗ್ಗೆ ೪೦೦೦ ಚದರ ಮೈಲು ಕಾಡಿನ ಪೂರ್ತಿಕೆಯು ಬೇಕಾದೀತು, ಇದರಿಂದ ಈಗಿನ ಸರಕಾರ ಕಾಡುಗಳು ಪ್ರೈರಾಗುವ ಸ್ಥಳದ ಬರೆ ಅಕ್ಕಲ್ಲ ಅಂಶಕ್ಕೆ ಮಾತ್ರ ಸೊಪ್ಪನ್ನು ಒದಗಿಸ್ಯಾವು, ಇಂಥ ಒರತೆಯು ಬೇಗನೆ ಬತ್ತಿಹೋಗುವುದಕ್ಕೆ ಇರುವುದರಿಂದ ಕೃಷಿಕರು ಗೊಬ್ಬರದ ಪೈರುಗಳನ್ನೆ ಬೆಳಸಿ ಗೊಬ್ಬರ ಒದಗಿಸಿಕೊಳ್ಳುವುದು ಉತ್ತಮ, ಒಂದು ಎಕ್ರೆಯಲ್ಲಿ ಬೆಳಸಿದ ಈ ಬಗೆಯ ಪೈರು ಸುಮಾರು ೨ ಎಕ್ರೆಗೆ ಸಾಕಷ್ಟು ಸೊಪ್ಪುಗೊಬ್ಬರವನ್ನು ಒದಗಿಸಿಕೊಡುತ್ತದೆ ಎಂದು ನಾವದಾರ ಕೊಕ್ಸರು ಸೂಚನೆಕೊಡುತ್ತಾರೆ.

ಈಗ ಕಾಡುಗಳಿಂದ ಜನಗಳಿಗೆ ಕೆಟ್ಟ ಸೌಕರ್ಯಗಳನ್ನು ಒಮ್ಮೆಲೆ ತೆಗೆದುಹಾಕಬೇಕೆಂದು ತಾನು ಹೇಳುವುದಿಲ್ಲವಾದರೂ ಕೃಷಿಕರು ಜಾನುವಾರು ಚರಾವು ಮತ್ತು ಸೊಪ್ಪನ್ನು ಕ್ರ. ೩. ಹೊ. ಸ್ಥಳಗಳಿಂದ ಒದಗಿಸಿಕೊಂಡು ಸರಕಾರಿ ಕಾಡುಗಳಿಂದ ಮರಮಟ್ಟು ಮತ್ತು ಕಟ್ಟಿಗೆ ಪಡೆಯಲು ಯತ್ನಿಸಿದರೆ ಒಳ್ಳೇದಾದೀತು, ದೂರವಿರುವ ಕಾಡುಗಳಿಂದ ಮರಮಟ್ಟು ಮತ್ತು ಬಿದಿರು ಒದಗಿಸಲಿಕ್ಕೆ ರಸ್ತೆಯ ಅನುಕೂಲತೆಗಳನ್ನು ಮಾಡುವುದು ಅತ್ಯಾವಶ್ಯಕವೆಂದು ತಾನು ಒಪ್ಪುತ್ತೇನೆ, ಆದರೂ ಅಂಥಾ ಕಾಡುಗಳಿಂದ ತರುವ ವಸ್ತು ಅಷ್ಟೆ ಒಳ್ಳೆದಾಗಿದ್ದರೆ ಮಾತ್ರ ಸಾಗುಮಾಡುವುದರಿಂದ ನಷ್ಟಬರಲಾರದು ಎಂದು ಮುಂತಾಗಿ ಮಿ। ಕೊಕ್ಸರು ವಿವರಿಸಿದರು.

೧೯೧೭—೧೮ನೆ ವರ್ಷದಿಂದ ಜನರ ಇಚ್ಛೆಯ ಮೇರೆಗೆ ೧೯೭೭ ಸಾವಿರ ಎಕ್ರೆ ಸರಕಾರಿ ಕಾಡುಸ್ಥಳವನ್ನು ಕೃಷಿಯ ಬಗ್ಗೆ ಜನಗಳಿಗೆ ಬಿಟ್ಟುಕೊಟ್ಟಿದೆ, ಇದರಲ್ಲಿ ಸುಮಾರು ಅರ್ಧಾಂಶವು ಕಾಯಂ ಕೃಷಿಗೆ ಯೋಗ್ಯವಾದದ್ದೇ; ಇನ್ನೂ ೬೫,೦೦೦ ಎಕ್ರೆ ಜಮೀನು ಇದೇ ರೀತಿಯ ಕೃಷಿಯ ಉಪಯೋಗಕ್ಕೆ ಯೋಗ್ಯವಾದದ್ದು; ಕಾದುಕೆಡಿದು ಆ ಸ್ಥಳವನ್ನು ಹಸನುಮಾಡಲಿಕ್ಕೆ ಸಮಯ ಒದಿಯುತ್ತದೆ. ಆದರೆ ಈ ರೀತಿಯಾಗಿ ಸರಕಾರಿ ಕಾಡನ್ನು ಒಪ್ಪಿಸಿಕೊಡಬೇಕೆಂದು ಕೇಳುವ ಕೆಲವು ಪ್ರದೇಶಗಳಲ್ಲಿ ಸಾಗುಮಾಡದೆ ಬಂಜರಾಗಿದ್ದ ಭೂಮಿಯು ಯಥೇಷ್ಟವಾಗಿದ್ದ ದೃಷ್ಟಾಂತಗಳೂ ಇವೆ ಎಂದು ಮಿ। ಕೊಕ್ಸರು ಹೇಳಿದರು.

ಇನ್ನೂ ಹೊಸ ಕಾಡುಗಳನ್ನು ಬೆಳಸುವುದಕ್ಕೆ ಮುನ್ನಿನ ಸಾರದ ಹಿತಕ್ಕರ ನಿಬಿಕ್ಕ ಖರ್ಚಿನ ದಾಮಾಶಯವು ಹೆಚ್ಚೀತು, ಅಷ್ಟು ಖರ್ಚನ್ನು ಸರಕಾರವು ವಹಿಸಿಕೊಳ್ಳುವುದು ಪ್ರಯೋಜನಕಾರಿಯಾಗಲಾರದು, ಆದರೆ ಕಟ್ಟಿಗೆಯ ತುಟ್ಟಿ ಇದ್ದರ ಚಬುಕಿನ ಮರಗಳನ್ನು(ಕೆಷುರಿನಾ)ಬೆಳಸುವುದು ಅತ್ಯುತ್ತಮ, ಈ ರೀತಿಯಾಗಿ ಮನುಷ್ಯನಿಗೆ ಸಮೀಪದ ಅನೇಕಾನೇಕ ಹಳ್ಳಿಗಳಲ್ಲಿ ಮಾಡಹತ್ತಿದ್ದಾರೆ ಎಂದು ಮುಂತಾಗಿ ನಾಮದಾರ ಕೊಕ್ಸರು ತುಂಬಾ ಶ್ರಮಪಟ್ಟು ಕೂಲಂಕಷವಾಗಿ ವಿವರಿಸಿ ಹೇಳಿದರು.

ಕೈಗಾರಿಕೆಗಳ ವಿದ್ಯಾರ್ಥಿ ವೇತನಗಳು.

ಮಂಜೂರಾದ ಕೈಗಾರಿಕೆ ಸಾಲೆಗಳಲ್ಲಿ ಅಥವಾ ಸರಕಾರದವರಿಂದ ಚುನಾಯಿಸಿದ ವರ್ಕ್‌ಶೊಪ್ ಅಥವಾ ಮಿಲ್ಲುಗಳಲ್ಲಿ ಉಮೇದ್ವಾರರಿಗೆ ಕೈಗಾರಿಕೆಯನ್ನು ಹಸ್ತೆಯಲ್ಲಿ ನಾಲ್ಕು ತಾಸುಗಳಾದರೂ ಕಲಿಯುವುದಕ್ಕೆ ಏರ್ಪಾಡು ಇದ್ದಲ್ಲಿ ಅಂಥಾ ಉಮೇದ್ವಾರರಿಗೆ ಕೊಡುವುದಕ್ಕೆ ವರ್ಷಕ್ಕೆ ೬೦ ವೇತನಗಳನ್ನು ಮದ್ರಾಸು ಪ್ರಾಂತಿಕ ಸರಕಾರದವರು ಸೆಂಕ್ಷನ್ ಮಾಡಿರುವರು, ಈ ವೇತನಗಳು ಡಿರೆಕ್ಟರ್ ಒಫ್ ಇಂಡಸ್ಟ್ರೀಸ್ ಎಂಬ ಅಧಿಕಾರಿಯಿಂದ ಹಂಚೋಣವಾಗುವವು. ಪ್ರತಿ ಒಂದು ವೇತನವು ೫ ವರ್ಷದ ವರೆಗೆ ಒಬ್ಬ ಉಮೇದ್ವಾರನಿಗೆ ಕೊಡಲ್ಪಡುವುದು. ಪ್ರಥಮ ವರ್ಷದಲ್ಲಿ ತಿಂಗಳಿಗೆ ೧೪ ರೂ., ೨ನೇ ವರ್ಷಕ್ಕೆ ತಿಂಗಳಿಗೆ ೨ ರೂ., ೩ನೇ ವರ್ಷಕ್ಕೆ ರೂ. ೩, ೪ನೇ ವರ್ಷಕ್ಕೆ ರೂ. ೫, ೫ನೇ ವರ್ಷಕ್ಕೆ ರೂ. ೬ ರಂತೆ ಸಿಗಲಿಕ್ಕಿರುವುದು. ಪ್ರತಿ ವರ್ಷದಲ್ಲಿ ಈ ಉಮೇದ್ವಾರರ ಅಭಿವೃದ್ಧಿಯು ಸಮಾಧಾನಕರವೆಂದು ಕಂಡರೆ, ಆ ವರ್ಷದ ಸರಾಸರಿ ೨ ತಿಂಗಳ ವೇತನವು ಬೋನಸಾಗಿ ಸಿಗುವುದು.

ಉಮೇದ್ವಾರರು ಪ್ರಥಮದ ೬ ತಿಂಗಳ ವರೆಗೆ ಪ್ರೊಬೇಶನದಲ್ಲಿರುವರು, ಆ ಕಾಲದಲ್ಲಿ ಅವರ ಚಟುವಟಿಕೆಯು ಸಮಾಧಾನಕರವೆಂದು ಕಂಡರೆ ವೇತನವು ಕಾಯಂ ಆಗುವುದು; ಇಲ್ಲವಾದರೆ ನಿಂತು ಹೋಗುವುದು. ವಿಶೇಷವಾಗಿ ಕೈಗಾರಿಕೆಯ ವೃತ್ತಿಯನ್ನು ಅವಲಂಬಿಸಿರುವವರ ಮಕ್ಕಳಿಗೇ ಈ ವೇತನಗಳು ದೊರಕುವವು.

ಮುಸಲ್ಮಾನರು ೧೮ ವರ್ಷದ ಪ್ರಾಯದ ನಂತರ ದಾಖಲಾದರೆ ಇತರರು ೧೭ ವರ್ಷದ ನಂತರ ದಾಖಲಾದರೆ, ವೇತನವು ಸಿಗಲಾರದು. ಈ ಉಮೇದ್ವಾರರು ಪ್ರಾಥಮಿಕ ಶಾಲೆಯ ೫ನೆ ವರ್ಗದ ಶಿಕ್ಷಣ ಹೊಂದಿರಬೇಕು. ಆದರೆ ಆಯಾ ವ್ಯಕ್ತಿ ಮತ್ತು ಉಮೇದ್ವಾರನ ದ್ರವ್ಯಾನುಕೂಲ, ಆತನ ಕೆಲಸದ ಅನುಭವ ಇವುಗಳನ್ನು ಆಧರಿಸಿ ಈ ವಿಷಯದಲ್ಲಿ ರಿಯಾಯಿತಿಗಳನ್ನೂ ಕೊಡಲೂ ಬಹುದು.

ವೇತನ ಪಡೆಯುವ ಪ್ರತಿ ಉಮೇದ್ವಾರನೂ ಅವನ ರಕ್ಷಕನೂ ಅಸ್ವಸ್ಥದ ಅನಿವಾರ್ಯಕ ಸಂದರ್ಭದಲ್ಲಿ ವಿನಾ ಇತರ ಸಂಗತಿಗಳಲ್ಲಿ ೫ ವರ್ಷಗಳ ವರೆಗೆ ಉಮೇದ್ವಾರನು ಕಲಿಯುತ್ತಾನೆಂದು ಬಾಂಡು ಬರೆದುಕೊಡಬೇಕು.

ಉಮೇದುವಾರಿಕೆಯ ಅರ್ಜಿಗಳನ್ನು ಈ ವಿದ್ಯಾರ್ಥಿಯು ಕಲಿಯುವ ಕೈಗಾರಿಕೆ ಶಾಲೆಯ ಅಧಿಕಾರಿ, ಅಥವಾ ಈ ಉಮೇದ್ವಾರನನ್ನು ತನ್ನ ಕಾರ್ಖಾನೆಯಲ್ಲಿ ಕೆಲಸಕ್ಕೆ ಹಚ್ಚಿದ ಮನೇಜರನು ಪ್ರತಿ ಎಪ್ರಿಲ್ ತಿಂಗಳ ೧೫ನೆ ತಾರೀಕಿನ ಮುಂಚೆ ಅರ್ಜಿಗಳನ್ನು 'ಡಿರೆಕ್ಟರ್ ಒಫ್ ಇಂಡಸ್ಟ್ರೀಸ್' ಈ ಅಧಿಕಾರಿಗೆ ಬರೆಕೊಳ್ಳಬೇಕು. ಈ ಅರ್ಜಿಯೊಂದಿಗೆ ಉಮೇದುವಾರನು ಹಿಂದೆ ಕಲಿತ ಶಾಲೆಯಿಂದ ಅವನ ನಡತೆ ಮತ್ತು ಪ್ರೀಸು ಕೂಡಾ ಸರ್ಟಿಫಿಕೇಟನ್ನು ಲಗ್ತ ಕಳಿಸಬೇಕು. ಚುನಾಯಿಸಲ್ಪಟ್ಟ ಉಮೇದ್ವಾರರ ಹೆಸರುಗಳು ಫೊರ್ಟಸೆಂಟ ಜೋರ್ಜ ಗೆಜೆಟಿನಲ್ಲಿ ಪ್ರಕಟವಾಗುವವು.

ಇಂಥ ಮಕ್ಕಳಿಗೆ ಈ ಬಗೆಯ ಶಿಕ್ಷಣವನ್ನು ಕೊಡುವ ಸಂಸ್ಥೆಗಳಿಗೆ ಈ ವೇತನಗಳ ವಿನಾ ಇತರ ರೀತಿಯಿಂದ ಗ್ರೆಂಟುಕೊಡಲು ಸರಕಾರದವರು ಸಿದ್ಧವಿರುವರು.

ದಕ್ಷಿಣಕನ್ನಡಾ ಜಿಲ್ಲಾ ಬೋರ್ಡು ಶಾಲಾ ಉಪಾಧ್ಯಾಯ ಬಂಧುಗಳೇ!

ಗವರ್ನಮೆಂಟ್ ನೌಕರರಿಗೆಲ್ಲಾ ಏಸಲ್ಪಟ್ಟ ಎಲೋವೆನ್ಸ್ ಅವರವರ ಕೈ ಸೇರಿ ಒಂದೆರಡು ತಿಂಗಳಾದರೂ, ಗವರ್ನಮೆಂಟ್ ಸೆಲೆಕ್ಟಕಮಿಟಿಯು ಬಡ ಉಪಾಧ್ಯಾಯರ ಸಂಕಷ್ಟಸ್ಥಾನದಲ್ಲಿ ಸ್ವಲ್ಪಮಟ್ಟಿಗೆ ನಿಂತು ಕಡಿಮೆದರ ಎಂಬ ಹಾಗೆ ಎಲಿಮೆಂಟರಿ ಉಪಾಧ್ಯಾಯರಿಗೆ ಮಿನಿಮಂ ೩೦ ರೂಪಾಯಿ ದರದ ಸಂಬಳ ಸಿಕ್ಕಬೇಕು ಎಂತ ಶಿಫಾರಸುಮಾಡಿದರೂ, ಹೆತ್ತ ತಾಯಿಯಾದ ನಮ್ಮ ಗವರ್ನಮೆಂಟ್ ನಮ್ಮನ್ನ ಲೋಕಲ್ ಬೋರ್ಡ ಎಂಬ ಸಾಕಣ ತಾಯಿಗೆ ಒಪ್ಪಿಸಿ ದೂರದ ಕುಟುಂಬ ಎಂತ ಭಾವಿಸಿ ವಾತ್ಸಲ್ಯ ಕಡಿಮೆಮಾಡಿಕೊಂಡರೂ, ಪಾಪಪುಣ್ಯ ನೋಡಿ, ಇದೇ ಕಳೆದ ಎಪ್ರಿಲ್ ಲಾಗಾಯ್ತು, ೧೧ ತಿಂಗಳ ವರೇಗೆ ತಿಂಗಳು ೧೨ ೪ ರೂಪಾಯಿ ದರದಲ್ಲಿ ಕೊಡುವುದಾಗಿ ಸೆಂಕ್ಷನ್ ಮಾಡಿದ ಹಣ ಈ ವರೇಗೆ ನಮ್ಮ ಕೈಗೆ ಹಾಗದೆ ಇದ್ದರೂ, ನಮ್ಮ ಬೇಕ್ಕೆಯನ್ನೆ ಬಯಸುತ್ತಿರುವ ಲೋಕಲ್ ಬೋರ್ಡುಗಳೂ ಆದಷ್ಟು ಬೇಗನೇ ಸದರಿ ಹಣ ನಮ್ಮ ಕೈಸೇರಿಸುವ ಹಾಗೆ ಪ್ರಯತ್ನಮಾಡುತ್ತಾವಾಗಿ ಕೇಳಿ, ನಾವು ಸ್ವಲ್ಪಮಟ್ಟಿಗೆ ಸಂತೋಷಪಡಬೇಕಾಗಿದೆ. (ಎಗ್ಜಿಕ್ಯೂಟಿವ್ ಕೌನ್ಸಿಲ್ ಮೆಂಬರ್) ಬಹುಮಾನವಟ್ಟ ರಾಜಗೋಪಾಲಾಚಾರ್ಯರು, ಈ ಜಿಲ್ಲೆಗೆ ಬತ್ತೈದಾಗ್ಗೆ "ಸರಕಾರಿ ನಮ್ಮ ಸ್ವಂತ ನೌಕರರಿಗೆ ಸಂಬಳ ಏರಿಸಲಿಕ್ಕೆ ಹಣ ನಮ್ಮಲ್ಲಿ ಇಲ್ಲ. ಹಾಗಿರುತ್ತಾ ನಿಮಗೆಲ್ಲಿಂದ ಕೊಡುವುದು? ನಿಮಗೆ ಯೋಗ್ಯ ಸಂಬಳ ದೊರೆಯುವ ಹಾಗೆ ಪ್ರತ್ಯೇಕ ಏಲಿವಾರಿ ಲೋಕಲ್‌ಬೋರ್ಡುಗಳ ಕೂಡೆ ಆಲೋಚಿಸಿದ್ದೇವೆ. ಲೋಕಲ್‌ಬೋರ್ಡುಗಳು ಯಾವ ರೀತಿಯಿಂದಾದರೂ ನಿಮ್ಮ ಹೊಟ್ಟೆಯನ್ನು ತಣಿಸಿಯಾವು". ಎಂತ ಹೇಳಿದರು. ಆದಕೆ ಅದೇ ಸೂತ್ರಪ್ರಕಾರ ನಾವು ಕಳುಹಿಸಿದ ಮೆಮೊರಿಯಲನ್ನು ಬೋರ್ಡುಗಳಿಗೆ ವಾಪಾಸುಮಾಡಿ ಉಪಾಧ್ಯಾಯರು ಅವರವರ ಹಾಲಾಹವಲ ಗಳನ್ನು ಬೋರ್ಡುಗಳಿಗೆ ಅರ್ಪಿಸಬೇಕಾಗಿ, ಗವರ್ನಮೆಂಟ್ ಓರ್ಡರ್ ಮಾಡಿದಷ್ಟಕ್ಕೆ ಆ ಪ್ರಕಾರ ನಮ್ಮ ಹಾಲಹವಾಲಿಗಳನ್ನು ಬೋರ್ಡುಗಳಿಗೆ ಅರಿಕೆಮಾಡಿಕೊಳ್ಳಲೇ ಬೇಕು. ಗವರ್ನಮೆಂಟಿಗೆ ಕಳುಹಿಸಿದ ಮೆಮೋರಿಯಲ್ ಬೋರ್ಡುಗಳ ಮುಖಾಂತರವೇ ಹೋಗಿ ವಾಪಸು ಬಂದದ್ದರಿಂದ ನಮ್ಮ ಸಂಕಷ್ಟಗಳು ಅದರಲ್ಲಿ ಅಡಕವಾಗಿರುವ ಕಾರಣ ಪ್ರತ್ಯೇಕ ಮೆಮೋರಿಯಲ್ ಕಳುಹಿಸದೆ ನಮ್ಮ ಪ್ರತಿನಿಧಿಗಳ ಒಂದು ಡೆಪ್ಯುಟೇಶನ್ ಮುಖಾಂತರ ಡಿಸ್ಟ್ರಿಕ್ಟ ಬೋರ್ಡನ್ನು ಮೊರೆಯಿಡುವುದು ಯೋಗ್ಯವೆಂತ ನಿಶ್ಚಯಿಸಿದ ಪ್ರಕಾರ ಆ ಬಗ್ಗೆ ಪರ್ಮಿಶನಿಗೆ ಬರಕೊಂಡದಕ್ಕೆ ಗವರ್ನಮೆಂಟು, ಪ್ರತಿ ಒಬ್ಬ ಉಪಾಧ್ಯಾಯನಿಗೆ ತಿಂಗಳು ೧೮ ೪ ರೂಪಾಯಿ ದರದಲ್ಲಿ ಎಲೋವೆನ್ಸ್ ಕೊಡುವರೆ ಒಪ್ಪಿಕೊಂಡಿದೆ ಎಂತಲೂ, ಆ ಪ್ರಕಾರ ಎಲೋವೆನ್ಸಿನ ಹಣ ಬೇಗನೇ ನಮ್ಮ ಕೈಸೇರುವ ಹಾಗೆ ಗವರ್ನಮೆಂಟ್ ಆಖೈರಿ ಹುಕುಂ ಕಲ್ಪಿಸಿ ತನಕ ಡೆಪ್ಯುಟೇಶನ್ ಬಗ್ಗೆ ಅವಶ್ಯವಿಲ್ಲವೆಂತಲೂ, ಅವಶ್ಯಬಿದ್ದರೆ ಬರುವ ತಿಂಗಳ ಮಿಟಿಂಗಿಗೆ ಮೊದಲೇ ನಿಮ್ಮ ಅರ್ಜಿಯನ್ನು ಡಿಸ್ಟ್ರಿಕ್ಟಬೋರ್ಡಿಗೆ ಬರಕೊಳ್ಳಬೇಕೆಂತಲೂ, ಮ। ರಾ। ರಾ। ಡಿಸ್ಟ್ರಿಕ್ಟಬೋರ್ಡು ಪ್ರೆಸಿಡೆಂಟರವರ ನಂಬ್ರ $\frac{745}{D.\ B.}$ D 20ನೇ ಹುಕುಂ ತಿಳಿಸುತ್ತದೆ. ಆದರೆ ನಮ್ಮ ಡೆಪ್ಯುಟೇಶನ್ ಗವರ್ನಮೆಂಟ್ ಪಾಸ್‌ಮಾಡಿದ ೪ ರೂಪಾಯಿ ದರದ ಎಲೋವೆನ್ಸಿಗೆ ತೃಪ್ತಿಪಟ್ಟು ಅದನ್ನು ಬೇಗನೇ ಕೈಗೆ ಸಿಗುವ ಹಾಗೆ ಮಾಡಬೇಕೆಂತಲ್ಲ, ಮುಖ್ಯ ಮುಂದೆ ನಮ್ಮನ್ನು ಬೋರ್ಡುಗಳೂ, ಗವರ್ನಮೆಂಟೂ ಹೇಗೆ ನಡಿಸಿಕೊಡಬೇಕು, ಈ ವರೇಗಿನ ನಮ್ಮ ಸಂಕಷ್ಟವನ್ನು ಹೇಗೆ ಪರಿಹರಿಸಿಕೊಡಬೇಕು, ವಗೈರೆ ಆದ್ದರಿಂದ ಆ ಕಾರಣವನ್ನು ಕಾಣಿಸಿ ಸಪ್ಟೆಂಬರ್ ತಿಂಗಳ ಡಿಸ್ಟ್ರಿಕ್ಟಬೋರ್ಡು ಮಿಟಿಂಗಿನ ಕಾಲದಲ್ಲಿ ನಮ್ಮ ಡೆಪುಟೇಶನಿಗೆ ಎಡೆಕೊಡಬೇಕಾಗಿ ಡಿಸ್ಟ್ರಿಕ್ಟಬೋರ್ಡಿಗೆ ಪ್ರತ್ಯೇಕ ಅರ್ಜಿ ಬರಕೊಂಡಿದ್ದೇವೆ. ಪರ್ಮಿಶನ್ ಸಿಕ್ಕಿದ ಕೂಡಲೆ ಪ್ರತಿನಿಧಿಗಳನ್ನು ಅಪೇಕ್ಷಿಸಿ ಬರಕೊಳ್ಳುವೆವು.

ಸೆಕ್ರೆಟರಿ, ಟೀಚರ್ಸ್ ಎಸೋಸಿಯೇಶನ್, ಪಟ್ಲ.

Casuarina Plantation for sale.

Casuarina, cocoanut and other plantations on the seashore one compact block of 37·57 acres assessed at as 8 per acre comprised by Patta No. 287 S. Nos. $\frac{99}{3}$ $\frac{133}{2\&1B}$ & 214 in West Tonse Village, 5 miles North-West of Udipi between Malpe and Hangarkatta. Casuarina trees were planted between 1900 and 1906 with a decent tiled bungalow and 2 tenants houses in the centre. A central place for fish guano factory and trade.

Sale price plantation with land Rupees 20,000/- casuarnia trees only Rs. 15,000/- or approximate offer.

For further particulars apply to:—

A. P. Fernandes,
Hildaleville, Urva Post,
(S. CANARA).

ಮಾರಾಟಕ್ಕಿದೆ.

ದಕ್ಷಿಣ ಕನ್ನಡಾ ಜಿಲ್ಲಾ ಉಡುಪಿ ತಾಲೂಕು ಪಡು ತೋನ್ಸೆ ಗ್ರಾಮದ ಗುಜ್ಜರ ಬೆಟ್ಟಿನಲ್ಲಿರುವ ಚಬುಕಿನ ಯಾನೆ ಗಾಳಿ ಮರದ ಕ್ರಾಮು, ತೆಂಗಿನ ವಗೈರೆ ಫಲಮರಗಳ ತೋಟ, ಬಂಗ್ಲೆ, ಒಕ್ಕಲುಮನೆಗಳು ವಗೈರೆ ಸವಾರಿ. ಪಟ್ಟಾ ನಂಬ್ರ 287, ಸರ್ವೆ ನಂಬ್ರ $\frac{99}{3}$ $\frac{133}{2.1B}$ 214—ಎಕ್ರೆ 37·57. ತೀರ್ವೆ ಎಕ್ರೆಗೆ ಆಣೆ ೩ರ ದರದಲ್ಲಿ. ಕ್ರಯ—ಸ್ಥಳ ಸಮೇತ ಸುಮಾರು ಅಂದಾಜು ರೂ. 20,000, ಚಬುಕಿನ ಮರಗಳಿಗ ಮಾತ್ರ ರೂ. 15,000. ವಿಳಾಸ:—

ಎ. ಪಿ. ಫೆರ್ನಾಂಡಿಸ್,
ಉರ್ವ ಪೋಸ್ಟು, ಮಂಗಳೂರು,
ದಕ್ಷಿಣ ಕನ್ನಡಾ ಜಿಲ್ಲೆ.

FOUNTAIN PENS.



ಫೌಂಟನ್ ಪೆನ್ನುಗಳು.

14 ಕೆರೆಟ್ ಚಿನ್ನದ ಮೊನೆಯುಳ್ಳ ಅತ್ಯುತ್ತಮವಾದ ವಿವಿಧ ತರದ ಫೌಂಟನ್ ಪೆನ್ನುಗಳು ಈಗ ತಾನೇ ಬಂದಿವೆ.

ಕಾಮತ್ ಸೇಫ್ಟಿ ಪೆನ್ ಕ್ರಯ ರೂ. 9—8—0.
,, ಫೌಂಟನ್ ಪೆನ್ ,, 9—0—0.

ರಖಂ ತರಿಸುವವರಿಗೆ ಪ್ರತ್ಯೇಕ ದರಗಳು.

ಪಿ. ಎಮ್. ಕಾಮತ್ ಎಂಡ್ ಕೊ.
ಕೆಮಿಸ್ಟ್ಸ್, ಮಂಗಳೂರು.

50 ರೂಪಾಯಿ ಬಹುಮಾನ

ಈ ಕೆಳಗೆ ದಸ್ಕತು ಮಾಡಿದವರ ಬಾಬತು 1919ನೇ ಇಸವಿಯ ಮತ್ತು ಆ ಮೊದಲಿನ 3 ವರ್ಷಗಳ ಲೆಕ್ಕಗಳಿಗೆ ಯಡ್ವಾನ್ಸ ಹಣ ಸಂದ ಮತ್ತು ಅವರಿಂದ ಹಣ ವಸೂಲು ಬಂದ ಪ್ರತಿ 250ಪೇಜುಗಳುಳ್ಳ ಲೆಖ್ಖದ ಬೂಕುಗಳು 4 ಮತ್ತು ಆ ಸಂಬಂಧದ ಇತರ ಹಳೇ ಲೆಖ್ಖದ ಪುಸ್ತಕಗಳು ಇಟ್ಟಿರುವ ಸಣ್ಣ ಸುಂದರವಾದ ಹ್ಯಾಂಡ್ ಬೊಕ್ಸ್ ಇದೇ ಕಳೆದ ಜುಲೈ 23ರಲ್ಲು ಗಾಡಿಯಲ್ಲಿ ಬರುತ್ತಾ ಗುರುವ್ಯಾನ ಕೆರೆಯಲ್ಲೋ, ಚಾರ್ಮಾಡಿಯಲ್ಲೋ ಬಿದ್ದುಹೋಗಿರುತ್ತಿದೆ. ಇದು ಸಿಕ್ಕಿದವರು ಸ್ವದೇಶಾಭಿಮಾನಿ ಆಫೀಸಿಗೆ ತಂದುಕೊಟ್ಟು ತಿಳಿಸಿದಲ್ಲಿ ಮನಃಪೂರ್ವಕವಾಗಿ ಮೇಲ್ಕಂಡ ಬಹುಮಾನವನ್ನು ಕೆಳಗೆ ದಸ್ಕತು ಹಾಕಿದವರು ಕೊಡುವರು.

ISIDORE COLACO,
Wartyhully Estate Saklaspur,
DT. HASSAN.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000-0-0
Reserve and other sinking Funds „ 138772-0-2

ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ 300,000—0—0
ಕ್ಷೇಮನಿಧಿ ಮತ್ತು ಇತರ ಫಂಡುಗಳು „ 138,772—0—2

THE BANK RECEIVES FIXED, CURRENT ACCOUNT, & SAVINGS BANK DEPOSITS

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳೋಣಾಗುತ್ತವೆ.

For further particulars apply to the Secretary

ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು

Canara Bank Ltd,
Mangalore, 10th May 1920

K. Venkat Rao,
Secretary

ವೈದ್ಯ ವಿದ್ಯ.

ಯಾವುದೊಂದು ವ್ಯಾಧಿಯು ಇಲ್ಲದೆ ಸುಖಸಂಪತ್ತುಗಳಿಂದಿರಬೇಕಾದರೆ ಬಿರುದು ರಾಜವೈದ್ಯರ,

ವೈದ್ಯ ವಿದ್ಯ.

ಎಂಬ ಪುಸ್ತಕವನ್ನು ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ವಿಳಾಸವನ್ನು ತಿಳಿಸಿದ ಮಾತ್ರಕ್ಕೆ ಬರುವದು.

ವೈದ್ಯ ವಿದ್ಯ.

ವಿಳಾಸ —ರಾಜವೈದ್ಯ ನಾರಾಯಣಜಿ ಕೇಶವಜಿ,
27 ಚೈನ ಬಜಾರು ರೋಡು, ಮದ್ರಾಸು.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ 12, 5, 3, 2 8 0, 1 0 0

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ 3, 2, 1

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ ಟಿನ್ 1ಕ್ಕೆ 8 ಆಣೆ

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು ಶೀಸೆ 1ಕ್ಕೆ 6 ಆಣೆ

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ

ಲೆವೆಂಡರ್. ಶೀಸೆ 1ಕ್ಕೆ 1—4—0

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ದಿಕರಿಗೆ ಸಿದ್ಧವಾಗಿರುತ್ತವೆ

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,

ಸುಗಂಧಕಾರಿ, ಮೈಸೂರು.

ರೂ. 1,000 ಬಹುಮಾನ

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ. ಈ ಸಾಲಾಮಿಸ್ರಿ ಮುರಬ್ಬಾ ವಿನ ಸೇವನೆ ಯಿಂದ — ವೀರ್ಯವು ಶೀಘ್ರವಾಗಿ

ಇದ್ದರೂ ಸ್ವಪ್ನೇಂದ್ರಿಯವಾದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು ಮಿದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಹೆಚ್ಚಿಸುವುದು, ಸೊಂಟ ನೋವು ಸ್ವಲ್ಪಮಾತ್ರವೂ ಇಂರಾದು ಈ ಸಾಲಾಮಿಸ್ರೀ ಎಂಬುದು ಕಾಬೂಲ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಖ್ಯಾತರಿಂದ ಯೋಗ್ಯತಾಪತ್ರಿಕೆಗಳು ಬಂದಿವೆ ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದ ಪಕ್ಷದಲ್ಲಿ ಕೋರ್ಟು ಮೂಲಕ ಪಡೆಯಬಹುದು

ಒಂದು ಡಬ್ಬಾ ಮುರಬ್ಬಾವನ್ನು ೧೫ ದಿನಗಳ ಉಪಯೋಗಿಸುವುದರಿಂದ ಪೂರ್ಣಗುಣ ಕೊಡುತ್ತೆ ೩-೪ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಗುಣ ಕೊಡುತ್ತೆ ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು ಕ್ರಯ ಒಂದು ಡಬ್ಬಿಗೆ ರೂಪಾಯಿ 4

ಈಗ ಭಾಂಗಿಯ ಡಿಮಾಂಡ್ ಹೆಚ್ಚುವುದರಿಂದ ಕೆಲವು ದಿನಗಳ ಮಟ್ಟಿಗೆ ಟಪಾಲು ಖರ್ಚು 1 ಡಬ್ಬಿಗೆ 6 ಆಣೆ 2 ಯಾ 3 ಡಬ್ಬಿಗಳಿಗೆ 12 ಆಣೆ

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್"

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರಿಂದ ವಾತ, ಕಫ, ಜಗತ, ಕುಳುಕು ಘಾಯ, ತಲೆನೋವು, ಸೊಂಟನೋವು ಬೆನ್ನುನೋವು, ಮುಂತಾದ ಎಲ್ಲಾ ತರದ ವೇದನೆಗಳು ಅತಿ ಕ್ಷಿಪ್ರದಲ್ಲಿ ಸಂಪೂರ್ಣವಾಗಿ ಗುಣಹೊಂದುವವು. ಡಾಬ್ಬಿ ಒಂದರ ಕಿಮ್ಮತ್ತು ೦—೭—೦ ಒಂದು ಡಜನು ಡಾಬ್ಬಿಗಳಿಗೆ ರೂ ೪—೧೨—೦

"ಗಜಕರ್ಣದ ಮುಲಾಮು"

ಗಜಕರ್ಣ ಕಾಸು, ಖಜ್ಜಿ, ದದ್ರು, ಹುಳಕಡ್ಡಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಾಗಿಸುವದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು ಡಾಬ್ಬಿ ಒಂದಕ್ಕೆ ೦—೫—೦, ಒಂದು ಡಜನಿಗೆ ರೂ ೩-೮ ೦

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಮೆಡಲು ದೊರೆತಿರುವವು ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೂ ಪತ್ರವ್ಯವಹಾರ ಮುಖೇನ

ದಿ. ಮ್ಯಾನೇಜರ್ — ಶ್ರೀ ದೇವಿಪ್ರಸಾದ ಕಂಪೆನಿ,
ಪೋಸ್ಟು ಬಾಕ್ಸು, ನಂ. ಕಲ್ಕತ.

'ಟಿಶ್ಯುರೆಮಿಡಿಸ್'

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು

1 ಕಲ್ಕೇರಿಯ ಫ್ಲೋರ್	7 ಕಾಲಿ ಸಲ್ಫ್
2 ಕಲ್ಕೇರಿಯ ಫೋಸ್	8 ಮೆಗ್ನೆಸಿಯ ಫೋಸ್
3 ಕಲ್ಕೇರಿಯ ಸಲ್ಫ್	9 ನಾಟ್ರಮ್ ಮ್ಯೂರ್
4 ಫೆರಮ್ ಫೋಸ್	10 ನಾಟ್ರಮ್ ಫೋಸ್
5 ಕಾಲಿ ಮ್ಯೂರ್	11 ನಾಟ್ರಮ್ ಸಲ್ಫ್
6 ಕಾಲಿ ಫೋಸ್	12 ಸಿಲಿಸಿಯಾ

ಕ್ರಯ ರೂ ಆ ಪೈ

ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳಕ್ಕೂ ಒಳ್ಳೇ ಸಾಗುವಾನಿ ಪೆಟ್ಟಿಗೆಗೆ — 1 — 1

ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳಕ್ಕೂ ಪೆಟ್ಟಿಗೆಗೆ ಜೀವರಸಾಯನಿ ವೈದ್ಯ ಶಾಸ್ತ್ರ ಪುಸ್ತಕ ಸಮೇತ 1 — 1 — 1

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾಂಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ ಕ್ರಯ 12 ಆಣೆ ಮಾತ್ರ ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು

ಎ ಫೆರ್ನಾಂಡಿಸ್,
ಎಲಿಕ್ಸಿ ಹೊಮಿಯೋಪತಿ ಡಿಸ್ಪೆನ್ಸರಿ, ಮಂಗ್ಳೂರು

ಆರ್. ಮಾರ್ಟಿನ್ಸರ ಲಪ್ಪಾ ಎಣ್ಣೆ.

ಇದರ ವಾಸನೆಯು, (ಪರಿಮಳವು) ಬಹಳ ಆಂದವಾಗಿಯೂ ಇರುವುದಲ್ಲದೆ, ಎಷ್ಟು ಹೊತ್ತಿನವರೆಗೂ ಇರುತ್ತದೆ ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ, ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮೆದುಳು ಚೆನ್ನಾಗಿ ಬಲಿಯುತ್ತದೆ ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ ಕೂದಲುಗಳಲ್ಲಿರುವ ಹೇನುಗಳು ಮುಂತಾದವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳುತ್ತಾರೆ

ಕ್ರಯ ಬಾಟ್ಲಿ ಒಕ್ಕೆ ರೂಪಾಯಿ ೧—೪—೦

ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು, ಗೂರಲು ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಿ. ಆನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ ಎಲ್ಲಾ ವಿಧವಾದ ಕೆಮ್ಮಿಗೂ ರಾಮಬಾಣವಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತೆ ೮ಂ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧—೪—೦

ಆರ್ ಮಾರ್ಟಿನ್ಸರ ಗ್ಲಿಟೋಡಯಿನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ, ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಶೀಘ್ರವಾಗಿ ಪೂರ್ತಿಯಾಗಿ ನಿರ್ಮೂಲವಾಗುವುದಲ್ಲದೆ ರೋಗದ ಬಿಸ್ಸನ್ನೇ ಅಡಗಿಸಿಬಿಡುತ್ತದೆ. ಇದು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮೂಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ ೨—೧೦—೦.

ವಿಳಾಸ.— ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್, ಮುಂಬಯಿ.

R. D. Kately & Co.
No. D. Frere Road,
Near Wright & Co Fort Bombay.

The Canara Banking Corporation, Udipi, (Limited).

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Authorised capital	3,20,000—0—0
Issued and subscribed capital	50,000—0—0
Paid up capital	40,006—1—11
Deposits	67,746—1—7
Reserve and other Funds as on 31-3-20	8,258—9—6

Fixed deposits received for 3, 6, 9 12, 24 months at 7% at the discretion of the Managing Committee In the case of all deposits interest will be paid quarterly.

Cummalative deposits are received repayable in 45 months at Rs. 50/—per each rupee deposited monthly.

Current a/c deposits opened free of charge and interest will be paid @ 3½% per annum on the lowest balance between the 4th and the last day of each month.

Loans granted on proper securities and pledges

A dividend of 8% has been declared for the year ending 31-3-1919

Payments to the Corporation may be made to the credit of the Corporation at the Bank of Madras, and Canara Bank Mangalore

UDIPI,

17th July 1920

ಅಧಿಕಾರಗೊಳಿಸಲ್ಪಟ್ಟ ಮೂಲಧನ ರೂ.	3,20,000—0—0
ಚಂದಾಹಾಕಲಿಕ್ಕೆ ಏರ್ಪಡಿಸಿದ ವ	
ಚಂದಾ ಎತ್ತಿದ ಮೂಲಧನ „	50,000—0—0
ಮೌಲ್ಯ ತೆತ್ತ ಮೂಲಧನ „	40,006—1-11
ಠೇವಣಾತಿಗಳು „	67,746—1—7
ಕ್ಷೇಮನಿಧಿ ಮತ್ತು ಇತರ ಫಂಡುಗಳು „	8,258—9—6

ಕಾಯಂ ಠೇವಣಾತಿಗಳು ತಿಂಗಳು 3, 6, 9 12, 24ರ ಅವಧಿಗಳಿಗೆ ಆಡಳಿತೆ ಸಭೆಯವರ ವಿಚಾರಾನುಸಾರ ಪ್ರಕಾರ ಸಾಲಿಯಾನ್ ಶೇಕಡಾ 7% ದರದಲಿ ಬಡ್ಡಿ ಕೊಡಲ್ಪಡಾಗುವದು ಎಲ್ಲಾ ಠೇವಣಾತಿಗಳ ಮೇಲಣ ಬಡ್ಡಿ 3 ತಿಂಗಳಿಗೊಮ್ಮೆ ಕೊಡಲ್ಪಡಾಗುವದು

ಪ್ರತಿ ತಿಂಗಳಿಗೆ ರೂ 1ರ ಪ್ರಕಾರ 45 ತಿಂಗಳುಗಳವರೇಗೆ ವಸೂಲು ಕೊಡುವ ಸಂಚಯದ ಠೇವಣಾತಿಗಳಿಗೆ 45 ತಿಂಗಳ ಅಂತ್ಯದಲ್ಲಿ ಪ್ರತಿ ತಿಂಗಳಲ್ಲಿ ವಸೂಲು ಕೊಟ್ಟ ರೂ 1ಕ್ಕೆ ರೂ 50/ರಂತೆ ವಾಪಸು ಕೊಡಲ್ಪಡಾಗುವದು

ಚಾಲ್ತಿ ಠೇವಣಾತಿಗಳು ಸಂಘದ ಪರವಾಗಿ ಏನೂ ಖರ್ಚು ಇಲ್ಲದೆ ಪಡಕೊಳ್ಳಲ್ಪಡಾಗುವವು ಪ್ರತಿ ತಿಂಗಳ ೪ನೇ ತಾರೀಕಿನಿಂದ ಆಖೈರು ತಾರೀಕುವರೆಗೆ ಯಾವದಾದರೊಂದು ದಿನ ಇರುವ ಅತಿ ಕಡಿಮೆ ಠೇವಣಾತಿ ಮೊಬಲಗಿನ ಮೇಲೆ ಸಾಲಿಯಾನ್ ಶೇಕಡಾ 3½ ದರದಲ್ಲಿ ಬಡ್ಡಿ ಕೊಡಲ್ಪಡಾಗುವದು

ಯೋಗ್ಯ ಜಮಾಬ್ದಾರಿಯ ಮತ್ತು ಅಡವಿನ ಮೇಲೆ ಸಾಲಗಳು ಕೊಡಲ್ಪಡಾಗುತ್ತವೆ

ಪಾಲುವಂತಿಕರಿಗೆ 31—3—19ನೆ ವರ್ಷಕ್ಕೆ ಶೇಕಡಾ 8% ದರದ ಬಡ್ಡಿ ಕೊಡಲ್ಪಡಾಗಿಯದೆ

ಸಂಘಕ್ಕೆ ಕೊಡಲ್ಪಡಾಗುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸು ಬೇಂಕಿನಲ್ಲಿ ಮತ್ತು ಕೆನರಾ ಬ್ಯಾಂಕಿನಲ್ಲಿ ವಸೂಲ ಕೊಡಬಹುದ

Naimpalli Ananda Rao,

Secretary

BANK OF MADRAS.

ಮದ್ರಾಸ್ ಬ್ಯಾಂಕ್.

ಹೆಡ್ ಆಫೀಸು ಮದ್ರಾಸ್.

ಮೂಲಧನ ರೂ.	75,00,000
ಕ್ಷೇಮನಿಧಿ	45,00,000

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾದಾವು.

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ 5,000ಕ್ಕೆ ಮಿಗದ ಮೊಬಲಗನ್ನು ಠೇವಣಾತಿಯಾಗಿಡಬಹುದು

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ 10,000ಕ್ಕೆ ಮೀರದ ಮೊಬಲಗಿನ ವರೇಗೆ ಬಡ್ಡಿ ಎಣಿಸಲಾಗುವುದು

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿನಿಂದ ಪಡೆಯಬಹುದು

ಸಿ ಎಲ್ ಗೊರ್ಡನ್,

ಏಜಂಟ್, ಮದ್ರಾಸ್ ಬ್ಯಾಂಕ್, ಮಂಗಳೂರು

ಭೃಂಗರಾಜ ತೈಲ

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ ನರೆತ ಕೂದಲು ಕಪ್ಪಾಗುತ್ತದೆ, ಶೀತದಾವಗಳು ವೃದ್ಧಿಹೊಂದುತ್ತವೆ ಕಂಠದ ವೇಲೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ ಪಿತ್ತನಾಶ ಮಾಡುತ್ತದೆ ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ 1—0

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದನ್ನು ತಲೆಗೆ ಹಚ್ಚಿಕೊಂಡರೆ ಪರಿಹಾರವಾಗುತ್ತದೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ 1

ಜ್ವರಾಂತಕ ಮಾತ್ರೆ—ಈ ಮಾತ್ರೆಯನ್ನು ಉಪಯೋಗಿಸುವದರಿಂದ ಎಲ್ಲಾ ಜ್ವರಗಳ ಪರಿಹಾರವಾಗುತ್ತದೆ ಉಪಯೋಗಿಸುವ ಕ್ರಮ, ಮತ್ತು ಗುಣ ತಿಳಿಕೊಂಡಲ್ಲಿ ಪ್ರಕಾಶಕ ಪಡಿಸುತ್ತದೆ ೨೦ ಮಾತ್ರೆಗಳುಳ್ಳ ಸೀಸೆ ಒಂದರ ರೂ 1

ಪಂಚಸಾರ ಲೇಪ—ಅಜೀರ್ಣ ಪಿತ್ತ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತದೆ ವ ತ್ತ ಇಂದ್ರಿಯವನ್ನು ಬಲಪಡಿಸಿ ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ ಒಂದು ಸೀಸೆಗೆ ರೂ 1—4—0

ಬೇರೆ ಬಗೆಯ ಔಷಧಿಗಳು ಸರ್ವ ವೈದ್ಯರಿಗೂ ಶಿರೋಮಣಿಯಾದ ಶ್ರೀ ಆಯುರ್ವೇದಾವಲಂಬಿಗಳಾದ ಶ್ರೀ ಪೂಜ್ಯವಾದ ಋಷಿ ಪ್ರಣೀತ ವೈದ್ಯಗ್ರಂಥ ಆಧಾರದಿಂದ ಆ ತರದ ಪೂಜ್ಯರ ಅನುಯಾಯಿಗಳಾದ ನಮ್ಮಿಂದ ತಯಾರಿಸಲ್ಪಟ್ಟಿರುತ್ತವೆ ಅವು ನಂಗ ಎಷ್ಟು ಸಕ್ಕಳವಾಗಿ ತೋರುತ್ತದೋ ಅಷ್ಟೇ ಭರವಸೆಯಿಂದ ಈ ಔಷಧಗಳ ರೋಗಪರಿಹಾರಕವಾಗಿರುತ್ತವೆ

ಸೂಚನೆ—ಅಪೇಕ್ಷಿಸುವವರು ಕೆಟಲಾಗಿಗೆ ಬರೆದುಕೊಳ್ಳುವದು ಉಚಿತವಾಗಿ ಕಳುಹಿಸಲಾದೀತು

ಆಯುರ್ವೇದಿಕ್ ಮತ್ತು ಹೊಮಿಯೊಪೆತಿಕ್

ವಿಳಾಸ —

ಧರ್ಮ ವೈದ್ಯಶಾಲಾ,

ಧರ್ಮಸ್ಥಳ ದಕ್ಷಿಣ ಕನ್ನಡ

ಇಂಡಿಯನ್ ಮೋಟರ್ ಸರ್ವಿಸ್.

(ಎ ಸಿ ಅಂದ್ರಾದೆ ಪ್ರೊಪ್ರೈಟರ್) ಇವರ ಮೋಟರ್ ಬಸ್ಸುಗಳು ಮಂಗಳೂರಿನಿಂದ ಉಪ್ಪಿನಂಗಡಿ ಪುತ್ತೂರಿಗೂ ವ ಅಲ್ಲಿಂದ ವಾಪಸು ಮಂಗಳೂರಿಗೂ ಸಹ ಜುಲಾಯಿ ತಾ 12ರಿಂದ ಚಲಾವಣೆ ಆಗುವವು

ಬೇರೆ ಯಾವ ಮಾಹಿತಿ ಬೇಕಾಗಿದ್ದರೆ ನಮ್ಮ ಹಂಪನಕಟ್ಟೆ ಆಫೀಸಿನಲ್ಲಿ ವ ಇತರ ಆಫೀಸುಗಳಲ್ಲಿ ವಿಚಾರಿಸಿದಲ್ಲಿ ತಿಳಿಯಬರುವುದು

ಹಂಪನ ಕಟ್ಟೆ, ಮಂಗಳೂರು, ಮಾಧವ ಬಿಲ್ಡಿಂಗ್ಸ್ ಸಮೀಪ — ಎ. ಸಿ. ಅಂದ್ರಾದೆ, ಪ್ರೊಪ್ರೈಟರ್

ಸದ್ಬೋಧಕ ಗ್ರಂಥಮಾಲೆ.

(ತ್ರೈಮಾಸಿಕ ಪುಸ್ತಕ)

ನವೆಂಬರ ಜನವರಿಯಿಂದ ಆರಂಭ — ವಾರ್ಷಿಕ ಚಂದಾ ಅಂಚೆ ಸಹಿತ ರೂ 1 ಮಾತ್ರ

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧಗಳ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ ಉಲ್ಲೇಖನ, ವಿನೋದಲಹರಿ, ಸ್ಥಳೀಯವರ್ತಮಾನ, ವಿಮರ್ಶೆ ಮತ್ತು ಸ್ವೀಕಾರ ಇತ್ಯಾದಿ ಲೇಖನವೂ ಪ್ರಕಟವಾಗುವವು ಸಮಸ್ತ ಕನ್ನಡಿಗರೂ ಸಂಗ್ರಹಿಸಿಕೊಳ್ಳಲು ತಕ್ಕುದಾಗಿರುವ ಈ ಪುಸ್ತಕದ ಚಂದಾ ಅಂಚೆವೆಚ್ಚದೊಡನೆ ಒಂದೇ ರೂಪಾಯಿ ಇಟ್ಟಿರುವದು ಈಗಲೇ ತಮ್ಮ ಹೆಸರನ್ನು ತಿಳಿಸಿ ವರ್ಗದಾರರಾಗಿ ಸೇರಿ ಮಾತೃಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕೆಂದು ಸಂಪ್ರಾರ್ಥನೆ

ವಿಳಾಸ — ಎಸ್ ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ

"ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ

ಸುರತಕಲ್, (ದಕ್ಷಿಣ ಕನ್ನಡ)

ಏಜಂಟ — S R Hebbar & Bros,

General Merchants, SURATKAL, S K

ರಾಜವೈದ್ಯರ,

ಮದನಮಂಜರಿ ಮಾತ್ರೆ

ಗಳನ್ನು ಸೇವಿಸುವದರಿಂದ ದೇಹಶಕ್ತಿಯನ್ನು ಕೊಡುವದು ಹಸ್ತಪ್ರಯೋಗಾದಿಗಳಿಂದ ಹೋಗಲಾಡಿಸಿಕೊಂಡ ಶಕ್ತಿಯನ್ನು ಪುನಃ ಕೊಟ್ಟು ಪ್ರಾಯಸಮರ್ಥರನ್ನಾಗಿ ಮಾಡುವವು ಈ ಮಾತ್ರೆಗಳು ಬಳ್ಳ ಭಂಗಾರದ ಬೆಸ್ತಗಳು ಎಷ್ಟು ಮಾತ್ರವೂ ಸಮಾನವಾಗಲಾರದು

ಕ್ರಯ ಡಬ್ಬಿ 1ಕ್ಕೆ ರೂ. 1—0—0

ವಿಳಾಸ —

ಮದನಮಂಜರ ಫಾರ್ಮಸಿ,

27 ಜೈನ ಬಜಾರು ರೋಡ್ ಮದ್ರಾಸು

ಎಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲಿಯಮ್ಸ್ ಡೆಂಟೋನ್" ಎಂಬ ಈ ದಂತ ಶುದ್ಧಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸ್ವಚ್ಛಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ

ಅನುಭವವೇ ಸಾಕ್ಷಿ

ಗುಣ ವಿಶೇಷ! ಕ್ರಯ ಕಮ್ಮಿ!! ಖ್ಯಾತಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9

ಪರಸ್ಥಳಗಳಲ್ಲಿ ಏಜಂಟರಾಗಲುಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವದು

ಸೋಲ್ ಏಜಂಟ್ — ಜೆ ಎಸ್ ಸೋಜಿ ಮತ್ತು ಕಂಪೆನಿ, ಕೊಡಿಯಾಲಬೈಲು, ಮಂಗಳೂರು.

ಇನ್‌ಫ್ಲುಯೇನ್ಜಾ ಜ್ವರಕ್ಕೆ

ಎಮ್ಕೊ.

ಖಾತ್ರಿ ಚಿಕಿತ್ಸೆ!

ಇನ್‌ಫ್ಲುಯೆನ್ಜಾ, ನಿಮೋನಿಯಾ, ಮಲೇರಿಯಾ ಸಾಧಾರಣ ಜ್ವರ ಎಟ್ಟು ಬಿಟ್ಟು ಬರುವ ಜ್ವರ, ವಿಶಮ ಜ್ವರ, ಕೆಮ್ಮು, ಶೀತ ಮೊದಲಾದ ವ್ಯಾಧಿಗಳಿಗೆ ಖಾತ್ರಿ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ ನಾವು ಈ 'ಎಮ್ಕೊ' ಎಂಬ ಅನುಭವಸಿದ್ಧವಾದ ಖಾತ್ರಿ ಔಷಧವನ್ನು ಈಗಲೇ ಮಾರಾಟಕ್ಕೆ ತಂದಿರುತ್ತೇವೆ ವೇಳಿನ ವ್ಯಾಧಿಗಳಿಗೆ ಇದು ಖಾತ್ರಿ ಚಿಕಿತ್ಸೆ ಬಹಳ ತರದ ಕೆಲವು ಜನಗಳ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ

ಎಮ್ಕೊ ಇದು ಎಲ್ಲಾ ರೋಗಾಣುಗಳನ್ನು ಕೊಂದು ಅದರ ವಿಕಟವನ್ನು ನಾಶಪಡಿಸಿ ಇನ್‌ಫ್ಲುಯೇನ್ಜಾ ನಿಮೋನಿಯಾ ಮತ್ತು ಅದರಂತಿನ ಇತರ ಸೋಂಕು ರೋಗಗಳ ಕಷ್ಟಾಂತ ಪರಿಣಾಮ ಆವ ಉಲ್ಬಣವಾಗದಂತೆ ಮಾಡುತ್ತದೆ

ಎಮ್ಕೊ ಇದು ಇನ್‌ಫ್ಲುಯೇನ್ಜಾ ಮೊದಲಾದ ಎಲ್ಲಾ ತರದ ಜ್ವರಗಳ ಗುಣಮಾಡುತ್ತದೆ

ಎಮ್ಕೊ ಇದನ್ನು ಹಾನಿಕರವಲ್ಲದ ಔಷಧಿಗಳ ಸಾರದಿಂದ ಅತಿ ಜಾಗರೂಕತೆಯಿಂದ ತಯಾರಿಸಿದ ಕ್ಷಣದಲ್ಲಿಯೇ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನು ಕೊಡಬಹುದು ಹೆಂಗಸರೂ ಮಕ್ಕಳೂ ಭಯ ಭೀತಿ ಇಲ್ಲದೆ ಸೇವಿಸಬಹುದು

ಎಮ್ಕೊ ಅತಿ ಅದ ಕೆಲೀರಾ ರೋಗಿಗಳನ್ನೂ ಗುಣಪಡಿಸಿರುತ್ತದೆ

ಕ್ರಯ ಸೀಸೆ ಗೆ ರೂ 1—0—0 ಮಾತ್ರ ವಿ ಪಿ ಬೇರೆ

ದೊರೆಯುವ ಸ್ಥಳ — ವಿ ಇಕ್ಷ್ವಾಪ್ ಏಜನ್ಸಿ,

ಎಮ್ಮೆಕೆರೆ ರಸ್ತೆ ಮಂಗಳೂರು

Lose not Hope — Waste not time!!

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ ದಕ್ಷಿಣ ಕನ್ನಡಾ

ನಮ್ಮ ಡಿಸ್ಪೆನ್ಸರಿಯಲ್ಲಿ ಎಲ್ಲಾ ರೋಗಗಳಿಗೆ ಬೇಕಾಗುವ ಸಿದ್ಧೌಷಧಗಳ ಬೈರಾಗಿ ಪ್ರಯೋಗಗಳ ಸಿಕ್ಕುತ್ತವೆ ತರಿಸಿ ಸ್ವಲ್ಪ ಕಾಲದಲ್ಲಿ ಪ್ರಚಾರಪಡಿಸಿರಿ

1 ಶತಮೂಲಿಕೆ—ಇದ ಎಲ್ಲಾ ತರ ಬಗೆಯ ವಸ್ತುಗಳ ಸತ್ವ ಇದು ನಿರ್ಬಲರನ್ನು ಸಜೀವ ಮಾಡುತ್ತದೆ 4 ಔನ್ಸು ಬಾಟ್ಲಿಗೆ ರೂ 3—0

2 ಗರ್ಭಪುಷ್ಟಿಕರಣ—ಇದ ಗರ್ಭಿಣಿಸ್ತ್ರೀಯರ ಸುಪ್ರಸೂತಾಮೃತವು ಬಾಟ್ಲಿ 1ಕ್ಕೆ ರೂ 1—0

3, ಸ್ತ್ರೀರಜೀವನಾಮೃತ—ಸರ್ವರೋಗ ನಿವಾರಣ ಶತವರ್ಷ ಆಯುಷ್ಯ ಕೊಡುತ್ತದೆ ಸೀಸೆ 1ಕ್ಕೆ ರೂ 1 0

ಇದಲ್ಲದೆ ನಮ್ಮಲ್ಲಿ ಸರ್ವರೋಗಕ್ಕೆ ಬೇಕಾಗುವ ಔಷಧಗಳ ಸ್ಟಾಕು ತುಂಬಾ ಇರುತ್ತದೆ ನಮ್ಮ ಕೆಟಲಾಗನ್ನು ಈಗಲೇ ತರಿಸಿರಿ

M V Shanker,

Ugrankar,

Manager

ಜೆನ್ವಿನ್ ಹಾರ್ಲೆಮ್ ಆಯಿಲ್

(HAARLEM OIL).

ತ್ವರೆಯಿಂದಲ್ಲಿ ನಿಮ್ಮ ಆರ್ಡರುಗಳನ್ನು ಬರಾಯಿಸಿಕೊಳ್ಳಿರಿ

ಹಾರ್ಲೆಮ್ ಆಯ್‌ಲ್ ಎಂದೆನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 300 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭಾವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney) ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು, ನೇಪಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ ಮೂರೇ ದಿನದ ಚಿಕಿತ್ಸೆಯಿಂದ ಇನ್‌ಫ್ಲುಯೆಂಜಾ ಮೊದಲಾದ ಎಂಥಾ ಕಠಿಣ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯು ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೆ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ. ಕ್ರಯ ಸೀಸೆ 1ಕ್ಕೆ ಆಣೆ 8 ವಿ. ಪಿ. ಬೇರೆ.

ಸಿಫಾರಸು ಪತ್ರ

ಕೆಲವು ವರ್ಷಗಳ ಹಿಂದೆ ಮಂಗಳೂರಲ್ಲಿದ್ದ ಜರ್ಮನ್ ಮಿಶ್ಶನೆರಿ ಲೇಡಿ ಮಿಸೆಸ್ ಹೆರ್ಮನ್ ಬ್ರೇಕ್ಲಯವರು ಇದೇ ಕಳೆದ ಮಾರ್ಚಿ ತಾ 10ರಲ್ಲು ಸ್ಟುಟ್‌ಗಾರ್ಟ್ ಪಟ್ಟಣದಿಂದ ವಾನಿಂಗ್‌ಟಿಲ್ಲಿ ಕಂಪೆನಿಯವರಿಗೆ ಈ ರೀತಿ ಬರೆದಿರುತ್ತಾರೆ—ದಯಮಾಡಿ ನಿಮ್ಮ ಕಂಪೆನಿಯ 25 ಶೀಸ ಜೆನ್‌ವಿನ್ ಹಾರ್ಲೆಮ್ ಆಯಿಲ್ ಕಳುಹಿಸಿ ಕೊಡಿರಿ ಇದು ಉತ್ಕೃಷ್ಟವಾದ ಪಾತ್ರಿ ಔಷಧಿ ಎಂಬದು ನನ್ನ ಅನುಭವ ಸಿದ್ಧಾಂತ. ನಾನು 1910ನೇ ಇಸವಿಯಲ್ಲಿ ಮಂಗಳೂರಿಗೆ ಹೋಗುವಾಗ ನಿಮ್ಮ ಹಾರ್ಲೆಮ್ ಆಯಿಲಿನ 12 ಶೀಸೆಗಳನ್ನು ಕೊಂಡು ಹೋಗಿದ್ದೆನು. ಇದು ದೇಶೀಯರೊಳಗ ಪ್ರಯೋಗಿಸಿದ್ದಲ್ಲಿ ಅತಿ ಸಾಫಲ್ಯವಾಗಿ ಪರಿಣಮಿಸಿತು ದೇಶೀಯರೊಳಗೆ ಪ್ರಬಲಿಸಿರುವ ಜ್ವರಕ್ಕೆ ಇದು ಅತಿ ಗುಣಕಾರಿಯಾಗಿದೆ ನಂತರ ಕೆಲವು ಕುಟುಂಬಗಳು ಇದನ್ನು ಕುಟುಂಬ ಸಂರಕ್ಷಣೀಯಾಗಿ ಮನೆಮನೆಯಲ್ಲಿ ಇಟ್ಟುಕೊಳ್ಳಲು ತೊಡಗಿದರು ತನ್ಮಧ್ಯೆ ಯುದ್ಧ ತೊಡಗಿದ್ದರಿಂದ ಹಿಂದೂಸ್ಥಾನದಲ್ಲಿ ಇದರ ವ್ಯಾಪಾರವು ಹ್ಯಾಗಿದೆಂತ ನನಗ ಗೊತ್ತಿಲ್ಲ

ವಿಳಾಸ — ಹಿಂದೂಸ್ಥಾನದ ಸೋಲ್ ಏಜಂಟರು— ದಿ. ಎಕ್ಲಿಪ್ಸ್ ಏಜೆನ್ಸಿ,
ಬಲ್ಮಠ ರಸ್ತೆ, ಮಂಗಳೂರು.

☞ ವಿಶೇಷ ಸೂಚನೆ —ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲಿನ ಸೀಸೆಗಳ ಮೇಲೆ Waaning Tilly Bros ಎಂಬ ದಸ್ಕತುಳ್ಳಿರುವ ಪತ್ರವಿತ್ತರೆ ಇದೇ ನಿಜವಾದ ಹಾರ್ಲೆಮ್ ಆಯಿಲ್ ಎಂತ ತಿಳಿಯತಕ್ಕದ್ದು ☜

ಆಯುರ್ವೇದ ಶಾಸ್ತ್ರಾನುಸಾರ

ಡಾಕ್ಟರ್ ಎಚ್. ಲಕ್ಷ್ಮೀನಾರಾಯಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. ಶತಮೂಲಿಕೆಯ ಸತ್ವವು ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, ಬಹುಕಾಲದ ಕಫ, ರಕ್ತವಾಂತಿಯಾಗುವಿಕೆ, ಹೃದಯದ ದುರ್ಬಲತೆ ಲಿಹ್ವರ (ಕಾಳಜಿ), ಮೂತ್ರಕೋಶದ ವ್ಯಾಧಿಗಳು ವ ಎಲ್ಲ ತರದ ದುರ್ಬಲತೆಯು ನಾಶಹೊಂದಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು ಇನ್‌ಫ್ಲುಯೆಂಜಾ ಜ್ವರಕ್ಕೂ, ಅಶಕ್ತ ಜನರಿಗೂ, ಬೆಳ್ಳಿಬರುವ ಸಣ್ಣ ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣ ಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣ ಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು. ೧೬ ಔನ್ಸಿನ ಬಾಟ್ಲಿ ೧ಕ್ಕೆ ರೂ ೨—೧೨—೦ ಟ ಖ ವಗೈರೆ ಬೇರೆ

2. ವಿಜಯಸಂಜೀವಿನಿ ತೈಲ ಕಾಲತಪ್ಪಿ ಬಹಿಷ್ಟೆಯಾಗುವುದು, ಬಹಿಷ್ಟೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಬಂಧ ವ್ಯಾಧಿಗಳಿಗೆ ದಿವ್ಯ ಔಷಧ ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗ ಅನುಭವಸಿದ್ಧವಾದ ಔಷಧ. ಕ್ರಯ ಸೀಸ ೧ಕ್ಕೆ ರೂ. ೨.

3. ಕೋಲೇರಾ ಗುಳಿಗೆಗಳು. ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕದಾಗಿದೆ ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ. ೩೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ ೧—೦—೦

4. ವಾತಾಂತಕ ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು ಕ್ರಯ ಬಾಟ್ಲಿ ೧ಕ್ಕೆ ರೂ. ೧-೮-೦

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷದಲ್ಲಿರಬೇಕು ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ ವಿಳಾಸ —

ಡಾಕ್ಟರ್ ಎಚ್. ಲಕ್ಷ್ಮೀನಾರಾಯಣಪ್ಪಾ ಮತ್ತು ಸನ್ಸ್,
ಕೋರನೂರ, (ಮಲೆಬಾರ)

ಶೀಸೆ ೧ಕ್ಕೆ ಕ್ರಯ ರೂ. 1—4—0, ... ರೂ 12 ...

STANY BROTHERS, MANGALORE,

ಸೊಗಸಾದ ...
I ಕ್ಲಾಸ್ ... 0—10—0
II ಕ್ಲಾಸ್ ... 0—8—0
III ಕ್ಲಾಸ್ ... 0—6—0

... ಮೇಲೆ ... ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE,

ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ... ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ಏಕೀಷವಾದ ಗುರು ಲಬ್ಧವಾದ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಮಾರುವರೆ ತಯಾರಿಸಿ ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದ್ದಲ್ಲಿ ತಿಳಿದು ಬರುವುದು.

ವೈದ್ಯಶಾಲೆಯ ಮ್ಯಾನೇಜರೂ ಮೇನೇಜರರೂ ಆದ ದಾಮೋದರ ನಂಬೀಶನರು ಅಧಿಕ್ಷವಾದ ಹೊರತು ... ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದನೇ ಪರಿಶೋಧಿಸಿ, ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವರೆ ಸಿದ್ಧರಾಗಿರುವರು. ಇದರ ಬ್ರಾಂಚು ಮಂಗಳೂರು ... ತೆರೆದಿರುವುದರಿಂದ ಸದರಿ ಎಲ್ಲಾ ಔಷಧಗಳು ಸದರಿ ಬ್ರಾಂಚಿನಲ್ಲಿ ಕೂಡಾ ಬೇಕಾದಷ್ಟು ಸಿಕ್ಕುವವು. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ. ಪಿ. ಮೂಲಕ ಕಳುಹಿಸಲಾಗುವುದು

೧. ಅಮೃತಾರಿಷ್ಟ—ಇದು ಎಲ್ಲಾ ತರದ ವಿಷಮಜ್ವರ (ಇನ್‌ಫ್ಲುಯೆಂಜಾ) ಒಳಜ್ವರ ಪುರಾಣಜ್ವರ ಇವುಗಳ ಮೇಲೆ ರಾಮಬಾಣದಂತಿರುವುದು. ರಕ್ತಶುದ್ಧಿಗೆ ಸಿದ್ಧೌಷಧ. ೧೨ ಔನ್ಸಿನ ಬಾಟ್ಲಿ ೧ರ ಕ್ರಯ ರೂ ೧-೧೦ ೦.

೨ ವೀರ್ಯಪ್ರಸಾದ ವಟಿ—ಇದು ಸ್ವಪ್ನೇಂದ್ರಿಯದಿಂದ ನರಳುತ್ತಿರುವ ಮನುಷ್ಯಂಗೆ ಅಮೃತದಂತಿರುವುದು ೩೦ ಮಾತ್ರ ಇರುವ ಸೀಸೆ ೧ಕ್ಕೆ ಕ್ರಯ. ರೂ ೧

೩ ನವನೀತಮಧುಸ್ನುಹಿ—ಇದು ಫಿರಂಗವ್ಯಾಧಿ (ಸಿಫಿಲಿಸ್) ಮೇಹ ಮುಂತಾದ ರೋಗಗಳನ್ನು ಒಳ್ಳೇ ರೀತಿಯಿಂದ ಗುಣಪಡಿಸುತ್ತದೆ ೩೦ ತೊಲೆ ಇರುವ ಡಬ್ಬಿ ೧ಕ್ಕೆ ಕ್ರಯ ರೂ ೩

೪ ವಿಷೂಚಿಕಾ ಸಂಹಾರಿ—ಎಂಬ ವಾಂತಿಭೇದಿ ಮಾತ್ರೆ ಈ ಮಾತ್ರೆಯು ಸೇವನೆಯಿಂದ ಎಂಥಾ ಕಠಿಣ ತರವಾದ ವಾಂತಿಭೇದಿಯೂ ನಿಂತು ಹೋಗುವುದು. ೩೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ರೂ. ೧—೦—೦.

೫. ನಯನಮ್ಯತಿ—ತಿಮಿರ, ಉರಿಗಣ್ಣು, ನರ ಪಳುವಿಕೆ ಮೊದಲಾದ ಕಣ್ಣಿನ ಎಲ್ಲಾ ರೋಗಗಳನ್ನು ಗುಣಪಡಿಸುವ ಸಿದ್ಧೌಷಧವು ಅರ್ಧ ಔನ್ಸಿನ ಸೀಸೆ ಕ್ರಯ ೧ರ ರೂ ೧—೦—೦

೬. ನಯನಾಮೃತ—ಕಣ್ಣು ತುರಿಸುವಿಕೆ, ದೃಷ್ಟಿಮಾಂದ್ಯ ಇರುಳು ಗಣ್ಣು, ಕೀವು ಬರುವುದು ತಿಮಿರ ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನು ಬಹು ಜಾಗ್ರತೆಯಾಗಿ ಗುಣಪಡಿಸುವುದು. ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ ೧—೦—೦

ವೈದ್ಯರ್ ವಿ. ಕೆ. ದಾಮೋದರ ನಂಬೀಶನ್
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡ.

ಕೋವಿಲನ್ ಚರಿತ್ರೆ.

ಹೊಸ ನಾಟಕ! ಹೊಸ ನಾಟಕ!

ಈ ಪುಸ್ತಕವು ಅಪೂರ್ವವಾದ ಹೊಸ ಹೊಸ ವರ್ಣಮಟ್ಟುಗಳಿಂದ ಕೂಡಿರುವುದು. ಈಗಲೇ ಪ್ರಿಂಟಾಗಿ ಮಾರಾಟಕ್ಕೆ ಸಿದ್ಧವಾಗಿರುವುದು. ಕ್ರಯ ಪ್ರತಿ 1ಕ್ಕೆ ಆಣೆ 0—6—0.

ವಿಳಾಸ— D. Srinivasan Pothi,
Photographer,
Archæological Office,
TRIVANDERUM

ಅಥವಾ

ಶಾರದಾ ಛಾಪಖಾನೆ, ಮಂಗಳೂರು.
ಇವರಲ್ಲಿಯೂ ದೊರೆಯುವುದು.

Printed & Published by V S Kamath at the Mangalore Trading Association's Sharada Press, Mangalore.